

ಅವರ ದೇವರು

" ಶ್ರೀಹರಿ " ★ (ಸಣ್ಣ ಕತೆ)

ಒಕ್ಕಲಿಗರ ಕಾಳಯ್ಯ ಕುಂಬಾರ ನಿಂಗಯ್ಯ ಇವರಂತಹ ಕರುಬುಗಾರರು ಸೇರಿ, ಕನ್ನಡ ನಾಡಿನ ಎಷ್ಟೊ ಹಳ್ಳಿಗಳನ್ನು ' ಬೆಳ್ಳಿಹಳ್ಳಿ ' ಯಂತೆ ಹಳ್ಳಗೂಡಿಸಿದ್ದಾರೆ; ಇನ್ನೂ ಹಳ್ಳಗೂಡಿಸುವುದರಲ್ಲಿ ಇದ್ದಾರೆ.

★

ನನ್ನ ಕೆಲಸ ಚಿಕ್ಕದಾದರೂ ನಾನು ಸುತ್ತುವುದು ಹೆಚ್ಚು. ವರುಷಾವಧಿಯೂ ಹಳ್ಳಿಹಳ್ಳಿ ತಿರುಗುವುದು ನನ್ನ ಕೆಲಸ. ನನ್ನ ಕೆಲಸಕ್ಕೆ ನನಗೆ ದೊರೆಯುತ್ತಿದ್ದ ತಲಬು ಕೇವಲ ೪೦ ರೂಪಾಯಿಗಳು. ಆದರೆ ನಾನು ಈ ಕೆಲಸ ಮಾಡುವುದರಲ್ಲಿಯೆ ತೃಪ್ತಿ ಹೊಂದಿದ್ದೇನೆ. ಈ ಕೆಲಸಕ್ಕೆ ಸೇರುವುದಕ್ಕೆ ಮುಂಚೆ, ನನಗೆ ಪಟ್ಟಣವಾಸದ ರುಚಿ ಬಹಳ ಹತ್ತಿ, ಈ ಕೆಲಸ ಎಂದರೆ ಜುಗುಪ್ಸೆಯಾಗುತ್ತಿತ್ತು. ಆದರೆ ಈಗ ಈ ಕೆಲಸಕ್ಕೆ ಸೇರಿದ ಮೇಲೆ, ನಮ್ಮ ನಾಡಿನ ನೆಲೆಯನ್ನು ಇಲ್ಲಿ ಕಂಡಿದ್ದೇನೆ. ನನ್ನ ಜೀವನ ಈ ಜನಜೀವನದಲ್ಲಿ ಹೊಕ್ಕು ಸುಧಾರಿಸಿದೆ ಎಂದು ನಂಬಿದ್ದೇನೆ. ಈಗ ನಾನಿರುವ ಹಳ್ಳಿಯ ಹೆಸರು **ಕೆಂಚೇಹಳ್ಳಿ**. ಇಲ್ಲಿಗೆ ಬಂದು ಐದು ದಿವಸವಾಯಿತು; ಇನ್ನೂ ಇಲ್ಲಿ ಹತ್ತು ದಿವಸ ಇರಬೇಕಾಗಿದೆ. ಈ ಕೆಂಚೇಹಳ್ಳಿಯ ಪಕ್ಕದಲ್ಲಿ ಇನ್ನೊಂದು ಹಳ್ಳಿ; ಅದು ಪಾಳು ಬಿದ್ದಿದೆ. ' ಅದು ಒಂದು ದೊಡ್ಡ ವಿಚಾರವೇ—ನಮ್ಮ ನಾಡಿನ ಹಳ್ಳಿಗಳೆಲ್ಲವೂ ಪಾಳು ಬಿದ್ದಂತೆ ಕಾಣುವಾಗ!'—ಎನ್ನಬಹುದು; ಆದರೂ ಈ ಹಳ್ಳಿಗಳಲ್ಲಿ ಜೀವದ ಓಡಾಟವಿರುತ್ತದೆ, ಆ ಹಳ್ಳಿಯಲ್ಲಿ ಇಲ್ಲ; ಅಷ್ಟೇ.

ನಾನು ಕೆಂಚೇಹಳ್ಳಿಯಲ್ಲಿ ಬಹಳ ಜನರನ್ನು ಕೇಳಿದ್ದೇನೆ: ' ಪಕ್ಕದಲ್ಲಿರುವ ಹಳ್ಳಿ ಪಾಳಾದುದು ಹೇಗೆ ? ' ಎಂದು. ಆದರೆ ಯಾರೂ ನನ್ನ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ಕೊಡುವವರಿಲ್ಲ. ಕೆಲವರು ' ಇವನಿಗೇಕೆ ಇದರ ಗೊಡವೆ ? ' ಎನ್ನುವ ಭಾವನೆಯಿಂದ ನೋಡಿ ಹೋಗಿದ್ದಾರೆ. ಇನ್ನು ಕೆಲವರು ' ಅದು ಬಹಳ ದೊಡ್ಡ ಕತೆ ಐತೇ ! ' ಎಂದು ಚಿಕ್ಕದಾಗಿ ಹೇಳಿ ಹೋಗಿದ್ದಾರೆ. ಯಾವುದೋ ಸಮಾಚಾರವನ್ನು ಹೇಳಲು ಇಷ್ಟವಿಲ್ಲದವರಂತೆ ಅವಸರವಸರವಾಗಿಯೂ ಹೋಗಿದ್ದಾರೆ. ಈ ವಿಚಿತ್ರ ವರ್ತನೆಗಳಿಂದ ನನಗೆ ಆ ಪಾಳುಬಿದ್ದ ಹಳ್ಳಿಯ ಸಮಾಚಾರ ತಿಳಿಯಲು ಕುತೂಹಲ ಹೆಚ್ಚಿತು. ಎರಡು ಮೂರು ದಿನಗಳಿಂದ ನಿತ್ಯವೂ ಸಂಜೆ, ನನ್ನ ಕೆಲಸ ಮುಗಿದ ಮೇಲೆ, ಆ ಪಾಳು ಬಿದ್ದ ಹಳ್ಳಿಯ ಕಡೆಗೆ ನಾನು ತಿರುಗಾಡಲು ಹೋಗುತ್ತಿದ್ದೆ. ಪ್ರತಿಯೊಂದು ಸ್ಥಳವನ್ನೂ ಅವಲೋಕಿಸುತ್ತಿದ್ದೆ. ಆದರೆ ನನಗೆ ಏನೂ ತೋರಲಿಲ್ಲ. ನಾನು ನಿತ್ಯವೂ ಹೋಗುತ್ತಿದ್ದುದನ್ನು ನೋಡಿ ಆ ಹಳ್ಳಿಯವರು ಕೆಲವರು ' ಸ್ವಾಮಿ, ಅಲ್ಲಿ ದಯ್ಯ ಭೂತ ಐತೆ ' ಎಂದು ಹೆದರಿಕೆ ಹುಟ್ಟಿಸಿದರು. ನಾನು ' ಏಕೆ ? ' ಎಂದು ಕೇಳಿದರೆ, ಒಬ್ಬರ ಮುಖ ಒಬ್ಬರು ನೋಡಿಕೊಂಡು ಏನೋ ವಿಚಿತ್ರವಾಗಿ ನಗುತ್ತಿದ್ದರು. ನನಗೆ ಆ ಪಾಳುಬಿದ್ದ ಹಳ್ಳಿಯ ವಿಚಾರವಾಗಿ ಇನ್ನೂ ಕುತೂಹಲ ಹೆಚ್ಚಾಯಿತು. ಕಡೆಗೆ ವಿಶ್ವಪ್ರಯತ್ನದಿಂದ ನನಗೆ ತಿಳಿದುಬಂದುದು ಒಂದೇ ಒಂದು ಸಂಗತಿ. ಅದೇನೆಂದರೆ: ಆ ಪಾಳು ಬಿದ್ದ ಹಳ್ಳಿಯ ಹೆಸರು ' ಬೆಳ್ಳಿಹಳ್ಳಿ ' ಎಂದು. ಆ ಹೆಸರು ನೋಡಿ ನನಗೆ ಆಶ್ಚರ್ಯವಾಯಿತು. ನಾನು ನೋಡಿರುವ ಹಳ್ಳಿಗಳ ಹೆಸರು ಯಾವುದೂ ಇಷ್ಟು ಚೆನ್ನಾಗಿರಲಿಲ್ಲ, ' ಬೆಳ್ಳಿಹಳ್ಳಿ ' ಅಬ್ಬಾ ಎಂತಹ ಹೆಸರು !

ನಾನು ನಿತ್ಯದಂತೆ ಸಂಜೆಯ ಐದು ಗಂಟೆಗೆ, ನನ್ನ ಕೆಲಸ ಮುಗಿಸಿಕೊಂಡು ತಿರುಗಾಡಲು ಹೊರಟೆ. ಪಯಿರಿನ ಸಮೃದ್ಧಿಯ ಸಮೂಹದಲ್ಲಿ ಹಳ್ಳಿ ಮಲಗಿದಂತೆ ತೋರುತ್ತಿದ್ದಿತು. ಗಾಳಿಗೆ ಪಯಿರೆಲ್ಲಾ ಒಂದು ಪಕ್ಕಕ್ಕೆ ಬಾಗಿದಾಗ, ತೊಟ್ಟಿಲಿನಲ್ಲಿ ಮಲಗಿದ ಮಗುವನ್ನು ತಾಯಿ ಬಗ್ಗಿ ಮುತ್ತಿಡುವಂತೆ....ಪಯಿರು ಹಳ್ಳಿಯನ್ನು ಮುದ್ದಿಸುವಂತಿತ್ತು. ಈ ಪಯಿರಿನ ಗದ್ದೆಗಳ ಆಚೆ ತಾಯಿ ಕಾವೇರಿ; ಕಾವೇರಿಯ ಮತ್ತೊಂದು ದಡದ ಆಚೆ ಒಂದು ಚಿಕ್ಕ ಬೆಟ್ಟ. ಹಳ್ಳಿಯಿಂದ ಹೊರಟು, ಗದ್ದೆಗಳ ಎತ್ತರವಾದ ಪಯಿರಿನ ಮಧ್ಯೆ ಹಾದು, ನಾನು ಕಾವೇರೀ ತೀರಕ್ಕೆ ಬಂದೆನು. ಅಸ್ತಮಿಸುವ ಸೂರ್ಯನು ವಿವಿಧ ಸೌಂದರ್ಯಗಳಿಂದ, ಸಕಲ ವೈಭವಗಳೊಡನೆ ಮೆಲ್ಲಗೆ ಪಶ್ಚಿಮದಿಕ್ಕಿನಲ್ಲಿ ಇಳಿಯುತ್ತಿದ್ದನು. ಕಿರಣಗಳು ನದಿಯನ್ನು ಹೇಳಲರಿಯದ ಬಣ್ಣದ ವೈಖರಿಯಿಂದ ಬೆಳಗುತ್ತಾ, ನದಿ ಸ್ವರ್ಗದಿಂದ ಭೂಮಿಗೆ ಇಳಿದಂತೆ ತೋರುತ್ತಿತ್ತು. ಗಾಳಿ ಮೆಲ್ಲಗೆ ಬೀಸುತ್ತ—' ಶ್ರಾವಣ ಸಂಧ್ಯಾ ಸಮೀರಣ ' ವನ್ನು ಜ್ಞಾಪಕಕ್ಕೆ ತರುತ್ತಿತ್ತು. ಹುಚ್ಚೆಳ್ಳಿನ ಗದ್ದೆಯ ಹಳದಿಯ ಹೂಗಳು, ಮುಳುಗುವ ಸೂರ್ಯನ ಬೆಳಕಿನಲ್ಲಿ ಚಿನ್ನದಂತೆ ಬೆಳಗುತ್ತಿದ್ದುವು. ನಾನು ನಿಂತ ಕಡೆ ಎದುರಿಗೆ, ನದಿಯ ಪಕ್ಕದಲ್ಲಿ ಮಾವಿನ ತೋಪು—ಮತ್ತೊಂದೆಡೆ ಹುಚ್ಚೆಳ್ಳಿನ ಹಳದಿಯ ಸಮೂಹ; ನದಿಯ ಆಚೆ ಬೆಟ್ಟ. ಅಂತೂ ಆಗ ನನ್ನ ಮನಸ್ಸಿನಲ್ಲಿ ಉಂಟಾದ ಆನಂದವನ್ನೂ, ನನ್ನ ಆತ್ಮಕ್ಕೆ ಉಂಟಾದ ಶಾಂತಿಯನ್ನೂ ನಾನು ಹೇಳಲಾರೆ. ಇಂತಹ ಒಂದು ಸಮಯದಲ್ಲೇ ನಮ್ಮ ಪೂರ್ವಿಕರು " ಓಂ ಶಾಂತಿಃ ಶಾಂತಿಃ ಶಾಂತಿಃ " ಎಂದು ಹೇಳಿರಬೇಕು—ಎಂದು ಮನಸ್ಸಿನಲ್ಲಿ ಎಂದುಕೊಂಡೆ.

ಇದ್ದು ದಿದ್ದಂತೆಯೇ---ಸೌಂದರ್ಯದ ಉನ್ಮಾದದಲ್ಲಿ, ತೇಲುತ್ತಿದ್ದಂತೆಯೇ---ಆಚೆಯ ದಡದಲ್ಲಿ ಒಂದು ವ್ಯಕ್ತಿ ಕುಳಿತಿದ್ದಂತೆ ತೋರಿತು. ಸಂಜೆಯಾದೊಡನೆಯೆ ನದಿಯ ಆಚೆ ಜನಸಂಚಾರ

ಇರುವುದೇ ಇಲ್ಲ. ನಾನು ನೋಡಿದ ಹಾಗೆ ಕೆಂಚೇಹಳ್ಳಿಯ ಯಾವ ವ್ಯಕ್ತಿಯೂ ಇತ್ತಕಡೆಗೆ ಬರುವುದು ಅಪರೂಪ. ಆ ವ್ಯಕ್ತಿ ಮುದುಕನಂತೆ ಕಂಡುಬಂದನು. ನಾನು ಕುತೂಹಲದಿಂದ, ನದಿಯನ್ನು ದಾಟಿ, ಆಚೆಯ ದಡಕ್ಕೆ ಹೋದೆನು. ಅವನು ಒಂದು ತುಂಡುಪಂಚೆಯನ್ನುಟ್ಟು ಒಂದು ತುಂಡನ್ನು ಹೊದ್ದಿದ್ದನು. ಅವನ ಮುಖದ ಮೇಲೂ ತಲೆಯ ಮೇಲೂ ಕೂದಲು ಯಥೇಚ್ಛವಾಗಿ ಬೆಳೆದು, ಅವನ ವಯಸ್ಸನ್ನು ಹೆಚ್ಚು ಮಾಡುವಂತಿದ್ದುವು. ನಾನು ಬಂದೊಡನೆಯೆ ಅವನು ಎದ್ದು ಬೆಟ್ಟದ ಕಡೆಗೆ ಹೋಗುತ್ತಿದ್ದನು. ಅವನನ್ನು ಮಾತನಾಡಿಸಬೇಕೆಂದು ನಾನು ಅವನ ಮುಂದೆ ಹೋದೆ.

" ನೀವು ಯಾರು ? " ಅವನು ಕೇಳಿದನು.

" ಎದುರು ಹಳ್ಳಿಯವನು ! "

" ಬೆಟ್ಟದ ಮೇಲೆ ಹೋಗಬೇಡಿ ! "

" ಏಕೆ ? " ನಾನು ಕೇಳಿದೆ.

" ಕಾರಣ ನಾನು ಹೇಳಲಾರೆ. ತಮಗೆ ಜೀವದ ಮೇಲೆ ಆಶೆ ಇದ್ದರೆ ತಾವು ಹೋಗುವುದಿಲ್ಲ! ನಿಮ್ಮ ಹಳ್ಳಿಯಲ್ಲಿ ಕೇಳಿದರೆ ಎಲ್ಲ ಸಂಗತಿ ಹೇಳುತ್ತಾರೆ ! "

" ಪಾಳು ಬಿದ್ದ ಹಳ್ಳಿಗೂ— ಈ ಬೆಟ್ಟಕ್ಕೂ ಏನಾದರೂ ಸಂಬಂಧವಿದೆಯೇ ? "

ಅವನಿಗೆ ನನ್ನ ಪ್ರಶ್ನೆಯನ್ನು ಕೇಳಿ ಸ್ವಲ್ಪ ಆಶ್ಚರ್ಯವಾಯಿತು. ಅವನಿಗೆ ಮಾತನಾಡಲು ಇಷ್ಟವಿರಲಿಲ್ಲವೆಂದು ನನಗೆ ತಿಳಿಯಿತು. ಆದರೂ ಅವನಿಂದ ಸಮಾಚಾರ ಹೊರಡಿಸಬೇಕೆಂಬ ಕುತೂಹಲ ನನಗೆ.

' ಅದೊಂದು ದೊಡ್ಡ ಕತೆ ! ' ಎಂದು ಹೇಳಿ, ಬೆಟ್ಟ ಹತ್ತಲು ಆತ ಮೊದಲು ಮಾಡಿದನು. ನಾನು ಇದೇ ಮಾತನ್ನು ಬಹಳ ಜನರ ಬಾಯಲ್ಲಿ ಕೇಳಿದ್ದೆ.

" ಅದು ನನಗೆ ಗೊತ್ತು ! " ಎಂದೆ.

" ಓಹೋ " ಎಂದು ಹಿಂತಿರುಗಿ ತೀಕ್ಷ್ಣವಾಗಿ ನನ್ನನ್ನು ನೋಡಿದನು. ಆದರೆ ಅವನು ಬೆಟ್ಟ ಹತ್ತುವುದನ್ನು ನಿಲ್ಲಿಸಲೇ ಇಲ್ಲ. ನನ್ನನ್ನು ಮರೆತವನಂತೆ ಸ್ವಲ್ಪ ದೂರ ಹೋದನು. ನಾನೂ ಅವನನ್ನೇ ಹಿಂಬಾಲಿಸಿದೆನು.

" ಅವರ ದೇವರು— ಅಬ್ಬಾ ! ಅವರ ದೇವರು ! " ಎಂದು ತನ್ನಲ್ಲಿ ತಾನೇ ಹೇಳಿಕೊಂಡವನಂತೆ ಹೇಳಿದನು. ನನಗೆ ' ಯಾವುದೋ ದೇವರ ಕಥೆಯಿರಬೇಕು ' ಎಂದು ಜುಗುಪ್ಸೆಯಾಯಿತು. ಏಕೆಂದರೆ ನಾನು ಹೋದ ಪ್ರತಿಯೊಂದು ಹಳ್ಳಿಗೂ—ನಾನು ಬಹಳ ಹಳ್ಳಿಗೆ ಹೋಗಿದ್ದೇನೆ—ಒಂದು ಸ್ಥಳಪುರಾಣವಿದೆ. ನಾನಾಗ ನಿರುತ್ಸಾಹಿಯಾಗಿ, ಸುಮ್ಮನೆ ಅವನ ಹಿಂದೆ ಬೆಟ್ಟವನ್ನು ಏರಿದೆ.

" ನಿಮಗೆ ದೇವರಲ್ಲಿ ನಂಬಿಕೆ ಇದೆಯೇ ? " ಅವನ ಪ್ರಶ್ನೆ. ನನಗೆ ಅವನ ಪ್ರಶ್ನೆಯನ್ನು ಕೇಳಿ ಸ್ವಲ್ಪ ಆಶ್ಚರ್ಯವಾಯಿತು.

ಇಲ್ಲ ಎಂದರೆ ಏನು ತಿಳಿದುಕೊಳ್ಳುತ್ತಾನೋ ಎಂದು ' ಇದೆ ' ಎಂದೆ.

" ಅವರಷ್ಟು ? " ಅವನ ವಿಚಿತ್ರ ಪ್ರಶ್ನೆ.

ನನಗೆ ಅರ್ಥವಾಗಲಿಲ್ಲ. " ಯಾರಷ್ಟು ? " ಎಂದು ಪ್ರಶ್ನೆಗೆ ಪ್ರಶ್ನೆ ಹಾಕಿದೆ. ನನ್ನ ಪ್ರಶ್ನೆ ಕೇಳಿ ಅವನು ಚಕಿತನಾದನು.

" ಆದರೆ ಕಥೆ ನಿಮಗೆ ಗೊತ್ತಿಲ್ಲ ? " ಎಂದ.

" ಹೌದು, ನಾನು ಕಥೆ ಗೊತ್ತು ಎಂದು ಹೇಳಲಿಲ್ಲವಲ್ಲಾ! ಒಂದು ಕಥೆ ಇದೆ ಎನ್ನುವುದು ಗೊತ್ತು—ಎಂದು ಹೇಳಿದೆ ಅಷ್ಟೇ!" ಎಂದೆ. ಅವನು ಸ್ವಲ್ಪ ನಕ್ಕನು. ಅವನ ನಗುವು ನನ್ನಲ್ಲಿ ಹೆದರಿಕೆಯನ್ನು ಉಂಟುಮಾಡುತ್ತಿತ್ತು. ಅಷ್ಟು ಹೊತ್ತಿಗೆ ನಾವು ಬೆಟ್ಟದ ಮೇಲಕ್ಕೆ ಬಂದಿದ್ದೆವು. ಅಲ್ಲಿ ಒಂದು ವಿಸ್ತಾರವಾದ ಪ್ರದೇಶ— ಮಧ್ಯದಲ್ಲಿ ಒಂದು ಪಾಳು ಗುಡಿ— ಗುಡಿಯ ಸುತ್ತಲೂ ಪೊದೆ ಬೆಳೆದಿದೆ. ಗುಡಿಯ ಒಳಗಡೆ ವಿಗ್ರಹವಿಲ್ಲ. ಆ ಗುಡಿಗೆ ಸ್ವಲ್ಪ ದೂರದಲ್ಲೇ ಒಂದು ಗುಡಿಸಲು. ಗುಡಿಸಲು ಆ ಮುದುಕನದಿರಬಹುದೆಂದು ಊಹಿಸಿದೆ. ಆ ಬೆಟ್ಟದ ಮೇಲಿನಿಂದ ಕೆಳಗೆ ನೋಡಿದರೆ ಬಹು ರಮ್ಯವಾದ ದೃಶ್ಯ ಕಾಣುತ್ತಿತ್ತು. ಬೆಟ್ಟದ ಬುಡದಿಂದ ನದಿಯ ದಡದ ವರೆಗೂ ಮರಗಳ ಸಮೃದ್ಧಿ. ಆಮೇಲೆ ಶಬ್ದವಿಲ್ಲದೆ ಹರಿಯುತ್ತಿದ್ದ ತಾಯಿ ಕಾವೇರಿ. ನದಿಯ ಆಚೆ ಹಸಿರು ಚಾಪೆಗಳನ್ನು ಹಾಸಿದಂತೆ, ಕಣ್ಣು ಕಾಣುವವರೆಗೂ ಪಯಿರಿನ ಸಮೂಹ. ಪಯಿರಿನ ಮಧ್ಯೆ ಜೋಗುಳ ಹಾಡಿಸಿಕೊಂಡು ಮಲಗಿದಂತಿದ್ದ ಕೆಂಚೇ ಹಳ್ಳಿ.... ಆದರೆ ನನ್ನ ದೃಷ್ಟಿ ಇದಾವುದರ ಮೇಲೂ ಅಷ್ಟು ಬೀಳಲಿಲ್ಲ; ಆಗ ಅದು ಆ ಪಾಳುಗುಡಿಯ ಮೇಲೆಯೆ ನೆಲಸಿದ್ದಿತು.

" ಇದರಲ್ಲಿ ವಿಗ್ರಹವಿಲ್ಲವೇ ? " ಎಂದು ಕೇಳಿದೆ.

" ಅದು ಅಲ್ಲಿದೆ ! " ಎಂದು ಬೆಟ್ಟದ ಹಿಂದೆ ಇದ್ದ ಒಂದು ಹಳ್ಳವನ್ನು ತೋರಿಸಿ, ಮುದುಕ ವಿಚಿತ್ರವಾಗಿ ನಕ್ಕನು.

" ಗುಡಿಯಲ್ಲಿರುವ ವಿಗ್ರಹ ಅಲ್ಲಿಗೆ ಹೇಗೆ ಹೋಯಿತು ? " ಎಂದು ಸ್ವಲ್ಪ ಕುತೂಹಲಿಯಾಗಿಯೆ ಕೇಳಿದೆ. ' ಅದು ಒಂದು ದೊಡ್ಡ ಕಥೆ ' ಎಂದು ಹೇಳುತ್ತಾನೆ ಎಂದು ನಾನು ಭಾವಿಸಿದ್ದೆ; ಅವನು ಹಾಗೆ ಮಾಡಲಿಲ್ಲ. ತತ್‌ಕ್ಷಣ ಏನನ್ನೋ ಜ್ಞಾಪಿಸಿಕೊಳ್ಳುವವನಂತೆ ಯೋಚಿಸಿ, ಮತ್ತೆ ಕನಸಿನಲ್ಲಿ ಹೇಳಿದಂತೆ " ಅದು ಅವರ ದೇವರು ! " ಎಂದನು. ಆಮೇಲೆ ತನ್ನಷ್ಟಕ್ಕೆ ತಾನೇ ಹೇಳಿದವನಂತೆ, " ಅಬ್ಬಾ ! ಏನು ದೇವರು ? ಮಾರಿ ಎಂದರೆ ಮಾರಿ ! ಇನ್ನೂರು ಕುಳ ಹಾಳುಮಾಡಿದ ಮಾರಿ ! ಸಾವಿರಾರು ಬಾಳನ್ನು ಸುಟ್ಟ ಮಾರಿ ! " ಎಂದು, ತನ್ನೆದುರಿಗೆ ಮಾರಿ ನಿಂತು ಅದರೊಡನೆ ಮಾತನಾಡಿದವನಂತೆ ಗಾಳಿಯಲ್ಲಿ ಮಾತನಾಡಿದ. ನನಗೆ ಮಾರಿಯ ಅವತಾರ ಎಲ್ಲೆಲ್ಲೂ ಮೆರೆದಂತೆ ಕಂಡಿತು. ಅವನು ಕಥೆ ಹೇಳಲು ಮೊದಲು ಮಾಡಿದ. ಕಥೆ ಎಂದರೆ ಉದ್ದಕ್ಕೆ ಸಾಂಗವಾಗಿ ಹೇಳಲಿಲ್ಲ; ಆಗಾಗ ಮನಸ್ಸಿನ ಬೂದಿ ಕೆದರಿ,

ನೆನಪಿನ ಕೆಂಡ ತೋರಿದಾಗ, ಅವನಿಂದ ಮಾತು ಹೊರಡುತ್ತಿದ್ದಿತು. ಅವನು ಮಧ್ಯೆ ಮಧ್ಯೆ ಹಲ್ಲು ಕಡಿಯುತ್ತಿದ್ದನು; ಕೆಲವು ಕಡೆ ವಿಕಾರವಾಗಿ ನಗುತ್ತಿದ್ದನು; ಮತ್ತೆ ಕೆಲವೆಡೆ ಮುಷ್ಟಿಯನ್ನು ಹಿಡಿದು ಗಾಳಿಯೊಡನೆ ಕಾಳಗಕ್ಕೆ ಹೊರಡುತ್ತಿದ್ದನು. ಅವನು ಹೇಳಿದ ಕಥೆಯ ಸಾರಾಂಶ ಹೀಗಿದ್ದಿತು:—

"....ಬೆಳ್ಳಿಹಳ್ಳಿ ಮುಂಚೆ ಒಂದು ದೊಡ್ಡ ಹಳ್ಳಿಯಾಗಿದ್ದಿತು. ಆ ಹಳ್ಳಿಯಲ್ಲಿ ಒಕ್ಕಲಿಗರು, ಕುಂಬಾರರು ಹೆಚ್ಚಾಗಿದ್ದರು. ಒಕ್ಕಲಿಗರವು ಎಂಬತ್ತು ಕುಳ; ಕುಂಬಾರರವು ನೂರಿಪ್ಪತ್ತು ಕುಳ. ಮಳೆಬೆಳೆ ಚೆನ್ನಾಗಿ ನಡೆದು, ಹಳ್ಳಿಯದು 'ಬೆಳ್ಳಿಹಳ್ಳಿ' ಎಂಬ ಹೆಸರಿಗೆ ತಕ್ಕ ಹಾಗೆ ಇದ್ದಿತು. ಬೆಟ್ಟದ ಮೇಲಿದ್ದ ಮಾರಿಗುಡಿಯು ಹಳ್ಳಿಯ ಕಣ್ಣಾಗಿದ್ದಿತು. ಬೆಟ್ಟಕ್ಕೆ ಕಳಸವಿಟ್ಟಂತೆ ಗುಡಿಯಿದ್ದಿತು. ಅದು ಜನದ ಬಾಳಿನ ಒಂದು ಮುಖ್ಯ ಅಂಗವಾಗಿದ್ದಿತು. ಹಳ್ಳಿಯವರ ಪ್ರತಿಯೊಬ್ಬರ ಮನೆಯಲ್ಲಿ ನಡೆಯುವ ಪ್ರತಿಯೊಂದು ಸಣ್ಣ ಘಟನೆಯೂ, ಕ್ಷಾಮ-ಸುಗ್ಗಿ, ಮದುವೆ-ಸಾವು, ಸುಖ-ದುಃಖ ಇವೆಲ್ಲವೂ ಮಾರಿಯ ಕೋಪದಿಂದಲೋ, ಕೃಪೆಯಿಂದಲೋ ನಡೆಯುತ್ತವೆ— ಎಂದು ಜನರ ಭಾವನೆ ಆಗಿತ್ತು. ಅವನು ಈ ಮಾತನ್ನು ಹೇಳುವಾಗ ನನ್ನ ಕಡೆಗೆ ಕೈತೋರಿಸಿ "ಪಟ್ಟಣದವರಾದ ನಿಮಗೆ, ಕಾಲೇಜು ಹತ್ತಿದವರಿಗೆ, ಈ ನಂಬಿಕೆ, ದೈನ್ಯತೆಯಿಂದ ಕೂಡಿದ—ನಿಜವಾದ—ದೃಢವಾದ ನಂಬಿಕೆ, ಅರ್ಥವಾಗುವುದಿಲ್ಲ; ಈ ನಂಬಿಕೆಯ ಹಿಂದಿನ ಮನಃಪ್ರಪಂಚ ತಿಳಿಯುವುದಿಲ್ಲ. ನಿಮ್ಮ ನರಕ-ಸ್ವರ್ಗಗಳು ಕೇವಲ ವೇದಾಂತ-ಗ್ರಂಥಗಳಲ್ಲಿ; ಆದರೆ ಇವರ ನರಕ ಅನಂತಯಾತನೆಯ—ಅನಂತಕ್ಷಾಮದ—ಅನಂತ ದುರಂತತೆಯ ಚಿತ್ರ!" ಎಂದು ಅವರ ನಂಬಿಕೆಯನ್ನು ಕಾವ್ಯಮಯವಾಗಿ ಹೇಳಿದನು. ಅವನು ಹೇಳುವುದರಲ್ಲಿ ಒಂದು ಅಪೂರ್ವಶಕ್ತಿಯಿದ್ದಿತು; ಒಂದು ಮಾತು ಹೇಳುವುದು—ಸ್ವಲ್ಪ ಹೊತ್ತು ಸುಮ್ಮಗಿರುವುದು—ಹೀಗೆ ಮಾಡುತ್ತಿದ್ದನು.

"ಆ ಗುಡಿಯು ಹಳ್ಳಿಯ ಜನರ ಮನಸ್ಸಿನಲ್ಲಿ ಒಂದು ದೊಡ್ಡ ಸ್ಥಾನವನ್ನು ಹೊಂದಿದಂತೆ, ಅದರ ಪೂಜಾರಿಗೂ ಬಹಳ ಗೌರವದ ಸ್ಥಾನವಿದ್ದಿತು. ಪೂಜಾರಿ ಹೇಳಿದ ಶಕುನ ವೇದ-ವಾಕ್ಯದಂತೆ. ಅವನು ಮಾರಿಯ ಆಳು-ಪರಮಭಕ್ತ— ಎಂದು ಜನರ ನಂಬಿಕೆ. ತಲತಲಾಂತರದಿಂದ ಪೂಜಾರಿ ಒಕ್ಕಲಿಗರವನು—ಏಕೆಂದರೆ 'ಒಕ್ಕಲಿಗರು ಕುಂಬಾರರಿಗಿಂತ ಶ್ರೇಷ್ಠ' ಎಂದು ಭಾವನೆ. ಪ್ರತಿಸಾರಿಯೂ ಮಾರಿಯ ಜಾತ್ರೆಯಲ್ಲಿ ಮೊದಲಿನ ಮರ್ಯಾದೆ ಒಕ್ಕಲಿಗರಿಗೆ ಸಲ್ಲುತ್ತಿತ್ತು....

....ಬೆಳ್ಳಿಹಳ್ಳಿಯ ಒಕ್ಕಲಿಗರಲ್ಲಿ **ಕಾಳಯ್ಯ** ಮುಖ್ಯಸ್ಥ; ಮನೆ-ಮಠ-ಗದ್ದೆ ಉಳ್ಳವನು. ಊರಿನ ಪಟೇಲ. ಇವನು ಪ್ರತಿಯೊಂದು ಮಾರಿಯ ಜಾತ್ರೆಯಲ್ಲೂ ಮುಂಚೆ ಮಾರಿಗೆ ತನ್ನ ಸೇವೆ ಸಲ್ಲಬೇಕೆಂಬ ಕಟ್ಟು ಮಾಡಿ, ಅದನ್ನು ನಡೆಯಿಸಿಕೊಂಡು ಬರುತ್ತಿದ್ದನು.....

....ಕುಂಬಾರರಲ್ಲಿ **ನಿಂಗಯ್ಯ** ಸ್ವಲ್ಪ ಉಳ್ಳವನು. ಅವನಿಗೆ ಕಾಳಯ್ಯನ ಸೊಕ್ಕನ್ನು ಸಹಿಸಲಾಗುತ್ತಿರಲಿಲ್ಲ. ಅಲ್ಲದೆ ಕುಂಬಾರರು ಒಕ್ಕಲಿಗರಿಗಿಂತ ಒಂದು ದರ್ಜೆ ಕಡಿಮೆ ಎನ್ನುವುದು ಅವನನ್ನು ತಲೆತಗ್ಗಿಸುವಂತೆ ಮಾಡಿದ್ದಿತು. ಅವನ ಆಸ್ತಿ, ಮರ್ಯಾದೆ, ಕಾಳಯ್ಯನ ಆಸ್ತಿ-ಮರ್ಯಾದೆಗಳಿಗೆ ಏನೂ ಕಡಿಮೆ ಇರಲಿಲ್ಲ. ಅದೂ ಅಲ್ಲದೆ, ಹಳ್ಳಿಯಲ್ಲಿ ತನ್ನ ಜನವೇ ಹೆಚ್ಚು—ಇಷ್ಟಿರುವಾಗ ಮಾರಿಯ ಸೇವೆಯ ಅಧಿಕಾರ ತನಗೇ ಹೆಚ್ಚು—ಎನ್ನುವ ಹಟ ಅವನದು. ಕಾಳೀ ಗುಡಿ ತಮಗೇ ಸೇರಬೇಕೆಂಬ ಛಲ ಅವನದು. ಈ ಮಾತು ಕಾಳಯ್ಯನಿಗೆ ತಿಳಿದು, ಅವನು ಗಹಗಹಿಸಿ ನಗುತ್ತಾ 'ಮಡಿಕೆ ಮಾಡೋ ಮೂದೇವೀಗೆ ಮಾರೀ ಶಾಸ್ತ್ರ ಬರತ್ತೇನಾ?' ಎಂದು ಹಾಸ್ಯಮಾಡುತ್ತಿದ್ದನು. ನಿಂಗನು ಈ ಮಾತು ಕೇಳಿ ಕೆಂಡದಂತೆ ಉರಿದು ಬಿದ್ದು "ಕುಂಬಾರ ಬೇವಾರ್ಸಿ ಅಂತ ತಿಳಿದವ್ನೆ ಕಾಳ! ಮಾರೀ ಗುಡೀಗೆ ಚಿನ್ನದ ತಗಡು ಹಾಕಿಸ್ತೀನಿ; ತಾಯಿ ಸಂತೋಸವಾಗಿ ಮಳೆ ಬೆಳೆ ಕೊಡ್ತಾಳೆ!" ಎನ್ನುತ್ತಿದ್ದ....

....ಹೀಗೆಯೆ ಒಕ್ಕಲಿಗರೂ ಕುಂಬಾರರೂ ಕತ್ತಿ ಮಸೆಯುತ್ತಿದ್ದರು. ಕಾಳಯ್ಯನ ಗದ್ದೆ ಕಟಾವಿಗೆ ಬರುವ ಸಮಯದಲ್ಲಿ, ರಾತ್ರಿಯ ಹೊತ್ತು ನಿಂಗಯ್ಯ ತನ್ನ ದನ ಬಿಟ್ಟು ಕಾಳನ ಗದ್ದೆಯನ್ನು ತುಳಿಸಿ ಧ್ವಂಸಮಾಡಿಸುತ್ತಿದ್ದನು. ಕಾಳಯ್ಯನು, ಗದ್ದೆಗೆ ನೀರು ಬಿಡುವ ಕಾಲದಲ್ಲಿ, ರಾತ್ರಿಯ ಹೊತ್ತು ತೂಬನ್ನು ಒಡೆದು ನಿಂಗಯ್ಯನ ಗದ್ದೆ ಕೊಚ್ಚಿಕೊಂಡು ಹೋಗುವಂತೆ ನೀರುಬಿಡುತ್ತಿದ್ದನು. ಹೀಗೆಯೆ ಇಬ್ಬರಿಗೂ—ಅಂತೆಯೆ ಒಕ್ಕಲಿಗರಿಗೂ ಕುಂಬಾರರಿಗೂ— ಯುದ್ಧ ನಡೆಯುತ್ತಲೇ ಇದ್ದಿತು....

....ಒಂದು ಸಾರಿ ಮಾರಿಯ ಜಾತ್ರೆಗೆ ನಾಲ್ಕು ದಿನದ ಮುಂಚೆ, ಸಾಯಂಕಾಲ ಪೂಜೆ ಮುಗಿಸಿಕೊಂಡು ಬರುತ್ತಿದ್ದಾಗ, ಮಾರಿಯ ಪೂಜಾರಿಯನ್ನು ಯಾರೋ ಮಬ್ಬಿನಲ್ಲಿ ಹೊಡೆದು ಕೊಂದು, ಮಾವಿನ ತೋಪಿನಲ್ಲಿ ಹಾಕಿದರು. ಇದು ಕುಂಬಾರರ ಕೆಲಸವೇ ಇರಬೇಕೆಂದು ಒಕ್ಕಲಿಗರೆಲ್ಲಾ ರೊಚ್ಚಿಗೆದ್ದರು. ಈ ಸಮಾಚಾರ ಸುತ್ತುಮುತ್ತಲಿನ ಹಳ್ಳಿಗಳಿಗೆಲ್ಲಾ ಹಬ್ಬಿ, ಪ್ರತಿಯೊಂದು ಹಳ್ಳಿಯಲ್ಲಿ ಒಕ್ಕಲಿಗರಿಗೂ, ಕುಂಬಾರರಿಗೂ ಕಿರುಕುಳ ಯುದ್ಧ ಪ್ರಾರಂಭವಾಯಿತು. ಕಾಳಯ್ಯನ ಕೋಪಕ್ಕೆ ಎಣೆಯಿಲ್ಲದಂತಾಯಿತು. ಒಕ್ಕಲಿಗರೆಲ್ಲರೂ ಕಾಳಯ್ಯನ ಮನೆಯಲ್ಲಿ ಸಭೆ ಸೇರಿ, ಮತ್ತೊಬ್ಬ ಪೂಜಾರಿಯನ್ನು ನೇಮಕಮಾಡಿದರು. ಸುತ್ತುಮುತ್ತಣ ಹಳ್ಳಿಯ ಒಕ್ಕಲಿಗರ ಬೆಂಬಲವನ್ನೂ ಕೋರಿದರು. ಕಾಳಯ್ಯನು ಮಾತ್ರ 'ಕುಂಬಾರರ ಹಟ್ಟಿ ಎಲ್ಲಾ ತರೀತೀನಿ; ಮಾರಿ ಮುನಿಸಿಕೊಂಡಪ್ಪೆ!' ಎಂದು ಅಬ್ಬರಿಸಿದನು. ಆದರೆ ಅವನ ಜನದ ಸಂಖ್ಯೆ ಕಡಿಮೆಯಾದುದರಿಂದ ಸುಮ್ಮನಾಗಬೇಕಾಯಿತು....

....ಮಾರಿಯ ಜಾತ್ರೆ ಮೊದಲಾಗುವವರೆಗೂ ಬೆಳ್ಳಿಹಳ್ಳಿಯಲ್ಲಿ ಸಣ್ಣಪುಟ್ಟ ಕಿರುಕುಳವನ್ನು, ಕುಂಬಾರರೂ ಒಕ್ಕಲಿಗರೂ ಒಬ್ಬರಿಗೊಬ್ಬರು ಕೊಡುತ್ತಿದ್ದರು. ಕುಂಬಾರರು ನಿಂಗಯ್ಯನ

ಮುಂದಾಳುತನದಲ್ಲಿ ತಮ್ಮ ಕೈಲಾದಷ್ಟು ಹಾವಳಿ ನಡೆಸಿದ್ದರು....

....ಮಾರಿಯ ಜಾತ್ರೆಗೆ ಆ ವರುಷ ನೆರೆದಷ್ಟು ಜನ ಮತ್ತಿನ್ನಾವ ವರುಷವೂ ಈ ಹಿಂದೆ ನೆರೆದಿರಲಿಲ್ಲ. ಜಾತ್ರೆಯ ಹಿಂದಿನ ದಿನವೇ ಸುತ್ತುಮುತ್ತಲಿನ ಹಳ್ಳಿಗಳಿಂದ ಗಾಡಿಗಳಲ್ಲಿಯೂ ನಡೆದುಕೊಂಡೂ ಜನರು ಬರತೊಡಗಿದರು. ಹೆಂಗುಸರು, ಮಕ್ಕಳು, ಮಕ್ಕಳನ್ನು ಹೊತ್ತ ಹೆಂಗುಸರು, ಕುಂಟರು, ಕುರುಡರು, ಹೆಳವರು—ಎಲ್ಲರೂ ಮಾರಿಯ ಕೃಪೆಯನ್ನು ಸಂಪಾದಿಸಲು ಬರತೊಡಗಿದರು. ಕುರಿ, ಕೋಣಗಳ ಸಂಖ್ಯೆಯನ್ನಂತೂ ಎಣಿಸಲಿಕ್ಕೇ ಆಗುತ್ತಿರಲಿಲ್ಲ. ಅವರ ಪ್ರತಿಯೊಬ್ಬರ ಮನಸ್ಸಿನಲ್ಲೂ ಮಾರಿಯನ್ನು—ಆ ಭೀಕರ ಶಕ್ತಿಯನ್ನು—ತೃಪ್ತಿಪಡಿಸಬೇಕೆಂಬ ಹಂಬಲು ಮೂಡಿದ್ದಿತು. 'ಮಾರಿ ಮುನಿಸಿಕೊಂಡವಳೆ' ಎಂದರೆ, ಅವರು ಥರಥರನೆ ನಡುಗುತ್ತಿದ್ದರು. ತಮ್ಮ ಸರ್ವಸ್ವವನ್ನೂ ತೆತ್ತು ಮಾರಿಯನ್ನು ಸಂತೋಷಗೊಳಿಸುತ್ತಿದ್ದರು....

....ಜಾತ್ರೆಯ ದಿನ ಬೆಳಗಿನ ಏಳು ಗಂಟೆಯ ಹೊತ್ತಿಗೆ, ಬೆಟ್ಟದ ಮೇಲಕ್ಕೆ ಜನರ ಸಾಲು ಸಾವಿರಾರು ಕಡೆಯಿಂದ ಬರುತ್ತಿದ್ದಿತು. ಮೇಲಿನಿಂದ ನೋಡಿದರೆ ಇರುವೆಗಳ ಸಾಲು ಬೆಟ್ಟವನ್ನು ಮುತ್ತುವಂತೆ ಜನದ ಸಮೂಹ ಬೆಟ್ಟವನ್ನು ಹತ್ತುತ್ತಿದ್ದಿತು. ಮಾರಿಯ ಬಲಿಗೆ ತಕ್ಕ ಸಿದ್ಧತೆ ನಡೆದು—ಸಾವಿರಾರು ಮೂಕಪ್ರಾಣಿಗಳು ತಮ್ಮ ಅಂತ್ಯವನ್ನು ಕಾಯುತ್ತಿದ್ದುವು....

....ಇದ್ದುದಿದ್ದಂತೆ ಗುಡಿಯ ಹತ್ತಿರದಲ್ಲಿದ್ದ ಜನರ ಮಧ್ಯೆ ಒಂದು ಗುಲ್ಲೆದ್ದಿತು. ಗುಡಿಯ ಒಳಗಿನಿಂದ ಮೂರ್ಛೆ ಹೋದ ಪೂಜಾರಿಯನ್ನು ಕೆಲವರು ಹಿಡಿದುಕೊಂಡು ಬಂದು ಹೊರಗೆ ಮಲಗಿಸಿದರು. ಅವನು ಮೂರ್ಛೆ ಬಂದು ಬಿದ್ದಿದ್ದನು. ಅವನ ಕಣ್ಣುಗಳು ಹೇಳಲಾರದ ಭಯವನ್ನು ಹೊರಸೂಸುತ್ತಿದ್ದುವು. ಕಾಳಯ್ಯನು ಆ ಸಮಯದಲ್ಲಿ ಬಹಳ ಭಯಂಕರವಾಗಿ ಕಾಣುತ್ತಿದ್ದನು. ಹತ್ತಿರದಲ್ಲಿದ್ದ ಒಂದು ಮಚ್ಚುಕತ್ತಿಯನ್ನು ಕೈಯಲ್ಲಿ ಹಿಡಿದು—ಅವನ ಹಣೆಯ ತುಂಬ ವಿಭೂತಿ ಮಧ್ಯೆ ರಕ್ತನ ಕುಂಕುಮ—ಉಟ್ಟ ತುಂಡು ಕೆಂಪು ರೇಷ್ಮೆವಸ್ತ್ರ—ಕತ್ರಗೆ ಪ್ರಕಾಶಿಸುತಿದ್ದ ಎದೆ—ನಿಂಗಯ್ಯನನ್ನು ಅಟ್ಟಿಸಿಕೊಂಡು ಹೊರಟನು. ಒಂದು ಕ್ಷಣದಲ್ಲಿ ಈ ಸುದ್ದಿ ಪ್ರತಿಯೊಬ್ಬನಿಗೂ ಮಿಂಚಿನಂತೆ ತಿಳಿದುಹೋಯಿತು : 'ಮಾರಿಯ ಗುಡಿಯಿಂದ ಮಾರಿಯ ವಿಗ್ರಹ ಮಾಯವಾಗಿದೆ!' ಮಾರಿಯ ಕರಾಳ ವಿಗ್ರಹವನ್ನು ಹಿಂದಿನ ರಾತ್ರಿ ನಿಂಗಯ್ಯನ ಕಡೆಯವರು ಮೀಟಿ ತಿಪ್ಪೆಗೆ ಹಾಕಿದ್ದರು. ರಾತ್ರಿ ಬಹಳ ಹೊತ್ತಿನವರೆಗೂ ಅಲಂಕರಿಸಿ, ಎಲ್ಲವನ್ನೂ ಸಜ್ಜುಗೊಳಿಸಿ, ಪೂಜಾರಿ ಮನೆಗೆ ರಾತ್ರಿಯ ಒಂದು ಗಂಟೆಗೆ ತೆರಳಿದ್ದನು. ಬೆಳಗ್ಗೆ ಬಂದು ಗುಡಿಯನ್ನು ತೆರೆಯಲು, ಒಳಗೆ ವಿಗ್ರಹವೇ ಇಲ್ಲ. ಹೂವು ಹಣ್ಣು ದಿಕ್ಕಾಪಾಲಾಗಿ ಹರಡಿದ್ದುವು. ಒಂದು ಮೂಲೆಯಲ್ಲಿ ಗುದ್ದಲಿ, ಪಿಕಾಸಿ ಬಿದ್ದಿದ್ದುವು. ಮಾರಿಯನ್ನು ಕಿತ್ತಮೇಲೆ ಉಂಟಾದ ಹಳ್ಳ, ಮಣ್ಣು ಕಾಣುತ್ತಿದ್ದುವು. ಪೂಜಾರಿಯು ನಂಬಲಾರದ ಈ ದೃಶ್ಯವನ್ನು ನೋಡಿ, ಚೀತ್ಕಾರ ಮಾಡಿ, ಮೂರ್ಛೆಹೋದನು.....

....ಮುಂದೆ ನಡೆದ ದೃಶ್ಯ ಹೇಳಲಾರದಷ್ಟು ಭಯಂಕರವಾಗಿದೆ. ಕೋಣ–ಕುರಿಗಳನ್ನು ಹೊಡೆಯಲು ತಂದ ಮಚ್ಚುಗಳಲ್ಲಿ ಉಗ್ರವಾಗಿ, ಕುಂಬಾರರೂ ಒಕ್ಕಲಿಗರೂ ಹೊಡೆದಾಡಿದರು. ಕಾಳಯ್ಯನು ನಿಂಗಯ್ಯನ ತಲೆಯನ್ನು ಕೈಯಲ್ಲಿ ಹಿಡಿದು, ಗುಡಿಯ ಮುಂದೆ ಇಟ್ಟು, ಹುಚ್ಚನಂತೆ ಕುಣಿಯತೊಡಗಿದನು....

....ನಿಂಗಯ್ಯನ ಕಡೆಯವರು ಕಾಳಯ್ಯನ ಹಸುಗೂಸಿನ ತಲೆಯನ್ನು ಕಡಿದು ಕಾಳಯ್ಯನ ಮುಂದೆ ಹಾಕಿ, ಕೇಕೆ ಹಾಕಿದರು. ಕಾಳಯ್ಯನು ದುಃಖದಿಂದ ಹುಚ್ಚನಂತಾಗಿ, ತನಗೆ ತೃಪ್ತಿಯಾಗುವಷ್ಟು ಕುಂಬಾರರನ್ನು ಕಡಿದು, ಕಡೆಗೆ ತಾನೇ ಮಚ್ಚಿನಿಂದ ಹೊಡೆದುಕೊಂಡು ಸತ್ತನು. ನೆರೆದ ಜನರು ಕಾದಾಡಿದರು. ಬೆಳ್ಳಿಹಳ್ಳಿಗೆ ಬೆಂಕಿ ಬಿದ್ದಿತು. ಎಲ್ಲವೂ ನಾಶವಾಯಿತು...."

ಆ ಮುದುಕನು ಈ ದುರಂತ ಪ್ರಕರಣದ ಅಂತ್ಯವನ್ನು ತಿಳಿಸುವಾಗ "ಮಾರಿಯ ಕೋಪ ಪ್ರಪಂಚವನ್ನು ನುಂಗುತ್ತದೆ, ಮಾರಿ ಮೈಮೇಲೆ ಬಂದರೆ ಸಿಂಹದ ರಕ್ತ ಹೀರುವಷ್ಟು ಶಕ್ತಿ ಬರುತ್ತದೆ" ಎಂದನು. ಅವನು ಕಥೆ ಹೇಳಿದ ಉದ್ವೇಗದಿಂದ ಅವನ ಮೇಲೆ ಮಾರಿ ಬಂದಂತಿದ್ದಿತು. ಅವನ ವಿಚಿತ್ರಾಕೃತಿ, ಅರ್ಧ ಬೆಳಕು ಅರ್ಧ ಕತ್ತಲೆಯಲ್ಲಿ, ವಿಕಾರವಾಗಿ ಕಂಡಿತು. ಅವನ ನಗು ವಿಚಿತ್ರಮೃಗದ ಅಂತ್ಯದ ಕೂಗಿನಂತಿದ್ದಿತು. ಕತ್ತಲು ಆಗ ತಾನೆ ಲೋಕವನ್ನು ಆವರಿಸುತ್ತಿತ್ತು. ಆಗ ಪ್ರಕೃತಿ ವಿಕಾರವಾಗಿ ಕಾಣುತ್ತಿದ್ದಿತು. ಎಳ್ಳಿನ ಗದ್ದೆಯ ಹಳದಿ ಯಾವುದೋ ಪಾಷಾಣದಂತೆ ಕಾಣುತ್ತಿದ್ದಿತು. ಕೆಳಗಡೆ ಇದ್ದ ಗದ್ದೆಗಳು, ಹೆಪ್ಪುಗಟ್ಟಿ ಹಸುರಾದ ರಕ್ತದ ಶರಧಿಯಂತೆ ನನಗೆ ಭಾಸವಾಯಿತು. ಅರ್ಧ ಕತ್ತಲೆಯಲ್ಲಿ, ನದಿಯ ನೀರು ವಿಚಿತ್ರವಾಗಿ—ವಿಕಾರವಾಗಿ—ಪ್ರಕಾಶಿಸುತ್ತಾ, ಯಮಲೋಕದ ನದಿಯಂತೆ ಕಂಡಿತು. ಪಾಳುಬಿದ್ದ ಗುಡಿ ನನ್ನ ಕಡೆ ನೋಡಿ ಬಿರುನಗೆ ನಗುವಂತಿತ್ತು. ಆ ಮುದುಕನು "ಮಾರಿಯ ಪ್ರತಿಮೆ ನೋಡುತ್ತೀರಾ?" ಎಂದು ಹಲ್ಲು ಕಿರಿದನು. ನನಗೆ ರಕ್ತ ಹೆಪ್ಪುಗಟ್ಟಿದಂತಾಯಿತು. ಸಾವಿರಾರು ಜನರ ಬಲಿ ತೆಗೆದುಕೊಂಡ, ಹಳ್ಳಿಯನ್ನು ನಿರ್ಮೂಲನಮಾಡಿದ ಮಾರಿಯ—ಪ್ರಚಂಡ ಮಾರಿಯ—ಪ್ರತಿಮೆ! ನಾನು ಓಡತೊಡಗಿದೆ. ಅವನ ಧ್ವನಿ ನನ್ನನ್ನು ಹಿಂಬಾಲಿಸುವಂತಿದ್ದಿತು. ಕಡೆಗೆ ರಾತ್ರಿ ಹಳ್ಳಿ ಸೇರಿದೆ. ನನ್ನ ಕೆಲಸ ಇನ್ನೂ ಮುಗಿಯದಿದ್ದರೂ ಬೆಳ್ಳಿಹಳ್ಳಿಯನ್ನು ಮರೆಯಲು, ಕೆಂಚೇಹಳ್ಳಿಯನ್ನು ಮಾರನೆಯ ದಿನವೇ ಬಿಟ್ಟೆ; ಆದರೆ ಆ ಕಥೆ ನನ್ನನ್ನು ಬಿಟ್ಟಿಲ್ಲ.

ಭಾರತದಲ್ಲಿ ಭೀಷಣ ಅನ್ನಸಂಕಟ

ಟೀ. ಎಂ. ಪಿ. ರವಿಕೀರ್ತಿಶೆಟ್ಟಿ, ಮೂಡುಬಿದ್ರಿ

★

ನಾಡಿನಲ್ಲಿ ದಿನದಿಂದ ದಿನಕ್ಕೆ, ಜನತೆಗೆ ಕೂಳುಕೊಬ್ಬರಿಯಾಗುತ್ತ ನಡೆದಿದೆ. ಸರಕಾರದ ಪ್ರಾಮಾಣಿಕಬುದ್ಧಿಯ ಸಂಪೂರ್ಣ ನಿಯಂತ್ರಣವಿಲ್ಲದೆ ಪರಿಸ್ಥಿತಿ ಹದಕ್ಕೆ ಬರಲಾರದು. ಇಂದಿನ ಸರಕಾರದ ನಿಯಂತ್ರಣ ಪದ್ಧತಿಯಿಂದ ಯಾವ ಸುಪರಿಣಾಮವನ್ನೂ ಕಾಣುವ ಸಂಭವವಿಲ್ಲ!

★

ಭಾರತದಲ್ಲಿ ಇಂದು ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಅನ್ನದ ಅಭಾವವಿದ್ದೇ ಇದೆ. ಇಷ್ಟರ ವರೆಗೆ ಕ್ರಯ ಹೆಚ್ಚು ಕೊಟ್ಟಲ್ಲಿ ಅನ್ನ ಸಿಕ್ಕುತ್ತಿತ್ತು; ಈಗ ಸಿಕ್ಕುವುದೇ ದುರ್ಲಭವಾಗಿದೆ. ಕಳೆದ ಸಪ್ಟೆಂಬರ್ ೧೯೪೨ರಿಂದಲೂ ಆಹಾರದ ಕೊರತೆ ಇಲ್ಲಿ ಉಂಟಾಗಿದೆ. ಸಾವಿರಾರು ಜನರು— ಆಹಾರದ ಅಭಾವದಿಂದ—ಪ್ರಾಣ ಕಳೆದುಕೊಳ್ಳಲಾರಂಭಿಸಿದ್ದಾರೆ. ಕೆಲವು ಪಟ್ಟಣಗಳಲ್ಲಿ ದಂಗೆ, ಉಪದ್ರವಗಳು ತಲೆದೋರಿವೆ. ಅನ್ನ ಸಂಕಟವು ಎಷ್ಟೋ ದಿನಗಳಿಂದ ಉಂಟಾಗಿದ್ದರೂ, ಭಾರತ ಸರಕಾರವು ಇಷ್ಟರ ವರೆಗೆ ಅದರ ನಿವಾರಣೆಗೋಸ್ಕರ ಯಾವುದೊಂದು ಪ್ರಭಾವಕಾರಿಯಾದ ಪ್ರಯತ್ನವನ್ನೂ ಮಾಡಿದಂತೆ ಕಂಡುಬರುವುದಿಲ್ಲ. ಭಾರತದಲ್ಲಿ ಸರಕಾರವು ಒಂದು "**ಭೋಜನ ವಿಭಾಗ**" ವನ್ನು ಡಿಲ್ಲಿಯಲ್ಲಿ ಸ್ಥಾಪಿಸಿ, ಅದರ ಸಂಪೂರ್ಣ ಅಧಿಕಾರವನ್ನು ಶ್ರೀನಲಿನೀರಂಜನ ಸರಕಾರ (ವೈಸ್‌ರಾಯರ ಸಲಹೆಗಾರ ಸಮಿತಿಯ ವ್ಯಾಪಾರ ಸದಸ್ಯರಾಗಿದ್ದರು.) ಅವರ **ಕಡೆಗೆ ಕೊಟ್ಟಿದ್ದಿತು.** ಆದರೆ ಅದರಲ್ಲಿ ಸಫಲತೆಯೇನೂ ಕಂಡು ಬರಲಿಲ್ಲ.

ಭಾರತ ಸರಕಾರಕ್ಕೆ ಈ ಭೀಷಣ ಅನ್ನಸಂಕಟದ ಗಂಭೀರತೆಯ ಮತ್ತು ಅದರ ಪರಿಣಾಮದ ಅನುಭವವು ಇದೀಗ ಆಗಲಾರಂಭಿಸಿದೆ. ಅನ್ನದ ಸಮಸ್ಯೆಯನ್ನು— ಆದಷ್ಟು ಶೀಘ್ರ— ಉತ್ತಮ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಸರಕಾರವು ಪ್ರಯತ್ನಮಾಡುತ್ತಿದೆಯೆಂದು ಈಗ ತಿಳಿದುಬರುತ್ತದೆ. ಭಾರತಮಂತ್ರಿ **ಅಮೇರಿ**ಯವರು, ಪಾರ್ಲಿಮೆಂಟಿನ ಸಮಕ್ಷಮ ೨೧-೧-೪೩ರಲ್ಲಿ ಭಾರತದ ಆಹಾರ ಸಮಸ್ಯೆಯನ್ನು ಕುರಿತು ಹೀಗೆಂದಿರುವರು:

"ಭಾರತದಲ್ಲಿ ಆಹಾರದ ಸ್ಥಿತಿಯು ಅಧಿಕ ಚಿಂತಾಜನಕವಾಗಿದೆ. ವಿಗತ ವರ್ಷದಲ್ಲಿ ಆಹಾರದ ಉತ್ಪತ್ತಿ ಸಾಮಾನ್ಯವಾಗಿ ಸಂತೋಷಪ್ರದವಾಗಿತ್ತು; ಪರಂತು ಈ ವರ್ಷ ಬರ್ಮಾದಿಂದ ಅಕ್ಕಿ ಬಾರದಿದ್ದುದರಿಂದ (ಭಾರತಕ್ಕೆ ೧೫ ಲಕ್ಷ ಟನ್ ಅಕ್ಕಿ ಬರ್ಮಾದಿಂದ ಬರುತ್ತಿತ್ತು) ಮತ್ತು ಸೇನೆಗೋಸ್ಕರ ಅನ್ನದ ಖರ್ಚು ಹೆಚ್ಚಾದುದರಿಂದ, ಕೆಲವು ಕಡೆಗೆ ಬೆಳೆ ಹಾಳಾದುದರಿಂದ, ಅಕ್ಕಿಯ ಖರ್ಚು ಹೆಚ್ಚಾಯಿತು....." ಇತ್ಯಾದಿ.

ಯಾವ ಬಂಗಾಲದಲ್ಲಿ ಎಲ್ಲಾ ಕಡೆಗಿಂತಲೂ ಅಕ್ಕಿ ಹೆಚ್ಚಾಗುತ್ತಿತ್ತೋ, ಅಲ್ಲಿಯೆ ವಿಗತ ಅಕ್ಟೋಬರ್ ೧೯೪೨ರಿಂದ ಅನ್ನದ ದುಷ್ಕಾಲವಾಗಿದೆ. ಆದರೂ ಅಲ್ಲಿಯ ಸರಕಾರವು ಇಷ್ಟರ ವರೆಗೆ ಸರಿಯಾದ ವ್ಯವಸ್ಥೆಯನ್ನು ಮಾಡಿದುದು ಕಂಡುಬರುವುದಿಲ್ಲ. ಎಷ್ಟೋ ಗ್ರಾಮಗಳಲ್ಲಿ ಬೇಸಾಯಗಾರರೇ ಮೂರು-ನಾಲ್ಕು ದಿನಗಳಿಂದ ಅನ್ನವನ್ನು ಕಂಡಿಲ್ಲ. "ಮೈಮನಸಿಂಗ್" ಎಂಬ ಜಿಲ್ಲೆಯ ಪರಿಸ್ಥಿತಿಯಂತೂ ತೀರ ಕಠಿನವಾಗಿದೆ. ಜನರು ಎಷ್ಟೋ ಕಡೆಗೆ ಲೂಟಿಮಾಡಲಾರಂಭಿಸಿದರೆಂದು ತಿಳಿದುಬರುತ್ತದೆ. ಕೆಲವು ಕಡೆ ಗಡ್ಡೆ-ಗೆಣಸನ್ನು ತಿಂದೇ ಕಾಲಕಳೆಯಲಾರಂಭಿಸಿದ್ದಾರೆ.

"**ಜಲಪಾಯಿ ಗುಡಿ**" ಎಂಬಲ್ಲಿ ಅನ್ನಸಂಕಟದ ಕುರಿತು ವಿಚಾರಿಸಿದಾಗ—'ಅಲ್ಲಿಯ ಜನರಲ್ಲಿ ನೂರರಲ್ಲಿ ೫ ಜನರು ದಿನಕ್ಕೆರಡುಬಾರಿಯೂ, ನಲುವತ್ತು ಜನರು ಒಂದುಬಾರಿಯೂ, ಹತ್ತು ಜನರು ಎರಡು ದಿನಕ್ಕೊಮ್ಮೆಯೂ, ಮೂವತ್ತು ಜನರು ಮೂರು ದಿನಕ್ಕೊಮ್ಮೆಯೂ ಊಟಮಾಡುತ್ತಾರೆ. ಹದಿನೈದು ಜನರಿಗೆ ಆಹಾರವೇ ಸಿಕ್ಕಲಿಲ್ಲ' ಎಂಬುದಾಗಿ ತಿಳಿದುಬರುತ್ತದೆ. "**ದೋಮರ್**" ಎಂಬ ಗ್ರಾಮದಲ್ಲಿ ಒಬ್ಬ ಬೇಸಾಯಗಾರನು ತನ್ನ ನಾಲ್ಕು ವರ್ಷದ ಹುಡುಗನನ್ನೂ, ಮೂರು ವರ್ಷದ ಹುಡುಗಿಯನ್ನೂ ಏಳು ರೂಪಾಯಿಗಳಿಗೆ ಮಾರಿದನೆಂದು ತಿಳಿದು ಬರುತ್ತದೆ. ಆಹಾರವಿಲ್ಲದೆ ಮರಣಹೊಂದುವವರ ಸಂಖ್ಯೆಗೆ ಲೆಕ್ಕವಿಲ್ಲದಾಗಿದೆ.

‘ದಂಗಲೀ’ ಜಿಲ್ಲೆಯಲ್ಲಿ ನೂರರಲ್ಲಿ ಐವತ್ತು ಜನರು ಅತ್ಯಂತ ಬಡವರಾಗಿರುತ್ತಾರೆ. ಅವರು ತಮ್ಮ ಫಸಲನ್ನು ಮೊದಲೆ ಮಾರಿರುತ್ತಾರೆ. ಈಗ, ಯಾವಾಗ ಅಕ್ಕಿಯ ಆವಶ್ಯಕತೆ ಉಂಟಾಯಿತೋ ಆಗ, ಅಕ್ಕಿಯ ಕ್ರಯವು ಮಣಕ್ಕೆ ೬-೦-೦ ರೂಪಾಯಿಯಿಂದ ೯-೮-೦ ವರೆಗೆ ಏರಿತು. ಇದರಿಂದಾಗಿ ಬೇಸಾಯಗಾರರು ಅಕ್ಕಿಯನ್ನು ತೆಗೆದುಕೊಳ್ಳಲು ಅಸಮರ್ಥರಾಗಿರುತ್ತಾರೆ. ‘ಸುರಮಾ (ಆಸಾಂ)’ ಎಂಬಲ್ಲಿ ಅನ್ನದ ಕೊರತೆಯಿಂದಾಗಿ ಜನತೆಗೆ ಬಹಳ ಕಷ್ಟವಾಗಿದೆ. ಅಸ್ಸಾಂ ಸರಕಾರವು ಅಕ್ಕಿಯ ನಿರ್ಯಾತವನ್ನು ತೆಗೆದು ಹಾಕಿದ್ದುದರಿಂದ, ವ್ಯಾಪಾರಸ್ಥರು ಅಕ್ಕಿಯನ್ನು ಗ್ರಾಮದಿಂದ ತೆಗೆದುಕೊಂಡು ಹೋಗಿ ಹೊರಗೆ ಹೆಚ್ಚು ಕ್ರಯಕ್ಕೆ ಮಾರಲಾರಂಭಿಸಿದರು. ಜನರು ಹೊಟ್ಟೆಗಿಲ್ಲದೆ ಸಾಯಲಾರಂಭಿಸಿದ್ದಾರೆ. ‘ರಂಗಪುರ’ ಜಿಲ್ಲೆಯಲ್ಲಿ ಹೆಚ್ಚು ಕಡಿಮೆ ನೂರರಲ್ಲಿ ೨೩ ಜನರು ಹೊಟ್ಟೆಗಿಲ್ಲದೆ ಸಾಯಲು ತಯಾರಾಗಿದ್ದಾರೆ. ವ್ಯಾಪಾರಸ್ಥರು ಗ್ರಾಮದಿಂದ ಅಕ್ಕಿಯನ್ನು ಮೊದಲೇ ತೆಗೆದುಕೊಂಡು ಹೋಗಿ ಸಂಗ್ರಹ ಮಾಡಿ, ಈಗ ಕ್ರಯವನ್ನು ಮತ್ತಷ್ಟು ಏರಿಸಿರುತ್ತಾರೆ. ಜನರಲ್ಲಿ ಈಗ ಹಣವಿಲ್ಲ. ಇದರಿಂದಾಗಿ ಉಪವಾಸ ಬೀಳುವ ಗತಿಯುಂಟಾಗಿದೆ.

ಮಹಾರಾಷ್ಟ್ರದ ಖಾನದೇಶ ಜಿಲ್ಲೆಯಲ್ಲಿ “ಧೂಲಿಯಾ” ಎಂಬುದು ಒಂದು ಪ್ರಧಾನ ನಗರವಾಗಿದೆ. ಈ ನಗರದಲ್ಲಿ ವಿಗತ ಡಿಸೆಂಬರ್ ೧೯೪೨ ರಿಂದ ಭೀಷಣವಾದ ಅನ್ನಸಂಕಟ ಉಂಟಾಗಿದೆ. ಆ ಪ್ರಾಂತ್ಯದಲ್ಲಿ ಹಿಂದೆ ಇಷ್ಟರ ವರೆಗೆ ಇಂತಹ ಪರಿಸ್ಥಿತಿಯುಂಟಾಗಿರಲಿಲ್ಲವೆಂದು ತಿಳಿದು ಬರುತ್ತದೆ. ಜನತೆಗೆ ೩೧ನೆಯ ಡಿಸೆಂಬರ್‌ನಲ್ಲಿ, ಪೇಟೆಯಲ್ಲಿ ಆಹಾರ ಸಾಮುಗ್ರಿಯೇ ಸಿಕ್ಕಲಿಲ್ಲವಂತೆ. ಇದರ ಪರಿಣಾಮವಾಗಿ ರಾತ್ರಿ ೬೦-೭೦ ಅಂಗಡಿಗಳು ಲೂಟಿ ಮಾಡಲ್ಪಟ್ಟುವು. ಹೆಚ್ಚು-ಕಡಿಮೆ ಲಕ್ಷರೂಪಾಯಿಗಳ ಆಹಾರವು ಲೂಟಿಯಾಗಿದೆಯೆಂದು ತಿಳಿದು ಬರುತ್ತದೆ.

ಬೊಂಬೈ ಪ್ರಾಂತ್ಯದಲ್ಲಿ-ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕದ ಬಯಲುನಾಡಿನಲ್ಲಿ— ಭೀಷಣ ಅನ್ನ ಸಂಕಟ ಉಂಟಾಗಿದೆ. ಎಷ್ಟೋ ದಿನಗಳ ವರೆಗೆ ಬೊಂಬೈ ನಗರದಲ್ಲಿ ಆಹಾರ ಸಿಕ್ಕಲಿಲ್ಲ. ಭೋಜನಾಲಯ ಮತ್ತು ಹೊಟೇಲುಗಳು ಮುಚ್ಚಲ್ಪಟ್ಟುವು. ಪರಿಣಾಮವಾಗಿ ಸಾವಿರಾರು ಜನರು ಉಪವಾಸವಿರಬೇಕಾಯಿತು. ೧೬ ಜನವರಿ ೧೯೪೩ ರಲ್ಲಿ ನಾಸಿಕದಲ್ಲಿ ಅನ್ನಸಂಕಟ ಉಂಟಾಯಿತು. ಜನರು ೨೦ ಅಂಗಡಿಗಳನ್ನು ಲೂಟಿಮಾಡಿದರು. ಉಪದ್ರವವನ್ನು ನೋಡಿ ಜಿಲ್ಲಾ ಮೇಜಿಸ್ಟ್ರೇಟರು ಸೈನಿಕರಿಗೆ ಗೋಲೀಬಾರು ಮಾಡುವಂತೆ ಆಜ್ಞೆಯಿತ್ತರು. ವಿಜಾಪುರಜಿಲ್ಲೆಯ ಅನ್ನಸಂಕಟದ ಭೀಕರತೆಯಂತೂ ಕರುಳನ್ನು ಕೊರೆಯುವಂತಹದಾಗಿದೆ.

೧೬ ಜನವರಿ ೪೩ ರಲ್ಲಿ ಬನಾರಸಿನಲ್ಲಿಯ ಪರಿಸ್ಥಿತಿಯು ಬಹಳ ಕಠಿನತರವಾಗಿತ್ತು. ಅಲ್ಲಲ್ಲಿ ಆಕ್ರಮಣವಾಗುತ್ತಿತ್ತು.

ಇವೇ ಮೊದಲಾದ ಮೇಲಿನ ಉದಾಹರಣೆಗಳಿಂದ ದೇಶದ ಪರಿಸ್ಥಿತಿಯು ಎಷ್ಟರ ವರೆಗೆ ಕೆಟ್ಟಿರುತ್ತದೆಂಬುದು ತಿಳಿದು ಬರುತ್ತದೆ. ಈಗಲೂ ಕೂಡ ವ್ಯಾಪಾರಸ್ಥರ ಹತ್ತಿರ ಸಾವಿರಾರು ಚೀಲ ಗೋದಿ, ಅಕ್ಕಿ, ಜೋಳ ಮೊದಲಾದ ಆಹಾರಸಾಮುಗ್ರಿಗಳಿವೆಯಾದರೂ ಅವನ್ನು ತಪ್ಪಿಸಿಟ್ಟು, ಗುಟ್ಟಿನಲ್ಲಿ ಒಂದಕ್ಕೆ ಹತ್ತರಷ್ಟು ಕ್ರಯವೇರಿಸಿ ಲಾಭಪಡೆಯಲಾರಂಭಿಸಿದ್ದಾರೆ. ಆಗ್ರಾ ನಗರದಲ್ಲಿ ಆರೇಳುತಿಂಗಳಿಂದ, ಆಹಾರಸಾಮುಗ್ರಿಯ ಹಂಚುವಿಕೆಯು ಜಿಲ್ಲಾ ಅಧಿಕಾರಿಗಳ ನಿಯಂತ್ರಣದಲ್ಲಿತ್ತು. ಹೆಚ್ಚು ಕಡಿಮೆ ೨೦-೨೫ ಸರಕಾರಿ ಅಂಗಡಿಗಳಲ್ಲಿ ಆಹಾರ ಸಾಮುಗ್ರಿಗಳು ಮಾರಲ್ಪಡುತ್ತಿದ್ದುವು. ಅಲ್ಲಿ ರೂಪಾಯಿಗೆ ಐದೂವರೆ ಸೇರು ಗೋದಿ ಸಿಕ್ಕುತ್ತಿತ್ತು. ಆದರೆ ಅಲ್ಲಿ ನುಗ್ಗಾಟವು ಹೆಚ್ಚಾಗುತ್ತಿದ್ದುದರಿಂದ, ಸಾಧಾರಣ ಜನರಿಗೆ ಕಾಳು-ಕಡಿ ತೆಗೆದುಕೊಳ್ಳುವುದೇ ಕಷ್ಟವಾಗಿದೆ. ಇದರಿಂದಾಗಿ ಕೆಲವು ಧನಿಕರೂ ವ್ಯಾಪಾರಸ್ಥರೂ ಗುಟ್ಟಿನಲ್ಲಿ ಗೋದಿಮಾರಿ ಲಾಭ ಪಡೆಯಲಾರಂಭಿಸಿದ್ದಾರೆ. ಬಡವರಿಗೆ ಆಹಾರವೇ ದುರ್ಲಭವಾಗಿದೆ. ಸರಕಾರಿ ಅಂಗಡಿಗಳಲ್ಲಿ ನಿಯಂತ್ರಣದಂತೆ ಗೋದಿ ಮಾರಿದರೆ, ಬೇರೆ ಕೆಲವು ವ್ಯಾಪಾರಸ್ಥರು ರೂಪಾಯಿಗೆ ೨-೩ ಸೇರು ಗೋದಿ ಮಾರಲಾರಂಭಿಸಿದ್ದಾರೆ. ನಗರದಲ್ಲಿ ಎಷ್ಟೋ ಜನರು ಹೆಚ್ಚು ಕ್ರಯದ ಗೋದಿಯನ್ನೇ ತರುತ್ತಿದ್ದಾರೆ. ಅಧಿಕಾರಿಗಳಿಗೂ ಇದು ತಿಳಿದಿದೆ; ಆದರೆ ಇದನ್ನು ತಡೆಯುವ ಪ್ರಯತ್ನವನ್ನು ಇನ್ನೂ ಮಾಡಲಿಲ್ಲವೆಂಬುದಾಗಿ ತಿಳಿದು ಬರುತ್ತದೆ.

ಈ ಭೀಷಣ ಅನ್ನಸಂಕಟವು ನಮ್ಮ ದೇಶದ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಇದ್ದೇ ಇದೆ. ಈ ಲೋಕವ್ಯಾಪಿ ಸಂಕಟಕ್ಕೆ ಕಾರಣವೇನೆಂದರೆ :—

(೧) ದೇಶದಲ್ಲಿ ಆಹಾರದ ಅಭಾವ.

(೨) ಆಹಾರದ ಪ್ರಾಪ್ತಿ ಮತ್ತು ಅದರ ವಿತರಣೆ, ಅಲ್ಲದೆ ಮೂಲ್ಯನಿಯಂತ್ರಣ ಸಂಬಂಧವಾಗಿರುವ ಸರಕಾರದ ನೀತಿ ಮತ್ತು ಕುಪ್ರಬಂಧ.

(೩) ಹೆಚ್ಚಾದ ಸೈನ್ಯಕ್ಕೆ ಸುರಕ್ಷಿತ ಅನ್ನ.

(೪) ದೇಶದಲ್ಲಿ ಇಟಲಿ ಮೊದಲಾದ ಯುದ್ಧ ಬಂದಿಗಳು ಮತ್ತು ಮಲಯಾ—ಬರ್ಮಾದಿಂದ ಬಂದ ಅಗತಿಕರ ಉಪಸ್ಥಿತಿ.

(೫) ವ್ಯಾಪಾರಿಗಳ ಮತ್ತು ಶ್ರೀಮಂತರ ಸ್ವಾರ್ಥಪೂರ್ಣ ಆಹಾರಸಾಮುಗ್ರಿಗಳ ಸಂಗ್ರಹ.

(೬) ಭಾರತದಿಂದ ಆಹಾರದ ನಿರ್ಯಾತ.

ಇವೇ ಆರು ಮುಖ್ಯ ಕಾರಣಗಳಾಗಿವೆ.

ಭಾರತದಲ್ಲಿ ಭೋಜನಕ್ಕೋಸ್ಕರವಾಗಿರುವ ಮುಖ್ಯ ಧಾನ್ಯವೆಂದರೆ ಅಕ್ಕಿ, ಗೋದಿ, ಜೋಳ ಮತ್ತು ರಾಗಿ ಇವೇ. ಶ್ರೀ. ಎನ್. ಆರ್. ಸರಕಾರ್ (ವಾಣಿಜ್ಯ ಸದಸ್ಯ) ಅವರ ಅಂದಾಜಿನ ಅನುಸಾರ, ಒಟ್ಟು ಭಾರತದಲ್ಲಿ ಇವುಗಳ ಉತ್ಪತ್ತಿ ಈ ಪ್ರಕಾರವಾಗಿದೆ:

ಅಕ್ಕಿ— ೨,೬೫,೦೦,೦೦೦ ಟನ್.
ಗೋದಿ—೧,೦೦,೦೦,೦೦೦ ,,
ಜೋಳ— ೬೨,೦೦,೦೦೦ ,,
ಕಡಲೆ— ೩೫,೫೦,೦೦೦ ,,
ಒಟ್ಟು— ೪,೬೨,೫೦,೦೦೦ ಟನ್ನುಗಳು.

ಶಾಂತಿಕಾಲದಲ್ಲಿ ಈ ಆಹಾರ ಭಾರತದ ೩೮ ಕೋಟಿ ಜನತೆಗೆ ಸಾಕಾಗುತ್ತಿತ್ತು. ಕೇವಲ ಹದಿನಾಲ್ಕು ಲಕ್ಷ ಟನ್ ಅಕ್ಕಿಯನ್ನು ಮಾತ್ರ ಭಾರತಕ್ಕೆ ಬರ್ಮಾದಿಂದ ತರಿಸಬೇಕಾಗುತ್ತಿತ್ತು. ಸನ್ ೧೯೪೨ರಲ್ಲಿ, ಸರಕಾರದ ಲೆಕ್ಕದ ಪ್ರಕಾರ ಭಾರತದ ಅಕ್ಕಿಯ ಉತ್ಪತ್ತಿ ೯ ಲಕ್ಷ ಟನ್ ಕಡಿಮೆಯಾಯಿತು. ಹದಿನಾಲ್ಕು ಲಕ್ಷ ಟನ್ ಅಕ್ಕಿಯು—ಬರ್ಮಾವು ಜಪಾನರ ವಶವಾದ್ದರಿಂದ—ಅವರಿಗಾಯಿತು. ಆದ್ದರಿಂದ ಭಾರತಕ್ಕೆ ಒಟ್ಟು ೨೩ ಲಕ್ಷ ಟನ್ ಅಕ್ಕಿ ಕಡಿಮೆಯಾಯಿತು. ಗೋದಿಯ ಕುರಿತು ಸರಕಾರದ ಹೇಳಿಕೆ ಹೀಗಿದೆ: "ಈ ವರ್ಷದ (೧೯೪೨) ಸ್ಥಿತಿಯು ಬಹಳ ಶೋಚನೀಯವಾದುದು. ಒಟ್ಟು ಬೆಳೆಯುವ ಗೋದಿ ೯೯ ಲಕ್ಷ ಟನ್; ಆದರೆ ಸಂಯುಕ್ತಪ್ರಾಂತ್ಯ ಮತ್ತು ಮಧ್ಯಪ್ರಾಂತ್ಯದಲ್ಲಿ ಗೋದಿಯ ಉತ್ಪತ್ತಿ ಕಡಿಮೆಯಾಗಿದೆ. ಪಂಜಾಬಿನಲ್ಲಿ ಗೋದಿಯ ಉತ್ಪತ್ತಿ ಸಾಧಾರಣ ಒಳ್ಳೆಯದಿದೆ. ಸಿಂಧುವಿನಲ್ಲಿ ೧,೩೬,೦೦೦ ಟನ್, ಮಧ್ಯಭಾರತದಲ್ಲಿ ೮೬,೦೦೦ ಟನ್, ಬಿಹಾರದಲ್ಲಿ ೩೬,೦೦೦ ಟನ್, ಹೀಗೆ ಒಟ್ಟು ೩೩ ಲಕ್ಷ ಟನ್ ಗೋದಿಯ ಉತ್ಪತ್ತಿ ಕಡಿಮೆಯಾಗಿದೆ.*"

ಈ ವರ್ಷ ಜೋಳದ ಉತ್ಪತ್ತಿ ಹಿಂದಿಗಿಂತ ಉತ್ತಮಸ್ಥಿತಿಯಲ್ಲಿದೆಯೆಂದು ತಿಳಿದುಬರುತ್ತದೆ.

ವೈಸ್‌ರಾಯರ ಶಾಸನ ಪರಿಷತ್ತಿನ ಶಿಕ್ಷಾಸದಸ್ಯರಾದ ಸರದಾರ್ ಸರ್ ಜೋಗೇಂದ್ರಸಿಂಹರವರು, ಮಧ್ಯವರ್ತಿ ಅನ್ನ ಸಲಹೆಗಾರ ಕೌನ್ಸಿಲಿನ ಸಮಕ್ಷಮ, ಹೊಸದಿಲ್ಲಿಯಲ್ಲಿ ೨೪ ಆಗೋಸ್ಟು ೪೨ ರಲ್ಲಿ, ತಮ್ಮ ಭಾಷಣದಲ್ಲಿ ಹೀಗೆಂದಿರುವರು:—

"೨೬೪ ಲಕ್ಷ ಟನ್ ಅಕ್ಕಿ ಪ್ರತಿವರ್ಷ ಭಾರತದಲ್ಲಿ ಬೆಳೆಯುತ್ತದೆ. ನಮ್ಮ 'ಹೆಚ್ಚು ಆಹಾರಸಾಮುಗ್ರಿ ಬೆಳೆಯಿಸಿರಿ!' ಎಂಬ ಪ್ರಚಾರದ ಫಲಸ್ವರೂಪವಾಗಿ ೧೯೪೩-೪೪ ರಲ್ಲಿ ಎಂಟೂವರೆ ಲಕ್ಷ ಮಣ ಅಕ್ಕಿ ಹೆಚ್ಚು ಬೆಳೆಯಬಹುದು. ಆಗ ನಮಗೆ ಹನ್ನೊಂದು ಲಕ್ಷ ಟನ್ ಅಕ್ಕಿ ಮಾತ್ರ ಕಮ್ಮಿಯಾದಂತಾಯಿತು.

ಈ ವರ್ಷ ಭಾರತದಲ್ಲಿ ೧ ಕೋಟಿ ೭೦ ಸಾವಿರ ಟನ್ ಗೋದಿಯ ಉತ್ಪತ್ತಿಯಾಗಿದೆ. ಭಾರತಕ್ಕೆ ಶಾಂತಿಕಾಲದಲ್ಲಿ ೬೬ ಲಕ್ಷ ಟನ್ ಗೋದಿ ಸಾಕಾಗುತ್ತಿತ್ತು. ಪರಂತು ಯುದ್ಧಕಾಲದಲ್ಲಿ ೧ ಕೋಟಿ ೪ ಲಕ್ಷ ಟನ್ ಗೋದಿಯ ಆವಶ್ಯಕತೆ ಇದೆ. ಸರದಾರ್ ಜೋಗೇಂದ್ರಸಿಂಹರೆನ್ನುವಂತೆ ೧೯೪೩-೪೪ ರಲ್ಲಿ ಪ್ರಚಾರದಿಂದಾಗಿ ೪೩ ಲಕ್ಷ ಟನ್ ಗೋದಿ ಹೆಚ್ಚಾಗಬಹುದು ಮತ್ತೆ ಗೋದಿಯ ಅಭಾವವಾಗಲಾರದು.

ಮೊದಲನೆಯ ಫಸಲಿನಲ್ಲಿ ಅಕ್ಕಿಯ ಉತ್ಪತ್ತಿ ೬೦ ಲಕ್ಷ ಟನ್ ಆಗಬಹುದು. ೭೫ ಲಕ್ಷ ಟನ್ ಜೋಳ, ೪೫ ಲಕ್ಷ ಟನ್ ರಾಗಿ ಮೊದಲಾದ ಬೇರೆ ಧಾನ್ಯಗಳು, ಈ ಪ್ರಕಾರ ೧೧೦ ಲಕ್ಷ ಟನ್ ಉತ್ಪತ್ತಿ ಮೊದಲನೆಯ ಬೆಳೆಯಲ್ಲಿ ಆಗಬಹುದು. ಜನವರಿಯಿಂದ ಮಾರ್ಚ್ ೧೯೪೩ರ ವರೆಗೆ ಗೋದಿಯೂ, ಮಾರ್ಚ್‌ನಿಂದ ಆಗೋಸ್ಟ್ ೧೯೪೩ ರ ವರೆಗೆ ಅಕ್ಕಿಯೂ ಅಧಿಕ ಚಿಂತಾ-ಜನಕವಾಗಲಾರವು" ಎಂದು ಜೋಗೇಂದ್ರ ಸಿಂಹರ ಹೇಳಿಕೆಯಾಗಿದೆ.

ಈ ಮೇಲಿನ ವಿಷಯಗಳನ್ನು ಪತ್ರಿಕೆಗಳಿಗೆ ಪ್ರಕಟಿಸಲುಕೊಟ್ಟು ಜೋಗೇಂದ್ರಸಿಂಹರು ಬಂಗಾಳವನ್ನು ತಲ್ಪುವುದಕ್ಕೆ ಮುಂಚೆಯೆ, ಅಲ್ಲಿ ಅಕ್ಕಿಯ ಭೀಷಣ ಅಭಾವ ಉಂಟಾಗಿದ್ದಿತು. ಬಂಗಾಳದ ನಂತರ್‌ ಈ ರೋಗವು ಯು.ಪಿ., ಸಿ.ಪಿ., ಬೊಂಬ್ಬೈ, ಮಹಾರಾಷ್ಟ್ರ ಕರ್ನಾಟಕ ಮತ್ತು ಮದರಾಸಿನಲ್ಲಿಯೂ ವ್ಯಾಪಿಸಿತು. ಸರದಾರ್ ಜೋಗೇಂದ್ರಸಿಂಹರ ಅನುಮಾನದ ಭವಿಷ್ಯವು ಸರ್ವಥಾ ಸುಳ್ಳಾಯಿತು.

ಭಾರತವು ಕೃಷಿಪ್ರಧಾನ ದೇಶವಾಗಿದೆ. ಅನ್ನದ ದೃಷ್ಟಿಯಿಂದ ಅದು ಸ್ವಾಶ್ರಯಿಯೂ ಆಗಿದೆ.

ಶಾಂತಿಕಾಲದಲ್ಲಿ ಆಹಾರವು ಆವಶ್ಯಕತೆಗಿಂತ ಅಧಿಕ ಬೆಳೆಯುತ್ತದೆ. ಪರಂತು ಯುದ್ಧಕಾಲದಲ್ಲಿ ಸೇನಾದಿಗಳ ವೆಚ್ಚ ಹೆಚ್ಚಾದುದರಿಂದ, ಅಕ್ಕಿ ಮತ್ತು ಗೋದಿಯ ಆವಶ್ಯಕತೆ ಹೆಚ್ಚಾಯಿತು. ಸರ್ ಜೋಗೇಂದ್ರ ಸಿಂಹರೆನ್ನುವಂತೆ ೪ ಲಕ್ಷ ಟನ್ ಗೋದಿ, ೨೩ ಲಕ್ಷ ಟನ್ ಅಕ್ಕಿ ಕಡಿಮೆಯಾಗಿದೆ; ಪರಂತು ಈ ಕಡಿಮೆಯ ಪೂರ್ತಿಯು ಜೋಳವೇ ಮೊದಲಾದ ಇತರ ಧಾನ್ಯಗಳಿಂದ ತುಂಬಬಹುದು. ಜೋಳವೇ ಮೊದಲಾದ ಧಾನ್ಯಗಳ ಉತ್ಪತ್ತಿ ೧೯೪೨-೪೩ ರಲ್ಲಿ ೬,೦೦,೦೦೦ ಟನ್ ಅಧಿಕವಾಗಿದೆ.

ಒಂದು ವೇಳೆ ಭಾರತದ ಆಹಾರವನ್ನು ವಿದೇಶಕ್ಕೆ ಕಳುಹಿಸಿ ಕೊಡದಿದ್ದರೆ ಇಲ್ಲಿಗೆ ಬೇಕಾದಷ್ಟು ಇಲ್ಲಿಯೇ ಸಿಕ್ಕುವುದು. ಸತ್ಯವಾಗಿ ನೋಡಿದರೆ ಭಾರತದಲ್ಲಿ ಉತ್ಪತ್ತಿ ಕಡಿಮೆಯಿಲ್ಲ. ವಿದೇಶಕ್ಕೆ ಕಳುಹಿಸಿ ಕೊಡುವುದರಿಂದಲೇ ಈ ಅನವಸ್ಥೆಯುಂಟಾಗಿದೆಯಲ್ಲವೆ?

ಭಾರತದಲ್ಲಿ ಸರಕಾರವು ಸನ್ ೧೯೩೯ ರಿಂದಲೇ ಮೂಲ್ಯ-ನಿಯಂತ್ರಣದ ವ್ಯವಸ್ಥೆಯನ್ನು ಮಾಡಿತು. ಪರಂತು ವ್ಯಾವಹಾರಿಕ ರೂಪದಲ್ಲಿ ಮೂಲ್ಯ ನಿಯಂತ್ರಣವು ಸರ್ವಥಾ ವ್ಯರ್ಥವಾಗಿದೆ. ಇದರ ನಿಯಂತ್ರಣ ಮತ್ತು ವ್ಯವಸ್ಥೆಯು ಎಲ್ಲಾ ದೇಶಗಳಲ್ಲಿ ಸಮಾನವಾಗಿಲ್ಲ. ಪ್ರತ್ಯೇಕ ಪ್ರಾಂತೀಯ ಸರಕಾರವು ತನ್ನ ಪ್ರಾಂತ್ಯದಲ್ಲಿ ತನ್ನ ಇಚ್ಛೆಗೆ ಬಂದಂತೆ ವ್ಯವಸ್ಥೆ ಮಾಡುತ್ತಲಿದೆ. ಕೇಂದ್ರದಲ್ಲಿ ಎಲ್ಲಾ ದೇಶವೂ ಮೂಲ್ಯ ನಿಯಂತ್ರಣ ಮಾಡುವಂತಹ ವ್ಯವಸ್ಥೆಯ ವಿಭಾಗವಿಲ್ಲ. ಮೂಲ್ಯ-ನಿಯಂತ್ರಣ ಸಮಸ್ಯೆಯು ಕೂಡ ಬಹಳ ಜಟಿಲವಾದುದಾಗಿದೆ.

* Speech of Hon'ble Mr. N. R. Sarkar, Commerce Member at Food Production Conference in New Delhi on April 6·1942.

ಸರಕಾರವು ಎಷ್ಟರ ವರೆಗೆ ಸಮಸ್ತ ಆವಶ್ಯಕ ವಸ್ತುಗಳ ಮೇಲೆ ಮೂಲ್ಯ ನಿಯಂತ್ರಣ ಹಾಕುವುದಿಲ್ಲವೋ, ಮತ್ತು ಅವುಗಳ ಬೆಳೆ-ವಣಿಗೆಯ ಮೇಲೆ ನಿಯಂತ್ರಣ ಮಾಡುವುದಿಲ್ಲವೋ, ಅಷ್ಟರವರೆಗೆ ಈಗ ಮಾಡಿದ ನಿಯಂತ್ರಣದಿಂದ ಪ್ರಯೋಜನ ಸಿಕ್ಕಲಾರದು. ಭಾರತ ಸರಕಾರವು ೫ ಡಿಸೆಂಬರ್ ೪೧ ರಲ್ಲಿ ಆದರಂತೆಯೆ ೩೦ ಮಾರ್ಚ್ ೧೯೪೨ ರಲ್ಲಿ ಆವಶ್ಯಕ ಖಾದ್ಯ ಪದಾರ್ಥಗಳನ್ನು ಮಾರುವವರಿಗೆ ಲೈಸೆನ್ಸ್ ಪಡೆಯುವಂತೆ ಆಜ್ಞೆ ಹೊರಡಿಸಿತು. ಲೈಸೆನ್ಸ್ ಇಲ್ಲದೆ ಅಕ್ಕಿ, ಗೋದಿ ಮಾರುವುದು ಕಾನೂನಿಗೆ ವಿರೋಧವೆನಿಸಲ್ಪಟ್ಟಿತು. ಯು. ಪಿ. ನಗರದಲ್ಲಿ ಗೋದಿ ಮಾರುವ ಏರ್ಪಾಡನ್ನು ಎ. ಆರ್. ಪಿ. ಗಳ (A. R. P. Committees) ಸ್ವಾಧೀನಕ್ಕೆ ಕೊಡಲಾಯಿತು. ಆದರೂ ಈ ನಿಯಂತ್ರಣ ಮತ್ತು ಪ್ರಬಂಧವು ಅಪೂರ್ಣವಾಗಿಯೆ ಉಳಿಯಿತು. ಯಾಕೆಂದರೆ ನಗರದ ಹೊರಗೆ, ಒಳಗೆ ಸಿಕ್ಕುವ ನಾಲ್ಕು ಪಾಲಿನಷ್ಟು ಆಹಾರಸಾಮಗ್ರಿಗಳು ಬಹಿರಂಗವಾಗಿ ಮಾರಲ್ಪಡುತಿದ್ದುವು. ಎಷ್ಟರ ವರೆಗೆ ನಿಯಂತ್ರಣವಿರಲಿಲ್ಲವೊ ಅಷ್ಟರ ವರೆಗೆ ಪೇಟೆಯಲ್ಲಿ ರೂಪಾಯಿಗೆ ೭–೮ ಸೇರು ಗೋದಿ ಸಿಕ್ಕುತ್ತಿತ್ತು. ಯಾವಾಗ ನಿಯಂತ್ರಣವಾಯಿತೊ, ಆಗ ಗೋದಿ ಸಿಕ್ಕುವುದೇ ದುರ್ಲಭವಾಯಿತು. ಹಾಗೆಯೆ ಬೆಂಕಿಪೆಟ್ಟಿಗೆ, ಸಕ್ಕರೆ, ಚಿಮಣಿಎಣ್ಣೆ, ಇವುಗಳೂ ಕೂಡಾ ನಿಯಂತ್ರಣದ ನಂತರ ಬೇಕಾದಷ್ಟು ಸಿಕ್ಕುವುದೇ ದುರ್ಲಭವಾಯಿತು. ವಾಸ್ತವವಾಗಿ ಮುಖ್ಯ ನಿಯಂತ್ರಣದ ಯೋಜನೆ ಸರ್ವಥಾ ತಪ್ಪಾಗಿದೆ. ಒಂದು ವೇಳೆ ಗೋದಿಗೆ ಸರಕಾರವು ನಿಯಂತ್ರಣ ಹಾಕುವುದಾದರೆ, ಅದರ ಬೆಳೆಯನ್ನೆ ತನ್ನ ವಶದಲ್ಲಿರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕಿತ್ತು. ಬೆಳೆಸುವವನ ಸ್ವಂತ ಖರ್ಚಿಗೆ ಬೇಕಾದಷ್ಟನ್ನು ಬಿಟ್ಟು ಮಿಕ್ಕಿದ್ದನ್ನು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳತಕ್ಕದ್ದು. ಗ್ರಾಮ ಮತ್ತು ನಗರಗಳಲ್ಲಿ ಸರಕಾರದ್ವಾರಾ ನಿಯಂತ್ರಿಸಲ್ಪಟ್ಟ ಅಂಗಡಿಗಳಲ್ಲಿ ಮಾತ್ರ ಗೋದಿಮಾರುವ ವ್ಯವಸ್ಥೆಮಾಡತಕ್ಕದ್ದು ಇದೇ ರೀತಿ ಮಿಕ್ಕ ವಸ್ತುಗಳಿಗೂ ವ್ಯವಸ್ಥೆ ಮಾಡಿದ್ದಲ್ಲಿ ಜನರಿಗೆ ಬಹಳ ಉಪಕಾರವಾಗಬಹುದಾಗಿದ್ದಿತು.

ಸರ್ ಜೋಗೇಂದ್ರಸಿಂಹರೆನ್ನುವಂತೆ ಯುದ್ಧಕಾಲದಲ್ಲಿ— ೫,೦೦,೦೦೦ ಟನ್ ಗೋದಿಯ ಖರ್ಚು ಅಧಿಕವಾಗಿದೆ; ಆದರೆ ಚಿಮನ್‌ಲಾಲರ ಮತದಂತೆ ವ್ಯಯ ಕಡಿಮೆ ತೋರಿಸಲ್ಪಟ್ಟಿದೆ. ಸನ್ ೧೯೪೧–೪೨ ರ ಹನ್ನೊಂದು ತಿಂಗಳುಗಳಲ್ಲಿ ೧,೮೪,೦೦೦ ಟನ್ ಗೋದಿ ಭಾರತದಿಂದ ಹೊರಗೆ ಕಳುಹಿಸಲ್ಪಟ್ಟಿರುತ್ತದೆ. ಇಡಿ ವರ್ಷದಲ್ಲಿ ೩,೦೦,೦೦೦ ಟನ್ ರಫ್ತು ಆಗಿರಬಹುದು. ಭಾರತದಲ್ಲಿ ಈಗ ೧೦ ಲಕ್ಷ ಭಾರತೀಯ ಸೇನೆಯಿದೆ. ಇದರ ಹೊರತು, ಇಂಗ್ಲೀಷು, ಅಮೇರಿಕಾ ಸೇನೆಯೂ ಇದೆ. ಇವರಿಗೆ ತಿನ್ನಲು ಮತ್ತು ಸ್ಟಾಕಿಗೋಸ್ಕರ ೪–೫ ಲಕ್ಷ ಟನ್ ಗೋದಿಯ ಆವಶ್ಯಕತೆಯಿದೆ. ಇವರ ಹೊರತು ಇಟಲಿ, ಜರ್ಮನಿ ಮೊದಲಾದ ಯುದ್ಧಬಂದಿಗಳೂ ಇದ್ದಾರೆ. ಹಾಗೆಯೆ ೫–೬ ಲಕ್ಷ ಬರ್ಮಾ–ಮಲಯದಿಂದ ಬಂದ ಜನರಿದ್ದಾರೆ. ಇತರರೆಲ್ಲರಿಗೂ ಗೋದಿಯ ಆವಶ್ಯಕತೆ ಇದ್ದೇ ಇದೆ.

ಇಂದಿನ ಆಹಾರದ ಕೊರತೆಗೆ ಮುಖ್ಯ ಕಾರಣವೇನೆಂದರೆ, ವ್ಯಾಪಾರಿಗಳು ಅಧಿಕಲಾಭದ ಆಶೆಯಿಂದ ಎಷ್ಟೋ ಆಹಾರ-ಸಾಮಗ್ರಿಗಳನ್ನು ಸ್ಟಾಕುಮಾಡಿಟ್ಟಿರುತ್ತಾರೆ. ಅವರಿಗೆ ಸರ-ಕಾರದ ನಿಯಂತ್ರಣದಲ್ಲಿ ಮಾರಲು ಇಚ್ಛೆಯಿಲ್ಲ; ಕಾರಣ ಹೆಚ್ಚು ಲಾಭ ಸಿಕ್ಕುವುದಿಲ್ಲವಾಗಿದೆ.

ಒಂದು ವೇಳೆ ಸರಕಾರವು ಗೋದಿ, ಅಕ್ಕಿ ಬೆಳೆಯುವ ಕೇಂದ್ರಗಳಿಂದ ಜಮೆಮಾಡಲ್ಪಟ್ಟ ಸಾಮಗ್ರಿಗಳನ್ನು, ತಮ್ಮ ವಶದಲ್ಲಿಟ್ಟುಕೊಳ್ಳುವ ವ್ಯವಸ್ಥೆಮಾಡಿಕೊಂಡು ಮಾರಿದಲ್ಲಿ ಎಷ್ಟೋ ಆಹಾರ-ಕೊರತೆಯು ಕಡಿಮೆಯಾಗಬಹುದು.

ಇದರೊಡನೆ ಭಾರತದಿಂದ ಆಹಾರದ ನಿರ್ಯಾತವನ್ನು ಸರ್ವಥಾ ತೆಗೆದು ಹಾಕಿದಲ್ಲಿ, ಭಾರತದಲ್ಲಿ ಕಡಿಮೆಯಾದ ಆಹಾರವನ್ನು ಆಸ್ಟ್ರೇಲಿಯಾ, ಕೆನಡಾ ಮೊದಲಾದ ದೇಶಗಳಿಂದ ತರಿಸಿದಲ್ಲಿ ಈಗಿನ ಕಷ್ಟವು ನಿವಾರಣೆಯಾಗಬಹುದು.

ಭಾರತ ಸರಕಾರವು ಇಂದಿನ ದೇಶವ್ಯಾಪಿ ಅನ್ನಸಂಕಟದ ನಿವಾರಣೆಗೋಸ್ಕರ ಈ ಕೆಳಗಿನ ಯೋಜನೆಯನ್ನು ತಯಾರಿಸಿದೆ:—

ಭಾರತ ಸರಕಾರವು ಆಹಾರಾಭಾವದ ಸಮಸ್ಯೆಯನ್ನು ಬ್ರಿಟಿಶ್ ಸರಕಾರದ ಮುಂದೆ ಇಟ್ಟಿತು. ಫಲತಃ ಬ್ರಿಟಿಶ್ ಸರಕಾರವು ಮುಂದಿನ ಎರಡು ಮೂರು ತಿಂಗಳಿಗೆ ಬೇಕಾಗುವಷ್ಟು ಗೋದಿಯನ್ನು ಕಳುಹಿಸಿ ಕೊಡಲು ಬಾಯಿಯಲ್ಲಿ ಒಪ್ಪಿತು. ಆದರೆ ಗೋದಿ ಈ ವರೆಗೂ ಬಂದಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ.

ಭಾರತ ಸರಕಾರವು ಪಂಜಾಬ ಸರಕಾರದಲ್ಲಿ, ಸರಕಾರಿ ಕ್ರಯ ಏಜನ್ಸಿ (Government Purchasing Agncy) ಯನ್ನು ಸ್ಥಾಪಿಸಿತು. ಈ ಏಜನ್ಸಿಯು ಪಂಜಾಬ ಸರಕಾರದ ನಿಯಂ-ತ್ರಣದಲ್ಲಿ ಕೆಲಸಮಾಡುವುದು. ಈ ಪ್ರಕಾರವಾದ ಏಜನ್ಸಿಗಳನ್ನು ಪ್ರತಿ ಪ್ರಾಂತ್ಯದಲ್ಲಿಯೂ ತೆರೆಯುವ ವ್ಯವಸ್ಥೆ ಮಾಡಲ್ಪಡುವುದು ಎಂದು ತಿಳಿದುಬರುತ್ತದೆ.

ಈ ಏಜನ್ಸಿಗಳ ಕೆಲಸ ಎಲ್ಲಿ ಆಹಾರದ ಕೊರತೆಯಿದೆಯೊ, ಅಲ್ಲಿಗೆ ಆಹಾರ ಕಳುಹಿಸಿಕೊಡುವುದಾಗಿದೆ, ಮತ್ತು ಸೈನಿಕರಿಗೆ ಆಹಾರ ಪೂರಯಿಸಿಕೊಡುವುದಾಗಿದೆ. ಈ ಏಜನ್ಸಿಗಳ ಹೊರತಾಗಿ ಪರದೇಶಕ್ಕೆ ಯಾರೂ ಆಹಾರ ಸಾಮಗ್ರಿಗಳನ್ನು ಕಳುಹಿಸಿ ಕೊಡಕೂಡದು. ಇವುಗಳ ಮೇಲುವಿಚಾರ ಭಾರತ ಸರಕಾರ (ಹೊಸದಿಲ್ಲಿ) ದ ಕಡೆಗೆ ಕೊಡಲ್ಪಟ್ಟಿರುತ್ತದೆ.

ಪ್ರತ್ಯೇಕ ಪ್ರಾಂತೀಯ ಸರಕಾರಗಳೂ ತಮ್ಮ ಅಂಗಡಿಗಳಲ್ಲಿ ಆಹಾರವನ್ನು ಜನತೆಗೆ ಮಾರುವ ವ್ಯವಸ್ಥೆ ಮಾಡುವುವು. ಇದ-ರಿಂದ ಯಾರೂ ಆಹಾರಸಾಮಗ್ರಿಗಳನ್ನು ಸಂಗ್ರಹಿಸಿ ಇಡಲು ಸಾಧ್ಯವಿಲ್ಲ.

ಆದುದರಿಂದ ಸರಕಾರವು ತನ್ನ ವಾಣಿಜ್ಯ ವಿಭಾಗದ್ವಾರಾ ಗೋದಿಗೋಸ್ಕರ ನಿಶ್ಚಿತ ಮೂಲ್ಯ ಸಂಬಂಧದಲ್ಲಿ ಆಜ್ಞೆಯನ್ನು

ಉಪಸಂಹರಿಸಿಕೊಂಡಿರುತ್ತದೆ. ಪ್ರಾಂತೀಯ ಸರಕಾರಗಳು ಈ ಆಜ್ಞೆಯ ಆಧಾರದ ಮೇಲೆ ತಮ್ಮ ಸಮಸ್ತ ಆಜ್ಞೆಗಳನ್ನೂ ರದ್ದುಮಾಡಿವೆ. ಈಗ ಭಾರತದಲ್ಲಿಯ ಗೋದಿಯ ನಿಯಂತ್ರಣವನ್ನು ತೆಗೆದುಹಾಕಲಾಗಿದೆ. ಇದರಿಂದಾಗಿ ಗೋದಿಯು ಗುಟ್ಟಾಗಿ ಮಾರಲ್ಪಡುತ್ತಿದ್ದುದು, ಈಗ ಪ್ರಕಾಶವಾಗಿ ಮಾರಲ್ಪಡಬಹುದು. ಸರಕಾರಕ್ಕೆ ಆವಶ್ಯಕತೆಯೆನಿಸಿದಲ್ಲಿ ಪುನಃ ನಿಯಂತ್ರಣವನ್ನು ಹಾಕಬಹುದು. ನಿಯಂತ್ರಣ ಹಾಕಿದಲ್ಲಿ ಜನತೆಗೆ ಮತ್ತೆ ಕಷ್ಟ ಉಂಟಾಗದಿರದು.

ಈಗ ಕಳೆದ ತಿಂಗಳಲ್ಲಿ (ಎಪ್ರಿಲ್ ೧೯೫೪) ಗೋದಿ, ಕಡ್ಲೆ, ಅಕ್ಕಿ, ಜೋಳ ಮೊದಲಾದುವುಗಳ ಫಸಲು ತಯಾರಾಗಿರುವುದು. ಸರಕಾರವು ಮುನ್ನೋಟವಿಟ್ಟು ಈಗಲೆ, ಬರುವ ವರ್ಷದಲ್ಲಿ ಸಾವುಕಾರರು ಆಹಾರಸಾಮುಗ್ರಿಗಳನ್ನು ತೆಗೆದುಕೊಂಡು ಸಂಗ್ರಹಿಸಿಡದಂತೆ ವ್ಯವಸ್ಥೆಮಾಡಿದಲ್ಲಿ, ಜನತೆಗೆ ಮುಂದೆ ಬಹಳ ಉಪಕಾರವಾಗಬಹುದು. ಇದಕ್ಕೋಸ್ಕರ ಒಂದು ಪ್ರಭಾವಕಾರಿ ಯೋಜನೆಯ ಆವಶ್ಯಕತೆಯಿದೆ. ನೈಜಾಂ ಸರಕಾರದ ಪೂರ್ವ ಕೃಷಿ ಡೈರೆಕ್ಟರ್ **ಖಾನ್‌ಬಹಾದ್ದೂರ್ ನಿಜಾಮುದ್ದೀನ್ ಹೈದರರು** 'ಅನ್ನನಿಯಂತ್ರಣ ಮತ್ತು ಅದರ ಸಂಘಟನೆ' ಎಂಬ ವಿಷಯವನ್ನು ಕುರಿತು ಒಂದು ಉಪಯುಕ್ತ ಲೇಖನವನ್ನು ದಿಲ್ಲಿಯ '**ಹಿಂದುಸ್ಥಾನ್ ಟೈಮ್ಸ್**' ಪತ್ರಿಕೆಯಲ್ಲಿ ಹಿಂದೆಯೆ ಪ್ರಕಟಿಸಿರುತ್ತಾರೆ. ಅದರಲ್ಲಿ ಅನ್ನವಿತರಣೆ ಮತ್ತು ನಿಯಂತ್ರಣೆಗಳಿಗೋಸ್ಕರ ಒಂದು ಯೋಜನೆಯನ್ನು ಹೇಳಿದ್ದಾರೆ. ಅದು ವಾಸ್ತವವಾಗಿ ಬಹಳ ವಿಚಾರಣೀಯವಾಗಿದೆ.

ಖಾನ್ ಬಹಾದೂರ್ ಹೈದರ್ ಸಾಹೇಬರು, ಆಹಾರದ ಸಾಮುಗ್ರಿಗಳ ಮೇಲೆ ಪೂರ್ಣನಿಯಂತ್ರಣದ ಪಕ್ಷದವರಾಗಿದ್ದಾರೆ. 'ಅಪೂರ್ಣ ನಿಯಂತ್ರಣ ಮತ್ತು ಕುಪ್ರಬಂಧದ ಕಾರಣ ಈಗ ಭಾರತದಲ್ಲಿ ಇಂತಹ ಪರಿಸ್ಥಿತಿಯುಂಟಾಗಿದೆ. ಆದುದರಿಂದ ಅಂಗಡಿ, ಗದ್ದೆ, ಮನೆ ಮೊದಲಾದ ಆಹಾರಸಾಮುಗ್ರಿಗಳಿರುವ ಎಲ್ಲಾ ಸ್ಥಳಗಳಲ್ಲಿಯೂ ನಿಯಂತ್ರಣ ಹಾಕಬೇಕು. ಹೀಗೆ ನಿಯಂತ್ರಣ ಮಾಡುವುದು ಸರಕಾರಕ್ಕೇನೂ ಕಷ್ಟದ ಕೆಲಸವಲ್ಲ!' ಎಂದು ಅವರ ಹೇಳಿಕೆ.

ಈ ಭೂಮಿಕೆಯ ನಂತರ ಸಾಹೇಬರು ತಮ್ಮದೊಂದು ಯೋಜನೆಯನ್ನು ತಿಳಿಸಿರುತ್ತಾರೆ. ಅದರ ಸಾರಾಂಶವೇನೆಂದರೆ— ಪ್ರತ್ಯೇಕ ರೈತನ ಮತ್ತು ಜಮೀನ್ದಾರನ ಫಸಲಿನ ಪರಿಮಾಣವನ್ನು, ಮೊದಲೇ ತಹಸೀಲ್ದಾರರು ಮತ್ತು ಪಟೀಲರು ಅಥವಾ ಇಲಾಖೆಗೆ ಸಂಬಂಧಪಟ್ಟವರು ನೋಡಿ ನಿಶ್ಚಯಿಸತಕ್ಕದ್ದು. ಧಾನ್ಯ ಒಕ್ಕಿದ ನಂತರ ಖರ್ಚು ಕಳೆದು ಉಳಿದದ್ದನ್ನು ಲೈಸೆನ್ಸ್ ಪಡೆದ ಸರಕಾರಿ ಅಂಗಡಿಗೆ ಸಾಗಿಸುವಂತೆ ವ್ಯವಸ್ಥೆಯನ್ನು ಮಾಡತಕ್ಕದ್ದು. ವ್ಯಾಪಾರಿಯು ಕೂಡ ಸರಿಯಾಗಿ ಲೆಕ್ಕಪತ್ರವಿಡತಕ್ಕದ್ದು. ಈ ಪ್ರಕಾರ ಮಾಡುವುದರಿಂದ ಯಾವ ಜಿಲ್ಲೆಯಲ್ಲಿ ಉತ್ಪತ್ತಿ ಕಡಿಮೆ, ಎಲ್ಲಿ ಹೆಚ್ಚು ಎಂಬುದು ತಿಳಿಯುವುದಲ್ಲದೆ, ವ್ಯಾಪಾರಿಗಳಿಗೆ ಸಂಗ್ರಹಿಸಿ ಇಡಲೂ ಸಾಧ್ಯವಿರದು. ನಗರಗಳಲ್ಲಿ ರೇಶನಿಂಗ್ ಕಾರ್ಡುಮಾಡಿ, ಯಾರಿಗೆಷ್ಟು ಖರ್ಚು ಇದೆಯೋ ಅಷ್ಟೇ ಅದರಲ್ಲಿ ಬರೆದು, ಅವರಿಗೆ ಸಾಮುಗ್ರಿ ಸಿಕ್ಕುವಂತೆ ವ್ಯವಸ್ಥೆ ಮಾಡತಕ್ಕದ್ದು. ಗ್ರಾಮಗಳಲ್ಲಿಯೂ ಇದೇ ವ್ಯವಸ್ಥೆಯನ್ನು ಮಾಡಲು ಸಾಧ್ಯವುಂಟು.

ಈ ಯೋಜನೆಯ ಸಫಲತೆಗೋಸ್ಕರ ಒಂದು ಮಧ್ಯವರ್ತಿ ವಿಭಾಗದ ಆವಶ್ಯಕತೆಯಿದೆ. ಅದರಳಗೆ ಬೇರೆ ಬೇರೆ ನಿರೀಕ್ಷಕರನ್ನು ಇರಿಸಿ, ಅವರು ಎಲ್ಲಾ ಕಡೆಯಲ್ಲಿಯೂ ವ್ಯವಸ್ಥೆ ಸರಿಯಾಗಿದೆಯೊ ಎಂಬುದನ್ನು ನಿರೀಕ್ಷಿಸತಕ್ಕದ್ದು. ಈ ನಿರೀಕ್ಷಣೆಗೆ ನಗರಗಳಲ್ಲಿ ಮ್ಯುನಿಸಿಪಲ್ ಬೋರ್ಡಿನ ಸದಸ್ಯರನ್ನೂ ಗ್ರಾಮಗಳಲ್ಲಿ ಜಿಲ್ಲಾ ಬೋರ್ಡು ಸದಸ್ಯರನ್ನೂ ನಿಯುಕ್ತಮಾಡಬಹುದು. ಇವರಿಗೆ ವೇತನವನ್ನೂ ಕೊಡತಕ್ಕದ್ದು. ರೈತರು ಪಟೇಲರಲ್ಲಿ ತಮ್ಮ ಉತ್ಪತ್ತಿಯ ಲೆಕ್ಕವನ್ನು ಕೊಡತಕ್ಕದ್ದು.

ಪ್ರತಿಯೊಂದು ತಾಲೂಕಿನಲ್ಲಿ ಒಂದು ನಿಯಂತ್ರಣ ಆಫೀಸಿರತಕ್ಕದ್ದು. ತಾಲೂಕುಗಳಿಗೆ ಮುಖ್ಯವಾಗಿ ಜಿಲ್ಲಾ ಆಫೀಸೂ, ಅವುಗಳ ಮೇಲೆ ಪ್ರಾಂತೀಯ ಆಫೀಸೂ ಇರತಕ್ಕದ್ದು. ಕೇಂದ್ರೀಯ ನಿಯಂತ್ರಣ ಆಫೀಸು ದಿಲ್ಲಿಯಲ್ಲಿದ್ದೇ ಇದೆ.

ಈ ಪ್ರಕಾರ ವ್ಯವಸ್ಥೆಯನ್ನು ಅಕ್ಕಿ, ಗೋದಿಗಳ ಮೇಲೆ ಮಾತ್ರವಲ್ಲದೆ ಎಲ್ಲಾ ಆವಶ್ಯಕ ಆಹಾರ ಪದಾರ್ಥಗಳ ಮೇಲೂ ಮಾಡಲು ಸಾಧ್ಯವುಂಟು. ಭಾರತದಲ್ಲಿ ೧೦೦ ಲಕ್ಷ ಟನ್ ಗೋದಿ ಬೆಳೆಯುತ್ತವೆ. ಒಂದು ವೇಳೆ ೧೦೦ ಟನ್ ಗೋದಿಯನ್ನು ಮಾರುವವರಿಂದ ಒಂದು ರೂಪಾಯಿ ಲೈಸೆನ್ಸ್ ಫೀಸ್ ತೆಗೆದುಕೊಂಡರೂ ಒಂದು ಲಕ್ಷ ರೂಪಾಯಿ ಸರಕಾರಕ್ಕೆ ಲಾಭವಾಗುವುದು. ಈ ಹಣವು ನಿರೀಕ್ಷಕರಿಗೆ ಸಂಬಳಕ್ಕಾಗಿ ಉಪಯೋಗಿಸಲು ಸಾಕಾಗಬಹುದು....ಇತ್ಯಾದಿ.

ಈ ಯೋಜನೆಯು ವಾಸ್ತವವಾಗಿ ಬಹಳ ಉಪಯೋಗಿಯಾಗಿದೆ. ಒಂದು ವೇಳೆ ಇದರಂತೆ ಕಾರ್ಯವನ್ನು ಜನತೆಯು ಸರಕಾರದ ಸಹಾಯ ಪಡೆದು ಮಾಡಿದಲ್ಲಿ ಬಹಳ ಸಫಲತೆ ಸಿಕ್ಕಬಹುದು. ಪರಂತು ಈ ಸಂಬಂಧದಲ್ಲಿ ನಮ್ಮ ಅಭಿಪ್ರಾಯ ವೇನೆಂದರೆ ಕೇವಲ ಖಾದ್ಯಪದಾರ್ಥಗಳ ಮೇಲೆ ಮೂಲ್ಯ-ನಿಯಂತ್ರಣ ಹಾಕುವುದರಿಂದ ಏನೂ ಸಫಲತೆ ಸಿಕ್ಕಲಾರದು; ಜೀವನೋಪಯೋಗಿಯಾದ ಬೇರೆ ವಸ್ತುಗಳ ಮೇಲೂ ನಿಯಂತ್ರಣದ ಆವಶ್ಯಕತೆಯಿದೆ. (ವಸ್ತ್ರ, ನೂಲು, ಸಕ್ಕರೆ, ಉಪ್ಪು ಬೇಳೆ, ಚಿಮಣೀಎಣ್ಣೆ, ತೆಂಗಿನಎಣ್ಣೆ, ತುಪ್ಪ, ಕಟ್ಟಿಗೆ, ಕಾಗದ ಮೊದಲಾದುವು.)

ಎಷ್ಟರ ವರೆಗೆ ಈ ಆವಶ್ಯಕವಸ್ತುಗಳ ಮೇಲೆ ಸಂಪೂರ್ಣ ನಿಯಂತ್ರಣವಾಗುವುದಿಲ್ಲವೋ, ಅಷ್ಟರ ವರೆಗೆ ಜನತೆಗೆ ಕ್ಷೇಮವಾಗಲಾರದು.

೨-೬೧೨೧

ಮುಕ್ತಿಯೊ ವಿರಕ್ತಿಯೊ?

★

ಶ್ರೀ. "ತಿರುಮಲೇಶ" ಬಳ್ಳಾರಿ

ಮೂಗು ಹಿಡಿದೇಕಿರುವೆ? ನಿನ್ನ ತಪ ಸಾಕಿನ್ನು ;
ಕಣ್ದೆರೆದು ನೋಡಿಲ್ಲಿ ನರಳುವರ ಹೊರಳುವರ!
ನಿನ್ನ ಮುಕುತಿಯು ಮಾರ್ಗವೆನುಗೆ ಹಾಸ್ಯದ ತರಲು—
ತಪದ ಸೋಗನು ಹರಿದು ಜಪದ ತುಟಿಗಳ ತೆರೆದು,
ಅರುಹು ನೀ ಕಂಡುದನು, ಜನತೆಗೊದವಿಸು ತಿಳಿವ!
ಕೆಂಜೆಡೆಯ ಕೆಂಗಣ್ಣ ಮೊಗಲೆಲ್ಲ ಭಸ್ಮಮಯ-
ವಯ್ಯಯ್ಯೊ! ನಿನ್ನ ಜೋಗದ ತತ್ತ್ವವೇನಿಹುದೊ?
ಗಹನದಲಿ ನಿನ್ನಿರವು ಗಹನವಾಗಿದೆ; ಬರಿದೆ
ಜನರ ಕರುಳಿನ ಗೋಳನರಿಯದೇಕಿಂತಿರುವೆ?
ಆ ತಪಕೆ ಆ ಜಪಕೆ ನೀನೊಳು ಮುಳುಂಗಿದಕೆ,
ನೀಗೆಯ್ವ ಲೋಕಕಲ್ಯಾಣ ಕಾರ್ಯಗಳಿಲ್ಲಿ?
ನೀನೊಡೆಯ ಬಿಸಕಾರಿ ಮುಕ್ಕಣ್ಣ ನೋಡಿದನೆ?
ಬಿಡುಗಣ್ಣರಮೃತಮಂ ಪಡೆದಲ್ಲೆ ಕುಳಿತಿಹರೆ?
ಕಡುದಾನಿ ಬಲಿ-ದಧೀಚಿಗಳೆತ್ತ ದಣಿದಿರರೆ—
ಒಡಲ ತುಂಬಿಪ ಸ್ವಾರ್ಥಪೊಂದರಲೆ ಮುಳುಗಿದರೆ?
ಜನತೆಗೊದಗುವ ದುರಿತ ತನ್ನದೆಂದರಿಯದೆಯೆ,
ಜನರುನ್ನತಿಯೆ ತನ್ನ ಗುರಿಯೆಂದು ತಿಳಿಯದೆಯೆ,
ದೇಶ-ದೇಶದ ಮೇಲೆ ದಂಡೆತ್ತಿ ಕಾದಾಡಿ,
ರಕುತದೊರೆಗಳ ಹರಿಸಿ, ಹೆಣದ ಬಣಬೆಯನಿಕ್ಕಿ,
ಜಯಸಿರಿಗೆ ಕರುಳ ಮಾಲೆಯನಿಕ್ಕಿ ವರಸಿದರು.
ದ್ವೇಷಾಗ್ನಿಯಿಂ ಜಗವನುರುಹುವುದೆ ಗುರಿಯೇನು?
ಆಸೆ-ಮತ್ಸರ-ಸೊರ್ಕನುಳಿದು ಶಮ-ದಮ-ಶಾಂತಿ-
ಗೇಸು ಜನರುಜ್ಜುಗಿಪರೀ ಜಗದಿ ತಿಳಿದಿರಲಿ!
'ಜನರ ಸೇವೆಯೆ ಜನಾರ್ದನ ಸೇವೆ' ಎಂದುಸುರಿ
'ದೇಶಸೇವೆಯೆ ಈಶಸೇವೆ' ಎನುವವರಿರಲಿ,
ತನು-ಮನವ ಸವೆಯಿಸುತ ಧನವನಾರಾಧಿಸದೆ,
ಅನುದಿನವು ದೇಶದುನ್ನತಿ ತನ್ನ ಗುರಿಯೆಂದು,
ತಪವಗ್ಗೆ ಜಪವಗ್ಗೆ, ಮೂಗುಹಿಡಿ ಕೈದುಹಿಡಿ,
ರಕುತಸುರಿ ಸುಖವತೊರೆ, ಗಡ್ಡಬಿಡು ಜಡೆಯನಿಡು,
ಕೃತ್ರಿಮತೆ ಸಲದೆಂದು ಪ್ರಕೃತಿ ನಿಯಮವಿದೆಂದು,
ಪ್ರಕೃತಿಯಾಳಿಕೆಯಲ್ಲಿ ಜನರೆಲ್ಲ ಸಮರೆಂದು,
ಲೋಕಲೋಕಕೆ ಸಾರೆ ಜಡೆಮೇಲೆ ಹಾರಿರಲಿ!
ಗಡ್ಡ ಕೆಳಗಿಳಿದಿರಲಿ, ಹೃದಯ ಕುದಿಯುತ್ತಿರಲಿ!
ಧಮನಿ ಬಿಸಿರಕುತದಿಂ ತುಂಬಿ ತುಳುಕುತ್ತಿರಲಿ!
ತವಸಿ! ನಿನ್ನಯ ತಪವೆ ಜಾತಿ-ಮತ ಭೂತಗಳ
ಸುಟ್ಟುರುಹಿ ವಿಶ್ವವೆಲ್ಲವ ಪೂತವಾಗಿಸಲಿ!
ಸೌಂದರ್ಯ ಸೌಹಾರ್ದ ಸೌಭಾಗ್ಯವೆರ್ಜಿಸಲಿ!
ಸ್ವಾರ್ಥಸಾಧನೆಗಾಗಿ ಮುಕುತಿಸೊಗಕೆಂದಳಲಿ
ನೀನೊರ್ವ ಸಗ್ಗಸೊಗಸೊದೆಯೊಳೋಲಾಡಿದರೆ,
ಜಗಕೆ ಬಂದುದದೇನು ಮುಕ್ತಿಯೊ ವಿರಕ್ತಿಯೊ?

"ಬಯಕೆ"

ಶ್ರೀ. ವಲ್ಲಭ ಜೋಶಿ, ಕಾತರಿಕಿ

ಎನ್ನಿನಿಯ ನೀನೆಂದು ಬಂದಿಹೆನು ನಾನಿಂದು
ನೊಂದು ಬೆಂಡಾಗಿಹೆನು ಬೆಂದು ಬೆಂದು ;
ದಿನವಿರುಳು ಯುಗದಂತೆ ಉರುಳಿಸುತ ಕೊನೆಗೊಮ್ಮೆ
ಸೇರಿದೆನು 'ಹೆಣ' ಕೊರೆದು 'ಜಾತ್ರೆ' ಯೆಂದು ‖ ೧ ‖

ಮನೆಮಾರು ಮೆರೆಯುತಿದೆ ಹಣದ ಸರಿ ಸುರಿಯುತಿದೆ ;
ಕೈಯಲ್ಲಿ ಹಲವಾರು ಆಳುಹೋಳು!
ಕುಳಿತಲ್ಲಿ ನಿಂತಲ್ಲಿ—ಮನೆ-ಸೆಜ್ಜೆ ನನೆಯಲ್ಲಿ
ಎಲ್ಲೆಲ್ಲಿಯೂ ನನಗೆ ಹಾಳು ಹಾಳು! ‖ ೨ ‖

ನಮ್ಮಯ್ಯ ಆ ಹೆಣಕೆ ನನ್ನನಿತ್ತಿಹನೆಂದು
ಪರವನಿತೆಯೆಂದೀಗ ಗ್ರಹಿಸಬೇಡ!
ನಿನಗಾಗಿ ಸೆಪ ಬಗೆದು ಬಂದಿಹೆನು ದೂರದಿಂ
ನಾನೀಗ ನಿನ್ನಲ್ಲಿ ಅನುರಕ್ತಳು! ‖ ೩ ‖

ನಿನ್ನ ದೃಷ್ಟಿಯನೇಕೆ ಬೇರೆಡೆಗೆ ಹೊರಳಿಸಿಹೆ?
ಹೂವಂತೆ ಹಗುರಾಗಿ ಮಾತಾಡುವೆ?
ಎನ್ನ ಬಲುಬಯಕೆಯಿದು ನೀನೆ ಪೂರಯಿಸುವುದು ;
ತುಂಬಿ ನೀನಾಗುವುದು ಹೂವು ನಾನು! ‖ ೪ ‖

ಉಪ್ಪಿನ ಮಾರಾಟ ★ (ಒಂದು ಬಾಳಿನಾಟ)*

ಪ್ರೊ. ವ್ಹಿ. ಜಿ. ಭಟ್ಟ, ಕಡತೋಕಾ

★

ಯಾವ ದೇಶವಾದರೇನು, ಯಾವ ಕಾಲವಾದರೇನು? ದೀನರನ್ನು ಮುರಿದು ಮುಕ್ಕಿದಾಗಲೆ ಧನಿಕರು ದೊಡ್ಡವರಾಗುವುದು! ಎಲ್ಲೆಲ್ಲಿಯೂ ದೇವರು, ಸತ್ಯ, ಧರ್ಮ, ನ್ಯಾಯ ಇವೆಲ್ಲ ಬಡವರನ್ನು ಹಿಂಡಿಹಿಪ್ಪಿ ಮಾಡಲಿಕ್ಕೇ ಇರುವುವು!

★

೧ನೆಯ ನೋಟ

(ಅರಬಿಯ ತೀರ. ಇಬ್ಬರು ಅಂಬಿಗರು ಉಪ್ಪಿನ ಬುಟ್ಟಿ ಹೊತ್ತು ನಡೆಯುತ್ತಿದ್ದಾರೆ.)

ಒಬ್ಬ :— ಏನ್ಸಾಕಲ್ಬಂತಪ್ಪಾ ಮಾರಾಯಾ! ಒಂದ್ಸೊಕಳ್ಗಾ- ಗೀಗೆ....

ಇನ್ನೊಬ್ಬ :— (ಬಾಯಿಹಾಕಿ) ರಾಗಿ ಹೋಗ್ಲಿ ; ತಾಳೀಚಕ್ಕೀ- ತರೂಕೂ ತಡಿ!....ಏನ್ಮಾಡ್ಯೊಳ್ಳೀ .... ಸರ್ಕಾರ್ವ್ರೋ! .... ಮಕ್ಳೆಲ್ಲಾ ಹೊಟ್ಟೀ ಹೊಟ್ಟೀ ಬಡ್ಕಂಡ್ಸತ್ತು....ದೇವ್ರು ಹಣೇಲ್ಬ- ದ್ದಾರ್ಂಗಾಗೂದು....! ಈ ಉಪ್ಪು ಮಾರಾಟಾದ್ರೆ ಗಂಜಿ, ಇಲ್ದಿದ್ರೆ ಏನಾನ್ದಿಲ್ಲು....! ಏನಂಬೂದು ಕೋಸ್ತ, ಹಿಂದ್ನ ಜನ್ಮದ ಪಾಪ!

ಕೋಸ್ತ :— ನನೆ ಣ್ತಿ ಹೆಣ್ಣಡ್ದಾಳೆ.... ಶಿಶೂ ತಲೀಗೆ ಎಣ್ಣೆಲ್ಲ! ಈ ಉಪ್ಪಿಗೆ ಕೊಳ್ಗಕ್ಕೆಡರ್ಾಣೆ ಆದ್ರೂ ಸಿಕ್ದ್ರೆ ಬಚಾವು! ಬೀಡಾ- ರ್ದಲ್ಲಿ ಒಂದಳ್ಳ ರಾಗ್ಯೂ ಇಲ್ಲ ಹೊನ್ನ! ಉಪ್ಪು ಮಾರಾಟಾ- ಗ್ತದ್ಯೋ ಇಲ್ಯೋ ದೇವ್ರೇ ಬಲ್ಲ!

ಹೊನ್ನ :— ನಾನಂತೂ ಧೀಮೊಡ್ಯಾ ಬೇಕೂ ಹೇಳ್ಲಿ, ಬೇಡ ಹೇಳ್ಲಿ, ಉಪ್ಪೊತ್ತಾಕಿ ಕೂತ್ಬಿಡ್ತೆ! ಅಕ್ಕೀ ಕೊಡ್ಲಿ, ನುಚ್ಚೊಕ್ಡ್ಲಿ, ಏನೇ ಕೊಡ್ಲಿ...ಎಷ್ಟೇ ಕೊಡ್ಲಿ....ಸುಮ್ನೆ ತರ್ತೆ! ಕಳ್ದಾವ್ರ ಕೋಸ್ತ, ನಾಕೊಕ್ಳ್ಗ ಉಪ್ಮಾರಿದ್ದೆ. ತಾಳೀಚಕ್ಕಿತರ್ಾಗ ಹಿಡ್ದ್ರು....! ದಂಡ ಕೊಡೂಕೂ ಸಾಕಾಗ್ಲಿಲ್ಲ....ಕಡೀಗೆ ದೇವ್ರ ಚಂಬು, ಎಂತ್ತೀ ಕೊಳ್ಳಾಗ್ನ ಮಣಿಸರ ಮಾರಿ, ಮಾರೀ ಕಳ್ದ್ದೆ; ಗ್ರಾಚಾರ ತೀರ್ಸ್ದೆ!

ಕೋಸ್ತ :— ನಾವಾರೂ ಯೇನ್ಮಾಡೂದು? ಎಲ್ಲಾ ಮಾಡ್ವವ ಮೇಲಿದ್ದಾನೆ. ನದೀಲ್ಮೀನಿರೂವರೀಗೆ, ಸಮುದ್ರದ್ನೀರು ಉಪ್ಪಾ- ಗಿರೂವರೀಗೆ, ಸೂರ್ಯಾನ್ಬಿಸ್ಲಿರೂವರೀಗೆ, ಅರ್ಧೊಟ್ಟ್ಯಾದ್ರೂ ಸಿಗೂದು; ಹುಟ್ಸಿದಾವ ಹುಲ್ಮೇಯ್ಸೂದಿಲ್ಲ!

ಹೊನ್ನ :— ' ಹುಲ್ಮೇಯ್ಸೂದಿಲ್ಲ ' ಹೌದು; ಅಂಬ್ಲೀನೂ ಕೊಡೂದಿಲ್ಲಾ ಅಂಬ್ದಾಗೇ ಕಾಣ್ಸ್ತೇದು.

(ಎದುರಿಗೆ ' ಜಾತಕಜನಕ ' ' ಜನಿವಾರ ಕೀಲಿ ' ಜನಾರ್ದನ ಜೋಯಿಸರ ಆಗಮನ) ಯಾರೋ ಬ್ರಾಂಬ್ರು ಗಾಳೀತಿಂಬೂಕ್ ಬಂದ್ದಾಗ್ಯಾಣ್ಸ್ತೇದು....ಅವ್ರಿಗುಪ್ಬೇಕೋ ಕೇಳ್ವ!

ಕೋಸ್ತ :—(ಮುಂದೆಬಂದು) ಹ್ಞಾ. ಜೋಯ್ಸ್ರು! ನಮಸ್ಕಾರ್ ಒಡ್ಯಾ.

ಹೊನ್ನ :— ಕಾಲೀಗ್ಬಿದ್ದೆ ನನ್ನೊಡ್ಯಾ!

ಜೋಯಿಸ :— ಏನ್ರೋ? ಏನಾಸ್ಗೀನಾ .... ಬಗೇ- ಲಚೇಗ್ನಿಂತ್ಕೋಳಿ....ವಾಸ್ನೆಗೀಸ್ನೆಯೇನೂ ಬರೂದಿಲ್ಲಪ್ಪ! ಮುಟ್ಬೇಲೇನ್ರೋ?

ಹೊನ್ನ } ಉಪ್ಪು ಉಪ್ಪು!
ಕೋಸ್ತ }

ಜೋಯಿಸ :— ಧಾರ್ಣೆ ಹೇಂಗ್ಮಾಡೀರ್ರೋ?

ಕೋಸ್ತ } ನೀವ್ಕೊಟ್ಟಷ್ಟು ಒಡ್ಯಾ!
ಹೊನ್ನ } ಹೆಚ್ಚೀನಲ್ಲ!

(ಬುಟ್ಟಿ ಇಳಿಸುತ್ತಾನೆ.)

ಜೋಯಿಸ :— ನೋಡ್ವ....

ಹೊನ್ನ :— ಭಾಳ ಬೆಳ್ಗದೆ ನಂದು ಒಡ್ಯಾ!

ಕೋಸ್ತ :— ನಂದೂ ಉತ್ಮಾ ಒಡ್ಯಾ....ಸಕ್ರ್ಯಂತಾದು!

---

* ಇದರಲ್ಲಿಯ ಭಾಷೆ ಉತ್ತರಕನ್ನಡ ಜಿಲ್ಲೆಯಲ್ಲಿಯ ದೇಸಿಯನ್ನನು- ಸರಿಸಿದುದು. ಅಲ್ಲಿಯ ಹಿಂದುಳಿದ ಜನರಾದ ಅಂಬಿಗರಾಡುವ ಮಾತಿನ ರೀತಿಯನ್ನೂ ಮುಂದುವರಿದವರಾದ ಹೈಗಬ್ರಾಹ್ಮಣರಾಡುವ ಮಾತಿನ ರೀತಿಯನ್ನೂ ಇದರಲ್ಲಿ ಕಾಣಬಹುದು. ಬೇರೆ ಪ್ರದೇಶದಲ್ಲಿಯ ಕನ್ನಡಿ- ಗರಿಗೆ ಇದರಲ್ಲಿಯ ಪದಪ್ರಯೋಗಗಳೂ ಶಬ್ದವಿಕೃತಿಗಳೂ ಅಪರಿಚಿತವಾಗಿ ತೋರುವುದು ಸಹಜ; ಆದರೆ ದೇಸಿಯ ವೈವಿಧ್ಯದ ಪರಿಚಯ ಎಲ್ಲರಿಗೂ ಇರಬೇಕು. —ಸಂ. ಜ.

ಹೊನ್ನ :—ನಂದೇನ್ ಸೀ ಅಲ್ಲ ಒಡ್ಯಾ! ಸಕ್ರ್ಯಲ್ಲ, ಉಪ್ಪು! ಸಾಣೇಕಟ್ಟೇದ್ಕಿಂತಾ ಜಲೋದು!

ಕೋಸ್ತ :— (ಹೊನ್ನನಿಗೆ) ಹೋಗೋ, ಸಕ್ರ್ಯಂತಾದು ಅಂದ್ರೆ ಸೀ ಅಲ್ಲ; ಅಷ್ಟು ಬೆಳ್ಳೀದು!

ಹೊನ್ನ :— ಒಡ್ಯಾ ನೀವ್ನೋಟ್ಬಾರ್ಣೆ; ಉಪ್ನೋಡಿ (ಕೋಸ್ತನು ತನ್ನ ಬುಟ್ಟಿ ಮುಂದೆ ಮಾಡುತ್ತಾನೆ) ತಡ್ಯೋ,.. ನಾನೇ ಮೊದ್ಲು ಮಾತಾಡ್ತೇನಿ (ಜೋಯಿಸನಿಗೆ) ಅಲ್ವನ್ರ ಒಡ್ಯಾ?

ಕೋಸ್ತ :— ಏ ಖದೀಮ, ನನ್ಹತ್ರೇ ಮೊದ್ಲು ಕೇಳ್ದ್ರು ಒಡ್ಯ; (ಜೋಯಿಸನಿಗೆ) ನಿಂಬುದ್ಧೀಗ್ಬಿಳ್ದ ಧಾರ್ಣೆ ಕೊಡಿ!

ಜೋಯಿಸ :— ಹೇಳ್ಬಿಡಿ ನಿಂ-ನಿಂ ದರ!

ಹೊನ್ನ :— ಎಡ್ರಾಣೆ ಒಡ್ಯಾ, ಭಾಳಗ್ಗ!

ಕೋಸ್ತ :— ಮತ್ತೊಂದ್ಬಿಲ್ಲಿ ಕಮ್ಮಿ ನಂದು!

ಹೊನ್ನ :— (ಕೋಸ್ತನಿಗೆ) ಮೇಲ್ಗೆಡ್ಸ್ಯ? ಫಟಿಂಗ!

ಕೋಸ್ತ :— ನಾಲ್ಗಿ ಜಬ್ಕೆ ಬಿಟ್ರೆ....

ಹೊನ್ನ :— ಹೋ, ಹೋ, ಬಿಡೋ, ನೀನೊಬ್ನೇ ಉಪ್ಪೆಳೇವವ್ನೊ?

ಕೋಸ್ತ :— ಸಾಕೋ.. ಬಾಯ್ಬಿದ್ಕೊ!.. ಹೆಚ್ಮಾತಾಡ್ಬೆ (ಕೈತೋರಿಸುತ್ತಾನೆ.)

ಹೊನ್ನ :— ನನ್ಕೈಲಿ ಲಿಂಗ್ಕಟ್ಟಿಲ್ಲಾ ಅಂದೆ!....ನಾನೂ ನಿನ್ಹಾಗೇ ಗಂಡ್ಸು!

ಜೋಯಿಸ :— ಓಹೋ.... ಲಥಾಯಿ! .... ಏ.. ಏ.. ಸುಮ್ನಾಗ್ರೋ.. ನನ್ಗೆ ನಿಮುಪ್ಪೇ ಬೇಡ! (ಹೋಗಲನುವಾಗುತ್ತಾನೆ.)

ಹೊನ್ನ :— ಇರ್ರಿ ಒಡ್ಯಾ.. ಈ ಬದ್ಮಾಸಗ.. ಯಾವಾಗ್ಲೂ ನೋಡ್ತೀನಿ!

ಕೋಸ್ತ :—ಏ ಕೋಣ್ನ ಮಗ್ನೆ.... ನಿನ್ನಷ್ಟ ಗಂಟೇನ್ತಿಂದ್ನೋ ನಾನು?

ಜೋಯಿಸ :— ಸಾಕ್ಮಾಡಿ ನಿಮ್ ಮಹಾಭಾರ್ತ! .... ಉಪ್ಕೊಡೂ ಬುದ್ಧಿದ್ರೆ ಧಾರ್ಣೆ ಹೇಳಿ!

ಹೊನ್ನ :— ಎಡ್ರಾಣ್ರಿ!

ಕೋಸ್ತ :— ಯೋಳ್ಬಿಲ್ಲಿ ನನ್ನುಪ್ಗೆ!

ಹೊನ್ನ :— ಅಕ!....ಆಗೂದಾಗ್ಲಿ ಒಡ್ಯಾ ನೀವು ಬ್ರಾಂಬ್ರು.. ನಿಂಗೇ ಹೇಳಿ ಅರ್ಬಿಲ್ಲೀಗ್ಕೊಳ್ಗ!

ಕೋಸ್ತ :— ಓ ಹೊ ಹೊ! ನಾನೂ ನೊಡ್ಬುಡ್ತೀನಿ ಒಂದ್ಕೈ!.... ಕಳ್ಳಿ ನನ್ನುಪ್ಪು ಐದ್ಬಿಲ್ಲಿ!

ಜೋಯಿಸ :— ಏನೋ! ಹೊನ್ನ, ಒಂದಾಣೆಗಿಳಸ್ತೀಯೇ ನಿನ್ನುಪ್ಪ?

ಹೊನ್ನ :— ಕೇಳ್ಬೇಳ್ತೇನಿ.... ಇವ್ನಾಗೆ ನನ್ತಲೇ ಗಿಲೆ ತಿಗ್ಲಿಲ್ಲ!.... ಬ್ರಾಂಬ್ರುಕೇರೀಲಿ ಯಾರಾದ್ರೂ ತಕಂಬ್ರು!

ಜೋಯಿಸ :— ನಂಕೇರೀಲಿ ಉಪ್ಪ ರೀದೀ ಮಾಡ್ತೋರ್ಯಾರೂ ಇಲ್ಲ.. ಎಲ್ಲರೂ ತಕಂಡಾಯ್ತು!

ಹೊನ್ನ :— ತಕಳ್ಳಿ ಬಿಡ್ಲಿ, ಅರ್ಬಿಲ್ಲೀಗಿಂತ ಕಮ್ಮಿಧಾರ್ಣೆ ನಂಗ್ಪೊರೈಸೂದಿಲ್ರಿ! ಅವ್ನಷ್ನೇ ತಕಳಿ (ಕೋಸ್ತನನ್ನು ದುರುದುರು ನೋಡುತ್ತ ಹೋಗುತ್ತಾನೆ.)

ಜೋಯಿಸ :— ನಮ್ಮನೀ ನೋಡಿದ್ಯಲ್ಲೋ? ನಾಳೆ ಬೆಳ್ಗಾಮುಂಜೆ....ನಿನ್ಹತ್ರೆಷ್ಟಿಷ್ಟದೆ?

ಕೋಸ್ತ :— ಏಳೆಂಟ್ಕೊಳ್ಗ ಕಮ್ಮಿ ಆಗ!

ಜೋಯಿಸ :— ಹಾಗಾರೆ ನಾಳೀಗೆ ಅಷ್ಟೂ ತಕಂಬಾ! ರೋಖುಹಣಾ........ಮತ್ಯಾರೀಗೂ ಮಾತ್ಕೊಡ್ಬೇಡ; ಹ್ಞಾ........ಐದ್ಬಿಲ್ಯಲೋ ಕೊಳ್ಗಕ್ಕೆ? ನೆಸ್ಪಿರ್ಲಿ.

ಕೋಸ್ತ :— ಅಡ್ಡಿಲ್ರ .... ಸಂಜಾಯ್ತು .... ಚುಂ ಚುಂ ಅಂಬೂದ್ರೊಳ್ಗೇ ತರ್ತೀನಿ!

ಜೋಯಿಸ :— ಮತ್ತ್ಯಾರಿಗೂ....

ಕೋಸ್ತ :— ಮಾತ್ಕೊಟ್ಬಾಯ್ತುಲ್ರ.... ಖಾಯಂ ತರ್ತೀನಿ (ಹೋಗುತ್ತಾನೆ.)

ಜೋಯಿಸ :— ಶಿವ! ಶಿವ!.... ಗಜಾನನ.... ವಿಘ್ನೇಶ.... ಎಷ್ಟಗ್ಗಕ್ಸಿಕ್ತಪಾ ಉಪ್ಪು! ದೇವಾ ನಿನ್ನ ದಯೆ! ಭಕ್ತವತ್ಸಲಾ!

ಕರುಣಾಕರ ನೀ-
ನಿರದಿರೆ ಶಂಕರ
ದೊರೆವುದೆ ಅಗ್ಗದಿ ಉ....ಪ್ಪಿಂ....ದು?

(ಎಂದು ಹಾಡುತ್ತಾ ಹೋಗುತ್ತಾನೆ.)

೨ ನೆಯ ನೋಟ

(ಜೋಯಿಸರ ಮನೆಯಲ್ಲಿ)

ಜೋಯಿಸ :— (ಹೊಳ್ಳಿಹತ್ತಿ)* ಹಾದನೇ....ಇದ್ದಿಯಾ?

(ಒಳಗಿನಿಂದ) :— "ಸತ್ತೋಯ್ದೆ ಮಾಡ್ಕಂಡ್ರಾ?"

ಜೋಯಿಸ :— ಒಂದ್ಹಂಬ್ನೀರ್ತಕೂ ನೋಡ್ತೊ!

(ಒಳಗಿನಿಂದ) :— "ಕೆರೇಲೇ ಕಾಲ್ತೊಳ್ಕಂಡ್ಬಂದಿದ್ರೆ"

ಜೋಯಿಸ :— ಹಾದಾಗಿತ್ತು; ಮತ್ತೊರ್ತು ಗಾಬ್ರೀಲಿ; ಹ್ಞು....ತಕಂಬಾ!

('ಹಾದನೆ' ಯು ನೀರು ತಂದುಕೊಡುತ್ತಾಳೆ.)

ಜೋಯಿಸ :— (ಕಾಲ್ತೊಳೆದು) ಅಪೇಮನೇಲೆಲ್ಲಾ ಉಪ್ಪೀಗೆ ತಕಂಡೊ ಗುತ್ತಿದ್ದೋ?

ಹಾದನೆ :— ಇಂದೇ ತುಟ್ಯಯ್ತು ಹೇಳ್ತಿದ್ವಪ....ಯಾನೇನ್ ಕೇಳಿದ್ನಿಲ್ಲೆ!

ಜೋಯಿಸ :— ತುಟ್ಯಡಾ?

ಹಾದನೆ :— ನಾಲ್ಕಣೆ ಹೇಳ್ಸದ್ದಿ!

ಜೋಯಿಸ :— (ಕುಳಿತು) ಶಿವ, ಶಿವಾ, ಭಕ್ತವತ್ಸಲಾ!

ಹಾದನೆ :— ಈ ಧಾರ್ಣೇಲಿ ಉಪ್ಪಿಂಬ್ದೇ ಅಲ್ಲ!

---

* ಹೆಂಡತಿಯನ್ನು ಹೀಗೆ ಕರೆಯುತ್ತಾರೆ. ಲೇ.

ಜೋಯಿಸ :— ತುಟ್ಟೀ ಹೇಳಿ ತಿಂಬ್ದ ಬಿಡೂಲಾಗ್ತ? ಅದ್ರಲ್ಲೂ ಉಪ್ಪು! ಈಗೊಂದ್ನಾಟಿ ಹೊಡ್ತಿಕ್ಕಿ ಬಂದ್ಬುಟಿ!

ಹೌದನೆ:—(ಅಣಕಿಸಿ) ಆರಾಣೆ ಧಾರ್ಣೆ ಮಾಡ್ಡೊಳ್ಳಿ ಇಲ್ಲೊ್ಯ.... ಯೆನ್ನಗ್ತಿದ್ದು....ಘೋ....ಳೆ....!!

ಜೋಯಿಸ :— ಆತೊ, ಯಾ ಅಷ್ಟು ಬುದ್ಧಿಗೇಡಿ ಭಗ್ವಂತಪ್ಪ ಮಾಡ್ಕಂಡ್ದ್ಯ? ಧೂರ್ತ್ಯಚಾರ ಮಾಡಿ, ಪಂಚಾಂಗ ನೋಡಿ.... ಯೆನ್ಗೆ ದೇವ್ರು ಬುದ್ಧಿಕೊಟ್ಟಿದ್ನಿಲ್ಲೆ ಹೇಳಿ!

ಹೌದನೆ :— ಹೇಂಗ್ಧಾರ್ಣೆ ಮಾಡ್ತಿರಿ, ಹೇಳಿ!

ಜೋಯಿಸ :— (:ಕಿವಿಯ ಸಮೀಪ ಬಾಯಿತಂದು) ಐದ್ಬಿಲ್ಲಿ!! ಹೇಗಿದ್ದು ಚಾಣಾಕ್ಷ್ಯ!

ಹೌದನೆ :— ಐದ್ಬಿಲ್ಲೀ! ಖಿರ್ಯಾಗೂವ! ಬದ್ದಾವ!

ಜೋಯಿಸ :— ಹೌದೂ ಅಂದೆ! ಯುದ್ಧ........ಎಲ್ಲಾ ಸಾಮಾನೂ ತುಟ್ಟಿ ಹೇಳಿ....ಭವಿಷ್ಯ ಎಲ್ಲಾ ಗುಣ್ಸಿಕ್ಕೀ ಖರೀದೀ ಮಾಡಿದ್ದು!

ಹೌದನೆ :— ಭಾಳ್ಜಲೋ ಆತು! ಅಷ್ಟಗ್ಗ ಕ್ಕೊಡೂಲ್ಯಾರ್ ಸಿಕ್ಕೋನೋಡ್ತಿ!

ಜೋಯಿಸ :— ಹೀಂಗ್ವಿಚಾರಾ ಮಾಡಿ........ ಬೇಲೀ-ಮೇಲ್ಹೋಗಿ....ಏನೇನೋ ಉಪಾಯ, ತಂತ್ರ ಮಾಡಿ....ಎಂತಾ ಅಂಬ್ದು....ಎಲ್ಲದಕ್ಕೂ ಬುದ್ಧಿ ಬೇಕು ನೋಡು!

ಹೌದನೆ :— (ಆನಂದದಿಂದ) ಚೆಲೋದಾತು....ಆಸ್ರೀಗೆಂತಾ-ಅಕ್ಕು ಹೇಳಿ!

ಜೋಯಿಸ :— ಆಸ್ರೀ ಕೊಡ್ಲಕ್ಕು........ಅದೇನ್ಬಿದ್ಹೋ-ಯ್ದಿಲ್ಲೆ....ಅಲ್ಲ....ಈಗ್ನ ದಿವ್ಸ್ದಲ್ಲಿ ತಲೆ ಇಲ್ಲದ್ದೆ ಆಗ್ತ—ಐದ್ಬಿ-ಲ್ಲ್ಯಂತೇ ಖರೀದಿ ಮಾಡಕಾರೆ? .... ಈ ಊರಲ್ಯಾರಿಗಾರೂ ಇಷ್ಟಗ್ಗಕ್ಸಿಕ್ಕಿದ್ದೋ ಹೇಳು?....ಹೇಗೆ ತಲೆ?

ಹೌದನೆ :— ಹುಂ!

ಜೋಯಿಸ :— ನಾಳೇ ಬೇಕ್ಗಾಮುಂಜೆ ಬತ್ತ್ನ ಉಪ್ನವ.... ಉಪ್ಪೊಣ್ಗಿ ಮೂಡೇ ಕಟ್ಟಿಡೊ....ಮೂಡೆ ಕಟ್ಟೋಲೆ ಬಂದರ್ಧ ಆಣೆ ಖರ್ಚಾದ್ರೂ ಲುಕ್ಸಾನಿಲ್ಲೆ....ಐದ್ಬಿಲ್ಯಂತೆ ತರಕಾರೆ.... ಅಚೇ ಮನೇಲಿ ನಾಲ್ಕಾಣೆ ಹೇಳ್ತಿದ್ವ?

ಹೌದನೆ :— ಹುಂ, ಆಸ್ರೀ ತತ್ತೆ!

ಜೋಯಿಸ :— ಹಳ್ಳಾರಿದ್ದಿಲ್ಲೀ ಇನ್ನೂವಾ....ಈ ವರ್ಷಕ್ ಸಾಕಕ್ಕೋ ಹೇಗೆ ಉಪ್ಪು? ಸಾಕಾಗೇಗಿದ್ರೆ....ತಸ್ರ್ಯೋ ಐದ್ಬಿಲ್ಲಿ-ಗ್ಸಿಕ್ಕೀಗಿದ್ರೆ ಆರ್ಬಿಲ್ಲಿಕೊಟ್ಟು ಮಾಯ್ದೀಯ!....ಬೇಕೋಹೇಗೆ?

ಹೌದನೆ :— ಅತೊ! ಎಷ್ಟೊತ್ತಾತು ಪುರಾಣ ಮುಗದ್ದೀ ಇಲ್ಲೆ?

ಜೋಯಿಸ:—ಅಲ್ಲ....ಐದ್ಬಿಲ್ಲೀಗ್ಕೊಳ್ಗ ತರಕಾರೆ....ನಿನ್ನತ್ರ ಸಾಧ್ಯಿದ್ದೋ ಹೇಳು!

ಹೌದನೆ:— ಸಾಕ್ರೋ....ನಿಂತಲೆ ಭಾಳ್ದೊಡ್ಡೋರೀ! ನಿಮ್ತ-ಲೇಲಿ ಬುದ್ಧಿ ತುಂಬಕಾರೆ, ದೇವ್ರೀಗೆ ಎಷ್ಕಷ್ಟಾತೋಯೇನೊ! ಏನೋ ಎಂಟ್ಕೊಳ್ಗ ಉಪ್ಪರೀದೀ ಮಾಡಿಕೀದ್ವಡ ಹೇಳ್ತೀರ! ಇಟ್ನರಂಗಾದ್ರೂ ನಿಮ್ಮಷ್ಟು ಬುದ್ಧಿಲ್ಯಾ ಯಾರ್ಬಲ!

ಜೋಯಿಸ :— (ತುಸು ಸಪ್ಪಗಾಗಿ) ಸಾಯ್ಲಿಬಿಡು....ಅಕೊ. ಯಾರೋ ಬಂದ್ಹಾಂಗ್ಯಾಣ್ತು....ಬೆಳ್ಕು!

(ಕೋಸ್ತನು ಸೂಡಿಹಿಡಿದು ಬರುತ್ತಾನೆ.)

ಜೋಯಿಸ :— ಯಾರೋ ಅದು?

ಕೋಸ್ತ :— ನಾನೇಯ್ರು!

ಜೋಯಿಸ :— ಕೋಸ್ತನೋ?

ಕೋಸ್ತ :— ಹೌದ್ರು!

ಜೋಯಿಸ :—ಏನು ಈಗ್ಳೀ ಬಂದೆ? ಉಪ್ಪು ತಂದ್ಬಿಟ್ಯೊ?

ಕೋಸ್ತ :— ಐದ್ಬಿಲ್ಲಿ....ಊರಲ್ಲೆಲ್ಲಾ....ಏಕ್ದಂ ನಾಲ್ಕಾಣೆ ಆಗೀದ್ರಿ....

ಜೋಯಿಸ :— ಊರಲ್ಲಿ ಹತ್ರೂಪ್ಯಾ ಆದ್ರೂ ನೀ ಮಾತ್ಕೊ-ಟ್ಟದ್ದು ಐದ್ಬಿಲ್ಲಿ!

ಕೋಸ್ತ :— ನೀವೇ ನೋಡಿ....ಊರಲ್ಲ್ಯರೂ ತಕತ್ರು.... ಆದ್ರೆ....ನಿಮ್ಗ ಮಾತ್ಕೊಟ್ಟದ್ದು ಹೇಳಿ....

ಜೋಯಿಸ :— ಮಾತ್ಕೊಟ್ರೆ ಆಯ್ತು, ಮುತ್ತು ಒಡ್ದ್ಹೋಯ್ತು....ನಾಳೀಗ್ತಕಂಬಾ....

ಕೋಸ್ತ:—ನಾಲ್ಕಾಣೆ ಧಾರ್ಣಿ ಇರ್ವಾಗ....ಐದ್ಬಿಲ್ಲಿ ಅಂದ್ರೆ.... ಬಡ್ವ ನಾನು....!

ಜೋಯಿಸ :— ನಾವೇನು ಕುಬೇರ್ನ ಮೊಮ್ಮಕ್ಳೊ? ಆಡ್ದ-ಮಾತ್ನಂತೇ ತಕಂಬಾ ನಾಳೀಗೆ!

ಕೋಸ್ತ :— ಹಾಗಾರೆ ಮಾತ್ಕೊಟ್ಟದ್ದಕ್ಕೆ ನಿಮ್ಗೊಂದೇ ಕೊಳ್ಗ....

ಜೋಯಿಸ :— ವ್ಹ! ವ್ಹ! ಛುದ್ವಂತ! ಏಳೆಂಟ್ಕೊಳ್ಗಾನೂ ತರ್ತೆ ಹೇಳಿ....ಈಗ ಒಂದು! ಪ್ಶ್.

ಕೋಸ್ತ :— ನಾಯೆಲ್ಬುದ್ವಂತ್ನರಿ?.... ಮುತ್ಯಾರಾದ್ರೂ ಆಗಿದ್ರೆ ನಿಮ್ಗೆ ಮೋಕಾ ತೋರ್ಸೂಕೂ ಬರದ್ದ, ನಾಲ್ಕಾಣ್ಯಂತೆ ಮಾರ್ತಿದ್ರು; ನಾ ಮಾತ್ರ....

ಜೋಯಿಸ:— ನೀ ಅಂದ್ರೆ ಹರಿಶ್ಚಂದ್ರ! ಸಾಕು ನಡೆ.... ನಾಯಾರು ಗುತ್ತದ್ಯಲೊ?

(ಜನಿವಾರದ ಮೇಲೆ ಕೈಯಾಡಿಸುತ್ತಾರೆ.)

ಕೋಸ್ತ :— ಅದ್ಕೀ ಬಂದದ್ರು....ಕಾಲೀಗ್ಬೀಳ್ತೆ....ಮೂರಾಣೆ ನಾದ್ರೂ....

ಜೋಯಿಸ :— ಆಯ್ತು! ಐದ್ಬಿಲ್ಲಿ ಮೇಲೆ ಒಂದ್ಕಾಸೂ ಕೊಡೂದಿಲ್ಲ....ಮಾತ್ಕೊಟ್ಟಿದ್ದೀ, ಎಚ್ರಿಕೆ!

ಕೋಸ್ತ :— ನೀವೆಷ್ಟಂದೂ ಒಡ್ಯಾ....ಬಡ್ವ್ನ ಹೊಟ್ಟೀ ಮೇಲೆ ಕಾಲು....

(೨೬ನೆಯ ಪುಟ ನೋಡಿರಿ.)

ಭಾರತದ ಜಾತಿಸಮಸ್ಯೆ

(ಪರಿಸ್ಥಿತಿ ವಿಮರ್ಶೆ)

★

ಶ್ರೀಮಾನ್ ಸಿ. ಬಿ. ಬೆಲ್ಲದ, ಇಟಗಿ

ಜಾತಿಸಮಸ್ಯೆಯೆಂಬುದಿದು ಎಂದೂ ಯಾರಿಂದಲೂ ಬಿಡಿಸಲಾರದಂತಹ ಕಗ್ಗಂಟಿನ ಬಲೆಯಲ್ಲ; ಆದರೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕದ ಹೊರತು ಈ ಸಮಸ್ಯೆಯನ್ನು ಬಿಡಿಸುವುದಕ್ಕೂ ಸಾಧ್ಯವಿಲ್ಲ !

★

ಪೂರ್ವಕಾಲದಲ್ಲಿ ಹೆಮ್ಮೆಯಿಂದ ಮೆರೆದ ಭಾರತದ ರಾಷ್ಟ್ರಪುರುಷನಿಂದು, ಜಾತಿದ್ವೇಷ ರೋಗಪೀಡಿತನಾಗಿ ಸ್ವತಂತ್ರನಾಗಿ ಬಾಳಲು ಶಕ್ತಿಯಿಲ್ಲದೆ, ಪರಾಧೀನನಾಗಿ ತನ್ನ ಜೀವನ ಸಾಗಿಸುವ ದುರ್ಧರಪ್ರಸಂಗ ಒದಗಿದೆ. ಈ ಮಹತ್ತರ ವ್ಯಾಧಿಯಿಂದ ಅವನು ಮುಕ್ತನಾಗುವುದೆಂದು? ಅದಕ್ಕೆ ತಕ್ಕ ಔಷಧಿಯಾವುದು?—ಎಂಬ ವಿಚಾರತರಂಗಗಳು ಪ್ರತಿಯೊಬ್ಬ ಸುಜ್ಞ ಭಾರತೀಯನ ಎದೆಯನ್ನು ಕದಡದಿರವು.

ದಿವಂಗತರಾದ **ಲೋಕಮಾನ್ಯ ಟಿಳಕ, ಪಂ. ಮೋತೀಲಾಲ ನೆಹರು, ಡಾ. ಅನ್ಸಾರಿ** ಮೊದಲಾದ ಭಾರತ ಸುಪುತ್ರರು, ಜಾತಿಗಳ ಐಕ್ಯಕ್ಕಾಗಿ ತಮ್ಮ ಜೀವನವನ್ನೇ ನವೆಯಿಸಿ ಕೀರ್ತಿಶೇಷರಾದರು. ಪ್ರಸ್ತುತ ಪೂಜ್ಯ ಗಾಂಧೀಜಿಯವರು ಇದಕ್ಕಾಗಿ ಎಷ್ಟೊಂದು ಶ್ರಮಿಸುತ್ತಲಿದ್ದಾರೆಂಬುದು ಸರ್ವಶ್ರುತವಾದುದು. ಇವರೆಲ್ಲರ ಪ್ರಯತ್ನಗಳ ಪರಿಣಾಮವಾಗಿ, ಮೊದಲಿನ ಪರಿಸ್ಥಿತಿಯಲ್ಲಿ ಕೆಲಮಟ್ಟಿಗಾದರೂ ಸುಧಾರಣೆಯಾಗಬೇಕಾಗಿದ್ದಿತು; ತದ್ವಿರುದ್ಧವಾಗಿ ಜಾತೀಯ ದ್ವೇಷಭಾವನೆಯು ಈಗ ವಿಕೋಪಕ್ಕೆ ಹೋಗಿ, ಮುಸ್ಲಿಮರು ಭಾರತದ ಭಾಗವನ್ನೊಂದು ತಮಗೆ ಪ್ರತ್ಯೇಕವಾಗಿ ಕಡಿದುಕೊಡಬೇಕೆಂದು ಕೇಳುವ ಮಟ್ಟಕ್ಕೆ ತಲುಪಿದೆ. ಈ ಜಾತಿಭಾವನೆಯು ಆದರಲ್ಲಿಯೂ ಹಿಂದು-ಮುಸ್ಲಿಮರ ದ್ವೇಷವು ಪರಂಪರಾಗತವಾಗಿ ಬೆಳೆಯುತ್ತ ಬಂದು, ಇಂದು ಈ ವಿರಾಟಸ್ವರೂಪವನ್ನು ತಾಳಿರುವುದೇ, ಅಥವಾ ಮಧ್ಯದಲ್ಲಿಯೆ ಯಾವುದೋ ಒಂದು ಆಗಂತುಕ ಕಾರಣದ ಮೂಲಕ ಇಷ್ಟೊಂದು ಉಲ್ಬಣಾವಸ್ಥೆಗೆ ಬಂದುದೇ? ಇದಕ್ಕೆ ಪರಿಹಾರೋಪಾಯಗಳು ಏನಾದರೂ ಇರುತ್ತವೆಯೆ?—ಎಂಬ ಪ್ರಶ್ನಮಾಲಿಕೆಗಳು ಸಹಜವಾಗಿ ತಲೆದೋರುತ್ತವೆ. ಇವುಗಳ ಆಕಲನವಾಗುವುದಕ್ಕಾಗಿ ಭಾರತದ ಪ್ರಾಚೀನ · ಅರ್ವಾಚೀನ ಇತಿಹಾಸ, ಆಗಿನ ಭಾರತೀಯರ ಸಮಾಜವ್ಯವಸ್ಥೆ ಇವುಗಳ ಕಡೆಗೆ ವಿಹಂಗಮಾವಲೋಕನ ಮಾಡುವುದವಶ್ಯವು.

ವೇದಕಾಲೀನ ಆರ್ಯಧರ್ಮವು ಸರ್ವಸಂಗ್ರಾಹಿಯಾದುದು; ಅದು ಈಗಿನಂತೆ ಜಾತಿಪ್ರಧಾನವಾಗಿರದೆ ವರ್ಣಪ್ರಧಾನವಾಗಿದ್ದಿತು. ಆಗಿನ ಕಾಲದಲ್ಲಿ ಹುಟ್ಟಿನಿಂದ ಯಾರೊಬ್ಬರೂ ಕೀಳು-ಮೇಲೆಂದು ಎಣಿಸಲ್ಪಡುತ್ತಿದ್ದಿಲ್ಲ. ಯೋಗ್ಯತಾಸಂಪನ್ನರು ತಮ್ಮ ಗುಣ-ಶೀಲ-ಕರ್ತೃತ್ವಶಕ್ತಿಗಳಿಂದ ಜನತೆಯ ಮನ್ನಣೆಯನ್ನು ಸಂಪಾದಿಸುತ್ತಿದ್ದರು. ಋಷಿಮೂಲ-ನದಿಮೂಲಗಳನ್ನು ಕೇಳಬಾರದೆಂಬ ನಾಣ್ನುಡಿಯು ಈ ವಿಚಾರಸರಣಿಯನ್ನು ಸಮರ್ಥಿಸುತ್ತದೆ. ಈ ಬಗೆಯ ಉದಾತ್ತಭಾವನೆಯುಳ್ಳವರಾದುದರಿಂದಲೇ ಆರ್ಯರು, ಇಲ್ಲಿಯ ಮೂಲನಿವಾಸಿಗಳಾದ ದ್ರಾವಿಡರಿಂದ ಅದೆಷ್ಟೋ ವಿರೋಧವಾದರೂ ಲೆಕ್ಕಿಸದೆ, ಅವರ ಮೇಲೆ ತಮ್ಮ ಪ್ರಭಾವವನ್ನು ಬೀರಲು ಸಮರ್ಥರಾದರು. ಹೀನ ಕುಲದವನಾದ **ದ್ರಾವಿಡ ವಾಲ್ಮೀಕಿಯು** ಋಷಿಪದವಿಗೇರಿ ಆರ್ಯರಿಂದ ವಂದಿತನಾದನು. ಹೀಗೆ ತುಸುದಿನಗಳಲ್ಲಿಯೆ ಆರ್ಯ-ದ್ರಾವಿಡ ಧರ್ಮ-ಸಂಸ್ಕೃತಿಗಳೆರಡೂ ಗಂಗಾ ಯಮುನೆಗಳಂತೆ ಏಕರೂಪವಾಗಿ ಹರಿಯತೊಡಗಿದುವು. ಅನಂತರ ಈ ದೇಶದ ಮೇಲೇರಿ ಬಂದ **ಶಿಥಿಯನ್ನರು, ಹೂಣರು** ಮೊದಲಾದ ಪರದೇಶದ ಪರಧರ್ಮಿಯರು, ಈ ವಿಶಾಲವಾದ ಆರ್ಯಧರ್ಮ ಜಲನಿಧಿಯಲ್ಲಿ ತಮ್ಮ ನಿಜರೂಪವನ್ನು ಕಳೆದುಕೊಂಡು ಏಕರೂಪರಾದರು.

ಆದರೆ ಮುಂದಿನವರು ಆರ್ಯರ ಈ ಸರ್ವಾಂಗಸುಂದರವಾದ ಧರ್ಮ— ವರ್ಣವ್ಯವಸ್ಥೆಗಳ ಅರ್ಥವನ್ನು ಸಂಕುಚಿತಗೊಳಿಸುತ್ತ ಹೋದದ್ದರಿಂದ, ಚಾತುರ್ವರ್ಣಗಳಿಗೆ ಜಾತೀಯರೂಪವು ಬಂದು, ಮೇಲು-ಕೀಳುಗಳೆಂಬ ಭಾವನೆಯು ಉದಯಿಸಿತು. ಗುಣ-ಶೀಲಗಳಿಗೆ ಪ್ರಾಧಾನ್ಯವುಳಿಯದೆ ಜಾತಿಗೆ ಮಹತ್ತ್ವವು ಪ್ರಾಪ್ತವಾಯಿತು. ಈ ಜಾತಿ-ಜಾತಿಗಳ ಮೇಲು-ಕೀಳುಗಳ ಭಾವನೆಯು ಬೆಳೆದಾಗ, ಜ್ಞಾನವು ತೇಜೋಹೀನವಾಗಿ ಕರ್ಮವು ಮುಂದುವರಿದಾಗ, ಬಂಧುತ್ವ-ಸಮತೆಗಳನ್ನು ಬೀರುವ ಬೌದ್ಧಧರ್ಮವು ತಲೆದೋರಿ ಸ್ವಲ್ಪಾವಧಿಯಲ್ಲಿಯೇ ಹಬ್ಬಿ ಹರಿದಿದ್ದಿತು. ಇದರಿಂದ ಭಾರತದ ಪ್ರಕೃತಿಯು ವಿಶ್ವಬಾಂಧವ್ಯ-ಸಮತೆಗಳಿಗೆ ಅದೆಷ್ಟು ಅನುಕೂಲವಾಗಿದೆಯೆಂಬುದು ಸ್ಪಷ್ಟವಾಗುತ್ತದೆ; ಆದರೆ ಬೌದ್ಧಧರ್ಮದ ನಾಸ್ತಿಕವಾದವು ಆಸ್ತಿಕರಾದ ಭಾರತೀಯರ ಮನವನ್ನು ಹಿಡಿಯುವಂತಿರಲಿಲ್ಲ. ಇದನ್ನರಿತು ಈ ನ್ಯೂನತೆಗೆ ಹೆಚ್ಚು ಪ್ರಾಧಾನ್ಯಕೊಟ್ಟು, ಆಗಿನಕಾಲದ ಹಿಂದು ಆಚಾರ್ಯರು ಬೌದ್ಧಧರ್ಮವನ್ನು ತಡೆಗಟ್ಟಲು ಸಮರ್ಥರಾದರು. ಅವರ ಪ್ರಯತ್ನದಿಂದ ಪುನಃ ಹಿಂದುಧರ್ಮವು ತಲೆಯೆತ್ತಿ ನಿಂತಿತಾದರೂ ಅದು ತೇಜೋಹೀನವಾಗಿದ್ದಿತು; ಪೂರ್ವದ ಶಕ್ತಿ-ಸಾಮರ್ಥ್ಯಗಳನ್ನು ಕಳೆದುಕೊಂಡಿದ್ದಿತು. ಅಂತೆಯೇ ಮುಂದೆ

ಈ ದೇಶದ ಮೇಲೇರಿ ಬಂದು ಕಡೆಗೆ ಇಲ್ಲಿಯೇ ನೆಲಸಿದ ಪರಕೀಯರ—ಪ್ರಾಮುಖ್ಯವಾಗಿ ಮುಸ್ಲಿಮ್ ಧರ್ಮದವರ–ಸಂಸ್ಕೃತಿಗಳನ್ನು ಅರಗಿಸಿಕೊಂಡು ಏಕರೂಪವಾಗಲು ಶಕ್ಯವಾಗಲಿಲ್ಲ. ಅಂದಿನಿಂದ ಮುಸ್ಲಿಮರು ನಮಗೆ 'ಮ್ಲೇಂಛ' ರಾಗಿಯೇ ಉಳಿದಿದ್ದಾರೆ. ಇವೆರಡು ಧರ್ಮಗಳ ಐಕ್ಯಕ್ಕಾಗಿ ಇದುವರೆಗೆ ಮಾಡಿದ ಪ್ರಯತ್ನಗಳು ಕೆಲಮಟ್ಟಿಗೆ ಯಶಸ್ವಿಯಾಗಿದ್ದರೂ ಪೂರ್ಣ ಫಲಪ್ರದವಾಗಿಲ್ಲ; ಇನ್ನುಮುಂದಾದರೂ ಸಾಧ್ಯವಾಗುವ ಸಂಭವವಿಲ್ಲವೆಂದು, ಸದ್ಯದ ಪರಿಸ್ಥಿತಿಯ ಮೇಲಿಂದ ಕೆಲವರು ಅನುಮಾನಮಾಡುತ್ತಿದ್ದಾರೆ.

ಈ ಸಂದೇಹಗ್ರಸ್ತ ಕನ್ನಡಕಗಳನ್ನು ಧರಿಸಿ ನೋಡುವವರಿಗೆ ಭವಿಷ್ಯವು ಅಂಧಕಾರಮಯವಾಗಿ ತೋರುವಂತೆ, ಭೂತಕಾಲದ ಹಿಂದು-ಮುಸ್ಲಿಮ್ ಚಟುವಟಿಕೆಗಳೆಲ್ಲವೂ ಕೇವಲ ಧರ್ಮದ್ವೇಷ ಪೂರಿತವಾಗಿ ತೋರುತ್ತವೆ. ಕ್ಷುಲ್ಲಕವಾದ ಹಿಂದು-ಮುಸ್ಲಿಮ್ ಮತಭೇದಗಳು ಭಯಂಕರ ಸ್ವರೂಪವನ್ನು ತಾಳಿ, ಅವರನ್ನು ಮತ್ತಿಷ್ಟು ವಿಹ್ವಲಗೊಳಿಸುತ್ತವೆ. ಅಂತೆಯೆ ಹಿಂದುಸ್ಥಾನದ ಮೇಲೆ ದಂಡೆತ್ತಿಬಂದ **ಮುಹಮ್ಮದ್ ಬಿನ್ ಕಾಶೀಮ, ಗಝ್ನಿನಿ ಮಹಮೂದ್** ಮೊದಲಾದವರನ್ನು ಹಿಂದುಗಳು ಎದುರಿಸಿದ ಉದ್ದೇಶಕ್ಕೂ, ಸ್ವದೇಶಸಂರಕ್ಷಣೆಯ ಬದಲು ಜಾತಿದ್ವೇಷದ ಬಣ್ಣವನ್ನವರು ಬಳಿಯುತ್ತಿದ್ದಾರೆ. ಅದರಂತೆ ಪರಕೀಯ ಸತ್ತೆಯನ್ನು ಎದುರಿಸಿ ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು **ರಜಪೂತ, ಮರಾಠಾ** ಮೊದಲಾದವರು ಮಾಡಿದ ಪ್ರಯತ್ನಗಳಲ್ಲಿಯೂ ಇವರಿಗೆ ಜಾತಿಭೂತವೆ ಕಂಡು ಬರುತ್ತದೆ. ಈ ವಿಧಾನಗಳು, '**ಪೋರಸ**ರಾಜನು ಗ್ರೀಸ್ ದೇಶದ ಸಿಕಂದರನನ್ನು ಎದುರಿಸಿದುದೂ ಅದರಂತೆ ಹಿಂದೀಯರು ಇಂಗ್ಲಿಷರನ್ನು ಹೊರದೂಡಲು ಯತ್ನಿಸುತ್ತಿರುವುದೂ ಜಾತಿದ್ವೇಷದ ಮೂಲಕವಾಗಿಯೇ' ಎಂದು ಪ್ರತಿಪಾದಿಸುವಷ್ಟೇ ಹಾಸ್ಯಾಸ್ಪದವಾಗಿವೆ. ಒಟ್ಟಿಗೆ ಇದರ ಮಥಿತಾರ್ಥವಿಷ್ಟೇ: ಬಹುದಿನಗಳಿಂದಲೂ ಮೇಲಿಂದ ಮೇಲೆ ಹಿಂದು-ಮುಸ್ಲಿಮ್ ಕಲಹಗಳು ಆಗುತ್ತ ಬಂದಂತೆ ಕಂಡುಬಂದರೂ, ಹಲವರ ಭಾವನೆಯಂತೆ ಅವು ಜಾತಿದ್ವೇಷಪ್ರಧಾನವಾಗಿರಲಿಲ್ಲ. ಮೊದಮೊದಲು ಅವು ಆಕ್ರಮಣಗಾರರನ್ನು ಎದುರಿಸಬೇಕೆಂಬ ಸ್ವದೇಶ ಸ್ವಾತಂತ್ರ್ಯಾಭಿಮಾನ ಪ್ರೇರಿತವಾಗಿದ್ದುವು! ಅನಂತರ ಅನಿಯಂತ್ರಿತ ರಾಜಸತ್ತೆಯನ್ನು ಎದುರಿಸಲು ಮಾಡಿದ ಪ್ರಜೆಗಳ ಪ್ರಯತ್ನಗಳ ದ್ಯೋತಕವಾಗಿದ್ದುವು. ಈಗ ಮಾತ್ರ ಅವು ಆಯಾ ಕೋಮುಗಳ ಮುಖಂಡರ ಸ್ವಾರ್ಥಪೂರ್ತಿಯ ಸಾಧನೆಗಳಾಗಿ ಪರಿಣಮಿಸಿವೆ. ಮಧ್ಯಕಾಲದಲ್ಲಿ ಇತರ ರಾಷ್ಟ್ರಗಳಲ್ಲಿಯಂತೆ ಇಲ್ಲಿಯೂ ಜಾತಿದ್ವೇಷದ ಭಾವನೆಯ ಗಾಳಿಯು ಸುಳಿದುದೇನೋ ನಿಜ; ಅದಕ್ಕಾಗಿ ಇಷ್ಟೊಂದು ಭಯಪಡಬೇಕಾಗಿಲ್ಲ. ಯುರೋಪ್‌ನಲ್ಲಿಯ **ರೋಮನ್ ಕ್ಯಾಥೊಲಿಕ್–ಪ್ರೊಟೆಸ್ಟಂಟ್** ಪಂಥಗಳಲ್ಲಿಯ ಧಾರ್ಮಿಕಕಲಹವು ನಮ್ಮಲ್ಲಿಗಿಂತ ಅದೆಷ್ಟೋ ಪಾಲು ತೀವ್ರತರವಾಗಿತ್ತೆಂಬುದು ಇತಿಹಾಸವನ್ನರಿತ ಪ್ರತಿಯೊಬ್ಬರೂ ಬಲ್ಲ ವಿಷಯ. ಪಶ್ಚಿಮ ದಿಗಂತದಲ್ಲಿಯ ಆ ಜಾತೀಯ ಕಾರ್ಮೋಡಗಳು ಇಂದು ಬಯಲಾಗಿ, ಪ್ರಗತಿಸೂರ್ಯನು ಪೂರ್ಣಪ್ರಕಾಶದಿಂದ ತೊಳಗುತ್ತಿಲ್ಲವೆ? ಎಂದಮೇಲೆ ಧಾರ್ಮಿಕ, ಸಾಮಾಜಿಕ ಉಜ್ವಲ ಪರಂಪರೆಯುಳ್ಳ ನಾವೇಕೆ ಹೀಗೆ ನಿರಾಶೆಯಿಂದ ಉಸಿರ್ಗರೆಯಬೇಕು? ಹಿಂದಿನ ಸಾಮ್ರಾಜ್ಯಶಾಹಿ ಧರ್ಮಾಂಧತೆಯ ಕಾಲವು ಕಳೆದು ಹೋಗಿದೆ. ಆಳರಸರಿಂದ ಪ್ರೋತ್ಸಾಹಿತರಾದ ಈ ಸ್ವಾರ್ಥಸಾಧಕ ಜಾತೀಯ ಮುಖಂಡರನ್ನೂ ಪರಕೀಯ ಸತ್ತೆಯನ್ನೂ ನೂಕಿ ಮುಂದುವರಿದರಾಯಿತು; ಭಾರತದ ಐಕ್ಯದ ಪ್ರಗತಿಸೂರ್ಯನ ದರ್ಶನವು ತಾನಾಗಿಯೆ ಲಭಿಸುವುದು! ಭಾರತದ ಪ್ರಗತಿಯ ಅರುಣೋದಯದ ಮುಂಗುರುಹುಗಳೋ ಎನ್ನುವಂತೆ, **ಸ್ವಾಮಿ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ ಘೋಷ** ಮೊದಲಾದ ಹಿಂದು ದಾರ್ಶನಿಕರು ಇಂದು ವೇದಕಾಲದ ಋಷಿಪ್ರಣೀತ ಸರ್ವಧರ್ಮಸಮನ್ವಯ ತತ್ತ್ವವನ್ನು ಸಾರುತ್ತಿದ್ದಾರೆ. ಅವರಿಗೆ ಬೆಂಬಲಿಗರಾಗಿ **ಧರ್ಮಾತ್ಮಾ ಮಾಲವೀಯ, ಮಹಾತ್ಮಾ ಗಾಂಧಿ** ಮೊದಲಾದ ಮುಖಂಡರೂ, ಅವರಂತೆ ಮುಸ್ಲಿಮರಲ್ಲಿ **ಮೌಲಾನಾ ಅಬುಲ್ ಕಲಮ್ ಅಝಾದ್, ಅಬ್ದುಲ್ ಗಫರಖಾನ್** ಮೊದಲಾದವರೂ ಜನಮತವನ್ನು ಹೊಸಪರಿಸ್ಥಿತಿಗೆ ತಕ್ಕಂತೆ ಅನುಗೊಳಿಸುತ್ತಿದ್ದಾರೆ. ಇವರೆಲ್ಲರ ಪ್ರಯತ್ನಗಳು ಸಫಲವಾಗಿ, ಭಾರತದ ಕ್ಷಿತಿಜದಲ್ಲಿ ಹರಡಿದ ಜಾತಿದ್ವೇಷದ ಕಾರ್ಮೋಡಗಳು ಇಷ್ಟರಲ್ಲಿಯೇ ಬಯಲಾಗಿ, ಐಕ್ಯರವಿಯು ಉದಯವಾಗಬಹುದಾಗಿದ್ದಿತು! ಆದರೆ ಕೃಷ್ಣನ ಸುದರ್ಶನಚಕ್ರದಂತೆ ಪರಕೀಯರ ಸತ್ತೆಯು ಇದಕ್ಕೆ ತಡೆಯಾಗಿ ನಿಂತಿದೆ!

'ವಿಭಾಗಿಸಿ ಆಳು (Divide & Rule)' ಎಂಬ ತತ್ತ್ವಕ್ಕನುಸರಿಸಿ ಇಂದಿನ ಸರಕಾರದವರು ಕೋಮುವಾರು ಪ್ರಾತಿನಿಧ್ಯ, ವಿಶಿಷ್ಟ ಕೋಮಿನವರಿಗೆ ವಿಶೇಷ ಹಕ್ಕು, ಮೊದಲಾದುವುಗಳನ್ನು ಕೊಟ್ಟದ್ದರಿಂದ, ಜಾತಿಸಂಘಟನೆಗೆ ಸ್ವಾಭಾವಿಕವಾಗಿಯೆ ಮಹತ್ತ್ವವು ಪ್ರಾಪ್ತವಾಗಿದೆ. ಇತರ ಉದ್ಯೋಗ ಮಾಡಲಾಸ್ಪದವಿಲ್ಲದ್ದರಿಂದ ಇಂದಿನ ಕೆಲವು ಸುಶಿಕ್ಷಿತರು ಸರಕಾರದ ಈ ಬಗೆಯ ಧೋರಣದ ಲಾಭ ತೆಗೆದುಕೊಂಡು, ನಿರಕ್ಷರಿಗಳಾದ ಬಹುಜನಸಮಾಜದಲ್ಲಿ ಜಾತೀಯ ಭಾವನೆಯನ್ನು ಉದ್ರೇಕಗೊಳಿಸಿ, ತಮ್ಮದೊಂದು ಪಂಗಡವನ್ನು ಕಟ್ಟಿಕೊಂಡು ಕೌನ್ಸಿಲು, ಅಸೆಂಬ್ಲಿಗಳಲ್ಲಿ ಸ್ಥಾನ-ಮಾನಗಳನ್ನೂ, ನೌಕರಿಗಳನ್ನೂ ಸಂಪಾದಿಸುತ್ತಿದ್ದಾರೆ; ಮತ್ತು ತಮ್ಮ ಸ್ವಾರ್ಥಸಾಧನೆಗಾಗಿ, ನೌಕರಿಯ ಬೇಟೆಗಾಗಿ, ಇನ್ನಿತರ ಪಂಗಡದವರೊಡನೆ ಬೆಕ್ಕು-ನಾಯಿಗಳಂತೆ ಸ್ಪರ್ಧಿಸುತ್ತಿದ್ದಾರೆ. ಆಳರಸರೂ ಇವರಿಗೆ ಬೆಂಬಲಿಗರಾಗಿದ್ದಾರೆ. ಮುಸ್ಲಿಮರು ಬಹು ಸಂಖ್ಯಾಕರಿದ್ದ ಐದು ಪ್ರಾಂತಗಳಲ್ಲಿ ನಾಲ್ಕು ಪ್ರಾಂತಿಕ ಸರಕಾರಗಳು

ಕಾಂಗ್ರೆಸ್ ಧೋರಣೆಗೆ ಅನುಕೂಲವಾಗಿದ್ದರೂ, ಸರಕಾರಕ್ಕೆ "ಮುಸ್ಲಿಮ್-ಲೀಗು" ಮುಸ್ಲಿಮ್‌ರ ಏಕಮೇವ ಪ್ರಾತಿನಿಧಿಕ ಸಂಸ್ಥೆಯಾಗಿ ತೋರುತ್ತದೆ. ಮುಸ್ಲಿಮ್ ಧರ್ಮದ ಗುರುವರ್ಗದಲ್ಲಿ ಜನಿಸಿ, ಧರ್ಮಪದ್ಧತಿಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವ **ಮೌಲಾನಾ ಅಬುಲ್ ಕಲಮ್ ಅಝಾದರ** ಬದಲು, ಪಾಶ್ಚಾತ್ಯಸಂಸ್ಕೃತಿಯನ್ನೇ ಮೈಗೂಡಿಸಿಕೊಂಡ **ಡಾ. ಜಿನ್ನಾ**ರವರು ಮಹಮ್ಮದೀಯರ ಪ್ರತಿನಿಧಿಗಳೆಂದು ಭಾವಿಸಲ್ಪಡುತ್ತಿದ್ದಾರೆ! ತಮ್ಮ ಸಮಾಜದ ಹೆಸರನ್ನು ಮುಂದೆ ಮಾಡಿ ತಮಗೊಂದು ಉನ್ನತಸ್ಥಾನವನ್ನಪೇಕ್ಷಿಸುವ **ಡಾ. ಅಂಬೇಡಕರ**ರು ಹರಿಜನರ ಪ್ರತಿನಿಧಿಗಳು. ತಮ್ಮ ಸಮಾಜದ ಉನ್ನತಿಗಾಗಿ ಇವರು ಮಾಡುತ್ತಿರುವ ಪ್ರಯತ್ನಗಳಾವುವೋ ತಿಳಿಯದು. ನಾಮಶೇಷವಾಗಿದ್ದ ಬ್ರಾಹ್ಮಣೇತರ ಪಕ್ಷದ ಮುಖಂಡರಿಗೂ ಇನ್ನೂ ಸರಕಾರದಲ್ಲೊಂದು ಸ್ಥಾನವಿದೆ. ಈ ರೀತಿ ಆಯಾ ಕೋಮುಗಳಲ್ಲಿಯ ಸ್ವಯಂಭೂ ಮುಖಂಡರು, ಸರಕಾರದ ಬೆಂಬಲದಿಂದ ಅಶಿಕ್ಷಿತ ಸಮಾಜಬಾಂಧವರಲ್ಲಿ ತಮ್ಮ ಸ್ವಾರ್ಥಸಾಧನೆಗಾಗಿ ಹರಡಿದ ಜಾತಿದ್ವೇಷದ ಬೀಜಗಳ ಪರಿಣಾಮವಾಗಿ, ಅಲ್ಲಲ್ಲಿ ಹಿಂದು-ಮುಸ್ಲೀಮ್ ದಂಗೆಗಳಾಗುತ್ತವೆ; ರಕ್ತದ ಕಾಲುವೆಯು ಹರಿಯುತ್ತದೆ. ತಮ್ಮ ಕಾರ್ಯಸಾಧನೆಗಾಗಿ ಈ ಮುಖಂಡರು, ಭೂತಕಾಲದ ಇತಿಹಾಸಕ್ಕೂ ತಮಗಿಷ್ಟ ಕಂಡ ಬಣ್ಣ ಬಳಿಯಲು ಹಿಂಜರಿಯುವುದಿಲ್ಲ! **ಶ್ರೀಶಿವಾಜಿ ಮಹಾರಾಜನು ಸ್ವಾಮಿ ರಾಮದಾಸರ** ಶಿಷ್ಯತ್ವವನ್ನು ಸ್ವೀಕರಿಸಿದ್ದುದು ಐತಿಹಾಸಿಕ ಸತ್ಯವಾದರೂ, ಇಂದು ಬ್ರಾಹ್ಮಣೇತರರು ಅದನ್ನು ಚಿತ್ರಪಟದಲ್ಲಿ ಕೂಡ ನೋಡಿ ಸಹಿಸದಷ್ಟು ಅಸಹಿಷ್ಣುಗಳಾಗಿದ್ದಾರೆ. ('ಭಗವಾ ಝೆಂಡಾ' ಎಂಬ ಚಿತ್ರಪಟದಲ್ಲಿ, ಶಿವಾಜಿ ಮಹಾರಾಜನು ಸ್ವಾಮಿ ರಾಮದಾಸರಿಗೆ ನಮಸ್ಕರಿಸಿದ ದೃಶ್ಯದ ಬಗ್ಗೆ ಮರಾಟಿಗರು ಆಕ್ಷೇಪ ತಗೆದುಕೊಂಡು ಅದನ್ನು ಮುಂದೆ ತೋರಿಸದಂತೆ ತಡೆದರು.)

ಹಿಂದಿನವರು ಧರ್ಮದ ಅಂಧಶ್ರದ್ಧೆಯ ಮೂಲಕ ಕೆಲಮಟ್ಟಿಗೆ ಜಾತಿ-ಜಾತಿಗಳ ಬೆಳವಣಿಗೆಗೆ ಉತ್ತೇಜನ ಕೊಟ್ಟಿದ್ದೇನೋ ನಿಜ; ಆದರೆ ಧಾರ್ಮಿಕ ವಿಧಿ-ವಿಧಾನಗಳನ್ನೇ ಅರಿಯದ ಇಂದಿನ ಸುಶಿಕ್ಷಿತರೂ ತಮ್ಮ ಸ್ವಾರ್ಥಸಾಧನೆಗಾಗಿ ತಾವೂ ಧರ್ಮನಿಷ್ಠರ ಸೋಗು ಹಾಕುತ್ತಿರುವುದು ವಿಲಕ್ಷಣವಾಗಿದೆ.

ಕಾಲಚಕ್ರವು ಮುಂದುವರಿಯುತ್ತಿದೆ. ಅದು ಯಾರ ಇಚ್ಛೆ-ಅನಿಚ್ಛೆ, ಇಷ್ಟ-ಅನಿಷ್ಟಗಳನ್ನು ಗಮನಿಸದು. ಅಂತೆಯೇ ಜಾತೀಯ ಐಕ್ಯದ ಮಾರ್ಗದಲ್ಲಿ ಇಷ್ಟೆಲ್ಲ ಎಡರು ತೊಡರುಗಳಿದ್ದರೂ, ಈಚೆಗೆ ಧರ್ಮದ ಅಂಧಾನುಸರಣವು ಕಡಿಮೆಯಾಗಿ, ಉದಾತ್ತ ಭಾವನೆಯು ತಲೆದೋರುತ್ತಿರುವುದು ಸಂತೋಷಪ್ರದವಾಗಿದೆ. ಭಿನ್ನ ಭಿನ್ನ ಜಾತಿಗಳಲ್ಲಿ ಅನ್ನೋದಕ ವ್ಯವಹಾರಗಳೂ, ಅಂತರ್ಜಾತೀಯ ವಿವಾಹಗಳೂ ಆಗುತ್ತಿರುವುದು ಈ ವಿಧಾನಕ್ಕೆ ಸಾಕ್ಷಿಗಳಾಗಿವೆ. ಇಂತಹ ವಿವಾಹಗಳಿಗೆ ಸನಾತನಿಗಳು ಕಣ್ಣ-ಮುಚ್ಚಿಯಂತೆ ತಮ್ಮ ಅನುಮತಿಯನ್ನು ಕೊಡಲೇಬೇಕಾಗಿದೆ. ಹಿಂದೆ **ಲೋ. ಟಿಳಕರು** ಒಂದು ಪ್ರಸಂಗದಲ್ಲಿ ಪರಧರ್ಮೀಯರಲ್ಲಿ ಚಹಾಪಾನ ಮಾಡಿದ ಬಗ್ಗೆ, ಅವರು ಜಾತಿಭ್ರಷ್ಟರಾದರೆಂದು ಸನಾತನಿಗಳು ದೊಡ್ಡ ಗಲಭೆಯನ್ನೇ ಎಬ್ಬಿಸಿಬಿಟ್ಟರು! ಅದರ ವಿಚಾರಣೆಗಾಗಿ **ಶ್ರೀಶಂಕರಾಚಾರ್ಯರು** ಬರಬೇಕಾಯಿತು!! ಈಗ ಅಂತಹ ಸ್ಥಿತಿಯೆಲ್ಲಿದೆ? ಪರಧರ್ಮೀಯರ ಚಹಾಪಾನದಿಂದ ಪವಿತ್ರರಾದ ಜನರಿಲ್ಲದ ಪುಣೆಯ ಸನಾತನಿಗಳ ಮನೆಗಳೆಲ್ಲಿವೆ? ಇವೆಲ್ಲ ಬದಲಿಸುತ್ತಿರುವಂತಹ ಪರಿಸ್ಥಿತಿಯ ಸೂಚಕಗಳಲ್ಲವೆ? ಜನರ ಹೃದಯಾಂತರಾಳದಲ್ಲಿ ಬಹುದಿನಗಳಿಂದ ಬೇರೂರಿದ ಈ ಜಾತೀಯ ಭಾವನೆಯು ಬಯಲಾಗಲು ದಿನಾವಧಿಯಾಗುವುದು ಅಪರಿಹಾರ್ಯ. ಇದರ ನಿವಾರಣೆಗಾಗಿ ಪ್ರಸ್ತುತ ಸರಕಾರದ ಸಹಾಯವನ್ನಪೇಕ್ಷಿಸುವುದು ಅರಣ್ಯರೋದನವೇ ಸರಿ! ಅಲ್ಲದೆ ಬಲುಮೆ ಪ್ರಧಾನವಾದ ಇಂತಹ ದುಮುಕಿನ ಕಾರ್ಯಕ್ರಮಗಳು ಯಶಸ್ವಿಯಾಗುವ ಸಂಭವವೂ ಕಡಿಮೆ!! ನಮ್ಮ ಮಾರ್ಗಮಧ್ಯದಲ್ಲಿ ತಡೆಯಾಗಿ ನಿಂತ ಬಹುಜನ ಸಮಾಜದಲ್ಲಿಯ ನಿರಕ್ಷರತೆ, ಪರಕೀಯರ ಆಳಿಕೆ ಇವನ್ನು ಬದಿಗೆ ಸರಿಸುವುದರಿಂದಲೇ ಪ್ರಗತಿಪಥವು ಸುಗಮವಾಗುವುದು. ಈ ಕಾರ್ಯಗಳಿಗಾಗಿಯೇ ನಮ್ಮ ಪ್ರಯತ್ನಗಳೆಲ್ಲವನ್ನೂ ಕೇಂದ್ರೀಕರಿಸೋಣ! ಆಗ ಮಾತ್ರ ಈ ಸ್ವಯಂಭೂಮುಖಂಡರು ತಮ್ಮ ಗಂಟು-ಮೂಟೆಗಳನ್ನು ಸಾವರಿಸಬೇಕಾಗುವುದು! ಇವರು ಪಾನಮಾಡಿಸಿದ ಜಾತಿದ್ವೇಷ ಮದ್ಯದ ಮದವು ಇಳಿದು, ಬಹುಜನ ಸಮಾಜವು ಶುದ್ಧಿಯ ಮೇಲೆ ಬರುವುದು. ಹಳೆಯ ಧರ್ಮದ ಕಂತೆಗಳನ್ನು ಬಿಸುಟಿ, ವಿಶಾಲ ಮಾನವಧರ್ಮವನ್ನು ಅರಿತು ಆಚರಿಸುವುದು. ನಮ್ಮಾ ಭಾರತವು ಶಾಂತಿ-ಸುಖಗಳ ನೆಲೆವೀಡಾಗುವುದು! ನಮ್ಮ ರಾಷ್ಟ್ರೀಯ ಮುಖಂಡರು ಅದಕ್ಕಾಗಿಯೇ ಇಂಗ್ಲಿಷರಿಗೆ ಹೇಳುತ್ತಿರುವುದು "ಮೊದಲು ನೀವು ಎದ್ದೇಳಿ, ನಿಮ್ಮಿಂದ ತೆರವಾದ ಸ್ಥಾನವನ್ನು ಆಕ್ರಮಿಸಲು ಜಾತಿ ಐಕ್ಯತೆಯು ತಾನಾಗಿಯೇ ಬರುವದು!" ಎಂದು.

ವಿಶ್ವಚಕ್ರವು ಭರದಿಂದ ಮುನ್ನುಗ್ಗುತ್ತಿದೆ! ಜನತೆಗೆ ವಿಶ್ವಬಾಂಧವ್ಯ,ಸಮತೆಗಳ ಭವ್ಯಮಂದಿರದ ಹೊಂಗಳಸಗಳು ದೃಷ್ಟಿಗೋಚರವಾಗುತ್ತಿವೆ. ಇಂತಹ ಸಮಯದಲ್ಲಿ ವಿಶ್ವಚಕ್ರದ ಒಂದು ಅಂಗವಾದ ಭಾರತವು ಮಾತ್ರ ಹಿಂದೆ ಸರಿಯುವುದು ಶಕ್ಯವಿದೆಯೆ? ಭಾರತದ ಭವಿಷ್ಯವು ಉಜ್ವಲವಾಗಿದೆ! ಆಳರಸರೂ ಅವರ ಹಸ್ತಕರಾದ ಜಾತೀಯ ಮುಖಂಡರೂ ತಮ್ಮ ಸ್ಥಾನಭದ್ರತೆಗಾಗಿ ತೋರಿಸುತ್ತಿರುವ ಈ ಜಾತೀಯಭೂತದ ಬೆದರಿಕೆಗೆ ಹೆದರಿ ಧೈರ್ಯಗುಂದಿ ಹಿಂಜರಿಯುವಷ್ಟು ಹಿಂದೀಯರೇನು ಬಾಲ್ಯಾವಸ್ಥೆಯಲ್ಲಿಲ್ಲ!!

ವಿಲಕ್ಷಣ ಸಾಹಸ

ಶ್ರೀ. ಎಸ್. ಕೆ. ಶ್ರೀನಿವಾಸಪ್ರಸನ್ನ, ವಿಶ್ವಮಿತ್ರಸಂಘ

★

ಸುಬ್ಬುವಿನ ಜೀವನಸಮಸ್ಯೆಯೆಂದರೆ ಇಂದು ಭಾರತದ ಸುಶಿಕ್ಷಿತ ತರುಣರೆಲ್ಲರನ್ನೂ ಬಾಧಿಸುವ ಸಮಸ್ಯೆ. ಆದರೆ ಸುಬ್ಬುವಿನಂತೆ ಸತ್ತು ಸಮಸ್ಯೆಯನ್ನು ಬಿಡಿಸಿಕೊಳ್ಳುವ ಹುಚ್ಚುತನವನ್ನು ಯಾರೂ ಮಾಡಲಾಗದು!

★

ಇಂದು ಊರಲ್ಲಿ ಎಲ್ಲೆಲ್ಲೂ ಅದೇ ಮಾತೇ ಕೇಳಬರುತ್ತಿದೆ: ಯಾವನೋ ಒಬ್ಬ ಸಾಹಸಿಯು, ಬೆಂಕಿಹಚ್ಚಿಕೊಂಡು ನೂರು ಅಡಿಗಳ ಮೇಲಿನಿಂದ ಧುಮುಕಿ ಸುರಕ್ಷಿತವಾಗಿರುವನೆಂದರೆ ಯಾರಿಗೆ ತಾನೇ ಆಶ್ಚರ್ಯವಾಗಲಿಕ್ಕಿಲ್ಲ? ಆದುದರಿಂದಲೇ ಈ ಸಾಹಸಕೃತ್ಯವನ್ನು ನೋಡುವುದಕ್ಕಾಗಿ ಜನರು—ತಂಡೋಪತಂಡವಾಗಿ— ಊರಿಗೆ ಬಂದಿದ್ದ ಸರ್ಕಸ್ಸಿಗೆ ನುಗ್ಗುತ್ತಿದ್ದಾರೆ. ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಟಿಕೀಟುಗಳೆಲ್ಲಾ ಬರಿದಾದುವು. ಎಲ್ಲಿ ನೋಡಿದರಲ್ಲಿ ಜನರೇ ತುಂಬಿದ್ದಾರೆ. ಎಲ್ಲರಿಗೂ ವೀರನೊಬ್ಬನು ಬೆಂಕಿಹೊತ್ತಿಸಿಕೊಂಡು ಧುಮುಕುವ ದೃಶ್ಯವನ್ನು ನೋಡಲು ಆಶೆ; ಆದರೆ ಆ ಸಾಹಸವು ರಾತ್ರಿ ೯ ಗಂಟೆಗೆ ನಡೆಯುವುದಾಗಿದ್ದಿತು. ಜನರೆಲ್ಲರೂ ಒಂಬತ್ತು ಗಂಟೆಯಾಗುವುದನ್ನೇ ಕಾಯುತ್ತಿದ್ದರು.

ರಾತ್ರಿಯ ಒಂಬತ್ತು ಗಂಟೆಯಾಯಿತು. ಜನರೆಲ್ಲಾ ಮೈಯೆಲ್ಲಾ ಕಣ್ಣಾಗಿ, ನೂರು ಅಡಿಗಳ ಎತ್ತರವಿದ್ದ ಏಣಿಯೊಂದರ ಸುತ್ತಲೂ ಆವರಿಸಿದ್ದರು. ಇದ್ದಕ್ಕಿದ್ದಂತೆಯೆ ವಾದ್ಯಗಳ ಸಮೇತ ದೃಢಕಾಯನೊಬ್ಬನು ಏಣಿಯ ಬಳಿಗೆ ಬಂದು ನಿಂತನು. ಅವನು ಬಂದೊಡನೆಯೆ ಜನರು ಹರ್ಷಧ್ವನಿಗೈಯಲು ಅವನು ಅವರಿಗೆ ವಂದನೆಮಾಡಿ ಶೀಘ್ರವಾಗಿ ಏಣಿಯನ್ನೇರಿದನು. ಜನರ ಕಣ್ಣುಗಳೆಲ್ಲವೂ ಅವನ ಹಿಂದೆಯೆ ಏಣಿಯನ್ನು ಹತ್ತಿದುವು. ಮೇಲಕ್ಕೆ ಹತ್ತಿದವನೇ ತಾನು ತಂದಿದ್ದ ಸೀಸೆಗಳಿಂದ ತನ್ನ ಮೈಮೇಲೆ ಸೀಮೆಯೆಣ್ಣೆ ಸುರಿದುಕೊಂಡು, ಸೀಸೆಗಳನ್ನು ಕೆಳಕ್ಕೆ ಬಿಟ್ಟನು. ಅವನು ಬೆಂಕಿಪೆಟ್ಟಿಗೆಯನ್ನು ತೆಗೆದುಕೊಂಡನೋ ಇಲ್ಲವೋ— ಅನೇಕರಿಗೆ ಮೈ ಜುಮ್ಮೆಂದಿತು. 'ಢಂ' ಎಂಬುದಾಗಿ ಬಂದೂಕಿನ ಶಬ್ದವಾದ ಕೂಡಲೆ ಅವನು, ಬೆಂಕಿಕಡ್ಡಿಯನ್ನು ಗೀರಿ ತನ್ನ ಮೈಗೆ ತಗುಲಿಸಿಕೊಳ್ಳಲು, ಉರಿಯು ಧಗಧಗನೆ ಉರಿಯತೊಡಗಿತು. ಉರಿ ಹಾಕಿಕೊಂಡ ವ್ಯಕ್ತಿಯು ಧುಮುಕಿ ಜೀವಂತನಾಗಿರುವುದನ್ನು ನೋಡಲು ಜನರ ಮನಸ್ಸುಗಳು ಕಾತರಗೊಂಡಿದ್ದುವು. ಅವರು ಆ ವ್ಯಕ್ತಿ ಮೇಲಿನಿಂದ ಧುಮುಕುವನೆಂದೆಣಿಸಿದ್ದರು; ಆದರೆ ಅವನು ಹಾಗೆ ಮಾಡದೆ ಧಗಧಗನೆ ಉರಿಯುತ್ತಲೇ ನಿಂತಿದ್ದನು. ಜನರು ಅವನನ್ನು ಧುಮುಕೆಂದು ಕಿರುಚಿದರು. ಅವರಿಗೆ ಭಯವುಂಟಾಯಿತು. ಇನ್ನೇನು ಸರ್ಕಸ್ಸಿನ ಸಂಚಾಲಕನು ಏಣಿಯನ್ನೇರುವಷ್ಟರಲ್ಲಿಯೆ ಮೇಲಿದ್ದ ವ್ಯಕ್ತಿ ಧುಮುಕಿದನು. ಜನರು ಹರ್ಷೋದ್ಗಾರ ಮಾಡಿದರು. ಕೆಳಕ್ಕೆ ಬಂದವನು ಸುರಕ್ಷಿತವಾಗಿರುವನೇ ಎಂದು ನೋಡಲು ಜನರು ಎಲ್ಲರೂ ನುಗ್ಗಿದರು. ಸಂಚಾಲಕನೂ ಬಂದನು. 'ಹಾಯ್' ಎಂದು ಜನರು ಕಿರುಚಿದರು. ಪೋಲೀಸರು ಬಂದರು. ಪಾಪ, ಮೇಲಿನಿಂದ ಧುಮುಕಿದ ವ್ಯಕ್ತಿಯ ಬೂದಿಯು ಮಾತ್ರ ಕೆಳಗಿದ್ದಿತು. ಜನರ ರಕ್ತವು ತಣ್ಣಗಾಯಿತು. ಅನೇಕರು ಸರ್ಕಸ್ ಸಂಚಾಲಕನ ಮೇಲೆ ಕಲ್ಲುಗಳನ್ನೂ ಚಪ್ಪಲಿಗಳನ್ನೂ ಎಸೆಯಲಾರಂಭಿಸಿದರು. ಗದ್ದಲವೋ ಗದ್ದಲವಾಯಿತು. ಪೋಲೀಸರು ಬಂದು ಪರಿಸ್ಥಿತಿಯನ್ನು ಹತೋಟಿಗೊಳಪಡಿಸಿಕೊಂಡರು. ಜನರೆಲ್ಲರೂ ಮೇಲಿಂದ ಧುಮುಕಿದ ವ್ಯಕ್ತಿಯ ದುರದೃಷ್ಟಕ್ಕೆ ಮರುಗುತ್ತ ಮನೆಗಳಿಗೆ ಹಿಂದಿರುಗಿದರು.

* * *

ಈ ದೃಶ್ಯವನ್ನು ನೋಡಿ ಹಿಂದಿರುಗಿದವರ ಗುಂಪಿನಲ್ಲಿ ರಾಮಕ್ಕನ ಮನೆಯವರೂ ಒಬ್ಬರು. ಅವರ ಮನೆಯವರಿಗೆಲ್ಲಾ ಒಂದು ವಿಧದ ಭಯವು ಉತ್ಪನ್ನವಾಗಿತ್ತು, ಆ ದೃಶ್ಯದ ನೋಟದಿಂದ. ರಾಮಕ್ಕನು ಒಂದು ಮಾತನೂ ಆಡಲಿಲ್ಲ. ಬಾಕಿಯವರೂ ಏನೂ ಮಾತನಾಡಲಿಲ್ಲ. ಮೌನವಾಗಿಯೇ ಎಲ್ಲರೂ ಮನೆಯನ್ನು ಸೇರಿದರು. ಈ ದಿನ ರಾತ್ರಿಯೂ ಹಿಂದಿನ ದಿನದ ರಾತ್ರಿಯಂತೆಯೇ ನಿದ್ದೆಯಿಲ್ಲದೆಯೆ ಎಲ್ಲರೂ ಕಳೆದರು. ಹೀಗೆ ಅವರು ಅವಸ್ಥೆಪಡಲು ಕಾರಣವಾದರೂ ಇಲ್ಲದಿರಲಿಲ್ಲ. ರಾಮಕ್ಕನ ಎರಡನೆಯ ಮಗ ಸುಬ್ಬುವು ಗಟ್ಟಿಮುಟ್ಟಾದ ಬಲಿಷ್ಠ; ಬುದ್ಧಿವಂತ. ಆದರೂ ದುರದೃಷ್ಟವಶದಿಂದ ಅವನ ಅಣ್ಣ ರಾಜನಿಗೂ ತಮ್ಮ ಕೃಷ್ಣನಿಗೂ ಕೆಲಸವಾದರೂ, ಅವನಿಗೆ ಮಾತ್ರ ಒಂದು ಕೆಲಸ ದೊರಕಿರಲಿಲ್ಲ. ಇದಕ್ಕಾಗಿ ಮನೆಯವರೆಲ್ಲರೂ ಅವನನ್ನು ಅಂದು ಆಡುತ್ತಿದ್ದರು. ಸುಬ್ಬುವು ಇದೆಲ್ಲಾ ಗ್ರಹಚಾರ ಕಾಲವೆಂದು ಹಲ್ಲುಕಡಿದು ಸುಮ್ಮಗಿದ್ದ. ಪಾಪ, ಸಾಲದುದಕ್ಕೆ ಅವನಿಗೆ ಹೆಂಡತಿ ಬೇರೆ. ದಿಕಂಪ್ರತಿ ಓರಗಿತ್ತಿಯರ ರಾಮಾಯಣ. ಹೀಗಾಗಿ ಅವನಿಗೆ ಜೀವವೇ ಬೇಡವಾಗಿ ಹೋಗಿತ್ತು. ಅವನು ತನ್ನ ಕೈಯಲ್ಲಾದ ಮಟ್ಟಿಗೂ ಕೆಲಸವೊಂದನ್ನು ಸಂಪಾದಿಸಲು ಪ್ರಯತ್ನಪಟ್ಟು ನಿಷ್ಫಲನಾಗಿದ್ದ. ಹೀಗಿರಲು ಮೊನ್ನೆಯ ದಿನ ಒಂದು ದೊಡ್ಡ ರಾದ್ಧಾಂತವಾಯಿತು. ಯಾವ ಕಾರಣವೋ ಏನೋ, ಓರಗಿತ್ತಿಯರಲ್ಲಿ ಜಗಳವಾಗಿ, ಸುಬ್ಬುವಿನ ಹೆಂಡತಿಗೆ ಅವನ ಅಣ್ಣ ರಾಜನಿಂದ ಪೆಟ್ಟುಗಳು ಬಿದ್ದುವು. ಸುಬ್ಬುವು ಒಂದು

ಸರ್ವಮಾನ್ಯ !

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ ಚ್ಯವನಪ್ರಾಶ

●

ಸುವರ್ಣ ಮಾಲಿನೀ ವಸಂತ

●

ಮಕರಧ್ವಜಗುಟಿ

●

ಮುಂತಾದ ಶಕ್ತಿವರ್ಧಕ ಔಷಧಗಳನ್ನು ತರಿಸಿರಿ !

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ದಿನ ಕೂಡ ತನ್ನಿನಿಯಳ ಮೇಲೆ ಕೈಮಾಡಿದವನಲ್ಲ. ಈ ಅತ್ಯಾಚಾರವನ್ನು ಹೇಗೆ ಸಹಿಸುವುದು ? ಅವನಿಗೂ ಅಣ್ಣನಿಗೂ ದೊಡ್ಡ ಜಗಳವಾಯಿತು. "ತಿನ್ನಲು ಸಂಪಾದನೆಯಿಲ್ಲದಿದ್ದರೂ ಇವನಿಗೆ ಈ ಅಹಂಕಾರ !" ಎಂದು ಬಯ್ಸಿಕೊಂಡ. ಕೇಳಲಾರದ ಇನ್ನೂ ಅನೇಕ ಮಾತುಗಳನ್ನು ಕೇಳಿದ. ಅವನಿಗೆ ಅತಿ ದುಃಖವಾಯಿತು. ತನ್ನ ಸ್ಥಿತಿಗೆ ತನಗೇ ಅಳು ಬಂದಿತು. ಹೆಂಡತಿಯನ್ನು ತವರುಮನೆಗಾದರೂ ಕಳುಹಿಸೋಣವೆಂದರೆ ಅವರು ಮೊದಲೇ ಪರಲೋಕವಾಸಿಗಳು. ಇಲ್ಲಿ ಇರೋಣವೆಂದರೆ ಈ ಸಂಕಟ. ಅವನಿಗೆ ಏನೂ ತೋಚಲಿಲ್ಲ. ಆತ್ಮಹತ್ಯೆಯೇ ದಾರಿಯೆಂದು ತಿಳಿದ. ಆಗಿನ ಮನದ ತುಚ್ಛನಲ್ಲಿ ಅದು ಒಳ್ಳೆಯ ಉಪಾಯವೆಂದೇ ಅವನಿಗೆ ಎನ್ನಿಸಿತು. ಆದರೆ ಸಾಯುವುದಾದರೂ ಹೇಗೆ? ಹೇಗಿದ್ದರೂ ಸಾಯುವುದೇ ಲೇಸೆಂಬುದನ್ನು ನಿರ್ಧರಿಸಿದ. "ನಾನು ಸಾಯುವುದಂತೂ ಸಾಯುತ್ತೇನೆ ; ಸುಮ್ಮನೆ ಸತ್ತು ಏನು ಲಾಭ ? ನನ್ನ ಸಾವಿನಿಂದಲೂ ಇತರರಿಗೆ ಲಾಭವಾಗಬೇಕು!" ಎಂದು ಯೋಚಿಸಿ, ಅದರ ದಾರಿಯನ್ನು ಹುಡುಕಿದ. ಅವನ ಸೂಕ್ಷ್ಮಬುದ್ಧಿಗೆ ಆ ದಾರಿಯು ತೋಚದೆ ಹೋಗಲಿಲ್ಲ. ಆ ಊರಿಗೆ ಕೆಲವು ದಿನಗಳ ಹಿಂದೆಯೇ ಸರ್ಕಸ್ಸೊಂದು ಬಂದಿದ್ದಿತು. ಅದನ್ನೇ ತನ್ನ ಸಾಧನವನ್ನಾಗಿ ಮಾಡಿಕೊಳ್ಳೋಣವೆಂದು ಯೋಚಿಸಿ, ಅರ್ಧ ರಾತ್ರಿಯಲ್ಲೇ ಮನೆಬಿಟ್ಟು ಹೊರಟು ಹೋದ.

ಬೆಳಕು ಹರಿದ ಕೂಡಲೆ ಸುಬ್ಬುವು ಮಾಯವಾಗಿದ್ದುದು ಮನೆಯವರಿಗೆಲ್ಲಾ ತಿಳಿಯಿತು. ಸುಬ್ಬುವು ಮಲಗಿದ್ದ ಹಾಸಿಗೆಯ ಮೇಲೆ ಚೀಟಿಯೊಂದು ಬಿದ್ದಿದ್ದಿತು. ಅದರಲ್ಲಿ "ನಾನು ನನ್ನಿಷ್ಟದ ಪ್ರಕಾರ ಹೋಗಿದ್ದೇನೆ ; ನಾಳೆ ರಾತ್ರಿ ನನ್ನನ್ನು ಈ ಊರಿನ ಸರ್ಕಸ್ಸಿನಲ್ಲಿ ಕಾಣಿ" ಎಂದಿದ್ದಿತು. ಯಾರಿಗೂ ಏನು ಮಾಡುವುದಕ್ಕೂ ತೋಚದೆ ಹೋಯಿತು. ತತ್‍ಕ್ಷಣವೇ ಸರ್ಕಸ್ ಕಂಪನಿಯಲ್ಲಿ ವಿಚಾರಿಸಿದರು. ಅಲ್ಲಿ ಸುಬ್ಬುವಿನ ಪತ್ತೆಯೇ ಇಲ್ಲ. ಇದನ್ನು ಕೇವಲ ಮೋಸಕ್ಕಾಗಿ ಬರೆದಿರಬಹುದೆಂದು ಊಹಿಸಿದರು.

ಅವನನ್ನು ಎಲ್ಲಿ ಎಂದು ಹುಡುಕುವುದು? ಇಷ್ಟಕ್ಕೆಲ್ಲಾ ಕಾರಣನಾದ ರಾಜನಿಗೆ ಮುಖ ಚಿಕ್ಕದಾಗಿದ್ದಿತು. ಪಾಪ, ಅವನಿಗೆ ಸುಬ್ಬುವಿನ ಮೇಲೆ ನಿಜವಾಗಿಯೂ ಪ್ರೇಮವಿದ್ದಿತು. ಸಂಸಾರದ ಭಾರವನ್ನು ಸ್ವಲ್ಪ ಮನಸ್ಸಿಗೆ ತಂದುಕೊಳ್ಳಲೆಂದು ಅವನು ಸುಬ್ಬನಿಗೆ ಕೆಲವು ಮಾತುಗಳನ್ನು ಅಂದಿದ್ದನು. ಅದರ ಪರಿಣಾಮವು ಈ ರೀತಿಯದಾಗಬಹುದೆಂದು ಅವನಿಗೆ ಕನಸಿನಲ್ಲಿಯೂ ಎನಿಸಿರಲಿಲ್ಲ. ಮಾಡುವುದೇನು ಬಂತು? ಅವನ ಚೀಟಿಯ ಪ್ರಕಾರ ಮಾರನೆಯ ದಿನವೇ ಎಲ್ಲರೂ ಸರ್ಕಸ್ಸಿಗೆ ಹೋದರು. ಅಲ್ಲಿ ಎಲ್ಲಾದರೂ ಅವನು ಇವರ ಕಣ್ಣಿಗೆ ಬಿದ್ದಿದ್ದರೆ ತಾನೆ? ಏನೆಂದು, ಯಾರನ್ನು ವಿಚಾರಿಸುವುದು? ಕೊನೆಯವರೆಗೂ ಇದ್ದು ನೋಡುವುದೆಂದು ಅಲ್ಲಿಯೇ ಎರಡನೆಯ ಆಟಕ್ಕೂ ಕುಳಿತಿದ್ದರು. ಎರಡನೆಯ ಆಟದ ಕೊನೆಯಲ್ಲೇ ಮನುಷ್ಯನೊಬ್ಬನು ಬಂದು, ಬೆಂಕಿ ಹೊತ್ತಿಸಿಕೊಂಡು, ಮೇಲಿನಿಂದ ಬಿದ್ದು ಪರಲೋಕವನ್ನು ಸೇರಿದುದು ಆಯಿತು. ಆಟವೂ ಮುಗಿಯಿತು. ಆದರೂ ಸುಬ್ಬುವಿನ ಸುಳಿವಿಲ್ಲ. ಪುನಃ ಸರ್ಕಸ್ಸಿನವರನ್ನು ವಿಚಾರಿಸಿಯಾಯಿತು. ಅವರಿಗೂ ಸುಬ್ಬುವಿನ ವಿಷಯ ಗೊತ್ತಿಲ್ಲ. ಎಲ್ಲರಿಗೂ ನಿರಾಶೆಯಾಯಿತು. ಮನೆಗೆ ಹಿಂತಿರುಗುವಾಗ ಎಲ್ಲರ ಮನಸ್ಸಿನಲ್ಲೂ "ಆ ಬೆಂಕಿ ಹೊತ್ತಿಸಿಕೊಂಡು ಧುಮುಕಿದ ಮನುಷ್ಯನೇ ನಮ್ಮ ಸುಬ್ಬುವಾಗಿರಬಹುದೇ ?" ಎಂಬ ಭಯಂಕರ ಯೋಚನೆಯು ಬಂದಿದ್ದಿತು. ಅದನ್ನು ನೆನಸಿಕೊಂಡೊಡನೆಯೇ ಮೈ ಝುಮ್ಮೆನ್ನುವಾಗ, ಅದನ್ನು ಹೇಳಲು ಯಾರಿಗೆ ತಾನೆ ಧೈರ್ಯಬರುವುದು ? ಅದೇ ಭಯದ ಯೋಚನೆಯಲ್ಲಿ ಮೌನವಾಗಿಯೇ ಎಲ್ಲರೂ ಮನೆಯನ್ನು ಸೇರಿದರು.

ಮಾರನೆಯ ದಿನ ಎಲ್ಲರ ಮೋರೆಗಳಲ್ಲೂ ಅಳುವೇ ತೋರಿ ಬರುತ್ತಿದ್ದಿತು. ಇಂದಿಗೆ ಸುಬ್ಬು ಮನೆಬಿಟ್ಟು ಹೋಗಿ ಮೂರು ದಿನಗಳಾದುವು. ಆದರೂ ಅವನ ವಿಷಯವಾಗಿ ಏನೂ ಗೊತ್ತಾಗಲಿಲ್ಲ. ರಾಮಕ್ಕನೂ, ಸುಬ್ಬುವಿನ ಹೆಂಡತಿಯೂ ಮೂರು ದಿನಗಳಿಂದಲೂ ಊಟಮಾಡಿಲ್ಲ. ಊಟವು ಅವರ

ಗಂಟಲೊಳಕ್ಕೆ ಹೇಗೆ ತಾನೇ ಇಳಿದೀತು? ರಾಮಕ್ಕನು ತನ್ನನ್ನು ತಾನೇ ನಿಂದಿಸಿಕೊಂಡರು. ಏಕೆಂದರೆ ಅವರೂ ಕೆಲವು ಬಾರಿ ಸುಬ್ಬನನ್ನು ಕೆಲಸಕ್ಕೆ-ಸೇರಲು ಆಕ್ಷೇಪಿಸಿದ್ದರು. ಸುಬ್ಬುವಿನ ಮುಖದ ಕೋಣೆಯನ್ನು ಬಿಟ್ಟು ಈಚೆಗೆ ಬರಲಿಲ್ಲ. ಎಲ್ಲರಿಗೂ ನಿನ್ನೆಯ ರಾತ್ರಿಯ ದೃಶ್ಯವೇ ಕಣ್ಣಲ್ಲಿ ಕಟ್ಟಿದಂತಿತ್ತು. ಎಲ್ಲರಿಗೂ ಅದು ಸುಬ್ಬುವೇ ಇರಬೇಕೆಂದು ಸಂದೇಹ.

ಹೀಗೆಯೇ ಕೆಲವು ಗಂಟೆಗಳು ಕಳೆದುವು. ಸ್ವಲ್ಪ ಹೊತ್ತಿನ ನಂತರ ಕಾರಿನಲ್ಲಿ ಮನುಷ್ಯನೊಬ್ಬನು ಅವರ ಮನೆಗೆ ಬಂದನು. ಅವನು ಸರ್ಕಸ್ಸಿನ ಯಜಮಾನನೆಂದು ತಿಳಿದು ಬಂದಕೂಡಲೆ, ಎಲ್ಲರಿಗೂ ಅವನ ಆಕಸ್ಮಿಕ ಆಗಮನದ ಪರಿಣಾಮವಾಗಿ ಎದೆ ಬಡಿಯಲಾರಂಭಿಸಿತು. ಆ ಯಜಮಾನನು ಯಾವುದೊಂದು ಮಾತನ್ನೂ ಆಡದೆ, ರಾಜನನ್ನು ಕುರಿತು 'ನಿನ್ನೆ ನಮ್ಮ ಸರ್ಕಸ್ಸಿನಲ್ಲಿ ಬೆಂಕಿ ಹಚ್ಚಿಕೊಂಡು ಪರಲೋಕವನ್ನು ಸೇರಿದ ವ್ಯಕ್ತಿಯು ಈ ಕಾಗದವನ್ನು ತಮಗೆ ಕೊಡಹೇಳಿದರು, ಮತ್ತು ಅವರು ನನ್ನೊಡನೆ ಮಾಡಿಕೊಂಡಿರುವ ಕರಾರಿನ ಪ್ರಕಾರ ಅವರ ಮರಣದ ನಷ್ಟಕ್ಕಾಗಿ ಈ ಐದುಸಾವಿರ ರೂ. ಗಳನ್ನು ಒಪ್ಪಿಸಿದ್ದೇವೆ. ಅವರು ಈ ಕಾಗದವನ್ನು ಮೊನ್ನೆಯೆ ನನಗೆ ಕೊಟ್ಟು, ಈ ದಿನ ನಿಮಗೆ ಕೊಡುವುದಾಗಿ ನನ್ನಿಂದ ವಾಗ್ದಾನ ಪಡೆದಿದ್ದರು' ಎಂದು ಹೇಳಿದವನೇ, ಐದುಸಾವಿರ ರೂಪಾಯಿಗಳ ನೋಟಿನ ಕಟ್ಟನ್ನೂ ಕಾಗದವನ್ನೂ ರಾಜನಿಗೆ ಒಪ್ಪಿಸಿ, ಘಳಿಗೆಯೂ ಅಲ್ಲಿ ನಿಲ್ಲದೆ ಹೊರಟುಹೋದನು.

ರಾಜನಿಗೆ ಈ ವಿಷಯವು ಬುದ್ಧಿಗೆ ಏರುವಷ್ಟರಲ್ಲಿಯೆ ಅವನು ಕಾರಿನಲ್ಲಿ ಕುಳಿತು ಹೊರಟೇ ಹೋದನು. ರಾಜನು ಪ್ರಶ್ನೆಗಳ ಸುರಿಮಳೆಯನ್ನೇ ಆ ಮಾಲಿಕನ ಮೇಲೆ ಸುರಿಸಬೇಕೆಂದಿದ್ದವನು ಅವನನ್ನು ಕೂಗಿದನು; ಆದರೆ ಫಲವಿಲ್ಲ. ಅವನ ಮನಸ್ಸು ಭಯಾಶ್ಚರ್ಯಗಳಿಂದ ತುಂಬಿತು. ದಿಗ್ಭ್ರಮೆ ಹಿಡಿದಂತವನಾಗಿ ನಡುಗುವ ಕೈಗಳಿಂದ ಆ ಕಾಗದವನ್ನು ಒಡೆದು ಓದಲು ಪ್ರಯತ್ನಿಸಿದನು. ಇದೆಲ್ಲವನ್ನೂ ರಾಮಕ್ಕನೂ ಕೃಷ್ಣನೂ ಸುಬ್ಬನ ನಾದಿನಿಯರೂ, ಹೆಂಡತಿಯೂ ಸ್ತಂಭೀಭೂತರಾಗಿ ನೋಡುತ್ತಿದ್ದರು. ರಾಮಕ್ಕನು 'ಏನಾಯಿತು?' ಎಂದು ರಾಜನನ್ನು ಕೇಳಿದವಳೇ ಪ್ರಜ್ಞೆತಪ್ಪಿ ನೆಲಕ್ಕುರುಳಿದಳು. ರಾಜನು ಧೈರ್ಯದಿಂದ ಆ ಕಾಗದವನ್ನು ಓದಲಾರಂಭಿಸಿದನು. ಅದರಲ್ಲಿ ಹೀಗಿದ್ದಿತು :

" **ನನ್ನ ಪ್ರೀತಿಯ ಸಹೋದರ ರಾಜನಿಗೆ,**

ನಾನು ನಿಮಗೆ ಬರೆದಿಟ್ಟ ಚೀಟಿಯ ಪ್ರಕಾರ ನಿನ್ನೆಯೇ ಸರ್ಕಸ್ಸಿನಲ್ಲಿ ನಿಮಗೆ ಕಾಣಿಸಿಕೊಂಡೆ. ಆದರೆ ನೀವು ನನ್ನನ್ನು ಕಂಡುಹಿಡಿಯಲಾರದೆ ಹೋದಿರಿ. ಅದಕ್ಕೆ ನಾನು ಕಾರಣನಲ್ಲ. ನಿನ್ನೆ ಬೆಂಕಿಹಚ್ಚಿಕೊಂಡು ಧುಮುಕಿ ಮರಣಹೊಂದಿದ ಮನುಷ್ಯನು ಬೇರೆ ಯಾರೂ ಅಲ್ಲದೆ, ನಿಮ್ಮ ನಿರ್ಭಾಗ್ಯ-ನಿರುದ್ಯೋಗಿ-ನತದೃಷ್ಟ ಸುಬ್ಬುವಲ್ಲದೆ ಬೇರೆಯವರಲ್ಲ. ಈ ಕೆಲಸವನ್ನು ನಾನು ನನ್ನ ಇಚ್ಛಾನುಸಾರ ಮಾಡಿದ್ದೇನೆ. ಇದರಲ್ಲಿ ಯಾರ ದೋಷವೂ ಇಲ್ಲ. ನಿಮಗಾಗಲೀ ಸರ್ಕಸ್ಸಿನ ಮಾಲೀಕನಿಗಾಗಲೀ ಯಾವ ತೊಂದರೆಯೂ ಆಗಬಾರದೆಂದೇ ಈ ಕಾಗದವನ್ನು ಬರೆದಿದ್ದೇನೆ. ನನ್ನ ಮರಣಕ್ಕೆ ನಾನೇ ಜವಾಬ್ದಾರನೆಂದೂ, ನನ್ನ ಮರಣದ ನಷ್ಟಕ್ಕಾಗಿ ಐದುಸಾವಿರ ರೂ. ಗಳನ್ನೂ ಸರ್ಕಸ್ಸಿನ ಮಾಲೀಕನು ನಿಮಗೆ ಕೊಡಬೇಕೆಂದೂ ಅವನೊಡನೆ ಕರಾರು ಮಾಡಿಕೊಂಡಿದ್ದೇನೆ. ಆ ಮಾಲೀಕನಿಗೆ ಬೇರೆಯ ಸುಳ್ಳು ಹೆಸರನ್ನು-ನನ್ನ ಹೆಸರಿಗೆ ಬದಲಾಗಿ—ಹೇಳಿ, ನನ್ನ ಮರಣದನಂತರ ಐದುಸಾವಿರ ರೂ. ಗಳನ್ನೂ, ಈ ಕಾಗದವನ್ನೂ ನಿಮಗೆ ತಲುಪಿಸಲು ವಾಗ್ದಾನ ಪಡೆದಿದ್ದೇನೆ. ನೀವು ಆದ ವಿಚಾರಕ್ಕೆ ಚಿಂತಿಸಬೇಡಿ. ಆ ಮಾಲೀಕನನ್ನು ನೀವು ಏನು ಮಾಡಲೂ ಸಾಧ್ಯವಿಲ್ಲ. ಇದೆಲ್ಲ ದೈವೇಚ್ಛೆ!

ಈ ಪ್ರಪಂಚದಲ್ಲಿ ಮನುಷ್ಯನೊಬ್ಬನು ಮನುಷ್ಯನು ಸಹಕಾರವಿಲ್ಲದೆ ಬದುಕುವ ಹಾಗಿಲ್ಲ. ಆದರಂತೆಯೇ ನಾನೂ ಒಬ್ಬನೆಂದೆಣಿಸಿಕೊಂಡು, ನಿರುದ್ಯೋಗಿಯಾಗಿ ಹೆಂಡತಿಯನ್ನೂ ಕಟ್ಟಿಕೊಂಡು, ನಿಮಗೆಲ್ಲಾ ತೊಂದರೆಯನ್ನೂ ಜುಗುಪ್ಸೆಯನ್ನೂ ಉಂಟುಮಾಡಿದ್ದಕ್ಕೆ ದಯೆಯಿಟ್ಟು ಕ್ಷಮಿಸಿ. ನನ್ನ ಮರಣದಿಂದ ದುಃಖಿತರಾಗಿ, ಈಗ ಬಂದಿರುವ ಐದುಸಾವಿರ ರೂ. ಗಳನ್ನು ನಿರಾಕರಿಸಬೇಡಿ. ನನಗೆ ಸಂಪಾದನೆಯ ಮಾರ್ಗ ತೋಚದಿದ್ದುದರಿಂದಲೇ ಈ ಹಾದಿ ಹಿಡಿದು ಮಾಡಿರುವ, ನನ್ನ ಬಲಿದಾನದ ಕಾಣಿಕೆಯಾದ ನನ್ನ ಜೀವಿತದ ಸಂಪಾದನೆಯಾದ

(೬೯ನೆಯ ಪುಟ ನೋಡಿರಿ)

(೩೩ನೆಯ ಪುಟದಿಂದ ಮುಂದುವರಿದುದು.)

ಜೋಯಿಸ :— ಹೊಟ್ಟೇಮೇಲೂ ಇಲ್ಲ, ಬೆನ್ಮೇಲೂ ಇಲ್ಲ.... ಕೊಟ್ಮಾತ್ನಂತೇ ತರ್ದಿದ್ರೆ.... ನನ್ಗೆ ಮಾಟ-ಮರೂಡಿ ಮಾಡೂಕೆ ಬರ್ತದೆ ಅಂಬೂದು ಗೊತ್ತದ್ಯಲೊ?

ಕೋಸ್ತ :— ಅದೊಂದ್ಮಾತ್ಬೇಡಿ ಒಡ್ಯಾ, ಕಾಲೀಗ್ಬಿದ್ದೆ!.... ರಾಗೀ ಘಾರ್ಣೆ....ನಿಮ್ಗೊತ್ತದೆ....ಅರ್ಗೊಟ್ಟಿ ಅಂಬ್ಲೀಗೂ....

ಜೋಯಿಸ :— ನಾವೂ ಹಾಗೇ....ನಡೆ....ನಾಳೇಗ್ರ್ತಕಂಬಾ!

ಕೋಸ್ತ :— (ಆತ್ಮ) ನಮ್ಮ ಜೀವಾನೋ ಮಾರಾಟ ಮಾಡ್ದಂಗಾಗಿದು. (ಜೋಯಿಸನಿಗೆ) ವೈ ಉಪ್ಪು ಚಲ್ಲಿ ತಯಾರ್ಮಾಡ್ಬುಪ್ಪು!

ಜೋಯಿಸ :— ನಾವೂ ಕಂತ ಒಡೀವಾಂಗೆ ಮಂತ್ರಾ ಕೂಗ್ಸಿ ತರೂ ದುಡ್ಡು....

ಕೋಸ್ತ :— ಆದ್ರೂ....

ಜೋಯಿಸ :— ಆದ್ರೂ ಇಲ್ಲ, ಹೋದ್ರೂ ಇಲ್ಲ! ನಾಳೇಗ್ರ್ತರೂದೇಯ ಎಂಟ್ಕೊಳ್ಗ!

ಕೋಸ್ತ :— ಮತ್ತೇನ್ಮಾಡ್ಲಿ? ನೀವಂದ್ಹಾಗೇ. ಪೂರ್ವಜನ್ಮದ್ದ ಪಾಪ (ಹೋಗುತ್ತಾನೆ.)

ಭಾಷೆ ಮತ್ತು ಅದರ ಉದ್ದೇಶ

ಶ್ರೀ. ಬಿ. ಎಚ್. ಶ್ರೀಧರ, ಎಮ್. ಎ., ಪುಣೆ

★

ಮಾತಿನ ಹದವನ್ನರಿಯದವನು ಮಾತುಗಾರನಾಗಲಾರ, ಬರೆಹಗಾರನಾಗಲಾರ. ಮಾತು ಬಲ್ಲವನೇ ಮಾಣಿಕ ತರಬಲ್ಲ. ಮಾತುಬಲ್ಲವನ ಮಾತೇ ಜ್ಯೋತಿರ್ಲಿಂಗವಾಗುವುದು!

★

"ಕಂಡೂ ಕಾಣದಾದನೊಬ್ಬ ವಾಗ್ದೇವತೆಯನ್ನು;
ಕೇಳಿಯೂ ಕೇಳದಾದನೊಬ್ಬನವಳನ್ನು;
ಆದರಿನ್ನೊರ್ವಗಾಕೆ ತೋರಿದಳವಳ ಸೊಬಗನ್ನು—
ಒಲಿದ ಓರಣದೋಪಳೋಪಗೆಂತೋ ಅಂತು!"

—ಋಗ್ವೇದ ಮಂಡಲ ೧೦.

ಯಾಕೆ? ಯಾವ ಕಾರಣದಿಂದ ವಾಗ್ದೇವಿಯು ಒಬ್ಬನಿಗೆ ಒಲಿದಿನ್ನೊಬ್ಬನಿಗೊಲಿಯದಿರುವಳು? ಅಂತಹ ಅವಳ ಮಾಹಾತ್ಮ್ಯವಾದರೂ ಏನು? ಅವಳ ಲಕ್ಷಣವೇನು, ರೀತಿ ಏನು, ಅವಳ ಅವತಾರದ ಉದ್ದೇಶವೇನು?— ಇತ್ಯಾದಿಗಳನ್ನು ತಿಳಿವ ಕುತೂಹಲವು ಪ್ರಯೋಗಕಾರನಾದವನಿಗೆ ಉಂಟಾಗದಿರದು. ಹಾಗೆ ಮನುಷ್ಯನನ್ನು ಪ್ರಾಣಿವರ್ಗದಿಂದ ಹಠಾತ್ತನೆ ಪ್ರತ್ಯೇಕಿಸುವ ಭಾಷೆಯ ಚಮತ್ಕಾರವಾದರೂ ಏನು ಎಂಬುದು ಗಮನಾರ್ಹವಾದುದಲ್ಲವೆ? ಲೋಕದಲ್ಲಿ ಜೀವದ ಅಸ್ತಿತ್ವವನ್ನು ಹೊರಪಡಿಸುವ ಅನೇಕ ಸಾಮಾನ್ಯ ಚೇಷ್ಟಾವಿಶೇಷಗಳಿರುತ್ತವೆ; ಆದರೆ ಯಾವ ಅಂತಹ ಕ್ರಿಯೆಯೂ ವಾಕ್ಯಪ್ರಯೋಗದಷ್ಟು ಸ್ಫುಟವಾದುದಲ್ಲ, ಫಲದಾಯಕವೂ ಅಲ್ಲ.

ಭಾಷೆಯು ಶಬ್ದಮಯ; ಶಬ್ದವು ಧ್ವನ್ಯಾತ್ಮಕ ಮತ್ತು ವರ್ಣಾತ್ಮಕವಾದುದು; ವರ್ಣಾತ್ಮಕವಾದಾಗ ಕೇವಲ ಕಲ್ಪನಾವೇದ್ಯ, ಧ್ವನ್ಯಾತ್ಮಕವಿದ್ದಾಗ ಸ್ಪಷ್ಟ. ಆ ಧ್ವನಿಯು ವಿವಿಧ ಉಚ್ಚಾರಣ ಲಹರಿಯಿಂದ ಕೂಡಿದುದು. ಶಬ್ದಗಳ ಜೋಡಣೆಯು ಅಭ್ಯಾಸಬಲದಿಂದ ಉದ್ದಿಷ್ಟಾರ್ಥವನ್ನು ನಮ್ಮ ಮನದಲ್ಲಿ ಪ್ರತಿಬಿಂಬಿಸುತ್ತದೆ. ಅರ್ಥದ ನಿಷ್ಕೃಷ್ಟತೆಯು ತದ್ದ್ಯೋತಕವಾದ ಶಬ್ದದ ಮೇಲೆಯೇ ಅವಲಂಬಿಸಿರತಕ್ಕದ್ದು. ಕೆಲವು ಶಬ್ದಗಳು ಪ್ರಯೋಗಿಸಿದಲ್ಲಿ ಕೇವಲ ಅಸ್ಪಷ್ಟ ಅರ್ಥವನ್ನು ಬಗೆಯಲ್ಲಿ ಒಡಮೂಡಿಸುವವು; ಮತ್ತೆ ಕೆಲವು ತದ್ವಿರುದ್ಧವಾಗಿ ನಮ್ಮ ಮನೋಮುಕುರದಲ್ಲಿ ನಿರ್ದಿಷ್ಟ, ನಿಷ್ಕೃಷ್ಟ, ಸಸೀಮ ಅಥವಾ ಅವಚ್ಛಿನ್ನ ಅರ್ಥದ ಮೂರ್ತಿಯನ್ನು ತಂದು ನಿಲ್ಲಿಸುವವು.

ಈ ಶಬ್ದಗಳು ಅರ್ಥವನ್ನು ನಿರ್ದೇಶಿಸುವ ಚಿಹ್ನಗಳು, ಭಾವಸೂಚಿಗಳು, ಮನೋಗತವನ್ನು ಬಯಲುಮಾಡುವ ಭಂಗಿಭಣಿತಿಗಳು.

ಮನುಷ್ಯನು ಪ್ರಾಣಿಯಿಂದ ಹೇಗೆ ವಾಕ್ಶಕ್ತಿಯಿಂದ ಹೆಚ್ಚಿನವನೆನಿಸಿಕೊಂಡರೂ, ಭಾವೋದ್ರೇಕದ ಅತಿಶಯದಲ್ಲಿ ತತ್ತುಲ್ಯನೇ ಆಗುವನು.

ನಮ್ಮಿಂದ ಹೊರಡುವ ಮಾತು ಪರರ ಸಹಾನುಭೂತಿಯನ್ನು ಗಳಿಸತಕ್ಕುದಾಗಿದೆ. ಏಕೆಂದರೆ ಮಾತಿನ ಉದ್ದೇಶವು ಮತ್ತೊಬ್ಬರಿಗೆ ಭಾವಪ್ರಕಾಶನ ಉಂಟುಮಾಡುವುದೇ ಆಗಿದೆ. ಅದರಿಂದ ಅದನ್ನು ಆಲಿಸುವ ಮತ್ತೊಬ್ಬರ ಸಹೃದಯತೆ ಅದಕ್ಕೆ ಬೇಕೇಬೇಕು. ಇಲ್ಲದಿದ್ದರೆ ಅದರ ಪ್ರಯೋಗಕ್ಕೆ ಪ್ರಯೋಜನವಿಲ್ಲ. ಆದುದರಿಂದ ಭಾಷೆಯೆಂದರೆ, ಇಂತಹ ಶಬ್ದಗಳ ಗುಂಪು. ಅದರಲ್ಲಿ ಶಬ್ದಗಳು ಚಿತ್ರಸ್ತೋಮ ನಿರ್ಮಾಣಕ್ಕಾಗಿ ಒಟ್ಟುಗೂಡಿರುವವು; ಎಂದರೆ ಅವು ಇಷ್ಟಾರ್ಥವನ್ನು ಇತರರ ಮನದಲ್ಲಿ ಚಿತ್ರಿಸುವವು, ಮೂರ್ತೀಕರಿಸುವವು, ರೂಪಿಸುವವು.

ಹೀಗೆ ಭಾಷೆಯ ಗುರಿಯು ಭಾವಪ್ರಕಾಶನ, ಅರ್ಥವ್ಯಕ್ತಿ, ಮನೋಗತಪ್ರಕಟನೆ. ಈ ಗುರಿಯ ಸಿದ್ಧಿಯು ಮುಖ್ಯವಾಗಿ ಪ್ರಯೋಗಕಾರನ ಬುದ್ಧಿವೈಶದ್ಯವನ್ನೇ ಹೊಂದಿಕೊಂಡಿರುತ್ತದೆ. ಮಾಲೆಗಾರನು ಬುದ್ಧಿವಂತನಾದರೆ ಚಿತ್ತಾಕರ್ಷಕವಾಗುವ ರೀತಿಯಲ್ಲಿ ಹೂಮಾಲೆ ಕಟ್ಟುತ್ತಾನೆ; ಹಾಗಲ್ಲದೆ ಜಡಮತಿಯಾದರೆ ಅಸ್ತವ್ಯಸ್ತನಾಗಿ ಹೆಣೆಯುತ್ತಾನೆ. ಮೊಗ್ಗುಗಳನ್ನು ಪೋಣಿಸುವ ನೂಲಿನಂತೆ ಬಂದು ಪ್ರಬಂಧದಲ್ಲಿ ಮುಖ್ಯಭಾವವು ಮೊದಲಿಂದ ಕೊನೆವರೆಗೆ ಅವಿಚ್ಛಿನ್ನವಾಗಿರಬೇಕು. ಹಾಗಲ್ಲದೆ ವಿಚ್ಛಿನ್ನವಾದರೆ ಉದ್ದಿಷ್ಟಪರಿಣಾಮ ಉಂಟಾಗುವುದಿಲ್ಲ.

ವಾಗ್ಮಿಯಾದವನು ಶಬ್ದದ ಆಯ್ಕೆಯಲ್ಲಿ ಹೆಚ್ಚು ಗಮನವೀವನಲ್ಲದೆ, ಅದನ್ನು ಪ್ರಯೋಗಿಸುವ ರೀತಿಯಲ್ಲೂ ಅಧಿಕ ನೈಪುಣ್ಯವನ್ನು ಮೆರೆಯುತ್ತಾನೆ. ಸಂದರ್ಭೋಚಿತವಾಗಿ ಸಭಿಕರ ಅಥವಾ ವಾಚಕರ ಮನದ ಮೇಲೆ ಅಚ್ಚೊತ್ತಿದಂತೆ ತಾನು ನಿರೂಪಿಸುವ

ವಸ್ತುವನ್ನು ಮುಂದಿಟ್ಟು ಮಾಡಬೇಕಾದರೆ ಪ್ರಯೋಗಿಯು ಪದ-ವಿನ್ಯಾಸ ನಿಪುಣತನಿರಲೇಬೇಕು.

ಪದಸಂಗ್ರಹ, ಪದವಿನ್ಯಾಸ, ಇವುಗಳಿಗಿಂತ ಮೊದಲು ಬರೆಹಗಾರ ಅಥವಾ ಭಾಷಣಕಾರನಿಗೆ ತಾನು ಹೇಳಬೇಕೆಂದಿರುವ ವಿಷಯವು ತೀರ ಸ್ಪಷ್ಟವಾಗಿರಬೇಕು; ಹಾಗಿದ್ದರೆ ಮಾತ್ರ ಓದುಗ ಅಥವಾ ಕೇಳುಗನಿಗೆ ತನ್ನ ಸಿದ್ಧಾಂತದಲ್ಲಿ ಶ್ರದ್ಧೆ ಹುಟ್ಟಿಸಬಲ್ಲನು, ವಿಶ್ವಾಸ ಹುಟ್ಟಿಸಬಲ್ಲನು. ಮನಸ್ಸಿನಲ್ಲೇ ಗುಣಿಸಿ ತನ್ನ ವಾದಕ್ಕೆ ಪೋಷಕವಾದ ಕಾರಣಪರಂಪರೆಯನ್ನು ಭದ್ರ-ವಾಗಿ ಮೊದಲೇ ಸಿದ್ಧಪಡಿಸಿಕೊಂಡಿರಬೇಕು. ಅಲ್ಲದಿದ್ದರೆ 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ, ಗುಡ್ಡದ ಮೇಲೆ ತೃಣಾಸ್ತ್ರ' ಎಂಬಂತಾಗಿ ಪ್ರಯೋಗಕಾರನ ವಾಕ್ಯವು ಗಾಳಿಗೊಡ್ಡಿದ ದೀಪ-ವಾಗುವುದು, ಬೇರು ಕಳೆದ ಬೆಂಡಾಗುವುದು, ತಳಪಾಯವಿಲ್ಲದ ಸೌಧವೆನಿಸುವುದು! ಆದುದರಿಂದ ಸೆನೇಕನೆಂಬ ಗ್ರೀಕನು ಹೇಳು-ವಂತೆ— we must feel what we speek before we can speak what we feel— ನಾವು ಅನುಭವಿಸಿದು-ದನ್ನು ಪ್ರಕಾಶಪಡಿಸುವುದರ ಮೊದಲು ಆ ಪ್ರಕಾಶ್ಯವನ್ನು ನಾವು ಅನುಭವಿಸಿರಬೇಕು.

ಹಿಂದೆ ಹೇಳಿದ ಪ್ರಬಂಧವ್ಯಾಪಿಯಾದ ಮುಖ್ಯ ಭಾವ ಅಥವಾ ಮೂಲಭಾವವು, ವಕ್ತಾರನಿಂದ ತಪ್ಪಾಗಿ ತಿಳಿದುಕೊಳ್ಳಲ್ಪಟ್ಟದ್ದರೆ ಅಥವಾ ಅಸ್ಪಷ್ಟವಾಗಿ ವಿಸ್ಮೃಷ್ಟವಾದುದಾಗಿದ್ದರೆ, ಹಾರದ ಸೂತ್ರವು ಹರಿದಂತೆ ಪ್ರಬಂಧ ಅಥವಾ ಭಾಷಣದ ಉದ್ದೇಶವು ಹರಿಹಂಚಾಗುವುದು, ನುಚ್ಚುನೂರಾಗುವುದು — ಎಂದು ಕ್ಯಾಂಥೆಸನು ಹೇಳುವುದು ಸತ್ಯವಾದ ಮಾತು. ಆದುದರಿಂದ ಶ್ರುತ ಮತ್ತು ಯತ್ನದಿಂದ ವಾಗ್ದೇವಿಯನ್ನು ಉಪಾಸಿಸದೆ ಪದವಿಡಲು ಹೊರಡುವ ಅಪಕ್ವಮತಿಯು ಅಪಂಡಿತನೆಂಬುದರಲ್ಲಿ ಎರಡು-ಅಭಿಪ್ರಾಯವುಂಟೆ? *

*ಭಾಷೆಯಲ್ಲಿ ಸಾಹಿತಿಯ, ಸಾಮಾನ್ಯರ ಮತ್ತು ವಿಜ್ಞಾನಿ ಅಥವಾ ಶಾಸ್ತ್ರ-ಕಾರನ ನೀತಿಯು ಮುಂದೆ ವಿವರಿಸಲ್ಪಡುತ್ತದೆ. ಲೇ.

(೨೭ನೆಯ ಪುಟದಿಂದ ಮುಂದುವರಿದುದು)

ಐದುಸಾವಿರ ರೂ. ಗಳನ್ನು ಸ್ವೀಕರಿಸಿ, ನನ್ನ ಕೊನೆಯ ಪ್ರಾರ್ಥ-ನೆಯಾಗಿ—ದಯೆಯಿಟ್ಟು ಜೀವವಿರುವ ವರೆಗೆ ನನ್ನ ಹೆಂಡತಿಯನ್ನು ತಮ್ಮ ಮಗಳಾಗಿ ಸ್ವೀಕರಿಸಿ, ನನ್ನ ನೊಂದ ಜೀವಕ್ಕೆ ಶಾಂತಿಭಿಕ್ಷೆಯನ್ನು ನೀಡಿ.

ಮಾತೃಶ್ರೀಯವರಿಗೆ ನನ್ನನ್ನು ಕ್ಷಮಿಸಬೇಕೆಂದು ಹೇಳಿ. ಮುಂದಿನ ಜನ್ಮದಲ್ಲಿಯಾದರೂ ಅವರ ಹೊಟ್ಟೆಯಲ್ಲಿ ಹುಟ್ಟಿ ಅವರ ಸೇವೆ ಮಾಡುವೆನೆಂದು ತಿಳುಹಿಸಿ. ನನ್ನ ಪತ್ನಿಗೆ ನಾನು ಋಣವನ್ನು ಮುಂದಿನ ಜನ್ಮದಲ್ಲಿ ತೀರಿಸುವುದಾಗಿ ತಿಳುಹಿಸಿ, ಸೂತಕದೋಷವನ್ನುಂಟುಮಾಡಿದುದಕ್ಕೆ ಇತರ ಬಂಧುಗಳಿಗೂ ಮಿತ್ರರಿಗೂ ನನ್ನನ್ನು ಕ್ಷಮಿಸುವಂತೆ ಹೇಳಿ. ನನ್ನ ತಮ್ಮನಾದ ಕೃಷ್ಣನಿಗೆ ನನ್ನ ಕಡೆಯ ಆಶೀರ್ವಾದಗಳನ್ನು ತಿಳುಹಿ. ಉಳಿದಿರುವ ತಮ್ಮನನ್ನಾದರೂ ಆದರದಿಂದ ನೋಡಿಕೊಳ್ಳ-ಬೇಕೆಂದು ಬೇಡುತ್ತೇನೆ. ನನ್ನ ಉದಾಹರಣೆಯಿಂದಲಾದರೂ ಅಣ್ಣ-ತಮ್ಮಂದಿರು ಒಬ್ಬೊರಿಗೊಬ್ಬರು ಕಷ್ಟಕಾಲದಲ್ಲಿ ಸಹಾಯ ಮಾಡುವಂತಾದರೆ ನನ್ನ ಮರಣದ ಉದ್ದೇಶವು ಸಫಲವಾಯಿ-ತೆಂದು ಎಣಿಸುತ್ತೇನೆ. ನನಗೂ ನಿಮ್ಮನ್ನು ಬಿಟ್ಟುಹೋಗಲು ಇಷ್ಟವಿಲ್ಲದಿದ್ದರೂ ಹೋಗಬೇಕಾಗಿದೆ. ಕಾಲವು ಸಮೀಪ-ವಾಗಿದೆ. ಬರೆಯುತ್ತಿದ್ದರೆ ಕೊನೆ-ಮೊದಲಿಲ್ಲ. ಕೊನೆಗೆ ನನ್ನ ಮನಸ್ಸೇ ಬದಲಾಯಿಸಬಹುದು. ಹೋಗಿಬರುತ್ತೇನೆಂಬುದನ್ನು ಮಾತ್ರ ಮರೆಯಬೇಡಿ. ಇಂತಿ ನಮಸ್ಕಾರಗಳು

ತಮ್ಮ ನಿರ್ಭಾಗ್ಯ—ನಿರುದ್ಯೋಗಿ—ಸಹೋದರ
ಸುಬ್ಬು.'

ಇದನ್ನು ಓದುತ್ತಿದ್ದಂತೆಯೇ ರಾಜನ ಕಣ್ಣುಗಳಲ್ಲಿ ನೀರು ಉಕ್ಕಿಬಂದು 'ಅಯ್ಯೋ ಸುಬ್ಬು, ನಿನ್ನನ್ನು ನಾನೇ ಕೊಂದೆ' ಎಂದು ಕೆಳಕ್ಕೆ ಬಿದ್ದುಬಿಟ್ಟನು. ಇದನ್ನು ಕೇಳಿದ ಸುಬ್ಬುವಿನ ಮಡದಿಯೂ ಪ್ರಜ್ಞೆತಪ್ಪಿದಳು. ಕಾಗದವೂ ನೋಟಿನ ಕಟ್ಟೂ ನೆಂದು ಮುದ್ದೆಯಾಗಿ ಹೋದುವು.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಪಂಡಿತ ತಾರಾನಾಥರಾಯರು

‘ಶರತ್’
ಬೆಂಗಳೂರು

(ವ್ಯಕ್ತಿ ಪರಿಚಯ)

★

ಸರ್ ಸ್ಟಾಫರ್ಡ್ ಕ್ರಿಪ್ಸರು ಭಾರತಕ್ಕೆ ಬಂದಾಗ, ಅವ ತಂದ ಸಲಹೆಗಳನ್ನು ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ದಿಲ್ಲಿಯಲ್ಲಿ—ಪ್ರತಿದಿನವೂ—ಸೇರುತ್ತಲಿತ್ತು. ಸಲಹೆಗಳನ್ನು ನೋಡಲು ಬಂದಿದ್ದ ಮಹಾತ್ಮಾ ಗಾಂಧಿಯವರು ಬೇಗನೆ ವರ್ಧಾಕ್ಕೆ ಹೊರಡುವವರಿದ್ದರು. ಯಾರೋ ಕೇಳಿದರಂತೆ, “ಬಾ ಪೂ ಜೀ; ತೀರ್ಮಾನವಾಗುವವರೆಗೆ ತಡೆಯಬಾರದೆ, ಏನಂತಹ ಅವಸರ?” ಒಡನೆಯೇ ಹೇಳಿದರು ಗಾಂಧೀಜಿ: “ವರ್ಧಾದಲ್ಲಿ ಮಿತ್ರರು ಕಾಯಿಲೆಯಿಂದ ಮಲಗಿದ್ದಾರೆ!” ಇಂತಹುದೇ ಸನ್ನಿವೇಶ. ರಾಯರ ಧರ್ಮಜ್ಞಾನವನ್ನು ಮೆಚ್ಚಿ, ಕಲಾಕೌಶಲ್ಯವನ್ನು ಕಂಡು “ಜಗತ್ತಿನ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಾಗಿ ಬನ್ನಿ” ಎಂದು ಆಮಂತ್ರಣದಿಂದ ಕರೆ ಬಂದಾಗ, “ನನ್ನ ರೋಗಿಗಳನ್ನು ಬಿಟ್ಟು ಬರಲೆ? ಅವರಿಗಿಂತ ಹಿರಿಯ ಧರ್ಮವೇ? ಅವರೇ ನನ್ನ ದೇವರು, ಧರ್ಮ!” ಎಂದರು, ಪಂಡಿತ ತಾರಾನಾಥರಾಯರು. ಈ ತ್ಯಾಗವೃತ್ತಿಗೆ ಅವರದೇ ಗುತ್ತಿಗೆ. ಮಹಾ ತ್ಯಾಗಿಗಳು ತಾರಾನಾಥರು. ವಿಶ್ವಖ್ಯಾತಿಯ ಧೂಳನ್ನು ಅಂಗೈಯಲಿಟ್ಟು ‘ಉಫ್’ ಎಂದು ಊದುವ ಜಾತಿ. ಕೀರ್ತಿಯ ಪರಿವೆಯೆ ಇಲ್ಲ ಅವರಿಗೆ.

ರಾಯರನ್ನು ಪಂಡಿತರೆಂದು ಕರೆಯೋಣವೇ? ಭಾಷಾ ವಿಶಾರದರವರು. ಆಂಗ್ಲ, ಉರ್ದು, ಅರಬ್ಬೀ, ಹಿಂದಿ, ಮರಾಟಿ, ತೆಲುಗು, ತಮಿಳು, ಕನ್ನಡಗಳಲ್ಲಿ ಪ್ರವೀಣರು. ಪೂರ್ಣ ಪಾಂಡಿತ್ಯ ಅವರದು, ಶುದ್ಧವಾದ ಜ್ಞಾನ, ಅದಕ್ಕೆ ತಕ್ಕ ಮಾತು. ಸಂಸ್ಕೃತದಲ್ಲಿ ತಾನೆ ಮತ್ತೇನು? ಆರೋಗ್ಯ-ಶಾಸ್ತ್ರಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡರು. ಅದರಲ್ಲಿ ಆಯುರ್ವೇದ-ಯುನಾನಿಗಳ ಸಂಯೋಗ; ಜೊತೆಗೆ ಅಲ್ಲೋ-ಪಥಿಯ ಪ್ರಯೋಗ. ಸುಧಾರಕರೆನ್ನೋಣವೇ? ಅದು ಸಾಲದೇನೋ! ಯಾವ ಒಂದು ಸುಧಾರಣೆಯೇ? ಸಮಾಜದ ಸರ್ವರಂಗಕ್ಕೂ ಸುಧಾರಣೆ ತಂದು, ಬದುಕಿದ ಬಾಳಿಗೆ ಬಣ್ಣ ಬಳಿದರು. ನಟರೆಂದಿರಾ? ಕನ್ನಡಿಗರಲ್ಲಿ ಅವರಿಗೆ ಸಮನಾದ ಪಾತ್ರಧಾರಿಗಳಿಲ್ಲವೇನೋ! ಇದ್ದರೂ ಬೆರಳಿನ ಲೆಕ್ಕದ ಆಚೆ ಹೋಗಲಾರರು. ಮಹಾತ್ಮಾ ಗಾಂಧಿಜಿಯವರ ಎದುರಿಗೆ ‘**ಭಕ್ತ-ಕಬೀರ**’ನನ್ನಾಡಿ,ಮುದುಕ ಮಹಾತ್ಮರನ್ನು ಮುಗ್ಧಗೊಳಿಸಿದರು. ಅಂದು ರಾಯರದೇ ಕಬೀರನ ಪಾತ್ರ. ನಾಡಿಗೆ ಯಾವ ಒಂದು ವಿಧದಲ್ಲಿ ಅವರ ಸೇವೆ ಸಂದಿಲ್ಲ? ಯಾವ ವೀಣೆಯ ತಂತಿಯನ್ನು ಅವರು ನುಡಿಸಿಲ್ಲ? ರಾಷ್ಟ್ರಸೇವೆಯೇ, ರಾಜಕೀಯವೇ, ರಾಮಾಯಣವೇ, ನಿಮಗೇನು ಬೇಕು? ಸಂಗೀತವೇ, ಸಾಹಿತ್ಯವೇ, ಸರಸವೇ, ಯಾವುದುಂಟು, ಯಾವುದಿಲ್ಲ? ಸಾಯುವ ಮುನ್ನ, ಜೀವದ ಬೆಳಕು ಆರಲಿಕ್ಕೆ ಹಿಂದಿನ ರಾತ್ರಿ, ಏಳು ಗಂಟೆಯವರೆಗೆ ಸಂಗೀತಸುಧೆಯಲ್ಲಿ ತಲ್ಲೀನರಾಗಿದ್ದರು. ಸಾಹಿತ್ಯದಲ್ಲಿ ರಾಯರ ಕೈ ಕನ್ನಡಿಗರಿಗೆ ಸಾಕಷ್ಟು ಪರಿಚಯ-ವಿದೆ—ರಾಜಕೀಯದಿಂದ ೧೯೨೦ ರಲ್ಲೇ ಹೈದರಾಬಾದು ಗಡಿಪಾಟಬೇಕಾಯಿತು. ತುಂಗಭದ್ರೆಯ ಆಚೆಯ ತೀರ ಮುಂದೆ ತುಳಿಯದಂತೆ. ಮದರಾಸಿನ “**ಹಿಂದು**”ವಿನಲ್ಲಿ ಹೈದ್ರಾ-ಬಾದು ಸರಕಾರದ ಮೇಲೆ ರಾಯರು ಬರೆದು ಎಬ್ಬಿಸಿದ ಧಾಳಿಯ ಫಲವದು.

ಧರ್ಮಾಚಾರ್ಯರೇನು? ನಾಯಿಕೊಡೆಗಳಂತೆ. ಇಂದು ಇಲ್ಲಿ, ನಾಳೆ ಮತ್ತೊಂದೆಡೆ ಅವರ ಅವತಾರ. ಭಾರತದಲ್ಲಿ ಇವರ ಅವತಾರ ಬೇಕಾದಷ್ಟೇ ಆಗಿದೆ. ಆದರೆ ದೇಶದ ಧಾರ್ಮಿಕ ಅರಿವು, ಅಚಲವಾಗಿ, ನಿಂತಲ್ಲೇ ನಿಂತಿದೆ. ಪ್ರತಿಯೊಬ್ಬ ಗುರು ತರುವ ಬೆಳಕು ವಿಶಾಲವಿಶ್ವದ ಸೂರ್ಯಕಾಂತಿಯಲ್ಲಿ ಸೇರಿ ಮಾಯವಾದಂತೆ! ಇಂದಲ್ಲ ನಾಳೆ ಫಲ ಬಂದೀತು ಎಂದು ಎನಿಸೋಣವೇ? ಆ ಹೆಬ್ಬಯಕೆಗೆ ಹುರುಪುಕೊಡುವ ಆಧಾರ ಇಲ್ಲ. ಒಂದೇ ಸಂತೋಷದ ಸುದ್ದಿ: ನಿಂತಲ್ಲೇ ನಿಂತಿದ್ದರೂ ನಮ್ಮ ನಾಡು ಹಿಂದೆ ಸಾಗಿಲ್ಲ; ಅದೊಂದೇ ನಮ್ಮ ಧರ್ಮಾ-ಚಾರ್ಯರ ಗೆಲುವಿನ ಗುರಾಣಿ.

“ಅಜ್ಜ ನೆಟ್ಟ ಆಲದ ಮರವೆಂದು ನೀರ ಬದಲು ಹಾಲು ಹೊಯ್ಯಲಿಕ್ಕಾದೀತೇ?” ಅಜ್ಜ ನೆಟ್ಟದ್ದು ಅಜ್ಜನಿಗಾಯಿತು. ಮೊಮ್ಮಗನ ಕಾಲಕ್ಕೆ ಮಾರ್ಪಾಡನ್ನೆ ಮಾಡಬೇಡವೇ? ಕಾರ್ಯ-ಕಾರಣ ಸಂಬಂಧವಿಲ್ಲದ ಸಮಾಜದ ಕೆಲವು ರೀತಿ, ನೀತಿ, ನಿಯಮ ರಾಯರ ರಕ್ತಕ್ಕೆ ಕಾವು ಕೊಟ್ಟಿತು. ಸಂಪ್ರದಾಯ ವಿರುದ್ಧತೆಗೆ ರಾಯರು ಹೆಸರಾದವರು. ಈ ನಿರ್ಭಯಕ್ಕಾಗಿ

★

ರಾಯರ ಕಂಚಿನಕಂಠದಿಂದ ಹರಿದ ಮಿಂಚಿನ ಮಾತು ಮನಗಳನ್ನು ಮಣಿಸಿತು. ಅವರ ವಿಚಾರಶಕ್ತಿ ಜನರಿಗೆ ಮೆಚ್ಚುಗೆ-ಯಾಯಿತು. ಅವರ ತರ್ಕಕ್ಕೆ ಜನ-ಜಂಗುಳಿ ಮನಸೋತಿತು!

★

ಅವರು ಕೆಲವು ವೇಳೆ ಸಮಾಜವನ್ನೇ ಎದುರು ಹಾಕಿಕೊಳ್ಳ ಬೇಕಾಯಿತು. ಇತರರಿಗೆ ಸರಿಬರಲಿ, ಬಾರದಿರಲಿ, ತಮ್ಮ ದಿಟ್ಟಿನ ನೋಟವೇ ತಮ್ಮ ರಾಗ; ತಮ್ಮ ತಿಳಿವಳಿಕೆಗೆ ತಟ್ಟಿದ್ದೇ ತಾಳ. ಹಿರಿಯರು ಹಾಡಿದುದೇ ಆಗಲಿ, ಬೇರೊಂದೇ ಆಗಲಿ, ತಮಗೆ ತೋಚಿದ್ದೇ ಕೃತಿ; ಅದನ್ನು ನೆರವೇರಿಸುವುದೇ ಕರ್ತವ್ಯ. ಸಮಾಜ ಸುಧಾರಣೆಯೆಂದು ಬಾಳನ್ನು ಕತ್ತಲಲ್ಲಿ ಕವಿಸಿದ್ದ ಕುರುಡು ನಂಬಿಕೆಗೆ ಬಲಿಹಾಕಿದರು. ಯೋಚನಾ ಶಕ್ತಿಯನ್ನು ಹಾಳು ಮಾಡುತ್ತಿದ್ದ ಆಚಾರಗಳಿಗೆ ಬಿತ್ತು, ಈ ಆಚಾರ್ಯರ ಪೆಟ್ಟು. ಉಗ್ರರಾದರೆಂದರೆ ಶಿವನಿಗಿಂತಲೂ ಒಂದು ಕೈಮೇಲೆ; ಆದರೆ ಶಾಂತಸ್ವಭಾವ ಅವರ ಬಾಳಿನಲ್ಲೇ ಬೆಳೆದು ಬಂದುದು. ತಾರೆಗಳ ಒಡೆಯನಿಗಿಂತ ತಂಪು. ಆ ಕತ್ತಲಲ್ಲಿ ಅವನದೇ ಬೆಳಕು; ಈ ಅಂಧಕಾರದಲ್ಲಿ ರಾಯರದೇ ದೀಪ.

ಈ ಹಾದಿಯಲ್ಲಿ ಕಡ್ಡಿ, ಕಸ, ಅಡ್ಡಿ ಬಂದಿತೆಂದರೆ ಅದಕ್ಕೆ ಉಳಿಗಾಲವಿಲ್ಲ; ಈ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಲೇ ಬೇಕು, ಈ ಉರಿಯಲ್ಲಿ ಸುಟ್ಟು ಹೋಗಲೇಬೇಕು. ಈ ಬೆಂಕಿ ಆರಿದ್ದನ್ನು ಕಂಡವರಿಲ್ಲ. ಆ ಪ್ರವಾಹ ನಿಂತದ್ದೇ ಇಲ್ಲ. ಅವರು ಮಾಡದ ಕೆಲಸವಿಲ್ಲ, ಟೀಕಿಸದ ಸಂಪ್ರದಾಯವಿಲ್ಲ. ಬೀಳಿಸದ ಗೋಡೆಯಿಲ್ಲ. ಅವರ ಬದುಕಿನ ಪರ್ವಕಾಲದಲ್ಲಿ ಅವರ ಹೆಸರು ಗುಡುಗು, ಗರ್ಜನೆ, ಮಿಂಚಿನ ಮಳೆ, ಕ್ರಾಂತಿಯ ಕಾವು.

ಆ ಕಂಚಿನ ಕಂಠದಿಂದ ಹರಿದ ಮಿಂಚಿನ ಮಾತು ಮಂದಿಯ ಮನಸ್ಸನ್ನು ಮಣಿಸಿತು. ಆ ವಿಚಾರಶಕ್ತಿ ಜನರಿಗೆ ಮೆಚ್ಚುಗೆಯಾಯಿತು. ಆ ತರ್ಕಕ್ಕೆ ಜನ ಮನಸೋತರು. ಹಿಂದೆಂದೂ ಕೇಳದ ಕಥೆಯೆಂದಲ್ಲ. ಆದರೆ ಹಿಂದೆ ಕೇಳಿದಂತಲ್ಲ ಅಷ್ಟೇ. ಬೇರೆ ಬಗೆ. ಆ ಸ್ಪಷ್ಟತೆ, ಆ ವಿನೋದ, ಆ ಸರಸ—ಎಲ್ಲ ಗುಣಗಳ ಸಮ್ಮಿಳಿತ. ಶಬ್ದಗಳೆಂದರೆ ರಾಯರ ಮಾತಿಗೆ ಮಣಿದಿದ್ದ ಮೇನಕೆ. ಅವರ ತಾಳಕ್ಕೇ ಕುಣಿವ ರಂಭೆ. ಆ ಕಲಾಕೌಶಲ್ಯ, ಮಾತಿನ ವ್ಯೂಹ—ಇನ್ನೂ ಮೆಲುಕುಹಾಕುವಂತಿದೆ. ಶಬ್ದದ ಉಪಯೋಗದಲ್ಲಿ ಈ "ಕಾರಣ ಪುರುಷ" ಸೋಲೆಂಬುದನ್ನೇ ಕಾಣಲಿಲ್ಲ. ಕಾವ್ಯಪುರುಷ ಕೈಲಾಸ ಕಣ್ಣು ಬಿಟ್ಟರು.

ಮಾತನಾಡುವುದು ಬಹು ಸುಲಭ. ನಿರ್ಣಯಗಳನ್ನು ಮಾಡುವುದು ಮತ್ತೂ ಸುಲಭ. ಆದರೆ ಆಡಿದ ಮಾತಿಗೆ, ಮಾಡಿದ ನಿರ್ಣಯಕ್ಕೆ ಕಾರ್ಯದ ರೂಪು ಕೊಡುವುದು, ಬಾಳಿನಲ್ಲಿ ರಂಗು ಕೊಡುವುದು ಹೆಚ್ಚು ಜನಕ್ಕೆ ಬಂದದ್ದಲ್ಲ. ಕಾರ್ಯದ ರೂಪೇ ಕಾಣದ ನಿರ್ಣಯಗಳು ಗಾಳಿಯಲ್ಲಿ ಹಾರಿಹೋಗುವ ಮಾತುಗಳು—ಈ ಅನಿಷ್ಟಗಳ ಕಾಟ ಭಾರತೀಯರಿಗೇ ಬಂದಂತಿದೆ. "ಕಲ್ಪನೆಯ ಕುದುರೆಗೆ ಕಾರ್ಯದ ಕಡಿವಾಣ ಹಾಕುವ ಕಲೆಯೊಂದು" ರಾಯರಿಗೆ ಸಿಗಲಿಲ್ಲ. ಎಂದರೆ ಕಾರ್ಯರಂಗದಲ್ಲಿ ಅವರಿಗೆ ಅಭಿಮಾನವಿಲ್ಲವೆಂದಲ್ಲ; ಅವರದು ಜ್ಞಾನಯೋಗ, ಕರ್ಮಯೋಗದಿಂದಾಚೆ ಇನ್ನೊಂದು ಮೆಟ್ಟಿಲು ಮೇಲೆ.

ಆ ಮನಮೋಹಕ ರೂಪು, ಆಕರ್ಷಿಸುವ ಕಣ್ಣು, ವಿಚಿತ್ರ ವೇದಾಂತ, ಜಲಪಾತದ ಜರ್ಝರಿಯ ಮಾತು. ಶುದ್ಧವಾದ ಬಿಳಿ ಉಡುಪು. ಈ ಚಕ್ರಾಧಿಪತ್ಯವಿಲ್ಲದ ಯೋಗಚಕ್ರವರ್ತಿಯನ್ನು ನೋಡಿದಾಗ "ಇದೇನೇ ಯೋಗಿ ತಾರಾನಾಥ? ಒಳ್ಳೆಯ ನಾಟಕದ ಪಾತ್ರಧಾರಿಯಂತೆ!" ಎಂದೆನಿಸಿತು. ಆ ವಾದಸರಣಿ, ವಿಚಾರವೈವಿಧ್ಯ, ಆಚಾರದ ಆಳ ಕೇಳಿದಾಗ ಮೈ ನವಿರಾಯಿತು. ಅವರ ಮಾತೂ ಅಷ್ಟೆ. ಅನುಭವದ ಆಯುಷ್ಯ ಅವರದು. ಈ ಪುಣ್ಯಪುರುಷನನ್ನು ಉಳಿಸಿಕೊಳ್ಳುವ ಭಾಗ್ಯ ಕನ್ನಡ ತಾಯಿಗೆ ಇಲ್ಲವಾಯಿತು.

ಯಾವುದಕ್ಕೆ ಬೇಕು ನಿಮಗೆ ಸೂತ್ರ? ಎಲ್ಲೇ ಆಗಲಿ, ಯಾವುದೇ ಆಗಲಿ, ಯಾರಿಗೇ ಆಗಲಿ, ಖಾಯಿಲೆಯಿಂದ ನರಳುವ ಮಂದಿಗೆ ಮೈ ನವೆಯಿಸಿ ಮದ್ದು ಕೊಟ್ಟರು. ಆಶ್ರಮ ದೀನರ ಸೇವಾಮಂದಿರವಾಯಿತು. ಎಲ್ಲೆಲ್ಲಿಯ ರೋಗಿಗಳು ಚಿಕಿತ್ಸೆಗೆಂದು ಬಂದರು. ಹಿಂದೆ ಹೈದ್ರಾಬಾದಿನಲ್ಲಿ ಹಕೀಮ್ ಹರಿಗೋವಿಂದಜೀ ಹತ್ತಿರ ಕಲಿತ ಯುನಾನೀ, ತಾವಾಗಿ ಕಲಿತ ಆಯುರ್ವೇದ ಒರೆಗಲ್ಲಾಯಿತು. ಒಮ್ಮೆ ಆಯುರ್ವೇದದ ಸಮ್ಮೇಳನಕ್ಕೆ ಅಧ್ಯಕ್ಷರೂ ಆದರು.

ವೇದಾಂತವೆಂದರೆ ಬಾಯಿನೀರಂತೆ. ನೆನಸಿದಾಗ ಬರುವುದು. ಭಾರತದ ಪರಮವೇದಾಂತಿ ಡಾ. ರಾಧಾಕೃಷ್ಣರೇ ಅಚ್ಚರಿಯಾದರು. ಅವರ ಜ್ಞಾನವಾಪಿ ದೀನರನ್ನೇ ಅಲ್ಲ ಸೆಳೆದದ್ದು; ಪರಮ ಯೋಗಿಗಳನ್ನೂ ಎಳೆಯಿತು. ಅವರ ಕಲೆಗೆ ಮನಸೋತರು ಹಿರಿಯರು. ಅವರ ಸಾಹಿತ್ಯಸೇವೆಯನ್ನು ಸನ್ಮಾನಿಸಿತು ನಾಡು. ಅವರ ನಾಟಕ, ಕಥೆ, ವೇದಾಂತವಾಣಿಯನ್ನು ಜನರು ಮೆಚ್ಚಿದರು; 'ಪ್ರೇಮಾಯತನ'ದಂತೆ 'ಪ್ರೇಮ'ವೂ ಜನಪ್ರಿಯವಾಗಿದ್ದಿತು.

ಇನ್ನು ಜಗಳಕ್ಕೆ ಬಂದ ಜನರ ಪಾಡೇನು? ಅವರ ಜುಟ್ಟು ಜಗ್ಗಿಸಲೇ ಬೇಕಾಯಿತು. ಅಷ್ಟಲ್ಲದೆ ಮತ್ತೇನು? ಸನಾತನಿಗಳು ಅವರಿಗೆ ಕೊಟ್ಟ ತೊಂದರೆ ಸಾಮಾನ್ಯವೇ?'

ಆಟಗಳಲ್ಲಿ ರಾಯರಿಗೆ ಅಭಿರುಚಿ. ಚಿಕ್ಕಂದಿನಲ್ಲಿ ಟೆನ್ನಿಸ್, ಕ್ರಿಕೆಟ್‌ಗಳನ್ನಾಡಿದರು. ಸಂಗೀತದಲ್ಲಿ ರಾಯರು ವಿದ್ವಾಂಸರು. ಮೃದಂಗದಲ್ಲಿ ಅವರದು ನಿಪುಣತೆ. ಕನ್ನಡ ಹಾಡೆಂದರೆ ಅವರಿಗೆ ಬಲು ಪ್ರೀತಿ. ನಾಟಕದಲ್ಲೂ ಅಷ್ಟೆ. ಹಳೆಯದಕ್ಕೆ ಹೊಸ ಬಣ್ಣ ಬಳಿದರು. ಹಾಡು ಹಾಡಿದರು. ನಾಟಕ ಆಡಿದರು.

ರಾಯಚೂರಿನಲ್ಲಿದ್ದಾಗ ಸಮಾಜಸೇವೆಗೆ ರಾಯರು ಸಿದ್ಧರಾದರು. ಖಾದಿಯ ಹಾದಿ ತುಳಿದರು. ಉಪಾಧ್ಯಾಯರಾದರು. ಮುಂದೆ ಆಶ್ರಮ ಸ್ಥಾಪಿತವಾಯಿತು. ಸುತ್ತಲೂ ಗುಡಿಸಲು

(೪೧ನೆಯ ಪುಟ ನೋಡಿರಿ)

ಸತಿ ★ (ಸಣ್ಣ ಕತೆ)

ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ., ಬಿ. ಟಿ.

ಗೌರಿ ಸಿರಿವಂತರ ಮನೆಯವಳು, ಚೆಲುವೆ, ಸದ್ಗುಣಿ, ಸತೀಧರ್ಮವನ್ನು ತಪ್ಪದೆ ಪಾಲಿಸುವವಳು; ಅಂತಹಳ ಬಾಳೂ ದುರಂತವಾಗಬೇಕೆ ?

★

ಸಿರಿವಂತರ ಮನೆಯಲ್ಲಿ ಬೆಳೆದ ಗೌರಿ ಚೆಲುವೆಯಾಗಿದ್ದಳು. ಅವಳ ಗಂಡ ಪರೇಶ, ತನ್ನ ಹದಗೆಟ್ಟ ಪರಿಸ್ಥಿತಿಯನ್ನು ಇದೀಗ ತನ್ನ ಸ್ವಂತ ಪ್ರಯತ್ನದಿಂದ ಸುಧಾರಿಸಿಕೊಂಡು, ಹಾಯಾಗಿ ಜೀವಿಸತೊಡಗಿದ್ದನು. ಇವನನ್ನು ಬಡತನವು ಆವರಿಸಿಕೊಂಡಾಗ ಗೌರಿಯ ತಂದೆ-ತಾಯಿಗಳು ಮಗಳನ್ನು ಕಳುಹಿಸಿಕೊಡಲು ಮನಸ್ಸುಮಾಡದೆ ಮನೆಯಲ್ಲಿಯೆ ಇಟ್ಟುಕೊಂಡಿದ್ದರು. ಈಗ ಗೌರಿ ಪರೇಶನಲ್ಲಿಗೆ ಬಂದಾಗ ತುಂಬಾ ಜವ್ವನಿತಿ, ಅವಳ ತುಂಬುಮೊಗದಲ್ಲಿ ಮಂದಸ್ಮಿತವು ಮಿನುಗಿದಾಗ ಅವಳು ಹರಯತೋಟದಲ್ಲಿ ಅರಿದ ಹೂವಿನಂತೆ ಅಂದವಾಗಿ ಕಾಣುತ್ತಿದ್ದಳು. ಪರೇಶನಿಗೆ ಇಂತಹ ಹೆಂಡತಿ ಸಿಕ್ಕದ್ದು ಅವನ ಸೌಭಾಗ್ಯವಾದರೂ, ಅದೇತಕೋ ಅವನಲ್ಲಿ ಅವಳ ಬಗ್ಗೆ ಒಂದು ವಿಚಿತ್ರ ಭಾವನೆ ತಲೆದೋರಿ, ಇಲ್ಲದ ಆಚರಣೆಯನ್ನು ಮಾಡಿಸತೊಡಗಿತು.

ಪರೇಶನು ಆ ಪಟ್ಟಣದಲ್ಲಿ ವಕೀಲನಾಗಿದ್ದನು. ತನ್ನವರೆಂಬುವವರು ಅಲ್ಲಿ ಅವನಿಗೆ ಯಾರೂ ಇರಲಿಲ್ಲ. ಅವನು ಯಾವಾಗಲೂ ವಿಚಾರಿಸುವುದು ಹೆಂಡತಿಯ ಬಗ್ಗೆಯೆ. ಒಮ್ಮೊಮ್ಮೆ ಕಚೇರಿ ಮುಗಿಯುವ ಪೂರ್ವದಲ್ಲಿ ಕೂಡ ಅಕಸ್ಮಾತ್ತಾಗಿ ಅವನು ಬರುವುದುಂಟು. ಅವನು ಹೀಗೆ ಬರುತ್ತಿರುವಾಗ ಗೌರಿಗೆ— ಅವನು ಇಷ್ಟು ತೀವ್ರ ಬರುತ್ತಿರುವ ಕಾರಣವು ತಿಳಿಯುತ್ತಿರಲಿಲ್ಲ. ಪರೇಶನಿಗೆ ಹೊಸದಾದ ಈ ಸ್ವಭಾವ ಎಲ್ಲಿಂದ ತಲೆದೋರಿತೊ ! ವಿನಾಕಾರಣವಾಗಿ ಮನೆಯ ಕೆಲಸದ ಆಳುಗಳನ್ನು ಒಮ್ಮೆಲೆ ಬಿಡಿಸುವುದು ವಾಡಿಕೆಯಾಗಿ ಬಿಟ್ಟಿತು. ಆದುದರಿಂದ ಅವನಲ್ಲಿ ಯಾವ ಆಳುಮಗನೂ ಬಹಳ ದಿನ ನೆಲೆಯಾಗಿ ನಿಲ್ಲದಾದನು, ಅದರಲ್ಲಿಯೂ ಇಂಥವನು ಗೌರಿಗೆ ಬೇಕಾದ ಮನುಷ್ಯನೆಂದರೆ ತೀರಿತು. ಅವನಿಗೆ ತತ್‌ಕ್ಷಣ ಮನೆಗೆ ಅಪ್ಪಣೆಯೆ. ತನ್ನ ಗಂಡನು ಹೀಗೆ ಮಾಡಿದಾಗ, ಅಭಿಮಾನಿನಿಯಾದ ಗೌರಿಯು ತನ್ನ ವಿರೋಧಪ್ರದರ್ಶನ ಮಾಡದೆ ಬಿಡುತ್ತಿರಲಿಲ್ಲ. ಆದರೆ ಅವಳು ವಿರೋಧ ತೋರಿಸಿದಷ್ಟು ಪರೇಶನ ಸ್ಥಿತಿಯು ಇನ್ನೂ ವಿಕೋಪಕ್ಕೆ ಹೋಗತೊಡಗಿತು.

ಪರೇಶನ ಹೃದಯದ ಕುದಿಯು ಇಷ್ಟಕ್ಕೆ ನಿಲ್ಲಲಿಲ್ಲ; ಗೌರಿಯ ಸಂಬಂಧ ಇಲ್ಲದ ಸಲ್ಲದ ಪ್ರಶ್ನೆಗಳನ್ನು, ಗುಪ್ತವಾಗಿ ಮನೆಯ ದಾಸಿಯರನ್ನು ಕೇಳತೊಡಗಿದನು. ಈ ಸಂಗತಿಯು ಗೌರಿಯ ಕಿವಿಗೂ ತಲುಪಿತು. ಗೌರಿ ಮಿತಭಾಷಿಣಿಯಾದರೂ ಬಳ್ಳಿ ಅಭಿಮಾನಿ. ಗಂಡನು ಮಾಡುತ್ತಿರುವ ಈ ಅಪಮಾನಗಳನ್ನು ಸಹಿಸದೆ, ಗಾಯಗೊಂಡ ಸಿಂಹಿಣಿಯಂತೆ ಅವಳ ಸಿಟ್ಟು ಕಳಕಳಿಸತೊಡಗಿತು. ಪರೇಶನಲ್ಲಿ ನೆಲೆಗೊಂಡ ಈ ಹುಚ್ಚು ಸಂಶಯಭಾವವು, ಕಾಲನ ಕರಾಳ ಕರವಾಲದಂತೆ ಇವರಿಬ್ಬರ ನಡುವೆ ಬೀಸಹತ್ತಿತು. ಕರವಾಲದ ಧಾರೆಯೆಂದ ಮೇಲೆ ಕರುಣೆಯೆಲ್ಲಿ ? ತನ್ನ ಹೆಂಡತಿಗೆ ತಾನು ಮಾಡುತ್ತಿರುವ ರೀತಿ ಸರಿಬರುವುದಿಲ್ಲವೆಂದು ಪರೇಶನಿಗೆ ಗೊತ್ತಾದರೂ ಅವನು ಬೇಕೆಂದೇ ಈಗ ಅವಳನ್ನು ಮುಖದ ಮೇಲೆಯೆ ಅವಮಾನ ಮಾಡಲು ಹಿಂಜರಿಯದಾದನು. ಗೌರಿ ಇದನ್ನು ತನ್ನ ಮೌನಮಂಡಿತ ಮುಖದಿಂದ ಅಸಹ್ಯವನ್ನು ವ್ಯಕ್ತಪಡಿಸಿದಂತೆ, ಪರೇಶನ ಹೊಟ್ಟೆಕಿಚ್ಚಿನ ಉರಿಯು ಭುಗಿಲೆನ್ನಹತ್ತಿತು ; ಅವನ ತಳಮಳವು ಹೃದಯವನ್ನು ಸುಡಹತ್ತಿತು.

ಗೌರಿಯ ಸಂಸಾರಸಂಭ್ರಮವು ಕುಸಿಬಿದ್ದಿತು. ಗಂಡನ ಆಚರಣೆ ಅವಳಿಗೆ ತಿಳಿಯದಾಯಿತು. ದಿನದಿನವೂ ಪರಿಸ್ಥಿತಿ ಕಂಗಾಲಸ್ಥಿತಿಗಿಡತೊಡಗಿತು. ಅವಳಿಗೆ ದಿನಗಳನ್ನು ಕಳೆಯುವುದು ಜಡವಾಗಹತ್ತಿತು. ಒಂದು ಮಗುವಾದರೂ ಇದ್ದರೆ ಅವಳು ಅದರ ಜೊತೆಗಾದರೂ ವೇಳೆ ಕಳೆಯಬಹುದಾಗಿತ್ತು. ಈಗ ಅವಳು ನೆಲೆಗಾಣದೆ ನಿರ್ಗತಿಕಳಾಗಿ ಬಿಟ್ಟಳು. ಅವಳಿಗೆ ಸಂಸಾರ ಸಂಭ್ರಮವು ಸಾಕಾಯಿತು. ಧರ್ಮ-ಕರ್ಮಗಳಲ್ಲಿಯಾದರೂ ಮನಸ್ಸು ಹಾಕಿ ಆತ್ಮೋದ್ಧಾರ ಮಾಡಿಕೊಳ್ಳಬೇಕೆಂದು ಬಗೆದಳು. ಆತ್ಮೋದ್ಧಾರದಲ್ಲಿ ಸಂತೋಷ ಸಿಕ್ಕಬಹುದೆಂದು ಅವಳ ಆಶೆ. ಈ ವಿಚಾರ ಬಂದೊಡನೆಯೆ ಅವಳು ಕೂಡಲೆ ಅಲ್ಲಿಯ 'ಪ್ರಾರ್ಥನಾಮಂದಿರ'ದ ತರುಣ ಸಂನ್ಯಾಸಿಯಾದ ಪರಮಾನಂದನನ್ನು ಕರೆಯಿಸಿ, ತನಗೆ 'ಗೀತೆಯ ಗುಟ್ಟ'ನ್ನು ತಿಳಿಯಹೇಳಬೇಕೆಂದು ಬಿನ್ನವಿಸಿ, ಅವನನ್ನು ಅನನ್ಯ ಮನಸ್ಸಿನಿಂದ ಗುರುವೆಂದು ಭಾವಿಸಿರುವೆನೆಂದು ಹೇಳಿ, ಉದ್ಧಾರ ಮಾಡಬೇಕೆಂದು ಪಾದದಡಿಯಲ್ಲಿ ಬಿದ್ದಳು. ಅವಳು ಇಷ್ಟು ದಿನ ತೋರಿಸಿದ ಪ್ರತಿಫಲವಿಲ್ಲದ ಪ್ರೇಮ-ಪ್ರೀತಿಗಳ ಒಡ್ಡೊಡೆದು ಈಗ ಗುರುವಿನ ಪಾದಗಳನ್ನು ತೇಲಾಡಿಸಿತು.

ಪರಮಾನಂದನ ಪವಿತ್ರ ನಡತೆಯ ಬಗ್ಗೆ ಅಲ್ಲಿ ಯಾರಿಗೂ— ಕನಸಿನಲ್ಲಿ ಕೂಡ—ಸಂಶಯ ಬರುತ್ತಿರಲಿಲ್ಲ. ಎಲ್ಲರೂ ಅವನನ್ನು

* ವಿಶ್ವಕವಿ ರವೀಂದ್ರರ "Saved" ಕಥೆಯ ಅನುವಾದವಿದು.

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ದೇವರಂತೆ ಪೂಜಿಸುತ್ತಿದ್ದರು. ಪರೇಶನಿಗೆ ಪರಮಾನಂದನ ವಿಶುದ್ಧ ಆಚರಣೆಯ ಬಗ್ಗೆ ಆಕ್ಷೇಪಣೆ ಎತ್ತುವ ಧೈರ್ಯವಾಗದ್ದರಿಂದ, ಅವನ ಹೊಟ್ಟೆಕಿಚ್ಚಿನ ರೊಚ್ಚಿನುರಿಯು ಒಳಗೊಳಗೆ ಅವಿತುಕೊಂಡು, ದೇಹವನ್ನೆ ತಿನ್ನಲು ಮಾರ್ಗಮಾಡಿಕೊಳ್ಳುವ ಗಂಡಮಾಲೆಯ ಹುಣ್ಣಿನ ಹಾಗೆ, ತನ್ನ ಮಾರ್ಗವನ್ನು ಕಲ್ಪಿಸತೊಡಗಿತು.

ಒಮ್ಮೆ ಒಂದು ತೀರ ಕ್ಷುಲ್ಲಕ ಕಾರಣವು ಹೊಗೆಯಾಡಿಸಿ ವಿಷವನ್ನು ಕಾರಿಸಿತು. ಪರೇಶನು ಪರಮಾನಂದನನ್ನು ಕಪಟಸಾಧುವೆಂದು ಮನಬಂದಂತೆ ಹೀಯಾಳಿಸಿ, ಮನಸ್ವಿಯಾಗಿ ಹಳಿದು, ವ್ಯಂಗ್ಯಪೂರಿತ ವಿಷದ ದನಿಯಲ್ಲಿ “ಸಾಧುವಿನಂತೆ ನಟಿಸುತ್ತಿರುವ ಈ ಬಕಪಕ್ಷಿಯಲ್ಲಿ ನಿನ್ನ ಅನುರಾಗವಿಲ್ಲವೆಂದು ಆಣೆ ಮಾಡುತ್ತೀಯಾ ?” ಎಂದು ಗೌರಿಯನ್ನು ಕೇಳಿ, ಹರಿದು ತಿನ್ನುವಂತೆ ಅವಳ ಮುಖವನ್ನು ನೋಡತೊಡಗಿದನು. ಗೌರಿ ಹೆಡೆ ತುಳಿದ ಹಾವಿನಂತೆ ಹಾರಿಬಿದ್ದು, ಇವನ ಹುಚ್ಚು ಸಂಶಯಕ್ಕಾಗಿ ಅಸಹ್ಯಪಟ್ಟು, ಆಕ್ರೋಶ ಬೆರೆತ ವ್ಯಂಗ್ಯಸರಣಿಯಲ್ಲಿ “ಹಾಗಿದ್ದರೂ ನಿಮಗೇನು ಬಂತು ಕೇಡು ?” ಎಂದು ಕೇಳಿ, ಅವನನ್ನು ನೆಟ್ಟ ದಿಟ್ಟಿಯಲ್ಲಿ ಅವಳೂ ನೋಡಿದಳು. ಪರೇಶನು ಕೂಡಲೆ ಅವಳು ಒಳಗಿರುವಾಗಲೇ ಬಾಗಿಲಿಗೆ ಬೀಗಹಾಕಿ ಕಚೇರಿಗೆ ಹೋಗಿಬಿಟ್ಟನು.

ಈ ಹೊಸ ಅತ್ಯಾಚಾರದ ಅತಿರೇಕವನ್ನು ಸಹಿಸದ ಗೌರಿಯು ಬಾಗಿಲನ್ನು ಹೇಗೋ ತೆಗೆದು ಹೊರಬಿದ್ದಳು.

ಸಂನ್ಯಾಸಿಯು ಮಧ್ಯಾಹ್ನದ ಸುಪ್ರಶಾಂತತೆಯಲ್ಲಿ ಧರ್ಮತತ್ತ್ವ-ನೀತಿಗಳನ್ನು ಅಭ್ಯಾಸಿಸುತ್ತ ತನ್ನ “ಏಕಾಂತ-ನಿವಾಸ”ದಲ್ಲಿ ನಿಮಗ್ನನಾಗಿ ಸಮಾಧಿಸ್ಥನಂತೆ ಕುಳಿತಿದ್ದನು. ಮೋಡವಿಲ್ಲದ ಆಕಾಶದಲ್ಲಿ ಮಿನುಗುವ ಮಿಂಚಿನಂತೆ ಗೌರಿ ಒಮ್ಮೆಲೆ ನಿವಾಸವನ್ನು ನುಗ್ಗಿ ಅಭ್ಯಾಸವನ್ನು ತಡೆದಳು.

“ನೀನೇತಕಿಲ್ಲಿ, ಗೌರೀ ?” ಅಚ್ಚರಿಯಿಂದ ಗುರು ಕೇಳಿದನು.

“ನನ್ನೊಡೆಯಾ ! ಗುರುದೇವ ! ನನ್ನ ನಿತ್ಯಜೀವನದ ಅವಮಾನದ ಬಾಳಿನಿಂದ ನನ್ನನ್ನು ಮುಕ್ತಮಾಡಿ, ನಿನ್ನ ಪಾದಸೇವೆಯಲ್ಲಿ ಜೀವನವನ್ನರ್ಪಿಸಲು ನನಗೆ ಅವಕಾಶ ಮಾಡಿಕೊಡಬಾರದೆ ?” ಗೌರಿ ಬಿಕ್ಕುತ್ತ ನುಡಿದಳು.

ಪರಮಾನಂದನು ಅವಳನ್ನು ಒಳಿತಾಗಿ ಛೀ ಹಾಕಿ, ಮನೆಗೆ ಕಳುಹಿಸಿದನು. ಅವಳು ಹೋದಮೇಲೆ ಆ ತರುಣ ಸಂನ್ಯಾಸಿಯು ಮತ್ತೆ ಕೈಯಲ್ಲಿ ಹೊತ್ತಗೆಗಳನ್ನು ತೆಗೆದುಕೊಂಡನೆಂದು ಹೇಳುವುದು ಮಾತ್ರ ಅನುಮಾನ.

ಪರೇಶನು ಮನೆಗೆ ಬಂದಾಗ ಬಾಗಿಲು ತೆರೆದಿರುವುದನ್ನು ನೋಡಿ :

“ಇಲ್ಲಿ ಯಾರು ಬಂದಿದ್ದರು ?” ಎಂದು ಗೌರಿಯನ್ನು ಸಂಶಯಗ್ರಸ್ತನಾಗಿ ಕೇಳಿದನು.

“ಯಾರೂ ಬಂದಿಲ್ಲ; ನಾನೇ ಗುರುವಿನ ಮನೆಗೆ ಹೋಗಿದ್ದೆ!” ಗೌರಿ ಶಾಂತವಾಗಿ ಹೇಳಿದಳು.

“ಯಾತಕ್ಕಾಗಿ ಹೋಗಿದ್ದೆ ?” ಪರೇಶನ ಮುಖದ ಬಣ್ಣ ಬದಲಾಗ ಹತ್ತಿತು.

“ನನಗೆ ಹೋಗಬೇಕಾಗಿದ್ದಿತು !” ಗೌರಿಯ ಕಟ್ಟಿಗೆ ಮುರಿದಂತಹ ಉತ್ತರ.

ಆ ಹೊತ್ತಿನಿಂದ ಪರೇಶನು ಮನೆಗೆ ಭದ್ರವಾದ ಕಾವಲನ್ನಿರಿಸಿದನು. ಅವನ ಹೊಟ್ಟೆಕಿಚ್ಚಿನ ತಿಳಿಗೇಡಿತನವು ಎಲ್ಲರ ಹರಟೆಯ ಮುಖ್ಯಮಾತಾಗಿ ಬಿಟ್ಟಿತು.

ತನ್ನ ಪ್ರಿಯ ಶಿಷ್ಯಳಾದ ಗೌರಿಯು ಸಹಿಸುತ್ತಿರುವ ಅಮಾನುಷ ಅವಮಾನಗಳನ್ನು ಕೇಳಿ, ಪರಮಾನಂದನ ಧ್ಯಾನವು ಚಲವಿಚಲಿತವಾಗತೊಡಗಿತು. ಒಮ್ಮೆ ಅವನಿಗೆ ಆ ಊರನ್ನು ಕೂಡಲೆ ಬಿಟ್ಟುಹೋಗಬೇಕೆಂದೆನ್ನಿಸುವುದು ; ಮರುಕ್ಷಣದಲ್ಲಿ ಅಸಹ್ಯ ವೇದನೆಗಳಲ್ಲಿ ತೊಳಲುತ್ತಿರುವ ಗೌರಿಯನ್ನು ಕಡೆಗಣಿಸುವುದಕ್ಕೆ ಮನಸ್ಸು ಒಪ್ಪದಾಯಿತು. ಅವನು ಬಹಳ ಬೇಗುದಿಗೊಂಡನು. ಈ ದಿನಗಳಲ್ಲಿ ಆ ಬಡಸಂನ್ಯಾಸಿಯು ಪಟ್ಟ ಪಾಡಿನ ಬವಣೆಯನ್ನು ಹೇಳುವುದು ಅಸಾಧ್ಯ. ಅದನ್ನು ಊಹಿಸಿಯೆ ತಿಳಿದುಕೊಳ್ಳುವುದು ಮೇಲು.

ಕಡೆಗೊಂದು ದಿನ ತನ್ನ ಮನೆಯಲ್ಲಿಯೆ ಸೆರೆಮನೆಯ ಸವಿಯನ್ನು ಅನುಭವಿಸುತ್ತಿದ್ದ ಗೌರಿಗೆ ಒಂದು ಪತ್ರ ಬಂದಿತು. ಅದರ ಒಕ್ಕಣಿಕೆ ಇದು :

“ಮಗೂ !

ಪರಮಾತ್ಮನ ಪಾದಾರವಿಂದಗಳಲ್ಲಿ ತಮ್ಮ ಆತ್ಮವನ್ನರ್ಪಿಸಿ ಪವಿತ್ರರಾಗಲು ಅನೇಕ ಮಹಾಮಹಿಳೆಯರು, ತಮ್ಮ ಸಂಸಾರದ ಜೊಂಜಾಟವನ್ನು ತೊಡೆದು ಹಾಕಿ ಹೊರಬಿದ್ದುದು ನಿಜ ; ನಿನ್ನ ಸಂಸಾರದ ಜೊಂಜಾಟಗಳು ನಿನ್ನನ್ನು ದೇವರಿಂದ ದೂರಸೆಳೆಯಹತ್ತಿದ್ದರೆ, ಅವನ ಕೃಪಾಪ್ರಸಾದದಿಂದ ಅವನ ಭಕ್ತಳಾದ ನಿನ್ನನ್ನು ಪಾರುಮಾಡಿ, ಅವನ ಪಾದಕಮಲಗಳ ಸೇವೆಗೆ ಸನ್ನದ್ಧ-

ಮಾಡಲು ಹೆಣಗುವೆ. ನಿನ್ನ ಇಚ್ಛೆ ಇದ್ದರೆ ನಾಳೆಯ ಮಧ್ಯಾಹ್ನ ಎರಡುಗಂಟೆಗೆ, ನಿನ್ನ ತೋಟದ ಕೆರೆಯ ಬಳಿಯಲ್ಲಿ ನನ್ನನ್ನು ಕಾಣು.

—ಪರಮಾನಂದ ”

ಗೌರಿ ಪತ್ರವನ್ನು ತನ್ನ ವಿಶಾಲವಾದ ತುರುಬಿನಲ್ಲಿ ಅಡಗಿಸಿಟ್ಟಳು. ಮರುದಿನ ಮಧ್ಯಾಹ್ನ, ಮೈ ತೊಳೆದುಕೊಳ್ಳುವ ಮೊದಲು ಬಾಚಿಕೊಳ್ಳುವಾಗ ನೋಡಲು ಪತ್ರ ಅಲ್ಲಿರಲಿಲ್ಲ. ಪತ್ರವು ಹಾಸಿಗೆಯಲ್ಲಿ ಉಚ್ಚಿಬಿದ್ದು ಗಂಡನ ಕೈಗೆ ಸಿಕ್ಕಿರಬಹುದೋ ಎಂದು ಗೌರಿ ಕ್ಷಣಹೊತ್ತು ಚಿಂತಿಸಿದಳು. ಪತ್ರವು ಅವನಲ್ಲಿ ಕ್ರೋಧವನ್ನು ಉದ್ರಿಕ್ತಗೊಳಿಸಬಹುದೆಂದು ಭಾವಿಸಿ, ಮೊದಮೊದಲು ಅವಳು ಬೆದರಿದಳು. ಕೊನೆಗೆ ತನ್ನನ್ನು ಮುಕ್ತಗೊಳಿಸುವ ಆ ಪತ್ರವು ಪವಿತ್ರವಾಗಿ ತಲೆಯ ಮೇಲಿರಲು ಯೋಗ್ಯವಲ್ಲದೆ, ಉನ್ಮತ್ತ ಕೈಗಳ ಹೊಲಸು ಸ್ಪರ್ಶದಿಂದ ಮೈಲಿಗೆಯಾಗಲು ತಕ್ಕುದಲ್ಲವೆಂದು ನಿರ್ಧರಿಸಿ, ಧಾವಿಸುತ್ತ ಗಂಡನ ಕೋಣೆಯನ್ನು ನುಗ್ಗಿದಳು.

ಕಣ್ಣೊಡೆಯುವ ನೋಟ! ಪರೇಶ ಕಣ್ಣು ತಿರುಗಿಸುತ್ತ ನೆಲದ ಮೇಲೆ ನರಳುತ್ತ ಬಿದ್ದಿರುವನು. ಅವನ ಬಾಯಲ್ಲಿ ಬುರುಗು ತುಂಬಿ ಹೊರಸೂಸಿತ್ತು. ಮುಷ್ಟಿಯಲ್ಲಿ ಬಲವಾಗಿ ಹಿಡಿದ ಆ ಪತ್ರವನ್ನು ಗೌರಿ ಕಸಿದುಕೊಂಡು, ಕೂಡಲೆ ಡಾಕ್ಟರರನ್ನು ಕರೆಯ ಕಳುಹಿದಳು.

ಮಾನಸಿಕ ಉದ್ವೇಗದಿಂದುಂಟಾಗುವ ಮಿದುಳಿನ ರಕ್ತಸ್ರಾವದ ಪರಿಣಾಮವೆಂದು ಡಾಕ್ಟರರು ಉಸುರುಗರೆದರು. ಅವರು ಬರುವ ಮೊದಲೇ ರೋಗಿ ತೀರಿಕೊಂಡು ಬಿಟ್ಟಿದ್ದ.

ಪರೇಶನಿಗೆ ಆ ದಿನವೇ ಒಂದು ಅಗತ್ಯದ ಕೆಲಸವಿದ್ದು, ಅವನಿಗೆ ಮನೆಯ ಕಡೆಗೆ ಬರಲಾಗುವುದಿಲ್ಲವೆಂಬ ಸಂಗತಿಯನ್ನು ಗುಪ್ತವಾಗಿ ತಿಳಿದುಕೊಂಡು, ಪರಮಾನಂದನು ಅಂದಿನ ದಿನವೇ ಗೌರಿ ಸಂಧಿಸಬೇಕೆಂದು ಬಗೆದು ಪತ್ರ ಬರೆದಿದ್ದ. ಈ ಹಂಚಿಕೆಯಿಂದ ಗೌರಿಯನ್ನು ಉಳಿಸಬೇಕೆಂದು ಗುರುದೇವ ವಿಚಾರಿಸಿದ್ದ !

ವಿಧವೆಯಾದ ಗೌರಿಯು ಆ ವೇಳೆಗೆ ಕಳ್ಳ ಹೆಜ್ಜೆಯಲ್ಲಿ ಬರುವ ಗುರುವನ್ನು ಕಿಟಕಿಯ ಮಾರ್ಗವಾಗಿ ಕೆರೆಯ ಹತ್ತಿರ ಕಂಡಳು. ಮಿಂಚು ಸೆಳೆದಾಗ ಕಣ್ಣು ಕೆಳಗಿಳಿಸುವಂತೆ ಗೌರಿ ತನ್ನ ಮುಖ ತಗ್ಗಿಸಿದಳು. ಅವನ ಹಂಚಿಕೆಯ ಪರಿಣಾಮವನ್ನು ಅವಳು ಆ ಉದ್ವೇಗದಲ್ಲಿ ಕೂಡಲೆ ಗ್ರಹಿಸಿದಳು.

“ ಗೌರೀ ! ” ಗುರುವಿನ ಕೂಗು.

“ ಬಂದೆ ” ಗೌರಿ ಉತ್ತರಕೊಟ್ಟಳು.

ಪರೇಶನ ಮರಣವಾರ್ತೆಯನ್ನು ಕೇಳಿ ಅವನ ಗೆಳೆಯರು ಅವನ ಅಂತ್ಯವಿಧಿಯನ್ನು ಜರುಗಿಸಲು ಬಂದು ನೋಡಿದಾಗ, ಗೌರಿಯು ಗಂಡನ ಬದಿಯಲ್ಲಿ ಸತ್ತುಬಿದ್ದಿದ್ದಳು. ಘೋರವಾದ ವಿಷವು ಅವಳ ಅಸುವನ್ನು ಹೀರಿತ್ತು. ‘ ಸತಿ ’ ಯಾಗಿ ತೋರಿದ ಅವಳ ಸತೀಧರ್ಮವನ್ನು ಕಂಡು ಎಲ್ಲರೂ ಅಚ್ಚರಿಗೊಂಡರು. ಇಂತಹ ಸತೀತ್ವ ಪರಿಪಾಲನೆಯು ಇಂದಿನ ದಿನಮಾನದಲ್ಲಿ ಅಪರೂಪವೆಂದೇ ಹೇಳಬೇಕು.

(೩೨ ನೆಯ ಪುಟದಿಂದ ಮುಂದುವರಿದುದು.)

ಹುಟ್ಟಿಕೊಂಡುವು. ಇಂದು ಅದು ವಿದ್ಯಾಲಯವಾಗಿದೆ; ಗುಡಿಸಿಲೇ ಬಂಗಲೆಗಳಾಗಿವೆ.

ರಾಯರ ಮೂಲಮಂತ್ರ ಕ್ರಾಂತಿ. ಎಲ್ಲೆಲ್ಲೂ ದಂಗೆ, ದಾಳಿ. ಅವರ ಸೂತ್ರ ಸಹಿಸದಿದ್ದರೆ ಸರಿಯಲೇ ಬೇಕು. ಅವರ ಮತವಂತೂ ಅಸಮ್ಮತವೆ. ಬ್ರಹ್ಮಚಾರಿಯಾಗಿ ಬಾಳಿದರು ಕೆಲವು ಕಾಲ. ಹೆಂಗುಸು ಹೆಮ್ಮಾರಿಯೆಂದು ಸಾಧು-ಸಂತರ ಜೊತೆ ಹಿಡಿದರು. ಹೆಣ್ಣಿನ ನೋಟ ಸಹಿಸದ್ದಾಗಿತ್ತು. ಮದುವೆ ‘ ಆತ್ಮದ ಮಾರಣ ’ ವಾಗಿತ್ತು.

‘ ಜೀವವದು ಪ್ರೇಮ, ಪ್ರೇಮವದು. ಜೀವ ’ ಎಂದರು ಮತ್ತೊಮ್ಮೆ. ರಾಯರಿಗೆ ಬಹಳ ಕಾಲದ ಹಿಂದೆಯೆ ಮದುವೆ ಆಯಿತು ; ಮಕ್ಕಳೂ ಇದ್ದಾರೆ.

ರಾಯರು ಕೆಲವು ರೀತಿಯಲ್ಲಿ ಪೂರ್ವ-ಪಶ್ಚಿಮಗಳ ಮಿಲನ ವಿರೋಧಗಳ ಒಡಲು. ಮುಗಿಲನ್ನು ನೆಲಕ್ಕೇ ಎಳೆಯುವ ಮಂತ್ರ ಅವರದು.

* * *

ತಾರಾನಾಥರು ಮೊನ್ನೆ ಮೊನ್ನೆ ತಮ್ಮ ೫೭ನೆಯ ವಯಸ್ಸಿನಲ್ಲಿ ತೀರಿಕೊಂಡರು. ಕರ್ನಾಟಕಕ್ಕೆ ಕತ್ತಲು ಕವಿಯಿತು. ನಾಡಿನ ಜನ ಗೋಳಿಟ್ಟಿತು. ಆದರೇನು ! ಅವರ ಆದರ್ಶ ಮರೆಯಲಾದೀತೇ ? ಆ ಕ್ರಾಂತಿಯ ಮೂರ್ತಿಯನ್ನು ನೆನೆಯದಿರಲುಂಟೇ ?

ಹಿರಿಯರು ಮಡಿದರೆಂದು ನಾವು ಮರುಗಿದರೇನು ಬಂತು ? ಅವರ ಮನದ ನೆನಸನ್ನು, ಜೀವನದ ಕನಸನ್ನು ಮೂಡಿಸಿದರೆ ತಾನೇ ಅವರನ್ನು ನೆನಸಿದ್ದಕ್ಕೆ ಸಾರ್ಥಕ ? ಅದೇ ಅಲ್ಲವೆ ಅವರ ಮರಣದ ಮಂಚಿಗೆ—ನಿದ್ದೆಯ ನೋವಿಗೆ—ನಿಜವಾದ ಕಾಣಿಕೆ? ಅದೇ ಅಲ್ಲವೆ ಅವರು ನಮ್ಮನ್ನು ಮಾಡಬಯಸಿದ್ದು ? ಅದೇ ತಾನೆ ನಾವು ಮಾಡಬೇಕಾದದ್ದು ?

ಕಾಮನ ಸೋಲು

(ಹನ್ನೆರಡು ಸ್ವತಂತ್ರ ಸಣ್ಣ ಕಥೆಗಳು)

ಬರೆದವರು : ಶ್ರೀ. ಅ. ನ. ಕೃಷ್ಣರಾಯರು. ಬೆಂಗಳೂರಿನ ವಸಂತ ಗ್ರಂಥಮಾಲೆಯ ಮೊದಲನೆಯ ಕುಸುಮ.

ಇದು ಶ್ರೀಮಾನ್ ಅ. ನ. ಕೃಷ್ಣರಾಯರ ಮೂರನೆಯ ಕಥಾಸಂಗ್ರಹ. ಮೊದಲಿನವೆರಡಾದ ‘ ಮಿಂಚು ’ ‘ ಕಿಡಿ ’ ಗಳನ್ನು ಹಲವು ಜನ ಕನ್ನಡ ವಾಚಕರು ನೋಡಿರಬಹುದು. ಹೆಚ್ಚಾಗಿ ಈ ಕತೆಗಾರರ ಈ ಮೊದಲಿನ ಕತೆಗಳು, ಸಮಾಜದ ವಿಷಯದಲ್ಲಿರುವ ಅವರ ಅಭಿಪ್ರಾಯ ಪ್ರಚಾರಕ್ಕಾಗಿ ಹೊರಟುವುಗಳು ; ಎಂತಲೆ ಅವು ಏಕದೃಷ್ಟೀಯ ವಿಚಾರದ ಮೂಲಕ ಅನೇಕ ಸಂಪ್ರದಾಯಪ್ರಿಯರ ಮನಸ್ಸನ್ನು ಕೆಣಕಿದುವು; ರಸಜ್ಞರ ಮನಸ್ಸನ್ನು ರಸಾಭಾಸದ ಬೇಸರಕ್ಕೆ ಗುರಿಮಾಡಿದುವು. ಜಗತ್ತಿನ ಪರಿಚಯ ಸಾಕಷ್ಟಿರದ—ತರುಣ ಸಾಹಿತ್ಯಿಕರ ಮೊದಮೊದಲಿನ ಅಭಿಪ್ರಾಯ ಕಸುಕುಕಸುಕಾಗಿರುವುದು ಅಸಹಜವಲ್ಲ. ಈ ಅಭಿಪ್ರಾಯಗಳನ್ನವರು ವೈಯಕ್ತಿಕ ಅನುಷ್ಠಾನದ ಮೂಲಕ ಒರೆಗೆ ಹಚ್ಚಿ, ಆ ಮೇಲೆ ಅವುಗಳನ್ನು ಸಮಾಜದ ಮುಂದೆ ಇರಿಸುತ್ತಿರಬೇಕಲ್ಲದೆ, ಒಮ್ಮೆಲೆ ಉಪದೇಶಕರಾಗಿ ನಿಲ್ಲುವುದು ವಿವೇಕವೆನಿಸದು. ವ್ಯಕ್ತಿ ತನ್ನ ಜೀವನವನ್ನು ಒಳ್ಳೆಯ ಗುರಿಗಾಗಿ—ತನಗೆ ಇಷ್ಟವೆನಿಸಿದ ದಾರಿಯಲ್ಲಿ ಸ್ವತಂತ್ರವಾಗಿ ಸಾಗಿಸಬಹುದು ; ಆ ದಾರಿಯಲ್ಲಿ ಸಿಕ್ಕುವ ಕಷ್ಟ-ನಷ್ಟಗಳ ಪರಿಣಾಮವನ್ನು ವೈಯಕ್ತಿಕವಾಗಿ ಬೇಕಾದಹಾಗೆ ಅನುಭವಿಸಬಹುದು; ಆದರೆ ಸುಮ್ಮಗೆ ತನ್ನದೊಂದು ಗೊತ್ತಿದ್ದ ದಾರಿಯಲ್ಲಿ ಸಾಗಿರುವ ಸಮಾಜವನ್ನೂ ತನ್ನ ಅಭಿಪ್ರಾಯದ ದಾರಿಯಲ್ಲಿ ಕರೆದುಕೊಂಡು ಹೋಗಬೇಕೆನ್ನುವ ಅನನುಭವಿಕ ತರುಣರು, ಹಲವು ಸಲ ಸಮಾಜವನ್ನು ಕಂಗೆಡಿಸಿ ಮುಂಗಾಣದಂತೆ ಮಾಡಿಬಿಡುತ್ತಾರೆ. ಇಷ್ಟೇ ಅಲ್ಲದೆ ಅಭಿಪ್ರಾಯಗಳು ಸತ್ಯಾಭಾಸದುವುಗಳಾಗಿದ್ದರೆ ವ್ಯಕ್ತಿ, ಸಮೂಹ ಎರಡೂ ಹಳ್ಳಕ್ಕೆ ಬೀಳಬೇಕಾಗುವುದು. ಉಪದೇಶಕನು ಯಾವಾಗಲೂ ‘ ತಮಸೋ ಮಾ ಜ್ಯೋತಿರ್ಗಮಯ!’ ಎಂದು ಹೇಳಬೇಕಲ್ಲದೆ, ಭಾವವಿವಶನಾಗಿ ತಾನು ಕಾಣದ ಕಗ್ಗತ್ತಲೆಯ ದಾರಿಯಲ್ಲಿ ಕರೆದೊಯ್ಯಲಾಗದು.

ಪ್ರಸ್ತುತ ಸಂಗ್ರಹದಲ್ಲಿಯ ಕೆಲವು ಕತೆಗಳೂ ಅಭಿಪ್ರಾಯಪ್ರಚಾರಕ್ಕಾಗಿ ಹೊರಟುವಾಗಿದ್ದರೂ, ಕತೆಗಾರರ ಜಗತ್ತಿನ ಅನುಭವಗಳ ಮೂಲಕ ಅಭಿಪ್ರಾಯದ ಕಸುಕುತನ ಕಡಿಮೆಯಾದುದನ್ನು ಇಲ್ಲಿ ಕಾಣಬಹುದು. ಆದುದರಿಂದಲೆ ಇಲ್ಲಿಯ ಕತೆಗಳು ಸಂಪ್ರದಾಯಪ್ರಿಯರನ್ನು ಕೆರಳಿಸವು; ರಸವಿಮರ್ಶಕರನ್ನು ಆಭಾಸದ ಬೇಸರಕ್ಕೆ ಗುರಿಮಾಡವು. ‘ **ಸ್ವರ್ಗಸುಖ** ’ ಎಂಬ ಮೊದಲನೆಯ ಕತೆಯಲ್ಲಿ ಅಣ್ಣಾಸ್ವಾಮಿರಾಯರ ಧೂರ್ತಜೀವನವೂ ಮತ-ಮತಗಳಲ್ಲಿಯ ಹುಚ್ಚು ಜಗಳಾಟಗಳೂ ವ್ಯಂಗ್ಯವಾಗಿ ಚಿತ್ರಿತವಾಗಿರುವುವು. ಇದನ್ನೋದಿ ಯಾವ ಮತಾಭಿಮಾನಿಯೂ ರೇಗಲಾರ; ಏಕೆಂದರೆ ಯಾವ ಮತದ ಪ್ರಾಮಾಣಿಕ ಅನುಯಾಯಿಯೂ ರಾಯರಂತಹ ಸ್ವಾರ್ಥಸಾಧಕರನ್ನೂ ಮತಗಳ ಅಂತಃಕಲಹವನ್ನೂ ಒಪ್ಪಲಾರ. ‘ **ರೆ. ಡಾ. ರಂಗಸ್** ’ ಎಂಬ ಕತೆಯಲ್ಲಿ ಸನಾತನಿಗಳ ಕರ್ಮಠವೃತ್ತಿಯ ಟೀಕೆಯಿರುವುದಾದರೂ, ರೀತಿಯಲ್ಲಿ ದುಡುಕುವ ಗುಣವಿಲ್ಲ. ‘**ಸಾಹಿತ್ಯ ಸಾರ್ವಭೌಮ**’ ಎಂಬ ಕತೆಯಲ್ಲಿ ಕನ್ನಡಿಗರ ಪದ್ಧತಿಯೊಂದನ್ನು ಪರಿಣಾಮಕಾರಕವಾಗಿ ಟೀಕಿಸಿದ್ದಾರೆ. ಪ್ರಸಿದ್ಧ ಸಾಹಿತ್ಯಿಕನೊಬ್ಬ ಬದುಕಿರುವಾಗ, ಆ ಬಡವನನ್ನು ಯಾರೂ ಕೇಳಲಿಲ್ಲ ; ಸತ್ತಮೇಲೆ, ಆತನ ಸ್ಮಾರಕೋತ್ಸವ ಸಂಭ್ರಮದಿಂದ ನಡೆದಿರುವುದು. ಆ ಗತಿಸಿದ ಸಾಹಿತ್ಯಿಕನ ಹೆಂಡತಿ ಅದೇ ಊರಲ್ಲಿ ತಿರಿದುಕೊಂಡು ಬದುಕುತ್ತಿದ್ದರೂ, ಅವಳನ್ನು ಯಾರೂ ವಿಚಾರಿಸಿದವರೇ ಇಲ್ಲ. ‘ **ಯಾರ ಅನ್ನ ಯಾರ ಕೈಯಲ್ಲಿ ?** ’ ಎಂಬ ಕತೆಯಲ್ಲಿ, ಬಡತನದ ಮೂಲಕ ನಾಚಿಕೆಗೇಡಿಯಾಗಿ ಬಾಳುತ್ತಿರುವ ಮನುಷ್ಯನೊಬ್ಬನ ಸ್ವಭಾವವನ್ನು ಸಹಜವಾಗಿ ಚಿತ್ರಿಸಲಾಗಿದೆ. ‘ **ಆಚಾರ್ರ ಮದುವೆ** ’ ಒಂದು ವಿನೋದ ಘಟನೆಯ ಕಥೆ. ‘ **ರುದ್ರಪ್ಪ** ’ ‘ **ಗಂಗವ್ವನ ಆಶೆ** ’ ಎಂಬವೆರಡೂ ಭಗ್ನಪ್ರೇಮದ ಕರುಣಾಚಿತ್ರಗಳು. ‘ **ಬೆಲೆ ಕಟ್ಟುವವರು ಯಾರು ?** ’ ಎಂಬುದು ಐತಿಹಾಸಿಕ ಕತೆಯೆನಿಸುವಂತಹದೊಂದು ರಮ್ಯ ಶೃಂಗಾರ ಕಥೆ. ‘ **ವನಭೋಜನ** ’ ಎಂಬುದು ಒಂದುಕಾಲದ— ಕನ್ನಡ ನಾಟಕ ಕಂಪನಿಗಳ–ನಟವರ್ಗದ ದೈನ್ಯ ಜೀವನವನ್ನು ಚೆನ್ನಾಗಿ ಮೂಡಿಸಿರುವುದು. ‘ ಆ ನನ್ನ ತಂಗಿ ’ ‘ **ಕಾಮನ ಸೋಲು** ’ ‘ ಸ್ಮರಣ ’ ಕತೆಗಳು ಮನೋವಿಶ್ಲೇಷಣದ ಹಾದರಿಗಳಾಗಿವೆ.

ಕತೆ ಹೇಳುವ ರೀತಿ ಚೆನ್ನಾಗಿ ಸಾಧಿಸಿರುವುದನ್ನೂ ಈ ಕಥಾಸಂಗ್ರಹದಲ್ಲಿ ಕಾಣಬಹುದು. ಭಾಷೆ ಮೈಸೂರಿನ ಮನೆಮಾತನ್ನು ಸಮೀಪಿಸುವಂತಹದಾದರೂ ಕೇವಲ ಜಾನಪದವಲ್ಲ. ಕರ್ನಾಟಕದ ಎಲ್ಲ ಭಾಗದವರೂ ಸಹಜವಾಗಿ ತಿಳಿದುಕೊಳ್ಳುವಂತಿದೆ. ಇವರು ನಿರ್ಮಿಸುವ ಪಾತ್ರ-

ಗಳು ಕನ್ನಡ ನಾಡಿನವಾಗಿಯೆ ಕಾಣುವುವಲ್ಲದೆ, ನಮಗೆ ಅಪರಿಚಿತವಾದ ಅನ್ಯದೇಶೀಯವಾಗಿ ಕಾಣುವುದಿಲ್ಲ. ಪಾತ್ರಗಳ ಸ್ವಭಾವ ಪರಿಪೋಷಣೆ ಮಾಡುವುದರಲ್ಲಿಯೂ ಕತೆಗಾರರ ಕೈಮೆ ಸಾಕಷ್ಟು ಕಾಣುವುದು. ಬ್ರಿಟಿಷ್ ಕರ್ನಾಟಕದಲ್ಲಿರುವ ನಮಗೆ, ಇಂದಿನ ಈ ಕಾಗದದ ಬರಗಾಲದಲ್ಲಿ, ಸುಮಾರು ೧೫೦ ಪುಟಗಳ ಇಂತಹ ಪುಸ್ತಕವನ್ನು ೧ ರೂಪಾಯಿ ಬೆಲೆಗೆ ಒದಗಿಸುವುದಕ್ಕೆ ಸಾಧ್ಯ ಹೇಗೆ?— ಎನಿಸಬಹುದು. ಆದರೆ ಮೈಸೂರಿನ ಆಡಳಿತ, ಸಾಹಿತ್ಯಿಕರಿಗೆಲ್ಲ ಸುಲಭ ಬೆಲೆಗೆ ಒದವಿಸಿಕೊಡುತ್ತಿರುವುದರಿಂದ ಅವರಿಗಿದು ಸಾಧ್ಯವಾಗಿದೆ. ಮೈಸೂರಿನ ಈ ಆಡಳಿತದ ಉದಾಹರಣೆಯನ್ನು ಮಿಕ್ಕ ಆಡಳಿತಗಳೂ ತೀಡಿದಲ್ಲಿ, ವಾಙ್ಮಯ ನಿರ್ಮಿತಿಗೆ ಎಷ್ಟೊಂದು ಅನುಕೂಲವಾಗಬಹುದು! ಆದರೆ....!

—ಬಿ. ಪಿ. ಎಸ್. ರಾವ್

ಕುಲದೀಪಕರು

ಬರೆದವರು ಶ್ರೀ. ಸಿದ್ಧವನಹಳ್ಳಿ ಕೃಷ್ಣಶರ್ಮ; **ಲಲಿತ ಸಾಹಿತ್ಯ ಮಾಲೆಯ ಮೂರನೆಯ ಕುಡಿ. ಪುಟಗಳು ಕ್ರೌ. ಅ. ೭೫. ಬೆಲೆ ೧೦ : ಆಣೆಗಳು.**

ಈ ಕಿರುಹೊತ್ತಗೆಗೆ ಮುನ್ನುಡಿ ಬರೆವಾಗ ಶ್ರೀಮತಿ ಲೀಲಾ ಶಿ. ಕಾರಂತರವರು ಹೀಗೆ ಎಂದಿದ್ದಾರೆ: "'ಕುಲದೀಪಕರು' ಎಂಬುದು ಕೆಲವು ವ್ಯಕ್ತಿ ಚಿತ್ರಗಳ ಸಂಗ್ರಹ. ಇದು ಶರ್ಮರು ಬರೆದ ವ್ಯಕ್ತಿ ಚಿತ್ರಗಳ—ಮೂರನೆಯ ಗುಚ್ಛ. 'ಕನ್ನಡದ ಕಿಡಿಗಳು' 'ದೀಪಮಾಲೆ' ಈ ಮೊದಲೆ ಚಿರಪರಿಚಿತವಾಗಿವೆ. ಈ ಲೇಖಕರು ವ್ಯಕ್ತಿಚಿತ್ರವನ್ನು ಬರೆವ ಹಾದಿಯನ್ನು ತುಳಿಯುತ್ತ ಬಲು ಮುಂದುವರಿದಿದ್ದಾರೆ."

'ವ್ಯಕ್ತಿಚಿತ್ರ'ವು ವ್ಯಕ್ತಿಯ ಚಿತ್ರ. ಚಿತ್ರದಲ್ಲಿ ಕಾಂಬುದು ಒಂದು ಬದಿಯ ನೋಟ. ನೋಟಕನ ನೋಟ. ನೋಟಕನು ತಾನು ಆ ವ್ಯಕ್ತಿಯ ಸಮೀಪದಲ್ಲಿರುವಾಗ ಕಂಡ ನೋಟ. 'ವ್ಯಕ್ತಿ ಚಿತ್ರ'ದಲ್ಲಿ ವ್ಯಕ್ತಿಯ ಇಡಿಯ ಸ್ವರೂಪವು ಕಾಣದು. ಬರೆದವನ ಮನದಲ್ಲಿ ಮೂಡಿದ ಮುದ್ರಣಗಳು ಮಾತ್ರ ಹೊರಬರುವುವು. ಲೇಖಕನ ಕಣ್ಣಿಂದ ವ್ಯಕ್ತಿಯನ್ನು ನೋಡಿದಂತಾಗುವುದು.

ಈ ಹೊತ್ತಗೆಯಲ್ಲಿ ಚಿತ್ರಿಸಲ್ಪಟ್ಟ ವ್ಯಕ್ತಿಗಳು ಭಾರತದ ಬೆಳವಣಿಗೆಗೆ ಒಂದಿಲ್ಲೊಂದು ರೀತಿಯಿಂದ ಹೆಣಗಿದವರು. ಇಡಿಯ ಜಗತ್ತಿನಲ್ಲಿಯ ಮಹಾಪುರುಷರ ಸಾಲಿನಲ್ಲಿ ನಿಂತವರು : **ಚಾರ್ಲಿ ಆಂಡ್ರೂಸ್, ಗೋಪಬಂಧುದಾಸ, ಸಿ. ವಿ. ರಾಮನ್, ಭಿಕ್ಷು ಉತ್ತಮ, ವಿಶ್ವೇಶ್ವರಯ್ಯನವರು, ಸಾಲಾರಜಂಗ್, ಮಾಡಪಾಟಿ ಹನುಮಂತರಾಯರು** ಮತ್ತು **ಮಹದೇವ ದೇಸಾಯಿ** ಅವರು. ಈ ವ್ಯಕ್ತಿಗಳನ್ನೆ ಆರಿಸುವುದರಲ್ಲಿ ಬರೆದವನ ಉದ್ದೇಶವೊಂದು ಭಾಸವಾಗುತ್ತದೆ. ಅದು ವ್ಯಕ್ತಿಗಳ ಪ್ರಾಂತ—ಕಾರ್ಯಗಳ ಪ್ರಾತಿನಿಧ್ಯ; ಸುಮಾರಾಗಿ ಒಂದೊಂದು ಪ್ರಾಂತದ ಒಂದೊಂದು ಕಾರ್ಯಕ್ಷೇತ್ರದಲ್ಲಿ ತಲೆಯೆತ್ತಿದ ಮಹನೀಯರು ಇವರು. ಅವರವರ ಹೆಸರುಗಳನ್ನು ಕೇಳಿದ ಕೂಡಲೆ ಅವರ ಪ್ರಾಂತ, ಕಾರ್ಯಕ್ಷೇತ್ರವು ಸೂಚಿಸುವಷ್ಟು ಅವರು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕನ್ನಡನಾಡಿನ ಸ್ಥಾಪತ್ಯ ಶಾಸ್ತ್ರ ಪ್ರವೀಣ **ಶ್ರೀ. ವಿಶ್ವೇಶ್ವರಅಯ್ಯನವರನ್ನು** ತಿಳಿಯದವರು ಯಾರು? ಭೌತಶಾಸ್ತ್ರದಲ್ಲಿಯ ಹೊಸ ಹುಡುಕಿಗೆ ನೋಬೆಲ್ ಪಾರಿತೋಷಕ ಪಡೆದ **ರಾಮನ್** ಅವರನ್ನು ಅರಿಯದವರು ಇರುವರೆ? ಮಹಾತ್ಮಾಗಾಂಧಿಯವರ ನೆರಳಿನಂತೆ ಇದ್ದ **ಶ್ರೀ. ಮಹದೇವ ದೇಸಾಯಿ** ಅವರ ಗುರುತು ಇಲ್ಲದವರಾರು? ದೀನಬಂಧು ಆಂಡ್ರೂಸ್, ಗೋಪಬಂಧುದಾಸ, ಇವರ ಹೆಸರು ಕೇಳದವರು ವಿರಳ.

ಇವರೆಲ್ಲರು ಮಹನೀಯರು. ಸಾಮಾನ್ಯ ಜನತೆ ಇವರ ಹೆಸರನ್ನು ಕೇಳಿರುತ್ತದೆ. ಸ್ಥೂಲ ಕಲ್ಪನೆ ಇರುವುದು. ಅವರ ಕಾರ್ಯದ ಸ್ವಭಾವದ ಅರಿವು ಆಗಬೇಕಾಗಿದ್ದರೆ 'ವ್ಯಕ್ತಿಚಿತ್ರ'ಗಳ ಸಹಾಯವಾಗುವುದು. ಅವರು ತಮ್ಮ ಕಾರ್ಯದಿಂದ ಜನರ ಲಕ್ಷ್ಯ ಎಳೆದುಕೊಂಡರೂ, ಪ್ರತ್ಯಕ್ಷ ದರುಶನವಾದುದು ಕೆಲವರಿಗೆ. ಪ್ರತ್ಯಕ್ಷ ದರುಶನವಿಲ್ಲದವರು ನೋಡಿದವರಿಂದ ಕೇಳಿ ತಿಳಿಯಬೇಕು. ಹಾಗೆ ತಿಳಿಯಲು ಶ್ರೀ. ಕೃಷ್ಣಶರ್ಮರ ವ್ಯಕ್ತಿಚಿತ್ರಗಳು ಸಹಕಾರಿಯಾಗುವುವು.

ಕೃಷ್ಣಶರ್ಮರಿಗೆ ಆ ವ್ಯಕ್ತಿಗಳ ನಿಕಟ ಪರಿಚಯವಿರುವುದರಿಂದ, ಆ ವ್ಯಕ್ತಿಗಳ ಚಿತ್ರಗಳು ಇಷ್ಟು ಸ್ಫುಟವಾಗಿವೆ. ಸ್ಫುಟವಾದ ಚಿತ್ರಕ್ಕೆ ಅವಶ್ಯಕವಾದ ಸರಲ ಭಾಷೆಯಿದೆ. ಭಾಷೆಯ ಸರಲತೆ ಗಾಂಧಿಜಿಯವರ ಭಾಷೆಯ ನೆನಹನ್ನು ತರುವುದು-ಗಾಂಧಿ ಸಾಹಿತ್ಯದ ವಿಶೇಷ ಅಭ್ಯಾಸದ ಪ್ರಭಾವವು ಕಾಂಬುದು ಇಲ್ಲಿ. ಚಿಕ್ಕ ಚಿಕ್ಕ ವಾಕ್ಯಗಳು, ಒತ್ತಕ್ಷರಗಳು ಕಡಿಮೆ. ಒಂದೊಂದು ಮಾತನ್ನು ಹೇಳುತ್ತ ವಿಷಯವನ್ನು ಬಿಂಬಿಸುವುದು ಚಿತ್ರಕಾರನ ನೆನಹನ್ನು ತರುವುದು. ಕುಂಚದಿಂದ ಸಣ್ಣ ಗೆರೆಗಳನ್ನು ತೆಗೆದರೂ ಚಿತ್ರ ಸಿದ್ಧವಾದಾಗ—ಅದೆಂತಹ ಅದ್ಭುತ ಚಿತ್ರ!— ಎನ್ನಿಸುವುದು. ಇದು ಶರ್ಮರ ವೈಶಿಷ್ಟ್ಯ; ಅವರ ಭಾಷೆಯೆ ಹಾಗಿದೆ.

ಈ ಹೊತ್ತಗೆಯು ಪರಿಪೂರ್ಣವಾಗಲು ಒಂದು ಕೊರತೆ ನನ್ನ ಮಟ್ಟಿಗೆ ಎನಿಸುವುದು. 'ಶಬ್ದಚಿತ್ರ'ದ ಜೊತೆಗೆ ಅವರವರ 'ಭಾವಚಿತ್ರ' ಇದ್ದರೆ ಹೆಚ್ಚು ಸೊಗಸಾಗುತ್ತಿತು. ಮಹನೀಯರ ಮೊಗದ ತೇಜಸ್ಸಿನ ಅರಿವು ಬರುತ್ತಿತ್ತು. ತಿಳಿಯಲು ಎಲ್ಲ ಇಂದ್ರಿಯಗಳು ಉಪಯೋಗವಾದರೆ ತಿಳಿವಳಿಕೆ ಹೆಚ್ಚು ಗಟ್ಟಿ.

ಶ್ರೀ. ಶರ್ಮರು ಸಾಮಾನ್ಯರ ಕೆಲವು ಚಿತ್ರಗಳನ್ನು ಒದವಿಸಿ ಪ್ರಪಂಚದ 'ಒನ್ನೋಟದ' ಸುಖ ಒದವಿಸುವರೆಂದೂ ಅಸಾಮಾನ್ಯರ 'ಇಡಿನೋಟ'— ಇಡಿಜೀವನ ಚರಿತೆ ಬರೆದು, ಹಾತೊರೆಯುವ— ದಾರಿಗಾಗಿ ಹಾತೊರೆಯುವ— ಅನೇಕ ದಿಗ್ಭ್ರಾಂತ ತರುಣರಿಗೆ ದಾರಿದೋರುವರೆಂದೂ ಹಾರಯಿಸುತ್ತೇವೆ.

—ಶೆರಂಗ

ನಗೆ ನೈವೇದ್ಯ

ಸರಕಾರಕ್ಕೆ ತೋರಿಸಿದ ಕೈ

ಒಬ್ಬ :— ಸರಕಾರಕ್ಕೆ ನನ್ನಂತೆಯೆ ಎಲ್ಲರೂ ಕೈತೋರಿಸತೊಡಗಿದರೆ, ಮೂರೇ ದಿನಗಳಲ್ಲಿಯೆ ಸರಕಾರ ಖಂಡಿತವಾಗಿ ದಿವಾಳಿ ತೆಗೆಯುವುದು ನೋಡು!

ಇನ್ನೊಬ್ಬ :— ಅದೇನಪ್ಪಾ, ನೀನು ಹೇಗೆ ತೋರಿಸಿದೆ.. ಸರಕಾರಕ್ಕೆ ಕೈಯನ್ನ?

ಒಬ್ಬ :— ಹೇಗೆ ಎಂದೇನು ಕೇಳುತ್ತೀಯೆ! ಕಾರ್ಡು-ಕವರುಗಳ ಬೆಲೆಯನ್ನು ಹೊಸವರ್ಷದಲ್ಲಿ ಹೆಚ್ಚಿಸಲಾಗುವುದೆಂದು ಸರಕಾರ ಪ್ರಕಟನೆ ಹೊರಡಿಸಿತು; ಹಳೆಯ ವರ್ಷ ಮುಗಿಯುವುದರಲ್ಲಿಯೆ ನಾನು ನೂರಾರು ರೂಪಾಯಿ ಬೆಲೆಯ ಕಾರ್ಡು-ಪಾಕೀಟು ಕೊಂಡು ಇಟ್ಟುಬಿಟ್ಟಿದ್ದೇನೆ!

* * *

ಹೋಟಲಿನಲ್ಲಿ

“ಏನಯ್ಯಾ, ಇಂಥಾ ದೋಸೆಯನ್ನೇ ತಂದುಕೊಡುವುದು? ಕತ್ತೆ ತಿನ್ನಲಾರದು ಇದನ್ನು!”

“ಹಾಗಾದರೆ ತಡೀರಿ ರಾಯರೆ, ಒಳಗೆ ಹೋಗಿ ನೋಡಿಕೊಂಡು ಬರತೀನಿ... ಕತ್ತೆ ತಿನ್ನಬಹುದಾದ ಪದಾರ್ಥ ಏನಾದರೂ ಇದೆಯೇನೂ ಅಂತ!”

* * *

ನಾಯಿಗೆ ಬದಲು ನಾವು!

ಶಿವಪ್ಪ :— ಊರಾಗ ಕಳ್ಳರ ಹಾವಳೀನೋ ಬಾಳ ಆಗೇತಿ; ಅದಕಂತ್ಲೇ ಒಂದು ನಾಯಿಯಾನಾದರೂ ಸಾಕಬೇಕಂತ ಮಾಡೀನಿ! ನಿನ್ನ ಹತ್ತಿರೊಳಗ ಎಲ್ಲಾದರೂ ಒಂದು ಜಾತೀನಾಯಿ ಇದ್ದರ ನೋಡಿಕೊಡೋ ಬಸಪ್ಪಾ!

ಬಸಪ್ಪ :— ಈಗ ನೀನು ನಾಯಿಯಾ ಸಾಕತೀಯಾ? ಥೂ ಹೋಗೋ ನಿನ್ನ ಮಂಜಾಳ ಹೋಗಲಿ! ಊರಾಗ ಆಳತೀ ಮಾಡಿ ಕಾಳು ಕೊಡಲಾಕ ಹತ್ತ್ಯಾರು. ನಾಯಿಗೆಲ್ಲಿಂದs ಹಾಕತೀ ರೊಟ್ಟೀ? ಅದಕ ನಾನು ಇದ್ದ ನಾಯಿಯಾ ತಗದುಬಿಟ್ಟು ರಾತ್ರೆಲ್ಲಾ ನಾವs ಸರತೀ ಪ್ಯಾಗ ಒದರಾಡಬೇಕಂತ ಮಾಡಿದೀವಿ ಏನಪಾ!

* * *

ಸಿಟ್ಟಿನಿಂದ ಸಿಕ್ಕ ಲಾಭ

ಶಾಮರಾಯರಿಗೆ ಇಂದು ಸಂಬಳ ಬರುವ ದಿನ; ಹೆಂಡತಿ ಯಮುನಾಬಾಯಿ, ಎಂಟು-ದಿನದ ಮುಸುಡಿನ ಗಂಟನ್ನು ಬಿಚ್ಚಿ, ನಗೆ-ಮುಗುಳಿನ ನೋಟದೊಡನೆ ಮಾತನಾಡಿದಳು:

“ಏನೋ, ನನ್ನದೊಂದು ವಿಚಿತ್ರಸ್ವಭಾವ! ಎಂಟು ದಿನದಿಂದಲೂ ಸಿಟ್ಟಿನಿಂದ ನಿಮ್ಮ ಜೋಡೀ ಮಾತಾಡಿರಲಿಲ್ಲ; ಅದಕ್ಕಾಗಿ ದಯಮಾಡಿ ಕ್ಷಮಿಸಬೇಕು!”

ಕೂಡಲೆ ಶಾಮರಾಯರು ಹೇಳಿದರು:

“ಇದರೊಳಗೆ ಕ್ಷಮಿಸಬೇಕಾದ ಕಾರಣೇನೂ ಇಲ್ಲ! ನಿನ್ನ ಸಿಟ್ಟು ನನಗೆ ಉಪಕಾರಾನೇ ಮಾಡೇದ. ನೀನು ಪ್ರೀತಿಯಿಂದ ನಗನಗತs ಇದ್ದಿದ್ದರೆ, ಎಂಟು ದಿನದ ಸಿನೇಮಾ ನೆಪ್ಪಕ್ಕಾಗಿ ನಾಲ್ಕು ರೂಪಾಯಿ ಹೋಗತ್ತಿದ್ದುವು ನನ್ನೂ! ಅದಕಂತs ತಿಂಗಳಾನು ತಿಂಗಳೆಲ್ಲಾ ನಿನಗ ಸಿಟ್ಟು ಯಾಕ ಇರೂದಿಲ್ಲಾ— ಅಂತ ಅನ್ನಿಸತsದ ನನಗ!”

* * *

ಅಗ್ಗದರದ ಅಂಗಡಿ

ಗಂಗಾಬಾಯಿ :— (ಇಂಗ್ಲಿಷ್ ವೃತ್ತಪತ್ರವೊಂದನ್ನು ಓದುತ್ತಿರುವಾಗ) ಇದು ನೋಡು ತುಂಗಾ ಇಲ್ಲಿ, ಒಂದು ವಿಚಿತ್ರದ ಸುದ್ದೀ! ನ್ಯೂಯಾರ್ಕ ನಗರದಲ್ಲಿ ಒಬ್ಬಾಕೆ, ಮೂರನೆಯ ಗಂಡನ್ನ ಮಸಣಕ್ಕೆ ಕಳುಹಿಸಿದ ಮರುದಿನವೇ ನಾಲ್ಕನೆಯ ಗಂಡನನ್ನು ಮದುವೆಯಾದಳಂತೆ!

ತುಂಗಾಬಾಯಿ :— ಹೂಂ ಆಶ್ಚರ್ಯದ ಮಾತೇ ನೋಡು ಇದೊಂದು! ನಮ್ಮಲ್ಲಿ ಒಬ್ಬರಿಗೆ ಒಬ್ಬ ಗಂಡ ಸಿಗಬೇಕಾದರನs ನಮ್ಮ ತಾಯಿಯಾ-ತಂದಿ ಪ್ರಾಣಸಂಕಟ ಪಡತಿರತಾರ! ಅಲ್ಲಿ ನಾಕೂ ಐದೂ ಜನ ಗಂಡಂದಿರು ಸಹಜವಾಗಿ ಸಿಗತಾರಂದ ಮ್ಯಾಲ, ಅಲ್ಲೇನು—ಗಂಡಂದಿರ ಅಗ್ಗದರದ ಅಂಗಡಿ ಗಿಂಗಡಿ ಅದsನೋ ಏನು ಮಣ್ಣು?

* * *

ವಿಷಮರೂಪಿಗಳ ವಿವಾಹಸೌಖ್ಯ

ಆತ:—ಸಕ್ಕರಿ ಸಿಗದ್ಹಾಂಗ ಆಗೇದಂತ; ಹೋಗಲಿ! ನಿನ್ನ ಸವಿಮುತ್ತು ಆಗಾಗ ಸಿಗತಿದ್ದರೆ ಸಾಕು; ನನಗೆ ಸಕ್ಕರಿಯ ಅವಶ್ಯಕತೆಯೆ ಇಲ್ಲ!

ಆಕೆ:—ನಿಮಗೇನೋ ಅವಶ್ಯಕತೆಯಿಲ್ಲ, ಸರಿಹೋಯಿತು; ಆದರೆ ನಾ ಏನು ಮಾಡಬೇಕು?

* * *

ತಮಾಷೆಯಲ್ಲವೆ?

“ನಿನ್ನೆಯ ದಿನ ಹೀಗೇ ನಾನೊಂದು ತಮಾಷೆ ಮಾಡಿದೆ: ‘ಜಗತ್ತಿನಲ್ಲಿಯ ಮಹಾಮೂರ್ಖನಿಗೆ ಇದನ್ನು ಕೊಡಬೇಕು’ ಎಂದು ವಿಳಾಸ ಬರೆದು, ಒಂದು ಪತ್ರವನ್ನು ಅಂಚೆಯ ಪೆಟ್ಟಿಗೆಯಲ್ಲಿ ಚೆಲ್ಲಿದ್ದೆ!”

“ಸರಿ, ಮುಂದೇನಾಯಿತು?”

“ನನ್ನ ಪತ್ರ ನನಗೇ ತಿರುಗಿ ಬಂದು ಬಿಟ್ಟಿತು; ತಮಾಷೆಯಲ್ಲವೇ ಇದು?”



ಫಿಲಿಪ್ಸ್‌ರ ನಾಟಕ

'ಮಿ. ಫಿಲಿಪ್ಸ್‌ರು ಹಿಂದುಸ್ತಾನಕ್ಕೆ ಬಂದದ್ದು ರಾಜಕೀಯ ಸಮಸ್ಯೆಗಾಗಿ ಅಲ್ಲ, ಸಮರಸನ್ನಾಹದ ನಿರೀಕ್ಷಣೆಗಾಗಿ' ಎಂದು ನಾವು ಕಳೆದ ಸಲ ಈ ನೋಟದಲ್ಲಿ ಬರೆದೆವಷ್ಟೆ! ಆ ಮಾತನ್ನು ಬರೆದ ಒಂದೆರಡು ದಿನಗಳಲ್ಲಿಯೆ ನಡೆದ ಘಟನೆಯಿಂದ, ನಮ್ಮ ಮಾತೇ ಸಯುಕ್ತಿಕವಾದುದು ಎಂದು ಸ್ಪಷ್ಟವಾಗುವಂತಿದೆ. ಅದೆಂದರೆ, ಮಹಾತ್ಮರನ್ನು ಕಾಣಲು ಫಿಲಿಪ್ಸ್‌ರಿಗೆ ವೈಸರಾಯರು ಅಪ್ಪಣೆ ಕೊಡದೆ ಇದ್ದುದು. ರಾಜಕಾರಣದ ನೀತಿವ್ಯವಹಾರಗಳಿಂದ ವೈಸರಾಯರ ನಕಾರ ಎಷ್ಟೊಂದು ಸಮರ್ಥನೆಯನ್ನು ತೋರಿಸಬಹುದಾದರೂ, ಮುತ್ಸದ್ದಿತನದ ದೃಷ್ಟಿಯಿಂದ ವೈಸರಾಯರು ತಪ್ಪನ್ನು ಮಾಡಿದರೆಂದೇ ಹೇಳಬಹುದು. ಸದ್ಯಕ್ಕೆ ಆ ಮಾತಿರಲಿ. ಫಿಲಿಪ್ಸ್ ಸಾಹೇಬರು ಮಾಡಿದ್ದೇನು? 'ಅಪ್ಪಣೆ ದೊರೆಯಲಿಲ್ಲ' ಎಂದು ಬಹಿರಂಗವಾಗಿ ಹೇಳಿದರು. ಇದರಲ್ಲಿ ನಿಜವಾಗಿ ಬ್ರಿಟಿಶರ ಛಲವಾದವಿದೆಯೊ ಇಲ್ಲವೆ ಭಾರತೀಯರ ಕಣ್ಣಲ್ಲಿ ಮಣ್ಣನ್ನೆರಚಲು ಫಿಲಿಪ್ಸ್ ಸಾಹೇಬರ ಪ್ರೇರಣೆಯಿಂದಲೆ ಹೂಡಿದ ನಾಟಕವೊ?— ಎಂಬುದನ್ನು ಹೇಳಲು ಶಕ್ಯವಿಲ್ಲ, ಮಿ. ಫಿಲಿಪ್ಸ್‌ರಿಗೆ ಮಹಾತ್ಮರನ್ನು ಕಾಣುವುದು ಅಷ್ಟೊಂದು ಮಹತ್ತ್ವದ್ದಾಗಲಿ ಅಗತ್ಯದ್ದಾಗಲಿ ಎನಿಸಿದ್ದರೆ, ವೈಸರಾಯರ ನಿರಾಕರಣೆಯಿಂದ ಅವರಲ್ಲೂ ಅಮೆರಿಕೆಯಲ್ಲೂ ಕ್ಷೋಭವೇಳುವುದು ಸಹಜವಾಗುತ್ತಿತ್ತು; ಅಮೆರಿಕೆಯ ಅಧ್ಯಕ್ಷರ ಸ್ವಂತ ಪ್ರತಿನಿಧಿಯನ್ನು ಬ್ರಿಟಿಶ್ ವೈಸರಾಯರು ಈ ರೀತಿ ಅವಮಾನಕಾರಕವಾಗಿ ನಡೆಯಿಸುವುದು ಇಂದಿನ ಪರಿಸ್ಥಿತಿಯಲ್ಲಿ ಅಷ್ಟೊಂದು ಸಹಜವೆನಿಸುವುದಿಲ್ಲ. 'ನಾನು ಅಪ್ಪಣೆಯನ್ನು ಬೇಡಿದಂತೆ ಮಾಡುವೆ; ನೀವು ಇಲ್ಲೆಂದು ಬಿಡಿರಿ; ನನಗೆ ಏನೂ ಖೇದವಿಲ್ಲ; ಯಾಕೆಂದರೆ, ಹಿಂದುಸ್ತಾನದ ರಾಜಕಾರಣದಲ್ಲಿ ಕೈಹಾಕುವ ಉದ್ದೇಶವೆ ನನ್ನ ಕರ್ತವ್ಯದಲ್ಲಿ ಬರುವುದಿಲ್ಲ!' ಎಂದು ಫಿಲಿಪ್ಸ್ ಸಾಹೇಬರು ನಾಟಕವನ್ನು ಹೂಡಿರಬಹುದೆ? ಅಥವಾ, ಅವರಿಗೆ ಗಾಂಧಿಯವರನ್ನು ನೋಡಲು ಅಪ್ಪಣೆ ಕೇಳಿದರೆ ವೈಸರಾಯರು ಅಮೆರಿಕೆಗೆ ಹೊರಡಲು ಅಪ್ಪಣೆಯನ್ನು ಕೊಟ್ಟರೆನಬಹುದೆ?

ತೆರೆಯ ಹಿಂದೆ

ಈಗ ಮಿ. ಫಿಲಿಪ್ಸ್‌ರು ಅಮೆರಿಕೆಯಲ್ಲಿದ್ದಾರೆ; ಹಿಂದುಸ್ತಾನದ ಬ್ರಿಟಿಶ್ ಸೈನ್ಯಾಧಿಕಾರಿಗಳೂ ಅಮೆರಿಕೆಯಲ್ಲಿದ್ದಾರೆ; ಮಿ. ಚರ್ಚಿಲ್‌ರೂ ಅಮೆರಿಕೆಯಲ್ಲಿದ್ದಾರೆ. ಈ ಸಂಗತಿಗಳನ್ನು ಹೊಂದಿಸಿ,ಹಿಂದುಸ್ತಾನದ ರಾಜಕೀಯ ಸಮಸ್ಯೆಯ ಚರ್ಚೆಯೂ ವಾಸಿಂಗಟನ್‌ನಲ್ಲಿ ನಡೆದಿದೆ—ಎಂದು ಲೆಕ್ಕ ಹಾಕಿದರೆ ತಪ್ಪೆನಿಸದು. ಒಂದು ವೇಳೆ ಮಿ. ಫಿಲಿಪ್ಸ್‌ರು ಕಾಂಗ್ರೆಸ್ಸಿನ ಅಭಿಪ್ರಾಯವನ್ನು ತಿಳಿದುಕೊಂಡಿದ್ದಿಲ್ಲವಾದರೆ, ಮರಳಿದ ಅವರ ಪ್ರಯತ್ನವು ವ್ಯರ್ಥ ಎಂದು ಸ್ಪಷ್ಟವಾಗಿ ಹೇಳಬಹುದು. ಕಾಂಗ್ರೆಸಿನ ಅಭಿಪ್ರಾಯವನ್ನು ತಿಳಿದುಕೊಂಡಿದ್ದರೆ ಯಾರಿಂದ? ಮೌಲಾನಾ ಅಝಾದ್ ಮತ್ತು ಪಂಡಿತ ಜವಾಹರರಿಂದಲೆ? ಯಾಕೆಂದರೆ, ಮಹಾತ್ಮರಿಗಿಂತಲೂ ಇವರಿಬ್ಬರೂ ಕ್ರಿಪ್ಸ್ ಸಂಧಾನದ ಸಮಯದಿಂದ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು, ಮಿತ್ರರಾಷ್ಟ್ರಗಳ ಪಕ್ಷವನ್ನು ಕಟ್ಟಿಕೊಂಡು ಹೋರಾಡಲು ಹೆಚ್ಚು ಒಲವನ್ನು (ಆತುರತೆಯನ್ನು) ತೋರಿಸಿದ್ದಾರೆ. ಆದುದರಿಂದ ಇವರಿಬ್ಬರನ್ನು ಕಂಡು-ಮಹಾತ್ಮರನ್ನು ಕಾಣದೆ-ಫಿಲಿಪ್ಸ್ ಸಾಹೇಬರು ಮರಳಿರಬಹುದೆ? ಹಾಗಿದ್ದರೆ ಅವರ 'ಅಪಮಾನ'ದ ನಾಟಕವು ಮನೋರಂಜಕವಾದಷ್ಟು ಕಾರ್ಯಸಾಧಕವೂ ಆಗಿರಬಹುದಾಗಿದೆ. ಇಂದು ಅಮೆರಿಕೆಯಲ್ಲಿ ನಡೆದ ಘಟನೆಗಳಿಂದಲೂ ಚಳವಳದಿಂದಲೂ ನಮ್ಮ ಊಹೆ ಅಷ್ಟೊಂದು ಬಿಸಿಲ್ಗುದುರೆಯನ್ನೇರಿ ಸಾಗಿಲ್ಲ ಎನಿಸುತ್ತಿದೆ. ಮಿ. ಫಿಲಿಪ್ಸ್‌ರು ಇಷ್ಟೆಲ್ಲ ಮಾಡುವುದು ಕೇವಲ ಯುದ್ಧಕಾರ್ಯದ ದೃಷ್ಟಿಯಿಂದಲೆ ಎಂದು ಮರೆಯುವಂತಿಲ್ಲ. ಇದುವರೆಗೆ ಆಫ್ರಿಕೆಯ ಯುದ್ಧದ ನಿಮಿತ್ತವಾಗಿ ಜಪಾನರ ಮಾತನ್ನು ಮುಂದೆ ಹಾಕುತ್ತ ನಡೆದ ಮುತ್ಸದ್ದಿಗಳಿಗೆ—ಆಫ್ರಿಕೆಯ ಯುದ್ಧವು ಮುಗಿದುದರಿಂದ—ಜಪಾನದ ಕಡೆಗೆ ದೃಷ್ಟಿ ಹೊರಳಿಸುವುದು ಅಗತ್ಯವಾಗಿದೆ; ಅದಕಾಗಿ ಹಿಂದುಸ್ತಾನದ ರಾಜಕೀಯ ಸಮಸ್ಯೆಯನ್ನು ಬಿಡಿಸುವುದೂ ಅಗತ್ಯವಾಗಿದೆ. ಈ ಕಾರಣಕ್ಕಾಗಿಯೂ ಮೇಲಿನ ನಮ್ಮ ಊಹೆ ಅಸಂಬದ್ಧವಲ್ಲ ಎಂದು ಹೇಳಬಹುದು.

ಜಾತೀಯತೆಯ ಜಾಲ

ಇಂತಹ ಊಹೆಯನ್ನು ಎತ್ತುವುದರಲ್ಲಿ ನಾವೇ ಮೊದಲಿಗರೆಂಬ ಹೆಮ್ಮೆ ನಮಗಿದ್ದರೂ, ಅದಕ್ಕನುಗುಣವಾಗಿ ಬಿಕ್ಕಟ್ಟು ನಡಿಲಾದೀತೆಂಬ ಆಶೆ ಮಾತ್ರ ನಮಗೆ ಹೆಚ್ಚಾಗಿಲ್ಲ. ಇದಕ್ಕೆ ಮುಖ್ಯಕಾರಣ ಮುಸ್ಲಿಂಲೀಗಿನ ಅಧೋಗತಿ. ಕಾಂಗ್ರೆಸಿನ ಮುಂದಾಳುಗಳೆಲ್ಲ ಸೆರೆಯಲ್ಲಿದ್ದುದಕ್ಕೆ ತನ್ನ ಹೊಣೆಗಾರಿಕೆ ಹೆಚ್ಚಿತೆಂದು ತಿಳಿದು, ಆ ಪ್ರಕಾರ ಬುದ್ಧಿಮತ್ತೆಯಿಂದಲೂ ಧೈರ್ಯದಿಂದಲೂ ವರ್ತಿಸುವುದನ್ನು ಬಿಟ್ಟು ಮುಸ್ಲಿಂಲೀಗವು ಕೇವಲ ಸ್ವೈರವೃತ್ತಿಯ ಧೋರಣೆಯನ್ನು ತಾಳುತ್ತಲಿದೆ. ಕಳೆದ ಮುಸ್ಲಿಂ ಲೀಗದ ಅಧಿವೇಶನವು ಈ ಮಾತಿಗೆ ಸಾಕ್ಷಿಯಾಗಿದೆ. ಆಡಂಬರದಲ್ಲಿ ಕಾಂಗ್ರೆಸಿನ ಅನುಕರಣೆ ಇದ್ದಷ್ಟು ಧೋರಣೆಯಲ್ಲಿ ಕಾಂಗ್ರೆಸಿಗೆ ವಿರೋಧವಿದೆ. ಮಿಕ್ಕವರ ಮೇಲೆ ಎಲ್ಲ ತರದ ಆರೋಪವನ್ನು ಹೊರಿಸುವುದೊಂದೇ ಅಧ್ಯಕ್ಷರ ಭಾಷಣದ ಮುಖ್ಯ ಉದ್ದೇಶವಾಗಿತ್ತು. ಮೊದಲಿನಿಂದ ಕೊನೆಯವರೆಗೆ ತಮ್ಮ ಭಾಷಣದಲ್ಲಿ ಜಿನ್ನಾಸಾಹೇಬರು 'ತಾವು ಎಂದಿಗೂ ವ್ಯವಸಾಯದ ವಕೀಲರು, ಮುಪ್ಪಿನ ಅನುಭವದಿಂದ ಕೂಡ ಮುತ್ಸದ್ದಿತನವನ್ನು ಕಲಿಯಲಿಕ್ಕಿಲ್ಲ' ಎಂದು ತೋರಿಸಿಕೊಟ್ಟರು. ಹುಡುಗಾಟದ ಈ ಭಾಷಣವನ್ನು ಸಹನೆಯಿಂದ ಕೇಳಿಕೊಂಡ ಮುಸಲ್ಮಾನ್ ಬಾಂಧವರು, ಜಿನ್ನಾಸಾಹೇಬರಲ್ಲಿ ಆದರಕ್ಕಿಂತ ಜಾತೀಯತೆಯ ಅಂಧತೆಯನ್ನೇ ಹೆಚ್ಚಾಗಿ ತೋರಿಸಿದರು ಎಂದು ಸ್ಪಷ್ಟವಾಗಿ ಹೇಳಬಹುದು. ಲೀಗದ ಈ ಜಾತೀಯತೆಯ ದುರಾವೇಶಕ್ಕೆ ಇದಿರಾಗಿ ಹಿಂದುಮಹಾಸಭೆಯೂ ದಿನದಿನಕ್ಕೆ ಹಿಂದುಗಳ ಹುಟ್ಟುಗುಣವಾದ ವಿಶಾಲದೃಷ್ಟಿಯನ್ನು ಕಳೆದುಕೊಳ್ಳುತ್ತಲಿದೆ. 'ಜಾತಿಗೆ ರಾಜಕಾರಣದಲ್ಲಿ ಮೇಲಿನ ಸ್ಥಾನವನ್ನು ಕೊಡಬಾರದು' ಎಂದುದಕ್ಕೆ ಅನೇಕ ಮಹಾಸಭೆಯ ಮುಂದಾಳುಗಳು ಮಹಾಸಭೆಯಲ್ಲಿ ತಮ್ಮ ಮೇಲಿನ ಸ್ಥಾನವನ್ನು ಕಳೆದುಕೊಳ್ಳುತ್ತಲಿದ್ದಾರೆ. ಜಾತಿಭಾವನೆಯನ್ನು ಮೀರಿದ, ಕೇವಲ ರಾಜಕೀಯ ದೃಷ್ಟಿಯನ್ನೆ ಇಟ್ಟುಕೊಂಡ ಪಕ್ಷಾತೀತ ಮತ್ತು ಉದಾರಪಕ್ಷದ ಮುಂದಾಳುಗಳಿಗೆ ಜನತೆಯಲ್ಲಿ ಸ್ಥಾನವಿಲ್ಲ; ಜನತೆಯ ಮುಂದಾಳುಗಳಿಗೆ ಬಂಧನ ಬಿಟ್ಟಿಲ್ಲ. ಹೀಗಾಗಿ ಉಳಿದದ್ದು ಇವೆರಡೆ; ಒಂದು ಮುಸ್ಲಿಂ ಲೀಗ, ಒಂದು ಹಿಂದುಮಹಾಸಭೆ. ಒಬ್ಬರಿಗೆ ಇನ್ನೊಬ್ಬರಿಂದ ಸ್ವಾತಂತ್ರ್ಯಬೇಕಂತೆ, ಇನ್ನೊಬ್ಬರಿಗೆ ಆ ಒಬ್ಬರಿಗೆ ಯಾವಾವುದು ಬೇಕೊ ಅದಿಷ್ಟೆ ಬೇಡವಂತೆ! ಜನತೆಯ ಬೆಂಬಲವಿಲ್ಲದೆ ದೇಶದ ತುಂಬ ಕಂಠಶೋಷದ ಚಳವಳವನ್ನು ನಡೆಯಿಸಿದ ಈ ಜಾತ್ಯಂಧರನ್ನು ಬ್ರಿಟಿಶರು ಹೊರಗೆ ಹಿಂದುಸ್ಥಾನದ ಮಾದರಿ' ಎಂದು ತೋರಿಸುತ್ತಿರುವುದು ನಮ್ಮ ದುರ್ದೈವ; ಬ್ರಿಟಿಶರಿಗೂ ಕೊನೆಗೆ ಹಿತವಲ್ಲ.

ಹಿಂದೆ ನೋಡುತ್ತ ಮುಂದೆ ನಡೆದರೆ— ?

ಲೀಗ ಅಧಿವೇಶನದ ಅಧ್ಯಕ್ಷಭಾಷಣದಲ್ಲಿ ಜಿನ್ನಾಸಾಹೇಬರು ಎಷ್ಟೋ ಮಾತುಗಳನ್ನಾಡಿದ್ದಾರೆ. ಅವೇ ಮಾತುಗಳನ್ನೇ ಈ ಮುಂಚೆಯೂ ಎಷ್ಟೋ ಸಲ ಆಡಿದ್ದಾರೆ. ಒಂದು ದೃಷ್ಟಿಯಿಂದ ಹೇಳುವುದಾದರೆ, ಜಿನ್ನಾಸಾಹೇಬರು ನಾಟಕದ ನಟನಂತೆ ಮಾತನಾಡುವರು; ಎಂದರೆ, ಎಷ್ಟು ಸಲ ಮಾತನಾಡಿದರೂ ಪಾಠಮಾಡಿದ ಅದೇ ಮಾತು; ಹೊಸತೆಂಬುದಿಲ್ಲ, ಸ್ವಂತದ್ದೆಂಬುದೂ ಇಲ್ಲ. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ ಅದರಲ್ಲಿ ಹೊಸತನವಿದೆ; ಆ ಮಾತನ್ನಾಡುವ ರೀತಿಯಲ್ಲಿ ಹೊಸತನವಿದೆ. ಮತ್ತೆ ಮತ್ತೆ ಅದನ್ನೇ ಆಡುವುದಕ್ಕೆ ಬೇಜಾರವಿದೆಯೆ ಇಲ್ಲವೆ ಬೇರೊಂದು ಉದ್ದೇಶವಿದೆಯೆ ಎಂಬುದನ್ನು ರೀತಿಯ ಹೊಸತನದಿಂದ ಕಂಡು ಹಿಡಿಯಬಹುದು. ಈ ಸಲದ ರೀತಿಯಲ್ಲಿ ಬೇರೊಂದು ಉದ್ದೇಶವು ಸ್ಪಷ್ಟವಾಗಿದೆ. ಅದೆಂದರೆ ಕಾಂಗ್ರೆಸಿನೊಡನೆ ಸಂಧಾನಕ್ಕಾಗಿ ಯತ್ನಿಸುವುದು. ಪಾಕಿಸ್ತಾನದ ಆವೇಶವು ಮುಂಚಿನಂತೆಯೆ ಇದೆ, ನಿಜ; ಪಾಕಿಸ್ತಾನ್ ಒಪ್ಪಿದಹೊರತು—ಎಂದು ಹೆದರಿಕೆಯೂ ಇದೆ, ನಿಜ! ಆದರೆ, ತಮ್ಮ ದೊಡ್ಡಿಸ್ತನವನ್ನು ಬೆಳೆಯಿಸಿಕೊಳ್ಳುವ ಉದ್ದೇಶದಿಂದಲೆ ಆಗಲೊಲ್ಲದೇಕೆ—' ಒಂದು ಕಡೆ ಹಿಂದು ಕಾಂಗ್ರೆಸು, ಒಂದು ಕಡೆ ನನ್ನ ಮುಸ್ಲಿಂ ಲೀಗ; ನಾವಿಬ್ಬರೂ ಒಂದಾದರೆ ಬ್ರಿಟಿಶರದಾಗಲಿ ಬೇರೆ ಯಾರದೇ ಆಗಲಿ, ನಮ್ಮ ಸ್ವಾತಂತ್ರ್ಯವನ್ನು ನಿರಾಕರಿಸಲು ಧೈರ್ಯವೇನು ? ' ಎಂದು ಜಿನ್ನಾಸಾಹೇಬರು ಗದ್ದರಿಸುವಲ್ಲಿ ' ಹೇಗಾದರೂ ನಾವು ಒಂದಾಗಬಾರದೆ ? ' ಎಂಬ ಉತ್ಕಟವಾದ ಮನದಾಶೆಯಿದೆ. ಆದರೆ ಪಾಕಿಸ್ತಾನದ ಹಟವನ್ನು ಹಿಡಿವವರೆಗೆ ಒಂದಾಗುವುದು ಶಕ್ಯವಿಲ್ಲ ಎಂಬುದು ಜಿನ್ನಾಸಾಹೇಬರಿಗೂ ಗೊತ್ತಿದೆ. ಅದಕ್ಕಾಗಿಯೆ ಅವರು ಹೇಳುವರು: ' ಗಾಂಧಿಯವರು ನನಗೆ ಬರೆದರೆ ಸಾಕು, ಪಾಕಿಸ್ತಾನ್ ತತ್ತ್ವವನ್ನು ಒಪ್ಪಿದರೆ ಸಾಕು ' ಎಂದು ! ಗಾಂಧಿಯವರು ಅಷ್ಟನ್ನು ಮಾಡಿದರೆ ಜಿನ್ನಾಸಾಹೇಬರು ಸರ್‍ರನೆ ಕೆಳಕ್ಕಿಳಿಯುವರೆಂದು ಇದರರ್ಥವಲ್ಲ. ಗಾಂಧಿಜಿಯವರ ಆ ನಡತೆಯಿಂದ ತಮ್ಮ ಅನುಯಾಯಿಗಳ ಮುಂದೆ ತಮ್ಮ ದೊಡ್ಡಿಸ್ತನವನ್ನೂ ಮಾನವನ್ನೂ ಮುಂಚೆ ಕಾಯ್ದುಕೊಂಡು, ಆ ಮೇಲೆ ಜಿನ್ನಾಸಾಹೇಬರು ಕೆಳಗಿಳಿಯಬಹುದಾಗಿದೆ. ಇನ್ನೂ ಅವರ ಹೆದರಿಕೆ ಮಾತ್ರ ಪೂರ್ತಿಯಾಗಿ ಹೋದಂತಿಲ್ಲ; ಆದಕಾಗಿಯೆ, ಗಾಂಧಿಯವರ ಬಿಡುಗಡೆಯನ್ನು ಬೇಡದೆ, ಜೇಲಿನಿಂದಲೆ ಅವರು ತಾವಾಗಿಯೆ ಪತ್ರ ಬರೆಯಬೇಕೆಂದು ಬ್ಯಾರಿಸ್ಟರ್ ಜಿನ್ನಾ ಅವರು ಬೇಡುತ್ತಲಿದ್ದಾರೆ! ಇಷ್ಟಾದರೂ ಮುಂಚಿಗಿಂತ ತುಸು ಮೆತ್ತಗಾಗಿದ್ದಾರೆಂಬ ಮಾತು ಸ್ಪಷ್ಟವಿದೆ. ಮೂರು ಹೆಜ್ಜೆ ಮುಂದೆ ನಡೆದು ಹತ್ತು ಹೆಜ್ಜೆ ಹಿಂದೆ ಸರಿಯುವ ಈ ಹಿಂಪ್ರಗತಿಯಿಂದ ಗುರಿಯನ್ನು ಮುಟ್ಟುವುದೆಂದು?

ಅಸ್ಪೃಶ್ಯ ಬುದ್ಧಿಮತ್ತೆಯ ಅಂಬೇಡಕರರು !

ಉನ್ನತ ಅಧಿಕಾರದಿಂದ ಮನುಷ್ಯನು ದೊಡ್ಡವನಾಗುವನು

ಎಂಬ ಕಲ್ಪನೆಯಿಂದ ಮೇಲೇರಿ, ಮುಂದೆ ಮೇಲೆ ಮೇಲೆ ಹೋದಂತೆ ತಾನು ಮಿಕ್ಕವರಿಗೆ ಸಣ್ಣವನಾಗಿಯೆ ಕಾಣುವನೆಂಬುದನ್ನು ಮರೆಯುವ ಮಾನವನ ಸ್ಥಿತಿ ಅಪಹಾಸ್ಯದ್ದಾಗುವುದು. ಹೀಗೆ ಅಪಹಾಸ್ಯ ಪದವಿಯಲ್ಲಿ ಕುಳಿತವರಲ್ಲಿ ಇಂದು ಮಾನ್ಯ ಅಂಬೇಡಕರರು ಅಗ್ರಣಿಗಳಾಗಿದ್ದಾರೆ. ಯೋಗ್ಯತೆ ಇತ್ತು, ಬುದ್ಧಿ ಮತ್ತೆ ಇನ್ನೂ ಇರಬಹುದಾಗಿದೆ; ಆದರೆ ಯಾವುದನ್ನು ಮಾಡಿದರೆ ತನ್ನನ್ನು ಮಿಕ್ಕವರು ದೊಡ್ಡವನೆನಬಹುದೆಂಬ 'ಉದ್ಬಾಹುವಾಮನ' ವೃತ್ತಿ (inferiority complex) ಯಿಂದ ಶ್ರೀ. ಅಂಬೇಡಕರರು ಅಪಹಾಸ್ಯಕ್ಕಿಳಿದಿದ್ದಾರೆ. ಇಲ್ಲವಾದರೆ ಅವರು ಕಳೆದ ತಿಂಗಳು ಮುಂಬಯಿಯಲ್ಲಿ ಮಾಡಿದ ಭಾಷಣದಲ್ಲಿಯ ಅಭಿಪ್ರಾಯಗಳನ್ನು ತಾಳುತ್ತಿರಲಿಲ್ಲ. ಒಂದು ಕಡೆ ಜಿನಾಸಾಹೇಬರು, ಇನ್ನೊಂದು ಕಡೆ ಮಹಾತ್ಮಾ ಗಾಂಧಿಯವರು ಇಬ್ಬರೂ ರಾಜಕಾರಣದಿಂದ ಹೊರಬೀಳಬೇಕಂತೆ! ಹಾಗೆಂದರೇನು? ಅವರ ಮುಂದಾಳುತನ ಸಾಕೆಂದೋ? ಶ್ರೀ. ಅಂಬೇಡಕರರ ಅಭಿಪ್ರಾಯ ಹಾಗಿದ್ದರೆ, ಅವರಿಗೆ ರಾಜಕಾರಣವಾಗಲಿ ಮುಂದಾಳುತನದ ತತ್ತ್ವವಾಗಲಿ ಸರಿಯಾಗಿ (ಮತ್ತು ಸಾಕಷ್ಟು) ತಿಳಿದಿಲ್ಲ ಎಂದು ಧೈರ್ಯದಿಂದ ಹೇಳಬಹುದು. ಮುಂದಾಳುತನ ಸಾಮಾನ್ಯ ಜನತೆಯ ಕೈಯಲ್ಲಿದೆ. ಸಾಮಾನ್ಯ ಜನತೆಯ ಧ್ಯೇಯ-ಧೋರಣೆಗಳ ಪ್ರತೀಕ ಮುಂದಾಳುತನ ಎಂಬುದು. ಸಾಮಾನ್ಯ ಜನತೆಯ ಧ್ಯೇಯ-ಧೋರಣೆಗಳಲ್ಲಿ ಬದಲಾವಣೆ ಆದ ಹೊರತು ಮುಂದಾಳುತನದಲ್ಲಿ ಬದಲಾವಣೆಯಾಗದು. ಕೇವಲ ಮುಂದಾಳಾದ ವ್ಯಕ್ತಿ ಬದಲಾದರೆ ಮುಂದಾಳುತನ ಬದಲಾಯಿಸಿದಂತಾಗಲಿಲ್ಲ. ಇಂದು ಭಾರತೀಯರಿಗೆ ದಾರಿದ್ರ್ಯಕ್ಕಾಗಿ ಅಸಹನೆ, ಸ್ವಾತಂತ್ರ್ಯಕ್ಕಾಗಿ ಆಕಾಂಕ್ಷೆ ಇದೆ. ಈ ಅಸಹನೆ-ಆಕಾಂಕ್ಷೆಗಳ ಮೂರ್ತಿ ಮಹಾತ್ಮಾ ಗಾಂಧಿ. ಅಸಹನೆ ಅಡಗಿದ ಹೊರತು, ಆಕಾಂಕ್ಷೆ ಈಡೇರಿದ ಹೊರತು ಮುಂದಾಳುತನ ಬದಲಾಗುವಂತಿಲ್ಲ. ಅದಕಾಗಿ ಇಂದು ಇಡಿಯ ಭಾರತದ ಮುಂದಾಳುತನದಲ್ಲಿ ಜವಾಹರರಿಗಿಂತ ಕೂಡ ಗಾಂಧಿಜಿಯವರಿಗೆ ಹೆಚ್ಚಿನ ಸ್ಥಾನವಿದೆ. ಅದರಂತೆಯೆ, ಅನ್ಯರ ಸಹಾಯದಿಂದ ತನ್ನದನ್ನು ಸಾಧಿಸಬೇಕೆಂಬ ಸಣ್ಣದೊಂದು ಪಕ್ಷವಿದೆ; ತನ್ನವರಿಂದ ತನಗೆ ಹೆದರಿಕೆ ಎಂದು ತಿಳಿಯುವ ಪಕ್ಷವಿದೆ. ಆ ಪಕ್ಷದ ಮೂರ್ತಿ ಜಿನಾಸಾಹೇಬರು (ಸ್ವತಃ ಶ್ರೀ. ಅಂಬೇಡಕರರೆ ಮೇಲಿನ ಕಾರಣಗಳಿಗಾಗಿ ತತ್ತ್ವತಃ ಜಿನಾಸಾಹೇಬರ ಪಕ್ಷದವರು, ಆ ರೀತಿ ಅವರು ನಡೆದದ್ದೂ ಉಂಟು). ಸ್ವಾನುಭವವನ್ನು ಕೂಡ ಮರೆತು ಮಾತನಾಡುವುದೆಂದರೆ, ತನ್ನ ಬುದ್ಧಿ ತನಗೇ ನಿಲುಕದಂತಹ ದೊಡ್ಡಸ್ತನವಲ್ಲವೆ? ಅರ್ಥಾತ್, ಆ ಬುದ್ಧಿ ಮತ್ತೆ ಅನ್ಯರಿಗೆ ಅಸ್ಪೃಶ್ಯ ಎಂಬುದು ಸ್ಪಷ್ಟವಿದೆ.

ಹಿಂದುಳಿದ ಮುಂದಾಳುತನವೆ?

ಇನ್ನೊಂದು ಮಾತನ್ನು ಹೇಳಬಹುದಾಗಿದೆ ಈ ಸಂದರ್ಭದಲ್ಲಿ. ಶ್ರೀ. ಅಂಬೇಡಕರರ ಆಶೆ ಈಡೇರಿತೆಂದು ಇಟ್ಟುಕೊಳ್ಳೋಣ. ಗಾಂಧಿಯವರೂ ಜಿನಾಸಾಹೇಬರೂ ಕೈಯಲ್ಲಿ ಕೈಹಾಕಿ ಹಿಮಾಲಯಕ್ಕೆ ಹೊರಟರೆಂದು ತಿಳಿಯೋಣ. ಮುಂದೇನು? ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟು ಆ ಮೇಲೆ ಬಿಡುವುದೆಂಬ ಭರವಸೆಯನ್ನು ಶ್ರೀ. ಅಂಬೇಡಕರರು ಕೊಡುವರೊ? ಅಥವಾ, ವೈಸರಾಯರ ಕೌನ್ಸಿಲರರಾದ ಮಾನ್ಯ ಅಂಬೇಡಕರರಿಗೆ ಹಿಂದುಸ್ಥಾನದ ರಾಜಕೀಯ ಪ್ರಶ್ನೆಗಿಂತ ಸದ್ಯಕ್ಕೆ ಯುದ್ಧಕಾರ್ಯದಲ್ಲಿ ಬ್ರಿಟಿಶರಿಗೆ ನೆರವಾಗುವುದೇ ಹೆಚ್ಚು ಮಹತ್ತ್ವದ ಮಾತಾಗಿದೆಯೆ? ಒಂದು ವೇಳೆ ಯುದ್ಧಕಾರ್ಯಸಹಾಯವೆ ಮಹತ್ತ್ವದ್ದಾಗಿದ್ದರೆ ಅಂಬೇಡಕರ ಮಹಾಶಯರಿಗೆ ಇವರಿಬ್ಬರಿಗಾಗಿ ಭೀತಿಯೆ ಇರಬೇಕಾಗಿಲ್ಲ. ಯುದ್ಧಕಾರ್ಯಕ್ಕೆ ವಿರೋಧವನ್ನು ಮಾಡಬಹುದೆಂಬ ಸಂಶಯದಿಂದ ಒಬ್ಬರು ಜೇಲಿನಲ್ಲಿ ಸಿಕ್ಕಿದ್ದಾರೆ; ಇನ್ನೊಬ್ಬರು 'ಸಹಾಯವನ್ನೂ ಮಾಡುವುದಿಲ್ಲ, ವಿರೋಧವನ್ನೂ ಮಾಡುವುದಿಲ್ಲ' ಎಂದಿದ್ದಾರೆ. ಹೀಗೆ ಅಂಬೇಡಕರರಂತಹರಿಗೆಯೆ ಅಪ್ರತಿವೀರವಾಗಿ ಪ್ರಜಾಪ್ರಭುತ್ವ ತತ್ತ್ವವನ್ನು ಎತ್ತಿಹಿಡಿಯುವ ಸಂಧಿ ಪೂರ್ತಿಯಾಗಿ ದೊರೆತಿರಲು, ಅರ್ಥವಿಲ್ಲದ ಆಕ್ರೋಶವೇಕೆ? ಇನ್ನು ರಾಜಕೀಯ ಸಮಸ್ಯೆ ಶ್ರೀ. ಅಂಬೇಡಕರರಿಗೆ ಮಹತ್ತ್ವದ್ದಾಗಿದೆ ಎನ್ನೋಣವೆ? 'ಹಿಂದುಸ್ಥಾನ್ ಪಾಕಿಸ್ಥಾನ್ ಮುಂತಾದ ಭೇದಗಳನ್ನು ಒಪ್ಪುವುದೆ ಮುತ್ಸದ್ದಿತನ' ಎಂದು ಶ್ರೀಯುತರು ಜಾಣತನವನ್ನು ಪ್ರದರ್ಶಿಸಿದ್ದಾರೆ. ಆದರೆ ಬ್ರಿಟಿಶರ ಆಳಿಕೆಗಾಗಿ ಅಂಬೇಡಕರರಷ್ಟೇ ನಮಗೂ ಅಭಿಮಾನವಿರಬಾರದೇಕೆ? ನೂರಾರು ವರ್ಷಗಳ ತಮ್ಮ ಉದಾರ ಆಳಿಕೆಯಿಂದ ಹಿಂದುಸ್ಥಾನಕ್ಕೆ ರಾಜಕೀಯ ಐಕ್ಯಭಾವವನ್ನು ಕಲಿಸಿದ ಬ್ರಿಟಿಶರ ಆಳಿಕೆಯ ಅಭಿಮಾನದಿಂದಲೆ ಈ 'ಸ್ಥಾನವಾದ'ವನ್ನು ನಾವು ವಿರೋಧಿಸಬಾರದೇಕೆ? ಶ್ರೀ. ಅಂಬೇಡಕರರಾದರೂ ಆ ಅಭಿಮಾನವನ್ನೇ ನೆನೆದಾದರೂ ಈ ಮಾತಿನ ವಿಚಾರವನ್ನು ಮಾಡಬಾರದೇಕೆ? ಅಥವಾ, ಮುಂದಾಳಾದಂತೆ ವಿಚಾರ ಮಾಡುವುದು ಹಿಂದಾಳುಗಳದಷ್ಟೆ ಕರ್ತವ್ಯವೆನಿಸುವುದೆ? ಅದಕ್ಕಾಗಿಯೆ ಕೆಲಸಕ್ಕೂ ಮುಂದಾಗುವ ರೂಢಿಯಿದ್ದ ಮಹಾತ್ಮರಂತಹ ಮುಂದಾಳುತನ ಸಾಕು ಎಂದು ಶ್ರೀ. ಅಂಬೇಡಕರರ ಅಭಿಪ್ರಾಯವಿದೆಯೆ? ಏನೆ ಇರಲಿ, ವಿಚಾರ ಮಾಡದೆ ಮಾತನಾಡುವುದು ಯಾವ '—ತನ'ವೂ ಅಲ್ಲ ಎಂಬುದನ್ನು ಶ್ರೀಯುತರು ಇನ್ನೂ ಬಹುಕಾಲದ ವರೆಗೆ ಲಕ್ಷ್ಯದಲ್ಲಿಡಬೇಕಾಗುವುದು.

ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ
ಉಷ್ಣತೆಯಿಂದ ಬಳಲಿರುವ
ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ,
ಆಯಾಸವನ್ನು ಹೋಗ-
ಲಾಡಿಸಿ ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು
ಹುಟ್ಟಿಸುವುದಕ್ಕೆ ಶ್ರೇಷ್ಠವಾದ
ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ ಕುಲಾಬಾ

★

**SHRI DHOOTAPAPESHWAR
PANVEL Ltd., PANVEL.**

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾ ಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ಪಾತ್ರವಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಸ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.



Printed by Mr. V. Y. Jathar at the Karnatak Printing Works, Dharwar, and Published for the Proprietors

ಸಂಪಾದಕರು-
ಬೆಟಗೇರಿ ಕೃಷ್ಣಶರ್ಮರು

ಜಯಂತಿ

ಜುಲೈ, ೧೯೪೩

★

ಈ ಸಂಚಿಕೆಯಲ್ಲಿ

'ಶ್ರೀರಂಗ'

ಎಸ್. ವಿ. ರಂಗಣ್ಣ

ಮಾನ್ಯಾಲೋಚಕ

ಬಿ. ಎಮ್. ಶ್ರೀಧರ

ಎ. ಕೆ. ರಾಮಣ್ಣ

ಅಲ್ಲದೆ

-ಬೇರೆ ಲೇಖಕರ

ಕವನ-ಕಥೆ-ಪ್ರಬಂಧಗಳು.

★

ಬೆಲೆ- ೬ ಆಣೆ.

ಮುಖ್ಯ ವಿಷಯಗಳ ಪರಿವಿಡಿ

ನಿತ್ಯಪೂಜೆ (ಕವನ)	' ಆನಂದಕಂದ '	೪೧
ಸಂಪಾದಕೀಯ (ಕರ್ನಾಟಕದ ಸಂಕಟಸಹಸ್ರ)	ಸಂಪಾದಕರು	೪೨
ಮಂಗನ ಮಲ್ಲಿನಾಥಭಟ್ಟ	' ಮಲ್ಲಿನಾಥ '	೪೩
ಪಾಕಿಸ್ತಾನ (ರಾಜಕೀಯ ವಿಚಾರಚರ್ಚೆ)	ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ	೪೫
ಕಣ್ಮರೆಯಾದ ಬಂದೂಕು (ಸಣ್ಣಕತೆ)	ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ	೪೯
ಯಾರಿಗೆ ಯಾರು ? (ವಿಚಾರಪ್ರವರ್ತಕ ಪ್ರಬಂಧ)	ಶ್ರೀ. ರಾಮಚಂದ್ರಭಟ್ಟ ಹಾಸಣಗಿ, ವಿದ್ವಾನ್	೫೫
ಸೌಂದರ್ಯಬೋಧಿ (ಕವನ)	ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು	೬೦
ಸವಂತೆ (ಕವನ)	ಶ್ರೀ. ನ. ಕೃ. ಕುಲಕರ್ಣಿ, ಧಾರವಾಡ	೬೦
ಕಣ್ಣು (ಲಘುಪ್ರಬಂಧ)	ಶ್ರೀ. ಖಾನೋಳಕರ, ಶ್ರೀಧರರಾಯರು, ಪುಣೆ	೬೨
ಅನುಭವ (ಒಂದು ಬಾಳ್ಗತೆ)	ಶ್ರೀ. ಕೆ. ಪುರುಷೋತ್ತಮ ಬಿ. ಎ. ಬೆಂಗಳೂರು	೬೪
ಸಾಹಿತಿ ಮತ್ತು ಸಾಮಾನ್ಯ (ಸಾಹಿತ್ಯವಿಚಾರ)	ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಪುಣೆ	೬೭
ಸಂಶೋಧಕನ ಸಂತಾಪ (ವ್ಯಂಗ್ಯಪ್ರಬಂಧ)	' ಶ್ರೀರಂಗ '	೬೯
ಬಯಕೆ (ಸಣ್ಣಕತೆ)	ಶ್ರೀ. ವಿ. ಜಿ. ಶಾನಭಾಗ, ಕುಮಟಾ	೭೧
ಸಾದರಸ್ವೀಕಾರ	....	೭೪
ಪುಸ್ತಕ ವಿಮರ್ಶೆ	ಶ್ರೀ. ಬಿ. ಪಿ. ಎಸ್. ರಾವ್ ಮತ್ತು ಎಚ್. ಎಸ್. ಪಾಟೀಲ	೭೫
ನಗೀಗೆ ನೈವೇದ್ಯ	' ನಕಲೀ ನಾರಾಯಣಾಚಾರ್ಯ '	೭೭
ನಾಲ್ಕು ನಿಮಿಷದ ನೋಟ	' ನಿರೀಕ್ಷಕರು '	೭೯

ಪ್ರೇಮ ವಿದ್ಯಾಪೀಠ ತುಂಗಭದ್ರ

★

ದಿವಂಗತ ಪಂಡಿತ ತಾರಾನಾಥರಿಂದ ಸ್ಥಾಪಿಸಲ್ಪಟ್ಟ ಸುಪ್ರಸಿದ್ಧ "ಪ್ರೇಮ ವಿದ್ಯಾಪೀಠ"ವು, ಎಂದಿನಂತೆ ಜುಲೈ ೧೫ನೆಯ ತಾರೀಖಿನಿಂದ ಪ್ರಾರಂಭವಾಗುವುದು. ವಿದ್ಯಾಪೀಠದಲ್ಲಿನ ಶಿಕ್ಷಣಕಾರ್ಯವನ್ನು ಪಂಡಿತರ ಮುಖ್ಯಶಿಷ್ಯರಾದ ವೈದ್ಯಗುರು ಡಾ. ವೆಂಕಟೇಶ್; ವೈದ್ಯಗುರು, ಡಾ. ಸ್ವಾಮಿರಾಯಾಚಾರ್ಯ; ವೈದ್ಯಗುರು, ಡಾ. ಜಿ. ಕೃಷ್ಣಮೂರ್ತಿ, B.A., M.P.M.S., ಆಯುರ್ವೇದ ಮಹೋಪಾಧ್ಯಾಯ; ವೈದ್ಯಗುರು, ಡಾ. R. K. ವಾಳ್ವೇಕರ, B.Sc., F.P.M.S. ಮತ್ತು ವೈದ್ಯಗುರು, ಡಾ. ಸುಮತೀಬಾಯಿ ತಾರಾನಾಥ, B.A., B.T., F.P.M.S. ಮಹೋಪಾಧ್ಯಾಯ ಮುಂತಾದವರು ಕೈಕೊಂಡು ಪಂಡಿತಜಿಯವರ ಧ್ಯೇಯವನ್ನು ಮುಂದುವರಿಸುತ್ತಲಿದ್ದಾರೆ.

ವಿದ್ಯಾಪೀಠದ ತರಗತಿಗಳಲ್ಲಿ ಹೊಸದಾಗಿ ಸೇರಲಿಚ್ಛಿಸುವವರು ಜುಲೈ ೧೫ನೆಯ ತಾರೀಖಿನೊಳಗೆ ಪ್ರವೇಶಪತ್ರಿಕೆಯೊಡನೆ ಮೂರು ರೂಪಾಯಿಗಳನ್ನು ಕಳುಹಿಸಿ, ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಳಬೇಕು. ಹಾಸ್ಟೆಲ್, ಪಾಠಕ್ರಮ ಇತ್ಯಾದಿ ಹೆಚ್ಚಿನ ವಿವರಕ್ಕೆ ಮೂರು ಆಣೆ ಸ್ಟ್ಯಾಂಪು ಕಳುಹಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬಹುದು.

ವೈದ್ಯಗುರು ಡಾ. ವೆಂಕಟೇಶ್
Offg. Principal.

ಜಯಂತಿ

ಸಂಪುಟ ೬ | ೧ನೆಯ ಜೂಲೈ ೧೯೪೩ | ಸಂಚಿಕೆ ೨

ನಿತ್ಯಪೂಜೆ

★ ★

'ಆನಂದಕಂದ'

ಗುಡಿಯಲ್ಲಿ ನಡೆದಿದ್ದ ಪೂಜೆಯೈಸಿರಿಯಿಂದು
ಮರೆಯಾಗಿದೆ— ಎಲ್ಲ— ಮರೆಯಾಗಿದೆ!

ಆರತಿಯಿರದನಿತು ದೀವಿಗೆಯೋಳಿ ತೊಳತೊಳಗಿ
ಬೆಳಗಿಸಿದುವಂದು ದೇವಿಯ ವರದ ಮೂರುತಿಯ;
ಕಳೆದುಕೊಂಡಿಂದು ತಿಳಿನೇಯುವಂ ದೀವಿಗೆಗ-
ಳಳಿದು ಕಗ್ಗತ್ತಲೆಯು ಕವಿದು ಮುಸುಕಿದೆ ಗುಡಿಯ;
ದೇವಿಯಾ ವರದಮೂರುತಿ ಕಾಣದಿಹುದು,
ಭಾವುಕರ ಬಳಗವದು ಬೆದರಿ ಚೆದರಿಹುದು!

ಹಾಲಕ್ಕಿಯೊಂದು ಹುಮ್ಮಸದಿ ಕಿಲಬಿಲಿಸುತಿದೆ;
ಮೂಳನಾಯೊಂದು ಮನಬಂದಂತೆ ಬೊಗಳುತಿದೆ;
ಕೇಳುತಿಹೆ ಅತ್ತಿತ್ತ ನರಿಗಳೂಳಾಟ; ಬಿರು-
ಗಾಳಿ ಬಿರುಬಿರ್ರೆಂದು ಮೊರೆಮೊರೆದು ಬೀಸುತಿದೆ.
ಪೂಜೆಯವಸರದ ಮಂತ್ರಸ್ವನಗಳಿಲ್ಲ,
ಓಜೆಯಲಿ ಮೊರೆವ ವಾದ್ಯಧ್ವನಿಗಳಿಲ್ಲ!

ಅರಳುಗಳ— ಕರ್ಪೂರಾರತಿಯ— ಧೂಪದ ಕಂಪು
ಬೆರೆತು ಸುಳಿಗಾಳಿಯೊಳು, ಹರಿದು, ದೂರದ ಜನರ
ಕರೆಮೊಯ್ಯುತಿರಲಿಲ್ಲವೇ ಬಳಿಗೆ? ಇಂದೇನು?
ಸರಿದಿರುವ ಸೊದರುಗಳ ಸೊನಡುಗಂಪದು ಹರಡಿ,
ಹೊರಹೊರಟು ಮೂಗುಸೆಲೆ ಕೊರೆಯುತಿಹುದು;
ನೆರೆಯುವರನೂ ದೂರ ಸರಿಸುತಿಹುದು!

ಆರಿದಿದೇನಿದು....? ದೇವಿಯಿರುವ ದೆಸೆಯಿಂದಿತ್ತ
ಬರುವ ಗಾಳಿಯೊಳು ಬೆರೆತಿರುವ ಬಿಸಿಯುಸಿರೇನು..?
ಬಿಸಿಯುಸಿರ ಬೆಂಬಳಸಿ ಮೊರೆದ ದನಿ ಯಾರದಿದು..?
ಬರಿಯ ದನಿಯಲ್ಲ, ಹುರುಳಿನ ನುಡಿಯು ಕೂಡಿಹುದು!
ಗಾಳಿತರುತಿಹ ನುಡಿಯಿದೇನೆಂಬರೇನು?
ಕೇಳಿಕೇಳಿರಿ ನಸುವೆ ಕೊಟ್ಟು ಕಿವಿಗಳನು!

ಅಂದಿನಾ ಪೂಜೆಯವಸರದ ಮಂತ್ರಗಳೇನು!
ಒಂದೇ ದನಿಯೊಳೆ ನೊರೆವ ಭಾವಗೀತಗಳೇನು!
ದುಂದುಭಿಯು— ಡೋಲುಜಾಗಟೆಗಳಬ್ಬರವೇನು!
ಇಂದದೊಂದೂ ಇಲ್ಲ, ಎಲ್ಲಿಯೂ ಬರಿಮೌನ!
ನುಡಿಯುತಿಹ ಹಲ್ಲಿಗಳ ಲೊಟಲೊಟೆಂಬುಲಿವು
ಅಡಿಗಡಿಗೆ ಮೌನತೆಯ ಸೀಳಿ ಹೊರಡುವುವು.

“ನಿತ್ಯಪೂಜೆಯು ಬೇಕು! ನಿತ್ಯಪೂಜೆಯು ನನಗೆ!
“ಕುತ್ತಗಳ ಕಳೆದುಕೊಳುವಾಸೆಯಲ್ಲವೆ ನಿಮಗೆ?..
“ನಿತ್ಯ ಪೂಜಿಸಲು ಬೇಸತ್ತರಾಗುವುದೇನು?
“ನಿತ್ಯ ಪೂಜೆಯು ಬೇಕು. ನಿತ್ಯ ಪೂಜ್ಯಳು ನಾನು!
“ಕತ್ತಲೆಗೆ ಹೆದರದಿರಿ, ಕಾಲಿದಿರಿ ಮುಂದೆ;
“ಒತ್ತರದಿ ಬನ್ನಿರೆಲ್ಲರು ಇಲ್ಲಿಗಿಂದೆ!

“ಮರಮರಳಿ ಸಲ್ಲಿಸಿರಿ ನೀರಪೂಜೆಯನೆನಗೆ;
“ವರವನಾವುದನು ಕೇಳಿ, ಕೊಡುವೆ ನಾ ನಿಮಗೆ!”



ಕರ್ನಾಟಕದ ಸಂಕಟಸಹಸ್ರ

ಸದ್ಯ ಹಬ್ಬಿ ಹರಿಗೊಂಡಿರುವ ಪ್ರಪಂಚದ ಮಹಾಯುದ್ಧವು ಬಹು ಜನರ ದೃಷ್ಟಿಯನ್ನೂ ಮನಸ್ಸನ್ನೂ ವಿಶಾಲ—ದೀರ್ಘ—ವಾಗಿಸಿದುದರಿಂದ, ಕರ್ನಾಟಕ ಪ್ರಾಂತದ ವಿಚಾರಕ್ಕೆ ಮಾತನಾಡಲು ತೊಡಗಿದರೆ 'ಕೂಪಮಂಡೂಕ' ಎಂದು ಆ ಬಹುಜನರು ಬೀಳುಗಳೆದು ನುಡಿಯಬಹುದು; ಜುಗುಪ್ಸೆಯ ನಗೆಯನ್ನು ಕೂಡ ನಗಬಹುದು. ಆದರೆ ಅಂತಹರ ವಿಶಾಲದೃಷ್ಟಿ-ವಿಶಾಲಮನಗಳು 'ಸ್ಮಶಾನ ವೈರಾಗ್ಯ'ದಂತೆ ವರ್ತಮಾನಪ್ರಚಾರದ ಮೇಲೆ ನಿಂತವುಗಳಲ್ಲದೆ, ಆದರ್ಶಸಾಧನೆಯ ಭೂತ-ಭವಿಷ್ಯ ವಿಚಾರಗಳನ್ನವು ಲೆಕ್ಕಿಸುತ್ತಿರುವುದಿಲ್ಲವೆಂಬುದನ್ನು ಯಾರೂ ಮರೆಯಲಾಗದು. ಮಹಾಯುದ್ಧವು ಕಾಲಬದ್ಧವಾದುದು, ಕನ್ನಡನಾಡು, ಕನ್ನಡಸಮಾಜ ಕಾಲಾತೀತವಾದುವು; ಇವು ಅನಂತಕಾಲದವರೆಗೂ ಬದುಕಿ ಬಾಳಬೇಕಾದುವು. ಆದುದರಿಂದಲೆ ಬದುಕಿ ಬಾಳಬೇಕೆಂಬ ದೂರದೃಷ್ಟಿಯುಳ್ಳವರು ಸ್ಮಶಾನ ವೈರಾಗ್ಯದಿಂದ ನಿರಾಶರಾಗುತ್ತಿರುವುದಿಲ್ಲ. ತಮ್ಮ ಬದುಕಿನ ಸುಖಸಮಾಧಾನಗಳನ್ನು ಕುರಿತೇ ವಿಧಾಯಕ ವಿಚಾರಗಳನ್ನು ಮಾಡುತ್ತಿರುತ್ತಾರೆ. ವರ್ತಮಾನ ಭೀತಿ-ಬಾಧೆಗಳ ನಿವಾರಣೆಗಾಗಿ ಕರ್ತವ್ಯಬುದ್ಧಿಯಿಂದ ಅವರು ಕಾರ್ಯಮಾಡಿದರೂ ಭವಿಷ್ಯದ ವಿಚಾರವನ್ನು ಎಂದೂ ಮರೆಯರು. ಸದ್ಯ ಪ್ರಳಯದಲ್ಲಿ ಸಿಕ್ಕಿರುವ ಪಾಶ್ಚಾತ್ಯರಾಷ್ಟ್ರಗಳು ಕೂಡ ಪ್ರಳಯ ನಿವಾರಣೆಯ ವಿಚಾರವನ್ನಷ್ಟೇ ಕಣ್ಣ ಮುಂದೆ ಇರಿಸಿಕೊಂಡಿರದೆ, ಪ್ರಳಯೋತ್ತರದ ಸಾಮಾಜಿಕ-ರಾಜಕೀಯ ವ್ಯವಸ್ಥೆಗಳನ್ನು ಕುರಿತೂ ಅಷ್ಟೇ ಕುತೂಹಲದಿಂದ ವಿಚಾರಿಸುತ್ತಲಿವೆ. ದೂರದ ಮಾತು ಬೇಡ; ಭಾರತದ ಇತರ ಪ್ರಾಂತಗಳಲ್ಲಿ ಕೂಡ, ಪ್ರಾಂತಗಳ ಭಾವೀ ಉನ್ನತಿಯ ವಿಚಾರ-ಚಟುವಟಿಕೆಗಳು ಯಾವ ಅಡೆ-ತಡೆಯಿಲ್ಲದೆ ನಡೆದಿವೆ. ಆದರೆ 'ಕಡಿದಷ್ಟು ತುರಿಸಿಕೊಳ್ಳುವ' ಸ್ವಭಾವ ಬೆಳೆದು ಬಂದಿರುವ ನಮ್ಮ ನಾಡಿನಲ್ಲಿ, ಭವಿಷ್ಯದ ಕಡೆಗೆ ಆಲೋಚಿಸಿ ಮಾಡುವ ವಿಧಾಯಕ ಕಾರ್ಯಗಳಿಗೆ ಆಸ್ಪದವೇ ಇಲ್ಲದಂತಾಗಿದೆ. ಇದೇನೂ ಶುಭಲಕ್ಷಣವೆಂದೆನಿಸದು — ನಿಜವಾದ ದೂರದೃಷ್ಟಿಯುಳ್ಳವರಿಗೆ.

ಒಂದು 'ಸಾಹಿತ್ಯ ಸಮ್ಮೇಳನ'ದ ವಿಚಾರವನ್ನೇ ತೆಗೆದುಕೊಳ್ಳೋಣ. ನಮ್ಮ ನೆರೆಯ ನಾಡುಗಳು, ಕಾಲೋಚಿತವೆನಿಸುವಂತೆ ಸಾಹಿತ್ಯ ಸಮ್ಮೇಳನಗಳನ್ನು ನಿರಾತಂಕವಾಗಿ ನಡೆಯಿಸಿಬಿಟ್ಟುವು. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಾತ್ರ ಬತ್ತ ಸೊನ್ನೆ. ಯುದ್ಧಕ್ಕಾಗಲಿ, ತುರಂಗಗಳಿಗಾಗಲಿ ಹೋದವರಲ್ಲಿ ಸಾಹಿತಿಗಳ ಸಂಖ್ಯೆ ಎಷ್ಟು? ಅತ್ಯಲ್ಪ! ಹೀಗೆಂದ ಮಾತ್ರಕ್ಕೆ ಸಾಹಿತಿಗಳಾದವರು ಯುದ್ಧಕ್ಕೂ ತುರಂಗಕ್ಕೂ ಹೋಗಲೆಬೇಕೆಂದು ನಮ್ಮ ಅಭಿಪ್ರಾಯವಲ್ಲ; ಬೇಕಾದ ಹಾಗೆ ಬಿಡುವಾಗಿದ್ದೂ ಸಾಹಿತ್ಯ ಸಮ್ಮೇಳನದಂತಹ ಸಂಸ್ಕೃತಿ ಪ್ರಚಾರದ ಕಾರ್ಯವನ್ನವರು ನಿಲ್ಲಿಸಿದರಲ್ಲಾ ಎಂದು ಆಕ್ಷೇಪವಿಷ್ಟೆ! ಸಾಹಿತ್ಯವು ಉತ್ಸಾಹಕಾರಿ ರಸಾಯನವಾಗಬಲ್ಲದು; ಹೇಡಿಗಳಲ್ಲಿ ಧೈರ್ಯವನ್ನು ಹುಟ್ಟಿಸಬಲ್ಲದು; ಅಶಕ್ತರನ್ನು ಸಶಕ್ತರನ್ನಾಗಿಸಬಲ್ಲದು; ಬಂಟರ ಬಗೆಗೈಗೆ ಶಸ್ತ್ರವಾಗಬಲ್ಲದು, ಮನದ ಮೈಗೆ ಕವಚವಾಗಬಲ್ಲದು. ಯುದ್ಧಕಾಲದಲ್ಲಿ ಆವಶ್ಯಕ ಶಸ್ತ್ರಾಸ್ತ್ರಗಳ ನಿರ್ಮಿತಿಯಂತೆ ಆವಶ್ಯಕ ಸಾಹಿತ್ಯನಿರ್ಮಾಣವೂ ಬೇಕು. ಶಸ್ತ್ರಾಸ್ತ್ರವಿದರ ಸಮ್ಮೇಳನದಂತೆ ಸಾಹಿತಿಗಳ ಸಮ್ಮೇಳನವೂ ಸೇರಲೆಬೇಕು. ದೇಶ-ಕಾಲಗಳ ಸಾನ್ನಿಧ್ಯವಿಲ್ಲದ ಸಾಹಿತ್ಯಕ್ಕೆ ಜೀವವೆಲ್ಲಿರುವುದು, ಭಾವವೆಲ್ಲಿರುವುದು? ಇಂತಹ ಸಂಕ್ರಾಂತಿಕಾಲ ವಿವಿಧ ಭಾವಪ್ರಚೋದನೆಗೆ ತುಂಬ ಸಹಕಾರಿಯಾಗಿರುವುದು. ಇಂತಹ ಕಾಲದಲ್ಲಿಯೆ 'ಸಾಹಿತ್ಯ ಸಮ್ಮೇಳನ' 'ಲೇಖಕ ಸಮ್ಮೇಳನ'ಗಳನ್ನು ಹಾಸಿ ಹೊದ್ದಿಸಿ ಮಲಗಿಸಿ ಬಿಟ್ಟರೆ, ನಾಳೆಯ ನಮ್ಮ ಇತಿಹಾಸದಲ್ಲಿ, ಇಂದಿನ ಪರಿಸ್ಥಿತಿಯನ್ನು ಪ್ರತಿಧ್ವನಿಸುವ ಸಾಹಿತ್ಯವು ಹೇಗೆ ಸಿಕ್ಕಬೇಕು. ಹಿರಿಯರ ಕಾರ್ಯವೇ ಗುರಿಯೆಂದು ತರುಣ ಸಾಹಿತ್ಯಿಕರು ಹಾಡಿದುದನ್ನೆ ಹಾಡುವ 'ಕಿಸಿವಾಯಿದಾಸ'ರಾಗ ತೊಡಗಿದರೆ, ಆ ತಪ್ಪನ್ನು ಯಾರ ತಲೆಯ ಮೇಲೆ ಹಾಕಬೇಕು? ತಪ್ಪನ್ನು ಯಾರ ತಲೆಯ ಮೇಲಾದರೂ ಹಾಕಲು ಬಂದೀತು; ಆದರೆ ನಾಡಿನ ಸಾಹಿತ್ಯಕ್ಕಾದ ಹಾನಿಯನ್ನು ತುಂಬಿಕೊಡುವವರು ಯಾರು? ಮಹಾಯುದ್ಧಕಾಲವೆಂದು ಮದುವೆ ನಿಂತಿವೆಯೆ, ಮುಂಜಿ ನಿಂತಿವೆಯೆ, ಬಸಿರು-ಬಾಣಂತನ ನಿಂತಿವೆಯೆ, ಹಬ್ಬ-ಹರಿದಿನಗಳು ನಿಂತಿವೆಯೆ.... ಯಾವುದು ನಿಂತಿದೆ? ಎಲ್ಲವೂ ಯಥಾಸಾಂಗವಾಗಿ ನಡೆದಿರುವಾಗ, ನಾಡಿನಲ್ಲಿ ವಿಧಾಯಕ ಕಾರ್ಯವನ್ನು ಮಾಡುತ್ತಿರುವಂತಹ ಸಾಂಸ್ಕೃತಿಕ ಕಾರ್ಯಕಲಾಪಗಳೆಲ್ಲ ಏಕೆ ನಿಂತುಹೋಗಬೇಕು? ಕೃಷಿ-ವಾಣಿಜ್ಯ-ಉದ್ಯಮಗಳಷ್ಟೇ ಸಾಹಿತ್ಯವೂ ಜೀವನೋಪಯುಕ್ತವೆಂಬುದನ್ನು ಯಾರೂ ಮರೆಯಲಾಗದು.

ಪ್ರಾಂತದ ಸಾಮಾಜಿಕ ಸಂಘಟನೆಯ ಚಳವಳಿಯನ್ನು ಮಾಡುತ್ತಿದ್ದ 'ಏಕೀಕರಣಸಭೆ' ಕೂಡ ಇಂದು ಕಣ್ಣುಮುಚ್ಚಿಕೊಂಡು ಬಿದ್ದಿದೆ. ಅದು ಬದುಕಿದೆಯೋ ಸತ್ತಿದೆಯೋ ಎಂಬುದನ್ನು ಕೇಳುವವರು ಕೂಡ ಯಾರೂ ಇದ್ದಂತೆ ಕಾಣುವುದಿಲ್ಲ. ಎಂತಲೆ ಪರಪ್ರಾಂತದವರು ನಮ್ಮ ಔದಾಸೀನ್ಯದ ಸಂಧಿಯನ್ನು ಸಾಧಿಸಿ, ನಮ್ಮ ನಾಡನ್ನು ಹರಿದುಕೊಳ್ಳುವ ಹಂಚಿಕೆ ನಡೆಯಿಸಿದ್ದಾರೆ. ಬಳ್ಳಾರಿಯಲ್ಲಿ ಸದ್ಯದಲ್ಲಿಯೆ ಆಂಧ್ರಮಹಾಸಭೆ ಸೇರಲಿದೆ. ಆಂಧ್ರಮಹಾಸಭೆಯ ಇಂದಿನ ಮುಖ್ಯ ಗುರಿಯೆಂದರೆ 'ಆಂಧ್ರಸ್ತಾನ್' ನಿರ್ಮಿತಿ; ಎಂದರೆ ಆಂಧ್ರದ ಏಕೀಕರಣ. ಈ ಏಕೀಕರಣದಲ್ಲಿ ಕುರುಡುಗನ್ನಡ ನಾಡಿನ ಕೆಲವು ಭಾಗವನ್ನು ಸೇರಿಸಿಕೊಳ್ಳುವ ಹವಣಿಕೆ ಎಂದಿನಿಂದಲೂ ಆಂಧ್ರರಲ್ಲಿದೆ. ಆ ಉದ್ದೇಶಸಾಧನೆಗಾಗಿಯೆ ಬಳ್ಳಾರಿಯಲ್ಲಿ ಆಂಧ್ರಮಹಾಸಭೆ ಜರುಗುವುದರಲ್ಲಿದೆ. ಈಗ ಕರ್ನಾಟಕ

(೭೮ ನೆಯ ಪುಟ ನೋಡಿರಿ)



೧. ಕೈ ಕತ್ತಿಗೆ

ಕನ್ನಡಿಗರೆ! ಕಣ್ಮುಚ್ಚಿರಿ—ಅಲ್ಲ-ಕಿವಿ ಮುಚ್-ಘೊ! ಅದೂ ಅಲ್ಲ—ಮಂಗರಾಯನು ಮಹಾಮತ್ತ ಮಂಗಿಪತಂತ್ರನಾಗಿದ್ದಾನೆ! ಯಾಕೆನ್ನುವಿರಾ? ಕತೆಯನ್ನು ಕೇಳಿ. ಯಾವ ಕತೆ? ಕನ್ನಡಿಗರ ಕತೆ. ಅದೆಂತಹ ಕತೆ?—ಛೆ! ಹೀಗೆ ನಮುನೆ ಪ್ರಶ್ನೆಗಳನ್ನು ಕೇಳಿ ಮಂಗರಾಯನನ್ನು ಮತ್ತಷ್ಟು ಮತಿಭ್ರಾಂತನನ್ನಾಗಿ ಮಾಡಬೇಡಿರಿ. ತಾಳೀಕೋಟೆಯು ಕನ್ನಡಿಗರ ಪರಾಭವವಲ್ಲ ಎಂಬ ಸಂತೋಷದ, ಅಭಿಮಾನದ ಶೋಧವನ್ನು ಮಂಗರಾಯನು ಓದಿದ್ದಾನೆ. ರಾಮರಾಯನನ್ನು ಕೆಡವಿದವರು ಯಾರು? ಇದುವರೆಗೆ 'ಪರಕೀಯರು' ಎಂದೇ ಇತಿಹಾಸದ ಉತ್ತರವಿದ್ದಿತು; ಅದಕ್ಕಾಗಿ ಕನ್ನಡಿಗರ ತಲೆ ತಗ್ಗುತ್ತಿತ್ತು. ಆದರೆ ಈಗ ಕೇಳಿ:- 'ತಾಳೀಕೋಟೆಯ ಕಾಳಗದಲ್ಲಿ ವೀರ ಗದಾಚಾರ ನಾಯಕ ಪಿಟ್ಟಪ್ಪಗೌಡನು ವಿಜಯನಗರದ ರಾಮರಾಜನ ಕತ್ತನ್ನು ಕೊಯ್ದು ತಂದನೆಂಬುದು ಇತಿಹಾಸದಿಂದ ತಿಳಿಯುತ್ತದೆ!' ತಿಳಿಯಿತೆ, ಈಗಾದರೂ? ಕನ್ನಡಿಗರೆ ಕನ್ನಡಿಗರ ಕುತ್ತಿಗೆಯನ್ನು—ಅಲ್ಲ, ಕತ್ತನ್ನು-ಕೊಯ್ದರೆಂದು ಅಭಿಮಾನ ಬೇಡವೆ? ಆಶ್ಚರ್ಯ—ಅಲ್ಲಲ್ಲ. ನಿಜವಾಗಿ ಇದು ಆಶ್ಚರ್ಯದ ಮಾತಲ್ಲ. ಅಂತೂ ಇಂದಿನ ಅನುಭವದಿಂದ ಆಶ್ಚರ್ಯಪಡುತ್ತಿರುವ ಮಂಗರಾಯನಿಗೆ ಈಗ ಎಲ್ಲ ತಿಳಿಯಿತು—ಏನೆಂದರೆ, ಈ (ಕತ್ತನ್ನು ಕೊಯ್ವ) ವಿದ್ಯೆ ಕನ್ನಡಿಗರಲ್ಲಿ ಪರಂಪರಾಪ್ರಾಪ್ತವಿದೆ.

ಬಾಳ್ ಕನ್ನಡ ತಾಯ್,
ಬಹಾಳ್ ಕುತ್ತಿಗೆ ಕೊಯ್ !!

* * *

೨. ಪ್ರಜಾ-ಪ್ರ-ಭೂತ-ಹುಂ!

ಇತ್ತೀಚೆಗೆ ಬೇರೆ ಬೇರೆ ಪ್ರಾಂತಗಳಲ್ಲಿ ಮಂತ್ರಿಮಂಡಲಗಳನ್ನು ಸ್ಥಾಪಿಸಲು ನಡೆದ ಯತ್ನಗಳನ್ನು ಖಂಡಿಸುತ್ತ ಕೆಲ ವಾಚಕರು ತಮ್ಮ ರಾಜಕಾರಣ ಪಾಂಡಿತ್ಯವನ್ನು ಮಂಗರಾಯನೆದುರು ಪ್ರದರ್ಶಿಸಿದ್ದಾರೆ. ಮಂಗರಾಯನಿಗೆ ನಿಜವಾಗಿಯೂ ಆಶ್ಚರ್ಯ. 'ಇಂತಹ ಮಂತ್ರಿಮಂಡಲಗಳು ಪ್ರಜಾಪ್ರಭುತ್ವ ತತ್ತ್ವಕ್ಕೆ ವಿರುದ್ಧ' ಎಂದು ಬುದ್ಧಿ ಇದ್ದವರು ಕೂಡ ಕೂಗುವುದನ್ನು ಕೇಳಿ ಮಂಗರಾಯನಿಗೆ ಇನ್ನಿಷ್ಟು ಆಶ್ಚರ್ಯ. 'ಪ್ರಜಾಪ್ರಭುತ್ವ ಎಂದರೆ ಬಹುಮತದ ರಾಜ್ಯ' ಎಂಬ ಮಹಾತತ್ತ್ವ ಮಂಗರಾಯನಿಗೆ ಗೊತ್ತಿದೆ; ಇಷ್ಟೇ ಅಲ್ಲ, ಅದರ ನಿಜವಾದ, ಆಳವಾದ ಅರ್ಥವೂ ಮಂಗರಾಯನಿಗೆ ಗೊತ್ತಿದೆ (ಎಂದೇ ವಿಶ್ವವರ ಅಜ್ಞಾನಕ್ಕಾಗಿ ಆಶ್ಚರ್ಯ). 'ಬಹುಮತ' ಎಂದರೇನು? ಶಬ್ದಶಾಸ್ತ್ರದ ವ್ಯುತ್ಪತ್ತಿಯಿಂದ 'ಬಹುಮತ' ಎಂಬುದು ಮೊದಲು 'ಬಹುಂಮತ' ಎಂದಿದ್ದಿತು. ಅದರರ್ಥ 'ಬಹಳವಾಗಿ ಹುಂ ಎಂದು ಮತ ಕೊಡುವವರು, ಹೂಂಗುಡುವವರು' ಎಂದು. ಹೀಗೆಂದ ಮೇಲೆ ಇಂದಿನ ಮಂತ್ರಿಮಂಡಲ 'ಬಹುಮತ'ದ ಮಂಡಲಗಳಾದುವಲ್ಲವೆ? ಅಯ್ಯೊ! ಇನ್ನೂ ತಿಳಿದಿಲ್ಲವೆ? ಹಾಗಾದರೆ ಲಕ್ಷ್ಯಗೊಟ್ಟು ಆಲಿಸಿರಿ. (೧) ಮುಸ್ಲಿಂ ಲೀಗದವರು ಜಿನ್ನಾಸಾಹೇಬರ ಆಜ್ಞೆಗಳಿಗೆ ಹೂಂಗುಡುವ ಚಟದವರು; (೨) ಹಿಂದು ಮಹಾಸಭೆಯವರು ವೀರ ಸಾವರಕರರ ಸಶಸ್ತ್ರ ಅಂಗರಕ್ಷಕರ ದ್ವಾರಾ ಬಂದ ಹುಕುಂಗಳಿಗೆ ಹೂಂಗುಡುವ ಚಟದವರು. ಇಬ್ಬರಿಗೂ ಬ್ರಿಟಿಶ ದೊರೆಗಳಿಗೂ ಹೂಂಗುಡುವ ಅಭ್ಯಾಸ ಸಾಕಷ್ಟಿದೆ. ಇಂತಹರ ಮಂತ್ರಿಮಂಡಲ ಬಹುಮತದ ಮಂಡಲವಲ್ಲವೆ? ಪ್ರಜೆಗಳ ಭೂತ—ಅಲ್ಲಲ್ಲ—ಪ್ರಭು—ಅಂದರೆ—ಒಟ್ಟು ರಾಜಕಾರಣ ಲಂಪಟರಿಗೆ ಹೆಚ್ಚಿಗೆ ಹೇಳುವುದೇನು?

* * *

೩. ಜಾತೀಯ ಪಕ್ಷಪಾತ

ಇತ್ತಿತ್ತಲಾಗಿ ರಶಿಯಾದ ಸ್ಟಾಲಿನ್ ಪ್ರಭುಗಳ ಲೋಕಪ್ರಿಯತೆ ಹಿಂದುಸ್ತಾನದಲ್ಲಿ ಬೆಳೆಯುತ್ತಲಿದ್ದು, ಅನೇಕ ನಮ್ಮ ವಾಚಕರು ಆ ಮಹಾವಿಭೂತಿಯ ಬಗ್ಗೆ ಚಿಂತಾಜನಕಗಳನ್ನು ಮಂಗರಾಯನಿಗೆ ಕೇಳುತ್ತಲಿದ್ದಾರೆ. ಹೀಗೆ ಕೇಳುವವರಿಗೆ ಒಂದು ಪ್ರಶ್ನೆ ಸರ್ವಸಾಮಾನ್ಯವಾಗಿದೆ; ಕೆಲವರಂತೂ ಆ ವಿಷಯವಾಗಿ ಮಂಗರಾಯನೆದುರು ತಮ್ಮ ಸಲಹೆಯನ್ನೆ ಮಂಡಿಸಿದ್ದಾರೆ. ಆ ಪ್ರಶ್ನೆ ಎಂದರೆ— **ಸ್ಟಾಲಿನನ ಜಾತಿ ಯಾವುದು?** ಈತನು ಮಹಾವಿಭೂತಿ, ಅರ್ಥಾತ್ ವಿಭೂತಿತ್ವದ ಸಂಪರ್ಕ ಇವನಿಗಿದ್ದುದರಿಂದ ಇವನು ವೀರಶೈವನಿರಬೇಡವೆ— ಎಂದು ಕೆಲವರ ಆಶೆ; 'ಇಡಿಯ ಸೃಷ್ಟಿಪ್ರಪಂಚದಲ್ಲಿ capitalists (ಧನವಂತರು) ಮತ್ತು proletariat (ದುಡಿವವರು) ಎಂಬ ಎರಡೇ ತರದ ಭೇದ ಇವನಿಗೆ ಸಮ್ಮತವಿದ್ದುದರಿಂದ ಇವನು ದ್ವೈತ ಸಂಪ್ರದಾಯದ ಮಾಧ್ವ ಬ್ರಾಹ್ಮಣನೆ ನಿಜ' ಎಂದು ಇನ್ನು ಕೆಲವರ ಹಟ; 'ಸ್ಟಾಲಿನ್' ಎಂಬುದು 'ಸ್ಥಳಲಿಂಗ' ಎಂಬುದರ ಅಪಭ್ರಂಶವಿದ್ದು ಇವನು ವೀರಶೈವನೆ ಖಂಡಿತ

ಹಾರ್ಮೋನಿಯಂ ಶಿಕ್ಷಕ

ಈ ಪುಸ್ತಕದ ಸಹಾಯದಿಂದ ಫಿಡಲ, ಸತಾರ, ಕೊಳಲು, ದಿಲರುಬಾ, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಸಶಾಸ್ತ್ರವಾಗಿ ಶಿಕ್ಷಕನಿಲ್ಲದೆ ಕಲಿಯಲು ಉಪಯುಕ್ತವಾದದ್ದು— ಸುಮಾರು ೨೦೦ — ಹಿಂದುಸ್ಥಾನಿ ಚೀಜು, ಗ್ರಾಮೊಫೋನ ರಿಕಾರ್ಡಿನಲ್ಲಿಯ ಪದಗಳ ನೋಟೇಶನಗಳಿರುವವು.



ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ.

ಎಂದು ಬೇರೆ ಕೆಲವರ ಮಾರುತ್ತರ; ಇವನ ಹೆಸರು joseph. ಜೊಸೆಫ್— ಇದು 'ಜೀವಪಾಶ'ದ ಅಪಭ್ರಂಶ, ಆದ್ದರಿಂದ ಇವನು ವೈಷ್ಣವನೇ ಅಹುದು—ಎಂದು ಮೊದಲಿನವರ ಹಾರುತ್ತರ (= ಹಾರುವರ ಉತ್ತರ). ಇದೆಲ್ಲಕ್ಕೂ ಮಂಗರಾಯನು ನಿರುತ್ತರ! ಯಾಕೆಂದರೆ, ಲೆನಿನ್ ಎಂಬಾತನ ಜೀವವನ್ನೂ ಇಚ್ಛೆಯನ್ನೂ ತತ್ತ್ವಗಳನ್ನೂ ಇದ್ದಕ್ಕಿದ್ದಂತೆ ಅನುಕರಣ ಮಾಡಬೇಕೆಂಬ ಸ್ಟಾಲಿನನು ಅರ್ಥಾತ್— ಹೆಹೆ!— ನಂಗ ಜಾತಿಯವನೆಂಬುದು— ಹೆ ಹೆ ಹೆ!!

ಬೇಕಾದ್ದು ನಂಜಾತಿ, ಬೇಡಾದ್ದು ಮಂದೀಜಾತಿ!

(೪೪ ನೆಯ ಪುಟದಿಂದ ಮುಂದೆಸಾಗಿದ್ದು)

ಏಕೀಕರಣ ಸಭೆ ಏನೂ ಕೆಲಸಮಾಡಬೇಕಾಗಿಲ್ಲವೆ? ಜೈಲಿನ ಹೊರಗಿರುವ ಕನ್ನಡಿಗರಿಗೆ ಕನ್ನಡನಾಡು ಬೇಕಾಗಿಲ್ಲವೆ? ಸರಕಾರಿ ಕೆಲಸದಲ್ಲಿರುವ ಕನ್ನಡಿಗರಿಗೇನು ಕನ್ನಡನಾಡು ಅವಶ್ಯವಿಲ್ಲವೆ? ಎಂದ ಮೇಲೆ, ಆಂಧ್ರಮಹಾಸಭೆಗೆ ವಿರೋಧವಾಗಿ ಎಲ್ಲಿಯೂ ಒಂದು ಕೂಗು ಕೇಳಿಸಲೊಲ್ಲದಲ್ಲ; ಇದು ಸರಿಯೆ? ವಿಶ್ವವಿಶಾಲ ದೃಷ್ಟಿಯ ಕನ್ನಡಿಗರೆ, ನಿಮ್ಮ ಕಾಲ ಕೆಳಗಿನ ನೆಲವೇ ಹೊರಟು ಹೋದರೆ, ಆಗ ನಿಮ್ಮ ವಿಶಾಲದೃಷ್ಟಿಗೆ ನೆಲೆಯೆಲ್ಲಿ, ಉದಾರಭಾವಕ್ಕೆ ಎಡೆಯೆಲ್ಲಿ?

ಈಗ ದಕ್ಷಿಣಸಂಸ್ಥಾನಗಳ ಸಂಯುಕ್ತಭಾವ (ಫೆಡರೇಶನ್)ದ ವಿಚಾರ ರಭಸದಿಂದ ನಡೆದಿದೆ. ಧೂರ್ತರಾದ ಪರಪ್ರಾಂತೀಯ ಧುರೀಣರ ಮಾತಿನ ಮಬ್ಬಿಗೆ ಬಿದ್ದು, ನಮ್ಮಲ್ಲಿಯ ಸಂಸ್ಥಾನಗಳ ಕೆಲವು ಕನ್ನಡ ಧುರೀಣರೂ ಈ ವಿಚಾರವನ್ನು ಎತ್ತಿ ಹಿಡಿಯುತ್ತಲಿದ್ದಾರೆ. ಇಂತಹ ಧುರೀಣರಲ್ಲಿ ಕೆಲವರಿಗೆ ವೈಯಕ್ತಿಕ ಸ್ವಾರ್ಥ-ಸಾಧನೆಯ ಹಂಬಲವೂ ಇದ್ದಂತಿದೆ. ಈ 'ಸಂಯುಕ್ತಭಾವ'ದಲ್ಲಿ ಉತ್ತರ ಕರ್ನಾಟಕದ ಸಂಸ್ಥಾನಗಳನ್ನೂ ಕೂಡಿಸಲಾಗುವುದೆಂಬ ಸಂಗತಿಯನ್ನು, ಮೊನ್ನೆ ಮೊನ್ನೆಯೆ ಜಮಖಂಡಿಯಲ್ಲಿ ಸೇರಿದ ಸಂಸ್ಥಾನ ಸಮ್ಮೇಳನ ಸಾರಿಬಿಟ್ಟಿದೆ. ಈ ವಿಚಾರದಲ್ಲಿ ಬಂದ ಗೊತ್ತುವಳಿಯನ್ನು ವಿರೋಧಿಸಿದ ಕೆಲವು ಕನ್ನಡದ ನಿಜವಾದ ಅಭಿಮಾನಿಗಳು, ಅಲ್ಲಿಯ ಭೀಷ್ಮ-ದ್ರೋಣ-ಕರ್ಣ-ಜಯದ್ರಥ-ಶಕುನಿ ಸಮಾನ ದುರೀಣರೆದುರು 'ನೆಂಕ-ನಾಣಿ-ಸೀನಿ'ಗಳೆನಿಸಿಕೊಂಡರು. ಸಂಸ್ಥಾನಗಳ ಸಂಯುಕ್ತಭಾವದ ಚಳವಳಿ ಫಲಕಾರಿಯಾದರೆ, ಕನ್ನಡನಾಡಿಗೆ ಎಷ್ಟೊಂದು ತೊಂದರೆಯಿರುವುದೆಂಬುದನ್ನು ಯಾರಾದರೂ ವಿಚಾರಿಸಿದ್ದಾರೆಯೆ? ವಿಚಾರಿಸಿದ್ದರೆ ಆ ತೊಂದರೆಯನ್ನು ಕಳೆಯಲು ಚಳವಳಿಯನ್ನು ಹೂಡಲು ಮನಸ್ಸು ಮಾಡಿದ್ದಾರೆಯೆ? ಇಲ್ಲವೆಂಬುದು ಒಡೆದು ಕಾಣುತ್ತಿರುವಾಗ, ಬರಿಯೆ ದಿಕ್ಕುಗಳನ್ನು ಕೇಳಿ ಪ್ರಶ್ನೆಯ ಮರುದನಿಯನ್ನು ಕೇಳುವ ಸಂದರ್ಭವನ್ನೇಕೆ ತಂದುಕೊಳ್ಳಬೇಕು?

ಒಂದೇ ಎರಡೇ, ಇಂತಹ ಸಂಕಟಗಳು ಕನ್ನಡನಾಡಿಗೆ ಸಾವಿರ-ದೆಂಟು ಇವೆ. ಅವುಗಳನ್ನು ಕಳೆಯಲು ನಾವು ಸಂಘಟಿತರಾಗಿ ಕಾರ್ಯಕ್ಕೆ ಸಿದ್ಧರಾಗದಿದ್ದರೆ ಮುಂದೆ ಪಶ್ಚಾತ್ತಾಪಕ್ಕೆ ಗುರಿಯಾಗುವ ಸಂದರ್ಭ ಬಂದೇ ಬರುವುದು. ಅದಕ್ಕಾಗಿ ನಮ್ಮ ವಿಶಾಲದೃಷ್ಟಿಯನ್ನು ನಾವು ನಿಂತ ನೆಲ ನಡುಗುತ್ತಿರುವುದರ ಕಡೆಗೆ ತಿರುಗಿಸಬೇಕು, ಇದ್ದ ಮನೆ ಬೀಳುತ್ತಿರುವುದರ ಕಡೆಗೆ ಹೊರಳಿಸಬೇಕು. ಇಲ್ಲದಿದ್ದರೆ ಗಾಳಿಯ ಕೂಡ ಗಾಳಿಯಾಗಿ ದೂಳಿಯ ಕೂಡ ದೂಳಿಯಾಗಿ ಹೋಗುವ ಸಂದರ್ಭ ನಮಗೆ ಬಾರದಿರದು!

ಸಂಚಿಕೆ ತಲ್ಪದಿದ್ದರೆ

ಪ್ರತಿತಿಂಗಳೂ 'ಜಯಂತಿ' ಸಂಚಿಕೆಯನ್ನು ೧ನೆಯ ತಾರೀಖಿಗೆ ತಲ್ಪುವಂತೆ, ಎಲ್ಲ ಚಂದಾದಾರರಿಗೂ ಏಜಂಟರಿಗೂ ಕಳುಹಲಾಗುವುದು. ಅಂಚೆಯ ಆಫೀಸಿದ್ದ ಊರವರು ನಿಯಮದಂತೆ ಸಂಚಿಕೆ ಬಾರದೆ ಹೋದಾಗ, ೫ನೆಯ ತಾರೀಖಿನವರೆಗೆ ದಾರಿನೋಡಿ, ಕೂಡಲೆ ಕಾಗದ ಬರೆದು ತಿಳಿಸಬೇಕು; ಅಂಚೆಯ ಆಫೀಸಿಲ್ಲದ ಹಳ್ಳಿಯವರು ಆ ತಿಂಗಳ ೧೦ನೆಯ ತಾರೀಖಿನೊಳಗೆ ತಲ್ಪುವಂತೆ ಕಾಗದ ಬರೆಯಬೇಕು. ಈ ಅವಧಿಯನ್ನು ಮೀರಿಬಂದ ಪತ್ರಗಳನ್ನು ವಿಚಾರಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಆದುದರಿಂದ ಸಂಚಿಕೆ ತಲುಪದಿರುವವರು ಸಕಾಲದಲ್ಲಿಯೆ ಬರೆದು ತಿಳುಹುವುದನ್ನು ಮರೆಯಬಾರದು.

ಹಳೆಯ ಸಂಚಿಕೆಗಳು

ಜಯಂತಿಯ ಮೊದಲಿನ ನಾಲ್ಕು ವರ್ಷದ ಪೂರ್ಣ ಸಂಪುಟಗಳು ಇನ್ನುಮೇಲೆ ಸಿಕ್ಕಲಾರವು. ಆದರೆ ಒಳ್ಳೊಳ್ಳೆಯ ಕಥೆ-ಕವನ-ಪ್ರಬಂಧ-ಹರಟೆಗಳನ್ನೊಳಗೊಂಡ ಆ ಆ ವರ್ಷದ ಬೇರೆ ಬೇರೆ ಬಿಡಿ-ಸಂಚಿಕೆಗಳು ದೊರೆಯುವುವು. ಸಂಚಿಕೆಗಳ ಬೆಲೆಯನ್ನು ಮಾತ್ರ ಕೊಟ್ಟರೆ ಅಂಚೆಯ ವೆಚ್ಚವನ್ನು ನಾವೇ ವಹಿಸಿಕೊಂಡು ಕಳುಹುವ ಏರ್ಪಾಡನ್ನು ಮಾಡುವೆವು. ಆವಶ್ಯಕತೆಯುಳ್ಳವರು ಬೇಗನೆ ಬರೆದು ತರಿಸಿಕೊಳಬೇಕು.

—ಸಂಪಾದಕರು

❁ ★ ❁ **ಖಾದಿಯ ತತ್ತ್ವವೇನು?** ❁ ★ ❁

ಬಟ್ಟೆಗಾಗಿ ವೆಚ್ಚವಾಗುವ ಹಣವು, ಬಂಡವಳಗಾರರನ್ನು ಬಳೆಯಿಸದಂತೆ ಬಹುಜನರಲ್ಲಿ ಹಂಚಿಹೋಗುವುದು!

ಇಂತಹ ಕೈನೂಲಿನ ಕೈಮಗ್ಗದ—ವಿವಿಧ ಪ್ರಕಾರದ ಖಾದಿ ಬೇಕಿದ್ದರೆ, ಅವಶ್ಯವಾಗಿ ನಮ್ಮ ಕಡೆಗೆ ಬನ್ನಿರಿ.

ವಿದ್ಯಾರಣ್ಯ ವಸ್ತ್ರಾಲಯ ಗಾಂಧೀಚೌಕ—ಧಾರವಾಡ.

ಪಾಕಿಸ್ತಾನ್

The Philosophers have only interpreted the world in various ways : The point however is to change it.

Karl Marx.

★

ಮಾನವಸ್ವಾತಂತ್ರ್ಯವನ್ನು ಮನಸಾರೆ ಬಯಸು-ತಿರುವವರು ಪಾಕಿಸ್ತಾನದ ಬೇಡಿಕೆಯನ್ನು ಒಪ್ಪಲೆ ಬೇಕು. ಪಾಕಿಸ್ತಾನ್ ಚಳವಳಿಯ ವಿರುದ್ಧವಾಗಿ ಮಾತನಾಡುವವರ ಮಾತಿನಲ್ಲಿಯ ಭೀತಿ-ಬೆದರಿಕೆಗಳು ನಿಜವಾಗಿಯೂ ತಳಬುಡವಿಲ್ಲದುವು !

★

ಪಾಕಿಸ್ತಾನವು ಇದುವರೆಗೆ, ಹಿಂದೀ ರಾಜಕಾರಣದಲ್ಲಿ ಒಂದು ಜಟಿಲ ಸಮಸ್ಯೆಯಾಗಿದೆ. ಕಳೆದ ೩-೪ ವರುಷಗಳಿಂದ ಇದರ ವಿಷಯಕ್ಕೆ ಘನವಾದ ಚರ್ಚೆಗಳಾಗಿವೆ. ಸಮಸ್ಯೆಯನ್ನು ಬಿಡಿಸಲು ಅನೇಕ ರಾಜಕಾರಣಪಟುಗಳು ದುಡಿದಿದ್ದಾರೆ. ಕೊನೆಗೂ ' ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ! ' ಎಂಬಂತೆ ಅವರ ದುಡಿತದ ಫಲಿತಾಂಶವಾಗಿದೆ. ಅಖಂಡ ಭಾರತದಿಂದ ಈಗ ಮುಹಮ್ಮದೀಯರು ಸಿಡಿದು ಹೋಗಲು ಪ್ರಯತ್ನಿಸುತ್ತಿದ್ದಾರೆ. ಅವರನ್ನು ತಡೆಯಲು ಹಿಂದುಗಳೂ ಶೀಖರೂ ಉಳಿದ ಅಲ್ಪಸಂಖ್ಯಾಕರೂ ಕಂಕಣಬದ್ಧರಾಗಿದ್ದಾರೆ. ಹಿಂದು-ಮುಸ್ಲಿಮರಲ್ಲಿ ಸಖ್ಯ ಬೆಳೆಯಿಸಲು ಅನೇಕ ಕವಿಗಳೂ ಕಲಾವಿದರೂ ಧರ್ಮೋಪದೇಶಕರು ಮತ್ತು ರಾಜಕಾರಣಿಗಳೂ ದುಡಿಯುತ್ತಲಿದ್ದಾರೆ. ಎಲ್ಲವೂ ಶುಷ್ಕೋಪಚಾರ, ಅರಣ್ಯ-ರೋದನ !

ಎಂತಹ ಘನತೆಪಡೆದ ವೈದ್ಯನೇ ಆಗಲಿ, ಸರಿಯಾದ ರೋಗ-ನಿದಾನವಿಲ್ಲದೆ ಬೇನೆಯನ್ನು ಕಳೆಯಲು ಸಾಧ್ಯವಿಲ್ಲದಂತೆ— ಈ ಎಲ್ಲ ಧುರೀಣರ ಪಾಡಾಗಿದೆ. ಪಾಕಿಸ್ತಾನ್ ಚಳವಳಿಗೆ ಮೂಲಕಾರಣ ಯಾವುದೆಂಬುದನ್ನು ಕಂಡುಹಿಡಿಯದೆ, ಹಗ್ಗಣ-ವಿಟ್ಟು ಗೋಡೆಮೆತ್ತಿದಂತೆ ಎಲ್ಲರೂ ಬಾಹ್ಯೋಪಚಾರಗಳನ್ನು ನಡೆಯಿಸುತ್ತಲಿದ್ದಾರೆ.

ಹಿಂದುಗಳ ಹಿತವಚನಗಳಿಂದ ಗುಣವಾಗದ ಯಾವುದೋ ಪ್ರಬಲವಾದ ರೋಗವು ಮುಸ್ಲಿಮರನ್ನು ಕೊಲ್ಲುತ್ತಿರಲೇ ಬೇಕು. ಆ ರೋಗವೆಂದರೆ ಸಮೃದ್ಧಿಯಾದ ಅವರ ಬಡತನ. ಪ್ರತಿಯೊಬ್ಬ ಮುಹಮ್ಮದೀಯನೂ ಆ ಘೋರವಾದ ಬಡತನದಿಂದ ಪಾರಾದರೆ ಸಾಕೆಂದು ಬಯಸಿದರೆ ಆಶ್ಚರ್ಯದ ಮಾತಲ್ಲ. ಇಂದು ಅಖಂಡ ಭಾರತವೇ ಹೊರಗಿನ ಬಂಡವಾಳಗಾರರ ಸುಲಿಗೆಗೆ ಆಹುತಿಯಾಗಿರುವಾಗ, ಒಳಗೆ ಹಿಂದು ಮತ್ತು ಮುಸ್ಲಿಮ್ ಬಂಡವಾಳಗಾರರಿಬ್ಬರೂ ಜಾತಿ-ನೀತಿಗಳ ಕಟ್ಟಿಗೆ ಸಿಲುಕದೆ ಎರಡು ಜನಾಂಗದವರನ್ನೂ ಸುಲಿಯುತ್ತಲಿದ್ದಾರೆ. ಸ್ವಾತಂತ್ರ್ಯವಿದ್ದ ಹೊರತು ಯಾವ ತರದ ತಮ್ಮ ಉನ್ನತಿಯೂ ಆಗಲಾರದೆಂಬುದು ಮುಹಮ್ಮದೀಯರಿಗೆ ಮನದಟ್ಟಾಗಿದೆ. ಅವರಿಗೆ ತಮ್ಮ ಧರ್ಮ, ಸಂಸ್ಕೃತಿ, ಭಾಷೆ ಮುಂತಾದುವುಗಳನ್ನು ಉಳಿಸಿಕೊಳ್ಳಲು ತಮ್ಮದೇ ಆದ ರಾಜ್ಯದ ಆವಶ್ಯಕತೆ ಇದೆ. ಸ್ವತಂತ್ರ ಹಿಂದುಸ್ತಾನದಲ್ಲಿ, ಬಹು ಸಂಖ್ಯಾಕರಾದ ಹಿಂದುಗಳ ಕೈಯಲ್ಲಿ ರಾಜ್ಯದಾಡಳಿತ ಸಿಕ್ಕಿರುವಾಗ, ಧನದ ದರ್ಪದಿಂದ ಜನಗಳ ಬಲದಿಂದ ಹಿಂದು ಬಂಡವಾಳಗಾರರು ಮುಸ್ಲಿಮರನ್ನು ತಲೆಯೆತ್ತದಂತೆ ಮಾಡಲು ಬರುವಂತಿದೆ. ಜರ್ಮನಿಯಲ್ಲಿಯ ಯಹೂದಿ ಜನರ ಗೋಳನ್ನು ಇಂದು ನಾವು ನೋಡುತ್ತಲಿದ್ದೇವೆ. ಫ್ಯಾಸಿಸ್ಟ್ ಹಿಂದುಸ್ತಾನದಲ್ಲಿ ಮುಸ್ಲಿಮರ ಸ್ಥಿತಿಯು ಯಹೂದಿಗಳಂತಾದರೆ ವಿಚಿತ್ರವಲ್ಲ. ಭಿನ್ನ ಸಂಸ್ಕೃತಿ, ಧರ್ಮ, ಭಾಷೆ, ಮತ್ತು ನಡತೆ-ನಡಾವಳಿಗಳುಳ್ಳ ಹಿಂದು ಮತ್ತು ಮುಸ್ಲಿಂ ರಾಷ್ಟ್ರಗಳನ್ನು ಉಪದೇಶದಿಂದ, ಮತ್ತು ಬೆದರಿಕೆಯಿಂದ ಒಟ್ಟುಗೂಡಿಸಲು ಪ್ರಯತ್ನಗಳು ನಡೆದಿವೆ.

ಜೋಸೆಫ್ ಮ್ಯಾಝಿನಿ ' ಮಾನವೀಯ ಕರ್ತವ್ಯಗಳು ' ಎಂಬ ಗ್ರಂಥದಲ್ಲಿ ' The country is not an aggregation but an association ' ಎಂದು ಹೇಳಿದ ಮಾತು ಅಣಿ-ಮುತ್ತಿನಂತಿದೆ. ಭಾರತದಲ್ಲಿ ಹೊಸ ಶಕ್ತಿ ಹರಿಯಬೇಕಾದರೆ ಬಹುಸಂಖ್ಯಾಕರಾದ ಹಿಂದುಗಳಿಗೆ ಮುಹಮ್ಮದೀಯರ ಸಹಕಾರ ಇಲ್ಲದಿದ್ದರೆ ನಡೆಯುವಂತಿಲ್ಲ. ಬಲದ ಗರ್ವದಿಂದ ಅಲ್ಪ-ಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ಮನ್ನಿಸದಿರುವುದು ಬಹು-ಸಂಖ್ಯಾಕರಿಗೆ ಶೋಭಿಸದ ಮಾತಾಗಿದೆ.

ಪಾಕಿಸ್ತಾನವು ಪ್ರಾಮುಖ್ಯವಾಗಿ ಮುಸ್ಲಿಮರ ಆರ್ಥಿಕ ಪ್ರಶ್ನೆಯಾಗಿರುವುದೆಂಬುದಕ್ಕೆ ಈಗ ಅಲ್ಲಿ ಇಲ್ಲಿ ನಡೆಯುತ್ತಿರುವ ಕೋಮುವಾರು ದಂಗೆಗಳನ್ನು ನೋಡಿದರೆ ಸಾಕು. ಗಲಭೆಗಳಲ್ಲಿ ಮಸೀದೆ-ಗುಡಿಗಳ ನಾಶಕ್ಕಿಂತ ಎರಡೂ ಪಕ್ಷದವರ ವಿತ್ತ-ಜೀವಿತಗಳ ನಾಶವು ಹೆಚ್ಚಾಗಿ ಆಗುತ್ತದೆ. ಆರ್ಥಿಕ ಪ್ರಶ್ನೆಯ ಜೊತೆಗೆ ಪಾಕಿಸ್ತಾನವು ಮುಹಮ್ಮದೀಯರ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಯೂ ಆಗಿರುವುದೆಂಬುದನ್ನು ನಾವು ಮರೆಯುವಂತಿಲ್ಲ.

ಹಿಂದುಸ್ತಾನದಿಂದ ಎಂದೋ ಬೇರೆ ಸಿಡಿದು ಹೋಗ-ಬೇಕಾದ ಪಾಕಿಸ್ತಾನವನ್ನು ಬ್ರಿಟಿಷ್ ಸತ್ತೆಯು ಬಂಧಿಸಿಟ್ಟಿದೆ. ಇದುವರೆಗೆ ಪಾಕಿಸ್ತಾನದ ಯೋಜನೆಯನ್ನು ಹಲವು ಮುಸ್ಲಿಮ್ ಧುರೀಣರು ಮಂಡಿಸಿದ್ದಾರೆ. ಆದರೆ ಮೊತ್ತಮೊದಲು—ಅವ್ಯಕ್ತ-

ವಾಗಿದ್ದ—ಪಾಕಿಸ್ತಾನದ ರೂಪರೇಷೆಗಳನ್ನು ಎಳೆದವನೆಂದರೆ ಕವಿ ಸರ್ ಮಹಮ್ಮದ್ ಇಕ್ಬಾಲ್. ೧೯೩೦ ರಲ್ಲಿ ಲಂಡನ್‌ನಲ್ಲಿ ದುಂಡುಮೇಜಿನ ಪರಿಷತ್ತು ಕೂಡಿದಾಗ, ಇಕ್ಬಾಲನು ಸಿಂಧ, ಪಂಜಾಬ, ಬಲುಚಿಸ್ತಾನ ಮತ್ತು ಸರಹದ್ದು ಪ್ರಾಂತಗಳಲ್ಲಿ ಮುಸ್ಲಿಮರು ಬಹುಸಂಖ್ಯಾತರಿದ್ದ ಪ್ರಯುಕ್ತ ಆ ಪ್ರಾಂತಗಳು ಮುಸ್ಲಿಮ್ ಪ್ರಾಂತಗಳೆಂದೂ, ಹಿಂದುಸ್ತಾನದಲ್ಲಿ ಕೇಂದ್ರ ಸರಕಾರವಿರದೆ ಎಲ್ಲ ಪ್ರಾಂತಗಳು ಸ್ವತಂತ್ರವಾಗಿದ್ದುಕೊಂಡು ನೇರವಾಗಿ ಭಾರತಮಂತ್ರಿಯ ಕೈಕೆಳಗೆ ಇರಬೇಕೆಂದೂ ಸೂಚಿಸಿದನು. ಆಗ ಅದರ ನಿಷ್ಕರ್ಷವೇನೂ ಆಗಲಿಲ್ಲ. ಹತ್ತುವರುಷಗಳ ವರೆಗೆ ಅಸ್ತಂಗತವಾದ ಪ್ರಶ್ನೆಯು ಮತ್ತೆ ೧೯೪೦ ರಲ್ಲಿ ಲಾಹೋರದಲ್ಲಿ ಕಾಣಿಸಿಕೊಂಡಿತು. ಬ್ಯಾ. ಮಹಮ್ಮದಲ್ಲಿ ಜಿನ್ನಾರವರ ಅಧ್ಯಕ್ಷತೆಯಲ್ಲಿ ಕೂಡಿದ ಪಾಕಿಸ್ತಾನ್ ಸಭೆಯಲ್ಲಿ, ಪಾಕಿಸ್ತಾನವೇ ಹಿಂದುಸ್ತಾನದಲ್ಲಿಯ ೧೦ ಕೋಟಿ ಮಹಮ್ಮದೀಯರ ಗುರಿಯೆಂದೂ ಅದಕ್ಕಾಗಿ ಪ್ರತಿಯೊಬ್ಬ ಮಹಮ್ಮದೀಯನು ಕೊನೆಯವರೆಗೂ ಹೋರಾಡಬೇಕೆಂದೂ ತೀರ್ಮಾನವಾಯಿತು. ಲಾಹೋರದ ಗೊತ್ತುವಳಿಗಳ ಪ್ರಕಾರ ಪಾಕಿಸ್ತಾನದಲ್ಲಿ ಸಿಂಧ, ಬಲೂಚಿಸ್ತಾನ್, ಪಂಜಾಬ ಮತ್ತು ಸರಹದ್ದು ಪ್ರಾಂತಗಳೂ; ಪೂರ್ವದಿಕ್ಕಿಗಿರುವ ಬಂಗಾಲ, ಆಸಾಮುಗಳೂ ಸಮಾವೇಶವಾದುವು. ಲಾಹೋರ ತೀರ್ಮಾನದ ತರುವಾಯ ಪಾಕಿಸ್ತಾನದ ಯೋಜನೆಯನ್ನು ಮಂಡಿಸಿದವರಲ್ಲಿ (೧) ಹೈದ್ರಾಬಾದಿನ ಡಾ. ಅಬ್ದುಲ್ ಲತೀಫ್ (೨) ಅಲೀಗಡ ವಿಶ್ವವಿದ್ಯಾಲಯದ ಪ್ರೊಫೆಸರರಾದ ಸಯ್ಯದ್ ಜಾಫರ್ ಮತ್ತು ಅಫಜುಲ್ ಹುಸೇನ್ (೩) ಸ್ವರ್ಗೀಯ ಸರ್ ಸಿಕಂದರ್ ಹಯಾತ್‌ಖಾನ್ (ಪಂಜಾಬಿ) (೪) ಅಸದುಲ್ಲಾ (೫) ರಹಿಮತಲ್ಲಿ (೬) ಮತ್ತು ಮಾಮೋತದ ನವಾಬ ಇವರ ಹೆಸರುಗಳು ಮುಖ್ಯವಾಗಿವೆ. ವೈಯಕ್ತಿಕ ಅಭಿಪ್ರಾಯಗಳಲ್ಲಿ ಭೇದವಿರುವಂತೆ, ಪಾಕಿಸ್ತಾನದ ಗಡಿಯನ್ನು ತಮಗೆ ತಿಳಿದಂತೆ ಹೆಚ್ಚಾಗಿ ಬೆಳೆಯಿಸಿದ್ದಾರೆ. ಪಾಕಿಸ್ತಾನದ ವಿರೋಧಿಗಳು ಇವರಲ್ಲಿ ಯಾರೊಬ್ಬರ ಯೋಜನೆಯನ್ನು ತೆಗೆದುಕೊಂಡು ಅದನ್ನು ವಿಮರ್ಶಿಸುತ್ತಾರೆ. ಆದರೆ ಸಮಗ್ರ ಮುಸ್ಲಿಂ ಜನತೆಯು ಕೇಳುವುದು ಲಾಹೋರದಲ್ಲಿ ಪಾಸಾದ ಗೊತ್ತುವಳಿಯಿಂದುಂಟಾದ ಪಾಕಿಸ್ತಾನವನ್ನೆ—ಎಂಬುದನ್ನು ಅವರು ಮರೆತುಬಿಡುತ್ತಾರೆ. ಮತ್ತು ಲಾಹೋರದ ಪಾಕಿಸ್ತಾನವು ಹೆಚ್ಚು ಸಮರ್ಪಕವೂ ನ್ಯಾಯಸಮ್ಮತವೂ ಆಗಿದೆ—ಎಂಬುದನ್ನು ಬೇರೆ ಒಡೆದು ಹೇಳಬೇಕಾಗಿಲ್ಲ. ಇದೇ ಶಂಕೆಯನ್ನೇ ಸರ್ ಸಿಕಂದರ್ ಹಯಾತ್‌ಖಾನರು ಎತ್ತಿದಾಗ, ಲ್ಯಾಲಪೂರದಲ್ಲಿ ೨೦ ನೆಯ ಜೂನ್ ೧೯೪೧ ರಲ್ಲಿ ಕೂಡಿದ ಪಾಕಿಸ್ತಾನ್ ಸಭೆಯಲ್ಲಿ, ಮಲಿಕ್ ಬರಕತ್ ಅಲ್ಲಿ M.A., LL.B., M.L.C. ಅವರು ಹೀಗೆ ಹೇಳಿದ್ದಾರೆ!

"The Pakistan plan of the Muslim League is envisaged in the resolution of All India Muslim League, passed at Lahore, on 23rd March 1941. T is plan visualizes or provides for two autonomous Muslim States, one on the North-West-Zone and the other on the Eastern Zone of India. No Native State, is include l in any of these two Pakistans It should be clear to any body that the Pakistan that the Muslims of India are after is the Pakistan as envisaged in the Leauge resolution mentioned above. And if Sir Sikandar wants an answer to his posers I can tell him that the only Pakistan now before us is the League Pakistan and that Pakistan alone".

ಇದುವರೆಗೆ ಮುಸ್ಲಿಮರ ದೃಷ್ಟಿಯಿಂದ ಪಾಕಿಸ್ತಾನವನ್ನು ನೋಡಿದ್ದಾಯಿತು. ಇನ್ನು ಹಿಂದುಗಳ ದೃಷ್ಟಿಯಿಂದ ನೋಡೋಣ. ಹಿಂದುಗಳು ಪಾಕಿಸ್ತಾನವನ್ನು ವಿರೋಧಿಸುವ ಕಾರಣಗಳೆಂದರೆ ಮುಖ್ಯವಾಗಿ :

೧. ಪಾಕಿಸ್ತಾನಕ್ಕೆ ಸಮ್ಮತಿಯನ್ನು ಕೊಟ್ಟುಬಿಟ್ಟರೆ ಇಲ್ಲಿಯ ಮಹಮ್ಮದೀಯರು ತಮ್ಮ ಸ್ವಂತ ಸಾಮರ್ಥ್ಯದಿಂದಾಗಲಿ, ಅಥವಾ ನೆರೆಯ ಮಹಮ್ಮದೀಯ ರಾಷ್ಟ್ರಗಳ ನೆರವಿನಿಂದಾಗಲಿ ಮತ್ತೊಮ್ಮೆ ಹಿಂದುಸ್ತಾನದಲ್ಲಿ ಮೊಗಲಸಾಮ್ರಾಜ್ಯವನ್ನು ಕಟ್ಟುವರು.

೨. ಪಾಕಿಸ್ತಾನವು ಆರ್ಥಿಕದೃಷ್ಟಿಯಿಂದ ತನ್ನ ಕಾಲಮೇಲೆ ತಾನು ನಿಲ್ಲುವಂತಿಲ್ಲ.

೩. ಇನ್ನೊಂದು ಮಹತ್ತ್ವದ್ದಾದ ಸಂದೇಹವನ್ನು ಸರ್ ಚಿಮಣಲಾಲ ಸೆಟಲವಾಡರು, ಫರ್ಗ್ಯುಸನ್ ಕಾಲೇಜಿನ ಪ್ರಿನ್ಸಿಪಾಲರಾದ ಮಹಾಜನಿಯವರು ಬರೆದ 'The problem of the minorities and constitutional Democracy as its Solution " ಎಂಬ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತ ಎತ್ತಿದ್ದಾರೆ :

'ಪರಚಕ್ರಗಳು ಭಾರತದ ಮೇಲೆ ದಾಳಿಯಿಟ್ಟಾಗ, ಪಾಕಿಸ್ತಾನದ ಮತ್ತು ಹಿಂದುಸ್ತಾನದ ಸೈನ್ಯಗಳು (Defence forces) ಯಾವ ಕಾರಣದಿಂದಾದರೂ ಸಹಕರಿಸದಿದ್ದರೆ ಅಥವಾ ಶಾಂತಿಕಾಲದಲ್ಲಿಯೂ ಕೂಡ ಎರಡೂ ರಾಷ್ಟ್ರಗಳಲ್ಲಿದ್ದ ಅಲ್ಪಸಂಖ್ಯಾಕರ ಕಲ್ಪಿತ ಸಂಕಷ್ಟಗಳ ನಿವಾರಣೆಯ ವಿಷಯದಲ್ಲಿ ಮತಭೇದವಾಗಿ ಯಾದವೀಕಲಹವು ಪ್ರಾರಂಭವಾದರೆ, ಅದರಿಂದ ಗಣೇಶನನ್ನು ಮಾಡಹೋಗಿ ಕಪಿಯನ್ನು ಮಾಡಿದಂತಾಗುವುದು.'

ಈ ಎಲ್ಲ ಸಂದೇಹಗಳಿಗೂ ಅವಿಶ್ವಾಸ ಕಲ್ಪನೆಗಳೇ ಆಧಾರವಾಗಿವೆಯೆಂಬುದನ್ನು ಇನ್ನೊಮ್ಮೆ ಒತ್ತಿಹೇಳಬೇಕಾಗಿದೆ. ಇನ್ನು ಒಂದೊಂದೇ ಸಂದೇಹಗಳನ್ನು ಹೊಸ ಬೆಳಕಿನಲ್ಲಿ ನೋಡೋಣ:

೧. ಒಂದುವೇಳೆ ಮುಸ್ಲಿಮರು ಮೊಗಲ ಸಾಮ್ರಾಜ್ಯದ ಪುನರಾವೃತ್ತಿಯನ್ನು ತರಲು ಬಯಸಿದರೆ, ಅವರ ಸಮಾಚಾರ

ತೆಗೆದುಕೊಳ್ಳಲು ಹಿಂದುಗಳ ಸೈನ್ಯವು ಸಿದ್ಧವಾಗಿಯೇ ನಿಂತಿರುತ್ತದೆ. ಆ ಹೊತ್ತಿನಲ್ಲಿ ಹಿಂದುಗಳು ಪಾಕಿಸ್ತಾನವನ್ನು ಆಕ್ರಮಿಸಿಕೊಂಡರೆ, ಅವರನ್ನು ಯಾರೂ ನಿಂದಿಸಲಾರರು. ಪಾಕಿಸ್ತಾನಕ್ಕೆ ಸಮ್ಮತಿಸದಿದ್ದರೆ, ಪ್ರತ್ಯಕ್ಷ ಯಾದವೀಯಕಲಹವು ನಡೆಯದಿದ್ದರೂ ೧೦ ಕೋಟಿ ಜನರ ಪಂಚಮದಳವನ್ನು ಹಿಂದುಗಳು ತಮ್ಮಲ್ಲಿ ಇಟ್ಟುಕೊಂಡಂತಾಗುತ್ತದೆಂಬುದನ್ನು ಮರೆಯಬಾರದು.

೨. ಇನ್ನು ಪಾಕಿಸ್ತಾನವು ಆರ್ಥಿಕದೃಷ್ಟಿಯಿಂದ ಬಡವಾಗುವುದೆಂಬುದೇನೋ ನಿಜ; ಆದರೆ ಮುಸ್ಲಿಮರು ನಾನಾಬಗೆಯ ಉದ್ಯೋಗಗಳಿಂದ ಅದನ್ನು ತುಂಬಿಕೊಳ್ಳಬಹುದಾಗಿದೆ. ಇದಕ್ಕೆ ಉದಾಹರಣೆ ಎಂದು ರಶಿಯದಲ್ಲಿಯ ಮುಸ್ಲಿಮ್ ಪ್ರಾಂತಗಳಾದ ಕಿರ್ಗಿಝಿಯಾ ಮತ್ತು ತಾಜಿಕಿಸ್ತಾನದಲ್ಲಿಯ ಔದ್ಯೋಗಿಕ ಪ್ರಗತಿಯ ಅಂಕೆ-ಸಂಖ್ಯೆಗಳನ್ನೇ ನೋಡಿದರೆ ತಿಳಿಯುವಂತಿದೆ. ೧೯೧೩ ರಿಂದ ೧೯೪೦ರ ಅವಧಿಯಲ್ಲಿ ಈ ಎರಡೂ ಪ್ರಾಂತಗಳ ಔದ್ಯೋಗಿಕ ಪ್ರಗತಿಯು ಅನುಕ್ರಮವಾಗಿ ೧೬೦ ಮತ್ತು ೨೪೦ ಮಡಿಯಷ್ಟು ಬೆಳೆದಿದೆ. ಮತ್ತು ಅಲ್ಲಿಯ ಮುಸ್ಲಿಮರು ತಮ್ಮ ಸಂಸ್ಕೃತಿ, ಭಾಷೆ ಮತ್ತು ಕಲೆಗಳನ್ನು ಬೆಳೆಯಿಸಿಕೊಂಡದ್ದಲ್ಲದೆ, ಪರಧರ್ಮೀಯರಾದ ಕ್ರೈಸ್ತರ ಕೂಡ ಇಂದು ಭುಜಕ್ಕೆ ಭುಜಹಚ್ಚಿ ನಾಝೀ ತತ್ತ್ವದ ವಿರುದ್ಧ ಅಖಂಡವಾದ ಹೋರಾಟವನ್ನು ನಡೆಯಿಸಿದ್ದಾರೆ.

ಸರ್ ಚಿಮಣಲಾಲರ ಸಂದೇಹವಾದರೂ ಕಲ್ಪನೆಯ ಭೂತವೇ ಆಗಿದೆ. ಪರಚಕ್ರಗಳು ಬಂದಾಗ ನೀಚತನದಿಂದ ಪಾಕಿಸ್ತಾನಿಗಳು ತಮ್ಮ ಸಂರಕ್ಷಣೆಯ ಅಭಯವನ್ನು ಅವರಿಂದ ಪಡೆದು ಅಥವಾ ತಾವು ದಾಸ್ಯದಲ್ಲಿ ಬಿದ್ದರೂ ಚಿಂತೆಯಿಲ್ಲ ಹಿಂದುಗಳು ಹಾಳಾಗಲಿ ಎಂಬ ಉದ್ದೇಶದಿಂದ ಅವರನ್ನು ತಡೆಯದಿದ್ದರೆ ಅಥವಾ ಹಿಂದುಗಳ ಕೂಡ ಸಹಕರಿಸದಿದ್ದರೆ, ಪಾಕಿಸ್ತಾನವನ್ನು ಹಿಂದುಗಳು ಗೊತ್ತುಹಚ್ಚಿದರೆ ಅವರನ್ನು ಯಾರು ತಡೆಯುವರು? ಆದರಂತೆಯೆ ಮುಸ್ಲಿಮರೂ ಹಿಂದುಗಳ ವಿಷಯದಲ್ಲಿ ನಡೆಯಬಹುದಾಗಿದೆ. ಇನ್ನು ಕಲ್ಪಿತ ಸಂಕಷ್ಟಗಳನ್ನು ಕುರಿತು (supposed grievances) ವಿಚಾರ. ಮುಸ್ಲಿಮ್ ಅಲ್ಪಸಂಖ್ಯಾಕರು ಹಿಂದುಗಳ ರಾಜ್ಯದಲ್ಲಿ ಹತ್ತು ಕಷ್ಟಗಳ ನಿವಾರಣೆಯಾಗುವಂತೆ ಕೇಳಿದರೆ, ಪಾಕಿಸ್ತಾನದಲ್ಲಿಯ ಹಿಂದುಗಳು ೧೦೦ ಕಷ್ಟಗಳ ನಿವಾರಣೆಯಾಗುವಂತೆ ಕೇಳುವರು. ಎರಡೂ ರಾಜ್ಯಯಂತ್ರಗಳು ಸುಗಮವಾಗಿ ನಡೆಯಲೇ ಬೇಕಾಗಿದ್ದರೆ, ಇಬ್ಬರೂ ಒಂದು ತಿಳಿವಳಿಕೆಗೆ ಬರಲೇಬೇಕು. ಇಂದು ಕನಸಿನ ಕಲ್ಪನಾವಿಲಾಸ ಬೇಡ; ನನಸಿನ ಮಧುರಫಲಗಳು ಬೇಕಾಗಿವೆ. ನೀರಿನಲ್ಲಿ ಬಿದ್ದ ಹೊರತು ಈಸು ಬರುವುದಿಲ್ಲ, ಈಸು ಬಂದ ಹೊರತು ನೀರಿನಲ್ಲಿ ಬೀಳುವಂತಿಲ್ಲ—ಎಂದ ಹಾಗಿದೆ ಈ ವಾದದ ಕೊನೆ-ಮೊದಲು.

ಇಂದು ಸಮಗ್ರ ಜಗತ್ತೇ ಫ್ಯಾಸಿಝಂನ ದಳ್ಳುರಿಯಲ್ಲಿ ಸಿಲುಕಿದೆ. ಸಿರಿವಂತಿಕೆ ಬಡತನಗಳ ನಡುವೆ ಅತ್ಯುಗ್ರವಾದ ಹೋರಾಟ ನಡೆದಿದೆ. ಪ್ರಜಾಸತ್ತೆಯು ಇದೀಗ ಚೇತರಿಸಿಕೊಳ್ಳತೊಡಗಿದೆ. ಪ್ರಬಲವಾದ ನಾಝೀ ಶಾಸನಶಕ್ತಿಯನ್ನು ಸದೆಬಡೆಯಲು ಇನ್ನೂ ಅದೆಷ್ಟು ಕಾಲ ಬೇಕಾಗುವುದೋ ತಿಳಿಯುವಂತಿಲ್ಲ. ಹೊಸ ಜಗತ್ತೇ ರೂಪುಗೊಳ್ಳುತ್ತಿರುವ ಕಾಲದಲ್ಲಿ ಹಿಂದುಗಳು ಅಲ್ಪಸಂಖ್ಯಾಕರಾದ ಮುಸ್ಲಿಮರನ್ನು ತಮ್ಮ ಬಲದಿಂದ ಒತ್ತಿ ತುಳಿಯುವುದು ಮಾನವಧರ್ಮಕ್ಕೆ ಲಾಂಛನಾಸ್ಪದವಾಗಿದೆ. ಜಗತ್ತಿನಲ್ಲಿ ಎಷ್ಟು ಧರ್ಮಗಳು ಹುಟ್ಟಿದರೂ, ಸಿರಿವಂತರು ಸುಲಿಯುವುದನ್ನು ಬಿಟ್ಟಿಲ್ಲ. ಧರ್ಮ-ಕರ್ಮಗಳ ನೆವದಲ್ಲಿ, ವರ್ಣದ್ವೇಷದ ಛಲದಲ್ಲಿ, ನರಕುರಿಗಳ ಸರ್ವಸ್ವ ಸುಲಿಗೆ ನಡೆದಿದೆ. ಯುದ್ಧದ ಬೇಗೆಯಿಂದ ಸುಟ್ಟುಕೊಂಡ ಜನತೆ ಇದೀಗ 'ಶಾಂತಿ, ಶಾಂತಿ!' ಎಂದು ಒರಲುತ್ತಿದೆ. ಆದರೆ ಶಾಂತಿ ಸಿಕ್ಕುವ ಬಗೆ ಹೇಗೆ? ಮನುಷ್ಯ-ಸಮಾಜವನ್ನು ನಾವು ಒಂದು ಸಾಗರಕ್ಕೆ ಹೋಲಿಸಬಹುದಾಗಿದೆ. ಸಾಗರದಲ್ಲಿಯ ಒಂದು ಹನಿಯು ಕೂಡ ಪ್ರಕ್ಷುಬ್ಧವಾದರೆ ಸಾಕು, ಅಗಣಿತ ಅಲೆಗಳನ್ನು ಹುಟ್ಟಿಸಿ ಸಾಗರವನ್ನೇ ಕ್ಷುಬ್ಧವನ್ನಾಗಿ ಮಾಡುತ್ತದೆ. ಅದರಂತೆ ಇಂದಿನ ಸಮಾಜದಲ್ಲಿ ಅಸಂತುಷ್ಟರಾದ ಜೀವಿಗಳು ಲೆಕ್ಕವಿಲ್ಲದಷ್ಟಿರುವಾಗ, ಸಮಾಜಕ್ಕೆ ಶಾಂತಿ ಸಿಕ್ಕುವ ಬಗೆ ಎಲ್ಲಿಯದು? ಈ ಅಶಾಂತಿಗೆ ಮೂಲಕಾರಣವೆಂದರೆ, ಕೋಟ್ಯವಧಿ ಮಂದಿ ಹೊಟ್ಟೆಗೆ ಹಿಟ್ಟು ಕಾಣದಿರುವಾಗ ಕೈಬೆರಳಿನಿಂದೆಣಿಸುವಷ್ಟು ಮಂದಿ ಸ್ವರ್ಗಸುಖವನ್ನು ಅನುಭವಿಸುವುದು. ಪ್ರತಿಯೊಂದು ದೇಶದಲ್ಲಿಯೂ ಬಂಡವಾಳಗಾರರು ಧರ್ಮ-ಕರ್ಮಗಳ, ಜಾತಿ-ಬಣ್ಣಗಳ ಮಾಯಾಜಾಲಗಳನ್ನು ಬೀಸಿ, ಹೆಜ್ಜೆಹೆಜ್ಜೆಗೂ ಪ್ರತಿಭಟಿಸುವ ಜಗತ್ತನ್ನು ಬಂಧಿಸಿದ್ದಾರೆ. ಇದೀಗ ಹೊಸ ಬೆಳಕು ಮೂಡಿದೆ. ಜಾಗತಿಕ ಈ ಪ್ರಳಯಕ್ಕೆ ಸಿರಿವಂತರ ಕೈವಾಡವೇ ಕಾರಣವೆಂದು ಈಗ ಜನತೆಗೆ ತಿಳಿಯಹತ್ತಿದೆ. ಪ್ರತಿಯೊಂದು ದೇಶದಲ್ಲಿಯೂ, ಯಾವ ಧರ್ಮವಿದ್ದರೂ ಸರಿಯೆ, ಅಲ್ಲಿ ನಾವು ಈ ಎರಡು ವರ್ಗಗಳನ್ನು ನೋಡುತ್ತಲೇ ಇರುತ್ತೇವೆ. ಯಾವ ಧರ್ಮವಾದರೇನು, ಯಾವ ಬಣ್ಣವಾದರೇನು? ಬಂಡವಾಳಗಾರರು ಕೂಡಿಕೊಂಡು ತಮ್ಮ ಸ್ಥಾನ-ಮಾನಗಳಿಗೆ ಕುಂದುಬಾರದಂತೆ—ತಮ್ಮ ಬೊಜ್ಜು ಕರಗದಂತೆ—ನೋಡಿಕೊಳ್ಳುತ್ತಾರೆ. ಇಂದು ಜಪಾನು ಬಿಳಿಯ ರಾಷ್ಟ್ರವಾದ ಜರ್ಮನಿಯ ಕೂಡ ಸಹಕರಿಸುತ್ತಿದೆ. ಅದೇ ಜಪಾನು ಹಿಂದುಸ್ತಾನದ ಮೇಲೆ ಬಾಂಬಿನ ಮಳೆಗರೆಯುತ್ತಿದೆ. ಇದುವರೆಗೆ ಕೊಬ್ಬಟ್ಟಿನಲ್ಲಿದ್ದ ಬೆಂಕಿಯಂತೆ ಒಳಗಿಂದೊಳಗೆ ಹೊತ್ತುತ್ತಿದ್ದ ಈ ವರ್ಗಕಲಹದ ಬೆಂಕಿಯು ಇದೀಗ ಪ್ರಜ್ವಲಿಸತೊಡಗಿದೆ. ಅದರ ಜ್ವಾಲೆಗಳು ನಮ್ಮನ್ನೂ ಬಿಡುವಂತಿಲ್ಲ. ನಾವು ಯಾವುದಾದರೊಂದು ಪಕ್ಷವನ್ನು ಸೇರಲೇಬೇಕು. ತಟಸ್ಥವಾಗಿ ಉಳಿದುಕೊಂಡರೂ ನಡೆಯುವಂತಿಲ್ಲ. ತಾಟಸ್ಥ್ಯ-

ದಿಂದ ನಾಳಿನ ಸಾವನ್ನು ಇಂದೆಯೆ ಬರಮಾಡಿಕೊಂಡಂತೆ. ಪ್ರಬಲವಾದ ನಾಝೀ ಶಕ್ತಿಯನ್ನು ಎದುರಿಸಬೇಕಾದರೆ ನಾವು ನಮ್ಮ ಪ್ರತಿಯೊಂದು ಶಕ್ತಿಯ ಅಂಶವನ್ನೂ ಅದನ್ನು ನಡೆಬಡಿಯಲು ವೆಚ್ಚ ಮಾಡಲೇಬೇಕಾಗಿದೆ. ಇಲ್ಲದಿದ್ದರೆ 'ಸ್ವಾತಂತ್ರ್ಯ' ಎಂಬ ಶಬ್ದವನ್ನು ನಾವು ಕೊನೆಯವರೆಗೂ ಮರೆಯಬೇಕಾಗಿ ಬರಬಹುದು.

ಇಂದು ನಮ್ಮಲ್ಲಿಯಾದರೂ ವರ್ಗಜಾಗೃತಿಯನ್ನುಂಟು ಮಾಡಲು ಪ್ರಯತ್ನಗಳು ನಡೆದಿವೆ. ಆದರೆ ಆ ಪ್ರಯತ್ನಗಳಿಗೆ ಇನ್ನೂ ಯಶಸ್ಸು ಸಿಕ್ಕಲೊಲ್ಲದಾಗಿದೆ. ಇನ್ನೂ ಹಿಂದುಗಳೂ ಮುಹಮ್ಮದೀಯರೂ ವರ್ಣದ್ವೇಷವನ್ನು ಕಾರುತ್ತಿದ್ದಾರೆ. ಇದೆಲ್ಲವೂ ನಮ್ಮಲ್ಲಿಯ ಕರಿಯ ಬಂಡವಾಳಗಾರರ ಲೀಲೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇಂದು ಹಿಂದುಸ್ತಾನದಲ್ಲಿ ನಾಕಷ್ಟು ವರ್ಗಜಾಗೃತಿಯಾದರೂ, ಸಮತಾವಾದವು ಹಬ್ಬಿಕೊಂಡರೂ, ಈ ವರ್ಣದ್ವೇಷವು ಕೂಡಲೆ ಮಾಯವಾಗುವಂತಿಲ್ಲ. ತಲೆತಲಾಂತರಗಳಿಂದ ಅಂಟಿಕೊಂಡ ಜಾಡ್ಯವದು. ಕಾಲಗತಿಯಿಂದಲೇ ಅದು ನಾಶವಾಗಬೇಕಾಗಿದೆ. ಸಮತಾವಾದವು ಸಂಪೂರ್ಣವಾಗಿ ಹಿಂದುಸ್ತಾನದಲ್ಲಿ ನೆಲೆಗೊಂಡಾಗಲೇ ಹಿಂದು-ಮುಸ್ಲಿಮರಲ್ಲಿ ಸಖ್ಯ ಬೆಳೆಯಲು ಹಾದಿಯಾಗುವುದು. ಅದು ಮೊದಲು ಪಾಕಿಸ್ತಾನಕ್ಕೆ ಅನುಮತಿಯನ್ನಿತ್ತು ಮುಸ್ಲಿಮರ ವಿಶ್ವಾಸವನ್ನು ಸಂಪಾದಿಸಿ, ಎರಡು ರಾಷ್ಟ್ರಗಳಲ್ಲಿಯೂ ವರ್ಗಜಾಗೃತಿಯನ್ನು ಬೆಳೆಯಿಸಿದರೆ ಎರಡೂ ರಾಷ್ಟ್ರಗಳು ಕೂಡಿಕೊಳ್ಳಲು ಹೊತ್ತು ಬೇಕಾಗುವುದಿಲ್ಲ. ಹಾಗೆ ಎರಡೂ ರಾಷ್ಟ್ರಗಳು ಎಂದು ಕೂಡಿಕೊಳ್ಳುವವೋ ಅಂದೇ ಶಕ್ತಿಸಂಪನ್ನವಾದ ಅಖಂಡಭಾರತವು ತನ್ನ ಮೊದಲಿನ ವೈಭವದಿಂದ ಮೆರೆಯಬಹುದಾಗಿದೆ.

ಪಾಕಿಸ್ತಾನದ ಆದರ್ಶವನ್ನು ವಿವರಿಸುತ್ತಾ ಮೊನ್ನೆ ಡಾಕ್ಟರ್ ಎ. ಎಚ್. ಖಾಜಿ ಎಂಬವರು ಡೋಂಗ್ರಿಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದ್ದಾರೆ:

'....Justice would be done to minority communities, in the Pakistan regime. They will have cultured autonomy with full political and economic rights. The Principle of Brotherhood of mankind will be put into practice. There will be a democratic form of Government. The economic life of the country will be managed in the interest of the Society as a whole. In short it will be a Socialist State".

ಶಾಂತಿ-ಸೌಖ್ಯಗಳನ್ನು ಬಯಸುವ ಹಿಂದುಗಳು ಇಂದು ಪಾಕಿಸ್ತಾನಕ್ಕೆ ಸಮ್ಮತಿಸಿ, ಮುಸ್ಲಿಮರ ವಿಶ್ವಾಸವನ್ನು ಸಂಪಾದಿಸಿ, ಅಖಂಡ ಸಮತಾವಾದೀ ಭಾರತವನ್ನು ರಚಿಸುವುದಲ್ಲದೆ, ಸಮಗ್ರ ಜಗತ್ತಿನಲ್ಲಿಯೇ ಸಮತಾವಾದದ ಬಾವುಟವನ್ನು ಮೆರೆಯಿಸಬೇಕಾಗಿದೆ. ಕೇವಲ ಗತವೈಭವವನ್ನು ನೆನೆಯುತ್ತ ಕಾಲ ಕಳೆಯುವುದರಲ್ಲಿ ಏನೂ ಅರ್ಥವಿಲ್ಲ. ನೆರೆಹೊರೆಯ ಧರ್ಮವನ್ನು ಉಪದೇಶಿಸುವುದರಿಂದಾಗಲಿ 'ಸೇವಾರಿ' 'ಕಬೀರದಾಸ'ದಂತಹ ಚಿತ್ರ-ಕವನಗಳಿಂದಾಗಲಿ ಶಾಂತಿ ನೆಲೆಗೊಳ್ಳಲಾರದು. ಜಗತ್ತೇ ಇಂದು ಜೀವನ-ಮರಣದ ಹೋರಾಟದಲ್ಲಿ ಸಿಲುಕಿರುವಾಗ, ಹಿಂದುಗಳು ಕಣ್ಣುಮುಚ್ಚಿ ಕುಳಿತುಕೊಳ್ಳುವುದು ಭೂಷಣವೆನಿಸುವುದಿಲ್ಲ. ರಸ್ಕಿನ್ ಒಂದೆಡೆಗೆ '....for truly the man who does not know when to die, does not know how to live. ಎಂದು ಹೇಳಿದ ಮಾತನ್ನು ಇಂದು ನಾವೆಲ್ಲರೂ ಅರಗಿಸಿಕೊಳ್ಳಬೇಕಾಗಿದೆ. ಜೀವನಕ್ಕೆ ಸ್ನೈಗೂಡಿಸಿಕೊಳ್ಳಬೇಕಾಗಿದೆ. ಯುದ್ಧವು ಕರಾಳಸ್ವರೂಪವನ್ನು ತಳೆದಿರುವಾಗಲೂ ಹಿಂದುಗಳು ಮುಸಲ್ಮಾನರು ಇನ್ನೂ ಜಗಳಕಾಯುತ್ತ ಕುಳ್ಳಿರುವುದೆಂದರೆ ಅವರ ದುರ್ದೈವವಲ್ಲದೆ ಮತ್ತೇನು?

ಜಯಂತಿಯ ಮುಂಬೈ ಶಾಖಾ ಕಚೇರಿ

ಇಲ್ಲಿ 'ಜಯಂತಿ' ಸಂಚಿಕೆಗಳು ಸಿಕ್ಕುವುವಲ್ಲದೆ, ಶ್ರೀಮಾನ್ 'ಆನಂದಕಂದ'ರ ಮತ್ತು ಪ್ರೊ. **ಜಾಗೀರದಾರರ** ಎಲ್ಲ ಪುಸ್ತಕಗಳೂ ಮಾರಾಟಕ್ಕೆ ಸಿಕ್ಕುವುವು. ಮುಂಬಯಿ ಕನ್ನಡಿಗರ ಅನುಕೂಲತೆಗಾಗಿಯೆ ಈ ಏರ್ಪಾಡನ್ನು ಮಾಡಲಾಗಿದೆ.

ಮೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಚರ್ಚಗೇಟ್ ಸ್ಟ್ರೀಟ್, ೨ನೆಯ ಮಾಳಿಗೆ
ಫೋರ್ಟ್—ಮುಂಬಯಿ.

ಕಣ್ಮರೆಯಾದ ಬಂದೂಕು

(ಸಣ್ಣ ಕತೆ)*

★ ★

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

'ಪೋಲೀಸ'ಎಂಬ ಹೆಸರನ್ನು ಕೇಳಿದೊಡನೆಯೆ ಎದೆ ನಡುಗಿಸಿಕೊಳುವವರುಂಟು; ಜುಗುಪ್ಸೆಯಿಂದ ಮುಖ ಮುದುರಿಸಿಕೊಳುವವರುಂಟು. ಏಕೆ? ಅವರು ಮನುಷ್ಯರಲ್ಲವೆ? ಬುಡ್ಡಪ್ಪನಂತಹರು ಪೋಲೀಸರಲ್ಲಿ ಇರುವುದಿಲ್ಲವೆ?

★

"ರಾಮುಜಿ, ಮೂರುಗಂಟೆಗೆ ನಿಮ್ಮ ಪಹಾರ್‍ಯಾ, ಲಕ್ಷ್ಯದಲ್ಲಿರಲಿ! ನಿಮಗೇನು ಹೆಂಡತಿಯಿದ್ದಾಳೆ; ಹೋದಕೂಡಲೆ ಊಟ ಬಂಡೇ ಬಿಡ್ತದೆ ನಿಮ್ಮೆದುರಿಗೆ. ಉಳಿದವರ ಮಾತು ಹಾಗಲ್ಲ; ಅವರಿನ್ನು ಹೋಗಿ ಅಡಿಗೆ ಮಾಡಿಕೊಳ್ಳಬೇಕು. ಎಲ್ಲರೂ ದಣಿದಿದ್ದೀರಿ; ಹೋಗಿರಿ! ನೀವು ಬರುವವರೆಗೆ ನಾನು ಪಹಾರಾ ಮಾಡ್ತೇನೆ. ನೀವು ನಿದ್ದೆ ಮಾಡಿದರೂ ಹುಶಾರಿಯಿಂದಿರಬೇಕು! ಮೊನ್ನೆ ಪೋಲೀಸರ ಬಂದೂಕುಗಳೆ ಕಳವಾದದ್ದನ್ನು ಕೇಳಿದ್ದೀರಿಲ್ಲೊ? ಯಾವ ಮಾಯದಿಂದ ಅವರು ಬಂದಾರು ಹೇಳುವದು ಕಷ್ಟ; ಮೈತುಂಬ ಕಣ್ಣು ಬೇಕು! ಯಾರ ಮೇಲೂ ಏನೂ ತಂದುಕೊಳ್ಳದ ಹಾಗೆ ಒಮ್ಮೆ ಈ ಜವಾಬುದಾರಿಯಿಂದ ಸುಸೂತ್ರ ಪಾರಾಗೋಣ!" ಎಂದು ಹೇಳಿ ಹವಾಲದಾರ ಬುಡ್ಡಪ್ಪ, ನಡುಪಟ್ಟಿಯನ್ನು ಬಿಗಿಮಾಡಿಕೊಂಡು, ಟೊಪ್ಪಿಗೆಯನ್ನು ತುಸು ಮುಂದಕ್ಕೆ ಸರಿಸಿ, ಬಂದೂಕನ್ನು ಎತ್ತಿ ಹೆಗಲ ಮೇಲಿರಿಸಿದ. ಅವನೆದುರಿಗೆ ಸಾಲಾಗಿನಿಂತ ನಾಲ್ಕು ಜನ ಪೋಲೀಸರು ಅವನಿಗೆ ಸಲಾಮುಮಾಡಿ, ಅಲ್ಲಿಂದ ಹೊರಟು ತಮ್ಮ ತಮ್ಮ ಬೀಡಾರಕ್ಕೆ ಬಂದರು.

ನಾಗನಹಾಳು ಸ್ಟೇಶನ್ನು ಸುಟ್ಟು ಸುಮಾರು ಎರಡು ತಿಂಗಳಾಗಿತ್ತು. ಆಮೇಲೆ ತುಸು ದಿನಸಗಳಲ್ಲಿಯೆ ಅಲ್ಲಿಗೆ ಪೋಲೀಸರ ಕಾವಲು ಬಂತು. 'ಫರ್ಸ್ಟ್‌ಕ್ಲಾಸ್ ವೇಟಿಂಗ್ ರೂಮ್' ಎನ್ನಿಸಿಕೊಳ್ಳುವ ಭಾಗದಲ್ಲಿಯೆ ಎರಡು ಕಂಬಕ್ಕೆ ಎರಡು ಟೆಲಿಫೋನಿನ ಪೆಟ್ಟಿಗೆಗಳನ್ನು ತೂಗುಹಾಕಿ, ಹಗಲು ಬಿಸಿಲಿನ ಬೇಗೆಯಲ್ಲಿ, ರಾತ್ರಿ ಅಂಜಿಕೆಯ ಆವರಣದಲ್ಲಿ, ಇಬ್ಬರು ಮಾಸ್ತರರು ತಮ್ಮ ಕೆಲಸ ನಡೆಯಿಸಿದ್ದರು. ಹತ್ತಿರದಲ್ಲಿಯೆ ಪೋಲೀಸರು ತಮಗಾಗಿ ಒಂದು ಡೇರೆ ಹೊಡೆದುಕೊಂಡಿದ್ದರು. ರಾಮುಜಿ ತನ್ನ ಸಂಸಾರ ಕಟ್ಟಿಕೊಂಡು ಬಂದಿದ್ದ. ಅವನ ಸಂಸಾರವೆಂದರೆ ಅವನ ಹೆಂಡತಿಯಷ್ಟೆ, ಬೇರೆ ಯಾರೂ ಇರಲಿಲ್ಲ. ಉಳಿದವರು ತಮ್ಮ ಸಂಸಾರ ತಂದಿರಲಿಲ್ಲ. ಕಲ್ಲೆಣ್ಣೆ ಇಡುವ ಕೋಣೆ ಸುಟ್ಟು ನಾಲ್ಕೂ ಗೋಡೆಗಳು ದಿಗಂಬರ ವೇಷದಲ್ಲಿ ನಿಂತಿದ್ದುವು.

ರಾಮುಜಿಗೆ ಅದು ತನ್ನ ಸಂಸಾರಕ್ಕೆ ಸಾಕಾಗಬಹುದು ಎನಿಸಿತು. ಚಳಿಗಾಲ ಕಳೆದು ಬೇಸಗೆಗೆ ಆಗೇ ಪ್ರಾರಂಭವಾಗಿತ್ತು. ಮಳೆಯ ಅಂಜಿಕೆಯಿರಲಿಲ್ಲ. ರಾಮುಜಿ ಮತ್ತು ಲಕ್ಕಿ ಅಲ್ಲಿ ತಮ್ಮ ಪ್ರಪಂಚ ಹೂಡಿದರು.

ರಾಮುಜಿ ತನ್ನ ಕೋಣೆಗೆ ಬಂದಾಗ, ರಾತ್ರಿ ೯ ಗಂಟೆಯಾಗುತ್ತ ಬಂದಿತ್ತು. ಎರಡು ಬಿದಿರಗಳುಗಳನ್ನು ಅಡ್ಡವಾಗಿ ಬಾಗಿಲಿಗೆ ನಿಲ್ಲಿಸಿದ್ದಿತ್ತು. ಲಕ್ಕಿ ಆದುವರೆಗೆ ಮನೆಗೆ ಬಂದಿರಲೇ ಇಲ್ಲ. ರಾಮುಜಿಗೆ ಒಮ್ಮೆಲೆ ಸಿಟ್ಟು ತಲೆಗೇರಿತು; ಜಾಡಿಸಿ ಬಿದಿರಗಳುಗಳನ್ನು ಒದ್ದುಬಿಟ್ಟ; ಅವು ಸಪ್ಪಳಮಾಡುತ್ತ ಉರುಳಿಬಿದ್ದುವು. ಒಳಗೆ ಹಣೆಯಿಕ್ಕಿ ನೋಡಿ 'ಲಕ್ಕಿ' ಎಂದು ಕೂಗಿದ. ಅವಳು ಇಲ್ಲವೆಂಬುದು ಕಾಣುತ್ತಿತ್ತು; ಆದರೂ ಕೂಗಿದ. ನಡುಪಟ್ಟಿಯನ್ನು ಬಿಚ್ಚಿ ಹೆಗಲಮೇಲೆ ತೂಗುಬಿಟ್ಟ. ಟೊಪ್ಪಿಗೆ ತೆಗೆದು ಪೆಟ್ಟಿಗೆಯ ಮೇಲೆ ಎಸೆದ. ಕಾಲಲ್ಲಿ ಬಿದ್ದ ಕಟ್ಟಿಗೆಯನ್ನು ಕೈಯಲ್ಲಿ ತಕ್ಕೊಂಡು ಹೊರಬಿದ್ದ.

ರಾಮುಜಿಗೆ ಒಮ್ಮೆಲೆ ಲಕ್ಕಿಯ ಮೇಲೆ ಇಷ್ಟೊಂದು ಕೋಪ ಬರಲು ಕಾರಣವಿತ್ತು. ಅಂದು ಅವನ ದೊಡ್ಡ ಸಾಹೇಬರು ತಪಾಸಿಗೆ ಬಂದಿದ್ದರು; ಇಡಿಯ ದಿನ ರಾಮುಜಿಯ ಹೊಟ್ಟೆಯಲ್ಲಿ ಬೀಡಿಯ ಹೊಗೆಯ ಹೊರತು ಏನೂ ಹೋಗಿರಲಿಲ್ಲ. ಆದಿನ ಅವನ ಮೈಮೇಲೆ ಬಿದ್ದ ಕೆಲಸ ಅಷ್ಟಿಷ್ಟಲ್ಲ. 'ಅವನನ್ನು ಹಿಡಿದು ತಾ, ಇವನನ್ನು ಹೆಡಮುರಿಕೆ ಬಿಗಿ, ಇಂಥವರ ಮನೆಗೆ ಜಪ್ತಿ ಒಯ್ಯಿ, ಅಂಥವರಿಗೆ ಕೋಳಹಾಕಿ ಸಾಗಿಸು!' ಹೀಗೆ ಒಂದಲ್ಲ, ಎರಡಲ್ಲ, ನೂರೆಂಟು ಸಂಕಟಗಳು! ಮೊದಲೆ ಕಾಡಿನಲ್ಲಿಯ ಸ್ಟೇಶನ್ನು. ಅಷ್ಟೇ ಕಾಡುಹಳ್ಳಿಗಳು. ಯಾವ ಊರಲ್ಲಿಯೂ ನೀರಿನ ಹೊರತು ಏನೂ ದೊರೆಯುತ್ತಿರಲಿಲ್ಲ. ಆದರಲ್ಲಿಯೂ ಪೋಲೀಸರಿಗೆ ದೊರೆಯುವುದು ಪೂರಾ ಕಷ್ಟಾಗಿತ್ತು.

ತಾನು ಮನೆಗೆ ಹೋದ ಕೂಡಲೆ, ಲಕ್ಕಿ ತನ್ನ ಕಾಲಿಗೆ ಬಿಸಿನೀರು ಕೊಟ್ಟು ಕೈಯಲ್ಲಿ ಬಿಸಿ ರೊಟ್ಟಿ ಇಡುವಳೆಂದು ಅವನು ಹಂಬಲಿಸಿ ಬಂದಿದ್ದ. ಆದರೆ ಅವಳ ದುರ್ದೈವಕ್ಕೆ—ಆದಿನ ಅವಳಿಗೆ—ಪೋರ್ಟರನ ಮನೆಯಲ್ಲಿ ಹರಟೆಗೆ ಕೂಡುವ ದುರ್ಬುದ್ಧಿಯಾಯಿತು. ಮಧ್ಯಾಹ್ನ ಅಡಿಗೆಮಾಡಿ, ರಾಮುಜಿಗಾಗಿ ದಾರಿ

---

* ಇದೊಂದು ಕೇವಲ ಕಲ್ಪಿತಕಥೆ. ಕಾಲವನ್ನು ಮಾತ್ರ ೧೯೪೩ನೆಯ ಫೆಬ್ರುವರಿಯನ್ನಾರಿಸಲಾಗಿದೆ. —ಲೇಖಕ.

ಕಾಯ್ದಳು; ಹೊತ್ತು ತಿರುಗಿದರೂ ಅವನು ಬರಲಿಲ್ಲವೆಂದು ತಾನೇ ಉಂಡುಬಿಟ್ಟಳು. ಇಡಿದಿನ ಅವನ ಮೋರೆಯೆ ಅವಳಿಗೆ ಕಂಡಿರಲಿಲ್ಲ. ದೊಡ್ಡ ಸಾಹೇಬರು ಬೇರೆ ಬಂದಿದ್ದರು. ರಾಮುಜಿ ಎಲ್ಲಿದ್ದನೊ, ಏನು ಮಾಡುತ್ತಿದ್ದನೊ! ಅವಳು ತಾನಾಗಿ ಹೋಗಿ ಅವನನ್ನು ಕರೆಯುವ ಹಾಗಿರಲಿಲ್ಲ. 'ಬಂದಾಗ ಬರಲಿ, ಅವನು ಬಂದು ಹೇಳಿದ ಮೇಲೆಯೆ ಅಡಿಗೆ ಮಾಡಿದರಾಯಿತು, ಅಡಿಗೆ ಮಾಡಿಟ್ಟರೆ, ಅವನು ಬಾರದೆ ಹೋದರೆ ವ್ಯರ್ಥವಾಗುವುದಲ್ಲಾ' ಎಂದು ಅವಳು ಯೋಚಿಸಿದಳು. ಅವಳಿಗೆ ತನಗೆ ಸಾಲುವಷ್ಟು ಮಧ್ಯಾಹ್ನದ ಅಡಿಗೆ ಉಳಿದಿತ್ತು. ಪೋರ್ಟರನ ಹೆಂಡತಿಯೊಡನೆ ಮಾತಿಗೆ ಕುಳಿತವಳು ಕುಳಿತೇ ಬಿಟ್ಟಳು. ಆವಳ ಮಗುವನ್ನು ಎತ್ತಿ ಎತ್ತಿ ಆಡಿಸುವ ಹುಚ್ಚೊಂದು ಇವಳಿಗೆ. ಅವಳೂ ಚೊಚ್ಚಲು ಹಡೆದಿದ್ದಳು; ತನ್ನ ತವರುಮನೆಯವರು ಕೊಟ್ಟ ಕೂಸಿನ ಅರಿವೆ, ಬೆಳ್ಳಿಯ ಕಾಲ್ಗಡಗ—ಉಡುದಾರ ಲಕ್ಕಿಗೆ ತೋರಿಸುತ್ತಿದ್ದಳು. ಲಕ್ಕಿ ಕೂಸಿನ ಮೈಯಲ್ಲಿ ಅವುಗಳನ್ನು ಹಾಕಿ, ತೊಡಿಸಿ, ನೋಡುತ್ತಿದ್ದಳು.

ಆ ಹೊತ್ತಿಗೆ ರಾಮುಜಿ ಅಂಗಳದಲ್ಲಿ ಬಂದು ನಿಂತು ಒಮ್ಮೆಲೆ ಕೂಗುಹಾಕಿದ: "ಲಕ್ಕಿ, ಹೊರಗೆ ಬಾ!" ಮೈಮರೆತು ಕುಳಿತಾಗ ಏಕಕಾಲಕ್ಕೆ ಸಿಡಿಲಿನ ಸಪ್ಪಳವಾದರೆ ಹೇಗೆ ಎದೆ ಝಲ್ಲೆನ್ನಬೇಕೊ ಹಾಗಾಯಿತು ಅವಳಿಗೆ. ಕೂಸನ್ನು ಕೆಳಗಿರಿಸಿದಳು, ಎದ್ದು ಹೊರಗೆ ಬಂದಳು. ರಾಮುಜಿ ಕೈಯಲ್ಲಿಯ ಬಿದಿರುಗಳುವನ್ನು—ಕಾಣದ ಹಾಗೆ—ಬೆನ್ನಹಿಂದೆ ಹಿಡಿದಿದ್ದ. ತೊಗಲಿನ ನಡುಪಟ್ಟಿ ಹೆಗಲ ಮೇಲೆ ತೂಗಾಡುತ್ತಿತ್ತು. ಲಕ್ಕಿ ಹತ್ತಿರ ಬಂದಳು.

"ಕತ್ತೆ, ಭೋ....ಹಲ್‌ಕಟ್ ಛಾಂ...." ಎಂದವನೇ ಬಿದಿರಿನಿಂದ ಏಟೊಂದನ್ನು ಬಿಗಿದ. "ಯಪ್ಪಾ, ಸತ್ತೆನೊ...." ಎಂದು ಚೀರುತ್ತ ಲಕ್ಕಿ ನೆಲಕ್ಕೆ ಬಿದ್ದಳು. ರಾಮುಜಿ ಅವಳನ್ನು ದರದರನೆ ಎಳೆಯುತ್ತ, ಚಪ್ಪಲಿಯ ಕಾಲಿನಿಂದ ತುಳಿಯುತ್ತ, ಬಾಯಿಂದ ಆಡಬಾರದ ಅವಾಚ್ಯ ಮಾತುಗಳನ್ನಾಡುತ್ತ ಕೋಣೆಗೆ ಎಳೆದು ತಂದ. ಬಿದಿರ ಗಳು ಮುರಿದು ಹೋಗಿತ್ತು; ತೊಗಲಿನ ಪಟ್ಟಿಯು ಅವನ ಕೈಯಲ್ಲಿ ಉಳಿದಿತ್ತು. ಅದರ ಹಿತ್ತಾಳೆಯ ಬಿಲ್ಲೆಯ ನಾಲ್ಕಾರು ಮುದ್ರೆಗಳು ಅವಳ ಮೈಮೇಲೆ ಮೂಡಿದ್ದುವು. ಅವಳು ನೆಲದ ಮೇಲೆ ಬಿದ್ದು, ನೋವಿನ ಬಾಧೆ ತಾಳದೆ ಒಳವಳಿಸಿ ಕಿರಚುತ್ತಿದ್ದಳು. ಅವಳ ಆರ್ತಧ್ವನಿ ಕೇಳಿ ಓಡಿದ ಪೋಲೀಸರು, ರಾತ್ರಿ ಡ್ಯೂಟಿಯ ಸಣ್ಣ ಮಾಸ್ತರರು, ಪೋರ್ಟರರು ಅಲ್ಲಿ ನೆರೆದರು. ಹವಾಲದಾರ ನಿಂತಲ್ಲಿಂದಲೆ ರಾಮುಜಿಯ ಹೆಸರಿನಿಂದ ಅಬ್ಬರಿಸಿದ. ನೆರೆದವರು ರಾಮುಜಿಯನ್ನು ಎಳೆದು ಹೊರಗೆ ತಂದು, ಒಂದು ಕಲ್ಲುಗುಂಪೆಯ ಮೇಲೆ ಅವನನ್ನು ಕುಕ್ಕರಿಸಿದರು. ಲಕ್ಕಿಗೆ ಬಿದ್ದ ಏಟಿನ ಕಲ್ಪನೆ ಆ ಕತ್ತಲಲ್ಲಿ ಯಾರಿಗೂ ಆಗಲಿಲ್ಲ. ರಾಮುಜಿಗೆ ಛೀಹಾಕಿ ಸಮಾಧಾನ ಹೇಳಿ 'ಮತ್ತೊಮ್ಮೆ ಅವಳ ಮೇಲೆ ಕೈ ಎತ್ತಿದರೆ ನಿನ್ನನ್ನೇ ಥಳಿಸುವೆವು' ಎಂದು ಬೆದರಿಸಿ, ಅವನ ಜತೆಯ ಪೋಲೀಸರು ಹೊರಟುಹೋದರು. 'ಊಟಕ್ಕೆ ಬಾ!' ಎಂದು ಕರೆದರೂ ಅವನು ಹೋಗಲಿಲ್ಲ.

ಸಣ್ಣ ಮಾಸ್ತರರು ಆಫೀಸಿನ ಮೆಟ್ಟಲನ್ನು ಹತ್ತುವಾಗ ಬುದ್ದಪ್ಪನಿಗೆ ಹೇಳಿದರು :—"ಅಲ್ರೀ, ಹವಾಲದಾರ ಸಾಹೇಬರೆ, ಅವಳು ಅಡಿಗೆ ಮಾಡಲಿಲ್ಲವೆಂದು ಹೆಣಬೀಳ ಹೊಡೆಯುವುದೇ ? ತೀರ ತಲೆತಿರುಕ ಕಾಣ್ತಾನೆ!"

"ಅವನಿಗೆ ಹುಣ್ಣಿವಿಗೊಮ್ಮೆ, ಅಮಾವಾಸ್ಯೆಗೊಮ್ಮೆ ಸನ್ನಿ ಸೇರ್ತದೆ ಮೈಯಲ್ಲಿ!"

"ಆದರೆ....ಮಾತಿಗೆ ಕುಳಿತನಂದ್ರೆ ಎಷ್ಟು ಕಥೆ ಹೇಳ್ತಾನೆ, ಎಷ್ಟು ನಗಿಸ್ತಾನೆ! ಹರಿದಾಸರು ಅವನ ಮುಂದೆ ಚಿಕ್ಕಿಸಿದರು. ಆದರೆ ಹೇಣ್ತಿನ್ನ ಹೀಗೆ ಬಡಿಯೋದನ್ನು ನೋಡಿದರೆ, ಅವನೇನೂ ಮನುಷ್ಯನಲ್ಲ ರಾಕ್ಷಸ—ಅನಿಸುತ್ತದೆ!"

"ಏನು ಹೇಳೋದು, ಆ ಖೋಡಿ ಹೆಣ್ತಿನೂ ಹಾಗೇ! ಮಾತುಮಾತಿಗೂ ಎಡವಟ್ಟು! ಈಗ ನಾಲ್ಕು ಸಾರೆ ಓಡಿಹೋಗಿ ನಾಲ್ಕು ಸಾರೆ ತಿರುಗಿ ಬಂದಾಳೆ ಆಕೆ!"

"ಅಲ್ರೀ, ಇಂವಗ ಆಕಿ ಹೇಣ್ತೀ ಅಂಬೋದಾದರೂ ನಿಜವೇನು? ಹೇಣ್ತಿ ಅಲ್ಲ, ಹಾಂಗಃ ಬಂದು ಕೂಡಿದಾಕೀ....ಅಂತ ನಿಮ್ಮೊಬ್ಬ ಪೋಲೀಸನೇ ಅಂತಿದ್ದ!"

"ಮೊದಲಿಗೆ ಅಂವ ಒಬ್ಬ ಗೊಂದಲಿಗ, ಅದು ಒಂದು ಜೋಗತಿ! ಗಂಡ-ಹೆಂಡತಿ ಹಾಗೆ ಇರ್‍ತಾರೆ. ಮದುವೆ ಆಗಿದ್ದರೂ ಆಗಿರಬಹುದು! ನಮಗೇನು ಮಾಡೋದು? ಅಂವ ತನ್ನ ಡ್ಯೂಟಿ ಒಂದು ಸರಿಯಾಗಿ ಮಾಡಿದರಾಯ್ತು!"

"ಅದು ಸರಿ, ಯಾರಿದ್ದರೂ ಹೀಗೆ ಹೊಡೀಬಾರದು!"

"ತಿಳಿದವರದೊಂದು ರೀತಿ, ಹುಂಬರದೊಂದು ರೀತಿ! ಏನಾದರೂ ಅಂವ ಬವಳ ಸೊಕ್ಕಿಗೆ ಬಂದಾನೆ!"

ಹವಾಲದಾರ ತನ್ನ ಪಹರೆ ನಡೆಯಿಸಿದ; ಮಾಸ್ತರರು ತಮ್ಮ ಕೆಲಸದಲ್ಲಿ ತೊಡಗಿದರು.

ಕೆಲಹೊತ್ತು ರಾಮುಜಿ ಕಲ್ಲುಗುಂಪೆಯಮೇಲೆ ಹಾಗೆಯೆ ಕುಳಿತಿದ್ದ. ಆಗಾಗ ಹೆಂಡತಿ ನರಳುವುದು ಕೇಳಬರುತ್ತಿತ್ತು. ಅವನಿಗೆ ಮೊದಲೆ ತುಂಬ ದಣಿವಾಗಿತ್ತು. ಮೇಲೆ ಹೊಟ್ಟೆಯಲ್ಲಿ ಅನ್ನವಿಲ್ಲದ್ದೊಂದು, ಹೆಂಡತಿಯನ್ನು ಬಡಿದದ್ದೊಂದು! ಅವನಿಂದ ಹೆಚ್ಚು ಕಾಲ ಅಲ್ಲಿ ಕುಳಿತುಕೊಳ್ಳಲಿಕ್ಕಾಗಲಿಲ್ಲ. ಕೋಣೆಗೆ ಬಂದ, ದೀಪ ಅಂಟಿಸಿದ, ಹಾಸಿಗೆಯ ಸುರುಳಿಯನ್ನು ಕಾಲಿಂದ ಒದ್ದು ಉರುಳಿಸಿದ. ಒಂದು ಸಲ ಒಲೆಯ ಕಡೆಗೆ ನೋಡಿದ; ಅದರ ಮೇಲೆ ಏನೋ ಮುಚ್ಚಿಟ್ಟಹಾಗಿತ್ತು. ಅದರ ಹತ್ತಿರ ಹೋಗಿ ಮುಚ್ಚಳವನ್ನು ಕೈಯಿಂದ ಬಡಿದು ಹಾರಿಸಿದ. ಅದು ಪಾತ್ರೆಗೂ ಬಡಿದು, ಅನ್ನವೆಲ್ಲ ಸೂರೆಯಾಯಿತು. ಎದ್ದ, ಒಂದು ತಂಬಿಗೆ ನೀರು ಕುಡಿದ, ಹಾಸಿಗೆಯ ಮೇಲೆ ಬಂದು ಕುಳಿತು ಹೆಂಡತಿಯನ್ನು ನೋಡಿದ, ದೀಪಕೆಗೆದು ಮೈಯನ್ನು ನೆಲಕ್ಕೆ ನೀಡಿದ.

ಲಕ್ಕಿ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ನರಳುತ್ತ ಬಿದ್ದಿದ್ದಳು; ನಿದ್ದೆ ಇರಲಾರದು. ಅವಳು ಆಗಾಗ 'ಅಯ್ಯೊ.... ಅಯ್ಯಯ್ಯಪ್ಪಾ.... ಸಾಯ್ತೀನ್ರೋ....' ಎಂದು ಹಲಬುತ್ತಿದ್ದಳು. ಟೆಲಿಫೋನಿನ ಗಂಟೆ, ಮಾಸ್ತರರ ಮಾತು, 'ಗಾಡಿ ಔಟ್' ಎಂಬ ಕೂಗು, ಜಿಟ್ಟೆಗಳ 'ಜಿರ್‌ರ್‌ರ್‌ರ್'.... ಎಂಬ ಶಬ್ದ ಆಗಾಗ ಕಿವಿಯ ಮೇಲೆ ಬೀಳುತ್ತಿದ್ದುವು. ಜನರೆಲ್ಲ ಮಲಗಿಬಿಟ್ಟಿದ್ದರು. ರಾಮುಜಿಗೆ ನಿದ್ದೆ ಬರಲಿಲ್ಲ. ಹಾಸಿಗೆಯ ಮೇಲೆ ಹೊರಳಾಡಿದ. ತುಸು ಹೊತ್ತು ಎದ್ದು ಕುಳಿತ, ಮತ್ತೆ ಅಡ್ಡಾದ. ಏನಾದರೂ ನಿದ್ದೆ ಬಾರದಂತಾಯಿತು. ಎರಡು ಗಂಟೆಯ ಸುಮಾರಿಗೆ ಒಂದು ಗಾಡಿ ಬಂದು ಹೋಯಿತು. ಆಗಲೂ ಅವನಿಗೆ ಎಚ್ಚರು. ಲಕ್ಕಿ ಆ ಹೊತ್ತಿಗೆ ನರಳುವುದನ್ನು ಕಡಿಮೆಮಾಡಿದ್ದಳು. ಬಹುಶಃ ಅವಳಿಗೆ ಜಂಪು ಹತ್ತಿರಬೇಕು. ರಾಮುಜಿ ಎದ್ದ, ಜಮಖಾನೆಯನ್ನು ತೆಗೆದು ಅವಳಮೇಲೆ ಹೊಚ್ಚಿದ, ತನ್ನ ಟೋಪಿ ಮತ್ತು ನಡುಪಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು, ಮೆಲ್ಲಗೆ ಹೆಜ್ಜೆಯಿಕ್ಕುತ್ತ ಹವಾಲದಾರನ ಎದುರು ಬಂದು ನಿಂತ. ರಾಮುಜಿ ಹೀಗೆ ಹೊತ್ತಿಗೆ ಮೊದಲೇ ಬಂದು ನಿಂತದ್ದನ್ನು ನೋಡಿ ಹವಾಲದಾರನಿಗೆ ತುಸು ಆಶ್ಚರ್ಯವಾಯಿತು.

"ಬಡಿದಾಟ ಮುಗೀತೇನು? ಹೆಂಡತಿಯ ಜೀವ ಆದೆಯೋ ಹೋಗಿದೆಯೊ? ಮನುಷ್ಯರಲ್ಲ ನೀವು, ದನಕ್ಕೂ ಕಡೆ! ಏನು ಇಷ್ಟು ಬೇಗ ಬಂದಿರಿ?"

"ನಾನು ಪಹಾರಾ ಮಾಡ್ತೀನಿ ಮಾಸ್ತರ್; ನನಗೆ ನಿದ್ದೆ ಬರವೊಲ್ಲದು!"

"ಸರಿ, ಆಗಲಿ ಹಾಗಾದರೆ! ನಾನು ಬದಲು ಕಳಿಸುವವರೆಗೆ ಪಹಾರಾ ಮಾಡಬೇಕು! ನಾಳೆ ರಾತ್ರಿಯವರೆಗೆ ನಿಮ್ಮನ್ನು ಹೀಗೆಯೆ ಕೊಳೆಹಾಕ್ತೇನೆ; ಅಂದರಾದರೂ ನಿಮಗೆ ಬುದ್ಧಿ ಬರಬಹುದು! ಹೆಂಡತಿಯ ಮೇಲೆ ಶೌರ್ಯ ತೋರಿಸೊ ಗಂಡಸರು ನೀವು—ಅದರಲ್ಲಿ ಸ್ಪೆಶಲ್ ಪೋಲೀಸ್! ಗುನ್ಹೆಮಾಡಿದ ಒಬ್ಬನನ್ನಾದರೂ ಪತ್ತೆಹಚ್ಚಿ ನಿಮ್ಮ ಶೌರ್ಯ ತೋರಿಸಿರಿ! ಅಚ್ಛಾ, ನಿಮ್ಮ ಬಂದೂಕು ತೊಗೊಂಡು ಬರ್‍ರಿ!"

ರಾಮುಜಿ ಹೋಗಿ ಡೇರೆಯೊಳಗಿಂದ ತನ್ನ ಬಂದೂಕನ್ನು ತಂದ, ಡ್ರೆಸ್ಸು ಸರಿಮಾಡಿಕೊಂಡ. ಹವಾಲದಾರನಿಗೆ ಸಲಾಮು ಕೊಟ್ಟು ಡ್ಯೂಟಿಗೆ ನಿಂತ.

"ತಲೆ ಶಾಂತವಾಗಿದೆಯೊ ಇಲ್ಲೊ? ಮನೆಯಲ್ಲಿ ನಿದ್ದೆ ಬರಲಿಲ್ಲೆಂದು ಇಲ್ಲಿ ನಿದ್ದೆ ಹೋಗಬ್ಯಾಡ್ರಿ!"

"ಇಲ್ಲ ಮಾಸ್ತರ್!"

ಹವಾಲದಾರ ತನ್ನ ಡೇರೆಗೆ ಹೋದ. ಸ್ಟೇಶನ್‌ಮಾಸ್ತರರು ಇದನ್ನೆಲ್ಲ ನೋಡುತ್ತ ತಮ್ಮ ಕೆಲಸ ನಡೆಯಿಸಿದ್ದರು. ಆ ಹೊತ್ತಿಗೆ ಗಾಡಿಗಳಾವುವೂ ಇರಲಿಲ್ಲ. ಮಧ್ಯೆ ಎರಡುಗಂಟೆ ನಿದ್ದೆಗೆ ಸ್ವಲ್ಪ ಅವಕಾಶವಿತ್ತು. ತಮ್ಮ ರಜಿಸ್ಟರುಗಳನ್ನು ತುಂಬುವ ಕೆಲಸ ಮುಗಿಸಿದ ಮೇಲೆ ರಾಮುಜಿಯನ್ನು ಮಾತನಾಡಿಸಬೇಕೆಂದು ಮಾಸ್ತರರ ಮನಸ್ಸಿನಲ್ಲಿ ಬಂತು. ದಿನಾಲು ಹಾಗೆ ಅವರು ಅವನೊಡನೆ ತಾಸುಗಟ್ಟಲೆ ಹರಟೆಹೊಡೆಯುತ್ತಿದ್ದರು. ಇಂದು ಅವನನ್ನು ಮಾತನಾಡಿಸಲು ಅವರಿಗೆ ಅಂಜಿಕೆಯೆನಿಸಿತು. ಅವನು ಅಷ್ಟು ಸಿಟ್ಟಿಗೆದ್ದುದನ್ನು ಅವರು ಎಂದೂ ನೋಡಿರಲಿಲ್ಲ. 'ಹೋಗಲಿ, ಪೀಡಾ ಸಂಗತಿ!' ಎಂದು ಯೋಚಿಸಿ, ಆ ದಿನ ಪೋಲಿಸ್ ಸಾಹೇಬರು ಬಿಟ್ಟುಹೋದ 'ಟಾಯಿಮ್ಸ್' ಪತ್ರಿಕೆಯನ್ನು ತಕ್ಕೊಂಡು, ಹಾಸಿಗೆಯ ಮೇಲೊರಗಿ, ಆ ಮಬ್ಬುಬೆಳಕಿನಲ್ಲಿಯೇ ತಿಳಿದಷ್ಟು ಓದತೊಡಗಿದರು. ರಾಮುಜಿಗೆ ಇಂದು ಮಾಸ್ತರರನ್ನು ಮಾತನಾಡಿಸುವ ಮನಸ್ಸಿರಲಿಲ್ಲ; ಬಂದೂಕನ್ನು ಹೆಗಲಮೇಲೆ ಹೊತ್ತುಕೊಂಡು ಅವನು, ಆಫೀಸಿನ ಸುತ್ತು ಭಾರವಾದ ಹೆಜ್ಜೆಯಿಕ್ಕುತ್ತ ಫೇರಿ ಹಾಕತೊಡಗಿದ.

ಮಾಸ್ತರರು ಬಹಳವಾದರೆ ಹತ್ತು ನಿಮಿಷ ಓದಿರಬಹುದು; ಅವರ ಕಣ್ಣಲ್ಲಿ ನಿದ್ದೆ ತೂಗಾಡಹತ್ತಿತ್ತು. ಹಾಗೆಯೆ ಅವರ ಕಣ್ಣು ತಾವಾಗಿ ಮುಚ್ಚಿದುವು. ಕೈಯಲ್ಲಿಯ 'ಟಾಯಿಮ್ಸ್' ಕಾಲಕೆಳಗೆ ಬಿದ್ದಿತು.

ಈಗ ಕತ್ತಲು ಹರಿಯುವ ಹೊತ್ತಿನ ತಂಪುಗಾಳಿ ಬೀಸತೊಡಗಿತು. ರಾಮುಜಿಗೆ ಫೇರಿ ಹಾಕುವ ತ್ರಾಣವಿರಲಿಲ್ಲ. ಕಾಲು

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟನೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
●
ಸುವರ್ಣ-
ಮಾಲಿನೀ ವಸಂತ
●
ಮಕರಧ್ವಜಗುಟಿ
●
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ!

ಕರ್ನಾಟಕ ಕೇಂದ್ರ ಮರಾಠಾಗಲ್ಲಿ, ಹುಬ್ಬಳ್ಳಿ.

ಒಂದೇ ಸವನೆ ಹರಿಯುತ್ತಿದ್ದುವು. ಕೀಲು-ಕೀಲುಗಳೆಲ್ಲ ಕಿತ್ತು-ಬೀಳುವ ಹಾಗೆ ನೋಯುತ್ತಲಿದ್ದುವು. ಅರ್ಧ ಸುಟ್ಟ ಬೆಂಚೊಂದನ್ನು ಗೋಡೆಗೆ ಆನಿಸಿ ನಿಲ್ಲಿಸಲಾಗಿತ್ತು. ರಾಮುಜಿ ಅಲ್ಲಿ ಬಂದು ಕುಳಿತ; ಬಂದೂಕನ್ನು ನೆಲದ ಮೇಲೆ ನಿಲ್ಲಿಸಿ, ಎರಡೂ ಕೈಗಳನ್ನು ಅದರ ಬಾಯ ಮೇಲಿಟ್ಟು, ಅದರ ಆಸರಕ್ಕೆ ಹಣೆಹಚ್ಚಿದ. ತಲೆ ಭಾರವಾಗಿ, ಎಡ-ಬಲ ಹಣೆಯ ನುಲುಕುಗಳು ಝುಣ್ ಝುಣ್ ಎಂದು ಪಾರಿಹಾರಿ ಜುಟ್ಟುತ್ತಿದ್ದುವು. ಕೈಯ ಬೆರಳುಗಳಿಗೆ ಜೋಮು ಹಿಡಿಯಿತು. ಹಣೆಯೆತ್ತಿ, ಬೆಂಚಿನ ಬೆನ್ನು-ಹಲಗೆಗೆ ಆತುಕೊಂಡು ಕೆಲಹೊತ್ತು ಕುಳಿತ. ಆಗ ಅವನ ಹೊರತು ಒಂದು ನರಪ್ರಾಣಿಯೂ ಅಲ್ಲಿ ಎಚ್ಚರವಿರಲಿಲ್ಲವೇನೋ! ಆಫೀಸಿನಲ್ಲಿ ದೀಪವೊಂದು ಉರಿಯುತ್ತಿತ್ತು. ಟೆಲಿಫೋನಿನ ಘರ್-ಘರ್ ಶಬ್ದವು ಅವ್ಯಾಹತವಾಗಿ ನಡೆದಿತ್ತು. ರಾಮುಜಿಗೆ ಬಹಳ ಹೊತ್ತು ಕಣ್ತೆರೆದು ಆ ಸ್ಥಿತಿಯಲ್ಲಿ ಕುಳಿತಿರುವುದಾಗಲಿಲ್ಲ. ಕತ್ತನ್ನು ಬೆನ್ನುಹಲಗೆಯ ಮೇಲೆ ಚೆಲ್ಲಿಕೊಟ್ಟು, ಬಂದೂಕನ್ನು ಬೆಂಚಿಗೆ ಆನಿಸಿ ಹಿಡಿದು, ಕುಳಿತ ಸ್ಥಿತಿಯಲ್ಲಿಯೆ ಒರಗಿಕೊಂಡ. ಆರೇಳು ನಿಮಿಷಗಳಲ್ಲಿಯೆ ಅವನನ್ನು ನಿದ್ದೆ ಪೂರ್ಣವಾಗಿ ಆವಿತುಕೊಂಡಿತು. ಮರುಕ್ಷಣದಲ್ಲಿಯೆ ಬಂದೂಕಿನ ಮೇಲಿದ್ದ ಅವನ ಕೈ ಜಾರಿ, ಅದು ಹಿಂದೆ ಸರಿಯಿತು.

ಸುಮಾರು ಅರ್ಧಗಂಟೆಯನ್ನು ಅವನು ಹೀಗೆ ನಿದ್ದೆಯಲ್ಲಿ ಕಳೆದಿರಬಹುದು. ಹಲಗೆಯ ಕಠಿನವಾದ ಭಾಗ ಒತ್ತಿದ ಮೂಲಕ, ಅವನ ಗೋಣು ನೋಯತೊಡಗಿತು. ಆ ಹೊತ್ತಿಗೆ ಟೆಲಿಫೋನಿನ ಗಂಟೆಯ ಕಿರ್ರೆಂಬ ಸಪ್ಪಳು ಅವನನ್ನು ಎಚ್ಚರಿಸಿತು. ಕಣ್ತೆರೆದು ನೋಡಿದ; ಮಾಸ್ತರರೂ ಏಳುವುದರಲ್ಲಿದ್ದರು. ಬಂದೂಕಿನ ಕಡೆಗೆ ಅವನ ಕೈ ಹೋಯಿತು. ಆದರೆ....ಆದರೆ.... ಅಲ್ಲೇನಿದೆ? ಬಂದೂಕು ಇರಲಿಲ್ಲ! ಅದು ಯಾವಾಗಲೋ ಮಾಯವಾಗಿತ್ತು! ಕಣ್ಣಲ್ಲಿ ಮಿಂಚು ಹೊಡೆದ ಹಾಗಾಗಿ ಗಡಬಡಿಸಿ, ಚಟ್ಟನೆ ಎದ್ದವನೇ ಅತ್ತಿತ್ತ ಕೈ ಸವರಾಡಿಸತೊಡಗಿದ. ಆದರೆ ಅವನ ಕೈಗೆ ಬಂದೂಕು ಹತ್ತಲಿಲ್ಲ; ಬೆಂಚಿನ ಸುಟ್ಟ-ಭಾಗದ ಕಪ್ಪು ಮಾತ್ರ ಹತ್ತಿತು!

ಮಾಸ್ತರರು ಇನ್ನೂ ಟೆಲಿಫೋನಿನ ಬಾಯಲ್ಲಿ ತಮ್ಮ ಬಾಯನ್ನು ಇಟ್ಟು ಮಾತು ನಡೆಯಿಸಿದ್ದರು. ರಾಮುಜಿ ಒಳಗೆ ಬಂದದ್ದನ್ನು ಅವರು ನೋಡಲಿಲ್ಲ.

"ಮಾಸ್ತರ್, ನನ್ನ ಬಂದೂಕು ಹೋಗಿದೆ!" ಮುಂದೆ ರಾಮುಜಿಯಿಂದ ಮಾತುಗಳೆ ಹೊರಡಲಿಲ್ಲ. ಈ ಮಾತು ಕಿವಿಗೆ ಬಿದ್ದ ಕೂಡಲೆ, ಮಾಸ್ತರರು ಕುಸಿದು ಝುರ್ರನೆ ನೆಲಕ್ಕೇ ಇಳಿದರು. ಅವರಿಗೆ ನಿಲ್ಲುವುದಕ್ಕಾಗಲಿಲ್ಲ. ಕಂಬದ ಆಸರ ಹಿಡಿದು ಟೇಬಲ್ ಹತ್ತಿರ ಬಂದು, ದೀಪ ಏರಿಸಿ, ಅದನ್ನು ಕೈಯಲ್ಲಿ ಹಿಡಿದು— "ಇದೇನೋ ನಮ್ಮ ಪ್ರಾಣಕ್ಕೆ ಬಂದಿದೆ! ಉಳಿದ ಪೋಲೀಸರನ್ನಾದರೂ ಕರೀರಿ; ಸುಮ್ಮನೆ ನಿಂತರೆ ಹ್ಯಾಗೆ? ಒಮ್ಮೆಲೆ ಆ ಜನರು ಮೈಮೇಲೆ ಬಂದರೆ ನಮ್ಮ ಗತಿಯೇನು? ಏ ಗೂಡು, ಏ ವಲ್ಲೀ, ಏಳ್ರಿ, ಏಳ್ರಿ!" ಎಂದು ಕೂಗತೊಡಗಿದರು. ರಾಮುಜಿ ಸೀಟಿ ಹೊಡೆದ. 'ಮಾಸ್ತರ್' 'ಮಾಸ್ತರ್' ಎಂದು ತನ್ನ ಹವಾಲದಾರನನ್ನು ಕೂಗಲಾರಂಭಿಸಿದ. ನಿದ್ದೆ ಹೋದವರೆಲ್ಲ ಎದ್ದೆದ್ದು ಕಕ್ಕಾವಿಕ್ಕಿಯಾಗಿ ನೋಡತೊಡಗಿದರು. ಹೊರಗೆ ಕಾಲಿಡಲು ಯಾರಿಗೂ ಧೈರ್ಯವಿಲ್ಲ. ಹವಾಲದಾರ, ಇಬ್ಬರು ಪೋಲೀಸರು ಒಳಗೆ ಬಂದರು.

ಹವಾಲದಾರ ಸೊಂಟದ ಮೇಲೆ ಎರಡೂ ಕೈಗಳನ್ನಿಟ್ಟು, ತುಟಿಯನ್ನು ಕಚ್ಚುತ್ತ, ರಾಮುಜಿಯ ಎದುರಿಗೆ ನಿಂತು ಕರ್ಕಶ-ಧ್ವನಿಯಿಂದ ಗುಡುಗು ಹಾಕಿದ: "ಏನಾಯಿತು, ರಾಮುಜಿ?" ರಾಮುಜಿಯ ಕೈಕಾಲುಗಳು ನಡುಗತೊಡಗಿದ್ದುವು.

"ಬಂದೂಕು ಹೋಗಿದೆ, ಮಾಸ್ತರ್!" ಕುಗ್ಗಿದ ದನಿಯಲ್ಲಿ ರಾಮುಜಿಯಿಂದ ಉತ್ತರ ಬಂದಿತು. ಆ ಉತ್ತರದ ಕೊನೆಯ ಅಕ್ಷರ ಮುಗಿಯುವ ಪೂರ್ವದಲ್ಲಿಯೆ ರಾಮುಜಿಯ ಕೆನ್ನೆಯ ಮೇಲೆ 'ರಪ್ ರಪ್' ಎಂದು ಎರಡೇಟು ಬಿದ್ದಿದ್ದುವು. ಹವಾಲ್‌ದಾರ ಪೆಟ್ಟು ಹಾಕುವಾಗ, ತನ್ನ ಮುಕ್ಕಾಲು ಪಾಲು ಶಕ್ತಿಯನ್ನೆಲ್ಲ ಉಪಯೋಗಿಸಿದ್ದ. ರಾಮುಜಿ ಕುಕ್ಕರುಬಿದ್ದ. ಅರಿವಿನ ಎಳೆ ಕತ್ತರಿಸಿದ ಹಾಗಾಯ್ತು; ಕೂಡಲೆ ಅವನಿಗೆ ಮೂರ್ಛೆ ಬಂದಂತಾಯಿತು.

"ಗಣಪತರಾವ್, ಕಲ್ಲಪ್ಪಾ, ಅವನು ಹಾಗೇ ಬಿದ್ದಿರಲಿ. ಅವನಿಗೇನೂ ಆಗುವುದಿಲ್ಲ! ನೀವು ಇಬ್ಬರೂ ಪಹಾರಾಕ್ಕೆ ನಿಲ್ರಿ. ಬಂದೂಕಿನ ತಪಾಸಣೆಯ ಕೆಲಸಾ ನಾನು ನೋಡ್ತೇನೆ! ರಾಮುಜಿ ಎದ್ದ ಮೇಲೆ, ಅವನ ಟೋಪಿ ಮತ್ತು ಬಕ್ಕಲ್ ಕಸಿದುಕೊಂಡು ಅವನನ್ನು ಹೊರಗೆ ನಿಲ್ಲಿಸಿರಿ! ಅವನು ಫರಾರಿ ಆದಾನು, ಹುಷಾರ್! ಮಾಸ್ತರ್, ನೀವು ಅಂಜಬೇಡ್ರಿ. ಒಂದು ಬಂದೂಕು ಹೋದರೇನಾಯ್ತು? ನಾವು ನಾಲ್ಕು ಜನ ಇದ್ದೇವೆ; ಅದೇನು ಬಂದರೂ ನಾವು ನೋಡಿಕೊಳ್ತೇವೆ!"

ಗಣಪತರಾವ್ ಮತ್ತು ಕಲ್ಲಪ್ಪ ಬಂದೂಕನ್ನು ಹೆಗಲಮೇಲೇರಿಸಿ ಹವಾಲದಾರನಿಗೆ ಸೆಲ್ಯೂಟು ಕೊಟ್ಟು, ಪಹರಾಕ್ಕೆ ನಿಂತರು. ಬುದ್ಧಪ್ಪ ಕೈಯಲ್ಲಿ ಟಾರ್ಚು ಹಿಡಿದುಕೊಂಡು ಹೊರಬಿದ್ದ. ಸ್ಟೇಶನ್ ಮಾಸ್ತರರು ಮಾತ್ರ ಮಂಕು ಹಿಡಿದವರಂತೆ ಉದ್ದಕ್ಕೆ ನಿಂತುಬಿಟ್ಟರು!

ಕೆಲಹೊತ್ತಿನ ಮೇಲೆ ರಾಮುಜಿ ಮೂರ್ಛೆ ತಿಳಿದೆದ್ದ. ಅವನಿಗೆ ಹವಾಲ್‌ದಾರನ ಅಪ್ಪಣೆ ತಿಳಿಸಲಾಯಿತು. ಅವನು ಹೊರಗಡೆ ಬಂದು, ಗೋಡೆಗೆ ಆತು ಕಲ್ಲಿನಂತೆ ಕುಳಿತುಬಿಟ್ಟ.

ಬೆಳಗಾಯಿತು. ರಾಮುಜಿ ಅದೇ ಜಾಗದಲ್ಲಿ ಹಾಗೆಯೆ ಕುಳಿತಿದ್ದ. ಪಹರಾ ನಡೆದಿತ್ತು. ಹವಾಲದಾರ ಇನ್ನೂ ತನ್ನ ತಂಬೂದಲ್ಲಿ ಮಲಗಿದ್ದ. ಲಕ್ಕಿ ನಿದ್ರೆಯಿಂದೆದ್ದು ರಾತ್ರಿ ನಡೆದದ್ದನ್ನೆಲ್ಲ ನೆನೆಯುತ್ತ ಕುಳಿತಿದ್ದಳು. ಅವಳಲ್ಲಿಯೂ ಎದ್ದು ಓಡಾಡುವಷ್ಟು ಚೇತನವಿರಲಿಲ್ಲ.

ಬಂದೂಕು ಕಳೆದು ಹೋದ ಸುದ್ದಿಯನ್ನು ಎಷ್ಟು ಗುಪ್ತವಾಗಿಡಬೇಕೆಂದರೂ, ಅದು ಕೆಲವು ಜನರಿಗಾದರೂ ತಿಳಿಯದೆ ಹೋಗಲಿಲ್ಲ. ಸುದ್ದಿ ತಿಳಿದವರು ಬಂದು ಬಂದು ರಾಮುಜಿಯನ್ನು ನೋಡಿ ಹೋಗುತ್ತಿದ್ದರು. ಗಾಡಿಗಳು ಬರು-ಹೋಗುವುದು ನಡೆಯಿತು. ದೊಡ್ಡ ಮಾಸ್ತರರು ಬಂದು ತಮ್ಮ ಕೆಲಸಕ್ಕೆ ತೊಡಗಿದರು. ಹವಾಲ್‌ದಾರನೊಡನೆ ಆಲೋಚನೆ ಮಾಡದೆ ಅವರು ರಿಪೋರ್ಟು ಮಾಡುವ ಹಾಗಿರಲಿಲ್ಲ. ಹವಾಲದಾರನೋ ಮಲಗಿಬಿಟ್ಟಿದ್ದ. ದೊಡ್ಡ ಮಾಸ್ತರರಿಗೆ ಸಮಾಧಾನವಾಗಲಿಲ್ಲ. ಕೊನೆಗೆ ಅವರೇ ತಂಬೂದ ವರೆಗೆ ಹೋಗಿ ಅವನನ್ನು ಎಚ್ಚರಿಸಿದರು.

"ಮುಂದೆ ಏನು ಮಾಡೋದು? ನಾನಂತೂ ಡಿ.ಟಿ.ಎಸ್.ಗೆ ಈ ಸಂಗತಿಯನ್ನು ತಿಳಿಸಲೇ ಬೇಕು. ನಿಮ್ಮ ಡಿಪಾರ್ಟ್‌ಮೆಂಟಿನ ವಿಷಯ ನೀವು ನೋಡಿಕೊಳ್ರಿ!"

"ಈವೊತ್ತು ಸಾಯಂಕಾಲದ ವರೆಗೆ ನೋಡೋಣ, ಎಲ್ಲಿಯೂ ತಪಾಸ್ ಹತ್ತದಿದ್ದರೆ ಆಮೇಲೆ ನೀವೂ ರಿಪೋರ್ಟು ಮಾಡಬಹುದು, ನಾನೂ ಮಾಡ್ತೇನೆ!"

"ಹಾಗ್ರೀ, ಈಗ ರಿಪೋರ್ಟು ಮಾಡದಿದ್ದರೆ ನಾವು ತಪ್ಪಿನೊಳಗೆ ಬರಬಹುದು! ಈಗ ರಿಪೋರ್ಟು ಕಳಿಸಿ ಆಮೇಲೆ ತಪಾಸಣೆ ನಡೆಯಿಸಬಹುದು! ನಿಮ್ಮ ತಪಾಸಣೆಯೇನು ವರ್ಷಗಟ್ಲೆ ನಡಿಯೋ ಕೆಲಸ! ಹೋದ ಬಂದೂಕು ಸಿಗುವದು ಇನ್ನು ಎಂಥಾ ಮಾತೊ!"

"ಮಾಸ್ತರ್ರೆ, ಬಂದೂಕು ಹೋದದ್ದು ನಮ್ಮದು! ಹೋದರೆ ನಮ್ಮ ತಲೆ ಹೋಗ್ತದೆಯಾಗಲಿ ನಿಮ್ಮದೇನೂ ಹೋಗುವದಿಲ್ಲ! ರಿಪೋರ್ಟು ಬರೆದು ಇಟ್ಟಿರ್ರಿ! ಏನೇ ಆದರೂ, ಇವೊತ್ತು ಸಾಯಂಕಾಲದೊಳಗಾಗಿ ಕಳಿಸುವದೇ ಆದರೆ ಕಳಿಸಿ ಬಿಡೋಣ! ಬಂದೂಕು ಹೋದದ್ದು ಹ್ಯಾಗೆ, ಎಷ್ಟು ಗಂಟೆಗೆ, ಮುಂತಾದ ತಪಸೀಲನ್ನು ಅನುಕೂಲದಂತೆ ಹೆಚ್ಚು-ಕಡಿಮೆ ಮಾಡಿಕೊಂಡು ರಿಪೋರ್ಟಿನಲ್ಲಿ ತಿಳಿಸಬಹುದು! ಒಮ್ಮೆಲೆ ಅವಸರ ಮಾಡಬೇಡ್ರಿ!"

ಹವಾಲದಾರನಿಗೆ ಎದುರು ಹೋಗುವ ಧೈರ್ಯ ಮಾಸ್ತರರಿಗಾಗಲಿಲ್ಲ. 'ಪೋಲೀಸರ ಕೆಲಸ, ವಿರುದ್ಧ ಕಟ್ಟಿಕೊಂಡು ಫಲವಿಲ್ಲ, ಅಡವಿಯಲ್ಲಿ ಅವರದೇ ನಮಗೆ ಧೈರ್ಯ, ಏನಾದದ್ದಾಗಲಿ!' ಎಂದು ದೈವದ ಮೇಲೆ ಭಾರ ಹಾಕಿ— "ಆಯಿತು, ಅದೇನು ಮಾಡ್ತಿರೋ ಮಾಡ್ರಿ!" ಎಂದು ಹೇಳಿ, ಮಾಸ್ತರರು ಮರಳಿ ಬಂದುಬಿಟ್ಟರು.

ಲಕ್ಕಿ ಹೊರಗೆ ಬಂದು ನಿಂತು ಸುತ್ತಲೂ ನೋಡಿದಳು. ರಾಮುಜಿ ಆಫೀಸಿನ ಹತ್ತಿರ ಗಿಡದ ಕೆಳಗೆ ಒಬ್ಬನೆ ಬಕ್ಕನೆತ್ತಿಯಿಂದ ಕುಳಿತಿದ್ದ. ಒಬ್ಬ ಪೋಲೀಸು ಪಹರಾ ಮಾಡುತ್ತಿದ್ದ. ಆಕೆ ಮತ್ತೆ ಒಳಗೆ ಬಂದಳು. ಮೈಮೇಲೆ ಬಾಸಳಿ ಮೂಡಿದ ಭಾಗವೆಲ್ಲ ಮುಟ್ಟಿದರೆ ನೋಯುತ್ತಿತ್ತು. ಅತ್ತು ಅತ್ತು ಕಣ್ಣು ದಪ್ಪಗಾಗಿದ್ದವು. "ನಿರ್ವಾಣಿ, ಹೋಗಿ ಅಲ್ಲಿ ಕುಂತೈತಿ! ಡ್ಯೂಟಿ ಇಲ್ಲದಿದ್ದರ ಮನ್ಯಾಗ ಬಂದು ಕುಂಡ್ರಾಕೇನು ಜ್ಯಾನೇ ಇಂವಗ? ಅನ್ನೆಲ್ಲಾ ನೂರ್ಯಾಡಿ ಬಿಟ್ಟೈತಿ! ತಾಟರೆ ತಿಂದದ್ದಲ್ಲ, ಹಾಂಗಅರೆ ಇಟ್ಟದ್ದಲ್ಲ! ಯಾತಕ್ಕೊಂದೂ ಬಡಿಯೋದೊಂದು ಕಲಿತೈತಿ ಮಂಗ! ಇರೋತನಕ ಬಡೀತೈತಿ. ನಾ ಸತ್ತಮ್ಯಾಲ ಯಾರ್ನ ಬಡೀತೈತಿ? ಹೊಟ್ಯಾಗ ಕೂಸೈತೀ ಅಂತ ಇರೋದು; ಇಲ್ಲದಿದ್ದರ ಎಂದೋ ಹೋಗ್ತಿದ್ದೆ ಬಾಂವೀ ಕೆರೀ ಪಾಲಾಗಿ! ಕೂಳಿಗೆ ಇವತ್ತಾದರೂ ಬರ್ತೈತೋ ಏನು ಹಾಂಗೆ ಕುಂಡ್ರತೈತೋ ಅಲ್ಲೇ! ರೊಟ್ಟಿ ಅಂತು ಸುಟ್ಟಿಡ್ತೀನಿ; ತಂದರ ತಿನಲಿ, ಇಲ್ಲದಿದ್ದರ ಉಪಾಸ ಸಾಯಲಿ!" ಎಂದು ಏನೇನೊ ಬಾಯಲ್ಲಿ ಒಟಗುಟ್ಟುತ್ತ ಲಕ್ಕಿ ಕಸಗುಡಿಸತೊಡಗಿದಳು.

ಮಧ್ಯಾಹ್ನ ಮೀರಿಹೋಯಿತು. ಲಕ್ಕಿಯ ಅಡಿಗೆ ಆಯಿತು. ಆದರೂ ರಾಮುಜಿ ಬರಲಿಲ್ಲ. ಅವಳಿಗೆ ರಾಮುಜಿಯನ್ನು ಬಿಟ್ಟು ಉಣ್ಣಲು ಮನಸ್ಸಾಗದು. ಹವಾಲದಾರನ ಡೇರಾದ ಹತ್ತಿರ ಬಂದಳು. ಬುದ್ದಪ್ಪ ಎದುರಿಗೆ ಒಂದು ಫೋಟೋ ಇಟ್ಟುಕೊಂಡು ಮಡಿಯಿಂದ ಜಪಮಾಡುತ್ತ ಕುಳಿತಿದ್ದ. ಲಕ್ಕಿ ಕೆಲಹೊತ್ತು ಸುಮ್ಮನೆ ನಿಂತುಕೊಂಡಳು. ಬುದ್ದಪ್ಪನ ಜಪ ಮುಗಿಯಿತು. ಫೋಟೋಕ್ಕೆ ಕೈಮುಗಿದು, ಜಪಮಾಲೆ ಚೀಲದಲ್ಲಿರಿಸಿ ಅದನ್ನು ತೆಗೆದಿಡುವಾಗ, ಲಕ್ಕಿ ನಿಂತದ್ದು ಆತನ ದೃಷ್ಟಿಗೆ ಬಿತ್ತು.

"ಏನು ಕೆಲಸವಿತ್ತು?"

"ಇನ್ನೂ ಬಂದಿಲ್ಲ, ಅಲ್ಲೇ ಕುಂತಾನು! ಉಣ್ಣಾಕ ಕಳಸ್ರಿ!"

"ಖಬರ್‌ದಾರ್, ಇವತ್ತು ಅಂವಗ ಕೂಳು ಹಾಕೋ ಹಾಂಗಿಲ್ಲ! ತನ್ನ ಸೊಕ್ಕಿನಿಂದ ಬಂದೂಕು ಕಳಕೊಂಡ. ಇನ್ನು ಅವನ್ನ ಕೆಲಸದಿಂದಲೂ ತಗೀತಾರೆ, ಜೇಲಿಗೂ ಕಳಿಸ್ತಾರೆ! ಯಾಕೆ ಹೀಗಾಯ್ತು ಗೊತ್ತಿದೆಯೇನ್ನಿನಗೆ?"

"ಹಾದೆಪ್ಪಾ; ನಂದೆ ತಪ್ಪೈತೆ ಆದರಾಗ! ನಾ ಅಂವ ಬಂದಾಗ ಮನ್ಯಾಗಿದ್ದು, ಉಣ್ಣಾಕ ಹಾಕಲಿಲ್ಲ! ಏನು ಸಿಕ್ಷಾ ಮಾಡೋದು ನನಗ ಮಾಡ್ರಿ! ರಾತ್ರಿ ಕೂಳು ತಿನದೆ ಕೆಲಸಕ್ಕ ನಿಂತ; ಹೀಂಗಾತು!"

"ಈಗ ನಮ್ಮ ಕೈಯಾಗೇನೂ ಇಲ್ಲ; ಮ್ಯಾಲಿನವರು ಏನು ಮಾಡ್ತಾರೋ ಮಾಡಲಿ! ಏನಾದರೂ ಇವತ್ತು ಸಂಜೀತನಕ ಅಂವಗ ಕೂಳಿಲ್ಲ. ಹಾಗೇ ಕೂಡಬೇಕಂವ! ನೀನು ಹೋಗು! ನಿನಗೂ ಬುದ್ಧಿಯಿಲ್ಲ, ಅಂವಗೂ ಬುದ್ಧಿಯಿಲ್ಲ!"

ಬುದ್ದಪ್ಪ ಎದ್ದು ತಂಬುವಿನಲ್ಲಿ ಹೋದ. ಲಕ್ಕಿ ಮರಳಿ ಮನೆಗೆ ಬಂದಳು.

ಗಾಡಿಗಳು ಬಂದು ಹೋದುವು. ಪಹರಾ ಬದಲಾದುವು. ಊಟಮಾಡುವವರು ಎರಡೆರಡು ಸಲ ಉಂಡರು. ರಾಮುಜಿ ಮತ್ತು ಲಕ್ಕಿಯರ ಹೊತ್ತಿನ ಚೀಲಗಳು ತೆರವು ಬಿದ್ದುವು—ಹಾಗೇ ತೆರವಾಗಿದ್ದುವು. ಹನಿ ನೀರು ಕೂಡ ಅವುಗಳಲ್ಲಿ ಹೋಗಿರಲಿಲ್ಲ. ಇಳಿಹೊತ್ತಿನ ತಂಗಾಳಿಗೆ ರಾಮುಜಿ ಕುಳಿತಲ್ಲಿಯೆ ನಿದ್ದೆಹೋದ. ಲಕ್ಕಿಯೂ ತನ್ನ ಕೋಣೆಯಲ್ಲಿ ಮಲಗಿಬಿಟ್ಟಳು.

ಸಾಯಂಕಾಲವಾಯಿತು, ದೀಪಹತ್ತಿದುವು. ಹವಾಲ್‌ದಾರ ತಂಬುವಿನಿಂದ ಹೊರಬಿದ್ದು ಆಫೀಸಿಗೆ ಬಂದ.

“ಏನು ಹವಾಲ್‌ದಾರರೆ, ರಿಪೋರ್ಟಿನ ವಿಷಯ ಏನು ಮಾಡೋದು? ನಾನು ಅದಕ್ಕಾಗಿ ಕಾದಿದ್ದೇನೆ,” ದೊಡ್ಡ ಮಾಸ್ತರರು ಅಂದರು.

“ಆಗಲಿ ಈಗ ಹೇಳ್ತೀನೆ,” ಎಂದು ಹವಾಲ್ದಾರ ಹೊರಗೆ ಬಂದು, ‘ರಾಮುಜಿ,’ ಎಂದು ಕೂಗಿದ. ರಾಮುಜಿ ಎದುರಿಗೆ ಬಂದು ನಿಂತ.

“ನೀವು ಇಂದು ಬೆಳತನಕ ಪಹರಾ ಮಾಡಬೇಕು! ನನ್ನ ಬಂದೂಕು ಕೊಡ್ತೀನೆ; ನಿನ್ನಿನ ಹಾಗೆ ಇವೊತ್ತೂ ಆದರೆ ನನ್ನನ್ನ ಮತ್ತು ನಿಮ್ಮನ್ನ ಇಬ್ಬರನ್ನೂ ಗಲ್ಲಿಗೇರಿಸ್ತಾರೆ!” ಎಂದು ಹೇಳಿ, ರಾಮುಜಿಯಿಂದ ಉತ್ತರದ ಅಪೇಕ್ಷೆ ಮಾಡದೆ, ತಂಬುವಿಗೆ ಹೋಗಿ, ಬಂದೂಕನ್ನು ತಂದು ರಾಮುಜಿಯ ಕೈಯಲ್ಲಿ ಕೊಟ್ಟ. ಯಾರೂ ಮಾತನಾಡಲಿಲ್ಲ. ‘ನಾನು ಈಗ ಬರ್‍ತೀನೆ’ ಎಂದವನೇ ಹವಾಲದಾರ ಮತ್ತೆ ತನ್ನ ತಂಬುವಿನ ಕಡೆಗೆ ನಡೆದ.

ಹವಾಲದಾರನ ಈ ನಡತೆ ಯಾರಿಗೂ ಅರ್ಥವಾಗಲಿಲ್ಲ. ರಾಮುಜಿ ಅವನ ಅಪ್ಪಣೆಯನ್ನು ಮನ್ನಿಸಿ ಪಹರಾಕ್ಕೆ ನಿಂತ. ಮಾಸ್ತರರು ದಿಙ್ಮೂಢರಾಗಿ, ಹಣೆಗೆ ಕೈಹಚ್ಚಿಕೊಂಡು, ತೆಪ್ಪಗೆ ಕುಳಿತುಬಿಟ್ಟರು.

ರಾಮುಜಿ ನಿಂತು ಪಹರಾ ಮಾಡುವ ಸ್ಥಳದಲ್ಲಿ ಸಾಕಷ್ಟು ಬೆಳಕಿರಲಿಲ್ಲ, ಪೂರ ಕತ್ತಲೂ ಇರಲಿಲ್ಲ. ಆಫೀಸಿನೊಳಗಿನ ದೀಪದ ಬೆಳಕು ತಿಳಿಯಾಗಿ ಹರಿದಿತ್ತು. ಬಂದೂಕು ಕೈಯಲ್ಲಿ ಬಂದ ಮೇಲೆ, ರಾಮುಜಿಗೆ ತನ್ನ ಅಂತಃಕರಣದ ಮೇಲೆ ಯಾರೋ ಮೆತ್ತಗೆ ಕೈಯಾಡಿಸಿದ ಹಾಗಾಯಿತು. ನಾಲ್ಕೆಂಟು ಸಲ ಬಂದೂಕಿನ ಮೇಲೆ ಕೈಯಾಡಿಸಿದ. ಅದರ ನಡುವನ್ನು ಮುಟ್ಟಿ ನೋಡಿದ, ಹೊಟ್ಟೆ ಹಿಡಿದು ನೋಡಿದ, ಪಟ್ಟೆ ಹಿಡಿದು ಅಲ್ಲಾಡಿ-ಸಿದ, ಕುದುರೆಯನ್ನು ತಟ್ಟಿದ, ಅದರ ಬಾಯಹತ್ತಿರ ಬೆರಳಿಟ್ಟ. ಹಾಗೆ ಮಾಡಿದ ಹಾಗೆಲ್ಲಾ ಅವನಿಗೆ ಒಂದು ಅನುಕೂಲ ಸಂವೇದನೆಯ ಅನುಭವ ಬರತೊಡಗಿತು. ಗಂಡ-ಹೆಂಡರಿಗೆ, ಹೇಗೆ ಒಬ್ಬರೊಬ್ಬರ ಮೈಯ ಸ್ಪರ್ಶದ ಬೆಡಗು ಕಾಣದೆಯೂ ತಿಳಿಯುವುದೋ ಹಾಗೆ ಅವನಿಗೆ ಆ ಬಂದೂಕಿನ ಸ್ಪರ್ಶವು ತನ್ನ ಬಂದೂಕಿನ ಅನುಭವವನ್ನೇ ಕೊಡತೊಡಗಿತು. ಅದನ್ನೆತ್ತಿ ಕಣ್ಣೆದುರಿಗೆ ಹಿಡಿದ. ಅವನಿಗೇನೋ ಸಂಶಯ ಬರತೊಡಗಿತು. ಆಫೀಸಿನಲ್ಲಿ ಬಂದ, ಅದನ್ನು ಬೆಳಕಿಗೆ ಹಿಡಿದು ನೋಡಿದ. ಅವನ ಮುಖ ಒಮ್ಮೆಲೆ ಅರಳಿತು. ಅಷ್ಟರಲ್ಲಿಯೆ ಹವಾಲ್‌ದಾರನ ಸವಾರಿ ಟಾರ್ಚ್ ಕೈಯಲ್ಲಿ ಹಿಡಿದು ಒಳಗೆ ಕಾಲಿಟ್ಟಿತು. ರಾಮುಜಿ ಸೆಲ್ಯೂಟು ಕೊಟ್ಟು, ಉಕ್ಕಿಬರುವ ಆನಂದವನ್ನು ಪ್ರಯತ್ನದಿಂದ ಬಿಗಿಹಿಡಿದು ನುಡಿದ:

“ಮಾಸ್ತರ್, ಇದು ನನ್ನ ಬಂದೂಕು!”

“ನಾಳೆ ಪಟ್ಟಿ, ನನ್ನ ಬಂದೂಕನ್ನು ಕೊಟ್ಟದ್ದರ ಉಪಕಾರ ತೀರಿಸ್ತೀರೇನು?”

“ಇಲ್ಲ, ಮಾಸ್ತರ್, ನನ್ನ ಬಂದೂಕೇ ಇದು! ಹಗಲೂ ರಾತ್ರಿ ನನ್ನ ಕೈಯಲ್ಲಿ ಆಡಿದ್ದಿದು. ಇಂಥ ಪಟ್ಟಾ ನನ್ನ ಬಂದೂಕಿಗೇ ಇರೋದು; ಇಷ್ಟಾಗಿ ಈ ನಂಬರು ನನ್ನ ಬಂದೂಕಿನದೆ!”

ಹವಾಲದಾರ ರಾಮುಜಿಯ ತಲೆಗೆ ಒಂದೇಟು ಮುಟ್ಟಿಸಿ ನಗುತ್ತ ನುಡಿದ: “ಬೇರೆಯವರ ಕೈಯಲ್ಲಿ ಬಂದೂಕು ಹೋಗಿದ್ರೆ ನಿಮ್ಮ ಗತಿಯೇನಾಗ್ತಿತ್ತು? ಇನ್ನು ಮುಂದೆ ಹುಷಾರ್, ಡ್ಯೂಟಿ ಇದ್ದಾಗ ನಿದ್ದೆ ಮಾಡಬೇಡ್ರಿ! ನಿದ್ದೆ ಮಾಡುವಾಗ ಕೂಡ ಡ್ಯೂಟಿಯನ್ನು ಮರೆಯದೆ ಇರುವ ದಿವಸಗಳಿವು! ಇರಲಿ, ಹೆಂಡತಿಯನ್ನು ಮತ್ತೆ ಹೀಗೆಂದೂ ಹೊಡೆಯಬೇಡ್ರಿ! ಹೊಡೆದ-ದ್ದಕ್ಕೇ ನಿಮಗೆ ದೇವರು ಹೀಗೆ ಶಿಕ್ಷೆ ಕೊಟ್ಟದ್ದು! ಅದೊ, ಅಲ್ಲಿ ನಿಮ್ಮ ಹೆಂಡತಿ ನಿಂತಿದ್ದಾಳೆ, ಹೋಗಿ ಹೊಟ್ಟೆತುಂಬ ಊಟ ಮಾಡ್ರಿ! ಇಂದು ರಾತ್ರಿ ನಿಮಗೆ ಪಹರಾ ಮಾಫ್!”

ರಾಮುಜಿ ಹವಾಲದಾರನ ಪಾದದ ಮೇಲೆ ತಲೆಯಿಟ್ಟು ಅದನ್ನು ತನ್ನ ಕಂಬನಿಗಳಿಂದ ತೋಯಿಸಿಬಿಟ್ಟ.

“ನೀವೂ ನನ್ನ ಜತಿಗೆ ಉಣ್ಣಾಕ ಬರಬೇಕು ಮಾಸ್ತರ್,” ರಾಮುಜಿ ದೈನ್ಯಭಾವದಿಂದ ನುಡಿದ.

“ಬಂದೂಕು ಕೊಟ್ಟದ್ದಕ್ಕೆ ಬಕ್ಷಿಸೇನ್ನನಗ?”

“ಅಲ್ಲ ಮಾಸ್ತರ್, ನೀವು ಇಂದು ನಮ್ಮಲ್ಲಿ ಉಂಡರೆ ನಮಗೆ ಸಂತೋಷ!”

ಇಬ್ಬರೂ ಮನೆಗೆ ಬಂದು ಊಟಕ್ಕೆ ಕುಳಿತರು. ಲಕ್ಕಿ ಅಂದು ಹೊಸ ಮಾವಿನಕಾಯಿ ಚಟ್ನಿ ಅರೆದಿದ್ದಳು.

ರೊಟ್ಟಿಯ ತುಣುಕಿಗೆ ಚಟ್ನಿಯನ್ನು ಸವರಿ ಅದನ್ನು ಬಾಯಲ್ಲಿ ಸೇರಿಸುತ್ತ ಬುದ್ದಪ್ಪ ಹೇಳಿದ—“ಲಕ್ಕವ್ವ, ಇಂಥ ಹಿಂಡೀ ನಾನು ಹುಟ್ಟಿದ ಮ್ಯಾಲೆ ತಿಂದಿದ್ದಿಲ್ಲ, ನಿನ್ನ ಕೈಯಡಿಗೆ ಬಲು ಸವಿ!”

“ಅದರಾಗ, ಮಾಸ್ತರ್, ಮಾವಿನಕಾಯಿ ಹಿಂಡೀ ಮಾಡ-ಬೇಕು, ನಮ್ಮ ಲಕ್ಕೀನs!” ರಾಮುಜಿ ಲಕ್ಕಿಯ ಕಡೆಗೆ ನೋಡಿ ನಗುತ್ತ ನುಡಿದ. ಲಕ್ಕಿಯ ಕಣ್ಣುಗಳಿಂದ ಆನಂದಾಶ್ರುಗಳು ಹೊರಚಿಮ್ಮಿದುವು.

ಆದಿನ ಅವರೆಲ್ಲರಿಗೂ ಊಟ ಎಷ್ಟು ರುಚಿಯೆನಿಸಿತೊ!

ಯಾರಿಗೆ ★ ★ ಯಾರು?

(ವಿಚಾರಪ್ರಚೋದಕ ಪ್ರಬಂಧ)*

ಶ್ರೀ. ರಾಮಚಂದ್ರ ಭಟ್ಟ ಹಾಸಣಗಿ
' ವಿದ್ವಾನ್ ' ಚುಂಚನಕಟ್ಟೆ

★

ಯಾರಿಗೆ ಯಾರು ? ' ಎಂಬ ಈ ಪ್ರಶ್ನೆಯೊಂದು ಹಲವು ದಿವಸಗಳಿಂದ ನನ್ನ ತಲೆಯಲ್ಲಿ ಸುಳಿದಾಡುತ್ತ, ಹಗಲೆಲ್ಲ ನನ್ನೆದುರು ಸಮಸ್ಯೆಯೊಂದನ್ನು ತಂದು ನಿಲ್ಲಿಸುತ್ತಿರುವುದು. ಅದೇ ವಿಚಾರದಿಂದ ಕೆಲವು ದಿವಸಗಳ ವರೆಗೆ ನನ್ನ ಮಿದುಳಿನಲ್ಲಿ ಕಲ್ಪನಾತುಮುಲವೆದ್ದು ಅದಕ್ಕೊಂದು ರೂಪು ಬಂದಂತಾಗಿ, ಇತ್ತೀಚೆಗೆ ತಲೆ ಸ್ವಲ್ಪ ಶಾಂತವಾಗಿದೆ. ಈ ಗೊಂದಲದಲ್ಲಿ ಉಂಟಾಗಿರುವ ನನ್ನ ವಿಚಾರ-ನಿರ್ಣಯಗಳನ್ನು ಜನತೆಯ ಮುಂದೂ ಇರಿಸಬೇಕೆಂದು ಬಯಸಿರುವೆನು. ನನ್ನಂತಹ ಯೋಚನೆಯವರು ಇನ್ನಾರಾದರೂ ಇದ್ದರೆ, ನನ್ನ ವಿವರಣೆಯಿಂದ ಸ್ವಲ್ಪಾದರೂ ಅವರು ಪ್ರಯೋಜನ ಪಡೆಯಬಹುದೆಂಬ ನಂಬಿಕೆಯೂ ನನಗೆ ಇದೆ.

' ಯಾರಿಗೆ ಯಾರು ? ' ಎಂಬ ಪ್ರಶ್ನೆಯನ್ನು ಕೇಳಿದೊಡನೆ ಅನೇಕರಿಗೆ ' ಇದೊಂದು ಪ್ರಶ್ನೆಯೆ ? ' ಎನಿಸಬಹುದು. ಮತ್ತೆ ಕೆಲವರಿಗೆ ' ಇದೆಂತಹ ಪ್ರಶ್ನೆ ? ' ಎಂದೆನಿಸಬಹುದು. ಆದರೆ ಈ ಪ್ರಶ್ನೆ ಇಂದು ನನ್ನ ಮನಸ್ಸನ್ನು ಪೀಡಿಸಿದಂತೆ ಬೇರೆ ಹಲವರ ಮನಸ್ಸನ್ನೂ ಪೀಡಿಸುತ್ತಿರಬಹುದಾಗಿದೆ. ಅಲ್ಲದೆ ಈ ಪ್ರಶ್ನೆ ಕೇಳುವುದರಿಂದ—ಗೊತ್ತಿಲ್ಲದವರಿಗೆ—ಇಂತಹದೊಂದು ಪ್ರಶ್ನೆಯಿರುವುದೆಂದು ಗೊತ್ತಾಗಿ, ಅದರ ವಿಷಯ ತಿಳಿದುಕೊಳ್ಳಲು ಪ್ರಯತ್ನಿಸಬಹುದು. ಪ್ರತೀತ ಸಿದ್ಧಾಂತಗಳಿಗೆ ತಮ್ಮ ಸಿದ್ಧಾಂತದ ಬಗೆಗಿರುವ ಆಕ್ಷೇಪದ ಅರಿವು ಉಂಟಾಗಬಹುದು. ಆದುದರಿಂದಲೆ ಇಂತಹ ಪ್ರಶ್ನೆಗಳನ್ನು ಕೇಳುವುದೂ ಬಿಡಿಸುವುದೂ ತಪ್ಪೆನಿಸಲಿಕ್ಕಿಲ್ಲ, ಇಷ್ಟೇ ಅಲ್ಲ, ಒಂದು ಬಗೆಯ ಪ್ರಯೋಜನವೇ ಆಗುವುದೆಂದು ತಿಳಿದು ಈ ಲೇಖನವನ್ನು ಬರೆಯಲಾರಂಭಿಸಿದ್ದೇನೆ.

' ಯಾರಿಗೆ ಯಾರು ? ' ಎಂಬೀ ಪ್ರಶ್ನೆಯನ್ನು ಕೇಳಿದೊಡನೆಯೆ ಇಂದು ಲೋಕಸಮ್ಮತ(?) ವಾದ : ಮಕ್ಕಳಿಗೆ ತಂದೆ-ತಾಯಿಗಳು—ತಂದೆ-ತಾಯಿಗಳಿಗೆ ಮಕ್ಕಳು—ಗಂಡನಿಗೆ ಹೆಂಡತಿ—ಹೆಂಡತಿಗೆ ಗಂಡ—ದೇಶಕ್ಕೆ ರಾಜ—ರಾಜನಿಗೆ ದೇಶ—ಮೊದಲಾದ ಸಾವಿರಾರು ಅಥವಾ ಅದಕ್ಕಿಂತಲೂ ಹೆಚ್ಚು.... ಮರಳಿ ಕೇಳಿದರೆ ಪ್ರತಿಯೊಂದೂ ಪರರಿಗಾಗಿಯೆ ಇರುತ್ತವೆ. ' ಪರೋಪಕಾರಾಯ ವಹಂತಿ ನದ್ಯಃ, ಪರೋಪಕಾರಾಯ ದುಹಂತಿ ಗಾವಃ, ಪರೋಪಕಾರಾರ್ಥಮಿದಂ ಶರೀರಂ ' ಎಂಬ ಮಾತು, ಮೇಲಿನ ಸಿದ್ಧಾಂತದ ಪ್ರತೀಕವಾಗಿದೆ. ಇದೆಲ್ಲಕ್ಕೂ ಒಮ್ಮೆಲೆ ತಿಲಾಂಜಲಿ ಕೊಟ್ಟಂತಾಯಿತೆಂದು— ನನ್ನ ವಿಚಾರ-ನಿರ್ಣಯವನ್ನೋದಿ—ಯಾರಾದರೂ ಒಮ್ಮೆಲೆ ಎದುರು ಬೀಳ-

★

ಜೀವನದಲ್ಲಿ ' ಆದರ್ಶ ' ' ಧ್ಯೇಯ ' ' ಪ್ರೇಮ ' ' ಸ್ನೇಹ ' ಎನಿಸಿಕೊಳ್ಳುತಿರುವುದೆಲ್ಲವೂ, ವಿಶ್ಲೇಷಿಸಿ ನೋಡಿದರೆ ಸ್ವಾರ್ಥದ ತಳಹದಿಯ ಮೇಲೆ ಕಾಲೂರಿ ನಿಂತಿರುವುದನ್ನೇ ಕಾಣುವೆವು. ಎಲ್ಲರೂ ತಮಗಾಗಿ ತಾವೆ ಬದುಕಿರುವರಲ್ಲದೆ ಇನ್ನಾರಿಗಾಗಿಯೂ ಅಲ್ಲ !

★

ಬಹುದು. ಕೆಲವರಿಗಂತೂ ಹೀಗೆ ಎನಿಸುವುದು ಸ್ವಾಭಾವಿಕ. ಗರ್ಭದಲ್ಲಿರುವಾಗಿನಿಂದಲೂ ಮುತ್ತಿಕೊಂಡಿರುವ ವಾತಾವರಣವೂ ಪರಂಪರಾಪ್ರಾಪ್ತವಾದ ಪ್ರತೀತಿಯೂ ಹಿರಿಯರ ಹಿರಿತನದ ನುಡಿಯೂ ಮನುಷ್ಯನ ಮನದ ಮೇಲೆ ಪರಿಣಾಮ ಮಾಡಿ, ಅವನನ್ನು ಹಾಗೆ ಎದುರು ಬೀಳಹಚ್ಚುವುದು ಸಹಜವೆ. ಆದರೆ ವಾಸ್ತವಸ್ಥಿತಿ ಮಾತ್ರ ಹಾಗಿರುವುದಿಲ್ಲ ; ಮೇಲಿನ ಪರಂಪರಾಪ್ರತೀತಿಗೆ ತೀರ ವಿಪರೀತವಾಗುತ್ತದೆ. ' ಯಾರಿಗೆ ಯಾರು ? ' ಎಂದು ಕೇಳಿದಾಗ, ವಿಚಾರ ಮಾಡಿ ಕೊಡಬೇಕಾದ ಉತ್ತರವೆಂದರೆ ' ಯಾರಿಗೆ ಯಾರೂ ಇಲ್ಲ ! ' ಎಂದೊ, ' ತನಗೆ ತಾನೆ ! ' ಎಂದೊ ಹೇಳಬೇಕಾಗುತ್ತದೆ. ' ಆತ್ಮನಸ್ತು ಕಾಮಾಯ ತೇ ಸರ್ವಂ ಪ್ರಿಯಂಭವತಿ ' ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ' ಎಂಬ ಪ್ರಾಚೀನ ದಿವ್ಯವಾಣಿಯು ' ಪರೋಪಕಾರಾಯ.... ' ಇತ್ಯಾದಿ ಮಾತಿನಂತೆ ಅಲಂಕಾರಿಕವಾಗಿರದೆ, ಕೇವಲ ವಸ್ತುಸ್ಥಿತಿಯನ್ನು ತಿಳುಹುವ ಶುದ್ಧವಾದ ತಿಳಿಗನ್ನಡಿಯಂತಿರುವುದಲ್ಲವೆ ?

---

* ವಿ. ಸೂ. : ಈ ಲೇಖನದಲ್ಲಿಯ ವಿಷಯ-ವಿವೇಚನೆಯು ಸಮಾಜ ಜೀವನದಲ್ಲಿಯ ರೂಢಿ-ವ್ಯವಹಾರಗಳನ್ನು ಖಂಡಿಸಲಾಗಲಿ, ಅವುಗಳನ್ನು ನಡೆವಳಿಯಲ್ಲಿರಿಸಬಾರದೆಂದಾಗಲಿ ಹೇಳಲು ಹೊರಟಿರುವುದಿಲ್ಲ. ವ್ಯಕ್ತಿಯ—ಸಮಾಜದ—ದೇಶದ ಹಿತದೃಷ್ಟಿಯಿಂದ, ವಸ್ತುಸ್ಥಿತಿಯನ್ನು ಬಿಟ್ಟ ಕೆಲವು ಕೃತ್ರಿಮಗಳನ್ನು ಅನುಸರಿಸಬೇಕಾದುದು ಅನಿವಾರ್ಯವಿರುತ್ತದೆ. ಆದುದರಿಂದ, ಈ ಲೇಖನವು ವಸ್ತುಸ್ಥಿತಿಯನ್ನು ವಿವರಿಸುವ ಉದ್ದೇಶವನ್ನಿರಿಸಿಕೊಂಡು ಹೊರಟುದಲ್ಲದೆ, ಹೀಗೆಯೆ ಆಚರಿಸಬೇಕೆಂದು ಹೇಳುವ ಉಪದೇಶ—ವಿಧಿಗಳಾಗಿ ಅಲ್ಲವೆಂಬುದನ್ನು, ಮೊದಲೇ ಎಚ್ಚರ ಕೊಟ್ಟು ಹೇಳಲು ಬಯಸುವೆನು. —ಲೇ.

ಈ ಸಿದ್ಧಾಂತವನ್ನು ಒಪ್ಪಿಕೊಂಡರೆ ಜಗತ್ತಿನ ಯಾವ ವ್ಯವಹಾರವೂ ನಡೆಯಲಾರದು. ಒಬ್ಬರಿಗೊಬ್ಬರ ಸಹಾಯವಿಲ್ಲದೆ ಜನ ಬದುಕುವುದಾದರೂ ಹೇಗೆ? ನಮ್ಮ ಮಕ್ಕಳಿಗೆ ಶಾಲೆಗಳಲ್ಲಿ 'ಮಗು, ನೀನು ಯಾವಾಗಲೂ ಎರಡನೆಯವರಿಗೆ ಉಪಕಾರ ಮಾಡುವುದನ್ನೇ ಕಲಿ! ಯಾರೊಬ್ಬರ ಉಪಕಾರವಿಲ್ಲದೆ ನೀನು ಬದುಕಿರಲಾರೆ! ನಿನ್ನ ಬಟ್ಟೆಗಳನ್ನು ತಯಾರಿಸಿದವರು ಯಾರು? ನಿನಗಾಗಿ ಪುಸ್ತಕಗಳನ್ನು ಸಿದ್ಧಮಾಡಿದವರು ಯಾರು? ನಿನಗೆ ಉಪ್ಪು ಎಲ್ಲಿಂದ ಬಂದಿತು? ನೀನು ಬರೆಯುವ ಬಳಪವನ್ನು ಮಾಡಿದವರಾರು? ಹೀಗೆಯೆ ನೀನು ಉಪಯೋಗಿಸುವ ಪ್ರತಿಯೊಂದು ವಸ್ತುವನ್ನೂ ಎರಡನೆಯವರು ಮಾಡಿದ್ದಾರೆಂದಮೇಲೆ, ನೀನೂ ಎರಡನೆಯವರಿಗೆ ಉಪಕಾರವನ್ನು ಮಾಡದಿದ್ದರೆ ಹೇಗೆ? ಆದುದರಿಂದ ನೀನು ಯಾವಾಗಲೂ ಉಪಕಾರ ಮಾಡದೆ ಇರಬೇಡ!' ಎಂದು ಉಪದೇಶ ಮಾಡಿದಂತೆ, ನಮ್ಮ ಮುಂದೆಯೂ ಪರೋಪಕಾರ, ಧರ್ಮ, ಮೊದಲಾದುವುಗಳನ್ನು ಉಪದೇಶಮಾಡುವ ಮಹನೀಯರು ಬರಬಹುದು. ಶಾಲೆಯ ಮಕ್ಕಳಿಗೆ 'ನಾವು ಹಣ ಕೊಡುತ್ತೇವೆ; ಹಣಕ್ಕಾಗಿ ಅವರು ನಮಗಾಗಿ ಕೆಲಸ ಮಾಡುತ್ತಾರೆಯೆ ಹೊರತು ನಮಗಾಗಿ ಅಲ್ಲ!' ಎಂದು ಹೇಳುವ ತೀಕ್ಷ್ಣತೆಯು ಇರುವುದಿಲ್ಲ, ಯಾವನಾದರೊಬ್ಬ ಬುದ್ಧಿಶಾಲಿ ಬಾಲಕನು 'ನಮಗೆ ಅವುಗಳನ್ನೆಲ್ಲ ಬಿಟ್ಟಿಯಾಗಿ ಕೊಡುತ್ತಾರೆಯೆ ಸಾರ್?' ಎಂದು ಕೇಳಿದರೆ, ಉಪಾಧ್ಯಾಯರು ಉಗುಳುನುಂಗುತ್ತ ಹುಡುಗನ ಬೆನ್ನನ್ನು ಸವರಿಸಬೇಕಾಗುತ್ತದೆ. ಇಂತಹ ಪ್ರತಿಯೊಂದು ಉಪಕಾರದ ಪ್ರಶ್ನೆಗಳಿಗೂ ಇದೇ ರೀತಿಯ ಉತ್ತರಗಳಿರುವುವು. ಅವುಗಳಲ್ಲಿಯ ಕೆಲವು ಮೋಹಕವೃತ್ತಿಯ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು, ಅವುಗಳನ್ನು ವಿವೇಚಿಸಿದರೆ–ಉತ್ತರಿಸಿದರೆ–ಮಾತಿನ ಬಡಿವಾರದ ತಿರುಳು ಹೊರಬೀಳದಿರದು.

೧ನೆಯ ಪ್ರಶ್ನೆ

ತಾಯಿ ತನ್ನ ಮಗುವನ್ನು ಒಂಬತ್ತು ತಿಂಗಳ ವರೆಗೆ ತನ್ನ ಗರ್ಭದಲ್ಲಿ ಧರಿಸುತ್ತಾಳೆ. ಗರ್ಭಿಣಿಯಾದಾಗಿನ ವೇದನೆಗಳನ್ನು ಮೌನವಾಗಿಯೆ ಸಹಿಸುತ್ತಾಳೆ. ಹೆರಿಗೆಯ ಕಾಲದ ವ್ಯಥೆಯನ್ನಂತೂ ಹೇಳಲು ಬಾರದು. 'ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವ ವೇದನಾಂ' ದಾರುಣವಾದ ಪ್ರಸವವೇದನೆಯು ತಾಯಿಯಾದವಳಿಗಲ್ಲದೆ ಬೇರೆ ಯಾರಿಗೆ ತಿಳಿಯಲು ಸಾಧ್ಯ? ಬಂಜೆಯರಿಗಾಗಲಿ ಗಂಡಸರಿಗಾಗಲಿ ಅದು ತಿಳಿಯಲಾರದು. ಹೆರಿಗೆಯಾದ ಮೇಲೆ ತಾಯಿಯೆ ಕಾಲಕ್ಕೆ ತಕ್ಕಂತೆ ಎದೆಹಾಲುಣ್ಣಿಸಿ ಮಗುವನ್ನು ಪೊರೆಯುವಳು. ಅದು ಮೈಮೇಲೆ ಹೇಸಿಗೆ ಮಾಡಿದರೂ ಬೇಸರುಗೊಳ್ಳದೆ ತೆಗೆಯುವಳು; ತೊಳೆದು ಹಸನುಗೈಯುವಳು. ತಾನು ಉಪವಾಸ ಉಳಿದಾದರೂ ತಾಯಿ ಮಗುವಿಗೆ ಕಾಲೋಚಿತ ಆಹಾರಗಳನ್ನು ಒದವಿಸಿ ಸಲಹುವಳು. ಇಂತಹ ತಾಯಿ ಮಗುವಿಗಾಗಿಯೆ ಇರುವಳೆಂದಾಗುವುದಿಲ್ಲವೆ? ಹಗಲಿರುಳು ದುಡಿದು ಎಂತೆಂತಹ ಅಸಾಧ್ಯ ಕಷ್ಟಗಳನ್ನೂ ಅನುಭವಿಸುತ್ತಲಿದ್ದು ಮಕ್ಕಳ ಪುರೋಭಿವೃದ್ಧಿಯೆ ತನ್ನ ಗುರಿಯೆಂದರಿತು, ಸರ್ವಸ್ವವನ್ನೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೊ, ಇತರ ಹಿತಚಿಂತನೆಯ ಕಾರ್ಯಗಳಿಗಾಗಿಯೊ ವ್ಯಯಮಾಡುವ ತಂದೆ ಮಗುವಿಗಾಗಿಯೆ ಅಲ್ಲವೆ? ಇಂತಹ ತಂದೆ-ತಾಯಿಗಳಿಗಾಗಿಯೆ ಮಗು ಇರುವುದಿಲ್ಲವೆ? ಅಥವಾ ಇರಬೇಡವೆ?

೨ ನೆಯ ಪ್ರಶ್ನೆ

ಸಂಸಾರಸಾಗರವನ್ನು ದಾಟಲು ನಾವೆ-ನಾವಿಕರಂತಿರುವ ದಂಪತಿಗಳು; ಅಗ್ನಿಸಾಕ್ಷಿಯಾಗಿ ದೇವ-ದ್ವಿಜ-ಗುರುಗಳ ಮುಂದೆ—ಧರ್ಮಾರ್ಥ ಕಾಮಗಳಿಂದ ಅತಿಚರಿಸುವುದಿಲ್ಲವೆಂಬ ಪ್ರತಿಜ್ಞೆಯಿಂದ ಪಾಣಿಗ್ರಹಣಮಾಡಿದ ದಂಪತಿಗಳು; ಜೀವನದ ಸರ್ವಸ್ವವೆಂದು ತಿಳಿದು ಸುಖ-ದುಃಖಗಳಲ್ಲಿ ಸಮಭಾಗಿಗಳಾಗಿ ಅದ್ವೈತಭಾವದಿಂದ ಸಂಸಾರರಥವನ್ನು ಸಾಗಿಸುವ ಜಾಯಾಪತಿಗಳು; ಆಚಂದ್ರಾರ್ಕವಾಗಿ ವಂಶ- ಸಂತತಿಯು ಅವಿಚ್ಛಿನ್ನವಾಗಿ ಹರಿಯಲು ಕಾರಣರಾದ ಗಂಡ-ಹೆಂಡಿರು ಪರಸ್ಪರರು ಪರಸ್ಪರರಿಗಲ್ಲವೆ? ಅನ್ಯೋನ್ಯ ಪೂರಕರಲ್ಲವೆ?

೩ ನೆಯ ಪ್ರಶ್ನೆ

ಬಾಲ್ಯದಿಂದಲೂ ಜೀವನದ ಬಹುಭಾಗದಲ್ಲಿ ಹೊಂದಿಕೊಂಡಿರುವ— ಅನೇಕ ವಿಧದಿಂದ ಸಹಾಯ ನೀಡುತ್ತಿರುವ ಸಹಕರಿಸುತ್ತಿರುವ ಸ್ನೇಹಿತರು; ಪ್ರಾಣಕ್ಕೆ ಪ್ರಾಣವನ್ನೇ ಒಪ್ಪಿಸಲು ಸಿದ್ಧರಿರುವ— ಆಪತ್ತು-ಸಂಪತ್ತುಗಳಲ್ಲಿ ಸಮಾನಭಾವದಿಂದ ವರ್ತಿಸುವ ಸನ್ಮಿತ್ರರು, ಪರಸ್ಪರರು ಪರಸ್ಪರರಿಗಾಗಿಯೆ ಇರುವರಲ್ಲವೆ?

೪ ನೆಯ ಪ್ರಶ್ನೆ

ರಾಷ್ಟ್ರದ ಶಾಂತಿ-ಸ್ವಾತಂತ್ರ್ಯಗಳಿಗಾಗಿ ವಿಶ್ವತಶ್ಚಕ್ಷುಗಳನ್ನಿರಿಸಿಕೊಂಡು ರಾಜ್ಯತಂತ್ರ ನಡೆಯಿಸುತ್ತಿರುವ ರಾಜರು (ಸರಕಾರಗಳು) ಪ್ರಜೆಗಳಿಗಾಗಿ ಇರುವರಲ್ಲವೆ? ಬಿಸಿಲುಮಳೆಗಳೆಂಬುದನ್ನು ಲಕ್ಷಿಸದೆ ಬೆವರಹನಿಯನ್ನು ಸುರಿಸುತ್ತ, ತಾವು ಅರೆಹೊಟ್ಟೆ ಉಂಡಾದರೂ ದುಡಿದ ಧನಸಂಪತ್ತಿಯನ್ನು— ಕಪ್ಪ-ಕಾಣಿಕೆಗಳ ರೂಪದಿಂದ—ಅಧಿಕಾರಿಗಳಿಗೆ ಒಪ್ಪಿಸುವ ಪ್ರಜೆಗಳು ರಾಜರಿಗಾಗಿ (ಸರಕಾರಗಳಿಗಾಗಿ) ಇರುವುದಿಲ್ಲವೆ?

೫ ನೆಯ ಪ್ರಶ್ನೆ

ಇಂದು ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿರುವ ಮಹಾಯುದ್ಧವು ಏತಕ್ಕಾಗಿ? ಬ್ರಿಟನ್-ಅಮೇರಿಕಗಳು ವಿಶ್ವದ ಶಾಂತಿಗಾಗಿ ಯುದ್ಧದಲ್ಲಿ ಬಿದ್ದಿಲ್ಲವೆ? ರಷ್ಯನರು ತಮ್ಮ ದೇಶದ ಸ್ವಾತಂತ್ರ್ಯರಕ್ಷಣೆಗಾಗಿ ಹೋರಾಡುತ್ತಿಲ್ಲವೆ? ಜಪಾನ್-ಜರ್ಮನಿಯವರು ತಂತಮ್ಮ ಜನರು ಸುಖವಾಗಿ ಬಾಳಬೇಕು—ಪ್ರಪಂಚದೊಳಗೆಲ್ಲ ತಮ್ಮ ಆಧಿಪತ್ಯ ನಡೆಯಿಸಿ ಎಲ್ಲ ಜನರನ್ನೂ ಹಿಟ್ಟು-ಬಟ್ಟೆಗಳಿಂದ

ತಣಿಸಿ ಸಂತೋಷದಲ್ಲಿರಿಸಬೇಕೆಂದೇ ರಕ್ತದ ಕಾಲುವೆ ಹರಿಸುತ್ತಿಲ್ಲವೆ? ಹೀಗೆ ಎಲ್ಲರೂ ಮಾನವಹಿತಕ್ಕಾಗಿ ಒಂದೊಂದು ವಿಧವಾದ ಯೋಜನೆಯನ್ನಿರಿಸಿಕೊಂಡು ಯುದ್ಧ ಮಾಡುತ್ತಿರುವರು; ಇದೆಲ್ಲ ಜಗತ್ತಿನ ಒಳ್ಳೆಯದಕ್ಕಾಗಿಯೆ ಅಲ್ಲವೆ?

೬ನೆಯ ಪ್ರಶ್ನೆ

ಭಾರತದ ಪಾರತಂತ್ರ್ಯವನ್ನು ಹೋಗಲಾಡಿಸಿ ಸ್ವಾತಂತ್ರ್ಯವನ್ನು ಸಂಪಾದಿಸಲು ಇಂದು ಹೆಣಗುತ್ತಿರುವ ರಾಷ್ಟ್ರೀಯ ಸಭೆಯು ನಮ್ಮ ಭಾರತಕ್ಕಾಗಿಯೆ ಇಲ್ಲವೆ? ಕಾಂಗ್ರೆಸಿನ ಸಂಚಾಲಕರೂ ಮುಂದಾಳುಗಳೂ ಭಾರತಕ್ಕಾಗಿಯೆ ಅಲ್ಲವೆ? ತಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ಧಾರೆಯೆರೆದು, ಸುಖದ ಅಭಿಲಾಷೆಯಿಲ್ಲದೆ, ಕಾರಾಗಾರಾದಿ ಸರಕಾರದ ಶಿಕ್ಷೆಗಳನ್ನು ಅನುಭವಿಸುತ್ತ ಅಹೋರಾತ್ರಿ ಸ್ವಾತಂತ್ರ್ಯತಪಸ್ಸನ್ನಾಚರಿಸುತ್ತಿರುವ ನಾಯಕರಿರುವುದು ಭಾರತಕ್ಕಾಗಿ ಅಲ್ಲವೇ? ವಿಶ್ವಕುಟುಂಬಿಗಳಾಗಿ, ಏಕಮೇವಾದ್ವಿತೀಯವಾದ ಭಾರತಸಂಸ್ಕೃತಿಯ ತಿರುಳಿನಂತಿರುವ **ಅಹಿಂಸಾ ಮಂತ್ರ**ವನ್ನು ಈಗ ಮತ್ತೊಮ್ಮೆ ಜಗತ್ತಿಗೆಲ್ಲ ತಲುಪಿಸುತ್ತಿರುವ ಋಷಿ ಗಾಂಧಿಯವರು ಭಾರತಕ್ಕಾಗಿ— ಲೋಕಕ್ಕಾಗಿ— ಇಲ್ಲವೆ?

೭ನೆಯ ಪ್ರಶ್ನೆ

ಭೌತಿಕಸುಖವು ಕ್ಷಣಿಕವೆಂದು ತಿಳಿದು, ಪರಾತ್ಪರ ವಸ್ತುವಿನ ದರ್ಶನಕ್ಕಾಗಿ—ವಿಶ್ವದ ಮೂಲವನ್ನು ಹುಡುಕುವುದಕ್ಕಾಗಿ—ಜೀವಮಾನವೆಲ್ಲವನ್ನೂ ಸಲಿಸಿದನಂತರ, ತಮಗೊದಗಿದ ದಿವ್ಯಾನುಭೂತಿಗಳನ್ನೂ ಪರಮಾತ್ಮತತ್ತ್ವವನ್ನೂ ಜಗತ್ತಿಗಾಗಿ ಬಿಟ್ಟು ಹೋಗಿರುವ ತತ್ತ್ವಜ್ಞಾನಿಗಳು ಜಗತ್ತಿಗಾಗಿ ಅಲ್ಲವೆ? ಭಾವುಕರಾದ ಕವಿಪುಂಗವರೂ ಕಲಾವಿದರೂ ತಮ್ಮಲ್ಲಿ ಉಂಟಾದ ಸೌಂದರ್ಯಭಾವಗಳಿಗೆ ಪ್ರತಿರೂಪಕೊಟ್ಟು, ಆದರಿಂದ ಜೀವನ ಪ್ರವಾಹದಲ್ಲಿರುವ ಸಹೃದಯರಿಗೆ ಬ್ರಹ್ಮಾನಂದ ಸಹೋದರವಾದ ಸುಖಾನುಭವವನ್ನು ಕೊಡುವ ಕವಿಪುಂಗವರು ಜನತೆ-ಜಗತ್ತುಗಳಿಗಲ್ಲವೆ? ಕಲಾವಿದರು ಸಹ ಹಾಗೆಯೆ ಅಲ್ಲವೆ?

೮ನೆಯ ಪ್ರಶ್ನೆ

ಇವರಂತೆಯೆ ಧರ್ಮಸತ್ರಗಳನ್ನು ಇರಿಸುವವರು, ಸಾರ್ವಜನಿಕವಾದ ಕೆರೆ-ಬಾವಿಗಳನ್ನು ತೆಗೆಯಿಸಿದವರು, ದಾನ-ಧರ್ಮಗಳನ್ನು ಮಾಡುವವರು, ಯಜ್ಞಯಾಗಾದಿ ಶ್ರೌತಕರ್ಮ ಪರಾಯಣರು. ಇವರೆಲ್ಲರೂ ಪರೋಪಕಾರಿಗಳಲ್ಲವೆ? ಔಷಧಾಲಯ ವಿದ್ಯಾಲಯಾದಿಗಳನ್ನು ಕಟ್ಟಿಸಿ, ಜನತೆಗೆ ಸರ್ವತೋಮುಖವಾದ ಉಪಕಾರಗಳನ್ನು ಮಾಡುತ್ತಿರುವ ಉದಾರಿಗಳು ಪರೋಪಕಾರಿಗಳಲ್ಲವೇ? ಅವರಿರುವುದು ಜನತೆಗಾಗಿ ಅಲ್ಲವೇ?

ಇದೇ ಬಗೆಯಿಂದ ನೋಡುತ್ತಹೋದರೆ, ಜಗತ್ತಿನ ಪ್ರತಿಯೊಂದು ಪದಾರ್ಥವೂ, ಪ್ರಾಣಿಯೂ, ಮಾನವನೂ ಪರೋಪಕಾರಕ್ಕಾಗಿಯೆ ಇರುತ್ತಾರೆ. ಅದನ್ನೆ ಮಾಡಬೇಕು—ಅದನ್ನೆ ಮಾಡುತ್ತಾನೆ—ಎಂಬುದು ಕಾಣುವಂತಿದೆ. ಹೀಗಿರುವಾಗ 'ಯಾರಿಗೆ ಯಾರು?' ಎಂದು ಕೇಳಬಹುದೆ? ಒಂದುವೇಳೆ ಕೇಳಿದರೂ ಅದಕ್ಕೆ 'ಯಾರಿಗೆ ಯಾರೂ ಇಲ್ಲ; ತನಗೆ ತಾನೇ!' ಎಂಬ ಉತ್ತರವನ್ನು ಕೊಡಬಹುದೆ?— ಎಂದು ಅನೇಕರು ಕೇಳಬಹುದು. ಕೇಳಿದರೆ ಅದು ಅಸ್ವಾಭಾವಿಕವೂ ಎನಿಸದು.

ಮೇಲಿನ ಪ್ರಶ್ನೆಗಳ ಮೂಲವನ್ನು ಸಮೀಕ್ಷಣಮಾಡಿ ಅದರ ತಿರುಳನ್ನು ಹೊರಗೆಡಹುವುದಕ್ಕಿಂತ ಮುಂಚೆ, ಒಂದು ಸಾಮಾನ್ಯ ಸಿದ್ಧಾಂತವನ್ನು ತಿಳಿದುಕೊಳ್ಳಬೇಕಾಗುತ್ತದೆ. ಉತ್ತರಕ್ಕೆ ಈ ಸಿದ್ಧಾಂತವು ಅವಷ್ಟಂಭಕವಾಗಿರುತ್ತದೆ. ಪ್ರಾಣಿಯ— ಅದರಲ್ಲಿಯೂ ಮಾನವನ— ಸ್ವಭಾವವು ವಿಚಿತ್ರವೂ ಸಮಸ್ಯಾತ್ಮಕವೂ ಆಗಿರುತ್ತದೆ. ಮಾನವನು ಒಂದು ಅರೆಗಳಿಗೆ ಕೂಡ ಸುಮ್ಮಗೆ ಕುಳಿತಿರನು. ಅದಕ್ಕಾಗಿಯೆ ತಾಂತ್ರಿಕರು 'ಚೇಷ್ಟಾಶ್ರಯತ್ತ್ವ'ವೇ ಜೀವಿಯ ಲಕ್ಷಣವೆಂದು ಹೇಳಿದ್ದಾರೆ. ಅದನ್ನೇ ಗೀತಾಚಾರ್ಯರು 'ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಠತ್ಯಕರ್ಮಕೃತ್' ಎಂದು ಸುಂದರವಾದ ಮಾತಿನಿಂದ ತಿಳಿಯಾಗಿ ಹೇಳಿದ್ದಾರೆ. ಪ್ರಾಣಿಯು ಸ್ವಾಭಾವಿಕವಾಗಿಯೆ ಜಾಗೃತಾವಸ್ಥೆಯಲ್ಲಿ ಕಾರ್ಯೋನ್ಮುಖವಾಗಿರುತ್ತದೆ. ಮನಸ್ಸು ಯಾವಾಗಲೂ ಯಾವುದಾದರೊಂದು ವಿಷಯಗ್ರಾಹಿಯಾಗಿಯೆ ಇರುತ್ತದೆ. ಆದುದರಿಂದಲೆ ಮಾನವನ ಮನಸ್ಸು ಮಾಡುವ ಪರಾವಲಂಬನೆಗಳು— ವಿಷಯಸ್ಪರ್ಶನವು— ಕ್ರಿಯಾಸಾಮಾನ್ಯವು—ಆತ್ಮೋಪಯೋಗಿಯೂ ಸ್ವಾಭಾವಿಕವೂ ಆಗಿರುತ್ತವೆ. ನಿಸರ್ಗಸಿದ್ಧವಾದ ವಿಷಯವು ಅನಿವಾರ್ಯವಾಗಿಯೂ ಇರುತ್ತದೆಯೆಂಬುದು ಒಂದು ಸಿದ್ಧಾಂತವಾಗಿದೆ. ಈ ಸಿದ್ಧಾಂತವು ಮಾನವನಲ್ಲಿ ಜಾಗೃತವಾಗಿಯೂ ಸುಪ್ತವಾಗಿಯೂ ಇರುವುದೆಂಬುದು ಮುಂದಿನ ಬರೆವಣಿಗೆಯಿಂದ ಸ್ಪಷ್ಟವಾಗುವಂತಿದೆ. ಇನ್ನು ಹಿಂದೆ ಕೇಳಿರುವ ವ್ಯಾವಹಾರಿಕ ಪ್ರಶ್ನೆಗಳನ್ನು ಪಾರಮಾರ್ಥಿಕವಾಗಿ ವಿವೇಚಿಸುವ: ದು

೧. ತಂದೆ-ತಾಯಿಗಳ ವಿಚಾರ

ತಂದೆ-ತಾಯಿಗಳು ತಮ್ಮ ಯೌವನದಲ್ಲಿ ಉಂಟಾಗುವ ಅನಿವಾರ್ಯವಾದ ವಿಷಯವಾಸನೆಗೆ ಸಿಲುಕಿ, ಅನ್ಯೋನ್ಯ ಬೆರೆಯುತ್ತಾರೆ. ಅದರ ಫಲವಾಗಿ ಹೆಂಗುಸು ಗರ್ಭಧಾರಣಮಾಡುವುದು ನೈಸರ್ಗಿಕವಾಗಿರುತ್ತದೆ; ಅದರಿಂದ ಜನಿಸಿದ ಸಂತತಿಯನ್ನು— ತಮ್ಮ ಕರುಳಿನ ಭಾಗವಾದ ಮಗುವನ್ನು— ಆತ್ಮಸಂತೋಷಕ್ಕಾಗಿ ಹಾಲನುಣಿಸಿ ಪೊರೆಯುವಳು. ಮಗುವಿಗೇನಾದರೂ ಕಾಯಿಲೆ-ಕಸಾಲೆಗಳು ಬಂದರೆ ಮರುಗುವಳು, ನಿದ್ದೆಗೆಡುವಳು. ಒಂದುವೇಳೆ ಮಗು ತೀರಿಹೋದರೆ ತಂದೆ-ತಾಯಂದಿರು ದುಃಖದಿಂದ ಮರುಗಿ ಸೊರಗುವರು. ಇವೆಲ್ಲ ವಿಕಾರಗಳು ತಂದೆ-ತಾಯಂದಿರಿಗೆ ಉಂಟಾಗುವವು. ಇವೆಲ್ಲವೂ ಮಗುವಿಗಾಗಿ ಎಂದು ಹೇಳುವುದಾದರೆ, ಸಾಯುವ ಮಗುವಿಗೆ

ಇವರು ಏಕೆ ಅಳಬೇಕು ? ಮಕ್ಕಳಾಗದಿದ್ದರೆ ವ್ರತ-ದೇವಪೂಜೆ-ಅಶತ್ಥಪ್ರದಕ್ಷಿಣೆ ಮೊದಲಾದುವುಗಳನ್ನು ಏಕೆ ಆಚರಿಸಬೇಕು ? ತಮ್ಮ ಮನಸ್ಸಿನ ತೃಪ್ತಿಗಾಗಿ— ಆತ್ಮಸಂತೋಷಕ್ಕಾಗಿ— ತಾನಿರುವವರೆಗೂ ಸುಖವಾಗಿ ಬದುಕುವ ಆಶೆ, ಪುತ್ರವಂತರೆಂದು ಹೇಳಿಸಿಕೊಳ್ಳುವ ಬಯಕೆ ; ಮುಂದೆ ಮಗ-ಸೊಸೆಯರು ಸುಖವಾಗಿ ಬಾಳುವುದನ್ನು ನೋಡುವ ಆಶೆ, ಮಕ್ಕಳು ತುಂಬ ಕೀರ್ತಿವಂತರಾಗಿ ಬದುಕಿದುದನ್ನು ನೋಡಬೇಕು— ಅವರು ಸಾಕಷ್ಟು ಐಶ್ವರ್ಯವಂತರಾಗಿ, ಮುಪ್ಪಿನ ಕಾಲದಲ್ಲಿ ಯಾವ ತೊಂದರೆಯೂ ಬಾರದಂತೆ ತಮ್ಮನ್ನು ಸೇವಿಸುವರು— ಎಂಬ ತಿಳಿವಳಿಕೆಯಿಂದ ಇದನ್ನೆಲ್ಲ ಮಾಡುತ್ತಾರೆ. ಅಲ್ಲದೆ ಮಕ್ಕಳು ತಮಗೆ ವಿರೋಧಿಗಳಾಗಿ ನಡೆದರೆ ಇದೇ ತಂದೆ-ತಾಯದಿರೇ ಅವರನ್ನು ದ್ವೇಷಿಸುತ್ತಾರೆ. ಎಷ್ಟೋ ವೇಳೆ ಅವರು, ತಮ್ಮ ಮಕ್ಕಳನ್ನೇ ಮಕ್ಕಳೆಂದು ಹೇಳಿಕೊಳುವುದಕ್ಕೂ ಹಿಂಜರಿಯುತ್ತಾರೆ. ಇಂತಿರುವ ತಂದೆ-ತಾಯಿಗಳು ತಮಗಾಗಿಯೆಂದೆ ಇರುವರಲ್ಲದೆ, ಮಕ್ಕಳಿಗಾಗಿ ಇರುವರೆಂದರೆ ಅದು ಸರಿಯೆನಿಸದು. ಎಲ್ಲವೂ ಆತ್ಮಸುಖಕ್ಕೆ.

ಮೇಲಿನ ವಿಷಯವನ್ನು ತಿಳಿದುಕೊಂಡ ಯಾವ ಮಕ್ಕಳೂ ತಂದೆ-ತಾಯಿಗಳಿಗಾಗಿ ಇರುವುದಿಲ್ಲ. ಯಾರಾದರೂ ಒಬ್ಬಿಬ್ಬರು ಇದ್ದರೆ ವಿಷಯಮೂಲವನ್ನು ತಿಳಿಯದವರಿರಬೇಕು. ಸಾಮಾನ್ಯವಾಗಿ ತಂದೆ-ತಾಯಂದಿರಲ್ಲಿ ಕೆಲಸಮಾಡುವ ಶಕ್ತಿಯಿರುವವರೆಗೆ ಅವರು ಗೌರವಾರ್ಹರಿರುತ್ತಾರೆ. ಅಶಕ್ತರಾಗಿ ಮೂಲೆ ಹಿಡಿದುಬಿದ್ದರೆ ಮಗನಿಗೂ ಬೇಡ, ಸೊಸೆಗೂ ಬೇಡ. ಇಂತಿರುವಲ್ಲಿ ತಂದೆ-ತಾಯಿಗಳಾಗಿದ್ದವರ ಅನುಭವವು ವೈರಿಗಳಿಗೂ ಬೇಡ— ಎಂದೆನಿಸುತ್ತದೆ. ಈ ಬಗೆಯ ದೃಶ್ಯ ನಮಗೆ ಎಲ್ಲೆಲ್ಲಿಯೂ ಕಾಣುತಿರುವಾಗ ತಂದೆ-ತಾಯಿಗಳಾರು ? ಮಕ್ಕಳಾರು ?

೨. ದಂಪತಿಗಳು

ಗಂಡ-ಹೆಂದಿರು ಕೂಡ ಪರಸ್ಪರರ ಸುಖಕ್ಕಾಗಿ ಪರಸ್ಪರರು ಆಶ್ರಯಿಸಿರುವರಲ್ಲದೆ ಅದರಲ್ಲಿ ವಿಶೇಷವೇನೂ ಇಲ್ಲ. ವಯಃಪ್ರಮಾಣವು ಸುಮಾರಾಗಿ ಏರುವುದರೊಳಗೆ ಲಗ್ನವೆಂಬ ಬಂಧನವು ಅನಿವಾರ್ಯ(?)ವಾದ— ಬಿಡಿಸಲಾರದ—ಕಟ್ಟಾಗಿ ನಿಲ್ಲುತ್ತದೆ. ಸಮಾಜನೀತಿಗಳ ಭೀತಿಯು ಅತ್ತಿತ್ತ ಸರಿಯಗೊಡುವುದಿಲ್ಲ. ಸಾಲದುದಕ್ಕೆ ಯೌವನದ ವಿಷಯಲಾಲಸೆ ಬೇರೆ. ಅದರ ತೃಪ್ತಿಗಾಗಿ, ಅನ್ಯೋನ್ಯಸಂಗಮದ ಪಾಪವು ಪ್ರಾಯಶ್ಚಿತ್ತವಿಲ್ಲದ್ದಾಗಿ ಮೊದಲಿನ ಕಟ್ಟನ್ನು ಮತ್ತಷ್ಟು ಬಲಪಡಿಸುತ್ತದೆ. ಅಲ್ಲಿಂದ ಪ್ರಾರಂಭವಾದ ಬಂಧನದ ಸುತ್ತುಗಳು ಹೆಚ್ಚುತ್ತ ಹೋಗಿ, ಸಂಸಾರವೆಂಬ ಸಾವಿರ ಸುತ್ತಿನ ಬ್ರಹ್ಮಗಂಟಾಗುಳಿಯುವುದು. ಈ ಕತ್ತಲೆಯಲ್ಲಿ ಕಣ್ಣುಕಾಣದವರಾಗಿ, ಅದೇ ಸುಖವೆಂದು ತಿಳಿದು ವ್ಯವಹರಿಸುತ್ತಿರುತ್ತಾರೆ. ಪ್ರಕೃತಿನಿಯಮದಂತೆ ಸಂತತಿಪ್ರವಾಹವು ಹರಿಯುತ್ತದೆ. ಈ ದಾಂಪತ್ಯದಲ್ಲಿ ಸುಖಕ್ಕೆ ಕೊರತೆಬಂದರೆ, ಕೂಡಲೆ ಮೋಡ-ಗುಡುಗು-ಸಿಡಿಲುಗಳೇಳುವುವು. ಕೆಲವು ಸಲ ಗಂಡನೆ ಬೇರೆ— ಹೆಂಡತಿಯೆ ಬೇರೆ ಆಗುತ್ತಾರೆ. ಇನ್ನು ಮಾನ-ಮರ್ಯಾದೆ(?)-ಗಳೆಂಬ ಹೊದಿಕೆಯೊಳಗಿರುವವರು, ಕೂಡಿ ಇದ್ದರೂ ನಿತ್ಯ-ಕಲಹದ ನರಕದಲ್ಲಿ ಇರುತ್ತಾರೆ. ಈ ವೇದನೆಯು, ಸಮಾಜ-ನಿಂದೆಯ ಬಾಧೆಯ ಸಾವಿರದಲ್ಲಿ ಒಂದಂಶವೆಂದು ತಿಳಿದು ಇವರು ಸುಮ್ಮಗೆ ಅನುಭವಿಸುತ್ತಿರುತ್ತಾರೆ. ಇವರಲ್ಲಿ ಯಾರಾದರೊಬ್ಬರು ಮೃತಿಹೊಂದಿದರೆ, ಉಳಿದವರು ಮುಂದೆ ತಮ್ಮ ಗತಿಯೇನೆಂದು ಅಳುತ್ತಾರಲ್ಲದೆ ನಿನ್ನ ಗತಿಯೇನೆಂದು ಅಳುವ ಮಹನೀಯರನ್ನು ಎಲ್ಲಿಯೂ ಯಾರೂ ಕಾಣಲಾರರು. ಹೀಗಿರುವಾಗ ಗಂಡ ಗಂಡನೆ— ಹೆಂಡತಿ ಹೆಂಡತಿಯೆ ? ಎಲ್ಲಿಯ ಗಂಡ, ಎಲ್ಲಿಯ ಹೆಂಡತಿ ? ಎಲ್ಲವೂ ಬರುಮಾತು ! ಇವರಂತೆಯೆ ಮಿಕ್ಕ ಬಂಧು-ಬಳಗದವರು ಕೂಡ.

೩. ಸ್ನೇಹಿತರು

ಬಾಲ್ಯದಲ್ಲಿ ಒಬ್ಬರಿಗೊಬ್ಬರು ಕೊಡುವ ತಿಂಡಿಯ ಆಶೆಗಾಗಿ ಆಟದ ಹುಚ್ಚಿಗಾಗಿ ವಿದ್ಯಾರ್ಥಿದಶೆಯಲ್ಲಿ ಸ್ನೇಹ ತಲೆದೋರುವುದು— ಬಡವನಾದ ಬುದ್ಧಿವಂತ ಹುಡುಗ ಮತ್ತು ದಡ್ಡನಾದ ಶ್ರೀಮಂತ ಹುಡುಗ ಇವರಲ್ಲಿ. ಒಬ್ಬನಿಗೆ ಹಣದ ನೆರವು ಬೇಕು ; ಇನ್ನೊಬ್ಬನಿಗೆ ಬುದ್ಧಿಯ ನೆರವು ಬೇಕು. ಇದಕ್ಕೀಗ ಪ್ರೀತಿ, ಸ್ನೇಹ, ಸಹಕಾರ, ಉಪಕಾರ, ಮೊದಲಾದ ಹೆಸರುಗಳ ಮಂಕುಬೂದಿಯನ್ನು ಬಳಸಲಾಗುತ್ತದೆ. ಯುವಕರು ಯಾವುದಾದರೊಂದು ಕಾರ್ಯದಕ್ಷತೆ, ಸಂಪಾದನೆಯ ಹಾದಿ ಮೊದಲಾದುವುಗಳಿಂದ ಸ್ನೇಹಗಳಿಸುತ್ತಾರೆ. ಮುದುಕರು ಹೊತ್ತುಗಳೆಯುವ ಹರಟೆಗಳಿಗಾಗಿ ಗೆಳೆಯರನ್ನು ಬಯಸುವರು. ಇನ್ನೂ ಕೆಲವು ಬಿಚ್ಚಿ ಹೇಳಲಾಗದ ಆಂತರಿಕ ಕಾರಣಗಳಿರುವುವಾದರೂ ಅವೆಲ್ಲ ಆತ್ಮತೃಪ್ತಿಯ ಉದ್ದೇಶ ಸಾಧನೆಯವೇ ಇರುತ್ತವೆ-ಯೆಂಬುದನ್ನು ಮರೆಯಲಾಗದು.

೪. ರಾಜ-ಪ್ರಜೆಗಳು

ಇವರು ಕೂಡ ಸ್ವಂತ ಸುಖಕ್ಕಾಗಿಯೆ ಹೆಣಗಾಡುವರು. ಕುಳಿತು ತಿಂದು ದರ್ಪ ನಡೆಯಿಸುವ ರಾಜರು, ಜನರಿಂದ ಹೊಗಳಿಸಿಕೊಳ್ಳಲು ನಾನಾವಿಧವಾದ ಧಾರ್ಮಿಕವೃತ್ತಿಯನ್ನು ಅವಲಂಬಿಸುತ್ತಾರೆ. ತಮ್ಮ ಸುಖ-ಸುಪ್ಪತ್ತಿಗೆಯು ನಿಷ್ಕಂಟಕವಾಗಿರಲೆಂಬ ಆಶೆಯಿಂದ ನೀತಿಯ ಕವಚವನ್ನು ಹಾಕಿ ಮೆರೆಯುತ್ತಾರೆ. ‘ ಪ್ರಜಾನುರಕ್ತ ’ ‘ ಪರೋಪಕಾರಿ ’ ಮೊದಲಾದ ಬಿರುದುಗಳೆಲ್ಲವೂ ಪ್ರಜಾವಂಚಕ ಸಮ್ಮೋಹನಾಸ್ತ್ರಗಳಲ್ಲದೆ ಮತ್ತೇನು ? ಇದಲ್ಲದಿದ್ದರೆ ಯಾವ ರಾಜರು (ರಾಜ್ಯಾಧಿಕಾರಿಗಳು) ಪ್ರಜೆಗಳ ಜೀವನದಂತೆ ತಮ್ಮ ಜೀವನವನ್ನು— ಆಡಂಬರವಿಲ್ಲದ ಸರಳ ಜೀವನವನ್ನು—ನಡೆಯಿಸುತ್ತಿದ್ದಾರೆ ? ನಡೆಯಿಸಲು ಸಿದ್ಧರಿದ್ದಾರೆ ? ಹೀಗೆ ರಾಜರು

ತಮಗಾಗಿಯೆ ವೇಷ ಧರಿಸಿ, ತಮಗಾಗಿಯೆ ಕುಣಿಯುತ್ತಿರುವರಲ್ಲದೆ ಬೇರೆಯವರಿಗಾಗಿ ಅಲ್ಲ. ಪ್ರಜೆಗಳದಾದರೂ ಇದೇ ಪಾಡು. ನಿರ್ವೀರ್ಯರಾಗಿ ಅಜ್ಞಾನಾಂಧಕಾರದಲ್ಲಿ ಮುಳುಗಿದ ಪ್ರಜೆಗಳು, ತಾವು ಬೆವರು ಸುರಿಸಿ ದುಡಿದ—ಅರೆಹೊಟ್ಟೆಗೆ ಸಾಲದಷ್ಟನ್ನು ದೊರಕಿಸಿದ್ದರೂ – ಪದಾರ್ಥಗಳನ್ನು ಕಂಟಕವಿಲ್ಲದೆ ತಿನ್ನಬಲ್ಲ ಧೈರ್ಯವಿರದೆ ನರಳುತ್ತಿರುತ್ತಾರೆ. 'ಎರಡನೆಯವರಾರಾದರೂ ಕದ್ದುಕೊಂಡು ಹೋದರೇನು ಗತಿ ?' ಎಂದು ಭಯಗ್ರಸ್ತರಾಗಿರುವರು. ಇಂತಹರನ್ನು ಮೋಹಗೊಳಿಸಲು ಹಿಂದೆ ಹೇಳಿದ ರಾಜರುಗಳ ನಾಟಕದ ಕಪಟವಾಣಿಯು ಸಾಕಷ್ಟು ಸಮರ್ಥವಾಗಿರುತ್ತದೆ. 'ಇದ್ದುದನ್ನಾದರೂ ಭಯವಿಲ್ಲದೆ ತಿನ್ನುವ' ಎಂಬ ಭಾವನೆಯಿಂದ ಷಷ್ಠಾಂಶ, ಚತುರ್ಥಾಂಶ, ಅರ್ಧಾಂಶ—ಹೀಗೆ ಹೇಳಿದಷ್ಟು ಪ್ರಜೆಗಳು ಕೊಡುತ್ತಾರೆ....ರಾಜರಿಗೆ ಕಪ್ಪಕಾಣಿಕೆಗಳನ್ನು. ಇದನ್ನವರು ಕೊಡದೆ ಹೋದರೆ, ರಾಜ ಮೂರು ದಿನಗಳಲ್ಲಿಯೆ ತನ್ನ ಕೆಲಸದಿಂದ ನಿವೃತ್ತಿಪಡೆದು ಹೊರಡುತ್ತಾನೆ. ಭಿಕ್ಷುಕರಿಗೂ ಬಡವರಿಗೂ ರಾಜರ ಆವಶ್ಯಕತೆಯೆ ಇರುವುದಿಲ್ಲ. ಪದಾರ್ಥವಿಲ್ಲದವನಿಗೆ ರಕ್ಷಣೆಯ ಹೊಣೆಗಾರಿಕೆಯಿರಲು ಸಾಧ್ಯವಿಲ್ಲ. ಕಾರಣ ರಾಜರಿಗೆ ಕೊಡುವ ಕಪ್ಪವು ನಾಟಕದ ಮಾತಾಗಿದ್ದು, ವಸ್ತುಸ್ಥಿತಿಯು ಲಂಚವಾಗಿರುತ್ತದೆ.

೫. ಯುದ್ಧ-ಮಹಾಯುದ್ಧಗಳು

ಇಂದು ಪ್ರಪಂಚವನ್ನೆಲ್ಲ ಆವರಿಸಿಕೊಂಡು ಹಾಹಾಕಾರ ಮಾಡುತ್ತಿರುವ ಮಹಾಯುದ್ಧವು ಕೇವಲ ಸ್ವಾರ್ಥಕ್ಕೆ. ಎಲ್ಲ ರಾಷ್ಟ್ರದವರೂ 'ಜಗತ್ತಿನ ಶಾಂತಿಗೆ' ಎಂದು ಕಿರುಚುತ್ತಿದ್ದರೂ ವಸ್ತುಸ್ಥಿತಿಯು ಸ್ವಾರ್ಥದ ಮೇಲೆಯೆ ನಿಂತುಕೊಂಡಿದೆ. ತಾವು ಸುಖವಾಗಿರಬೇಕು! ತಮ್ಮ ರಾಷ್ಟ್ರ, ತಮ್ಮ ದೇಶ, ತಮ್ಮ ಪ್ರಾಂತ, ತಮ್ಮ ಗ್ರಾಮ, ತಮ್ಮ ಮನೆಮಾರು, ತನ್ನ ಹೆಂಡಿರು ಮಕ್ಕಳು— ಕೊನೆಗೆ ತಾನು ಹೀಗೆ ಒಳಗೊಳಗೆ ಸ್ವಾರ್ಥವು ತುಂಬಿ ಕೆಲಸ ಮಾಡುತ್ತದೆ. ಜಗತ್ತಿನಲ್ಲಿ ತನ್ನ—ತನ್ನವರ ಚಕ್ರಾಧಿಪತ್ಯ ಬೆಳೆಯಿಸಬೇಕೆಂದು—ಇತಿಹಾಸದ ಪುಟಗಳಲ್ಲಿ ತಮ್ಮ ಆಧಿಪತ್ಯದ— ವ್ಯಕ್ತಿಗಳ ಹೆಸರುಗಳು ಶಾಶ್ವತವಾಗಿರಬೇಕೆಂದು ಯುದ್ಧ ಮಾಡುತ್ತಿದ್ದಾರೆಯೆ ಹೊರತು, ಬೇರೆಯವರ ಸುಖಕ್ಕಾಗಿಯೆಂದು ಇಂದಿನ ಈ ಘೋರ ನರಕಯಾತನೆಯು ನಡೆಯುತ್ತಿಲ್ಲ.

೬. ಭಾರತ ಸ್ವಾತಂತ್ರ್ಯ ವಿಚಾರ

ರಾಷ್ಟ್ರಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿರುವವರ ಕುಣಿದಾಟವು, ನಮಗೆ–ಸಾಧಾರಣವಾಗಿ–ಪರಹಿತಕ್ಕೆಂದು ಕಂಡರೂ, ಅದರಲ್ಲಿ ಕೂಡ ಸ್ವಾರ್ಥವು ಅಡಗಿಕೊಂಡಿರದೆ ಇಲ್ಲ. ತಮ್ಮ ರಾಷ್ಟ್ರವು ಸುಖವಾಗಿರಬೇಕೆಂಬ ಇಚ್ಛೆಯೂ ಒಂದು ವಿಧವಾದ ಸ್ವಾರ್ಥವೆಂದೇ ಹೇಳಿಸಿಕೊಳ್ಳುತ್ತದೆ. ತನಗೆ—ತನ್ನವರಿಗೆ ಮೊದಲಾದ ಮಾತು ಬಂದೊಡನೆ, ಅಲ್ಲಿ ಸ್ವಾರ್ಥವಿದ್ದೇ ಇರುವುದು. ಇದು ಅಹಂಕಾರಮೂಲಕವೆಂದು ಹೇಳುತ್ತಾರೆ. ಇವರಲ್ಲಿಯ ಕೆಲವರ ಸ್ವಾರ್ಥ ಬಹಿರಂಗವಾದುದಿರುತ್ತದೆ; ಇನ್ನು ಕೆಲವರದು ಅಂತರಿಕವಾದುದಿರುತ್ತದೆ. ಚುನಾವಣೆಗಳಲ್ಲಿ ನಿಂತು ಜನಮೆಚ್ಚಿಕೆಯನ್ನು ಪಡೆಯಲಾಶಿಸುವುದು ಒಂದು ಸ್ವಾರ್ಥ. ಇನ್ನೊಂದು, ಪ್ರಸಂಗ ಬಂದಾಗ ಹೊರಬೀಳುವ ಸ್ವಾರ್ಥ. ಸುಭಾಷಬಾಬುವಿನ ಪ್ರಕರಣದಲ್ಲಿ ಗಾಂಧಿಜಿಯವರು 'ಸೋಲು ಪಟೇಲರಿಗಲ್ಲ, ನನಗೆ!' ಎಂದುದು ಒಂದು ವಿಧವಾಗಿಯೂ, ಇಂದಿನ ರಾಜಗೋಪಾಲಾಚಾರ್ಯರ ಪಾಕಿಸ್ತಾನ್ ದ್ರಾವಿಡಸ್ತಾನ್‌ಗಳ ವಾದವು ಇನ್ನೊಂದು ವಿಧವಾಗಿಯೂ ನಮಗೆ ಕಾಣುವುವು.

೭. ತತ್ತ್ವಜ್ಞಾನಿ-ಕವಿ-ಕಲಾವಿದರು

ತತ್ತ್ವಜ್ಞಾನಿಗಳಿಗೆ ಜೀವನದ ವಿಪರೀತವಾದ ಆಚರಣೆ, ಜಗತ್ತಿನ ಸಮಸ್ಯೆ, ವಿಶ್ವಸೃಷ್ಟಿಗಳಲ್ಲಿರುವ ವಿಷಮತೆ, ಗಹನತೆ, ಸೂಕ್ಷ್ಮತೆ— ಇವುಗಳನ್ನು ಕಾಣುವ ಆತುರವುಂಟಾಗುತ್ತದೆ. ಅದನ್ನು ಭೇದಿಸಿ ಶೋಧಿಸಲು ಯತ್ನಮಾಡುತ್ತ ಅವರು ಕೊನೆಗೊಂದು ತೀರ್ಮಾನಕ್ಕೆ ಬರುತ್ತಾರೆ. ಅದರಿಂದ ಶಾಂತರಾಗಿ, ಜೀವನವನ್ನು ಸರಿಮಾಡುವ ಮೋಹದಿಂದ ಅಥವಾ ಲವಲವಿಕೆಯಿಂದ—ಆತ್ಮತೃಪ್ತಿಗಾಗಿ—ಗ್ರಂಥರಚನೆ, ಪ್ರಚಾರ, ಪ್ರವಚನಗಳನ್ನು ಮಾಡುತ್ತಾರೆ. ಇವೆಲ್ಲವೂ ಸ್ವಂತದ ತೃಪ್ತಿಗಾಗಿರುವುದಲ್ಲದೆ ಇನ್ನಾವುದಕ್ಕೂ ಅಲ್ಲ. ಆತ್ಮತೃಪ್ತಿಗಿಂತ ಶ್ರೇಷ್ಠವಾದುದು ಜಗತ್ತಿನಲ್ಲಿ ಇನ್ನಾವುದೂ ಇಲ್ಲ. ಆದರೆ ಇದೂ ಒಂದು ಬಗೆಯ ಸ್ವಾರ್ಥವೆ ಎನಿಸುವುದು.

ಇದರಂತೆಯೆ ಕವಿಗಳ ಕಲಾವಿದರ ರೀತಿಯಿರುತ್ತದೆ. ಭಾವುಕರಿಗೆ ಒಂದು ವಿಧವಾದ ಅನುಭವವುಂಟಾಗುತ್ತದೆ. ಅನುಭವವನ್ನು ಪ್ರತ್ಯೇಕಿಸಿ, ಅದಕ್ಕೊಂದು ರೂಪವನ್ನು ಕೊಟ್ಟು ಜನತೆಯ ಮುಂದೆ ಇರಿಸದಿದ್ದರೆ ಅವರ ಮನಸ್ಸಿಗೆ ನೆಮ್ಮದಿಯಿರುವುದಿಲ್ಲ. ಒಂದೊಂದು ಸಲ ಹುಚ್ಚೂ ಹಿಡಿವುದುಂಟು. ಆದುದರಿಂದ ತಮ್ಮ ಬಾಳು ಸುಖವಾಗಿರಲಿ— ನೆಮ್ಮದಿಯಾಗಿರಲಿ— ಎಂಬ ಆಶೆಯಿಂದ ಕೆಲವು ವೇಳೆ, ಸ್ವಾಭಾವಿಕವಾಗಿಯೂ ಅಜ್ಞಾತಸ್ವಾರ್ಥದಿಂದಲೂ ಇನ್ನು ಕೆಲವು ವೇಳೆ— ಇವರ ಕೃತಿಗಳು ಬೆಳಕಿಗೆ ಬರುತ್ತವೆ. ಇವು ಪರರಿಗಾಗಿ ಇವೆಯೆಂದು ಹೇಳಿದರೆ ಅದೊಂದು ಅಲಂಕಾರವಾಗಬಹುದಲ್ಲದೆ ನಿಜವಿರುವುದಿಲ್ಲ.

ಇದರಂತೆಯೆ ಇವರ ಕೃತಿಗಳನ್ನು ಓದುವವರಾಗಲಿ, ತತ್ತ್ವಜ್ಞಾನಿಗಳ ಮತಾವಲಂಬಿಗಳಾಗಲಿ, ಓದುವುದು— ಅನುಸರಿಸುವುದು— ತಮ್ಮ ಸುಖ-ಸಂತೋಷಗಳಿಗಲ್ಲದೆ ಎಂದೋ ಗತಿಸಿದ ಕವಿ-ತತ್ವಜ್ಞಾನಿಗಳಿಗಾಗಿ ಅಲ್ಲ.

೮. ಧಾರ್ಮಿಕ ಪುರುಷರು

ಹಿಂದೆ-ಇಂದು-ಮುಂದೆ ಆಗಿಹೋಗುತ್ತಿರುವ ಧಾರ್ಮಿಕ ಪುರುಷರ ರೀತಿ ಕೂಡ ಎಲ್ಲರಂತೆಯೆ ಇದೆ. ಇಂದು ಕೆರೆ-ಬಾವಿ

(೬೫ನೆಯ ಪುಟ ನೋಡಿ)

ಸೌಂದರ್ಯಬೋಧಿ

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

★

ಬುವಿಯಿಂ ಬಾನ್ ಆವಿರ್ಭವಿಪಾ ಎಡೆ,
ನೋಡದೊ, ಕಾಣಗೊ ಮೂಡಲಿನಾ ಕಡೆ!
ತೇಲುತ ಈಸುತ ಮೇಲ್‌ಮೇಲೆರುತ,
ಸುಣ್ಣಗೆ ತಣ್ಣಗೆ ಕಣ್ಣಿಗೆ ಸೊಗಸುತ,
ಉಪ್ಪವಿಸಿದೆ ಜೊನ್ನದ ಕುಂಭಿ

ಬೀಸಿದೆ ತಣ್ಣೆಲರ್ ;
ಉಡುಗಣದ ಮಲರ್
ಈಡಾಡಿದೆ ನೀಲಿಯ ಮೆಲ್ವಾಸೊಳು ;
ಮೆಲ್ಲುಲಿದಿದೆ ತಳಿರ್,
ಗೆಜ್ಜೆಯ ಘಲಿರ್-ಘಲಿರ್
ನವಶಿಶುಮೋಹದ ಮೃದುಜಲ್ಪದ ವೊಲು;
ಖಗರುತಿ ಇಲ್ಲಂ,
ಮೌನವೆ ಎಲ್ಲಂ ;
ಅನುಭವ ಭೋಗದ ಮದಿರಾಮತ್ತಂ—
ವಿಶ್ವದ ಚಿತ್ತಂ !

ಮುನ್ನಡೆಯದೆ ನಿಲ್,
ಎತ್ತದಿರೈ ಸೊಲ್ ;
ಅನುಭವದನುಸಂಧಾನವೆ ಬಾಳ್-ಗೆಲ್!
ಅದೊ ಪ್ರೇಮದ ಕಳೆ,
ನಗೆಜೊನ್ನದೊಳಳೆ
ತೋಯಿಸಿದೆ ;
ಮಾಯಿಸಿದೆ !

ಮೇಣಿಲ್ಲಿಯೆ ಇದೆ ಸೌಂದರ ಬೋಧಿ :
ನಿಲ್ವಾಗಲಿ ಭಾವಸಮಾಧಿ !

ಸಮರ

ಶ್ರೀ. ನ.ಕೃ. ಕುಲಕರ್ಣಿ, ಧಾರವಾಡ

★

೧

ಕ್ಷಣವೊಂದರಲ್ಲಿ ವೈರದ ರೊಚ್ಚು ಕಿಚ್ಚಾಗಿ,
ರಣಕಹಳೆ ಊದುತಿರೆ ಪ್ರಜ್ವಲಿಸಿ ಜ್ವಾಲೆಗಳ
ಚಾಚುತಿದೆ ; ಹುಚ್ಚೆದ್ದು ದೇಶ-ದೇಶವನೆಲ್ಲ
ದಹಿಸುತ್ತೆ ಪ್ರಳಯಕಾಲದ ನೆನಹ ತರುತಿಹುದು;
ಭೂಮಿ ಬಾಯ್‌ಬಿರಿವಂತೆ ಸಿಡಿಮದ್ದು-ಗುಂಡುಗಳ
ಗುಡುಗು, ಬಾನ್‌ದಳವನ್ನು ಭೇದಿಸುತೆ ಹೃದಯ ಕಂ-
ಪಿಸುವಂತೆ ಘೋರತರ ಮಾರ್ದನಿಯು ಗೈಯುತಿದೆ.

೨

ಸಂಸಾರ ಹಂಸಗಳು ವಿಹರಿಸುವ ಸಿರಿಭೂಮಿ
ಮೃತ್ಯುನೃತ್ಯಕೆ ರಂಗಹೊಯ್ಯುತಿದೆ; ಮಡದಿ ಮ-
ಕ್ಕಳನಗಲಿ ಮಡಿದ ದೇಹಗಳೆಷ್ಟೊ ನೆತ್ತರಿನ
ಮಡುಗಳನು ಕಟ್ಟುತಿವೆ; ಪಟ್ಟಣದ ಜೀವಿಗಳು
ಚೀತರಿಸಿ ಚೀತ್ಕರಿಸಿ ದಿಕ್ಕೆಟ್ಟು ಧಾವಿಸುತ
ಸಾಗುತಿವೆ; ಕಂಗೆಟ್ಟ ಸೇನಾಳಿ ದೆಸೆ-ದೆಸೆಗೆ—

೩

ನುಗ್ಗುತಲಿ ರಾಜಿಸುವ ರಾಷ್ಟ್ರಗಳ ಧರ್ಮ-ಕುಲ-
ಕಲೆಗಳನು ಕೀರ್ತಿ-ಸಂಸ್ಕೃತಿಯನ್ನು ಹಿರಿದು ಹಾಳ್-
ಗೆಡಿಸುತಿವೆ; ರಮ್ಯಹರ್ಮ್ಯಗಳೆನಿತೊ ಪುಡಿಯಾಗಿ
ಹಾರುತಿವೆ; ದಿವ್ಯ ಮಂದಿರ-ಮಠಗಳುರಿಯಲ್ಲಿ
ಮುರಿಬಿದ್ದು ಮರಳಿ ಮಣ್‌ಗೂಡುತಲಿ ಮಾಯವಾ-
ಗುತಲಿಹವು; ವಿಜ್ಞಾನಯುಗವಿಂದು 'ನಾಶವೇ
ಗುರಿ!' ಎಂದು ತಲೆಯೆತ್ತಿ ಸಾರುತ್ತ ನಿಂದಿಹುದು.

ಅವನು ತಂದೆಯಷ್ಟೇ ಉತ್ಸಾಹಶಾಲಿಯಾಗಿದ್ದಾನೆ

— ಅವರಿಬ್ಬರ ಸಾಹಸಕ್ಕೆ ಕೊನೆಯೇ ಇಲ್ಲ!

ನಿಜವಾಗಿಯೂ ಅವರಿಬ್ಬರೂ ಒಳ್ಳೆಯ ಜೋಡಿಯಾಗಿದ್ದಾರೆ! ನಿಜವಾಗಿಯೂ ಅವರಿಬ್ಬರೂ ಉತ್ಸಾಹಶಾಲಿಯರಾಗಿದ್ದಾರೆ! ಅವರಿಗೆ ಕೊಡುವ ಆಹಾರವು ಕಡಿಮೆಯಾದ ಚೇತನವನ್ನು ಪುನಃ ಪೂರ್ಣವಾಗಿ ಉಂಟುಮಾಡಲು ತಾಯಿ ಖಾತ್ರಿ ಮಾಡುತ್ತಾಳೆ — ವಿಟೆಮಿನ್‌ನಿಂದ ಕೂಡಿದ ಪೋಷಣ ಶಕ್ತಿಯುಳ್ಳ ಡಾಲ್ಡದಿಂದಲೇ ತಯಾರಿಸಿದ ರುಚಿಕರವಾದ ಆಹಾರವನ್ನು ಆಕೆ ಅವರಿಗೆ ಕೊಡುತ್ತಾಳೆ. ಶಕ್ತಿಕುಂದಿ ಆರೋಗ್ಯವು ಕೆಡಿಸಿಹೋಗುವ ಅಪಾಯವು ಅವರಿಗೆ ಎಂದೂ ಬಾರದು, ಏಕೆಂದರೆ, ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟೆಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ಚೇತನಕ್ಕಾಗಿ — ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ. ಡಾಲ್ಡ ಆಹಾರಕ್ಕೆ ಹೆಚ್ಚು ರುಚಿಯನ್ನು ಕೂಡ ಕೊಡುತ್ತದೆ.

ಡಾಲ್ಡ ತನ್ನಲ್ಲಿರುವ ವಿಟೆಮಿನ್ ಮೂಲಕ ದೇಹಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯಮಾಡುತ್ತದೆ . . . ವಿಟೆಮಿನ್‌ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಎಲ್ಲಾ ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ ವಿಟೆಮಿನ್ ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.

ವಿಟೆಮಿನ್‌ದಿಂದ ಕೂಡಿದ **ಡಾಲ್ಡ** ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಡುತ್ತದೆ — ಸೀಲು ಮಾಡಿದ ಡಬ್ಬಗಳಲ್ಲಿ ಮಾತ್ರ ಮಾರಲ್ಪಡುತ್ತದೆ



HVM. 22-183 KN

THE HINDUSTAN VANASPATI MANUFACTURING CO., LTD., BOMBAY

ಕಣ್ಣು (ಲಘು ಪ್ರಬಂಧ)

ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ

ವಿಚಿತ್ರ ವಸ್ತುಗಳಿಂದ ತುಂಬಿದ ಈ ಸೃಷ್ಟಿಯಲ್ಲಿ ಮಾನವ ದೇಹವು ಬಹಳ ವಿಚಿತ್ರವಾದದ್ದು. ಮಾನವದೇಹದಲ್ಲಿಯ ವಿಚಿತ್ರವಾದ ಅವಯವಗಳಲ್ಲಿ ಕಣ್ಣಿನಷ್ಟು ವಿಚಿತ್ರವಾದದ್ದು ಯಾವುದೂ ಇಲ್ಲ—ಉಪಯುಕ್ತವಾದುದೂ ಯಾವುದೂ ಇಲ್ಲ. ಪ್ರತಿಯೊಂದು ವಸ್ತುವು ಯಥಾಸ್ಥಿತವಾಗಿ ಇದ್ದಾಗ, ಅದರ ಮಹತ್ತ್ವವೂ ಹಿರಿಮೆಯೂ ಗೊತ್ತಾಗುವುದಿಲ್ಲ. ಆ ವಸ್ತುವು ಹೋಯಿತೆಂದರೆ ಮಾತ್ರ ಅದರ ಉಪಯುಕ್ತತೆಯು ಬಲು ಎದ್ದು ತೋರುವುದು. ನಾನು ಕುರುಡನಲ್ಲದಿದ್ದರೂ—ಪೂರ್ಣ ಕುರುಡನಲ್ಲದಿದ್ದರೂ— ಒಂದು ನಾಲ್ಕಾಂಶದಷ್ಟು ಕುರುಡನೆಂಬುದಕ್ಕೆ ನನ್ನ ಕಣ್ಣಿಗೆ ಸತತವಾಗಿ ಬೇಕಾಗುವ 'ಮೈನಸ್' ನಾಲ್ಕು ನಂಬರಿನ ಕನ್ನಡಕಗಳೆ ಸಾಕ್ಷಿ. (ಪ್ರತಿಯೊಂದು ಸರಕಾರಿ ಕಾಗದಕ್ಕೆ ಎರಡು ಸಾಕ್ಷಿಗಳನ್ನು ಕೊಡುವ ರೂಢಿಯುಂಟು). ಉಣೆ ಹದಿನೆಂಟು (minus 18 No.) ನಂಬರಿಗೆ ಕುರುಡತ್ವ (ಕ್ರಾಡುರ್ಯ) ಬರುವುದೆಂದ ಮೇಲೆ, ನಾನು ನಾಲ್ಕಾಂಶ ಕುರುಡನು. ನನಗೇ ಎಷ್ಟು ತೊಂದರೆ! ಕನ್ನಡಕವಿಲ್ಲದಿದ್ದಾಗ, ನನ್ನ ಮುಂದೆ ಮನುಷ್ಯನು ನಡೆದಿರುವನೋ ಕತ್ತೆ ನಡೆದಿರುವುದೋ ಎಂಬದು ತಿಳಿಯುವುದಿಲ್ಲ! ನಿದ್ದೆ ಮಾಡಬೇಕಾದರೆ ಕನ್ನಡಕವನ್ನು ತೆಗೆದಿಡಬೇಕಾಗುತ್ತದೆ; ಸ್ನಾನ ಮಾಡಬೇಕಾದರೆ ಕನ್ನಡಕವನ್ನು ತೆಗೆದಿಡಬೇಕು! ಓದುವ ಮುಂದೆ ಒಂದು, ದೂರ ನೋಡಬೇಕಾದರೊಂದು! ಏನು ಸೌಭಾಗ್ಯ? ಗೋಣನ್ನು ಯಾವಾಗಲೂ ಮೇಲೆಯೆ ಎತ್ತಿ ನೋಡಬೇಕು! ಎಂತಹ ಶಿಕ್ಷೆ? ಕನ್ನಡಕವನ್ನು ತೆಗೆದಿಟ್ಟು, ಸ್ಥಾನವನ್ನು ಮರೆತರೆ? ಇನ್ನೊಂದು ಕನ್ನಡಕವನ್ನು ಹಚ್ಚಬೇಕಾಗುತ್ತದೆ—ಮೊದಲನೆಯದನ್ನು ಹುಡುಕಲಿಕ್ಕೆ! ನನ್ನದೇ ಈ ಸ್ಥಿತಿಯಾದ ಮೇಲೆ ಕಣ್ಣಿಲಿಗೆ (ಕಣ್-ಇಲ್-ಇ=ಕಣ್ಣು ಇಲ್ಲದವ=ಕುರುಡ) ಎಷ್ಟು ದುಃಖವಾಗಬಹುದೆಂಬುದನ್ನು, ಕಲ್ಪನೆಯೆಂಬ ಪದಾರ್ಥವು ತಲೆಯೊಳಗಿದ್ದರೆ, ತಲೆಯಿಂದಲೆ ತಿಳಿದುಕೊಳ್ಳಬಹುದು.

"ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ" ಎಂದು ಹೇಳಿದೆ. ಅದನ್ನೇ ಮುಂದೆ ಬೆಳಸಿ "ಸರ್ವೇಷು ಶೀರ್ಷೇಷು ಕಣ್ಣೇ ಪ್ರಧಾನಂ' ಎಂದು ಹೇಳಬಹುದು. ಅಮೇರಿಕದ ದೊಡ್ಡ ಸಾಧುವಾದ ಇಮರ್ಸನ್‌ನು "The eye is the first circle" ಎಂದರೆ ಕಣ್ಣೇ ಮೊದಲನೆಯ ಮುಖ್ಯವರ್ತುಳ— ಎಂದು ಹೇಳಿರುವನು. ಕಣ್ಣಿನಿಂದಲೇ ಜಗತ್ತಿನ ಪರೀಕ್ಷೆಯಾಗುವುದು, ಕಣ್ಣಿನಿಂದಲೇ ತನ್ನ ಪರೀಕ್ಷೆಯೂ ಆಗುವುದು. ಈಗಿನ ಜಗತ್ತಿನಲ್ಲಿಯೂ ಕಣ್ಣಿಲ್ಲದವನು ಖರೇ ಮಣ್ಣೇ ಅಲ್ಲ, ಸಮಾಜದಲ್ಲಿಯೂ ಕುಟುಂಬದಲ್ಲಿಯೂ ಹುಣ್ಣೇ ಆಗಿರುವನು. ಕಣ್ಣಿನಿಂದಲೇ ವಿದ್ಯೆ, ಕಣ್ಣಿನಿಂದಲೇ ಬುದ್ಧಿ, ಕಣ್ಣಿನಿಂದಲೇ ಸೊಗಸು, ಕಣ್ಣಿನಿಂದಲೇ ಸಿನೆಮಾ! ಕಣ್ಣಿಲ್ಲದವನಿಗೆ ಸೊಗಸೂ ಇಲ್ಲ, ಸಿನೆಮಾನೂ ಇಲ್ಲ—ಎಂದರೆ ಸಿನೆಮಾನಟಿಯರ ದರ್ಶನವೂ ಇಲ್ಲ. ಅವರ ದರ್ಶನವಿಲ್ಲದವನು ಈಗಿನ ಜಗತ್ತಿನಲ್ಲಿ ಇದ್ದರೇನು ಸತ್ತರೇನು? ಎರಡೂ ಒಂದೇ! ಆದರೂ ಕಣ್ಣಿದ್ದರೆ, ನೀಲವರ್ಣದ ಕಣ್ಣಿದ್ದವನು ಬಲು ಭಾಗ್ಯವಂತ! ನೀಲೀಕಣ್ಣು ನೀಲೀರಾಗ, ಹಸಿರುಕಣ್ಣು ಹರಿದ್ರಾರಾಗ, ಚಿಕ್ಕಿನ ಕಣ್ಣುಳ್ಳವನು ಚಿರಕೀತನದ ನಿಕೇತನ! ಮೆಳ್ಳಗಣ್ಣಿನವನು ಧೂರ್ತ, ಫಟಿಂಗ, ಚಿರಕಿ ಮುಂತಾದ ಮೋಸಗೊಳಿಸುವ ಗುಣಗಳ ಆಗರ! "ಕ್ವಚಿತ್ ಕಾಣೋ ಭವೇತ್ ಸಾಧುಃ" ಸಾಧುತ್ವಕ್ಕೆ ಮೆಳ್ಳಗಣ್ಣು ಅಪಥ್ಯ. 'ಎದುರಾಗಿ ಸೂರ್ಯನ ಕಡೆಗೆ ನೋಡುತ್ತ ನಡೆಯುವವ ವೀರ; ಕೆಳಗೆ ಭೂಮಿಯ ಕಡೆಗೆ ನೋಡುತ್ತ ನಡೆಯುವವ ಲಕ್ಷ್ಮೀಪುತ್ರ; ಎಡಬಲಕ್ಕೆ ನೋಡುತ್ತ ನಡೆಯುವವ ರಾಜಕಾರಣಧುರೀಣ' ಎಂದು ಸಾಮುದ್ರಿಕಶಾಸ್ತ್ರ ಹೇಳುವುದು. ಕಿಂಚಿತ್ ಕೆಂಪಾದ ಕಣ್ಣುಳ್ಳವನು (ಗುಲಾಬೀ ಆಯಿಜ್) ಮಂಗಳರಾಶಿ. ಚಂದ್ರನನ್ನು ಪ್ರತಿನಿತ್ಯ (?) ನೋಡುವವನ ಕಣ್ಣಲ್ಲಿಯೂ ಮನಸ್ಸಿನಲ್ಲಿಯೂ ಶಾಂತಿಯು ನೆಲೆಗೊಳ್ಳುವುದೆಂದು ಯೋಗಮತ. ಸೂರ್ಯನನ್ನು ಒಂದೆರಡು ನಿಮಿಷ ಪ್ರತಿನಿತ್ಯ ನೋಡಿದಲ್ಲಿ, ಕಣ್ಣಿನಲ್ಲಿಯೂ ಮನಸ್ಸಿನಲ್ಲಿಯೂ ಶಾಂತಿಯು ಮೂಡುವುದೆಂದು ಪಾಶ್ಚಾತ್ಯ ವೈದ್ಯಕಶಾಸ್ತ್ರ! ಒಂದು ಕಣ್ಣಿನಿಂದ ಸೂರ್ಯನನ್ನೂ, ಇನ್ನೊಂದು ಕಣ್ಣಿನಿಂದ ಚಂದ್ರನನ್ನೂ, ಪ್ರತಿನಿತ್ಯ ನೋಡಿದರೆ, ಕೆಲವು ದಿನಗಳಲ್ಲಿ ಅವೆರಡೂ ಇಜ್ಜೋಡು ಆಗಬಹುದೆಂದು ನನ್ನ ಮತ!

ಜಗತ್ತಿನಲ್ಲಿ ಕಣ್ಣಿನ ಮಹತ್ತ್ವವು ಎಷ್ಟಿದೆಯೆಂಬುದನ್ನು ಅಷ್ಟೇ ಮಹತ್ತ್ವವುಳ್ಳ ಭಾಷೆಯೊಳಗೆ ನೋಡಬಹುದು. ಅಜ್ಞಾನಿಗೆ— ಇನ್ನೂ ಹುಟ್ಟಿ ಕಣ್ಣು ತೆಗೆದಿಲ್ಲಾ ಮಾತಾಡತಾನ ಮಾತು, ಕಣ್ಣು ಬೆಳ್ಳಗಾಗು,— ಪುರೋಹಿತರು ಅಂತರಪಟವನ್ನು ತೆಗೆದ ಕೂಡಲೇ ವಧುವು ನನ್ನ ಕಣ್ಣಿಗೆ ಬಿದ್ದಳು. ನನ್ನ ಕಣ್ಣು ಬೆಳ್ಳಗಾದುವು. ಕಣ್ಣು ನೆತ್ತಿಯ ಮೇಲೆ ಹೋಗು— ಗರ್ವ. ಕಣ್ಣು ಮುಚ್ಚು— ವೈಕುಂಠ. ಕಣ್ಣು ಚಿವುಟು— ಮೋಸ. ಕಣ್ಣು ಬಂದರೆ ಈ ವಿಶ್ವವೆಲ್ಲ ಕಾಣುತ್ತದೆ, ಇನ್ನೊಂದು ಅರ್ಥದಿಂದ ಬಂದರೆ ಕಣ್ಣೊಳಗೆ ಕೆಂಪು ಔಷಧವನ್ನು ಹಾಕುತ್ತಾರೆ ಡಾಕ್ಟರರು. ನಿನ್ನ ಕಣ್ಣೊಳಗೆ ನಾನು ಒತ್ತುತೀನೇನು (ಪೆಣ್‌ನುಡಿಯಲ್ಲಿ ದಿನಾಲು ಹದಿನೆಂಟಾವೃತ್ತಿ). ಪೌರೋಹಿತ್ಯದಲ್ಲಿ—'ಹುಲಿಯ ಕಣ್ಣು' ಎಂದರೆ ಒಂದು ರೂಪಾಯಿ. ಹುಲಿಯ ಕಿವಿಯಲ್ಲ, ಕಣ್ಣು! ಕಣ್ಣಿಗೂ ಅಷ್ಟೇ ಮಹತ್ತ್ವ, ರೂಪಾಯಿಗೂ ಅಷ್ಟೇ ಮಹತ್ತ್ವ. ಯಾವ ವಿಷಯವನ್ನು ಯಾವ ದೃಷ್ಟಿಯಿಂದ ನೋಡಿದರೂ ಕಣ್ಣೇ ಮೇಲೆಂದು ಒಡೆದು ಕಾಣುತ್ತದೆ. ಕಣ್ಣುಳ್ಳವನೆ ಕಲಿ, ಕಣ್ಣುಳ್ಳವನೆ ಕುಲೀನ! ನಮ್ಮ ಭಾಷೆಯಲ್ಲಿ— ಮತ್ತಾವ ಭಾಷೆಯಲ್ಲಿಯೆ ಆಗಲಿ—

'ಕಣ್ಣು' ಬರದೆ ಒಂದು ವಾಕ್ಯವಾದರೂ ಬರುವುದಿಲ್ಲವೆಂಬುದು ಸಿದ್ಧವಾದ ಮಾತು.

ಜೀವನದಲ್ಲಿ ಕಣ್ಣು ಎಷ್ಟು ಉಪಯುಕ್ತವಾದದ್ದೋ ಅಷ್ಟೇ ಮಹತ್ತ್ವವುಳ್ಳದ್ದಾಗಿರುವುದು— ಕಲೆಯಲ್ಲಿ. ಕಲೆಯೆಂದರಾದರೂ ಏನು? ಮಾನವನ ಹೃದಯದಲ್ಲಿ ಹುಟ್ಟುವ ಅನೇಕ ಭಾವನೆಗಳನ್ನು ಸ್ವರಗಳಲ್ಲಿಯೂ ಬಣ್ಣಗಳಲ್ಲಿಯೂ, ಕಲ್ಲಿನಲ್ಲಿಯೂ, ಅಭಿನಯದಲ್ಲಿಯೂ ತದ್ರೂಪವಾಗಿ ಹುಟ್ಟಿಸುವುದು. ಎಲ್ಲ ಕಲೆಗಳಲ್ಲಿ ಕಾವ್ಯವೇ ಶ್ರೇಷ್ಠವಾಗಿದೆ (ಕಲಾಸೀಮಾ ಕಾವ್ಯಂ). ಕಾವ್ಯದಲ್ಲಿಯೂ ನಾಟಕವೇ ನಯನಮನೋಹರವಾಗಿದೆ (ಕಾವ್ಯೇಷು ನಾಟಕಂ ರಮ್ಯಂ). ನಾಟಕದಲ್ಲಿ ಅಭಿನಯ; ಅಭಿನಯದಲ್ಲಿ ಕಣ್ಣು. ಶೃಂಗಾರದಲ್ಲಿಯಂತೂ ಕಣ್ಣಿನಿಂದಲೆ ಪ್ರಾರಂಭ. ಉತ್ತಾನವಾದ ಹೀನ ಶೃಂಗಾರದಲ್ಲಿ ಕಣ್ಣು ಹೊಡೆಯುವುದು ಮೊದಲು. ಕರಪಲ್ಲವಿಗಿಂತಲೂ ಅಧರಪಲ್ಲವಿಗಿಂತಲೂ ಮೊದಲು ನೇತ್ರಪಲ್ಲವಿ! ನೇತ್ರಕಟಾಕ್ಷದ ಒಂದೇ ಬಾಣದಿಂದ ಹೊರಡುವ ಪ್ರೇಮವು, ಸಾವಿರಾರು ಪ್ರೇಮಪತ್ರಿಕೆಗಳಿಗಿಂತ ಮಿಗಿಲಾದದ್ದು. ಒಂದೇ ಕಟಾಕ್ಷ, ಒಂದೇ ಬಾಣ, ಒಂದೇ ಮಿಂಚಿನ ಬಳ್ಳಿ—ತರುಣನ ಹೃದಯದ ನೆಲೆಯನ್ನು ಕಂಡುಹಿಡಿಯುವುದು. ಕಡೆಗಣ್ಣಿನ ಒಂದೇ ಒಂದು ನೋಟದಲ್ಲಿ ಶೃಂಗಾರದ ಸಿದ್ಧಿಯನ್ನೇ ನೋಡಬಹುದು. ಪ್ರೇಮಯೋಗದ ಅತ್ಯುಚ್ಚ ಶಿಖರವೆಂದರೆ ಅರ್ಧ ಉನ್ಮೀಲಿತ ದೃಷ್ಟಿ. ಇದು ಪ್ರೇಮಯೋಗಕ್ಕೂ ಹೌದು, ಪಾತಂಜಲ ಯೋಗಕ್ಕೂ ಹೌದು. ಹೃದಯದಲ್ಲಿ ಸಂತಾಪವಾಗಿ ದುಃಖವು ತುಂಬಿತೆಂದರೆ ಕಣ್ಣಿನಿಂದಲೇ ಹೊರಬೀಳುವುದು ಕಂಬನಿಯ ರೂಪದಿಂದ; ಮೂಗಿನಿಂದಲ್ಲ. ಕರುಣೆಯನ್ನು ತೋರಿಸುವುದಾದರೂ ಕಣ್ಣೀರಿನಿಂದಲೆ. ವೀರರಸದ ಆವಿಷ್ಕೃತಿಯನ್ನು ಕೈಕಾಲುಗಳನ್ನು ಅಪ್ಪಳಿಸಿ ಮಾಡಬಹುದು; ಆದರೂ ಕಣ್ಣು ಕೆಂಪಾಗತೆಬೇಕು ಕ್ರೋಧದಿಂದ. ಕೋಪವಿಲ್ಲದ ವೀರರಸವು ಎಣ್ಣೆಯಿಲ್ಲದ ದೀಪದಂತೆ. ವೀರರಸದ ಸೂರ್ಯನು ಹೃದಯದಲ್ಲಿ ಮೂಡಿದನೆಂದರೆ ಕಣ್ಣು ಅರಳುವುವು, ಕೆರಳುವುವು. ಕಣ್ಣುಗಳು ಕಿಡಿಗಳನ್ನುಗುಳುವುವು. ಹಾಸ್ಯರಸದ ತೋರಿಕೆಯಂತೂ ಬಾಯಿಯಿಂದಲೇ ಆಗುವುದು. ಕಣ್ಣು ಮುಚ್ಚಿ ಹಾಸ್ಯರಸವನ್ನು ಹೊರಗೆಡಹುವುದೂ ಒಂದೇ, ಪವರ್ಗಾಕ್ಷರಗಳನ್ನು ತುಟಿಗೆ ತುಟಿ ಹಚ್ಚದೆ ಎನ್ನುವುದೂ ಒಂದೇ. ಹಾಸ್ಯರಸದ ಚಂದ್ರಮನು ಹೃದಯದಲ್ಲಿ ಮೂಡಿದನೆಂದರೆ, ನಯನ ಚಕೋರಗಳು ಆನಂದದಿಂದ ಅರಳುವುವು. ಕ್ರೋಧದಿಂದ ಕೆಂಪಾದ ಕಣ್ಣುಗಳು ಹಾಸ್ಯದಿಂದ ಗುಲಾಬಿ ಹೂವಿನ ಬಣ್ಣವನ್ನು ತಾಳುವುವು. ರೌದ್ರ-ಭಯಾನಕರಸಗಳಿಂದ ಕಣ್ಣುಗಳು ಚಂಚಲವಾಗುವುವು— ಹುಲಿಯನ್ನು ಕಂಡ ಹುಲ್ಲೆಯ ಮರಿಯ ನಯನಗಳಂತೆ. ಬೀಭತ್ಸಕ್ಕೆ ಕಣ್ಣುಗಳು ತಮ್ಮಿಂದ ತಾವೇ ಮುಚ್ಚಿಕೊಳ್ಳುವುವು. ಎಲ್ಲ ಭಾವಗಳನ್ನು ಅಭಿನಯಿಸಿ ತೋರಿಸುವುದು ಕಣ್ಣಿರದೆ ಆಗದೆಂಬುದು ಸಿದ್ಧವಾದ ಮಾತು. ಕಣ್ಣಿನಿಂದಲೇ ರೂಪ. ರೂಪವಿರದ ಕಲೆಯಿಲ್ಲ. ಕುರೂಪವಾದರೂ ಅದು ಜೀವನದಲ್ಲಿರುವುದರಿಂದ ಅದರ ರೂಪಣೆಗೆ ಕಲೆಯೆಂದೇ ಎನ್ನಬಹುದು. ರೂಪವಿಲ್ಲದ, ಗುಣವಿಲ್ಲದ ಪದಾರ್ಥಗಳೆಂದರೆ ಕಲೆಯ ವರ್ತುಳದಿಂದ ಹೊರಗಾದುವುಗಳೆಂದೇ ತಿಳಿಯತಕ್ಕದ್ದು. ಅದರಂತೆಯೆ ಒಂದೊಂದು ಪದಾರ್ಥವನ್ನು ನೋಡಿದೊಡನೆಯೆ ನಮ್ಮ ಹೃದಯದಲ್ಲಿ ಕೆಲವು ಭಾವನೆಗಳು ಹುಟ್ಟುವುದುಂಟು. ಹಸುಗೂಸನ್ನು ಕಂಡರೆ ದಿವ್ಯವಾದ ಆನಂದರಸವು ಉಂಟಾಗುವುದು. ಯೌವನದಿಂದ ಹೊರಸೂಸುವಂತಹ ಸುಂದರ ತರುಣಿಯರ ಒಯ್ಯಾರವನ್ನು ಕಂಡಾಕ್ಷಣಕ್ಕೆ ಶೃಂಗಾರರಸವುಂಟಾಗುವುದು. ದುಃಖದಿಂದ ಬಳಲುವ ವಿಧವೆಯರನ್ನು ಕಂಡು, ಕರುಣೆಯಿಂದ ಹೃದಯವು ತಳಮಳಗೊಳ್ಳುವುದು. ಆದರೆ ಕಣ್ಣಿಲ್ಲದವನು "ಅಪ್ಪಾ ಒಂದು ತಂಗಳ ರೊಟ್ಟಿ ಹಾಕಿರೋ ಕುರುಡನಿಗೆ" ಎಂದಾಕ್ಷಣಕ್ಕೆ ಹೃದಯದಲ್ಲಿ ಕಲಮಲವಾಗುವುದು. ಕುರುಡನೆಂದರೆ ಕಾರುಣ್ಯಮೂರ್ತಿಯೆ ಸೈ! ಕರುಣಾನಿಧಿಯಾದ ಪರಮೇಶ್ವರನು ಕುರುಡನನ್ನು ಹುಟ್ಟಿಸಿದನೆಂಬುದನ್ನು ನೋಡಿದರೆ, ದೇವರಲ್ಲಿದ್ದ ಶ್ರದ್ಧೆಯು ಕಂಬನಿಯ ರೂಪದಿಂದ ಹರಿದು ಹೋಗುವುದು.

ಮಾನವನು, ಈ ಕಣ್ಣೆಂಬ ಪ್ರಧಾನದೇವತೆಗೆ ವಾಙ್ಮಯ ಪೂಜೆಯನ್ನು ಕಟ್ಟಿರುವನು. ಹರಿಣೇಕ್ಷಣಾ, ಮದಿರೇಕ್ಷಣಾ, ಕಮಲನಯನೆ, ಅಬ್ಜನೇತ್ರೆ, ಕುವಲಯದಳನಯನೆ— ಎಂಬ ಮಾತುಗಳು ಒಮ್ಮೆಯೂ ಬಾರದಂತಹ ಗ್ರಂಥಕ್ಕೆ ಪಾರಿತೋಷಕವನ್ನು ಕೊಡಬೇಕು. ಆರ್ಯಋಷಿಗಳ ಪೂಜಾಸಂಸ್ಥೆಯಲ್ಲಿಯ ದೇವತೆಗಳ ಕಡೆಗೆ ನೋಡಿದರೂ ಕಣ್ಣುಗಳಲ್ಲಿರುವ ಆದರವೇ ವ್ಯಕ್ತವಾಗಿರುವುದು. ಬ್ರಹ್ಮನಿಗೆ ನಾಲ್ಕು ಮುಂಡಗಳನ್ನೂ, ರಾವಣನಿಗೆ ಹತ್ತು ತಲೆಗಳನ್ನೂ, ಇಪ್ಪತ್ತು ಕೈಗಳನ್ನೂ, ದತ್ತಾತ್ರೇಯನಿಗೆ ಮೂರು ತಲೆಗಳನ್ನೂ ಆರು ಕೈಗಳನ್ನೂ, ವಿಷ್ಣುವಿಗೆ ನಾಲ್ಕು ಕೈಗಳನ್ನೂ ಕಲ್ಪಿಸಿದವರಿಗೆ ೧೦-೧೨ ಕಣ್ಣುಗಳನ್ನು ಒಂದೊಂದು ಮೋರೆಗೆ ಕಲ್ಪಿಸುವ ಧೈರ್ಯವಾಗಲಿಲ್ಲ. ಹತ್ತು ಚಂಡಿಕೆಗಳು ಒಂದು ಸ್ಥಾನದಲ್ಲಿ ಸುಖವಾಗಿ ಇರಬಹುದು; ಎರಡು ತುರುಬುಗಳು ಇರಲು ಕಷ್ಟವೆಂದು ನಾಣ್ನುಡಿಯುಂಟು. ಅದರಂತೆಯೆ ಒಂದೇ ಮೋರೆಯಲ್ಲಿ ಹತ್ತು-ಹನ್ನೆರಡು ಕಣ್ಣುಗಳನ್ನು ಹಚ್ಚಿದ್ದರೆ ದೇವರ ಗತಿಯೇನಾಗುತ್ತಿತ್ತೋ ತಿಳಿಯದು. ಎರಡು ಕಣ್ಣುಗಳನ್ನು ಕೊಟ್ಟ ದೇವರು ಹಿಂಬದಿಗೆ ಎರಡನ್ನು ಹಚ್ಚಿದ್ದರೆ ಬಹಳ ಸೊಗಸಾಗುತ್ತಿತ್ತು. ಹಿಂಬದಿಗೆ ಏನು ನಡೆದಿರುವುದೆಂಬುದೂ ತಿಳಿಯುತ್ತಿತ್ತು. ಎರಡು ಕಣ್ಣುಗಳ ಮೇಲೊಂದೇ ಕಣ್ಣು ಇದ್ದವನು ಪರಮೇಶ್ವರ. ಇದು ಅಧ್ಯಾತ್ಮಿಕ ದೃಷ್ಟಿಯ ಕಣ್ಣು. ವಿಶ್ವವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದವನೂ ಪರಮೇಶ್ವರನೇ ಎಂದೆನ್ನಬಹುದು. ನನಗಂತೂ ಕಣ್ಣೇ ಶ್ರೇಷ್ಠ. ಕಣ್ಣಿನ ವೈದ್ಯರ ದವಾಖಾನೆಯೇ ಗುಡಿ. ಕಣ್ಣಿನ ವೈದ್ಯನೇ ಸರ್ವ ವಿದ್ಯಾವಿಶಾರದನಾದ ಪರಮೇಶ್ವರ!!!

ಅನುಭವ

(ಒಂದು ಬಾಳ್ಗತೆ)

ಶ್ರೀ. ಕೆ. ಪುರುಷೋತ್ತಮ ಬಿ.ಎ. ಬೆಂಗಳೂರು

★

‘ ಆಳಾಗಿ ದುಡಿ, ಅರಸಾಗಿ ಉಣ್ಣು ’ ಎಂದು ಬೇರೆಯುವರಿಗೆ ಬೇಕಾದಷ್ಟು ಗಾದೆಗಳನ್ನು ಹೇಳಬಹುದು....ಸುಖವಾಗಿ; ಆದರೆ ದುಡಿಯುವ ಸಂದರ್ಭ ಬಂದಾಗ ರಂಗರಾಯರಿಗೆ ಬಂದ ಅನುಭವನೇ ಬಹುಜನರಿಗೆ ಬಂದೀತು!

★

ರಂಗರಾಯರು ಒಬ್ಬ ಗುಮಾಸ್ತರು. ಅವರು ವರ್ಗವಾಗಿ ನಮ್ಮೂರಿಗೆ ಬಂದು ಒಂದು ವರ್ಷವಾಗಿರಬಹುದು. ರಾಯರು ಶುದ್ಧ ವೈಷ್ಣವರು; ಇನ್ನೂ ಕುಲಧರ್ಮಗಳನ್ನು ಬಿಟ್ಟಿಲ್ಲ. ಮುಖದ ಮೇಲೆ—ಹಾಗೆ ನೋಡಿದರೆ— ಅಲ್ಲಲ್ಲಿ ಒಂದೊಂದು ನೆರೆತ ಕೂದಲು ಕಾಣುವುದರಿಂದ, ಆಗಲೆ ಈ ಸಂಸಾರಸಾಗರದಲ್ಲಿ ಅರ್ಧದಾರಿ ಈಜಿರಬಹುದೆಂದು ಊಹಿಸಬಹುದು. ಸ್ವಲ್ಪ ದರ್ಪದ ಮನುಷ್ಯ; ಗುಮಾಸ್ತರಾದರೂ ಯಾರಿಗೂ ತಲೆಬಾಗಿಸಿದವರಲ್ಲ. ಮನೆತುಂಬ ಮಕ್ಕಳು, ಆದರೆ ಎಲ್ಲರೂ ಗಂಡುಹುಡುಗರಾದುದರಿಂದ ವರಾನ್ವೇಷಣದ ಚಿಂತೆ ಇಲ್ಲ. ಹೆಂಡತಿ ಮಾಡಿದ ಅಡಿಗೆ ಎಂದೂ ರುಚಿಸಿಲ್ಲ ರಾಯರಿಗೆ. ಯಾವ ಪದಾರ್ಥಕ್ಕಾದರೂ—ಅಂತೂ—ಉಪ್ಪೋ, ಹುಳಿಯೋ, ಖಾರವೋ ಕಡಿಮೆ ಎಂದು ಹೇಳುವುದು ಅವರ ಸಂಪ್ರದಾಯ. ಅವರ ಪತ್ನಿ ಸೀತಮ್ಮ, ಗಂಡನ ಅನುಗ್ರಹ ಪಡೆಯಬೇಕೆಂದು ಎಷ್ಟೋ ಪ್ರಯತ್ನಪಟ್ಟರೂ ಸಾಧ್ಯವಾಗಿರಲಿಲ್ಲ. ಗಂಡನ ಬೈಗಳು ನಿತ್ಯಾಶೀರ್ವಾದವೆಂದೇ ಅವರು ಭಾವಿಸಿದರು. ಕಛೇರಿಗೆ ಹೋಗುವ ಹೊತ್ತಿಗೆ ಅಡಿಗೆಯಾಗದಿದ್ದರೆ ರಾಯರು ಕಿಡಿಕಿಡಿಯಾಗುತ್ತಿದ್ದರು. ಸೀತಮ್ಮ ಇವೆಲ್ಲವನ್ನೂ ನುಂಗಿಕೊಂಡು ಅಂತೂ ಸಂಸಾರವನ್ನು ಸಾಗಿಸುತ್ತಿದ್ದರು. ರಾಯರಿಗೆ ಹೆಂಡತಿಯ ಮೇಲೆ ಪ್ರೀತಿ ಇರಲಿಲ್ಲವೆಂದಲ್ಲ; ಸಿಡುಕುತನ ಅವರ ಸ್ವಭಾವ. ಹೆಂಡತಿಯೊಂದಿಗೆ ವಿಶ್ವಾಸದಿಂದ ಮಾತನಾಡುವಾಗಲೂ ಕೂಡ, ಅವರ ಬಾಯಿಂದ ಮಾತುಗಳು ಬಿರುಸಾಗಿಯೆ ಹೊರಡುವುವು.

ಎಂದಿನಂತೆ ರಾಯರು ಬೆಳಗ್ಗೆ ಪೇಟೆಗೋ ಎಲ್ಲಿಗೋ ಹೋದವರು ಮನೆಗೆ ಬಂದರು. ಸುಮಾರು ೧೦ ಗಂಟೆ ಆಗಿರಬಹುದು. “ ಏನೇ, ಇನ್ನೂ ಅಡಿಗೆ ಆಗಿಲ್ಲೇನೆ? ” ಎಂದು ಪ್ರಾರಂಭಿಸಿದರು. ಸೀತಮ್ಮ ಆದಷ್ಟು ಬೇಗನೆ ಎಲ್ಲವನ್ನೂ ಮುಗಿಸಿ ಎಲೆ ಹಾಕಿದರು. ರಾಯರು ಪುತ್ತೆ ಷುರುಮಾಡಿದರು: “ ಎಲೇನೇ ತೊಳೆದಿಲ್ಲಲ್ಲೆ! ”. ಇನ್ನೊಂದು ಸಾರೆ ತೊಳೆದುದೂ ಆಯಿತು.

“ ಥೂ! ನಿನ್ನ ಸಾರಿಗೆ ಉಪ್ಪು ಹಾಕೋದೇ ಮರೆತುಬಿಟ್ಟಿದ್ದೀಯಲ್ಲೆ! ನಿನಗೆ ಅಡಿಗೆ ಮಾಡಲಿಕ್ಕೆ ಬರ್ತದಂತೆ ಯಾರ್ಹೇಳಿದರು? ಒಂದು ಅನ್ನ-ಸಾರು ಮಾಡಲಿಕ್ಕೆ ಬರೋದಿಲ್ಲ; ಇನ್ನು ಭಕ್ಷ್ಯ-ಭೋಜ್ಯ ಏನುಮಾಡ್ತೀ ನೀನು! ಒಂದು ಸ್ವಲ್ಪ ಉಪ್ಹಾಕು ಎಲೇಗೆ! ”

ಸ್ವಲ್ಪ ಉಪ್ಪು ಸಾಲದಿದ್ದಕ್ಕೆ ಇಷ್ಟು ರಾಧ್ಯಾಂತ; ದಿನವೂ ಸಾಯುವವರಿಗೆ ಅಳುವವರಾರು?—ಎಂಬ ಗಾದೆಯಂತೆ, ಪ್ರತಿದಿನವೂ ನಡೆಯುತಕ್ಕ ವಿಷಯವಾದುದರಿಂದ ಸೀತಮ್ಮ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ರಾಯರು ತಾಂಬೂಲ ಸೇವನ ಮುಗಿಸಿ, ಗಲಾಟೆ ಮಾಡುತ್ತಿದ್ದ ಹುಡುಗರನ್ನು ಗರ್ಜಿಸಿ ಓಡಿಸಿ, ಚಾಪೆಯ ಮೇಲೆ ಕಾಲು ಚಾಚಿದರು; ಒಂದು ಜಂಪು ತೆಗೆದು ಕಚೇರಿಗೆ ಹೊರಟರು.

ತಾಲ್ಲೂಕು ಕಚೇರಿಯ ಗುಮಾಸ್ತರುಗಳಲ್ಲಿ, ಅಮಲ್ದಾರರಿಂದಾಗಲಿ ಮೇಲಿನ ಅಧಿಕಾರಿಗಳಿಂದಾಗಲಿ ಒಂದುಸಾರಿಯಾದರೂ “ ಆಶೀರ್ವಾದ ”ಪಡೆಯದೆ ನಿವೃತ್ತರಾದವರು ಬಹಳ ವಿರಳ; ಇಲ್ಲವೇ ಇಲ್ಲವೆಂದು ಹೇಳಿದರೂ ಅತಿಶಯೋಕ್ತಿ ಆಗಲಾರದು. ಅಮಲ್ದಾರರ ಮುಂದೆ ನಿಂತ ಗುಮಾಸ್ತರು ಬೆಕ್ಕಿನ ಕೈಯಲ್ಲಿ ಸಿಕ್ಕಿಕೊಂಡ ಇಲಿಯಂತೆಯೆ ಸರಿ. ತಮ್ಮ ಅಧಿಕಾರ, ದರ್ಪ ಇವುಗಳನ್ನು ಸಾಹೇಬರಾದರೂ ಯಾರ ಮೇಲೆ ತೋರಿಸಬೇಕು? ಆದಿನ, ಯಾವುಯಾವುದೋ ಒಂದು ಸಣ್ಣ ತಪ್ಪಿಗಾಗಿ, ರಾಯರು ಸಾಹೇಬರ ಆಗ್ರಹಕ್ಕೆ ಒಳಗಾಗಬೇಕಾಯಿತು. ಸಾಹೇಬರು ತಮ್ಮ ಕೋಣೆಗೆ ಕರೆಯಿಸಿ, ಮೆಲ್ಲಗೆ ಎರಡು ಮಾತನ್ನಾಡಿದರು. ಸಾಹೇಬರು ಮೇಲಿನ ಅಧಿಕಾರಿಗಳು; ಪ್ರತ್ಯುತ್ತರ ಕೊಡುವಂತಿರಲಿಲ್ಲವಾದುದರಿಂದ, ಕೋಪವನ್ನು ನುಂಗಿಕೊಂಡು ಸುಮ್ಮನಾಗಬೇಕಾಯಿತು. ಕಚೇರಿಯಲ್ಲಿ ಆ ದಿನ ಕೆಲಸ ಮಾಡಲು ಮನಸ್ಸು ಸ್ತಿಮಿತದಲ್ಲಿರಲಿಲ್ಲ. ಹಾಗೆಯೆ ಒಂದೆರಡು ಕಾಗದಗಳನ್ನು ತಿರುವಿಹಾಕುವ ಹೊತ್ತಿಗಾಗಲೆ ಮೂರು ಘಂಟೆಯಾಯಿತು; ಕಾಫಿಯು ನೆನಪಾಯಿತು. ಕಾಫಿ ಇಲ್ಲದ್ದೆ ಕೆಲಸ ಸಾಗದಿದ್ದುದರಿಂದ, ಅದರ ವಿಚಾರದಲ್ಲಿಯೆ ಮಗ್ನರಾದರು. ಸ್ವಲ್ಪ ಹೊತ್ತು ರಾಘುವಿನ ಹಾದಿಯನ್ನೇ ಕಾದರು; ನಾಲ್ಕು ಘಂಟೆಯಾದರೂ ರಾಘುವು ಕಾಫಿ ತೆಗೆದುಕೊಂಡು ಬರಲಿಲ್ಲ. ತಾಳ್ಮೆಗೂ ಎಲ್ಲೆ ಇಲ್ಲವೇ? ರಾಯರು ಕುಪಿತರಾದರು; ಸಾಹೇಬರ ಮೇಲೆ ಬಂದ ಕೋಪವೆಲ್ಲವೂ ಹೆಂಡತಿಯ ಮೇಲೆ ಹೋಯಿತು. ಆದರೂ ಮನೆಗೆ ಹೋಗುವವರೆಗೂ ಕೋಪವನ್ನು ಸ್ತಿಮಿತದಲ್ಲಿಟ್ಟುಕೊಳ್ಳಬೇಕಾಯಿತು.

ಹೋಟಲಿಗೆ ಹೋಗಿ ಕಾಫಿ ಕುಡಿಯಬಹುದಾಗಿತ್ತು; ಆದರೆ ರಾಯರು ಶುದ್ಧ ವೈಷ್ಣವರು! ಹೋಟಲಿನ ಕಾಫಿ ನಿಷಿದ್ಧ ಪದಾರ್ಥ. ತಲೆನೋವು ಪ್ರಾರಂಭವಾಯಿತು. ಸಾಹೇಬರು ಹೋಗುವವರೆಗೂ ಕಾದಿದ್ದು, ಐದು ಘಂಟೆಗೆ ಕಚೇರಿಯನ್ನು ಬಿಟ್ಟರು. ಮುಖವೆಲ್ಲ ಕೆಂಪೇರಿದೆ; ಕಾಲೆಲ್ಲ ನಡುಗುತ್ತಿದೆ. ಮನೆಯನ್ನೇನೋ ಮುಟ್ಟಿದರು.

ಹೊರಗಿನ ಕೋಣೆಯಲ್ಲಿ ತಂಬಿಗೆ ಇದ್ದುದನ್ನು ಕಂಡು ರಾಯರಿಗೆ ಏಕೋ ಅನುಮಾನವಾಯಿತು. ಅವರ ಅನುಮಾನವು ನಿಜವೇ ಆಯಿತು. ಪತ್ನಿ ಹೊರಗಿನ ಕೋಣೆಯಲ್ಲಿ ಕುಳಿತಿದ್ದುದನ್ನು ನೋಡಿ ಎದೆ 'ಧಸಲ್' ಎಂದಿತು. ಕಾಫಿ ಬಾರದುದಕ್ಕೆ ಕಾರಣ ಗೊತ್ತಾಯಿತು; ಆದರೆ ಕೋಪ ಮಾತ್ರ ಹೋಗಲಿಲ್ಲ. ಕಾಫಿ ಇಲ್ಲದೆ ಹುಚ್ಚು ಹಿಡಿದಂತಾಗಿತ್ತು; ಇದನ್ನು ನೋಡಿ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಮಾಡುವುದಾದರೂ ಏನು? ಕಾಫಿಯ ಚಟ ಬಹಳವಾದುದರಿಂದ ತಾವೇ ಕಾಫಿ ಮಾಡೋಣವೆಂದು ಒಳಕ್ಕೆ ಹೋದರು. ಅಡಿಗೆಯ ಮನೆಯಲ್ಲಿ ಮುಸುರೆ ಹಾಗೆ ಬಿದ್ದಿದೆ; ಬಚ್ಚಲುಮನೆಗೆ ಹೋದರೆ ಕೈಕಾಲು ತೊಳೆದುಕೊಳ್ಳುವುದಕ್ಕೆ ಒಂದು ತೊಟ್ಟು ನೀರೂ ಇಲ್ಲ. ಹೆಂಡತಿ ಒಳಗೆ ಇದ್ದಿದ್ದರೆ ಸಹಸ್ರನಾಮಾವಳಿಯಾಗುತ್ತಿದ್ದುದು ಖಂಡಿತ. ಆದರೆ ಈಗ ಎಲ್ಲವನ್ನೂ ನುಂಗಿಕೊಳ್ಳಬೇಕಾಯಿತು. ಹೆಚ್ಚುಕಾಲ ವಿಳಂಬಮಾಡದೆ, ಬಾವಿಗೆ ಹೋಗಿ ನೀರನ್ನು ತೆಗೆದುಕೊಂಡು ಬಂದು, ಕಾಫಿ ಕಾಯಿಸುವುದಕ್ಕೆ ಪ್ರಾರಂಭ ಮಾಡಿದರು. ಬೆಂಕಿಹೊತ್ತಿಸುವುದರಲ್ಲಿ ಮನೆಯೆಲ್ಲವೂ ಹೊಗೆಯಾಯಿತು. ರಾಯರ ಕಣ್ಣಿನಿಂದ ಧಾರಾಳವಾಗಿ ನೀರು ಸುರಿಯಲು ಪ್ರಾರಂಭವಾಯಿತು. ಹೆಂಡತಿಯ ಮೇಲೆ ಬೇಕಾದಷ್ಟು ಆರ್ಭಟಮಾಡಿದರು. ಸೀತಮ್ಮನವರು ಎಲ್ಲವನ್ನೂ ನೋಡುತ್ತಾ ಹೊರಗಿನ ಕೋಣೆಯಲ್ಲಿ ಕುಳಿತಿದ್ದರು. ತಮ್ಮ ಗಂಡನಿಗೆ ಇಷ್ಟು ಕಷ್ಟ ಕೊಡಬೇಕಾಯಿತಲ್ಲ—ಎಂದು ನೊಂದುಕೊಂಡರು. ತಮಗೆ ಒಬ್ಬಳಾದರೂ ಮಗಳಿದ್ದಿದ್ದರೆ ಇಷ್ಟೆಲ್ಲ ಕಷ್ಟಕ್ಕೆ ಕಾರಣವಾಗುತ್ತಿರಲಿಲ್ಲವೆಂದು ಚಿಂತಿಸಿದರು.

ಅಷ್ಟುಹೊತ್ತಿಗೆ ಸರಿಯಾಗಿ ಆಟಕ್ಕೆ ಹೋಗಿದ್ದ ಹುಡುಗರು ಹಸಿವೆ ಮಿತಿಮೀರಿದ್ದರಿಂದ— ಮನೆಗೆ ಬಂದರು. ಅಮ್ಮನಿಂದ ಏನೂ ಸಿಕ್ಕುವಹಾಗಿಲ್ಲದಿದ್ದುದರಿಂದ ಅಪ್ಪನಿಗೇ ಗಂಟುಬಿದ್ದರು. ಬೆಂಕಿಹೊತ್ತಿಸುವುದರಲ್ಲೇ ಸಾಕಾಗಿ ಹೋಗಿತ್ತು; ಹುಡುಗರ ಅಳುವನ್ನು ತಡೆಯಲಾರದೆ ರಾಯರು, ಎಲ್ಲರಿಗೂ ಒಂದೊಂದು ಒದೆಯನ್ನು ಕೊಟ್ಟರು. ಅಳು ಹೆಚ್ಚಾಯಿತೇ ವಿನಾ ಕಡಿಮೆಯಾಗಲಿಲ್ಲ. ಮಕ್ಕಳನ್ನು ಸಂರಕ್ಷಣೆಮಾಡುವುದು ಅಷ್ಟು ಸುಲಭವಾದ ಕೆಲಸವೇ? ಸೀತಮ್ಮ ತಮ್ಮಲ್ಲಿದ್ದ ಒಂದು ಆಣೆಯನ್ನು ಮುಚ್ಚಿಕೊಟ್ಟು ಕಳುಹಿಸಿದರು.

ಕಾಫೀ ಮಾಡಿದ್ದೂ ಆಯಿತು; ಕುಡಿದದ್ದೂ ಆಯಿತು. ಆದರೆ ಅದು ಪಾನಕವೋ ಹಾಲುನೀರೋ? ಕಾಫಿಯಂತೂ ಆಗಿದ್ದಿಲ್ಲ. ರಾಯರು ರುಚಿಯಾದ ಕಾಫಿ ಕುಡಿದಿದ್ದರು; ಆದರೆ ಎಂದೂ ಮಾಡಿದ್ದಿಲ್ಲ. ಎಷ್ಟೋ ಸಾರಿ ಕಾಫಿ ಚೆನ್ನಾಗಿಲ್ಲವೆಂದು ಆಕ್ಷೇಪಿಸಿದ್ದರು. ಆದರೆ ಈ ದಿನದಷ್ಟು ಎಂದೂ ಕೆಟ್ಟಿರಲಿಲ್ಲ. "ಮಾಡಿದ್ದುಣ್ಣೋ ಮಹಾರಾಯ!"ಎಂದು ಅದನ್ನೇ ಕುಡಿದರು. ತಮ್ಮ ಹೆಂಡತಿಗೂ ಸ್ವಲ್ಪ ಹಾಕಿದರು. ಅವರು ಕುಡಿದು "ಚೆನ್ನಾಗಿದೆ" ಎಂದರು.

ಕಾಫಿ ಕುಡಿದ ಮೇಲೆ ಇಸ್ಪೀಟಿನ ನೆನಪಾಯಿತು. ಆದರೆ ಇಸ್ಪೀಟಾಟಕ್ಕೆ ಹೊರಟರೆ ಅಡುಗೆಮಾಡುವವರು ಯಾರು? ನಮ್ಮೂರಲ್ಲಿ ಅವರ ಸಂಬಂಧಿಗಳು ಯಾರೂ ಇರಲಿಲ್ಲ; ವೈಷ್ಣವರ ಮನೆಗಳೇ ಕಡಿಮೆ. ಮಕ್ಕಳೆಲ್ಲರೂ ಚಿಕ್ಕವರು. ವರ ಹುಡುಕಬೇಕೆಂಬ ಚಿಂತೆ ಇಲ್ಲವೆಂದು ಇನ್ನೊಬ್ಬರ ಮುಂದೆ— ಎಷ್ಟೋ ಸಾರಿ—ಹೇಳಿ ರಾಯರು ಸಂತೋಷಪಟ್ಟಿದ್ದರು, ಆದರೆ

(೫೯ ನೆಯ ಪುಟದಿಂದ ಮುಂದೆಸಾಗಿದ್ದು)

ಕಟ್ಟಿಸುವವರು, ಆಸ್ಪತ್ರೆ, ವಿದ್ಯಾಲಯ, ಅನ್ನಸತ್ರ ಮೊದಲಾದುವುಗಳನ್ನು ನಿರ್ಮಿಸಿ 'ದಾನಮಾಡಿದೆವು, ಧರ್ಮಕಟ್ಟಿಕೊಂಡೆವು' ಎಂದು ಹೆಮ್ಮೆಪಡುವವರು ಎಷ್ಟುಮಂದಿ ಇರುವುದಿಲ್ಲ? ಇವರಲ್ಲಿಯ ಬಹಳ ಜನರು 'ಧರ್ಮವೀರ' 'ಧರ್ಮನಿರತ' 'ದೀನಬಂಧು' ಮೊದಲಾದ ಶಬ್ದದ ಬಡನೆಕಾಯಿಗೆ ಬಾಯಿಬಿಡುತ್ತಾರೆ. ಮಾನಪತ್ರದ ಆಶೆ, ಪತ್ರಿಕೆಗಳಲ್ಲಿಯ ಹೊಗಳಿಕೆಗಳಿಗೆ ಕಾದಿರುತ್ತಾರೆ. ದಾನಮಾಡಿದ ಮರುದಿನವೇ ಪತ್ರಿಕೆಗೆ ಅದನ್ನು ತಿಳಿಸಿ, ತಮ್ಮ ಹೆಸರು ಅದರಲ್ಲಿ ಬಂದಿದೆಯೇ ಇಲ್ಲವೇ ಎಂಬುದನ್ನು ನಿರೀಕ್ಷಿಸದ ಮಹನೀಯರು ಒಬ್ಬರಾದರೂ ಇದ್ದಾರೆಯೆ? ಗುಪ್ತದಾನಮಾಡಿ ಗುಪ್ತಪ್ರಚಾರ ನಡೆಸುವವರು ಇನ್ನಿಷ್ಟು ಬುದ್ಧಿವಂತರೋ ಸ್ವಾರ್ಥಪ್ರಿಯರೋ ಇರುವರಲ್ಲದೆ ಬೇರೆಯಲ್ಲ.

ಹೀಗೆ ಎತ್ತ ನೋಡಿದರೂ ಸ್ಪಷ್ಟಾಸ್ಪಷ್ಟವಾದ ಸ್ವಾರ್ಥವು ಅಡಗಿರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಹೀಗಿರುವಾಗ ದಾನ, ಧರ್ಮ, ಪರೋಪಕಾರ, ಇವರಿಗೆ ಅವರು, ಅವರಿಗೆ ಇವರು—ಮೊದಲಾದ ಶಬ್ದಗಳ ಮುಂಡಾಸವು ಜನತೆಯ ಮೇಲೆ ಹೊದಿಸಿದ ಸಮ್ಮೋಹನವಲ್ಲದೆ ಮತ್ತೇನು? ಆದುದರಿಂದ ಹಿಂದೆ ಹೇಳಿದ 'ಆತ್ಮನಸ್ತು....' ತನಗಾಗಿ ಮಾಡುವವನಿಗೆ ಎಲ್ಲವೂ ಪ್ರಿಯವಾಗುತ್ತದೆ— ಎಂಬುದರಲ್ಲಿ ಸಂಪೂರ್ಣ ಸತ್ಯವಿದೆ. ಎಂತಲೆ 'ಯಾರಿಗೆ ಯಾರು?' ಎಂದು ಕೇಳಿದರೆ 'ತನಗೆ ತಾನಲ್ಲದೆ ಯಾರೂ ಇನ್ನೊಬ್ಬರಿಗಾಗಿ ಜೀವಿಸಿರುವುದಿಲ್ಲ!' 'ಯಾರಿಗೆ ಯಾರೂ ಇಲ್ಲ!' 'ಧರ್ಮ-ದಾನ-ಪರೋಪಕಾರ ಮೊದಲಾದುವುಗಳು ಬರಿಯ ಮಾತಿನ ಬಡಿವಾರವಾಗಿರುತ್ತವೆ!' ಎಂದು ಹೇಳಬೇಕಾಗುತ್ತದೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಈಗ "ಒಬ್ಬ ಹೆಣ್ಣುಮಗಳಿದ್ದಿದ್ದರೆ ಈ ತಾಪತ್ರಯವಿರುತ್ತಿರಲಿಲ್ಲವಲ್ಲ!" ಎಂದು ವ್ಯಸನಪಟ್ಟರು. ಇಸ್ಪೀಟಾಟಕ್ಕೆ ಚಕ್ರಬಿದ್ದುದರಿಂದ ಮನಸ್ಸೆಲ್ಲಾ ತಳಮಳಗೊಂಡಿತು. ಹೆಚ್ಚು ಹೊತ್ತು ಕಳೆಯುವಹಾಗಿರಲಿಲ್ಲ. ಆಗಲೇ ಏಳು ಘಂಟೆಯಾಗಿತ್ತು. ಸ್ವಲ್ಪ ಹೊತ್ತಾದರೆ ಮಕ್ಕಳ ಕಾಟವನ್ನು ತಡೆಯುವುದು ಕಷ್ಟವಾಗುತ್ತದೆ, ಆದುದರಿಂದ ಅಡುಗೆಯ ಕೆಲಸಕ್ಕೆ ಪ್ರಾರಂಭಿಸಿದರು. ಕಾಫಿಗಾಗಿ ಕಷ್ಟಪಟ್ಟು ಹೊತ್ತಿಸಿದ ಬೆಂಕೆಯೂ ಹಾಗೆಯೇ ಇತ್ತು. ರಾಯರು ಅಡಿಗೆಮಾಡಿ ಅರಿಯರು; ಆದುದರಿಂದ ಹೆಂಡತಿಯ ಕೈಯಲ್ಲಿ ಪಾಠವೇಳಿಸಿಕೊಳ್ಳಬೇಕಾಯಿತು. ಅಡಿಗೆಮನೆಯಿಂದಲೇ ಕೂಗಿದರು: "ಯಾವುದರಲ್ಲೇ ಅನ್ನಕ್ಕಿಡೋದು?". "ತಪ್ಪಲೆ ತೊಳೆದೇ ಇಲ್ಲ!" ಇನ್ನೊಂದು ಗಂಡಾಂತರ ಬಂದೊದಗಿತು. ಎದುರಿಸಲೇ ಬೇಕು; ಬೇರೆ ದಾರಿ ಇಲ್ಲ. ಕಷ್ಟಪಟ್ಟು ಮುಸುರೆ ತೊಳೆದರು. "ಎಷ್ಟು ಅಕ್ಕಿ ಹಾಕಲಿ?" "ಮೂರು ಪಾವು! ಸ್ವಲ್ಪ ಅಕ್ಕಿ ಹಿಟ್ಟು ತಪ್ಪಲೆಗೆ ಹಚ್ಚಿಡಬೇಕಾಗಿತ್ತು!" ಎಂದುತ್ತರಕ್ಕೆ ಬಂತು. ರಾಯರು ಹೆಂಡತಿ ಹೇಳಿದಂತೆ ಎಲ್ಲವನ್ನೂ ಮಾಡಿದರು. ಮಧ್ಯಾಹ್ನದ ಸಾರು ಚೆನ್ನಾಗಿಲ್ಲವೆಂದು ಆಕ್ಷೇಪಣೆ ಮಾಡಿದುದರಿಂದ, ಸೀತಮ್ಮ ಅದನ್ನು ತಿರುಪೆಯವರಿಗೆ ಕೊಟ್ಟುಬಿಟ್ಟಿದ್ದರು. ಬೇರೆ ಸಾರು ಮಾಡಲೇ ಬೇಕಾಯಿತು.

ಅಡಿಗೆಒಲೆಯ ಮುಂದೆ ನೆಲವೆಲ್ಲಾ ಕೆಸರಾಗಿ ಹೋಗಿದೆ, ಪಾತ್ರೆಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಸಾರಿನ ಪಾತ್ರೆಯನ್ನೂ ಒಲೆಯಮೇಲಿಟ್ಟರು. "ಅನ್ನ ಕುದಿ ಬಂದಿದ್ದರೆ ಸ್ವಲ್ಪ ಸೌಟಿನಿಂದ ಕೈಯಾಡಬೇಕಾಗಿತ್ತು," ಎಂದರು ಸೀತಮ್ಮ. ರಾಯರು ಅಕ್ಕಿಗೆ ನೀರನ್ನು ಹಾಕುವುದನ್ನೇ ಮರೆತುಬಿಟ್ಟಿದ್ದರು. ಅಕ್ಕಿ ಹೊತ್ತಿ ಹೋಗಿತ್ತು. ಸೀತಮ್ಮನವರು ಮನಸ್ಸಿನಲ್ಲಿಯೆ ನಕ್ಕರು. ರಾಯರು ತಾವು ಮಾಡಿದ ಕೆಲಸಕ್ಕೆ ತಾವೇ ನಾಚಿಕೆಪಟ್ಟುಕೊಂಡರು. ತಮ್ಮನ್ನು ತಾವೇ ಬೈದುಕೊಂಡರು. ಆದರೂ ವಿಧಿ ಇಲ್ಲ; ಮುಂದೆ ಕೆಲಸವು ಸಾಗಬೇಕು, "ಸಾರಿಗೆ ಬೇಳೆ ಎಷ್ಟ್ಹಾಕಲೇ?" "ಅರ್ಧಪಾವು" ಎಂದರು ಸೀತಮ್ಮ. "ಹುಣಸೇಹಣ್ಣು ಇಷ್ಟ್ಹಾಕಲೇನೇ" ಎಂದು ಬಂದು ಸೀತಮ್ಮನಿಗೆ ತೋರಿಸಿಕೊಂಡು ಹೋದರು. ಅಂತೂ ಕಷ್ಟಪಟ್ಟು ಸಾರುಮಾಡಿದ್ದಾಯಿತು. ರಾಯರ ಮೈಮೇಲೆ ಬೆವರು ಏಕಪ್ರಕಾರವಾಗಿ ಹರಿಯುತ್ತಿದೆ. ಬೇರೆ ಅಕ್ಕಿ ಹಾಕಿ ಅನ್ನಕ್ಕಿಟ್ಟರು. ಮಕ್ಕಳ ಅಳು ಪ್ರಾರಂಭವಾಯಿತು. ಅನ್ನ ಇನ್ನೂ ಆಗಿಲ್ಲ, ಗದ್ದಲಪ್ಪೋ ಗದ್ದಲ! ಇಸ್ಪೀಟು ಎಲೆಗಳು ಒಂದೊಂದಾಗಿ ರಾಯರ ಮುಂದೆ ಸುಳಿದು ಹೋಗುತ್ತಿವೆ. ಹುಡುಗರ ಅಳು ಬೇರೆ, ತಮಗೆ ಹಸಿವು ಬೇರೆ. ಒಂದು ಕ್ಷಣದಲ್ಲಿ ರಾಯರಿಗೆ ಜೀವನದಲ್ಲಿ ಬೇಸರು ಬಂದಿತು; ಸಂಸಾರದಲ್ಲಿ ವೈರಾಗ್ಯ ಬಂದಿತು. ಇದೆಲ್ಲವನ್ನೂ ನೋಡುತ್ತಾ ಸೀತಮ್ಮನವರು ಮೌನದಿಂದ ಕುಳಿತಿದ್ದರು. ಹತ್ತುಘಂಟೆ ಹೊಡೆಯಿತು, ಇನ್ನೂ ಅಡಿಗೆಯಾಗಿಲ್ಲ. ಪ್ರತಿದಿನವೂ ಎಂಟುಘಂಟೆಗೆ "ಹೊತ್ತಾಯಿತು" ಎಂದು ಕೂಗುತ್ತಿದ್ದುದು ನೆನಪಿಗೆ ಬಂದು ನಾಚಿಕೆಪಟ್ಟಿರಬಹುದು. ಹೆಂಡತಿಗಾಗುವ ಕಷ್ಟ ಸ್ವಲ್ಪ ಅನುಭವಕ್ಕೆ ಬಂದಿತು.

ಅಂತೂ ಕೊನೆಗೆ ಅಡಿಗೆಯಾಯಿತು. ಮಕ್ಕಳಿಗೆ ಬಡಿಸಿ ತಾವೂ ಊಟಮಾಡಿದರು. ಅನ್ನ ಅಕ್ಕಿಅಕ್ಕಿಯಾಗಿಯೇ ಇತ್ತು; "Hunger is the best saucer" ಎಂಬಂತೆ ಅದನ್ನೇ ತಿಂದರು. ಮಧ್ಯಾಹ್ನದ ಸಾರೇ ಇದ್ದಿದ್ದರೆ ಚೆನ್ನಾಗಿತ್ತೆಂದು ಎನಿಸಿತು. ಕೊನೆಗೆ ತಮ್ಮ ಊಟವಾದ ಮೇಲೆ ರಾಯರು ಹೆಂಡತಿಗೆ ಬಡಿಸಿದರು. ಬಹಳ ಸಂತೋಷದಿಂದ ಸೀತಮ್ಮ ಊಟಮಾಡಿದರು. ತಮ್ಮ ಗಂಡನನ್ನು ಸಮಾಧಾನಪಡಿಸುವುದಕ್ಕೋಸ್ಕರ "ಸಾರು ಚೆನ್ನಾಗಿದೆ!" ಎಂದು ಮೂರು ನಾಲ್ಕು ಸಾರಿ ಹೇಳಿದರು. ಆಗಲೇ ಹನ್ನೊಂದು ಘಂಟೆಯಾಗಿತ್ತು, ರಾಯರಿಗೆ ಸಾಕಾಗಿ ಹೋಗಿತ್ತು. ಇದ್ದುದೆಲ್ಲವನ್ನೂ ಹಾಗೆಯೆ ಬಿಟ್ಟು "ಹುಶ್ಶಪ್ಪ" ಎಂದು ರಾಯರು ಹಾಸಿಗೆ ಹಾಸಿದರು. "ಇನ್ಮೇಲೆ ಖಂಡಿತ ಅಡಿಗೆ ಚೆನ್ನಾಗಿಲ್ಲ" "ಊಟಕ್ಕೆ ಹೊತ್ತಾಯಿತು" ಎಂದು ಕೂಗುವುದಿಲ್ಲವೆಂದು ಅಂದೆಯೆ ಪ್ರತಿಜ್ಞೆ ಮಾಡಿಕೊಂಡರು.

ಸಾಹಿತಿ ಮತ್ತು ಸಾಮಾನ್ಯ

ಶ್ರೀ. ಬಿ. ಎಚ್. ಶ್ರೀಧರ ಎಂ. ಎ.

“ ಸಾರಣಿಗೆಯಿಂದ ಹಿಟ್ಟನ್ನು ಸಾರಣಿಸಿ ತೆಗೆದಂತೆ ಧೀಮಂತರು
ಭಾಷೆಯನ್ನು ಸೃಜಿಸಿದರು. ಅಂತಹ ಭಾಷೆಯಲ್ಲಿ ಗೆಳೆಯರು
ಗೆಳೆತನದ ಕುರುಹನ್ನು ಕಾಣುವರು ; ಅಲ್ಲಿ ವಾಗ್ದೇವಿಯು
ನಿಹಿತಸದರ್ಥದಿಂದ ರಂಜಿಸುತ್ತಾಳೆ ”— ಋಗ್ವೇದ ಮಂಡಲ ೧೦.

★

ಅರ್ಥಪ್ರಕಾಶವೇ ಮುಖ್ಯ ಧ್ಯೇಯವಾಗಿ ಉಳ್ಳ ಭಾಷೆಗೆ ಇತರ ಉದ್ದೇಶಗಳು ಗೌಣವೆಂಬುದು ಸ್ಪಷ್ಟ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ನಿರುಕ್ತಕಾರನು— ವೇದವನ್ನು ಅಧ್ಯಯನ ಮಾಡಿ ಅರ್ಥವನ್ನು ಅರಿಯದವನು ಭಾರವನ್ನು ಹೊರುವ-ಗುತ್ತಿನ ಕಂಬಕ್ಕೆ ಸಮಾನನು—ಎಂದು ಉದ್ಗರಿಸಿರುತ್ತಾನೆ. ಅರ್ಥರಹಿತವಾದುದು ಎಂದರೆ ಉದ್ದಿಷ್ಟಾರ್ಥವನ್ನು ಪ್ರಕಟಿಸದಿರುವ ಮಾತು ‘ ಮೊಗೆಯ ತೂತು ’ ಎಂಬುದು ಸರ್ವಾಭಿಮತವು.

ಭಾಷೆಯ ರಂಗಸ್ಥಲದಲ್ಲಿ ಸಾಹಿತಿಯ ಭೂಮಿಕೆಯು ಬಹಳ ಪ್ರಧಾನವಾದುದು. ಸಹಿತವಾದುದು ಸಾಹಿತ್ಯವೆಂಬುದು ಒಂದು ಮೌಲಿಕ ತತ್ತ್ವ. ಆ ವಾಕ್ಯವೇ ಸಾಹಿತ್ಯವು ಶಾಸ್ತ್ರ ಅಥವಾ ವಿಜ್ಞಾನದಿಂದ ಭಿನ್ನವೆಂಬುದನ್ನು ಘೋಷಿಸುತ್ತದೆ. ಸಾಹಿತ್ಯ ಅಥವಾ ಯಾವ ಕಲೆಯೇ ಆಗಲಿ, ಸಂಕಲನಪ್ರಜ್ಞಾ (Synthetic view) ಜನ್ಯವದು. ತದ್ವಿರುದ್ಧವಾಗಿ ಅರ್ಥಶಾಸನಕ್ಕೆ ಹೊರಟ ಶಾಸ್ತ್ರವು ವ್ಯವಕಲನಪ್ರಜ್ಞಾ (Analytic view) ಜನ್ಯವು. ಸಾಹಿತಿಯು ಸರ್ವಸಾಮಾನ್ಯವಾದ ಅನುಭವ ಸಾಗರದಲ್ಲಿ ತನ್ನ ವಾಗ್ವಿದ್ಯುತ್ಪ್ರಕಾಶವನ್ನು ಬೀರಿ, ಆಳದಲ್ಲಿರುವ ರತ್ನಗಳನ್ನು ರಸಿಕರ ದೃಕ್ಪಥಕ್ಕೆ ತರುತ್ತಾನೆ ; ನಾನಾವಿಧವಾದ ಬಣ್ಣದ ಬೆಳಕುಗಳನ್ನು ನಾನಾ ಕಡೆಯಿಂದ ಬಿಟ್ಟು ಆ ರತ್ನದ ಕಾಂತಿಯನ್ನು ಹೆಚ್ಚಿಸಿ, ಜನದ ಮನವನ್ನು ಕಲಾಮಾಯೆಯಿಂದ ತಣಿಸುವನು. ತನ್ನ ಇಷ್ಟಾರ್ಥವ್ಯವಚ್ಛಿನ್ನ ಪದಾವಲಿಯಿಂದ ಮನೋಹರಣವನ್ನೇ ಗುರಿಯಾಗಿಟ್ಟುಕೊಂಡು ಪ್ರಬಂಧಕಾರನು ಪದವಿನ್ಯಾಸ ಮಾಡುತ್ತಾನೆ. ಅಂತೆಯೇ ಒಬ್ಬ ರಸಿಕನು—

ಆ ವನಿತೆಯಿಂದೇನು ಆ ಕವಿತೆಯಿಂದೇನು—
ಆನಳವನ್ನಳಿಸೊ ಹದನ್ನಾಸದಲೆ ಬಗೆ ಸೆಳೆಯೆ ?

ಎಂದಿದ್ದಾನೆ. ಸಾಹಿತಿಯ ವಾಗ್ಧಾರೆಯು ಹೊರಟ ಕೂಡಲೇ ಸಭಿಕರು ಮೋಹನಾಸ್ತ್ರಬದ್ಧರಂತೆ ಆಲಿಸುವುದು ಉತ್ತಮ ಸಾಹಿತ್ಯದ ಗುರುತು. ಹೀಗೆ ಇಷ್ಟಾರ್ಥವನ್ನು ಮನೋಹರವಾದ ರೀತಿಯಲ್ಲಿ ಸಹೃದಯರಿಗೆ ಸಾಕ್ಷಾತ್ಕಾರಮಾಡಿಸುವ ಸಾಹಿತಿಯ ಭಾಷೆಯು ಸ್ವಾಭಾವಿಕವಾಗಿ ಚಮತ್ಕಾರವುಳ್ಳದ್ದೇ ಆಗಿರಬೇಕು. ಸಾಹಿತಿಯ ಉದ್ದಿಷ್ಟಾರ್ಥಕ್ಕೇ* ರಸವೆಂದು ಪ್ರತೀತಿ. ಅಂತಹ ರಸಸಿದ್ಧಿಗೆ ಚಮತ್ಕಾರವೇ ಸಾಧನ. ಆ ಚಮತ್ಕಾರವು ಅಲಂಕಾರ ವರ್ಗಗಳಿಗೆ ಸಾಧ್ಯ. ಅಲಂಕಾರವೆಂದು ಕರೆಯಲ್ಪಡುವ ಉಪಕರಣಗಳು ಅನೇಕ ವಿಧವಾಗಿವೆ. ಅಲಂಕಾರ (Figures of Speech) ಗಳು ಒಂದು ಬಗೆಯಿಂದ ಮಾತಿನ ಜೋಡಣೆಯ ವಿವಿಧ ರೀತಿಗಳು, ಭಂಗಿಗಳು, ಭಣಿತಿಗಳು ಅಥವಾ ಗತ್ತುಗಳೆನ್ನಬೇಕಾಗುತ್ತದೆ. ಇವುಗಳ ಪ್ರಯೋಗದಿಂದ ಅರ್ಥವು ಮನೋಹಾರಿಯಾಗಿ ಸ್ಪಷ್ಟವಾಗುತ್ತದೆ, ನಿರ್ದಿಷ್ಟವಾಗುತ್ತದೆ, ಖಚಿತವಾಗುತ್ತದೆ, ಮನದಲ್ಲಿ ಅಚ್ಚೊತ್ತಿದಂತಾಗುತ್ತದೆ, ಸಾಕ್ಷಾತ್ಕಾರವಾಗುತ್ತದೆ. ಆದದಿಂದಲೇ ಸಾಹಿತಿಗೆ ಇವು ಬಹಳ ಪ್ರಿಯವಾದುವು ಎನಿಸಿರುತ್ತವೆ. ಉಪಮಾ, ರೂಪಕ, ದೀಪಕ ಇತ್ಯಾದಿ ಇವು ಅಸಂಖ್ಯಾತವಿರುತ್ತವೆ. ಮಾತುಗಳು ಅರ್ಥಗಳು ಹೇಗೇ ಅನಂತವೋ ಹಾಗೇ ತತ್ಸಾಧಕಗಳಾದ ಇವೂ ಅನಂತವಿರುತ್ತವೆ. ರೂಪಗಳಿಗೆ ಚಿತ್ರಗಳಿಗೆ ಉಪಮೆಗಳಿಗೆ ಸಾಹಿತ್ಯವು ಗಣಿ ; ‘ ರಂಗೊಂದು ದಂಗೊಂದು ಗುಂಗೊಂದು ಒಂದಕ್ಕೊಂದು ಹತ್ತಾಗಿ ನೂರಾಗಿ ಸುಳಿದ ’ ಹಾಗೆ ಭಾವವೀಚಿಗಳು ಬಹುವಿಧದಿಂದ ಬಂಬಲಾಗಿ ಸೌಂದರ್ಯ ಮಕರಂದವನ್ನು ಸಹೃದಯನಿಗೆ ಉಣಿಸುತ್ತವೆ.

ಸಾಮಾನ್ಯರಾದ ರಸಿಕರೆನಿಸಿದ ಆಸ್ವಾದನಪರರಾದ ವಾಚಕ ವರ್ಗವು ಸಾಹಿತ್ಯದ ಫಲವೃಕ್ಷದ ಭೋಕ್ತಾರರು. ಸಾಹಿತಿಗೂ ರಸಿಕರಿಗೂ ಸಹೃದಯತೆ, ಸಹಾನುಭೂತಿ, ಗೆಳೆತನ, ಪರಸ್ಪರ ಗುಣಗ್ರಹಣತತ್ಪರತೆ ಇರಬೇಕೆಂಬುದನ್ನು ಈಗ ವಿವರಿಸಲಾಗುತ್ತದೆ. ವಕ್ತಾರನ ಉದ್ದೇಶ (Purpose) ಇಷ್ಟ (Intention) ಇವುಗಳು ಸ್ಪಷ್ಟವಾದ ಹೊರತೂ ಶ್ರೋತೃಗಳಿಗೆ ಅರ್ಥಸಿದ್ಧಿಯಾಗುವುದಿಲ್ಲ. ಪ್ರಬಂಧಕಾರನು ಅಥವಾ ಭಾಷಣಕಾರನು ಸಾಮಾಜಿಕರ ಮನಃಪರಿಪಾಕ ಅಥವಾ ಸಂಸ್ಕಾರವನ್ನು

---

* ರಸದ ಬಗ್ಗೆ ಹೆಚ್ಚಿನ ವಿವರಣವನ್ನು ಮುಂದೆ ಬೇರೆಯಾಗಿ ಬರೆಯಲಾಗುವುದು. ಲೇ.

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—**'ಆನಂದಕಂದ'**

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳೆವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನ ವನ್ನು ಪಡೆದು ನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು.

ಅರಿತು ವಾಕ್ಯಪ್ರಯೋಗ ಮಾಡದಿದ್ದರೆ ಅವನ ಇಷ್ಟವು ಕೈ-ಗೂಡುವುದಿಲ್ಲ. ಅವನ ಉದ್ದಂಡ ಪಾಂಡಿತ್ಯವು ಗೋರ್ಕಲ್ಲ ಮೇಲೆ ಮಳೆಗರೆದಂತೆಯೇ ಆದೀತು. ಅದರಿಂದಲೇ ಔಚಿತ್ಯೈಕ-ನಿಕೇತನಃ ಕವಿ:' ಎಂದಿದ್ದಾರೆ. ಯಾವ ಪದವನ್ನು ಯಾವ ವಾಕ್ಯವನ್ನು ಯಾವ ಅರ್ಥವನ್ನು ಎಲ್ಲಿ ಹೇಗೆ ನಿರೂಪಿಸಿದರೆ ಉತ್ಕೃಷ್ಟವೆನಿಸುವುದೆಂಬುದು ಸದಾ ಪ್ರಯೋಗಕಾರನ ಗಮನ ದಲ್ಲಿರಬೇಕು. ಹಾಗಿದ್ದರೆ ಮಾತ್ರ ಗುರಿಕಾರನು ಒಂದೇ ಏಟಿಗೆ ಗುರಿಗೆ ಗುಂಡನ್ನು ಬಾರಿಸಿದಂತೆ, ಉದ್ದಿಷ್ಟಪರಿಣಾಮವು ಫಲಿ-ಸುವುದು ; ಇಲ್ಲದಿದ್ದರೆ ವ್ಯರ್ಥವೇ ಸರಿ!

ಹಾಗೇ ಈ ಸಾಮಾನ್ಯರಿಗೂ ಒಂದು ಮಾತು : ಸಾಹಿತಿಯು ಕೈಯಲ್ಲಾದಷ್ಟು ಬಗ್ಗಿ ಬಂದು, ಜನತಾಜನಾರ್ದನ ಪ್ರೀತ್ಯರ್ಥ-ವಾಗಿ ನಾನಾವಿಧವಾಗಿ ನೋಂಪಿಯನ್ನು ನೋಂತು, ತನ್ನ ವಾಗ್ವೈಖರಿಯಿಂದ ಮಯೂರಪುಚ್ಛ ಪ್ರಸರಣದಂತೆ ಭಾವಪ್ರಕ-ಟನ ಮಾಡಲು ಹೇಗೆ ಹಾತೊರೆಯುವನೋ ಹಾಗೇ ತದನು-ಕೂಲವಾಗಿ ರಸಿಕರು ಸಾರ್ಥಕನಾಮರಾಗಬೇಕಾದರೆ ತಮ್ಮ ಸಂಸ್ಕಾರವನ್ನು ಬೆಳೆಸಿಯಿಕೊಂಡು ಶ್ರುತ, ಯತ್ನ ಇವೆರಡರ ಪರಿಣಾಮವಾಗಿ ಲಬ್ಧವಾದ ಪರಿಪಾಕದಿಂದ ಶ್ರವಣ ಅಥವಾ ಆಸ್ವಾದನಾತತ್ಪರರಿರಬೇಕು. ಅಲ್ಲದಿದ್ದರೆ. 'ಎತ್ತು ತೆಂಗಿನ-ಕಾಯ ಬಲ್ಲುದೆ, ಕತ್ತೆಯರಿವುದೆ ಕತ್ತುರಿಯ ಪರಿ' ಎಂಬಂತೆ ಸಾಹಿತ್ಯದ ಬುಡತಲೆಗಳೇನೆಂಬುದರ ನೆರಳನ್ನೂ ಅರಿಯಲಾರರು, ನನ್ನ ಮಿತ್ರರೊಬ್ಬರು—**'ಆಧುನಿಕ ಕವಿತೆ ಅರ್ಥವೇ ಆಗುವುದಿಲ್ಲ'** ಎಂದು ಅಪ್ಪಣೆ ಕೊಡಿಸಿದರು. ಅವರ ಹೇಳಿಕೆಯಂತೇ ಸೃಷ್ಟಿ-ಯಾಗುತ್ತಿರುವ ಕವಿತೆ ಲೇಖನ ಇವುಗಳ ಸಂಖ್ಯೆಗೇನೂ ಕಡಿಮೆ ಇಲ್ಲವೆಂಬುದು ನಿಜವಾದರೂ ಅವರಂತೆ ಆ ಮಾತನ್ನು ಸಾಧಾರಣವಾಗಿಸುವುದು ಯುಕ್ತವಲ್ಲ. ಅದರಿಂದ ಅವರ ಅಪಕ್ವತೆಯು ಹೊರಬೀಳುವುದೇ ಹೊರತು ಆಧುನಿಕ ಬರೆಹದ ಅಪ್ರಯೋಜಕತೆಯಲ್ಲ. ಸಹೃದಯನ ಲಕ್ಷಣವನ್ನು ಅಭಿನವ-ಗುಪ್ತನು ಹೀಗೆ ಹೇಳಿದ್ದಾನೆ :

'ಕಾವ್ಯಾನುಶೀಲನಾಭ್ಯಾಸವಶದಿಂದ ವಿಶದ ಮಾಡಲ್ಪಟ್ಟ ಬಗೆಗನ್ನಡಿಯಲ್ಲಿ ವರ್ಣನೀಯ ವಸ್ತುವಿನೊಡನೆ ತನ್ಮಯ-ವಾಗುವ ಯೋಗ್ಯತೆ ಯಾರಿಗಿದೆಯೋ ಅಂತಹ (ಹೃದಯ-ಸಂವಾದಭಾಜಃ) ಬಗೆವಾತಿಗೆ ಪಾತ್ರರಾದವರು ಸಹೃದಯರು'. ಉತ್ಸವಮೂರ್ತಿಯನ್ನು ಸ್ವಾಗತಿಸಲು ಸಿದ್ಧಪಡಿಸಿದ ಓಲಗ-ಮಂಟಪದಂತೆ ಕವಿ ನಿರೂಪಿಸುವ ಅರ್ಥವನ್ನು ಸ್ವಾಗತಿಸಲು ಅರ್ಥಾತ್ ಸ್ವೀಕರಿಸಲು ರಸಿಕರ ಮನವು ಸಸನ್ನಾಹವಾಗಿರ-ಬೇಕು. ದಿಗ್ವಿಜಯ ಮಾಡಿ ಸ್ವಭವನಕ್ಕೈತರುವ ರಾಜ-ಕುಮಾರನನ್ನು ಎದುರುಗೊಳ್ಳಲು ಸುವಾಸಿನಿಯರು ಬರುವಂತೆ, ಸಾಹಿತಿಯು ಕಡೆದು ಮೆರೆವಣಿಗೆಯಿಂದ ತಂದ ಅರ್ಥಮೂರ್ತಿ-ಯನ್ನು **ಸವಾಸನರಾದ** ಸಭ್ಯರು ಸ್ವಾಗತಿಸಿದಾಗ ಮಾತ್ರ ಆ ಸಾಹಿತ್ಯದ ಸಾಹಿತಿಯ ಮತ್ತು ಸಾಮಾಜಿಕರ ಉದ್ದೇಶವು ನೆರವೇರೀತು, ಜೀವನವು ಸಾರ್ಥಕವೆನಿಸೀತು, ಅದಾಗದಿದ್ದರೆ ಇದಾಗುವುದಿಲ್ಲ! ಕೈಕೆಸರಾದರೆ ಬಾಯಿ ಮೊಸರಾಗುವುದೆಂಬ ಗಾದೆಯಂತೆ ಯತ್ನಶೀಲರಾಗಿ ಓದುಗರು ಒಂದು ಮಟ್ಟವನ್ನು ಹತ್ತಿದ ಹೊರತು ಸಾಹಿತ್ಯದಿಂದ ಅರ್ಥಾತ್ ಉತ್ತಮ ಸಾಹಿತ್ಯ-ದಿಂದ ಅವರು ಏನನ್ನೂ ಪಡೆಯಲಾರರು. ಇದೇ ಅಭಿಪ್ರಾಯ-ದಿಂದ ಎ. ರಿಚರ್ಡ್ಸ್ ಎಂಬ ಐರೋಪ್ಯನು—ಒಂದು ಸಂಪೂರ್ಣ-ವೆನಿಸುವ ಅರ್ಥಾವಬೋಧವು ಅಭಿಪ್ರಾಯದ ಅಸ್ಖಲಿತಮಾರ್ಗ, ಭಾವದ ಸರಿಯಾದ ಉದ್ರೇಚನ, ಭಣಿತಿ ವೈಚಿತ್ರ್ಯದ ನಿರ್ದಿಷ್ಟ ತಿಳಿವಳಿಕೆ ಮತ್ತು ವಿವಕ್ಷೆಯ ಸಮಗ್ರ ಪರಿಜ್ಞಾನ ಇವುಗಳಷ್ಟ-ನ್ನಲ್ಲದೆ ಮತ್ತೂ ಮುಂದೆ, ಇವುಗಳಿಂದ ಲಬ್ಧವಾದ ಅರ್ಥ-ವಿಶೇಷಗಳಲ್ಲಿ ಪರಸ್ಪರವಾಗಿ ಇರುವ ನಿಶ್ಚಿತಕ್ರಮ ಮತ್ತು ಪರಿಮಾಣಗಳಿಂದ, ಪ್ರಕಾಶವಾಗಿ ಅಲ್ಲದಿದ್ದರೂ, ಅವುಗಳ ಪರಸ್ಪರಾವಲಂಬನ, ಅನುಗಮನ ಮತ್ತು ಅಂತಃಸಂಬಂಧ-ಗಳನ್ನು ಹಿಡಿಯುವುದಾಗಿದೆ—ಎಂದಿದ್ದಾನೆ. ಆದುದರಿಂದ ಸಾಮಾಜಿಕರು ಹೀಗೆ ಪೂರ್ಣಾರ್ಥಗ್ರಹಣದಲ್ಲಿ ಚತುರರಿರ-ಬೇಕು; ವಾಗ್ದೇವತೆಯ ಅನನ್ಯ ಉಪಾಸನೆಯಿಂದಲೂ ಸ್ವಾನುಭವ ವಿಮರ್ಶನಜನ್ಯ ಜ್ಞಾನದಿಂದಲೂ ಸಂಸ್ಕೃತರಾಗಿ ಸಾಹಿತ್ಯಾದಿ ಕಲಾಸ್ವಾದಕ್ಕೆ ತೊಡಗಿದರೆ ಮಾತ್ರ ಕೃತಕೃತ್ಯ-ರಾದಾರೇ ವಿನಾ, ತಚ್ಛೂನ್ಯರಾದರೆ—

ಶೂನ್ಯಾಚ್ಛೂನ್ಯಂಹಿ ಲಭ್ಯತೇ!

ಸಂಶೋಧಕನ ಸಂತಾಪ

ಶ್ರೀರಂಗ

★

ಲೇಖನೀರು*— ೧

'ಕುರುಬ' ಎಂಬ ಜಾತಿವಾಚಕ ಪದವನ್ನು ಸಂಸ್ಕೃತ ಸಂಪ್ರದಾಯದ ವ್ಯುತ್ಪತ್ತಿ-ಯಿಂದಲೂ ಸಿದ್ಧಮಾಡಬಹುದು; ದ್ರಾವಿಡ ಪರಂಪರೆಯ ವ್ಯುತ್ಪತ್ತಿಕ್ರಮ-ದಿಂದಲೂ ಸಿದ್ಧಮಾಡಬಹುದು. ಸಂಶೋಧಕರಿಗೆ ಯಾವುದು ತಾನೆ ಅಸಾಧ್ಯ?

★

ನನ್ನದು ಕುರುಬ ಜಾತಿ. ಇದನ್ನು ಕೇಳಿ ತಮಗೆ ಆಶ್ಚರ್ಯ-ವಾಗಬಹುದು; ಕಾಳಿದಾಸ ಕುರುಬ ಎಂಬೋದು ಗೊತ್ತಿದ್ದಿಲ್ಲ-ವಾದರೆ ನನಗೂ ಆಶ್ಚರ್ಯವಾಗಬಹುದಾಗಿತ್ತು. ಆದರೇನು? ಲೇಖಕರಾದ ನಾವೆಲ್ಲರೂ ಆ ಜಗತ್ಪ್ರಸಿದ್ಧ ಕಾಳಿದಾಸನ ಸಂಪ್ರ-ದಾಯಕ್ಕೆ ಸೇರಿದವರು; ತಸ್ಮಾತ್ ಕುರುಬರು. ನಾನು ಸಂಶೋ-ಧಕ....ಎಂದರೆ ಹುಡುಕಿ ಹುಡುಕಿ ಬರೆಯುವ ಜಾತಿಯವ— ಆದರೂ ಲೇಖಕ, ಅದಕಾಗಿ ಕುರುಬ!

ಈ ಮಾತನ್ನು ಹೇಳುವ ಕಾರಣವೆಂದರೆ ನನ್ನ ಸಂಶೋಧನ-ಗಳನ್ನು ಒಂದೊಂದಾಗಿ ತಮ್ಮ ಮುಂದೆ ಇಡಬೇಕಾಗಿದೆ. 'ಸೋಽಹಂ ಬ್ರಹ್ಮ' ಎಂಬುದೆ ನಿಜವಾದ ಜ್ಞಾನ ಎಂಬ ಮಾತನ್ನನುಸರಿಸಿ ಮುಂಚೆ 'ನಾನು ಯಾರು!?' ಎಂಬುವರ ಸಂಶೋಧನವನ್ನು ಮಾಡಿ ಪ್ರಾರಂಭದಲ್ಲಿಯೆ ತಮ್ಮೆದುರು ಮಂಡಿಸಿದ್ದೇನೆ. ಕೇವಲ ನಾನು 'ಶಿಕ್ಷಕ'ವರ್ಗಕ್ಕೆ ಸೇರಿದ್ದಕ್ಕಾಗಿ ಕುರುಬ ಎಂಬ ತಪ್ಪು ಕಲ್ಪನೆ ಯಾರಿಗೂ ಬೇಡ. ಅಥವಾ— ಇಂತಹ ಗೊಂದಲವೆ ತಮ್ಮ ತಲೆಯಲ್ಲಿ ಬೇಡ ಎನ್ನುವುದಕ್ಕಾಗಿ ಮೊದಲು 'ಕುರುಬ ವಿಸ್ತಾರ'ವನ್ನು ಕಾಣಿಸುತ್ತೇನೆ.

'ಕುರುಬ' ಎಂಬ ಶಬ್ದದ ವ್ಯುತ್ಪತ್ತಿ ಅನೇಕ ವಿಧವಾಗಿದೆ; ಅದು ಸಹಜ. ಎಷ್ಟು ತರದ ಕುರುಬರೊ ಅಷ್ಟು ತರದ ಶಬ್ದಗಳು; ಅಲ್ಲವೇ?—ಎಂದರೆ ಬೇಡವೆ? ಉದಾಹರಣೆಗಾಗಿ, 'ಕೂರ್ರುಂಬ' ಎಂಬ ಪ್ರಾಚೀನಪದದಿಂದ ಒಂದು ತರದ 'ಕುರುಬ' ರೂಢ-ವಾಗಿದೆ. ಕೂ-ರ್ರುಂ-ಬ, ಎಂದರೆ 'ಕೂತು ಉಂಬ'— ಎಂದರೆ 'ಯಾವ ಕೆಲಸವನ್ನೂ ಮಾಡದೆ ಕುಳಿತಲ್ಲಿಯೆ ಉಣ್ಣುವವ ಕುರುಬ'ಎಂದು. ಈ ತರದ ಕುರುಬ ಜಾತಿಯು ಸೃಷ್ಟಿಯ ಉಗಮ-ಕಾಲದಿಂದಲೂ ನಡೆದುಬಂದಿದೆ. (ಪ್ರಳಯಕಾಲದ ತರುವಾಯ-ದಲ್ಲೂ ನಡೆಯುವುದೆ— ಎಂಬುದು ಸಂಶೋಧಕದೃಷ್ಟಿಯಿಂದ ಹೇಳಲು ಶಕ್ಯವಿಲ್ಲ). ದೇಶ-ಕಾಲ-ಪರಿಸ್ಥಿತಿಗಳಿಗನುಸರಿಸಿ ಈ ಮೂಲಕುರುಬರು ಬೇರೆ ಬೇರೆ ಹೆಸರುಗಳನ್ನು ಧರಿಸಿದ್ದಾರೆ. ಕೆಲ-ವರು ಇದು 'ಧನವಂತ ಜಾತಿ' ಯಾಗಿದ್ದಾರೆ; ಹೆಚ್ಚಾಗಿ ಬೇರೆ ಕೆಲವರು 'ಸ್ತ್ರೀಜಾತಿ' ಎಂಬ ಹೆಸರನ್ನು ತಳೆದಿದ್ದಾರೆ. ಹೀಗೆ ಇಂದಿನ ಹೆಸರುಗಳು ಬೇರೆಯಾದರೂ ಇವರು ಮೂಲತಃ ಕುರು-ಬರು ಎಂಬುದಕ್ಕೆ ನನ್ನ ಸಂಶೋಧನದಲ್ಲಿ ಸಾಕಷ್ಟು ಸಾಮಗ್ರಿ-ಗಳು ದೊರೆತಿವೆ. ಇಷ್ಟೇಕೆ? ಇಂದಿಗೂ ಧನವಂತರಿಗೆ ಹೆಚ್ಚಾಗಿ ಉಣ್ಣೆಯ ಸಂಬಂಧ, ಸ್ತ್ರೀಯರಿಗೆ ಉಣ್ಣೆಯಂತೆಯೆ ಬೆಚ್ಚನ್ನ ಜಾತಿಗೆ ಸೇರಿದ್ದ ಅಡುಗೆಮನೆಯ ಸಂಬಂಧ— ಈ ಸಂಗತಿಗಳು ನನ್ನ ಸಂಶೋಧನೆಗೆಯೆ ಇಂದಿಗೂ ಪುಷ್ಟಿಯನ್ನು ಕೊಡುವುವಲ್ಲವೆ?

ಇದೇ ಶಬ್ದದ ಇನ್ನೊಂದು ವ್ಯುತ್ಪತ್ತಿಯನ್ನು ನೋಡೋಣ. ಸಂಸ್ಕೃತ 'ಗುರುಭಾರ'ಎಂಬ ಶಬ್ದವು 'ಗರಭಾರ'ಎಂಬ ಪ್ರಾಕೃತ ರೂಪಾಂತರ ಮಾರ್ಗವಾಗಿ ಕ್ರಮೇಣ ಕನ್ನಡದಲ್ಲಿ 'ಕುರುಬ' ಎಂಬ ರೂಪವನ್ನು ಹೊಂದಿದೆ ಎಂದು ತೀರ ಪ್ರಾಚೀನಕಾಲದ— ಆದರೆ ತೀರ ಇತ್ತೀಚೆಗೆ ಉಪಲಬ್ಧವಾದ— ಒಂದು ಕನ್ನಡ ಶಿಲಾ-ಭೇದಶಾಸನದಿಂದ ತಿಳಿದುಬರುವುದು. ಈ ವ್ಯುತ್ಪತ್ತಿಯನ್ನು ನೋಡಿದರೆ 'ಕುರುಬ'ಶಬ್ದದ ಮೂಲಾರ್ಥವೆ ಬೇರೆಯಾಗುವುದು. 'ಗುರುಭಾರ' ಎಂಬುದು ಸಂಸ್ಕೃತದಲ್ಲಿ ಬಹುವ್ರೀಹಿ ಸಮಾಸ; ಅದರರ್ಥ 'ಯಾರಿಗೆ ಗುರುವು ಭಾರವಾಗಿದ್ದನೋ ಅವನು', ಅರ್ಥಾತ್, ಯಾವನು ಗುರುವಿನಿಂದ ಬಹುಕಾಲ ಶಿಕ್ಷಣಪಡೆ-ದಿದ್ದಾನೆ— ಎಂದರೆ ಅತಿ ವಿದ್ಯಾವಂತ ಎಂದರ್ಥ. ಯಾರು ತಮ್ಮ ವಿದ್ಯೆಯನ್ನು ಅತಿಗೆ ಒಯ್ಯುವರೊ ಅವರೆಲ್ಲರೂ 'ಕುರುಬ'ರೆಂದರೆ ಆಗಿನ ಕಾಲದಲ್ಲಿ ಅತಿ ವಿದ್ಯಾವಂತರೆಂದು ಹೆಸರಾದ ಒಂದು ಜಾತಿಯ ಜನರೇ ಇದ್ದರೆಂದು ಹೇಳಬಹುದು. ಆ ಜಾತಿ ಇಂದಿಗೂ ಇದೆ, ಆದರೆ ಇದ್ದಂತೆಯೆ ಇಲ್ಲವೆ ಇದ್ದಲ್ಲಿಯೆ ಮಾತ್ರ ಇಲ್ಲ. ಇಂದು ಈ ಅರ್ಥದ ಕುರುಬವಂಶದವರು ಎಲ್ಲ ದೇಶಗಳಲ್ಲಿಯೂ ಪಸರಿಸಿ-ದ್ದರೆ ಆಶ್ಚರ್ಯವೇನು? ಸರ್ವಾಧಿಕಾರಿಗಳೆನ್ನಿ, ಸಾಹಿತಿಗಳೆನ್ನಿ, ಸ್ಪೆಶಲಿಸ್ಟ್ ಎಂದರೆ ತಜ್ಞರೆನ್ನಿ, ಸೋಶಲಿಸ್ಟ್ ಎಂದರೆ ಸ್ವಲ್ಪಜ್ಞ-ರೆನ್ನಿ— ಇವರೆಲ್ಲರವೂ ಮೂಲದಲ್ಲಿ ಒಂದೇ ಲಿಸ್ಟ್ (list) —ಅದೆಂದರೆ 'ಕುರುಬ' ಜಾತಿ.

ಮತ್ತೂ ಒಂದು ಮಾದರಿಯನ್ನು ನೋಡಬಹುದು. 'ಘೂರ್ವರ' ಎಂಬ ಇನ್ನೂ ಒಂದು ಸಂಸ್ಕೃತ ಶಬ್ದವೂ ಕಾಲಾಂತರದಿಂದ 'ಕುರುಬ' ಎಂದು ರೂಪಾಂತರಿಸಿದ್ದಕ್ಕೆ ಭಾಷಾಶಾಸ್ತ್ರದಲ್ಲಿ ಸಾಕ್ಷ್ಯ-ಗಳಿವೆ. ಆದರೆ ಇಲ್ಲಿ ಒಂದೇ ತೊಡಕು; 'ಘೂರ್ವರ' ಎಂಬ

* ಇದು ಧಾರೆಯಾಗಿ ಮುಂದೆ ಸಾಗಬಹುದಾಗಿದೆ. —ಲೇ

ಶಬ್ದಕ್ಕೆ ಇಂತಹದೆ ನಿಶ್ಚಿತಾರ್ಥವಿದೆ ಎಂದು ಯಾವ ಪಂಡಿತನೂ ಹೇಳದಂತಾಗಿದೆ. ಕೆಲ ಪಾಶ್ಚಾತ್ಯರು ಈ ಸಂಸ್ಕೃತ ಶಬ್ದಕ್ಕೆ ಇಂಗ್ಲಿಷ್‌ನಲ್ಲಿದ್ದ Horrible ಎಂಬ ಶಬ್ದವನ್ನು ವ್ಯುತ್ಪತ್ತಿಯಿಂದ ಹೊಂದಿಸುತ್ತಾರೆ. ಅವರ ದೇಶದ ಇತಿಹಾಸದಲ್ಲಿ ಆ ಸಿದ್ಧಾಂತಕ್ಕೆ ಪುಷ್ಟಿ ದೊರೆತರೂ, ಪೂರ್ವದ ಜನಾಂಗಗಳಲ್ಲಿ ಅಂತಹ ಉಲ್ಲೇಖವಿಲ್ಲ. ಹೀಗಾಗಿ ಕೆಲ ಪೌರ್ವಾತ್ಯ ಪಂಡಿತರು 'ಘೂರ್ವರ' ಎಂದರೆ ಘೂರರಲ್ಲಿ ಶ್ರೇಷ್ಠ—ಎಂದರೆ ಸಿಪ್ರೆಯಲ್ಲಿ ಅಪ್ರತಿಮ ಎಂದು ತಮ್ಮ ಸಂಸ್ಕೃತಿಯ ಇತಿಹಾಸದ ದೃಷ್ಟಾಂತದಿಂದ ಅರ್ಥವನ್ನು ಹಚ್ಚುತ್ತಾರೆ. ಇದೆಲ್ಲವರಿಂದ ಕುರುಬರು ಅನೇಕ ತರ ಎಂಬ ನಮ್ಮ ಮಾತು ಬಲಗೊಳ್ಳುವುದೆಂಬುದನ್ನು ಮಾತ್ರ ವಾಚಕರು ಮರೆಯದಿರಲಿ!

'ಕುರುಬ' ಶಬ್ದಕ್ಕೆ ಕೇವಲ ಸಂಸ್ಕೃತದ ವ್ಯುತ್ಪತ್ತಿಯೆ ಇದೆ ಎಂದು ಯಾರೂ ತಪ್ಪು ತಿಳಿಯಕೂಡದು: ಈ ಶಬ್ದಕ್ಕೆ ದ್ರಾವಿಡಭಾಷೆಗಳಲ್ಲೂ ವ್ಯುತ್ಪತ್ತಿ ಇದೆ—ಇದೆ ಯಾಕೆ?—'ಇವೆ' ಎನ್ನೋಣ. ಮಾದರಿಗಾಗಿ ಕನ್ನಡದಲ್ಲಿಯ ಕೆಲವುಗಳನ್ನೆ ಕಾಣಿಸೋಣ. 'ಕುರ್+ಉಬ್' ಎಂಬ ವ್ಯುತ್ಪತ್ತಿಯಲ್ಲಿ ಕುರ್ ಎಂದರೆ ಉಬ್ಬುವವ ಎಂದರ್ಥ. 'ಕುರ್' ಇದು ಪೂರ್ವದ 'ಕೊರ್'; ಕೊರ್ ಎಂಬುದು ಕೊರೆ ಎಂದರ್ಥ. ಆ ಕಾಲದಲ್ಲಿ ಬರೆಯುವುದಕ್ಕಾಗಿ ಕಲ್ಲುಗಳಲ್ಲಿ ಕೊರೆಯುತ್ತಿದ್ದುದರಿಂದ ಬರೆವಣಿಗೆಯ ಅರ್ಥದಲ್ಲಿ ಕುರ್ ಇಲ್ಲವೆ ಕೊರ್ ಎಂಬವುಗಳ ಪ್ರಯೋಗವಿದ್ದಿತು. ಅದಕಾಗಿ ಕುರ್ ಎಂದರೆ ಉಬ್ಬುವವ ಎಂಬುದರ ಅರ್ಥ—ಬರೆದರೆ ಉಬ್ಬುವವ, ಒಂದು ತರದ ಸಾಹಿತಿ ಎಂದಿದ್ದಿತು. ಇವನೇ ಮುಂದೆ ಕುರುಬನಾದನು; ಇಂದಿಗೂ ಕುರುಬನಾಗಿಯೆ ಉಳಿದಿದ್ದಾನೆ. ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಅದರಂತೆಯೆ ಕೊರೆ ಎಂಬುದಕ್ಕೆ ಗೀಟುಹಾಕು ಎಂದೂ ಅರ್ಥವಿದ್ದಿತು; ಇಂದಿಗೂ ಗೀಟುಹಾಕುವ (ಉದಾ:- ಕ್ರಾಸ್×ಹಾಕುವಂತಹ) ಕುರುಬ ಜಾತಿ ನಡೆದು ಬಂದಿದೆ. ಅಥವಾ 'ಕುರ್ಬರ್' ಎಂಬ ಇನ್ನೊಂದು ಕನ್ನಡಪದವನ್ನು ನೋಡಬಹುದು. ಇದಕ್ಕೆ ಸಮಾನವಾದ ಹಳಗನ್ನಡ ಪದವೆಂದರೆ 'ಕುಂಬರ್' ಕುಂಬರ್ ಎಂದರೆ ಕೊಡದಂತಿದ್ದವರು— ಎಂದರೆ ಯಾವಾಗಲೂ ಹೆಂಗುಸರ ಮಗ್ಗುಲಲ್ಲಿಯೆ ಸುಳಿವವರು (ಕವಿಗಳಿಗೂ ಈ ಮಾತು ಅನ್ವಯಿಸಬಹುದು), ಸಾಮಾನ್ಯವಾಗಿ ಶೃಂಗಾರದ ದಾಸರು (ಸಂಪ್ರದಾಯದ ಕಾಳಿದಾಸನಂತೆ); ಇಂದಿಗೂ ಇಂತಹ ಕುರುಬರಿಲ್ಲವೆ?

ಸಾಕು. ನನ್ನ ಸಂಶೋಧನದ ಫಲಿತಾಂಶಗಳನ್ನು ತಮ್ಮೆದುರಿಡುವ ಸಂದರ್ಭದಲ್ಲಿ, ನನ್ನ ಜಾತಿಯ ಪ್ರಸ್ತಾಪವನ್ನೆತ್ತಿ ಇದುವರೆಗೆ ಅದರ ವ್ಯುತ್ಪತ್ತಿಯನ್ನು ವಿವರಿಸಿದೆ. ಆದರೆ ಅದು ನನ್ನ ಮುಖ್ಯ ಸಂಶೋಧನವಲ್ಲ. ನಾನು ಸಂಶೋಧನವನ್ನು ನಡೆಸಿದ್ದು ಭಾರತದ—ವಿಶೇಷವಾಗಿ ಕರ್ನಾಟಕದ—ಇತಿಹಾಸ ಸಂಸ್ಕೃತಿಗಳ ಬಗ್ಗೆ. ಇನ್ನು ಅತ್ತ ತಿರಳೋಣ. ಅದು ದೂರದ ಹಾದಿ—ಎಂದರೆ ಮುಂದಿನ ಸಂಚಿಕೆಯಲ್ಲಿ.

—ಇತಿಶ್ರೀ-ರಂಗ

ಜಾಗ್ರತೆ! ನಕಲೀ ಮಾಲಿಗೆ ಮೋಸ ಹೋಗಬೇಡಿರಿ! ಜಾಗ್ರತೆ!!

ಪಂಡಿತ ಜವಾಹರಲಾಲ ನೇಹರೂರವರು ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಭಂಡಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ ಒಂದೇ ಸವನಾಗಿ ೫೦ ವರ್ಷದ ಅನುಭವದಿಂದ, ತಾಜಾ ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ

ಶಕ್ತಿಯ ಮೇಲೆ ಮೊದಲನೆಯ ತರದ ಟಾನಿಕ್

ದ್ರಾಕ್ಷಾಮೃತ

ಇದರ ಸೇವನೆಯಿಂದ ರಕ್ತಶುದ್ಧಿಯಾಗುವುದು. ಶೌಚ ಸಾಫನಾಗಿ ಪಚನಕ್ರಿಯೆ ಬೆಳೆಯುವುದು. ಕಣ್ಣು, ಕೈ, ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವುವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವರೋಗ ನಿವಾರಣೆಯಾಗಿ ಸಂತತಿಧಾರಣೆಯಾಗುವುದು ಅಂತೂ ಇದು ಆಬಾಲವೃದ್ಧ ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ.

ಕ್ರಯ ೧ ಬಾಟ್ಲಿಗೆ ೧। ರೂ. ೩ ಬಾಟ್ಲಿಗೆ ೩। ರೂ. ಡಜನ್ನಿಗೆ ೧೨ ರೂ.

ಮ್ಯಾನೇಜರ್:— ಧೇರೆ ಕೆಮಿಕಲ್ ವರ್ಕ್ಸ್, ನಿಪ್ಪಾಣಿ (ಜಿ. ಬೆಳಗಾವಿ)

ಬಯಕೆ

ಶ್ರೀ. ವ್ಹಿ. ಜಿ. ಶ್ಯಾನಭಾಗ, ಕುಮುಟಾ

ಒಳ್ಳೆಯ ರೀತಿಯಲ್ಲಿ ಬದುಕಿ ಬಾಳಬೇಕೆಂಬ ಯಾವ ಮಾನವ ಜೀವ ತಾನಾಗಿಯೆ ಅಡ್ಡದಾರಿಯನ್ನು ಹಿಡಿಯುವುದು? ಸುಶೀಲೆಗೆ ಒದಗಿದಂತಹ ಸಂದರ್ಭ ಒದಗಿದರೆ ಮಾತ್ರ ಅಶಕ್ತ-ಮನದ ಜೀವ ಖಂಡಿತ ಅಡ್ಡದಾರಿಗೆ ಬೀಳುವುದು!

★

ಟಾಯಿಲೆಟ್ ಟೇಬಲಿಗೆ ಆನಿಸಿ, ತನ್ನ ತೆಳುವಾದ ಕೈಗಳನ್ನು ಎದೆಯ ಮೇಲೆ ಅಪ್ಪುಗಟ್ಟಿ, ತುಸು ಮುಂದೆ ಬಳುಕಿ, ಅರಳಿದ ಕಣ್ಣುಗಳಿಂದ ಆಚಾರ್ಯರನ್ನು ನೋಡುತ್ತ ಸುಶೀಲೆ ನಿಂತಿದ್ದಳು.

ಹರವಾದ ಗೌರಮುಖ, ತೆಳುವಾದ ಕಪ್ಪು ಕಣ್ಣು; ಸಣ್ಣ ಸರಳ ಮೂಗು, ಕೆಂದುಟಿ ಇವೆಲ್ಲವುಗಳಿಂದ ಚೆಲುವಾದ ಅವಳ ಮೋರೆಯನ್ನು ನೋಡುತ್ತ ಆಚಾರ್ಯರು ಕುಳಿತಿದ್ದರು.

ಈ ರೂಮಿನಲ್ಲಿ ಆಚಾರ್ಯರು ತೀರ ಹೊಸಬರಲ್ಲ. ಇಪ್ಪತ್ತು ದಿನಗಳ ಹಿಂದೆ ಅವರು ಇಲ್ಲಿಗೊಮ್ಮೆ ಬಂದಿದ್ದರು. ಈಗ ಮುಚ್ಚಿದ ಬಾಗಿಲಿನಾಚೆಯ ಕಿಟಕಿಯ ಬಳಿ ಆಗ ಸಣ್ಣದೊಂದು ಬೆಂಚು ಇತ್ತು. ಆ ದಿನ ಅವರು ಅದರ ಮೇಲೆ ಕುಳಿತು, ಒಳಬಾಗಿಲನ್ನೂ ಹೊರಬಾಗಿಲನ್ನೂ ಬಾರಿಬಾರಿಯಿಂದ ನೋಡುತ್ತ, ಸುಶೀಲೆಯನ್ನು ನಿರೀಕ್ಷಿಸುತ್ತ ಕುಳಿತಿದ್ದರು. ಆಗ ಸುಶೀಲೆಯ ತಾಯಿ ಒಳಬಾಗಿಲಲ್ಲಿ ನಿಂತು, ಆಚಾರ್ಯರು ಬಂದ ಕಾರ್ಯ-ಕಾರಣಗಳನ್ನು ವಿಚಾರಿಸಿದ್ದಳು. ಆ ಮೇಲೆ ಆಚಾರ್ಯರನ್ನೂ ಅವರ ಬಳಿಯಲ್ಲಿಯೆ ಕುಳಿತ ಅವರ ಸಂಗಡಿಗರನ್ನೂ ನೋಡುತ್ತ ಹೇಳಿದ್ದಳು: "ಮಗಳು ಕಸಬು ಮಾಡುವದಿಲ್ಲ!"

ಆಗ 'ಕಸಬುಮಾಡದ ಮಗಳು' ಒಳಕೋಣೆಯಲ್ಲಿ ನಿಂತು ಕಿಟಕಿಯ ಬಾಗಿಲಿನ ಬಿರುಕಿನಿಂದ ಹಿಂದೆ ಎಷ್ಟೋ ಸಲ ನೋಡಿದ—ಕಣ್ಮುಚ್ಚಿದರೆ ಈಗಲೂ ಎದೆಯೊಳಗೆ ಮೂಡಿ ಬರುವ ಆಚಾರ್ಯರ ದುಂಡಗಿನ ಮೋರೆಯನ್ನು ನೋಡುತ್ತ ನಿಂತಿದ್ದಳು.

ಹಿಂದೆ ಅನೇಕ ಸಲ ಅನೇಕ ಜನರಿಗೆ ಇದೇ ಮಾತನ್ನು ಹೇಳಿ ಸುಶೀಲೆಯ ತಾಯಿ ಅವರನ್ನು ಹಿಂದೆ ಕಳುಹಿದ್ದಳು. ಅವರು ಎದ್ದು ನಡೆದುದನ್ನು ಸುಶೀಲೆ ಅದೇ ಬಿರುಕಿನಿಂದ ನೋಡಿದ್ದಳು. ಆದರೆ ಈ ಹೊತ್ತು, ನೋಡುತ್ತ ನಿಂತಂತೆ ಅವಳೆದೆಯಲ್ಲಿ ಒಂದು ತರದ ಕಳವಳವು ಏರುತ್ತಿತ್ತು.

ಅಂದು ಆಚಾರ್ಯರು ಮೆತ್ತಗಿನ ದನಿಯಲ್ಲಿ ನುಡಿದಿದ್ದರು: "ವಸ್ತುಸ್ಥಿತಿ ಹೀಗಿದ್ದರೆ ಮೊದಲೇ ತಿಳಿಸಬಾರದಿತ್ತೆ? 'ಒಲ್ಲದು ಸಲ್ಲದು' ಎಂದು ಅಡಿಗಡಿಗೆ ಎನಿಸಿದರೂ ಕಷ್ಟಪಟ್ಟು ಬಂದೆ!"

ಆಚಾರ್ಯರ ಮಾತುಗಳು ಒಳಕೋಣೆಯಲ್ಲಿ ನಿಂತ ಸುಶೀಲೆಯ ಎದೆಯನ್ನು ಚುಚ್ಚಿದುವು. ಆಚಾರ್ಯರ ಬಳಿಯಲ್ಲಿ ಕುಳಿತ ಅವರ ಸಂಗಡಿಗರನ್ನು ಅವಳು ದುರದುರನೆ ನೋಡಿದಳು.

ಸುಶೀಲೆ ಆಚಾರ್ಯರನ್ನು ನೋಡಿ ಬಲ್ಲಳು. ಇಂತಹ ದಿನ ಇಂತಹ ಹೊತ್ತಿಗೆ ತಾನು ಆಚಾರ್ಯರನ್ನು ಮೊಟ್ಟಮೊದಲು ನೋಡಿದ್ದು—ಎಂಬುದು ಅವಳಿಗೆ ಇನ್ನೂ ನೆನಪಿದೆ. ಆಗಾಗ ಪೇಟೆಗೆ ಹೋಗುವಾಗ ದಾರಿಯ ಬದಿಯ ಆಚಾರ್ಯರ ಕೋಣೆಯ ಕಿಟಕಿಯಿಂದ ಅವರನ್ನು ಸಾವಿರ ಬಾರಿ ಸುಶೀಲೆ ನೋಡಿದ್ದಾಳೆ; ಆದರೂ ಅವಳ ಕಣ್ಣಿನ ತಣಿಯುತ್ತಿರಲಿಲ್ಲ.

ಆಚಾರ್ಯರು ಬರುವ ಸಮಾಚಾರ ಕೇಳಿ ಸುಶೀಲೆಗೆ ಅಷ್ಟೊಷ್ಟು ಸಂಭ್ರಮವಾಗಿರಲಿಲ್ಲ. ಆದರೆ ನಡುವೆ ಎಣಿಸದಿದ್ದದ್ದು ಆಗಿ, ಯೋಚಿಸದಿದ್ದದ್ದೇ ಘಟಿಸಿತು.

ಗುಂಡುಮೋರೆಯ ತುಂಬುದೇಹದ ತಾಯಿಯೆಂದಳು: "ಕಸಬು ನಾನು ಮಾಡುತ್ತೇನೆ, ಇದನ್ನು ಜನ ಬಲ್ಲದು! ಅದಕ್ಕೇ ಆದೀತೆಂದೆ!"

"ಚಿಂತೆಯಿಲ್ಲ, ನೀವು ಬೇಸರಾಗ ಬೇಡಿ," ಎನ್ನುತ್ತ ಆಚಾರ್ಯರು ಹೊರಟು ಬಂದಿದ್ದರು.

ಎರಡು ದಿನ ಈ ತಾಯಿ-ಮಗಳು ತನಗೆ ಅಪಮಾನ ಮಾಡಿದರೆಂಬ ಭಾವನೆ ಆಚಾರ್ಯರ ಮನವನ್ನು ತುಂಬ ಕಟೆಯಿತು. ಆದರೆ ಮುಂದೆ ಎಂದಿನಂತೆ ಅದೂ ಅವರಿಗೆ ಮರೆವಾಯಿತು.

ಆಚಾರ್ಯರು ಅತ್ತ ನೋಡಿದರೆ ಇಂದು ಅಲ್ಲಿ ಆ ಬೆಂಚು ಕಾಣದು. ಅವರ ಎಡಗಡೆಗೆ ಒಂದು ಸಣ್ಣ ಮಂಚವಿದೆ. ಅದರ ಮೇಲೆ ದಪ್ಪವಾದ ಬಣ್ಣಬಣ್ಣದ ಜಮಖಾನ ಹಾಸಿದೆ. ಕಸೂತಿಯ ಚಿತ್ರ ವಿಚಿತ್ರದ ಕೆಲಸ ಬಿಡಿಸಿದ ತಲೆದಿಂಬನ್ನು ಅದರ ಮೇಲೆ ವ್ಯವಸ್ಥಿತವಾಗಿ ಇಟ್ಟಿದ್ದರು. ಒಂದು ಸಣ್ಣ ದುಂಡುಮೇಜು ಆಚಾರ್ಯರ ಸಮ್ಮುಖದಲ್ಲಿ. ಅದರ ಸುತ್ತಲೂ—ಇವರು ಕುಳಿತ ಖುರ್ಚಿಯನ್ನು ಬಿಟ್ಟು—ಇನ್ನೂ ಮೂರು ಖುರ್ಚಿಗಳು. ಅವುಗಳಾಚೆ-ಕನ್ನಡಿಯ ಟಾಯಲೆಟ್ ಟೇಬಲಿಗೆ ಆನಿಸಿ ತನ್ನ ತೆಳುವಾದ ಕೈಗಳನ್ನು ಎದೆಯ ಸರಿ ಕಟ್ಟಿಹಿಡಿದು, ಉದ್ದವಾದ ಹೆರಳನ್ನು ಉಬ್ಬಿದೆದೆಯ ಮೇಲೆ ಇಳಿಬಿಟ್ಟು, ನಗುವ ಕಣ್ನೋರೆಕೊಂಡು, ತುಸು ಬಳುಕಿ ಸುಶೀಲೆ ಆಚಾರ್ಯರನ್ನು ನೋಡುತ್ತ ನಿಂತಿದ್ದಳು.

ಈ ಹೊತ್ತು ಮನೆಯಲ್ಲಿ ತಾಯಿಯು ಸದ್ದಿಲ್ಲ. ಆ ದಿನ ಆಚಾರ್ಯರು ಆ ನಮೂನೆಯಾಗಿ ತೆರಳಿದಂದಿನಿಂದ ಸುಶೀಲೆಗೆ ನೆಮ್ಮದಿಯಿದ್ದಿಲ್ಲ. 'ಬಾಗಿಲಿಗೆ ಬಂದ ಭಾಗ್ಯವನ್ನು ತಾನು ನಿರಾಕರಿಸಿದೆನಲ್ಲ.' ಎಂಬುದೊಂದೆ ವಿಚಾರ ದಿನರಾತ್ರಿಯೆನ್ನದೆ ಆಕೆಯ ಮನಸ್ಸಿನಲ್ಲಿ ಕಟೆಯುತ್ತಿತ್ತು. 'ಇನ್ನು ಆಚಾರ್ಯರು ತನ್ನ ನಿಲುಕಿನಾಚೆಯವರು' ಎಂಬ ವಿಚಾರ ಮನಸ್ಸನ್ನು ಆವರಿಸಿಬಿಟ್ಟಿತು. ಕೊನೆಯ ಯತ್ನವೆಂದು ಎರಡು ದಿನಗಳ ಹಿಂದೆ

ಆಚಾರ್ಯರಿಗೆ— ಒಮ್ಮೆ ಬಂದುಹೋಗಬೇಕೆಂದು ಹೇಳಿ ಕಳುಹಿದುದರಿಂದ, ಆಚಾರ್ಯರು ಈ ಹೊತ್ತು ಇಲ್ಲಿ ಪ್ರಕಟವಾಗಿದ್ದರು.

ಕರೆ ಸ್ವೀಕರಿಸುವುದು ಮೊದಲು ಆಚಾರ್ಯರಿಗೆ ಸರಿದೋರಲಿಲ್ಲ. ಆಮೇಲೆ ಯೋಚನೆ ಹರಿದು—'ಗೃಹಸ್ಥರಂತೆ ಹೋಗಿ ಕರೆಯಿಸಿಕೊಂಡ ಕಾರಣವೇನು ಎಂದು ಕೇಳಿ ಬಂದರಾಯಿತು, ಇಲ್ಲದಿದ್ದರೆ ಪೌರುಷಹೀನ ಎಂದು ಎಲ್ಲಿ ತಿಳಿಯುತ್ತಾರೋ' ಎಂಬ ಭಯದಿಂದ ಒಂದೆಂಟಾಣೆಯ ನಿಶ್ಚಯವಾಯಿತು. ಆದೆಷ್ಟೋ ಬಾರಿ— ದಾರಿ ಸಾಗುವಾಗ—ಅವರನ್ನು ನೋಡುತ್ತ ಸಾಗುವ ಸುಶೀಲೆಯ ಸುರೂಪದ ಮೋಹ ಅವರಿಗೆ ಇನ್ನೆಂಟಾಣೆಯ ನಿಶ್ಚಯ ಒದಗಿಸಿತು. ಹೀಗೆ ಹದಿನಾರಾಣೆಯ ನಿಶ್ಚಯವಾಗಿದ್ದರೂ, ಆ ತಾಯಿ ಅಲ್ಲಿದ್ದರೆ ಹೋಗುವ ಮನಸ್ಸು ಆಚಾರ್ಯರಿಗೆ ಆಗುತ್ತಿರಲಿಲ್ಲ. 'ಅವಳು ಅಲ್ಲಿರದಿದ್ದರೆ ತಾನು ಬರುತ್ತೇನೆ' ಎಂದು ಅವರು ಕಟ್ಟಳೆ ಇಟ್ಟರು. ಅದಕ್ಕೂ ಸುಶೀಲೆ ಒಪ್ಪಿದುದರಿಂದ, ಆಚಾರ್ಯರು ಈಗ ಸುಶೀಲೆಯ ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತು, ಕೊಂಚ ಬೆವರಿದ ತಮ್ಮ ಮೋರೆಯನ್ನು ಉಜ್ಜಿಕೊಳ್ಳುತ್ತಲಿದ್ದರು.

" ಬರುವ ಭರವಸೆಯಿದ್ದಿಲ್ಲ ! " ನಗುತ್ತ ನುಡಿದಳು ಸುಶೀಲೆ.

" ಸರಿ! ಆದಿರಲಿ, ಕರೆಯಿಸಿಕೊಂಡ ಕಾರಣವೇನು ? " ಆಚಾರ್ಯರು ಕೇಳಿದರು.

ಸುಶೀಲೆ ಉತ್ತರ ಕೊಡದೆ, ಸರಿಯಾಗಿ ಉರಿಯುವ ತೂಗುದೀಪವನ್ನು ಏಕೋ ದೊಡ್ಡದನ್ನಾಗಿಸಿ, ಅದು ಹೊಗೆ ಬಿಡುತ್ತಿರಲು ಅದನ್ನು ತಿರುಗಿ ಇದ್ದಕ್ಕಿದ್ದಂತೆ ಸರಿಮಾಡಿದಳು. ಕಿರುನಗು ನಗುತ್ತಿರಲು ಆಕೆಯ ಕೆಂದುಟಿಗಳು ತೆರೆದು ಅವಳ ಸುಂದರ ದಂತಪಙ್ಕ್ತಿ ಹೊರಗಿಣಿಕಿ ನೋಡಿತು. ಯಾವುದೋ ಯೋಚನೆ ಹರಿದು ನಾಚಿದಳು. ಎದ್ದು ಡ್ರಾವರ್ ತೆರೆದು, ಹಣಿಗೆ ಹೊರತೆಗೆದಳು. ಮತ್ತೆ ಮುಂಚಿನಂತೆ ಆತು ನಿಂತು, ಎದೆಯಮೇಲೆ ಇಳಿಬಿದ್ದ ಹೆಳಲನ್ನು ತೀಡುತ್ತ ನೆಲ ನೋಡತೊಡಗಿದಳು.

ಆಚಾರ್ಯರು ತಿರುಗಿ ಗೃಹಸ್ಥರಂತೆ ಕೇಳಿದರು: " ಕರೆಯಿಸಿಕೊಂಡ ಕಾರಣವೇನು ? "

ಆಚಾರ್ಯರ ಪ್ರಶ್ನೆಯ ಉತ್ತರ ಸುಶೀಲೆಯ ಗೊಂದಲಿಸಿದ ಹಾವ-ಭಾವಗಳಲ್ಲಿ ಹೊರಡುತ್ತಿದ್ದಿತಲ್ಲದೆ, ಅವಳ ಬಾಯಿಂದ ಹೊರಡುತ್ತಿರಲಿಲ್ಲ. ಬಹಳ ಯೋಚನೆಯಾಯಿತವಳಿಗೆ.

" ನೀವು ಆಸಾರಿ ಬಂದುದೇಕೆ ? " ಸುಶೀಲೆ ಫಕ್ಕನೆ ಕೇಳಿದಳು. ತನ್ನನ್ನು ಹಿಡಿತದಲ್ಲಿ ಹಿಡಿದ ಸುಶೀಲೆಯ ಬುದ್ಧಿಗೆ ಆಚಾರ್ಯರು ಮೆಚ್ಚಿದರು. ಅವಳ ರೂಪಕ್ಕಂತೂ ಅವರು ಮೆಚ್ಚದಿರಲಿಲ್ಲ. ಆಚಾರ್ಯರ ಚಿತ್ತ ಸುಪ್ರಸನ್ನವಾಯಿತು. ತುಸು ಹೊತ್ತು ತುಂಬ ನಕ್ಕರವರು. ಆದರೆ ಆಗಲೇ ಆ ದಿನದ ಮಾತು ನೆನಪಾಯಿತವರಿಗೆ.

" ಆ ದಿನದ ಸಂಗತಿ ಆ ದಿನವೇ ಕೊನೆಗಂಡಿದೆ. ಆದರ ಮಾತನ್ನು ಆಡದಿದ್ದಷ್ಟು ಒಳಿತು! ಅಲ್ಲದೆ ಬಂದುದು ಇಂಥದಕ್ಕೆ ಎಂಬುದು ಆ ದಿನವೇ ಬಹಿರಂಗವಾಗಿದೆ. ಇನ್ನು ಆ ಪ್ರಸ್ತಾಪ ಒಳಿತಲ್ಲ ! " ಶುಷ್ಕಸ್ವರದಲ್ಲಿ ಆಚಾರ್ಯರು ಸುಶೀಲೆಯನ್ನು ನೋಡುತ್ತ ನುಡಿದರು.

" ನಿಜವಾಗಿಯೂ ನಾನು ಕಸಬು ಮಾಡೋದಿಲ್ಲ ; ಇನ್ನೂ ತನಕ ಮಾಡಲಿಲ್ಲ ! " ಸುಶೀಲೆ ನಿದಾನವಾಗಿ ಹೇಳಿದಳು.

" ಹೇಳದೆ ಕೇಳದೆ ಅಕಾಲದಲ್ಲಿ ಖಾನಾವಳಿ ಹೊಕ್ಕಂತೆ ಬಂದಿದ್ದರೆ ಒಂದು ವಿಧವಾಗಿತ್ತು. ಹೇಳಿಕಳುಹಲು ಬಂದು, ಆಮೇಲೆಯೂ ನೀವು ಮಾಡಿದಂತೆ ಮಾಡಿದರೆ ಇದಕ್ಕೇನೆನ್ನಬೇಕೋ ತಿಳಿಯದು. ಇದು ಬಾಗಿಲಲ್ಲಿ ಬಂದವನನ್ನು ತುಳಿದ ಸಾವುಕಾರಿಕೆ! ನಾನು ಬಂದರೆ ಆದೀತೋ ಎಂದು ಮುಂದಾಗಿ ತಿಳಿಸಿದ್ದೆ ; ಅಲ್ಲವೇ ? " ಆಚಾರ್ಯರು ದೊಡ್ಡ ಸ್ವರದಲ್ಲಿ ಕೇಳಿದರು.

ಸುಶೀಲೆ ಉತ್ತರ ಕೊಡದೆ ನಿಂತಿದ್ದಳು.

" ನೀವು ಬರಬಹುದೆಂದ ಮೇಲೆ ನಾನು ಬಂದದ್ದು; ಹೌದೋ, ಅಲ್ಲವೋ ? " ಆಚಾರ್ಯರು ತಿರುಗಿ ಕೇಳಿದರು.

ಸುಶೀಲೆ ನಮ್ರಳಾಗಿ ಹೇಳಿದಳು: " ನಿಮ್ಮ ಹತ್ತಿರ ಮಾತಾಡಬೇಕು ಎಂದು ಆದೀತು ಎಂದಿದ್ದೆ. ಆದರೆ ನಿಮ್ಮ ಜತೆಯಲ್ಲಿ ಆ ದಿನ ಬಂದವರು ದುರ್ಜನರು. ನಾನು ಕಸಬು ಮಾಡುತ್ತೇನೆಂದು ಊರೂರು ಸುದ್ದಿ ಮಾಡುವರೆಂದು ತಾಯಿ ಹಾಗೆ ಹೇಳಿದಳು. ನಿಮ್ಮನ್ನು ತಿರುಗಿ ಕಳುಹಿದಾಗ ನನಗೆ ಜಂಭವೇನೂ ಎನಿಸಿರಲಿಲ್ಲ ! "

" ನೀನು ಕಸಬು ಮಾಡುತ್ತಿರಬೇಕು, ಆದರೆ ಯಾರಿಗೂ ಸುದ್ದಿಯಾಗಬಾರದು— ಎಂದರೆ ಇದರರ್ಥವೇನು ? " ಆಚಾರ್ಯರು ವಿಸ್ಮಯದಿಂದ ಕೇಳಿದರು.

" ನಾನು ಕಸಬು ಮಾಡುತ್ತೇನೆಂದು ಯಾರು ಹೇಳಿದ್ದಾರೆ ? ನಿಜಕ್ಕೂ ನಾನು ಕಸಬು ಮಾಡೋದಿಲ್ಲ ! " ಸುಶೀಲೆ ಗಾಬರಿಗೊಂಡು ಹೇಳಿದಳು.

" ಯಾರೇಕೆ ಹೇಳಬೇಕು ? ನಿಮ್ಮ ಮಾತಿನಂತೆಯೇ, ಆ ದುರ್ಜನರ ಬದಲು ಆ ದಿನ ಯಾರೊಬ್ಬ ಸಜ್ಜನರನ್ನು ಸಂಗಡ ಕರೆತಂದಿದ್ದರೆ ಎಲ್ಲವೂ ತಿಳಿಯುತ್ತಿತ್ತು ! " ಆಚಾರ್ಯರು ನುಡಿದರು.

ಸುಶೀಲೆ ಗಾಬರಿಗೊಂಡು ನಿಂತಿದ್ದಳು. ಏನೂ ಉತ್ತರಕೊಡಲಿಲ್ಲ. ತಾನು ಸತ್ಯವನ್ನೇ ಹೇಳಿದರೂ ಆಚಾರ್ಯರು ನಂಬದಿದ್ದಾಗ, ಇವರಿಗೆ ಇನ್ನು ವಿಶ್ವಾಸ ಮಾಡಿಕೊಡುವ ಬಗೆ ಹೇಗೆ ? ಸುಶೀಲೆ ಏನೂ ತೋಚದೆ ನಿಂತಿದ್ದಳು. ನಿಂತಂತೆ 'ಆಚಾರ್ಯರು ತನ್ನ ನಡೆ-ನುಡಿಗಳ ಅರ್ಥವನ್ನೂ ಗ್ರಹಿಸಲಿಲ್ಲವಲ್ಲ' ಎಂಬ ವಿಚಾರದಿಂದ ಆಕೆಯ ಮನಸ್ಸು ನೊಂದುಕೊಂಡಿತು. ಒಂದು ವರ್ಷದಿಂದ ಸಂಚಿತವಾದ ಭಾವನೆಗಳು ಸುಶೀಲೆಯ ತುಟಿಗಳವರೆಗೆ ಬಂದು ಅಲ್ಲಿಯೇ ತಡೆದು ನಿಂತವು. "ನಿಮ್ಮ ಪಾದದಾಣೆ, ನಾನಿನ್ನೂ ಯಾರ ಮೋರೆಯನ್ನೂ ನೋಡಲಿಲ್ಲ ; ಯಾರಿಗೂ

ಇದರ ಮೇಲೆ ವಿಶ್ವಾಸವಾಗದು. ನಿಮಗೂ ನಂಬಿಕೆಯಾಗದೇ?" ಸುಶೀಲೆ ಆಚಾರ್ಯರನ್ನು ನೋಡುತ್ತ ಕೇಳಿದಳು.

ಆಚಾರ್ಯರು ನೋಡಿದರು; ಸುಶೀಲೆ ವಿವಶಭಾವಗೊಂಡು ನಿಂತಿದ್ದಳು.

"ನನ್ನ ನಂಬಿಕೆ ಅಪನಂಬಿಕೆಯಿಂದ ನಿನ್ನ ಆಗು-ಹೋಗು-ಗಳೇನಿವೆ? ಅದಿರಲಿ. ನೀನು ಕರೆಯಿಸಿಕೊಂಡ ಕಾರಣವೇನು? ಹೊತ್ತಾಯಿತು." ಎಂದರು ಆಚಾರ್ಯರು.

ಸುಶೀಲೆ ಉತ್ತರ ಕೊಡಲಿಲ್ಲ. ಆಚಾರ್ಯರನ್ನು ನೋಡುತ್ತ ಏನೂ ತೋಚದೆ ನಿಂತಿದ್ದಳವಳು.

ಆಚಾರ್ಯರು ಸಿಗರೇಟು ತೆಗೆದು ಸುಟ್ಟೆಂದು ಅದನ್ನು ಸೇದ-ತೊಡಗಿದರು.

"ಅದು ಆರೋಗ್ಯಕ್ಕೆ ಹಾನಿಕಾರಕವಂತೆ, ಸೇದಬೇಡಿ!" ಸುಶೀಲೆ ಹೇಳಿದಳು.

"ಓಹೋ! ಹಾಗೋ? ಆದರೆ ಇಲ್ಲಿ ಬಂದರೆ ಆರೋಗ್ಯಕ್ಕೆ ಲಾಭವಂತೆಯೋ?" ಹೊಗೆ ಹೊರಬಿಡುತ್ತ ಆಚಾರ್ಯರು ಕೇಳಿದರು.

"ಅದು ನನಗೆ ಗೊತ್ತಿಲ್ಲ; ನಿಮಗೆ ಗೊತ್ತಿರಬಹುದು!" ಎಂದಳವಳು.

"ಅದಿರಲಿ ಬಿಡು; ಆದರೆ ಒಂದು ಮಾತು ನೆನಪಾಯಿತು. ನನ್ನ ವಿಷಯದಲ್ಲಿ ನೀನು ಬಹಳ ಸೂಕ್ಷ್ಮ ವಿಚಾರಣೆ ನಡೆ-ಯಿಸಿರುವೆಯಂತೆ: ನಾನುಯಾರು? ನನ್ನ ಉತ್ಪನ್ನವೆಷ್ಟು? ಕೊಡುಗೈಶೀಲವೊ? ಕುಂಭಲಗ್ನಜಾತನೋ?— ಎಂದು ಮೊದಲಾಗಿ. ಹೌದೇನು?" ಆಚಾರ್ಯರು ನಗುತ್ತ, ಬಿಟ್ಟ ಹೊಗೆ ನೋಡುತ್ತ ಕೇಳಿದರು.

ದಾರಿ ಹುಡುಕುತ್ತ ಅಲೆದಾಡಿ ಬೆಂಡಾದ ದಾರಿಕಾರನಿಗೆ ದಾರಿ ಕಂಡಾಗ ಆಗುವಷ್ಟು ಆನಂದ ಸುಶೀಲೆಗೆ ಆಯಿತು.

"ವಿಚಾರಣೆ ನಡೆಯಿಸಿದುದು ನಿಜ; ಆದರೆ ಕುಂಭಲಗ್ನ-ಜಾತದ ಮಾತು ನನಗೆ ಗೋಚರಿಸಿದ್ದಿಲ್ಲ." ಎಂದು ಸುಶೀಲೆ ನಗತೊಡಗಿದಳು.

ನಗುವಾಗ ಸುಶೀಲೆಯ ತೆಳುವಾದ ಶರೀರ ಕುಲುಕುತ್ತಿತ್ತು. ನಗುತ್ತಿದ್ದ ಸುಶೀಲೆಯ ಮೋರೆ ಅಪೂರ್ವವಾಗಿ ಹೊಳೆಯುತ್ತಿತ್ತು. ಆಚಾರ್ಯರು ಮುಗ್ಧರಾಗಿ ನೋಡುತ್ತಿದ್ದರು. ನೋಡುತ್ತಿ-ದ್ದಂತೆಯೆ ಸುಶೀಲೆಯನ್ನು ಕೈನೀಡಿ ಅಪ್ಪಿಕೊಳ್ಳಬೇಕೆಂಬ ಆಶೆ ಅವ-ರೊಳಗೆ ಹರಿಯಿತು. 'ಗೃಹಸ್ಥರಂತೆ ಕರೆಯಿಸಿದ ಕಾರಣ ಕೇಳ-ಬಂದರಾಯಿತು' ಎಂಬ ಅವರ ಸಂಕಲ್ಪ ಅವರಿಗದರಲ್ಲಿ ತೇಲಿಗೊಡಲಿಲ್ಲ.

"ಆದರೆ ಕುಂಭಲಗ್ನ ಜಾತನಾದರೆ ಒಳಿತು!' ಆಚಾರ್ಯರು ನುಡಿದರು.

"ಆಮರಣ ನಿಮ್ಮಿಂದ ನನ್ನ ಹೊಟ್ಟೆ-ಬಟ್ಟೆ ನೀಗಬಹುದೋ ಎಂದು ನೋಡಿದೆ!"

ಆಚಾರ್ಯರು 'ಆಮರಣ' ಶಬ್ದ ಕೇಳುತ್ತಲೆ ತಣ್ಣಗಾಗದರು. ಅವಳ ಉದ್ದೇಶ, ಅವಳ ಬಯಕೆ, ಮುಂದೆ ಬಾಳಬೇಕೆಂದಿರುವ ಬದುಕು ಇವೆಲ್ಲವೂ ಆ ಶಬ್ದ ಕೇಳುತ್ತಲೆ ಆಚಾರ್ಯರಿಗೆ ಹೊಳೆ-ದುವು. ತಮ್ಮ ಹೃದಯದಲ್ಲಿ ಆ ದಿನ ಕಾಣಿಸಿಕೊಂಡ—ಈಗ ಸಹ ಸುಷ್ಟವಾಗಿ ಬಿದ್ದ—ತಮ್ಮ ಒಂದು ಗಳಿಗೆಯ ಲಾಲಸೆಯ ಎಚ್ಚರವೂ ಅವರಿಗೆ ಆಗಲೇ ಆಯಿತು.

ಆಚಾರ್ಯರು ಕಣ್ಣೆತ್ತಿ ಸುಶೀಲೆಯನ್ನು ನೋಡಿದರು. ಅಪ್ಪು-ಗ್ಯೆ ಎದೆಯ ಸರಿಪಿಟದು, ಟಾಯಿಲೆಟ್ ಟೇಬಲಿಗೆ ಆನಿಸಿ ನಿಂತು, ತುಸು ಮುಂದೆ ಬಳುಕಿ ಆಚಾರ್ಯರನ್ನು ನೋಡುತ್ತ ಅವಳು ನಿಂತಳು.

"ಆದರೆ ಅದರಲ್ಲಿ ಆಯು ಹೆಚ್ಚಿಲ್ಲವಲ್ಲ!" ಆಚಾರ್ಯ-ರೆಂದರು.

ಹೆಳಲು ತೀಡುತ್ತ ಸುಶೀಲೆಯೆಂದಳು, "ಹಾಗೆಯೇ ಆಯುದ ಜತೆಗೆ ಶ್ರೇಯವೂ ಬಹಳವಿದೆ ಅದರಲ್ಲಿ."

ಆಚಾರ್ಯರು ಗೌರವದೃಷ್ಟಿಯಿಂದ ಸುಶೀಲೆಯನ್ನು ನೋಡಿದರು.

"ತಿಂಗಳಿಗೆ ಇಂತಿಷ್ಟೆಂದು ಅನ್ನ-ವಸ್ತ್ರಕ್ಕೆ ನೀವೇ ಯೋಚಿಸಿ ಕೊಡಿ. ನನ್ನ ನಡತೆಯಲ್ಲಿ ಐಬು ಕಂಡ ದಿನ ನೀವು ನನ್ನನ್ನು ಬಿಡಬಹುದು." ಆಚಾರ್ಯರನ್ನು ನೋಡದೆ ಸುಶೀಲೆ ನುಡಿದಳು. "ಇದು ನಿಮಗೆ ಒಪ್ಪೇ?" ಎಂದು ಬಾಯ್ಬಿಟ್ಟು ಕೇಳಲಾರದೆ, ಅದನ್ನು ದೃಷ್ಟಿಯಲ್ಲಿಟ್ಟು ಉಸಿರುಕಟ್ಟಿ ಆಚಾರ್ಯರ ಉತ್ತರ ನಿರೀಕ್ಷಿಸುತ್ತ ಅವಳು ನಿಂತಿದ್ದಳು.

"ಪವಿತ್ರ ಉದ್ದೇಶ! ಚಲೋ ಬಯಕೆ!! ಹೀಗಿರಬೇಕು! ಆದರೆ ನಾನು ಅದಕ್ಕೆ ಸತ್ಪಾತ್ರನಲ್ಲ. ಇನ್ನು ಬೇರೆ ಯಾರಾ-ದರೂ ಸಿಕ್ಕಬಹುದು. ಹೀಗಿರಬೇಕು!" ಬದ್ಧಕ್ಕೊ ಆನಂದ-ದಿಂದ ಆಚಾರ್ಯರೆಂದರು.

ಸುಶೀಲೆಯ ಮೋರೆ ಥುರ್ರನೆ ಇಳಿದು ಇಷ್ಟಾಯಿತು. ಬೆರಗಿನ ದೃಷ್ಟಿಯಿಂದ ಆಚಾರ್ಯರನ್ನು ನೋಡಿದಳು.

ಆಚಾರ್ಯರಿಗೆ "ಹೂಂ-ಎಂದು ಈ ಹೊತ್ತು ಕಾರ್ಯ ಸಾಧಿಸೋಣ; ನಾಳಿನದು ನಾಳೆ!" ಎಂದು ಕಲ್ಪನಾಚಾರ ನಡ್ಡಿಲ್ಲದೆ ಎದ್ದಿತು. ಮರುಕ್ಷಣ-ಆಮರಣ ಹಬ್ಬಿದ ಸುಶೀಲೆಯ ಬಯಕೆಯ ಅರಿವಾಯಿತು. ಮನಸ್ಸನ್ನು ಸಂಯತಗೊಳಿಸಿದರು.

ಸುಶೀಲೆಯ ಸಪ್ಪಗಾದ ಮೋರೆಯನ್ನು ನೋಡಿ ಆಚಾರ್ಯ-ರೆಂದರು: "ಸುಶೀಲೆ, ಆ ದಿನದ ಮಾತಿನಿಂದ ನಿಮ್ಮ ಮೇಲೆ ನನಗೆ ತುಂಬ ಸಿಟ್ಟಿತ್ತು. ಅದು ಈಗಿಲ್ಲ, ಮೋಸ ನನ್ನ ಸ್ವಭಾವದ ವಿರುದ್ಧ. ನಿಜವಾಗಿ ಹೇಳುತ್ತೇನೆ. ನನ್ನನ್ನು ನೀನು ಅರಿತಿಲ್ಲ. ಮರ್ಕಟ ಸ್ವಭಾವ ನನ್ನದು. ನಿನ್ನ ಬಯಕೆ ನನ್ನಿಂದ ಪೂರ್ಣ-ವಾಗಲಾರದು." ಎನ್ನುತ್ತ ಆಚಾರ್ಯರು ಎದ್ದು ಬಾಗಿಲಿನ ಅಂಗಣೆಯ ಮೇಲೆ ಕೈಯಿಕ್ಕಿದರು.

(೭೭ನೆಯ ಪುಟ ನೋಡಿ)

ಸಾದರ ಸ್ವೀಕಾರ

೧. **ವಾಣಿ** (ಮಾಸಪತ್ರಿಕೆಯ ೨ನೆಯ ವರ್ಷದ ಆರಂಭದ ಸಂಚಿಕೆ). ಸಂಪಾದಕರು: ಶ್ರೀಮಾನ್ ಎ. ಬಿ. ಬಳ್ಳಾರಿಯವರು. ಪ್ರಕಾಶನ ಸ್ಥಳ: ವಾಣಿ ಪಬ್ಲಿಷಿಂಗ್ ಹೌಸ್, ಮಲ್ಲೇಶ್ವರಂ—ಬೆಂಗಳೂರು. ಈ ಸಂಚಿಕೆಯಲ್ಲಿ ಕ್ರಾ. ೧/೮ ದ ಸುಮಾರು ೫೬ ಪುಟಗಳಿರುವುವು. ಬೆಲೆ ೦-೬-೦.

ಕನ್ನಡದ ಸೇವೆಗಾಗಿ ಆಶಾವಾದಿಯಾಗಿ ಸೊಂಟ ಬಿಗಿದು ಹೊರಟಿರುವ ಈ 'ವಾಣಿ'ಯನ್ನು ತುಂಬ ಆದರದಿಂದ ಸ್ವಾಗತಿಸುತ್ತಿದ್ದೇವೆ. ಈ ವಿಶೇಷ ಸಂಚಿಕೆಯಲ್ಲಿ 'ಜಯಂತಿ' ವಾಚಕರಿಗೆ ಪರಿಚಿತರಾದ ಶ್ರೀಮಾನ್ ಸಿ. ಕೃಷ್ಣಶರ್ಮರು ಅನುವಾದಿಸಿದ ಮಹಾಕ್ಷರ ಓಲೆಗಳೆರಡು ಅಚ್ಚಾಗಿವೆ. 'ಭಾರತೀಪ್ರಿಯ'ರ 'ಅರಾತ್ರಿ' ಸ್ವತಂತ್ರ ಕತೆಯೂ, ಶ್ರೀ. ಅ. ನಾರಾಯಣಸ್ವಾಮಿ ಅಯ್ಯರರು ಬಂಗಾಲಿಯಿಂದ ಅನುವಾದಿಸಿದ 'ನಿರಾಶಾ' ಎಂಬ ಕವಿ ರವೀಂದ್ರರ ಕತೆಯೂ ಇದರಲ್ಲಿವೆ. ಸಚಿತ್ರ ಚಲಚ್ಚಿತ್ರ ವಾರ್ತಾ ತರಂಗಕ್ಕೆ ಸಾಕಷ್ಟು ಪುಟಗಳನ್ನು ಕೊಡಲಾಗಿದೆ. ಸಂಚಿಕೆಯನ್ನು ಮೊದಲಿನಿಂದ ಕೊನೆಯವರೆಗೂ ಚಲಚ್ಚಿತ್ರದ ಚಿತ್ರಗಳು ಅಲಂಕರಿಸಿವೆ. ಕನ್ನಡಿಗರು 'ವಾಣಿ'ಯನ್ನು ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸಬೇಕು.

೨. **ಬಾಳಿನ ಗುಟ್ಟು** (ಜೀವನಸ್ವಾಸ್ಥ್ಯ ವಿಚಾರ ಗ್ರಂಥ). ಇಂಗ್ಲಿಷಿನಿಂದ ಕನ್ನಡದಲ್ಲಿ ತಂದವರು ಶ್ರೀಮಾನ್ ಗೌರೀಶ ಕಾಯ್ಕಿಣಿಯವರು. ಬೆಳಕಿಗೆ ತಂದವರು ಶ್ರೀಮಾನ್ ಶಂ. ಬಾ. ಜೋಶಿಯವರು. ಧಾರವಾಡದ ಕನ್ನಡ ಸರಸ್ವತೀ ಭಾಂಡಾರದ 'ಮನೆಬೆಳಕು' ಮಾಲೆಯ 'ರತ್ನದೀಪ' ೧. ಕ್ರಾ. ೮. ೧೬+೧೭೨ ಪುಟಗಳು. ಬೆಲೆ ೧-೧೨-೦.

೩. **ಬೆಳಕು** (ಮೈಸೂರು ಅಕ್ಷರ ಪ್ರಚಾರ ಸಮಿತಿಯ ವಾರಪತ್ರಿಕೆ) ಸಂಪಾದಕರು: ಶ್ರೀ. ಕೂಡ್ಲಿ ಚಿದಂಬರಂ ಮತ್ತು ಶ್ರೀ. ಎಸ್. ವಿ. ಶ್ರೀನಿವಾಸರಾವ್ ಮೈಸೂರು. ಕ್ರಾ. ಫೋಲಿಯೊ ೧ ಹಾಳೆ. ಬೆಲೆ ?

ಹೊಸತಾಗಿ ಅಕ್ಷರಗಳನ್ನರಿತ ಪ್ರೌಢರಿಗೆ ಸ್ವಲ್ಪದರಲ್ಲಿಯೆ ಬೇರೆಬೇರೆ ವಿಷಯಗಳನ್ನಿದು ಅಚ್ಚುಕಟ್ಟಾಗಿ ಪರಿಚಯ ಮಾಡಿ ಕೊಡುತ್ತದೆ. ನಮ್ಮಲ್ಲಿಯ ಅಕ್ಷರ ಪ್ರಚಾರಸಂಸ್ಥೆಗಳವರು ಅಲ್ಲಲ್ಲಿಯ ತಮ್ಮ ಪ್ರಚಾರಕೇಂದ್ರಗಳಿಗೆ ಇದನ್ನು ಅವಶ್ಯವಾಗಿ ಬರಮಾಡಿಕೊಂಡು ಪ್ರಯೋಜನ ಪಡೆಯಬೇಕು.

೪. Towards Freedom (ಭಾರತದ ಸ್ವಾತಂತ್ರ್ಯವಿಚಾರ ಗ್ರಂಥ). ಬೇರೆ ಬೇರೆ ನಾಲ್ಕು ಜನ ಸುಪ್ರಸಿದ್ಧ ಅಂತರರಾಷ್ಟ್ರೀಯ ಲೇಖಕರು ಬರೆದ ನಾಲ್ಕು ಲೇಖನಗಳ ಸಂಗ್ರಹವಿದು. ಪ್ರಕಾಶಕರು: ಇಂಟರ್ ನ್ಯಾಶನಲ್ ಬುಕ್ ಹೌಸ್ ಲಿಮಿಟೆಡ್, ಬಾಂಬೆ—ಇಂಡಿಯಾ. ಕ್ರಾ. ೮. ೧೧೪ ಪುಟಗಳು. ಬೆಲೆ ೧-೦-೦.

೫. ರಾಜ್ಯಾದಾಯವೂ ಬಡತನವೂ (ಭಾರತದ ಆರ್ಥಿಕ ಸಮಸ್ಯೆಯ ವಿಚಾರ). ಮೂಲ ಲೇಖಕರು ಶ್ರೀಮಾನ್ ಜೆ. ಸಿ. ಕುಮಾರಪ್ಪ ಅವರು. ಅನುವಾದಕರು ಶ್ರೀಮಾನ್ ಟಿ. ಎಸ್. ಶರ್ಮ, ಚಿತ್ರದುರ್ಗ ಅವರು. ಧಾರವಾಡದ ಮಿಂಚಿನಬಳ್ಳಿಯ ೫ನೆಯ ವರ್ಷದ ೪ನೆಯ ಕುಡಿ. ಕ್ರಾ. ೮. ೧೦೫ ಪುಟ ಬೆಲೆ ೧-೪-೦.

೬. ಲಕ್ಷ್ಮೀಶ (ಕವಿಕಾವ್ಯ ಪರಿಚಯ) ಬರೆದವರು ಶ್ರೀಮಾನ್ ಎನ್. ಅನಂತ ರಂಗಾಚಾರ್ ಎಂ. ಎ., ಬಿ. ಟಿ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೪೫ನೆಯ ಗ್ರಂಥ. ಫೂ. ಕ್ಯಾ. ೮. ೬೦ ಪುಟಗಳು. ಬೆಲೆ ೦-೩-೦.

ಲಕ್ಷ್ಮೀಶ ಕವಿಯ ಸರ್ವಜನಾದರಣೀಯ ಕಾವ್ಯವಾದ ಕನ್ನಡ ಜೈಮಿನಿಭಾರತದ ಪರಿಚಯವನ್ನು—ಸ್ವಲ್ಪದರಲ್ಲಿಯೆ—ಬೇರೆ ಬೇರೆ ರೀತಿಯಿಂದ ಈ ಪುಟ್ಟ ಹೊತ್ತಗೆ ಅಚ್ಚುಕಟ್ಟಾಗಿ ಮಾಡಿ ಕೊಡಬಲ್ಲದು. ಪ್ರಚಾರ ಪುಸ್ತಕಮಾಲೆಯಲ್ಲಿ ಈ ಮೊದಲೇ ಪ್ರಕಟವಾಗಿರುವ ಬೇರೆಬೇರೆ ಕವಿ-ಕಾವ್ಯ ಪರಿಚಯಾತ್ಮಕ ಪುಸ್ತಕಗಳಂತೆ ಇದು ಕೂಡ ಉಪಯುಕ್ತವೂ ಸಂಗ್ರಹ ಯೋಗ್ಯವೂ ಆಗಿದೆ.

೭. ಸವಿನೆನಪು (ಕವನಸಂಗ್ರಹ) ಬರೆದವರು: ಶ್ರೀ. ವಿ. ಗೋ. ಭಟ್ಟ, ಕಡತೋಕಾ. ಸಿಕ್ಕುವ ಸ್ಥಳ: ಸಾಹಿತ್ಯ ಭಾಂಡಾರ ಹುಬ್ಬಳ್ಳಿ. ಫೂಲ್ಸ್‌ಕ್ಯಾಪ್ ೮. ೧೨ ಪುಟಗಳು. ಬೆಲೆ ೦-೩-೦.

ಶ್ರೀ. ವಿ. ಗೋ. ಭಟ್ಟರು ಜಯಂತಿಯ ವಾಚಕರಿಗೆ ಅಪರಿಚಿತರೇನೂ ಅಲ್ಲ. 'ವಿ. ಜಿ. ಭಟ್ಟ' ಎಂಬ ಹೆಸರಿನಿಂದ ಇವರ ಹಲವು ಕವನ-ಕಥೆಗಳು ಜಯಂತಿಯಲ್ಲಿ ಅಚ್ಚಾಗಿವೆ. ಇವರು ಮ್ಯಾಟ್ರಿಕ್ಯುಲೇಶನ್ ಅಭ್ಯಾಸಕ್ಕಾಗಿ ಜಮಖಂಡಿ ಹೈಸ್ಕೂಲಿನಲ್ಲಿ ಓದುತ್ತಿದ್ದರು; ಅಲ್ಲಿಯ ವಿವಿಧ ಸನ್ನಿವೇಶಗಳ ಸೌಂದರ್ಯವನ್ನು ಕವನಗಳಲ್ಲಿ ಹೆಣೆದು 'ಸವಿನೆನಪು' ಎಂಬ ಹೆಸರಿನಿಂದ ಇದನ್ನು ಪ್ರಕಟಿಸಿದ್ದಾರೆ. ಪ್ರೊ. ಗೋಕಾಕ ಅವರು ಚಿಕ್ಕ ಮುನ್ನುಡಿ ಬರೆದು ಪ್ರೋತ್ಸಾಹಿಸಿದ್ದಾರೆ.

೮. ತಮಾಷ್ (ವಾರಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕರು: ಶ್ರೀ. ಎಂ. ಎಸ್. ಮಾಧವರಾವ್. ೩೦೮ ರಾಮಾನುಜ ರೋಡು, ಮೈಸೂರು. ಕ್ರಾ. ೧/೮ ದ ೬೪ ಪುಟ. ಬೆಲೆ ೦-೬-೦.

ಹೆಚ್ಚಾಗಿ ಮೈಸೂರು ದೇಶದ ನಾಟಕ-ಚಲಚ್ಚಿತ್ರಗಳ ನಟ-ನಟಿಯರ ಸಚಿತ್ರ ಸಂಕ್ಷಿಪ್ತ ಪರಿಚಯಗಳುಂಟು. ಓದಬಹುದಾದ ಲೇಖನಗಳೂ ೩-೪ ಇವೆ. ಇದಕ್ಕೆ 'ತಮಾಷ್' ಎಂಬ ಹೆಸರಿದ್ದುದೇ ಒಂದು ತಮಾಷೆಯಾಗಿದೆ.

ಆಧುನಿಕ ರಷ್ಯಾ

(ಯು. ಎಸ್. ಎಸ್. ಆರ್)

ಬರೆದವರು ಶ್ರೀ. ಪಿ. ಆರ್. ರಾಮಯ್ಯ, ಬಿ. ಎಸ್‌ಸಿ. ಸಂಪಾದಕರು 'ತಾಯಿನಾಡು' ಮತ್ತು 'ಡೇಲಿ ನ್ಯೂಸ್'

ಸದ್ಯದ ಪ್ರಪಂಚದಲ್ಲಿ ರಷ್ಯದ ಸಾಮಾಜಿಕ ಜೀವನವೂ ರಾಜಕೀಯ ಜೀವನವೂ ಬಹುಜನರಿಗೆ ಕುತೂಹಲಕಾರಕವೆನಿಸುತ್ತಲಿವೆ. ಬಹುಕಾಲದಿಂದಲೂ ಒಂದಿಲ್ಲೊಂದು ಬಗೆಯ ಸಾಮ್ರಾಜ್ಯದ ಅಧೀನದಲ್ಲಿಯೆ ಬದುಕಿಕೊಂಡು ಬಂದಿರುವ—ಒಂದಿಲ್ಲೊಂದು ಬಗೆಯ ಆಸ್ತಿಕ ಭಾವನೆಯಿಂದ ಬೆಳೆದು ಬಂದಿರುವ—ಭಾರತೀಯರಿಗಂತೂ ರಷ್ಯದ ಜನರ ಜೀವನವು ಒಂದು ಅದ್ಭುತರಮ್ಯ ಕಥೆಯಾಗಿ ಕಾಣುವುದು ಆಶ್ಚರ್ಯದ ಮಾತಲ್ಲ. ಭಾರತದಂತೆಯೆ ರಷ್ಯಾಕೂಡ ಬಡಬಗ್ಗರ ದೇಶ; ಅಜ್ಞಾನಿಜನ ಬಾಹುಲ್ಯದ ದೇಶ; ಧರ್ಮದ ಹುಚ್ಚಿನಿಂದ ಕುರುಡಾಗಿದ್ದ ದೇಶ; ಝಾರನ ಅಧಿಕಾರದ ದರ್ಪದಿಂದ ಹಣ್ಣುಹಣ್ಣಾಗಿದ್ದ ಜನರಿರುವ ದೇಶ. ಇಂತಹ ದೇಶದಲ್ಲಿ ಒಮ್ಮೆಲೆ ಎಂತಹ ಪರಿವರ್ತನ! ಪ್ರಪಂಚದ ಮಹಾ ಯುದ್ಧದಲ್ಲಿ ಪ್ರಮುಖ ಭಾಗವಹಿಸಿ ನಿಂತಿದ್ದ ರಷ್ಯದ ಒಳನಾಡಿನಲ್ಲಿ, ಒಮ್ಮೆಲೆ ಇದ್ದುದಿದ್ದ ಹಾಗೆಯೆ ಎಂತಹ ಬದಲಾವಣೆ?

ನಿರಂಕುಶಪ್ರಭುವಾದ ಝಾರನು ಪರಿವಾರದೊಂದಿಗೆ ಕೊಲೆಗೆ ಗುರಿಯಾದ; ಆಡಳಿತದ ಸಂಸ್ಥೆಗಳು ಒಂದರ ಹಿಂದೊಂದು ತಲೆ ಕೆಳಗಾಗಿ ಹೋದುವು; ದನಗಳಂತೆ ದುಡಿಯುವುದೊಂದನ್ನೇ ಅರಿತಿದ್ದ ಒಕ್ಕಲಿಗರೂ ಕೂಲಿಕಾರರೂ ಜನರಂತಾಗಿ, ಆಡಳಿತದ ಸೂತ್ರಗಳನ್ನೇ ತಮ್ಮ ಸ್ವಾಧೀನಪಡಿಸಿಕೊಂಡು, ರಷ್ಯವನ್ನು ನಿಜವಾಗಿ ಜನತೆಯ ರಾಷ್ಟ್ರವನ್ನಾಗಿ ಮಾಡಿದರು. ಹೊಸ ಬಗೆಯ ಸಮಾಜದ ರಚನೆಯನ್ನು ಮಾಡಿಕೊಂಡರು. ಇದುವರೆಗೆ ಕುರುಡುಗಣ್ಣಿಂದ ನೋಡಲಾಗುತ್ತಿದ್ದ ಆಸ್ತಿಕ ಧರ್ಮದ ದುಷ್ಪರಿಣಾಮವನ್ನರಿತು, ತೆರೆದ ಕಣ್ಣಿಂದ ಲೋಕವನ್ನು ನೋಡುವ ನಾಸ್ತಿಕವೃತ್ತಿಯನ್ನು ಬೇಕಾಗಿಯೆ ಅವಲಂಬಿಸಿದರು. ಜನರು ಜಾಣರಾದರು, ಉದ್ಯೋಗಿಗಳಾದರು, ಪುಷ್ಟಿ-ತುಷ್ಟಿಗಳುಳ್ಳವರಾದರು. ಇದೆಲ್ಲವೂ ನಡೆದುದು ೧೯೧೭ ನೆಯ ಇಸವಿಯಿಂದೀಚೆಗಿನ ಅಲ್ಪಕಾಲದಲ್ಲಿ. ಅನಾದಿಕಾಲದಿಂದಲೂ ದೈನ್ಯಜೀವನದಲ್ಲಿ ಕಾಲ ಕಳೆಯುತ್ತಿದ್ದ ರಷ್ಯನ್ ಜನತೆ, ೨೫-೩೦ ವರುಷಗಳಲ್ಲಿಯೆ ಸುಖಸಂತೋಷಗಳಲ್ಲಿ ನಲಿದಾಡತೊಡಗಿತು. ರಾಷ್ಟ್ರದ ಪರಿಪೋಷಣೆಗೆ ಅವಶ್ಯವಾದ ವಿವಿಧ ವಿಧಾಯಕ ಕಾರ್ಯಗಳನ್ನು ಕೈಕೊಂಡು, ಅಪೇಕ್ಷಿತ ಸಿದ್ಧಿಯನ್ನು ಪಡೆಯಿತು. ಈ ಕಾಲದ ರಷ್ಯದ ಇತಿಹಾಸವೆಂದರೆ ಸಮುದ್ರಮಥನದ ಇತಿಹಾಸವಿದ್ದಂತೆ. ಆಂತರಿಕ ಕಲಹದ ಕಾಲಕೂಟದಿಂದ ರಷ್ಯನ್ ರಾಷ್ಟ್ರದ ಗತಿಯು ಏನಾಗುವುದೋ ಎಂದು ಲೋಕವೆಲ್ಲ ಗಾಬರಿಗೊಂಡು ನೋಡುತ್ತಿರುವಾಗ, ಲೆನಿನ್‌ನಂತಹ ಕರ್ಮಯೋಗಿ ಮುಂಬರಿದು ಬಂದ; ಕಾಲಕೂಟದ ಶಕ್ತಿಯನ್ನು ಕಡಿಮೆ ಮಾಡಿದ; ಸಮಾಜಸಮತಾವಾದದ ಅಮೃತಸೇಚನದಿಂದ ಜೀವನ್ಮೃತವಾಗಿದ್ದ ರಷ್ಯವನ್ನು ಪುನರುಜ್ಜೀವನಗೊಳಿಸಿದ. ಇವೆಲ್ಲದರ ವಿಶದವಾದ ಚರಿತ್ರೆ ಈ ೩೫೭ ಪುಟಗಳ ಪುಸ್ತಕದಲ್ಲಿ ವಿವರ ವಿವರವಾಗಿ ಅಡಕವಾಗಿದೆ. ಆಧುನಿಕ ರಷ್ಯದ ವಿಚಾರವಾಗಿ ಬರೆದ ಇಷ್ಟೊಂದು ದೊಡ್ಡ ಹೊತ್ತಗೆ ಕನ್ನಡದಲ್ಲಿ ಇದುವರೆಗೆ ಆಗಿರಲಿಲ್ಲ. ಶ್ರೀಮಾನ್ ಪಿ. ಆರ್. ರಾಮಯ್ಯನವರಂತಹ ಅಧಿಕಾರಿ ಲೇಖಕರು ಇದನ್ನೀಗ ಬರೆದು ಪ್ರಕಟಿಸಿ, ಕನ್ನಡಿಗರಿಗೆ ಒದಗಿಸಿ ಕೊಟ್ಟು ತುಂಬ ಉಪಕಾರ ಮಾಡಿದ್ದಾರೆ.

ಪುಸ್ತಕದಲ್ಲಿ ೨೬ ವಿಭಾಗಗಳನ್ನು ಮಾಡಲಾಗಿದ್ದು, ರಷ್ಯದ ಮುಖಪರಿಚಯ-ಪೂರ್ವೇತಿಹಾಸಗಳನ್ನು ಮೊದಲುಮಾಡಿ ೧೯೪೨ ನೆಯ ನವೆಂಬರ್ ೭ ನೆಯ ತಾರೀಖಿನ ದಿನ ಸ್ಟ್ಯಾಲಿನನು ರಷ್ಯನರಿಗೆ ಕೊಟ್ಟ ಸಂದೇಶದ ವರೆಗಿನ ಸಂಗತಿಗಳೆಲ್ಲವೂ ಕಾಲಾನುಕ್ರಮದಂತೆ—ಈ ವಿಭಾಗಗಳಲ್ಲಿ ತುಂಬಿಕೊಂಡಿವೆ. ಝಾರನ ವ್ಯಕ್ತಿತ್ವ, ರಾಸಪುಟಿನ್, ರಷ್ಯನ್‌ಕ್ರಾಂತಿ ಮೊದಲಾದ ವಿಷಯಗಳ ವಿವರಣೆ ಕಥೆ-ಕಾದಂಬರಿಗಳನ್ನು ಓದುತ್ತಿರುವಾಗಿನಂತೆ ಮನವನ್ನು ಹಿಡಿವುದು; ಅಲ್ಲದೆ 'ಕಾರ್ಲ್-ಮಾರ್ಕ್ಸ್ ಮತ್ತು ಅವರ ತತ್ತ್ವಗಳು' 'ಸೋಷಲಿಜಂ ಮತ್ತು ಕಮ್ಯುನಿಜಂ' ಎಂಬ ವಿಭಾಗಗಳು ವಾಚಕರಿಗೆ ಆ ಆ ವಿಷಯಗಳ ಪರಿಚಯವನ್ನು ಸುಲಭವಾಗಿ ಮಾಡಿಕೊಡುವಂತಿವೆ. ಲೆನಿನ್, ಸ್ಟ್ಯಾಲಿನರ ಕಾಲದ ರಷ್ಯನರ ಚಟುವಟಿಕೆ ಚಳವಳಿಗಳ ಕತೆಯು, ಇಂದಿನ ಪರಿಸ್ಥಿತಿಯಲ್ಲಿ ಕನ್ನಡ ಜನತೆಗೆ ಪ್ರಯೋಜನಕಾರಿ ಎನಿಸುವಂತಿದೆ. ಆಧುನಿಕ ರಷ್ಯವನ್ನು ನಿರ್ಮಿಸಲು ಕಾರಣರಾದ ಮಹಾಪುರುಷರ ಮತ್ತು ಝಾರ-ಝಾರಿನಾ-ರಾಸಪುಟಿನರ ಚಿತ್ರಗಳೂ ಸಂದರ್ಭಾನುಸಾರ ಪ್ರಕಟವಾಗಿ, ವಿಷಯವಿವೇಚನೆಗೊಂದು ಕಳೆಯನ್ನು ತಂದುಕೊಟ್ಟಿವೆ. ಒಟ್ಟಿನ ಮೇಲೆ 'ಆಧುನಿಕ ರಷ್ಯಾ' ಕನ್ನಡಿಗರೆಲ್ಲ ಅವಶ್ಯವಾಗಿ ಓದುವಂತಹ ಗ್ರಂಥವಾಗಿದೆಯೆಂದು ಹೇಳಬಹುದು.

ಭಾಷೆಯಲ್ಲಿ ಬಿಗುವಿಲ್ಲ, ಶೈಲಿಯಲ್ಲಿ ಸೌಂದರ್ಯವಿಲ್ಲ, ವಿಷಯದ ಪುನರುಕ್ತಿ

ಅಲ್ಲಲ್ಲಿ ಕಾಣುವುದು— ಇತ್ಯಾದಿ ದೋಷಗಳನ್ನು ಹಲವರು ಎತ್ತಿ ಹೇಳಬಹುದಾದರೂ, ವಿಷಯಸಂಗ್ರಹದ ದೃಷ್ಟಿಯಿಂದ ಈ ಗ್ರಂಥ ತೃಪ್ತಿಕರವಾಗಿದೆಯೆಂದು ಹೇಳಬಹುದು. ಆದರೆ ಒಂದು ಮಹತ್ತ್ವದ ಸಂಗತಿಯನ್ನು ಮರೆಯುವಂತಿಲ್ಲ. ರಷ್ಯದ ಆಧುನಿಕ ಇತಿಹಾಸವನ್ನು ಕುರಿತು ಪರಭಾಷೆಯಲ್ಲಿ ಹಲವರು ಹಲವು ಗ್ರಂಥಗಳನ್ನು ಬರೆದಿದ್ದಾರೆ. ಹೀಗೆ ಬರೆದವರಲ್ಲಿ ಕೆಲವರು ಆಧುನಿಕ ರಷ್ಯದ ಪಕ್ಷಪಾತಿಗಳು; ಇನ್ನು ಕೆಲವರು ಅದರ ವಿರೋಧಿಗಳು. ಇಬ್ಬರೂ ಕಂಡ ಸಂಗತಿಗಳೆಂದು ಪ್ರತಿಜ್ಞೆಮಾಡಿ ಹೇಳಿರುವರಾದರೂ, ಅವುಗಳಿಗೆ ತಂತಮ್ಮ ಅಭಿಪ್ರಾಯದ ಬಣ್ಣಗಳನ್ನು ಬಳೆಯದವರಿಲ್ಲ. ಆದುದರಿಂದಲೆ ನಮ್ಮಂತಹ ದೂರದವರಿಗೆ ಯಾರ ಮಾತು ನಿಜವೆಂಬುದನ್ನು ಖಂಡಿತ ತಿಳಿದುಕೊಳ್ಳಲಿಕ್ಕಾಗುವುದಿಲ್ಲ. ಇಂತಹ ಪರಸ್ಪರ ವಿರೋಧಿ ಅಭಿಪ್ರಾಯಗಳಿದ್ದ ಪುಸ್ತಕಗಳನ್ನೋದಿಕೊಂಡು, ಅವುಗಳ ಆಧಾರದ ಮೇಲೆ ನಮ್ಮ ಭಾಷೆಯಲ್ಲಿ ಗ್ರಂಥ ಬರೆಯಲು ಹೊರಟರೆ ಅದು ವಿಷಮಾಭಿಪ್ರಾಯಗಳಿಗೆ ಆಸ್ಪದವಾಗುವ ಸಂಭವವುಂಟು. ಈ ಪುಸ್ತಕದಲ್ಲಿ ಕೂಡ ಹಾಗಾಗದೆ ಇಲ್ಲ. ಝಾರನ ಕೊಲೆ ನಡೆದುದು ತೀರ ಅನ್ಯಾಯವೆನಿಸುವಷ್ಟು ಝಾರನ ಉದಾರಚಿತ್ರ ಇದರಲ್ಲಿ ಮೂಡಿಕೊಂಡಿದೆ. ರಾಸಪುಟಿನನ ವ್ಯಕ್ತಿತ್ವ ವಾಚಕರನ್ನು ಬೆರಗಿನಿಂದ ಸೆರೆಹಿಡಿವುದಲ್ಲದೆ ರೊಚ್ಚಿಗೆಬ್ಬಿಸುವುದಿಲ್ಲ. ಕ್ರಾಂತಿಕಾರರ ಹುಂಬತನ-ದುಷ್ಟತನಗಳೇ ಎಷ್ಟೋ ಸಲ ನಮ್ಮ ಬೇಸರಕ್ಕೂ ತಿರಸ್ಕಾರಕ್ಕೂ ಕಾರಣಗಳಾಗುತ್ತವೆ. ಇನ್ನೊಬ್ಬರು ಬರೆದ ಚರಿತ್ರ-ಗ್ರಂಥಗಳನ್ನವಲಂಬಿಸಿ ಬರೆಯುವ ಗ್ರಂಥಗಳಲ್ಲಿ ಈ ಬಗೆಯ ದೋಷಗಳಿರುವುದು ಅನಿವಾರ್ಯ.

ಸದ್ಯದ ಮಹಾಯುದ್ಧದಲ್ಲಿ ಜರ್ಮನಿಯಂತಹ ಬಲಾಢ್ಯ ಶತ್ರುವನ್ನು ಮಣ್ಣುಮುಕ್ಕಿಸುತ್ತಲಿರುವ ರಷ್ಯದ ಜೀವನವನ್ನು ಕನ್ನಡಿಗರು ಅರಿತುಕೊಳ್ಳಬೇಕಾದುದು ಅತ್ಯವಶ್ಯ. ಎಲ್ಲರೂ ಈ ಪುಸ್ತಕವನ್ನು ತರಿಸಿ ಓದಿ ತಮ್ಮ ಭಾಂಡಾರದಲ್ಲಿ ಇರಿಸಿಕೊಳ್ಳಬೇಕು. —ಬಿ. ಪಿ. ಎಸ್. ರಾವ್

ಬಾಳಿನ ಗುಟ್ಟು:— ಕನ್ನಡಿಸಿದರು: ಶ್ರೀ. ಗೌರೀಶ ಕಾಯ್ಕಿಣಿ. ತಂದವರು: ಶ್ರೀ ಜೋಶಿ ಶಂಕರರಾಯರು. ಕನ್ನಡ ಸರಸ್ವತೀ ಗ್ರಂಥ ಭಾಂಡಾಗಾರ, ಧಾರವಾಡ. ಪುಟಗಳು ೨೦ + ೧೭೨; ಬೆಲೆ ೧-೧೨-೦.

ಬಾಳಿನ ಬಗೆಯಾಗಿ ಬರೆಯುವುದೊಂದು ಇಂದಿನ ವಿಶೇಷ. ಅದೇ ಹೆಚ್ಚೆಚ್ಚು ಒಂದು ವೈಶಿಷ್ಟ್ಯ ಆಗಬೇಕಾಗಿದೆ. ವಿಷಯವು ಆಧುನಿಕವೆಂದಲ್ಲ; ಆದರೆ ಅದರ ಆವಶ್ಯಕತೆಯು ಇಂದು ತೋರಹತ್ತಿದೆ ಎಂದು. ಇತ್ತಿತ್ತ ನಮಗೆ ಜೀವನದ ತರತರದ ಮಾದರಿಗಳು ನೋಡಲಿಕ್ಕೆ ಸಿಕ್ಕಹತ್ತಿವೆ. ಇಂದು ನಮಗೆ 'ಮಾನವನು ಮಾನವಂತನಾಗಬೇಕು, ಸಮಾಜದಲ್ಲಿ ಎಲ್ಲರೂ ಸಾಮಾಜಿಕರಾಗಬೇಕು, ರಾಷ್ಟ್ರಕ್ಕೆ ಒಂದು ಆದರ್ಶವಿರಬೇಕು' ಎಂಬ ಮಾತುಗಳು ಹೆಚ್ಚು ಮನದಟ್ಟಾಗಹತ್ತಿವೆ. ಇಂತಹ ಸಂದರ್ಭದಲ್ಲಿ ಬಾಳಿನ ಗುಟ್ಟನ್ನರಿಯುವುದು ತೀರ ಆವಶ್ಯವಾಗಿದೆ. ಹಾಗೆ ಮಾಡುವಾಗ ಆ ಗುಟ್ಟನ್ನು ಒಮ್ಮೆಲೆ ರಟ್ಟುಮಾಡದೆ, ಅದರ ಮಾಡಿಕೆಯನ್ನು ಪದರು ಪದರಾಗಿ ಬಿಚ್ಚಿ, 'ನೋಡಿ, ನೋಡಿ', ಎಂದು ಹೇಳುತ್ತ, ಕೊನೆಗೆ ಮಾನವನು ತನ್ನ ತಾನರಿಯಬೇಕು, ತನ್ನವರನ್ನು ತಿಳಿಯಬೇಕು, ತನ್ನವರೊಡನೆ ಬೆಳೆಯಬೇಕು....ಎಂಬ ಜೀವನಸೂತ್ರವನ್ನು ನಾವು ಮಾಡಿಕೊಳ್ಳಬಹುದು. ಈ ಪುಸ್ತಕವನ್ನು ಓದಿ ಮುಗಿಸಿದ ಮೇಲೆ— ಓದಿನಿಂದ ಜೀವನವನ್ನು ಎಷ್ಟೆಂದು ಅರಿತುಕೊಳ್ಳಬಹುದು, ಅದು ನೋಡಿದರೆ ಎಷ್ಟು ವಿಶಾಲ, ಎಷ್ಟು ವಿವಿಧ, ಎಷ್ಟು ವಿನೂತನ— ಎಂದೆನಿಸಬಹುದು! ಆದರೆ ಜೀವನವನ್ನು ಅರಿತುಕೊಳ್ಳಬೇಕು ಎಂಬುದಿಷ್ಟನ್ನಾದರೂ ಇಂತಹ ಪುಸ್ತಕಗಳಿಂದ ಕಲಿತರೆ ಎಷ್ಟು ತಿಳಿದಂತಾಗುವುದು! ಇನ್ನು ಇದೆಲ್ಲ ಈ ಪುಸ್ತಕದ ವಿಷಯವಾಗಿ ಆಗುವ ಮಾತು. ಇದು ಮೂಲ ಇಂಗ್ಲಿಷಿನಲ್ಲಿರುವುದರಿಂದ ಈ ಮಾತು ಇಲ್ಲಿ ಅಪ್ರಸ್ತುತವೆನಿಸಬಹುದು.

ಅಂತೆಯೆ ಮುಂದೆ ಆಡತಕ್ಕ ಮಾತು ಭಾಷಾಂತರದ್ದು. ಮೂಲ ಇಂಗ್ಲಿಷಿನಿಂದ ಮಾಡಿದ ಅನುವಾದವು ಸರಲವಾಗಿದೆ— ಸಾಕಷ್ಟು ಸುಗಮವಾಗಿದೆ. ಕೆಲವೆಡೆಗಳಲ್ಲಂತೂ—ಬಳಕೆಯ ಶಬ್ದಗಳ ಮೂಲಕ— ಅರ್ಥವು ನೇರವಾಗಿ ಮನಂಬುಗುತ್ತದೆ. ಇನ್ನು ರೂಪಾಂತರವೆ ಇರಲಿ, ಭಾಷಾಂತರವೆ ಇರಲಿ, ಇಂತಹ ವಿಷಯದ ಪುಸ್ತಕಗಳಿಗಾಗಿ ಒಂದು ಪರಿಭಾಷೆಯು ಬೇಕು ಎನಿಸುತ್ತದೆ. ಹೊಸತಾಗಿ ಬರೆಯುವವರು ಕೊನೆಗೆ ಇದಕ್ಕೂ ಮುಂಚಿತ ಬೆಳಕಿಗೆ ಬಂದ ಶಬ್ದಗಳನ್ನಾದರೂ ನೋಡಿಕೊಳ್ಳಬೇಕು— ಕೇವಲ "ಶಬ್ದಸಿದ್ಧಿಯ ಸಂದಿಗ್ಧ ಸಾಮರ್ಥ್ಯ"ವನ್ನಷ್ಟೇನಂಬಬಾರದು. ಮತ್ತು ಕೊನೆಗೆ ತನ್ನ ಹಿಂದಿನವರಿಗಾಗಿ ಹಾಗೂ ಓದುಗರ ನೆರವಿಗಾಗಿ ತಾನು ಮಾಡಿದ ಬಳಸಿದ ಶಬ್ದಗಳ ಪಟ್ಟಿಯೊಂದನ್ನು ಕೊಟ್ಟಿದ್ದರೆ ಸರಿಯಾಗುತ್ತಿತ್ತು. ಶೀಘ್ರದಲ್ಲಿಯೆ ಒಂದು ಸಾಮಾನ್ಯವೆನಿಸಬಹುದಾದ ಪರಿಭಾಷೆಯನ್ನು ನಿರ್ಮಿಸಲು ಸಹಾಯವಾದಂತೆಯೂ ಆಗುತ್ತಿತ್ತು.

ಅದರ ನಂತರ ಅಚ್ಚಿನ ತಪ್ಪುಗಳ ಮಾತು. ಈ ಪುಸ್ತಕಗಳಲ್ಲಿ ಅಚ್ಚಿನ ತಪ್ಪುಗಳು— ಒಪ್ಪಿಕೊಂಡವುಗಳಿಗಿಂತ ಹೆಚ್ಚು ಉಳಿದಿವೆ— ಎಂದು ಇಂದಿಗೂ ಬರೆಯುವುದು ಕೊಂಚ ಎಡಚೆನಿಸುತ್ತದೆ. ಹ್ರಸ್ವ—ದೀರ್ಘಗಳ ಪಾಡೂ ಹಾಗೆಯೆ. ಅದಲ್ಲದೆ ಅಚ್ಚಿನ ತಪ್ಪುಗಳೇ ಎನಿಸುವಂತಹ ಕೆಲವು ಅಪಪ್ರಯೋಗಗಳೂ ಇವೆ. ಉದಾ: ಪುಟ ೫೬ರಲ್ಲಿ 'ಹಿತಃಪ್ರೇರಣೆ'; ಇವೆಲ್ಲವುಗಳನ್ನು ಕೊಂಚ ಜಾಗ್ರತೆಯಿಂದ ನೋಡಿಕೊಂಡಿದ್ದರೆ— ಹುರುಳಿನ ಮರುಳೂ ಬಿಡುತ್ತಿತ್ತು; ತುಟ್ಟಿ ಕಾಗದದ ಈ ದಿನಗಳಲ್ಲಿ ತಪ್ಪೋಲೆಯ ಒಂದು ಪುಟವೂ ಉಳಿಯುತ್ತಿತ್ತು. ಈಗ ಇದು ಮುಂದೆ ಮಾಡಬೇಕಾದ ಕೆಲಸ.

ಆದರೂ ಸದ್ಯಕ್ಕೆ ಗೆಳೆಯರು, ಮದುವಣಿಗರು, ನಂಟರು, ನೆರೆಹೊರೆಯವರು ಮುಂತಾಗಿ ಪ್ರತಿಯೊಬ್ಬರ ಬಳಿಯಲ್ಲಿರಬೇಕಾದ ಪುಸ್ತಕವಿದು. ಮನೆ-ಮನೆಗಳಲ್ಲಿ ಆವಶ್ಯವೆನಿಸುವ ಬೆಳಕು ಇದು. ಇಂತಹ ಬೆಳಕನ್ನು ಬೀರುವ ಈ ರತ್ನದೀಪವನ್ನು ನೀಡಿದ ಶ್ರೀ. ಗೌರೀಶರಿಗೂ, ಅದನ್ನು ತಂದು ನಮಗೊದಗಿಸಿದ ಶ್ರೀ. ಜೋಶಿ ಶಂಕರರಾಯರಿಗೂ ಕನ್ನಡವು ಋಣಿಯಾಗಿದೆ. ಎಚ್. ಎಸ್. ಪಾಟೀಲ

ನಗೀಗೆ ನೈವೇದ್ಯ

ಜೀವಸತ್ತ್ವ

ಡಾಕ್ಟರ್ :— ನಿಮ್ಮ ಮೈಯೊಳಗೆ ಕೆಲವು ಜೀವಸತ್ತ್ವಗಳ ಪ್ರಮಾಣ ತೀರ ಕಡಿಮಿ ಆಗ್ಯಾವ. ಅದಕ್ಕಾಗಿ ನೀವು ಹಣ್ಣು-ಕಾಯಿಗಳನ್ನು— ಮೇಲಿನ ತೊಗಟಿ ಸಹಿತವಾಗಿ ತಿನ್ನಕತ್ತಿರಬೇಕು. ನಿಮ್ಮಲ್ಲಿ ಹೆಚ್ಚಾಗಿ ಸಿಕ್ಕುವ ಕಾಯಿ ಯಾವುವು ?

ರೋಗಿ :— ಟೆಂಗಿನ ಕಾಯೊಂದನ್ನ ಬಿಟ್ಟರ ಇನ್ನ ಯಾವ ಕಾಯಿಯಾನೂ ಸಿಗೂದಿಲ್ಲ ನಮ್ಮಲ್ಲಿ !

* * *

ನಿಯಂತ್ರಣ ಕಾಯಿದೆ

ರಾಧಕ್ಕ :— ಅಲ್ಲಾ, ನಿಮ್ಮ ಭಾಗೀರತಿಗೆ ವರಾ ನೋಡಿ ಬಂದಾರಂತ ; ಹೌದೇನು ?

ಗೋದಕ್ಕ :— ಹೂಂ, ಹೌದು ! ಆದರ ಭಾಳ ದೂರ ನೋಡ್ರಿ ! ನನ್ನ ಮನಸಿನೊಳಗ ಅಷ್ಟು ದೂರ ಕೊಡೂದು ಇಲ್ಲ ಖರೇ ; ಗಂಡಸರ ಮನಸಿಗೆ ಬಂದ ನ್ಯಾಲ ಮಾಡೂದೇನು ?

ರಾಧಕ್ಕ :— ಭಾಳ ದೂರೇನು ? ಅಂದರ ಯಾವೂರು ?

ಗೋದಕ್ಕ :— ನಾಗಪೂರಂತರೆವ್ವಾ, ಇಲ್ಲಿಂದ ಮೂರು ದಿನದ ಹಾದಿ. ಮದಿವಿ ಆಗಿ ಒಮ್ಮೆ ಕಳಿಸಿಬಿಟ್ಟೆವೆಂದರೆ ತಿರಿಗಿ ಕರಿಸೂದಕ್ಕ ಸುದ್ಧಾ ಆಗೂದಿಲ್ಲ.

ರಾಧಕ್ಕ :— ಜಿಲ್ಲಾ ಬಿಟ್ಟು ಜಿಲ್ಲಾಕ್ಕ ಯಾವ ಮಾಲನ್ನೂ ಕಳಿಸಬಾರದಂತ ಸರಕಾರದವರು ಈಗ ಕಾಯಿದೇ ಮಾಡ್ಯಾರಲ್ಲ ; ಹಾಂಗs ಹೆಣ್ಣುಗಳನ್ನೂ ಜಿಲ್ಲಾ ಬಿಟ್ಟು ಜಿಲ್ಲಾಕ್ಕ ಕೊಡಬಾರದೂ ಅಂತ ನಿಯಂತ್ರಣ ಕಾಯಿದೆ ಮಾಡಿದರ ಚೆಲೋ ಆಗತಿತ್ತs ನೋಡ್ರಿ !

* * *

ಮನೆಗೆಲಸದ ಹಂಚಿಕೆ

" ರಾತ್ರೀ ಒಂದು ಗಂಟೆಗೆ ನೀ ಮನಿಗೆ ಹೋದರೂ, ಅಲ್ಲೀತನಕಾ ನಿನ್ನ ಹೇಂತಿ ನಿನ್ನ ದಾರೀ ಕಾಯುತಾ ಎಚ್ಚರಿರತಾಳs ? ಆಶ್ಚರ್ಯದ ಮಾತಪಾ ಇದು ! "

" ಇದರೊಳಗ ಆಶ್ಚರ್ಯದ ಮಾತು ಎಲ್ಲೀದೋ ! ನಾವಿಬ್ಬರೂ ನಮ್ಮ ಪಾಲಿಗೆ ಕೆಲಸಾ ಹಂಚಿಕೊಂಡೀದಿವೇನಪಾ ! ರಾತ್ರಿ ಹಾಸಿಗೀ ನಾ ಹಾಸಬೇಕು ; ಮುಂಜಾನೆ ಆಕಿ ಹಾಸಿಗೀ ಸುತ್ತಿ ಇಡಬೇಕು. ಅದಕ್ಕs ಆಕಿ ನನ್ನ ಹಾದೀ ನೋಡತs ಕೂತಿರತಾಳ ತಿಳೀತೇನು ?

* * *

ಶಿಕ್ಷೆಗೆ ಬದಲು ಶಿಫಾರಸು

ನ್ಯಾಯಾಧೀಶ :— ನೀನು ಹೆಂಡತಿನ್ನ ಹೊರಗ ಹಾಕಿಬಿಟ್ಟದ್ದರಿಂದ ನಿನಗೀಗ ನಾನು ಕಠಿಣ ಶಿಕ್ಷಾ ಕೊಡುವವ ಇದ್ದೇನೆ ; ತಿಳೀತೇನು ?

ಅಪರಾಧಿ :— ರಾವಸಾಹೇಬ, ಇಂಥಾ ಹೆಂತಿನ್ನ ಕಟಕೊಂಡು ನನ್ಹಾಂಗ ಹತ್ತು ವರ್ಷ ಸಂಸಾರಾ ನೀವು ಮಾಡಿದ್ದರ, ನಿಮಗ ಏನಾದರೂ ಪದವಿ ಅಥವಾ ಪದಕ ಸಿಗಬಹುದಾಗಿತ್ತು !

* * *

ಗುಣಗಳುಳ್ಳ ಮನುಷ್ಯ

" ನಡತಿ ಸರಳ ಇರಬೇಕು ; ಇಲ್ಲದ ತಂಟೆ-ತಕರಾರು ಮಾಡಬಾರದು ; ಕೆಲಸಕ್ಕ ಬೇಸರಿಬಾರದು ; ಆಜ್ಞಾಧಾರಕನಾಗಿರಬೇಕಲ್ಲದೆ ಮೇಲಿನವರ ಪ್ರೀತಿ ಸಂಪಾದಿಸಿಕೊಂಡಿರಬೇಕು. ಇಂಥಾ ಗುಣಗಳಿದ್ದ ಮನುಷ್ಯ ನನ್ನೇ ಕೆಲಸಕ್ಕ ಇಟ್ಟುಕೊಳ್ಳಬೇಕಾಗೇದ ನನಗ ! "

" ಇವೆಲ್ಲಾ ಗುಣಾನೂ ನನ್ನಲ್ಲಿ ಅವ ರಾಯರೇ ! ಈ ಗುಣಗಳು ಅವೆಯೆಂತಲೇ ಆರು ತಿಂಗಳು ನನಗ ಮಾಫೀ ಸಿಕ್ಕಿತು. ನಿನ್ನಿಲ್ಲ ಮೊನ್ನೆ ತಾನೇ ಬಿಡುಗಡೆ ಹೊಂದಿ ಬಂದೀನಿ ರಾವಸಾಬ್ ! "

(೩೩ ನೆಯ ಪುಟದಿಂದ ಮುಂದೆಸಾಗಿದ್ದು)

ಅಲ್ಲಿಗೆ ' ಸಿಕ್ಕಿದರೆ ಆಚಾರ್ಯರು ಇಲ್ಲವೆ ಬದುಕು ಬೇಡ ' ಎಂಬ ನಿರ್ಣಯಕ್ಕೆ ಸುಶೀಲೆ ಬಂದುಬಿಟ್ಟಿದ್ದಳು.

ಸುಶೀಲೆ ಸುಯ್ಯನೆ ಮುಂದೆಬಂದು ಆಚಾರ್ಯರ ಕೈಹಿಡಿದು ಹೇಳಿದಳು, " ನೋಡಿಲ್ಲಿ ; ನಾನು ಸ್ವತಂತ್ರವಾಗಿರಬೇಕೆಂದು ತಿಂಗಳಿಗೆ ಏನಾದರೂ ಕೊಡಿಯೆಂದೆ. ನನ್ನ ತಾಯಿಯ ರೂಪಾಯಿಗಳಿವೆ. ಅದರ ಮೇಲೆ ಜೀವಿಸಬಹುದು. ಹಾಗೆ ಮಾಡಿದರೆ ಅವಳ ಇಷ್ಟದಂತೆ ನಡೆಯಬೇಕು. ಅದಕ್ಕೆ ಹಣದ ಮಾತು ಬಂದಿತು. ಅದರಿಂದಲೇ ನಿಮಗೆ ಬೇಸರ ಬಂದಿತು ! " ಕೊನೆಯ ಮಾತನ್ನು ಹೇಳಿ ಆಚಾರ್ಯರ ಕೈಬಿಟ್ಟು ಫಕ್ಕನೆ ಮೋರೆ ಮುಚ್ಚಿಕೊಂಡು ಸುಶೀಲೆ ಅಳತೊಡಗಿದಳು.

ಆಚಾರ್ಯರಿಗೆ ಏನೂ ತೋಚುತ್ತಿರಲಿಲ್ಲ. ಹೊರಗೆ ನಡೆದುಬಿಡಬೇಕು ಎಂದು ಬಹಳ ಎನಿಸಿದರೂ ಅವರಿಂದ ಚಲಿಸಲಾಗುತ್ತಿರಲಿಲ್ಲ.

" ಅದರಿಂದಲೇ ನಿಮಗೆ ಬೇಸರಬಂದಿತು ! " ವಿಕೃತ ಸ್ವರದಲ್ಲಿ ಎನ್ನುತ್ತ ಸುಶೀಲೆ ಅಳುತ್ತಿದ್ದಳು.

ಆಚಾರ್ಯರಿಗೆ ನಿಂತಲ್ಲಿ ಸಾವಿರಾರು ಚೇಳುಗಳು ಕಡಿದಂತೆ ಒಳಹೊರಗೂ ವೇದನೆಯಾಯಿತು. ಅವರು ಜೀವಗಳ್ಳರಂತೆ ಅಂಗಳವಿಳಿದು, ತಡವುತ್ತ ಎಡವುತ್ತ ಸರ್ರನೆ ದಾರಿಗೆ ಬಂದರು.

ಸುಶೀಲೆ ಮೋರೆಬಂದು ನೋಡಿದರೆ ಕತ್ತಲಿನ ರಾತ್ರಿ ತಾನೇ ತಾನಾಗಿ ಎಲ್ಲೆಲ್ಲಿಯೂ ಹರಡಿಕೊಂಡಿತ್ತು.



ಅಬ್ಬರ ಅಡಗಿತು

ಜಿನಾಸಾಹೇಬರ ಗದ್ದರಿಕೆಗೆ ಕೊನೆಗೊಮ್ಮೆ ಮುಗದಾಣಿ ಬಿದ್ದಂತಾಯಿತು. 'ಹಿಂದುಸ್ಥಾನದ ರಾಜಕೀಯ ತೊಡಕನ್ನು ಬಿಡಿಸುವುದಕ್ಕಾಗಿ ಗಾಂಧಿಯವರು ವೈಸರಾಯರಿಗೇಕೆ ಪತ್ರ ಬರೆಯಬೇಕು? ನಮ್ಮಿಬ್ಬರಲ್ಲಿ ಒಪ್ಪಂದವಾದರೆ ಯಾವ ರಾಯರು ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಬರುವರು? ಗಾಂಧಿಯವರು ನನಗೆ ಪತ್ರ ಬರೆಯಲಿ. ಅದನ್ನು ಯಾರು ನನಗೆ ಮುಟ್ಟಿಸುವುದಿಲ್ಲವೊ ನೋಡೋಣ!' ಎಂದು ಜಿನಾಸಾಹೇಬರು, ಇದಿರು ಹಿಂಡುಗಟ್ಟಿ ಕುಳಿತ ಜಾತೀಯ ಜಟ್ಟಿಗಳನ್ನು ಹುರಿದುಂಬಿಸುವಂತೆ ಮಾತನಾಡಿದರು. ಆದರೆ ಮಹಾತ್ಮರು, ತಮ್ಮಂತೆ ಎಲ್ಲರೂ ಮನಸಿನಲ್ಲಿದ್ದುದನ್ನೆ (ಮತ್ತು ಮಾಡಬೇಕಾದುದನ್ನೆ) ಮಾತನಾಡುವರೆಂಬ ವಿಚಾರದಿಂದ ಜಿನಾಸಾಹೇಬರಿಗೆ ಪತ್ರವನ್ನು ಬರೆದೇ ಬಿಟ್ಟರು! ಮತ್ತು ನಮ್ಮ ಸರ್ವತಂತ್ರಸ್ವತಂತ್ರ ಸರಕಾರವು ಆ ಕಾಗದ ತಮ್ಮ ಕಡೆಗಿದೆ ಎಂದೂ, ಅದನ್ನು ಜಿನಾಸಾಹೇಬರಿಗೆ ಮುಟ್ಟಿಸುವುದಿಲ್ಲ ಎಂದೂ ಪ್ರಕಟಿಸಿದರು! ಕಂಡವರ ಮೇಲೆ ಹರಿಹಾಯುವ ಜಿನಾಸಾಹೇಬರು ಸರಕಾರವನ್ನು ಪ್ರತಿಭಟಿಸಬಹುದೇ—ಎಂದು ಎಲ್ಲರೂ ನಿರೀಕ್ಷಿಸುವಾಗ, ಸಾಹೇಬರು ತಮ್ಮ ಮೈಮೇಲಿನ ಹುಲಿದೊಗಲನ್ನು ಹಾರಿಸಿ ತಾವು ನಿಜವಾಗಿ ನರಿ ಎಂಬುದನ್ನು ತೋರಿಸಿಕೊಟ್ಟರು. ಸರಕಾರದ ಪ್ರಕಟನೆಗೆ ಜಿನಾ ಅವರು ಕೊಟ್ಟ ಉತ್ತರವನ್ನು ಓದಿದರೆ ಇವರು— ಹಿಂದುಸ್ಥಾನಕ್ಕಂತೂ ಹೋಗಲಿ— ಒಂದು ಪಕ್ಷಕ್ಕೆ ಕೂಡ ಮುಂದಾಳಾಗುವ ಯೋಗ್ಯತೆಯುವರಲ್ಲ ಎಂಬುದು ಸ್ಪಷ್ಟವಾಗುವುದು.

ಮುದಿಹುಚ್ಚಿನ ಮದೋನ್ಮತ್ತತೆ

ಜಿನಾಸಾಹೇಬರ ಉತ್ತರದಲ್ಲಿ ಮುದಿಹುಚ್ಚಿನ ಚಿಹ್ನಗಳೂ ಸ್ಪಷ್ಟವಾಗಿವೆ. ತಾವು ಏನು ಹೇಳಿದ್ದರೆಂಬುದರ ಅರಿವು ಕೂಡ ತಮಗಿಲ್ಲ! ಕೇವಲ ತಮ್ಮನ್ನು ಭೆಟ್ಟಿಯಾಗುವುದರ ಬಗ್ಗೆ ತಾವು ಗಾಂಧಿಯವರಿಂದ ಕಾಗದವನ್ನು ಅಪೇಕ್ಷಿಸಿದ್ದಲ್ಲವಂತೆ! ಆದರೆ ಗಾಂಧಿಯವರು ಇವರನ್ನು ಭೆಟ್ಟಿಯಾಗಬಯಸಿದ್ದು ಯಾಕೆ? ಯರವಡದ ಅರಮನೆಯಿಂದ ಮುಂಬಯಿ ಮಲಬಾರಗುಡ್ಡದ ಅರಮನೆಯನ್ನು ಬಯಸಿಯೆ? ಇಲ್ಲವೆ— ಮಳೆಬೆಳೆಗಳ ಬಗ್ಗೆ ಹರಟೆಗಾಗಿಯೆ? ಇಲ್ಲವೆ ರಾಜಕೀಯ ತೊಡಕನ್ನೆ ಬಿಡಿಸುವ ಚರ್ಚೆಗಾಗಿಯೆ? ಆದರೆ ಆ ಚರ್ಚೆ ಕೂಡ ಜಿನಾಸಾಹೇಬರಿಗೆ ಬೇಕಿಲ್ಲ. ಅವರಿಗೆ ಬೇಕಾದದ್ದು ಗಾಂಧಿಜಿಯವರ apology—ಅಪರಾಧದ ಒಪ್ಪಿಗೆ! ಇದಲ್ಲವೆ ಮುದಿಹುಚ್ಚಿನ ಸ್ಪಷ್ಟ ಲಕ್ಷಣ? ಗಾಂಧಿಜಿಯವರು ತಮ್ಮ ಅಪರಾಧವನ್ನು ಒಪ್ಪುವುದೇ ಆದರೆ ದೇಶದಲ್ಲಿ ರೂಢವಾದ ಸರಕಾರಕ್ಕೆ ಒಪ್ಪಿಕೊಳ್ಳಬೇಕೆ—ಇಲ್ಲವೆ ಸ್ವಯಂಮನ್ಯ, ಸ್ವಾರ್ಥಸಾಧಕ, ಶ್ರದ್ಧಾಹೀನ ಜಾತಿ-ದುರಭಿಮಾನಿಯ ವ್ಯಕ್ತಿಗೆ ಒಪ್ಪಬೇಕೆ? 'ಎತ್ತು ಇಷ್ಟು ದೊಡ್ಡದಿದ್ದಿತೆ?' ಎಂದು ಮೈಯುಬ್ಬಿಸಿದ ಕಪ್ಪೆಯ ಕತೆ ನೆನಪಾಗುವುದು ಜಿನಾಸಾಹೇಬರ ಸಂದರ್ಭದಲ್ಲಿ. ಜಾತಿ-ಮತ-ಪಂಥಗಳನ್ನು ಮೀರಿದ ಒಂದೇ ಒಂದು ಬಹುಮತದ ರಾಜಕೀಯ ಸಂಸ್ಥೆಯಾದ ಕಾಂಗ್ರೆಸಿನ ನಾಯಕನನ್ನು, ಅಖಂಡ ಹಿಂದುಸ್ಥಾನದ ಸ್ವಾತಂತ್ರ್ಯಸಾಹಸದ ಮೂರ್ತಿಯಾದ ಮಹಾತ್ಮನು ತನಗೆ ಕೈಮುಗಿಯಬೇಕೆಂಬ ಜಾತಿರೂಪದ ಕಪ್ಪೆಗಾಗಿ ಯಾರಿಗೆ ಕನಿಕರ ಹುಟ್ಟಲಿಕ್ಕಿಲ್ಲ? ಒಂದಾನೊಂದು ಕಾಲದಲ್ಲಿ ಬುದ್ಧಿವಂತಿಕೆಗೆ ಹೆಸರಾದ ಜಿನಾಸಾಹೇಬರು, ಈ ಮಟ್ಟಿಗಿಳಿಯುವುದಕ್ಕೆ ಮುದಿಹುಚ್ಚೇ ಮುಖ್ಯ ಕಾರಣವಾಗಿರಬಹುದು. ಈ ಹುಚ್ಚನ್ನು ಮುಚ್ಚಲು ಮೇಲೆ ಉದ್ಧಾಮತನ! ಈ ಪತ್ರವೆಂದರೆ ಬಿಡುಗಡೆಗಾಗಿ ಹೂಡಿದ ಹಂಚಿಕೆ ಎಂಬ ಹೇಸಿ ಆರೋಪವನ್ನು ಹೊರಿಸುವ ಜಿನಾಸಾಹೇಬರಿಗೆ ಸ್ವಾತಂತ್ರ್ಯ ಯಾವುದು, ಬಂಧನ ಯಾವುದು ಎಂಬುದೂ ತಿಳಿದಂತಿಲ್ಲ.

ಬುದ್ಧಿಗೆಟ್ಟ ಬಡಬಡಿಕೆ

ಇದಲ್ಲದೆ ಜಿನಾಸಾಹೇಬರ ಮಾತುಗಳು ಬುದ್ಧಿಯಿಂದ ಬಂದುವಲ್ಲ, ಬುದ್ಧಿ ಕಳೆದವನ ಬಡಬಡಿಕೆಗಳಾಗಿವೆ ಎಂದೂ ಹೇಳಬೇಕಾಗುವುದು. ಹಿಂದು-ಮುಸಲ್ಮಾನರಲ್ಲಿ ಐಕ್ಯವಾಗುವುದು ಬ್ರಿಟಿಶರಿಗೆ ಬೇಡವಾಗಿದೆ, ಎಂದಿದ್ದರಲ್ಲವೆ ಸಾಹೇಬರು? ಆದರೆ ಇಂದು ತಮಗೂ ಬೇಕಿಲ್ಲ ಎಂದು ತೋರಿಸಿಲ್ಲ?

ನಿಜವಾಗಿಯೂ ತಮಗೆ ಆ ಐಕ್ಯ ಬೇಕಾಗಿದ್ದರೆ ಜಿನಾ ಅವರು ಅದಕ್ಕಾಗಿ ಯತ್ನವನ್ನಾದರೂ ಮಾಡಬೇಕಾಗಿತ್ತು. ಆದರೆ ನಿಜವಿದ್ದ ಪರಿಸ್ಥಿತಿ ಬೇರೆಯಾಗಿದೆ. ಬ್ರಿಟಿಶರಲ್ಲಿ ಅನೇಕರಿಗೆ ಈ ಐಕ್ಯ ಬೇಕಾಗಿದೆ. ನಿಜವಾಗಿಯೆ ಬೇಕಾಗಿದೆ. ಆದರೆ ಜಿನಾಸಾಹೇಬರಿಗೆ ಮಾತ್ರ ಅದು ಎಳ್ಳಷ್ಟೂ ಬೇಕಿಲ್ಲ. ಇದರಲ್ಲಿ ಆಶ್ಚರ್ಯವೇನು? ಜಾತೀಯ ಐಕ್ಯವಾದರೆ ಜಿನಾಸಾಹೇಬರ ಮುಂದಾಳುತನದ ಪಾಡೇನು? ದೇಶಾಭಿಮಾನದ ಸಂಸ್ಕೃತಿ ಇಲ್ಲದೆ, ಜಾತೀಯ ಸಂಕುಚಿತ ಭಾವನೆಗೆ ಯೋಗ್ಯರಾದ ಅಜ್ಞರು ನಮ್ಮಲ್ಲಿರುವವರೆಗೆ ಜಿನಾ-ಸಾವರಕರರಂತಹ ಮಾದರಿಗಳಿಗೆ ಮುಂದಾಳುತನದ ಆಸೆ. ಹೀಗಿರುವಾಗ ಬ್ರಿಟಿಶರಿಗೆ ಜಾತೀಯ ಐಕ್ಯ ಬೇಡೆಂದು ಹೇಳುವುದು, ತಮಗೆ ಅದು ಬೇಕೆಂದು ಧ್ವನಿ ಹೊರಡಿಸುವುದು— ಇದು ಬುದ್ಧಿಗೆಟ್ಟ ಬಡಬಡಿಕೆಯೆ ಅಲ್ಲವೆ?

ಸರಕಾರಕ್ಕೆ ಧನ್ಯವಾದ

ಜಿನಾಸಾಹೇಬರ ಹಣೆಬರೆಹವೇನೆ ಇರಲಿ; ಈ ಸಂದರ್ಭದಲ್ಲಿ ಸರಕಾರಕ್ಕೆ ನಾವು ಧನ್ಯವಾದಗಳನ್ನರ್ಪಿಸದೆ ಇರೆವು. ಯಾಕೆಂದರೆ ತನ್ನ ಧೋರಣದಿಂದ ಇಂದು ಸರಕಾರವು ಜಿನಾರವರಂತಹ ಜಾತ್ಯಂಧರ ಡಂಭಾಚಾರವನ್ನು ಬಯಲಿಗೆಳೆಯಿತು; ಅದೇ ರೀತಿ, ಇವರ ಮುಂದಾಳುತನಕ್ಕೂ ಧಕ್ಕೆ ಕೊಟ್ಟಿತು. ಜಾತೀಯತೆಯ ತಳಹದಿಯ ಮೇಲೆ ತಮ್ಮ ಸಾರ್ವಜನಿಕ ಜೀವನವನ್ನು ನಡೆಸುವವರು ಆ ತಳಹದಿಯನ್ನು ಭದ್ರವಾಗಿಟ್ಟುಕೊಳ್ಳುವುದಕ್ಕಾಗಿ ಬೇಕಾದ್ದನ್ನು (ದೇಶಕ್ಕೆ ಹಿತವಲ್ಲದನ್ನುಕೂಡ) ಮಾಡಲು ಸಿದ್ಧರಿರುವರೆಂಬುದನ್ನು ಸರಕಾರವು ತನ್ನ ಧೋರಣದಿಂದ ಜಿನಾಸಾಹೇಬರ ಜೀವನದಲ್ಲಿ ತೋರಿಸಿಕೊಟ್ಟಿತು. ಇನ್ನು ಮುಂದಾಳುತನದ ದೃಷ್ಟಿಯಿಂದ ನೋಡಬೇಕೆ? ಯಾವನು ಆಡಿದಂತೆ ಮಾಡುವುದಿಲ್ಲವೊ ಅವನಿಗೆ ತತ್ತ್ವವೆ ಇಲ್ಲ; ಅದಕ್ಕಾಗಿ ಅವನು ಮುಂದಾಳಾಗಲಾರ. ಯಾವನಿಗೆ ಅನಿಸಿದ್ದನ್ನು ನಡೆಸಿಕೊಳ್ಳುವ ಧೈರ್ಯವಿಲ್ಲವೊ ಅವನೂ ಮುಂದಾಳಾಗಲಾರ. ತನ್ನ ದೊಡ್ಡಿಸ್ತನವನ್ನಷ್ಟೆ ಕಾಯ್ದುಕೊಳ್ಳುವವನನು ಪ್ರಸಂಗಬಂದಾಗ ತನ್ನ ಅನುಯಾಯಿಗಳನ್ನು ಕೂಡ ಮರೆಯಬಹುದಾಗಿದೆ. ಹೀಗಿರುವಾಗ ಇಂತಹ 'ಮುಂದಾಳಿ' ನಲ್ಲಿ ವಿಶ್ವಾಸವನ್ನಿಟ್ಟು ಬಾಳುವುದು ಹೇಗೆ? ನಿಜವಿದ್ದ ಮಾತೆಂದರೆ, ಇಂದಿನ ನಮ್ಮ ಸಾರ್ವಜನಿಕ ಜೀವನದಲ್ಲಿ ಜಾತೀಯತೆಗೆ ಸ್ಥಾನವೆ ಇಲ್ಲ. ಕೇವಲ ಮುಂದಾಳಾಗಬೇಕೆಂಬುವವರ ಕೃತ್ರಿಮದಿಂದ ಬಾಳುವ ಸಂಸ್ಥೆಗಳವು. ಅದಕಾಗಿ ರಾಷ್ಟ್ರೀಯ ಭಾವನೆಯ ಮೇಲೆ ನಿಂತ ಸಂಸ್ಥೆಗಳಲ್ಲಿಯಂತೆ ಈ ಜಾತೀಯ ಸಂಸ್ಥೆಗಳಲ್ಲಿ ಜೀವನದ ಆಹುತಿಯನ್ನು ಕೊಡ ಮಾಡಬಲ್ಲ ತತ್ತ್ವಾಭಿಮಾನವಿರುವುದಿಲ್ಲ. ಈ ಮಾತನ್ನು ಅನೇಕ ರೀತಿಯಾಗಿ ಮೇಲಿಂದ ಮೇಲೆ ಈ ನಮ್ಮ ನೋಟಗಳಲ್ಲಿ ನಾವು ಹೇಳಿದ್ದೇವೆ. ಜಾತೀಯ ಸಂಸ್ಥೆಗಳಿಗೆ ರಾಜಕೀಯ ಜೀವನದಲ್ಲಿ ಮಹತ್ತ್ವವನ್ನೆ ಕೊಡಬಾರದೆಂದೂ ಈ ಕಾರಣಗಳಿಗಾಗಿಯೆ ಎಂದಿನಿಂದ ನಾವು ಹೇಳುತ್ತಲಿದ್ದೇವೆ.

ಅಧಿಕಾರದ ದುರುಪಯೋಗ

ಇತ್ತಿತ್ತಲಾಗಿ ದೇಶದ ಅನೇಕ ಪ್ರಾಂತಗಳಲ್ಲಿ ಪ್ರಾಂತಿಕ ಮಂತ್ರಿಮಂಡಳಗಳನ್ನು ಸ್ಥಾಪಿಸುವ ಯತ್ನ ನಡೆದಿವೆ. ಈ ಪ್ರಾಂತಗಳಲ್ಲಿ ಪ್ರಾಂತಿಕ ಸ್ವಾಯತ್ತತೆ ತಡೆದಿದ್ದು, ಪ್ರಾಂತದ ಗವರ್ನರರೇ ಸರ್ವಾಧಿಕಾರವನ್ನು ವಹಿಸಿ ಆಡಳಿತವನ್ನು ನಡೆಸುತ್ತಲಿದ್ದಾರೆ. ಮತ್ತು ಇದೇ ಪ್ರಾಂತಗಳಲ್ಲಿ ಮುಂಚೆ ಕಾಂಗ್ರೆಸ ಪಕ್ಷದ ಮಂತ್ರಿಮಂಡಳಗಳಿದ್ದುವು. ಈ ಎಲ್ಲ ಪ್ರಾಂತಗಳ ಶಾಸನಸಭೆಗಳಲ್ಲಿ ಕಾಂಗ್ರೆಸೇ ಬಹುಮತದ ಪಕ್ಷವಾಗಿದ್ದಿತು. ಅರ್ಥಾತ್, ಈಗ ಯಾವ ಪಕ್ಷದವರು ಮಂತ್ರಿಮಂಡಳವನ್ನು ಸ್ಥಾಪಿಸಿದರೂ— ಅದು ಪಕ್ಷಗಳ ಸಮ್ಮಿಶ್ರಮಂಡಳ (Coalition) ವಾದರು ಕೂಡ— ಅಲ್ಪಸಂಖ್ಯಾಕರ ಮಂತ್ರಿಮಂಡಳ ಎನಿಸುವುದರಲ್ಲಿ ಸಂದೇಹವಿಲ್ಲ. ಹೀಗಿರುವಾಗ ಇಂತಹ ಮಂತ್ರಿಮಂಡಳಗಳನ್ನು ಸ್ಥಾಪಿಸುವುದರ ಅವಸರವಾಗಲಿ ಆವಶ್ಯಕತೆಯಾಗಲಿ ಏನಿದೆ? ಒಂದು, ಈ ರೀತಿ ಇದ್ದಷ್ಟು— ಕೋರಿಕೆಯು— ಪ್ರಜಾಪ್ರಭುತ್ವವನ್ನೂ ಅಲ್ಲಗಳೆದಂತಾಗುವುದು. ಮತದಾರರು ಬಹುಮತದಿಂದ ಚುನಾಯಿಸಿ ಕಳುಹಿಸಿದ ಬಹುಸಂಖ್ಯಾಕ ಪಕ್ಷವನ್ನು ಬಿಟ್ಟು ಬೇರೆಯವರಿಗೆ— ಅಲ್ಪಸಂಖ್ಯಾಕರಿಗೆ ಆಡಳಿತದ ಅಧಿಕಾರವನ್ನು ಕೊಡಬಹುದೆ? ಆ ಅಧಿಕಾರದ ಮೂಲ ಎಲ್ಲಿದೆ? ನಿಜವಾದ ಪ್ರಜಾಪ್ರಭುತ್ವವಿದ್ದರೆ ಮತದಾರರೆ ಆ ಅಧಿಕಾರದ ಮೂಲಕ ಬೇಕಾದವರನ್ನು ಕರೆದು ಮಂತ್ರಿಮಂಡಳವನ್ನು ಸ್ಥಾಪಿಸಹೇಳುವ ಅಧಿಕಾರ ಗವರ್ನರರಿಗೆ ಬಾರದು. ಈ ರೀತಿ ಗವರ್ನರರು ಮುಂದಾಗಿ ಇಲ್ಲವೆ ಹಿಂದಿನಿಂದ ಸೂತ್ರವಹಿಸಿ ಮಂತ್ರಿಮಂಡಳಗಳನ್ನು ಸ್ಥಾಪಿಸುವುದೆಂದರೆ ಅಧಿಕಾರದ ದುರುಪಯೋಗವೇ ಸರಿ.

ಅಪಪ್ರಚಾರಕ್ಕೆ ಅನುಕೂಲ

ಗವರ್ನರರ ದೃಷ್ಟಿಯಿಂದ ಒಂದು ಆಕ್ಷೇಪವನ್ನೆತ್ತಬಹುದಾಗಿದೆ. ಬಹುಸಂಖ್ಯಾಕ ಪಕ್ಷದವರು ಆಡಳಿತವನ್ನು ನಡೆಸಲು ಒಪ್ಪದಿದ್ದರೆ ಮಾಡಬೇಕೇನು— ಎಂದು? ಇಂತಹ ಸಂದರ್ಭದಲ್ಲಿ ಹೊಸ ಚುನಾವಣೆಯನ್ನು ನಡೆಸುವುದು ಎಲ್ಲ ಪ್ರಜಾಪ್ರಭುತ್ವದ ಮಾದರಿಗಳಲ್ಲಿ ರೂಢಿಯಾಗಿದೆ— ಹಾಗೆಯೆ ನಮ್ಮಲ್ಲಿ ಮಾಡಬಾರದೇಕೆ? ಇಂದು ಯುದ್ಧದಂತಹ ಕಾಲ, ಚುನಾವಣೆಯ ವೆಚ್ಚ ಮತ್ತು ವೇಳೆ ಅನವಶ್ಯಕ ಮತ್ತು ಅಪವ್ಯಯ ಎಂದು ಸರಕಾರ ಹೇಳುತ್ತಿದೆ. ಹೀಗಿದ್ದರೆ ನಮ್ಮದೊಂದೇ ಪ್ರಶ್ನೆ. ಯುದ್ಧಕಾರ್ಯವು ಜನತೆಯ ಸಹಕಾರದಿಂದಲೆ ಮುಂದರಿಯಬೇಕೆಂದು ನಿಮ್ಮ ಇಚ್ಛೆಯೆ-ಇಲ್ಲವೆ, ಯಾವ ರೀತಿಯಿಂದಾದರೂ ಯುದ್ಧಕಾರ್ಯ ನಡೆದರೆ ಸಾಕು, ಎಂದೆ? ಜನರ ಸಹಕಾರ

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಅಗತ್ಯವಿದ್ದರೆ ಚುನಾವಣೆಯನ್ನು ನಡೆಸಲೇಬೇಕು, ಬೇರೆ ಗತ್ಯಂತರವಿಲ್ಲ; ಯುದ್ಧಕಾರ್ಯವಿಷ್ಟೆ ಬೇಕಿದ್ದರೆ ಗವರ್ನರರೆ ಸರ್ವಾಧಿಕಾರ ವಹಿಸಬೇಕು. ಇವೆರಡನ್ನೂ ಬಿಟ್ಟು ಅನವಶ್ಯಕವಾದ, ಅಸಂಬದ್ಧವಾದ, ಅನ್ಯಾಯವಾದ ಅಲ್ಪಸಂಖ್ಯಾಕ ಸಮ್ಮಿಶ್ರ ಮಂತ್ರಿಮಂಡಳಗಳೇಕೆ? ಸದ್ಯದ ಸಂದರ್ಭದಲ್ಲಿ ನಮಗೆ ಸರಕಾರದ ಧೋರಣಕ್ಕಾಗಿ ಒಂದೇ ಒಂದು ಕಾರಣ ಸ್ಪಷ್ಟವಾಗಿ ಕಂಡುಬರುತ್ತಿದೆ. ಅದೆಂದರೆ, ಪರದೇಶಗಳಲ್ಲಿ ಅಪಪ್ರಚಾರಕ್ಕೆ ಆಸ್ಪದವನ್ನುಂಟುಮಾಡುವುದು. ಪ್ರಾಂತಿಕ ಮಂತ್ರಿಮಂಡಳಗಳು ಅಸ್ತಿತ್ವದಲ್ಲಿದ್ದರೆ ಸಾಕು, ಜನರ ಬೆಂಬಲವಿದೆ ಎಂಬ ಕಲ್ಪನೆಯನ್ನು ಹರಡಲು ಸರಕಾರಕ್ಕೆ ಅನುಕೂಲ. ಈ ನಮ್ಮ ತರ್ಕವೆ ನಿಜವಾಗಿದ್ದರೆ ಸರಕಾರದ ಧೋರಣೆಯನ್ನು ತೀವ್ರವಾಗಿ ನಿಷೇಧಿಸುವುದೆ ಅನಿವಾರ್ಯವೆನಿಸುವುದು.

ಅಧಿಕಪ್ರಸಂಗವೊ? ಅತಿಕ್ರಮಣವೊ?

ಇನ್ನು ನಮ್ಮಪರ ದೃಷ್ಟಿಯಿಂದ ನೋಡುವುದಾದರೆ ಪರಿಸ್ಥಿತಿ ಇನ್ನಿಷ್ಟು ನಾಚಿಕೆಗೇಡಾಗಿದೆ. ಬಂಗಾಲ, ಸಿಂಧ, ಪಂಜಾಬ ಮತ್ತು (ಇತ್ತೀಚೆಗೆ) ಗಡಿನಾಡು ಪ್ರಾಂತಗಳಲ್ಲಿ ಮುಸ್ಲಿಂ ಲೀಗವು ತನ್ನ ನೇತೃತ್ವದಲ್ಲಿ ಮಂತ್ರಿಮಂಡಳಗಳನ್ನು ಸ್ಥಾಪಿಸಿತು. ಕೇವಲ ಜಾತೀಯತೆಯನ್ನೆ ಲಕ್ಷಿಸುವ ಲೀಗವು ರಾಷ್ಟ್ರೀಯ ಗೌರವದ ಕಲ್ಪನೆಯನ್ನೆ ಕಳೆದುಕೊಂಡುದರಲ್ಲಿ ಆಶ್ಚರ್ಯವಿಲ್ಲ. ಇದಲ್ಲದೆ, ಈ ಪ್ರಾಂತಗಳ ಶಾಸನ ಸಭೆಗಳಲ್ಲಿ ಲೀಗ್ ಪಕ್ಷವು ಬೇರೆ ಪಕ್ಷಗಳನ್ನು ಕೂಡಿಕೊಂಡಲ್ಲಿ ಸಮ್ಮಿಶ್ರ ಬಹುಮತವಾಗುವಂತಿದ್ದಿತು. ಆದರೆ ಒಂದು ಜಾತಿ ಮುಂದಾದೊಡನೆ ಮತ್ತೊಂದು ಜಾತಿಗೆ ಎದೆಬೇನೆ ಹುಟ್ಟಿತು. ಎನ್ನಾದರೂ ತಾವು ಬಹು ಸಂಖ್ಯಾಕರು ಎಂಬ ಧೈರ್ಯ ಇಲ್ಲವೆ ಆತ್ಮವಿಶ್ವಾಸ ಹಿಂದು ಮಹಾಸಭೆಗಿಲ್ಲ; ಅಷ್ಟೊಂದು ಹೆದರಿಕೆ ಜಾತೀಯತೆಯ ಸಂಕುಚಿತ ಮನಸ್ಸಿಗಾಗಿ. ದೇಶದಲ್ಲಿಯೆ ಅಲ್ಪಸಂಖ್ಯಾಕರಾದ ಮುಸಲ್ಮಾನರು ಮಂತ್ರಿಮಂಡಳಗಳನ್ನು ಸ್ಥಾಪಿಸುತ್ತಿರುವಾಗ, ಶಾಸನ ಸಭೆಗಳಲ್ಲಿ ಅಲ್ಪಸಂಖ್ಯಾಕರಾದ ತಾವೂ ಯಾಕೆ ಮಂತ್ರಿಮಂಡಳಗಳನ್ನು ಸ್ಥಾಪಿಸಬಾರದು— ಎಂಬ ಯುಕ್ತಿವಾದ ಮಹಾಸಭೆಯ ಮುಂದಾಳುಗಳದು! ಆದರೆ ಅಲ್ಪಸಂಖ್ಯಾಕರಿಗೆ ಆ ಅಧಿಕಾರವೆ ಬರುವುದಿಲ್ಲ ಎಂಬುದರ ಎಚ್ಚರವೆ ಇವರಿಗಿಲ್ಲ. ಜಾತೀಯತೆಯು ಪ್ರಜಾಪ್ರಭುತ್ವ ತತ್ತ್ವದಿಂದ ಅಷ್ಟೊಂದು ದೂರವಾಗಿದೆ! ಇಷ್ಟೇಕೆ? ಜಾತೀಯತೆಗಾಗಿ ಇವರು ಎಲ್ಲ ತತ್ತ್ವಗಳನ್ನು ಕಟ್ಟಿಟ್ಟಿದ್ದಾರೆ. ಲೀಗದವರೊಡನೆ ಸಮ್ಮಿಶ್ರ ಮಂತ್ರಿಮಂಡಳದಲ್ಲಿ ಸೇರಲು ಅಡ್ಡಿ ಇಲ್ಲ—ಎಂದು ಸಾವರಕರ ಮಹಾರಾಜರ ಹುಕುಂ! ಯಾಕೆ? ಜಾತೀಯ ಐಕ್ಯತೆಗಾಗಿ ಅಲ್ಲ, ರಾಷ್ಟ್ರೀಯ ದೃಷ್ಟಿಯಿಂದಲ್ಲ, ಯುದ್ಧಕಾರ್ಯದಲ್ಲಿ ಸಹಕಾರದ ವಿಷಯವಾಗಿಯಾದರೂ ಒಮ್ಮತವಿದೆಯೆಂದಲ್ಲ. ಹಾಗಾದರೆ ಯಾಕೆ? ಕೇವಲ ಅನ್ಯರಿಗಾಗಿ ಹೆದರಿಕೆ, ಅಧಿಕಾರಕ್ಕಾಗಿ ಆಸೆ—ಇಷ್ಟೇ ಕಾರಣವೆಂದು ಹೇಳಿದರೆ ತಪ್ಪೇನು? ಮನೆಯಲ್ಲಿ ಯಜಮಾನನೆ ಮನೆಯವರನ್ನು ಕೂಡಿಕೊಂಡು ಇಲ್ಲದಿರುವಾಗ ಹುಳುಹುಪ್ಪಡಿಗಳಾಗಲಿ ಸ್ವೈರ ಪಶುಗಳಾಗಲಿ ಆ ಮನೆಯನ್ನು ಆಶ್ರಯಿಸಿದರೆ ಆಶ್ಚರ್ಯವೇನು? ಅತಿಕ್ರಮಣ (Trespass) ದ ಕಾನೂನು ಪಶುಪಕ್ಷಿಗಳ ರಾಜ್ಯದಲ್ಲಿಲ್ಲ. ಆದರೆ ತಮ್ಮ ಇಂತಹ ವೃತ್ತಿಯನ್ನು ಸಮರ್ಥಿಸಿಕೊಳ್ಳುವುದು ಮಾತ್ರ ಅಧಿಕಪ್ರಸಂಗವೆನಿಸದಿರದು.

ಫೀಲ್ಡ್ ಮಾರ್ಶಲ್ ವೈಸರಾಯರು!

ಬಲ್ಲವರ ಮತ್ತು ರಾಜಕೀಯ ಬರೆಹಗಾರರ ತರ್ಕವಿತರ್ಕಗಳಿಗೆ ಕೊನೆಗೊಮ್ಮೆ ತಡೆಹಾಕಿ ಹಿಂದುಸ್ತಾನದ ಹೊಸ ವೈಸರಾಯರ ಹೆಸರು ಬಯಲಿಗೆ ಬಂದಿತು. ಸರ್ ಆರ್ಚಿಬಲ್ಡ್ ವೇವೆಲ್— ಹಿಂದುಸ್ತಾನದ ಸೈನ್ಯಾಧಿಪತಿ— ಇವರು ಲಾರ್ಡ ಲಿನ್‌ಲಿಥಗೋ ಅವರ ತರುವಾಯದ ವೈಸರಾಯರೆಂಬುದನ್ನು ತಿಳಿದ ಮೇಲೆ ಅನೇಕರು ಆಶ್ಚರ್ಯಪಟ್ಟರು, ಅನೇಕರು ನಿರಾಸೆಗೊಂಡರು, ಅನೇಕರು ಇನ್ನು ಭವಿತವ್ಯದ ತರ್ಕವಿತರ್ಕದಲ್ಲಿಯೆ ತೊಡಗಿಹರು. ಆದರೆ ಇದೆಲ್ಲವೂ ಅನವಶ್ಯವೆಂದೇ ಹೇಳಬೇಕಾಗುವುದು. ವೇವೆಲ್‌ರ ಹೊರತಾಗಿ ಬೇರೆ ಯಾರೂ ಹೊಣೆಯನ್ನು ಹೊರಲು ಸಿದ್ಧರಿರಲಿಲ್ಲ—ಎಂದು ಅನೇಕರು ತರ್ಕವನ್ನೆತ್ತಿದ್ದಾರೆ. ಆದರೆ ಆ ಮಾತು ಅಷ್ಟು ಸಮಂಜಸವೆನಿಸುವುದಿಲ್ಲ. ಸದ್ಯಕ್ಕೆ ಹಿಂದುಸ್ತಾನಕ್ಕೆ— ಬ್ರಿಟಿಶರ ದೃಷ್ಟಿಯಿಂದಲೇ— ಅಗತ್ಯವಾದವರು ಸರ್ ಆರ್ಚಿಬಲ್ಡ್ ವೇವೆಲ್‌ರಂತಹರೆ—ಯಾಕೆಂದರೆ— ಹಿಂದುಸ್ತಾನದ ರಾಜಕಾರಣವು ಮಿತ್ರರಾಷ್ಟ್ರಗಳ ಪೂರ್ವರಂಗದ ಯುದ್ಧಪರಿಸ್ಥಿತಿಗೆ ನಿಕಟವಾಗಿ ಸಂಬಂಧಿಸಿದೆ. ಯುದ್ಧಪರಿಸ್ಥಿತಿಯೆ ಮುಖ್ಯವಾಗಿ ಹಿಂದುಸ್ತಾನದ ರಾಜಕೀಯ ಭವಿತವ್ಯವನ್ನು ನಿರ್ಣಯಿಸುವುದಾಗಿದೆ. ಅದಕಾಗಿ ರಾಜಕಾರಣದ ತಾತ್ತ್ವಿಕ ಹೆಮ್ಮೆಯನ್ನು ಮರೆತು, ಬಿಟ್ಟುಕೊಟ್ಟು ವ್ಯವಹರಿಸುವ ವ್ಯಕ್ತಿ ಬ್ರಿಟಿಶರಿಗೆ—ಹೆಚ್ಚಾಗಿ ಅಮೆರಿಕೆಗೆ—ಬೇಕಾಗಿದೆ. ಇದಿಲ್ಲವಾದರೆ ಮುಖ್ಯವಾದ ಯುದ್ಧಕಾರ್ಯದಲ್ಲಿ ಹೆಚ್ಚಾಗಿ ಉಪಯುಕ್ತವೆನಿಸಬಹುದಾದ ಒಬ್ಬ ಸೈನ್ಯಾಧಿಕಾರಿಯನ್ನು ರಾಜಕಾರಣದಲ್ಲಿ ಸೇರಿಸುವ ಬುದ್ಧಿ-ಅಪನ್ಯಯವನ್ನು ಬ್ರಿಟಿಶರು— ಚರ್ಚಿಲ್ ಸಾಹೇಬರು— ಮಾಡುತ್ತಿರಲಿಲ್ಲ.

ಭಾರತನಾಡಕ್ಕೆ ಗೆಲವು ! ★ ಸಿರಿಗನ್ನಡಂಗೆಲ್ಗೆ !

ಕುಮಾರಿ ವತ್ಸಲಾ ಮತ್ತು ಕುಮಾರ ಗುರುರಾಜ ಅರ್ಚಕರಿಗೆ ಅಭಿನಂದನೆಗಳು !

ಇದೇ ಸಲ ನಡೆದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತುಂಬಾ ಯಶಸ್ಸನ್ನು ದೊರಕಿಸಿದುದಕ್ಕಾಗಿ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ನೀವು ದೊರಕಿಸಿದ ನಮ್ಮ 'ಹಿಂದ' ಸಾಯಕಲ್ಲುಗಳು ನಿಮ್ಮ ಮುಂದಿನ ಕಾಲೇಜು-ಜೀವನದಲ್ಲಿಯೂ ತುಂಬಾ ಯಶಸ್ಸನೀಯುತೆಂದು ಆಶಿಸುತ್ತೇವೆ.



ಕುಮಾರಿ ವತ್ಸಲಾ ತಿರುಮಲರಾವ ಪಾಟೀಲರವರು ಹೆಚ್ಚು ಗುಣಗಳನ್ನು ಪಡೆದು ಹೆಣ್ಣು ಮಕ್ಕಳಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿದುದಕ್ಕಾಗಿ, ಈ ಡಿ. ಲಕ್ಸ್ ಹಿಂದ ಸಾಯಕಲ್ಲು (ಉಕ್ಕಿನ ಮೇಲ್ಹೊದಿಕೆ, ಸಂಪೂರ್ಣ ಹೊಸ ಮಾದರಿ, ಒಳ್ಳೇ ನಯವಾದ ಬಾಗಿದ ಬಾರುಳ್ಳ ಮಹಿಲೆಯರಿಗಾಗಿಯೆ ತಯಾರಿಸಿದ) 'ಸ್ಟ್ಯಾಂಡರ್ಡ' ಹಿಂದಸಾಯಕಲ್ಲು ಬಹುಮಾನವಾಗಿ ಕೊಡಲಾಗಿದೆ.

ಕುಮಾರ ಗುರುರಾಜ ಗೋಪಾಲಾಚಾರ್ಯ ಅರ್ಚಕರವರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ೫೫೫ ಗುಣಗಳನ್ನು ಪಡೆದು ೧ನೆ ನಂ. ಬಂದುದಕ್ಕಾಗಿ 'ಸ್ಟ್ಯಾಂಡರ್ಡ' ಹಿಂದ್ ಸಾಯಕಲ್ಲು (ಹೊಸಮಾದರಿಯ ಡಿಜಾಯಿನ್‌ವುಳ್ಳ ಒಳ್ಳೆಯ ಠೀವಿಯ ಬಹು ಕಾಲ ಬಾಳಿಕೆ ಬರುವ ಒಳ್ಳೆಯದೆಂದು ಖಾತ್ರಿಕೊಡಬಹುದಾದ) 'ಸ್ಟ್ಯಾಂಡರ್ಡ' ಸಾಯಕಲ್ಲನ್ನು ಬಹುಮಾನವಾಗಿ ಕೊಡಲಾಗಿದೆ.

ಹಿಂದ್ ಸಾಯಕಲ್ಸ್ ಲಿಮಿಟೆಡ್ ೨೫೦ ವಾರ್ಲಿ, ಮುಂಬಯಿ

HIND CYCLES Ltd.

Managing Agents: BIRLA BROS. Ltd.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರನ್ಸ್ ಕಂಪನಿ, ಲಿಮಿಟೆಡ್

The United Karnatak Insurance Co. Ltd., DHARWAR.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಸಂಪಾದಕರು-
ಬೆಟಗೇರಿ ಕೃಷ್ಣಶರ್ಮರು

ಜಯಂತಿ

ಆಗಸ್ಟ್ ೧೯೪೩

★

ಈ ಸಂಚಿಕೆಯಲ್ಲಿ

★ ಬಿ. ಎಸ್. ಎ. ರಾವ್
★ ಸುಬ್ಬರಾಯಶರ್ಮ
★ ಖಾನೋಳಕರ
★ ಕಾಯ್ಕಿಣಿ
★ ಶ್ರೀಧರ

ಅಲ್ಲದೆ ಬೇರೆ ಲೇಖಕರ

ಕವನ-ಕಥೆ-ಪ್ರಬಂಧಗಳು.

★

ಬೆಲೆ- ೬ ಆಣೆ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ .... ವ್ಹಿ. ಪಿ. ಯಿಂದ ೪-೫-೦ .... ಬಿಡಿಸಂಚಿಕೆಗೆ ೬ ಆಣೆ.

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೬ನೆಯ ವರ್ಷ	ಆಗಸ್ಟ ೧೯೪೩	೩ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಮಂಥನ (ಕವನ)	....	'ಮನು' ಕೂಡಲಗಿ	೮೧
ಸಂಪಾದಕೀಯ (ತರುಣರ ಕರ್ನಾಟಕ)	....	ಸಂಪಾದಕರು	೮೨
ಮಂಗನ ಮಲ್ಲಿನಾಥತನ	....	'ಮಲ್ಲಿನಾಥ'	೮೩
ಮಹಾತ್ಮಾ ಬಸವಣ್ಣನವರ ಸ್ವರೂಪ (ಉತ್ತರಪಕ್ಷ)	....	ಶ್ರೀ. ಬಿ. ಎಸ್. ಎ. ರಾವ್ ಬಿ. ಎಸ್‌ಸಿ. ಪುಣೆ	೮೫
ಮುತ್ತು (ಕಿರುಗತೆ)	....	ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ	೮೭
ತಪಸ್ಸಾಧನೆ (ಸಣ್ಣಕತೆ)	....	ಶ್ರೀ. ಸುಬ್ಬರಾಯಶರ್ಮ, ತಲವಾಟ	೮೯
ಕಲಿಯ ಕೊನೆಯ ದಿನಗಳು (ವ್ಯಕ್ತಿಪರಿಚಯ)	....	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೯೩
ಪ್ರಕೃತಿಯ ಪ್ರತಿಕೃತಿ (ಕವನ)	....	ಶ್ರೀ. ಎಂ. ಜಿ. ಕುಲಕರ್ಣಿ, ಮುಂಬಯಿ	೧೦೦
ನಾನು–ಅವಳು (ಕವನ)	....	ಶ್ರೀಕೃಷ್ಣ 'ಶಾರದಾಮಂಡಲ' ವಿಜಾಪುರ	೧೦೦
ವಿಜ್ಞಾನ ವಾಕ್ಯವಿತಾನ (ಸಾಹಿತ್ಯವಿಚಾರ)	....	ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಪುಣೆ	೧೦೧
ಇದೂ ಒಂದು ಕನಸೇಕಾಗಬಾರದು ? (ಚಿಕ್ಕಕತೆ)	....	ಶ್ರೀ. 'ಅನಿರುದ್ಧ' ಬಿ. ಎ. (ಆನರ್ಸ್) ಬ್ಯಾಡಿಗಿ	೧೦೩
ಅಜ್ಞಾನ (ಲಘುಪ್ರಬಂಧ)	....	ಶ್ರೀ. ಖಾನೋಳಕರ ಶ್ರೀಧರರಾಯರು, ಪುಣೆ	೧೦೭
ಸಹೋದರರು (ಅನುವಾದಿತ ಕತೆ)	....	ಶ್ರೀ. ಹೆಗಡೆ ಬಂಧುಗಳು, ಕುಮಟಾ	೧೦೮
ಮನೆಯ ಚಿಕ್ಕ ತೋಟ (ಜೀವನಸ್ವಾಸ್ಥ್ಯ)	....	ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ	೧೧೨
ಸಂಶೋಧಕನ ಸಂತಾಪ (ಲೇಖನೀರು ೨)	....	'ಶ್ರೀರಂಗ'	೧೧೪
ಸಾದರಸ್ವೀಕಾರ	....	....	೧೧೭
ನಗೀಗೆ ನೇವೀಪ್ಯ	....	'ನಕಲೀ ನಾರಾಯಣಾಚಾರ್ರು	೧೧೭
ನಾಲ್ಕೂ ನಿಟ್ಟಿನ ನೋಟ	....	'ನಿರೀಕ್ಷಕರು'	೧೧೮

ಜಯಂತಿಯ ಮುಂಬೈ ಶಾಖಾ ಕಚೇರಿ

ಇಲ್ಲಿ 'ಜಯಂತಿ' ಸಂಚಿಕೆಗಳು ಸಿಕ್ಕುವುವಲ್ಲದೆ, ಶ್ರೀಮಾನ್ '**ಆನಂದಕಂದ**' ರ ಮತ್ತು ಪ್ರೊ. **ಜಾಗೀರದಾರರ** ಎಲ್ಲ ಪುಸ್ತಕಗಳೂ ಮಾರಾಟಕ್ಕೆ ಸಿಕ್ಕುವುವು. ಮುಂಬಯಿ ಕನ್ನಡಿಗರ ಅನುಕೂಲತೆಗಾಗಿಯೆ ಈ ಏರ್ಪಾಡನ್ನು ಮಾಡಲಾಗಿದೆ.

ಮೊಗವೀರ ಯುವಕ ಸಂಘದ ಕಾರ್ಯಾಲಯ,
೮೭ ಚರ್ಚಗೇಟ್ ಸ್ಟ್ರೀಟ್, ೨ನೆಯ ಮಾಳಿಗೆ
ಫೋರ್ಟ—ಮುಂಬಯಿ.

ಜಯಂತಿ

ಸಂಪುಟ ೬ | ೧ನೆಯ ಆಗಸ್ಟ್ ೧೯೪೩ | ಸಂಚಿಕೆ ೩

ಮಂಥನ

'ಮನು' ಕೂಡಲಗಿ

ಪ್ರಗತಿತುರಗವನೇರಿ ವ್ಯೋಮಾಂತರವ ಮೀರಿ,
ಜಗದ ಬಾಳಿಗೆ ದಿವ್ಯಪ್ರಭೆಯ ಬೀರಿ,
ಪ್ರಕೃತಿಮಾತೆಯ ಸ್ವರ್ಣಭಂಡಾರವನು ತೂರಿ
ಸಕಲ ಸುಖ-ಸೌಭಾಗ್ಯ ಸೃಷ್ಟಿಯನು ಸೇರಿ—

ಬಗೆಬಾಂದಳದಿ ಮಾನವೋತ್ತಮರು ಮುನ್ನೆಗೆದು
ಅಮರಾವತಿಯ ಸೇರಲೆಳಸಿ ಹಾರಿದರು;
ದೇವತನದಾಶೆಯಲಿ ಪೂರ್ಣತೆಯ ದಾಹದಲಿ
ನೆಟ್ಟನೋಟದಲಿ ಮಾನವನು ತೋರಿದರು.

ಭಾವೋತ್ತಮರ ದಿಟ್ಟ ಬಗೆನಾಡಿನಲಿ ತಗ್ಗಿ,
ಖೂಳದಾನವರ ಬಲವೇರಿ ಮೆರೆದಿಹುದು;
ಸ್ವೇಚ್ಛಾವಿಹಾರದಲಿ, ನಿರ್ಭಯಾಹಾರದಲಿ
ಬೆಳೆಬೆಳೆದು ದೌರ್ಜನ್ಯ ನಾಡ ಕೊರೆದಿಹುದು!

ಒಂದೆಡೆಯೊಳಮರತ್ವ, ಒಂದೆಡೆಯೊಳಸುರತನ
ಎರಡು ಧ್ರುವವಾಗಿ ಹಿಮಗಿರಿಯಂತೆ ಬಳೆದು-
ಯಾವಶಕ್ತಿಯು ಬಲಿದು, ವಿಶ್ವಯಂತ್ರವ ಗೆಲಿದು
ಅರಸಪ್ಪುದೆಂಬ ಸಂದೇಹ ಮಸಗಿದುದು!

ವಿಷಪರೀಕ್ಷೆಯೊಳುಳಿದು, ಕಡೆಹ ಬಾಳನು ಗೆಲಿದು,
ದೌರ್ಜನ್ಯ ಪರ್ವತವ ನಿರ್ಮೂಲ ತೊಡೆದು,
'ದೇವತ್ವ ಮೆರೆದಪ್ಪುದೊ? ಖೂಳತನ ಗೆಲಿದಪ್ಪುದೊ?'
ಕನಸಿನೊಳಗುಸಿರೊಂದು ಮಿಡುಕುತಿದೆ ಸಿಡಿದು!

ವಿಶ್ವಾತ್ಮನಿದ ಕಂಡು ಸುರಭಾವವನು ಒಲಿಸಿ
ದಾನವತ್ವವ ಮಹಾರ್ಣವದೆಡೆಗೆ ನಡೆಸಿ,
ದೇವ-ದಾನವರೊಳಗೆ ಸೌಹಾರ್ದವನು ನಿಲಿಸಿ
ಅಮೃತಮಂಥನಕಾಗಿ ಅಣಿಗೈದನು!

ಹಿರಿಯತನದಾಕಾಂಕ್ಷೆ, ಅಧಿಕಾರಲಾಲಸೆಯು,
ದುರುಳತನದಪರಿಮಿತ ಉನ್ಮಾದ ಸೂಸಿ,
ಸಂಸಾರಸಾಗರದಿ ಸುರನಿಕರದೊಡಗೂಡಿ
ದಾನವರು ಮಂಥನವ ನಡೆಸಿಹರು ಬಯಸಿ.

ಕೋಲಾಹಲವು ಮೀರಿ, ಮುನ್ನೀರಿನೊಡಲೇರಿ
ತಲ್ಲಣಿಸುತಿರೆ ಜಗತ್ಸರ್ವ ಭಯಕಾರಿ,
ಮಂಥನದ ಮೊದಲಿಗೆನೆ ವಿಷವಿಶೇಷಣ ತೋರಿ
ದೈತ್ಯದೇವಾದಿಯಲಿ ಅಂಜಿಕೆಯ ಬೀರಿ—

ಜಗವು ಕಂಗೆಟ್ಟಿಹುದು; ವಿಷವು ಸುಡುಸುಡುತಿಹುದು;
'ಪ್ರಳಯಾಂತಿಕವೊ ಇಂದು' ಎಂಬ ಸಂದೇಹ!
ವಿಷದ ಕೆನ್ನಾಲಗೆಯ ತೊಡೆದು ರಕ್ಷಣೆ ಗೈಯೆ
ಬಹನೊ ಬಾರದೆ ಇಹನೊ ದೇವಾಧಿದೇವ?

ಅಮೃತವೆಂದುದಯಿಪ್ಪುದೊ? ಅಸುರರೆಂದಳಿದಪರೊ?
ಜಗಮಹಾಸಾಗರದಿ ಶಾಂತಿಮೂಡಿ
ಶಾಂತಿಕಿರಣಗಳಿಂದ ಜೀವನವ ಬೆಳಗಿಪ್ಪುದೊ?
ಮಾನವ್ಯ ಸಂಸ್ಕೃತಿಯು ದಿವ್ಯವಹುದೊ?

ತರುಣರ ಕರ್ನಾಟಕ

ಕಳೆದ ತಿಂಗಳಲ್ಲಿ ಬರೆದ 'ಕರ್ನಾಟಕದ ಸಂಕಟ ಸಹಸ್ರ' ಎಂಬ ಸಂಪಾದಕೀಯ ವಿಚಾರವನ್ನೋದಿ, ಜಯಂತಿಯ ಹಲವು ವಾಚಕರಿಂದ ಹಲವು ಬಗೆಯ ಕಾಗದಗಳು ಬಂದಿರುವುವು. ಎಲ್ಲರೂ ನಮ್ಮ ವಿಚಾರಸರಣಿಯನ್ನು ಒಪ್ಪಿ ಅಭಿನಂದಿಸಿ ಕಾಗದ ಬರೆದಿರುವರು. ಒಂದೆರಡು ಪತ್ರಗಳಂತೂ ಕರ್ನಾಟಕದ ಕಾರ್ಯಶೂನ್ಯತೆಯ ಬಗೆಗೆ ತುಂಬ ಕಳವಳಗೊಂಡು ಬರೆದುವಾಗಿವೆ. ಅವುಗಳಲ್ಲಿಯ ಒಂದರ ಕೆಲವು ಮಾತುಗಳನ್ನು ನನ್ನ ಉದ್ದೇಶಸಾಧನೆಗಾಗಿ ಪ್ರಕಟಿಸ-ಬೇಕೆನಿಸಿದುದರಿಂದ ಹಾಗೆ ಮಾಡಿದ್ದೇನೆ. ಆ ಪತ್ರದಲ್ಲಿಯ ಪ್ರಥಮ ಭಾಗವು ಹೀಗಿದೆ:—

"ಅನೇಕ ವಂದನೆಗಳು; ಅದರೊಂದಿಗೆ ಅಭಿನಂದನೆಗಳು. ಅಭಿನಂದನೆಗಳು ತಮ್ಮ ಸಂಪಾದಕೀಯ ಬರೆಹಕ್ಕಾಗಿ. ಈಗ ಒಂದು ವರ್ಷ ಹಿಂದೆಯೆ ನನ್ನಲ್ಲಿ ಸುಳಿಸುಳಿದು ಹೋಗುತ್ತಿದ್ದ ವಿಚಾರವನ್ನೇ ತಾವು ನಿದಾಕ್ಷಿಣ್ಯ-ನಿರ್ಭೀತಿಗಳಿಂದ ಮಂಡಿಸಿದುದಕ್ಕಾಗಿ ನಿಜ-ವಾಗಿಯೂ ನನಗೆ ಹೆಮ್ಮೆಯೆನಿಸಿತು. ತಲೆಯ ಮೇಲೆ ಬಾಂಬರು-ಗಳು ಭೋರ್ಗರೆಯುತ್ತಿದ್ದಾಗಲೂ ಉತ್ಸಾಹದಿಂದ ಸಭೆ-ಸಮ್ಮೇಳನಗಳನ್ನು ಜರುಗಿಸುವ ಯುದ್ಧಾಸಕ್ತ ರಾಷ್ಟ್ರಗಳ ಕರ್ತವ್ಯನಿಷ್ಠೆಯ ಸಾಹಸವೆಲ್ಲಿ; ಯುದ್ಧಕ್ಷೋಭೆಗಳ ನೆಪದಿಂದ ಸಾಹಿತ್ಯಸಮ್ಮೇಳನ-ವನ್ನು 'ಹಾಸಿ-ಹೊದ್ದಿಸಿ' ಮಲಗಿಸುವ ನಮ್ಮವರ ಅಳುಕೆಲ್ಲಿ? ಕಳೆದ ವರ್ಷ, ಸುತ್ತಲೂ ವಿಧ್ವಂಸಕ ಆಂದೋಲನದ ಕೋಲಾಹಲ ನಡೆಯುತ್ತಿದ್ದಾಗಲೂ ನಾಸಿಕದಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನವು ಗೌರವ-ಗಾಂಭೀರ್ಯದಲ್ಲಿ ಜರುಗಿತು; ಆದರೆ ನಾವು ಮಾತ್ರ 'ಶಾಂತಂ ಪಾಪಂ' ಎಂದು ತಣ್ಣಗೆ ಕುಳಿತೆವು. ಅಂದಿನ ಅಧ್ಯಕ್ಷರಾದ ಪ್ರೊ. ಅತ್ರೇಯವರ ಭಾಷಣವೂ ಸಮಯೋಚಿತ ಸಮರಸ್ಫೂರ್ತಿಯದೇ ಆಯಿತು. 'ನ ಕರಣ್ಯಾಚಾ ವಾರ ಶನಿವಾರ' ಎಂದು ಒಂದು ನುಡಿಯಿದೆ ಮರಾಠಿಯಲ್ಲಿ. ಅದು ನಮಗೇ ಹೆಚ್ಚು ಹೊಂದುವುದೇನೊ! ಏನಾದರೊಂದು ನೆಪ ಸಿಕ್ಕರೆ ಸಾಕು; ನಮ್ಮ ಸಾಮಾಜಿಕ ಕರ್ತವ್ಯಗಳೆಲ್ಲ ತಿಲಾಂಜಲಿ ಪಡೆಯುವುವು. ಸಭೆ-ಸಮ್ಮೇಳನಗಳೆಲ್ಲ ಒಂದು ನೈಮಿತ್ತಿಕ ಸಮಾರಂಭವೆಂತಲೆ ನಾವು ಭಾವಿಸುವೆವು. ಅವು ನಿತ್ಯವಾದ ಸಾಮುದಾಯಿಕ ನೀತಿಮತ್ತೆಯ ನಿಮಾಂತಕರ್ತವ್ಯಗಳೆಂಬ ತಿಳಿವಳಿಕೆ ನಮ್ಮ ಜನಕ್ಕಿಲ್ಲ. ಅದೇಕೆ? ಸಾಮುದಾಯಿಕ ನೀತಿಮತ್ತೆಯೆ ನಮ್ಮಲ್ಲಿ ಶೂನ್ಯಪ್ರಾಯ. ತಾವು ಯೋಗ್ಯವಾದ— ಅಪ್ರಿಯಪಥ್ಯವಾದ— ಹಿತವಾದವನ್ನು ಸಾರಿದು-ದಕ್ಕೆ ನಾನು ಕನ್ನಡದ ಪರವಾಗಿ ಋಣಿಯಾಗಿದ್ದೇನೆ....

"ಕರ್ನಾಟಕ ಏಕೀಕರಣ ಪರಿಷತ್ತು ಒಂದು Still born ಕೂಸಾಗಿದೆ. ನಮ್ಮ ಕನ್ನಡದ ಸಂಘಟನೆಯ ಕಾರ್ಯದಲ್ಲಿ ಸರಿ-ಯಾದ ಶ್ರಮವಿಭಾಗವೇ ಇಲ್ಲ. ಹೀಗಾಗಿ ಪ್ರತಿಯೊಂದು ಸಾಹಿತ್ಯ-ಸಮ್ಮೇಲನವೂ ಒಂದು ಪ್ರಚಾರಕೀವ್ಯಾಸಪೀಠವಾಗಿ, ಏಕೀಕರಣ ಪರಿಷತ್ತಿನ ಪರಿಶಿಷ್ಟದಂತೆ ನಡೆಯುತ್ತದೆ. ಮೇಲಾಗಿ ಎಲ್ಲವೂ ಕಾಂಗ್ರೆಸ್ ಕಮಿಟಿಯ ಅಚ್ಚಿನಿಂದ ಮಾಸಿದಂತಿದೆ. ಸಾಹಿತ್ಯ ಸಮ್ಮೇಲನವು ಕೇವಲ ಸಾಹಿತಿಗಳ ಮತ್ತು ರಸಿಕರ ಸಮಾಗಮದ ರಂಗವಾಗಿರಬೇಕು. ನುಡಿಯ ಪ್ರಚಾರ-ವಾದವಿಚಾರಕ್ಕಾಗಿ ಏಕೀ-ಕರಣ ಪರಿಷತ್ತಿನ ಒಂದು ಪ್ರತ್ಯೇಕ Machinery ಉಂಟುಮಾಡ-ಬೇಕು. ರಾಜಕೀಯ ಸಭೆಗಳ ಅವ್ಯವಸ್ಥೆ, ಜಾತೀಯ ಸಭೆಗಳ ಬೇಶಿಸ್ತು, ಕೀರ ಪ್ರಚಾರಕ ಪದ್ಧತಿಯ ಅವಲಂಬನೆ, ಸಾಹಿತಿಗಳದೇ ಸಾಹಿತ್ಯದ್ದೇ ಆದ ಮೌಲಿಕತತ್ತ್ವ-ಸಂಪ್ರದಾಯಗಳ ಅಭ್ಯಾಸ-ಅಧ್ಯವಸಾಯಗಳ ಅಭಾವ, ವ್ಯಾಪಕ ಮಾನವ್ಯದ ಉತ್ಕಟಭಾವಬಂಧನದ ಬಿಗುಹಿನ ಕೊರತೆ, ಪುರೋಗಾಮಿತ್ವದ ಕುರಿತು ಔದಾಸೀನ್ಯ, ನಾಟ್ಯ-ಕಾವ್ಯ-ಮಹಿಲಾ ಇತ್ಯಾದಿ ಹಲವು 'ಗೋಷ್ಠಿ'ಗಳನ್ನು ಒಂದೇ ದಡ್ಡಿ-ಯಲ್ಲಿ ಕಟ್ಟಿ 'ಗಾಢವಾಂಚಾ ಗೋಂಧಳ ವ ಲಾಥಾಂಚಾ ಸುಕಾಳ' ಎಂಬ ಪ್ರಮಾದರಿಯ ಕಾರಭಾರ. 'ಇವೆಲ್ಲ ನಮ್ಮ ಸಾಹಿತ್ಯ ಸಮ್ಮೇ-ಳನದ ಸತ್ತ್ವ-ಸ್ವತ್ತ್ವಗಳನ್ನು ಕುಂದಿಸವೇ?' ಎಂದು ನನಗೆ ಒಮ್ಮೊಮ್ಮೆ ಏಕೋ ಎನಿಸುವುದು. ಕನ್ನಡ ಸಂಸ್ಕೃತಿಯ ಸುಸಂಘಟಿತ ವಿಕಾಸಕ್ಕೆ ಭದ್ರವಾದ ಅಸ್ತಿವಾರವನ್ನು ಕಲ್ಪಿಸುವ ಅಚ್ಚುಕಟ್ಟಿನ ಕೆಲಸವು ಇಂತಹ ಅಡ್ಡಮುಟ್ಟ— ಅಸಡ್ಡಾಳ–ಸಂಸ್ಥೆಯ ಕಡೆಯಿಂದ ಆದೀತೇ? ಇಷ್ಟೆಲ್ಲ ವರ್ಷಗಳ ಅಧ್ಯಕ್ಷೀಯ ಭಾಷಣಗಳನ್ನೋದಿದರೂ, ನೃಪತುಂಗನ ತಿರುಳುಗನ್ನಡದಿಂದ ಮೊದಲುಮಾಡಿ ಮರಾಟಿಗರ ಆಕ್ರಮಣದ ವಿರುದ್ಧ ಆಕ್ರೋಶದಲ್ಲಿ ಮುಗುತಾಯಗೊಳ್ಳುವ ಒಂದೆ ರೀತಿಯ ವಿಚಾರಸರಣಿಯು ಸಾಹಿತ್ಯಸಮ್ಮೇಲನದ ವ್ಯಾಸಪೀಠದಿಂದ ಘೋಷಿತವಾಗುತ್ತದೆ. ಆಕ್ರಮಣದ ಪ್ರಶ್ನೆಯೂ ಜೀವಾಳದ್ದು ನಿಜ; ಆದರೆ ಅದರ ನಿರ್ವಹಣೆಗಾಗಿ ಉಚಿತ ಸಂಸ್ಥೆಯೊಂದನ್ನು (ಏಕೀಕರಣ ಪರಿಷತ್ತು) ನಾವು ಉಂಟುಮಾಡಿಲ್ಲವೆ? ಅವೆಲ್ಲ ಅವಾಂತರಗಳನ್ನು ಕಲಸುಮೇಲೋಗರ ಮಾಡಿ, ಸಾಹಿತ್ಯಸಮ್ಮೇಳನದ ವಿಶುದ್ಧ ವಾತಾ-ವರಣವನ್ನು ಕಲುಷಿತಗೊಳಿಸುವುದೇಕೆ? ಇವೆಲ್ಲದರ ಕುರಿತು ತಾವು ಇನ್ನೂ ಕೆಲವು ಲೇಖನಗಳನ್ನು ಬರೆಯಬೇಕು; ಒಂದು ಆಂದೋ-ಲನವೆಬ್ಬಿಸಬೇಕು. ಸಾಹಿತ್ರಿಗಳಿಗೆ ಅನಾವಶ್ಯಕವಾಗಿ ಒಂದು ಆತ್ಮ-ಗ್ಲಾನಿ ಎನಿಸಬೇಕಾಗಿಲ್ಲ. ತಮ್ಮ ಅಸ್ತಿತ್ವಕ್ಕಾಗಿ ಅವರು ಕ್ಷಮೆ ಬೇಡಬೇಕಾಗಿಲ್ಲ. ತಮ್ಮ ಅಧಿಕಾರವನ್ನು ಕುರಿತು ಅನುಮಾನಿಸ ಬೇಕಾಗಿಲ್ಲ........"

ಈ ಕಾಗದವನ್ನು ಬರೆದ ನಮ್ಮ ತರುಣಮಿತ್ರರು— ಕನ್ನಡದ ಶುಭಭವಿಷ್ಯಕ್ಕಾಗಿ ಹಗಲಿರುಳು ಹಾರಯಿಸುವವರು; ಅದಕ್ಕಾಗಿ ಸ್ವತಂತ್ರ— ಸದಸದ್ವಿವೇಕ ಬುದ್ಧಿಯಿಂದ ವಿಚಾರಮಾಡುವವರು; ಮನಸ್ಸನ್ನೂ ತಿಳಿವಳಿಕೆಯನ್ನೂ ದುಡಿಸುವವರು. ಇಂತಹ ಸ್ವತಂತ್ರ ವಿಚಾರದ ಕಾರ್ಯಾಸಕ್ತ ತರುಣರು ಹೆಚ್ಚಿದಂತೆ ಕನ್ನಡದ ವಿಧಾ-ಯಕ—ರಚನಾತ್ಮಕ—ಕಾರ್ಯಗಳು ಹೆಚ್ಚು ಹೆಚ್ಚು ವ್ಯವಸ್ಥೆ-

(೮೮ ನೆಯ ಪುಟ ನೋಡಿ)



೧. ನಿಕೆಲ್‌ದ ಅಣೆಯ ನಿಕಾಲೆ!

ಮಂಗಮಹಾರಾಜಕೀ ಜೈ! ಹುರಿದುಂಬಿ ಕೂರಿಸೋಣ್ವ! ಯಾಕೆ! ಯಾಕೆ!! ಯಾಕೆನ್ನುವಿರಾ ಮಂಗರಾಯನ ಈ ಮೈಮಣೆತ? ಮಂಗರಾಯನ ಪಕ್ಷವು ಅವನ ನಾಯಕನ ಬಾಲದಂತೆ ಬೆಳೆಯತೊಡಗಿದೆ; ಮಂಗರಾಯನ ಪ್ರಚಾರವು ರಾಮಬಾಣದಂತೆ ಗುರಿಯನ್ನು ತಪ್ಪದೆ ತಟ್ಟುತ್ತಲಿದೆ. ಅದಕಾಗಿ ಅಭಿಮಾನ. ಯಾಕಿರಬಾರದು ಅಭಿಮಾನ? ಕಾಂಗ್ರೆಸ್-ಮಹಾಸಭಾ—ಸ್ವತಂತ್ರ—ರಾಷ್ಟ್ರೀಯ—ತೀರ ಸ್ವತಂತ್ರ ಮೊದಲಾದ ರಾಜಕೀಯ ಪಕ್ಷಗಳಲ್ಲಿ ಕ್ರಮೇಣ 'ಪುಢಾರಿ' ಎನಿಸಿಕೊಂಡು; ಬೇಕಾದಲ್ಲಿ ಹೋದರೂ ಪುಢಾರಿಯೆ, ಯಾಕೆಂದರೆ 'ಪುಢಾರಿತನ' ಹುಟ್ಟುಗುಣ ಎಂದು ತೋರಿಸಲು ವೈಸರಾಯರ ಕೌನ್ಸಿಲರ್ ಎನಿಸಿಕೊಂಡು; ಬೇಕಾದ್ದನ್ನು ಮಾಡಿ ಗುರಿ ಸಾಧಿಸಿಕೊಳ್ಳುವುದು ಮುಖ್ಯ ಎಂದು ತೋರಿಸಲು, ರಾಜೀನಾಮೆಯನ್ನು ಕೊಟ್ಟು; ಜಗದ್ವಿಖ್ಯಾತರಾದ, ಲೋಕಾಲೋಕವಿಲೋಕನಾಯಕರಾದ ಪಂತೋಜಿ ಅಣೆಯವರು, ಕೊನೆಗೆ ಅಜಾಮೀಳನಂತೆ ಬುದ್ಧಿ ಬಂದು ಮಂಗರಾಯನ ಪಕ್ಷವನ್ನು ಸೇರಿದರು! ಅದಕಾಗಿಯೆ ಬೋಲೋ—ಏನು? ಇನ್ನೂ ತಿಳಿಯಲಿಲ್ಲವೆ? ಮೂಢೋಜಿರಾಯರು ಮಂಗರಾಯನ ಪಕ್ಷವನ್ನು ಸೇರಿದರು; ಮಂಗನಾಯಕನ ಹೆಜ್ಜೆಯನ್ನು ಹಿಂಬಾಲಿಸುವ ನಿರ್ಧಾರವನ್ನು ಮಾಡಿದರು! ಅರ್ಥಾತ್, ಲಂಕೆಯ (ಸಿಂಹಳದ) ಹಾದಿಯನ್ನು ಹಿಡಿದರು. ಈಗಲಾದರೂ ತಿಳಿಯಿತೆ ಮೂಢೋಜಿಯವರು ಮಂಗನಾದ—ಅಲ್ಲಲ್ಲ, ಮಂಗಪಕ್ಷದ ಸದಸ್ಯರಾದ ಕತೆ! ವಿನಾಯಕನು ವಾನರನಾದರೆ ಮೂಢೋಜಿಯು ಮಂಗನಾಗಬಾರದೇಕೆ? ಇದಲ್ಲದೆ ಲಂಕೆಗೆ ಹೋದಾಗ ಬಾಲಸುಡುವ ಹೆದರಿಕೆ ನಮ್ಮ ಅಣೆಯವರಿಗಿಲ್ಲ; ತದ್ವಿರುದ್ಧ ಬಾಲ ಸುಡಲಿ ಎಂಬ ಅಭಿಮಾನದ ಆಕಾಂಕ್ಷೆ ಇದೆ. ಯಾಕೆಂದರೆ:

ಸುಡಲಿಲ್ಲವೆ ನಮ್ಮ ಹನುಮನಾಯ್ಕನ ಬಾಲ
ಸುಡಲಿ ಹದಿನಾರಾಣೆ ಎಂಬುದೇ ಶೀಲ!!

* * *

೩. ಭಾರತದ ಬಿರಿಗಾಲ?

ವಾಚಕರೆ, ಎಚ್ಚರಾಗಿರಿ! ಕಣ್ತೆರೆಯಿರಿ! ಇಲ್ಲವಾದರೆ ಆನಂದದ ಸುದ್ದಿಯನ್ನು ಹೇಳುವ ಭರದಲ್ಲಿ ಮಂಗರಾಯನು ನಿಮ್ಮ ಬೆನ್ನು ಚಪ್ಪರಿಸಿ—ಅಪ್ಸ!—ಬೇಡ! ಬಲವಾಗಿ ಬೆನ್ನು ಚಪ್ಪರಿಸಿದರೆ ಬಾಯಿಯ ತುತ್ತು ಬಯಲಿಗೆ ಸಿಡಿದೀತು! ಹ ಹ ಹ! ಮಂಗರಾಯನಿಗೆ ಹೇಗೆ ತಿಳಿಯಿತೆನ್ನುವಿರಾ? ಮಂಗರಾಯನನ್ನು ಆದರದಿಂದ ಅನುಕರಿಸಿ, ಗಂಟಲಲ್ಲಿ ತುತ್ತನ್ನಿಟ್ಟುಕೊಳ್ಳುವುದನ್ನು ಕಲಿತಿರಾ? ಗೊತ್ತು! ಮಂಗರಾಯನಿಗೆ ಅಧಿಕೃತವಾಗಿ ಗೊತ್ತು! ಬರಿಯ ಅಧಿಕೃತವಲ್ಲ—ಮೇಲಧಿಕೃತ! ಯಾಕೆಂದರೆ, ಎಲ್ಲರಿಗಿಂತ ಮೇಲಧಿಕಾರಿಯಾದ, ಭಾರತಮಂತ್ರಿಯಾದ ಅಮೆರಿಯವರೇ ನಿಮ್ಮ ಬಾಯೊಳಗಿನ ತುತ್ತನ್ನು—ಅರ್ಥಾತ್ ಹೊಟ್ಟೆಯೊಳಗಿನ ಗುಟ್ಟನ್ನು ಬಯಲಿಗೆಳೆದಿದ್ದಾರೆ... ಅಮೇರಿಸಾಹೇಬರು ಹೇಳುತ್ತಾರೆ—'ಭಾರತದಲ್ಲಿ ಬರಗಾಲವಿಲ್ಲ, ಬಿರಿಗಾಲವಿದೆ' ಎಂದು— ಎಂದರೆ ಜನರು ಹೊಟ್ಟೆ ಬಿರಿಯುವಂತೆ ತಿನ್ನುತ್ತಿದ್ದುದರಿಂದ ಬೇರೆ ಜನರಿಗೆ ಅನ್ನ ದೊರೆಯದಂತಾಗಿದೆ ಎಂದು, ಆರು ಸಾವಿರ ಮೈಲು ದೂರದಲ್ಲಿದ್ದ ಅಮೇರಿಯವರಿಗೆ ಹೇಗೆ ತಿಳಿಯಿತೆನ್ನುವಿರಾ? ದೊಡ್ಡವರ ಲಕ್ಷಣವೆ ಇದು. ಆತ್ಮಜ್ಞಾನವು ಪರಿಪೂರ್ಣವಾಗಿರುವುದು ಅವರಿಗೆ, ಎಂದರೆ ತಮ್ಮದು ತಮಗೆ ಪೂರ್ತಿಯಾಗಿ ಗೊತ್ತು, ಹೊಟ್ಟೆ ಬಿರಿಯುವಂತೆ ತಿಂದರೂ ಅದರ ಎಚ್ಚರ ತಪ್ಪದಂತೆ—ಏನೆಂದಿರಿ? ಇಂಡಿಯಾ ಡಿಫೆನ್ಸ್—ಹಿಂದುಸ್ತಾನ ಸಂರಕ್ಷಣೆ? ಅದೇ ಅಲ್ಲವೆ ಮಂಗರಾಯನು ಹೇಳುವುದು? ರೋಗಾದಿಗಳ ತವರ್ಮನೆಯಾದ ಭಾರತದ ಜನರನ್ನು ರೋಗಗಳಿಂದ ಸಂರಕ್ಷಿಸಲು ಅವರು ಹೆಚ್ಚು ಅನ್ನ ತಿನ್ನದಂತೆ ನೋಡುವುದು, ಅದಕಾಗಿ ಅದನ್ನು ತಾವೇ ಮುಂಚಿತ ತಿನ್ನುವುದು—ಇ ಇಂಡಿಯಾ ಡಿಫೆನ್ಸ್ ಆ್ಯಕ್ಟ್ ಎಂದಿರಾ? ಇದೇ. ತುಂಬಿದ ಗಲ್ಲಗಳನ್ನು ತಪ್ಪಿಗಾಗಿ ಬಡಿದುಕೊಂಡ ಮಂಗರಾಯ.

* * *

೪. ಬಲ್ಲವರ ಬಿಕ್ಕಟ್ಟು

ಸೈನ್ಯಾಧಿಕಾರಿಗಳು ಹಿಂದುಸ್ತಾನದ ವೈಸರಾಯರಾದುದಕ್ಕಾಗಿ ದೇಶದ ಬಲ್ಲವರು—ಅರ್ಥಾತ್ ಬಿರುದು-ವಲ್ಲಭರು—ತಲೆಯನ್ನು ತುರಿಸಬೇಕಾಗಿದೆ ಎಂದು ಮಂಗರಾಯನಿಗೆ ರಹಸ್ಯವಾಗಿ ತಿಳಿದು ಬಂದಿದೆ. ಇದುವರೆಗೆ ಮಂಗರಾಯನ ಮಾದರಿಯನ್ನು ಅನುಸರಿಸುತ್ತಿದ್ದ ಈ ಟೈಟಲ್-ಟೈಗರರು, ಈಗ ಮಂಗರಾಯನ ಕಡೆ ಶಿಷ್ಯಮಂಡಳವನ್ನು ತರಬಯಸಿದ್ದಾರಂತೆ. ಅದೆಂತಹ ತೊಡಕು! ಇಂದಿನವರೆಗೆ ಇಡಿಯ ಜೀವನವನ್ನು ಸಾಹೇಬರೆದುರು ಕೈತುರಿಸುತ್ತ, ಹಲ್ಲು ಕಿರಿಯುತ್ತ ಕಳೆದವರು ಈಗ ಮಾಡಬೇಕೇನು? ಹೊಸ ವೈಸರಾಯರು ಸೈನ್ಯಸಂಪ್ರದಾಯದವರು. ಅವರೆದುರು ಕೈತುರಿಸಿ ಹಲ್ಲುಕಿರಿದರೆ, ಅವರು 'ಶೇಮ್' ಎಂದು ಗದರಿಸಬಹುದಲ್ಲ? ಇಷ್ಟಾದರೂ ಸೆಟೆದು ನಿಲ್ಲುವುದು ಹೇಗೆ? ಸಾಹೇಬರ ಚಿತ್ತವನ್ನು ಒಳಹೊಗಲು ಹಾತೊರೆಯುತ್ತ ತೂಗಾಡುವ ಮೈಯವರು, ಸದ್ದಿಲ್ಲದೆ ಸೆಟೆದು ನಿಲ್ಲುವುದು ಹೇಗೆ? ನಿಲ್ಲದಿದ್ದರೆ 'ಡಿಸ್‌ಮಿಸ್' ಮಾಡಬಹುದಲ್ಲ? ಇತ್ತ ಉರುಲು, ಅತ್ತ ಸುತ್ತು! ಒಮ್ಮೆಲೆ ಡ್ಯಾವರ್ ಉರುಲು-ಸುತ್ತು! ಈ ಸಂಕಟದಲ್ಲೂ ಯಾವನಾದರೂ ಶೂರನಾದರೆ ಸಿಗಬಹುದಾದ ಬಿರುದು ಎಂತಹದು! ಲೆಫ್ಟ್ ಫುಟ್ ನಂಟ (left foot ನಂಟ=ಎಡಗಾಲ ಸೇವಕ)! ರೈಟ್ ಅಬಾವುಟ್ ಟರ್ನ್—ಎಂದರೆ—ಅಲ್ಲ—ಒಟ್ಟು ವಾಚಕಮಹಾಶಯರಿಗಾದರೂ ತಿಳಿಯಿತಲ್ಲವೆ ತೊಡಕು ಎಂತಹದೆಂಬುದು? ಇಷ್ಟಾಗಿಯೂ ಹೊಲಮನೆ ಮಾರಿ ಬಿರುದನ್ನು ಪಡೆಯಲೇ ಬೇಕಾಗುವುದು!

ಭಲ್ ಭಲಾ! ಧಾರವಾಡ!!

ಕುಮಾರಿ ವತ್ಸಲಾ ಪಾಟೀಲ ಮತ್ತು ಕುಮಾರ ಅರ್ಚಕ ಗುರುರಾಜರಿಗೆ

★ ಅಭಿನಂದನೆಗಳು! ★

ಈ ಸಲದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅಪೂರ್ವವಾದ ಯಶಸ್ಸನ್ನು ಪಡೆದುದಕ್ಕಾಗಿ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು. ನೀವು ದೊರಕಿಸಿದ ನಮ್ಮ 'ಹಿಂದ್' ಸೈಕಲ್ಲುಗಳು ನಿಮ್ಮ ಕಾಲೇಜು ಜೀವನದಲ್ಲಿ ಕೂಡ ಇದೇ ರೀತಿಯ ಯಶಸ್ಸನ್ನು ಸಂಪಾದಿಸಲು ನೆರವನ್ನು ಕೊಡಲಿ ಎಂದು ನಮ್ಮ ಹಾರಯಿಕೆ.

★



ಕುಮಾರಿ ವತ್ಸಲಾ ತಿರುಮಲರಾವ ಪಾಟೀಲ ಅವರು ಯಶಸ್ವಿ ವಿದ್ಯಾರ್ಥಿನಿಯರಲ್ಲಿ ಪ್ರಥಮಸ್ಥಾನ ಪಡೆದುದಕ್ಕಾಗಿ ಈ ಡಿಲಕ್ಸ್ ಲೇಡೀಜ್ ಮಾಡೆಲ್ ಹಿಂದ್ ಸೈಕಲನ್ನು ಬಹುಮಾನ ಕೊಡಲಾಗಿದೆ.

ಸಂಪೂರ್ಣ ಉಕ್ಕಿನದು, ತೀರ ಹೊಸ ಆಕೃತಿ, ಸುಂದರ ಕೆಲಸಗಾರಿಕೆ, ಮಹಿಳೆಯರಿಗಾಗಿ ಬಾಗುಸಲಾಕೆಯ ಹಿಂದ್ ಸಾಯಕಲ್.



ಕುಮಾರ ಗುರುರಾಜ ಗೋಪಾಳ ಅರ್ಚಕ ಅವರು ೫೬೫ ಗುಣಗಳನ್ನು ಪಡೆದು, ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದುದಕ್ಕೆ ಈ ಸ್ಟ್ಯಾಂಡರ್ಡ ಹಿಂದ್ ಸೈಕಲನ್ನು ಬಹುಮಾನ ಕೊಡಲಾಗಿದೆ.

ಮೋಹಕ ಆಕಾರ-ಮಾನವು. ಚನ್ನ ಕೆಲಸಗಾರಿಕೆ-ಹಿಂದ್ ಸಾಯಕಲ್, ಸ್ಟ್ಯಾಂಡರ್ಡ ಜೆಂಟ್ಸ್ ಮೊಡಲ್. ಇದು ನಿಜವಾಗಿ ಉತ್ಕೃಷ್ಟ ಸಾಯಕಲ್.

ಹಿಂದ್ ಸೈಕಲ್ ಲಿಮಿಟೆಡ್, ೨೫೦ ವರ್ಲಿ, ಮುಂಬಯಿ.

HIND CYCLES LTD

Managing Agents BIRLA BROS LTD

ಯಾಕೆಂದರೆ, ಹೊಸ ವೈಸರಾಯರು ಸ್ವತಃ ಫೀಲ್ಡ್ (ಹೊಲ) ಮಾರಿಸಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ.

* * *

೪. ಹಳ್ಳಿಯ ಮುಳ್ಳು ಹುಜೂರಿನ ಕೈಯಲ್ಲಿ!

ನಮ್ಮ ನಾಡಿನ ಹಳ್ಳಿಯೂರ ಗೌಡರ ಕುಲಕರ್ಣಿಯವರ ಚಾವಡಿಯ ಶಿಸ್ತನ್ನು ಯಾರಾದರೂ ನೋಡಿದ್ದೀರಾ? ಅಲ್ಲಿ ಅವರು ತಮ್ಮ ಬರೆವಣಿಗೆಯ ಸಲುವಾಗಿ ಹಲವು ಬಗೆಯ ನೈಸರ್ಗಿಕ ಸಲಕರಣೆಗಳನ್ನು ಒದಗಿಸಿಕೊಂಡಿರುವರು. ಮಸಿಗಾಗಿ ಚಿಮಣಿ ಕಾಡಿಗೆ, ಬ್ಲಾಟಿಂಗಿಗಾಗಿ ಹುಡಿಮಣ್ಣು, ಗುಂಡುಸೂಜಿ (ಪಿನ್) ಗಾಗಿ ಜಾಲಿಯ ಮುಳ್ಳು, ಪೇಸ್ಟಿಗಾಗಿ ಹಾಲುಗಳ್ಳಿಯ ಟೊಂಗೆ....ಇತ್ಯಾದಿ ಇತ್ಯಾದಿ. ಅವರ ಕೆಲಸಕ್ಕಾಗಿ ಸರಕಾರದಿಂದ ಸಿಕ್ಕುವ 'ಪೋಟಿಗೆ' ಯಿಂದ ಲೆಕ್ಕಾಚಾರ ಹಾಕಿ ನೋಡಿದರೆ, ಇಂತಹ ಸಲಕರಣೆಗಳು ಅವರಿಗೆ ಅನಿವಾರ್ಯವಾಗಿರುವುವು. ಆದರೂ 'ಹಳ್ಳಿಯೂರ ಗೌಡ-ಕುಲಕರ್ಣಿಯರು' ಎಂದು ಅವರಿಗಾಗಿ ಕುಚೇಷ್ಟೆ ಮಾಡಿ ನಗುವ ನಾಗರಿಕರನ್ನು ಕಂಡರೆ ಮಂಗರಾಯನಿಗೆ ತುಂಬ ಕೋಪ. ಹಳ್ಳಿಗರ ಸಲಕರಣೆಗಳಿಗೆ ಎಂದೂ ಚ್ಯುತಿಯಿರದು. ನಾಗರಿಕರ ಸಲಕರಣೆಗಳು ಸಂದರ್ಭಾನುಸಾರ ಸಿಕ್ಕದೆ ಹೋದರೆ ಬಾಯಿ ಬಾಯಿ ಬಿಡಬೇಕಾಗುವುದು. ಈಗ ಬಂಗಾಲದ ಅತಿ ನಾಗರಿಕ ಸರಕಾರವೂ ಹಳ್ಳಿಯೂರ ಗೌಡ-ಕುಲಕರ್ಣಿಯವರನ್ನು ಅನುಕರಿಸಬೇಕೆನ್ನುವ ಮಂಗತನಕ್ಕೆ ಸಿದ್ಧವಾಗಿದೆ. ಪಿನ್ನಿನ ಬದಲು ಇದಿನ್ನು ಜಾಲಿಯ ಮುಳ್ಳುಗಳನ್ನು ಉಪಯೋಗಿಸುವುದಂತೆ. ಅದಕ್ಕಾಗಿಯೆ ಅನೇಕರನ್ನು ಮುಳ್ಳಾರಿಸಲಿಕ್ಕೆ ತಂಡತಂಡವಾಗಿ ಕಳಿಸಿದೆಯಂತೆ. ನಮ್ಮ ಕನ್ನಡದ ಮೂಡುನಾಡಿಗೆ ಬರಲಿ, 'ಬಟ್ಟೆ ಬಟ್ಟೆಯೊಳೆಲ್ಲ ಹೊಟ್ಟೆ ಜಾಲಿಯ ಮುಳ್ಳು' ಬೇಕಾದಷ್ಟು ಸಿಕ್ಕುವುವು. ಸರ್ವಜ್ಞ ಕವಿ ಈಗಿನ ಕಾಲದಲ್ಲಿದ್ದು ಅವನಿಗೂ ಮುಳ್ಳಿನ ಅವಶ್ಯಕತೆ ಎನಿಸಿದ್ದರೆ 'ಮೂಡಲದ ಬಟ್ಟೆ ಬೇಕೆಂದ!' ಎಂದು ಹೇಳಬಹುದಾಗಿತ್ತು. ಮುಳ್ಳು ಬಂದಿತು, ಇನ್ನು ಕಳ್ಳಿಯ ಗೊನೆಯೂ ಬರಬಹುದು; ಕರಿಯ ಹುಡಿಮಣ್ಣೂ ಬರಬಹುದು.

ಗೆಲ್ ಗೆಲ್ ಹಳ್ಳಿಯ ಪದ್ಧತಿ!

* * *

ಮಹಾತ್ಮಾ ಬಸವಣ್ಣನವರ ಸ್ವರೂಪ

(ನಿಷ್ಪಕ್ಷಪಾತ ನೋಟ)*

ಶ್ರೀ. ಬಿ. ಎಸ್. ಎ. ರಾವ್ ಬಿ. ಎಸ್‌ಸಿ. ಪುಣೆ

ಜೈನ- ಬೌದ್ಧಮತಗಳು ಹೊಸಸಿದ್ಧಾಂತವನ್ನು ಪ್ರತಿಪಾದಿಸುವಂತೆ ಕಂಡರೂ, ಅವುಗಳ ಮುಖ್ಯತತ್ತ್ವ ವೇದೋಪನಿಷತ್ತುಗಳಲ್ಲಿ ಅಡಕವಾದ ತತ್ತ್ವದ ಇನ್ನೊಂದು ರೂಪವೆ ಆಗಿದೆ. ಅದರಂತೆಯೇ ಶ್ರೀ ಬಸವಣ್ಣನವರ ದರ್ಶನವೂ ವೇದೋಪನಿಷದ್‌ಭಿನ್ನವಾದ ಪರಮಸತ್ಯವನ್ನು ಜಗತ್ತಿಗೆ ಸಾರಿತೆಂದು ಹೇಳಲಾಗುವುದಿಲ್ಲ !

★

"ಇದಮಂಧಂತಮಃಕೃತ್ಸ್ನಂ" ಎನಿಸಿದೆ ಜಗತ್ತು ಎಂದು ತಿಳಿದು, ಜನಜಂಗುಳಿಗೆ ಬೆಳಕಿನ ಕಲ್ಪನೆಯನ್ನು ಕಾಣಿಸಲು ಕಂಕಣಬದ್ಧರಾಗಿ ಹೊರಟ ಸಮಾಜಸುಧಾರಕರಲ್ಲಿ ಮಹಾತ್ಮಾ ಬಸವಣ್ಣನವರೂ ಒಬ್ಬರು. ಅವರ ನಿಜವಾದ ಸ್ವರೂಪವನ್ನು ತಿಳಿದವರು ಅವರು ಮತಸ್ಥಾಪಕರೆಂದೂ, ಕನ್ನಡ ಸಾಹಿತ್ಯದಲ್ಲಿ ನೂತನ ಮಾರ್ಗಾವಲಂಬಿಗಳೆಂದೂ ಗುರುತಿಸುತ್ತಾರೆ. ಅವರ ನಿಜಸ್ವರೂಪವನ್ನವಲೋಕಿಸಲು ಬರಿಯ ಇತಿಹಾಸವನ್ನೇ ಆಗಲಿ, ಅವರ ಸಂಪ್ರದಾಯ ಶರಣರ ಪ್ರೌಢೋಕ್ತಿಗಳನ್ನೇ ಆಗಲಿ ಅಥವಾ ಇತರ ಅಸಿದ್ಧ ಅಪಕ್ವ ಅಭಿಪ್ರಾಯಗಳನ್ನೇ ಆಗಲಿ ಗಮನಿಸಿದರೆ, ಹಣ್ಣಿನ ರುಚಿಯನ್ನು ಬರಿಯ ಬಣ್ಣದಿಂದ ಬೆಲೆ ಕಟ್ಟಿದಂತಾಗುತ್ತದೆ. ಹಣ್ಣಿನ ರುಚಿಯನ್ನು ತಿಂದು ತಿಳಿಯುವಂತೆ ಶ್ರೀಬಸವಣ್ಣನವರ ಕೃತಿಯನ್ನು ವಿಮರ್ಶಿಸಿಯೇ ಅವರ ವ್ಯಕ್ತಿತ್ತ್ವದ ಆಳವನ್ನು ಅಳೆಯಬೇಕು.

ಅನುದಿನ ಪರಿವರ್ತನೆಗೊಳಗಾದ ಈ ಪ್ರಪಂಚದಲ್ಲಿ, ವಿಷಯಲೋಲುಪ್ತರಾಗಿ ವಿವಿಧ ಪ್ರಲೋಭನೆಗಳಿಗೆ ಮರುಳಾದ ಮಾನವರಿಗೆ ಮುಕ್ತಿಮಾರ್ಗವನ್ನು ತೋರಿಸಲು ಮಹಾತ್ಮರನೇಕರು ತಮ್ಮ ಮನೋವಾಕ್ಕಾಯ ಕರ್ಮಗಳಿಂದ ನೆರವಾಗಿದ್ದಾರೆ. ಶ್ರೀಕೃಷ್ಣನು ಗೀತೆಯಲ್ಲಿ "**ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ....ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ**" ಎಂದು ಹೇಳಿದಂತೆ, ದೈವಾಂಶಸಂಭೂತರು ಜಗತ್ತು ವಿಪತ್ತಿಗೊಳಗಾದಾಗ ಅವತರಿಸಿದರು, ಅವತರಿಸಿದ್ದಾರೆ, ಅವತರಿಸುವರು !

ಬಸವಣ್ಣನವರ ದರ್ಶನ

ಭಾರತದಲ್ಲಿ ದರ್ಶನಕಾರರಿಗೆ ಕಡಿಮೆಯಿಲ್ಲ. ಗೌತಮ, ಕಣಾದ, ಪತಂಜಲಿ, ಬಾದರಾಯಣರೇ ಮೊದಲಾದ ಮಹಾ ದಾರ್ಶನಿಕರು ತಮ್ಮ ಹಿಮಾಲಯಸದೃಶವಾದ ಆತ್ಮಶಕ್ತಿಯಿಂದ ಜಗತ್ತನ್ನೇ ಜ್ಯೋತಿರ್ಮಯವಾಗಿ ಮಾಡಿದರು. ಇಂದಿಗೂ ಉಪನಿಷತ್ತುಗಳ "ತತ್ತ್ವಮಸಿ"ಯು, "ಶೋಪನ್ಹೋರ್" ನೇ ಮೊದಲಾದ ಪಾಶ್ಚಾತ್ಯ ಶಾಸ್ತ್ರಕಾರರಲ್ಲಿಯೂ ಪ್ರತಿಧ್ವನಿಸುತ್ತಿದೆ. ಉಪನಿಷತ್ಕಾಲದ ನಂತರ ಹೊರಟ ದರ್ಶನಗಳೆಲ್ಲವೂ ಅವುಗಳ ಒಂದಲ್ಲ ಒಂದು ಭಾಗದ ಪ್ರದರ್ಶನಗಳೇ ಎಂದರೆ ಅತಿಶಯೋಕ್ತಿಯಾಗಲಾರದು. ಅಂತೆಯೇ, ಶ್ರೀಬಸವಣ್ಣನವರ ದರ್ಶನವು ಕೂಡ ವೇದೋಪನಿಷದ್ಭಿನ್ನವಾದ ಪರಮಸತ್ಯವನ್ನು ಜಗತ್ತಿಗೆ ಸಾರಿತೆಂದು ಹೇಳಲಾಗುವುದಿಲ್ಲ. ಜೈನ ಬೌದ್ಧ ಮತಗಳು ಹೊಸ ಸಿದ್ಧಾಂತವನ್ನು ಪ್ರತಿಪಾದಿಸುವಂತೆ ತೋರಿಸಿಕೊಂಡರೂ, ವಸ್ತುತಃ ಅವುಗಳ ಮುಖ್ಯತತ್ತ್ವಗಳು ವೇದೋಪನಿಷತ್ತುಗಳಲ್ಲಿ ಅಡಗಿರುವ ತತ್ತ್ವಗಳ ಹೊಸ ರೂಪವೇ ಹೊರತು ಅವುಗಳಿಂದ ಬೇರೆ ಅಲ್ಲ. ಈ ಮತಗಳು ತಮ್ಮ ಪದಾಘಾತದಿಂದ, ಸರ್ವಸಮನ್ವಯ ಪ್ರಧಾನವಾದ, ಮತಸ್ಥಾಪಕನೇ ಇಲ್ಲದ ಮತ್ತು ಅನೇಕ ತತ್ತ್ವಜ್ಞರ ವಿಚಾರಸಾರದಿಂದ ಪಕ್ವವಾದ ವೈದಿಕ ಅರ್ಥಾತ್ "ಹಿಂದೂ" ಮತದ ಮೇಲೆ ಧಾಳಿ ನಡೆಯಿಸಲು ತೊಡಗಿದಾಗ, ಶ್ರೀಮಚ್ಛಂಕರರೆ ಮೊದಲಾದ ಅಪ್ರತಿಹತ ಧೀಮಂತರು ತಮ್ಮ ವಾದವಜ್ರಾಘಾತದಿಂದ ಅವುಗಳನ್ನಡಗಿಸಿ, ಬಸವಣ್ಣನವರು ಅವತರಿಸುವ ಮೊದಲೇ ಹಿಂದೂ ಮತವನ್ನು ಜಿತಾರಾತಿಯನ್ನಾಗಿಮಾಡಿದ್ದರು. ಆದುದರಿಂದ ಶ್ರೀಮಾನ್ "ಚಿಂತಾಮಣಿ"ಯವರು ಹೇಳುವಂತೆ ಶ್ರೀಬಸವಣ್ಣನವರು ಅವತರಿಸಿದ ಕಾಲದಲ್ಲಿ ಹಿಂದೂಮತವು ಕ್ಷೀಣವಾಗಿರಲಿಲ್ಲ, ಜಗತ್ತು ಅಂಧಕಾರಮಯವಾಗಿರಲಿಲ್ಲ, ಖಗ್ರಾಸ ಹಿಡಿದಿರಲಿಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಬಹುದು: ವೈದಿಕಧರ್ಮದ ನಿಜಸ್ವರೂಪವನ್ನು ಅರಿಯಲು ಅಶಕ್ತರಾದವರ ಸಂಖ್ಯೆಯು ಈಗಿನಂತೆ ಆಗಲೂ ಬಹುವಾಗಿತ್ತು. ಅಂತಹ ಪಾಮರರಿಗೆ ಸದ್ಗತಿಯನ್ನು ಕಾಣಲು ಸುಲಭೋಪಾಯವು ಆವಶ್ಯಕ.

* ಜಯಂತಿಯ ಮೇ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ. 'ಚಿಂತಾಮಣಿ' ಅವರ ಲೇಖನದ ವಿಮರ್ಶೆ. ಲೇ.

ಕನ್ನಡಸಾಹಿತ್ಯದಲ್ಲಿಯೇ ಕ್ರಾಂತಿಯನ್ನುಂಟುಮಾಡಿದ

ಸಚಿತ್ರ **ಪ್ರೇಮಕಲಾ** ೩ ನೇ ಆವೃತ್ತಿ

ಬೆಲೆ ೧–೮–೦ (ವಿ. ಪಿ. ವೆಚ್ಚ ಬೇರೆ)

ಅಶ್ಲೀಲವೆಂಬ ಆರೋಪದ ಮೇಲೆ ಖಟ್ಲೆ ನಡೆದು, ನ್ಯಾಯಾಸನದ ಒರೆಗಲ್ಲಿಗೆ ಹತ್ತಿ ನಿಷ್ಕಲಂಕವೆಂದು ಹೊರಬಿದ್ದ ಕಾಮಶಾಸ್ತ್ರದ ಅತ್ಯಮೌಲ್ಯವಾದ ಗ್ರಂಥ.

ತ್ವರೆಮಾಡಿರಿ!!

ಕಾಮವಿಜ್ಞಾನದ ಸಚಿತ್ರ ಗ್ರಂಥಗಳು

ಪೌರುಷ	೧— ೦—೦
ಸ್ವರತಿ	೧— ೦—೦
ರತಿರಹಸ್ಯ	೧— ೦—೦
ಕಾಮದಹನದ ಭ್ರಾಂತಿ	೦—೧೨—೦
ಪಿರಂಗಿ ಪರಮಾ ರೋಗ ಸಮಸ್ಯೆ	೦— ೮—೦
ಕೈಗನ್ನಡಿ (ಸಾಮುದ್ರಿಕಶಾಸ್ತ್ರ)	೧— ೦—೦

ಇವಲ್ಲದೆ ನೂರಾರು ಸುರಸ ಕಾದಂಬರಿಗಳೂ ಕಥೆಗಳೂ ಸಿಕ್ಕುತ್ತವೆ. ನಮ್ಮ ಕ್ಯಾಟಲಾಗಿಗೆ ೧ ಆಣೆ ಅಂಚೇ ಚೀಟಿ ಕಳಿಸಿರಿ..

ಸಮಾಜ ಪುಸ್ತಕಾಲಯ, ಧಾರವಾಡ.

ನಿತ್ತು. ಅದೇ ಕಾಲವನ್ನು ಮತ್ತು ಕಾರಣವನ್ನು ಶ್ರೀ ಬಸವಣ್ಣನವರು ಆರಿಸಿಕೊಂಡರು. ಹಲವು ದೇವತೆಗಳಿಗೆ ಹರಕೆ ಹೊತ್ತು ಹಣ್ಣಾದ ಹಳ್ಳಿಗರಿಗೆ—ಶಿವನೇ ಪರದೈವ ಅವನಿಗಿಂತಧಿಕರಿಲ್ಲ, ಲಿಂಗಧಾರಣೆಯಿಂದ ಪರಿಶುದ್ಧರಾಗಿ ಶಿವೋಪಾಸನೆಮಾಡಿದರೆ ಮುಕ್ತಿಯು ಕರತಲಾಮಲಕವಾಗುವುದು—ಎಂದು ಬೋಧಿಸಿ ಸನ್ಮಾರ್ಗದರ್ಶಕರಾದರು.

ಯಾವ ಸತ್ಪುರುಷನೇ ಆಗಲಿ, ತನಗಿಲ್ಲದ ಮಹೋನ್ನತ ಗುಣಗಳನ್ನು ತನಗನ್ವಯಿಸಿ ಲೋಕವು ಹೊಗಳತೊಡಗಿದರೆ ಅದನ್ನು ಸಹಿಸಲಾರನು. ಅದು ತನಗೆ ಅವಮಾನವೆಂದೆಣಿಸುವನೇ ಹೊರತು ಬಹುಮಾನವೆಂದೆಣಿಸಲಾರನು. ಆದುದರಿಂದ ವಿಮರ್ಶಕನಾದವನು ಸಾಮಾಜಿಕರ ಮುಂದೆ ಗುಣ-ದೋಷಗಳೆರಡನ್ನೂ ಇಡಬೇಕು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಶ್ರೀ-ಬಸವಣ್ಣನವರ ಆಚಾರಬೋಧೆ, ಇವುಗಳಲ್ಲಿ ಕಂಡುಬರುವ ಅನನ್ಯವಾದ ದಯಾಪರತೆ, ಧರ್ಮಬುದ್ಧಿ, ದೀನರಕ್ಷಣಾಪ್ರವೃತ್ತಿ ಈ ಕುಸುಮಗಳ ಮಧ್ಯೆ ಅನ್ಯಮತವಿಡಂಬನೆಯೆಂಬ ಪಾಷಾಣವು ಸೇರಿಕೊಂಡಿದೆ ಎಂಬುದು ಅವರ ವಚನಗಳನ್ನು ಆಮೂಲಾಗ್ರವಾಗಿ ಓದಿದ ಯಾವನಿಗಾದರೂ ಸ್ಪಷ್ಟವಾಗದಿರದು. ಶ್ರೀ "ಚಿಂತಾಮಣಿ"ಯವರೇ ಬರೆದಂತೆ "ಶ್ರೀ ಬಸವಣ್ಣನವರ ಆಂದೋಲನವು ವೈದಿಕಧರ್ಮದ ವೈರಿಯರೂಪವೇ" ಆಗಿದ್ದಿತು. ನಿಜವಾದ ಜ್ಞಾನಿಯು ಪರಧರ್ಮನಿಂದೆಯನ್ನೆಂದಿಗೂ ಮಾಡುವುದಿಲ್ಲ; ಮತ್ತು ತಾನು ಕಂಡುಕೊಂಡ ತತ್ತ್ವವೇ ಉತ್ತಮೋತ್ತಮ ಜಗನ್ಮಾನ್ಯ ಎಂದು ಜನರಿಗೆ ಅದನ್ನೇ ಅನುಸರಿಸುವಂತೆ ಒತ್ತಾಯಪಡಿಸುವುದಿಲ್ಲ. ಅಷ್ಟಾದಶ ಅಧ್ಯಾಯಗಳು ಮುಗಿದನಂತರ ಶ್ರೀಕೃಷ್ಣನು ಅರ್ಜುನನಿಗೆ "**ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾಕುರು**" ಎಂದು ಹೇಳಿದನೇ ಹೊರತು ತನ್ನ ತತ್ತ್ವಗಳೇ ಶ್ರೇಷ್ಠ, ಅವುಗಳನ್ನು ಒಪ್ಪಿಕೊಳ್ಳಲೇಬೇಕು ಎಂದು ಆಜ್ಞೆ ಮಾಡಲಿಲ್ಲ.

"ವೈದಿಕಧರ್ಮದ ಸಾಮ್ರಾಜ್ಯವಾದಕ್ಕೆ ಬೇಸತ್ತ ...." "ಬಹುಜನಸಮಾಜವು ವೈದಿಕ ಸ್ವಾರ್ಥಧರ್ಮದ ಸಾಮ್ರಾಜ್ಯವಾದಕ್ಕೆ ಬೇಸತ್ತದ್ದೇಕೆ?" "ವೈದಿಕಧರ್ಮದ ಮುಸುಕಿನಲ್ಲಿ ಸಾಮ್ರಾಜ್ಯಶಾಹಿಯ ಬೆಂಬಲವಾಗಿನಿಂತ ರೂಢಧರ್ಮ ...." ಎಂಬಿವೇ ಮೊದಲಾದ ವಾಕ್ಯಗಳಿಂದ ವೈದಿಕಧರ್ಮಕ್ಕೂ ಸಾಮ್ರಾಜ್ಯಶಾಹಿತ್ವಕ್ಕೂ, ಶ್ರೀ ಬಸವಣ್ಣನವರ ಬೋಧೆಗೂ, ರಶಿಯದ ಸಮತಾವಾದಕ್ಕೂ ಶ್ರೀ "ಚಿಂತಾಮಣಿ"ಯವರ ಪೌರೋಹಿತ್ಯದಲ್ಲಿ ಪಾಣಿಗ್ರಹಣ ಮಾಡಿಸಲಾಗಿದೆ. ಇದನ್ನು ನೋಡಿದರೆ ಒಂದು ಆಂಗ್ಲೇಯ ಮಹಾತ್ಮನ ವಾಕ್ಯಗಳು ನೆನಪಿಗೆ ಬರುತ್ತವೆ— "The reason why men and women are mysterious to us and prove disappointing that we will read them from our own book; just as we are perplexed by reading ourselves from theirs" — ಮಹಾತ್ಮರ ವಾಕ್ಯಗಳಿಗೆ ತಮತಮಗೆ ಇಷ್ಟಬಂದಂತೆ ಅರ್ಥ ಕಲ್ಪಿಸಿ, ಅವರ ಉದ್ದೇಶಗಳಿಗೆ ತಮತಮಗೆ ಸೊಗಸೆನಿಸುವ ಬಣ್ಣ ಕೊಟ್ಟು ಅದೇ ಸಿದ್ಧವೆಂದು ಹೇಳುವುದು ವೈಜ್ಞಾನಿಕನ ಲಕ್ಷಣವಲ್ಲ. ಲೇಖಕಮಹಾಶಯರು ತಮ್ಮ ಕನ್ನಡಿಯ ಮೂಲಕ ನೋಡಿ ಬಸವಣ್ಣನವರನ್ನು ಬಣ್ಣಿಸಿದ್ದಾರೆ. ಆದರೆ ವಿಮರ್ಶಕನು, ಅವರ ದೇಶ, ಕಾಲ, ಸಂದರ್ಭ, ಉದ್ದೇಶಗಳನ್ನು ಪರ್ಯಾಲೋಚಿಸಿ ನೋಡುವಾಗ, ಹಿಂದೂಮತದ ಆಗಲೇ ಶಿಥಿಲವಾಗಿದ್ದ ಯಜ್ಞ-ಪದ್ಧತಿಯನ್ನು ಬೊಟ್ಟುಮಾಡಿ ತೋರಿಸಿ, ಕೇವಲ ಆ ಕಾರಣದಿಂದ ವೈದಿಕಧರ್ಮವನ್ನು ಹೀನವೆಂದು ಹಳಿದು ಸ್ವಮತದ ಉತ್ಕರ್ಷವನ್ನು ಡಂಗುರಹೊಡೆದ ಬಸವಣ್ಣನವರ ಮಹಾತ್ಮ್ಯದ ಮುಂದೆ ಪ್ರಶ್ನಾರ್ಥಕಚಿಹ್ನೆಯೊಂದನ್ನು ಇಡದಿರಲಾರನು. ಸಾಮ್ರಾಜ್ಯಶಾಹಿತ್ವ ಮತ್ತು ಯಜ್ಞ-ಯಾಗಾದಿಗಳು ಹಿಂದೂಮತದ ಸ್ವರೂಪ ನಿದರ್ಶಕಗಳೇ? ವಿಶ್ವತೋಮುಖವಾದ ಹಿಂದೂಮತದ ಮೂಲಸ್ವರೂಪವನ್ನು ತಿಳಿಯದೆ ಯಾವುದಾದರೊಂದು ಅಪ್ರಧಾನವಾದ ಅಂಗವನ್ನು ಪ್ರಧಾನಮಾಡಿ ಇಡೀ ಹಿಂದುಮತವನ್ನೇ ಅಲ್ಲಗಳೆಯುವುದು ತತ್ತ್ವಜ್ಞನ ರೀತಿಯಲ್ಲ. ಸಾಮ್ರಾಜ್ಯಶಾಹಿತ್ವವು ಐತಿಹಾಸಿಕವಾದುದು, ಮತೀಯವಲ್ಲ. ಬಸವಣ್ಣನವರು ಯಾವ ರಾಜಕೀಯ ಪಕ್ಷದ ಮುಖಂಡರಾಗಿಯೂ ಸಾಮ್ರಾಜ್ಯಶಾಹಿತ್ವದ ನಿರ್ನಾಮಕ್ಕೆ ಹೊಡೆದಾಡಲಿಲ್ಲ. ಆದರೆ

ಮುತ್ತು!

ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ, ಹೊಂಬಳ

ಮುತ್ತಿನ ಮೇಲೇನೋ ಮನಸಾಯಿತು. ಮುತ್ತಿನ ಹೊರತು ಮತ್ತೇನೂ ಬೇಡ. ಆದರೆ, ಅದು ಸಿಗುವ ಬಗೆ ಹೇಗೆ?

* * *

ಹಲವರನು ಕೇಳಿದೆ. ಹಲವು ತರ ಹೇಳಿದರು. ಎಲ್ಲವನ್ನೂ ಕೇಳಿಕೊಂಡೆ. ಏನೇನೋ ಎಣಿಕೆ ಹಾಕಿ, ಕಡೆಗೆ ಸಾಗರದ ಕಡೆಗೆ ಸಾಗಿದೆ. ಮುತ್ತಿನ ಮೇಲಿನ ಮೋಹದಿಂದ ನೆಲಕಿಳಿದು ಬಂದ ಮುಗಿಲಂತೆ ಆ ಮುನ್ನೀರು ಕಂಗೊಳಿಸಿತು. ಮುತ್ತು ಮಾತ್ರ ಕಾಣಲಿಲ್ಲ.

* * *

ನಡುಗಡಲಿನೊಡಲಲ್ಲಿ ಮುತ್ತಿನ ರಾಶಿಯಡಗಿಹುದಂತೆ! ಮೇಲೆ ಮೇಲೆ ತೋರುವುದು ತೆರೆ-ನೊರೆ ಮಾತ್ರ. ಬಲು ಆಳವಾದ ನೀರು. ಅದರಲ್ಲಿ ಮುಳುಗಿದಲ್ಲದೆ ಮುತ್ತು ಸಿಕ್ಕದು. ಮುಳುಗಬೇಕೆಂದರೆ ಆಯೆಂದು ಬಾಯ್ದೆರೆದು ಆಡ್ಡಾಡುತಿರುವ ಮೀನ-ಮೊಸಳೆಗಳ ಅಂಜಿಕೆ ಬೇರೆ. ಮುಂದೇನು ಗತಿ?

* * *

ಗಟ್ಟಿಗರಾದ ಕೆಲವರು ಮಾತ್ರ ಕಡಲಲ್ಲಿ ಮುಳುಮುಳುಗಿ, ಮುತ್ತುಗಳನ್ನು ಮೇಲಕ್ಕೆತ್ತುತ್ತಿದ್ದರು. ಬುಟ್ಟಿ ತುಂಬ ಮೊಟ್ಟೆ ತುಂಬ ಮುತ್ತುಗಳಿದ್ದರೂ ಅವರು ಮತ್ತೆ ಮತ್ತೆ ಮುಳುಗುತ್ತಲೆ ಇದ್ದರು. ಇದೆಂತಹ ಆಶೆ! ನನಗೆ ಒಂದೇ ಒಂದು ಮುತ್ತು ಸಿಕ್ಕರೆ ಸಾಕು. ಆ ಮೇಲೆ ಮುತ್ತಿನ ಮಾತನ್ನೇ ಎತ್ತುವುದಿಲ್ಲವೆಂದು ಕೈಯೆತ್ತಿ ಹೇಳಬಲ್ಲೆನು. ಇರಲಿ. ಮುತ್ತುಗಳನ್ನು ಕಂಡುಕೊಂಡವರ ಕಂಡೆ. ಕೊಡುವವರನು ಮಾತ್ರ ಕಾಣಲಿಲ್ಲ. ಮುತ್ತಿನ ಮೋಹವು ನನ್ನನ್ನು ಬಿಡಲಿಲ್ಲ.

* * *

ಮುತ್ತಿನ ಸರಗಳಿಂದೆ ಸಿಂಗಾರರಾಗಿ ಮೆರೆಯುವ ಮಹಾರಾಯರ ಕಡೆಗಾದರೂ ಹೋಗಲೇ? ಒಂದು ವೇಳೆ ಹೋದರೆ ಅವರು ನನ್ನಂಥವರನ್ನು ಹತ್ತಿರ ಹಾಯಗೊಡುವರೋ? ಮಾನದ ಮಾತೇನೂ ಇಲ್ಲ. ಮುತ್ತು ಸಿಕ್ಕರೆ ಸಾಕು!

* * *

ಸಿರಿವಂತರ ಅರಮನೆಗಳಿಗೆ ಎಷ್ಟೋ ಬಾರಿ ಎಡತಾಕಿದುದಾಯಿತು. ಅವರಿಗೆ ನಯ-ಭಯಗಳಿಂದ ನಡೆದುಕೊಂಡುದೂ ಆಯಿತು. ಆದರೇನು ನನಗೆ ಬೇಕಾದ ಮುತ್ತೇನೂ ಸಿಕ್ಕಲಿಲ್ಲ. ಮನವು ಮುತ್ತಿನ ಮಂತ್ರವ ಮರೆಯಲಿಲ್ಲ.

* * *

ಹೀಗೆ ತಿರುಗುತ್ತಿರುವಾಗ ರಾಜಮಾರ್ಗದ ಒಂದು ಬದಿಯಲ್ಲಿ

> ಅಗ್ಗವಾದ ಬೆಲೆ! ಉತ್ತಮ ಮುತ್ತು! ಒಮ್ಮೆಯಾದರೂ ಕೊಳ್ಳಿರಿ!
>
> **ಎಮ್. ಸಿ. ಮುತ್ತಯ್ಯಸ್ವಾಮಿ**
>
> ಆನಂದಪುರಂ

ಎಂದು ಬಣ್ಣದ ದೊಡ್ಡಕ್ಕರಗಳನ್ನು ಬರೆದು ಹಚ್ಚಿದ ಹಲಗೆಯೊಂದು ಕಣ್ಣಿಗೆ ಬಿತ್ತು. ಅಲ್ಲಿಗೆ ಹೋದೆನು. ಅದೊಂದು ಅಚ್ಚುಕಟ್ಟಾದ ಚಿಕ್ಕ ಅಂಗಡಿ, ಅಂಗಡಿಕಾರನು ಆದರ ಮಾಡಿ ನನ್ನನ್ನು ಮೇಲೆ ಕುಳ್ಳಿರಿಸಿದನು. ನಾನು ಮುತ್ತಿನ ಮಾತನ್ನೇ ಮೊದಲುಮಾಡಿದೆನು. ಅವನು ತನ್ನ ಹತ್ತಿರದ ಬೆಳ್ಳಿಯ ಡಬ್ಬಿಯ ಬಾಯ್ದೆರೆದು ಮುತ್ತಿನ ಸರವೊಂದನ್ನು ತೆಗೆದು, "ಒಳ್ಳೇ ಮುತ್ತು, ನಿಜವಾಗಿಯೂ ಆಣಿಮುತ್ತು; ಪರೀಕ್ಷೆ ಮಾಡಿರಿ ಬೇಕಾದರೆ!" ಎಂದನು. "ಒಳ್ಳೆಯದು ಬೆಲೆಯೆಷ್ಟು?" ಎಂದು ನಾನು ಕೇಳಿದೆನು. ಮುತ್ತುಗಾರನು ತುಂಬ ಗಾಂಭೀರ್ಯದಿಂದ "ಸ್ವಾಮೀ, ನಾವು ಸುಳ್ಳು ಹೇಳುವವರಲ್ಲ. ಜೀವನವೇ ಈ ಮುತ್ತಿನ ಬೆಲೆ! ಇದರಲ್ಲಿ ಹೆಚ್ಚುಕಡಿಮೆ ಏನೂ ಇಲ್ಲ. ಬೇಕಾಗಿದ್ದರೆ ಕೊಂಡುಕೊಳ್ಳಬಹುದು!" ಎಂದು ನನ್ನ ಮೋರೆಯನ್ನು ನೋಡಹತ್ತಿದನು.

* * *

ಒಂದೇ ಮಾತಿನ ಅಂಗಡಿ. ಮೇಲೆ ಬಾಯಿಂದ ಬಂದುದನ್ನು ಬದಲಿಸದ ಅಂಗಡಿಕಾರ.

ಮುತ್ತಿಗಾಗಿ ಜೀವನವ ಕೊಡಲೇ?
ಜೀವನಕಾಗಿ ಮುತ್ತನು ಬಿಡಲೇ?
ಎಂದು ನನ್ನ ಮನವು ತೂಗುತೊಟ್ಟಿಲವಾಯಿತು.

(೮೭ ನೆಯ ಪುಟದಿಂದ ಮುಂದುವರಿದುದು)

ಪಕ್ಷಾತೀತಪಂಗಡವೆಂದು ಹೆಸರಿಟ್ಟುಕೊಂಡು ಪಕ್ಷಗಳ ಪಟ್ಟಿಗೆ ಹೊಸನೊಂದು ಪಕ್ಷವನ್ನು ಸೇರಿಸಿದವರಂತೆ, ಜಾತಿಭೇದವಿರಬಾರದೆಂದು ಬೋಧಿಸುತ್ತಾ ಬಸವಣ್ಣನವರು ಇದ್ದ ಜಾತಿಗಳಪಟ್ಟಿಗೆ ಲಿಂಗವಂತರ ಜಾತಿಯೊಂದನ್ನು ಸೇರಿಸಿದ ಪುಣ್ಯಕೆಲಸವನ್ನು ಮಾಡಿದರು! ಜಗತ್ತಿನ ಅತಿಪ್ರಾಚೀನಕಾಲದಲ್ಲಿ ಎಲ್ಲ ಜನಾಂಗಗಳ (ದ್ರಾವಿಡರೂ ಕೂಡ) ಮೂಲನಿವಾಸಿಗಳಲ್ಲೂ ಪ್ರಚಾರದಲ್ಲಿದ್ದ ಮತ್ತು ಒಂದಾನೊಂದು ಕಾಲದಲ್ಲಿ ವೈದಿಕಮತದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ ಯಜ್ಞಪದ್ಧತಿಯನ್ನು ತತ್ಕಾಲೀನ ಹಿಂದೂಮತಕ್ಕೆ ಅನ್ವಯಿಸಿ, ತಮ್ಮ ವಚನಧಾರೆಯನ್ನು ಘೋಷಿಸಿದ ಶ್ರೀಬಸವಣ್ಣನವರು ಮಾನ್ಯ ಲೇಖಕರಿಗೆ ಸರ್ವಮಾನ್ಯರೆನಿಸಿದರೂ ಲೋಕವೇನೆಂದೀತು ಎಂಬುವನ್ನು ವಾಚಕರೇ ಊಹಿಸಲಿ.

ಇಷ್ಟಾದರೂ "ಗುಣಾಯಂತೇ ದೋಷಾಃ ಸುಜನವದನೇ" ಎಂಬಂತೆ- ಒಟ್ಟಿನಮೇಲೆ ಮಹಾತ್ಮಾ ಬಸವಣ್ಣನವರು, ತಮ್ಮ ಅಪಾರವಾದ ಸದ್ಗುಣಗಳಿಂದ ಇರುವ ಅಲ್ಪದೋಷಗಳನ್ನು ಮರೆಮಾಡಿ ಜನೋಪಕಾರಿಗಳಾಗಿದ್ದಾರೆಂದರೆ ಯಾರೂ ಅಲ್ಲಗಳೆಯಲಾರರು.

(೮೨ ನೆಯ ಪುಟದಿಂದ ಮುಂದುವರಿದದ್ದು)

ಗೊಳ್ಳುತ್ತ ಹೋಗುವುವು. ತಾವೂ ಮಾಡದ—ಮಾಡಬೇಕೆನ್ನುವವರನ್ನು ಸಾಂಪ್ರದಾಯಿಕ ಬುದ್ಧಿಯು ಅಣಕಿಯಿಟ್ಟು ಬೆದರಿಸುವ—ಹಣ್ಣುಹಣ್ಣಾದ ದೇಹಬಲ ಬುದ್ಧಿಬಲಗಳುಳ್ಳ ಹಿರಿಯರ ಕೈಯಲ್ಲಿಯೆ ನಮ್ಮ ವಿಧಾಯಕ ಕಾರ್ಯದ ಸಂಸ್ಥೆಗಳು ಉಳಿಯುತ್ತಬಂದರೆ, ಅವು ಹೀಗೆಯೆ ಸಂಕ್ರಮಣಾವಸ್ಥೆಯಲ್ಲಿಯೆ ಕೊಳೆಯುತ್ತ ಬೀಳುವುವು. ಮುಂದುವರಿಯಲು ದುಡುಕುವ ಉತ್ಸಾಹವುಳ್ಳ ತರುಣರೇ ನಾಡನ್ನು ಮುಂದುವರಿಸಬಲ್ಲರಲ್ಲದೆ, ಅನುಭವಗಳ ಅಳೆಗೋಲಿನಿಂದ ಅಳೆದಳೆದು ಹೆಜ್ಜೆಯನ್ನಿಡುತ್ತ ಹೊರಡುವ ಹಿರಿಯರು ಮುಂದುವರಿಸಲಾರರು. ಈ ಮಾತು ಪ್ರತಿದಿನವೂ ಕನ್ನಡಿಗರ ಪ್ರತೀತಿಗೆ ಬರುತ್ತಲಿದೆ. ಆದುದರಿಂದಲೆ ಈಗ ಇದ್ದ ಸಂಸ್ಥೆಗಳಲ್ಲಿ ಹುಮ್ಮಸಿನ ಕನ್ನಡ ತರುಣರು ಹೆಚ್ಚುಹೆಚ್ಚಾಗಿ ಸೇರಿಕೊಳ್ಳಬೇಕು; ಇಲ್ಲದ ಸಂಸ್ಥೆಗಳನ್ನವರು ನಿರ್ಮಾಣಮಾಡಿ ಕಾರ್ಯಪ್ರವೃತ್ತರಾಗಬೇಕು. ನಾಡಿನ ಕಟ್ಟಡವು ಅವಿರತವಾಗಿ ನಿಲ್ಲಬೇಕೆಂಬುದನ್ನು ಅರಿತು, ಅದಕ್ಕೆ ಬೇಕಾಗುವ ವಿವಿಧ ಕಾರ್ಯಕ್ಷೇತ್ರದಲ್ಲಿಯೂ ಅವಿರತವಾಗಿ ದುಡಿಯುವ ಬೇರೆ ಬೇರೆ ತರುಣರ ಪಂಗಡಗಳು ನಿರ್ಮಾಣವಾಗಬೇಕು. ಒಬ್ಬರ ಕಾರ್ಯ ಒಂದು ಬಗೆಯದಾದರೆ ಇನ್ನೊಬ್ಬರ ಕಾರ್ಯವು ಇನ್ನೊಂದು ಬಗೆಯದಾಗಿರಬಹುದು; ಎಲ್ಲರೆದುರೂ ನಾಡಿಸೇಳಿಗೆಯ ಆದರ್ಶವೊಂದಿದ್ದರೆ ಸಾಕು. ಒಬ್ಬರೊಬ್ಬರ ಕಾರ್ಯ ಒಬ್ಬರೊಬ್ಬರನ್ನು ಅಡ್ಡಯಿಸಲಾಗದು. ನಾಡ ಸಂರಕ್ಷಣೆಗಾಗಿ ಹೋರಾಡುವ ಕ್ಷಾತ್ರವೃತ್ತಿ ಹೋರಾಡಲಿ; ಸಂಸ್ಕೃತಿಯನ್ನು ಪ್ರಚಾರಗೊಳಿಸುವ ಬ್ರಾಹ್ಮಣವೃತ್ತಿ ತನ್ನ ಕೆಲಸ ನಡೆಯಿಸಲಿ! ಹಣಗಳಿಸುವ ವೈಶ್ಯವೃತ್ತಿ ಅಖಂಡವಾಗಿ ಗಳಿಸಲಿ! ಕೆಲಸ ಮಾಡುವ ಶೂದ್ರವೃತ್ತಿ ಉತ್ಸಾಹದಿಂದ ಕೆಲಸ ಮಾಡಲಿ! ಒಂದು ಇನ್ನೊಂದಕ್ಕಾಗಿ ಕಾಯುವುದು ಬೇಕಾಗಿಲ್ಲ. ಒಂದರ ಕಾಲು ಎಡಹಿತೆಂದು ಇನ್ನೊಂದೂ ಎಡಹಿ ಬೀಳಬೇಕಾಗಿಲ್ಲ. ಈ ಮಾತನ್ನು ಕನ್ನಡದ ಹಿರಿಯರೂ ಕಿರಿಯರೂ ಅರಿತು ನಡೆದರೆ ನಮ್ಮ ನಾಡಿನ ಗುಡಿಗಳಸ ಮೇಲಕ್ಕೇರೀತು, ಭಾರತದಲ್ಲಿ ನಮಗೆ ಮಾನದ ಸ್ಥಾನ ಸಿಕ್ಕೀತು; ಇಲ್ಲವಾದರೆ ಕನ್ನಡಿಗರು ಶೂನ್ಯಸಿಂಹಾಸನದಲ್ಲಿಯೆ ಶಾಸನ ನಡೆಯಿಸಬೇಕಾದ ಸಂದರ್ಭ ಬಾರದಿರದು.

ಚಂದಾದಾರರಿಗೆ

ನಾವು ಎರಡೆರಡು ಸಲ ಬಿನ್ನವಿಸಿಕೊಂಡು 'ಜಯಂತಿ' ಬೇಡವಾಗಿದ್ದರೆ ಬರೆದು ತಿಳುಹಬೇಕೆಂದು ನೆನಪು ಕೊಟ್ಟರೂ, ಯಾವುದನ್ನೂ ತಿಳಿಸದೆ, ವ್ಹಿ. ಪಿ. ಗಳನ್ನು ನಿರಾಕರಿಸುವ ಮಹಾಮಹಿಮರು ಇನ್ನೂ ಕೆಲವರು ಇದ್ದೇ ಇರುವರು. ಇಂತಹ ಅವರ ಅಲಕ್ಷ್ಯ-ಅಸಡ್ಡೆಗಳಿಗೆ ಏನೆನ್ನಬೇಕೋ ತಿಳಿಯದಂತಾಗಿದೆ. ಸಮಂಜಸಬುದ್ಧಿಯನ್ನು ಸ್ವಲ್ಪವೆ ತಂದುಕೊಂಡರೂ ಆ ಜನರು, ಜಯಂತಿಗೆ ಹಾನಿಮಾಡದಿರುವಂತಹ ಸತ್ಕಾರ್ಯದ ಫಲವನ್ನು ಪಡೆಯಬಹುದಾಗಿದೆ. ಜಯಂತಿ ಬೇಡವಾದವರು ಹಾಗೆ ಖಂಡಿತವಾಗಿ ಬರೆದು ತಿಳಿಸಬೇಕೆಂದು ಮತ್ತೆ ಮತ್ತೆ ಬೇಡುವೆವು.

—ಸಂಪಾದಕರು

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯು ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ನುಸಗಳಿಗೆ ಮೋಕ್ಷ ಕರುಣಿಸಿದರು ಋಷಿಗಳು. ಕಡೆಗೂ ವಿವೇಕಬುದ್ಧಿಯನ್ನು ಪಶುವೃತ್ತಿಯೇ ಗೆದ್ದುಬಿಟ್ಟಿತು. ಮತ್ತೆ ಕೈತೊಳೆದು ಆಚಮನಮಾಡಿ ಕುಳಿತರೆ "ಗುಂಯ್ಯ್‌ಗೂಂ" ಎಂದು ಸ್ವರವಿದ್ದೇ ಇದೆ. ಈ ಅನಾಹುತದಲ್ಲಿಯೆ ಒಂಬತ್ತು ಗಂಟೆಯಾಯಿತು. ಚಳಿಯ ರಭಸವೂ ಜೋರಾಯಿತು. ಹಲ್ಲು ಕಟಕಟವೆಂದು ಬಾರಿಸತೊಡಗಿದುವು. ಬಟ್ಟೆಯಂತೂ ಒದ್ದೆ-ಹಾಗೆಯೇ ಇದೆ. ಇದೆಲ್ಲಕ್ಕಿಂತಲೂ ಹೆಚ್ಚಿನದು ಹೊಟ್ಟೆಯ ಹಸಿವೆ. ಮೇಲೇಳಲು ಭಯ ಬೇರೆ. ಮೆಲ್ಲಗೆ ಸುತ್ತಲೂ ನೋಡುತ್ತ ಎದ್ದು, ಸಾಯಂಕಾಲಕ್ಕೆಂದಿಟ್ಟಿದ್ದ ಕಾಯಿ-ಹಣ್ಣುಗಳನ್ನು ಕಬಳಿಸಿದರು. ಭಯಗೊಂಡ ಮನಕ್ಕೆ ಹಗ್ಗಕೂಡ ಕಾಳಸರ್ಪವಾಗಿ ಕಾಣುವಂತೆ, ರಾಮಾನಂದನಿಗೆ ದೂರದ ಗಿಡಗಳೆಲ್ಲ ಭಯಂಕರ-ವಾಗಿ ಕಾಣುತ್ತಲಿದ್ದುವು. ಹತ್ತುಗಂಟೆ ರಾತ್ರಿಯಾಯಿತು. ಎಲ್ಲೆಡೆಯಲ್ಲಿಯೂ ಭಯಂಕರತೆಯೆ ಮೂರ್ತಿಮಂತವಾಗಿ ನಿಂತಿರುವಂತೆನಿಸುತ್ತಿತ್ತು. ಬಹುದಿನಗಳ ಸಂಸ್ಕಾರದ ಭೂತ-ಪ್ರೇತಗಳ ಅಂಜಿಕೆಯೂ ಇತ್ತು. ಇಂದು ಅಮಾವಾಸ್ಯೆಯಾದ ಕಾರಣ ಅದು ಮತ್ತೂ ಹೆಚ್ಚಿತು. ಅದಕ್ಕೆ ಪುಟ ಕೊಡುವುದೊಂದು ಘಟನೆ ಘಟಿಸಿತು: ಆತ ನೋಡುತ್ತಿದ್ದಂತೆಯೆ ನದಿಯಲ್ಲೇನೋ ಸಪ್ಪಳವಾಯಿತು: "ಅದೇನಿರಬಹುದು? ಮೀನೋ ಏನೋ? ಅಥವಾ ಮೊಸಳೆಯೇ? ಇಲ್ಲವೇ ಭೂತವಾಗಿರಲಿಕ್ಕಿಲ್ಲವೇನು?" ಒಮ್ಮೆ ಇಂತಹ ಯೋಚನೆ ಬರತೊಡಗಿದರೆ ಅದು ತುದಿಬುಡ-ವಿಲ್ಲದೆ ಹಿಂದಿನ ಅನೇಕ ದೆವ್ವಗಳ ಸುಳಿದಾಟದ ಕತೆಗಳನ್ನೂ ತರುತ್ತದೆ. ರಾತ್ರಿ ಸಂಚಾರಮಾಡುವ ದೆವ್ವಗಳ ಯೋಚನೆ ಮನದಲ್ಲಿ ಸುಳಿಯುತ್ತಿರುವಾಗಲೆ, ಆ ಗುಡಿಯ ಹಿಂಗಡೆಯಿಂದ ರಾತ್ರಿಯ ಆಹಾರಕ್ಕೆ ಹೊರಡುವ ಹುಲಿಯ ಅಬ್ಬರದ ದನಿ ಬಂತು. ರಾಮಾನಂದ ಬೆಚ್ಚಿಬಿದ್ದ. ಕೂಗಿಕೊಳ್ಳಲು ಹವಣಿಸಿದ. ಅತಿಶಯವಾಗಿ ಅಂಜಿದರೆ ಬಾಯಿಂದ ಉಸಿರು ಕೂಡ ದೊಡ್ಡ-ದಾಗಿ ಬಿಡಲಾಗುವುದಿಲ್ಲ. ಅದೇ ಸ್ಥಿತಿ ಇವನಿಗೂ ಆಯಿತು. ಕೈಕಾಲುಗಳು ತರತರನೆ ನಡುಗತೊಡಗಿದುವು. ಮತ್ತೊಂದು ಕೂಗು ಮತ್ತೂ ಸಮೀಪದಲ್ಲಿ ಕೇಳಿಬರಲು "ಅಯ್ಯಪ್ಪಾ-ಸತ್ತೆ!" ಎಂಬ ನುಡಿ ಹೊರಟುಹೋಯಿತು. ಜೊತೆಗೇ ತಪ-ಸ್ಸಾಧಕ ಯತಿ, ತನ್ನ ಸಾಧನವಾದ ತಂಬಿಗೆ-ತಟ್ಟೆಗಳನ್ನೆಲ್ಲಾ ಅಲ್ಲಿಯೆ ಬಿಟ್ಟು ಕಾಲ್ತೆಗೆದ.

"ಅಮ್ಮಾ, ಬಾಗಿಲು ತೆಗೆ!" ಕನಿಕರದ ಮಗನ ಕರೆ ಕೇಳಿ, ಪಾರ್ವತಮ್ಮ ಬಾಗಿಲನ್ನು ತೆರೆದು ದೀಪಹಚ್ಚಿ ನೋಡುತ್ತಾಳೆ; ಯೋಗಿಯಾಗಲು ಹೊರಟ ಮಗ ಭಯಚಕಿತನಾಗಿ ನಡುಗುತ್ತ ನಿಂತಿರುವನು. ಬೆದರಿದ ತಾಯಿ ಮಗುವಿನ ವಿಚಾರವನ್ನೆಲ್ಲ ತಿಳಿದು, ಒಣಬಟ್ಟೆ ಉಡಲು ಕೊಟ್ಟಳು. ಹಸಿವಿನಿಂದ ಬಳಲಿದ ಮಗನಿಗೆ ಆ ನಡುರಾತ್ರಿ ಅನ್ನವಿಕ್ಕಿದಳು. "ಅಯ್ಯೋ, ಇಂತಹ ತಾಯಿ ಮಮತೆಯನ್ನು ತೊರೆದು ತಪಸ್ಸೇ?" ಎಂಬ ಯೋಚನೆ ರಾಮನಾಥನಲ್ಲಿ ಹುಟ್ಟಿತು.

ರಾಮನಾಥ ಬೆಳಗ್ಗೆ ಎದ್ದಾಗ ಮನೆಯವರೆಲ್ಲಾ "ಓಹೋ! ಮಹಾಯೋಗಿಗಳ ತಪಸ್ಸಿದ್ಧಿಯಾಯಿತೇ?" ಎಂದು ಪರಿ-ಹಾಸ್ಯ ಮಾಡತೊಡಗಿದರು. "ನಿಮ್ಮ ಗುರುಗಳಂತೆ ಮಾತ್ರ ಮಾಡಲಿಲ್ಲವಷ್ಟೆ?" ಒಬ್ಬನೆಂದ. "ಅದೇನು ಗುರುಗಳದು?" ಎಂದು ಇನ್ನೊಬ್ಬ ಕೇಳಿದ. "ಕೇಳಲಿಲ್ಲವೇ ನೀನು? ನಿನ್ನೆಯ ದಿನ, ನಮ್ಮ ನಾರಣಪ್ಪನ ಹೆಂಡತಿ ಸರಸ್ವತಿಗೆ ಮಕ್ಕಳಾಗದಿರು-ವುದಕ್ಕೆ ಮಹಾಯಂತ್ರ ತಯಾರಿಸಿ, ಅದಕ್ಕೆ ಅಮಾವಾಸ್ಯೆಯ ಪೂಜೆ ಮುಗಿಸಿದ್ದರಂತೆ. ರಾತ್ರಿ ಯಾರಿಗೂ ತಿಳಿಯದಂತೆ ಸನ್ನಿಧಿಗೆ ಬರಬೇಕೆಂದು ಅಪ್ಪಣೆಯಾಗಿತ್ತಂತೆ. ಮಗುವಿನ ಮುಖ-ವನ್ನೊಂದು ಕಾಣಬೇಕೆಂದು ಬಹುದಿನದಿಂದ ಬಯಸುವ ಸರಸ್ವತಿ, ರಾತ್ರಿ ಸುಮ್ಮನೆ ಹೊರಟಳು. ಅದನ್ನು ತಿಳಿದ ನಾರಣ-ಪ್ಪನೂ ಸುಮ್ಮನೆ ಜೊತೆಗೆ ಹೊರಟ. ಸಾಧುಗಳು ಇವಳ ಆಗಮನವನ್ನೇ ಇದಿರು ನೋಡುತ್ತಲಿದ್ದರು. ಸಾಧುವರ್ಯರು 'ಪ್ರಜೋತ್ಪತ್ತಿಮಂತ್ರ' ಜಪಿಸಲಾಗಿ ಆಕೆಯ ಕೈಹಿಡಿದರು. ಆಗಿನ ಅವರ ಮುಖಭಾವನೋಡಿ, ಆಕೆ ಅರಿತು ಚೀರತೊಡಗಿ-ದಳು. ಆದರೆ ಯೋಗಿಗಳು ಬಲಾತ್ಕಾರದಿಂದ ಪುತ್ರಪ್ರಾಪ್ತಿ-ಮಾಡಲು ಪ್ರಾರಂಭಿಸುವರಿದ್ದರು. ಸರಿ, ನಾರಣಪ್ಪನ "ಧಪ್ ಧಪ್" ಎಂಬ ಏಟುಗಳ ಸುರಿಮಳೆ ಬಿತ್ತು ಆ ಜ್ಞಾನಯೋಗಿಗೆ. ನಾರಣಪ್ಪನ ಕಾಲಿಗೆ ಬಿದ್ದು ಬೇಡಿದ ಸಾಧು. "ಸಾಯಿ" ಎಂದಾತ ಅವನನ್ನು ಬಿಟ್ಟು, ಹೆಂಡತಿಗೂ ಥಳಿಸಿ ಮನೆಗೆ ಬಂದ. ಬೆಳಗ್ಗೆ— ಎದ್ದು ನೋಡುವಾಗ ಸಾಧುವಿನ ಸವಾರಿ ಫರಾರಿ. ಇದೇ ಸಾಧುವಿನ ಕತೆ!" ಇದನ್ನು ಕೇಳಿ ರಾಮನಾಥನಿಗೆ 'ಘಾತ್' ಎನಿಸಿತು.

"ನೀನೂ ಸಿದ್ಧಿಪಡೆದು ಊರಹೆಂಗುಸರ ಬೆನ್ನು ಹತ್ತುವವ-ನೇನಪ್ಪಾ?" ಎಂದು ರಾಮನಾಥನೊಡನೆ ಕೇಳಿದರು.

ರಾಮನಾಥ ನಾಚಿ ತಲೆ ತಗ್ಗಿಸಿದ. ಆತ ಉತ್ತರವನ್ನೇನು ಕೊಡಬಲ್ಲ?

ಕಲಿಯ ಕೊನೆಯ ದಿನಗಳು

(ವ್ಯಕ್ತಿಚಿತ್ರ) ★ ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಸುತ್ತಿಗೆಯ ಏಟಿನಿಂದ ನೆತ್ತಿಯೊಡೆದ ಟ್ರೊಟ್ಸ್ಕಿಯ ಜೀವ, ಸಾವಿನೊಂದಿಗೆ ಮಲ್ಲಗಾಳಗವನ್ನೇ ನಡೆಯಿಸಿದ್ದಿತು. ಆ ಕಾಲದಲ್ಲಿ ಆ ಆದರ್ಶವಾದಿಯ ಮನಸ್ಸು ಯಾವ ವಿಷಯವನ್ನು ನೆನೆಯುತ್ತಲಿದ್ದೀತು, ಯಾವ ಚಿತ್ರ ಕಾಣುತ್ತಲಿದ್ದೀತು?

★

"ಎರಡು ಬಾರಿ ಹೇಳಿದ ಕತೆಯಷ್ಟು ಬೇಸರ"—ಎಂಬ ಅರ್ಥದ ಪಡೆನುಡಿಯೊಂದು, ಕಲಿತವರ ಬಳಕೆಯಲ್ಲಿ ಬರುವುದುಂಟು; ಆದರೆ ಈ ನುಡಿ ತೀರ ನಿಜವಲ್ಲ. ಎರಡು ಬಾರಿ ಹೇಳಿದ ಮಾತ್ರಕ್ಕೆ ಎಲ್ಲವೂ ಬೇಸರವೆನಿಸುವುದಿಲ್ಲ. ಬಾರಿ ಬಾರಿಗೂ ಬೇರೆ ಬಗೆಯ—ಬೇಕೆನಿಸುವ ಬಗೆಯ—ಬೆರಗನ್ನೇ ಕೊಡುವ ಕತೆಗಳೂ ಇರುವುದುಂಟು. ದೊಡ್ಡವರ ಮಾತು ಆ ಮಾದರಿಯದು. ಅವರ ಹಿರಿತನದ ಹಿತವು ಕಿರಿಯರ ಕೈಗೆ ಸರಿಯಾಗಿ ಬಾರದು. ಮೇರೆಯಿಲ್ಲದ ಮುಗಿಲ ಪಡಿನೆಳಲು ಹನಿ-ಹನಿಗೂ ಹೊಸ ಮಿರುಗಿನಿಂದ ಮೂಡಿ ತೋರುವುದಿಲ್ಲವೇ? ನಮ್ಮ ನಿಮ್ಮ ಬಾಯಿಗೆ ಅಂತಹ ಮಿಗಿಲಾದ ಕಲಿಗಳ ಕತೆಯೂ ಹಾಗೆಯೆ. ಈಗ ನಾನು ಹೇಳುವ ಕತೆಯಾದರೂ ಆ ಬಗೆಯೆ!

೧. ಮುಂಚ್ಚಿ ಬಂದ ಮರಣಪಾಶ

೧೯೪೦ನೆಯ ವರ್ಷದಲ್ಲಿ ಒದಗಿದ ದುರಂತವಿದು. ಅಂದು ಆಗಸ್ಟ್ ೨೦ನೆಯ ದಿನ. ಸಂಜೆಯ, ಐದು ಹೊಡೆದಿದೆ. **ಲಿಯೋನ್ ಟ್ರೊಟ್‌ಸ್ಕಿಯು** ಆದೇ ಚಹಾ ಕುಡಿದಾಯಿತು. ನಿತ್ಯ ನಿಯಮದಂತೆ ಅವನು, ಮನೆಯ ಹೊಸತಿಲನ್ನು ದಾಟಿ ಹೊರಗೆ—ಹಚ್ಚ ಹಸಿರು ಹಾಸಿದ ಮಾಟವಾದ—ಹೂದೋಟದಲ್ಲಿ ಬಂದು ಅಡ್ಡಾಡತೊಡಗಿದನು. ಟ್ರೊಟ್‌ಸ್ಕಿ ಅಚ್ಚು ಕೆಚ್ಚಿನ ಉರಿಗೆಂಪು ಸಮತಾವಾದಿ; ಆದರೂ ಸಿರಿವಂತರಿಗೂ ಮಿಗಿಲಾದ ಸವಿಗಾರಿಕೆಯ ತೂಕದಲ್ಲಿ, ಹೂದೋಟದ ಸೊಂಪು-ಸೊಬಗನ್ನು ಇದೀಗ ಉಪಭೋಗಿಸುತಿದ್ದನು! ಬಣ್ಣಬಣ್ಣದ ಸಾವಿರ ಕಣ್ಣುಗಳಿಂದ ಆತನನ್ನು ನೋಡಿ ತಲೆದೂಗಿ ನಲಿಯುವ ಹೂದೋಟವು, ಅಲ್ಲಿ ಆತನ ಆನಂದಕ್ಕಾಗಿ ಬೆಳೆದು ಕಾಯುತಿತ್ತು—ಬರೆ ಅನ್ನಕ್ಕಾಗಿ ಅಲ್ಲ! ಸಂಜೆಗೆಂಪಿನ ಚಿನ್ನದರಕದಲ್ಲಿ ತೊಯ್ದು ತೊನೆಯುವ ಆ ವಿಸ್ತೀರ್ಣ ತೋಟವು, ಸುತ್ತಲಿನ ಇಪ್ಪತ್ತು ಅಡಿ ಎತ್ತರದ ಕರಾಳ ಗೋಡೆಯ ಹಿನ್ನೆಲೆಗೆ ವಿಚಿತ್ರವಾಗಿ ಎಸೆಯುತ್ತಿತ್ತು. ಗೋಡೆಯಂಚಿಗೆ ಬೆಳೆದು ಬಲಿತು ನಿಂತ ಸಾಲು ಮರಗಳ ಅಲೆದಾಡುವ ನೆಳಲುಗಳು, ಸುಳಿಗಾಳಿಗೆ ಬಳುಕುವ ಹುಲ್ಲಿನಲ್ಲಿ ನಿಡಿದಾಗಿ ಚಾಚಿದ್ದುವು. ಮೇಲೆ ಮೆಕ್ಸಿಕೋ ನಗರದ ತಿಳಿ ನೀಲಿ ಮುಗಿಲು ಡಬ್ಬಾಗಿ ನಿಂತಿತ್ತು. ಅತ್ತಿತ್ತ ತರಲವಿರಲವಾದ ಹಿಂಜಿದ ಮಂಜಿನಂತಹ ಮೋಡಗಳ ತುಪ್ಪಳವು ಆ ನೀಲಿಯಲ್ಲಿ ತೇಲಾಡುತ್ತಿತ್ತು.

ಟ್ರೊಟ್‌ಸ್ಕಿಯು ಇದೆಲ್ಲ ಸೊಬಗನ್ನು ಮನದಣಿ ಸವಿಯುತ್ತ ಅಲೆದಾಡುತ್ತಿದ್ದನು. ಆತನ ಬಾಳೆಲ್ಲ ಒಳಸಂಚು-ಕೊಲೆ-ಹೊಂಚುಗಳ ಕ್ರಾಂತಿಭ್ರಾಂತಿಯ ಮಬ್ಬುಗವಿದ ಪ್ರಪಂಚದಲ್ಲಿಯೆ ಕಳೆದಿತ್ತು; ಆದರೆ ಈಗ ಆ ವಿಶ್ವವಿಖ್ಯಾತನಾದ ಕ್ರಾಂತಿ-ಪುರುಷನ ಬದುಕು ಒಂದುಬಗೆಯಾಗಿ ನೆಮ್ಮದಿ ಹೊಂದಿತ್ತು. ನಿದಾನವಾಗಿ ಸಾಗುತ್ತಲಿತ್ತು. ಆತನ ಅನುಯಾಯಿಗಳ ಸಮುದಾಯವೆಲ್ಲ ಸಿಡಿದು, ಬಿಡಿಯಾಗುತ್ತ ಬಂದು, ಈಗ ಒಂದು ಹಿಡಿಯಷ್ಟು ಏಕನಿಷ್ಠ ಭಕ್ತರ— ಪ್ರಭಾವವಿಲ್ಲದ ಕರ್ಮಠ ಶಿಷ್ಯರ—ಗುಂಪು ಆತನ ಹಿಂದೆ ಉಳಿದಿತ್ತು. ಆತನು ಬರೆದ ದೊಡ್ಡ ಹೊತ್ತಗೆಗಳನ್ನು ಇನ್ನೂ ಮಂದಿ ಮೆಚ್ಚುಗೆಯಿಂದ ಓದುವರು; ಆದರೆ ಅವುಗಳ ಕ್ರಾಂತಿಕಾರಕ ಅಭಿಪ್ರಾಯಕ್ಕಾಗಲ್ಲ; ಅವುಗಳ ಅಪ್ರತಿಮ ಪ್ರತಿಭಾಮಯವಾದ ಗದ್ಯಶೈಲಿಗಾಗಿ!

ಈಗ ಆತನ ವಯಸ್ಸು ೬೦. ಯಶಸ್ವಿಯಾದ ಬರಹಗಾರನೆಂದು, ಒಳ್ಳೇ ಪ್ರೀತಿಯ ಹೆಂಡತಿಯೊಡನೆ, ಉಪನಗರದ ಒಂದು ಪ್ರಶಸ್ತ ಭಾಗದಲ್ಲಿ, ಭದ್ರವಾದ ಪ್ರಾಸಾದದಲ್ಲಿ, ಸುಖವಾಗಿ ಬಾಳಲು ಸಾಕಾಗುವಷ್ಟು ಹಣವಂತಿಕೆಯಿಂದ ಲಿಯೋನ್ ಟ್ರೊಟ್‌ಸ್ಕಿಯು ಮೆಕ್ಸಿಕೋದಲ್ಲಿ ಇದ್ದನು. ಜಗತ್ತಿನ ಸುಖ-ವಸ್ತು ಮಧ್ಯಮವರ್ಗವನ್ನೇ ನಾಶಮಾಡಲು ಪಣತೊಟ್ಟು ಹೆಣಗಿದ ಆತನ ಎಲ್ಲ ಬಾಳಿನ ಯತ್ನವು, ಈಗ ಆತನನ್ನೇ ಆ ವರ್ಗದ ಒರ್ವ ಹೆಸರಾಂತ ಹಿರಿಯನನ್ನಾಗಿ ಮಾಡಿ ಸೇಡು ತೀರಿಸಿಕೊಂಡಿತ್ತು! ಆದರೆ ಇದನ್ನು ಆತನು ನಂಬುವುದಿಲ್ಲ; ಕ್ರಾಂತಿಯ ಕಳೆಗುಂದಿದ ಕಾಂತಿಯು ಇನ್ನೂ ಆತನ ಆಕೃತಿಯನ್ನು ಆವರಿಸಿದಂತಿತ್ತು. ನೆಲಮನೆ-ಸೆರೆಮನೆಗಳ ಧೂಳಿ-

ಗಂಪು ಇನ್ನೂ ಆತನ ದೇಹವನ್ನು ಅಂಟಿಕೊಂಡಂತಿತ್ತು. ಆ ಅಸಡ್ಡಾಳಾಗಿ ಬೆಳೆದ ಜುಟ್ಟಿನಂತಹ ಗಡ್ಡ, ಕೆದರಿದಂತೆ ಕೆರಳಿನಿಂತ ತಲೆಗೂದಲು, ಕಲಾವಿದರಿಗೆ ಒಪ್ಪುವ ಕೋಮಲವಾದ ನಿಡುಬೆರಳಿನ—ಚಂಚಲ—ಮುಂಗೈಗಳು, ಲಘುದೃಷ್ಟಿಯ ಹೊಳೆಯುವ ಕಣ್ಣುಗಳು—ಇವೆಲ್ಲ ಲಕ್ಷಣಗಳಲ್ಲಿಯೂ ಆತನ ಸಂಚುಗಾರನ ಅಂಜಿಕೆ-ಹೊಂಚುಗಾರಿಕೆಯ ಎಚ್ಚರಗಳ ಮೈಯುಂಡ ಚಟಗಳು ಒಡೆದು ಕಾಣುತಿದ್ದುವು. ಲಗುಬಗೆಯ ನಡಿಗೆಯಲ್ಲಿ ಜೋಳಿಯ ಹೆಜ್ಜೆಗಳನ್ನಿಡುತ್ತ ಅಲೆಯುವ ಆತನ ಉಬ್ಬಿದ ಹೆಗಲ ಉಬ್ಬಿದ ಎದೆಯ ಗಂಭೀರ ಮೈಕಟ್ಟು. ಆತನ ವ್ಯಕ್ತಿತ್ವದ ಔನ್ನತ್ಯದೊಡನೆ ವೃತ್ತಿಯ ಔದ್ಧತ್ಯವನ್ನೂ ಸೂಚಿಸುತಿತ್ತು. ಎಲ್ಲ ಆತಂಕವಾದಿಗಳಾದ ಕ್ರಾಂತಿಕಾರರನ್ನು ಬೇಟೆಯಾಡುವ ಭವಿತವ್ಯವೇ ಈತನನ್ನೂ ಬೆನ್ನಟ್ಟಿ, ದಿಶೆದಿಶೆಯಲ್ಲಿ ದೇಶದೇಶಗಳೊಳಗಿಂದ ಹಸಗೆಡಿಸಿ ಅಲೆದಾಡಿಸಿತ್ತು; ತುರ್ಕಸ್ತಾನದಿಂದ ಮೆಕ್ಸಿಕೋತನಕ ಆತನನ್ನು ಓಡಿಸಿತ್ತು. ಹಲವಾರು ವರ್ಷಗಳ ಈ ಅಜ್ಞಾತವಾಸದ ಆಯುಷ್ಯದಲ್ಲಿ ಆತನ ಮಗನೂ ಮನೆಯ ಬೇರೆ ಮಂದಿಯೂ—ಹೇಗೋ—ಒಬ್ಬೊಬ್ಬರಾಗಿ ಸಾವಿಗೀಡಾಗಿದ್ದರು. ಬರೇ ಮೂರುತಿಂಗಳು ಮುಂಚೆ ಕೊಲೆಗಡುಕನ ಏಟಿನಿಂದ ಆತನು ಕೂದಲೆಳೆಯಂತರದಲ್ಲಿಯೆ ಪಾರಾಗಿದ್ದನು. ಅವಿತು ಕಾಯುವ ಸಾವಿನ ಕೂರುಗುರಿನ ನೆಳಲಿನಲ್ಲಿಯೆ ಆತನು ಇದುವರೆಗೆ ಬಾಳನ್ನು ಕಳೆದಿದ್ದನು. ಮೆಕ್ಸಿಕೋ ನಗರವೆಲ್ಲ ತನ್ನ ಪ್ರತಿಪಕ್ಷಿ ಕಡುಹಗೆಗಳಾದ—ಸ್ಟಾಲಿನರ ಅನುಯಾಯಿ ಕರ್ಮಚಾರಿಗಳಾದ—ಸ್ತ್ರೀ-ಪುರುಷರ ಸುಳಿದಾಟಕ್ಕೆ ಎಡೆಯಾಗಿತ್ತೆಂದು ಆತನು ಅರಿತಿದ್ದನು. ಆದರೂ ಇಂದಿನ ಗಳಿಗೆಗೆ, ಸಂಜೆಯ ಬೆಳಕಿನಿಂದ ರಂಜಿತವಾದ ಆ ರಮ್ಯ ವೇಳೆಯಲ್ಲಿ, ನೆಮ್ಮದಿಯಾಗಿತ್ತು— ತೀರ ತೃಪ್ತವಾಗಿತ್ತು ಆತನ ಮನಸ್ಸು.

ಅದೇ ಅರ್ಧತಾಸು ಅನಂತರ ಆತನನ್ನು ಕಾಣಲು ಬಂದ **ಫ್ರ್ಯಾಂಕ್ ಜಾಕ್ಸನ್** ಎಂಬ ಯುವಕನು, ಟ್ರಾಟ್‌ಸ್ಕಿಗೆ ನಿರುಪದ್ರವಿಯಾಗಿ ಕಂಡನು. ತನ್ನ ಹಗೆಯ ಕರ್ಮಚಾರಿಗಳಲ್ಲಿ ಆ ಯುವಕನೆಂದು ಎಣಿಸಲಿಲ್ಲ. ನಗರದಲ್ಲಿ ಜಾಕ್ಸನ್‌ನನ್ನು ಕುರಿತು ಇಂತಹ ನಂಬಿಗೆ ಇರಲಿಲ್ಲ. ಆತನ ಚರಿತ್ರ ತುಸು ಸಂದೇಹಾಸ್ಪದವೇ ಎಂದು ಹಲವರಿಗೆ ಎನಿಸಿತ್ತು. ಒಮ್ಮೆ **ಲಿಯೋನ್ ಜೆಕೋವನ್**, ಇನ್ನೊಮ್ಮೆ **ಲಿಯೋನ್ ಹೈಕಿಸ್**, ಮತ್ತೊಮ್ಮೆ ಫ್ರೆಂಚ್ ಯಹೂದಿಯಂತೆ ತೋರುವ ಫ್ರಾನ್ಸಿಸ್— ಹೀಗೆ ಜಾಕ್ಸನ್‌ನು ಹೊತ್ತಿಗೊಂದು ರೂಪವನ್ನು ತೋರುತ್ತ, ಈಗ ಹೊತ್ತು ಕಂತುವಾಗ ಟ್ರಾಟ್‌ಸ್ಕಿಯ ಆವಾರವನ್ನು ಒಳಸೇರಿದ್ದನು. ಟ್ರಾಟ್‌ಸ್ಕಿಯೊ ... ಆತನನ್ನು ತನ್ನ ಒರ್ವ ಹೊಸ ಶಿಷ್ಯನೆಂತಲೂ, ತನ್ನನ್ನು ನಯ-ಭಯ-ಭಕುತಿಯಿಂದ ನೋಡಿ ನಡೆಯುವ ಬಿಸಿನೆತ್ತರಿನ ಭಾವನಾವಿವಶ-ಆರಾಧಕನೆಂತಲೂ ಮನವಾರೆ ತಿಳಿದಿದ್ದನು. ತನ್ನ ಪ್ರೀತಿಯ ಸಂಸ್ಥೆಯಾದ— ತನ್ನ ಅವತಾರಕಾರ್ಯದ ಸಾರಸರ್ವಸ್ವವೆನಿಸಿದ— ತನ್ನ ವಿಶ್ವಕ್ರಾಂತಿಯ ಕೇಂದ್ರವಾದ "ಚತುರ್ಥ ಆಂತರರಾಷ್ಟ್ರೀಯ"ದ ನಿರ್ವಾಹಕ್ಕಾಗಿ, ಈ ಹೊಸ ಯುವಕನು ಬಿಚ್ಚುಗೈಯಿಂದ ಹಣ ಕೊಡುವುದನ್ನು ಟ್ರಾಟ್‌ಸ್ಕಿಯು ಕಂಡಿದ್ದಿಲ್ಲವೇ? ಈಗ ಆರು ತಿಂಗಳ ಹಿಂದೆ ಈ ಜಾಕ್ಸನ್‌ನನ್ನು ಒರ್ವ ನಿಷ್ಠಾವಂತ ಸಾಮಾಜಿಕ ಕಾರ್ಯಕರ್ತನು ಕರೆತಂದು ಪರಿಚಯಮಾಡಿಕೊಟ್ಟಿದ್ದನು. ಫ್ರ್ಯಾಂಕನು ನೋಡಲು ಎತ್ತರ ಆಳು; ನಸುಗೆಂಪು ಬಣ್ಣದವ; ಕನ್ನಡಕವಿರಿಸಿಕೊಳ್ಳುವ ವ್ಯಾಸಂಗಶೀಲ ತರುಣ. ಯುಗೊಸ್ಲಾವ್ ರಕ್ತದವನು. ಕೆನಡಾದಿಂದ ಪ್ರವಾಸದ ಪಾಸುಪಡೆದು ಮೆಕ್ಸಿಕೋಕ್ಕೆ ಬಂದಿದ್ದನು. ತಕ್ಕಮಟ್ಟಿಗೆ ಇಂಗ್ಲಿಷ್ ಮಾತನಾಡಬಲ್ಲನು. ಟ್ರಾಟ್‌ಸ್ಕಿಯಿದ್ದಲ್ಲಿ ಬರಹೋಗಲು ನಿರಾತಂಕನಾಗಿದ್ದನು. ಹಗಲಿರುಳೂ ಗುರಿಗಣ್ಣಿನಿಂದ ಎಚ್ಚರಾಗಿ ಕಾವಲಿಟ್ಟ ಸಿಪಾಯಿಗಳೂ, ಸಾಯುಧರಾಗಿ ಸಾವಧವಾಗಿ ಟ್ರಾಟ್‌ಸ್ಕಿಯನ್ನು ನೋಡಿಕೊಳ್ಳುತ್ತಿದ್ದ ಕಾರ್ಯದರ್ಶಿಗಳೂ ಈ ವಿದೇಶೀಯ ತರುಣನನ್ನು ಅಡ್ಡಿತಡೆಯಿಲ್ಲದೆ ಬರಹೋಗಲು ಬಿಟ್ಟಿದ್ದರು.

೨. ಶಿಷ್ಯತ್ವದಲ್ಲಿ ಹುದುಗಿದ ಶತ್ರುತ್ವ

ಸಾಹಿತ್ಯ ಪ್ರೇಮಿಗಳೆಂದರೆ ಸಾಹಿತಿಗಳಿಗೆ ಒಡಹುಟ್ಟಿದವರಂತೆ. ಅದರಲ್ಲೂ ತಮ್ಮ ಸಾಹಿತ್ಯವನ್ನು ಮೆಚ್ಚಿ ಮಾತನಾಡುವವರೆಂದರೆ ಮುದ್ದುಮಕ್ಕಳಂತೆ. ಅಂಥವರಲ್ಲಿಯೂ ಒಬ್ಬರು ಹೊಸ ಹುರುಪಿನ ಸಾಹಿತಿಯಾಗುವವರೆಂಬುದು ಕಂಡರೆ ಮತ್ತೆ ಕೇಳಬೇಕೇ? ಇದೆಲ್ಲ ಯೋಗ ಟ್ರಾಟ್‌ಸ್ಕಿ-ಜಾಕ್ಸನ್ನರ ಭೆಟ್ಟಿಯಲ್ಲಿ ಕೂಡಿಬಂತು. ತನ್ನ ಒಂದು ಬರೆಹದ ಕುರಿತು ಹರಯದ ಸಾಹಿತಿಯು ಹಿರಿಯ ಸಾಹಿತಿಯ ವಿಮರ್ಶೆಯನ್ನು ಕೇಳಿಕೊಂಡನು. ಆಯಿತು, ಪ್ರತಿಭಾಪುರುಷನಾದ ಟ್ರಾಟ್‌ಸ್ಕಿಯು ಪ್ರಸನ್ನನಾಗಿ ಆ ಯುವಕನನ್ನು ತನ್ನ ಮನೆಗೆ ಬರಲು ಹೇಳಿದನು. ಇಬ್ಬರೂ ಒಳಗೆ ಬಂದರು. ಜಾಕ್ಸನ್ನನು ಮುಂದಿದ್ದನು. ಆತನ ತೋಳಿನ ಮೇಲೆ ಮೇಲಂಗಿಯು ತೂಗುಬಿದ್ದಿತ್ತು. ಒಳಗೆ ಬಂದೊಡನೆ ಊಟದ ನಡುಮನೆಯಲ್ಲಿ, **ನತಾಲೀ ಸೆಡೋವಾ**— (ಶ್ರೀಮತೀ ಟ್ರಾಟ್‌ಸ್ಕಿಯವರು)— ಅವರಿರ್ವರಿಗೆ ಎದುರಾದಳು; ರಷಿಯನ್ ಪದ್ಧತಿಯಂತೆ ಒಂದು ಕಾಚು ತುಂಬ ಚಹವನ್ನು ತಂದು ಅತಿಥಿ ಯುವಕನಿಗೆ ಆಕೆ ಕೊಟ್ಟಳು. ಆದರೆ ಯುವಕನು ಸಾಧುಜೀವಿ. ಅವನಿಗೆ ನೀರೇ ಕುಡಿಯುವ ರೂಢಿ. ಒಂದು ಲೋಟ ತಿಳಿನೀರನ್ನು ಬೇಡಿಕೊಂಡು ನಿಂತಲ್ಲಿಯೆ ಕುಡಿದನು. ಕುಡಿಯುವಾಗಲೂ ತೋಳಿನ ಮೇಲೆ ತೂಗುಬಿಟ್ಟ ಮೇಲಂಗಿಯನ್ನು ಆತನು ತೆಗೆದಿಡಲಿಲ್ಲ. ಬರೇ ಬಲತೋಳಿನಿಂದ ಎಡತೋಳಿಗೆ ಅದನ್ನು ಸ್ಥಳಾಂತರಿಸಿದನು. ಅಲ್ಲಿಂದ ಟ್ರಾಟ್‌ಸ್ಕಿಯು ಜಾಕ್ಸನ್‌ನೊಡನೆ ತನ್ನ ಓದುಬರೆಹದ ಕೊಠಡಿಗೆ ಹೋದನು. ಜಾಕ್ಸನ್‌ನು ಮೇಲಂಗಿಯನ್ನು ಕೆಳಕ್ಕಿಡಲಿಲ್ಲ.

ಕೊಠಡಿಯು ತೀರ ಬರಿಯದಾಗಿತ್ತು. ನೆಲ-ಗೋಡೆಗಳನ್ನು ಓರಣಗೊಳಿಸುವ ಯಾವುದೇ ಅಂದ-ಚಂದದ ಹಾಸು-ಹರಹುಗಳಿದ್ದಿಲ್ಲ. ಕೆನೆಬಣ್ಣದ ಗೋಡೆಗೆ ಒಂದೆಡೆಗೆ ದೊಡ್ಡ ಮೆಕ್ಸಿಕೋ ದೇಶದ ನಕಾಶೆಯೊಂದನ್ನು ತೂಗು ಹಾಕಿತ್ತು. ನೆಲದ ಮೇಲೆ ನಟ್ಟನಡುವೆ ಒಂದು ಉದ್ದನೆಯ ಮೇಜು ಇತ್ತು. ಹಲವಾರು ಪುಸ್ತಕಗಳೂ ಬರೆದಿಟ್ಟ ಹಾಳೆ-ಹೊತ್ತಿಗೆಗಳೂ ಮೇಜನ್ನು ತುಂಬಿ ಅಸ್ತವ್ಯಸ್ತವಾಗಿ ಹರಡಿಬಿದ್ದಿದ್ದುವು. ಟ್ರೊಟ್‌ಸ್ಕಿಯು ನೇರವಾಗಿ ಮೇಜಿನ ಬಳಿಗೆ ಬಂದು ಕುಳಿತು, ತರುಣನು ತಂದ ಬರೆಹವನ್ನು ಓದಿನೋಡಲು ತೊಡಗಿದನು. ತರುಣ ಗೆಳೆಯನು ವಿನಯದಿಂದ ನಿಂತೇ ಉಳಿದನು; ಆದರೆ ಆ ಮಹಾಪುರುಷನ ಮಗ್ಗುಲಿಗೆ ತುಸು ಹಿಂದೆನಿಂತು, ಆತನ ಹೆಗಲಮೇಲಿಂದ ಹಣೆಯಿಕ್ಕಿ ನೋಡುತ್ತ ನಿಂತನು. ತನ್ನ ಎಡ ಹೆಗಲಮೇಲಿನ ಮೇಲಂಗಿಯೊಳಗೆ ಕೈಹಾಕಿ ಏನನ್ನೋ ಅರಸಿ ತೆಗೆದನು. ಅಂಗಿಯೊಳಗೆ ಒಂದು ಕಿರಿಯ ತುಪಾಕಿ, ಒಂದು ಕಠಾರಿ, ಮತ್ತು ಸುತ್ತಿಗೆಯಂತಹ ಭಾರವಾದರೂ ಮೊನೆಯಾದ (ಕಲ್ಲು ಒಡೆಯುವ) ಒಂದು ವಸ್ತು—ಇವಿಷ್ಟು ಇದ್ದುವು. ಆತನು ಆ ಮೊನೆಯಾದ ಸುತ್ತಿಗೆಯನ್ನೇ ಹೊರತೆಗೆದನು. ಅದರಿಂದ ಕೆಲಸ ಸಾಗುವಂತಿದ್ದರೆ ಸದ್ದಿಲ್ಲದೆ, ಒಂದೇ ಏಟಿಗೆ ತನ್ನ ಹೇತು ಸಾಧಿಸುವುದೆಂದು ತರುಣನ ತೀಕ್ಷ್ಣ ತಿಳಿವಳಿಕೆಗೆ ತೋಚಿತು.

" ಈ ಬಾರಿ ಕೈಗೂಡಲೇ.... " ಆದರೆ ಹದಗೇಡಿಗೆ ಯಾವುದು ಕೂಡುವುದು ? ಫ್ರ್ಯಾಂಕ್ ಜಾಕ್ಸನ್‌ನೂ ಟ್ರೊಟ್‌ಸ್ಕಿಯಂತೆ ಸಂಚು-ಹೊಂಚುಗಳ ಮಬ್ಬುಗತ್ತಲಲ್ಲಿಯೆ ಬಾಳಿ ಬಂದ ಪ್ರಾಣಿ. ಕೂಟತಂತ್ರದ ಮಂತ್ರಾಲೋಚನೆಯಷ್ಟೇ ಆತನಿಗೆ ಗೊತ್ತು. ಒಬ್ಬ ಬಲಿಷ್ಠ ಆಳನ್ನು ಹೊಡೆದು ಕೆಡಹಲು ಎಂತಹ ಏಟನ್ನು ಕೊಡುವುದೆಂಬುದು ಕತ್ತಿ-ಕುಡುಗೋಲಿನ— ಕೂಲಿ-ಕೆಲಸದ— ಬಂಟರೇ ಬಲ್ಲರು. ಏಟಿನ ಕೈಯ ಹಿಂದೆ ಮೈಯ ಕಸುವಿನ ಭಾರವೆಲ್ಲ ಕೂಡಿರಬೇಕು. ಅಷ್ಟು ಹದ ಫ್ರ್ಯಾಂಕನ ಏಟಿನಲ್ಲಿ ಇಳಿಯಲಿಲ್ಲ. ಆ ಸುತ್ತಿಗೆಯ ಮೊನೆಯು ಹರಿತವಾಗಿತ್ತು. ಅದು ಟ್ರೊಟ್‌ಸ್ಕಿಯ ತಲೆಯ ಕವಚವನ್ನು ಸೀಳಿ ಒಳಸೇರಿತು. ಆದರೆ ಏಟಿನಲ್ಲಿ ತತ್‌ಕ್ಷಣ ಸಾವು ತರುವಷ್ಟು ಬಲುಮೆಯಿದ್ದಿಲ್ಲ. ಟ್ರೊಟ್‌ಸ್ಕಿಯು ಮುಗ್ಗರಿಸಿ ಬೀಳಲಿಲ್ಲ. ತನ್ನ ತಲೆಗೆ ಆಳವಾದ ಏಟಾಗಿದೆಯೆಂದು ಕೂಡ ಆತನಿಗೆನಿಸಲಿಲ್ಲ. ತನಗೆ ಗುಂಡು ಹೊಡೆದನೆಂದು ಭಾವಿಸಿದನು. ಜಗ್ಗನೆ ಖುರ್ಚಿಯಿಂದ ಎದ್ದು, ಚಿರ್ಚನಂತೆ ತನ್ನ ತಲೆ ಹೊಡೆಯುವವನ ಮೇಲೆ ಮುರಿದುಬಿದ್ದನು. ಆ ಮುದಿ ಸಿಂಹದ ರುದ್ರ-ರಭಸಕ್ಕೆ ತರುಣನ ಉತ್ಸಾಹವು ಕೂಡ ಕುಗ್ಗಿದಂತಾಯಿತು. ಬಳಿಯಲ್ಲಿ ಕಠಾರಿ—ಪಿಸ್ತೂಲುಗಳಿದ್ದರೂ, ಕೈಯಲ್ಲಿ ಎತ್ತಿದ ಸುತ್ತಿಗೆಯು ಇದ್ದರೂ, ತನ್ನೊಡನೆ ಹೋರಾಡುವ ಆ ಮುದುಕನನ್ನು ಹೇಗೆ ಹಿಡಿತದಲ್ಲಿಡುವುದೆಂಬುದೇ ಆತನಿಗೆ ತೋಚದಾಯಿತು. ಆತನು ಪೌಹಾರ ಎದೆಗುಂದಿ, ಅಷ್ಟಿಷ್ಟ ಗುದ್ದಾಡಹತ್ತಿದನು. ಟ್ರೊಟ್‌ಸ್ಕಿಯು ಚೀರುತ್ತ ಕೆಲೆಯುತ್ತ, ಊಟದ ನಡುಮನೆಯಲ್ಲಿ ಹೇಗೋ ತಡವರಿಸುತ್ತ ನುಗ್ಗಿ ಬಂದನು. ಆತನನ್ನು ಬೆನ್ನಟ್ಟುವ ಕೊಲೆಗಡುಕ ಜಾಕ್ಸನ್‌ನನ್ನು, ಸಾಧ್ವೀ ನತಾಲಿಯು ಅಡ್ಡಬಂದು, ಎದುರು ಬಿದ್ದು ಅಪ್ಪಿ ಹಿಡಿದು ಕೆಡಹಿ ತಡೆಯಲು ಬಾಗಿಲಲ್ಲಿಯೆ ಹೆಣಗಾಡಿದಳು. ಅಷ್ಟರಲ್ಲಿ—ಇಷ್ಟಾದನಂತರ!— ಅಂಗರಕ್ಷಕರಾದ **ಜಾಕ್ ಕೂಪರ್** ಮತ್ತು **ಜೋಸೆಫ ಹೆನ್‌ಸೆನ್**‌ರು ಓಡಿಬಂದರು. ಜಾಕ್ಸನ್‌ನನ್ನು ದೊಣ್ಣೆಯಿಂದ ಹೊಡೆದು ಕೆಡಹಿ ಕೂಪರನು ಆ ಮತಿಗೇಡಿಯ ತಲೆ, ಮೈಗಳನ್ನು ಮತ್ತೆ ಮತ್ತೆ ಒದೆದನು. ಜೋಸೆಫ್‌ನು ಟ್ರೊಟ್‌ಸ್ಕಿಯನ್ನು ಮೆಲ್ಲಗೆ ನೆಲಕ್ಕೆ ಮಲಗಿಸಿದನು. ಒಡೆದ ತಲೆಯಿಂದ ಬಸಿದು ಮಡುಗೊಳ್ಳುವ ನೆತ್ತರದಲ್ಲಿ ನರಳುತ್ತ ಉರುಳುತ್ತ ಟ್ರೊಟ್‌ಸ್ಕಿಯು ಕೂಪರನನ್ನು ಹತ್ತಿರ ಕರೆದನು. ತಲೆ ಒಡೆದರೂ ತಲೆಗಾರಿಕೆಯು ತೀಕ್ಷ್ಣವಾಗಿಯೆ ಇತ್ತು! " ಆತನನ್ನು ಕೊಲ್ಲಬೇಡಿರಿ. ಆ ಯುವಕನು ತನ್ನ ಕತೆಯನ್ನು ಹೇಳುವನು. ಅದನ್ನು ಕೇಳಿಕೊಳ್ಳಿರಿ! " ಎಂದು ಹೇಳಿದನು.

ಟ್ರೊಟ್‌ಸ್ಕಿಯು ಇತಿಹಾಸಪುರುಷನಿದ್ದಂತೆ ಇತಿಹಾಸಕಾರನೂ ಆಹುದು. ಜಾತಿವಂತ ಇತಿಹಾಸಕಾರನು. ತನ್ನ ಸಾವಿನೆದುರು ಕೂಡ ಅದರ ಹಿಂದಿನ ಇತಿಹಾಸವನ್ನು ಕಾದಿಡುವ ಎಚ್ಚರ ಮರೆಯಲಿಲ್ಲ. ತನ್ನ ಕೊನೆಯೂ ಇತಿಹಾಸವಾಗಿ ನಿಲ್ಲಬೇಕೆಂದು ಆ ಮಹಾಭಿಮಾನಿ ಮಹಾನುಭಾವನ ಆಶೆ! ಆತನ ಬಳಿ ಕಳವಳದಿಂದ ಕಂಬನಿ ಮಿಡಿಯುತ್ತ, ಆತನನ್ನೇ ದಿಟ್ಟಿಸಲು ಬಾರಿಬಾರಿಗೂ ಬಾಗಿ ಮೈದಡವುತ್ತಿರುವ ಸತಿ ನತಾಲಿಯನ್ನು ಬಳಿಗೆ ಕರೆದು, ಟ್ರೊಟ್‌ಸ್ಕಿಯು ಕೊಠಡಿಯೊಳಗಿನ ಘಾತದ ಕತೆಯನ್ನು ಅರುಹಲೂ ಮರೆಯಲಿಲ್ಲ. ತನ್ನ ತಲೆಗೆ ಬೆರಳಿಟ್ಟು ನಿಡಿದಾಗಿ ಸುಯ್ದು ನುಡಿದನು: " ನನಗಿಲ್ಲಿ ಎನಿಸುತ್ತದೆ, ಅವರು ಈ ಬಾರಿ ಗೆದ್ದರು! "

ಆತನ ತಲೆಯು ಸೀಳಿಹೋಗಿತ್ತು. ಮಿದುಳಲ್ಲಿ ಆಳವಾದ ಗಾಯವಾಗಿತ್ತು. ಕಾಳಮೃತ್ಯುವಿನ ಹೆಪ್ಪುಗಟ್ಟುವ ಕೈಯ ಸೋಂಕು, ಆತನ ಮೈಯನ್ನು ಆವರಿಸುತ್ತಲಿತ್ತು. ಆತನ ಎಡ-ಭಾಗವೆಲ್ಲ ಜಡ— ಬಧಿರವಾಗುತ್ತ ನಡೆದಿತ್ತು. ಆದರೂ ಸಾಗಿ ಬರುವ ಸಾವಿಗೆ ತನ್ನ ಹಟದ ಎಲ್ಲೆಯನ್ನು ಮೀರಬರಲು ಆ ಕರ್ಮಯೋಗಿಯು ಬಿಡಲಿಲ್ಲ. ತನ್ನ ತೀರಹೋಗುವ ಪ್ರಾಣವನ್ನೆಲ್ಲ ಕೇಬರಿಸಿ, ಪ್ರಾಣಪ್ರಜ್ಞೆಯನ್ನು ಆತನು ಅಂಟಿಕೊಂಡಿದ್ದನು. ಆತನು ಇನ್ನೂ ಒಂದು ಮಾತನ್ನು ಉಸಿರುವುದಿತ್ತು. ಗ್ರೀನ್‌ಕ್ರೋಸ ಆಸ್ಪತ್ರೆಯಲ್ಲಿ, ತನ್ನ ಅಂಗರಕ್ಷಕ ಹೆನ್‌ಸೆನ್‌ನನ್ನು ಕರೆದು ಟ್ರೊಟಸ್ಕಿಯು, ನಿಚ್ಚಳಮನದ ನಿವೇದನೆಯನ್ನು ಅರುಹಿದನು. ಅದು ಹೀಗೆ:

" ನನ್ನ ಕೊಠಡಿಯಲ್ಲಿ ನನ್ನನ್ನು ಒರ್ವ ರಾಜಕೀಯ ಕೊಲೆಗಡುಕನು ಹೊಡೆದನು. ಆತನ ಏಟಿನಿಂದ ನಾನು ಸಾವಿಗೆ ನೆರ-

ಯಾಗಿದ್ದೇನೆ. ನಾನು ಆತನೊಡನೆ ಹೋರಾಡಿದೆನು. ಆತನು ಫ್ರೆಂಚ್ ಸಂಖ್ಯಾಶಾಸ್ತ್ರವನ್ನು ಕುರಿತು ಮಾತನಾಡಲು ಕೊಠಡಿಯೊಳಗೆ ಬಂದಿದ್ದನು. ಅವನು ನನ್ನನ್ನು ಕೊಂದನು. ದಯೆಮಾಡಿ ನನ್ನ ಗೆಳೆಯರಿಗೆ ಹೇಳಿ: ಚತುರ್ಥ '**ಅಂತರ್‌ರಾಷ್ಟ್ರೀಯ**' ಸಂಸ್ಥೆಯ ಕೊನೆಯ ಗೆಲುವಿನ ಕುರಿತು ನನಗೆ ನಿಶ್ಚಯವಿದೆ. ಮುಂದೆ ಸಾಗಿರಿ!—ಎಂದು."

೩. ಮರಣವನ್ನು ತಡೆದ ಸ್ಮರಣ

ನಾಲ್ಕು ಅಂತರ್‌ರಾಷ್ಟ್ರೀಯ ಸಂಸ್ಥೆಗಳು! ಸುಮಾರು ೨೬ ಗಂಟೆ ೩೦ ಮಿನಿಟುಗಳವರೆಗೆ, ಲಿಯಾನ್ ಟ್ರಾಟ್‌ಸ್ಕಿಯು ಛಲದಿಂದ ಬಾಳನ್ನು ಅಂಟಿಕೊಂಡು ಉಳಿದನು. ಹದಿನೇಳು ವರ್ಷ ಪ್ರಾಯದಲ್ಲಿ ಕ್ರಾಂತಿಯ ರಕ್ತದೀಕ್ಷೆಯನ್ನು ಪಡೆದ ಮೊದಲಿನಿಂದ ಇದುವರೆಗೆ— ಆಯುಷ್ಯವೆಲ್ಲ—ದಣಿಯದೇ ಮಣಿಯದೇ, ಬಂದುದಕ್ಕೆಲ್ಲ ಅಣಿಯಾಗುತ್ತ, ಒಂದೇ ಬಗೆಯಾಗಿ ಮುಂದುವರಿವುದರಲ್ಲಿ ಮೂಡಿದ ಆತನ ಜಿಬುಟು ಜೀವನವು ಆ ಸಾವಿನ ಸೆಣಸಾಟದಲ್ಲಿಯೂ ಬಿಗುವಾಗಿ ಇತ್ತು. ಆಸ್ಪತ್ರೆಯಲ್ಲಿ ಆತನ ಮಿದುಳಿನ ಮೇಲೆ ಎರಡು ಶಸ್ತ್ರಕ್ರಿಯೆಗಳಾದುವು. ಆತನ ಪಕ್ಕದ ಕೋಣೆಯಲ್ಲಿಯೆ ಪೆಟ್ಟು ತಿಂದು ನುಗ್ಗಾದ ಆತನ ಕೊಲೆಗಾರನೂ ಉಪಚಾರ ಪಡೆಯುತ್ತಿದ್ದನು! ನಟಾಲೀ ಸೆಡೊವಾಳು ಆತನ ಬದಿಯಿಂದ ತುಸುವೂ ಕದಲಲಿಲ್ಲ. ಹಸೆಯಲ್ಲಿ ಮಲಗಿಸಿದೊಡನೆಯೆ ಆತನ ಎಚ್ಚರು ತಪ್ಪಿತು. ಮೈಮರೆವಿನ ಆ ಮರಣಾಂತಿಕ ಮಬ್ಬಿನಲ್ಲಿ ಮನುಷ್ಯನ ಮನಸ್ಸಿನ ತೆರೆಯಲ್ಲಿ, ಅಳಿದು ಹೋಗಲಿರುವ ಜೀವಜ್ಯೋತಿಯ ಕೊನೆಯ ಭುಗಿಲೆದ್ದ ಬೆಳಕಿನಲ್ಲಿ, ಆತನ ಕಳೆದು ಹೋದ ಬದುಕಿನ ಚಿತ್ರಪಟವು ಒಮ್ಮೆ ಕಳೆಗೊಂಡು ಹೊಳೆದು ಮಾಯವಾಗುತ್ತಿರುವುದಾದರೆ, ಅಂದು ಸಾವಿನ ತೊಡೆಯ ಮೇಲೆ ಸ್ಮೃತಿಗೆಟ್ಟು ಸೋತುಬಿದ್ದ ಟ್ರಾಟ್‌ಸ್ಕಿಯ ಒಳಗಣ್ಣಿಗೆ ಎಷ್ಟು ವಿವಿಧ—ಎಷ್ಟು ವಿಚಿತ್ರ—ಚರಿತ್ರ ಚಿತ್ರಗಳು ಮಿಂಚಿ ಮಂದವಾಗಿರಬಹುದು?

ಆತನ ಮೊದಲನೆಯ ಪ್ರವಾಸ.—ಆಗಿನ್ನೂ ಅವನ ಹೆಸರು ಟ್ರಾಟ್‌ಸ್ಕಿಯಲ್ಲ. ೯ ವರ್ಷ ಪ್ರಾಯದ **ಲೆವ್ ಡೆವ್ಹಿಡೊವಿಚ್ ಬ್ರೊನ್‌ಸ್ಟಿನ್**‌ನು, ದೂರದ ಖೆರ್ಸನ್ ಪ್ರಾಂತದಿಂದ ಒಡೆಸಾದಲ್ಲಿದ್ದ ಶಾಲೆಯನ್ನು ಸೇರಲು ನಡೆದು ಬಂದ ಮನೆಹೊರಬಿದ್ದ ಮೊದಲು ಅನುಭವ.—ಅನಂತರ ನಿಕೊಲಾಯೆವ್ ಶಾಲೆಯಲ್ಲಿ ೭ ನೆಯ ಇಯತ್ತೆಯಲ್ಲಿದ್ದಾಗ, ಮೊತ್ತ ಮೊದಲು ಮಾರ್ಕ್ಸ್‌ವಾದದೊಂದಿಗೆ ಒದಗಿದ ಸಂಸರ್ಗ. ಅಂದು ಸೆರೆಮನೆಯ ಕತ್ತಲೆ ಕೋಣೆಯಲ್ಲಿ **ವೆಟೋವಾ** ಎಂಬ ವೀರಾಂಗನೆಯು ಸುಟ್ಟುಕೊಂಡು ಸತ್ತಳೆಂಬ ರೋಮಾಂಚಕಾರಿಯಾದ ಕಥೆಯನ್ನು ಕೇಳಿ, ನವಯುವಕ ಟ್ರಾಟ್‌ಸ್ಕಿಯು (ಆಗಿನ ಡೆವ್ಹಿಡೊವಿಚ್‌ನು), ಕ್ರಾಂತಿವಾದದ ದೀಕ್ಷೆಯನ್ನು ಪಡೆದದ್ದು.—ಆ ಮೇಲೆ ೧೮೯೮ ರಲ್ಲಿ ಆತನ ಮೊದಲನೆಯ ಬಂದಿವಾಸ. ಮಾಸ್ಕೋದ ಸೆರೆಮನೆಯಲ್ಲಿಯೆ ಪ್ರಣಯದ ಅರಮನೆಯನ್ನೇರ್ಪಡಿಸಿ ಅಲೆಕ್ಸಾಂಡ್ರಾ ಎಂಬವಳನ್ನು ತನ್ನ ಹೃದಯದರಸಿಯನ್ನಾಗಿ ಮಾಡಿದ್ದು—ಆ ಮೇಲೆ ೧೯೦೦ ರಲ್ಲಿ ಸೈಬೇರಿಯಾದ ಚಳಿಗಾಡಿನಲ್ಲಿ ಹದ್ದುಪಾರಿನ ಶಿಕ್ಷೆ.—ಅಲ್ಲಿಂದ ೧೯೦೨ ರಲ್ಲಿ ನೆಟ್ಟಗೆ ಇಂಗ್ಲೆಂಡಿಗೆ ಪಲಾಯನ— ಆ ಪಲಾಯನದಲ್ಲಿ ಅಲೆಕ್ಸಾಂಡ್ರಾಳನ್ನು ಕಳಕೊಂಡರೂ, ಪ್ರವಾಸದ ಪಾಸಿವಾಗಿ 'ಟ್ರಾಟ್‌ಸ್ಕಿ' ಎಂಬ ಹೊಸ ಹೆಸರನ್ನು ಇಟ್ಟುಕೊಂಡು, ಅದರಿಂದಲೆ ಹೆಸರುವಾಸಿಯಾದದ್ದು— ಮುಂದೆ ಮುಖ್ಯ ಪ್ರಸಂಗವೆಂದರೆ ಲಂಡನಿನಲ್ಲಿ ಕ್ರಾಂತಿವಿಭೂತಿಯಾದ ಲೆನಿನ್‌ನನ್ನು ಕಂಡು, ಕೂಡಿದ್ದು....

೧೮೬೪ ರಲ್ಲಿಯೆ 'ಪ್ರಥಮ ಅಂತರ್‌ರಾಷ್ಟ್ರೀಯ' ಎಂಬ ಸಂಸ್ಥೆಯು' ಜಗತ್ತಿನ ಕೆಲಸಗಾರರನ್ನೆಲ್ಲ ಸ್ವತಂತ್ರರನ್ನಾಗಿ ಸಾರ್ವಭೌಮರನ್ನಾಗಿ ಮಾಡಲಿಕ್ಕೆ] ಮಾರ್ಕ್ಸ್ ಮತ್ತು ಎಂಜಲ್ಸ್‌ರ ಸಾಮ್ಯವಾದಿ ಘೋಷಣಾಪತ್ರದ ತತ್ತ್ವಗಳನ್ನನುಸರಿಸಿ ಸ್ಥಾಪಿತವಾಗಿತ್ತು. ಆದರೆ ಅದು ಎಂದೋ ಬರಿಮಾತಿನಲ್ಲಿಯೇ ಮರಣ ಹೊಂದಿತ್ತು. ಅನಂತರ ೧೮೮೯ ರಲ್ಲಿ, ಪ್ಯಾರಿಸ್ ಪಟ್ಟಣದಲ್ಲಿ ದ್ವಿತೀಯ ಅಂತರ್‌ರಾಷ್ಟ್ರೀಯ ಸಂಸ್ಥೆಯು ಉಂಟಾಯಿತು. ಲೆನಿನ್ ಮತ್ತು ಟ್ರಾಟ್‌ಸ್ಕಿಯವರಿಬ್ಬರೂ ಇದಕ್ಕಾಗಿ ದುಡಿದರು. ಆ ಸಂಸ್ಥೆಯೆಂದರೆ ಸರಿಯಾದ ಕಟ್ಟುನಿಟ್ಟು ಇಲ್ಲದ—ಹಲವು ರಾಷ್ಟ್ರೀಯ ಕೆಲಸಗಾರ ಸಂಘಗಳೂ ಸಮಾಜವಾದದ ಕಡೆಗೆ ಹೆಚ್ಚು ಕಡಿಮೆ ಒಲಿದ ಪಕ್ಷಗಳೂ ಕಲೆತು ಆದ—ಒಂದು ಪರಿಷತ್ತಿನಂತೆ ಇತ್ತು. ಈ ಸಂಸ್ಥೆಯಲ್ಲಿ ರಶಿಯನ್ ಪಕ್ಷಗಳೇ ತೀರ ಹುರಿಗೊಂಡ ಉರಿಗೆಂಪು ಕ್ರಾಂತಿವಾದಿಗಳಾಗಿದ್ದುವು.

ಮೆಕ್ಸಿಕೋ ನಗರದಲ್ಲಿ ಮರಣಾಂತಿಕ ಮೂರ್ಛೆಯಲ್ಲಿ ಮಲಗಿದ ಆ ಮಹಾನುಭಾವನ ಮನಸ್ಸಿನ ಮಸುಕು ಕನ್ನಡಿಯಲ್ಲಿ, ಮುಂದಿನ ಅದ್ಭುತರಮ್ಯವಾದ ರಶಿಯನ್ ಕ್ರಾಂತಿಯುದ್ಧಗಳ ನೋಟಗಳು, ಉರಿಯುವ ಪಂಜುಗಳಂತೆ ಬಿಂಬಿತವಾಗಿ ಹೋಗಿರಬಹುದು. ೧೯೦೫ ರ ಅಪಯಶಸ್ವಿಯಾದ ರಶಿಯನ್ ಕ್ರಾಂತಿಯ ಪ್ರಯತ್ನವು— ಅದರ ಪರಿಣಾಮವಾಗಿ ಆತನು ಮತ್ತೊಮ್ಮೆ ಸೈಬೇರಿಯಾದ ಹಿಮದ ಬಯಲಲ್ಲಿ ಗಡಿಪಾರಿನ ದಂಡ ಅನುಭವಿಸಬೇಕಾದುದು— ಅಲ್ಲಿಂದ ಮತ್ತೆ ಮೊದಲಿನಂತೆ ಪಲಾಯನ— ಈ ಬಾರಿ ವಿಯೆನ್ನಾ ನಗರಕ್ಕೆ. ಅಲ್ಲಿ ನಿಂತು ಸುಪ್ರಸಿದ್ಧ 'ಪ್ರವದಾ' ಪತ್ರಿಕೆಗಾಗಿ ಲೇಖನ— ಮುಂದೆ ೧೯೧೨ರಲ್ಲಿ, ಕಾನ್‌ಸ್ಟಾಂಟಿನೋಪಲ್‌ನಿಂದ ಬಾಲ್ಕನ್ ಯುದ್ಧಗಳ ವಿವರವನ್ನು ವರ್ಣಿಸಲು ವಿಶೇಷ ಸುದ್ದಿಗಾರನಾಗಿ ಕೆಲಸ ಮಾಡಿದ್ದು—ಅನಂತರ ಜ್ಯೂರಿಚ್ ಪ್ಯಾರೀಸ್‌ಗಳಲ್ಲಿ ಹಲಕೆಲವು ಒಳಸಂಚುಗಳನ್ನು ಹೂಡಿದ್ದು— ೧೯೧೬ ರಲ್ಲಿ ಅಂತಹ ಉಪದ್ವ್ಯಾಪಕ್ಕಾಗಿ ಫ್ರಾನ್ಸಿನಿಂದ ಹೊರಗೆ ಅಟ್ಟಲ್ಪಟ್ಟದ್ದು—ಮುಂದೆ ಸ್ಪೇನ್‌ನಲ್ಲಿ ವಾಸ.......ಆ ಮೇಲೆ ಅಮೇರಿಕೆಯಲ್ಲಿ ವಿಚಿತ್ರ ಅವತಾರ ಪಡೆದದ್ದು; ರಂಗಭೂಮಿಯ ಮೇಲೆ ನಾಯಕ-

ಭೂಮಿಕೆಗಳನ್ನು ನಟಿಸಿದ್ದು; ಉಪಾಹಾರಗೃಹದಲ್ಲಿ ಪರಿಚಾರಕನಾಗಿ ಉಳಿದದ್ದು; ಕೆಲಕಾಲ ಸಂಪಾದಕನಾಗಿ ವೃತ್ತಪತ್ರ ನಡೆಯಿಸಿದ್ದು ;— ಆ ಮೇಲೆ ಮತ್ತೆ ರಷಿಯಾಕ್ಕೆ ಮರಳಿಬಂದು, ೧೯೧೭ ನೆಯ ವರ್ಷದ ಮಾರ್ಚ್ ತಿಂಗಳಲ್ಲಿ ಒದಗಿದ ಕ್ರಾಂತಿ-ಪ್ರಯತ್ನದ ನಂತರ ಲೆನಿನ್‌ನನ್ನು ಕೂಡಿದ್ದು— ಅಕ್ಟೋಬರಿನ ವಿಶ್ವವಿಖ್ಯಾತ ಕ್ರಾಂತಿಯನ್ನು ಜರುಗಿಸಲು ಹೆಣಗಿದ್ದು— ಜರ್ಮನಿಯೊಂದಿಗೆ ಶಾಂತಿಯ ಒಡಂಬಡಿಕೆಗಾಗಿ ಅಧಿಕಾರದ ಮಾತುಕತೆ ನಡೆಯಿಸಿದ್ದು— ಆ ಸಂದರ್ಭದ ಒಂದು ಚಿಕ್ಕ ಸಂಗತಿ ನೆನಪಾಗಿ, ಟ್ರಾಟ್‌ಸ್ಕಿಯ ಮೋರೆಯ ಮೇಲೆ ಮೂರ್ಛೆಯಲ್ಲಿಯೂ ಒಂದು ಮುಗುಳುನಗೆ ಮಿಂಚಿ ಹೋಗಿರಬೇಕು. ಆ ಸಂಗತಿ ಹೀಗೆ:— ಟ್ರಾಟ್‌ಸ್ಕಿ ಎಂದಿಗೂ ಸೊಗಸುಗಾರ, ಊಟ-ಉಡಿಗೆಗಳಲ್ಲಿ, ಒನಪು ಓರಣಗಳಲ್ಲಿ ತುಂಬ ಸವಿಗಾರ. ಪ್ರತಿಯೊಂದು ಸನ್ನಿವೇಶವನ್ನೂ ತನ್ನ ವ್ಯಕ್ತಿತ್ವವನ್ನು ಎದ್ದು ಕಾಣಿಸಲು ಉಂಟುಮಾಡಿದ ಸಂಧಿಯೆಂತಲೇ ನಂಬಿ ನಡೆಯುವ ಅಭಿಜಾತ ನಟ. ತನ್ನ ಅಸಾಮಾನ್ಯ ವ್ಯಕ್ತಿತ್ವದ ಕುರಿತು ಮಿತಿಮೀರಿದ ಆತ್ಮಸಂಮೋಹನೆಯೇ ಆತನ ಜೀವನದ ಅಪಯಶಕ್ಕೆ ಮುಂದೆ ಮುಳುವಾಯಿತು. ಇರಲಿ! ಇಂತಹ ಪ್ರದರ್ಶನ-ಪ್ರಿಯ ಪ್ರಭಾವಪೂಜಕ ವ್ಯಕ್ತಿಯು, ಜರ್ಮನಿಯೊಡನೆ ಒಪ್ಪಂದದ ಚರ್ಚೆಮಾಡುವ ಪ್ರಸಂಗದಂತಹ ಐತಿಹಾಸಿಕ ಮಹತ್ತ್ವದ ಸಂದರ್ಭವನ್ನು ತನ್ನ ಬೆಡಗು ಬೀರಲಿಕ್ಕಾಗಿ ಬಳಸಿಕೊಳ್ಳದೆ ಬಿಡುವಾತನೇ? ಒಪ್ಪಂದದ ಚರ್ಚೆಗೆ ಹೋಗುವಾಗ ತಾನು ಯಾವಬಟ್ಟೆ ತೊಡಬೇಕೆಂಬುದು ಟ್ರಾಟ್‌ಸ್ಕಿಗೆ— ರಷಿಯಾದ ಹೊಸ ಸಾಮ್ಯವಾದಿ ಸರಕಾರದ ದೃಷ್ಟಿಯಿಂದ— ಜೀವಾಳದ ಪ್ರಶ್ನೆಯೆನಿಸಿತು. ‘ಶಾಂತಿಸಮಾರಂಭವನ್ನು ನೆರವೇರಿಸುವಾಗ ತಾನು ಉದ್ದ ಬೆನ್ನಿನ ನಿಲುವಂಗಿಯನ್ನು ತೊಡಲೇ?’—ಎಂದು ಆತನು ಕೂಡಲೆ ಲೆನಿನ್‌ನನ್ನು ತಂತಿಯಿಂದ ಕೇಳಿದನು. ಲೆನಿನ್‌ನು ತಡಮಾಡದೆ ಉತ್ತರ ಕಳುಹಿದನು:“ಶಾಂತಿಸ್ಥಾಪನೆಗೆ ಸಹಾಯವಾಗುತ್ತಿದ್ದರೆ ನೀನು ಹೆಂಗುಸರ ಒಳ ಅಂಗಿಯನ್ನು ತೊಟ್ಟುಕೊಂಡು ಹೋದರೂ ಅಡ್ಡಿ ಇಲ್ಲ!”.......ಒಳ ಅಂಗಿ-ನಿಲುವಂಗಿ........ ಮೇಲಂಗಿ........ ಜಾಕ್ಸನ್‌ನ ಮೇಲಂಗಿಯೊಳಗೆ ಅವಿತು ಆತನ ಸಾವು ಹೊಂಚುಸಾಧಿಸಿತ್ತು!

ಟ್ರಾಟ್‌ಸ್ಕಿಯ—ಗಾಯದಿಂದ ಗಾಸಿಗೊಂಡ—ಮಿದುಳಿನಲ್ಲಿಯೂ ತುಸು ಚೇತನ ಹುಟ್ಟಿಸಿರಬಹುದಾದ ಹಳೆಯ ನೆನಹುಗಳೆಂದರೆ: ಆತನು ರಷಿಯಾದ ಹೊಸ ಸಾಮ್ಯವಾದಿ ಸರಕಾರದ ಯುದ್ಧಮಂತ್ರಿಯಾಗಿ ಮೆರೆದ ಆ ಮಹಿಮೆಯ ದಿನಗಳು! ಹಿಂದಿನ ಸಾಮ್ರಾಜ್ಯಸೈನ್ಯದ ಅವ್ಯಸ್ಥಿತ ಅವಸ್ಥೆಯೊಳಗಿಂದ ಕುಂದು-ಕೊರತೆಗಳ ಅಂದಗೇಡಿನೊಳಗಿಂದ--ಭದ್ರವಾದ ಭವ್ಯವಾದ ಕೆಂಪುಸೈನ್ಯವನ್ನು ಕಲಿಸಿ ಕುಣಿಸಿ ಸಜ್ಜುಗೊಳಿಸಿ, ಕ್ರಾಂತಿವಿರೋಧಿಗಳಾದ ಅಸಂಖ್ಯ ವಿದೇಶೀ ದಂಡುಗಳನ್ನು ರಷಿಯಾದೊಳಗಿಂದ ಅಟ್ಟಿ ಓಡಿಸಿ, ಕೆಂಪುಧ್ವಜಕ್ಕಾಗಿ ಸ್ವತಂತ್ರ ಮುಗಿಲನ್ನು ಕಾಯ್ದುಕೊಂಡ ವೀರಚರಿತದ ವೈಭವಶಾಲಿ ನೆನಪು! ಅಂದು ತನ್ನ ಬಂಟರ ಬಿಚ್ಚುಗತ್ತಿಯ ಚೆಚ್ಚೆಯ ಸಾಲುಗಳ ಸಲಾಮಿಯನ್ನು ಸ್ವೀಕರಿಸಲು, ಟ್ರಾಟ್‌ಸ್ಕಿಯು ಚೆಟ್ಟದಂತಹ ಕುದುರೆಯನ್ನೇರಿ ಬಂದಾಗ ಮಂದಿ “ಅಬ್ಬ! ಎಂತಹ ದಿವ್ಯ ಪುರುಷ!” ಎಂದು ಬೆರಗು ಕಚ್ಚಿಕೊಳ್ಳುವುದು.— ಇದನ್ನೆಲ್ಲ ಆವನು ಹೇಗೆ ಮರೆತಾನು? (ಮುಂದೆ ಇದೇ ಬಗೆಯಾಗಿ ದಂಡಿನ ಬಯಲಿನಲ್ಲಿ ಸೈನ್ಯ ನಿರೀಕ್ಷಣೆಗೆ ಸ್ಟಾಲಿನ್‌ರು ಕುದುರೆಯನ್ನೇರಿ ಬಂದಾಗ ಮಂದಿ “ಅಬ್ಬಾ! ಎಂತಹ ಭವ್ಯ ಕುದುರೆ?” ಎಂದು ಬೆರಗಾಗುತ್ತಿದ್ದರು!)

ಆ ಮೇಲೆ ನೆನಪಿನೆದುರು ಸುಳಿದುಹೋದ ಸಂಗತಿಯೆಂದರೆ ತೃತೀಯ ‘ಅಂತರ್‌ರಾಷ್ಟ್ರೀಯ’ ಸಂಸ್ಥೆಯ ಘೋಷಣೆ. ದಲಿತ ಮಾನವಜನಾಂಗದ ಬಿಡುಗಡೆಯ ಪಣತೊಟ್ಟ ವಿಶ್ವಕ್ರಾಂತಿಯ ಆಹ್ವಾನ! ನೆನಪು ಇಲ್ಲಿಗೆ ನಿಂತಿತೆ? ಇಲ್ಲ. ಹಿಂದೆಮಾಡಿದ ತಪ್ಪಿನ ಕಪ್ಪುಕಲೆಗಳೂ ಚಿತ್ರವಿಚಿತ್ರಯನ್ನು ಕವಿದು, ಆತನನ್ನು ಕ್ಷಣಕಾಲ ಕನವಿಸಿಗೊಳಿಸಿ ಹೋದುವು. ಅತ್ಯಂತ ಘೋರವಾದ ತಪ್ಪು— ಕಡುಮುಂಬುಗೆಯ ಜನತೆಯ ದೃಷ್ಟಿಯಿಂದ ಆತನ ಕ್ಷಮಿಸಲಾಗದಂತಹ ತಪ್ಪು—ಆತನ ಕ್ಷೇಮವನ್ನೇ ನಾಶಪಡಿಸಿದ ದೊಡ್ಡ ತಪ್ಪು— ಎಂದರೆ, ಲೆನಿನ್‌ನ ಅಂತ್ಯವಿಧಿಯ ಕಾಲಕ್ಕೆ, ಜನತೆಯೇ ತಮ್ಮ ಯುಗಪುರುಷನನ್ನು ಕಳಕೊಂಡು ಗೋಳಿಡುವ ವೇಳೆಗೆ, ಅವರ ದುಃಖದಲ್ಲಿ ಪಾಲುಗೊಂಡು ತನ್ನ ಗೆಳೆಯ, ಗುರು, ಗೌರವಕ್ಕೆ ಕಾರಣನಾದ ನಾಯಕನಿಗಾಗಿ ಕಂಬನಿಯಿಡಲು ಬಾರದೆ ಇದ್ದುದು ಆತನ ಗುಡ್ಡದಂತಹ ತಪ್ಪು.— ಅದರಿಂದ ಆತನ ಜನಪ್ರಿಯತೆ ಕುಂದಿ, ಆತನ ವಿರುದ್ಧ ಸ್ಟಾಲಿನ್‌ರ ದುರೂಹ ದುರ್ವ್ಯೂಹಗಳು ಕುದುರುತ್ತ ನಡೆದದ್ದು— ರಷಿಯನ್ ರಾಜಕಾರಣದಲ್ಲಿಯ ಟ್ರಾಟ್‌ಸ್ಕಿಯ ವಜ್ರಮುಷ್ಟಿಯ ಹಿಡಿತ ಸಡಿಲಾಗಿ, ಸ್ಟಾಲಿನ್‌ರ ಉಕ್ಕಿನ ತೆಕ್ಕೆಯಲ್ಲಿಯೇ ಉತ್ತರೋತ್ತರ ಸರ್ವಾಧಿಕಾರಿಗಳೂ ಸೆರೆಬಿದ್ದುದು— ಸ್ಟಾಲಿನ್‌ರ ಉತ್ಕರ್ಷದೊಂದಿಗೆ ಟ್ರಾಟ್‌ಸ್ಕಿಯ ಅಪಕರ್ಷ— ರಾಜಕೀಯ ವಿಚಾರಣಾಮಂಡಲದಿಂದ ಆತನನ್ನು ತಳ್ಳಿದ್ದು— ಅನಂತರ ತುರ್ಕಸ್ತಾನಕ್ಕೆ ಗಡಿಪಾರು— ಅಲ್ಲಿಂದ ಟರ್ಕಿಗೆ, ಮುಂದೆ ಫ್ರಾನ್ಸಿಗೆ, ಹಾಗೆಯೇ ನಾರ್ವೆಗೆ— ಕೊನೆಗೆ ಮೆಕ್ಸಿಕೋಕ್ಕೆ— ಇಲ್ಲಿಯೂ ಭೀಕರ ಭವಿತವ್ಯದ ಕಾಲಪಾಶಗಳ ಜಾಲವು ಆತನನ್ನು ಸಿಲುಕಿಸಿಯೆ ತೀರಿತು. ಪತ್ತುಗೇಡು, ಗತಿಗೇಡು— ಸೋಲು, ಗೋಳು!— ಕೊನೆಗೂ ಅಂದಿನಿಂದ ಬೆನ್ನಟ್ಟಿಬಂದ ಸಾವು ಆತನನ್ನು ತನಗೆ ಬಲಿಯಾಗಿ ಆರಿಸಿಕೊಂಡಿತು.

೪. ಅಲೌಕಿಕ ಪ್ರತಿಭೆಯ ಸಮಾಧಿ

ಟ್ರಾಟ್‌ಸ್ಕಿಯ ಹೊಂಗನಸು —ವಿಶ್ವಕ್ರಾಂತಿಯ ರಕ್ತರಂಜಿತ ಚಿತ್ರ—ನುಚ್ಚುನೂರಾಗಿತ್ತು. ಆತನ ಸಂಚು-ಹೊಂಚುಗಳೆಲ್ಲ, ಕೆಲಸಕ್ಕೆ ಬಾರದ ಹುಸಿಪಂಜಿಕೆಗಳಾದುವು. ಆದರೂ ಆತನು

ತನ್ನ ಸೋಲನ್ನೇ ಅರಿತುಕೊಳ್ಳಲಿಲ್ಲ, ಒಪ್ಪಿಕೊಳ್ಳಲೊಲ್ಲ. ೧೯೩೮ರಲ್ಲಿ ತನ್ನಂತೆಯೆ ದೇಶಭ್ರಷ್ಟರಾಗಿ ದೆಸೆಗೆಟ್ಟ ಮೂವರು ಸಾಮ್ಯವಾದಿಗಳೊಡನೆ ಕೂಡಿ, ಚತುರ್ಥ 'ಅಂತರ್‌ರಾಷ್ಟ್ರೀಯ ಸಂಸ್ಥೆ'ಯನ್ನು ಆತನು ಸ್ಥಾಪಿಸಿದನು! ಆದರೆ ಅದೂ ಒಡೆದು ಸಿಡಿದು ಹಲವಾರು ಗುಂಪಾಯಿತು. ಜಗತ್ತಿನಲ್ಲೆಲ್ಲ ಕೂಡಿಸಿ ಎಣಿಸಿದರೂ ಅದರ ಸದಸ್ಯರು, ಆತನ ಅನುಯಾಯಿಗಳು ೫,೦೦೦ಕ್ಕಿಂತ ಕಡಿಮೆಯಾಗುವರು. ಆದರೂ ಟ್ರೊಟ್‌ಸ್ಕಿಯ ಮತಾಂಧ (ಮದಾಂಧ?) ಆಶಾವಾದಿ ಹೃದಯವು, ವಿಶ್ವಕ್ರಾಂತಿಯ ಅಖಂಡ ಅಖಿಲ ಬಂಡಾಯದ ಎತ್ತುಗಡೆಯನ್ನು ಇನ್ನೂ ಅಚಲವಾಗಿ ನಂಬಿತ್ತು! ಈ ಆಭಾಸ—ಅಟ್ಟಹಾಸಗಳನ್ನಷ್ಟೇ ಗಮನಿಸಿ ವಿಚಾರಿಸಿದರೆ, ಸ್ಟಾಲಿನ್‌ರಿಗಿಂತ ಟ್ರೊಟಸ್ಕಿಯೇ ಮೇಲೆನ್ನಬಹುದು!

ಟ್ರೊಟ್‌ಸ್ಕಿಯ ವಧೆಯಲ್ಲಿ, ಸರ್ವಾಧಿಕಾರಿತ್ವದ ಭದ್ರಬಾಹುವು ಒಂದು ಗೋಲಾರ್ಧದಿಂದ ಇನ್ನೊಂದು ಗೋಲಾರ್ಧದ ತನಕ ಚಾಚಿತು! ಆತನ ವಧೆಯ ಕುರಿತು ಜಗತ್ತಿನ ಮೊದಲನೆಯ ಪ್ರತಿಕ್ರಿಯೆಯು ಭಯಚಕಿತ ಭಾವನೆಯದಾಯಿತು. ಆ ಕಾಲಕ್ಕೆ ಟ್ರೊಟ್‌ಸ್ಕಿಯೇ ಒರ್ವ ಆತಂಕವಾದಿ ಹತ್ಯಾಗ್ರಹಿಯಾದ ಕ್ರಾಂತಿಕಾರಕನಿದ್ದನೆಂಬುದನ್ನು ಎಲ್ಲರೂ ಮರೆತರು! ಆತನಿಗೆ ಬಂದ ದುರಂತ ಮರಣವು, ಆತನು ಇತರರಿಗಾಗಿ—ತನ್ನ ಪ್ರತಿವಾದಿಗಳಿಗಾಗಿ—ರಚಿಸುವ ಬಗೆಯದೇ ಆಗಿತ್ತು. ಆದ್ದರಿಂದ ಆತನ ಉಗ್ರವೃತ್ತಿಯ ದೃಷ್ಟಿಯಿಂದ ಅದರಲ್ಲಿ ಅನಪೇಕ್ಷಿತವೇನೂ ಇದ್ದಿಲ್ಲ. ಒಂದು ಬಗೆಯ ಕಾಲನ ಕವಿಸಂಕೇತವೂ—ನಿಯತಿಯ ನ್ಯಾಯವೂ ಆ ದುರಂತದಲ್ಲಿ ಇದ್ದೀತು. ಆದರೂ ಅಂದು ಜಗತ್ತಿನ ಸುಶಿಕ್ಷಿತ—ಸುಸಂಸ್ಕೃತ ಜನಾಂಗಗಳವರು ಒಂದೇ ಸಂಗತಿಗೋಸ್ಕರ ಹಳಹಳಿಸಿದರು. ಅದೇನೆಂದರೆ: ಟ್ರೊಟ್‌ಸ್ಕಿಯ ಸಾವಿನಲ್ಲಿ ಸಾಹಿತ್ಯಪ್ರಪಂಚವು ಶ್ರೇಷ್ಠತಮ ಗದ್ಯಲೇಖನ ಶೈಲಿಯ ಪ್ರತಿಭಾಶಾಲಿಯಾದ ಪ್ರಭುವನ್ನು ಕಳೆದುಕೊಂಡಿತು ಆತನ ಅಪ್ರತಿಮ ಮಿದುಳು ತನ್ನ ಕೊನೆಯ ಮಹತ್ಕಾರ್ಯವನ್ನು ಎಷ್ಟರಮಟ್ಟಿಗೆ ಪೂರ್ತಿಮಾಡಿರಬಹುದೆಂದು ನಾಗರಿಕತೆಯು ಆಚ್ಚರಿಗೊಂಡಿತು. ಆತನು ಬಾಳಿನ ಕೊನೆಯ ಕಾಲಾವಧಿಯಲ್ಲಿ ತನ್ನ ದುರ್ದಶೆಗೆ ಕಾರಣರಾದ ದುರ್ಧರ್ಷ ಧೀರ-ಧುರಂಧರರಾದ ಸರ್ವಾಧಿಕಾರಿ ಸ್ಟಾಲಿನ್‌ರ ಚರಿತ್ರವನ್ನು ಬರೆಯತೊಡಗಿದ್ದನು. ಅಂದಿನ ಹತ್ಯಾಕಾಂಡದ ಪರಿಣಾಮವಾಗಿ ಆ ಚರಿತ್ರದ ಯಾವ ಅಂಶವು ಪೂರ್ತಿಯಾಗದೆ ಉಳಿದಿರಬಹುದೆಂದು ಜಗತ್ತು ಊಹಿಸತೊಡಗಿತು.

ಆದರೆ ಜಗತ್ತಿನ ಊಹೆಗೆ ಒಂದು ಮಾತು ಗೊತ್ತಾಗಿದ್ದಿಲ್ಲ. ಟ್ರೊಟ್‌ಸ್ಕಿಯು ಬರೆಯುತ್ತಿದ್ದ ಸ್ಟಾಲಿನ್‌ರ ಜೀವನ-ಚರಿತ್ರದ ಅರ್ಧಭಾಗವು ಪೂರ್ಣವಾಗಿದ್ದು, ಅದರ ಇಂಗ್ಲಿಷ್ ಅನುವಾದವೂ ಮಾಡಿ ಮುಗಿದಿತ್ತು. ಉಳಿದ ಅರ್ಧವೂ ಒಮ್ಮೆ ಪೂರ್ಣ ಬರೆದಿದ್ದು; ತಿರುಗಿ ಅವಲೋಕನೆ ಹೊಂದದೆ ಅನುವಾದವಾಗದೆ ಉಳಿದಿತ್ತು. ಪ್ರಕಾಶಕರು ತಮ್ಮ ಅಚ್ಚಿನ ಪ್ರತಿಗಾಗಿ ಹಾತೊರೆದು ಇದಿರು ನೋಡುತ್ತಿದ್ದರು.

ಗ್ರಂಥಕಾರ ಟ್ರೊಟ್‌ಸ್ಕಿಯ ಮಹಿಮೆಯು ಬರೀ ಸ್ಟಾಲಿನ್‌ರ ಚರಿತ್ರದ ಬರೆಹವನ್ನವಲಂಬಿಸಿಲ್ಲ. ಆತನ ಸಾಹಿತ್ಯಿಕ ಕೀರ್ತಿಯು ಇನ್ನೂ ಭದ್ರವಾದ ನೆಲೆಯ ಮೇಲೆ ನಿಂತಿದೆ. ಕ್ರಾಂತಿಯಲ್ಲಿ ಪ್ರಧಾನ ಭೂಮಿಕೆಯನ್ನು ವಹಿಸಿ ನಿರ್ವಹಿಸಿದ ಐತಿಹಾಸಿಕ ವ್ಯಕ್ತಿಯು, ಆ ಕ್ರಾಂತಿಯ ಅಧಿಕಾರವಾಣಿಯಲ್ಲಿ ವೃತ್ತಾಂತವನ್ನು ಬರೆದ ಕೀರ್ತಿವಂತ ಇತಿಹಾಸಕಾರನಾದನು. ರಷಿಯನ್ ರಾಜ್ಯಕ್ರಾಂತಿಯ ಇತಿಹಾಸವನ್ನು ಮೂರು ಬೃಹದ್ಗ್ರಂಥಗಳಲ್ಲಿ ಅಪ್ರತಿಮವಾಗಿ ಬರೆದು, ಹೊಸ ಯುಗಧರ್ಮದ ತ್ರಿಪೀಠಿಕೆಯನ್ನು ಉಂಟುಮಾಡಿದ ಆಚಾರ್ಯನೆನಿಸಿಕೊಂಡನು. ಕ್ರಾಂತಿಯ ಸ್ಫೂರ್ತಿಯೇ ಮೂರ್ತಿವೆತ್ತು ನಿಂತ ಟ್ರೊಟ್‌ಸ್ಕಿಯು ತನ್ನ ಪ್ರೇರಣೆ, ಪ್ರಯತ್ನ, ಪ್ರಚಾಲನೆಗಳಲ್ಲಿ ಆ ಭೂಖಂಡದ ರಂಗಭೂಮಿಯ ಮೇಲೆ, ಒಂದು ವಿಶಾಲ ಜನಾಂಗದ ಸಾಮಾಜಿಕ ಉತ್ಥಾನ ಉದ್ಧಾರಗಳ ಭೀಷಣ ರಮ್ಯವಾದ ರುದ್ರನಾಟಕದ ವಿರಾಟ್ ದೃಶ್ಯವನ್ನು ತನ್ನ ಅಮರ ಶೈಲಿಯಲ್ಲಿ ಬಣ್ಣಿಸಿ ಧನ್ಯನಾದನು. ಆದರ್ಶವನ್ನು ನೋಡಿ ನಲಿಯುವ ಕವಿಗಳಿರುವುದುಂಟು. ವ್ಯವಹಾರವನ್ನು ಕುಶಲವಾಗಿ ಸಾಗಿಸುವ ಕರ್ಮವೀರರೂ ಇರುವುದುಂಟು. ಇವರಿರ್ವರನ್ನೂ ಕಂಡು ಕೊಂಡಾಡಿ ಹಾಡಿ ಹರಸುವ ಚರಿತ್ರಕಾರರೂ ಆಗುವುದುಂಟು. ಆದರೆ ಈ ಮೂರೂ ಬಗೆಯ ಮಹಾನುಭವವನ್ನು ಒಟ್ಟಾಗಿ ಒಂದಾಗಿ ತನ್ನ ಬಾಳಿನಲ್ಲಿ ಅರಗಿಸಿಕೊಂಡು, ಅರಳಿಸಿಕೊಂಡು, ಆ ಅಲೌಕಿಕ ವ್ಯಕ್ತಿತ್ವದ ಪ್ರತಿಭಾಪರಿಮಳವನ್ನು ಪ್ರಪಂಚಕ್ಕೆಲ್ಲ ಬೀರುವ ಕೃತಿಕಾವ್ಯದ ವರಕವಿಯು ಅವತರಿಸುವುದು ತೀರ ವಿರಳ. ಟ್ರೊಟ್‌ಸ್ಕಿಯು ಅಂತಹ ಕಡುಗಲಿಯು. ಆತನ ಗುಣಗಳೂ ದೊಡ್ಡವು, ದೋಷಗಳೂ ದೊಡ್ಡವು! ಆದರೆ ಆತನು ತನ್ನ ಕೃತಿಗಿಂತಲೂ ದೊಡ್ಡವನು!

ಟ್ರೊಟ್‌ಸ್ಕಿಯ ಕೊಲೆಯಿಂದ ಸಾಮ್ಯವಾದದ ಪ್ರತಿಭಾವೈಭವವೇ ಸೂರೆಯಾಯಿತು. ಟ್ರೊಟ್‌ಸ್ಕಿಯಂತಹ ಅದ್ವಿತೀಯ ವ್ಯಕ್ತಿಯ ಕೊಲೆಯನ್ನು ಕೊನೆಯನ್ನು ಬಣ್ಣಿಸಲಿಕ್ಕೆ ಸಹ ಸಾಕಾಗುವಷ್ಟು ಸಾಹಿತ್ಯಿಕ ಸಾಮರ್ಥ್ಯದವರು ಹಳೆಯ ಅಥವಾ ಹೊಸ ಮಾರ್ಕ್ಸ್‌ವಾದಿಗಳಲ್ಲಿ ಇಲ್ಲವೆಂದು ಕಂಡು ಬಂತು. ಲೆನಿನ್‌ನು ಸತ್ತಾಗ ಯುಗಪುರುಷನ ತಿರೋಧಾನವನ್ನು ಟ್ರೊಟ್‌ಸ್ಕಿಯೇ ಸಾರಿದ ಮಾತುಗಳಿಗೆ ಹೋಲಿಸಿದರೆ, ಈ ಮಹಾಪುರುಷನ ಮರಣದ ಕುರಿತು ಪ್ರಕಟವಾದ ಎಲ್ಲ ಬರೆಹಗಾರಿಕೆ ಮಾತುಗಾರಿಕೆಯು ಹುಸಿಯೆನಿಸುವುದು. ಲೆನಿನ್‌ನ ಮರಣದಿಂದ ಉಂಟಾದ ಪ್ರಲಯಾಂತ ಶಾಂತತೆಯ ನಿಬಿಡ ನಿಶ್ಶಬ್ದದಲ್ಲಿ ಟ್ರೊಟ್‌ಸ್ಕಿಯು ಬರೀ ಹತ್ತುಮಾತುಗಳನ್ನು ಸಾರಿದ್ದನು; "ಲೆನಿನ್‌ನು ಮಡಿದನು. ಈ ಮಾತುಗಳು ಕಡಲಲ್ಲಿ ಉರುಳಿಬೀಳುವ ದೊಡ್ಡ ಬಂಡೆಗಳಂತೆ ಎನಿಸುವವು!"....ಆತನ ಜೀವ ಸೆಲೆಯೂ ಕಾಲದ ಕಡಲನ್ನು ಸೇರಿತು.

ಅವನು ತಂದೆಯ ಷ್ಟೇ ಉತ್ಸಾಹಶಾಲಿ ಯಾಗಿದ್ದಾನೆ

— ಅವರಿಬ್ಬರ ಸಾಹಸಕ್ಕೆ ಕೊನೆಯೇ ಇಲ್ಲ!

ನಿಜವಾಗಿಯೂ ಅವರಿಬ್ಬರೂ ಒಳ್ಳೆಯ ಜೋಡಿಯಾಗಿದ್ದಾರೆ! ನಿಜವಾಗಿಯೂ ಅವರಿಬ್ಬರೂ ಉತ್ಸಾಹಶಾಲಿಯರಾಗಿದ್ದಾರೆ! ಅವರಿಗೆ ಕೊಡುವ ಆಹಾರವು ಕಡಿಮೆಯಾದ ಚೇತನವನ್ನು ಪುನಃ ಪೂರ್ಣವಾಗಿ ಉಂಟುಮಾಡಲು ತಾಯಿ ಖಾತ್ರಿ ಮಾಡುತ್ತಾಳೆ — ವಿಟಮಿನ್‌ನಿಂದ ಕೂಡಿದ ಪೋಷಣ ಶಕ್ತಿಯುಳ್ಳ ಡಾಲ್ಡದಿಂದಲೇ ತಯಾರಿಸಿದ ರುಚಿಕರವಾದ ಆಹಾರವನ್ನು ಆಕೆ ಅವರಿಗೆ ಕೊಡುತ್ತಾಳೆ. ಶಕ್ತಿಕುಂದಿ ಆರೋಗ್ಯವು ಕೆಡಿಸಿಹೋಗುವ ಅಪಾಯವು ಅವರಿಗೆ ಎಂದೂ ಬಾರದು, ಏಕೆಂದರೆ; ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ಚೇತನಕ್ಕಾಗಿ — ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ. ಡಾಲ್ಡ ಆಹಾರಕ್ಕೆ ಹೆಚ್ಚು ರುಚಿಯನ್ನು ಕೂಡ ಕೊಡುತ್ತದೆ.

ಡಾಲ್ಡ ತನ್ನಲ್ಲಿರುವ ವಿಟಮಿನ್ ಮೂಲಕ ದೇಹಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯಮಾಡುತ್ತದೆ . . . ವಿಟಮಿನ್‌ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಎಲ್ಲಾ ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ ವಿಟಮಿನ್ ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.

ವಿಟಮಿನ್‌ದಿಂದ ಕೂಡಿದ **ಡಾಲ್ಡ** ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಡುತ್ತದೆ -- ಸೀಲು ಮಾಡಿದ ಡಬ್ಬಗಳಲ್ಲಿ ಮಾತ್ರ ಮಾರಲ್ಪಡುತ್ತದೆ



HVM. 22-183 KN

THE HINDUSTAN VANASPATI MANUFACTURING CO., LTD., BOMBAY

ಪ್ರಕೃತಿಯ ಪ್ರತಿಕೃತಿ

★

ಶ್ರೀ. ಎಂ. ಜಿ. ಕುಲಕರ್ಣಿ, ಮುಂಬಯಿ

೧

ಬಾ ನಲ್ಲೆ, ಬಾರೆನ್ನ ಕೈವಿಡಿದ ಕೋಗಿಲೆಯೆ,
ಬಾಳಬೆಳಕನು ಕಂಡು ಕುಣಿಯಬಾರೆ,
ಬದುಕಿನಾ ಬೇಸರನು ಬದಿಗೊತ್ತಿ ನೀನೀಗ
ಸಂಸಾರ-ನೌಕೆಯನು ನಡಿಸಬಾರೆ!

೨

ಅದೊ, ನೋಡದಲ್ಲಿ, ತೆರೆ ತನ್ನಿನಿಯ ಸಾಗರದ
ಅತ್ತ-ತಟವೊಂದುವಾ ಅಂದ ನೋಡೆ !
ಇತ್ತಲ್ಲಿ ರವಿ ತನ್ನ ತಾಯಿ ಪಡುವೆಣ್ಣಿನಾ
ಒಡಲಿನೊಳಸೇರುವಾ ಚೆಂದ ನೋಡೆ!

೩

ಅಕೋ, ಅರಳುತಿಹುದಲ್ಲಿ ನವವಿಲಾಸದ ಪುಷ್ಪ,
ಮರುಚಣವೆ ಅಪರ ಹಾಸ್ಯದ ಲಾಸ್ಯಕಳಿವು !
ಆದರೇಂ ? ಸುಮ ಚೆಲ್ವ ಚೆಲುವಿಗಿಲ್ಲೂನತೆಯು,
ಬೆಡಗಿನೊಳಗಿಲ್ಲ ಬೇಸರದ ಸುಳಿವು !

೪

ಇಂತು ಸೃಷ್ಟಿಯ ನಿಟ್ಟಿಗೆತ್ತ ದಿಟ್ಟಿಯ ತೂರು,
ಎಲ್ಲೆಡೆಯೊಳುಲ್ಲಾಸ ಚೆಲ್ಲವರಿದಿಹುದು !
ಪ್ರಕೃತಿ ನಿಯಮವನಳಿಪ ಸೊಲ್ಲೆ ಎಲ್ಲಿಯು ಇಲ್ಲ,
ಸಂತಸದಿ ಸೊಬಗೆಲ್ಲ ಸಾಗುತಿಹುದು !

೫

ನಡೆ, ನಿಸರ್ಗದ ನಡೆಗೆ ಅಡಿಯನಿಕ್ಕುತ ನೀನು,
ಸಿಡಿಮಿಡಿಯದಿನಿತು ನಾವ್ ಸಾಗೋಣ ಬಾ !
ತಡೆಯಿರಲಿ, ಕೇಡಿರಲಿ, ಅನುತಾಪಕೆಡೆಯಿರಲಿ,
ಕೆರಳದಲೆ ಕೈಲಾಸಕೇರೋಣ ಬಾ !

ನಾನು-ಅವಳು

★

ಶ್ರೀಕೃಷ್ಣ 'ಶಾರದಾಮಂಡಲ' ವಿಜಾಪುರ

೧

ನಾನೂ ಹುಚ್ಚಾ—ಅವಳೂ ಪೆದ್ದು,
ನಮ್ಮದು ಬಣ್ಣದ ಸಂಸಾರಾ !
ಜಗದಲಿ ನಾವೂ ಕಂಡ್ಕೊಂಡದ್ದು
ರಸಿಕತನದ ಜೀವನತಾರಾ !

೨

ತುಣುಕುರೊಟ್ಟಿಯೊ, ಹರಕುಬಟ್ಟೆಯೊ
ನಮ್ಮ ಬದುಕಿಗೇ ಆಧಾರಾ !
ಸಕ್ಕರೆಗಿಂತಾ ರುಚಿಯಾಗಿರುವದು
ನಮಗೆ ಸಿಗುವ ಎಣ್ಣೀ-ಖಾರಾ !

೩

ಆಭರಣೆಂಬವು ಅವಳಿಗೆ ಇಲ್ಲಾ,
ನಾನೆ ಅವಳ ಕೊರಳಿಗೆ ಹಾರಾ !
ಮುತ್ತು ರತ್ನಗಳು ಗೊತ್ತೇ ಇಲ್ಲಾ
ತುಟಿಗಿಹ ಮುತ್ತಿಗೆ ಬೆಲೆಪೂರಾ !

೪

ಬಡತನವಿದ್ದರು ಪ್ರೀತಿಯ ರಾಜ್ಯಾ,
ನಮ್ಮಿಬ್ಬರದೂ ಕಾರ್ಭಾರಾ !
ಅವಳೇ ನನಗಿಹ ನಚ್ಚಿನ ರಾಣಿ
ನಾನೇ ಅವಳಿಗೆ ಸರದಾರಾ !

೫

ಜೀವ ಜಲಧಿಯಲಿ ಈಸುತ ಸಾಗುತ
ಕೋರುತಿಹೆವು ಸಮರಸತೀರಾ !
ಸುಖಸ್ವಪ್ನದ ಸಾಮ್ರಾಜ್ಯವ ಕಟ್ಟಿ
ಬಯಸುತಿಹೆವು ಅಮೃತದ ಧಾರಾ !!

ವಿಜ್ಞಾನ-ವಾಕ್ಯವಿತಾನ

ಶ್ರೀ. ಬಿ. ಎಚ್. ಶ್ರೀಧರ ಎಂ.ಎ.
ಪುಣೆ

★

(ಸಾಹಿತ್ಯವಿಚಾರ)

★

"Science without religion is lame and religion without science is blind— ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು" ಎಂದು ಜಗತ್ತಿಗೆ ಸಾರಿದ ಐನ್‌ಸ್ಟೀನ್ ಮಹಾಶಯನ ಮಹಾವಾಕ್ಯವೊಂದೇ ಸಾಕು ಜೀವನವಿಜ್ಞಾನಕ್ಕೆ. ಆದರೆ ಕುಂಟುತನ ಕುರುಡುತನವೆರಡನ್ನು ಜನರ ಮುಂದಿಟ್ಟು ಆಯ್ದುಕೊಳ್ಳಿರೆಂದರೆ 'ನಮಗೆ ಕುಂಟುತನವೇ ಇರಲಿ, ಕುರುಡುತನ ಬೇಡ!' ಎನ್ನದಿರಲಾರರು. ಇದರಿಂದ ವಿಜ್ಞಾನದ ಮಹತ್ತ್ವವೆಂತಹದೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ನೋಡಿ : ಈ ಹಿಂದೆ ಹೇಳಿದ ವಾಕ್ಯದ ಹಿಂದೆಯೇ ನಿಂತು ವಿಜ್ಞಾನವು ಬೆದರಿಕೆಹಾಕುತ್ತದೆ—ವಿಜ್ಞಾನದಲ್ಲಿ ಅರ್ಥವಿಶದೀಕರಣಕ್ಕಾಗಿ ಕೊಡುವ ಉಪಮೆ, ರೂಪಕ ಇತ್ಯಾದ್ಯಲಂಕಾರ ಮಿಶ್ರಿತ ವಾಕ್ಯಗಳ ಅಲಂಕಾರವನ್ನು ಹೆಚ್ಚು ವಿಸ್ತರಿಸಬೇಡ ; ವಿಸ್ತರಿಸಿದರೆ ಉದ್ದೇಹಾನಿ— ಎಂದು. ನೋಡಿ, ವಿಜ್ಞಾನದ ಹಾದಿಯನ್ನು ತುಳಿಯುವುದೆಂದರೆ ಇಂತಹ ಅಸಿಧಾರಾವ್ರತದ ಆಚರಣ.

ಭಾಷೆಯ ಮುಖ್ಯೋದ್ದೇಶವು ಅರ್ಥಪ್ರಕಟನವೆಂದು ಹಿಂದೆಯೇ ಹೇಳಲಾಗಿದೆ. ಅಂತೆಯೇ 'ವಿಜ್ಞಾನಭಾಷೆ' ಅಥವಾ 'ಪರಿಭಾಷೆ'ಯ ಮುಖ್ಯೋದ್ದೇಶ ಅರ್ಥವನ್ನು ಸ್ಪಷ್ಟಪಡಿಸುವುದೇ ಆಗಿದೆ. ವಿಜ್ಞಾನದಲ್ಲಿ ಅಸ್ಪಷ್ಟಾರ್ಥಕ್ಕೆ ಎಡೆಯಿಲ್ಲ. ಕಾವ್ಯದಲ್ಲಿಯೇ 'ಸಸಂಶಯ'ಎಂಬುದು ಒಂದು ದೋಷವಾಗಿ ಪರಿಗಣಿತವಾಗಿರುವಾಗ, ವಿಜ್ಞಾನದಲ್ಲಿ ಕೇಳಬೇಕೆ? ಆಲೋಚನೆಯ ಓಟವನ್ನು ಸುಗಮವಾಗಿಸಲೆಂದು ಆದಷ್ಟುಮಟ್ಟಿಗೆ ನಿರಲಂಕಾರ ವಾಕ್ಯಗಳನ್ನೂ ನಿಷ್ಕೃಷ್ಟಾರ್ಥಕ ಶಬ್ದಗಳನ್ನೂ ನಿಯಮಾನುಸಾರವಾಗಿ ವಿಜ್ಞಾನಿಯು ಪ್ರಯೋಗಿಸುತ್ತಾನೆ. ಏಕೆಂದರೆ ಸಾಹಿತ್ಯದಂತೆ ವಿಜ್ಞಾನವು ಮನೋರಂಜನೆಗಾಗಿ ಹೊರಟುದಲ್ಲ; ಸತ್ಯಾನ್ವೇಷಕ್ಕಾಗಿ. ಪ್ರೇಮಿಗಳು ಉದ್ಯಾನದಲ್ಲಿ ಕೆಲೆದಾಡಿದಂತೆ ಸಾಹಿತ್ಯಮಾರ್ಗವಿದ್ದರೆ, ಗುರಿಗೆ ನೇರವಾಗಿ ಬಿಟ್ಟ ಬಾಣದಂತೆ ವಿಜ್ಞಾನಮಾರ್ಗ. 'ವಕ್ರೋಕ್ತಿ'ಯು ಕಾವ್ಯಕ್ಕೆ ಗುಣವಾದರೆ ವಿಜ್ಞಾನದಲ್ಲಿ ದೋಷ. ಈ ತತ್ತ್ವಾನುಸಾರವಾಗಿ 'ವಿಜ್ಞಾನ ವಾಕ್ಯವಿತಾನ'ವನ್ನು ವಿಜ್ಞಾನಿಯು ಇಷ್ಟೇ ಎಂದು ಮೊದಲೇ ಲಕ್ಷ್ಮಣನಂತೆ ಗೆರೆ ಎಳೆದು ಪರಿಚ್ಛೇದಿಸಿ ಹೇಳುತ್ತಾನೆ. ಹಾಗೆ ಪರಿಚ್ಛೇದವಿಲ್ಲದೆ ಹೇಳಹೊರಡುವವನು ಅಜ್ಞಾನಿಯಾದಾನೇ ಹೊರತು ವಿಜ್ಞಾನಿಯಾಗಲಾರನು.

ಅನಧಿಗತ ಮತ್ತು ಅಬಾಧಿತಾರ್ಥವಿಷಯ ಎನಿಸುವ ಪ್ರಮಾತ್ಮಕ ಜ್ಞಾನವನ್ನು ಕಂಡುಹಿಡಿದು, ಅದನ್ನು ಸ್ಥಿರಪಡಿಸುವುದೇ ಧ್ಯೇಯವೆಂದು ತಿಳಿದ ವಿಜ್ಞಾನಿಯು ತತ್ಸಾಧಕ ಕಾರಣ ಸಾಮುಗ್ರಿಗಳನ್ನು ಶರಪಾತಗತಿಯಿಂದ ಕ್ರಮವಾಗಿ ಪುಂಖಾನುಪುಂಖವಾಗಿ ಜೋಡಿಸಿ ವಾಚಕರ ಮುಂದಿಡುತ್ತಾನೆ. ಕಾವ್ಯದಲ್ಲಿ 'ಅಪಕ್ರಮ'ವು ಹೇಗೆ ದೋಷವೆನಿಸುವುದೋ ಅದಕ್ಕೂ ಮಿಗಿಲಾಗಿ ಕ್ರಮಭಂಗವು ವಿಜ್ಞಾನವಿಚಾರದಲ್ಲಿ ದೋಷವೆನಿಸುವುದು. ಏಕೆಂದರೆ ಚಿತ್ತವೃತ್ತಿಯು ತರಂಗಮಾಲೆಯಂತಿದೆ. ಅವನ ಕಾರಣಪರಂಪರೆ 'ಭಾವೋಭಾವಂ ನುದತಿ— ಭಾವವು ಭಾವವನ್ನು ಎಬ್ಬಿಸುತ್ತದೆ'— ಎಂಬಂತಿರಬೇಕು.

ಈ ವಿಧವಾಗಿ ಶ್ರೋತಾರನಿಗೆ ಇಷ್ಟಾರ್ಥಪ್ರತಿಪತ್ತಿಯನ್ನುಂಟುಮಾಡುವ ಉದ್ದೇಶದಿಂದ ಪಂಚಾವಯವವಾಕ್ಯ

★

ವಿಜ್ಞಾನಿಯು ತನ್ನ ವಿಜ್ಞಾನ ವಾಕ್ಯವಿತಾನದ ಅರ್ಥವು ಹೀಗೆ ಹೀಗೆ ಇದೆ—ಎಂದು ಗೆರೆ ಕೊರೆದಂತೆ ಹೇಳಿ ಮೊದಲೇ ಸ್ಪಷ್ಟಪಡಿಸಬೇಕು. ಹೀಗೆ ಮಾಡದ ವಿಜ್ಞಾನಿ ಅಜ್ಞಾನಿಯೆನಿಸಿಕೊಳ್ಳದೆ ಇರನು!

★

(Syllogism) ವನ್ನು ತಾರ್ಕಿಕರು ಪ್ರಯೋಗಿಸುತ್ತಾರೆ. ಇದನ್ನು ಬರಿಯ ಐದು ಅವಯವದ ವಾಕ್ಯವೆನ್ನದೆ, ಐದು ಪ್ರಕರಣಗಳುಳ್ಳ ಪ್ರಬಂಧವೆಂದರೆ ಪ್ರಸ್ತುತ ವಿಷಯಕ್ಕೆ ಸಮಂಜಸವಾಗಿ ಹೊಂದುತ್ತದೆ. ಆ ಅವಯವಗಳು ಹೀಗಿವೆ :—

೧. ಪ್ರತಿಜ್ಞಾ (Assertion). ಪ್ರತಿಜ್ಞೆಯೆಂದರೆ ನಿರ್ಣಯಿಸಬೇಕೆಂದಿರುವ ತತ್ತ್ವದ ಕಥನ. ಪ್ರಬಂಧದ ಈ ಪ್ರಥಮಭಾಗವು ಗ್ರೀಕರ Invention ವಿಷಯವರಣ Exordium ಉದ್ದೇಶ ಅಥವಾ ಪ್ರಯೋಜನ ಮತ್ತು Proposition ವಿಷಯವಿವರಣ ಇತ್ಯಾದಿಗಳನ್ನೊಳಗೊಂಡು, ಪ್ರಾಸ್ತಾವಿಕವೂ ಪ್ರಮೇಯ ನಿರ್ದೇಶಕವೂ ಆಗಿರುತ್ತದೆ. ೨. ಹೇತು (Reasoning or Argumentation). ಈ ಪ್ರಕರಣದಲ್ಲಿ ಪ್ರಬಂಧಕಾರನು ನಿರ್ದೇಶಿಸಿದ ಪ್ರಮೇಯಕ್ಕೆ ಸಾಧಕಗಳಾಗಿ ನಿಲ್ಲುವ ಪ್ರಮಾಣ (Proof) ಗಳನ್ನೂ, ಪ್ರಮೇಯ ವಿರುದ್ಧವಾದುದನ್ನು ಖಂಡಿಸುವ ಬಾಧಕ ಪ್ರಮಾಣಗಳನ್ನೂ ಹೇಳುವುದು ಯುಕ್ತ. ಇದು

ಗ್ರೀಕರ Division ಸಮ್ಮತಿ ಅಥವಾ ಅಸಮ್ಮತಿಯ ನಿರ್ದೇಶನ ಮತ್ತು Refutation ವಿಪಕ್ಷಖಂಡನ ಇತ್ಯಾದಿಗಳನ್ನೊಳಗೊಳ್ಳುತ್ತದೆ. ೩. ಉದಾಹರಣ (Example). ಇದು ಪೂರ್ವೋಕ್ತ ಸಾಧಕ ಬಾಧಕ ಪ್ರಮಾಣಗಳ ಸಾಮಂಜಸ್ಯ ನಿರೂಪಣೆಗಾಗಿ ಕೊಡುವ ಸಾಮಾನ್ಯ ವಾಕ್ಯ (Generalisation) ಮತ್ತು ಅದರ ವಿಶೇಷ ದೃಷ್ಟಾಂತ (Particular Instance).

೪. ಉಪನಯ (Application). ಆ ಸಾಮಾನ್ಯ ವಾಕ್ಯ ಅಥವಾ ವಾಕ್ಯಪರಂಪರೆಯನ್ನು ಪ್ರಮೇಯಕ್ಕೆ ಅನ್ವಯಿಸುವುದು, ಆದರಂತೆಯೇ ಇದು ಎಂದು ಸಾದೃಶ್ಯಮೂಲಕವಾಗಿ ಶ್ರೋತೃಗಳನ್ನು ಅಥವಾ ವಾಚಕರನ್ನು ಸಮ್ಮತಿಪಡಿಸುವುದು,

೫. ನಿಗಮನ (Deduction or conclusion). ಇದು 'ಆದುದರಿಂದ ಹೀಗೆ' ಎಂದು ಪ್ರತಿಜ್ಞಾ ವಾಕ್ಯವನ್ನು ಸಮರ್ಥಿಸಿ ಹೇಳಿ, ನಿರ್ಣಯಕ್ಕೆ ಬರುವ ಪ್ರಬಂಧದ ಅಂತ್ಯ ಪ್ರಕರಣವೆನಿಸುತ್ತದೆ.

ಪ್ರತ್ಯಕ್ಷ ಪ್ರಮಾಣವೇ ಮೂಲಾಧಾರವಾಗಿರುವ ವಿಜ್ಞಾನ ವಾಕ್ಯಗಳು ಪ್ರತ್ಯಕ್ಷವಾದುದನ್ನು ಸ್ಪಷ್ಟಗೊಳಿಸಿ ಅನುಮಾನ (Inference) ದ ಮೂಲಕ ಪ್ರತಿಪಾದ್ಯವನ್ನು ಹೀಗೆ ಸಿದ್ಧಾಂತಕ್ಕೆ ಮುಟ್ಟಿಸಬೇಕು. ಹಾಗಲ್ಲದೆ ಬರಿಯ ಭಾವೋದ್ರೇಕದಿಂದ ತಾನು ನಂಬಿರುವುದನ್ನು ಅಥವಾ ನಂಬಿದ್ದೇನೆಂದು ತಿಳಿದುಕೊಂಡಿರುವುದನ್ನು ಹೇಳಹೋದರೆ ಅಥವಾ ಬರೆಯತೊಡಗಿದರೆ, ಅಂತಹ ಮನುಷ್ಯನು ವಿಜ್ಞಾನ ಕೇಸರಿಗಳ ಸಭೆಯಲ್ಲಿ—Though every man of us may be a hero for one fatalminute very few remain so after a day's march even, ಅರ್ಥಾತ್, ನಮ್ಮಂತಹವರಲ್ಲಿ ಪ್ರತಿಯೊಬ್ಬನೂ ಒಂದಾನೊಂದು ವಿಷಮಕ್ಷಣದಲ್ಲಿ ಧೀರೋದಾತ್ತನಂತೆ ವರ್ತಿಸಬಲ್ಲನಾದರೂ, ಒಂದುದಿನ ಮುನ್ನಡೆ ಮುಗಿದಕೂಡಲೆ ಹಾಗೇ ವರ್ತಿಸಬಲ್ಲವರು ತೀರ ವಿರಳ—ಎಂದು ತನ್ನ ದುರವಸ್ಥೆಯನ್ನು ತಾನೇ ತೋಡಿಕೊಳ್ಳಬೇಕಾದೀತು !

ಹೀಗೆ ವಿಜ್ಞಾನನೌಕೆಯು ನಿವಾತಸ್ಥಲದಲ್ಲೊಯ್ಯಲ್ಪಡುವ ದೀಪದಂತೆ ತೆರಳಬೇಕೇ ಹೊರತು, ಗಾಳಿಗೊಡ್ಡಿದ ಎಲೆಗಳಂತೆ ಚಲಿಸಲಾಗದು. ಎಂದರೆ ಅದರ ಗತಿ " ಸುಶಿಕ್ಷಿತವಾದ ಪೇಗುಟಾಕಣದ ಕ್ರಮಬದ್ಧ ಸಿಬ್ಬಣದ ನಡಿಗೆ ". ವಿಜ್ಞಾನಿಯ ವಾಕ್ಯಗಳು ಸರಳಿನಂತೆ ಸರಳವೂ ಸುಲಭವೂ, ಲಕ್ಷ್ಯವೇಧಿಯೂ ಆಗಿರಬೇಕು. ಹರಿಕಥೆಗಿಂತ ಉಪಕಥೆಗಳೇ ಹೆಚ್ಚಾದಂತೆ, ಪ್ರಬಂಧದಲ್ಲಿ ಕೊಡುವ ದೃಷ್ಟಾಂತಾದಿಗಳು ಮೂಲ ವಿಷಯವನ್ನು ಮರೆಯಿಸುವಂತಿರಲಾಗದು. ಎಲ್ಲಕ್ಕಿಂತ ಹೆಚ್ಚಾಗಿ ವ್ಯವಸ್ಥಿತ ಪರಿಭಾಷೆಯಿಂದ ಭಿನ್ನವಾದ ಶಬ್ದಗಳನ್ನು ಪ್ರಯೋಗಿಸಕೂಡದು. ಪರಿಭಾಷೆ ಹೊಸದಿದ್ದರೆ ಅದನ್ನು ಮೊದಲೇ ಸ್ಪಷ್ಟಪಡಿಸಬೇಕು. ಹಾಗಲ್ಲದಿದ್ದರೆ ಕೆರೆಯಲ್ಲಿ ಸಲಗ, ಹೊಕ್ಕಂತಾದೀತು, ಸಮಸ್ತವೂ ಅಸ್ತವ್ಯಸ್ತವಾದೀತು !

'ನಾನ್ಯಃ ಪಂಥಾ ವಿದ್ಯತೇಽಯನಾಯ'

ಜಾಗ್ರತೆ ! ನಕಲೀ ಮಾಲಿಗೆ ಮೋಸ ಹೋಗಬೇಡಿರಿ ! ಜಾಗ್ರತೆ !!

ಪಂಡಿತ ಜವಾಹರಲಾಲ ನೇಹರೂರವರು ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟು, ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

ಒಂದೇ ಸವನಾಗಿ ೫೦ ವರ್ಷದ ಅನುಭವದಿಂದ, ತಾಜಾ ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ

ಶಕ್ತಿಯ ಮೇಲೆ ಮೊದಲನೆಯ ತರದ ಟಾನಿಕ್

ದ್ರಾಕ್ಷಾಮೃತ

ಇದರ ಸೇವನೆಯಿಂದ ರಕ್ತಶುದ್ಧಿಯಾಗುವುದು. ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವುದು. ಕಣ್ಣು, ಕೈ, ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವುವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವರೋಗ ನಿವಾರಣೆಯಾಗಿ, ಸಂತತಿಧಾರಣೆಯಾಗುವುದು. ಅಂತೂ ಇದು ಆಬಾಲವೃದ್ಧ ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ.

ಕ್ರಯ ೧ ಬಾಟ್ಲಿಗೆ ೧। ರೂ. ೩ ಬಾಟ್ಲಿಗೆ ೩। ರೂ. ಡಜನ್ನಿಗೆ ೧೨ ರೂ.

ಮ್ಯಾನೇಜರ್ :— ಢೇರೆ ಕೆಮಿಕಲ್ ವರ್ಕ್ಸ್, ನಿಪ್ಪಾಣಿ (ಜಿ. ಬೆಳಗಾಂವಿ)

ಇದೂ ಒಂದು ಕನಸೇಕಾಗಬಾರದು!

(ಚಿಕ್ಕಕತೆ) ★ ಶ್ರೀ. "ಅನಿರುದ್ಧ" ಬ್ಯಾಡಿಗಿ

ನಮ್ಮ ಸಮಾಜದ ಸಾಂಪ್ರದಾಯಿಕ ಮದುವೆಗಳ ಮೂಲಕ, ಸೀತೆಯಂತೆ ಕನಸುಗಳನ್ನು ಕಾಣುವ ಹೆಂಗುಸರು ಎಷ್ಟು ಜನರೊ!

★

"ಶ್ರೀಮಾನ್

*** ರಾಯರಿಗೆ—

ವಂದನೆಗಳು. ಮಹತ್ತ್ವದ ಕೆಲಸವಿದ್ದುದರಿಂದ ನಿಮ್ಮಲ್ಲಿಗೆ ನಾಳೆಯೆ ಬರುವೆ. ಗಡಿಬಿಡಿಯಲ್ಲಿದ್ದೇನೆ. ಹೆಚ್ಚಿಗೆ ಮಾತನಾಡುವುದು ನಿಮ್ಮಲ್ಲಿಗೆ ಬಂದಮೇಲೆಯೆ. ಪ್ರಣಾಮ

—ಪ್ರಕಾಶ."

ರಾಯರು ಪೋಸ್ಟ್‌ಮಾಸ್ತರರು. ಟಪಾಲ ಚೀಲ ಬಿಚ್ಚುತ್ತಲೆ ಸುರುವಿದರು; ಈ ಪತ್ರ ಸಿಕ್ಕಿತು. ತಮ್ಮ ವಿಳಾಸಕ್ಕೇ ಬಂದುದು. ಈ 'ಪ್ರಕಾಶ' ಯಾರು ಎಂಬುದು ತಿಳಿಯದಾಯಿತು. ಹುಬ್ಬು ಏರಿಸಿದರು; ಒಮ್ಮೆಲೆ ಗಂಟಿಕ್ಕಿದರು. ಎಲ್ಲ ಪತ್ರಗಳನ್ನು ಹಂಚಿದವರೆ ಆ ಪತ್ರ ತೆಗೆದುಕೊಂಡು, ನೇರವಾಗಿ ಹೆಂಡತಿಯಿದ್ದಲ್ಲಿಗೆ ಬಂದರು.

"ಅಲ್ಲಾ, ಈ ಪತ್ರ ಯಾರದು?" ಎಂದು ಮೂಗಿನ ಮೇಲೆ ಕನ್ನಡಕವಿರುತ್ತಲೆ ಕೇಳಿದರು.

"ನಿಮ್ಮ ಪತ್ರ ನಿಮಗೆ ತಿಳಿಯುವುದಿಲ್ಲವೆ?"

"ನನ್ನ ವಿಳಾಸಕ್ಕೆ ಬಂದಿದೆ, ಅದು ನಿಜ. ಆದರೆ ಈ ಪತ್ರ ಬರೆದವರು ಯಾರು?"

"ಬರೆದವರು!" ಎಂದು ನಸುನಕ್ಕಳು ಸೀತಾದೇವಿ.

"ಈ ಪ್ರಕಾಶ ಯಾರು?"

"ಪ್ರಕಾಶ! ಪ್ರಕಾಶ?"

"ಅಹುದು ಪ್ರಕಾಶ! ಯಾವ ಪ್ರಕಾಶ? ಸೂರ್ಯಪ್ರಕಾಶವೊ ಏನು ಚಂದ್ರಪ್ರಕಾಶವೊ?"

"ಏನು ಬರೆದಿರುವ ಪ್ರಕಾಶ?"

"ಪ್ರಕಾಶ ಯಾರೆಂಬುದು ಮೊದಲು ಗೊತ್ತಿದೆಯೇನು?"

"ಎಲ್ಲಿ.... ತನ್ನಿರಿಲ್ಲಿ!"

"ಯಾರು?" ಮತ್ತೆ ಕೇಳಿದರು ರಾಯರು.

"ನಮ್ಮ ನೆರೆಮನೆಯ ಕಮಲಾಬಾಯಿಯವರ ಮಗ!"

"ಅವನೇಕೆ ಇಲ್ಲಿ ಬರುವನಂತೆ?" ಎಂದು ರಾಯರು ತಿಳಿಯದಂತೆ ಕೇಳಿದರು.

"ಬರೆದಿದ್ದಾನೆಯಲ್ಲ.... ಉಳಿದುದೆಲ್ಲ ನಿಮ್ಮಲ್ಲಿಗೆ ಬಂದ ಮೇಲೆಯೆ—ಎಂದು"

"ಅವನೇನು ಮಾಡುತ್ತಾನೆ? ಶಾಲೆಯವನೇನು?"

"ಅವನಿಗೂ ಮೊನ್ನೆ ಇಂಟರ್ ಪಾಸಾಗಿದೆ; ನಿಮ್ಮ ಪೋಸ್ಟಿನಲ್ಲಿಯೆ ನೌಕರಿಯನ್ನು ಹಿಡಿದಿರುವನಂತೆ!"

"ಧಾರವಾಡದಲ್ಲಿದ್ದಾನೇನು? ಹೊಸಬ ಹಾಗಾದರೆ!"

"ಏನಾದರೂ ಕೆಲಸವಿರಬಹುದೇನು?"

"ಏನು ಕೆಲಸವಿದೆಯೊ!"

"ಏನೊ!"

*   *   *

'ಪ್ರಕಾಶ ಏತಕ್ಕೆ ಬರುವ?' ಎಂಬುದು ಸೀತೆಗೆ ತಿಳಿಯದಾಯಿತು. ಬರುತ್ತಾನೆ ಹಾಗಾದರೆ! ಎಂದು ನಿಟ್ಟುಸಿರನ್ನು ಚೆಲ್ಲಿದಳು. ರಾತ್ರಿಯ ಊಟವಾಯಿತು. ಗಂಡ-ಹೆಂಡತಿ ಮಲಗಿಕೊಂಡರು. ಸೀತೆಗೆ ನಿದ್ರೆಯಿಲ್ಲ. ಕಣ್ಣು ನಿಚ್ಚಳವಾದುವು. ಹುದುಗಿದ್ದ ಒಂದೊಂದೇ ಸನ್ನಿವೇಶಗಳು ಕಣ್ಣಾಲಿಯೆದುರಿಗೆ ಸುಳಿಸುಳಿದು ನುಸುಳತೊಡಗಿದುವು. ಮಗ್ಗುಲಾದಳು. ಅರೆನಿದ್ದೆ:

"ಸೀತಾ ಇಲ್ಲಿ ಬಾಯಿಲ್ಲಿ"

"ಯಾಕೆ?"

"ಬಾರೇ ಇಲ್ಲಿ ಅಂದರೆ!"

"ಹುಂ!"

"ನಿನಗೆ 'ಸೀತಾ' ಎಂದು ನಾನು ಇನ್ನುಮೇಲೆ ಕರೆಯುವುದಿಲ್ಲ!"

"ಯಾಕೆ?"

"ಆ ಹೆಸರು ನಿನಗೆ ಒಪ್ಪುವುದಿಲ್ಲ!"

"ಇಲ್ಲದ್ದೊಂದು ಏನಾದರೂ ಅನ್ನುತ್ತೀ ತೀರಿತು!"

"ನಿನಗೆ 'ಜ್ಯೋತ್ಸ್ನಾ' ಎಂದು ಕರೆಯುತ್ತೇನೆ!"

"ಸಾಕು ಹೋಗು!"

"ಹೋಗಲೇ ಹಾಗಾದರೆ?"

"ಹೋಗು ಸಾಕು!"

"ಇದೋ ಹೊರಟೆ!"

"ಅದನ್ನು ನನಗೇಕೆ ಹೇಳಬೇಕು ?"

"ಬಿಡು !"

"ಇಲ್ಲಿ ಬಾಯಿಲ್ಲಿ !"

"ಮತ್ತೇಕೆ ಕರೆಯುತ್ತಿ ! ಹೋಗು ಅಂದಾಕೆ ?"

"ಅಲ್ಲ ಮತ್ತೆ, ಜ್ಯೋತ್ಸ್ನಾ ಎಂದು ಎಲ್ಲರೆದುರಿಗೆ ಕರೆಯಬೇಡ ಮತ್ತೆ !" ಎಂದು ಒಲ್ಲೆನೋಟದಿಂದ ಹೇಳಿದಳು.

"ಛೆ ! ಎಂದಿಗೂ ! ನಿನ್ನ ತಾಯಿಯೆದುರಿಗೆ ಅಷ್ಟೇ ಕರೆಯುತ್ತೇನೆ ; ಆಯಿತಿಲ್ಲವೊ ?"

"ಸಾಕು ಹೋಗು !"

"ಒಮ್ಮೆ ಹೋಗೆನ್ನುತ್ತಿ! ಒಮ್ಮೆ ಬಾ ಎನ್ನುತ್ತಿ, ರಾಣೀಸರಕಾರ್ ಹೇಳಿದ ಹಾಗೆ ಕೇಳಲಿಕ್ಕೆ ನಾನೇನು ರಾಜಾ ಸರಕಾರನೆ ?"

"ರಾಜಾ ಸರಕಾರ್ !"

ಸೀತೆಯ ಬಾಯಿಂದ "ರಾಜಾಸರಕಾರ್" ಎಂದು ಅರೆನಿದ್ದೆಯಲ್ಲಿಯೆ ಹೊರಟಿತು. ರಾಯರಿಗೆ ಎಚ್ಚರಾಯಿತು. "ಏನು, ಬಡಬಡಿಸುವೆಯೇನು ನಿದ್ದೆಯಲ್ಲಿ? ಮೊನ್ನೆ ಸಿನೇಮಾಕ್ಕೆ ಹೋಗಿದ್ದಿ. ಅದನ್ನೇ ನಿದ್ದೆಯಲ್ಲಿ ಬಡಬಡಿಸುತ್ತೀ ಕಾಣತದೆ !" ಎಂದರು. "ಏನಿಲ್ಲ" ಎಂದು ಸೀತೆ ಉತ್ತರವನ್ನಿತ್ತಳು. ಕಣ್ಣು ನಿಚ್ಚಳಾದುವು. ಪ್ರಕಾಶನ ರೂಪಚಿತ್ರ ಸೀತೆಯ ಮನದ ಕಣ್ಣೆದುರಿಗೆ ಅಚ್ಚಳಿಯದೆ ನಿಂತಿತು. "ಈಗ ಸರಕಾರ ಯಾವುದು? ಪರಪುರುಷರನ್ನು ಹೀಗೆ ನೋಡಬೇಕೆ ? ಪಾಪ ! ಪಾಪ !! ನನ್ನ ಪುಣ್ಯ ಹತ್ತಿರ ಇರುತ್ತಿರಲಿಕ್ಕಾಗಿ ಪಾರು ! ಅವನೆದುರಿಗೆ ನಾನು ಹೇಗೆ ನಿಲ್ಲಬೇಕು ? ಹಿಂದಿನಂತೆ ಸೀರೆ ಮುಡಿಕಟ್ಟಿಕೊಂಡು, ತೆಳುಪತ್ತಲವನ್ನುಟ್ಟುಕೊಂಡು, ಅವನ ಕೈ ಹಿಡಿದೆಳೆಯುತ್ತ— ಛೇ — ಹಣೆ ತುಂಬ ಕುಂಕುಮ ಹಚ್ಚಿಕೊಂಡು, ಇಳಕಲ್ಲ ಸೀರೆ ಉಟ್ಟುಕೊಂಡು, ತುಂಬುಸೆರಗು ಹೊದ್ದುಕೊಂಡು—ನನ್ನನ್ನು ಮಾತನಾಡಿಸಬಹುದೆ? ಅವನನ್ನು ನಾನೆಂತು ಕರೆಯಲಿ? ಹಿಂದಿನದನ್ನು ಎಲ್ಲ ನೆನಪು ಮಾಡಿಕೊಂಡು ಬೇಕಾದ ಹಾಗೆ ಮಾತನಾಡಹತ್ತಿದರೆ ಇವರು ಏನೆಂದಾರು ? ಮಾತನಾಡಿಸಿದರೇನು ತಪ್ಪು ? ತಪ್ಪೇನು ?"

"ತಪ್ಪೇನು ?"

"ಏನದು ? ಈವೊತ್ತು ಯಾಕೆ ಇಷ್ಟು ಬಡಬಡಿಸುತ್ತಿಯೆ ?"

"ಅಂ....ಏನಿಲ್ಲ !"

"ಯಾಕೆ ಹೆದರುತ್ತೀಯೇನು ? ಸುಮ್ಮನೆ ರಗ್ಗಿನ ಮುಸುಕು ಹಾಕು, ನಿದ್ದೆ ತಾನಾಗಿಯೆ ಬರುತ್ತದೆ !"

ಮತ್ತೊಂದು ಮಗ್ಗುಲಾದಳು. ಮತ್ತೆ ಅರೆನಿದ್ದೆ.

"ಜ್ಯೋತ್ಸ್ನಾ !"

"ಓ ಽಽ ....ಯಾಕೆ ?"

"ಯಾಕೆ, ತ್ರಾಸ ಬಹಳವಾಗಿದೆಯೇನು ?"

"ನಿನ್ನ ತ್ರಾಸವೆ ಬಹಳ ನೋಡು ನನಗೆ !"

"ಅಲ್ಲ ಮತ್ತೆ, ಬಾಯಿಲ್ಲಿ !"

"ಬಂದಿದ್ದೇನಲ್ಲಾ ಮತ್ತೆ !"

"ಅದೊ, ಅಲ್ಲಿ ನೋಡು, ಅಲ್ಲಿ ಏನು ಕಾಣಿಸುತ್ತದೆ ?"

"ಎಲ್ಲಿ ?"

"ಅಲ್ಲಿ, ಅದೋ ಅಲ್ಲಿ !"

"ಎಲ್ಲಿಯೋ ಮಹಾರಾಯಾ !" ಎಂದು ಸರ್ರನೆ ಮೊಗ ತಿರುಹಿದಳು. ತುಟಿ ಕೂಡಿದುವು.

ಸೀತೆ ಹಾಸಿಗೆಯ ಮೇಲೆಯೆ. ಆಕೆಯ ಕೆಂದುಟಿಗಳು ಆಕೆಯ ಎಡದೋಳಿಗೆ ಹೊಂದಿದ್ದುವು. ನಿಡಿದಾಗಿ ಉಸಿರನ್ನು ಕರೆಯುತ್ತ, ಚಿಕ್ಕನೆ ಎಚ್ಚರುಗೊಂಡವಳಂತೆ ಎದ್ದು ಕುಳಿತಳು. ದೀಪವನ್ನು ದೊಡ್ಡದಾಗಿ ಮಾಡಿದಳು. ಪತಿರಾಯರು ನಿದ್ರೆಯಲ್ಲಿದ್ದರು. "ಏನಿದು ಕನಸು ? ಕನಸಲ್ಲವಿದು, ನನ್ನ ಪಾಪವಿಚಾರ ! ಛಿ ! ಏತಕ್ಕೆ ಬಂದಿದ್ದೀತು ಈ ಪತ್ರ—ನನ್ನ ಮನಸ್ಸು ಕೆಡಿಸಲಿಕ್ಕೆ !" ಮತ್ತೆ ದೀಪ ಸಣ್ಣದಾಗಿಸಿ ಗಂಡನ ಕಡೆಗೆ ಮಗ್ಗುಲಾದಳು. ಮತ್ತೆ ಅರೆಜಂಪು :

"ಜ್ಯೋತ್ಸ್ನಾ, ಬಾಯಿಲ್ಲಿ !"

"ಯಾಕೆ ? ಬಂದೆ !"

"ಯಾಕೆ, ಮೊಗ ಸಣ್ಣಾಗಿದೆಯಲ್ಲ ?"

"ಏನೂ ?"

"ಹತ್ತಿರ ಬಾಯಿಲ್ಲಿ !"

"ಬಂದೆ, ಇನ್ನು ಮುಂದೆ ಬರುವುದಿಲ್ಲ !" ಅಳುವು ಬಂದಿತು.

"ಅಂ, ಏನದು ? ಯಾಕೆ ?"

"ನನ್ನ ಮದುವೆ...."

"ಯಾರ....ಸಂಗಡ ?"

"ಮದುವೆಯ ಕಾಲಕ್ಕೆ ನೋಡುವೆಯಂತೆ !"

ಎಂದು ಕೊಸರಿಕೊಂಡು ಹೋದಳು.

ಪ್ರಕಾಶ ಆಕೆಯ ಕೈಯನ್ನು ಗಟ್ಟಿಯಾಗಿ ಹಿಡಿದ.

ಸೀತೆ ಎಚ್ಚತ್ತಳು, ನೋಡಿದಳು; ಪತಿರಾಯನು ಆಕೆಯ ಕೈಯನ್ನು ಗಟ್ಟಿಯಾಗಿ ಹಿಡಿದಿದ್ದ. ಹಗುರಾಗಿ ಕೈ ಬಿಡಿಸಿಕೊಂಡಳು. ದೀಪ ಆರಿಸಿದಳು. ಇದೇ ಕೈಯನ್ನಲ್ಲವೆ ಪ್ರಕಾಶ ಗಟ್ಟಿಯಾಗಿ ಹಿಡಿದದ್ದು ? "ಅದೇ ಕೈಯನ್ನು ಮೇಲಿಂದ ಮೇಲೆ ನೋಡಿಕೊಂಡಳು. ಈಗ ತನ್ನನ್ನು ಹಿಡಿದ ಗಂಡನ ಕೈಯನ್ನೊಮ್ಮೆ ನೋಡಿದಳು. ಮತ್ತೆ ನಿದ್ದೆ ಆವರಿಸಿತು ; ಮತ್ತೊಂದು ಮಗ್ಗುಲಾದಳು.

"ಜ್ಯೋತ್ಸ್ನಾ !"

"ಯಾರು ?"

"ಅಲ್ಲ, ಸೀತಾ !"

"ಪ್ರಕಾಶನೇನು ?"

"ಅಹುದು !"

" ಬಾ, ಮಗು! ಬಾ," ಎಂದು ಕರೆದರು ಸೀತೆಯ ತಾಯಿ. ಒಳಗಿದ್ದ ಸೀತೆ ಹೊರಕ್ಕೆ ಬರಲಿಲ್ಲ.

" ಸೀತೆಯೆಲ್ಲಿ ? "

" ಏಕೆ ? "

" ಏನೋ ಕೊಂಚ .... "

" ಇನ್ನೇನು ಪ್ರಕಾಶ, ಸೀತೆ ದೊಡ್ಡವರ ಕೈಹಿಡಿದಳು ! "

" ಸೀತೆಯ ಮದುವೆಯೇನು ? "

"ಅಹುದು,ವರ ಅಷ್ಟೇನು ದೊಡ್ಡವನಲ್ಲ. ಪೋಸ್ಟಮಾಸ್ತರರು. ಮೊನ್ನೆ ಮೊನ್ನೆ ಅವರ ಕುಟುಂಬ ತೀರಿಕೊಂಡಿತು. ತುಂಬ ಘಗಾರಸ್ಥರು. ಪೋಸ್ಟಿನ ಬ್ಯಾಂಕಿನೊಳಗೆ ದುಡ್ಡು ಇಟ್ಟಾರಂತೆ. ಮೊದಲನೆಯ ಕುಟುಂಬದಲ್ಲಿ ಚಿಕ್ಕಮಗುವಿದೆಯಂತೆ. ಮನೆತುಂಬ ಆಳು-ಹೋಳು. ಸೀತೆ ನಮ್ಮನ್ನೇನೂ ಕಣ್ಣೆತ್ತಿ ನೋಡುವದಿಲ್ಲಪ್ಪಾ ಇನ್ನು ಮೇಲೆ ! "

" ಹೀಗೇನು ? ನನಗೂ ಸುದ್ದಿ ಹತ್ತಿತ್ತು ! "

" ಏನೇ ಸೀತಾ, ಚಹಾ ಮಾಡುವದಾಯ್ತೇನೇ ? ಪ್ರಕಾಶ ಬಂದಾನೆ, ಅವನಿಗೊಂದು ಕಪ್ಪು ಕೊಡು ! ಇದೇನೇ ಸೀತಾ, ಕಣ್ಣು ಎಷ್ಟು ಕೆಂಪಾಗಿವೆಯಲ್ಲೇ ? ಹೊಗೆ ಬಹಳಾಗಿದೆಯೇನೆ ? ನಾಳೆಯೆ ದೊಡ್ಡ ಪೋಸ್ಟಮಾಸ್ತರರ ಕೈಹಿಡಿದ ಮೇಲೆ, ನಿನಗೆ ಒಲೆಯ ಮುಂದೆ ಕೂಡುವ ಪ್ರಸಂಗ ಬರುವದೇ ಇಲ್ಲ, ಬಿಡು ! "

ಸೀತೆಗೆ ದುಃಖ ಒತ್ತರಿಸಿ ಬಂದಿತು.

" ಏನೇ, ಈಗಾಗಲೆ ಅತ್ತೆಯ ಮನೆ ನೆನಪಾಯಿತೇನು ? "

" ಹಾಗಾದರೆ ಸೀತೆ ನಮ್ಮನ್ನು ಮರೆತೇ ಬಿಟ್ಟಳು !" ಪ್ರಕಾಶ ಹುಸಿನಗೆಯಿಂದ ಎಂದ.

ಸೀತೆ ಚಿಕ್ಕನೆ ಎದ್ದಳು. ಆಕೆಯ ಕೆನ್ನೆಯೆಲ್ಲ ಕಣ್ಣೀರಿನಿಂದ ಒದ್ದೆಯಾಗಿದ್ದಿತು.. ಮತ್ತೆ ದೀಪ ಏರಿಸಿದಳು. ರಾಯರು ಗೊರಕೆಯಲ್ಲಿದ್ದರು. ದಿಗ್ಗನೆ ಎದ್ದವಳೇ ಏನೋ ನೆನಪಾದವಳಂತೆ ತನ್ನ ಟ್ರಂಕಿನ ಕಡೆಗೆ ಧಾವಿಸಿದಳು. ಸಪ್ಪಳಾಗದಂತೆ ಹಗುರಾಗಿ ಮುಚ್ಚಳ ತೆರೆದಳು. ಅಲ್ಲಿದ್ದ ಪ್ರಕಾಶನ ಭಾವಚಿತ್ರವನ್ನು ಕಣ್ತುಂಬ ನೋಡಿದಳು. ತುಂಬ ಪ್ರೇಮದಿಂದ ಮೆಲ್ಲಗೆ 'ಪ್ರಕಾಶ' ಎಂದು ಆಕೆಯ ಬಾಯಿಂದ ಹೊರಟಿತು. ತನ್ನ ತುಂಬುಎದೆಗೆ ಅವಚಿಕೊಂಡಳು. ಎಷ್ಟು ಹೊತ್ತು ಹಾಗೆಯೆ ಕುಳಿತಿದ್ದಳೊ ! ಮತ್ತೆ ಟ್ರಂಕಿನಲ್ಲಿಡುತ್ತ, ಮತ್ತೆ ತೆರೆದು ನೋಡುತ್ತ, ಕಡೆಗೊಮ್ಮೆ ತನ್ನ ರೇಶ್ಮೆಯ ಪತ್ತಲದ ಮಡಿಕೆಯಲ್ಲಿಟ್ಟಳು. ಹಗುರಾಗಿಯೆ ಮುಚ್ಚಳ ಮುಚ್ಚುವ ವೇಳೆಯಲ್ಲಿ 'ಕಿರ್ ಕಿರ್' ಎಂದು ಸಪ್ಪಳಾಯಿತು. ರಾಯರು ಹತ್ತಿರ ಬಂದು ಕೇಳಿದರು :

" ಈಹೊತ್ತು ಹೀಗೇಕೆ ಮಾಡುತ್ತೀಯೆ ನೀನು ? "

" ಏನು ? "

" ನಡುರಾತ್ರಿಯಾಗಿದೆ, ಇನ್ನೂ ನೀನು ಮಲಗಿಕೊಂಡಿಲ್ಲವಲ್ಲ!"

" ನಿದ್ದೆಯೆ ಬರಲೊಲ್ಲದು ! "

" ಮಲಗಿಕೊಂಡರೆ ನಿದ್ದೆ ತಾನಾಗಿಯೆ ಬರುತ್ತದೆ. ಏಕೆ ನೀರೇಕೆ ಕಣ್ಣಲ್ಲಿ ? ಏನೇ ಇದು, ಏನಾಗಿದೆ ನಿನಗೆ? ತಲೆಶೂಲಿಯೋ ಏನು ? ನಾನಿರಲಿಕ್ಕೆ ನಿನಗೇಕೆ ಹೆದರಿಕೆ ? "

" ಏನೂ ಇಲ್ಲ ! "

" ಏಕೆ ತವರ್ಮನೆಯ ನೆನಪಾಗಿವೆಯೇನು ಮತ್ತೆ ? ನಾಳೆ ಪ್ರಕಾಶ ಬರತಾನೆ; ಅವನ ಜೊತೆಗೆ ತವರ್ಮನೆಗೆ ಹೋಗಿ ೪-೮ ದಿನ ಇದ್ದು ಬಾ ! ಈಗಂತೂ ಮಲಗಿಕೊ ! "

' ಇದೇನು ವಿಚಿತ್ರ ? ' ಎಂದೆನಿಸಿತು ಆಕೆಗೆ. ಮಲಗಿಕೊಂಡಳು.

* * *

ಬೆಳಗಿನ ಜಾವ. ತಂಗಾಳಿ ಬಿಟ್ಟುದರಿಂದ ಸೀತೆಗೆ ನಿದ್ದೆ ಜೋರಾಗಿ ಹತ್ತಿತು. ಪ್ರತಿದಿನ ಪೋಸ್ಟ ಆಫೀಸು ಬೆಳಗಿನ ಏಳು ಗಂಟೆಗೆ ತೆರೆಯುವುದು. ರಾಯರು ಹೆಂಡತಿಯನ್ನೆಬ್ಬಿಸದಲೆ, ಮುಖ ತೊಳೆದುಕೊಂಡು, ೭ ಗಂಟೆಗೆ ಆಫೀಸಿನೊಳಗೆ ಬಂದರು. ' ಏನಾದರೂ ತಂತಿ ಇವೆಯೇನು?' ಎಂದು ಬೆಳಗಾಂವಿಯವನನ್ನು ಕೇಳಿದರು. ಬೆಳಗಾಂವಿಯವನು ' ಎರಡು ' ಎಂದು ಉತ್ತರ ವನ್ನಿತ್ತ. " ಸಾಗಲಿ " (G). ಒಂದು ತಂತಿ ತೆಗೆದುಕೊಂಡರು. ಅದು ಪ್ರಕಾಶನದೆ: Sita C/o Postmaster. unable to come; you both attend my marriag at Dharwar. Prakash. (ಸೀತಾ C/o ಪೋಸ್ಟಮಾಸ್ತರ್. ' ನನಗೆ ಬರುವ-ದಾಗಲಿಲ್ಲ. ನೀವಿಬ್ಬರೂ ನನ್ನ ಮದುವೆಗೆ ಬನ್ನಿರಿ ಧಾರವಾಡಕ್ಕೆ')

" ಏನೆ, ಇನ್ನೂ ಮಲಗಿರುವೆಯೇನು ? ಪ್ರಕಾಶನೇನೂ ಬರುವುದಿಲ್ಲವಂತೆ. ಅವನ ಮದುವೆಯಂತೆ ಧಾರವಾಡದಲ್ಲಿ. ನಮ್ಮಿಬ್ಬರಿಗೂ ಬನ್ನಿ ಎಂದು ತಂತಿಯಿಂದ ತಿಳಿಸಿರುವನು ನೋಡು ! "

" ಏನು ಪ್ರಕಾಶ ಬರುವದಿಲ್ಲವೆ ? ಅವನ ಮದುವೆಯೆ ? ಎಲ್ಲಿ ಧಾರವಾಡದಲ್ಲಿಯೆ ? " ರಾಯರಿಗೆ ಸೀತೆಗೆ ಉತ್ತರಕೊಡಲು ಅವಕಾಶವಿರಲಿಲ್ಲ ! ಬೆಳಗಾಂವಿಯವರ ಹತ್ತಿರ ಇನ್ನೊಂದು ತಾರು ಇದ್ದಿತು. ಮತ್ತೆ " ಸಾಗಲಿ (GN)" ಎಂದರು.

' ಇದೂ ಒಂದು ಕನಸೇಕೆ ಆಗಬಾರದು ?' ಎಂದೆನಿಸಿತು ಸೀತೆಗೆ !

ಅಣ್ಣೀಗೇರಿಯಲ್ಲಿ ನಮ್ಮ ಏಜಂಟರು
ಶ್ರೀ. ವಿ. ಎಸ್. ಯರಗಂಬಳೀಮಠ

ಸಿದ್ದಾಪುರದಲ್ಲಿ ನಮ್ಮ ಏಜಂಟರು
ಶ್ರೀ. ವಿ. ಜಿ. ಹೆಗ್ಡಾರ

ಅಜ್ಞಾನ

(ಲಘುಪ್ರಬಂಧ)

ಶ್ರೀ. ಖಾನೋಳಕರ ಶ್ರೀಧರರಾಯರು

★

ಮೊನ್ನೆ ನಾನು ನಮ್ಮೊಬ್ಬ ಮಿತ್ರರ ಭೆಟ್ಟಿಗೆ ಹೋಗಿದ್ದೆ. ಅವರ ತಮ್ಮಂದಿರು ವಿಷಮಜ್ವರದಿಂದ ಅಸ್ವಸ್ಥರಾಗಿದ್ದರು. ಡಾಕ್ಟರರು ಬಂದಿದ್ದರು. ಕೇಳಿದರು "ಎಷ್ಟಿವೆ ಜ್ವರ?" ಎಂದು. "ನನಗೆ ಥರ್ಮಾಮಿಟರ್ ತಿಳಿಯುವುದಿಲ್ಲ" ಎಂದರು ನನ್ನ ಗೆಳೆಯ. ಡಾಕ್ಟರರು ತಿರಸ್ಕಾರದ ಮಂದಸ್ಮಿತದಿಂದ ಕೂಡಿ "All right" ಎಂದು ತಾವೇ ಜ್ವರವನ್ನು ನೋಡಿದರು. ನನಗೂ ಆಶ್ಚರ್ಯವೆನಿಸಿತು. ನನ್ನ ಮಿತ್ರ **ಮನೋಹರರಾವ್** M. A. B. T. ತತ್ತ್ವಜ್ಞಾನದಲ್ಲಿ ಪಾರಂಗತರು; ಸಂಸ್ಕೃತದಲ್ಲಿ ಕಾವ್ಯಸಾಮರ್ಥ್ಯವುಳ್ಳವರು; ಇಂಗ್ಲೀಷಂತೂ ಅವರ ಮನೆಯಲ್ಲಿ ನೀರುಹೊರುತ್ತಿತ್ತು. ಇಂಥವರಿಗೆ ಥರ್ಮಾಮಿಟರು ನೋಡ-ಲಿಕ್ಕೆ ಬರಬಾರದೇ?

ನಾನು ಮನೋಹರರಾಯರ ಮನೆಯಿಂದ ಹೊರಬಿದ್ದು ಮನೆಯ ದಾರಿ ಹಿಡಿದೆ. ಹಿಂದೆ ಗಂಟೆಯ ಸಪ್ಪಳವಾಯಿತು. ಡಾಕ್ಟರರು ಸಾಯಕಲ್ಲಿನಿಂದ ಕೆಳಗಿಳಿದರು. "ಯಾಕೆ, ರಾಯರೇ ಎಲ್ಲಿಗೆ?" ಎಂದು ಕೇಳಿದರು. "ಮನೆಗೆ" ಎಂದೆ. ಡಾಕ್ಟರರು ಇಳಿದದ್ದು ನನ್ನ ಕ್ಷೇಮ-ಸಮಾಚಾರಕ್ಕಲ್ಲ; ತಮ್ಮ ಹೊಟ್ಟೆಯೊಳಗೆ ಉಕ್ಕುತ್ತಿರುವ ತಿರಸ್ಕಾರವನ್ನು ಕಾರುವು-ದಕ್ಕಾಗಿ: "ಈಗಿನ ಶಿಕ್ಷಣದಲ್ಲಿಯೇ ಏನೂ ಹುರುಳಿಲ್ಲ; ಎಮ್. ಎ. ಆದವರಿಗೆ ಥರ್ಮಾಮಿಟರು ತಿಳಿಯಲಿಕ್ಕೆ ಬರಬಾರದೇ? ಬೆಂಕೀಹಚ್ಚಲಿ ಈ ಆರ್ಟ್ಸ ಕಾಲೇಜುಗಳಿಗೆ! ಪ್ರತಿಯೊಬ್ಬರ ಕೊರಳೊಳಗೊಂದು ಥರ್ಮಾಮಿಟರು ಕಟ್ಟ-ಬೇಕು! ನಾ ನೋಡಿರಿ, ಇದೇ ಈಗ Chancely ...." ಅಯ್ಯಯ್ಯೋ ಅಪ್ಪಾರೇ. ಇಂಗ್ಲೀಷ್ ಭಾಷೆಯ ಕೊಲೆ! ಈ 'Chancely' ಎಂಬ ಶಬ್ದವನ್ನು ಉಪಯೋಗಿಸಿದ್ದಕ್ಕಾಗಿ, ನಾಲ್ಕನೆಯ ಈಯತ್ತೆಯೊಳಗಿರುವಾಗ ಬೆನ್ನುಸುಲಿಸಿಕೊಂಡಿದ್ದೆ- ಮಾಸ್ತರರ ಕಡೆಯಿಂದ! ನನ್ನ ಹೃದಯದ ಪ್ರತಿಯೊಂದು ಹಾರಿಕೆಯಲ್ಲಿಯೂ 'by Chance' ಎಂದೇ ಹೊಡೆಯುತ್ತಿತ್ತು. ನಾನು ನಿಂತೆ. ಡಾಕ್ಟರ್ **ಶಂಕರನಾಥ** M B B. S ಅವರು ತಮ್ಮ ಸಾಯಕಲ್ ಮೇಲೆ ಜಿಗಿದರು. **ಮನೋಹರರಾವ್** ಎಮ್.ಎ. ಬಿ.ಟಿ. ಅವರಿಗೆ ಥರ್ಮಾಮಿಟರು ತಿಳಿಯದಿದ್ದರೆ, **ಶಂಕರನಾಥ** ಎಮ್. ಬಿ. ಬಿ. ಎಸ್‌ರಿಗೆ 'by Chance' ಎನ್ನುವುದು ತಿಳಿಯಬಾರದೆ?

ಸಾಧುವರ್ಯನಾದ ಸಾಕ್ರೇಟೀಸನು "ಜಗತ್ತಿನಲ್ಲಿ ನಾನೇ ಜಾಣನು!" ಎಂದು ಹೇಳುತ್ತಿದ್ದನು. 'ಯಾಕೆ?' ಎಂದು ಕೇಳುವ ಸಾಮರ್ಥ್ಯವು ಯಾರಿಗೂ ಇರಲಿಲ್ಲ. ಒಬ್ಬ ಶಿಷ್ಯನು ಗಟ್ಟಿಧೈರ್ಯ ಮಾಡಿ "ಹೀಗೇಕೆ ಅನ್ನುತ್ತೀರಿ? ನಿಮಗಿಂತ ಶ್ರೇಷ್ಠರಾರೂ ಇಲ್ಲವೋ?" ಎಂದು ಕೇಳಿದನು. ಸಾಕ್ರೇಟೀ-ಸನು ನಸುನಕ್ಕು "ಇದು ನೋಡು, ನಾನೆನ್ನುವುದು ನಿಜವೋ ಸುಳ್ಳೋ ಎಂಬುದನ್ನು: ತತ್ತ್ವಜ್ಞಾನದಲ್ಲಿಯೂ ಕಾವ್ಯದಲ್ಲಿಯೂ ಶಾಸ್ತ್ರಗಳಲ್ಲಿಯೂ ನನ್ನನ್ನು ಮೀರುವವರು ಅನೇಕರಿದ್ದಾರೆ; ಆದರೆ ಇವರೆಲ್ಲರಿಗೂ ಗೊತ್ತಿಲ್ಲದುದೊಂದು ತತ್ತ್ವ ನನಗೆ ಗೊತ್ತಿದೆ. ಅದಾವುದೆಂದರೆ 'ನಾನು ಅಜ್ಞಾನಿ' ಎಂಬುದು!" ಶಿಷ್ಯನಿಗೆ ಸಮಾಧಾನವಾಯಿತು. ಸಾಕ್ರೇಟೀಸನಂತೆಯೆ ಸರ್ವಜ್ಞ-ನಾದರೂ "ಸರ್ವಜ್ಞನೆಂಬಾತ ಗರ್ವದಿಂದ್ವಾದಾನೆ, ಸರ್ವ-ರೊಳೊಂದೊಂದು ನುಡಿ ಕಲ್ತು, ವಿದ್ಯೆಯ ಪರ್ವತವೆ ಆದ ಸರ್ವಜ್ಞ" ಎಂದು ಹೇಳಿದುದರ ಮರ್ಮವೂ ಇದೇ. ಈ ಜಗತ್ತಿ-

★

ಅಜ್ಞಾನವಿರುವುದೇನು ಅಪ್ಪಲ್ಲ; ಜ್ಞಾನದ ನೆಲೆಯು ಯಾರಿಗೂ ಪೂರ್ಣವಾಗಿ ಹತ್ತಿಲ್ಲ. ಆದರೆ ತನ್ನ ಅಜ್ಞಾನವು ಒಡೆದು ತೋರುತ್ತಿ-ದ್ದರೂ ಅದನ್ನು ಮುಚ್ಚಿಕೊಳ್ಳುವ ವ್ಯರ್ಥ-ಪ್ರಯತ್ನವು ನಗೆಗೆ ಈಡಾಗದಿರದು!

★

ನಲ್ಲಿ ಯಾರೂ ಸರ್ವಜ್ಞರಲ್ಲ. **ನ್ಯೂಟನ್‌**ನಿಗೆ ಒಬ್ಬನು "ನೀವು ಸರ್ವಜ್ಞರು, ನಿಮ್ಮ ಬುದ್ಧಿ ಅಗಾಧವಾದದ್ದು" ಎಂದನಂತೆ. ಅದಕ್ಕೆ ಅವನು "ಯಾತರ ಬುದ್ಧಿ? ನಾನು ಸಮುದ್ರದ ದಂಡೆ-ಯಲ್ಲಿ ಸಿಂಪುಗಳನ್ನು ಕೂಡಿಸುವ ಹುಡುಗನಂತಿದ್ದೇನೆ. ಇನ್ನೂ (ಜ್ಞಾನ) ಸಮುದ್ರದ ನೀರೊಳಗೆ ಕೂಡ ಇಳಿದಿಲ್ಲ" ಎಂದ-ನಂತೆ. ತಮ್ಮ ಅಸಾಮಾನ್ಯವಾದ ಜ್ಞಾನದಿಂದ ಜಗತ್ತಿನ ಕಣ್ಣುಗಳನ್ನೇ ಕುಕ್ಕಿಸುವಂತಹ ವಿದ್ವಾಂಸರೇ ಹೀಗೆಂದ ಮೇಲೆ, **ಡಾ. ಶಂಕರನಾಥರೆಲ್ಲ**, ಮಾಸ್ತರ್ **ಮನೋಹರರಾಯರೆಲ್ಲಿ**? ಯಾವ ಗಿಡದ ತೊಪ್ಪಲು?

ಶಿಕ್ಷಣವಿಲ್ಲದೆ ಜ್ಞಾನವಿಲ್ಲ. ಸಣ್ಣಮಾತೂ ಸರಿ, ದೊಡ್ಡ-ಮಾತೂ ಸರಿ– ಸೂಜಿಯಲ್ಲಿ ದಾರಪೋಣಿಸುವುದರಿಂದ ಮೊದಲು ಮಾಡಿ ನಾಯಗರಾ ನದಿಯ ಮೇಲೆ ರಾಕ್ಷಸನಂತಹ ಪೂಲು-ಗಳನ್ನು ಕಟ್ಟುವ ಎಂಜನಿಯರ್‌ನ ವರೆಗೆ ಎಲ್ಲರಿಗೂ— ಪ್ರತಿ-ಯೊಂದು ಮಾತಿನ ಶಿಕ್ಷಣ ಬೇಕು. ದಿನಾಲು ನೂರಾರು ಜನರ

ಜೀವಗಳನ್ನುಳಿಸುವ ಡಾಕ್ಟರ್‌ನಿಗೆ, ಬಂದು ಕೋಟಿಗೆ ತೇಪೆ ಹಚ್ಚಿ ಎರಡು ಇಂಚು ಅರಿವೆಯನ್ನುಳಿಸುವುದು ಗೊತ್ತಾಗದು. ಅನಂತವಾದ ತೊಡಕಿನ ರಾಜ್ಯಗಳ ಆಡಳಿತನವನ್ನು ಸಾಗಿಸುವ ರಾಜನಿಗೆ ನಮ್ಮ ಗೋದೂಬಾಯಿ ಮಾಡುವ ಅನ್ನ-ಝುಣಕ-ವನ್ನಾದರೂ ಮಾಡಲಿಕ್ಕೆ ಬಂದೀತೇ? ತನ್ನ ಸೊಂಡಿಲಿನ ತುದಿಯಿಂದ ಮಣ್ಣೊಳಗೆ ಬಿದ್ದಿರುವ ಚಿನುಗು ಸೂಜಿಯನ್ನೂ ಆರಿಸುವ ಆನೆಗೆ, ವಿದ್ಯುದ್ದೀಪದ ಬಿರಡಿಯನ್ನೊತ್ತಿ ದೀಪವನ್ನು ಆರಿಸುವುದು ಬಂದೀತೇ ಶಿಕ್ಷಣವಿಲ್ಲದೆ? ಆದ್ದರಿಂದ ನಾನೇ ಜಾಣನೆಂಬ ಗರ್ವವು ಮನುಷ್ಯನಿಗೆ ಒಪ್ಪುವುದಿಲ್ಲ.!

ಮೊನ್ನೆ ನಮ್ಮ ಗೆಳೆಯ **ಶೀನಪ್ಪನ** ಅತ್ತೆ ಮುಂಬಯಿಗೆ ಹೋಗಿದ್ದಳು. ಅಲ್ಲಿ ಹೋಗಿ ವಿಕ್ಟೋರಿಯಾ ಟರ್ಮಿನಸ್ ಸ್ಟೇಶನನ್ನಿನ ಮೇಲೆ "ನಮ್ಮ ಅಳ್ಯಾ ಎಲ್ಲಿರತಾನ .... ಅಷ್ಟು ತೋರಿಸಿರಿ," ಎಂದು ಕೇಳಿದಳಂತೆ! ಅಯ್ಯೊ, ಮುಂಬಯಿ-ಯಲ್ಲಿ ಕನ್ನಡ ಬಲ್ಲವರೆಷ್ಟು ಮಂದಿ? ಬಹಳಷ್ಟು ಇದ್ದರೂ ಲಕ್ಷ್ಮಂಬಾಯಿಯ ಅಳಿಯದೇವರ ಪೂಜೆಯನ್ನೇ ಮಾಡುತ್ತ-ಕೂಡುತ್ತಾರೇನು, ಅಲ್ಲಿಯವರು? ಪಾಪ ಆಕೆಯಂತೂ ಪೆಂಗುಸು; ನನ್ನಂಥ ನಾನು ಹೋಗಿದ್ದೆ ಮೊನ್ನೆ ಮುಂಬಯಿಗೆ—ಇಂಗ್ಲೀಷು, ಹಿಂದಿ, ಸಂಸ್ಕೃತ, ಮರಾಠಿ, ಕನ್ನಡ ಬಲ್ಲವ! ಮಾಟುಂಗಾ-ದಲ್ಲಿ ಒಬ್ಬರನ್ನು ಭೆಟ್ಟಿಯಾಗುವುದಿತ್ತು. ವ್ಹಿ. ಟಿ. ಸ್ಟೇಶನ್ನಿನ ಮೇಲೆ ಟಿಕೀಟು ಸಿಕ್ಕಬೇಕಾದರೇನೇ ಅರ್ಧಗಂಟೆ ಹಿಡಿಯಿತು. ಎಷ್ಟು ಮಂದಿಯನ್ನು ಕೇಳಿದರೂ "ಉಧರ್ ಮಿಲತಾ ಹೈ"! ಅಚ್ಛಾ, ತಿಕೀಟು ತೆಗೆದು ಮಾಟುಂಗಾ ಮುಟ್ಟಿದೆ. ಹೊರಬಿದ್ದೆ. ನನಗೆ ಗೊತ್ತಿರುವಂತಹವರಾರೂ ಕಾಣಲಿಲ್ಲ. ಪ್ರತಿಯೊಂದು ಅಟ್ಟವನ್ನೂ ಹತ್ತಿದೆ. ಪ್ರತಿಯೊಬ್ಬರ ಮನೆಯ ಹಲಗೆಗಳನ್ನೂ ಓದಿದೆ. ಹೊಟೆಲ್ಲುಗಳಲ್ಲಿ ಕೇಳಿದೆ, ಶಾಲೆಗಳಲ್ಲಿ ಹೊಕ್ಕೆ, ದಾರಿಯಲ್ಲಿ ಹೋಗು-ಬರುವವರನ್ನು ಅಂಗಲಾಚಿ ಬೇಡಿಕೊಂಡೆ. ಕಟ್ಟಕಡೆಗೆ (ಇಷ್ಟರಲ್ಲಿಯೆ ೧೧ ಹೊಡೆಯಿತು, ಬಿಸಿಲು ಏರತೊಡಗಿತು. ಜೀವ ತಳಮಳಿಸಿತು.) ಒಬ್ಬರು ಮದ್ರಾಸಿನ ಕಡೆಯವರ ಭೆಟ್ಟಿಯಾಯಿತು. "ಇಲ್ಲಿ ಕನ್ನಡ ಜನರು ಎಲ್ಲಿರುತ್ತಾರೆ?" ಎಂದು ಕೇಳಿದೆ. ಅವರು ಇಂಗ್ಲಿಷಿನಲ್ಲಿ ಹೇಳಿದರು: "ಇಲ್ಲಿ ಯಾರೂ ಇರುವುದಿಲ್ಲ, ಆ ಸ್ಟೇಶನ್ನು ದಾಟಿ ಆಚೆಗೆ ಹೋಗಿರಿ; ಅಲ್ಲಿ ಯಾರನ್ನಾದರೂ ಕೇಳಿರಿ!" ಸ್ಟೇಶನ್ನು ದಾಟಬಹುದು; ಮತ್ತೆ ಅಲ್ಲಿ ಯಾರನ್ನಾದರೂ ಕೇಳಬೇಕೇ? ಥೂ ಆ ಬಾಂಬೇಕ್ಕೆ ಬೆಂಕಿ ಹಚ್ಚಲಿ! ನಾ ಒಲ್ಲೇ ಒಲ್ಲೆನೆಂದು ಒಂದು ಹೊಟೇಲಿನಲ್ಲಿ ಹೋಗಿ ಸೋಡಾವಾಟರ್ ಕುಡಿದು, ಆ ಹಾದಿಯನ್ನೇ ಬಿಟ್ಟೆ. ಮುಂಬಯಿಯೊಳಗೆ ಅಜ್ಞಾನದ ಒಂದು ತೊಟಕು ಇದ್ದರೂ ಇಷ್ಟು ಪ್ರಯಾಸವಾಗುವುದು; ಎಂದ ಮೇಲೆ ಇಂತಹ ಲಕ್ಷಾವಧಿ ಮುಂಬಯಿಗಳನ್ನು ಹಳಿಯುವ ಈ ಗೂಢವಾದ ವಿಶ್ವದ ವ್ಯವಹಾರದಲ್ಲಿ, ಪ್ರತಿಯೊಬ್ಬನಿಗೂ ಎಷ್ಟು ಜ್ಞಾನವಿದ್ದಿರಬೇಕೆಂಬುದನ್ನೇನು ಹೇಳಬೇಕೆ? ಈ ಜಗತ್ತಿನಲ್ಲಿ ಅಣು-ರೇಣು-ತೃಣ-ಕಾಷ್ಠಗಳಲ್ಲಿ ಆ ಅದ್ವಿತೀಯವಾದ ಗೂಢತತ್ತ್ವವು ತೊಡಕಿನಿಂದ ತುಂಬಿರುವುದರಿಂದ, ಮಾನವನಿಗೆ ಸಿಕ್ಕುವ ಜ್ಞಾನವಾದರೋ ಅಜ್ಞಾನದಿಂದ ತುಂಬಿರುವುದು. 'ಅಜ್ಞಾನೇ-ನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ'!

ಅಜ್ಞಾನವಿರುವುದೇನೂ ತಪ್ಪಲ್ಲ. ಜ್ಞಾನದ ನೆಲೆಯು ಯಾರಿಗೂ ಪೂರ್ಣವಾಗಿ ಹತ್ತಿಲ್ಲ. ಆದರೆ ತನ್ನ ಅಜ್ಞಾನವು ಒಡೆದು ತೋರುತ್ತಿದ್ದರೂ ಅದನ್ನು ಮುಚ್ಚಿಕೊಳ್ಳುವ ವ್ಯರ್ಥ-ಪ್ರಯತ್ನವನ್ನು ಮಾಡುವ ಮಾನವನನ್ನು ಕಂಡರೆ ನಗೆ ಬಾರದೆ ಇರಲಾರದು. ನಾನೊಮ್ಮೆ ನಮ್ಮೊಬ್ಬ ಭಾಷಾಧ್ಯಾಪಕರಿಗೆ "ಸರ್, ಮೋಡಗಳು ಹೇಗಾಗುತ್ತವೆ?" ಎಂದು ಕೇಳಿದೆ. ಅವರು "ಮೋಡಗಳೋ? ಅವು ಆಸ್‌ಬೆಸ್‌ಟೊಪ್‌ನಿಂದ ಆಗುತ್ತವೆ," ಎಂದು ಹೇಳಿದರು. ನಾನು ಶಾಸ್ತ್ರೀಯ ವಿಷಯದ ಅಧ್ಯಾಪಕರಲ್ಲಿ ಅದೇ ಪ್ರಶ್ನೆಯನ್ನು ಕೇಳಿದೆ. ಅವರು ಸಮರ್ಪಕವಾಗಿ ಉತ್ತರಿಸಿದರು; ನನಗೆ ಸಮಾಧಾನವಾಯಿತು. ಆದರೂ 'ಆಸ್‌ಬೆಸ್‌ಟೊಪ್'ದ ಭೂತವು ನನ್ನ ಮನಸ್ಸಿನಲ್ಲಿ ಕುಣಿಯುತ್ತಿತ್ತು. ಕೇಳಿದೆ "ಸರ್, ಆಸ್‌ಬೆಸ್‌ಟೊಪ್ ಎಂದರೇನು?". "ಅದೋ ಒಂದು ಧಾತುವು" ಎಂದು ಮಾಸ್ತರರು ಹೇಳಿದರು. ಮೊದಲಿನ ಮಾಸ್ತರರ ಮೂರ್ತಿಯು ನನ್ನ ಕಣ್ಣೆದುರಿಗೆ ನಿಂತಿತೆಂದರೆ ನನಗೆ ನಗೆ ಬಂದು ನಾನು ನನ್ನ ಚಿಂತೆಗಳನ್ನು ಮರೆಯುತ್ತೇನೆ. ಇದಾಯಿತು ಬರಿ ವ್ಯವಹಾರದ ಮಾತು. ಇನ್ನು ಆಧ್ಯಾತ್ಮಿಕಜ್ಞಾನವು ತಮ್ಮ 'ಕರತಲಾ-ಮಲಕವತ್' ಇದೆಯೆಂದೂ, ದೇವರು ತಮಗೆ ಪ್ರತ್ಯಕ್ಷನಾಗಿ-ರುವನೆಂದೂ ತಮ್ಮ ಸಂಗಡ ಮಾತಾಡುವನೆಂದೂ, ತಮ್ಮ ಕೂಡ ಹಸ್ತಾಂದೋಲನವನ್ನು ಮಾಡುವನೆಂದೂ, ಅವನ ಭಕ್ತರ ಮನೆಯಲ್ಲಿ ಅಡಿಗೆ ಮಾಡುವನೆಂದೂ (ಫರಾಳ, ಚಕ್ಲಿ, ಚಿವಡಾ, ಚಹಾಸುದ್ಧಾ) ಜಂಭಕೊಚ್ಚಿ, ಬಡವರೂ ಅಜ್ಞಾನಿಗಳೂ ಆದ ಕುರಿಗಳಿಂದ ದುಡ್ಡು ತಿತ್ತಿ ಪಂಟುತನಮಾಡುವವರನ್ನು ಕಂಡರೆ ನನ್ನ ತಲೆಯು ತಿರುಗುತ್ತದೆ. ದೇವರ ಭಕ್ತಿಯು ಸಾಧ್ಯವೇ? ಅಹುದು. ದೇವರು ಅಗಾಧನಾಗಿರುವನೇ? ಅಹುದು. ದೇವರ ಸ್ವರೂಪವನ್ನು ಕಂಡುಹಿಡಿಯಬಹುದೇ? ಬಹುದು. ಆದರೆ ದೇವರು ಪ್ರತ್ಯಕ್ಷನಾಗಿ ನಮ್ಮ ಮನೆಯಲ್ಲಿ ನೀರುಹೊರುತ್ತಾ-ನೆಂದರೆ! ಅಯ್ಯೋ, ಇದು ಮೋಸ! ತನ್ನ ವಂಚನೆಯೇ ಸರಿ!

ಅಜ್ಞಾನದಿಂದ ತುಂಬಿದಂತಹ ಮನಸ್ಸಿನಲ್ಲಿ ದಿನಾಲು ಒಂದೊಂದು ಜ್ಞಾನದ ಕಣವನ್ನು ತುಂಬುತ್ತಿರುವ ಸರ್ವಜ್ಞನಿಗೆ ಸಾವಿರಾರು ವಂದನೆಗಳು! ಇಲ್ಲದ ಜ್ಞಾನದ ಜಂಭವನ್ನು ಕೊಚ್ಚುವವನಿಗೆ ದೂರದಿಂದಲೇ ನಮಸ್ಕಾರ!

ಸಹೋದರರು

(ಅನುವಾದಿತ ಸಣ್ಣ ಕತೆ)*

ಶ್ರೀಮಾನ್ ಹೆಗಡೆ ಬಂಧುಗಳು, ಕರ್ನಾಟಕ ಸಂಘ, ಕುಮಟಾ

★

ವಿಷಮ ಸಂದರ್ಭಗಳ ಮೂಲಕ ಉಂಟಾದ ವಿಪರೀತ ಭಾವನೆಗಳ ಮುಸುಕು ಹೃದಯ-ವನ್ನು ಅದೆಷ್ಟು ಬಿಗಿಯಾಗಿ ಮುಚ್ಚಿಬಿಟ್ಟರೂ, ಅಲ್ಲಿರುವ ಕರುಳು-ಕರುಳುಗಳ ಪ್ರೀತಿ ಜಾಗೃತವಾಗಿಯೆ ಇರಬಲ್ಲದು!

★

ಶಾಲೆಯ ಶಿಕ್ಷಕನ ಹೆಸರು ಬಾರ್ಡ್; ತಮ್ಮನ ಹೆಸರು ಎಂಡರ್ಸ್. ಅವರಿಬ್ಬರೂ ಒಬ್ಬರನ್ನೊಬ್ಬರು ಅನ್ಯೋನ್ಯವಾಗಿ ಪ್ರೀತಿಸುತ್ತಿದ್ದರು. ಪಟ್ಟಣದಲ್ಲಿರುವಾಗ ಇಬ್ಬರೂ ಕೂಡಿಯೆ ಇದ್ದರು; ಇಬ್ಬರೂ ಕೂಡಿಯೆ ಸೈನ್ಯಕ್ಕೆ ಸೇರಿದರು; ಇಬ್ಬರೂ ಒಂದೇ ತುಕ್ಕಡಿಯಲ್ಲಿ ಕೆಲಸಮಾಡಿದರು; ಇಬ್ಬರೂ ಕಾರ್ಪೊರಲ್ ಪದವಿಗೆ ಏರಿದರು. ಯುದ್ಧದಿಂದ ಹಿಂದಿರುಗಿ ಬಂದಾಗ, ಜನರ ಕಣ್ಣಿಗೆ ಅವರು ಅತೀವ ಆದರ್ಶ ಸಹೋದರರೂ, ಗೆಳೆಯರೂ ಆಗಿ ಕಂಡರು.

ಅವರ ತಂದೆ ತೀರಿದಾಗ, ಬಹಳ ಆಸ್ತಿಯನ್ನು ಆತ ಮಕ್ಕಳಿಗಾಗಿ ಬಿಟ್ಟು ಹೋಗಿದ್ದ. ಎಲ್ಲ ಸಾಮಾನುಗಳನ್ನೂ ಸರಿಯಾಗಿ ಹಂಚಿ-ಕೊಳ್ಳಲು ಸಾಧ್ಯವಿದ್ದಿಲ್ಲ. ಅಂತಹವುಗಳನ್ನು ಲಿಲಾವುಮಾಡಿ, ಬಂದ ಹಣವನ್ನು ಹಂಚಿಕೊಳ್ಳುವುದು—ಎಂದು ನಿಶ್ಚಯಿಸಿದರು.

ಎಲ್ಲವೂ ಸರಿಯಾಯಿತು. ಆದರೆ ಅವರ ತಂದೆಯದೊಂದು ದೊಡ್ಡ ಬಂಗಾರದ ಗಡಿಯಾರವಿತ್ತು. ಸುತ್ತುಮುತ್ತಲಿನ ಆ ಪ್ರದೇಶದಲ್ಲಿ ಅಂತಹ ಸುಂದರವಾದ ಗಡಿಯಾರವೇ ಇದ್ದಿರಲಿಲ್ಲ. ಅದನ್ನು ಈಗ ಅವರು ಲಿಲಾವುಮಾಡುವುದನ್ನು ಕೇಳಿ, ಹತ್ತಿರದ ಹಳ್ಳಿಪಳ್ಳಿಗಳಿಂದ ಶ್ರೀಮಂತರೆಲ್ಲ ಒಟ್ಟಾದರು. ಆದರೆ ಅಣ್ಣ-ತಮ್ಮಂದಿರೇ ಬೆಲೆಯನ್ನು ಏರಿಸಹತ್ತಿದ್ದರಿಂದ ಅವರು ಸುಮ್ಮಗಿರಬೇಕಾಯ್ತು. ಎಂಡರ್ಸ್‌ನು ಅದನ್ನು ತನ್ನ ಕಡೆಗೆ ಬಿಟ್ಟುಬಿಡ-ಬಹುದೆಂದು ಬಾರ್ಡ್‌ನ ಆಶೆ; ಬಾರ್ಡ್‌ನು ತನಗೇ ಬಿಡಲೆಂದು ಎಂಡರ್ಸ್‌ನ ಇಚ್ಛೆ.

ಒಬ್ಬರಾದ ಮೇಲೊಬ್ಬರು ದರವನ್ನು ಏರಿಸತೊಡಗಿದರು. ಪ್ರತಿಸಾರೆ ಏರಿಸುವಾಗ ಇವನನ್ನು ಅವನು ನೋಡುತ್ತಿದ್ದ; ಅವನನ್ನು ಇವನು ನೋಡುತ್ತಿದ್ದ. ಅವನಿಗೆ-ಇವನ ಮೇಲೆ ಕಹಿ, ಇವನಿಗೆ ಅವನ ಮೇಲೆ ಬೇಸರು. ಗಡಿಯಾರದ ಬೆಲೆ ೨೦ ಡಾಲರನ್ನು ದಾಟಿತು: "ತಮ್ಮಾ, ಹೀಗೇಕೆ?" ಎಂದು ಬಾರ್ಡ್ ೩೦ ಡಾಲರು ಏರಿಸಿದ. ಅದಕ್ಕೆ ತಮ್ಮ ಹಿಂಜರಿಯಲಿಲ್ಲ. "ಎಂಡರ್ಸ್‌ನು ತಾನು ಮಾಡಿದ ಉಪಕಾರವನ್ನು ಮರೆತ ಹಾಗೆ ತೋರುತ್ತದೆ. ತಾನು ಇಬ್ಬರಲ್ಲಿ ಹಿರಿಯ. ತನಗೆ ಅದನ್ನು ಬಿಟ್ಟಿದ್ದರೆ ಆಗಬಹುದಿತ್ತು!" ಎಂದುಕೊಂಡ ಬಾರ್ಡ್. ಗಡಿ-ಯಾರದ ಬೆಲೆ ೩೫ಕ್ಕೆ ಏರಿತು. ಎಂಡರ್ಸ್ ಮತ್ತೂ ಏರಿಸಿದ. ಬಾರ್ಡ್ ತನ್ನ ತಮ್ಮನ ಕಡೆಗೆ ನೋಡಲಿಲ್ಲ. "೪೦ ಡಾಲರು" ಎಂದ. ಲಿಲಾವು ನಡೆದ ಸ್ಥಳದಲ್ಲಿ ನಿಃಶಬ್ದತೆ ಕವಿದುಕೊಂಡಿತು. ಬೇಲೀಫ್‌ನು ಮಾತ್ರ "೪೦ ಡಾಲರು, ೪೦ ಡಾಲರು, ೪೦ ಡಾಲರು" ಎಂದು ಕೈಬೆರಳನ್ನು ಅಲ್ಲಾಡಿಸುತ್ತ ಒಂದೇಸವನೆ ಕಿರಚುತ್ತಿದ್ದನು. ಬಾರ್ಡ್‌ನಿಗೆ ೪೦ ಡಾಲರಿಗಿಂತ ಹೆಚ್ಚು ಕೊಟ್ಟಾದರೂ ಅದನ್ನು ತನ್ನ ಕಡೆಗೇ ಇಟ್ಟುಕೊಳ್ಳಬೇಕೆಂದು ಹಟ! "ನಾನೂ ಬಿಡಬಾರದು!" ಎಂದುಕೊಂಡ. ಮತ್ತೆ ಬೆಲೆ ಏರಿತು. ಬಾರ್ಡ್-ನಿಗೆ ತಮ್ಮನ ಬಗ್ಗೆ ಒಂದು ತರದ ಜುಗುಪ್ಸೆಯುಂಟಾಯಿತು. "ತಾನು ಇದಕ್ಕೆ ಕೈಗೊಡಬಾರದಾಗಿತ್ತು," ಎಂದುಕೊಂಡ. "೫೦ ಡಾಲರು" ಎಂದು ಅವನು ಹೇಳಿದ ಸಣ್ಣ ದನಿಯಲ್ಲಿ. ಅಲ್ಲಿ ಅನೇಕ ಜನರು ನೆರೆದಿದ್ದರು. "ಅಣ್ಣ ತನ್ನನ್ನು ಇವರೆದುರಿಗೆ ಅಪಮಾನಮಾಡಲು ಯತ್ನಿಸುತ್ತಿದ್ದಾನೆ" ಎಂದು ಭಾವಿಸಿದ ಎಂಡರ್ಸ್. ಬೆಲೆ ಮತ್ತೂ ಏರಿತು. "೧೦೦ ಡಾಲರು! ಗಡಿಯಾರ ನನಗಿರಲಿ!" ಬಾರ್ಡ್ ಗಟ್ಟಿಯಾಗಿ ನಗುತ್ತ ಹೇಳಿ, ಅಲ್ಲಿಂದ ಹೊರಕ್ಕೆ ಹೊರಟ.

ಕುದುರೆಯ ಧಡಿಯನ್ನು ಸಾವರಿಸಿಕೊಳ್ಳುತ್ತಿದ್ದ ಹಾಗೆ, ಬೇಲೀಫ್‌ನು ಕರೆದು "ಗಡಿಯಾರ ನಿಮ್ಮದಾಯಿತು. ಎಂಡರ್ಸ್ ಏರಿಸಲಿಲ್ಲ!" ಎಂದ. ಬಾರ್ಡ್ ತಮ್ಮನ ಕಡೆಗೆ ನೋಡಲಿಲ್ಲ. ಗಡಿಯಾರವನ್ನು ತೆಗೆದುಕೊಳ್ಳುವಾಗ ಸುಖವೆನಿಸಲಿಲ್ಲ, ಒಂದು ತರದ ವೇದನೆಯೆನ್ನಿಸಿತು. ಜನರು ಮನೆಗೆ ಹೋಗಲು ಹೊರ-ಟರು. ಅಣ್ಣ ತಮ್ಮನನ್ನು ನೋಡಿದ. ತಮ್ಮ "ಅಣ್ಣಾ, ಗಡಿಯಾರ ನಿನಗಿರಲಿ; ಇನ್ನು ಮುಂದೆ ನಿನ್ನ ದಾರಿಯಲ್ಲಿ ಬಂದರೆ ನೋಡು........!" ಎಂದ. ಬಾರ್ಡ್ ನಕ್ಕ. ಇಬ್ಬರ ಮೋರೆಗಳೂ ಬೆಳ್ಳಗಾದವು. ಕರುಳಿನ ವೇದನೆ ಹೊರಗೆ ಒಡಮೂಡಿ ಕಾಣುತ್ತಿತ್ತು.

ತಂದೆ ವಾಸವಾಗಿದ್ದಾಗಿನ ಮನೆಯನ್ನು ಇಬ್ಬರೂ ಬಿಟ್ಟರು.

* ಇದು ನಾರ್ವೇ ದೇಶದ ಸುಪ್ರಸಿದ್ಧ ಸಾಹಿತಿಯಾದ ಯಾರ್ನ್‌ಸ್ಟೀರ್ನ್ ಯಾರ್ನ್‌ಸನ್ ಎಂಬವನ 'ಬ್ರದರ್ಸ್' ಎಂಬ ಕತೆಯ ಅನುವಾದ. ೧೯೦೩ನೆಯ ವರ್ಷದ ನೋಬೆಲ್ ಬಹುಮಾನ ಈ ಶ್ರೇಷ್ಠ ಸಾಹಿತಿಗೆ ಸಿಕ್ಕಿದೆ. ನಾರ್ವೇದೇಶದ ರಾಷ್ಟ್ರಗೀತವನ್ನು ರಚಿಸಿದವನು ಇವನೇ.

—ಅನುವಾದಕರು.

ಕೆಲವು ದಿನಗಳಲ್ಲಿ ಎಂಡರ್ಸ್‌ನ ಲಗ್ನವಾಯಿತು. ಬಾರ್ಡ್‌ನನ್ನು ಲಗ್ನಕ್ಕೆ ಕರೆದಿದ್ದಿಲ್ಲ. ಬಾರ್ಡ್‌ನೂ ಆ ಕಡೆಗೆ ಸುಳಿಯಲಿಲ್ಲ. ಲಗ್ನವಾಗಿ ಒಂದು ವರ್ಷ ಮುಗಿಯುವುದರೊಳಗಾಗಿ ಎಂಡರ್ಸ್‌ನ ಇದ್ದ ಒಂದೇ ಒಂದು ಆಕಳು, ಒಂದು ದಿನ ಬೆಳಗ್ಗೆ, ಹಿತ್ತಲಲ್ಲಿ ಒಂದು ಬದಿಗೆ ಸತ್ತುಬಿದ್ದದ್ದು ಕಂಡು ಬಂದಿತು. ಆದರೆ ಅದು ಹೇಗೆ ಸತ್ತಿತು— ಎಂಬುದು ಗೊತ್ತಾಗಲಿಲ್ಲ. ಇದಾದ ಮೇಲೆ ಒಂದೊಂದೇ ಹೊಸ ಸಂಕಟಗಳು ಅವನ ಮೇಲೆ ಬಂದುವು. ಪರಿಸ್ಥಿತಿ ದಿನದಿನಕ್ಕೆ ಕೆಡುತ್ತಾ ನಡೆಯಿತು. ಒಂದು ಸಲ ಚಳಿಗಾಲದಲ್ಲಿ ರಾತ್ರಿಯ ಹೊತ್ತಿನಲ್ಲಿ, ಹುಲ್ಲಿದ್ದ ಕೊಟ್ಟಿಗೆಗೆ ಬೆಂಕಿ ಹತ್ತಿತು. ಎಷ್ಟು ಪ್ರಯತ್ನಪಟ್ಟರೂ ಆರಲಿಲ್ಲ. ಆ ಗಡಿಬಿಡಿಯಲ್ಲಿ, ಹತ್ತಿರವೇ ಇದ್ದ ಕಾಳಿನ ಉಗ್ರಾಣವೂ ಕೂಡ ಹೊತ್ತಿಕೊಂಡು ಉರಿದುಹೋಯ್ತು. ಬೆಂಕಿ ಹೊತ್ತಿದ್ದ ಕಾರಣ ಕಡೆ ತನಕವೂ ಗೊತ್ತೇ ಆಗಲಿಲ್ಲ.

ಇಡಿ ರಾತ್ರಿ ಎಂಡರ್ಸ್‌ನು ಅಳುತ್ತಿದ್ದ: "ತನಗೆ ಆಗದವರು ಯಾರೋ ಇದನ್ನು ಮಾಡಿರಬೇಕು," ಎಂದು ಅವನ ಎಣಿಕೆ. ಬೆಳಗಾಗುವುದರೊಳಗಾಗಿ ಅವನು ಬಡವನಾಗಿ, ಅನಾಥನಾಗಿ, ನಿರ್ಗತಿಕನಾಗಿ ನಿಲ್ಲುವಂತಾಯ್ತು. ಈ ಚಿಂತೆಯಿಂದ ಕೆಲಸಗಳನ್ನೇ ಮಾಡದಂತಾದನು.

ಬೆಂಕಿಯ ಅನಾಹುತದ ಮರುದಿನ ಅಣ್ಣ ಬಾರ್ಡ್‌ನು ಎಂಡರ್ಸ್‌ನ ಮನೆಗೆ ಬಂದ. ಎಂಡರ್ಸ್ ಹಾಸಿಗೆಯ ಮೇಲೆ ಮಲಗಿಕೊಂಡಿದ್ದವನು, ಅಣ್ಣ ಬಾಗಿಲೊಳಗೆ ಕಾಲಿಡುತ್ತಿದ್ದ ಹಾಗೆಯೆ ಜಿಗಿದು ಕುಳಿತ. "ಏನು ಬಂದೆ? ಏನು ಕೆಲಸ?" ಎಂಡರ್ಸ್ ಕೇಳಿದ. ಕಣ್ಣುಗಳಲ್ಲಿ ಒಂದು ತರದ ದ್ವೇಷ ಉಕ್ಕುತ್ತಿತ್ತು.

ಬಾರ್ಡ್ ಇಂತಹದನ್ನು ಅಪೇಕ್ಷಿಸಿರಲಿಲ್ಲ. ಒಂದು ನಿಮಿಷ ತಣ್ಣಗಾದ. "ಎಂಡರ್ಸ್, ನಿನಗೊದಗಿದ ದುಸ್ಥಿತಿಯ ಸುದ್ದಿಯನ್ನು ಕೇಳಿದೆ; ನನ್ನಿಂದ ನಿನಗೇನಾದರೂ ಸಹಾಯ ಬೇಕೆ?"

"ನನ್ನ ದುಸ್ಥಿತಿ? ನೀನೇನನೂ ಚಿಂತಿಸಬೇಕಾಗಿಲ್ಲ! ಹೋಗು.... ಹೋಗು.... ನೀನು ನನ್ನ ಕಣ್ಣಮುಂದಿದ್ದರೆ ನನಗೆ ಹೇಗೋ ಆಗುತ್ತದೆ ಹೃದಯದಲ್ಲಿ!"

"ಎಂಡರ್ಸ್, ನೀನು ತಪ್ಪು ತಿಳಿದುಕೊಂಡಿದ್ದೀಯೆ; ನಾನು ...."

"ಅಣ್ಣಾ, ಬಾರ್ಡ್, ಹೋಗು! ದೇವರ ಮನಸ್ಸಿನಲ್ಲಿದ್ದಂತೆ ಆಗುತ್ತದೆ!" ಬಾರ್ಡ್ ಎರಡು ಹೆಜ್ಜೆ ಹಿಂದೆ ಸರಿದ. ಗಂಟಲು ಬಿಗಿದು ಬಂದಿತು.

"ನಿನಗೆ ಗಡಿಯಾರ ಬೇಕಾದರೆ ಇಕೋ ಎಂಡರ್ಸ್!"

"ಬಾರ್ಡ್, ಹೋಗು! ಹೋಗು!! ಹೋಗು!!!" ಎಂಡರ್ಸ್ ಚೀರಿದ. ಬಾರ್ಡ್‌ನಿಗೆ ಕರುಳು ಕತ್ತರಿಸಿದಂತಾಯ್ತು. ಹೃದಯ ಉಕ್ಕಿ ಬಂತು. ಕಣ್ಣಲ್ಲಿ ನೀರು ಹರಿಯತೊಡಗಿತು. ಹಿಂದೆ ಸರಿದ.

ತಮ್ಮನ ದುಃಸ್ಥಿತಿಯನ್ನು ಕೇಳುತ್ತಿದ್ದ ಹಾಗೆ, ಆತನಿಗೆ ಸಹಾಯ ಮಾಡಬೇಕೆಂದು ಬಾರ್ಡ್‌ನಿಗೆ ಅನೇಕ ಸಾರೆ ಎನ್ನಿಸುತ್ತಿತ್ತು. ಆತನ ಹೃದಯವು ಸಂಪೂರ್ಣ ಪಲ್ಲಟವಾಗಿತ್ತು. ಆದರೆ ಜನರ ಕಡೆಗೆ ನೋಡಿ—ತನ್ನ ಗೌರವ (?) ಕ್ಕಾಗಿ ತಡೆದು ನಿಂತಿದ್ದ. ತಮ್ಮನ ಲಗ್ನದ ಸಮಯದಲ್ಲಿ ಅವನು ಕರೆಯದಿದ್ದರೂ, ಈಗ ತಾನಾಗಿ ಹೋಗಿ ತನ್ನ ಒಳ್ಳೆಯತನವನ್ನು ತೋರಿಸಿಕೊಂಡು, ಹಿಂದಿನ ಸೌಹಾರ್ದವನ್ನು ಇಟ್ಟುಕೊಂಡಿರಬೇಕೆಂದು ಮಾಡಿದ. ಆದರೆ ಅವನಿಗೆ ಮನೋಧೈರ್ಯವಿದ್ದಿರಲಿಲ್ಲ. ಅನೇಕ ಸಾರೆ ತಮ್ಮನನ್ನು ಕಾಣಬೇಕೆಂಬ ಲವಲವಿಕೆಯಿಂದ ಅವನ ಮನೆಯ ಬಾಗಿಲ ತನಕ ಹೋಗಿ ಬಂದುದುಂಟು. ಆಗ ಅನೇಕ ಕಾರಣಗಳು ಅವನನ್ನು ತಡೆಹಾಕಿದ್ದುವು. ಕೆಲವು ಸಲ ಅವನು ಹೋಗಿದ್ದಾಗ, ಆತನ ನಂಟರೂ ಗೆಳೆಯರೂ ಮನೆಯಲ್ಲಿರಬೇಕು; ಇನ್ನು ಕೆಲವು ಸಾರೆ ಎಂಡರ್ಸ್‌ನು ಹಿತ್ತಲಲ್ಲಿ ದುಡಿಯುತ್ತಿರಬೇಕು; ಇನ್ನು ಹಲವು ಸಾರೆ, ಇವನು ಹೋಗುವಷ್ಟೊತ್ತಿಗೆ ಯಾರಾದರೊಬ್ಬರು ಮಾರ್ಗದಲ್ಲಿ ಸಿಕ್ಕಿಕೊಂಡು ಮರಳಿ ಕರೆದುಕೊಂಡು ಹೋಗಬೇಕು.— ಹೀಗೆಲ್ಲ ಆಗುತ್ತಿತ್ತು.

ಒಂದುಸಾರೆ ಆದಿತ್ಯವಾರ ದಿನ, ಚರ್ಚಿನಲ್ಲಿ ಇವನು ಹೋದಾಗ ಎಂಡರ್ಸ್‌ನೂ ಅಲ್ಲಿದ್ದ. ಬಾರ್ಡ್ ನೋಡಿದ, ಮೈ ಸೊರಗಿ ಹೋಗಿತ್ತು; ರಕ್ತವಿಲ್ಲದೆ ಅಂಗಾಂಗಗಳು ಬೆಳ್ಳಗಾಗಿದ್ದುವು. ತಾವು ಕೂಡಿ ಇದ್ದಾಗ ಹೊಲಿಸಿದ ಆ ಹಳೆಯ ಬಟ್ಟೆಗಳನ್ನೇ ತೊಟ್ಟಿದ್ದ. ಅವು ಈಗ ಹರಿದು ಹೋಗಿದ್ದು, ಅಲ್ಲಲ್ಲಿ ತೇಪೆ ಹಚ್ಚಲಾಗಿತ್ತು. ಪ್ರಾರ್ಥನೆ ಮುಗಿಯುವ ತನಕ ಎಂಡರ್ಸ್ ಪಾದ್ರಿಯ ಕಡೆಗೆ ಏಕಾಗ್ರಚಿತ್ತದಿಂದ ನೋಡುತ್ತಿದ್ದ. ಬಾರ್ಡ್‌ನ ದೃಷ್ಟಿ ಪೂರಾ ತಮ್ಮನ ಮೇಲೆ. ಅವನಿಗೆ ಹಿಂದಿನ—ತಾವು ಮಕ್ಕಳಾಗಿದ್ದಾಗಿನ-ದಿನಗಳು, ಕಣ್ಣ ಮುಂದೆ ಹಾಯ್ದು ಹೋದುವು: ಆಗ ಎಂಡರ್ಸ್ ಎಷ್ಟು ಒಳ್ಳೆಯವನಾಗಿದ್ದ! ತಮ್ಮನೊಡನೆ ಇನ್ನು ಜಗಳವಾಡಲಿಕ್ಕಿಲ್ಲವೆಂದು ಬಾರ್ಡ್ ಮನಸ್ಸಿನಲ್ಲಿಯೆ ಆಣೆ ಮಾಡಿಕೊಂಡ. ಆದರೆ ತಮ್ಮನ ಬಳಿಗೆ ಹೋಗುತ್ತಿದ್ದಾಗ ಅಂದೂ ಯಾರೋ ಅಡ್ಡ ಬಂದರು. ಎಂಡರ್ಸ್‌ನು ಇವನ ಕಡೆಗೆ ಒಮ್ಮೆ ಕೂಡ ನೋಡಲಿಲ್ಲ. ಚರ್ಚಿನ ಹೊರಗೆ ಬಂದಾಗ ಬಹಳ ಜನರಿದ್ದುದರಿಂದ ಮಾತನಾಡಲಾಗಲಿಲ್ಲ. 'ಅವನ ಮನೆಗೆ ಹೋಗಿ ಮಾತನಾಡುವುದು' ಎಂದು ನಿರ್ಧಾರ ಮಾಡಿಕೊಂಡು ಮನೆಗೆ ಬಂದ.

ಸಂಜೆಯ ಮುಂದೆ ಅವನ ಮನೆಯ ಬಾಗಿಲ ತನಕ ಹೋದ ಬಾರ್ಡ್. ಒಳಗೆ ಹೋಗುವಷ್ಟರಲ್ಲಿ ತನ್ನ ವಿಷಯವಾಗಿಯೆ ಒಳಗೆ ಮಾತನಾಡುತ್ತಿದ್ದುದು ಕೇಳಬಂತು. ತಡೆದು ಆಲಿಸಿದ.

"ಅವನು ನಿಮ್ಮೊಡನೆ ಮಾತು-ಕತೆಯಾಡಲೆಂದೇ ಬಂದಿರಬೇಕು, ಅವನ ಮುಖದ ಮೇಲಿಂದಲೇ ಕಾಣುತ್ತಿತ್ತು!" ಇದು ಎಂಡರ್ಸ್‌ನ ಹೆಂಡತಿಯ ದನಿ.

"ಅಲ್ಲ ಅಲ್ಲ, ಅವನು ಯಾವಾಗಲೂ ಹಾಗೆಯೆ! ಅವನಿಗೆ ತನ್ನ ಸ್ವಾರ್ಥದ ಹೊರತು ಬೇರೊಬ್ಬರ ಸುಖ-ದುಃಖದ ಕಲ್ಪನೆ

ಸ್ವಲ್ಪವೂ ಇಲ್ಲ. ಅವನನ್ನು ನಾನು ಪೂರಾ ಬಲ್ಲೆ! ನಾನು ಅವನ ತಮ್ಮ!" ಎಂಡರ್ಸ್ಸನ ಮಾತಿದು.

ಸುಮಾರು ಹೊತ್ತಿನ ತನಕ ಯಾರೂ ಮಾತನಾಡಲಿಲ್ಲ. ಹೊರಗೆ ತಣ್ಣನೆಯ ಗಾಳಿ ಬೀಸುತ್ತಿದ್ದರೂ ಬಾರ್ಡ್‌ನ ಮೈ ಬೆವರಿತ್ತು. ಹೆಂಡತಿ ಒಲೆಯ ಹತ್ತಿರ ಕೆಲಸಮಾಡುತ್ತಿದ್ದಳು; ಪಾತ್ರೆಯ ಸಪ್ಪಳು ಕೇಳಿಸುತ್ತಿತ್ತು; ಕೂಸು ಆಗಾಗ ಅಳುತ್ತಿತ್ತು; ಎಂಡರ್ಸ್ಸ ತಟ್ಟಿ ತಟ್ಟಿ ಮಲಗಿಸುತ್ತಿದ್ದ. ಹೆಂಡತಿ ಮತ್ತೆ ಮಾತನಾಡತೊಡಗಿದಳು:

"ನಿಮ್ಮಿಬ್ಬರಲ್ಲಿಯೂ ಅಣ್ಣ-ತಮ್ಮಂದಿರ ಹಾಗೆ ಮಾತನಾಡಿಕೊಂಡು ಇರಬೇಕೆಂಬ ಅಪೇಕ್ಷೆಯಿದ್ದರೂ, ನಿಮ್ಮ ಮರ್ಯಾದೆ ಅದಕ್ಕೆ ಅಡ್ಡಬರುತ್ತಿದೆ – ಎಂದು ನನಗೆನಿಸುತ್ತಿದೆ!"

"ಬಿಡೇ, ಬೇರೇ ಮಾತನಾಡುವಾ!" ಎಂಡರ್ಸ್ಸ ಅವಳನ್ನು ಸುಮ್ಮಗುಳಿಸಿದ.

ಸ್ವಲ್ಪಹೊತ್ತಿನ ತರುವಾಯ ಎಂಡರ್ಸ್ಸ ಹೊರಗೆ ಬಂದ. ಬಾರ್ಡ್ ಸರಸರನೆ ಓಡಿಹೋಗಿ, ಕಟ್ಟಿಗೆ ರಾಶಿಯ ಹತ್ತಿರ ಹೋಗಿ ಅಡಗಿಕೊಂಡ. ಎಂಡರ್ಸ್ಸನೂ ಒಂದಿಷ್ಟು ಕಟ್ಟಿಗೆಯನ್ನು ಬಾಚಿಕೊಂಡು ಹೋಗುವುದಕ್ಕಾಗಿ ಅಲ್ಲಿಗೇ ಬಂದ. ಬಾರ್ಡ್ ನಿಂತಲ್ಲಿಂದ ಎಂಡರ್ಸ್ಸ ಚೆನ್ನಾಗಿ ಕಾಣುತ್ತಿದ್ದ. ಎಂಡರ್ಸ್ಸ ಆಗ ತಾವು ಸೈನ್ಯದಲ್ಲಿದ್ದಾಗಿನ ಚಡ್ಡಿ-ಅಂಗಿಗಳನ್ನೇ ಹಾಕಿಕೊಂಡಿದ್ದ. ಅವೆಲ್ಲ ಹಳೆಯವಾಗಿದ್ದುವು. ತೇಪೆ ಹಚ್ಚಿ ಹಚ್ಚಿ ಹೊಲಿದು ಹೊಲಿದು, ಅವು ತೀರ ಹಾಳಾಗಿದ್ದುವು. ಕಲ್ಲು ದೇಹದ ತಮ್ಮನೆಲ್ಲಿ! ಈ ಒಣಕಲು-ಬಡ-ಶರೀರದ ಎಂಡರ್ಸ್ಸನೆಲ್ಲಿ! ಬಾರ್ಡ್‌ನ ಕಿಸೆಯಲ್ಲಿಯ ಬಂಗಾರದ ಗಡಿಯಾರದ ಸಪ್ಪಳು ಕೇಳುತ್ತಿತ್ತು. ಕಟ್ಟಿಗೆಯನ್ನು ಎತ್ತಿಕೊಳ್ಳಲು ಬಗ್ಗಿದ ಎಂಡರ್ಸ್ಸ ಅಲ್ಲಿಯೇ ಕುಳಿತುಕೊಂಡ. ಅವನು ವಿಚಾರಮಾಡುತ್ತಿದ್ದ; ಒಂದು ನಿಟ್ಟುಸಿರನ್ನು ಬಿಟ್ಟ.

"ಆಗಲಿ—ಆಗಲಿ—ದೇವರೇ, ನೀನೇ ನೋಡು!"

ಬಾರ್ಡ್ ಬದುಕಿರುವವರೆಗೆ ಆ ಶಬ್ದಗಳನ್ನು ಮರೆಯಲಿಲ್ಲ. ಆ ಕೂಡಲೆ ಮುಂದೆ ಹೋಗಿ ತಮ್ಮನನ್ನು ಅಪ್ಪಿಕೊಂಡು, ತನ್ನ ಹೃದಯವನ್ನು ಅವನ ಮುಂದೆ ಬಿಚ್ಚಿ ತೋರಿಸಬೇಕೆಂದು ಮಾಡಿದ. ಅಷ್ಟರಲ್ಲಿ ಎಂಡರ್ಸ್ಸ ಇವನ ತೀರ ಹತ್ತಿರದಿಂದಲೆ ಹಾಯ್ದು ಹೊರಟು ಹೋದ.

ಹತ್ತು ಮಿನಿಟುಗಳ ತನಕ ಬಾರ್ಡ್ ಕಲ್ಲುಗುಂಡಿನ ಹಾಗೆ ನಿಶ್ಚಲನಾಗಿ ನಿಂತಿದ್ದ; ಆದರೆ ಅಲ್ಲಿಯೇ ಅವನ ಹೊರಟಾಗಿನ ವಿಚಾರ ಬೇರೆ ರೂಪವನ್ನು ಹೊಂದಿತು. "ಈಗಲೆ ಹೋಗಿ ಹೇಳಬಾರದು" ಎಂದುಕೊಂಡ. ಅಷ್ಟರಲ್ಲಿ ಒಂದು ವಿಚಾರ ಹೊಳೆಯಿತು; ಹುಲ್ಲು ಹಾಕಿಟ್ಟ ಕೊಟ್ಟಿಗೆಗೆ ಅವನು ಹೋದ. ಕತ್ತಲೆಯಲ್ಲಿ ಕಡ್ಡಿಗೀಚಿ ಅತ್ತಿತ್ತ ನೋಡಿದ. ಬಾಗಿಲಲ್ಲಿ ಕಾಲಿಟ್ಟೊಡನೆ ಕಣ್ಣಿಗೆ ಬೀಳುವಂತೆ ಅಲ್ಲೊಂದು ಗೂಟವಿದ್ದಿತು. ತನ್ನ ಕಿಸೆಯಿಂದ ಬಂಗಾರದ ಗಡಿಯಾರವನ್ನು ತೆಗೆದು ಆ ಗೂಟಕ್ಕೆ ತೂಗುಹಾಕಿದ— ಮರುದಿನ ಬೆಳಗ್ಗೆ ಎಂಡರ್ಸ್ ಹುಲ್ಲು ಹಾಕಲು ಅಲ್ಲಿಗೆ ಬಂದಾಗ ಅವನ ಕಣ್ಣಿಗೆ ಕಾಣಲಿ— ಎಂದು.

ಮನೆಯ ಕಡೆಗೆ ಹೋಗುತ್ತಿದ್ದ ಹಾಗೆ ಬಾರ್ಡ್‌ನಿಗೆ, ತಲೆಯ ಮೇಲಿನ ಒಂದು ದೊಡ್ಡ ಭಾರವನ್ನು ಇಳಿಸಿದಂತೆ ಎನಿಸತೊಡಗಿತು. ಆನಂದದಿಂದ ಹೊಟ್ಟೆ ತುಂಬಿಹೋದಂತೆ ಭಾಸವಾಗುತ್ತಿತ್ತು.

ಮರುದಿನ ಬೆಳಗಾಗುವುದರೊಳಗಾಗಿ ಎಂಡರ್ಸ್‌ನ ಬಣವೆ ಸುಟ್ಟಿದ್ದು ಅವನಿಗೆ ತಿಳಿಯಿತು. ಅದನ್ನು ಕೇಳಿದೊಡನೆ ತಲೆಗೆ ಕಲ್ಲಿನಿಂದ ಹೊಡೆದಂತಾಯ್ತು. ಅವನು ಗಡಿಯಾರವನ್ನು ತೂಗುಹಾಕಲೆಂದು ಗೀಚಿದ ಕಡ್ಡಿಯಿಂದ ಬೆಂಕಿ ಹತ್ತಿರಬೇಕು.

ಈ ಘಟನೆಯಿಂದ ಅವನ ಮನಸ್ಸು ತೀರ ಅಸ್ವಸ್ಥವಾಯ್ತು. ಭಯಂಕರ ಅಪರಾಧವನ್ನು ಮಾಡಿದಂತೆ ಎನಿಸತೊಡಗಿತು. ಏನು ಮಾಡಿದರೂ ಸಮಾಧಾನವಾಗದೆ ಪ್ರಾರ್ಥನೆಯ ಪುಸ್ತಕವನ್ನು ಹೊರದೆಗೆದು ನಿಸ್ಸೀಮಭಕ್ತಿಯಿಂದ ಓದತೊಡಗಿದ. ಅವನ ಈ ಭಕ್ತಿ, ಮಾನಸಿಕ ಪರಿವರ್ತನೆ ಇವುಗಳನ್ನು ಕಂಡು, 'ಇವನಿಗೆ ಏನೋ ಆಗಿರಬೇಕು' ಎಂದುಕೊಂಡರು ಮನೆಯವರು. ಸಂಜೆಯ ಮುಂದೆ ಅಂಗಿ ಹಾಕಿಕೊಂಡು ಹೊರಗೆ ಹೊರಟ. ಚೆನ್ನಾಗಿ ಚಂದ್ರಪ್ರಕಾಶ ಬಿದ್ದಿತ್ತು. ಅವನು ಎಂಡರ್ಸ್‌ನ ಸುಟ್ಟ ಮನೆಯ ಭಾಗಕ್ಕೆ ಹೋಗಿ, ಅಲ್ಲಿಯ ಬೂದಿಯನ್ನು ಕೆದರಿದ, ಹುಡುಕಿದ. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ಒಂದು ಬಂಗಾರದ ಮುದ್ದೆ ಸಿಕ್ಕಿತು. ಅದು ಅಪ್ಪನಿಂದ ಬಂದ ಗಡಿಯಾರದ ಅವಶೇಷ.

ಅದನ್ನು ತೆಗೆದುಕೊಂಡು ಬಾರ್ಡ್, ಆದ ಸಂಗತಿಯನ್ನು ಹೇಳಿ ತಮ್ಮನೊಡನೆ ಕ್ಷಮೆ ಕೇಳಬೇಕೆಂದು ಹೋದ. ಆದರೆ ಅವನಿಗಿಂತಲೂ ವಿಧಿ ಮುಂದೆ ನಡೆದಿತ್ತು. ಬಾರ್ಡ್ ಬೂದಿಯನ್ನು ಕೆದರುತ್ತಲಿದ್ದಾಗ, ಒಂದು ಸಣ್ಣ ಹುಡುಗಿ ಅವನನ್ನು ಕಂಡಿದ್ದಳು. ಮೊದಲಿನ ದಿವಸ ಅವನು ತನ್ನ ತಮ್ಮನ ಮನೆಯ ಕಡೆಗೆ ಹೋಗುತ್ತಿದ್ದುದನ್ನು ಆಟದ ಬಯಲಿನಿಂದ ಹಿಂದಿರುಗುತ್ತಿದ್ದ ಹುಡುಗರು ನೋಡಿದ್ದರು. ಬಾರ್ಡ್‌ನ ಮನೆಯ ಸುತ್ತುಮುತ್ತಲಿನ ಜನರು, ಆ ದಿನ ಬೆಳಗಿನಿಂದಲೂ ಅವನ ವರ್ತನೆಯಲ್ಲಿ ಹೆಚ್ಚು ಕಡಿಮೆಯಾದುದನ್ನೂ ಕಂಡಿದ್ದರು. ಈ ಎಲ್ಲಾ ಸುದ್ದಿಯೂ ಎಂಡರ್ಸ್ಸನ ತನಕ ಹೋಗಿ ಮುಟ್ಟಿತ್ತು. ಪ್ರತಿಯೊಬ್ಬರಿಗೂ ಅಣ್ಣ-ತಮ್ಮಂದಿರ ದ್ವೇಷದ ಸುದ್ದಿ ಚೆನ್ನಾಗಿ ಗೊತ್ತಾಗಿತ್ತು. ಇದೆಲ್ಲವನ್ನೂ ಪಂಚನಾಮೆಗೆ ಬಂದ ಅಧಿಕಾರಿಗಳಿಗೆ ತಿಳಿಸಿ ಆಗಿತ್ತು. ಬಾರ್ಡ್‌ನ ವಿರುದ್ಧ ಸಾಕ್ಷಿಗಳಿರದಿದ್ದರೂ ಅವನ ಮೇಲೆ ಸಂಶಯ ಪಡಲಿಕ್ಕೆ ಸಾಕಷ್ಟು ಆಧಾರಗಳು ಸಿಕ್ಕಿದ್ದುವು. ಇಂತಹ ಪರಿಸ್ಥಿತಿಯಲ್ಲಿ ಬಾರ್ಡ್ ತಮ್ಮನನ್ನು ಕಾಣುವುದು ಚೆನ್ನಾಗಿರಲಿಲ್ಲ; ಸಾಧ್ಯವೂ ಇರಲಿಲ್ಲ.

ಹುಲ್ಲಿನ ಕೊಟ್ಟಿಗೆ ಸುಡುತ್ತಲಿದ್ದಾಗ ಎಂಡರ್ಸ್‌ನಿಗೆ ಬಾರ್ಡ್‌ನ ನೆನಪಾಗಿತ್ತು. ಆದರೆ ಅವನ ವಿಷಯವಾಗಿ ಏನೊಂದೂ ಹೇಳಿರಲಿಲ್ಲ.

ಅಣ್ಣ ಮನೆಯಲ್ಲಿ ಪ್ರವೇಶಮಾಡುವುದನ್ನು ಎಂಡರ್ಸ್ ಕಂಡ! ಎಲ್ಲ ಅವ ಎಣಿಸಿದಂತೆಯೆ ಇದ್ದಿತು. ಅಣ್ಣ ಪಶ್ಚಾತ್ತಾಪದಿಂದ ಕುಗ್ಗಿ ಹೋದುದು ನಿಜ; ಆದರೆ ತನ್ನ ವಿರುದ್ಧವಾಗಿ ಮಾಡಿದ ಘೋರ ಅನ್ಯಾಯವನ್ನು ಕ್ಷಮೆ ಮಾಡುವುದೆಂದರೆ ಸಾಧ್ಯವಿದ್ದಿಲ್ಲ. ವಿಚಾರಣೆಯಲ್ಲಿ ತಪ್ಪು ಹೊರಬೀಳದಿದ್ದರೂ ಅಣ್ಣ ನಿಜವಾಗಿ ತಪ್ಪಿತಸ್ಥನೆಂದು ತಮ್ಮನಿಗೆ ಸಂಪೂರ್ಣ ಎನಿಸಿಬಿಟ್ಟಿತ್ತು.

ವಿಚಾರಣೆಯ ಸಮಯದಲ್ಲಿ ಬಾರ್ಡ್ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಬಂದಿದ್ದ. ಎಂಡರ್ಸ್ ತನ್ನ ಹರಕು ಚಿಂದಿಯನ್ನೇ ತೊಟ್ಟುಕೊಂಡು ಬಂದಿದ್ದ. ಬಾರ್ಡ್ ಬಂದೊಡನೆಯೆ ಅಣ್ಣ, ತಮ್ಮ ಒಬ್ಬರನ್ನೊಬ್ಬರು ನೋಡಿದರು. ಅಣ್ಣನ ದೃಷ್ಟಿಯಲ್ಲಿ ದೈನ್ಯ—ನಿರಾಶೆ—ಬೇಡಿಕೆ ಇವುಗಳನ್ನು ಎಂಡರ್ಸ್‌ನು ಕಂಡನು. "ನಾನು ತನ್ನ ವಿಚಾರದಲ್ಲಿ ಏನನೂ ಹೇಳಬಾರದು ಎಂದು ಅವನ ಮನಸ್ಸಿನಲ್ಲಿದ್ದಂತೆ ಕಾಣುತ್ತದೆ!" ಎಂದುಕೊಂಡ ಎಂಡರ್ಸ್.

ವಿಚಾರಣೆಯಲ್ಲಿ "ನಿನಗೆ ಅಣ್ಣನ ಬಗ್ಗೆ ಸಂಶಯವಿದೆಯೇ?" ಎಂದು ಕೇಳಿದ್ದಕ್ಕೆ, ಎಂಡರ್ಸ್‌ನು ಧೈರ್ಯವಾಗಿ ನಸುನಗುತ್ತ "ಇಲ್ಲ; ಸ್ವಲ್ಪವೂ ಇಲ್ಲ!" ಎಂದ.

ಅಂದಿನಿಂದ ಎಂಡರ್ಸ್‌ನಿಗೆ ಕುಡಿಯುವ ಚಟ ಮಿತಿಮೀರಿತು. ಸ್ವಲ್ಪ ದಿನಗಳಲ್ಲಿಯೆ ಹಾಸಿಗೆ ಹಿಡಿದ ಎಂಡರ್ಸ್. ಬಾರ್ಡ್ ಕುಡಿಯದಿದ್ದರೂ ತಮ್ಮನಿಗಿಂತ ಹೆಚ್ಚಾಗಿ ಕುಗ್ಗಿಹೋಗಿದ್ದ. ಮೊದಲಿನ ಬಾರ್ಡ್ ಈಗ ಬದಲಾಯಿಸಿ ಹೋಗಿದ್ದ.

ಒಂದು ದಿನ ಸಂಜೆಯ ಮುಂದೆ ಒಬ್ಬ ಬಡ ಹೆಂಗುಸು ಬಾರ್ಡ್‌ನಿದ್ದಲ್ಲಿಗೆ ಬಂದು, ತನ್ನ ಸಂಗಡ ಬರಬೇಕೆಂದು ಹೇಳಿದಳು. ಬಾರ್ಡ್ ಅವಳನ್ನು ಗುರುತಿಸಿದ. ಅವಳು ಎಂಡರ್ಸ್‌ನ ಹೆಂಡತಿ. ಅವಳ ಮೋರೆ, ರೂಪುಗಳನ್ನು ಕಂಡು ಬಾರ್ಡ್‌ನಿಗೆ ಬಂದ ಕಾರಣ ಗೊತ್ತಾಯಿತು. ಒಮ್ಮೆಲೆ ಭೂಮಿಗೆ ಇಳಿದು ಹೋದ. ಮೈಯಲ್ಲಿ ನಡುಕ ಹುಟ್ಟಿತು. ಲಗುಬಗೆಯಿಂದ ಅವಳ ಹಿಂದೆ ಹಿಂದೆ ನಡೆದ.

ಎಂಡರ್ಸ್‌ನ ಕೋಣೆಯ ಕಿಟಕಿಯಲ್ಲಿ ದೀಪ ಉರಿಯುತ್ತಲಿದ್ದುದು ದೂರದಿಂದ ಕಾಣುತ್ತಿತ್ತು. ಬಾರ್ಡ್‌ನು ಬಾಗಿಲಲ್ಲಿ ಬಂದು ನಿಂತಾಗ ಎದೆ ಹೊಡದುಕೊಳ್ಳುತ್ತಿತ್ತು. ಹೊಟ್ಟೆಯಲ್ಲಿ ಒಂದು ತರದ ವೇದನೆಯುಂಟಾಗತೊಡಗಿತ್ತು. ಒಳಕ್ಕೆ ನಡೆದ. ಕೂಸು ಇದ್ದಲಿಯ ಸಂಗಡ ಆಡುತ್ತ ಮೋರೆಗೆಲ್ಲ ಇದ್ದಲಿ ಬಡಿದುಕೊಂಡು ಕಪ್ಪಾಗಿತ್ತು. ತಾಯಿಯನ್ನು ಕಂಡು ಕೇಕೆ ಹಾಕಿ ನಕ್ಕಿತು. ಇದು ಎಂಡರ್ಸ್‌ನ ಕೂಸು.

ಹಾಸಿಗೆಯ ಮೇಲೆ ಎಂಡರ್ಸ್ ಹರಕು ಚಾಪೆಗಳ ರಾಶಿಯ ಮೇಲೆ ಮುದುಡಿಕೊಂಡು ಬಿದ್ದಿದ್ದ. ಗುಳಿಬಿದ್ದ ಕಣ್ಣುಗಳು ಬಾರ್ಡ್‌ನನ್ನು ನೋಡುತ್ತಿದ್ದುವು. ಬಾರ್ಡ್‌ನಿಗೆ ನಿಲ್ಲಲಾಗಲಿಲ್ಲ. ಹಾಸಿಗೆಯ ತುದಿಯಲ್ಲಿ ಕುಳಿತುಕೊಂಡ. ಗಂಟಲು ಬಿಗಿದು ಬಂದಿತ್ತು, ಸಣ್ಣ ಮಗುವಿನ ಹಾಗೆ ಅತ್ತುಬಿಟ್ಟ. ತಮ್ಮ ಅಣ್ಣನನ್ನು ಶೂನ್ಯದೃಷ್ಟಿಯಿಂದ ನೋಡುತ್ತಿದ್ದ. ಮಾತನಾಡಲಿಲ್ಲ. ತುಸು ಹೊತ್ತಿನ ಮೇಲೆ ಎಂಡರ್ಸ್ ತನ್ನ ಹೆಂಡತಿಗೆ ಹೊರಗೆ ಹೋಗಲು ಹೇಳಿದ. ಆದರೆ ಬಾರ್ಡ್ ಹೊರಗೆ ಹೋಗಲು ಬಿಡಲಿಲ್ಲ. ಅಣ್ಣ-ತಮ್ಮ ಹೃದಯ ಬಿಚ್ಚಿ ಮಾತನಾಡತೊಡಗಿದರು. ಆವೊತ್ತು ಪಾಲು ಮಾಡಿಕೊಂಡ ಆ ಹಾಳು ಗಡಿಯಾರದ ಸಲುವಾಗಿ ದೂರವಾದಂದಿನಿಂದ ಇಂದಿನ ವರೆಗೂ ನಡೆದ ಸಂಗತಿಯನ್ನೆಲ್ಲ ಒಬ್ಬರಿಗೊಬ್ಬರು ಹೇಳಿಕೊಂಡರು. ಬಾರ್ಡ್ ತನ್ನ ಕಿಸೆಯಿಂದ ಆ ಬಂಗಾರದ ಮುದ್ದೆಯನ್ನು ತೆಗೆದು ತೋರಿಸಿದ. ಅಷ್ಟು ದಿನಗಳಲ್ಲಿ ಒಬ್ಬರನ್ನೊಬ್ಬರು ನೆನಪು ಮಾಡದೆ ಇದ್ದ ದಿನವೇ ಇದ್ದಿಲ್ಲ. ಇದರಿಂದ ಅವರ ಹೃದಯ ನಿಷ್ಕಲ್ಮಷವಾದುವು. ದ್ವೇಷವಿದ್ದಲ್ಲಿ ಈಗ ಆನಂದ ತುಂಬಿಕೊಂಡಿತು.

ಎಂಡರ್ಸ್‌ನಿಗೆ ಹೆಚ್ಚಿಗೆ ಹೇಳಲು ಶಕ್ತಿ ಇರಲಿಲ್ಲ. ಬಾರ್ಡ್ ತನ್ನ ಶಕ್ತಿ ಮೀರಿ ಉಪಚಾರ ಮಾಡಿದ.

ಒಂದು ದಿನ ಬೆಳಗ್ಗೆ ಎದ್ದೊಡನೆ "ಅಣ್ಣಾ, ಇನ್ನು ನನಗೆ ಗುಣವಾದಂತಾಯಿತು. ನಾವು ಇನ್ನು ಮುಂದೆ ಮಾತ್ರ ಮೊದಲಿದ್ದ ಹಾಗೆ ಅಣ್ಣ-ತಮ್ಮಂದಿರಾಗೋಣ. ಎಂದೆಂದಿಗೂ ಅಗಲಬಾರದು" ಎಂದು ಎಂಡರ್ಸ್ ಅಣ್ಣನನ್ನು ಕರೆದು ಹೇಳಿದ.

ಆದರೆ ಅದೇ ದಿನ ಎಂಡರ್ಸ್ ತೀರಿಹೋದ. ತಾಯಿ ಮಗು ಬಾರ್ಡ್‌ನ ಮನೆಯಲ್ಲಿ ಬಂದು ಉಳಿದರು.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮನೆಯ ಚಿಕ್ಕ ತೋಟ (ಜೀವನಸ್ವಾಸ್ಥ್ಯವಿಚಾರ)

★

ಶ್ರೀ ಬಿದರಕುಂದಿ ವೆಂಕಟರಾಯರು, ನಂದಗಡ

ಹಿತ್ತಲಿನ ಇಲ್ಲವೆ ಅಂಗಳದ ಚಿಕ್ಕ ತೋಟಗಳು ಸೌಂದರ್ಯದ ದೃಷ್ಟಿಯಿಂದಲೂ ಬೇಕು, ಸೌಕರ್ಯದ ದೃಷ್ಟಿಯಿಂದಲೂ ಬೇಕು. ಕಸದಲ್ಲಿ ರಸತೆಗೆಯುವುದೆಂದರೆ ಈ ಮನೆಯ ಚಿಕ್ಕ ತೋಟಗಳ ನಿರ್ಮಿತಿ.

★

ನಾವು ಮಲೆನಾಡಿನ ಗುಡ್ಡಗಾಡು ಪ್ರದೇಶದಲ್ಲಿ ಸಂಚರಿಸುವಾಗ, ದಿನ್ನೆದಿನ್ನೆಗಳನ್ನೇರುತ್ತ ಉಚ್ಚತಮ ಶಿಖರದ ವರೆಗೆ ನಡೆದು ಹೋದಲ್ಲಿ, ಅಲ್ಲಿದ್ದ ಸಣ್ಣಗುಡಿ, ಕಲ್ಲುಗಳನ್ನೂ ಸೀಳಿ ಜುಳುಜುಳು ಹರಿಯುವ ನೀರು, ಪೋಡಗಳನ್ನು ಮುದ್ದಿಸುವ—ಬಂದ ಅತಿಥಿಗಳಿಗೆ ಚಾಮರವನ್ನು ಬೀಸುವ—ಮರದ ಟೊಂಗೆಗಳ ಬುಡಭಾಗದಲ್ಲಿಯ ಹಾಸುಗಲ್ಲುಗಳು ಇವನ್ನೆಲ್ಲ ನೋಡಿ ಯಾರಿಗೆ ಆನಂದವಾಗಲಿಕ್ಕಿಲ್ಲ? ಅಲ್ಲಿ ನಿಸರ್ಗಸೌಂದರ್ಯದ ಬಗ್ಗೆ ಕುತೂಹಲವೂ ತಲೆದೋರುವುದು. ಮಾರ್ಗದರ್ಶಕನು ಝರಿಯು ಹರಿದು ಒಗ್ಗೂಡಿದ ನೀರಿನ ಮಡುವಿಗೆ 'ರಾಮತೀರ್ಥ' ಎಂದೂ, ಅಲ್ಲಲ್ಲಿ ಕಾಣುವ ಗುಹೆಗಳಿಗೆ 'ಋಷಿಗಳ ತಪಶ್ಚರ್ಯದ ಸ್ಥಳ' ಎಂದೂ 'ರಾಮನು ವನವಾಸಕ್ಕೆ ಹೋದಾಗ ಸೀತೆಯೊಡನೆ ಇದ್ದ ಸ್ಥಳವು ಇದೇ.' ಎಂದೂ, 'ಜಟಾಧಾರಿಯಾದ ಶಂಕರನು ಪಾರ್ವತಿಗಾಗಿ ಪ್ರಾರ್ಥನೆ ಮಾಡಿದ ಗುಡಿಯು ಇದೇ' ಎಂದೂ ಬಣ್ಣಿಸುವಾಗ, ಎಂತಹ ನಾಸ್ತಿಕನಿಗೂ ದೇವರ ಅಸ್ತಿತ್ವದ ಬಗ್ಗೆ ವಿಶ್ವಾಸವುಂಟಾಗದಿರದು. ಇವೆಲ್ಲ ಆ ನಿಸರ್ಗದತ್ತ ನಂದನವನದ ದ್ಯೋತಕವು. ನಮ್ಮ ಹಿಂದಿನ ಋಷಿಗಳು ನಿರ್ಮಿಸಿದ ಸಕಲ ನಿಗಮಾಗಮ ಗ್ರಂಥಗಳು, ಈ ನಿಸರ್ಗಸೌಂದರ್ಯಮಯವಾದ ರಮ್ಯ ತೋಟದಲ್ಲಿಯೇ ಹುಟ್ಟಿ ಬಂದಿರುವುವು.

ಇಂದು ಮನೆ-ಮಾರುಗಳನ್ನು ಕಟ್ಟಿಕೊಂಡು ಊರಲ್ಲಿ ಇರುವವರಿಗೆ, ಇಂತಹ ಸೃಷ್ಟಿಸೌಂದರ್ಯದ ಲಾಭವು ನೋಡಿದಾಗೊಮ್ಮೆ ಮಾತ್ರ! ನಿತ್ಯವೂ ಈ ಸುಖವನ್ನು ಬಯಸದವರು ಜನ್ಮಾಂಧರೋ ಅರಸಿಕರೋ ಇರಬೇಕಷ್ಟೆ!

ಮನೆಯ ಸುತ್ತಲೂ ಕೋಮಲವಾದ ಎಲೆಗಳಿಗೆ ಹಸಿರುಬಣ್ಣ ತುಂಬುತ್ತದೆ. ಅದರ ಮೇಲೆ ಮಂಜಿನ ಹನಿಗಳು ಸೂರ್ಯಕಿರಣಗಳಿಂದ ಮಿಂಚುತ್ತವೆ. ಗಾಳಿಯು ಬೀಸಿದತ್ತ ಸಣ್ಣ ಟೊಂಗೆಗಳು ನಾನಾಪ್ರಕಾರದ ಆಕೃತಿಗಳೊಂದಿಗೆ ಕುಣಿಯುವುವು. ಬಲಿತ ಟೊಂಗೆಗಳು ಗಂಭೀರವಾಗಿ ತಮ್ಮ ಸಬಲತ್ವದ ಮೂಲಕ ಗಾಳಿಯ ಶಕ್ತಿಗೆ ಪ್ರತೀಕಾರಮಾಡುತ್ತವೆ. ಚಿತ್ರ-ವಿಚಿತ್ರ ಹೂಗಳಿಗಾಗಿ ವಿವಿಧ ಬಣ್ಣದ ಪಾತರಗಿತ್ತಿ ಹುಳುಗಳು ಹಾರಾಡುತ್ತವೆ; ಜೇನ್ನೊಣಗಳು ಗುಂಯ್‌ಗುಟ್ಟುತ್ತವೆ. ಬಕುಳ-ಪಾರಿಜಾತಗಳು ಹೂಗಳ ತಳಿಯನ್ನು ಹಾಕಿರುವುವು. ಮಲ್ಲಿಗೆಯ ಹೂಗಳು ಪರಿಮಳವನ್ನು ಬೀರುತ್ತಿರುವುವು. ಗುಲಾಬಿ, ಸಂಪಿಗೆ ಹೂಗಳು ತಮ್ಮ ಸೌಂದರ್ಯ-ಸುರಭಿಗಳಿಂದ ನೋಡಿದವರನ್ನು ಆಕರ್ಷಿಸಿಕೊಳ್ಳುತ್ತವೆ. ಸಣ್ಣ ಸಣ್ಣ ಹೂಗಿಡುಗಳು ನಳನಳಿಸಿ ಮೆರೆಯುತಿರುತ್ತವೆ—ಇಂತಹ ಚಿಕ್ಕತೋಟದ ಮಧ್ಯದಲ್ಲಿರುವ ಮನೆಯವರನ್ನು, ಯಮದೂತನೂ ನಮಿಸಿ ಮುಂದೆ ಸಾಗಬಹುದು."

ಮೊಗಲ ಸಾಮ್ರಾಜ್ಯದಲ್ಲಿ ಹೂದೋಟದ ಮಹತ್ತ್ವವು ಬಹಳವಾಗಿ ಬೆಳೆಯಿತು. ಫಿರೋಜಶಹನ ಕಾಲದಲ್ಲಿ ಪರ್ಸಿಯಾ, ಮಧ್ಯ ಏಶಿಯಾಗಳಿಂದ ವಿವಿಧಪ್ರಕಾರದ ಹೂಗಳ ಬಳ್ಳಿ ಗಿಡಗಳನ್ನು ತಂದು ಹಚ್ಚಿಸಲಾಯಿತಂತೆ. ಆಗ ೧೪೦೦ ತೋಟಗಳಿದ್ದುವಂತೆ. ಅವನ್ನು ಬಾಬರನು ಸುವ್ಯವಸ್ಥೆಗೊಳಿಸಿದನಂತೆ. ನೂರ್‌ಜಹಾನಳ ಸಲುವಾಗಿ ಅತ್ತರ್‌ವೂ ಆಗಲೆ ಹೊರಟಿತು.

ಕಾಶ್ಮೀರದ '**ಶಾಲಿಮಾರ್**' ತೋಟವು, ಪೂರ್ವ-ಪಶ್ಚಿಮ ದೇಶಗಳಲ್ಲಿ ಎಲ್ಲಿಯೂ ಇರದಂತಹ ಜಗತ್‌ಪ್ರಸಿದ್ಧಿಯನ್ನು ಪಡೆದುಕೊಂಡಿದೆ ಈಗ. ೧೫ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಜನರು, ಗುಲಾಬಿ ಹೂಗಳ ವಿನಾ ಇರಲು ಶಕ್ಯವಿದ್ದಿಲ್ಲ; ಮತ್ತು ಅವರಿಗೆ ಖಾದ್ಯಪದಾರ್ಥಗಳಷ್ಟೇ ಹೂಗಳ ಮಹತ್ತ್ವವೂ ಇದ್ದಿತು ಎಂಬುದಾಗಿ ತನ್ನ ಪುಸ್ತಕದಲ್ಲಿ ಅಬ್‌ದುಲ್ ರಜಾಕ್‌ನು ಬಣ್ಣಿಸಿ ಹೇಳಿರುವನು.

ತೀರ ಹಳ್ಳಿಗಳಲ್ಲಿರುವ ಗುಡಿಸಿಲಿನ ಸುತ್ತಲೂ ಬೇಲಿಗುಂಟ ಮುಳ್ಳಿನ ಗುಲಾಬಿ, ಮುಳ್ಳುಜಾಜಿ, ಮೂಲೆ-ಮೂಲೆಗೆ ಗುಲಬಾಕ್ಷಿ, ಸಾಲಾಗಿ ನಡು-ನಡುವೆ ಚಂಡುಹೂ, ಅಲ್ಲೊಂದು ಇಲ್ಲೊಂದು ಸೂರ್ಯಕಾಂತ, ಅಲ್ಲದೆ ಮನೆಗೆ ಹಬ್ಬಿಸಿದ ಬಳ್ಳಿಗಳು— ಇವೆಲ್ಲ ಇದ್ದ ರಸಿಕ ಒಕ್ಕಲಿಗರೂ ನಮಗೆ ಸಿಕ್ಕುವರು.

'ವಿಷ್ಣುವು ತುಲಸೀದಲಪ್ರಿಯನು. ಮಹಾದೇವನು ಬಿಲ್ವದಲ ಪ್ರಿಯನು' ಎಂಬ ಸ್ತೋತ್ರದ ಅರ್ಥವು. ಮನೆ ಮನೆಗೆ ಈ ಗಿಡಗಳನ್ನು ಹಚ್ಚಿ ಬೆಳೆಯಿಸಿರೆಂಬುದೆ.

ಅನಂತನಿಗೆ ಹದಿನಾಲ್ಕು ಪ್ರಕಾರದ ಹೂಗಳು ಬೇಕಾಗುವುದೂ, ಮಂಗಲಗೌರಿಗಾಗಿ ಅನಂತತರದ ಹೂಗಳ ಪ್ರದರ್ಶನ ಮಾಡುವುದೂ 'ಮನೆಮನೆಗೆ ಚಿಕ್ಕ ತೋಟವನ್ನು ನಿರ್ಮಿಸಿರಿ.' ಎಂಬ ಮಾತನ್ನೇ ಹೇಳುವುದಲ್ಲವೆ? ಇದರಲ್ಲಿ ಹುದುಗಿರುವ ಧರ್ಮದ ಕಟ್ಟಳೆಯೂ ಇದನ್ನೇ ಹೇಳುತ್ತದಲ್ಲವೆ?

ಬೇಸಗೆಯಲ್ಲಿ ಕುಡಿಯಲು ಸಹ ನೀರುಸಿಕ್ಕದ ಧಾರವಾಡದಂತಹ ಊರುಗಳಲ್ಲಿ ನನ್ನ ಲೇಖನವು ಕಾದಂಬರಿಯಂತೆ ತೋರಬಹುದು. ಆದರೆ ಮಳೆಗಾಲದಿಂದ ಎಂಟು ತಿಂಗಳ ವರೆಗೆ (ಈಗ) ಎಲ್ಲಿಯೂ ಈ ಚಿಕ್ಕ ತೋಟವನ್ನು ಮಾಡಲು ಸಾಧ್ಯವಿದೆ. ತೋಟ-ತೋಟವೆಂದರೆ ಅದಕ್ಕೇನು ಹತ್ತುವುದು? ಮನೆಯಸುತ್ತಲೂ ಸ್ವಲ್ಪ ಸ್ಥಳವು ಇದ್ದರೆ ಸಾಕು (ಪಟ್ಟಣಗಳಲ್ಲಿ ಮನೆಯಸುತ್ತಲೂ ತಕ್ಕ ಪ್ರಮಾಣದಲ್ಲಿ ಸ್ಥಳಬಿಟ್ಟು ಮನೆಕಟ್ಟಬೇಕೆಂದು ಕಾನೂನು ಇರುವುದು). ಸಮೀಪದ ಮಡಿಕಟ್ಟಾದ ಹೊಲಗಳಲ್ಲಿಂದ ನಾಲ್ಕು ಎತ್ತಿನ ಹೊರೆಯಷ್ಟು ಮಣ್ಣು ತರಿಸಿ, ಮನೆಯಲ್ಲಿಯ ಕಸ-ಬೂದಿಗಳನ್ನು ಕೂಡಿಸಿ, ನಾಲ್ಕು ಗುದ್ದಲಿಯ ಪೆಟ್ಟುಗಳಿಂದ—ಮಾಡಿದ ಮಡಿಗಳಲ್ಲಿ ಅದನ್ನು ಬೆರಸಿ ಸಮಮಾಡಿ ಹರವಿ— **ರಾಜಗಿರಿ, ಮೆಂಥೆ, ಕುಸಿಬಿ, ಸಬ್ಬಸಿಗೆ, ಹುಣಚಿಕ್ಕಿ ಮತ್ತು**— ಚಪ್ಪಲಿಪಾಪೋಸುಗಳಿಂದ ತಿಕ್ಕಿ ಬೇಳೆಮಾಡಿದ— ಕೊತ್ತುಂಬರಿಕಾಳು ಮೊದಲಾದುವನ್ನು ಸಾಲಾಗಿ ಕೊರೆದ ಹರಿಗಳಲ್ಲಿ ಬಿತ್ತಿ, ಮೇಲೆ ಸ್ವಲ್ಪ ಮಣ್ಣು ಉದುರಿಸಿದರೆ ಸಾಕು. ಈ ತೊಪ್ಪಲುಪಲ್ಲೆಯ ಬೆಳೆಗಳಿಗೆ ನೀರು ಬಹಳವಾಗಿ ಬೇಕಾಗುವುದಿಲ್ಲ; ಎರಡುದಿನಕ್ಕೊಂದಾವೃತ್ತಿ ನೀರುಣಿಸಿದರೆ ಸಾಕು. ಮಳೆಗಾಲದಲ್ಲಿ ನೀರು ನಿಲ್ಲಬಾರದಂತೆ ಮಡಿಗಳನ್ನು ಸ್ವಲ್ಪ ಎತ್ತರವಾಗಿ ಮಾಡಬೇಕು. ಮೂಲಂಗಿ, ಪುಂಡಿಯ ಬೀಜಗಳನ್ನು ಮಡಿಯ ಬೋದುಗಳ ಮೇಲೆ ಗೇಣು-ಗೇಣಂತರದಲ್ಲಿ ಊರಬೇಕು.

ಒಂದು ಸಣ್ಣ ಮಡಿಯಲ್ಲಿ ಮೆಣಸಿನಕಾಯಿ ಬೀಜ, ಟೋಮ್ಯಾಟೋದ ಬೀಜ, ಡಬಲ್‌ಬೀನ್‌ದ ಬೀಜಗಳನ್ನು ದಟ್ಟವಾಗಿ ಹಾಕಿದ್ದು, ಎದ್ದ ಅಗೆಗಳನ್ನು ಬೇರೆ ಕಡೆಗೆ— ೧||—೨ ಫೂಟು ಅಂತರದಲ್ಲಿ—ಎರಡೆರಡು ಅಗೆಗಳನ್ನು ಹಚ್ಚಬೇಕು. ಚನ್ನಾಗಿ ಗಿಡಗಳು ಹತ್ತಿದನಂತರ, ಜೊತೆಗೆ ಇದ್ದ ಒಂದನ್ನು ಕಿತ್ತಿ ಒಗೆದು, ಬೇರಿನ ಮೇಲೆ ಮಣ್ಣು ಏರಿಸಬೇಕು. ಇದರಂತೆ ಬದನೆಯ ಗಿಡಗಳನ್ನೂ ಹಚ್ಚಬಹುದು. ತಿಂಗಳಅವರೆಯ ಬೀಜಗಳನ್ನು ೧-೧|| ಫೂಟಿನ ಅಂತರದ ಮೇಲೆ ನೆಡಬೇಕು. ಇವು ಬೀಜಗಳನ್ನು ಊರಿದ ಒಂದು ತಿಂಗಳಿಗೆ ಕಾಯಾಗಲು ಪ್ರಾರಂಭವಾಗಿ, ೧-೧|| ತಿಂಗಳುಗಳವರೆಗೆ ಕಾಯಿಗಳನ್ನು ಕೊಡುವುವು.

ಮಡಿಗಳ ದಂಡೆಗುಂಟ ಬೋದುಗಳ ಮೇಲೆ ಚವಳಿ, ಬೆಂಡೆ ಮತ್ತು ಪುಂಡಿಯ ಬೀಜಗಳನ್ನು, ಒಂದು ಮೊಳದ ಅಂತರವಿಟ್ಟು ಸಾಲಾಗಿ ಹಾಕಿದರೆ, ಆ ಮಡಿಗಳಿಗೆ ಒಂದು ಬಗೆಯ ಶೋಭೆಯುಂಟಾಗುವುದಲ್ಲದೆ ತಕ್ಕ ಖನಿಜ ಪದಾರ್ಥಗಳುಳ್ಳ ಪಲ್ಲೆಕಾಯಿಗಳೂ ಸಿಕ್ಕುವುವು.

ತಗ್ಗಾಗಿದ್ದ ನೆಲವು ಬಹಳ ನೀರು ಹೀರಿ 'ಸಿಕ್ಕಸುವು' ಆಗುವುದು. ಇಂತಹ ಸ್ಥಳಗಳಲ್ಲಿ ಮಡಿಗಳನ್ನು ಮಾಡುವಾಗ, ಗೊಬ್ಬರದಂತೆ ಸ್ವಲ್ಪ ಸುಣ್ಣದ ಪುಡಿಯನ್ನು ಬೆರಸಿದರೆ ನೆಲಕ್ಕೆ ಒಳ್ಳೆಯ ಕಸುವು ಬರುತ್ತದೆ. ಎಲ್ಲಕ್ಕೂ ಸೆಗಣಿ ಗೊಬ್ಬರವು ಅತ್ಯುತ್ತಮ. ಅದನ್ನು ಹದಮಾಡುವ ರೀತಿಯೂ ಬೇರೆ ಇದೆ. ಮನೆ ಸಾಕಿಸಲು ಗೋಮಯವೂ ಸಿಕ್ಕದ ಪಟ್ಟಣವಾಸಿಗಳು ಅಂಗಡಿಯಲ್ಲಿ ಸಿಕ್ಕುವ ಎಲುವಿನ ಗೊಬ್ಬರವನ್ನು ಉಪಯೋಗಿಸಬೇಕು. ಇದರಲ್ಲಿ ಫಾಸ್‌ಫರಸ್ ಇರುವುದರಿಂದ, ಗಿಡಗಳು ಒಳ್ಳೆ ಬಲವಾಗಿ ಬೆಳೆಯುತ್ತವೆ.

ಬಳ್ಳಿಗಳ ಬೀಜವನ್ನು ಬೇರೆ ಮಡಿಯಲ್ಲಿ ಎರಡೋ ಮೂರೋ ಊರಬೇಕು; ಎಂದರೆ ಪಡುವಲು, ಹೀರೆ, ಹಾಗಲು ಬೀಜಗಳನ್ನು ಊರಿ, ಕುಡಿ ಒಡೆಯುತ್ತಿದಂತೆ ತೊಗರೆಯ ಕಟ್ಟಿಗೆ ಅಥವಾ ಅಡವಿಯ ಕಂಟಿಯ ಕಟ್ಟಿಗೆಯ ಸಹಾಯದಿಂದ ಮೇಲಕ್ಕೇರುವಂತೆ ಮಾಡಿ, ೬-೭ ಫೂಟಿನ ಎತ್ತರದ ಮೇಲೆ ಸಾಲುವಷ್ಟು ಹಂದರವನ್ನು ಹಾಕಿ ಹಬ್ಬಿಸಬೇಕು. ಪಡುವಲುಕಾಯಿ ಸಣ್ಣದಿರುವಾಗ, ಅದರ ಬಾಲಕ್ಕೆ ಸಮನವಾಗುವಷ್ಟು ಕಲ್ಲು ಕಟ್ಟಿದರೆ ಅದರ ಬೆಳವಣಿಗೆಯು ಚನ್ನಾಗಿ ಆಗುವುದಲ್ಲದೆ ಕಾಯಿ ಉದ್ದವಾಗುವುದು. ಕುಂಬಳ, ಸಂಡಿಗೆಗುಂಬಳ, ಹಾಲುಗುಂಬಳ ಬಳ್ಳಿಗಳನ್ನು ಸ್ಥಳದ ಅನುಕೂಲತೆಯಂತೆ, ಪ್ರಶಸ್ತವಾದ ಬಯಲಿನಲ್ಲಿಯೆ ಹಬ್ಬಿಸಬೇಕು. ಬಚ್ಚಲ ಮೋರಿಗೆ ಹೊಂದಿ ಬಾಂವಿ, ಬಾಳೆಗಳನ್ನು ಹಚ್ಚಿದರೆ, ಅವು ಎಲ್ಲ ನೀರನ್ನೂ ಹೀರಿಕೊಳ್ಳುವುವು. ಗಿಡಹಚ್ಚಿದ ಸ್ಥಳಗಳಲ್ಲಿ ಮೇಲಿಂದ ಮೇಲೆ ಕ್ರೈಯಾಡುತ್ತಿರುವುದರಿಂದ, ಗುಂಗಾಡಿನ (ಮಲೇರಿಯಾ) ತತ್ತಿಗಳು ನಾಶವಾಗಿ, ಚಳಿಜ್ವರದ ಉಪದ್ರವವೂ ಕಡಿಮೆಯಾಗುವ ಸಂಭವವಿದೆ.

ಈ ಮಡಿಗಳಿಗೆ ಸರಿಯಾಗುವಂತೆ ಅಲ್ಲೊಂದು ಇಲ್ಲೊಂದು ಹೂವಿನ ಗಿಡಗಳನ್ನೂ ಅಂದದ ಗಿಡಗಳನ್ನೂ (ಸಾಧ್ಯವಿದ್ದವರು ಕುಂಡೆಯಗಳನ್ನು ಇಡಬಹುದು) ಹಚ್ಚಿದರೆ, ದೃಷ್ಟಿಸೌಖ್ಯದ ಜೊತೆಗೆ ಘ್ರಾಣೇಂದ್ರಿಯದ ಸುಖವೂ ಪ್ರಾಪ್ತವಾಗಿ, ಜಗತ್ತಿನ ಸೌಂದರ್ಯಕ್ಕೆ ಹೆಚ್ಚಿನ ರೂಪು ಕೊಟ್ಟಂತಾಗುವುದು. ಅಲ್ಲದೆ ಮನಸ್ಸಿನ ಸುಖವೂ ನಿಶ್ಚಯವಾಗಿ ಸಿಕ್ಕುವುದು.

ಈ ಚಿಕ್ಕ ತೋಟದಲ್ಲಿ—ಒಮ್ಮೆ ಗಿಡಗಳನ್ನು ಹಚ್ಚಿದರೆ ಬೆಳೆದ ಮೇಲೆ ಅದರ ಜೋಪಾನವೇ ಬೇಡವೆನ್ನುವ—ಪಪಯಿ, ನುಗ್ಗೆ, ಜೂಗಚಿ, ಕರಿಬೇವು ಮತ್ತು ಮಾವು ಇತ್ಯಾದಿಗಳನ್ನು ಬೇಲಿಗೆ ಹಚ್ಚಿದರೂ, ಬೇಸಗೆಯ ಕಾಲದಲ್ಲಿ ಅದರ ಸೊಬಗು ಕಂಡುಬರುವುದು. ಇನ್ನು ತಮಗೆ ಇಷ್ಟವಿದ್ದ ಬೇರೆಯ ಗಿಡ-ಬಳ್ಳಿ ಕಾಯಿ-ಪಲ್ಲೆಗಳನ್ನು ತಾವೇ ಆರಿಸಬಹುದು.

(೧೨೬ ನೆಯ ಪುಟ ನೋಡಿರಿ)

ಸಂಶೋಧಕನ ಸಂತಾಪ

ಶ್ರೀರಂಗ

★

ಲೇಖನೀರು— ೨

★

ಭಾರತದ ಮೂಲನಿವಾಸಿಗಳು ಕುರುಬರಲ್ಲದೆ ವೇದಕಾಲದ ಋಷಿಗಳೂ ಕುರುಬರು. ಇಷ್ಟೇ ಅಲ್ಲ, ಯಜ್ಞಮುಖೇನ ಕುರಿಗಳನ್ನು ಸ್ವರ್ಗಕ್ಕೆ ತರಿಸಿಕೊಳ್ಳುವ ದೇವತೆಗಳೂ ಕುರುಬರು.

★

ಇದುವರೆಗೆ ಐತಿಹಾಸಿಕ ದೃಷ್ಟಿಯಿಂದ 'ಕುರುಬ' ಶಬ್ದದ ವ್ಯುತ್ಪತ್ತಿಯನ್ನು ನೋಡಿದ್ದಾಯಿತು. ಎಷ್ಟು ತರದ ಕುರುಬರೋ ಅಷ್ಟು ತರದ ವ್ಯುತ್ಪತ್ತಿಗಳು ಎಂಬ ತತ್ತ್ವವನ್ನು ಪ್ರತಿಪಾದಿಸಿ ಅದನ್ನು ಸೋದಾಹರಣವಾಗಿ ಸಮರ್ಥಿಸಿದ್ದೂ ಆಯಿತು. ಚರ್ಚೆಯನ್ನು ಮುಂದೆ ಸಾಗಿಸುವ ಮುಂಚೆ ಸಂಪ್ರದಾಯದಿಂದ ನಡೆದು ಬಂದ ಒಂದು ನಂಬುಗೆಯನ್ನು ಸ್ಪಷ್ಟೀಕರಿಸುವುದಗತ್ಯವಾಗಿದೆ. ಅದೆಂದರೆ ರೂಢಿಯಲ್ಲಿ 'ಕುರುಬ' ಶಬ್ದಕ್ಕೆ ಅಂಟಿಕೊಂಡ ಅರ್ಥವಿಶೇಷ: ಇಂದು ಕುರುಬ ಎಂಬುದು 'ದಡ್ಡ, ಮಡ್ಡ' ಎಂಬ ಅರ್ಥದಲ್ಲಿ ಗಾದೆಯ ಮಾತಿನಂತಾಗಿದೆ. ಯಾಕೆ?

ಈ ಮೊದಲಿನ ಲೇಖದಲ್ಲಿ ಕಾಣಿಸಿದ ವ್ಯುತ್ಪತ್ತಿಗಳ ಮಾದರಿಗಳನ್ನು ನೋಡಿದರೆ, ಮೇಲಿನ ಪ್ರಶ್ನೆಗೆ ಉತ್ತರವನ್ನು ಕಾಣಲು ಸುಲಭವಾಗಬಹುದು. ಕುರುಬ ಎಂದರೆ ಧನವಂತ, ಹೆಂಗುಸು, ನಿದ್ರೆಯಲ್ಲಿ ಅಪ್ರತಿಮ, ಕವಿ ಮುಂತಾಗಿ ಅರ್ಥಗಳನ್ನು ಹೇಳಿಲ್ಲವೆ? ಧನವಂತ-ಹೆಂಗುಸು-ನಿದ್ದೆಬಡಕ-ಕವಿಗಳು ದಡ್ಡರೊ ಜಾಣರೊ? ಧನವಿದ್ದಲ್ಲಿ ಬುದ್ಧಿ ಇಲ್ಲ ಎಂಬುದು ಎಲ್ಲರಿಗೂ ಗೊತ್ತು, ಅರ್ಥಾತ್ ಧನವಂತರು ದಡ್ಡರು ಎಂಬುದು ನಿರ್ವಿವಾದ. ಇನ್ನು ಹೆಂಗುಸು; ಹೆಂಗುಸಿನ ಜನ್ಮದಲ್ಲಿ ಸುಖವಿಲ್ಲ, ಹೆಂಗುಸಿಗೆ ಸ್ವಾತಂತ್ರ್ಯವಿಲ್ಲ ಎಂದು ಎಷ್ಟು ಜನರು ಹೇಳಿಲ್ಲ? ಹೀಗಿರುವಾಗಲೂ ಹೆಂಗುಸರು ಹೆಂಗುಸರಾಗಿಯೆ ಹುಟ್ಟುವರೆಂದ ಮೇಲೆ ದಡ್ಡರೆ ಅಲ್ಲವೆ ಅವರು? ನಿದ್ದೆಬಡಕರಿಗಾಗಿ ಹೇಳುವ ತೊಂದರೆಯನ್ನೇ ನಾವು ಪಡಬೇಕಾಗಿಲ್ಲ; ಯಾಕೆಂದರೆ ನಾವು ಏನನ್ನು ಬರೆದರೂ ಓದುವ ಎಚ್ಚರು ಅವರಿಗೆ ಬರುವಂತಿಲ್ಲ. ಕೊನೆಗೆ, ಕವಿಗಳ ಮಾತು. ಕವಿಗಳೆಂದರೆ ಜಾಣರು ಎಂಬ ತಪ್ಪು ಕಲ್ಪನೆ ಸರ್ವಸಾಮಾನ್ಯವಾಗಿ ರೂಢವಾಗಿದೆ. ಆದರೆ ಸೂಕ್ಷ್ಮ ದೃಷ್ಟಿಯಿಂದ ನೋಡಿದಲ್ಲಿ ಕವಿಗಳು—ಸಾಹಿತಿಗಳು — ನಿಜವಾಗಿ ದಡ್ಡರು ಎಂದು ಮಿಕ್ಕವರ ಮನವರಿಕೆಯಾಗುವುದರಲ್ಲಿ ಸಂದೇಹವೆ ಇಲ್ಲ. ಅದು ಹೇಗೆಂದರೆ:—

ಬುದ್ಧಿ ಇದ್ದರೆ ಕವಿಗಳು ಕವಿಗಳೆ ಆಗುತ್ತಿರಲಿಲ್ಲ. ಜಗತ್ತಿನಲ್ಲಿ ಹುಟ್ಟಿದ ಪ್ರಾಣಿಯ ಮೊದಲನೆಯ ಬುದ್ಧಿಲಕ್ಷಣವೆಂದರೆ ಹೊಟ್ಟೆ ತುಂಬಿಕೊಂಡು ಬಾಳುವುದು, ಅನ್ನವನ್ನು ದೊರೆಕಿಸಿ ದೇಹವನ್ನುಳಿಸಿ ಜೀವದಿಂದಿರುವುದು. ಆದರೆ ಸಾಮಾನ್ಯವಾಗಿ ಯಾವ ಕವಿ(ಸಾಹಿತಿ)ಯಲ್ಲೂ ಹೊಟ್ಟೆ ಹೊರೆದುಕೊಳ್ಳುವ ಯೋಗ್ಯತೆಯೆ ಇರುವುದಿಲ್ಲ; ಒಂದು. ಇನ್ನು ಎರಡನೆಯ ಕಾರಣ; ಮಾಡಬಾರದ ಕೆಲಸವನ್ನು ಮಾಡುವುದು ದಡ್ಡತನದ ಲಕ್ಷಣವಲ್ಲವೆ? ಅದು ಪೂರ್ತಿಯಾಗಿ ಕವಿಯಲ್ಲಿ ಕಂಡುಬರುವುದು. ಕೆಲವು ಕವಿ (ಸಾಹಿತಿ)ಗಳು ಯೋಗ್ಯತೆ ಇಲ್ಲದೆ ಮದುವೆ ಮಾಡಿಕೊಳ್ಳುವರು; ಕೆಲವರು ಒಲವಿಲ್ಲದೆ ನೌಕರಿಯನ್ನು ಮಾಡುವರು; ಕೆಲವರು ಇದಕ್ಕಿಂತಲೂ ಹೆಚ್ಚಾಗಿ ಅಸಾಮಾಜಿಕ ಕೆಲಸಗಳನ್ನು ಮಾಡುವರು; ಮಂದಿಯ ವ್ಯವಹಾರದಲ್ಲಿ ಕೈಹಾಕುವರು, ಮಂದಿಯ ಮನೆ-ಮಡದಿ-ಮನಸ್ಸುಗಳನ್ನು ಬಯಸುವವರಂತೆ ಬಣ್ಣಿಸುವರು. ಈ ನನ್ನ ಮಾತಿಗಾಗಿ ಕವಿಗಳು ಸಿಟ್ಟಿಗೆ ಬಂದರೆ ನನಗೆ ಸಂತೋಷವೆ ಇದೆ, ಯಾಕೆಂದರೆ ಹಾಗಾಗಿ ಅವರು ತಮ್ಮ ದಡ್ಡತನವನ್ನು ಬಿಡಬಹುದು. ಆದರೆ ನನ್ನ ಸದ್ಯದ ವಿಷಯ ಅದಲ್ಲವಾದ್ದರಿಂದ ಇಲ್ಲಿಗೇ ತಡೆಯುವೆ.

ಅಂತೂ ಮುಖ್ಯವಾಗಿ ಹೇಳಬೇಕೆಂದ ಮಾತು ಈ ಎಲ್ಲ ಉದಾಹರಣೆಗಳಿಂದ ವಾಚಕರಿಗೆ ಸ್ಪಷ್ಟವಾಗಿರಲು ಸಾಕು. 'ಕುರುಬ' ಎಂಬ ಶಬ್ದಕ್ಕೆ ದಡ್ಡ ಎಂಬ ಅರ್ಥ ರೂಢಿಯಲ್ಲಿ ನೆಲೆಗೊಂಡುದು ಹೇಗೆ ಎಂಬುದನ್ನು ಇದುವರೆಗೆ ವಿವರಿಸಿದ್ದಾಯಿತು. ಇನ್ನು ಮತ್ತೆ ಮೂಲಪ್ರಶ್ನೆಯ ಕಡೆಗೆ ಮುಖವನ್ನು ಹೊರಳಿಸಲು ಅಡ್ಡಿಯಿಲ್ಲವಷ್ಟೆ? ನನ್ನ ಜಾತಿಯಾದ ಕುರುಬಜಾತಿಯು ಜಗತ್ತಿನಲ್ಲಿ ಹೇಗೆ ಅನೇಕವಿಧವಾಗಿ ಬೆಳೆದಿದೆ ಎಂಬುದನ್ನು ನಿಜವಾಗಿ ನಾನು ಸಿದ್ಧಪಡಿಸುವ ಅಗತ್ಯವೆ ಇಲ್ಲ ಎಂಬುದೂ ತಮಗೆ ಈಗಾಗಲೆ ಹೊಳೆದಿರಬಹುದಾಗಿದೆ. ಆದರೆ ಇಂದು ನಮ್ಮ ದೇಶದಲ್ಲಿ ತುಂಬ ಅಜ್ಞಾನ ಹರಡಿದೆ; ಅದರ ಪರಿಣಾಮವಾಗಿ ಅನರ್ಥ ಹಬ್ಬುತ್ತಲಿದೆ. ಅಜ್ಞಾನಿಗಳಲ್ಲಿ ಜ್ಞಾನವನ್ನು ತುಂಬುವುದೂ ಅನರ್ಥವನ್ನು ತಡೆದು ದೇಶದ ಕಲ್ಯಾಣವನ್ನು ಬಗೆಯುವುದೂ ಜ್ಞಾನಿಗಳ ಕರ್ತವ್ಯ; ಸಂಶೋಧಕನು ಜ್ಞಾನಿ; ನಾನು ಸಂಶೋಧಕ! ಹೀಗಾಗಿ ಯಾರು ಏನನ್ನು ಹೇಳಿದರೂ ನಾನು ನನ್ನ ಕರ್ತವ್ಯವನ್ನು ನೆರವೇರಿಸುವುದಗತ್ಯವಾಗಿದೆ; ಹೆಚ್ಚಿಗೇನು— ಅನಿವಾರ್ಯವಾಗಿದೆ!

ಹಿಂದುಸ್ತಾನಕ್ಕೆ ತೀರ ಪ್ರಾಚೀನರೆಂದರೆ ವೇದಕಾಲದ ಋಷಿಗಳು ಎಂದು ಕೆಲವರು ಹೇಳುವರು; ಅವರಿಗೂ ಮುಂಚೆ ಬೇರೆ ಮೂಲನಿವಾಸಿಗಳಿದ್ದರೆಂದು ಇನ್ನು ಕೆಲವರು ವಾದಿಸುವರು. ಈ ಮೂಲನಿವಾಸಿಗಳ ಬಗ್ಗೆ ನಮಗೆ ಹೆಚ್ಚಿನ ವಿಷಯ ಗೊತ್ತಾಗಿಲ್ಲ (ಆ ಬಗ್ಗೆ ಸಂಶೋಧನಕಾರ್ಯ ಬೆಳೆಯಬೇಕಾಗಿದೆ). ಆದರೆ ಅವರು ಕಾಡು-ಗುಡ್ಡಗಳಲ್ಲಿ ಅಲೆದಾಡುತ್ತಿದ್ದರೆಂದೂ ಬಳ್ಳಿ-ತೊಪ್ಪಲುಗಳನ್ನು ತಿನ್ನುತ್ತಿದ್ದರೆಂದೂ ಮಾತ್ರ ನಿಶ್ಚಿತವಾಗಿ ಗೊತ್ತಿದೆ. ಇದರ ಮೇಲಿಂದ ಮೂಲನಿವಾಸಿಗಳು ಕುರಿಗಳೇ ಆಗಿದ್ದರೆಂದು ಊಹಿಸಬಹುದಾದರೂ ಹೆಚ್ಚು ಸಂಶೋಧನಕಾರ್ಯವಾಗದೆ ಇದಕ್ಕಿಂತ ನಿಶ್ಚಿತವಾಗಿ ಹೇಳಲು ಬರುವಂತಿಲ್ಲ. ಇದಲ್ಲದೆ ಗಿಡದ ತೊಪ್ಪಲನ್ನು ತಿನ್ನುತ್ತಿದ್ದರೆ ನಾಲ್ಕು ಕಾಲ್ಗಳ ಸಾಮಾನ್ಯ ಕುರಿಯಾಗದೆ ಹಿಂಗಾಲ್ಗಳ ಮೇಲೆ ನಿಂತು ಮುಂಗಾಲ್ಗಳನ್ನು ಸರ್ವದಾಕಾಲದಲ್ಲಿ ಎತ್ತಿಹಿಡಿಯಬಹುದಾದ ಮಾನವಜಾತಿಯ ಕುರಿಯಾಗಿದ್ದರೂ ಆಗಿರಬಹುದು. ವೃಕ್ಷಗಳಲ್ಲಿ ಶ್ರೇಷ್ಠವಾದುದಕ್ಕೆ 'ವೃಷಭ' ಎನ್ನುವಂತೆ ಕುರಿಗಳಲ್ಲಿ ಶ್ರೇಷ್ಠವಾದ (ಎಂದರೆ ಕೇವಲ ಹಿಂಗಾಲ್ಗಳ ಮೇಲೆ ನಿಲ್ಲುವ) ಕುರಿಗಳಿಗೆ 'ಕುರಿಭ' ಎಂಬ ಹೆಸರು ಬಂದಿತು; ಇದೇ 'ಕುರಿಭ'ವು ಕಾಲಾನುಕ್ರಮವಾಗಿ 'ಕುರುಬ' ಎಂದು ರೂಪಾಂತರವನ್ನು ತಾಳಿತು.

ಇನ್ನು ವೇದಕಾಲದ ಋಷಿಗಳೆ ಪ್ರಾಚೀನರು ಎಂದು ವಾದಿಸಿದರೂ ನಮ್ಮ ಕುರುಬ-ಮೂಲವೆ ಸಿದ್ಧವಾಗುವುದು. ಅದಕ್ಕೂ ಮುಂಚೆ ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕಾಗಿದೆ. ಅದೆಂದರೆ ಈ ಋಷಿಗಳ ಪ್ರಾಚೀನ ಸಂಸ್ಕೃತಿ. ಈ ಸಂಸ್ಕೃತಿಯಲ್ಲಿ ಅತ್ಯಂತ ಮುಖ್ಯವಾದುದೆಂದರೆ ಯಜ್ಞ. ದೇವತೆಗಳನ್ನು ತುಷ್ಟಿಗೊಳಿಸುವುದೇ ಯಜ್ಞದ ಉದ್ದೇಶವಾಗಿತ್ತು. ದೇವತೆಗಳಿಗೆ ಅತ್ಯಂತ ಪ್ರಿಯವಾದ ವಸ್ತುವನ್ನು ಯಜ್ಞಮಾರ್ಗವಾಗಿ—ಎಂದರೆ ಯಜ್ಞಮುಖೇನ—ಅರ್ಪಿಸಲಾಗುತ್ತಿತ್ತು. ಆ ಯಜ್ಞದ ವಿಷಯವಾಗಿ ಹೇಳುವುದೆಂದರೆ ಗಾದೆಯ ಮಾತಿನಂತಿದ್ದ ಒಂದೇ ಒಂದು ವಾಕ್ಯವನ್ನು ಹೇಳಿದರೆ ಸಾಕು. ಆ ವಾಕ್ಯ ಯಾವುದು? 'ಅಜಾಏಕಂ ಬಲಿಂದದ್ಯಾತ್'— ಎಂದರೆ 'ಕುರಿಯನ್ನು ಯಜ್ಞದಲ್ಲಿ ಅರ್ಪಿಸಬೇಕು.' ಯಾಕೆ? ಅರ್ಥಾತ್, ದೇವತೆಗಳಿಗೆ ಅತ್ಯಂತ ಪ್ರಿಯವಾದ, ಅಭೀಷ್ಟವಾದ ವಸ್ತು ಎಂದರೆ ಕುರಿ ಎಂದರ್ಥ. ಈ ಮಾತಿನಿಂದ ಸಂಶೋಧಕರು ಒಂದು ಸಮಂಜಸವಾದ ಪ್ರಶ್ನೆಯನ್ನೆತ್ತಿದ್ದಾರೆ. ದೇವತೆಗಳೂ ಕುರುಬರಾಗಿರಬಹುದೆ? ಸದ್ಯದ ಪರಿಸ್ಥಿತಿಯಲ್ಲಿ ಈ ಪ್ರಶ್ನೆಯನ್ನು ಶೋಧಿಸಲು ಸಾಕಷ್ಟು ಅನುಕೂಲತೆಗಳಿಲ್ಲ. ತಜ್ಞರ ಕೊರತೆಗಾಗಿಯೊ, ಹಣದ ಕೊರತೆಗಾಗಿಯೊ ಇದುವರೆಗೆ ದೇವತೆಗಳು ಸಂಶೋಧನಸಂಸ್ಥೆಯ ಏರ್ಪಾಟನ್ನೆ ಮಾಡಿಲ್ಲ. ಅದು ಹೋಗಲಿ; ಸಂಶೋಧನ ಕಾರ್ಯದ ಮಹತ್ತ್ವವೆ ದೇವತೆಗಳಿಗೆ ತಿಳಿದಂತಿಲ್ಲ. ಇಲ್ಲವಾದರೆ ನಾವು ಏರ್ಪಡಿಸಿದ ಸಂಸ್ಥೆಗಳಲ್ಲಿ ಬಂದು, ಅನುಕೂಲತೆ ಇಲ್ಲದಿದ್ದರೆ ನಮ್ಮ ಶಿಷ್ಯವೃತ್ತಿಗಳನ್ನು ಪಡೆದು, ಕೊನೆಗೆ ಸಂಶೋಧನ ಸಮಿತಿಯ ಗೌರವಸದಸ್ಯರಾಗಿ ಈ ಕಾರ್ಯವನ್ನು ಅರಿತುಕೊಳ್ಳಬಹುದಾಗಿತ್ತು. ಒಂದು ಸಲ ದೇವತೆಗಳನ್ನು ನಮ್ಮ ಸಂಸ್ಥೆಯ ಕಾರ್ಯಕಾರಿ ಮಂಡಲದ ಸದಸ್ಯರನ್ನಾಗಿ ಚುನಾಯಿಸಬೇಕೆಂದು ನಾನು ಪ್ರಶ್ನೆಯನ್ನೆತ್ತಿದಾಗ, ಕೆಲವರು 'ದೇವತೆಗಳಿಗೆ ಆ ವಿಷಯ ಅಭಿರುಚಿಯೆ ಇಲ್ಲ' ಎಂಬ ಆಕ್ಷೇಪಣೆಯನ್ನೆತ್ತಿದರು. ನನ್ನ ಅಭಿಪ್ರಾಯ ಬೇರೆ; ಪ್ರವಾಸದ ಭತ್ತೆಯನ್ನು ಕೊಟ್ಟರೆ ದೇವತೆಗಳಿಗೆ ಆಸಕ್ತಿ ಹುಟ್ಟಬಾರದೇಕೆ? ಅವರೂ ನಮ್ಮಂತೆಯೆ ಬುದ್ಧಿವಂತರು ಎಂಬ ವಿಚಾರದಿಂದ ನಾನೀ ಮಾತನ್ನು ಹೇಳುತ್ತಲಿದ್ದೇನೆ. ನಿಜವಾಗಿ ದೇವತೆಗಳಿಂದ ದೊಡ್ಡ ಕಾರ್ಯವಾಗಬಹುದೆಂದು ನನ್ನ ಭರವಸೆ. ಯಾಕಾಗಬಾರದು? ಸ್ವರ್ಗದಿಂದ ಇಲ್ಲಿಯವರೆಗೆ ಭತ್ತೆ ಸಣ್ಣದೆ? 'ಎಷ್ಟು ಹಣ ದೊರೆಯುವುದೊ ಅಷ್ಟು ದೊಡ್ಡ ಸಂಶೋಧಕ' ಎಂಬ ಅನುಭವ ನಮಗಿರುವಾಗ, ದೇವತೆಗಳು ಬಹಳೇ ದೊಡ್ಡ ಸಂಶೋಧಕರಾಗುವುದರಲ್ಲಿ ಸಂದೇಹವೇನು? ಇದನ್ನು ತಿಳಿಯದೆ 'ಅವರಿಗೆ ಅಭಿರುಚಿ ಇಲ್ಲ' ಎಂದರೆ? ಈಗ ನನ್ನ ಮಾತನ್ನೇ ಹೇಳುವೆ. Research (ಸಂಶೋಧನ) ಕ್ಕೆ grant (ಹಣದ ಸಹಾಯ) ವು ದೊರೆಯುವ ನಿಶ್ಚಯವಾದ ಮೇಲೆ ನನ್ನಲ್ಲಿ ಅಭಿರುಚಿ ಹುಟ್ಟಿತಲ್ಲವೆ? ಮುಂದೆ ಕ್ರಮೇಣ ನನ್ನಲ್ಲಿ ಸಂಶೋಧಕನ ಯೋಗ್ಯತೆಯೂ ಬಂದಿತು. ದೇವತೆಗಳಿಗೂ ಆ ಮಾತು ಅನ್ವಯಿಸಬಾರದೇಕೆ? ಅವರೂ ಕುರುಬ ಜಾತಿಯವರೆಂದ ಮೇಲೆ ಅನ್ವಯಿಸುವುದು ಖಂಡಿತ ಎಂದು ನನ್ನ ಅಭಿಪ್ರಾಯ. ಇಷ್ಟಕ್ಕೆ ಸಾಕು ಈ ಮಹತ್ತ್ವದ ವಿಷಯಾಂತರ. ಹೇಗೆ ದೇವತೆಗಳು ಕುರುಬರೊ ಹಾಗೆ ವೇದಕಾಲದ ಋಷಿಗಳೂ ಕುರುಬರು ಎಂಬ ಮಾತನ್ನು ಮುಂದಿನ ಲೇಖನದಲ್ಲಿ ಸಿದ್ಧಮಾಡಲು ಅಭಿವಚನವನ್ನು ಕೊಡುವ

—ಇತಿಶ್ರೀ-ರಂಗ

'ಆನಂದಕಂದ'ರ ಗ್ರಂಥಗಳು

ಸುದರ್ಶನ	(ಸಾ. ಕಾದಂಬರಿ)	೨-೧೪-೦
ರಾಜಯೋಗಿ	(ಐ. ಕಾದಂಬರಿ)	೧-೦-೦

ಇವಲ್ಲದೆ ಅವರ ಯಾವ ಪುಸ್ತಕ ಬೇಕಾದರೂ
'ಜಯಂತಿ' ಕಾರ್ಯಾಲಯಕ್ಕೆ
ಬರೆದು ತರಿಸಿಕೊಳ್ಳಬೇಕು!

ಸಾದರ ಸ್ವೀಕಾರ

೯. **ಪ್ರಜಾ** (ವಾರಪತ್ರಿಕೆ). ಸಂಪಾದಕರು ಶ್ರೀ. ರಾಘವೇಂದ್ರಾಚಾರ್ಯ ಜಾಗೀರದಾರ, ನಾಮಪಲ್ಲಿರೋಡ್–ಹೈದರಾಬಾದ್. ಕ್ರಾ. ಫೋಲಿಯೊ ೮ ಪುಟಗಳು. ವಾರ್ಷಿಕ ಚಂದಾ ೪–೦–೦.

ಹೈದರಾಬಾದಿನಲ್ಲಿ ಕನ್ನಡಿಗರ ಸೇವೆಗಾಗಿ ಹೊರಟ ಈ ನೂತನ ವಾರಪತ್ರಿಕೆಯನ್ನು ಪ್ರೇಮಾದರಗಳಿಂದ ಸ್ವಾಗತಿಸುವೆವು. ಪತ್ರಿಕೆ ಬಹುಕಾಲ ಬಾಳಿ, ಕನ್ನಡಕ್ಕಾಗಿ ದುಡಿಯುತ್ತಲಿರಲಿ !

೧೦. **ಜಹನಾರ** (ಕಥನಕವನ). ಬರೆದವರು ಶ್ರೀ. ಎಸ್. ವಿ. ಪರಮೇಶ್ವರ ಭಟ್ಟ ಎಂ. ಎ.; ಕನ್ನಡ ಅಧ್ಯಾಪಕರು ಇಂಟರ್ ಕಾಲೇಜ್ ತುಮಕೂರು. ಕ್ರಾ. ಅ. ೪೦ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೦–೧೨–೦. ಸಾದಾಪ್ರತಿಗೆ ೦–೮–೦.

೧೧. **ಹಳ್ಳಿಯಬಾಳು** (ಜಾನಪದ ಸಾಹಿತ್ಯ ವಿಮರ್ಶೆ). ಲೇಖಕರು ಶ್ರೀಮಾನ್ ಗೋರೂರು ರಾಮಸ್ವಾಮಿ ಐಯಂಗಾರ್. ಮೈಸೂರು 'ಕಾವ್ಯಾಲಯ'ದ ಪ್ರಕಟನೆ. ಕ್ರಾ. ಅ. ೯೨ ಪುಟಗಳು. ಬೆಲೆ ೧–೦–೦.

೧೨. **ಹುಚ್ಚೂರು ತಾರ ಆಫೀಸು** (ಚಿಕ್ಕ ದೃಶ್ಯ). ಬರೆದವರು ಶ್ರೀಮಾನ್ ಶಾಂತಾರಾಮ ನಾಯಕರು. ಪ್ರಕಾಶಕರು ಶ್ರೀಮಾನ್ ಲಿಂಗೇಶ ಶರ್ಮಾ, ಕರ್ನಾಟಕ ಸಂಘ, ಹೊನ್ನಾವರ. ಡೆ. ೧೬ ದಗಳ ಪುಟಗಳು. ಬೆಲೆ ೦–೩–೦.

ಇದೊಂದು ತರುಣಲೇಖಕರ ಪ್ರಥಮ ಪ್ರಯತ್ನ. ಒಂದು ತಾರ ಆಫೀಸಿಗೆ ಬಂದ ಹಳ್ಳಿಗನಿಗೂ ತಾರ ಮಾಸ್ತರನಿಗೂ ನಡೆದ ಸಂವಾದವೇ ಈ ದೃಶ್ಯದ ವಸ್ತು. ಹಳ್ಳಿಗನ ಅಜ್ಞಾನವನ್ನು ಪ್ರದರ್ಶಿಸಿ ನೋಟಕರನ್ನು ನಗಿಸಬೇಕೆಂಬ ಪ್ರಯತ್ನ ಲೇಖಕರದಿದೆ. ಕಾರವಾರ ಜಿಲ್ಲೆಯವರು ಧಾರವಾಡದ ದೇಶಿಯಲ್ಲಿ ಬರೆಯಲು ಹವಣಿಸಿದುದರಿಂದ, ಮಾತಿನಲ್ಲಿ ಕೃತ್ರಿಮತೆ ಮೂಡಿಕೊಂಡಿದೆ. ತಂತ್ರದಲ್ಲಿ 'ತಿರುಕರ ಪಿಡುಗು' ದೃಶ್ಯದ ಅನುಕರಣ ಪೂರ್ಣವಾಗಿ ಕಾಣುತ್ತದೆ. ಶ್ರೀಮಾನ್ ಮುಗುಳಿಯವರು ಮುನ್ನುಡಿ ಬರೆದು ಲೇಖಕರನ್ನು ಹರಸಿದ್ದಾರೆ. ಲೇಖಕರ ಎಳೆಯ ಕೈ ಬೆಳೆದು ಬಾಳಲಿ !

(೧೧೪ ನೆಯ ಪುಟದಿಂದ ಮುಂದೆಸಾಗಿದ್ದು)

ಎಲ್ಲಕ್ಕೂ ಅಚ್ಚುಕಟ್ಟುತನವೂ ಶೃಂಗಾರಿಕೆಯೂ ಬೇಕು. ತೋಟವನ್ನು ನೋಡಿದಾಕ್ಷಣವೆ ತಿಪ್ಪೆಯಲ್ಲಿ ತಾನೇ ಬೆಳೆದು ಹರಡಿದ ಕುಂಬಳ ಬಳ್ಳಿಯಂತೆ ಕಾಣಿಸಬಾರದು. ಎರಡೂ ಬದಿಯ ಮಡಿಗಳ ಮಧ್ಯದಲ್ಲಿ ೨–೩ ಫೂಟು ಅಗಲವಾದ ಗಟ್ಟಿಯಾದ ಮಾರ್ಗವನ್ನು ರಚಿಸಬೇಕು. ಮೇಲೆ ಸ್ವಲ್ಪ ಕೆಂಪುಗರಸನ್ನು ಉದುರಿಸಿದರೆ ಕಣ್ಣಿಗೂ ಹಿತ. ಹಾದಿಯ ಅಂಚಿಗೆ, ಮಂಗಳೂರಿನ ಹಂಚಿನ ಚೂರುಗಳನ್ನೋ ಚಪ್ಪಟೆ ಕಲ್ಲನ್ನೋ ಕೂಡಿಸಬೇಕು, ಇದರಿಂದ ಮಡಿಗಳು ಕೆಡುವುದಿಲ್ಲ, ಗಿಡಗಳಿಗೂ ಧಕ್ಕೆಯಾಗುವುದಿಲ್ಲ. ಬಳ್ಳಿಗಳನ್ನು ಯಾವ ಕಡೆಗೆ— ತೊಪ್ಪಲ ಪಲ್ಲೆಯನ್ನು ಯಾವ ಬದಿಗೆ—ಹಚ್ಚಿ, ಹೂ-ಗಿಡುಗಳನ್ನು ಹೇಗೆ ನೆಡಬೇಕೆಂಬುದನ್ನು, ನೀವೇ ಹಿತ್ತಲಲ್ಲಿ ನಿಂತು ನೋಡಿದರೆ ತಿಳಿಯುವುದು. ಈ ಮಡಿಗಳಲ್ಲಿ ಬೇರೆ ಹುಲ್ಲು-ಕಸಗಳಿದ್ದರೆ ಮೇಲಿಂದ ಮೇಲೆ ಅವನ್ನು ತೆಗೆದು, ಗಟ್ಟಿಯಾದ ನೆಲವನ್ನು ಕುರುಪೆಯಿಂದ ಕೈಯಾಡಿಸಿ ಪೊಳ್ಳಾಗಿಸಬೇಕು. ದಟ್ಟವಾದ ಗಿಡಗಳನ್ನು ಕಿತ್ತಿ, ಬೆಳೆಯಲು ಅನುಕೂಲವಾಗುವಂತೆ ಮೇಲಿಂದ ಮೇಲೆ ಅನುವು ಮಾಡಿ ಕೊಡುತ್ತಿರಬೇಕು. ಮತ್ತು ಈ ಗಿಡಬಳ್ಳಿಗಳಿಗೆ ಅದೆಷ್ಟೋ ರೋಗಗಳಿರುವುವು. ರೋಗದ ಗಿಡಗಳನ್ನು ಕಿತ್ತಿ ಒಗೆದು ಸುಟ್ಟು ಬಿಡಬೇಕು. ಎಲೆಗಳಿಗೆ ತೂತು ಬಿದ್ದು ನಾಶವಾಗುವುದನ್ನು ಮತ್ತು ಎಲೆಗಳು ಮುದುಡಿ—ಸುರುಳಿಯಾದುದನ್ನು ಅಥವಾ ಪ್ರಮಾಣಕ್ಕಿಂತ ತೀರ ಸಣ್ಣಗಿರುವುದನ್ನು ಕಂಡರೆ, ಆ ಗಿಡಗಳನ್ನು ತಿಪ್ಪೆಯಲ್ಲಿ ಕೂಡ ಒಗೆಯದೆ, ಕಿತ್ತಿ ಸುಡುವುದೇ ಒಳ್ಳೆಯದು. ಗಿಡಗಳಿಗೆ ಮೇಲಿಂದ ಮೇಲೆ ಎಲೆ ತೊಯ್ಯುವಂತೆ ಸುಣ್ಣದ ನೀರನ್ನು ಸಿಂಪಡಿಸಿದರೆ, ರೋಗದ ಕೀಟಕಗಳು ನಾಶವಾಗುವುವು, ಅಥವಾ ಗಂಧಕದ ಪುಡಿ (ಇದರ ಚೀಟುಗಳು ಮಾರಲು ಸಿಗುತ್ತವೆ) ಯನ್ನು ಉದುರಿಸಿದರೂ ಬರುವುದು; ಇಲ್ಲವೆ ಮುಂಜಾವಿನ ಮಂಜಿನಿಂದ ತೊಯ್ದ ಎಲೆಗಳ ಮೇಲೆ ಸೋಸಿದ ಬೂದಿಯನ್ನು ಸಾವಕಾಶವಾಗಿ ಉದುರಿಸಿದರೂ ಒಳ್ಳೆಯ ಪರಿಣಾಮವಾಗುತ್ತದೆ. ಇದರಂತೆ ಬೆಳೆಯುವುದಕ್ಕೂ ಗೊಬ್ಬರ ಬೆರೆತ ಮಣ್ಣನ್ನು ಬೊಡ್ಡೆಗೆ ಏರಿಸುತ್ತಹೋಗಬೇಕು,

ತೊಪ್ಪಲುಪಲ್ಲೆ-ಹಣ್ಣುಕಾಯಿಗಳಲ್ಲಿ ಆಹಾರದ ದ್ರವ್ಯಗಳು ಯಾವುಯಾವುವು ಇರುತ್ತದೆಂಬದನ್ನು (ಜಯಂತಿಯ ವಾಚಕರು) "ನಮ್ಮ ಊಟ" ದಲ್ಲಿ ಉಂಡು ಮರೆತಿರಲಿಕ್ಕಿಲ್ಲ. ಇದು ಅಗತ್ಯವಾಗಿ ಬೇಕೆಂಬುದನ್ನು ಇನ್ನೊಮ್ಮೆ ನೆನಪಿಗೆ ತರುವೆನು,

ಪೇಟೆಯಲ್ಲಿ ಎರಡಾಣೆ ಕೊಟ್ಟು ಪಲ್ಲೆ ತಂದು, ಹೆಚ್ಚಿಗೆ ಬೇಕಾಗಿದ್ದರೂ ಸಾಧ್ಯವಿಲ್ಲದೆ ಹಂಚಿತಿಂದು, ಎರಡಾಣೆಯ ಲೆಕ್ಕವನ್ನು ಬರೆಯುವುದೂ ಈ ಚಿಕ್ಕ ತೋಟದಿಂದ ತಪ್ಪುವುದಲ್ಲದೆ, ಈಗಿನ ಅನ್ನಸಾಮಗ್ರಿಯ ಮುಗ್ಗಟ್ಟಿನ ದಿನಗಳಲ್ಲಿ ಆಹಾರದ ಬಹುಭಾಗವೂ ತುಂಬಿ ಬರುವುದು. ಊಟದಲ್ಲಿ ಕಚ್ಚಾ ಎಲೆಪಲ್ಲೆ-ಕಾಯಿಗಳಿಗೂ ಹಣ್ಣು-ಹಂಪಲಕ್ಕೂ ಅತಿ ಮೇಲಿನ ಸ್ಥಾನವಿರುವುದು. ಇದನ್ನು ದಿನಾಲು ದೊರಕಿಸಬೇಕಾದರೆ ಮನೆಯ ಚಿಕ್ಕತೋಟ ತುಂಬ ಅವಶ್ಯ.

ನಗೀಗೆ ನೈವಿದ್ಯ

ಲೆಕ್ಕದ ಉತ್ತರ

ಶಿಕ್ಷಕ :— ಹುಂ, ನೀನು ಹೇಳೋ ಗುಂಡ್ಯಾ! ಹದಿನೈದು ಜನರು ಒಂದು ಹೊಲವನ್ನು ನಾಲ್ಕುದಿನಗಳಲ್ಲಿ ಉಳುತ್ತಾರೆ; ಆದರೆ ಮೂವತ್ತು ಜನರು ಅದನ್ನು ಎಷ್ಟು ದಿನಗಳಲ್ಲಿ ಉಳಬಹುದು ?

ಗುಂಡ :— ಅವರು ಉಳಬೇಕಾದ ಕಾರಣವೇ ಇಲ್ಲ ಸರ್ ! ಹದಿನೈದು ಜನರು ಅದನ್ನು ಮೊದಲೇ ಉತ್ತುಬಿಟ್ಟಿರುವುದಿಲ್ಲ-ವೇನು ಸರ್ ?

* * *

ಪರದೆಗೆ ಯೋಗ್ಯ ಪತ್ನಿ

“ ನನ್ನ ಹೆಂಡತಿನ್ನ ನಾನು ಸಿನೇಮಾ-ದೊಳಗ ಕಳಸಬೇಕಂತ ಮಾಡೀನಿ. ಪರದೇಕ್ಕ ಆಕೀ ಮಾರಿ ಭಾಳ ಯೋಗ್ಯ ಅದ ಅಂತ ! ”

“ ಎಲೇ, ‘ ಪರದೇಕ್ಕ ಭಾಳ ಯೋಗ್ಯ-ಅದ ’ ಅಂದರ ಏನಂತ ತಿಳಿದೀದಿ ? ಆಕೀ ಮುಖದ ಮ್ಯಾಲ ಪರದೆ ಹಾಕಲಿಕ್ಕೆ ಯೋಗ್ಯಾ,— ಅಂತ ! ”

* * *

ರಾಯಿಟ್ ಟಾಯಿಮ್

ಟಾಯಿಮ್ ಟೇಬಲ್ಲಿನಲ್ಲಿ ೧೨ ಕ್ಕೆ ಬರ-ಬೇಕಾದ ಗಾಡಿಯು ಸರಿಯಾಗಿ ೧೨ ಕ್ಕೆ ಬರುವುದನ್ನು ಕಂಡು, ನಿಲ್ದಾಣದಲ್ಲಿ ನಿಂತವ-ರೆಲ್ಲ ಆಶ್ಚರ್ಯಚಕಿತರಾಗಿ, ತಮ್ಮ ಕೈಗಡಿ-ಯಾರವನ್ನು ನೋಡುವರು. ಆಗ ಒಬ್ಬ ಮಾತನಾಡಿದ :

“ ಏನ್ರೀ ಮಾಸ್ತರರೇ ! ನೋಡ್ರಿ ಇವತ್ತ ಗಾಡಿ ಸರಿಯಾಗಿ ಹನ್ನೆರಡಕ್ಕ ಬಂದsದ ! ಮತ್ತ ಎಮ್. ಎಸ್. ಎಮ್. ರೇಲ್ವೆಗಾಡಿ ಸರಿಯಾಗಿ ಬರೋದಿಲ್ಲ ಅಂತಾರ. . ಹೆ, ಹೆ!”

ಕೂಡಲೆ ಸ್ಟೇಷನ್ ಮಾಸ್ತರು ಹೇಳಿದರು: “ ಹೌದು, ಆದರೆ, ಇದು ನಿನ್ನೆ ಹನ್ನೆರಡಕ್ಕ ಬರೋಗಾಡಿ ಇವತ್ತ ಸರಿಯಾಗಿ ಹನ್ನೆರಡಕ್ಕ ಬಂದsದ! ಹಾಂಗ ರೈಟ್ ಟಾಯಿಮ್ ಅದs ಅನ್ರಿ !

* * *

ಜಡಪದಾರ್ಥ

ತಾಯಿ :— ಸಣ್ಣ ಹುಡುಗರು ಬುಂದೀದ ಉಂಡಿ ತಿನಬಾರದಪ್ಪಾ ಮಗನs ! ಮಹಾ ಜಡಪದಾರ್ಥ ಅದು !

ಮಗ :— ಎರಡೂ ಕೈಯಿಂದ ಎತ್ತಿ-ಹಿಡಿದು ತಿಂತೀನೇಳು. ಎರಡೂ ಕೈಗೆ ಜಡಾ ಏನೂ ಅನಿಸೂದಿಲ್ಲ !

* * *

ಇಬ್ಬರು ಮಿತ್ರರು

“ ರಾತ್ರಿ ಬಹಳ ಆಯಿತು. ಮಳೆ-ಯಂತೂ ಒಂದೇಸವನೆ ಬೀಳಲಿಕ್ಕೆ ಹತ್ತೇದ. ಈಗ ಏನು ಮಾಡಬೇಕಂತೀ ? ನನ್ನ ಕೊಡೆ ಮತ್ತು ಕಂದೀಲು ತೆಗೆದುಕೊಂಡು ಹೋಗು!”

“ ಛೀಛೀ ! ನು ಮ್ಮ ಗೇ ನೀ ಯಾ ಕ ತೊಂದರೆ ಪಡಬೇಕು ? ”

“ ಅಂದರೇನಪಾ ಇದು ! ನಿನ್ನ ಮನಿಗೆ ನಾ ಬಂದಾಗ ಹೀಂಗ ಆಗಿದ್ದರ, ನೀನೂ ತೊಂದರೀ ಪಡಬೇಕಾಗತಿತ್ತೋ ಇಲ್ಲೊ ? ”

“ ಛೇ, ಎಂದೂ ಇಲ್ಲ ! ನೀ ನನ್ನ ಮನಿಗೆ ಬಂದಾಗ ಹೀಂಗ ಆಗಿದ್ದರ, ನಿನ್ನ ಮನಿಗೆ ಹೋಗಲಿಕ್ಕೆ ಬಿಡತಿದ್ದೇ ಇಲ್ಲ. ಅಲ್ಲೇ ಉಟಕ್ಕ ಮಲಗಿಕೊಳ್ಳಲಿಕ್ಕೆ ಹೇಳಿಬಿಡತಿದ್ದೆ!”

* * *

ಸರಿಯಾದ ಊಹೆ

“ನನ್ನ ಮನಸಿನೊಳಗೇನೋ ಪೂರ್ಣ ಇದ: ನನ್ನ ಮಗಳನ್ನ ನಿಮಗೇ ಮದಿವೀ ಮಾಡಿ-ಕೊಡಬೇಕೂ ಅಂತ. ಆದರೆ ಹುಡುಗಿ ಇನ್ನೂ ಚಿಕ್ಕಾಕಿ !’ ’

“ ದೊಡ್ಡವಳಾಗಿ ಆಕಿಗೆ ಎಲ್ಲಾ ಮಾತು ತಿಳೀಲಿಕ್ಕೆ ಹತ್ತಿತಂದರೆ, ನಿಮ್ಮ ಮಾತು ಕೇಳಬಹುದೂಂತ ನನಗೇನೂ ಅನಿಸೂದಿಲ್ಲ!”

* * *

ಸವಿಮಾತಿನ ಸತೀಮಣಿ

“ ನನ್ನ ಹೆಂಡ್ತಿ ಮಾತನಾಡಲಿಕ್ಕೆ ಹತ್ತಿದ-ಳಂದರೆ ಇಷ್ಟೊಂದು ಕಿವಿಗೆ ಸವಿ ಅನಿಸತsದ ನೋಡು ! ಹಾಂಗs ಸುಮ್ಮಗs ಕೂತು-ಕೊಂಡು ಕೇಳತಿರತೀನಿ ನಾನು ! ”

“ ಸರಿ ಸರಿ ! ಅದಕ್ಕs ಕಾಣಿಸತsದ.... ನಿಮ್ಮ ನೆರೆಮನೀ ಗೋವಿಂದರಾಯರು ಆಗಾಗ ಹೇಳತಿರತಾರ : ಹೆಂಡ್ತಿ ಮನಿಗೆ ಬಂದಾಗಿನಿಂದಲೂ ಮನಿಯಲ್ಲಿ ನಿಮ್ಮ ಸೊಲ್ಲೇ ಅಡಗಿ ಬಿಟ್ಟsದ ಅಂತ ! ”

* * *

ಗಂಡ-ಹೆಂಡಿರ ಪ್ರೀತಿ

“ ನನ್ನ ಬಿಟ್ಟು ಇರಲಿಕ್ಕೆ ಹತ್ತಿ ಈಗ ಆರುತಿಂಗಳಾಯಿತು. ಇಷ್ಟುದಿನ ಇದ್ದಿ-ರಾದರೂ ಹ್ಯಾಂಗ ? ”

“ ಹ್ಯಾಂಗ ಅಂದರೇನು ? ತೀರಾ ಕಡಿಮಿ ವೆಚ್ಚದೊಳಗ ಇದ್ದೆ ! ”

* * *



ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್-ಡಿಪ್ಪೊ, ಹುಬ್ಬಳ್ಳಿ.



ಬಗೆಹರಿಯದ ಬಿಕ್ಕಟ್ಟು

ಹೊಸ ವೈಸರಾಯರ ನಿಯೋಜನೆಯಾದಂದಿನಿಂದ ಹೊಸ ಪ್ರಯತ್ನಗಳೂ ನಡೆಯುತ್ತಲಿವೆ— ದೇಶದ ರಾಜಕೀಯ ತೊಡಕನ್ನು ಬಿಡಿಸಲು, ಯಾವುದಾದರೊಂದು ಪ್ರಯತ್ನ ಯಶಸ್ವಿಯಾಗಿ ತೊಡಕು ಬಿಡಲಿ, ಯುದ್ಧಪರಿಸ್ಥಿತಿಯನ್ನು ನಮ್ಮ ದೇಶವು ಸಂಪೂರ್ಣ ಸಿದ್ಧತೆಯಿಂದ ಎದುರಿಸಲಿ— ಎಂದು ಹಾರಯಿಸುವವರಲ್ಲಿ ನಾವೂ ಒಬ್ಬರಾಗಿದ್ದೇವೆ. ಆದರೆ ಬಿಕ್ಕಟ್ಟು ಬಗೆಹರಿಯಬೇಕಾದರೆ ಅದಕ್ಕೆ ಕಾರಣವಾದ ಎರಡೂ ಪಕ್ಷಗಳ ಸಿದ್ಧತೆ ಬೇಕಲ್ಲವೆ? ಈ ಎರಡು ಪಕ್ಷಗಳಲ್ಲಿ ಒಂದಾದ ಕಾಂಗ್ರೆಸು ಬಂಧನದಲ್ಲಿದ್ದು ತನ್ನ ವಿಚಾರವನ್ನು ಬಯಲಿಗಿಡುವ ಸ್ವಾತಂತ್ರ್ಯವೆ ಅದಕ್ಕಿಲ್ಲ. ಇಷ್ಟೇಕೆ? ಕಾಂಗ್ರೆಸಿನ ಮನಸಿನಲ್ಲಿದ್ದುದೇನೆಂದು ಕಾರಾಗೃಹದ ವರೆಗೆ ಹೋಗಿ ತಿಳಿದುಕೊಳ್ಳಬೇಕೆಂದರೆ ಹೊರಗಿದ್ದವರಿಗೆ ಸ್ವಾತಂತ್ರ್ಯವಿಲ್ಲ, ಸವಲತ್ತೂ ಇಲ್ಲ. ಇದಾಯಿತು ಒಂದು ಪಕ್ಷದ ಕತೆ. ಇನ್ನೊಂದು ಪಕ್ಷವಾದ ಬ್ರಿಟಿಶ ಸರಕಾರದ ಮಾತಂತೂ ಸಾಕಷ್ಟಾಗಿ ಗೊತ್ತಿದೆ. ಭಾರತದಲ್ಲಿದ್ದ ಬ್ರಿಟಿಶ ದೊರೆತನಕ್ಕೆ ಕಾಂಗ್ರೆಸ್ಸು ಕೈಜೋಡಿಸಿ, ಗಲ್ಲಬಡಿದುಕೊಂಡು, ನೆಲವನ್ನು ಮೂಸಿಟ್ಟು ಶರಣಾಗತವಾದಹೊರತು ಏನೊಂದನ್ನೂ ಮಾಡುವ ಇಚ್ಛೆ ಇಲ್ಲ. ಇನ್ನು ಈ ದೊರೆತನದ ದೊರೆಯಾದ ಬ್ರಿಟಿಶ ಮಂತ್ರಿಮಂಡಳಕ್ಕೆ ಹಿಂದುಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟಿದೆ ಎಂಬ ಕಲ್ಪನೆಯು ಕ್ರಮೇಣ ಮರೆಯುತ್ತಿರುವಂತಿದೆ. ಯುದ್ಧಕ್ಕೂ ಈ ಬಿಕ್ಕಟ್ಟಿಗೂ ಸಂಬಂಧವಿದೆಯೊ ಇಲ್ಲವೊ ಎಂಬುದು ಕೂಡ ಮಿ. ಚರ್ಚಿಲ್‌ರಿಗೆ ಅಪ್ರಸ್ತುತವಾಗಿದೆ. ಯಾಕೆಂದರೆ, ಅವರ ಧೋರಣೆ ಮುಂಚೆ ಹಿಟ್ಲರನನ್ನು ಸದೆಬಡೆಯುವುದು. ಅದಾದ ಮೇಲೆ, ಜಪಾನದ ಪಾಳಿ ಬಂದಾಗ, ಅಲ್ಲಿಯವರೆಗೆ ಹಿಂದುಸ್ತಾನದ ಎಲ್ಲ ಪಕ್ಷಗಳಲ್ಲೂ ಸ್ವಾಭಿಮಾನ ಉಳಿದರೆ— ಆಗ ಮಿ. ಚರ್ಚಿಲ್‌ರು ತಮ್ಮ ಬುದ್ಧಿಮತ್ತೆಯ ಪ್ರಕಾಶವನ್ನು ಹಿಂದುಸ್ತಾನದ ಮೇಲೆ ಕೆಡುಹಬಹುದಾಗಿದೆ! ಹೀಗೆ— ಎರಡೂ ಕೈಗಳೆ ಹಿಂದೆ ಸೆಟೆದುನಿಂತಾಗ ಚಪ್ಪಾಳೆಯನ್ನು ತಟ್ಟುವುದಾದರೂ ಹೇಗೆ?

ತಾಳಗೆಟ್ಟ ತರ್ಕ

ಈ ಪರಿಸ್ಥಿತಿಯಲ್ಲೂ ಅನೇಕ ಪ್ರಯತ್ನಗಳು ನಡೆದಿವೆ. ಬೇರೆ ಬೇರೆ ಉದ್ದೇಶಗಳಿಂದ ಈ ಪ್ರಯತ್ನಗಳು ಪ್ರೇರಿತವಾಗಿವೆ. ಈ ಉದ್ದೇಶಗಳನ್ನು ನಾವು ಸೂಕ್ಷ್ಮವಾಗಿ ಅರಿತುಕೊಂಡರೆ, ಈ ಪ್ರಯತ್ನಗಳ ಫಲವೇನಾಗಬಹುದೆಂಬುದು ಸ್ಪಷ್ಟವಾಗುವುದು. ಮೊದಲು ಸಿಂಧದಲ್ಲಿ ತಲೆ ಎತ್ತಿದ ಪ್ರಯತ್ನವನ್ನು ನೋಡೋಣ: ಹಿಂದುಮಹಾಸಭೆ ಮತ್ತು ಮುಸ್ಲಿಂಲೀಗ ಇವೆರಡು ಸಂಸ್ಥೆಗಳ ನಡುವೆ ಒಪ್ಪಂದಮಾಡಬೇಕೆಂದು, ಅಂತಹ ಒಪ್ಪಂದ ಶಕ್ಯವಿದೆ ಎಂದು, ಆ ಒಪ್ಪಂದದಿಂದಲೆ ಬಿಕ್ಕಟ್ಟು ಬಗೆಹರಿಯಬಹುದೆಂದು ಈ ಪ್ರಯತ್ನ. ಇಷ್ಟಕ್ಕೆ ಮುಗಿಯಲಿಲ್ಲ. ಬಿಕ್ಕಟ್ಟಿಗೆ ನಿಜವಾಗಿ ಕಾಂಗ್ರೆಸ್ಸೆ ಕಾರಣ, ಆ ಕಾಂಗ್ರೆಸನ್ನು ಬಿಟ್ಟುಕೊಟ್ಟರೆ ಸಾಕು, ಎಲ್ಲವೂ ಸರಿಯಾಗುವುದು ಎಂದು ಈ ಪ್ರಯತ್ನದ ಪ್ರೇರಕರಾದ, ಸಿಂಧದ ಹಿಂದು ಮಂತ್ರಿಗಳಾದ ಶ್ರೀ. ವಡವಾನಿಯವರ ಅಭಿಪ್ರಾಯ. ಅದಕ್ಕೆ ಅವರು ಕಾರಣಗಳನ್ನೂ ತೋರಿಸಿದ್ದಾರೆ. ಕಾಂಗ್ರೆಸ್ಸು ತಮ್ಮ ಪ್ರತಿನಿಧಿಯಲ್ಲವೆಂದು ಮುಸಲ್ಮಾನರು ಹೇಳುವಾಗ, ಬ್ರಿಟಿಶರು ಕಾಂಗ್ರೆಸನ್ನು ಅಖಿಲ ಹಿಂದುಸ್ತಾನದ ಪ್ರತಿನಿಧಿಯೆಂದು ಒಪ್ಪುವುದು ಶಕ್ಯವಿಲ್ಲ; ಅದೇ ಮಹಾಸಭೆಯು ಹಿಂದುಗಳ, ಲೀಗವು ಮುಸಲ್ಮಾನರ ಪ್ರತಿನಿಧಿಗಳೆಂದು, ಅವೆರಡೂ ಒಂದಾಗಿ ಬ್ರಿಟಿಶರನ್ನು ಎದುರಿಸಿದರೆ ಅವನ್ನು ನಿರಾಕರಿಸಲು ಬ್ರಿಟಿಶರಿಗೆ ಧೈರ್ಯವಾದೀತೆ? ಶ್ರೀ. ವಡವಾನಿಯವರು ಬುದ್ಧಿಯ ಪ್ರದರ್ಶನವನ್ನು ಮಾಡಬೇಕೆಂದಿದ್ದಾರೊ, ದೇಶದ ಹಿತವನ್ನು ಹಾರಯಿಸುತ್ತಿದ್ದಾರೊ— ತಿಳಿಯದಂತಾಗಿದೆ!

ಅಜ್ಞಾನ–ದುರಭಿಮಾನ–ದುರುದ್ದೇಶ

ಶ್ರೀ. ವಡವಾನಿಯವರಲ್ಲಿ ಅಜ್ಞಾನವಿದೆ, ಇಲ್ಲವಾದರೆ ದುರಭಿಮಾನವಿದೆ; ಇವೆರಡೂ ಇಲ್ಲವಾದರೆ ಅವರ ವಿಚಾರಸರಣಿ ಘಾತಕವಾಗಿದೆ ಎಂದೇ ಹೇಳಬೇಕಾಗುವುದು. "ಕಾಂಗ್ರೆಸ್ಸು ಯಾರ ಪ್ರತಿನಿಧಿಯೂ ಅಲ್ಲ' ಎಂದು ತಾತ್ಪೂರ್ತಿಕವಾಗಿ ಒಪ್ಪೋಣ. ಆದರೆ ಮಹಾಸಭೆಯಾಗಲಿ ಮುಸ್ಲಿಂಲೀಗಾಗಲಿ

ಆಯಾ ಜಾತಿಗಳ ಪ್ರತಿನಿಧಿ ಎಂದು ಒಪ್ಪಲು ಯಾವ ಸಮರ್ಥ ಕಾರಣಗಳಿವೆ? ಇಂದಿನ ವರೆಗೆ ಪ್ರಜಾಪ್ರಭುತ್ವ ತತ್ತ್ವಕ್ಕನುಸರಿಸಿ ಯಾವ ಚುನಾವಣೆಯಲ್ಲಿ ಮಹಾಸಭೆಯು ಬಹುಮತದ ಬೆಂಬಲವನ್ನು ಪಡೆದಿದೆ? ಚುನಾವಣೆಯಿಂದ ಅಳೆಯದಿದ್ದರೆ ಮತ್ತಾವ ಸಂಗತಿಯಿಂದ ತನ್ನ ಪ್ರತಿನಿಧಿತ್ವವನ್ನು ಅಳೆಯಬಹು-ದೆಂಬುದನ್ನು ಮಹಾಸಭೆಯೆ ಹೇಳಲಿ! ಅಸ್ಪೃಶ್ಯರು ಮಹಾ-ಸಭೆಯ ಬೆಂಬಲಿಗರಲ್ಲ; ಕಾಂಗ್ರೆಸ್ಸಿಗಾಗಿ ತನು-ಧನ-ಮನಸ್ಸುಗಳ ಅರ್ಪಣವನ್ನು ಮಾಡಿದ ಲಕ್ಷಾವಧಿ ಹಿಂದುಗಳು ಮಹಾಸಭೆಯ ಹಿತಚಿಂತಕರು ಕೂಡ ಅಲ್ಲ; ಅನೇಕ ಪ್ರಾಂತಗಳಲ್ಲಿದ್ದ ಬ್ರಾಹ್ಮ-ಣೇತರ ಸಂಘಗಳು ಮಹಾಸಭೆಗೆ ಸೇರಿಲ್ಲ; ಕೂಲಿಕಾರರಂತೂ ಮಹಾಸಭೆಯನ್ನು ಮೂಸಿ ನೋಡುವುದಿಲ್ಲ! ಇವುಗಳನ್ನೆಲ್ಲ ಬಿಟ್ಟು ಮಿಕ್ಕ ಹಿಂದುಗಳು ತಮ್ಮವರೆ ಎಂದು ಮಹಾಸಭೆ ಹೇಳಿ-ದರೆ ಸಾಲದು; ದೃಷ್ಟಾಂತದಿಂದ ಸಿದ್ಧಮಾಡಿ ತೋರಿಸಬೇಕು. ವಸ್ತುಸ್ಥಿತಿ ಹೀಗಿರುವಾಗ ಶ್ರೀ. ವಡವಾನಿಯವರು ಬ್ರಿಟಿಶರನ್ನು ಎದುರಿಸಿದರೆ, ಸಾಮ್ರಾಜ್ಯಮದವೇರಿದ ಕಣ್ಣಿಗೆ ಈ ಚಿಲ್ಲರೆ ಮೂರ್ತಿ ಕಂಡೀತೊ ಇಲ್ಲವೊ ಎಂದು ಸಂದೇಹ.

ಜಿನಾ ಅವರ ಜಾದುಗಾರಿಕೆ

ಇನ್ನು ಮುಸ್ಲಿಂ ಲೀಗದ ಮಾತು. ಹಿಂದುಸ್ತಾನದ ಮುಸಲ್ಮಾನರಲ್ಲಿ ಲೀಗಿಗೆ ಸೇರದ ಅನೇಕ ಪಕ್ಷಗಳಿವೆ. ಮೋಮಿನರಿದ್ದಾರೆ; ಅಝಾದರಿದ್ದಾರೆ, ಸ್ವತಂತ್ರರಿದ್ದಾರೆ, ಜಮಾಯತ್ ಸಂಘವಿದೆ; ಇದಲ್ಲದೆ ಯಾವ ಕಾರಣಕ್ಕಾಗಿ ಮಹಾಸಭೆ ಲೀಗ-ದೊಡನೆ ಒಪ್ಪಂದ ಮಾಡಿಕೊಳ್ಳಬೇಕೆನ್ನುವುದೊ ಅದೇ ಕಾರಣ-ಕ್ಕಾಗಿ ಅಲ್ಲಲ್ಲಿ ಲೀಗದ ಅನುಯಾಯಿಗಳು ರಾಜೀನಾಮೆಯನ್ನು ಕೊಡುತ್ತಲಿದ್ದಾರೆ! 'ಮಹಾತ್ಮರನ್ನು ಕಾಣದ್ದೂ, ಕಾಂಗ್ರೆಸ್ಸನ್ನು ಕೂಡದ್ದೂ ಜಿನಾ ಅವರ ತಪ್ಪು' ಎಂದು ಹೇಳಿ ಕೆಲವರು ರಾಜೀ-ನಾಮೆಯನ್ನು ಕೊಡುತ್ತಿರುವಾಗ ಲೀಗವು ಹಿಂದುಸ್ತಾನದ ಎಲ್ಲ ಮುಸಲ್ಮಾನರ ಏಕಮೇವಾದ್ವಿತೀಯ ಪ್ರತಿನಿಧಿ ಎಂದು ಹೇಗೆ ಹೇಳುವುದು? ನಿಜವಾಗಿ ಹೇಳುವುದೆಂದರೆ, ಹಿಂದುಮಹಾ-ಸಭೆಯ ಧೋರಣದಿಂದಲೆ ಮುಸ್ಲಿಂ ಲೀಗಿಗೆ ಕಸುವು ಬಂದದ್ದು. ಹಿಂದುಗಳಿಂದ ತಮಗೆ ಭೀತಿ ಎಂಬ ಕಲ್ಪನೆಗೆ ಅವಕಾಶವಿರುವ ವರೆಗೆ ಮಾತ್ರ ಲೀಗಿಗೆ ಅಸ್ತಿತ್ವವಿದೆ. ಲೀಗವು ಎಂದೊ ಮಾಯ-ವಾಗಬಹುದಾಗಿತ್ತು. ಇಂದಿಗೂ ಅದು ಇರುವುದೆಂಬುದಕ್ಕೆ ಮುಸಲ್ಮಾನರ ಸಹಾನುಭೂತಿ ಹೆಚ್ಚುತ್ತಲಿದೆ ಎಂಬರ್ಥವಲ್ಲ; ಲೀಗವು ಉಳಿದದ್ದು, ನಡೆದದ್ದು ಕೇವಲ ಜಿನಾ ಇವರ ಜಾದು-ಗಾರಿಕೆಯಿಂದ; ಕಾಲ್ಪನಿಕ ಭೀತಿಯನ್ನು ಬೆಳೆಯಿಸಬಲ್ಲ ಅವರ ಕಲೆಗಾರಿಕೆಯಿಂದ. ಇಂತಹ ಸಂಸ್ಥೆಗೆ ರಾಜಕೀಯ ಪಕ್ಷ ಎಂಬುದು ತಪ್ಪು; ಪ್ರಾತಿನಿಧಿಕ ಪಕ್ಷ ಎಂಬುದು ಶಬ್ದಗಳ ದುರುಪಯೋಗ. ಇವೆರಡಕ್ಕೂ ಕೇವಲ ತಮ್ಮ ಸ್ವಾಮ್ಯವನ್ನು ಸಾಧಿಸಿಕೊಳ್ಳುವುದಕ್ಕಾಗಿ ಬ್ರಿಟಿಶರು ಪ್ರೋತ್ಸಾಹನವನ್ನು ಕೊಡುತ್ತ ಬಂದಿದ್ದಾರೆ. ಇದನ್ನು ತಿಳಿಯದೆ ಇಲ್ಲವೆ ಮರೆತು ಈ ಎರಡೂ ಸಂಸ್ಥೆಗಳು ಬ್ರಿಟಿಶರನ್ನು 'ಎದುರಿಸಿದರೆ' ಅರ್ಥಾತ್–'ನೀವು ಜಾತೀಯ ಸಂಸ್ಥೆಗಳು; ನಿಮಗೆ ಎಲ್ಲರದೂ ಬೆಂಬಲವಿಲ್ಲ; ಇದಲ್ಲದೆ ಜಾತೀಯ ದ್ವೇಷಕ್ಕಾಗಿ ನಿಮ್ಮಲ್ಲಿ ಈಗ ಕಂಡುಬರುವ ಐಕ್ಯಕ್ಕೆ ಮಹತ್ತ್ವವನ್ನೆ ಕೊಡುವಂತಿಲ್ಲ' ಎಂದು ಹೇಳಬಹುದಲ್ಲವೆ?

ಭೀತಿಯೆ ಮೂಲ

ನಿಜವಿದ್ದ ಮಾತೆಂದರೆ ಇಂದಿನ ಈ ಮಹಾಸಭೆ- ಲೀಗಗಳ ಐಕ್ಯಬುದ್ಧಿಗೆ ಭೀತಿಯೆ ಕಾರಣವಾಗಿದೆ. ಅದು ಕಾಂಗ್ರೆಸಿಗಾಗಿ ಭೀತಿ. ಇಂದಿಲ್ಲ ನಾಳೆ ಕಾಂಗ್ರೆಸಿನ ಮುಂದಾಳುಗಳು ಬಿಡು-ಗಡೆ ಹೊಂದಿದರೆ? ಇದೂ ಅಲ್ಲದೆ ಬ್ರಿಟಿಶರು ಕಾಂಗ್ರೆಸಿನೊಡನೆ ಸಂಧಾನವನ್ನು ಮಾಡಿಕೊಂಡು ಕಾಂಗ್ರೆಸಿನ ಮಹತ್ತ್ವ ಇನ್ನೂ ಹೆಚ್ಚಿದರೆ? ಕಾಂಗ್ರೆಸಿನಿಂದಲೆ ದೇಶದ ಹಿತ ಎಂಬುದು ನಿಜ-ವಿದ್ದರೂ, ಮಹತ್ತ್ವಾಕಾಂಕ್ಷಿಗಳ ಸ್ವಾರ್ಥಸಾಧಿಸುವ ಬಗೆ ಹೇಗೆ? ಹೀಗೆ ಅನೇಕ ತರದ ಭೀತಿ ಈ ಜಾತೀಯ ಸಂಸ್ಥೆಗಳಿಗಿದೆ. ಹೀಗೆಯೆ ಭೀತಿಮೂಲಕವಾಗಿ ಇನ್ನೂ ಒಂದು ಪ್ರಯತ್ನ ನಡೆದಿದೆ. ಅದು ಶ್ರೀಯುತ ಮುನಶಿಯವರದು. 'ಅಖಂಡ ಹಿಂದುಸ್ತಾನ'ದ ಕಲ್ಪನೆಯ ಜನಕರಿಗೆ ಪಾಕಿಸ್ತಾನದ ಹೆದರಿಕೆ ಇದ್ದರೆ ಆಶ್ಚರ್ಯವಲ್ಲ. ಇಂದಿನ ಬಿಕ್ಕಟ್ಟು ಹೀಗೆಯೆ ಬೆಳೆಯುತ್ತ ನಡೆದರೆ (೧) ತೀರ ಅನಿಷ್ಟ ಪರಿಣಾಮವೆಂದರೆ, ಹಿಂದುಸ್ತಾನವು ಮತ್ತೆ ಪ್ರಾಂತ-ಪ್ರಾಂತಗಳಲ್ಲಿ ಹರಿದುಹಂಚಿ ಹೋಗಬಹುದು; (೨) ಇಲ್ಲವೆ ಮುಸ್ಲಿಂಲೀಗದ ಪ್ರಾಬಲ್ಯ ಬೆಳೆದು ಪಾಕಿಸ್ತಾನವು ನಿಜವಾಗಿಯೆ ಅಸ್ತಿತ್ವದಲ್ಲಿ ಬರಬಹುದು; (೩) ಕೊನೆಯ-ದಾಗಿ, ಹಿಂದು-ಮಹಾಸಭೆಯ ಪ್ರಾಬಲ್ಯ ಹೆಚ್ಚಿದರೆ ಮುಸಲ್ಮಾನ-ರನ್ನು ಹೊರದೂಡುವ ಪ್ರಸಂಗ ಬರಬಹುದು, ಮುಸಲ್ಮಾನರಿ-ಗಾದರೂ ಹೊರಬೀಳುವುದು ಅನಿವಾರ್ಯವಾಗಬಹುದು. ಇವುಗಳಲ್ಲಿ ಯಾವ ಪರಿಸ್ಥಿತಿ ಬಂದರೂ ಹಿಂದುಸ್ತಾನದ ಅಖಂಡತೆಗೆ ಹೆದರಿಕೆಯೆ ಇದೆಯಲ್ಲವೆ? ಅದಕಾಗಿ 'ಇಂದಿನ ಬಿಕ್ಕಟ್ಟನ್ನು ಬಿಡಿಸಬೇಕು; ಬಿಡಿಸುವುದು ಶಕ್ಯವಾಗದಿದ್ದರೆ (ಶಕ್ಯವಾಗುವುದಿಲ್ಲ ಎಂಬುದು ಶ್ರೀ. ಮುನಶಿಯವರಿಗೆ ಮನವರಿಕೆಯಾಗಿದೆ.) ಅದನ್ನು ಸುಧಾರಿಸಿಕೊಳ್ಳಬೇಕು ಎಂದು ಶ್ರೀ. ಮುನಶಿಯವರ ಅಭಿಪ್ರಾಯ. ಮುಂದಾಳುಗಳೆಲ್ಲ ಜೇಲಿನಲ್ಲಿರುವಾಗ ಹೀಗೆ ಮಾಡುವುದು ಸರಿಯಾಗಬಹುದೆ?— ಎಂದು ಯಾರಾದರೂ ಕೇಳಿದರೆ ಶ್ರೀ. ಮುನಶಿಯವರು ಹಿಂದಿನ ಸ್ವರಾಜ್ಯ ಪಕ್ಷ ಹುಟ್ಟಿದ ಆಧಾರವನ್ನೂ ತೋರಿಸಿದ್ದಾರೆ.

ಮುಂದೆ ಮಾಡುವುದೇನು?

ಆದರೆ ಶ್ರೀಯುತರು ತಮ್ಮ ವಿಚಾರವನ್ನು ಸಮರ್ಪಕವಾಗಿ ಬೆಳೆಸಿಲ್ಲ ಎಂದು ನಮ್ಮ ಅಭಿಪ್ರಾಯ; ಬೆಳೆಸುವುದು ಶಕ್ಯವಾಗ-ಲಿಕ್ಕಿಲ್ಲ ಎಂದು ನಮ್ಮ ಹೆದರಿಕೆ. ಯುದ್ಧ ಮುಗಿಯುವವರೆಗೆ ಘಟನಾತ್ಮಕ ಪ್ರಶ್ನೆಗೆ ಕೈಯನ್ನೆ ಹಚ್ಚುವಂತಿಲ್ಲ ಎಂಬ ತಮ್ಮ

ಹಟವನ್ನೆ ಬ್ರಿಟಿಶರು ಸಾಧಿಸತೊಡಗಿದರೆ ಮುನಶಿಯವರು ಮಾಡಬೇಕೆಂಬುವುದೇನು? ಈ ಪುನಃಸ್ವರಾಜ್ಯ-ಪಕ್ಷದ ಸದಸ್ಯರ ಕಾರ್ಯಕ್ರಮವೇನು? ಶಾಸನಸಭೆಗಳನ್ನು ಸೇರುವುದೇ? ಅಲ್ಲೂ ತೊಡಕು. 'ಹೊಸ ಚುನಾವಣೆ ಯುದ್ಧಕಾಲದಲ್ಲಿ ಅವ್ಯವಹಾರ್ಯ' ಎಂದು ಬ್ರಿಟಿಶ ಮುತ್ಸದ್ದಿಗಳು ಈಗಾಗಲೆ ಅನೇಕ ಸಲ ಹೇಳಿದ್ದಾರೆ. ವೈಸರಾಯರ ಬದಲಾವಣೆಗಳಾದರೂ, ಎಂದೊ ಚುನಾಯಿಸಲ್ಪಟ್ಟ ಕೇಂದ್ರ ಶಾಸನಸಭೆ ಇಂದಿಗೂ ನಡೆದಿಲ್ಲವೆ? ಹೀಗೆ ಚುನಾವಣೆ ನಡೆಯದಿದ್ದರೆ ಈ ಪುನಃ-ಸ್ವರಾಜ್ಯ-ಬಂಧುಗಳಿಗೆ ಜನತೆಯ ಬೆಂಬಲವಿದೆ ಎಂದು ತಿಳಿಯುವುದು ಹೇಗೆ? ಅಥವಾ— ತಮ್ಮ ಈ ಪಕ್ಷಕ್ಕೆ ಬಹು-ಮತದ ಬೆಂಬಲ ದೊರೆಯಬಹುದೆಂಬ ಭರವಸೆ ಇದೆಯೆ ಮುನಶಿಯವರಿಗೆ? ಹಾಗಿದ್ದರೆ— ಕಾಂಗ್ರೆಸಿಗೂ ಅದರ ಈಗಿನ ಮುಂದಾಳುಗಳಿಗೂ ಜನತೆಯ ಬೆಂಬಲವಿಲ್ಲ ಎಂದಂತಾಯಿ-ತಲ್ಲ? ಆ ಮಾತನ್ನು ಧೈರ್ಯದಿಂದ, ಆತ್ಮವಿಶ್ವಾಸದಿಂದ, ಸ್ಪಷ್ಟವಾಗಿ ಶ್ರೀಯುತರು ಹೇಳಬಹುದೊ? ಮುಂದಾಳುಗಳು ಇಲ್ಲದಾಗ ಕೇವಲ ಜೇಲಿನ ಹೊರಗಿದ್ದ ಹತ್ತಾರು ಜನರು ಕೂಡಿ ನಿರ್ಣಯವನ್ನು ಬದಲಾಯಿಸುವುದು ಅಖಿಲ ಹಿಂದುಸ್ತಾ-ನದ ಪ್ರತಿನಿಧಿ ಎನಿಸುವ ರಾಜಕೀಯ ಪಕ್ಷಕ್ಕೆ ತಕ್ಕುದೊ? ಹಿಂದಿನ ಸ್ವರಾಜ್ಯಪಕ್ಷಕ್ಕೆ ಮಹಾತ್ಮರು ಮುಂಚಿತವಾಗಿ ತಮ್ಮ ಸಮ್ಮತಿಯನ್ನು ಕೊಟ್ಟಿದ್ದರು. ಈಗಲೂ ಹಾಗೆ ಮಾಡಿದರೆ ಮಾತ್ರ ಉಚಿತವೆನಿಸುವುದು. ಇಲ್ಲವಾದರೆ ಜೇಲಿನ ಅನುಭವ-ಕ್ಕಾಗಿಯೆ ತಮ್ಮ ರಾಜಕೀಯ ಧೋರಣವನ್ನು ಬದಲಾಯಿಸಿದ ಆರೋಪ ಮಿಕ್ಕವರ ಮೇಲೆ ಬರುವ ಸಂಭವವಿದೆ. ಹೀಗಾಗಿ ಶ್ರೀ. ಮುನಶಿಯವರ ಸದಿಚ್ಛೆ ಸಫಲವಾಗುವುದು, ಸಾರ್ಥಕ-ವೆನಿಸುವುದು ಶಕ್ಯವೆ ಇಲ್ಲ— ಎಂದು ಹೇಳಬಹುದಾಗಿದೆ.

ಸ್ಪರ್ಧೆಯ ಆಹ್ವಾನ

ಮೇಲಿನ ಎರಡು ತರದ ಪ್ರಯತ್ನಗಳಲ್ಲದೆ ಇನ್ನೂ ಒಂದು ವಿಧವಾದ ಪ್ರಯತ್ನ ನಡೆದಿದೆ; ಅದು ತೀರ ಇತ್ತೀಚಿನದು; ಕಾಂಗ್ರೆಸ್ ಮುಂದಾಳುಗಳಲ್ಲೊಬ್ಬರಾದ ಶ್ರೀಪ್ರಕಾಶರದು. ಇವರು ಮುಂಚಿನ ತಮ್ಮ ವಿಚಾರವನ್ನು ಬದಲಾಯಿಸಿ ಇತ್ತೀಚಗೆ ಬೇರೊಂದು ಸೂಚನೆಯನ್ನು ಮುಂದೆ ಮಾಡಿದ್ದಾರೆ. ಅದೆಂದರೆ— ಎಲ್ಲ ಪ್ರಾಂತಗಳಲ್ಲಿ ಮುಸ್ಲಿಂ ಲೀಗವೆ ಮಂತ್ರಿ-ಮಂಡಳಗಳನ್ನು ರಚಿಸಲಿ, ಅದರಲ್ಲಿ ತಪ್ಪೂ ಇಲ್ಲ, ಅನಿಷ್ಟವೂ ಇಲ್ಲ. ಈ ಮಾತಿನ ಅರ್ಥವೇನು? ಒಂದು ದೃಷ್ಟಿಯಿಂದ, ಕಾಂಗ್ರೆಸಿನ ಹಿರಿಯರು ಹೇಳಿದ ಮಾತನ್ನೇ ಶ್ರೀಪ್ರಕಾಶರು ಹೇಳಿದ್ದಾರೆ. 'ನಮಗೆ ಅಧಿಕಾರ ಬೇಡ; ಬ್ರಿಟಿಶರು ಅದನ್ನು ಬಿಟ್ಟುಕೊಟ್ಟರೆ ಸಾಕು; ಬೇಕಾದರೆ ಮುಸ್ಲಿಂ ಲೀಗವೆ ಎಲ್ಲ ಅಧಿಕಾರವನ್ನು ವಹಿಸಲಿ' ಎಂದು ಮಹಾತ್ಮರೂ ಎ. ಆಯ್. ಸಿ. ಸಿ. ಯ ನಿರ್ಣಯವೂ ಹೇಳಿದ್ದುಂಟು. ಆದರೆ ಶ್ರೀಪ್ರಕಾಶರು ಹೇಳುವುದರಲ್ಲಿ ಆ ಅಭಿಪ್ರಾಯವಿರಲಾರದು. ಯಾಕೆಂದರೆ, ಬ್ರಿಟಿಶರು ಇನ್ನೂ ತಮ್ಮ ಅಧಿಕಾರವನ್ನು ಬಿಟ್ಟಿಲ್ಲ, ಬಿಟ್ಟು-ಕೊಡುವ ಆಶ್ವಾಸನವನ್ನೂ ಕೊಟ್ಟಿಲ್ಲ; ಕಾಂಗ್ರೆಸು ಹೇಳಿದ್ದು ಇಂತಹ ಪರಿಸ್ಥಿತಿಗೆ ಅನ್ವಯಿಸುವುದಿಲ್ಲ. ಆದರೂ ಶ್ರೀ-ಪ್ರಕಾಶರು ಹೇಳಿದ್ದಾರೆ. ಈ ಹೇಳಿಕೆಗೆ ಸ್ಪರ್ಧೆ(Challenge)ಯೆ ಮೂಲ ಎಂದು ನಮ್ಮ ಅಭಿಪ್ರಾಯ

ಸ್ಪರ್ಧೆಯ ಸ್ವರೂಪ

ಲೀಗದವರು ಮಂತ್ರಿಮಂಡಳಗಳನ್ನು ಸ್ಥಾಪಿಸುವುದು ಹೇಗೆ? ಸ್ಥಾಪಿಸಿದರೂ ಅವುಗಳನ್ನು ನಡೆಯಿಸುವಷ್ಟು ಬಹುಮತ ಲೀಗಕ್ಕೆ ಇಲ್ಲವಲ್ಲ? ಅದಕಾಗಿ ಶ್ರೀಪ್ರಕಾಶರು 'ಕಾಂಗ್ರೆಸಿನವರಾಗಲಿ ಮತ್ತೆ ಯಾವ ಪಕ್ಷದವರಾಗಲಿ ಲೀಗ ಮಂತ್ರಿಮಂಡಳವನ್ನು ವಿರೋಧಿಸಬಾರದು' ಎಂದಿದ್ದಾರೆ. ಹೀಗೆ ಅವ್ಯಾಹತವಾಗಿ ಲೀಗ ರಾಜ್ಯ ಸಾಗಿದರೆ ಒಂದು ಮಾತಿನ ನಿರ್ಣಯವಾಗಬಹುದು. ಬ್ರಿಟಿಶ ಆಳರಸರು ಭಾರತೀಯರಿಗೆ ಎಷ್ಟರಮಟ್ಟಿಗೆ ಸ್ವಾತಂತ್ರ್ಯವನ್ನು ಕೊಡಬಯಸಿದ್ದಾರೆಂಬುದು ಲೀಗದ ಮುಂದಾಳುಗಳಿಗೆಯೆ ಸ್ಪಷ್ಟವಾಗುವುದು. ಇಂದು ಕಾರಣವಿಲ್ಲದೆ ಕಾಂಗ್ರೆಸಿನ ಮೇಲೆ ಹರಿಹಾಯುವ ಮುಸಲ್ಮಾನರಿಗೆ ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡ ಬರುವವರು ಯಾರು--ಎಂಬುದು ಸ್ಪಷ್ಟವಾಗಿ ತಿಳಿಯುವುದು. ಏನಿಲ್ಲೆಂದರೂ ಈ ಕಾಂಗ್ರೆಸಿನ ವಿರುದ್ಧ ಅಪಪ್ರಚಾರ ಮಾಡುವ ಅಧಿಕಾರ ಲೀಗಿಗೆ ಉಳಿಯಲಿಕ್ಕಿಲ್ಲ. ಅಥವಾ—ಇನ್ನೂ ಒಂದು ಪರಿಣಾಮವಾಗಬಹುದಾಗಿದೆ. ಯುದ್ಧಪರಿಸ್ಥಿತಿಗೆ ಕೈಮುಟ್ಟಿ ಸಹಾಯಮಾಡಬಾರದೆಂದು ಜಿನಾಸಾಹೇಬರು ಹೇಳಿರುವರಲ್ಲವೆ ತಮ್ಮವರಿಗೆ? ಸಹಾಯ ಮಾಡುವುದಾದರೆ ಮಂತ್ರಿಪದವಿಯೆ ಬೇಕು (ತಮ್ಮ ಪಕ್ಷಕ್ಕೆ ಮಾತ್ರ) ಎಂಬ ಸ್ಥಿತಿಯನ್ನು ಅವರು ತಂದುಕೊಂಡಂತಾಗುವುದು. ಇಲ್ಲವೆ—ಹಿಂದುಸ್ತಾನವನ್ನು ಆಳುವ ಭರದಲ್ಲಿ ಪಾಕಿಸ್ತಾನದ ಕನಸನ್ನು ಮರೆಯಬಹುದು. ಕೊನೆಗೆ ಜನತೆಯ ಬೆಂಬಲ ತನಗಿಲ್ಲದೆ ಎಂಬುದಕ್ಕಾಗಿ ಮುಸ್ಲಿಂ ಲೀಗನ್ನು ಒರೆಗೆ ಹಚ್ಚಿದಂತಾಗಬಹುದು. ಇಂತಹ ವಿಚಾರ-ಗಳಲ್ಲಿ ಜಾಣತನವಿರಬಹುದು. ಆದರೆ ಇದರಿಂದ ತೊಡಕು ಬಿಡುವುದಕ್ಕಿಂತ ತೊಂದರೆ ಬರುವುದು ಖಂಡಿತ.

ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ

ಪನವೇಲ, ಲಿಮಿಟೆಡ್

ಪನವೇಲ ಕುಲಾಬಾ

★

SHRI DHOOTAPAPESHWAR

PANVEL Ltd., PANVEL.

ಜಯಂತಿ ಸಣ್ಣಕತೆಗಳ ಮೇಲಾಟ

ಕೇವಲ ಉತ್ತರಕನ್ನಡ ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಗೋಕರ್ಣದ 'ಕೆಳೆಯರ ಕೂಟ'ದವರು ಈ ಮೇಲಾಟವನ್ನು ಏರ್ಪಡಿಸಿದ್ದಾರೆ.

೩ ಬಹುಮಾನಗಳು

೧ನೆಯದು ೧೦ ರೂಪಾಯಿ! ೨ನೆಯದು ೫ ರೂಪಾಯಿ! ೩ನೆಯದು ೩ ರೂಪಾಯಿ!

★ ಮೇಲಾಟದ ನಿಯಮಗಳು ★

೧. ಉತ್ತರಕನ್ನಡಜಿಲ್ಲೆಯಲ್ಲಿ ಹುಟ್ಟಿ ಬೆಳೆದವರೆಲ್ಲ—ಸದ್ಯ ಇನ್ನೊಂದು ಕಡೆಯಲ್ಲಿ ಕಾರ್ಯಾಂತರಕ್ಕಾಗಿ ಇದ್ದವರು ಕೂಡ—ಈ ಮೇಲಾಟದಲ್ಲಿ ಭಾಗವಹಿಸಬಹುದು.

೨. ಕತೆಯು ಸ್ವತಂತ್ರವಾಗಿದ್ದು ಉತ್ತರಕನ್ನಡಜಿಲ್ಲೆಯ ಜನಜೀವನವನ್ನು ಚಿತ್ರಿಸುವಂತಹದಾಗಿರಬೇಕು. ಒಬ್ಬರು ಒಂದಕ್ಕಿಂತ ಹೆಚ್ಚಾಗಿಯೂ ಕತೆಗಳನ್ನು ಕಳುಹಬಹುದು.

೩. ಕತೆಯು ಜಯಂತಿಯ ಮುದ್ರಿತಪುಟ ೪ಕ್ಕೆ ಮೀರದಷ್ಟು ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧದಳತೆಯ ೮ ಪುಟಕ್ಕೆ ಮಿಕ್ಕದಷ್ಟು ಇರಬೇಕು.

೪. ಮೇಲಾಟದ ನಿರ್ಣಯಾಧಿಕಾರವನ್ನು 'ಜಯಂತಿ' ಪತ್ರಿಕೆಯ ಸಂಪಾದಕ ಮಂಡಲಿಯ ಕಡೆಗೆ ಒಪ್ಪಿಸಿದುದರಿಂದ ಎಲ್ಲರೂ ತಂತಮ್ಮ ಕತೆಗಳನ್ನು '**ಜಯಂತಿ ಕಾರ್ಯಾಲಯ, ಧಾರವಾಡ**' ಎಂಬ ವಿಳಾಸಕ್ಕೆ ಕಳುಹಬೇಕಲ್ಲದೆ ಕೈಬರೆಹದ ಪ್ರತಿಯ ಮೇಲೆ 'ಸಣ್ಣ ಕತೆಗಳ ಮೇಲಾಟಕ್ಕಾಗಿ' ಎಂಬ ಮಾತನ್ನು ಸ್ಪಷ್ಟವಾಗಿ ಬರೆಯಬೇಕು.

೫. ಮೇಲಾಟಕ್ಕೆ ಬರುವ ಕತೆಗಳೆಲ್ಲವೂ ಬರಲಿರುವ ಅಕ್ಟೋಬರ್ (೧೯೪೩) ೩೦ನೆಯ ತಾರೀಖಿನೊಳಗಾಗಿ ಜಯಂತಿ ಕಾರ್ಯಾಲಯಕ್ಕೆ ತಲ್ಪಬೇಕು. ಬಳಿಕಿನ ಕತೆಗಳನ್ನು ಮೇಲಾಟಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲ.

ಉತ್ತರಕನ್ನಡ ಜಿಲ್ಲೆಯ ಕತೆಗಾರರೆಲ್ಲರೂ ಈ ಮೇಲಾಟದಲ್ಲಿ ಭಾಗವಹಿಸಿ, ಕೆಳೆಯರ ಕೂಟದ ಈ ಹೊಸ ಉಪಕ್ರಮವನ್ನು ಯಶಸ್ವಿಯಾಗಿಸಬೇಕು.

ವ್ಯವಸ್ಥಾಪಕ: **'ಜಯಂತಿ' ಕಾರ್ಯಾಲಯ, ಧಾರವಾಡ.**

ಜಯಂತಿಯ ೧-೨-೩-೪-೫ನೆಯ ವರ್ಷಗಳ ಸಂಪುಟಗಳೂ ಬಿಡಿಸಂಚಿಕೆಗಳು ಮಾರಲಿಕ್ಕೆ ದೊರೆಯುತ್ತವೆ. ಬೇಕಾದವರು ಬೆಲೆ ಮೊದಲಾದುವುಗಳ ಬಗ್ಗೆ ಪತ್ರವ್ಯವಹಾರ ಮಾಡಿ ತರಿಸಿಕೊಳ್ಳಬೇಕು. ಪ್ರತಿಗಳು ತೀರ ಸ್ವಲ್ಪವಿರುವುದರಿಂದ ಬೇಕಾದವರು ಬೇಗನೆ ಬರೆದು ಕೇಳಬೇಕು.

ವ್ಯವಸ್ಥಾಪಕ: ಜಯಂತಿ

Printed by **Mr. V. Y. Jathar** at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಸಂಪಾದಕರು-
ಬೆಟಗೇರಿ ಕೃಷ್ಣಶರ್ಮರು

ಜಯಂತಿ

ಸಪ್ಟಂಬರ್ ೧೯೪೩

ಈ ಸಂಚಿಕೆಯಲ್ಲಿ

- ★ ರಂಗನಾಥ ನೆಗಳೂರ
- ★ ಎಚ್. ಎಸ್. ಪಾಟೀಲ
- ★ ಆರ್. ಕೆ. ಕೊಪ್ಪರ
- ★ ಎನ್. ಕೆ. ಕುಲಕರ್ಣಿ
- ★ ಕೇ. ಟಿ. ಪುರಾಣಿಕ
- ★ ಶ್ರೀರಂಗ

ಅಲ್ಲದೆ ಬೇರೆ ಲೇಖಕರ

ಕವನ-ಕಥೆ-ಪ್ರಬಂಧಗಳು.

ಬೆಲೆ_ ೬ ಆಣೆ.

ಜಯಂತಿ ಸಣ್ಣಕತೆಗಳ ಮೇಲಾಟ

ಕೇವಲ ಉತ್ತರಕನ್ನಡ ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಗೋಕರ್ಣದ 'ಕೆಳೆಯರ ಕೂಟ'ದವರು ಈ ಮೇಲಾಟವನ್ನು ಏರ್ಪಡಿಸಿದ್ದಾರೆ.

೩ ಬಹುಮಾನಗಳು

೧ನೆಯದು ೧೦ ರೂಪಾಯಿ! ೨ನೆಯದು ೫ ರೂಪಾಯಿ! ೩ನೆಯದು ೩ ರೂಪಾಯಿ!

★ ಮೇಲಾಟದ ನಿಯಮಗಳು ★

೧. ಉತ್ತರಕನ್ನಡಜಿಲ್ಲೆಯಲ್ಲಿ ಹುಟ್ಟಿ ಬೆಳೆದವರೆಲ್ಲ—ಸದ್ಯ ಇನ್ನೊಂದು ಕಡೆಯಲ್ಲಿ ಕಾರ್ಯಾಂತರಕ್ಕಾಗಿ ಇದ್ದವರು ಕೂಡ—ಈ ಮೇಲಾಟದಲ್ಲಿ ಭಾಗವಹಿಸಬಹುದು.

೨. ಕತೆಯು ಸ್ವತಂತ್ರವಾಗಿದ್ದು ಉತ್ತರಕನ್ನಡಜಿಲ್ಲೆಯ ಜನಜೀವನವನ್ನು ಚಿತ್ರಿಸುವಂತಹದಾಗಿರಬೇಕು. ಒಬ್ಬರು ಒಂದಕ್ಕಿಂತ ಹೆಚ್ಚಾಗಿಯೂ ಕತೆಗಳನ್ನು ಕಳುಹಬಹುದು.

೩. ಕತೆಯು ಜಯಂತಿಯ ಮುದ್ರಿತಪುಟ ೪ ಕ್ಕೆ ಮೀರದಷ್ಟು ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧದಳತೆಯ ೮ ಪುಟಕ್ಕೆ ಮಿಕ್ಕದಷ್ಟು ಇರಬೇಕು.

೪. ಮೇಲಾಟದ ನಿರ್ಣಯಾಧಿಕಾರವನ್ನು 'ಜಯಂತಿ' ಪತ್ರಿಕೆಯ ಸಂಪಾದಕ ಮಂಡಲಿಯ ಕಡೆಗೆ ಒಪ್ಪಿಸಿದುದರಿಂದ ಎಲ್ಲರೂ ತಂತಮ್ಮ ಕತೆಗಳನ್ನು '**ಜಯಂತಿ ಕಾರ್ಯಾಲಯ, ಧಾರವಾಡ**' ಎಂಬ ವಿಳಾಸಕ್ಕೆ ಕಳುಹಬೇಕಲ್ಲದೆ ಕೈಬರೆಹದ ಪ್ರತಿಯ ಮೇಲೆ 'ಸಣ್ಣ ಕತೆಗಳ ಮೇಲಾಟಕ್ಕಾಗಿ' ಎಂಬ ಮಾತನ್ನು ಸ್ಪಷ್ಟವಾಗಿ ಬರೆಯಬೇಕು.

೫. ಮೇಲಾಟಕ್ಕೆ ಬರುವ ಕತೆಗಳೆಲ್ಲವೂ ಬರಲಿರುವ ಅಕ್ಟೋಬರ್ (೧೯೪೩) ೩೦ ನೆಯ ತಾರೀಖಿನೊಳಗಾಗಿ ಜಯಂತಿ ಕಾರ್ಯಾಲಯಕ್ಕೆ ತಲ್ಪಬೇಕು. ಬಳಿಕಿನ ಕತೆಗಳನ್ನು ಮೇಲಾಟಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲ.

. ಉತ್ತರಕನ್ನಡ ಜಿಲ್ಲೆಯ ಕತೆಗಾರರೆಲ್ಲರೂ ಈ ಮೇಲಾಟದಲ್ಲಿ ಭಾಗವಹಿಸಿ, ಕೆಳೆಯರ ಕೂಟದ ಈ ಹೊಸ ಉಪಕ್ರಮವನ್ನು ಯಶಸ್ವಿಯಾಗಿಸಬೇಕು.

ವ್ಯವಸ್ಥಾಪಕ: **'ಜಯಂತಿ' ಕಾರ್ಯಾಲಯ, ಧಾರವಾಡ.**

ಜಯಂತಿಯ ೧–೨–೩–೪–೫ನೆಯ ವರ್ಷಗಳ ಸಂಪುಟಗಳೂ ಬಿಡಿಸಂಚಿಕೆಗಳು ಮಾರಲಿಕ್ಕೆ ದೊರೆಯುತ್ತವೆ. ಬೇಕಾದವರು ಬೆಲೆ ಮೊದಲಾದುವುಗಳ ಬಗ್ಗೆ ಪತ್ರವ್ಯವಹಾರ ಮಾಡಿ ತರಿಸಿಕೊಳ್ಳಬೇಕು. ಪ್ರತಿಗಳು ತೀರ ಸ್ವಲ್ಪವಿರುವುದರಿಂದ ಬೇಕಾದವರು ಬೇಗನೆ ಬರೆದು ಕೇಳಬೇಕು.

ವ್ಯವಸ್ಥಾಪಕ: ಜಯಂತಿ

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಸಂಪಾದಕರು:-
ಬೆಟಗೇರಿ ಕೃಷ್ಣಶರ್ಮರು

ಜಯಂತಿ

ಸಪ್ಟಂಬರ್ ೧೯೪೩

ಈ ಸಂಚಿಕೆಯಲ್ಲಿ

- ★ ರಂಗನಾಥ ನೆಗಳೂರ
- ★ ಎಚ್. ಎಸ್. ಪಾಟೀಲ
- ★ ಆರ್. ಕೆ. ಕೊಪ್ಪರ
- ★ ಎನ್. ಕೆ. ಕುಲಕರ್ಣಿ
- ★ ಕೇ. ಟಿ. ಪುರಾಣಿಕ
- ★ ಶ್ರೀರಂಗ

ಅಲ್ಲದೆ ಬೇರೆ ಲೇಖಕರ

ಕವನ-ಕಥೆ-ಪ್ರಬಂಧಗಳು.

ಬೆಲೆ- ೬ ಆಣೆ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ ...... ವ್ಹಿ. ಪಿ. ಯಿಂದ ೪-೫-೦ ...... ಬಿಡಿಸಂಚಿಕೆಗೆ ೬ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು

೬ನೆಯ ವರ್ಷ	ಸಪ್ಟಂಬರ್ ೧೯೪೩	೪ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ನಿನ್ನ ನಡತೆ (ಕವನ)	'ಆನಂದಕಂದ'	೧೨೧
ಕೊರಗುತಿರುವೆದೆಗೆ ಬರೆ (ಕವನ)	,,	೧೨೧
ಸಂಪಾದಕೀಯ	ಸಂಪಾದಕರು	೧೨೨
ಮಂಗನ ಮಲ್ಲಿನಾಥತನ	'ಮಲ್ಲಿನಾಥ'	೧೨೩
ಸಾದರಸ್ವೀಕಾರ	....	೧೨೪
ಚೇತರಿಸುತ್ತಿರುವ ಚೀನ (ಪರಿಚಯಾತ್ಮಕ)	ಶ್ರೀ. ಸೆಗಳೂರ ರಂಗನಾಥ, ಬಿ. ಎ., ಬಿ. ಟಿ. ಹುಬ್ಬಳ್ಳಿ	೧೨೫
ನಾಡಬೆಳಗು (ಗೀತನಾಟಕ)	ಶ್ರೀ. ಎಚ್. ಎಸ್. ಪಾಟೀಲ, ಬಿ. ಎ., ಬಿ. ಕಾಮ್. ಬೋರ್ಡಿ	೧೨೯
ಕವಿ ಕಾಲಿದಾಸ (ರೇಡಿಯೊ ಉಪನ್ಯಾಸ)	ಪ್ರೊ. ಕೆ. ಆರ್. ಮಹಿಷಿ, ಎಂ. ಎ. ಧಾರವಾಡ	೧೩೪
ಒಗಟೆ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು	೧೩೮
ಸುಮಸುಂದರಿ (ಕವನ)	ಶ್ರೀ. ಎಸ್. ಎಸ್. ಬಸುಪಟ್ಟದ, ಸೊಲ್ಲಾಪುರ	೧೩೮
ಸ್ವಾತಂತ್ರ್ಯ-ಅತಿಥಿ (ಅನುವಾದಿತ ಕವನ)	ಶ್ರೀ. ವಿ. ಜಿ. ಭಟ್ಟ, ಕೊಲ್ಹಾಪುರ	೧೩೮
ಚಿನ್ನಪ್ಪನ ವನವಾಸ (ಬರಗಾಲದ ಕರುಣಚಿತ್ರ)	ಶ್ರೀ. ಕೌಜಲಗಿ ಹನುಮಂತರಾಯರು, ವಿಜಾಪುರ	೧೪೦
ಸಂಶೋಧಕನ ಸಂತಾಪ (ಲೇಖನೀರು ೩)	'ಶ್ರೀರಂಗ'	೧೪೬
ಫ್ಯಾಸಿಝಮ್ (ಪರಿಚಯಾತ್ಮಕ)	ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ	೧೪೭
ಸಂಜೆ-ಬೆಳಗು (ವಿಚಾರತರಂಗ)	ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ, ಹೊಂಬಳ	೧೫೦
ರಾಜಾರಾಣಿ (ರವೀಂದ್ರರ ಕತೆ)	ಶ್ರೀ. ಕೆ. ಟಿ. ಪುರಾಣಿಕ, ಬಿ. ಎ., ಬಿ. ಟಿ. ಗೋಕರ್ಣ	೧೫೧
ಸ್ವಾವಲಂಬನದ ಪ್ರಥಮಪಾಠ (ಹರಟೆ)	ಶ್ರೀ. ಎನ್. ಕೆ. ಕುಲಕರ್ಣಿ, ಎಂ.ಎ., ಬಿ.ಟಿ. ಧಾರವಾಡ	೧೫೪
ನಗೀಗೆ ನೇವೀದ್ಯ	'ನಕಲೀ ನಾರಾಯಣಾಚಾರ್ರು'	೧೫೭
ನಾಲ್ಕೂ ಪಟ್ಟಿನ ನೋಟ	'ನಿರೀಕ್ಷಕರು'	೧೫೮

ಜಯಂತಿಯ ಮುಂಬೈ ಶಾಖಾ ಕಚೇರಿ

ಮೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಚರ್ಚಗೇಟ್ ಸ್ಟ್ರೀಟ್, ೨ ನೆಯ ಮಾಳಿಗೆ
ಫೋರ್ಟ—ಮುಂಬಯಿ.

ಪುಣೆಯಲ್ಲಿ ನಮ್ಮ ಏಜಂಟರು

ಆರ್. ರಾಮಮೂರ್ತಿ ಮತ್ತು
ಕೃಷ್ಣಮೂರ್ತಿ ಅಧ್ವರ್ಯು
ಕನ್ನಡ ಪೇಪರ್ ಏಜಂಟ್ಸ್
'ವಿಶ್ರಾಮಧಾಮ'
ಮನೆ ನಂಬರು ೧೨೪೨, ಪೂನಾ ೪

ಜಯಂತಿ

ಸಂಪುಟ ೬ | ೧ನೆಯ ಸಪ್ಟೆಂಬರ್ ೧೯೪೩ | ಸಂಚಿಕೆ ೪

ನಿನ್ನ ನಡತೆ

('ಮುಷ್ಟನಮಾತು' ಕವನಸಂಗ್ರಹದಿಂದ)

'ಆನಂದಕಂದ'

ತಿನಿಸು ದೊರೆಯದೆ ಒಡಲು ಒಣಗಿ ಬಡವಾದವರು
ಎನಿತೊ ತಿರುಕರು ಪಾಪ, ದಿನದಿನವು ಬರುತಿಹರು.
'ಒಳ್ಳಿತಾಗಲಿ' ಎಂದು ನಿನ್ನನೋಲಯಿಸುವರು;
ಒಳ್ಳೆ ಹಸಿದಿಹೆನೆಂದು ಒಡಲ ತೋರುವರು.

ಅಡಿಗೆ ತಲೆಬಾಗುವರು, ನಿಡುಸರದಿ ಕೂಗುವರು,
'ಹಿಡಿಯನ್ನ ಕೊಡು' ಎಂದು ಎಡೆಬಿಡದೆ ಬೇಡುವರು.
ಬೇಡುವರು, ಕಾಡುವರು, ಮೋದಿಯಲಿ ಕೂಡುವರು
'ನೀಡಮ್ಮ' ಎಂದು ಸರವೆತ್ತಿ ಹಾಡುವರು.

ಬೇಡಿದರೆ ಅವರನ್ನು ನೋಡದೆಯೆ ನೀನಿರುವೆ;
ಕಾಡಿದರೆ ಬಿರುನುಡಿಯನಾಡಿ 'ನಡೆನಡೆ' ಎನುವೆ;
ಹಿಡಿಯನ್ನವನು ಕೂಡ ಕೊಡದೆ ಬರಿಗೈಯಲಿಯೆ
ಬಡವರನು ಮರಳಿಸುವೆ; ಇದು ನಿನಗೆ ಸರಿಯೆ?

ನನ್ನೊಡಲು ತುಂಬಿಹುದು, ಅನ್ನ ಸಾಕಾಗಿಹುದು;
ತಿನ್ನುವುದು ಇನ್ನು ಬೇಡೆನ್ನುವಂತಾಗಿಹುದು.
ಒಲ್ಲೆನೆಂದರು ನನಗೆ ಇನ್ನಿಷ್ಟು ತಿನ್ನೆನುವೆ;
ಒಳ್ಳೆ ಬಲುಮೆಯಲಿ ನೀನುಣ್ಣಿಸಲು ಬರುವೆ!

ಅನ್ನವನು ಒಲ್ಲೆನೆನೆ 'ಹಣ್ಣು ಹಿಡಿಹಿಡಿ' ಎನುವೆ;
ಹಣ್ಣನಗೆ ಸಾಕೆನಲು 'ಹಾಲ ಕುಡಿಕುಡಿ' ಎನುವೆ;
ಒಲ್ಲೆ ಹಾಲನು ಎನಲು ಇನ್ನೇನನೋ ಕೊಡುವೆ;
ಒಲ್ಲೆನೆಂದರು ಮತ್ತೆ ತಿನ್ನುತಿನ್ನೆನುವೆ!

ಬೇಕೆಂಬ ಬಡವರನು ನೂಕಿ ಹೊಡೆದಟ್ಟುವೆಯೆ,
ಸಾಕೆಂದರೆಯು ನನಗೆ ಬಲುಮೆಯನು ಮಾಡುವೆಯೆ!
ಅಮ್ಮ, ಇದು ಏನೆ? ನಿನ್ನೀ ನಡತೆ ಎಂತಹುದೆ?
ಒಮ್ಮೆಲೇ ನನಗೆ ಬಲುನಗೆಯು ಬರುತಿಹುದೆ!

ಕೊರಗುತಿರುವವೆಗೆ ಬರೆ

('ವಿರಹಿಣಿ' ಕವನಸಂಗ್ರಹದಿಂದ)

ನೀ ಕೊಡುವುದೆಂದು ಮನೆಯಾಳ್ಕೆಯಧಿಕಾರವನು?
ಸಾಕಿದೇಕಾಕಿನಿಯ ಕಾಕುಬಾಳು!
ಹಾಕುತಿಹೆ ಬರೆಯ ಮೊದಲೇ ಕೊರಗುತಿರುವವೆಗೆ
ಲೋಕದೀ ಜನರ ಬಡತನದ ಗೋಳು!

ನಿರುಕಿಸಿದರೆತ್ತಲೂ ತಿರಿನವರ ತಂಡಗಳು,
ಕುರುಡ-ಕುಂಟರು, ಕರುಣಗೀತದವರು;
ಕೊರೆವ ಚಳಿ-ಬಿರುಬಿಸಿಲೆನದೆ ನಿಲ್ಲದಲೆ, ಕೂಳು
ದೊರೆಯದಿದ್ದರು ದುಡಿವ ಜೀತದವರು!

ಹಸಿವು-ದಣಿವೆಂಬುಲುಹು ದೆಸೆಯ ಮುತ್ತಿರೆ, ಜನದ
ಬಸಿರ ಬೇಗೆಗೆ ಹಸಿರೆ ಬಾಡುತಿಹವು;
ಮಸುಳಿಗಳು ಹಡೆದವರ ಗಸಣೆಗಳೆಯುಲಿಕೆಂದು
ಮಸಣದಲಿಯೇ ಮನೆಯ ಮಾಡುತಿಹವು!

ನೋಡುತಿಹೆನೆಲ್ಲವನು ನೀಡು-ನೋಟಗಳಿಂದೆ,
ಮಾಡುವೆನದೇನು....! ಬಿಸುಸುಯ್ಯುವೊಂದೇ;
ನಿನ್ನೆಲ್ಲ ಹೊನ್ನು-ಹಣ ನನ್ನದಾಗಿದ್ದರೂ
ಚೆನ್ನ, ಬರಿಗೈ-ಬಡವಿಯಿರುವೆನಿಂದೆ!

ಒಡೆಯ ನೀನೊಲಿದು ನಿನ್ನೊಡವೆಯೆಲ್ಲವ ನನ್ನ
ಒಡೆತನಕೊಪ್ಪಿಸಿ, ಅದೆಂದು ಕೊಡುವೆ?
ಕೊಡಲು, ತಿರಿಯುವ ತಿನುವ ಬಡತನದ ಭೂತವನು
ಹೊಡೆದು ಹಸಿವಿನ ಪಿಸುಂಗ ತೊಡೆದೆ ಬಿಡುವೆ!

ದೈನ್ಯದಾ ದನಿಯು ಕರುಣದ ಮೊರೆಯು ಕೂಗ,
ಇನ್ನೊಮ್ಮೆ ಕೇಳದಂತಾಗಿಸುವೆನಾಗ.

ಕಾಗದದ ಕಳವಳ

ಜಯಂತಿಯ ಈ ಸಂಚಿಕೆಯ ಬಣ್ಣಬಣ್ಣದ ಕಾಗದಗಳನ್ನು ಕಂಡು ಅನೇಕರಿಗೆ ಆಶ್ಚರ್ಯವೆನಿಸಬಹುದು; ಕೆಲವರಿಗೆ ಬೇಸರವೂ ಎನಿಸಬಹುದು. ವಸ್ತುಸ್ಥಿತಿಯೆಂದರೆ ಈ ದುಗ್ಗಾಣಿ ಬೆಲೆಯ ಕಾಗದ ಸಂಪಾದಿಸಲಿಕ್ಕೂ ನಮಗೊಂದು ದುಡ್ಡಿನ ಗುಡ್ಡವನ್ನೆ ಒಡ್ಡಬೇಕಾಗಿ ಬಂದಿತು. ಇಲ್ಲದೆ ಹೋಗಿದ್ದರೆ ಈ ಸಂಚಿಕೆಯನ್ನೆ ಹೊರಡಿಸುವುದು ಅಸಾಧ್ಯವಾಗಿ ಕುಳಿತಿದ್ದಿತು. ಎಂತಹ ಕಾಗದವೇ ಸಿಕ್ಕಲಿ, ಎಷ್ಟೇ ಬೆಲೆಯನ್ನು ತೆರಬೇಕಾಗಿರಲಿ; ಸಮಯಕ್ಕೆ ಸರಿಯಾಗಿ ಸಂಚಿಕೆ ಹೊರಬಿತಲ್ಲ— ಎಂಬ ಸಮಾಧಾನ ನಮಗೆ. ವೇಷ-ಭೂಷಣಗಳಿಗಿಂತ ಉಪಯುಕ್ತತೆಗೆ ಯಾವಾಗಲೂ ಮನ್ನಣೆ ಹೆಚ್ಚಲ್ಲವೆ? ಜಯಂತಿಯ ವಾಚಕಮಹನೀಯರು ಈ ನೀತಿಯನ್ನರಿತು, ಈ ಸಂಚಿಕೆಯನ್ನು ಆದರಿಸಬೇಕಾಗಿ ನಮ್ಮ ಬೇಡಿಕೆ.

ಜಯಂತಿಗಾಗಿ ೨–೩ ತಿಂಗಳಿಗೆ ಸಾಲುವಷ್ಟು ಉತ್ತಮ ಕಾಗದಗಳನ್ನು–ನಗದು ಹಣಕೊಟ್ಟು–ಕೊಂಡು ಬೆಂಗಳೂರಲ್ಲಿ ಇರಿಸಲಾಗಿದೆ. ಆದರೆ ನ್ಯಾಯ್ಯವಾದ ಮಾರ್ಗದಿಂದ ಅವುಗಳನ್ನಿಲ್ಲಿಗೆ ತರಿಸಿಕೊಳಬೇಕೆಂದರೆ, ಅಲ್ಲಿಯ ಸರಕಾರದ ಕಾಗದ ನಿಯಂತ್ರಣಶಾಸನ ಅಡ್ಡಯಿಸುತ್ತಲಿದೆ. ಆದುದರಿಂದಲೆ ನಗದು ಹಣಕೊಟ್ಟು ಕೊಂಡಿದ್ದರೂ ಈಗ ೩–೪ ತಿಂಗಳುಗಳಿಂದ ಬೆಂಗಳೂರಲ್ಲಿಯೆ ಅದನ್ನು ಕೆಡಹಿಬಿಡಬೇಕಾಗಿದೆ. ಕೇಳಿದಷ್ಟು ಒಳಬೆಲೆ ಕೊಟ್ಟಾದರೂ–ಒಂದುವರ್ಷಕ್ಕೆ ಸಾಲುವಷ್ಟು—ಕಾಗದವನ್ನು ತರಿಸಿಕೊಳಬೇಕೆಂದು ಮುಂಬಯಿಯಲ್ಲಿ ಪ್ರಯತ್ನ ನಡೆಯಿಸಿದ್ದೇವೆ. ಅದಕ್ಕಾಗಿ ಬೇಕಾಗುವ ಜಿಲ್ಲಾಧಿಕಾರಿಗಳ ಅಪ್ಪಣೆಚೀಟಿಯನ್ನೂ ಪಡೆದುಕೊಂಡಿದ್ದೇವೆ. ಆದರೆ ಮುಂಬಯಿಯಿಂದ ಕಾಗದ ತರಿಸಿಕೊಳುವುದಕ್ಕೆ ಇನ್ನೊಂದು ತಡೆ ಬಂದು ಕುಳಿತಿದೆ. ಎಂದಿನಂತೆ ಅದು ರೈಲಿನ ಸಾಮಾನುಬಂಡಿಯಲ್ಲಿ ಬರುವಂತಿಲ್ಲ. ಹೇಗಾದರೂ ಮಾಡಿ ತರಿಸಿಕೊಂಡೇ ತೀರಬೇಕೆಂದು ಹವಣಿಕೆ ಹಾಕುತ್ತಲಿದ್ದೇವೆ. ಬಹುಶಃ ಮುಂದಿನ ಸಂಚಿಕೆಯನ್ನು ಒಳ್ಳೆಯ ಕಾಗದದಲ್ಲಿ ಮುದ್ರಿಸಲಿಕ್ಕೆ ನಮ್ಮ ಈ ಹವಣಿಕೆ ಅನುಕೂಲಮಾಡಿಕೊಡುವುದೆಂಬ ನಿರೀಕ್ಷೆಯಲ್ಲಿದ್ದೇವೆ.

ಕಾಗದದ ಕೊರತೆಯ ಮೂಲಕ ಈ ಸಂಚಿಕೆ ಹೊರಗಣ್ಣಿಗೆ ವಿಚಿತ್ರವಾಗಿ ಕಂಡರೂ, ಪ್ರಕಟವಾದ ಲೇಖನಗಳು ಒಂದಕ್ಕಿಂತ ಒಂದು ಹೊಸಬಗೆಯವಾಗಿರುವುವೆಂಬುದನ್ನು ಓದಿನೋಡಿ ಮನಗಾಣಬಹುದು. ‘ಜೀತರಿಸುತ್ತಿರುವ ಚೀನ’ ಲೇಖನವು ವರ್ತಮಾನ ಚೀನದ ಪರಿಚಯವನ್ನು ಮಾಡಿಕೊಡಲು ಹೊರಟುದು; ಸಜೀವ ಶೈಲಿಯಲ್ಲಿ ವಿಷಯವಿವೇಚನ ಮಾಡುವಂತಹದು. ‘ನಾದಬೆಳಗು’ ಎಂಬ ‘ಗೀತನಾಟಕ’ವು ಉತ್ಸವ-ಹಬ್ಬಗಳಲ್ಲಿ ಆಡಿತೋರಿಸಿ, ಕನ್ನಡಿಗರಲ್ಲಿ ನಾಡಿನ ಅಭಿಮಾನವನ್ನು ಹುಟ್ಟಿಸುವಂತಹದಾಗಿದೆ. ಪ್ರೊ. ಮಹಿಷಿಯವರ ‘ಕವಿ ಕಾಲಿದಾಸ’ ಭಾಷಣವು ಜನಸಾಮಾನ್ಯರಿಗೂ ಮಹಾಕವಿ ಕಾಲಿದಾಸನ ಪರಿಚಯವನ್ನು ಚೆನ್ನಾಗಿ ಮಾಡಿಕೊಡಬಲ್ಲದು. ಶ್ರೀಮಾನ್ ಕೌಜಲಗಿ ಹನುಮಂತರಾಯರು ಬರೆದ ಬರಗಾಲದ ಸತ್ಯಚಿತ್ರದಲ್ಲಿಯ ಚಿನ್ನವ್ವ, ವಾಚಕರ ಕಲ್ಲೆದೆಯನ್ನೂ ಕರಗಿಸುವಂತಹಳಿದ್ದಾಳೆ. ‘ಫ್ಯಾಸಿಝಂ’ ಎಂಬ ಲೇಖನವು ಉದ್ದಿಷ್ಟ ವಿಷಯದ ಪರಿಚಯವನ್ನು ಚೆನ್ನಾಗಿ ಮಾಡಿಕೊಡುವಂತಿದೆ. ‘ಸಂಬೋಧಕನ ಸಂತಾಪ’ವಂತೂ ಈ ಮೊದಲು ಎರಡು ಸಂಚಿಕೆಗಳಲ್ಲಿ ಓದಿ ನಗು-ನಲವುಗಳನ್ನು ಅನುಭವಿಸಿದುದಾಗಿದೆ. ‘ರಾಜಾರಾಣಿ’ಯು ಶ್ರೀ ರವೀಂದ್ರಕವೀಂದ್ರರದೊಂದು ಉತ್ತಮವರ್ಗದ ಮನಶ್ಶಾಸ್ತ್ರದ ಸಮಸ್ಯಾತ್ಮಕ ಕಥೆ. ‘ಸ್ವಾವಲಂಬನದ ಪ್ರಥಮಪಾಠ’ ಒಂದು ಒಳ್ಳೆಯದಾದ ಲಘುಪ್ರಬಂಧ. ಸಂಚಿಕೆಯ ಹೊರನೋಟದಿಂದ ಉಂಟಾಗಿರುವ ಬೇಸರವನ್ನು ಹಿಂಗಿಸುವಂತಹ ಸತ್ತ್ವ ಎಲ್ಲ ಲೇಖನಗಳಲ್ಲಿಯೂ ಖಂಡಿತವಾಗಿ ಇದೆ.

ಮುಂದಿನ ಸಂಚಿಕೆಯಲ್ಲಿ

ಇದೇ ಸಂಚಿಕೆಯಿಂದ ಪ್ರಾರಂಭಿಸಬೇಕಾಗಿರುವ ಕೆಲವು ವಿಶೇಷ ವಿಭಾಗಗಳನ್ನು ಅನಿವಾರ್ಯವಾದ ಕಾರಣಗಳ ಮೂಲಕ ಮುಂದಿನ ಸಂಚಿಕೆಯಲ್ಲಿ ಪ್ರಾರಂಭಿಸುವೆವು. ಈ ಸಂಚಿಕೆಯಲ್ಲಿ ಪ್ರಾರಂಭವಾದ ‘ಜೀತರಿಸುತ್ತಿರುವ ಚೀನ’ ಎಂಬ ಲೇಖನಮಾಲೆ ತಿಂಗತಿಂಗಳೂ ಮುಂದುವರಿವುದು. ಅಲ್ಲದೆ ‘ಸುಖವಸ್ತು’ ಎಂಬ ಮುಖ್ಯಶೀರ್ಷಿಕೆಯನ್ನಿರಿಸಿ ಪ್ರತಿಸಂಚಿಕೆಯಲ್ಲಿಯೂ ಶ್ರೀಮಾನ್ ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್. ಅವರು, ಬೇರೆ ಬೇರೆ ಸಾಮಾಜಿಕ ತೊಡಕುಗಳನ್ನು ಬಿಡಿಸಿ—ಚಿತ್ರಿಸಿ—ತೋರಿಸಲಿದ್ದಾರೆ. ‘ಸಾಹಿತ್ಯ-ವಿಹಾರ’ ಎಂಬ ಇನ್ನೊಂದು ವಿಭಾಗವನ್ನೂ ಮುಂದಿನ ಸಂಚಿಕೆಯಲ್ಲಿ ಪ್ರಾರಂಭಿಸಲಾಗುವುದು. ಮುಂಬಯಿಯ ಜಾಗತಿಕ ಸಾಹಿತ್ಯಸಂಘವೊಂದರಲ್ಲಿ ಕಾರ್ಯಮಾಡುತ್ತಿರುವ ಕನ್ನಡ ಸಾಹಿತ್ಯಿಕರೊಬ್ಬರು ‘ವಿಹಾರಿ’ ಎಂಬ ಮುಚ್ಚುಹೆಸರಿನಲ್ಲಿ, ದೇಶ-ವಿದೇಶಗಳ ಸಾಹಿತ್ಯಿಕ ಚಟುವಟಿಕೆಗಳ ಪರಿಚಯವನ್ನೂ ಪ್ರಸಿದ್ಧ ಗ್ರಂಥಗಳ ಸ್ವರೂಪ ವಿಚಾರವನ್ನೂ ಕುರಿತು ಟಿಪ್ಪಣೆಗಳನ್ನು ಬರೆಯಲಿದ್ದಾರೆ. ಇವೆಲ್ಲ ವಿಭಾಗಗಳೂ ನಮ್ಮ ವಾಚಕರಿಗೆ ರುಚಿಸುವುವೆಂಬ ನಂಬುಗೆ ನಮಗೆ ತುಂಬ ಇದೆ. ಕಾಗದದ ಕೊರತೆಯೊಂದು ಕಡಿಮೆಯಾದರೆ, ಹಲವು ರೀತಿಯಿಂದ ಜಯಂತಿ ತನ್ನ ಗುಣವಿಕಾಸಮಾಡಿಕೊಳಬೇಕೆಂಬ ಹಾರಯಿಕೆಯಲ್ಲಿ ಇದೆ. ಆದರೆ ಆ ಕೊರತೆ ಇಂದಿನ ನಮ್ಮ ಯಾವ ಹಾರಯಿಕೆಗಳನ್ನೂ ಹಳವಂಡವನ್ನಾಗಿಸುತ್ತಿದೆ.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಬಂದ ‘ನಾಲ್ಕೂನಿಟ್ಟಿನ ನೋಟ’ಗಳಲ್ಲಿ, ಕಾಂಗ್ರೆಸಿನ ಧೋರಣವನ್ನು ಬದಲಾಯಿಸಲು ಸೂಚನೆಮಾಡಿದವರ ಹೆಸರು ಕಣ್ತಪ್ಪಿನಿಂದ ‘ಶ್ರೀಪ್ರಕಾಶ’ ಎಂದು ಬಿದ್ದಿದೆ. ಅದನ್ನು ‘ಶ್ರೀವಾಸ್ತವ’ ಎಂದು ಓದಿಕೊಳಬೇಕು.

— ಸಂಪಾದಕರು



ಕನ್ನಡಿಗರೆ—ಹ ಹ ಹ !

‘ಕನ್ನಡಿಗರೆ, ಜೀವಿಸಿದ್ದೀರಾ?’ ಎಂಬುದೊಂದು ಪ್ರಶ್ನೆಯನ್ನು ದಿನಪತ್ರಿಕೆಯಲ್ಲಿ ಕಣ್ಣೊತ್ತುವಂತೆ ಕಂಡು, ಮಂಗರಾಯನಿಗೆ ನಕ್ಕು ನಕ್ಕು ಕಣ್ಣೀರು ಉಕ್ಕಿ ಮುಂದೆ ಕಾಣದಂತಾಯಿತು. ಎಂತಹ ಪ್ರಶ್ನೆ! ಅದೂ ಕನ್ನಡಿಗರಿಗೆ! ಕನ್ನಡಿಗರು ಜೀವಿಸಿಲ್ಲವೆ? ಹಾಗಾದರೆ ದೊಡ್ಡ ದೊಡ್ಡ ಕನ್ನಡ ಊರುಗಳಲ್ಲಿ ಪಿಡುಗುಗಳೇಕೆ. ಸತ್ತವರನ್ನು ಕೊಲ್ಲುವ ಪಿಡುಗುಗಳಿನ್ನೂ ಮಂಗರಾಯನ ಮೈ ತುರಿಸಿಲ್ಲ. ಕನ್ನಡಿಗರು ಜೀವಿಸಿಲ್ಲವೆ? ಹಹ! ಪ್ರಶ್ನೆಯನ್ನು ಕೇಳುವುದು ಹೇಗೆ? ಕೇಳುವುದು ಯಾರನ್ನು? ಅರ್ಥಾತ್, ಯಾವ ಜಾತಿಯವರು ಕನ್ನಡಿಗರು? ಹಹಹ! ತಲೆ ತುರಿಸುವಿರಲ್ಲವೆ? ಹಣೆ ಹಿಡಿದುಕೊಳ್ಳುವಿರಲ್ಲವೆ? ನೀವು ಹಾಗೆ ಮಾಡುವಂತೆ ನಿಮಗೆ ಪ್ರಶ್ನೆಗಳನ್ನು ಕೇಳುವುದು ಮಂಗರಾಯನ ಮಾಯೆಯ ಆಟವಾಗಿದೆ. ತುರಿಸಿ ತುರಿಸಿ ತಲೆಗೂದಲು ಹಾರಿ, ಹಿಡಿದುಹಿಡಿದಂತೆ ಹಣೆಯ ಮೇಲಿನ ಚರ್ಮ ಜಾರಿ— ಕೊನೆಗೆ?—ತಿಳಿಯಿತೆ? ಎಲ್ಲರ ಜಾತಿ ಒಂದೇ! ‘ಕನ್ನಡಿಗರೆ, ಜೀವಿಸಿದ್ದೀರಾ!’ ಎಂತೆ! ಜೀವಿಸದಿದ್ದರಂತೂ ಉತ್ತರವಿಲ್ಲವಷ್ಟೆ? ಜೀವಿಸಿದ್ದರೆ—ಉತ್ತರ ಅನಾವಶ್ಯಕ. ಅಂತೂ ಈ ಪ್ರಶ್ನೆಗೆ ಉತ್ತರವಿಲ್ಲ ಎಂದೇ ಮಂಗರಾಯನಿಗೆ ಮೈಮರೆಸಿದ ನಿಶ್ಚಿತಾರ್ಥ. ಅಂತೇ ಇಂತಹ ಪ್ರಶ್ನೆಗಳು ಕನ್ನಡಿಗರಿಗೆ ಮಂಗರಾಯನ ತುತ್ತಿನಂತೆ ಕಂಠಸ್ಥವಾಗಿವೆ. ‘ಕನ್ನಡಿಗರೆ, ಜೀವಿಸಿದ್ದೀರಾ?’ ಎಂತೆ! ‘ಅಹುದು’ ಎಂದು ಉತ್ತರ ಕೊಟ್ಟರೆ ‘ಜೀವಿಸಿದ್ದರೆ ಸಾಯುವುದಿಲ್ಲವೇಕೆ?’ ಎಂದು ಕೇಳುವ ಮಂಗಬುದ್ಧಿ ಎಲ್ಲೆಡೆಯಲ್ಲೂ ಬೆಳೆಯಲೆಂದು ಮಂಗರಾಯನು ಹಾರೈಸಬಹುದೆ?

ಅಹುದಾದರಿಲ್ಲವೆನ್ನಿ, ಇಲ್ಲವಾದರಹುದೆನ್ನಿ।
ಜೀವಿಸೋದಾದರೆ ಸಾಯುದಕೆ ಬನ್ನಿ ॥

* * *

ಅನ್ನದ ಒಗಟು

‘ಆಹಾರದ ಕೊರತೆಯನ್ನು ನಿವಾರಿಸಲು ಸರಕಾರವು ಕೂಡ ಅಸಮರ್ಥವಾಗಿದೆ; ಮಂಗರಾಯನೇನಾದರೂ ಸಮರ್ಥನಾಗಬಹುದೆ?’ ಎಂದು ವಾಚಕರೊಬ್ಬರು ಮಂಗಮಹಾತ್ಮನನ್ನು ಕೇಳಿದ್ದಾರೆ. ಇಂತಹ ಕ್ಷುಲ್ಲಕ ಮನೋವೃತ್ತಿಯ ಮಾತುಗಳಿಗೆ ಹಲ್ಲುಕಿರಿಯುವುದೇ ಮಂಗರಾಯನ ರೂಢಿಯಾಗಿದ್ದರೂ, ಕೋಟ್ಯವಧಿ ನಿರುಪದ್ರವಿಗಳ ಸಂಬಂಧವಿದ್ದುದರಿಂದ ಮಂಗರಾಯನು ಬಾಲವನ್ನೆತ್ತಿ ಹಿಡಿದು ಸಜ್ಜಾಗುತ್ತಾನೆ. ಮೊದಲು ಈ ಪ್ರಶ್ನೆಯೆ ಅಸಂಬದ್ಧ. ‘ಎಲ್ಲರೂ ಅಸಮರ್ಥರಾದಲ್ಲಿ ತಾನು ಸಮರ್ಥ’ ಎಂದು ಮುಂದೆ ಬರುವುದೆ ಮಂಗತನದ ಮುಖ್ಯ ಲಕ್ಷಣವಾದಾಗ ಈ ಪ್ರಶ್ನೆ ಅನಾವಶ್ಯಕವೂ ಅಲ್ಲವೆ? ಅಗಲಿ, ಇನ್ನು ಮಂಗರಾಯನ ಯೋಜನೆ. ಆಹಾರದ ಕೊರತೆಯನ್ನು ನೀಗಿಸಲು ತಜ್ಞರೆ ಬೇಕಾಗಿದ್ದರೂ, ಮಂಗರಾಯನೂ ಹೆಚ್ಚು ಯೋಗ್ಯನಾದ ತಜ್ಞನಾಗಿದ್ದಾನೆ. ಅಲ್ಲವೆ? ಕೊರತೆಯಾದಾಗ ಇದ್ದಷ್ಟನ್ನೂ ನುಂಗುವ ತಜ್ಞ ಮಾನವನಿಗಿಂತ ಮಂಗನು ಹೆಚ್ಚು ಯೋಗ್ಯನಲ್ಲವೆ? ಇದಲ್ಲದೆ— ತಜ್ಞ ಮಂಗೇಶನು ಪದವಿಯನ್ನು ಒಪ್ಪಿಸುವವನಲ್ಲ, ಅದೂ ಕಾಗದದ ತುಟಾಗ್ರತೆಯ ದಿವಸದಲ್ಲಿ, ತನ್ನ ಆಹಾರದ ಉಪಾಹರಣೆಯಾಗಿ ಎಲ್ಲರಿಗೂ ಕಾಣುವಂತೆ ಗಿಡದ ತುಟ್ಟತುದಿಯಲ್ಲಿ ಕುಳಿತಿದ್ದಾನೆ ನೋಡಿರಿ ಶ್ರೀರಾಮದೂತ! ಯಾವುದನ್ನೂ ಆಗಿಂದಾಗ ತಿನ್ನುವುದಲ್ಲ, ಗಂಟಲಲ್ಲಿರಿಸುವುದುತ್ತಮ ಎಂದು ಮಂಗರಾಯನ ಮುಖೋದ್ಗತ ಉಪದೇಶ. ‘ತೊಪ್ಪಲ ತಿಂದು, ತಿಪ್ಪರಲಾಗ ಹಾಕಿರಣ್ಣ!’ ಎಂಬ ಆಕ್ರೋಶ ತಿಳಿಯಲಿಲ್ಲವೆ. ಹಾಗಾದ್ರೆ ಇನ್ನೊಂದು ಒಗಟು.

ಇಪ್ಪೀಕಂದ್ರೆ ಒಂದೂಟ
ಸಾಯೋದಾದ್ರೆ ಸಂಜೆಯೂಟ

* * *

ಮಂಗತನದ ಮಾದರಿಗಳು

೧ನೆಯದು

ಬೆಳಗಾಂವಿಯ ವಿಸ್ತರಣವಾದ ಟಿಳಕವಾಡಿಯ ಬೀದಿಗಳಿಗೆ ಬೇರೆ ಬೇರೆ ಹೆಸರುಗಳನ್ನಿರಿಸಬೇಕೆಂದೂ, ಆ ಹೆಸರುಗಳಲ್ಲಿ ಬೆಳಗಾಂವಿ ಕರ್ನಾಟಕದ ಊರೆಂಬ ಸಂಕುಚಿತಭಾವ ವ್ಯಕ್ತವಾಗದಂತಹವಿರಬೇಕೆಂದೂ ಬೆಳಗಾಂವಿಯ ಕನ್ನಡಿಗರೆಲ್ಲ ಸೇರಿ ಬಹುಮತದಿಂದ ನಿರ್ಣಯಿಸಿದ್ದಾರಂತೆ. ಟಿಳಕ, ಆಗರಕರ, ಗೋಖಲೆ, ಗಿಂಡೆ, ಆಟೆ, ಸಾವರಕರ, ಫುಲೆ ಮೊದಲಾದವರ ಹೆಸರುಗಳು ಸೂಚಿತವಾಗಿ ಸ್ವೀಕರಿಸಲಾಗಿವೆಯಂತೆ. ಹಿರಿಯರ ಮಾತು ಕೇಳದ ತುಂಟಪೋರನಾವನೋ ಸಭೆಯಲ್ಲಿ, ಮರಾಟಿಗರ ಹೆಸರುಗಳೇಕೆಂದು ಕೂಗಾಡಿದನಂತೆ. ಸೇರಿದ ಕನ್ನಡ ಹಿರಿಯರೆಲ್ಲ ಆ ತುಂಟ ಹುಡುಗನ ಕಿಡಿಗೇಡಿತನಕ್ಕಾಗಿ ಕಳವಳದ ಕಣ್ಣೀರು ಹಾಕಿ, ಇದು ಕನ್ನಡಿಗರಿಂದ ಮಹಾರಾಷ್ಟ್ರೀಯರಿಗಾದ ಪ್ರತ್ಯಕ್ಷ ಅಪಮಾನವೆಂದೂ, ಅದಕ್ಕಾಗಿ ಹಿರಿಯರಾದ ನಾವೆಲ್ಲ ವಿಷಾದ ಪ್ರದರ್ಶಿಸಿ ಕ್ಷಮೆಯನ್ನು ಕೋರುವೆವೆಂದೂ ಬೃಹನ್ಮಹಾರಾಷ್ಟ್ರದ ಪ್ರತಿನಿಧಿಗಳ ಕಡೆಗೆ ಗೊತ್ತುವಳಿಯನ್ನು ಪಾಸುಮಾಡಿ ಕಳುಹಿದ್ದಾರಂತೆ. ಇದರಿಂದ ಮಹಾರಾಷ್ಟ್ರೀಯರು ಸಂತುಷ್ಟರಾಗದಿದ್ದರೆ, ಬೆಳಗಾಂವಿಯ ಕನ್ನಡಿಗರೊಂದು ಶಿಷ್ಟಮಂಡಲವು ತಲೆಗೆ ಪಗಡಿಗಳನ್ನು ಹಾಕಿಕೊಂಡು ಪುಣೆಯ ವರೆಗೆ ಹೋಗಿ ಬರುವುದಂತೆ.

೨ನೆಯದು

ಕರ್ನಾಟಕ ಏಕೀಕರಣ ಪರಿಷತ್ತನ್ನು ಪುನರುಜ್ಜೀವನಗೊಳಿಸಬೇಕೆಂದು ಅಲ್ಲಿ ಇಲ್ಲಿ ವಿಚಾರಗಳೆದ್ದಿವೆಯಂತೆ. ಅದನ್ನು ಕೇಳಿದ ನಮ್ಮ ಹಿರಿಯರೊಬ್ಬರು, ಕನ್ನಡಿಗರಿಗೆ ಹೀಗೆಂದು ಸಂದೇಶವನ್ನು ಕೊಟ್ಟಿದ್ದಾರಂತೆ :—

“ಕರ್ನಾಟಕ ಏಕೀಕರಣಕ್ಕಾಗಿ ಕೂಗನ್ನೆಬ್ಬಿಸುವ ಹುಚ್ಚಾಟಕ್ಕೆ ಏನೆನ್ನಬೇಕೋ ತಿಳಿಯದಾಗಿದೆ. ಇಂದು ಕರ್ನಾಟಕವೆಂಬುದು ಎಲ್ಲಿ

ಇದೆ? ಹಿಂದೆ ಎಂದೋ ಒಂದು ಕಾಲದಲ್ಲಿ ಇತ್ತೆಂದು ಭ್ರಮಿಸುವ ಕರ್ನಾಟಕವು ಇಂದು ಇಲ್ಲವೆಂಬುದರ ಅರಿವು ಯಾರಿಗೂ ಇದ್ದಂತಿಲ್ಲ. ಇಂದು ಆ ಭ್ರಾಮಕ ಕರ್ನಾಟಕ ಪ್ರದೇಶದಲ್ಲಿ 'ತುಳುನಾಡು' ಇದೆ, 'ಕೊಡಗು' ಇದೆ, 'ಮೈಸೂರು ದೇಶ' ಇದೆ, 'ರಾಯಲ ಸೀಮೆ' ಇದೆ, 'ದಕ್ಷಿಣ ಮಹಾರಾಷ್ಟ್ರ' ಇದೆ, 'ಕರ್ನಾಟಕ' ಇಲ್ಲವೇ ಇಲ್ಲ. ಇಲ್ಲದ ಕರ್ನಾಟಕಕ್ಕಾಗಿ ಕೂಗನ್ನೆಬ್ಬಿಸುವುದರಲ್ಲಿ ನಮ್ಮ ತರುಣರು ತಮ್ಮ ವೇಳೆ-ಶ್ರಮಗಳನ್ನು ವ್ಯರ್ಥಮಾಡಿಕೊಳ್ಳಬಾರದಾಗಿ ವಿನಂತಿ. ಅಲ್ಲಲ್ಲಿಯ ಸ್ವಾಸ್ಥ್ಯ ಸಂರಕ್ಷಣೆಗೆ ಅಲ್ಲಲ್ಲಿಯ ಸರಕಾರಗಳಿರುವುವು. ಬೇರೆ ಬೇರೆ ಸಂಸ್ಥಾನದ ರಾಜ-ಮಹಾರಾಜರಿರುವರು. ಎಲ್ಲರಿಗಿಂತ ಹೆಚ್ಚಾಗಿ ಸಾರ್ವಭೌಮ ಸರಕಾರದ ಸಂರಕ್ಷಣೆಯ ಶ್ರೀಚ್ಛತ್ರವುಂಟು. ಆದ್ದರಿಂದ ಕರ್ನಾಟಕ ಏಕೀಕರಣದ ಕೂಗಿನ ಕಾರಣವೇ ಇಲ್ಲ. ಅದಕ್ಕಾಗಿ ಯಾರೂ ಕಾರ್ಯವನ್ನೇ ಮಾಡಬೇಕಾಗಿಲ್ಲ!"

ಈ ಸಂದೇಶವನ್ನು ಪ್ರಕಟಿಸುವುದಕ್ಕಾಗಿ ಮಂಗರಾಯನನ್ನು ಅವರು ಕೇಳಿಕೊಂಡಿದ್ದಾರೆ. ಪ್ರಕಟಿಸಬೇಕೋ ಬಾರದೋ ಎಂಬ ಬಗ್ಗೆ ಯೋಚನೆಯುಂಟಾಗಿ, ಮಂಗರಾಯ ಮೈ ತುರಿಸುತ್ತಲಿದ್ದಾನೆ.

೩ನೆಯದು

ಹೀಗೆಯೇ, ದಕ್ಷಿಣ ಮಹಾರಾಷ್ಟ್ರದ ಬರಗಾಲದಿಂದ ಬಳಲುವ ಒಂದು ಜಿಲ್ಲೆಯಲ್ಲಿ, 'ಬರಗಾಲ ನಿವಾರಕ ಸಮಿತಿ'ಯು ಸ್ಥಾಪನೆಯಾಗಿ ಕಾರ್ಯ ನಡೆಸುತ್ತಿದೆಯಂತೆ. ಸಮಿತಿಯಲ್ಲಿ ಹಾರುವರಿಂದ ಹರಿಜನರ ವರೆಗಿನ ಎಲ್ಲ ಜಾತಿಯ ಪ್ರತಿನಿಧಿಗಳೂ ಇರುವರಂತೆ. ಮೊನ್ನೆ ಮೊನ್ನೆ ಸೇರಿದ ಸಮಿತಿಯ ಅಧಿವೇಶನವೊಂದರಲ್ಲಿ ಒಂದು ಮಹತ್ವದ ವಿಷಯ ಜರುಗಿತೆಂದು ಮಂಗರಾಯನಿಗೆ ವಾರ್ತೆ ಬಂದಿದೆ. ಅದೆಂತೆಂದರೆ:

'ಅ' ಜಾತಿಯ ಪ್ರತಿನಿಧಿಗಳೊಬ್ಬರು ಸಮಿತಿಯ ಸದಸ್ಯರ ಸಭೆಯಲ್ಲಿ ಗೊತ್ತುವಳಿಯೊಂದನ್ನು ಮಂಡಿಸಿದರಂತೆ:

"ಜಿಲ್ಲೆಯ ಜನತೆಯ ಹಿತದ ದೃಷ್ಟಿಯಿಂದ ಇನ್ನು ಮೂರು ವರ್ಷಗಳ ವರೆಗೆ, ಜಿಲ್ಲೆಯ ಹೊರಗೆ ಧಾನ್ಯಗಳನ್ನು ಕಳುಹಬಾರದಂತೆ, ಸರಕಾರದವರು ನಿಯಂತ್ರಣವನ್ನು ಹಾಕಬೇಕು."

ಎಂಬುದೇ ಗೊತ್ತುವಳಿಯ ಮುಖ್ಯ ಆಶಯ. ಈ ಗೊತ್ತುವಳಿ ಮುಂದೆ ಬಂದೊಡನೆಯೆ 'ಅ' ಜಾತಿಯವರು ಅಬ್ಬರದಿಂದ ಪ್ರತಿಭಟಿಸಿ, ತಮ್ಮ ತೀಕ್ಷ್ಣ ವಿರೋಧವನ್ನು ಪ್ರಕಟಿಸಿದರಂತೆ. ಸಭೆಯ ಅಧ್ಯಕ್ಷರಾಗಿದ್ದ ಜಿಲ್ಲಾಧಿಕಾರಿಗಳು ಆಗ ಮೆಲ್ಲಗೆ 'ಈ ಗೊತ್ತುವಳಿಯನ್ನು ನಾನೇ ಹೇಳಿ ಬರೆಯಿಸಿದ್ದೇನೆ; ಯಾರೂ ವಿರೋಧಿಸದೆ ಎತ್ತಿ ಹಿಡಿಯಬೇಕು!' ಎಂದು ಅಧಿಕಾರಧ್ವನಿಯಲ್ಲಿ ಹೇಳಿದರಂತೆ. ಆಗ 'ಅ' ಜಾತಿಯ ಪ್ರತಿನಿಧಿಯವರು ತಮ್ಮ ಅಬ್ಬರದ ವಿರೋಧವನ್ನು ಹಿಂತೆಗೆದುಕೊಂಡು, ಮೌನದ ಮನ್ನಣೆಯನ್ನು ಸಲ್ಲಿಸಿದರಂತೆ. ಇದರಿಂದ ಮಂಗರಾಯ ಮರ್ಮದ ಮಾತೊಂದನ್ನು ಕಂಡು ಹಿಡಿದಿದ್ದಾನೆ. ಅದೇನೆಂದರೆ: ಅಧಿಕಾರಿಗಳಿಗೆ ಅವಶ್ಯಕವೆನಿಸಿದಾಗಲೆ ಕರ್ನಾಟಕದ ಏಕೀಕರಣವಾಗುವುದು; ಖಂಡಿತ ಆಗಿಯೇ ಆಗುವುದು!

ಸಾದರ ಸ್ವೀಕಾರ

೧೩. ಮಂಗಳೂರು ಶಿವಬ್ರಾಹ್ಮಣರ ಪರಿಷತ್ತಿನ ಅಧ್ಯಕ್ಷರ ಭಾಷಣ. ಅಧ್ಯಕ್ಷರು 'ಆಯುರ್ವೇದ ಭೂಷಣ' ಶ್ರೀಮಾನ್ ಎಂ. ವಿ. ಶಾಸ್ತ್ರಿಯವರು. ಕ್ರೌ. ೮. ೩೪ ಪುಟಗಳು.

ಯಾವ ಯಾವುದೋ ದೇಶಕಾಲ-ಪರಿಸ್ಥಿತಿಗಳ ಕಾರಣದಿಂದ ಒಂದೇ ಒಂದು ಬ್ರಾಹ್ಮಣ ಸಮಾಜದಲ್ಲಿಯೇ ಬೇರೆ ಬೇರೆ ಉಪಪಂಗಡಗಳಾಗಿರುವುವು. ಇಂತಹ ಉಪಪಂಗಡಗಳಲ್ಲಿ 'ಶಿವಬ್ರಾಹ್ಮಣ'ರ ಪಂಗಡವೂ ಒಂದು. ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ನೆಲಸಿದ್ದು, ೬-೭ ಸಾವಿರದ ವರೆಗೆ ಮಾತ್ರ ಇವರ ಜನಸಂಖ್ಯೆ ಇರುವುದು. ಬಹು ಸಂಖ್ಯಾಕರಾದ ಶಿವಳ್ಳಿ ಬ್ರಾಹ್ಮಣ ಪಂಗಡದಿಂದ ಇವರು ಪತ್ತಿಕ್ಕಲ್ಪಟ್ಟವರಾಗಿ ಹೀನಕುಲದವರೆಂದು ಹೇಳಿಸಿಕೊಳ್ಳುತ್ತಿರುವರಂತೆ. ಆದುದರಿಂದಲೇ ಶ್ರೀಮಾನ್ ಶಾಸ್ತ್ರಿಗಳವರು 'ಶಿವಬ್ರಾಹ್ಮಣರ' ಮೂಲವನ್ನು ಐತಿಹಾಸಿಕ ದೃಷ್ಟಿಯಿಂದ ಸಾಧಾರವಾಗಿ ವಿವೇಚಿಸಿ, ಶಿವಬ್ರಾಹ್ಮಣರೂ ಪರಿಶುದ್ಧ ಕುಲಜರೆಂಬುದನ್ನು ಪ್ರಸ್ಥಾಪಿಸಿರುವರು. ಇದಕ್ಕಾಗಿಯೇ ಬ್ರಾಹ್ಮಣ ವರ್ಣದ—ಜಾತಿಯ—ಪರಿಚಯವನ್ನು ಸ್ಮೃತಿಗ್ರಂಥಗಳ ಆಧಾರದಿಂದ ತುಂಬ ವಿಶದವಾಗಿ ಮಾಡಿಕೊಟ್ಟಿರುವರು. ಬ್ರಾಹ್ಮಣವರ್ಣದ ಧರ್ಮ, ಸಂಸ್ಕಾರ, ಕರ್ಮ, ಜೀವನವೃತ್ತಿ, ವೈಯಕ್ತಿಕ ಉಪಾಧಿ ಮೊದಲಾದ ವಿಷಯಗಳ ವಿವರಣೆಯು ಬಹುಜನರಿಗೆ ಹೊಸತೆನಿಸುವಂತಹದಿದೆ, ಅಲ್ಲದೆ ಅಧ್ಯಕ್ಷರ ಬಹುಶ್ರುತತೆಯನ್ನು ಕಂಡು ಬೆರಗುವಡುವಂತಿದೆ. ದೇಶ-ಕಾಲ-ಪರಿಸ್ಥಿತಿಗಳ ಮೂಲಕ ಅಂದು ಬೇರೆ ಬೇರೆಯಾಗಿರುವ ಬ್ರಾಹ್ಮಣಪಂಗಡಗಳು, ಇಂದಿನ ದೇಶ-ಕಾಲಪರಿಸ್ಥಿತಿಗಳ ಮೂಲಕವೇ ಒಂದಾಗುವ ಸಂದರ್ಭ ಬಂದಿದೆ. ಹೀಗೆ ಒಂದಾಗಿ, ಬಹುಸಂಖ್ಯಾಕರಿಂದ ಅಲ್ಪಸಂಖ್ಯಾಕರಿಗೆ ಆದ— ಆಗುತ್ತಿರುವ ಅನ್ಯಾಯ-ಅಡೆ-ತಡೆಗಳು ಇಲ್ಲದಂತಾದಾಗಲೇ ಭಾರತೀಯರಿಗೆ ಮೋಕ್ಷವೆಂಬುದನ್ನು ಯಾರೂ ಮರೆಯಲಾಗದು. ಸಾಧ್ಯವಿದ್ದವರೆಲ್ಲ ಈ ಭಾಷಣವನ್ನು ಓದಿ ಮನನಮಾಡಿಕೊಳ್ಳಬೇಕೆಂದು ನಮ್ಮ ಅಭಿಪ್ರಾಯ. ಭಾಷಣ ಮಾಡಿದ ಅಧ್ಯಕ್ಷರಿಗೆ ನಮ್ಮ ಅಭಿನಂದನೆಗಳು.

ಚೇತರಿಸುತ್ತಿರುವ ಚೀನ

ಆಸ್ಯಖಂಡದ ಪರೀಕ್ಷೆಯ ಕಾಲ

ಶ್ರೀ. ರಂಗನಾಥ ನೆಗಳೂರ ಬಿ.ಎ., ಬಿ.ಟಿ. ಮಿತ್ರಮಂಡಲಿ, ಹುಬ್ಬಳ್ಳಿ

★

ಆಸ್ಯಖಂಡದ ಎಲ್ಲ ರಾಷ್ಟ್ರಗಳಲ್ಲಿ, ಪ್ರಾಚೀನತೆಯ ದೃಷ್ಟಿಯಿಂದಲೂ ಉಚ್ಚಸಂಸ್ಕೃತಿಯ ರೀತಿಯಲ್ಲಿಯೂ ಜನಬಾಹುಲ್ಯದ ಅಸ್ತಿತ್ವದಿಂದಲೂ ಚೀನಾ-ಭಾರತಗಳು ಅಗ್ರಸ್ಥಾನವನ್ನು ಪಡೆಯುವುವು. ಚೀನವಿಂದು ಹೊಸಕಾಲವನ್ನು ವೈಗೂಡಿಸಿಕೊಂಡು. ಕಾರ್ಯೋನ್ಮುಖವಾಗಿದೆ. ಅದರ ನಿಜವಾದ ಕಾರ್ಯ ಜಗತ್ತನ್ನೇ ತಿದ್ದಬಹುದಾದ ಸಾಮರ್ಥ್ಯದಿಂದ ಕೂಡಿದೆ.

★

ಇಂದು ಬಂದಿದೆ ಆಸ್ಯಖಂಡದ ಪರೀಕ್ಷೆಯ ಕಾಲ-ಸತ್ತ್ವಪರೀಕ್ಷೆಯ ಕಾಲ. ಆಸ್ಯಖಂಡವು ಬಹು ಹಳೆಯದು. ಭೂಶಾಸ್ತ್ರದ(Geology) ಆಧಾರದಿಂದ ನಮಗಿದು ತಿಳಿದುಬರುತ್ತದೆ: ಪೃಥ್ವಿಯು ವಾಯುರೂಪದಿಂದ ನೀರಾಗಿ ಘನವಾಗತೊಡಗಿತೆಂದು. ಮೊದಲು ನೆಲವು ಕಂಡುಬಂದುದು ಏಸಿಯಾ (Asia) ಖಂಡವೆಂದು ಕರೆಯಲ್ಪಡುವ ಈ ಭಾಗದಲ್ಲಿಯೆ. ಅದಕ್ಕೇ ಇದು ಪೃಥ್ವಿಯ ಮೊಗ—ಆಸ್ಯ—ವಾಗಿರಬೇಕು. ಇಂದು ಆಸ್ಯಖಂಡವೆಂದು ಗುರುತಿಸಲ್ಪಡುವ ಭೂಭಾಗವು ಆ ಮೊದಲು ಇರಲಿಲ್ಲ. ಕಾಲಗತಿಯಿಂದ ಬೆಳೆದುಬಂದಿದೆ.

ಈಗಿನ ಆಸ್ಯಖಂಡದಲ್ಲಿ ಅಡಕವಾಗಿರುವುವು ನಾಲ್ಕು ರಾಷ್ಟ್ರಗಳು. i **ರಶಿಯ** ii **ಚೀನ** iii **ಭಾರತ** ಮತ್ತು iv **ಜಪಾನ**. ರಾಷ್ಟ್ರಗಳು ಉದಯವಾದುದು ಭೂಮಿಯ ಇತಿಹಾಸದಲ್ಲಿ ತೀರ ಇತ್ತೀಚೆಗಾಗಿ. ಮೊದಲು ಭೂಮಿಯೆಲ್ಲ ಒಂದೆ. ಎಲ್ಲ ಭೂಮಿಯು ಎಲ್ಲ ಭೂಪ್ರಾಣಿಗಳ ಆವಾಸವಾಗಿತ್ತು. ಪ್ರಾಣಿವರ್ಗದಲ್ಲಿ ಮಾನವನ ಉದಯವಾದುದು ಕೂಡ ಬಹುಕಾಲದನಂತರ. ಮಾನವನು ಮೊಗವೆತ್ತಿ ಭೂಮಿಯ ಮೇಲೆ ಆಡ್ಡಾಡಲು ತೊಡಗಿದ ಅದೆಷ್ಟೋ ವರುಷಗಳನಂತರ ಭೂಮಿಯು 'ತನ್ನದು' ಎಂಬರಿವು ಬರತೊಡಗಿತು. ತನ್ನದೆಂದು ತೋರುವುದಕ್ಕೆ ಪರಿಮಿತಿಯನ್ನು ಹಾಕಿ 'ಇದು ತನ್ನದು, ಇದನ್ನು ಹೆರವರು ಹಿಡಿಯಬಾರದು, ಇದು ತನ್ನ ಪ್ರದೇಶ, ತನ್ನ ಜನಾಂಗದವರ ಪ್ರದೇಶ; ತನ್ನ ರಾಷ್ಟ್ರ; ತನ್ನ— ತನ್ನವರ ಸುಖಸೌಲಭ್ಯಕ್ಕಾಗಿ ಅನುವಾಗುವ ನಾಡು' ಎಂಬ ವಿಚಾರಸರಣಿ ಬಂದು, ಭೂಮಿಯು ವಿಭಾಗಿಸಲ್ಪಟ್ಟು, ರಾಷ್ಟ್ರಗಳಾದುವು. ಆಸ್ಯಖಂಡದಲ್ಲಿ ಈಗ ನಾಲ್ಕು ರಾಷ್ಟ್ರಗಳು ತಲೆಯೆತ್ತಿ ನಿಂತುದು ಕಾಣುವುದು.

ಈ ನಾಲ್ಕು ರಾಷ್ಟ್ರಗಳು ತಮ್ಮ ಇತಿಹಾಸಕೀರ್ತಿಯಿಂದ ತಾವು ತೀರ ಹಳೆಯ ರಾಷ್ಟ್ರಗಳೆಂದು ಹೇಳಿಕೊಳ್ಳುತ್ತಲಿವೆ. ಚೀನ-ಜಪಾನ-ಭಾರತಗಳಂತೂ ಇಡಿ ಜಗತ್ತಿಗೆ ತಮ್ಮ ಹಳೆಯ ಜ್ಞಾನಭಾಂಡಾರವನ್ನೆತ್ತಿ ತೋರಿಸುತ್ತಲಿವೆ. ತಮ್ಮ ಹಳೆಯತನದಿಂದ ಹಿರಿಯತನವನ್ನು ತೋರಬೇಕೆಂಬ ಆಶೆಕಾಣುತ್ತಲಿದೆ. ಹಳೆಯದೆಂಬ ಮಾತ್ರಕ್ಕೆ ಹಿರಿದಾಗಿ ಕಾಂಬುದು ಇಂದಿನ ಯುಗದಲ್ಲಿ ಹೊಸದು. ಈ ಯುಗದ ಧರ್ಮಕಟ್ಟಳೆಗೆ ಬಗ್ಗಿನಡೆಯಬಾರದೆಂದು ಹಳೆಯದರ ಹಟ; ಕೊಳೆತ ಹಳೆಯದೆಲ್ಲವನ್ನೂ ಬೇರುಕಿತ್ತಿ ಬಿಸುಟಿ ಒಗೆಯಬೇಕೆಂದು ಹೊಸಹುಮ್ಮಸಿನ ಹೊಸಲಕ್ಷಣ. ಈ ತಿಕ್ಕಾಟವು ಸತ್ತ್ವಪರೀಕ್ಷೆಯ ಕಾಲವನ್ನು ತಂದಿದೆ.

ಇದೀಗ ಬಂದಿರುವುದು ಆಸ್ಯಖಂಡದ ಸತ್ತ್ವಪರೀಕ್ಷೆಯ ಕಾಲವೆಂದು ಹೇಳಿದುದಾಯಿತು. ಆಸ್ಯಖಂಡದಲ್ಲಿರುವುವು ನಾಲ್ಕು ರಾಷ್ಟ್ರಗಳು: ರಶಿಯಕ್ಕೆ ಬಂದ ಪರೀಕ್ಷೆಯಕಾಲವಾವುದು? ಚೀನದ ಸತ್ತ್ವಪರೀಕ್ಷೆಯೆಲ್ಲಿದೆ? ಭಾರತವು ಯಾವ ಸ್ಥಿತಿಯಲ್ಲಿದೆ? ಜಪಾನವು ಏನು ನಡೆಯಿಸಿರುವುದು?-- ಇವುಗಳನ್ನು ತಿಳಿದರೆ, ಇಡಿ ಆಸ್ಯಖಂಡಕ್ಕೆಯೆ ಸತ್ತ್ವಪರೀಕ್ಷೆಯ ಕಾಲ ಬಂದಿರುವುದು ತಿಳಿವುದು.

ಪರೀಕ್ಷೆಯ ಕಾಲವನ್ನು ತಂದೊಡ್ಡಿರುವುದು ಇಂದಿನ ಮಹಾಯುದ್ಧ. ತನ್ನ ಹೊಸ ಸಂಶೋಧನಗಳ ಸಹಾಯದಿಂದ ಯುರೋಪವನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳಲು ಜರ್ಮನಿಯು ಹವಣಿಸಿ, ಯುದ್ಧ ನಡೆಯಿಸಿತು. ಎಲ್ಲ ರಾಷ್ಟ್ರಗಳು ತಮ್ಮಷ್ಟಕ್ಕೆ ತಾವು ಹೊಸ ಸರಕನ್ನು ಸಿದ್ಧಪಡಿಸಿಕೊಳ್ಳತೊಡಗಿದುದರಿಂದ, ಜರ್ಮನಿಯ ಸರಕುಗಳಿಗೆ ಪೇಟೆಯಿಲ್ಲದಿರುವುದೆ ಯುದ್ಧಮೂಲವು. ಜರ್ಮನಿಯು ಬದುಕಬೇಕೆಂಬ ಹಟದಲ್ಲಿದೆ. ಬದುಕಬೇಕಾದರೆ ಹೋರಾಟವಾಗಲೇ ಬೇಕು. ತಾನು ಬದುಕಬೇಕು— ಎಂದು ಅನೇಕರಿಗೆ ಎನಿಸಿದಾಗ, ಬದುಕುವ ಸಾಧನ-ಸಾಮರ್ಥ್ಯವಿದ್ದವರೇ ಬದುಕುವರು ಎಂಬುದು ನಿಸರ್ಗದ ನಿಯಮ. ಸಾಧನ-ಸಾಮರ್ಥ್ಯವಿದ್ದವರು ಬದುಕುವುದಕ್ಕಷ್ಟೇ ಅಲ್ಲದೆ, ಚನ್ನಾಗಿ—ಆರಾಮವಾಗಿ ಬದುಕಬೇಕೆಂದು ಬಯಸಿದರೆ ಅತ್ಯಾಶೆಯಿಂದಲೂ ಹೋರಾಟವಾಗುವುದು. ಬಲಿಷ್ಠನು ಬಲಹೀನನ ಮೇಲೆ ತನ್ನ ಬಲಪ್ರಯೋಗಮಾಡುವುದು ಕಂಡು ಬರುವುದು. ಹಿರಿಯತನದ ಹೆಮ್ಮೆಯಲ್ಲಿ ಹಳೆಯ ಕೋಳಿಯನ್ನು ತೊಳೆಯದೆ ಅಲ್ಲಿಯೆ ತೊಳಲಾಡುತ್ತಿರುವ ದೇಶಗಳನ್ನು ತೊಡೆದೂಗೆದು— ಸವರಿ, ಅಲ್ಲಿರುವ ಸಾಮಗ್ರಿಯಿಂದ ತಾವು ಪ್ರಬಲರಾಗಿ, ಪ್ರಬಲನಾಗಿರುವ ಹೊಸ ಎದುರಾಳಿಯನ್ನು ಎದುರಿಸಬೇಕೆಂಬುದು ಇಂದು ಕಂಡುಬರುತ್ತಿದೆ. 'ರಶಿಯವು ಹಳೆಯದು, ಅದರಲ್ಲಿ ಯಾವ ಹೊಸತನವಿಲ್ಲ!' ಎಂಬ ಭ್ರಮೆಯಲ್ಲಿ ಜರ್ಮನಿಯು ಮೇಲೇರಿಹೋದಾಗ, ರಶಿಯವು ಈ ಮೂರು ವರುಷದ ಹೋರಾಟದಿಂದ ತನ್ನ ಹಿರಿಯತನವನ್ನು ಕಾಯ್ದುಕೊಂಡಿದೆ. ಹಿರಿಯತನದ ಅನುಭವದ ಸಹಾಯದಿಂದ ಹೊಸತನದ ಮಡುಕನ್ನು ಎದುರಿಸುತ್ತಲಿದೆ. ಅದರ ರಭಸವನ್ನು ಹಿಂದಕ್ಕೊಟ್ಟುತ್ತಲಿದೆ. ಹೊಸದರ ಕೂಡ ಹೋರಾಡಿ, ಇದ್ದುದರಲ್ಲಿಯೆ ಹೊಸತನವನ್ನು ಪಡೆಯುತ್ತಲಿದೆ. ಆದರೆ ಇನ್ನೂ ನಿರ್ಣಾಯಕಸ್ವರೂಪ ಬಂದಿಲ್ಲ. ರಶಿಯದ ಕೈ ಮೇಲಾಗುವುದೆಂದರೆ ಆಸ್ಯಖಂಡದ ಕೈ ಮೇಲಾದಂತೆ. ರಶಿಯದ ಇಂದಿನ ಪರಿಸ್ಥಿತಿಯು ಸತ್ತ್ವಪರೀಕ್ಷೆಯ ಕಾಲದ ಭಯಂಕರ ಅವಸ್ಥೆಯುಳ್ಳದ್ದರೂ ಆಶಾದಾಯಕವಿದೆ.

ಉತ್ತರದ ಆ ತುದಿಯಿಂದ ಆಸ್ಯಖಂಡದ ದಕ್ಷಿಣದ ತುದಿಗೆ ಬಂದರೆ ಅದೆಷ್ಟು ವಿಷಮತೆ ಕಾಣುವುದು? ಪರಾಮಾನದಲ್ಲಿ ವಿಷಮತೆ ಕಂಡಂತೆ ಸದ್ಯದ ಪರಿಸ್ಥಿತಿಯಲ್ಲಿಯೂ ಕಾಣುವುದು. ದಕ್ಷಿಣತುದಿಯಲ್ಲಿದ್ದ ದೇಶವೆ ನಮ್ಮ ಭಾರತ. ಇಲ್ಲಿಯೂ ಪರೀಕ್ಷಾಕಾಲ. ದೇಶದ ಜನತೆಯ ಆಶೆ ಸ್ವಾತಂತ್ರ್ಯ-ಸ್ವರಾಜ್ಯಗಳನ್ನು ಪಡೆಯಬೇಕೆಂದು; ಯುರೋಪದ ಒಂದು ತುದಿಯ ಆಡಳಿತಗಾರರ ದುರಾಶೆ ತಮ್ಮ ಅಂಕಿತದಲ್ಲಿ ಭಾರತವು ಬಹುದಿನ ಬಾಳಬೇಕೆಂದು. ಈ ತಿಕ್ಕಾಟವಾದರೂ ಬದುಕುವುದಕ್ಕೆಯೆ. 'ಸ್ವಾತಂತ್ರ್ಯದಿಂದಲೆ ಭಾರತದ ಬದುಕು' ಎಂದು ತಿಳಿದು, ಸಾಯಲಿರುವ ಭಾರತವು ತಲೆಯೆತ್ತಿ ಚೇತರಿಸಿಕೊಂಡು, ಹಳೆಯ ಜಾಡ್ಯವನ್ನು ಕೊಡವಿ, ಹೊಸದರೊಡನೆ ಹೋರಾಡುತ್ತಿದೆ. 'ಭಾರತವನ್ನು ಕಳೆದುಕೊಂಡರೆ ತಮ್ಮ ರೊಟ್ಟಿಯ ಮೇಲಣ ತುಪ್ಪ ಕಡಿಮೆಯಾಗುವುದಲ್ಲ' ಎಂಬ ಹೆದರಿಕೆ ಆಳುವವರಿಗೆ. ಭಾರತದಲ್ಲಿಯ ಜನತೆಗೆ— ಇವರ ತುಪ್ಪ (ನೆಣ) ಹೀರುವಿಕೆಯಿಂದ— ತುಪ್ಪವಂತೂ ಇಲ್ಲವೆ ಇಲ್ಲ; ರೊಟ್ಟಿ ಕೂಡ ಕಣ್ಣಿಗೆ ಕಟ್ಟಿದೆ, ದೂರದಲ್ಲಿಯೆ ನೋಡಿ ಸಂತಸಪಡಬೇಕಾಗಿದೆ. ಹಸಿವುಹಿಂಗಿಸಿಕೊಂಡು ಬದುಕುವುದಕ್ಕೆ ಹಂಬಲಿಸುತ್ತಿದೆ ಭಾರತ; ಊಟವಿಲ್ಲದುದಕ್ಕೆ ಒಡಲುರಿಯಿಂದ ಬಾಡಿ ಬಳಲಿ ಬದುಕಲಾರದಾಗಿದೆ ಭಾರತ. ಯುರೋಪದ ಆಡಳಿತಗಾರರಿಗೆ ರೊಟ್ಟಿಯ ತುಪ್ಪದ ಆಶೆ. ತುಪ್ಪವಿಲ್ಲದಿದ್ದರೆ ಅವರು ಬದುಕಲಾರರೆಂದಲ್ಲ; ಕಕ್ಕಸಬಡುವಂತೆ ತಿನ್ನುವುದು ಮಾತ್ರ ಕಡಿಮೆಯಾದೀತು. ಅನಾವಶ್ಯಕವಾದ ಕೊಬ್ಬು ಬೆಳೆಯದೆ ಹೋದೀತು. ಈ ಹೋರಾಟದ ಸಂದರ್ಭವು ಭಾರತಕ್ಕೂ ಸತ್ತ್ವಪರೀಕ್ಷೆಯ ಕಾಲವನ್ನು ತಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ಸಪ್ಪೆಯಾಗಿರುವಷ್ಟು ಭಾರತವನ್ನು ಹಿಂದೆ ಯಾರೂ ಹಿಂಡಿ ಹಿಪ್ಪೆಮಾಡಿರಲಿಲ್ಲ. ಆಸ್ಯಖಂಡದ ಆ ತುದಿಯಲ್ಲಿ ಮೊಗದೋರುತ್ತಲಿರುವ ಗೆಲುವಿನ ಕಿರಣವು ಭಾರತಕ್ಕೂ ದಾರಿ ತೋರುವುದೇ, ನೋಡಬೇಕು. ಅಂತೂ ಬಂದಿದೆ ಸತ್ತ್ವಪರೀಕ್ಷೆಯ ಕಾಲ.— ತಡೆಯಬೇಕು; ತಡೆದು ಪಡೆಯಬೇಕು.

ರಶಿಯಕ್ಕೂ ಭಾರತಕ್ಕೂ ಹೋರಾಟದ ಸಂಬಂಧ ಬಂದಿರುವುದು ಯುರೋಪದ ಮೂಲೆಯಿಂದ. ಆ ಹೋರಾಟವು ಯುರೋಪ-ಆಸ್ಯಖಂಡಗಳ ನಡುವೆ ಇದ್ದಂತಾಗಿದೆ. ಆದರೆ ಆಸ್ಯಖಂಡದ ಮಧ್ಯಭಾಗದಲ್ಲಿದ್ದ ಚಿನ-ಜಪಾನಗಳು ದಾಯಾದಿತನದಲ್ಲಿ ತೊಡಗಿವೆ. ಇವುಗಳಲ್ಲಿ ಹಳೆಯ ರಾಷ್ಟ್ರವು ಚೀನ; ಹೊಸಸೋಗು ಹಾಕಿದುದು ಜಪಾನು. ಜಪಾನಕ್ಕೆ ಹೊಸಸೋಗಿನವರ ಹಸಿವು. ರೊಟ್ಟಿಯ ತುಪ್ಪಕ್ಕಾಗಿ ಹೋರಾಟ; ರೊಟ್ಟಿಗಾಗಿ ಅಲ್ಲ. ಚೀನದವರದು ಹಾಗಲ್ಲ; ಕಟುಕು ರೊಟ್ಟಿ ತಿನ್ನುತ್ತ, ತಮ್ಮ ಹಳೆಯ ದೇಶದಲ್ಲಿ ತಮಗೆ ತಿಳಿದಂತೆ ಇರಬೇಕೆಂಬುದಕ್ಕೆ ಅಡ್ಡ ಬರುತ್ತಿರುವವರನ್ನು ತಡೆಗಟ್ಟಬೇಕಾಗಿದೆ. ಚೀನವು ತನ್ನ ಹಳೆಯತನ-ಹಿರಿಯತನಗಳನ್ನು ಕಾಯ್ದುಕೊಳ್ಳಬೇಕೆಂದಿದೆ. ತನ್ನ ದೇಶದಲ್ಲಿ ತಾನು ನೆಮ್ಮದಿಯಿಂದಿರಬೇಕೆಂದಿದೆ. ಬಲಹೀನನ ಮನೆಯಲ್ಲಿ ಸಂಪತ್ತು ರಾಶಿಯಾಗಿ ಬಿದ್ದು, ಅವನಲ್ಲಿ ಬಲವಿಲ್ಲದಿರುವ ಮೂಲಕ ಉಪಯೋಗವಾಗದಿರುವುದು ಬಲವಂತನ ಬಾಯಲ್ಲಿ ನೀರೂರಿಸದೆ ಬಿಟ್ಟೀತೆ? ಬಾಯಲ್ಲಿ ನೀರೂರುವುದೆ ತಡ; ಕೈಚಾಚುವುದೆ, ಸಿಕ್ಕರೆ ನುಂಗುವುದೆ! ನುಂಗುವಾಗ ತುತ್ತು ದೊಡ್ಡದಾದರೆ ಗಂಟಲಿಗೆ ಸಿಕ್ಕುವುದು. ಆಶೆಗೂ ಒಂದು ಮಿತಿಯಿರಬೇಕು. ಮಿತಿಮೀರಿದರೆ ಗತಿಗೆಟ್ಟೀತು.

ಈಗಾರು ವರುಷಗಳಿಂದ ಸತತವಾಗಿ ನಡೆದಿದೆ ಹೋರಾಟ— ದಾಯಾದಿತನದ ಹೋರಾಟ— ಆಸ್ಯಖಂಡದಲ್ಲಿಯೆ ಹುಟ್ಟಿ

ಬೆಳೆದವರಾದ ಚೀನ—ಜಪಾನದವರಲ್ಲಿ. ಇದಕ್ಕೆ ಕಾರಣ ಜಪಾನಿನ ಹೊಸಸೋಗು. ಸುಮಾರು ೫೦-೬೦ ವರುಷಗಳಿಂದ ಜಪಾನು ತನ್ನತನವನ್ನು ಮರೆತು, ಯುರೋಪದ ಬೆಡಗು-ಬಿನ್ನಾಣಕ್ಕೆ ಮನಸೋತು, ತನ್ನ ಮನೆಯಲ್ಲಿ ಯುರೋಪದ ವಾತಾವರಣ ತಂದುಕೊಳ್ಳಲಿದೆ: 'ಯುರೋಪದವರೆ ಜಾಣರು; ಅವರೆ ದೊಡ್ಡವರು!' ಎಂಬ ಭ್ರಮೆಗೆ ಬಲಿಬಿದ್ದು, ತನ್ನ ಹಿಂದಿನ ಕೀರ್ತಿಯನ್ನೆಲ್ಲ ಮರೆತು ಹೊಸಸೋಗು ಧರಿಸಿದೆ. ಹೊಸಸೋಗು ಅಲ್ಲಿಯ ವಾತಾವರಣ ತಂದಿದೆ; ಅದರ ಜೊತೆಗೇ ಬಂದಿದೆ ಯುರೋಪದ ಬೇನೆ—ಆಕ್ರಮಣ ಪ್ರವೃತ್ತಿ. ಇದು ಆಸ್ಯಖಂಡ-ದಲ್ಲಿಲ್ಲ. ಇದಕ್ಕೆ ಕಾರಣವಿದೆ. ಆಸ್ಯಖಂಡವು ಭೂಮಿಯ ಮೊಗ; ಮೊಗಕ್ಕೆ ಮಿದುಳು ಸಮೀಪ. ಮಿದುಳು ವಿವೇಕವುಳ್ಳದು; ಸಮಭಾವವುಳ್ಳದು. 'ತಾನು-ಪರರು' ಎಂಬ ವಿಚಾರ-ವುಳ್ಳದು. ಭಾರತ-ಚೀನ-ರಶಿಯಗಳಲ್ಲಿ ಈ ಸಮಾಜಸಮತೆ, ಪರಸ್ಪರ ಪರೋಪಕಾರ ದೃಷ್ಟಿ ಇವು ಬೇರೂರಿ ಬಿಟ್ಟಿವೆ; ರಕ್ತ-ನಾಳಗಳಲ್ಲಿಯೆ ಹರಿಯುತ್ತಿವೆ. ಯುರೋಪವು ಹಾಗಲ್ಲ. ಅದು ಶಕ್ತಿ—ಅನು ಕೈ. ತನಗಿಂತ ಮೇಲೆ ಇದ್ದ ವಿಷಯಗಳು ಅದಕ್ಕೆ ನಿಲುಕವು. ಮೇಲಿನ—ಉದಾತ್ತ ವಿಚಾರಗಳು ಅದಕ್ಕೆ ಬಾರವು. ತನ್ನ ಕರ್ತೃತ್ವಶಕ್ತಿಯಿಂದ ಎಲ್ಲವನ್ನೂ ಸಾಧಿಸೇನು ಎಂದು ಸುತ್ತಲೂ ಕೈಚಾಚಿದರೆ, ನಿಲುಕಲಾರದ ಅನೇಕ ವಿಷಯಗಳು ದೂರವೆ ಉಳಿದು, ಕೊನೆಗೆ ಅವಮಾನವಾಗಿ, ಚಾಚಿದಕೈ ಮುದುಡಿಕೊಳ್ಳಬೇಕಾಗುವುದು. ಮೇಲೆ ಹೋದಂತೆ ದೃಷ್ಟಿ ವಿಶಾಲವಾಗುವುದೂ ಕೆಳಗೆ ಇಳಿದಂತೆ ದೃಷ್ಟಿ ಸಂಕುಚಿತ-ವಾಗುವುದೂ ನಿಸರ್ಗದ ನಿಯಮ. ಆಸ್ಯಖಂಡವು ಹಳೆಯದು; ಮೊದಲಿನದು. ಭೂಮಿಯ ಮೊಗವಾದುದು ಅದರ ಹಳತನದ ಮೂಲಕವಷ್ಟೇ ಅಲ್ಲ, ಅದರ ಸಮತೆಯ ಮೂಲಕ; ಅದರ ವಿಶಾಲದೃಷ್ಟಿಯ ಮೂಲಕ. ಕೆಳಗಿಳಿದಂತೆ ಕಿರುತನದ ಕುರುಹು ಕಾಣಿಸುವುದು ಅ ಮೇ ರಿ ಕೆ ಯ ಲ್ಲಿ. (America for Americans) 'ಅಮೇರಿಕೆಯು ಅಮೇರಿಕನರಿಗೆ ಮಾತ್ರ' ಎಂಬ ಕೂಗು ಅಲ್ಲಿ ಕೇಳಬರುತ್ತದೆ. ಅಷ್ಟು ಸಂಕುಚಿತ-ವಾಗಿದೆ ದೃಷ್ಟಿ. ಅದು ತೀರ ಕೆಳಗಿನ ಮಟ್ಟದ ವಿಷಯ, ಸ್ವಾರ್ಥದ ವಿಷಯ.

ಜಪಾನು ಅಮೇರಿಕೆಯ ಸಂಬಂಧವನ್ನೂ ಬೆಳೆಯಿಸಿಕೊಂಡಿದೆ, ಯುರೋಪದ ಸೋಂಕನ್ನೂ ಪಡೆದಿದೆ. ಅದಕ್ಕೆ ಅದು ಆಸ್ಯ-ಖಂಡದ ವಿಶಾಲದೃಷ್ಟಿಯನ್ನು ಕಳೆದುಕೊಂಡು, ಕರ್ತೃತ್ವ-ಶಕ್ತಿಯ ಭ್ರಮೆಯಲ್ಲಿ ಕೈಚಾಚುತ್ತಲಿದೆ. ಸ್ವಾರ್ಥಕ್ಕಾಗಿ ಸಾಯುತ್ತಿದೆ. 'ಕೈಯ ಶಕ್ತಿ, ಸ್ವಾರ್ಥದ ಸಾಹಸ ಎರಡೂ ಮಿತವಾದುವುಗಳು' ಎಂಬುದು ಬೇಗನೆ ತಿಳಿದು ಬಂದೀತು. ಈ ನಿರ್ಣಯ ದೊರೆಯಬೇಕಾದರೆ ಚೀನವು ಗೆಲವು ಪಡೆಯ-ಬೇಕು: ಅದಕ್ಕೇ ಚೀನವು ಈ ಸತ್ತ್ವಪರೀಕ್ಷೆಯ ಕಾಲವನ್ನು ಯಶಸ್ವಿಯಾಗಿ ದಾಟಬೇಕು.

ಆಸ್ಯಖಂಡವು ಭೂಮಿಯ ಮೊಗವೆಂದು ಹೇಳಿದೆಯಷ್ಟೆ! ಅದೇ ಮಾತನ್ನು ಮುಂದುವರಿಸಿದರೆ, ಸತ್ತ್ವಪರೀಕ್ಷೆಯಲ್ಲಿ ಗೆಲವು ಆಸ್ಯಖಂಡಕ್ಕೇ ಎಂದು ತೋರುವುದು. ತೋಳ ಶಕ್ತಿಯ ಬಲ ಮಿತವಾದುದು; ಬುದ್ಧಿಶಕ್ತಿಯ ಬಲವು ಅಮಿತವಾದುದು. ದುಡಿತದಿಂದ ತೋಳ ಬಲವು ಕುಗ್ಗುವುದು; ಬುದ್ಧಿಶಕ್ತಿಯು ಮಾತ್ರ ದುಡಿತದಿಂದ ದ್ವಿಗುಣಿತವಾಗುವುದು. ಮಾನವಶರೀರಕ್ಕೆ ದಾರಿ ತೋರುವುದು ಬುದ್ಧಿ—ಕಣ್ಣು. ಕಣ್ಣು ಮೊಗದಲ್ಲಿ. ಆಸ್ಯಖಂಡವು ಭೂಮಿಯ ಮೊಗವು. ಭೂಮಿಗೆ ಪ್ರಗತಿಯ ದಾರಿ ತೋರುವುದು ಕಣ್ಣಂತಿದ್ದ ಆಸ್ಯಖಂಡವೆ. ಪ್ರಪಂಚದ ಕಣ್ಣೆಲ್ಲ ಇಂದು ಆಸ್ಯಖಂಡದ ಮೇಲೆ. ಆದರೆ ಆಸ್ಯಖಂಡವು ಶತಮಾನಗಳಿಂದ ಅನೇಕ ಹೊಡೆತಗಳನ್ನು ತಿಂದು ಅರಗಿಸಿ-ಕೊಂಡು ನಿಂತ ಅನುಭವದ ಗಟ್ಟಿ. ಅನುಭವವಿಲ್ಲದ ಹೊಸ ತರುಣನ ಹುಮ್ಮಸವು ಕೆಲಕಾಲ ಹಿರಿಯರನ್ನು ಹಿಂದೂಗೆಯ-ಬಹುದು; ಆದರೆ ತಲೆಗೆ ಬಡಿದಾಗ ಬರುವುದು ಬುದ್ಧಿ. ಇಂದು ಬುದ್ಧಿಯ ಮಾತನ್ನು ಅನುಭವಿಕ ಆಸ್ಯಖಂಡವು ಹೇಳುತ್ತಿದೆ ಹೊಸಬರಿಗೆ ಬಂದೀತು ಬುದ್ಧಿ. ಆಸ್ಯಖಂಡವು ಮತ್ತೊಮ್ಮೆ ತಲೆಯೆತ್ತೀತು. ಮುಪ್ಪು ಎರಡನೆಯ ಬಾಲ್ಯವೆಂದು ಹೇಳು-ತ್ತಾರೆ. ಬಾಲ್ಯ ಬಂದೀತು, ಮತ್ತೆ ಬೆಳೆದೀತು. ಆಸ್ಯಖಂಡ ಬೆಳೆವ ಕುರುಹುಗಳನ್ನು ಕಾಣುತ್ತಲಿದ್ದೇವೆ. ಅವು ಅವುವೆಂಬು-ದನ್ನು ನೋಡೋಣ, ನೋಡಿ ತಿಳಿಯೋಣ. ಸದ್ಯದ ಪರಿಸ್ಥಿತಿ-ಯಲ್ಲಿ ಚೀನಕ್ಕೆ ಬಂದ ಮಹತ್ತ್ವ ಇನ್ನಾವಕಾಲದಲ್ಲಿಯಾದರೂ ಬಂದಿರಬಹುದೆ?—ಬರಬಹುದೇ?— ಎಂದು ಆಗಾಗ ಎನಿಸು-ವುದು. ಚೀನವು ತೀರ ಹಳೆಯ ದೇಶ. ಇಂದಿನಿಂದ ಹಿಂದೆ ಸುಮಾರು ಮೂರುಸಾವಿರ ವರುಷಗಳ ವರೆಗಿನ ಅದರ ಬರೆದಿಟ್ಟ ಇತಿಹಾಸ ದೊರೆಯುತ್ತದೆ. ಅದಕ್ಕೂ ಹಿಂದಿನ ಅನೇಕ ಶತಮಾನ-ಗಳ ವರೆಗಿನ ಮಾನವೇತಿಹಾಸದ ಕುರುಹುಗಳೂ ಸಾಕಷ್ಟಿವೆ. ಪುರಾತನ ಸಂಸ್ಕೃತಿಯುಳ್ಳದು. ಜನವಸತಿಯ ದೃಷ್ಟಿಯಿಂದ ಹಿರಿಯದು. ಚೀನದಲ್ಲಿದ್ದಷ್ಟು ಜನ ಬೇರಾವ ದೇಶದಲ್ಲಿಯೂ ಇಲ್ಲ. ಮೊನ್ನೆಯ ಜನಗಣತಿಯು ಕೊಡುವುದು ನಲವತ್ತೆರಡು-ವರೆ ಕೋಟಿಯೆಂದು. ಇಡಿ ಯುರೋಪದ ಜನಸಂಖ್ಯೆ ಕೂಡ ಅಷ್ಟಾಗುವುದಿಲ್ಲ. ಯುರೋಪದ ಜನಸಂಖ್ಯೆ ೧೯೫೧ ರಲ್ಲಿ ೪೦ ಕೋಟಿ ಇತ್ತು. ಜನಸಂಖ್ಯೆಯ ದೃಷ್ಟಿಯಿಂದ ಚೀನದ ಸಮೀಪ ಬರುವ ದೇಶವೆಂದರೆ ಅದರ ಮಗ್ಗುಲಿಗೆ ಇರುವ ದೇಶ ಭಾರತ. ಸಂಸ್ಕೃತಿಯಲ್ಲಿ ಇತಿಹಾಸದಲ್ಲಿ ಜನವಸತಿಯಲ್ಲಿ ಸರಿಸಮಾನವಾಗಿ ನಿಲ್ಲಬಹುದಾದ ದೇಶವೆಂದರೆ ಭಾರತ. ಭಾ ರ ತ ದ ಜನಸಂಖ್ಯೆ ೧೯೫೧ ರ ಜನಗಣತಿಯ ಮೇರೆಗೆ ೩೬ ಕೋಟಿಯಿದೆ.

ಎಲ್ಲರಿಗೂ ಬಿದ್ದಿರುವ ತೊಡಕು ಇದು: ಚೀನವು ಅತಿ ಹಳೆಯ ದೇಶವಾದರೂ ಹೊಸದೆನಿಸಿಕೊಳ್ಳುವ ಜಪಾನಿನ ಜೊತೆಗೆ ಸತತ ಆರು ವರುಷ ಕಾದುತ್ತಿದೆಯಲ್ಲ! ಶಾಸ್ತ್ರೀಯ ಹೊಸ ಸಂಶೋ-

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನ ವನ್ನು ಪಡೆದುನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ಧನಗಳ ಸಹಾಯ ಜಪಾನಿಗಿದ್ದರೂ, ಚೀನವು ಅದನ್ನು ಕಡೆಗಣಿಸಿದಂತೆ ಮಾಡಿದೆಯಲ್ಲ! ಜಪಾನವು ಮೇಲೇರಿ ಬಂದಾಗ ಹಿಂದೆ ಸರಿಯುತ್ತಿದ್ದರೂ, ಅದು ಹೊಂಚುಹಾಕುವುದಕ್ಕೆಯೆಂದು ಕಂಡು ಬರುತ್ತಿದೆಯಲ್ಲ! ಇಂತಹ ವಿಶಾಲವಾದ ದೇಶ, ಭಾವಿಕತನದಲ್ಲಿರುವ ದೇಶ, ಅಜ್ಞಾನ ಮುಸುಕಿದ ದೇಶ ಎಂದು ತಿಳಿದರೂ, ಎಲ್ಲರ ಕಣ್ಣು ಕುಕ್ಕಿಸುವಂತೆ, ಜಗವು ಅಚ್ಚರಿಪಡುವಂತೆ, ಹಳೆಯ ಜಿಗಿಯಂತೆ ತನ್ನ ಸಾಮರ್ಥ್ಯವನ್ನು—ಸಹನಶೀಲತೆಯಿಂದ— ತಾಳ್ಮೆಯಿಂದ—ತನ್ನತನವನ್ನು ಇಟ್ಟುಕೊಂಡು ಸಾಗುತ್ತಿದೆಯಲ್ಲ! ಯಾವ ಅದ್ಭುತ ಶಕ್ತಿ ಚೀನವನ್ನು ಒಟ್ಟಾಗಿಸಿ, ಎಚ್ಚರಿಸಿ, ಗಟ್ಟಿಮಾಡಿದೆ? ಬಂದವರನ್ನೆದುರಿಸಲು ಚೀನದ ಅಂತಃಶಕ್ತಿ ಎಲ್ಲಿದೆ? ಈಗ ಬಿಗಿಹಿಡಿವ ಜಿಗುಟು ಎಲ್ಲಿಂದ ಬಂದಿದೆ?— ಎಂದು ಮುಂತಾಗಿ ಅನೇಕ ಪ್ರಶ್ನೆಗಳು ಎದ್ದು ತಿಳಿಯದಂತಾಗಿ, ಅನೇಕರು ತೊಡಕಿನಲ್ಲಿದ್ದಾರೆ. ಆದರೂ ಚೀನದ ಸಾಹಸವನ್ನು ಕಂಡು ತಲೆದೂಗುತ್ತಿದ್ದಾರೆ; ಮುಂಬರುವ ಗೆಲವನ್ನು ದಾರಿಕಾಯುತ್ತಿದ್ದಾರೆ.

ಹಳೆಯ ಚೀನದಲ್ಲಿ ಹೊಸಶಕ್ತಿ ಎಲ್ಲಿಂದ ಬಂತು, ಹೇಗೆ ಬಂತು?—ಎಂದು ವಿಚಾರಿಸುವುದೇ ನಮಗೆ ಪ್ರಸ್ತುತ. ಚೀನದ ಹಳೆಯ ತಳಹದಿಯ ಮೇಲೆ ಹೊಸ ಕಟ್ಟಡವನ್ನು ನಿರ್ಮಿಸುತ್ತಲಿರುವ ವಿಶ್ವಕರ್ಮನಾವ— ಅವನ ಬಗೆಯಾವುದು— ಅವನು ಮಾಡಿದ ಕಾರ್ಯವಿವರವೇನು?— ಇವನ್ನೆಲ್ಲ ತಿಳಿವುದಗತ್ಯ.

ಎಂತಹ ಸಂಕಟಗಳು ಬಂದರೂ ದಾಟಿಬರುವ ಶಕ್ತಿ ಚೀನಭಾರತಗಳ ಸಂಸ್ಕೃತಿಯಲ್ಲಿಯೆ ಇದೆ. ಆದರೆ ಸಂಸ್ಕೃತಿಯೆ ತನ್ನಷ್ಟಕ್ಕೆ ಕಾರ್ಯಮಾಡದು. ಅದು ಶಕ್ತಿ. ಶಕ್ತಿಯು ಉಪಯೋಗವಾಗಬೇಕಾದರೆ ಒಂದು ವ್ಯಕ್ತಿ ಬೇಕು— ಅಸಾಮಾನ್ಯ ವ್ಯಕ್ತಿ. ಆ ವ್ಯಕ್ತಿಯು ಎಲ್ಲ ಶಕ್ತಿಯನ್ನೂ ಕೇಂದ್ರಿಕರಿಸಿ ಹೊಸರೂಪುಕೊಟ್ಟು ತಿರುಗಿ ಪ್ರಸರಣಮಾಡುವುದು. ಆಗ ಚೈತನ್ಯಕ್ಕೆ ಹೊಸರೂಪು ಬರುವುದು. ದೇಶದಲ್ಲಿ ನವಚೈತನ್ಯ ಕಾಣುವುದು. ನವಚೈತನ್ಯದಿಂದ ಎಂತಹ ಆಪತ್ತುಗಳೂ ಅಡಗಿಹೋಗುವುವು.

ಹಾಗಾದರೆ ಹೊಸಚೈತನ್ಯವನ್ನು ಹರಿಬಿಟ್ಟ ಇಂದಿನ ಚೀನದ ವಿಧಾತನಾರು?— ಎಂದು ಕೇಳಿದರೆ, ಎಲ್ಲರ ದೃಷ್ಟಿ ಈಗಿನ ಸೂತ್ರಧಾರಿಯಾದ ಚಾಂಗ ಕೈಶೇಕನ ಕಡೆಗೆ ಹೊರಳುವುದು. ಚಾಂಗ ಕೈಶೇಕನಾದರೂ ಆ ನವಚೈತನ್ಯದ ಗುರುತು; ಅದರಿಂದ ಸಿದ್ಧವಾದ ಪ್ರತಿಮೆಯೊಂದು. ಪ್ರತಿಮೆಯ ಹಿಂದೆ ಮರೆಯಾಗಿದ್ದ ವಿಧಾತನು ಡಾ. ಸನ್‌ಯುತ್‌ಸೇನನು. ಆತನ ಕೊನೆಯಾಶೆಯನ್ನು ತಿಳಿದರೆ ಅವನ ಕಾರ್ಯದ ವಿವರದ ಕಲ್ಪನೆ ಬಂದೀತು:—

"ಉಳಿದ ರಾಷ್ಟ್ರಗಳ ಜೊತೆಗೆ ಸಮನಾಗಿ— ಸ್ವಾತಂತ್ರ್ಯದಿಂದ ಶ್ರೇಯಸ್ಸಿನಿಂದ ಸಮನಾಗಿ—ಚೀನವೂ ನಿಲ್ಲಬೇಕೆಂಬ ಒಂದೇ ಉದ್ದೇಶದಿಂದ ಜನತೆಯಲ್ಲಿ ಕ್ರಾಂತಿಯನ್ನುಂಟುಮಾಡಬೇಕೆಂದು, ನಾನು ನಾಲ್ವತ್ತು ವರುಷಗಳ ವರೆಗೆ ಸತತ ಪರಿಶ್ರಮಪಟ್ಟಿದ್ದೇನೆ. ಈ ಉದ್ದೇಶವನ್ನು ಸಾಧಿಸುವುದಕ್ಕೆ ನಮ್ಮ ಜನತೆಯನ್ನು ನಿಜವಾಗಿ ಎಚ್ಚರಿಸಬೇಕೆಂದೂ, ಸಮಭಾವದಿಂದ ಯಾರು ನಮ್ಮನ್ನು ಕಾಣುವರೂ ಅಂತಹ ಬೇರೆ ದೇಶದ ಜನರೊಡನೆ ಹೋರಾಟದಲ್ಲಿ ಸೇರಬೇಕೆಂದೂ ಈ ನಾಲ್ವತ್ತು ವರುಷಗಳ ಅನುಭವವು ಗಟ್ಟಿಯಾಗಿ ಮನವರಿಕೆಮಾಡಿಕೊಟ್ಟಿದೆ.

"ಕ್ರಾಂತಿಯ ಕಾರ್ಯವಿನ್ನೂ ಆಗಿಲ್ಲ. ಎಲ್ಲ ನನ್ನ ಸಹಚರರು ನನ್ನ 'ರಾಷ್ಟ್ರನಿರ್ಮಾಣದ ಗತ್ತು' 'ರಾಷ್ಟ್ರನಿರ್ಮಾಣದ ಮೂಲತತ್ತ್ವ' 'ಜನತೆಯ ಮೂರು ತತ್ತ್ವಗಳು' ಮತ್ತು 'ಪ್ರಚಾರಪತ್ರಿಕೆಗಳು' ಇವುಗಳನ್ನು ಮನನಮಾಡಿ ಅನುಸರಿಸಲಿ; ಅವೆಲ್ಲವೂ ನಮ್ಮ ಪಕ್ಷದ ರಾಷ್ಟ್ರೀಯಸಮಿತಿಯಿಂದಲೆ ಹೊರಟಿವೆ. ಅವುಗಳಲ್ಲಿ ಹೇಳಿದಂತೆ ನಡೆದು ಉದ್ದೇಶ ಸಾಧಿಸಲಿ. ಹೆಚ್ಚಾಗಿ ಹೇಳುವುದೆಂದರೆ ರಾಷ್ಟ್ರೀಯಸಮಿತಿಯನ್ನು ಕೂಡಿಸುವುದಕ್ಕಾಗಿ ಕರೆಕೊಟ್ಟ ನಮ್ಮ ಇತ್ತೀಚಿನ ಪ್ರಕಟನೆಗಳಿಗೆ ಒರೆಯೆನಿಸಿದ ಒಪ್ಪಂದಗಳ ನಾಶಮಾಡುವುದು, ಕೊಂಚಕಾಲವೂ ವಿಲಂಬವಿಲ್ಲದೆ ಪರಿಣಾಮಕಾರಿಯಾಗಬೇಕು. ಇದು ನನ್ನ ಎದೆಯೊಳಗಿಂದ ಬಂದ ಕಟ್ಟಪ್ಪಣೆ ನಿಮಗೆ.

ಮಾರ್ಚ ೧೧—೧೯೨೫. —ಸನ್. ವೆನ್.

ಬರೆದುದು: ಫೆಬ್ರುವರಿ ೨೧—೧೯೨೫.

ತನ್ನ ಮರಣದನಂತರ ಮುಂದುವರಿಸಬೇಕಾದ ಕಾರ್ಯದ ರೂಪರೇಷೆಯಿದು. ತನ್ನ ಜೀವನಕಾಲದಲ್ಲಿಯೆ ಏನು ಕಾರ್ಯಮಾಡಿದನೆಂಬುದನ್ನೂ ಸಾಧನಕ್ರಮವನ್ನೂ ತಿಳಿವುದಕ್ಕೆ ಅವನ ಜೀವನವೃತ್ತವನ್ನು ಸ್ವಲ್ಪದರಲ್ಲಿ ನೋಡೋಣ.

ನಾಡ ಬೆಳಗು

(ಗೀತ-ನಾಟಕ)

ಶ್ರೀ. ಎಚ್. ಎಸ್. ಪಾಟೀಲ, ಎಂ. ಎ. ಬಿ. ಕಾಮ್.
ಬೋರ್ಡಿ

ಇದೇನು ನಾಟಿಕವೆಂದು ಒಮ್ಮೆಲೆ ಬೆರಗುವಟ್ಟು ಬಿಡಲಾಗದು. ಕೊನೆಯುವರೆಗೂ ಓದಿನೋಡಿ. ಕನ್ನಡದೇವಿಯು ಹೊಸಕಾಲದ ಚಾರಣರ ಪರಿಚಯ-ಸಂದರ್ಶನಗಳೇ ಈ ಗೀತನಾಟಕದ ಗುರಿಯಾಗಿದೆ.

★

ದೊಡ್ಡ ನಸುಕಿನ ಹೊತ್ತು. ಎಲ್ಲೆಲ್ಲಿಯೂ ಶಾಂತತೆಯು ಹಬ್ಬಿದೆ. ಗಿಡ-ಬಳ್ಳಿಗಳು ಮಾತ್ರ ಬೆಳಗಿನ ಹೊಸಗಾಳಿಗಳನ್ನು ಕೈಮಾಡಿ ಕರೆವಂತೆ ಅಲುಗಾಡತೊಡಗಿವೆ. ಹೂ, ಹಣ್ಣು, ಎಲೆಗಳು ಆ ಬರವಿಗಾಗಿ ಹಿಗ್ಗಿನಿಂದ ಹಾರಾಡುವುವೇನೊ ಎಂಬಂತೆ ಕಾಣಹತ್ತಿವೆ. ಅತ್ತ ಮೂಡಣದಲ್ಲಿ ಇನ್ನೂ ಕೊಂಚ ಕೆಂಪೊಡೆಯಿತು—ಎನ್ನುವಷ್ಟರಲ್ಲಿ, ಇತ್ತ ಗಿಡಗಳ ಪೊದರುಗಳಿಂದಲೂ ಕಂಟಿಗಳ ಗುಂಪಿನಿಂದಲೂ ಹಕ್ಕಿಗಳ ಸಲವಿನುಲಿ ಕೇಳತೊಡಗುತ್ತದೆ. 'ಹೊಸದಾಗಿ ದೂರದಲ್ಲಿದ್ದ ಬಳಗದವರು ಮನೆಗೆ ಬರುವರು' ಎಂಬ ಸುದ್ದಿಯನ್ನು ಕೇಳಿ ಕುಣಿದಾಡುವ ಹುಡುಗರಂತೆ, ಸಂಜೆಗೆ ಮನೆಯನ್ನು ಸೇರಿದ ತಾಯಿಯನ್ನು ಕಂಡು ಅತ್ತಿತ್ತ ಅಲೆದಾಡಿ ಎಳೆದಾಡುವ ಹಸುವಿನ ಕರುಗಳಂತೆ, ಎಲ್ಲೆಲ್ಲಿಯೂ ಹಕ್ಕಿ-ಪಕ್ಕಿಗಳ ಹಾಡು-ಮಾತುಗಳು ಕೇಳಿಸುತ್ತಿವೆ. ಅತ್ತ, ಅತಿಥಿಗಳಿಗೆ ಸತ್ಕಾರಮಾಡಲು ಗಡಿಬಿಡಿಯಿಂದ ಓಡಾಡುವ ಗೃಹಸ್ಥನಂತೆ ಹೊಳೆ-ಹಳ್ಳಗಳು, ಆ ಹೊಸಹಗಲಿನ ಸ್ವಾಗತ ಮಾಡಲು ರಭಸದಿಂದ ಹರಿದು ಮುಂದೆ ಬರತೊಡಗಿವೆ.

ಅಲ್ಲಿ ಕಾಣುವುದು ಒಂದು ವಿಶಾಲವಾದ ನಾಡು. ಅದನ್ನು ಸುತ್ತಲೂ ನೋಡುತ್ತ ಇಬ್ಬರು ಹೆಂಗಳೆಯರು ಹೊರಟಿದ್ದಾರೆ. ಒಬ್ಬಳು ವಯಸ್ಸಿನ ಭಾರದಿಂದ ಹಣ್ಣಾಗಿರುವಳೇನೊ ಎಂಬಂತೆ-ಬಾಗಿದ ಹಾಗೆ—ಕಾಣುತ್ತಾಳೆ. ಮೋರೆಯನ್ನು ತುಸುವೇಳೆ ನೋಡಿದ ಕೂಡಲೆ ಕಾಣುವ ಹಣೆಯ ಮೇಲಿನ ಮೂರು ಗೆರೆಗಳು ಆ ಸಮಸ್ಯೆಯನ್ನು ಬಿಡಿಸುತ್ತವೆ. ನಡುವು ಬಾಗಿದುದು ವಯಸ್ಸಿನಿಂದಲ್ಲ; ಉಮ್ಮಳದಿಂದ. ಆದರೂ ಹರಯದ ಹುರುಪಿನಲ್ಲಿ, ತನ್ನ ಬಳಿಯಲ್ಲಿರುವ ಹೆಂಗುಸಿನ ಕೈಹಿಡಿದುಕೊಂಡು ಸಾಗಿದ್ದಾಳೆ. ಅರಿಯದ ಬಾಲಿಕೆಯಂತೆ ಕಾಣುವ ಆ ಹೆಂಗುಸಿಗೆ, ಬೆರಳು ಮಾಡಿ ತೋರಿಸುತ್ತಿದ್ದಾಳೆ, ಸುತ್ತಲಿನ ಪ್ರದೇಶವನ್ನು ಆ ಹಿರಿಯಳು. ಅಷ್ಟರಲ್ಲಿ ಯಾರೋ ಬಂದಂತೆ ಕಂಡ ಕೂಡಲೆ, ಅವರಿರ್ವರೂ ಒಮ್ಮೆಲೆ ತಡೆಯುತ್ತಾರೆ. ಅವರನ್ನು ನೋಡಲಿಕ್ಕೆಂದೇ ಬಂದಿರುವನಾತ—ಎಂಬಂತೆ ಕಂಡಕೂಡಲೆ, ಅವರು ತುಸು ಬದಿಗೆ ಸರಿದು, ಮರೆಯಾಗುವರು.

ನಿಜವಾಗಿಯೂ ಅದು ಇದ್ದುದು **ಗದುಗು** ಊರು. 'ಇಂತಹ ನಸುಕಿನಲ್ಲಿ ಎದ್ದು ಬಂದು ಈ ವ್ಯಕ್ತಿ ಏನು ಮಾಡಲು ಹೊರಟಿರುವ?' ಎಂಬ ಕುತೂಹಲದ ಕಣ್ಣಿಂದ ಅವರಿಬ್ಬರೂ ನೋಡುವಾಗ, ಅವರಿಗೆ ಒಬ್ಬ ಗಂಡುಸು ಗುಣುಗುಣು ಹಾಡುತ್ತ ಸಂದಿಗೊಂದಿ—ಓಣಿ ಬೀದಿ—ಎಂಬ ಪರಿವೆಯಿಲ್ಲದೆ ಹೊರಟಿದ್ದುದು ಗೊತ್ತಾಗುವುದು. ಆತ ಬಳಿಯಲ್ಲಿ ಬರುತ್ತಲೆ ಶ್ರೀ. ಹುಯಿಲಗೊಳ ನಾರಾಯಣರಾಯರಿವರು ಎಂಬುದು ತಿಳಿಯುವುದು. ನುಣುಪಾದ ಮುಖ. ತಿದ್ದಿ ತೀಡಿ ಉಟ್ಟುಕೊಂಡ ಧೋತರ. ಮೈಯಲ್ಲಿ ಒಂದು ಉದ್ದನೆಯ ಮೇಲಂಗಿಯನ್ನು ಹಾಕಿಕೊಂಡು, ಧೋತರವನ್ನು ನೀರಿಗೆಹಾಕಿ ಮಡಿಸಿ ಹೊತ್ತುಕೊಂಡಿದ್ದಾರೆ. ತಲೆಯ ಮೇಲೆ ಕನ್ನಡದ ಗುಡಿಯಂತೆ ಕಾಣುವ ಶುಭ್ರವಾದ ರುಮಾಲು. ಒಂದು ಕೈಯಲ್ಲಿ ಬಡಿಗೆಯನ್ನು ಹಿಡಿದುಕೊಂಡು, ಇನ್ನೊಂದ ಕೈಯಿಂದು ತಾಳ ಹಾಕುತ್ತಿರುವಂತೆ ಬೆರಳು ಬಡಿಯುತ್ತ

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು।
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು॥ ಪಲ್ಲ ॥"

ಎಂಬ ಹಾಡನ್ನು ನುಡಿಯುತ್ತ ನಡೆದಿರುವರು. ಹಾಗೆಯೆ ಹಾಡುತ್ತ ತಮ್ಮ ಹಾದಿಯಲ್ಲಿ ತಾವು ಹೊರಟ ಅವರನ್ನು ಕಂಡು, ಆ ಇಬ್ಬರು ಹೆಂಗುಸರು, ಆ ಊರಿಂದ ಮುಂದೆ ಸಾಗುವರು.

ಆದರೆ ಹೋದಲ್ಲೆಲ್ಲ ಆ ಹಾಡಿನ ನುಡಿಗಳೇ ಕೇಳಿಸುವುವು ಅವರಿಗೆ. ಅಷ್ಟರಲ್ಲಿ ಒಂದು ಊರು ಕಂಡಂತಾಗುವುದು. ಅವರು ಮೆಲ್ಲಗೆ ತಪಿಟು, ಊರ ಕೊನೆಯಲ್ಲಿರುವ ಒಂದು ಗುಡಿಸಿಲಿನಲ್ಲಿ ಹಣಿಯಿಕ್ಕುವರು. ಒಂದು ಕಡೆಗೆ, ತನ್ನ ಮೂರು ನಾಲ್ಕು ಮಕ್ಕಳನ್ನು, ಇದ್ದ ಒಂದು ಕಂಬಳಿಯಲ್ಲಿ ಅರ್ಧ ಹಾಸಿ—ಉಳಿದರ್ಧವನ್ನು ಹೊಚ್ಚಿ ಮಲಗಿಸಿರುವಳು—ಆ ಮನೆಯೊಡತಿ. ಅಂತಹ ಬೆಳಗಿನಲ್ಲಿ ಹಿಟ್ಟು ಬೀಸುವ ದಣಿವನ್ನು ಮರೆಯಲೆಂದು ಕಲ್ಲಿನ ಸಪ್ಪುಳದಲ್ಲಿ ತನ್ನ ಹಾಡನ್ನು ತೇಲಬಿಡುತ್ತಿದ್ದಾಳೆ. "ಇದು ನೋಡು, ಇಲ್ಲಿ ಎಲ್ಲೆಲ್ಲಿಯೂ ಕಾಣುವ ಸಾಮಾನ್ಯ ದೃಶ್ಯ!" ಎಂದು ಆ ಹಿರಿಯಳು, ತನ್ನ ಬದಿಯಲ್ಲಿರುವವಳಿಗೆ ತೋರಿಸುವಳು. ಹಾಗೆಯೆ ಕಿವಿಗೊಟ್ಟು ನಿಲ್ಲುತ್ತಾರೆ. ಮೆಲ್ಲಗೆ ಅವರಿಗೆ ಆ ಮನೆಯೊಡತಿಯ ಹಾಡು ಕೇಳಬರಲು ತೊಡಗುವುದು:

ನಿದ್ದೆಗಣ್ಣಿನ ಕಂದ, ಸದ್ದು ನೋಡಿದು! ಜನಕ
ಎದ್ದು ತೋರಿಸು ನಿನ್ನ ಬೆಳಕ! ಸುಮ್ಯಾಕ—
ಇದ್ದು ಹುರುಳಿಲ್ಲ ಇನ್ನಮ್ಯಾಕ ||"

ಹಿರಿಯಳು ಹೊರಳಿ ನೋಡುತ್ತಾಳೆ, ಕಿರಿಯಳು ನಸುವೆ ನಗುತ್ತಾಳೆ.

" ಆಡುವಾ ಮಗು ಚೆಂದ, ಮೂಡುವಾ ರವಿ ಚೆಂದ
ಹಾಡುವಾ ಸತಿಯು ಬಲು ಚೆಂದ | ಇರುವೆಲ್ಲಾ,
ನಾಡುಗಳಿಗೇ ಚೆಂದ ಕನ್ನಾಡು || "

ಎನ್ನುತ್ತ ಮೆಲ್ಲಗೆ ಆಕೆಯು ತನ್ನ ಮಕ್ಕಳ ಕಡೆಗೆ ತನ್ನ ನೋಟವನ್ನು ಬೀರುತ್ತಾಳೆ.

"ಇನ್ನೂ ಮುಂದೆ ನಡೆ" ಎಂಬಂತೆ ಆ ಹಿರಿಯಳು ಬಳಿಯಲ್ಲಿರುವವಳಿಗೆ ಕೈಮಾಡಿ, ತಾನು ಮುಂದೆ ಸಾಗುವಳು. ನಡೆನಡೆಯುತ್ತಲೆ ಆ ಕಿರಿಯಳು ನೋಟವನ್ನು ಬೀರಿ, ಏನನೊ ಕಂಡವಳಾಗಿ ತವಕಗೊಳ್ಳುತ್ತಾಳೆ. ಇತ್ತ ದಿಬ್ಬ, ಅತ್ತ ಕೆರೆ; ಇತ್ತಣ ದಿನ್ನೆಯ ಮೇಲೆ ಕೆಂಪು ಹಂಚಿನ ಸೌಧಗಳು ಮೆರೆಯುತ್ತಿದ್ದರೆ, ಅತ್ತಣ ಕೆರೆಯ ಬದಿಯ ಬೀದಿಯಲ್ಲಿ—ಅಲ್ಲಿ ಒಂದು ಇಲ್ಲಿ ಒಂದು—ಗುಡಿಸಿಲಿನಂತೆ ಕಾಣುವ ಆಶ್ರಮಗಳು ಕಂಗೊಳಿಸುತ್ತವೆ. ತೀರ ಬಳಿಯಲ್ಲಿಯೆ ಒಂದು ನೋಡುತ್ತಾರೆ—ಇತ್ತ ಹಿತ್ತಲಿನ ಬಾಗಿಲು ತೆರೆದಿದ್ದು, ಮುಂದಿನ ಬಾಗಿಲು ಇನ್ನೂ ಮುಚ್ಚಿರುತ್ತವೆ ಕೆಲವು ಮನೆಗಳಲ್ಲಿ. ಅತ್ತ ಯಾವ ಬಾಗಿಲುಗಳು ತೆರೆದಿರದಿದ್ದರೂ, ಮನೆಗಳ ಮೂಲೆಗಳಲ್ಲಿರುವ ಕೋಣೆಗಳಲ್ಲಿ ಇನ್ನೂ ದೀಪಗಳು ಉರಿಯುತ್ತಿರುವುದು ಅವರಿಗೆ ಕಿಟಕಿಗಳೊಳಗಿಂದ ಗೊತ್ತಾಗುತ್ತದೆ. ಆಗ ಏನೋ ಸಂದೇಹವೆನಿಸಿದಂತಾಗಿ, ಆ ಚಿಕ್ಕವಳು ತನ್ನ ಜೊತೆಗಾತಿಯನ್ನು ಕೇಳುತ್ತಾಳೆ: "ಈ ಊರು ಮುದುಕರದು ಮತ್ತು ವಿದ್ಯಾರ್ಥಿಗಳದು ಎಂಬಂತೆ ಕಾಣುತ್ತದೆ....!" "ಹೌದು ಅಂತೆಯೇ ಇಲ್ಲಿ ನಮ್ಮ ಸಂಸ್ಕೃತಿಯ ಸಾಕ್ಷಾತ್ಕಾರವೂ, ಹೊಸ ವಿಚಾರಗಳ ಉಗಮವೂ ಆಗುತ್ತವೆ.... ಇದೇ ಆ ಊರು **ಧಾರವಾಡ**!" ಎಂದು ಆಕೆಯು ಮುಗುಳುನಗೆಯನ್ನು ಬೀರುತ್ತಾಳೆ. ಅಷ್ಟರಲ್ಲಿ ಅವರು—ಊರೊಳಗಿಂದ ಯಾವುದೋ ಒಂದು ಗಡುಚಾಗಿದ್ದರೂ ಸ್ಪಷ್ಟವಾಗಿ ಕೇಳಿಸುವ—ಹಾಡು ಇದಾರದು ಎಂಬಂತೆ ಕೌತುಕದ ಭಾವವನ್ನು ತಾಳುತ್ತಾರೆ. ಮುಂದೆಯೆ ಒಂದು ವ್ಯಕ್ತಿಯು ಅವರಿಗೆ ಕಾಣುತ್ತದೆ. ಗಿಡ್ಡ ಆಳು; ಜಡವಾದ ದೇಹದಂತೆ ಕಂಡರೂ ಅದರಲ್ಲಿ ಸಾಕಷ್ಟು ಚಾಪಲ್ಯವಿತ್ತು. ತಲೆಗೆ ಹೇಗೊ ದುಂಡುಸುತ್ತಿದ್ದ ಒಂದು ರುಮಾಲು. ಮೈಯಲ್ಲಿ ದಪ್ಪ ಬಟ್ಟೆಯ ಜಗಲುಬಂಡಿ. ಉಟ್ಟುದು ಒಂದು ದಡಿಯಂಚಿನ ದೋತರ; ಆದರೆ ಇವೆಲ್ಲವುಗಳಿಗಿಂತ ಆ ವ್ಯಕ್ತಿಯ ನಿಶ್ಚಿತ ಗುರುತು ಎಂದರೆ ಒಂದು: ಹಣೆಯ ಮೇಲಿನ ಧಾಳಾಗಿ ಕಾಣುವ ಅಕ್ಷತಿ. ಇನ್ನೊಂದು, ತಂಬೂರಿಯನ್ನೇ ಹಿಡಿದಿರುವರೇನೋ ಎಂಬಂತೆ ಹಿಡಿದಿರುವ ಒಂದು ದೊಣ್ಣೆ. ಹಾಡುತ್ತ ಹಾಡುತ್ತ ಸೂಸುಗಾಳಿಯ ಆ ನಸುಕಿನಲ್ಲಿ ದಾರಿಗುಂಟ ನಡೆದಿದೆ ಆ ವ್ಯಕ್ತಿ. "ನೋಡಿದೆಯಾ? ಅವರೇ ನೋಡು **ಶಾಂತಕವಿಗಳು**; ಕೇಳು ಅವರ ಗೀತವನ್ನು!" ಎಂದು ಆಕೆಯು ತನ್ನ ಕಿರಿಯಳನ್ನು ಬದಿಗೆ ಸರಿಸಿ ಹಿಡಿದುಕೊಂಡು ಓರೆಯಾಗಿ ಸರಿದಳು. ದೊಡ್ಡ ದನಿಯಲ್ಲಿ ಕೇಳಿಸಿತು ಅವರಿಗೆ ಈ ಹಾಡು:

" ರಕ್ಷಿಸು ಕರ್ನಾಟಕ ದೇವೀ—ಸಂ
ರಕ್ಷಿಸು ಕರ್ನಾಟಕ ದೇವೀ " || ಪಲ್ಲ ||

'ನೋಡಿದೆಯಾ, ಆತನ ನಮ್ರತೆಯನ್ನು! 'ರಕ್ಷಿಸು ದೇವೀ' ಎಂದು ಹಾಡುತ್ತಿದ್ದರೂ, ತಾನೇ ಇಲ್ಲಿ ಸುಳಿಯುತ್ತ ಆ ಕೆಲಸವನ್ನು ಮಾಡುತ್ತಿರುವ....ಹಃ ಹಃ' ಎಂದು ಆ ಕಿರಿಯಳನ್ನುದ್ದೇಶಿಸಿ, ದೊಡ್ಡಾಕೆಯು ಮೆಲ್ಲಗೆ ಮುಂದಡಿಯಿಡುವಳು.

ಆಗ ಅಲ್ಲಿ ಒಂದು ಚಿಕ್ಕದಾದ ಊರು ಕಾಣಿಸುವುದು. ಚಿಕ್ಕದಾದರೂ ಚೊಕ್ಕಟವಾಗಿದೆ— ಆ ಊರು. ದೊಡ್ಡ ದೊಡ್ಡ ಬೀದಿಗಳು, ಚಂದನ್ನ ಪೇಟೆ, ಹಿರಿಯ ಬೀದಿಯಲ್ಲಿ ಒಂದು ಗುಡಿ ಇವುಗಳಿಂದೊಡಗೂಡಿದೆ. ಅಷ್ಟರಲ್ಲಿ, ಅತ್ತ ಆ ಗುಡಿಯ ಸುತ್ತಲೂ, ನಸುಕಿನ ಆ ಹೊತ್ತಿನಲ್ಲಿ, ಯಾರೋ ಸಣ್ಣಗೆ ಉದಯ ರಾಗವನ್ನು ಸುರಿಯುತ್ತ ಪ್ರದಕ್ಷಿಣೆಯನ್ನು ಹಾಕುವಂತೆ ಅವರಿಗೆ ಕಾಣುತ್ತದೆ. 'ನೋಡಿದೆಯಾ, ಇದು ಈ ಜನರ ಸಾಮಾನ್ಯ ರೀತಿ!' ಎಂದು ಅವಳು ಬೆರಳುಮಾಡಿ ತೋರಿಸಿ, ನಸುವೆ ಅತ್ತ ಸರಿಯುವಳು. ಅವರಿಗೆ ದನಿಯು ದೊಡ್ಡದಾಗಿ ಕೇಳಿಸುವುದು; ಕೂಡಲೆ ಆ ವ್ಯಕ್ತಿಯೂ ಕಣ್ಣಿಗೆ ಬೀಳುವುದು. ಉಟ್ಟದ್ದು ಒಂದು ದೋತರ; ಹೊತ್ತುದು ಒಂದು ದೋತರ. ಕೈಯಲ್ಲಿ ಒಂದು ಥಾಲಿಯನ್ನು ಹಿಡಿದುಕೊಂಡು, ಅದಕ್ಕೆ ಬಲಗೈಯಿಂದ ತಾಳಹಾಕುತ್ತ ಆತ ಬರುವ:

" ನಸುಕು ಹರಿಯಿತು ಇಂದು ಎನ್ನ ಬಗೆಯೊಳಗೆ;
ಪುಸಿಯಾದ ದಡ್ಡತನದಿರುಳು ನೆರೆಹರಿದು— || ಪಲ್ಲ ||
ಅಂದು 'ರಾಮಾ' ಎಂದು ಕೂಗಿಕೂಗಿದೆ ನಾನು,
ಮುಂದೆ ಬಂದವನೆನ್ನ ಕೈಹಿಡಿಯ ಬಹುದೆ?
ತಂದೆ ಮುದುಕನ ಮಾತ ಮರುಳು ಜನಗಳ ಮಾತ
ಚೆಂದ ಮನದಿಂ ಕೇಳುತಿಹ 'ರಾಜ'ನವನು || ೧ ||
ಹಿಂದೆ 'ಕೃಷ್ಣಾ' ಎಂದು ಹಲುಬಿಯೇ ಹಲುಬಿದೆನು;
ನಿಂದೆ-ವಂದನೆಗಳು ಕೇಳನವನು.
ಒಂದು ಸಲ 'ಹರಿ' ಎಂದು ನಮಿಸಿ ನೋಡಿದೆ ನಾನು;
ಮಿಂದ ಪಾಲ್ಗಡಲ ಸಂಸಾರಿಯವನು || ೨ ||
ಇಂದು 'ಶಿವಶಿವ' ಎಂಬ ಬಡಬಡಿಕೆ ನಡೆದಿತ್ತು,
ಮುಂದಿಗವ ಮಸಣದಲಿ ಕಾಣುವವನು!
ಎಂದಿಗೂ ಅನ್ನ-ನೀರ್-ಬೆಳಕೊಲವ ನೀಡುತಿಹ
ಚೆಂದ ತಾಯ್ನಾಡ ನಾನ್ ಭಜಿಸ ಬೆಳಕೊಡೆದು— || ೩ ||

ಆಗ ಅವರಿಬ್ಬರೂ ಅಲ್ಲಿಂದ ಕಾಣದಂತಾಗಿ ಮತ್ತೊಂದೆಡೆಗೆ ಗೋಚರಿಸುವರು. "ಇದು-ಇದು ನೋಡು! ಯಾರ ಪಾಲಿಗೂ ಇಲ್ಲದ ವೈಭವ! ನಮ್ಮವರಿಂದ ಕಟ್ಟಿಸಿದರು, ಆದರೆ ಅತ್ತ ತಾವೂ ಇರಲಿಲ್ಲ; ನಮ್ಮವರಿಗೂ ಇರಗೊಡಲಿಲ್ಲ. ಈಗ ಇದೊಂದು ಹಾಳು ಪಟ್ಟಣ!" ಎನ್ನುತ್ತ ಅವರು ಆ ಊರ ನಡುವೆ ಬರುವರು. ಅರೆಮುರಿದ ಎಷ್ಟೋ ಮಂಟಪಗಳು; ಅಲ್ಲಲ್ಲಿ ಕಾಣುವ ಅನೇಕ ಗುಮುಟಗಳು; ಎಲ್ಲಿಂದಲೂ ಕಣ್ಣಿಗೆ ಬೀಳುವ ಒಂದು ದೊಡ್ಡ ಗೋಲಗುಮುಟ— ಇವುಗಳಿಂದ ಆ ಚಿಕ್ಕವಳಿಗೆ ಗುರುತು ಹತ್ತಿತೇನೋ ಎಂದೆನಿಸಿ 'ಇದು ವಿಜಯಪುರ' ಎನ್ನುವಳು. "ಹೌದು ವಿಜಯಪುರ! ಆದರೆ ಯಾರ ವಿಜಯ? ಕಾಲನದು—ಅಲ್ಲವೆ? ಆದರೂ ಇಲ್ಲಿ ಒಬ್ಬರಿದ್ದಾರೆ. ಅವರು ಪುಟ್ಟಗೆ ಕಂಡರೂ ಧಿಟ್ಟ ಕವಿಗಳಾಗಿದ್ದಾರೆ. ಅಕೋ—ಅವರೇ ಬಂದು ಬಿಟ್ಟರು ನೋಡು" ಎಂದು ಜೊತೆಯವಳನ್ನು ಆಚೆಗೆ ಎಳೆಯುವಳು. ಮೈತುಂಬ ಖಾದಿಯ ಧೋತರ-ಅಂಗಿಗಳನ್ನು ಧರಿಸಿ, ಒಂದು ಜಾಕೀಟನ್ನು ಮೇಲೆ ತೊಟ್ಟುಕೊಂಡು, ಕೈಯಲ್ಲಿ ಒಂದು ಬಡಿಗೆ ಸಹಿತವಾದ ಆ ವ್ಯಕ್ತಿಯು ಅವರಿಗೆ ಅತ್ತ ಕಾಣಿಸುವುದು. ಇತ್ತ ಅವರ ಕವಿತೆಯೂ ಕೇಳಿಸುವುದು:

"ಅವಿನದು ನೊರೆಹಾಲನೊಲ್ಲೆನು,
ದೇವಲೋಕದ ಸುಧೆಯನೊಲ್ಲೆನು,
ಪಾವನೆಯೆ ನಿನ್ನಂಘ್ರಿಕಮಲದ ರುಚಿಯನರಿತಿಹೆನು!"

ಹಾಗೆಯೆ ಹಾಡುತ್ತ ಆ ವ್ಯಕ್ತಿ ತನ್ನಷ್ಟಕ್ಕೆ ಮುಂದೆ ನಡೆಯುವುದು. 'ನಡೆ ಇತ್ತಕಡೆಗೆ' ಎಂದು ತನ್ನ ಒಡನಾಡಿಯನ್ನು ದೂಡಿಕೊಂಡು ಆ ಹಿರಿಯಾಕೆ ಸಾಗುವಳು.

ಅವರು ಬಂದುದು ಒಂದು ಚಿಕ್ಕ ಹಳ್ಳಿ. ಅಲ್ಲಿ ತಗ್ಗು-ದಿನ್ನೆಗಳಿವೆ; ಸಂದಿ-ಗೊಂದಿಗಳಿವೆ. ಊರನ್ನು ಸೇರುತ್ತಲೆ ಅವರಿಗೆ ಒಂದು ಹನುಮಪ್ಪನ ಗುಡಿಯೂ, ಅದರ ಬಳಿಯಲ್ಲಿಯೆ ಒಂದು ಗರಡಿಯ ಮನೆಯೂ ಸಿಕ್ಕುವುವು. ಮುಂದೆ ಬರುತ್ತ ಅವರು ಒತ್ತಟ್ಟಿಗೆ ಚಕ್ಕಡಿಯೊಂದನ್ನು ಬಿಟ್ಟುದನ್ನೂ ಇನ್ನೊತ್ತಟ್ಟಿಗೆ ದನಗಳನ್ನು ಕಟ್ಟಿದುದನ್ನೂ ಕಾಣುವರು. ಎತ್ತ ನೋಡಿದರೂ ಮಣ್ಣಿನ ಗೋಡೆಗಳು; ಚಪ್ಪರದ ಮನೆಗಳು. ಎದುರಿನಿಂದ ಯಾರೋ ಒಬ್ಬರು ಬಂದ ಉಲುಹು ಆದಕಾರಣ, ಅವರಿರ್ವರೂ ಒಂದು ಮನೆಯ ಮರೆಗೆ ನಿಲ್ಲುವರು. ಆತ ಒಬ್ಬ ಬಾಲಬಸವ. ತನ್ನ ಕೇವೆಯ ಬಣ್ಣದ ಉಡುಪಿನೊಂದಿಗೆ ನುಡಿಯನ್ನು ಹೇಳುತ್ತ ಹೊರಟಿರುವ. ನಾವೂ ಆತನನ್ನು ಕೇಳಬಾರದೇಕೆ?

ಬಾಲಬಸವಾ ನುಡೀತಾನ, ಇಂದು ಹೇಳಿದ್ದು ಎಂದೂ ಖರೇ,!
ಕಾಲ ಬರತಾವ ಇನ್ನವ್ಯಾಗ ಭ್ಯಾಳ ಚೆಲೋ! || ಪಲ್ಲ ||

ಜೋಲೀ ಹೊಡೆಯುವ ಶೆಟ್ಟಿಗಳಿಗೆ—ಸಾಲ ತೀರುವ ಸಂಧಿಯಿದು!
ಮಾಲ ಮಾರಿ ಕೆಟ್ಟೀ ಹೊಟ್ಟೀ ಬೆಳೆಯುವಂಥಾ—
ಕಾಲ ಬರತಾವ ಇನ್ನವ್ಯಾಗ ಭಾಳ ಚೆಲೋ! || ೧ ||

ಹಾಲು ಸಕ್ಕರಿ ಬೆರಸಿ ಅರ್ಧ—ಹಾಲುವಾಡಿ ಕುಡಿದೂ ನಲಿದೂ
ಕೋಲು ಹಿಡಿದೂ ತಿರುಗುವಂಥಾ ಗಂಡು-ಹೆಣ್ಣ ನವ್ರೂ—
ಕಾಲ || ೨ ||

ಇಬ್ಬರಿಗೂ ನಗೆಯು ತಡೆಯದಂತಾಗುವುದು. ಹೊಟ್ಟೆತುಂಬ ನಕ್ಕು ಅಲ್ಲಿಂದ ಕಾಲ್ದೆಗೆಯುವರು. 'ಈಗ ನಾನು ನಿನ್ನನ್ನು ಇನ್ನೊಂದು ಕಡೆಗೆ ಕರೆದೊಯ್ಯುವೆ— ಬೆಂಗಳೂರಿಗೆ! ನೋಡುವೆಯಂತೆ ಅಲ್ಲಿಯ ಬೆಡಗನ್ನು!' ಎನ್ನುತ್ತ ಅವಳೊಡನೆ ಹೆಜ್ಜೆಯನ್ನಿಡುವಳು. 'ಅಕೋ! ಎಷ್ಟು ವಿಶಾಲವಿದೆ ನೋಡು ಆ ಹೊಳಲು! ಅಲ್ಲಿಯ ಜನರ ಅಚ್ಚುಕಟ್ಟುತನ ನೋಡು! ಅದೇ ನಮ್ಮ ಪರಿಷನ್ಮಂದಿರ! ಓಹೋ! ಅಲ್ಲಿ ಇಂದು ಏನೋ ಸಮಾರಂಭ ನೆರೆದಂತೆ ಕಾಣುತ್ತಿದೆ. ಆ ಮುದುಕನನ್ನು ನೋಡು, ಹೇಗೆ ಹುರುಪಿನಿಂದ ಪುಟಿಯುತ್ತಾನೆ! ನೋಡಿದೆಯಾ, ಆತನ ಬಟ್ಟೆಗಳಂತೆಯೆ ತಿದ್ದಿತೀಡಿದ ಮೈ. ರೇಶಿಮೆಯ ಕೋಟು. ತಲೆಯ ಮೇಲೆ ಜರತಾರಿ ಕಟ್ಟಿರುಮಾಲು. ಕೂದಲು ಬೆಳ್ಳಗಾಗಿದ್ದರೂ ಅದು ನೋಡು, ಎಷ್ಟು ಉತ್ಸಾಹದಿಂದ ಆ ಬಾವುಟವನ್ನು ಏರಿಸಹತ್ತಿದ್ದಾನೆ! ಕೇಳು ಅವರ ಗೀತವನ್ನು! ಅವರೇ ಶ್ರೀ. ಬಿ. ಎಂ. ಶ್ರೀ. ಅವರು."

"ಏರಿಸಿ ಹಾರಿಸಿ ಕನ್ನಡದ ಬಾವುಟ.
ಓಹೊ ಕನ್ನಡನಾಡು; ಆಹಾ ಕನ್ನಡನುಡಿ!"

ಅಲ್ಲಿ ನೆರೆದವರೆಲ್ಲರಿಗೂ ಆ ಗೀತವು ಮುಗಿಲನ್ನು ಸೀಳಿ ಒಳಗೆ ಹೊಕ್ಕಿತೇನೊ— ಎಂಬಂತೆ ಆಗ ಎನಿಸುವುದು. ಅತ್ತಿತ್ತ ನೋಡಲಾಗಿ ಅವರಿಬ್ಬರೂ ಅಲ್ಲಿಂದ ಮೆಲ್ಲಗೆ ಸರಿದಿದ್ದರು.

ಅಲೆಯುತ್ತ ಅಲೆಯುತ್ತ ಅವರು ಒಂದು ಪುರಕ್ಕೆ ಬಂದರು. 'ಇಲ್ಲಿ ನಿನಗೆ ಇನ್ನೊಂದು ದೃಶ್ಯವನ್ನು ತೋರಿಸುವೆ' ಎಂದು ಆ ಹಿರಿಯಳು ಕಿರಿಯಳಿಗೆ ಎದುರು ಬರುವವನನ್ನು ತೋರಿಸುವಳು. ಆತ ಒಬ್ಬ ಗಿಡ್ಡ, ಕಪ್ಪನ್ನ ಆಳು. ಮೊಣಕಾಲ ವರೆಗೆ ಮಾತ್ರ ದಪ್ಪಗಾದ ಅಗಲಂಚಿನ ದೋತರವನ್ನು ಉಟ್ಟು, ಮೈಯಲ್ಲಿ ಒಂದು ಭಾರವೆನಿಸುವಂತಹ ಅರೆದೋಳಿನ ಅಂಗಿಯನ್ನು ತೊಟ್ಟಿದ್ದಾನೆ. ತಲೆಗೆ ಶೋಭಿಸುವುದು ಒಂದು ಮಸಕಾದ ಟೊಪ್ಪಿಗೆ. 'ಆತನೇ ನೋಡು ಇಲ್ಲಿಯ ವ್ಯಾಪಾರಿ!' ಎಂಬುದು ಆತನಿಗೆ ಕೇಳಿಸಿತೇನೊ ಎಂಬಂತೆ, ಆತ ಒಮ್ಮೆ ಹಿಂದೆ ಹೊರಳಿ ನೋಡುವ. ಆದರೂ ಚಟದ ಪ್ರಭಾವದಿಂದ ತನ್ನ ಬಲದ ಕಿಸೆಯಲ್ಲಿ ಹಾಕಿದ ಕೈಯಿಂದಲೆ ತಾಳಹಾಕುತ್ತ, ಆತನು ಹಾಡುತ್ತ ಹೊರಟಿರುವ:

"ಕನ್ನಡನಾಡಿದು ಚೆಲುವು! ಚೆನ್ನುಚೆನ್ನಾದ ಒಡವೆಯ ನಿಧಿಯು!
ಸಣ್ಣ ದೊಡ್ಡವರಿಗೂ ಮೆಚ್ಚಿಕೆಯಾಗುವ ರನ್ನ-ಚಿನ್ನಗಳೆಲ್ಲ
ಹೊತೆಯುವ ಸ್ಥಲವು ||"

ಚಿಕ್ಕವಳ ಮೋರೆಯ ಮೇಲೆ ಎಳನಗುವು ಕಾಣುವುದು; ಹಿರಿಯಳು 'ಇನ್ನೂ ಕೇಳು!' ಎನ್ನುವಳು.

ಕೊಡಲಾರದ ಕೈಯಿ ಕಿರಿದು | ಬೇಡಲಾರದ ಬಾಯಿ ಹಿರಿದು !
ಎಡೆಬಿಡದೆ ದುಡಿಯುವ ಒಡಲು | ಪಡೆಯುವುದು ಬೇಡಿದ
ಒಡವೆಗಳನು ! || ೨ ||

"ಆಯಿತೇ ಈಗ ಮನಸಿನಂತೆ! ಆದರೆ ಆತನು ಮಾತ್ರ ಹಾಗೆಯೆ ಕೊಡುವ—ಎಂದು ತಿಳಿಯಬೇಡ, ಆಂ!" ಎಂದು ಎಚ್ಚರಿಸುವಳು. ಆತನು ತನ್ನ ಕಿಸೆಯೊಳಗಿನ ಹಣದ ಸಪ್ಪುಳವನ್ನು ತನ್ನಷ್ಟಕ್ಕೆ ತಾನೇ ಕೇಳುತ್ತ ಮುಂದೆ ಸಾಗುವನು.

ಈಗ ನಿನ್ನನ್ನು ನಾನು **ಬೆಳಗಾಂವಿಗೆ** ಕರೆದೊಯ್ಯುವೆ. ಅದು ಕನ್ನಡದ ದೊಡ್ಡ ಕೋಟೆ. ಅದು ನೋಡು—ಕನ್ನಡದ ಗುಡಿಯನ್ನು ಎತ್ತಿ ಹಿಡಿದುಕೊಂಡು, ಚುರುಕಿನಿಂದ ಗುಡಿಯನ್ನು ಕಾಯುತ್ತಿರುವ ಆ 'ಕನ್ನಡಸೈನಿಕ' **ಶ್ರೀ. ಬೆಟಗೇರಿ ಕೃಷ್ಣಶರ್ಮರು.** ಈಗ ಅವರ ಬಾಯಿಂದ ಕೇಳಿಸುವುದು, ಅವರು ನಿನಗಾಗಿ ನೀಡುತ್ತಿರುವ ಧನ್ಯತೆಯ ಒಂದು ಇಂಚರ :

" ನಾನಿದನೆ ಹಾಡುವೆನು ಕಿವಿ ,
ನನ್ನದು ಈ ಕನ್ನಡನಾಡು ! "

ಆ ಹಾಡನ್ನು ಕೇಳಿ ಆ ಕಿರಿಯಾಕೆ ನಸುನಗುವಳು. ಹಿರಿಯಾಕೆಯು ಅದನ್ನು ಕಂಡು—" ಹೀಗೆ ಅವರು ಕಂಡನಂತೆ ಆನಂದವನ್ನು ಬೀರುವರೆಂತೆಯೆ ಕನ್ನಡಿಗರು ಅವರನ್ನು 'ಆನಂದಕಂದ' ಎಂದು ಸಂಬೋಧಿಸುವರು." ಎಂದು ಆಕೆಯ ಕೈಯನ್ನು ಹಿಡಿದುಕೊಂಡು ಆಚೆಗೆ ಸರಿಯುವಳು; " ಇತ್ತ ಬಾ—ನಿನಗೆ ಇನ್ನೊಂದು ಮೋಜನ್ನು ತೋರಿಸುವೆ " ಎಂದು ತಡೆಯುವಳು. ಒಂದು ವ್ಯಕ್ತಿ! ಮೈಯಲ್ಲಿ ಅಂಗಿ-ಕೋಟುಗಳನ್ನು ತೊಟ್ಟಿದ್ದರೂ, ಬಲಹೆಗಲ ಮೇಲಿನ ಸೀರೆಯ ತುಣುಕುಗಳು, ಎಡಹೆಗಲ ಮೇಲಿನ ದೋತರದ ತುಂಡುಗಳು ಇವುಗಳ ಮೂಲಕ, ಆ ವ್ಯಕ್ತಿಯು ಅಂಗಿಗಳನ್ನಾದರೂ ತೊಟ್ಟಿರುವುದೊ ಇಲ್ಲವೊ ತಿಳಿಯುವುದಿಲ್ಲ. ಅದಲ್ಲದೆ ಆ ವ್ಯಕ್ತಿಯು ತಲೆಗೆ ಚಾದರವನ್ನು ಸುತ್ತಿಕೊಂಡು ಚೆಲ್ಲಣವನ್ನು ಧರಿಸಿರುವುದರಿಂದ, ಆತ ಯಾರು ಎಂಬುದು ತಿಳಿಯುವುದಿಲ್ಲ. ಅಂತೆಯೆ ಆತನು ಬುಡುಬುಡಿಕ ಎಂಬುದು ತಿಳಿಯುವುದು. ತನ್ನ ಮುಖಮಂಡಲದ ವಾಡಿಕೆಯ ವಿಭೂಷಣಗಳಿಂದಲಂಕೃತನಾಗಿ, ಕೈಯಲ್ಲಿಯ ತನ್ನ ವಾದ್ಯವನ್ನು ಬಾರಿಸುತ್ತ, ಅದರೊಂದಿಗೆ ತನ್ನ 'ಉಕ್ತಿ'ಗಳನ್ನು ಸಹ ಉಸುರುತ್ತ ಪ್ರವೇಶಿಸುವನು. ಹೊತ್ತು ಇನ್ನೂ ಬೆಳಗಿನದಿದ್ದ ಮೂಲಕ, ಊರ ಹುಡುಗರೆಲ್ಲ ಅವನ ಸುತ್ತಲೂ ನೆರೆಯುವುದಿಲ್ಲ. ಅಂತೆಯೆ ಆಗ ಅವನ ಸಂಗೀತವೂ ಸುಶ್ರಾವ್ಯ ಎನಿಸುವುದು :

" ಜಯವಾಗತೈತಿ, ಜಯವಾಗತೈತಿ!
ಭಯವಿಲ್ಲ ನಮಗಿನ್ನು ಕೇಳರಣ್ಣ....!
ಬುಡುಬುಡುಬುಡು ಬುಡುಕ್ || ಪಲ್ಲ ||
ತಾಯಿಯಾ ಮನೆಗಿನ್ನು ತಪ್ಪದೇ ಬರತೀವಿ........ಬುಡುಕ್
ನಾಯಿ ತಿರುಗೀದ್ಹಾಂಗ ತಿರುಗಿಯೇ ತಿರುಗೀದೆ
ಬಾಯಿ ತೆರೆದರೂ ಕೂಡ ಯಾರು ನೀಡಲೇ ಇಲ್ಲ.......ಬುಡುಕ್
ಮಾಯಿಯಮ್ಮೋರೀಗ ಮೂಲೋಕದೊಳಗಿಲ್ಲ,
ಸಾಯಬಾರದು ಎಂದು ತಾಯೀಯ ಬಳಬಂದೆ.......ಬುಡುಕ್
ಬಯ್ದು ಬಡಿಯೋದಕ್ಕೆಲ್ಲ ಹೆರವರೆಲ್ಲರು ಬೇಕು,
ಸುಯಿಲ್ಬಿಡದು ಬಗುಕೋಕೆ ತಾಯಿಯೊಬ್ಬಳೆ ಸಾಕು...ಬುಡುಕ್"

" ಎಷ್ಟು ಅವನ ಹುರುಪು! " ಎಂದು ಚಿಕ್ಕವಳು ತವಕಗೊಳ್ಳುವಳು. ಅದನ್ನು ಆಕೆಯ ಜೊತೆಯವಳು ಲೆಕ್ಕಿಸದಂತೆ ಮಾಡಿ, ಆಕೆಯನ್ನು ಕೂಡಿಕೊಂಡು ಮುಂದೆ ನಡೆಯುವಳು.

" ಇದು ಕಲಬುರ್ಗಿ. ಮೊದಲು ಕೇವಲ ಹೆಸರಿನ ಚೆಲುವನ್ನು ನೋಡು! ಅದರಿಂದ ಇಲ್ಲಿಯ ಜನರು ಎಂತಹ ಕಲಾಪ್ರಿಯರೂ, ಕರ್ತೃತ್ವಶಾಲಿಗಳೂ ಇರಬಹುದು ಎಂಬ ಕಲ್ಪನೆಯು ನಿನಗೆ ಬರುವುದು. ದೂರದ ಭಾಗದಲ್ಲಿ ಈ ಊರು ಇದ್ದಂತೆ ಕಂಡರೂ ಅದು ಕಾಲಿಗೆ, ಕಣ್ಣಿಗಲ್ಲ; ಕರುಳಿಗಲ್ಲ! ಅಂತೆಯೆ ಇಲ್ಲಿ ಕನ್ನಡದ ಕೂಗು ಮೊದಲಿನಿಂದಲೂ ಕೇಳಬರುವುದು. "

" ಈಗ ನಾವು ಹೋಗುವುದು ಒಬ್ಬ ಉತ್ಸಾಹಿಯಾದ ಗೃಹಸ್ಥನನ್ನು ನೋಡಲಿಕ್ಕೆ. ಅವನ ಹೆಸರು—**ಬೆನಗಲ್ಲ ರಾಮರಾಯರು** ಎಂದು. ಕನ್ನಡದ ನೀರನ್ನೆ ಕುಡಿದು, ಕನ್ನಡದ ಅನ್ನದಿಂದಲೇ ಬೆಳೆದು ಕನ್ನಡವನ್ನೇ ಉಸಿರಾಡಿಸುವ ವ್ಯಕ್ತಿ ಅದು. ಯಾವಾಗಲೂ ಕನ್ನಡದ ಭಜನೆಯಲ್ಲಿಯೆ ಮುಗ್ನನಾಗಿರುವ ಮಹಾರಾಯನಾತ. ಇಲ್ಲಿಂದಲೇ ಅವರ ಒಂದು ಭಜನೆಯು ಕೇಳಹತ್ತಿತು ನೋಡು !"

' ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ,
ಕನ್ನಡವೆ ಎನ್ನುಸಿರು ಹೆತ್ತನ್ನತಾಯಿ ! '

ಅಲ್ಲಿಂದ ಅವರಿರ್ವರೂ ಹಾಗೆಯೆ ಮುಂದೆ ಸಾಗುವರು. ಹಿರಿಯಾಕೆಗೆ ' ಇನ್ನೆತ್ತ ಹೋಗಬೇಕು ? ' ಎಂಬ ಯೋಚನೆಯಾದಂತೆ ಕಾಣುತ್ತದೆ. ಚಿಕ್ಕವಳು ಮಾತ್ರ ಆ ನಸುಕಿನ ಹೊತ್ತಿನಲ್ಲಿ ಕಂಡ ಚಿತ್ರಗಳ ಗುಂಗಿನಲ್ಲಿ ಒಂದಾಗಿದ್ದಾಳೆ. ಅಷ್ಟಕ್ಕೆ ಅವರ ಹಿದಿನಿಂದ ಗಂಟೆಗಳ ಮಂಜುಲನಿನಾದವು ಹರಿದು ಬರುವುದು. ಅದರ ಸಂಗಡ ' ಎಲೆ ಮಲ್ಲ....ಬಾರೊ ಇತ್ತ.... ' ಎಂದೂ, ಮರುಕ್ಷಣವೆ ' ಏ ಚೆನ್ನ....ನಿನಗೇನಾಗೇತೊ ' ಎಂದೂ ಮೇಲಿಂದ ಮೇಲೆ ಕೂಗು ಕೇಳಿಸುವುದು. ತುಸು ಹೊತ್ತಿನಲ್ಲಿ ಆ ಗಂಟೆಯ ತಾಳಕ್ಕೆ ಸರಿಯಾಗಿ ಒಂದು ಹಾಡು ಕೇಳಿಸುವುದು. ಅದಕ್ಕೆ ಕಿವಿಗೊಟ್ಟು ಆ ಕಿರಿಯಳು, ಆ ಬರುವ ವ್ಯಕ್ತಿಗೂ ಅವನ ಪರಿವಾರಕ್ಕೂ ಅನುವು ಮಾಡಿಕೊಡುವ ಉದ್ದೇಶದಿಂದ, ತನ್ನ ಜೊತೆಗಾತಿಯನ್ನು ಸರಿಸಿಕೊಂಡು ನಿಲ್ಲುವಳು. ಅಷ್ಟರಲ್ಲಿ ಒಬ್ಬ ಒಕ್ಕಲಿಗನು ಬರುವ. ಉಟ್ಟಿದ್ದುದು ಒಂದು ದಡಿಪಂಚೆ; ಮೈಯಲ್ಲಿ ಒಂದು ಬಂಡಿಯನ್ನು ತೊಟ್ಟಿದ್ದಾನೆ. ತಲೆಗೆ ಹೆಡಿಗೆರುಮಾಲು. ಹೆಗಲಮೇಲೆ ಒಂದು ಬಾರುಕೋಲನ್ನು ಹಾಕಿಕೊಂಡು, ತನ್ನ 'ಚೆನ್ನ-ಮಲ್ಲ'ರೊಂದಿಗೆ ಹೊರಟಿದ್ದಾನೆ. ಕನ್ನಡದ ರಸಿಕ ಧರಣೀಪುತ್ರ; ಎಂದಮೇಲೆ

ಆತನು ಸುಮ್ಮನೆ ಹೋಗುವವನೆ? ತನ್ನ ಅಸ್ಖಲಿತ ಸ್ವರದಲ್ಲಿ ಹಾಡುತ್ತ ಸಾಗಿದ್ದಾನೆ :

" ಏಳಿರೇಳಿರಣ್ಣಾ, ಹೋಗೋಣ ಹೊಲಕೆ ಬೇಗ ಇನ್ನಾ |
ಕೋಳಿಕೂಗುವ ಮುನ್ನ, ಹೊಲದೊಳು ಕೆಲಸ
ಮಾಡೋಣರಣ್ಣಾ || ಪ ||
ಹೊತ್ತು ನೇಗಿಲನ್ನಾ, ಹೂಡೋಣ ಎತ್ತುಗಳನು ಚೆನ್ನಾ !
ಹೊತ್ತು ಮೂಡುವ ಮುನ್ನಾ, ಹೊಡೆಯೋಣ ಹತ್ತು ಫಾಳಿಗಳನಾ !
ಭರಭರ ಭರಭರ ನೆಲಕಡಿದೂ, ಗಂಟೊಡೆದು,
ಸರಸರ ಸರಸರ ಹರಿಯೊಡೆದೂ, ನೀರೆರೆದೂ || ೧ ||
ರಟ್ಟೆ ಮುರಿಯ ದುಡಿದೂ, ಗಳಿಸೋಣ ಹೊಟ್ಟೆಕೂಟ ಅನ್ನಾ !
ಬಿಟ್ಟುಬಿಡದೇ, ಎಂದೂ ಪಡೆಯೋಣ ಬುಟ್ಟಿ ಬುಟ್ಟಿ ಹೊನ್ನಾ !
ಕನ್ನಡನಾಡಿನ ಕಲಿಗಳು ನಾವ್, ಕಿಡಿಗಳು ನಾವ್
ಮುನ್ನಿನ ದಾರಿಯ ನೋಡೋಣ ನಾವ್, ಓಡೋಣ ನಾವ್! || ೨ ||

ಆ ಹಾಡಿನಿಂದ ಚಿಕ್ಕವಳು ಮೈಮರೆದು ನಿಂತುಬಿಡುವಳು. ಹಿರಿಯಾಕೆಗೆ ಸಹ ಆಕೆಯನ್ನು ತಡವಲು ತುಸು ಸಂಕೋಚವೆನಿಸುವುದು. ಕೊನೆಗೆ 'ಮಂಗಳೂರನ್ನು ತೋರಿಸುವೆ ಬರುತ್ತೀಯಾ ? ' ಎಂದು ಒಂದು ಮಾತನ್ನು ಕೇಳುವಳು. "ಆಂ, ಮಂಗಳೂರು ? ಹೂಂ !" ಎಂದು ಚಿಕ್ಕವಳು ಆಕೆಯನ್ನು ಹಿಂಬಾಲಿಸುವಳು. "ಇದುನೋಡು, ಎಷ್ಟು ರಮ್ಯವಾದ ಸ್ಥಲವಿದೆ! ಇಲ್ಲಿಯ ದೊಡ್ಡ ಬೀದಿಗೇ ಹೋಗೋಣ ನಡೆ ! ನೋಡಿದೆಯಾ ಇಲ್ಲಿಯ ಪ್ರತಿಯೊಂದು ಮನೆಯೂ ಕನ್ನಡದ ಒಂದು ದೇಗುಲವಾಗಿದೆ. ಈ ಊರ ಹೆಗ್ಗಡೆ **ಡಾ. ಪಂಜೆ ಮಂಗೇಶರಾಯರ** ಕವನವೊಂದನ್ನು ಕೇಳುವಾ ತಡೆ. ಅಕೋ...."

" ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೊ,
ಎಲ್ಲಿ ಮೋಹನಗಿರಿಯ ಬೆರಗಿನ ರೂಪಿನಿಂದಲಿ ನಿಂದಳೊ ! || "

ಈ ಕವಿತೆಯ ಚರಣವಾದ "ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ!" ಎಂಬುದು ಕೇಳಿಸಿದ ಕೂಡಲೆ, ಹಿರಿಯಾಕೆಯು ಕಿರಿಯಳ ಕಡೆಗೆ ಮುಖವನ್ನು ಹೊರಳಿಸಿ ಪ್ರಶ್ನೆ ಮಾಡುವಳು. ಕಿರಿಯಾಕೆಯು ಹಿಗ್ಗಿನಲ್ಲಿ ನಸುನಗುವಳು. "ಆಯಿತು ನಡೆಯಿನ್ನು" ಎಂದು ಅವರು ಹೊರಡುವರು. ದಾರಿಯಲ್ಲಿ ಒಂದು ಊರು ಹತ್ತುವುದು. ಹೊತ್ತು ಇನ್ನೂ ಅದೇ ಒಡೆಯುತ್ತಲಿದೆ. ಮುಮುಮುಮು ನಸುಕು ಸರಿದು ಇದೀಗ ಹೂಬಿಸಿಲು ಹಣೆಯಿಕ್ಕುತ್ತಲಿದೆ. ಮೂಡಣ ದಿಕ್ಕಿನಿಂದ ಹೊನ್ನಿನ ಹೊನಲು ಮೆಲ್ಲಗೆ ಹರಿದು ಬಂದು, ಹೊಳೆ-ಹಳ್ಳ, ಮನೆ-ಮಾರು, ಗಿಡ-ಬಳ್ಳಿ, ಹಕ್ಕಿ-ಪಕ್ಕಿ, ದನ-ಕರುಗಳಲ್ಲಿ ನವಜೀವನವನ್ನು ತುಂಬುತ್ತಿರುತ್ತದೆ. ಅದೇ ಸಮಯದಲ್ಲಿ ಆ ಊರ ಒಂದು ಮನೆಯ ಹೆಬ್ಬಾಗಿಲು ಅವರಿಗೆ ಕಾಣಿಸುವುದು. ಅಲ್ಲಿ ಒಬ್ಬ ಸ್ತ್ರೀಯು ಹೊಸ್ತಿಲಕ್ಕೆ ರಂಗವಲ್ಲಿಯನ್ನು ಹಾಕಲಿಕ್ಕೆಂದು ಬಂದಿರುತ್ತಾಳೆ. ಗೆರೆಗಳನ್ನೂ, ಚಿತ್ರಗಳನ್ನೂ ಬರೆಯುತ್ತಿದ್ದಂತೆ ಆಕೆಯ ಬಾಯಿಂದ ಪದ್ಯಗಳೆರಡು ಹೊರಗೆ ಬರುತ್ತಿರುತ್ತವೆ. ಅವುಗಳನ್ನು ಕೇಳಲಿಕ್ಕೂ, ಆ ನೋಟದ ಆನಂದವನ್ನು ಪಡೆಯಲಿಕ್ಕೂ ಅವರಿಬ್ಬರೂ ಅಲ್ಲಿಯೆ ತಡೆಯುವರು.

" ನಗುವ ಮುಖಾ
ನೋಡಿ, ನಲಿವೆ—ನಾ—ತಾಯಿಯ ನಗುವ ಮುಖಾ ||
ಎಂದೂ ಇಲ್ಲದ ಆನಂದವ ಬೀರುತ
ಸುಂದರ ಸುಂದರ ಕಾಣುವ ನಾಡಿನ— ನಗುವ ಮುಖಾ || ೧ ||
ಬೆಂದು ಬೇಸರವ ಹೊಂದಿದ ಮನಕಿದು
ಚೆಂದವಾದ ಸುಖಶಾಂತಿ ನಿಲಯವು—ನಗುವ ಮುಖಾ || ೨ ||

ಅವರಿಬ್ಬರೂ ಮುಂದೆ ಹೊರಡುವಷ್ಟರಲ್ಲಿ, ಅವರಿಗೆ ಎದುರಿನಿಂದ ಒಂದು ವ್ಯಕ್ತಿಯು ಹಾಡುತ್ತ ಬರುವುದು ಕಾಣುತ್ತದೆ. "ಓಹೊ—ಇವರು ಆ **ಬೇಂದ್ರೆ**ಯವರು !" ಎಂದು ಹಿರಿಯಾಕೆಯೆನ್ನುವಳು. ಆ ಖಾದಿಯ ದೋತರ, ಆ ಖಾದಿಯ ಅಂಗಿ-ರುಮಾಲು-ಕೈಚೀಲಗಳೊಂದಿಗೆ ಅವರು ದೊಡ್ಡ ದನಿಯಲ್ಲಿ

" ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ! "

ಎಂದು ಹಾಡುತ್ತ ಬರುವರು. 'ಕುಲ ಒಂದೇ ಸ್ಥಲ ಒಂದೇ ನೀತಿಯ ನೆಲೆಯೊಂದೇ,' ಎಂಬಲ್ಲಿ ಅವರ ಕುತ್ತಿಗೆಯು ತುಂಬಿ ಬರುವುದು. ಹಾಗೆಯೆ ಅಲ್ಲಿಂದ ಮುಂದೆ ಅವರಿರ್ವರೂ ಒಂದು ಎತ್ತರದ ಸ್ಥಲದ ಮೇಲೆ ಹೋಗಿ ನಿಲ್ಲುವರು. ಆ ಎಲ್ಲ ಜನರ ಅಭಿಮತದ ಆನಂದಗೀತಗಳನ್ನು ಕೇಳಿ, ಕಿರಿಯಳಾದ ಕನ್ನಡಿತಿಯು ಅನುಗ್ರಹಿಸುವಳು. ಅಷ್ಟರಲ್ಲಿ ಅವರೆಲ್ಲರೂ ಕೂಡಿ,

" ವಂದೇ ಮಾತರಂ |
ಸುಜಲಾಂ ಸುಫಲಾಂ ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ— ವಂದೇ || "

ಎಂದು ಹಾಡಿ ಆ ಎರಡೂ ಮೂರ್ತಿಗಳನ್ನು ಕಂಡು ಕೈಮುಗಿಯುವರು. ಹಿರಿಯಳಾದ ಭಾರತಿಯು ಆಶೀರ್ವದಿಸುವಳು. ಆಗ ನೋಡಿದತ್ತೆಲ್ಲ ಬೆಳಕು ! *

೫೧ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರದ ಗುಳಿಗೆ

ಬಾಟ್ಲಿಗೆ ೧ ರೂ. ೪ ಆಣೆ.

ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,

ಗಿರಗಾಂವ, ಮುಂಬಯಿ.

* **ಟಿಪ್ಪಣಿ :—** ಲೇಖಕರ ಸಲಹೆ-ಸಮ್ಮತಿಗಳನ್ನು ಪಡೆದು ಮಾತ್ರ ಈ ನಾಟಕವನ್ನು ಅಭಿನಯಿಸಬೇಕು. —ಲೇಖಕ

ಕವಿ ಕಾಲಿದಾಸ ★

ಪ್ರೊ. ಕೆ. ಆರ್. ಮಹಿಷಿ ಎಂ.ಎ. ಧಾರವಾಡ

★

(ತಾ. ೭-೧-೪೩ನೆಯ ದಿನ ಮುಂಬಯಿ ಆಲ್ ಇಂಡಿಯಾ ರೇಡಿಯೊ ಸ್ಟೇಷನಿನಲ್ಲಿ ವಿದ್ಯಾರ್ಥಿಗಳಿಗಾಗಿ ‘ಬ್ರಾಡ್‌ಕಾಸ್ಟ್’ ಮಾಡಿದ ಭಾಷಣವಿದು. ರೇಡಿಯೊ ಅಧಿಕಾರಿಗಳ ಅಪ್ಪಣೆ ಪಡೆದು ಪ್ರಕಟಿಸಲಾಗಿದೆ. ಸಂ. ಜ.)

★

ಚಿಕ್ಕಮಕ್ಕಳೆ,

ಇಂದು ನಾನು ಹೆಚ್ಚಾಗಿ ಮಾತನಾಡುವುದು ‘ಕವಿ’ ಕಾಲಿದಾಸನ ಬಗ್ಗೆ; ‘ನಾಟಕಕಾರ’ ಕಾಲಿದಾಸನ ಬಗ್ಗೆ, ನಾಟಕಕಾರ ಭವಭೂತಿಯ ಬಗ್ಗೆ ಮಾತನಾಡುವಾಗ ಹೆಚ್ಚು ಹೇಳುವೆ.

ಕಾಲಿದಾಸ ಭರತಖಂಡದ ಶ್ರೇಷ್ಠತಮ ಕವಿ. ಅಖಂಡ ಜಗತ್ತಿನ ಶ್ರೇಷ್ಠತಮ ಕವಿಗಳಲ್ಲಿ ಒಬ್ಬ. ಇಂಗ್ಲಂಡಿನ ಷೇಕ್ಸಪಿಯರ್, ಗ್ರೀಸದ ಹೋಮರ್, ಇಟಲಿಯ ವ್ಹರ್‌ಜಿಲ್, ಜರ್ಮನಿಯ ಗಟೆಯವರಂತೆ ವಿಶ್ವಕವಿಗಳ ಚಿಕ್ಕ ಗುಂಪಿಗೆ ಸೇರಿದವ. ಅವರಂತೆಯೆ ಒಂದು ದೇಶದ, ಒಂದು ಜನಾಂಗದ, ಒಂದು ಸಾಹಿತ್ಯಯುಗದ ಸಾರಸತ್ವವೇ ಮೈದೋರಿ ನಿಂತಂತೆ ಕಾಣುವ ಅಪ್ರತಿಮ ಪ್ರತಿಭಾಸಂಪನ್ನನಾದ ವಿಶ್ವವಿಭೂತಿ. ಅಂತೆಯೆ ಪೌರ್ವಾತ್ಯ ಪಾಶ್ಚಿಮಾತ್ಯ ಕವಿಗಳು, ಪಂಡಿತರು, ವಿಮರ್ಶಕರು ಕಾಲಿದಾಸನನ್ನು ಮುಕ್ತಕಂಠರಾಗಿ ಹೊಗಳಿದ್ದಾರೆ. ನಮ್ಮವರಿಗೆ ಕಾಲಿದಾಸ ಏಕಮೇವ ಅದ್ವಿತೀಯ ಕವಿ; ಕವಿಕುಲಗುರು; ಕವಿತಾಕಾಮಿನಿಯ ವಿಲಾಸ. ಆತನ ಮಾತು ಜೇನುಹುಟ್ಟು. ಉಪಮೆಯಲ್ಲಿ ಆತನ ಕೈ ಹಿಡಿದವರೇ ಇಲ್ಲ. ನಮ್ಮವರು ಹೀಗೆ ಹೊಗಳಿದರೆ, ಜರ್ಮನ್ ಮಹಾಕವಿ ಗಟೆ, ಶಾಕುಂತಲ ಶಬ್ದದಲ್ಲಿ ವಸಂತಪುಷ್ಪ—ಶರದೃತುವಿನ ಫಲಗಳ ಮರ್ತ್ಯ-ಸ್ವರ್ಗಗಳ ಸಾರಸಮ್ಮಿಲನವನ್ನು ಕಂಡ. ಶಾಕುಂತಲದಲ್ಲಿಯ ಚಿಕ್ಕಮಗು— ಭರತನ ಮುದ್ದುಮುದ್ದು ಮಾತು ಕೇಳಿ ‘ಸೀರ್ಝಿ’ ಎಂಬ ಫ್ರೆಂಚ್ ಕವಿ, ಆ ನಾಟಕವನ್ನು ತಲೆಯ ಮೇಲಿಟ್ಟುಕೊಂಡು ಕುಣಿದನಂತೆ.

ಇಂತಹ ಕಾಲಿದಾಸ ಯಾರು ? ಯಾವುದು ಆತನ ಊರು ? ಇಂತಹ ಸುಪುತ್ರನನ್ನು ಪಡೆದ ಭಾಗ್ಯಶಾಲಿ ತಂದೆ-ತಾಯಿಗಳ ಹೆಸರೇನು ? ಆತನ ಕಾವ್ಯಬೀಜ ಅಂಕುರಿಸಿದ್ದು ಹೇಗೆ ? ಈ ಕವಿರಾಜನಿಗೆ ಆಶ್ರಯ ಕೊಟ್ಟ ರಾಜ ಯಾರು ? ಈತನ ಕೃತಿಗಳನ್ನು ನೋಡಿ ಹೊಟ್ಟೆ ಕಿಚ್ಚಿದವರು, ಕೃತಿಗಳ ಕೆಚ್ಚು ಸಾಧಿಸಲಾರದೆ ಹೊಟ್ಟೆಕಿಚ್ಚಿನಿಂದಲೇ ಸಂತೋಷಪಟ್ಟವರು ಆದ ಸಮಕಾಲೀನ ಕವಿಗಳು ಯಾರು?—ಇಂತಹ ನೂರಾರು ಪ್ರಶ್ನೆ ಕೇಳುವುದು ಸ್ವಾಭಾವಿಕವಾದರೂ, ಆ ಎಲ್ಲ ಪ್ರಶ್ನೆಗಳಿಗೂ ರಾಮಬಾಣದಂತೆ ಒಂದೇ ಉತ್ತರ: “ನಮಗೆ ನಿಶ್ಚಿತವಾಗಿ ಏನೂ ಗೊತ್ತಿಲ್ಲ,” ಎಂಬುದು. ಆತನ ಕೃತಿಗಳನ್ನು ಅಕ್ಕರೆಯಿಂದ ಓದಿದವರು ಆತನ ದೇಶ, ಕಾಲ, ತಾಯಿ-ತಂದೆ, ಗುರು, ಆಶ್ರಯದಾತರ ಬಗ್ಗೆ ಏನೂ ಆಸ್ಥೆ ಕುತೂಹಲ ತೋರಿಸದೆ ಇದ್ದುದು ಆಶ್ಚರ್ಯದಂತೆ ವಿಷಾದವನ್ನೂ ಹುಟ್ಟಿಸುವುದು. ಅಂತೂ ಕಾಲಿದಾಸನ ಕಾಲ ಕೂಡ ನಿರ್ಣಯವಾಗಿಲ್ಲ. ಕ್ರಿಸ್ತಶಕ ಪೂರ್ವ ಒಂದನೆಯ ಶತಮಾನದಲ್ಲಿ ಇದ್ದನೆಂದು ಕೆಲವರು ಅಭಿಪ್ರಾಯಪಟ್ಟರೆ, ಕೆಲವರು ಕ್ರಿ. ಶ. ೫ನೆಯ ಶತಮಾನದಲ್ಲಿ ಇದ್ದನೆಂದು ಅಭಿಪ್ರಾಯ ಪಡುತ್ತಾರೆ.

ಕಾಲಿದಾಸನ ಜೀವನ-ಚರಿತ್ರೆಗಳ ಬಗ್ಗೆ ಐತಿಹಾಸಿಕ ಮಾಹಿತಿಯು ಸಿಕ್ಕದಿದ್ದರೂ, ದಂತಕಥೆಗಳು ಹೇರಳವಾಗಿವೆ. ಅವುಗಳಲ್ಲಿ ಒಂದು ಮನೋರಂಜಕ ದಂತಕಥೆ ಕೇಳಿರಿ:— ಕಾಲಿದಾಸನ ಮೂಲ ಹೆಸರು ಕಾಲಿದಾಸ ಅಲ್ಲ. ಆತ ಒಬ್ಬ ಬ್ರಾಹ್ಮಣನ ಮಗ. ಐದು ತಿಂಗಳಿನ ಎಳಗೂಸು ಇರುವಾಗ ತಾಯಿ-ತಂದೆಗಳನ್ನು ಕಳೆದುಕೊಂಡ. ಅನಾಥಶಿಶುವನ್ನು ಒಬ್ಬ ಗವಳಿಗ ಸಾಕಿ ಸಲಹಿದ. ಹದಿನೆಂಟು ವರುಷ ತುಂಬಿದಾಗ, ಬ್ರಾಹ್ಮಣನಾದುದರಿಂದ ಗೌರವರ್ಣನಾಗಿಯೂ, ಅಶಿಕ್ಷಿತನಾದುದರಿಂದ ಉಡಾಳನಾಗಿಯೂ ಇದ್ದ. ಅದೇ ಊರಿನ ಅರಸನಿಗೆ ಒಬ್ಬ ಮಗಳಿದ್ದಳು. ಅತಿಶಯ ಸುಂದರಿ, ಕಲಿತವಳು. ಕೇಳುವುದೇನು ? ‘ಕಲಿತ ಗಂಡನೇ ಬೇಕು’ ಎಂದು ಹಟ ಹಿಡಿದಳು. ‘ಕಲಿತವನಷ್ಟೇ ಅಲ್ಲ, ಸಕಲ ಶಾಸ್ತ್ರ-ಕಲಾ ವಿಶಾರದನನ್ನೇ ವರಿಸುವೆನು’ ಎಂದು ಹಟ ಹಿಡಿದದ್ದರಿಂದ ಪೇಚಾಟಕ್ಕೆ ಬಂತು. ವರ ಹುಡುಕಿ ಹುಡುಕಿ ಅರಸು ಬೇಸತ್ತ. ತಾನೇ ವರಿಸುವೆನು ಎಂದ ಮಂತ್ರಿ. ಆದರೆ ಆ ಜಾಣೆ, ನಿರ್ದಯ ಪರೀಕ್ಷಕರಂತೆ ಒಬ್ಬರನ್ನೂ ‘ಪಾಸ್’ ಮಾಡಲಿಲ್ಲ. ಮಂತ್ರಿಗೆ ಸಿಟ್ಟು ಬಂತು. ಒಂದು ದಿನ, ಗವಳಿಗರ ಗುಂಪಿನಲ್ಲಿ—ಕುರಿಗಳ ಹಿಂಡಿನಲ್ಲಿ ಆಡ್ಡಾಡುವ ಹೆಬ್ಬುಲಿಯಂತಹ—ಕಾಲಿದಾಸನನ್ನು ನೋಡಿ ಹಂಚಿಕೆ ಹಾಕಿದ. ಆತನನ್ನು ಮನೆಗೆ ಕರೆದುಕೊಂಡು ಹೋದ ; ಉತ್ತಮ ವಸ್ತ್ರಭೂಷಣಗಳಿಂದ ಅಲಂಕರಿಸಿದ. ಪಂಡಿತರ ಶಿಷ್ಯಸಮೂಹವನ್ನು ಕೊಟ್ಟು, ‘ಏನೂ ಮಾತನಾಡಬೇಡ’ ಎಂದು ಕಲಿಸಿ, ರಾಜಕನ್ಯೆಯ ಬಳಿಗೆ ಕಳಿಸಿದ. ಆತನ ರೂಪಕ್ಕೆ ರಾಜಕನ್ಯೆ ಮೋಹಿತಳಾದಳು. ಕೇಳಿದ ಪ್ರಶ್ನೆಗಳಿಗೆಲ್ಲ ಶಿಷ್ಯರೆ ಉತ್ತರ ಕೊಟ್ಟರು. ಮೋಹಿತಳಾದ ರಾಜಕನ್ಯೆ ಹೆಚ್ಚಿಗೆ ಪರೀಕ್ಷೆ ಮಾಡದೆ ಕಾಲಿದಾಸನನ್ನು ವರಿಸಿದಳು. ಮುಂದೆರಡು ದಿವಸಗಳಲ್ಲಿ ಗುಟ್ಟು ರಟ್ಟಾಗಿ ಈತ ಶುದ್ಧ ಮುಟ್ಠಾಳನೆಂದು ಗೊತ್ತಾಯಿತು. ಲಗ್ನವಾಗಿ ಹೋಗಿದ್ದರಿಂದ ನಿರುಪಾಯಳಾಗಿ, ಗಂಡನನ್ನು ಕಾಳಿಯ ಸೇವೆಗೆ ಕಳಿಸಿದಳು.

ಏನು ಮಾಡಿದರೂ ದೇವಿಯು ಪ್ರಸನ್ನಳಾಗದುದರಿಂದ, ಆತ ಕುತ್ತಿಗೆ ಕತ್ತರಿಸಿಕೊಳ್ಳಲು ಉದ್ಯುಕ್ತನಾದ. ದೇವಿ ಪ್ರಸನ್ನಳಾಗಿ ನಾಲಗೆಯ ಮೇಲೆ ಅಕ್ಷರ ಬರೆಯಲು, ಕುರುಬ ಕವಿಯಾದ. ಕಾಳಿಯ ವರದಿಂದಲೇ ಕವಿತ್ವ ಪ್ರಾಪ್ತವಾದುದರಿಂದ ಕೃತಜ್ಞತೆಯಿಂದ ಕಾಳಿದಾಸನೆಂದು ಹೆಸರಿಟ್ಟುಕೊಂಡ.

ಕಾಲಿನದಾಸನ ಉಪಲಬ್ಧ ಗ್ರಂಥಗಳ ಸಂಖ್ಯೆ ಏಳು. ಮೂರು ನಾಟಕಗಳು, ಎರಡು ಕಾವ್ಯಗಳು, ಒಂದು ವಿರಹಗೀತ, ಒಂದು ಋತುಗಳ ಸೌಂದರ್ಯವನ್ನು ಬಣ್ಣಿಸುವ ಖಂಡಕಾವ್ಯ. 'ಮಾಲವಿಕಾಗ್ನಿಮಿತ್ರ' 'ವಿಕ್ರಮೋರ್ವಶೀಯ' 'ಶಾಕುಂತಲ' ನಾಟಕಗಳು. 'ಕುಮಾರ ಸಂಭವ' ಮತ್ತು 'ರಘುವಂಶ' ಕಾವ್ಯಗಳು. 'ಮೇಘದೂತ' ವಿರಹಗೀತ. 'ಋತುಸಂಹಾರ' ಋತುಗಳನ್ನೂ ಪ್ರಣಯಿಗಳನ್ನೂ ವರ್ಣಿಸುವ ಖಂಡಕಾವ್ಯ. ಇವೆಲ್ಲವುಗಳ ಪರಿಚಯ ಇಲ್ಲಿ ಮಾಡಿಕೊಡುವುದು ಶಕ್ಯವಿಲ್ಲ; ಅವಶ್ಯವೂ ಅಲ್ಲ. ಆದುದರಿಂದ ಕಾಲಿದಾಸನ ಅತ್ಯುತ್ತಮವಾದ ಎರಡೇ ಕೃತಿಗಳ, ಎಂದರೆ 'ಮೇಘದೂತ' 'ಶಾಕುಂತಲ'ಗಳ ಬಗ್ಗೆ ಮಾತನಾಡುವೆ., ಮೇಘದೂತದ ಬಗ್ಗೆ ಇಲ್ಲಿ; ಶಾಕುಂತಲದ ಬಗ್ಗೆ ಮುಂದಿನ ಭಾಷಣದಲ್ಲಿ.

'ಮೇಘದೂತ'ಒಂದು ಸರ್ವಾಂಗ ಸುಂದರವಾದ ವಿರಹಗೀತ. ಇದರ ಕತೆ ಚಿಕ್ಕದಾದರೂ ರಮ್ಯವಾಗಿದೆ. ಅಲಕಾಪಟ್ಟಣದ ಒಬ್ಬಾನೊಬ್ಬ ಯಕ್ಷ, ತನ್ನ ಕೆಲಸದಲ್ಲಿ ದೊಡ್ಡ ತಪ್ಪುಮಾಡಿದ. ಆತನ ಒಡೆಯನಾದ ಕುಬೇರನು ಸಿಟ್ಟಿಗೆದ್ದು "ಒಂದು ವರುಷದ ವರೆಗೆ ನಿನ್ನ ದೊಡ್ಡಸ್ತಿಕೆ ಹಾಳಾಗಲಿ; ನಿನಗೆ ಕಾಂತೆಯ ವಿರಹವಾಗಲಿ!" ಎಂದು ಶಪಿಸಿದನು. ತನ್ನ ಮಹಿಮೆ ಕಳೆದುಕೊಂಡ ಯಕ್ಷ ಶಾಪಾವಧಿಯ ವರೆಗೆ–ಎಂದರೆ ಒಂದು ವರುಷದ ವರೆಗೆ— ಅಲಕಾನಗರಿಯನ್ನು ಬಿಡಬೇಕಾಯಿತು. ಆತನು ಜನಕತನಯೆ ಮಿಂದುದಕದಿಂದ ಪಾವನವಾದ ರಾಮಗಿರಿಯ ಮೇಲೆ, ಏಕಾಕಿಯಾಗಿ ಬಂದು ಉಳಿದ. ನಲ್ಲೆಯಿಂದ ಅಗಲಿ ಬಳಲಿದ, ಬೆಂದ. ಕೆಲವೇ ತಿಂಗಳಲ್ಲಿ ಚಿನ್ನದ ಕಡಗ ಮೊಳಕ್ಕೆಗೆ ಬರುವಷ್ಟು ಸೊರಗಿದ. ಹಾಗೂ ಹೀಗೂ ಅಂತೂ ಇಂತೂ ಎಂಟು ತಿಂಗಳು ಒಂಟಿಯಾಗಿ ಕಳೆದ ಮೇಲೆ ಮಳೆಗಾಲ ಬಂತು. ಆಷಾಢದ ಕೊನೆಯ ದಿನವೆ, ಗಿರಿಶಿಖರಕ್ಕೆ ಒರಗಿನಿಂತ—ಮಣ್ಣು ದಿನ್ನೆಗೆ ಡಿಕ್ಕಿ ಹೊಡೆಯಲು ಸಿದ್ಧವಾದ—ಆನೆಯಂತೆ ಕಂಗೊಳಿಸುವ ಒಂದು ಮೇಘ ಆತನ ಕಣ್ಣಿಗೆ ಬಿತ್ತು. ಮೇಘವನ್ನು ಕಂಡು, ವಿರಹವನ್ನು ಸಹಿಸಲಾರದೆ, ತನ್ನ ಸತಿಯ ಗತಿಯೂ ತನ್ನಂತೆಯೆ ಆಗಿರಬಹುದಲ್ಲ—ಎಂದು ಊಹಿಸಿ, ಆ ಮೇಘವನ್ನೇ ದೂತನನ್ನಾಗಿ ಮಾಡಿ, ಆಕೆಗೆ ಒಂದು ಸಂದೇಶವನ್ನು ಕಳಿಸಬೇಕೆಂದು ನಿಶ್ಚಯಿಸಿದ. ವಸ್ತುತಃ ಗಾಳಿ-ನೀರು-ಉಗಿ-ಬೆಂಕಿ ಕೂಡಿ ಆಗಿರುವ ಅಚೇತನವಾದ ಮೇಘವು ಸಂದೇಶ ಹೇಗೆ ಒಯ್ದೀತು? ಆದರೆ ಕಾಮಾರ್ತರಿಗೆ ಅಷ್ಟು ವಿವೇಕವೆಲ್ಲಿ? ಯಕ್ಷನು ಆದೇ ಅರಳಿದ ಕುಟಜಪುಷ್ಪಗಳನ್ನು ಅರ್ಪಿಸಿ, ಅಲಕಾನಗರಿಯ ದಾರಿಯನ್ನು ಹೇಳತೊಡಗುವ. ಇಲ್ಲಿ ರಾಮಗಿರಿಯಿಂದ ಅಲಕಾನಗರಿಯ ವರೆಗೆ ಹಾದಿಯಲ್ಲಿ ಹತ್ತುವ ಗುಡ್ಡ, ನದಿ, ದೇಶ, ನಗರ, ಗ್ರಾಮ, ವನ-ಉಪವನಗಳ ಯಥಾರ್ಥವಾದರೂ ರಮಣೀಯವಾದ ವರ್ಣನೆಯಿದೆ. ಇದೇ 'ಪೂರ್ವಮೇಘ'ದ ವಸ್ತು. ಉಜ್ಜಯಿನೀ ಪಟ್ಟಣವು ಹಾದಿಯ ಮೇಲೆ ಇರದಿದ್ದರೂ ಅಲ್ಲಿ ಹೋಗಲೇಬೇಕೆಂದು ಯಕ್ಷ ಆಗ್ರಹಮಾಡುತ್ತಾನೆ; ಯಾಕೆಂದರೆ ಉಜ್ಜಯಿನಿ ಭೂಮಿಯ ಮೇಲಿನ ಸ್ವರ್ಗವಲ್ಲವೇ? ಉಜ್ಜಯಿನೀಪ್ರೇಮಿಯಾದ ಕಾಲಿದಾಸ, ಉಜ್ಜಯಿನಿ ಪಟ್ಟಣವನ್ನು ವಿಸ್ತೃತವಾಗಿ ಹೃದಯಂಗಮವಾಗಿ ವರ್ಣಿಸುತ್ತಾನೆ. ಉಜ್ಜಯಿನಿಯ ಆನೆಗಳು, ಕುದುರೆಗಳು, ಯೋಧರು, ಸುಂದರಿಯರು, ಉದ್ದಾಮ ಯೌವನದ ತರುಣರು, ವೇಶ್ಯೆಯರು ಇವರನ್ನೆಲ್ಲ ಕವಿ ಉತ್ಸಾಹದಿಂದ ವರ್ಣಿಸುತ್ತಾನೆ. 'ಉತ್ತರಮೇಘ'ದಲ್ಲಿ ಭೋಗಪುರಿಯಾದ ಅಲಕಾನಗರಿಯ ವರ್ಣನೆ; ಧನಪತಿಗೃಹದ ಉತ್ತರಕ್ಕೆ, ಪಚ್ಚೆಕಲ್ಲ ಮೆಟ್ಟಲುಗಳುಳ್ಳ ಹೊನ್ನ ಕಮಲಗಳಿಂದ ತುಂಬಿದ ಪುಷ್ಕರಣಿಯ ಪಕ್ಕದಲ್ಲಿ, ಕ್ರೀಡಾಶೈಲದ ಹತ್ತಿರ, ದೂರದಿಂದಲೇ ಕಾಣುವ ಇಂದ್ರಚಾಪ ತೋರಣದಿಂದ ಸುಂದರವಾದ ಯಕ್ಷನ ಮನೆಯ ವರ್ಣನೆ; ಅಂಗಳದಲ್ಲಿಯ ಅಶೋಕವೃಕ್ಷದ, ಕೇಸರವೃಕ್ಷದ, ಯಕ್ಷನ ಪತ್ನಿ ನೀರುಣಿಸಿ ಕಂದನಂತೆ ಬೆಳಸಿದ ಕೈಯೆತ್ತರವಾದ ಮಂದಾರದ ರಮ್ಯ ವರ್ಣನೆ; ಯಕ್ಷನ ಕಾಂತೆ ಕೈಚಪ್ಪಳೆಯಿಕ್ಕಿ ಬಳೆಗಳ ಸಪ್ಪಳಿಂದ ಕುಣಿಸುವ ನವಿಲಿನ ವರ್ಣನೆ, ಯಕ್ಷನ ಕಾಂತೆಯ ಕರುಳು ಕರಗಿಸುವ ವಿರಹವರ್ಣನೆ–ಇವೆ. ಯಕ್ಷ ಹೇಳುತ್ತಾನೆ: "ಅಪ್ಪಾ, ನೀನು ನೋಡುವ ಸಮಯದಲ್ಲಿ ನನ್ನ ಸುಂದರಿ ದೇವರ ಪೂಜೆಮಾಡುತ್ತಲೊ, ನೆನಪಿನಿಂದ ನನ್ನ ಚಿತ್ರವನ್ನೇ ಬರೆಯುತ್ತಲೋ, 'ರಸಿಕೆ, ನಿನ್ನ ಮುದ್ದು ಒಡೆಯರ ನೆನಪಿದೆಯೇ ನಿನಗೆ?' ಎಂದು ಪಂಜರದಲ್ಲಿಯ ಸಾರಿಕೆಯನ್ನು ಮಾತನಾಡಿಸುತ್ತಲೋ, ಮಾಸಿದ ಬಟ್ಟೆಯುಟ್ಟು—ತೊಡೆಯ ಮೇಲೆ ವೀಣೆಯಿಟ್ಟು—ನನ್ನನ್ನೇ ಕುರಿತು ತಾನೇ ಕಟ್ಟಿದ ಪದವನ್ನು ಹಾಡುತ್ತ, ಕಣ್ಣೀರಿಂದ ತೊಯ್ದ ತಂತಿ ಮಿಡಿಯುತ್ತ, ಪದದ ಏರಿಳಿತ—ತಾನೇ ಕಟ್ಟಿದ್ದರೂ—ಮರೆಯುತ್ತಲೋ, ಕಳೆದುವಿಷ್ಟು ಇನ್ನುಳಿದುವಿಷ್ಟು ದಿನವೆಂದು ಲೆಕ್ಕಮಾಡಿ ಹೂವಿಟ್ಟು ನೋಡುತ್ತಲೊ, ಇರಬಹುದು!" ಹೀಗೆ ವರ್ಣಿಸಿದ ಕಾಂತೆಯನ್ನು, ಮೇಲೆ ಹೇಳಿದ ಗುರುತುಗಳಿಂದ ಯಕ್ಷನ ಮನೆ ಹುಡುಕಿ, ಕಂಡು, "ನಾಲ್ಕು ತಿಂಗಳ ವರೆಗೆ ಹೇಗಾದರೂ ಅಗಲಿಕೆ ಸಹಿಸಬೇಕು, ಶಾಪಾವಧಿ ಮುಗಿದೊಡನೆ ತಾನು ಬಂದು ಸೇರುವೆನು!" ಎಂಬ ಸಂದೇಶ ಮುಟ್ಟಿಸಿ, ಅವಳ ಉತ್ತರ ಯಕ್ಷನಿಗೆ ತಿಳಿಸಿ; ಸಂಭೃತಶ್ರೀಯಾಗಿ ಇಷ್ಟಬಂದಲ್ಲಿ ಹೋಗಬಹುದು. ಇಷ್ಟು ಕೆಲಸ ಮಾಡಿಕೊಟ್ಟ ಮೇಘಕ್ಕೆ "ಒಂದು ಕ್ಷಣಕೂಡ ಪ್ರಿಯೆಯಾದ ವಿದ್ಯುತ್ತಿನ ವಿರಹವಾಗದಿರಲಿ!" ಎಂಬ ಕೃತಜ್ಞತೆಯ ಹರಕೆಯಿಂದ ಕಾವ್ಯ ಮುಕ್ತಾಯವಾಗುತ್ತದೆ.

ಮೇಘದೂತದಲ್ಲಿ ೧೨೫ ಶ್ಲೋಕಗಳಿವೆ. ಕಾವ್ಯದ ರಸ ವಿಪ್ರಲಂಭ ಶೃಂಗಾರ; ಎಂದರೆ ಒಬ್ಬರನ್ನೊಬ್ಬರು ಅಗಲಿ, ಬೆಂದು ಬಳಲಿ ಬಾಯ್ಬಿಡುವ ನಲ್ಲ-ನಲ್ಲೆಯರ ಗೋಳು ಇದರ ಪ್ರಧಾನ ವಿಷಯ. ಉತ್ತರಮೇಘದಲ್ಲಿಯ ಯಕ್ಷನ—ಆತನ ಕಾಂತೆಯ ವಿರಹವನ್ನು ಬಣ್ಣಿಸುವ ಶ್ಲೋಕಗಳು ಕರುಳು ಕರಗಿಸುವಂತಹವು. ಯಕ್ಷನ ಕಾಂತೆಯನ್ನು ಬಣ್ಣಿಸುವಾಗ, ಕಾಲಿದಾಸನು ಆದರ್ಶ ಗೃಹಿಣಿಯ ಸುಂದರ ಚಿತ್ರ ತೆಗೆದಿದ್ದಾನೆ. ಆಕೆ ಕಾಲಿದಾಸನ ಇತರ ನಾಯಿಕೆಯರಂತೆ ಸುಂದರಿಯಂತೂ ಸರಿಯೆ! ಮೇಲಾಗಿ ವಿವಿಧ ಕಲಾನಿಪುಣೆ; ಪತಿವ್ರತೆ. ಹೂವಿನಂತಹ ಕೋಮಲ ಸ್ವಭಾವದವಳು. ಇಲ್ಲಿ ಕವಿ ಉಪಯೋಗಿಸುವುದು ವಿರಹಕ್ಕೆ ಯೋಗ್ಯವಾದ, ಮಂದ-ಮಂದವಾಗಿ ಸಾಗುವ, ಸುಂದರ 'ಮಂದಾಕ್ರಾಂತ'ವೃತ್ತ. ಮೇಘವನ್ನೇ ದೂತನನ್ನಾಗಿ ಮಾಡಿದ ಕಲ್ಪನೆಯಲ್ಲಿ ನವೀನತೆ ಇದೆ; ರಮ್ಯತೆ ಇದೆ. ಅಂತೆಯೇ ಜರ್ಮನ್ ಕವಿ ಷಿಲ್ಲರನು ಈ ಕಲ್ಪನೆಯನ್ನು ಎತ್ತಿಕೊಂಡಿದ್ದಾನೆ. ನಮ್ಮ ದೇಶದ ಕವಿಗಳು ಮೇಘದೂತವನ್ನು ನೋಡಿ 'ಕಾಕ-ಶುಕ-ಚಕ್ರವಾಕ-ಬಕ' ಗಳನ್ನು ದೂತರನ್ನಾಗಿ ಮಾಡಿದ್ದಾರೆ. ಗರುಡನ ಮುಂದೆ ಗುಬ್ಬಿ ಹಾರುಬಿಟ್ಟಿದ್ದಾರೆ. ಮೇಘದೂತದಲ್ಲಿ ಕವಿಯ ಸೌಂದರ್ಯಾನ್ವೇಷಿಣಿಯಾದ ದೃಷ್ಟಿ, ಕಲಾಭಿಜ್ಞತೆ ಹೆಜ್ಜೆ ಹೆಜ್ಜೆಗೂ ಕಂಡುಬರುವವು. ಒಂದೊಂದು ಶ್ಲೋಕ ಒಂದೊಂದು ಸುಂದರವಾದ ಚಿತ್ರ. ಅಂತೂ ಕಾಲಿದಾಸನು ಇದೊಂದೇ ಕಾವ್ಯ ಬರೆದಿದ್ದರೂ ಆತನ ಹೆಸರು ಅಜರಾಮರವಾಗಿ ಉಳಿಯುತ್ತಿತ್ತು.

ಹೀಗೆ ಕನಿಷ್ಟ ಹದಿನೈದು ನೂರು ವರುಷ ರಸಿಕರನ್ನು ರಂಜಿಸಿ, ಕಾಲಿದಾಸನ ಕಾವ್ಯಕ್ಕೆ ಅಮರತ್ವವನ್ನೂ ಇತ್ತೀಚೆಗೆ ವಿಶ್ವಮಾನ್ಯತೆಯನ್ನೂ ದೊರಕಿಸಿಕೊಟ್ಟ ಗುಣಗಳು ಯಾವುವು? ಬೇರೆ ಬೇರೆ ಶತಮಾನಗಳ, ದೇಶಗಳ, ಜನಾಂಗಗಳ, ಭಿನ್ನ ಭಿನ್ನ ರುಚಿಯ, ವಾಚಕರೆಲ್ಲರನ್ನೂ ಏಕರೀತಿಯಿಂದ ಮುಗ್ಧಗೊಳಿಸಿ, ಅವರಿಂದ ಏಕಕಂಠವಾಗಿ ಹೊಗಳಿಸಿಕೊಂಡ ಗುಣಗಳು ಯಾವುವು? ಕಾಲಿದಾಸನ ಶೈಲಿ ಇದಕ್ಕೆ ಕೆಲಮಟ್ಟಿಗೆ ಕಾರಣವಾಗಿದೆ. ಆತನ ರೀತಿ ಸರ್ವೋತ್ಕೃಷ್ಟವಾದ ವೈದರ್ಭೀ ರೀತಿ. ಎಂದರೆ ಆತನ ಕಾವ್ಯದಲ್ಲಿ ಉದ್ದುದ್ದ ಸಮಾಸಗಳಿಲ್ಲ. ಆತನ ಪದಸರಣಿ ಮೃದುಮಧುರ. ಸಂಸ್ಕೃತಭಾಷೆ ಮೊದಲೇ ಕರ್ಣಮಧುರ ಭಾಷೆ. ಕಾಲಿದಾಸ ಕಠಿಣ ವರ್ಣಗಳನ್ನೂ ಒತ್ತಕ್ಷರಗಳನ್ನೂ ಮಾರುದ್ದ ಸಮಾಸಗಳನ್ನೂ ಬುದ್ಧಿಪೂರ್ವಕ ಬಿಟ್ಟಿರುವುದರಿಂದ ಅದು ಮತ್ತಿಷ್ಟು ಮಧುರವಾಗಿದೆ. ಆತನ ಕಾವ್ಯದ ಪಾಕ ದ್ರಾಕ್ಷಾಪಾಕ, ಎಂದರೆ ಕಾಲಿದಾಸನ ಕಾವ್ಯ ಓದುವುದು ದ್ರಾಕ್ಷಿಯ ಹಣ್ಣು ತಿಂದ ಹಾಗೆ—ಶ್ರಮವಿಲ್ಲದೆ ಅದರ ರುಚಿಯುಣ್ಣಬಹುದು. "किमिव हि मधुराणां मण्डनं नाकृतीनां" ಎಂದು ಹಾಡಿದ ಕಾಲಿದಾಸ, ಸೌಂದರ್ಯದ ಉಪಾಸಕನೇ ಹೊರತು ಕೇವಲ ಅಲಂಕಾರಗಳ ಉಪಾಸಕನಲ್ಲ. ಶಬ್ದಾಲಂಕಾರಗಳನ್ನು ಉಪಯೋಗಿಸುವುದೇ ಇಲ್ಲ—ಎನ್ನುವಷ್ಟು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸುತ್ತಾನೆ. ಅರ್ಥಾಲಂಕಾರಗಳನ್ನು ಕೂಡ ಹಿತವಾಗಿ, ಮಿತವಾಗಿ ಉಪಯೋಗಿಸುತ್ತಾನೆ. ಆತನ ಕಾವ್ಯಮೋಹಿನಿಯ ಸೌಂದರ್ಯ ಅಲಂಕಾರದ ಬೆಡಗಿನಲ್ಲಿ ಅಡಗಿ ಹೋಗುವುದಿಲ್ಲ. 'ಕಾಲಿದಾಸನ ಉಪಮೆಯೇ ಉಪಮೆ' ಎಂದು ಹೊಗಳಿಸಿಕೊಳ್ಳುವಷ್ಟು ಸರಸವಾದ, ಉಚಿತವಾದ ಉಪಮೆಗಳನ್ನು ಬಳಸಿಕೊಂಡಿದ್ದಾನೆ. ಪ್ರಪಂಚಜ್ಞಾನದ ಸಾರವನ್ನೊಳಗೊಂಡ ಮಾತುಗಳು, ಅರ್ಥಾಂತರನ್ಯಾಸಗಳು, ಮೇಲಿಂದ ಮೇಲೆ ಬರುತ್ತವೆ. ಉಪಮೆಗಳಂತೆ ಕಾಲಿದಾಸನ ಉತ್ಪ್ರೇಕ್ಷೆಗಳೂ ಸರಸವಾಗಿವೆ. ಮೇಘದೂತವಂತೂ ಸರಸ ಉತ್ಪ್ರೇಕ್ಷೆಗಳ ಮಳೆಗರೆದಂತೆ ಇದೆ! ಕಾಲಿದಾಸನ ಛಂದಸ್ಸಿನ ಚಂದ ವರ್ಣಿಸಿದಷ್ಟೂ ಕಡಿಮೆಯೆ. ಬೇರೆ ಬೇರೆ ವೃತ್ತಗಳನ್ನು ವಸ್ತು-ಸಂದರ್ಭ-ರಸಗಳಿಗೆ ಪುಟಗೊಡುವಂತೆ ಉಪಯೋಗಿಸುವುದರಲ್ಲಿ ಕಾಲಿದಾಸನದು ಪಳಗಿದ ಕೈ.

ಭಾಷಾಂತರ ರೂಪಾಂತರಗಳಲ್ಲಿ ಕೂಡ ರಸಿಕರ ಮನಸೂರೆಗೊಳ್ಳುವ ಆತನ ಕೃತಿಗಳು, ಕೇವಲ ಶೈಲಿಯ ಲಾಲಿತ್ಯ-ಮಾಧುರ್ಯಗಳಿಂದ ಘನತೆ ಪಡೆದಿಲ್ಲ. ಆತನ ಕೃತಿಗಳಿಗೆ ದೊರೆತ ವಿಶ್ವಮಾನ್ಯತೆ ಆತನ ಕಾವ್ಯದಲ್ಲಿಯ ವಿಶ್ವಸಾಮಾನ್ಯ ಗುಣಗಳ ದ್ಯೋತಕ. ಕಾಲಿದಾಸನು ಕಾವ್ಯದಲ್ಲಿ ಅಜರಾಮರವಾಗಿ ಎರಕಹೊಯ್ದ ಅನುಭವ, ಒಂದು ಸಂಕುಚಿತ ಜನಾಂಗದ ಇಲ್ಲವೆ ವ್ಯಕ್ತಿಯ ಸೊತ್ತು ಅಲ್ಲ. ಅಸಾಮಾನ್ಯ ಪ್ರತಿಭೆಯಿಂದ ಆತನು ಹಾಡಿದ ಅನುಭವ ಜನಸಾಮಾನ್ಯರಲ್ಲಿ ಕಂಡುಬರುವ ಸಾಮಾನ್ಯ ಅನುಭವ. ದೇಶ-ದೇಶಗಳಲ್ಲಿ ಮನೆ ಮನೆಯಲ್ಲಿ ಕಂಡುಬರುವ ತರುಣ-ತರುಣಿಯರ ಪ್ರಣಯಲೀಲಾ ವಿಲಾಸಗಳು, ಕಾಲಿದಾಸನ ಕಾವ್ಯದಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿವೆ. ಕಾಲಿದಾಸನ ಕಾವ್ಯಪ್ರಪಂಚ ರಮ್ಯವಾದ ಪ್ರಣಯಪ್ರಪಂಚ. ಮಾಲವಿಕೆ, ಊರ್ವಶಿ, ಶಕುಂತಲೆ, ಇಂದುಮತಿ, ಯಕ್ಷನ ಕಾಂತೆಯಂಥಹ ನವಯೌವನದಿಂದ ತುಂಬಿ ತುಳುಕುವ ಸುಂದರ ಸ್ತ್ರೀಯರು; ಅಗ್ನಿಮಿತ್ರ, ಪುರೂರವ, ದುಷ್ಯಂತ, ಅಜ, ಯಕ್ಷರಂತಹ ಅನುರೂಪ ಪುರುಷರು; ಇವರನ್ನು ಪರಸ್ಪರರಲ್ಲಿ ಅನುರಕ್ತರನ್ನಾಗಿ ಮಾಡಿ, ಕೈಗೊಂಬೆಯಂತೆ ಕುಣಿಸುವ ಅನಂಗನಾದರೂ ಸರ್ವದಮನನಾದ ಮನ್ಮಥ; ಅವರ ತನು-ಮನಗಳು ಕೂಡಿದಾಗಿನ ಸಂಭೋಗ ಶೃಂಗಾರ; ಅವರು ಒಬ್ಬರನ್ನೊಬ್ಬರು ಅಗಲಿ ಬಳಲುವಾಗಿನ ವಿಪ್ರಲಂಭ ಶೃಂಗಾರ; ಅವರ ಪ್ರೇಮೋದ್ದೀಪಕರಾದ ವಸಂತ, ಚಂದ್ರ ಮೊದಲಾದವರು; ಅನಾಘ್ರಾತಪುಷ್ಪದಂತಿರುವ ನವತರುಣಿಯರ ಹಾವ-ಭಾವಗಳು, ಕೇಳಿ-ವಿನೋದಗಳು; ಅವರನ್ನು ಕಂಡು " ನ ಜಾನೇ ಭೋಕ್ತಾರಂ " ಎಂದು ಬಾಯ್ಬಿಡುವ ತರುಣರು; ಅವರು ಒಬ್ಬರನ್ನೊಬ್ಬರು ಕಾಣಲು ಪಡುವ ಹವ್ಯಾಸ, ಹಾಕುವ ಹಂಚಿಕೆ, ಹೇಳುವ ಸುಳ್ಳು, ಬರೆಯುವ ಪತ್ರ—ಇವೇ ಈ ಪ್ರಪಂಚದ ಮುಖ್ಯ ವಿಷಯಗಳು.

ಅಂತೆಯೇ ಆತನ ಕೃತಿಗಳು ಜಗತ್ತಿನ ಜನರಿಗೆ ಅಚ್ಚು-ಮೆಚ್ಚಾಗಿವೆ. ಯಾಕೆಂದರೆ ಪ್ರಣಯಿಗಳನ್ನು ಮೆಚ್ಚದವರಾರು? ಪ್ರಣಯ-ಪ್ರಣಯಿಗಳ ಪ್ರೇಮಕೇಳಿಗಳನ್ನು ಬಣ್ಣಿಸುವುದರಲ್ಲಿ ಹೇಗೋ ಹಾಗೆ, ಪಾತ್ರಸೃಷ್ಟಿಯಲ್ಲಿಯೂ ಕಾಲಿದಾಸ ಕುಶಲ. ಇತರ ಸಂಸ್ಕೃತ ನಾಟಕಕಾರರ ಪಾತ್ರಸೃಷ್ಟಿಗಿಂತ ಕಾಲಿದಾಸನ ಪಾತ್ರಸೃಷ್ಟಿಯಲ್ಲಿ ವೈವಿಧ್ಯ-ಕೌಶಲ್ಯ ಹೆಚ್ಚು; ಸಕೃತ್-ದರ್ಶನಕ್ಕೆ ಅವಳಿ-ಜವಳಿಗಳಂತೆ ಕಾಣುವ ಪಾತ್ರಗಳಲ್ಲಿ ಕೂಡ ಸೂಕ್ಷ್ಮಭೇದಗಳನ್ನು ಕಾಲಿದಾಸ ತೋರಿಸಬಲ್ಲ. ಪ್ರಿಯಂವದೆ, ಅನಸೂಯೆ, ಶಾರ್ಙ್ಗರವ, ಶಾರದ್ವತ ಪಾತ್ರನೋಡಿರಿ. ಕಾಲಿದಾಸನಲ್ಲಿ ಪಾತ್ರವೈವಿಧ್ಯವಿದೆ. ಕಾಶ್ಯಪ, ಕಣ್ವ, ದುರ್ವಾಸರಂತಹ ಪರಸ್ಪರ-ಭಿನ್ನಸ್ವಭಾವದ ಮಹರ್ಷಿಗಳು; ಕೌತ್ಸನಂಥ ನಿಸ್ಪೃಹ ಬ್ರಾಹ್ಮಣರು; ದಿಲೀಪ, ರಘು, ರಾಮರಂತಹ ಕರ್ತವ್ಯತತ್ಪರ ಧೀರೋದಾತ್ತ ರಾಜರು; ಅಗ್ನಿಮಿತ್ರ, ಪುರೂರವ, ದುಷ್ಯಂತರಂತಹ ಧೀರ ಲಲಿತ ವಿಲಾಸಿ ಅರಸರು; ಅಜ, ಯಕ್ಷರಂತೆ ಪತ್ನೀವಿಯೋಗದಿಂದ ಬಳಲುವ ಪ್ರೇಮಿಜೀವಿಗಳು; ಹರದತ್ತ-ಗಣದಾಸರಂತಹ ಕಲಾನಿಪುಣರಾದರೂ ಒಬ್ಬರನ್ನೊಬ್ಬರು ಕಂಡರೆ ಆಗದಂತಹ ನಾಟ್ಯಾಚಾರ್ಯರು; ವಿದೂಷಕರು, ಮೀನಗಾರರು, ಪೋಲೀಸರು; ಪ್ರಿಯಂವದೆ-ಅನುಸೂಯೆಯಂತಹ ಸಖಿಯರು; ಶಾರ್ಙ್ಗರವ ಶಾರದ್ವತರಂತಹ ಋಷಿಕುಮಾರರು; ಶಕುಂತಲೆ, ಇಂದುಮತಿ, ಪಾರ್ವತಿ, ಸೀತೆ, ಯಕ್ಷನ ಕಾಂತೆ, ಊರ್ವಶಿಯರಂತಹ ನಾರೀಮಣಿಗಳು; ಭರತ, ಆಯುಸ್, ರಘು, ಕುಮಾರರಂತಹ ಮುದ್ದು ಮುದ್ದು ಬಾಲಕರು; ಇಂತಹ ತರತರದ ಜನರ ಸಂತೆ ಕಾಲಿದಾಸನ ಕೃತಿಗಳಲ್ಲಿ ಕಾಣಬಹುದು. ಈ ಸಂತೆಯಲ್ಲಿ ಹೆಣ್ಣು ಕಣ್ಮನ ಸೆಳೆಯುವುವು. ಯಾಕೆಂದರೆ ಕಾಲಿದಾಸನು ಸೃಷ್ಟಿಸಿದ ಸ್ತ್ರೀಯರು, ಬ್ರಹ್ಮಸೃಷ್ಟಿಯಲ್ಲಿಯ ಸ್ತ್ರೀಯರಂತೆ, ಪುರುಷರಿಗಿಂತ ಹೆಚ್ಚು ಚಿತ್ತಾಕರ್ಷಕರಾಗಿದ್ದಾರೆ. ಷೇಕ್ಸ್‌ಪಿಯರನ್ನು ಬಿಟ್ಟರೆ, ಸುಂದರ ಸ್ತ್ರೀಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಕಾಲಿದಾಸನ ಕೈ ಹಿಡಿವವರೇ ಇಲ್ಲ. ಕಾಲಿದಾಸನ ಸೃಷ್ಟಿಯಲ್ಲಿಯ ಚಿಕ್ಕಮಕ್ಕಳು ಬಹಳ ಮುದ್ದುಮುದ್ದಾಗಿದ್ದಾರೆ. ಆದರೆ, ಅವರೆಲ್ಲರೂ ಬಾಲಕರೆ. ಮೋಹಕ ತರುಣಿಯರನ್ನು ನಿರ್ಮಿಸಿದ ಕಾಲಿದಾಸನಿಗೆ ಚಿಕ್ಕ ಬಾಲಿಕೆಯರು ಸೇರುತ್ತಿದ್ದಿಲ್ಲವೇನೊ! ಮಾನವ-ಜೀವನದ ಸೊಬಗು-ಸೌಂದರ್ಯಗಳನ್ನೂ ಆಶೆ-ಆಕಾಂಕ್ಷೆಗಳನ್ನೂ ಬಣ್ಣಿಸುವುದರಲ್ಲಿ ಹೇಗೋ, ಹಾಗೆಯೇ ಪ್ರಕೃತಿ ಸೌಂದರ್ಯವನ್ನು ಬಣ್ಣಿಸುವುದರಲ್ಲಿಯೂ ಕಾಲಿದಾಸನು ಶ್ರೇಷ್ಠ. ಬೆಟ್ಟಗಳು, ಹೊಳೆಗಳು, ಗಿಡ, ಬಳ್ಳಿ, ಹೂ, ಅಶೋಕ, ದೇವದಾರು, ಮಾಮರ, ನವಮಲ್ಲಿಕೆ, ಕೇಸರ, ಮಂದಾರ, ವನ, ಉಪವನ, ಬೆಳುದಿಂಗಳು ಇವನ್ನು ಕಂಡರೆ ಕಾಲಿದಾಸನಿಗೆ ಅದೆಷ್ಟು ಅಚ್ಚುಮೆಚ್ಚು! ಅವುಗಳ ವರ್ಣನೆ ಎಷ್ಟು ಸರಸ! ಹೆಚ್ಚೇನು, 'ನಿಸರ್ಗ ಅಚೇತನವಲ್ಲ, ಸಕಲ ಸೃಷ್ಟಿಯಲ್ಲಿಯೂ ಒಂದೇ ಚೈತನ್ಯ ತುಂಬಿದೆ; ಸ್ತ್ರೀ-ಪುರುಷರು, ವೃಕ್ಷ-ಲತೆಗಳು, ಬೆಟ್ಟ-ನದಿಗಳು ಒಂದೇ ಚೈತನ್ಯದ ಭಿನ್ನ ಭಿನ್ನರೂಪ' ಎಂಬ ಭಾವನೆ ಕಾಲಿದಾಸನಲ್ಲಿ ಬೇರೂರಿದೆ. ನಗಾಧಿರಾಜನಾದ ಹಿಮಾಚಲ, ತ್ರಿಭುವನ ಪಾವನೆಯಾದ ಗಂಗೆ, ಸೌಂದರ್ಯದ ತವರ್ಮನೆಯಾದ ಭರತಖಂಡದ ತರು-ಲತೆಗಳು, ಋತುಗಳು, ಸೂರ್ಯಾಸ್ತಗಳು, ಪುಷ್ಪಗಳು, ಅದ್ರಿ-ಶಿಖರಗಳು, ನದಿಗಳು, ನದಿಗಳ ಮೇಲಿನ ಮಂಜು ಇವುಗಳನ್ನು ಕಾಲಿದಾಸನಂತೆ ಹೊಗಳಿದವರಿಲ್ಲ. ಕಡೆಯದಾಗಿ ಕಾಲಿದಾಸನ ಸಂದೇಶ ಉತ್ಕೃಷ್ಟ ಸಂದೇಶ. ತುಂಬುಜೀವನವನ್ನು ಬಾಳಿರಿ. ಧರ್ಮ-ಅರ್ಥ-ಕಾಮಗಳು ಒಂದನ್ನೊಂದು ಕೊಲ್ಲದಂತೆ ಬೆಳಸಿಕೊಳ್ಳಿರಿ; ಶುಷ್ಕವೇದಾಂತಿಗಳಾಗಬೇಡಿರಿ; ಕೇವಲ ವಿಲಾಸಿಗಳಾಗಬೇಡಿರಿ; ತ್ಯಾಗ-ಭೋಗಗಳ, ವೇದಾಂತ-ವಿಲಾಸಗಳನ್ನೊಳಗೊಂಡು ಸಮರಸವಾದ ಜೀವನವನ್ನು ಬಾಳಿರಿ— ಎಂದು ಕಲಿಸುವವ ಕವಿಕುಲಗುರು; ಅಂತೆಯೇ ಬೇಂದ್ರೆಯವರು ಹೀಗೆ ಹಾಡಿದ್ದಾರೆ:

"ಹಿಂದಾಗಲಿಲ್ಲ, ಮುಂದಾಗಲಾರ, ಕವಿಕಾಲಿದಾಸ ನೀನು
ಶೃಂಗಾರದಿಂದೆ ನವಭಕ್ತಿರಸವ ಹೊಮ್ಮಿಸುವ ದಿವ್ಯಭಾನು,
ರಸಪತಿಯು ನಿನ್ನ ಸರಸತಿಯು ಸವಿಗೆ ತುಟಿಮುದ್ದು
ಹಾಲು-ಜೇನು!"

ಚಿಕ್ಕಮಕ್ಕಳೇ, ಇಂತಹ ಕಾಲಿದಾಸನ ಗ್ರಂಥಗಳನ್ನು ತಾವು ಓದಲೇ ಬೇಕು. ಮೂಲ ಸಂಸ್ಕೃತದಲ್ಲಿ ಓದುವುದು ತಮ್ಮೆಲ್ಲರಿಗೂ ಈಗಲೇ ಶಕ್ಯವಿಲ್ಲ. ಚಿಂತೆಯಿಲ್ಲ, ಕನ್ನಡದಲ್ಲಿ ಸರಸವಾದ ಭಾಷಾಂತರಗಳಿವೆ. ಬೇಂದ್ರೆಯವರ ಮೇಘದೂತ, ಜಂಬುಮಿಯವರ ಶಾಕುಂತಲ ಓದಿ, ಕಾಲಿದಾಸನ ರುಚಿನೋಡಿರಿ. ಒಮ್ಮೆ ರುಚಿನೋಡಿದರೆ ನೀವು ಬಿಡಲಿಕ್ಕಿಲ್ಲ. ಮುಂದಿನ ಭಾಷಣದಲ್ಲಿ ಶಾಕುಂತಲದ ರುಚಿ ನೋಡುವಾ!

ಕೈನೂಲಿನ ಶುದ್ಧ ಪವಿತ್ರ ಖಾದಿ!

ಹತ್ತಿ ಹಿಂಜುವುದರಿಂದ ಮೊದಲು ಮಾಡಿ ಬಟ್ಟೆ ಒಗೆಯಿಸುವವರೆಗೆ ಎಲ್ಲವನ್ನೂ ಹಳ್ಳಿಗರಿಂದ ಮಾಡಿಸಿದ— 'ಸ್ವದೇಶೀ' ಎಂಬ ಹೆಸರಿಗೆ ಸಂಪೂರ್ಣ ಯೋಗ್ಯವಾದ—ಖಾದಿಯ ಬಟ್ಟೆ, ಧೋತರ, ಪಂಜೆ ಇವೆಲ್ಲ ಬೇಕಾದವರು, 'ಜಯಂತಿ' ಕಾರ್ಯಾಲಯದಲ್ಲಿ ಬಂದು ವಿಚಾರಿಸಬೇಕು. ಉತ್ತಮೋತ್ತಮದ ನೂಲು—ನೇಗೆ. ಮೆಚ್ಚಿನಿಸದಂತಹ ಬೆಲೆ.

ಒಗಟೆ

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

[ನವಜಾತ ಶಿಶುವಿಗೂ—ತಂದೆಗೂ ಸಂಭಾಷಣೆ ನಡೆದಂತೆ ಭಾವಿಸಿ ಈ ಕವನವನ್ನು ರಚಿಸಿದೆ. ಲೇ.]

"ಎತ್ತಣಿಂದೈತಂದೆ, ಏಕೆ ಬಂದೆ?"
"ನೀನು ಬಂದತ್ತಣಿಂದಾನು ಬಂದೆ!
ನೀನೇತಕ್ಕೈತಂದೆ ಹೇಳು ತಂದೆ?"
"ಎಮ್ಮ ನಿಮ್ಮಿನ ಬಂಧವೇನು ಕಂದ?"
"ನಿನ್ನಷ್ಟೆ ನಾ ಬಲ್ಲೆನದರ ಅಂದ!"
"ಪಾಪಿ ಎನ್ನುದರದಲಿ ಜನಿಸಲೇಕೆ?"
"ಪಾಪಿಯಾಗಿಯೆ ಬಂದೆ! ಶಂಕೆ ಏಕೆ?"
"ಪಾಲುಣಿಸೆ ಹಣವಿಲ್ಲ; ಬಟ್ಟೆಗಿಲ್ಲ!"
"ಬೇಡೆಂದೆ ಕಸಕೊಂಡು ಕಳುಹಿರುವನಲ್ಲ!"
"ಮುಂದಕೆಲ್ಲಯ್ಯ ಗುರಿ, ಮಾತುಗಾರ?"
"ಮುನ್ನರಿತು ಬಂದೆನೇ ಇಲ್ಲಿಗಾರ!"
"ಪ್ರಶ್ನೆ ಪ್ರಶ್ನೆಯ ಹೆರಲು ಎಲ್ಲ ಒಗಟೆ!"
"ಜೀವನವೆ ಒಂದೊಗಟೆ! ಏಕೆ ಹರಟೆ?"

ಸುಮಸುಂದರಿ

ಶ್ರೀ. ಎಸ್. ಎಸ್. ಬಸುಪಟ್ಟದ

ಬಾ ಇಲ್ಲಿ, ಬಿರಿದಿಹುದು ಅರಳೊಂದು ಲತೆಯಲ್ಲಿ,
ಬಾನ್‌ದಳದಿ ಮಿನುಗುತಿಹ ಕಿರುತಾರೆಯಂತೆ,—
ತನ್ನ ಬೆಡಗನು ಬೀರಿ ಬಳುಕಿ ನಿಂದಿಹುದಿಲ್ಲಿ
ಸಿಂಗರವ ಸೂಸುತಿಹ ಕ್ರೊಡುಗೂಸಿನಂತೆ.
ಕಲೆಯ ನಿಪುಣತೆಯ ನವಸುಮವಾದುದೆಂಬಂತೆ
ಪ್ರಕೃತಿದೇವಿಯ ದಿವ್ಯಮಣಿಯೊಡವೆಯಂತೆ—
ಪರಮೇಷ್ಠಿಯನು ಪೆತ್ತ ಕಮಲ ತಾನೆಂಬಂತೆ
ಕಾವ್ಯವನಿತೆಯ ಸಾರಸರ್ವಸ್ವದಂತೆ.

ಬಿರಿದರಳಿನಂತೆಮ್ಮ ಬಾಳಿದ್ದೊಡೇನಾಯ್ತು?
ಅರಳಿನಂತದು ಮೋಹಕರವಾದರಾಯ್ತು!
ಬೆಲ್ಲವಾಗೆಲ್ಲರಿಗೆ ಚಣವಿದ್ದರೂನವೇನು?
ಅಲ್ಲವಾಗೆಲ್ಲರಿಗೆ ಯುಗಯುಗಗಳಿದ್ದರೇನು?

ತನ್ನಂತೆ ಮಾನವನ ಬಾಳಿರುವುದೆಂದು
ಸಾರುತಿದೆ ಜಗಕೆಲ್ಲ ಸುಮವಿಲ್ಲಿ ನಿಂದು!

ಸ್ವಾತಂತ್ರ್ಯ

ಶ್ರೀ. ವಿ. ಜಿ. ಭಟ್ಟ, ಕೊಲ್ಹಾಪುರ

ಅಮೇರಿಕೆಯ ಜೇಮ್ಸ್ ರಸೆಲ್ ಲಾವೆಲ್ಲರು ದಾಸ್ಯನಾಶಕ್ಕಾಗಿ ನುಡಿದಿದ್ದ Freedom ಎಂಬ ಕವನ ಕರಡಾಳ ನೋಡಿ: *

೧

ಸ್ವಾತಂತ್ರ್ಯವೆಂದೆಂಬ
ಬಿಂಕವದು ಬರಿಜಂಬ,
ಬಂಧುಗಳೊಳೊರ್ವನು ಸೆರೆಯ ನರಕದಲ್ಲಿರಲು;
ಬಾಂಧವರ ಬಂಧನವು
ದಾಸ್ಯದಾಕ್ರಂದನವು
ಮುಕ್ತಿಯುನ್ಮತ್ತತೆಗೆ ಜನ್ಮ-ವಿಂಚನುರುಳು!

೨

ನಿಜನಿರಂಕುಶಕಾಗಿ
ನೆರೆಹೊರೆಯ ಕ್ರಿಂತೇಗಿ
ಮನುಕುಲದ ಋಣವ ತೊಗಲೆದೆಯಿಂದ ಮರೆತು,
ದಬ್ಬಾಳಿಕೆ ವಿಕರಾಳ:
ಸ್ವಾತಂತ್ರ್ಯವೇ ಕೋಳ
ಸೋದರರ ಕಂಗಾಲ ಕೊಲಗಿಸಿದ ಹೊರತು!

ಅತಿಥಿ

ಶ್ರೀ. ವಿ. ಜಿ. ಭಟ್ಟ, ಕೊಲ್ಹಾಪುರ

(ಕವಿರವೀಂದ್ರರ ಗೀತಾಂಜಲಿಯ ಕವನವೊಂದನ್ನೋದಿ)

ಹಗಲು ನಮ್ಮ ಗುಡಿಗೆ ಬಂದು
ಹಂಗಲಿನಗೆ ತಾಣವೊಂದು-
ಮೂಲೆಯ ಬಳಿಯಾವುದೆಂದು
ಅತಿಥಿಗಳತಿ ಬೇಡಲು
ಅದನವರಿಗೆ ನೀಡಲು—
'ನಿಮ್ಮೊಡನೆಯೆ ನಾವು ದೇವ-
ಪೂಜೆಮಾಡಿ ದಣಿವು-ನೋವ
ಕಳೆವೆವನು ಕೃಪೆಯಲೀವ
ವರದಿಂದಲಿ' ಎಂದರು,
ಗುಡಿಯೊಳಗೆಯೆ ನಿಂದರು.
ನಿಶೆಯೊಳೆಲ್ಲ ಎದ್ದುಹೋಗೆ
ನುಗ್ಗಿ ಭಗ್ನಗುಡಿಯ, ಕಾಗೆ-
ಹಿಂಡು ಪುಂಡತಿಥಿಗಳಾಗಿ,
ಗುಡಿಯು ಶಾಂತಿಯುಡುಗಿತು.
ಪ್ರಾಣಪೀಠ ನಡುಗಿತು.

ಅವನು ತಂದೆಯಷ್ಟೇ ಉತ್ಸಾಹಶಾಲಿಯಾಗಿದ್ದಾನೆ

— ಅವರಿಬ್ಬರ ಸಾಹಸಕ್ಕೆ ಕೊನೆಯೇ ಇಲ್ಲ!

ನಿಜವಾಗಿಯೂ ಅವರಿಬ್ಬರೂ ಒಳ್ಳೆಯ ಜೋಡಿಯಾಗಿದ್ದಾರೆ! ನಿಜವಾಗಿಯೂ ಅವರಿಬ್ಬರೂ ಉತ್ಸಾಹಶಾಲಿಯರಾಗಿದ್ದಾರೆ! ಅವರಿಗೆ ಕೊಡುವ ಆಹಾರವು ಕಡಿಮೆಯಾದ ಚೇತನವನ್ನು ಪುನಃ ಪೂರ್ಣವಾಗಿ ಉಂಟುಮಾಡಲು ತಾಯಿ ಖಾತ್ರಿ ಮಾಡುತ್ತಾಳೆ — ವಿಟೆಮಿನ್‌ನಿಂದ ಕೂಡಿದ ಪೋಷಣ ಶಕ್ತಿಯುಳ್ಳ ಡಾಲ್ಡದಿಂದಲೇ ತಯಾರಿಸಿದ ರುಚಿಕರವಾದ ಆಹಾರವನ್ನು ಆಕೆ ಅವರಿಗೆ ಕೊಡುತ್ತಾಳೆ. ಶಕ್ತಿಕುಂದಿ ಆರೋಗ್ಯವು ಕೆಡಿಸಿಹೋಗುವ ಅಪಾಯವು ಅವರಿಗೆ ಎಂದೂ ಬಾರದು; ಏಕೆಂದರೆ, ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟೆಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ಚೇತನಕ್ಕಾಗಿ — ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ. ಡಾಲ್ಡ ಆಹಾರಕ್ಕೆ ಹೆಚ್ಚು ರುಚಿಯನ್ನು ಕೂಡ ಕೊಡುತ್ತದೆ.

ಡಾಲ್ಡ ತನ್ನಲ್ಲಿರುವ ವಿಟೆಮಿನ್ ಮೂಲಕ ದೇಹಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯಮಾಡುತ್ತದೆ . . . ವಿಟೆಮಿನ್‌ದಿಂದ ಕೂಡಿದ ಡಾಲ್ಡ ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಎಲ್ಲಾ ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ ವಿಟೆಮಿನ್ ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.

ವಿಟೆಮಿನ್‌ದಿಂದ ಕೂಡಿದ ಡಾಲ್ಡ ಮಾತ್ರ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಡುತ್ತದೆ — ಸೀಲು ಮಾಡಿದ ಡಬ್ಬಗಳಲ್ಲಿ ಮಾತ್ರ ಮಾರಲ್ಪಡುತ್ತದೆ

HVM. 22-192 KN

THE HINDUSTAN VANASPATI MANUFACTURING CO., LTD., BOMBAY

ಚಿನ್ನಪ್ಪನ ವನವಾಸ

(ಬರಗಾಲದ ಕರುಣಾಚಿತ್ರವೊಂದು)

ಶ್ರೀ. ಕೌಜಲಗಿ ಹಣಮಂತರಾಯರು ಬಿ.ಎ., ಎಲ್‌ಎಲ್.ಬಿ.,
ವಿಜಾಪುರ

★

"ಏನು, ವಕೀಲಸಾಹೇಬರು ಯಾಕ ನೋಡಲಾಕ ಹತ್ತೀರಿ? ಗುರುತು ಹತ್ತಾಗಿಲ್ಲೇನು?" ಎಂದು ಬರಗಾಲದ ಕೆಲಸದ ಮೇಲಿರುವ ಒಬ್ಬ ಹೆಣ್ಣುಮಗಳು ಮಾತನಾಡಿಸಿದಳು; ನಾನು ಸ್ತಂಭಿತನಾದೆ. ದಾರಿಯ ಬದಿಯಲ್ಲಿಯ ಆಗಿದಿರುವ ಒಂದು ಕಗ್ಗಿನ ಕಲ್ಲಿನ—ಕೈಯಲ್ಲಿ ಬುಟ್ಟಿ ಹಿಡಿದುಕೊಂಡು—ಆಕೆ ಹೊರಟಿದ್ದಳು. ನಾನು ಆಕೆಯನ್ನು ಬಹಳ ಸಲ ನಿಟ್ಟಿಸಿ ನಿಟ್ಟಿಸಿ ನೋಡಿದ್ದೇನು ನಿಜ. ಆ ಹೆಂಗಸಿನ ವಯಸ್ಸು ೪೦ ಕ್ಕೆ ಒಳಗೆ ಹೊರಗೆ ಇರಬಹುದು. ನನಗೆ ಆಕೆಯ ಗುರುತು ಹತ್ತಿದಂತೆ ಆಯಿತು; ಆದರೆ ನಾಗಠಾಣಪುರದ ಚಿನ್ನಪ್ಪ ಇಲ್ಲಿಗೆ ಬಂದಿರಬಹುದೆಂಬ ಕಲ್ಪನೆ ನನಗೆ ಬರಲಿಲ್ಲ. ಆದುದರಿಂದಲೇ ನಾನು ಅತ್ತ ನೋಡಿದೆ. ಕೊನೆಗೆ ಆಕೆಯೇ ಮಾತನಾಡಿಸಿದುದರಿಂದ ನಾನೂ ಮಾತನಾಡಲೇಬೇಕಾಯಿತು.

"ಹೌದವ್ವಾ, ನೋಡಿದ ಗುರುತು ಹತ್ತಿದಂತೆ ಆಯ್ತು; ಆಗಲಿಂದಲೇ ನಿನ್ನ ಕಡೆಗೆ ನಾಲ್ಕಾರು ಸಲ ನೋಡಿದೆ. ಆದರೆ ಮಾತನಾಡಿಸುವ ಧೈರ್ಯವಾಗಲಿಲ್ಲ. ನಾಗಠಾಣಪುರದ ಚಿನ್ನಪ್ಪ ಅಲ್ಲವೇ ನೀನು?" ಎಂದು ನಾನು ಅಂಜುತ್ತಲೇ ಕೇಳಿದೆ.

"ಹೌದರೆಪ್ಪಾ, ನಾನೇ ಆ ದುರ್ದೈವಿ ಚಿನ್ನಪ್ಪ! ಮನೀ ಮಾರು ಬಿಟ್ಟು ಇಲ್ಲಿ ಬಂದು ಇದ್ದೇನಿ!" ಎಂದು ನುಡಿದು ಚಿನ್ನಪ್ಪ ದೀರ್ಘವಾಗಿ ಉಸಿರೊಂದನ್ನು ಬಿಟ್ಟಳು.

ನಾನು ವಕೀಲವೃತ್ತಿಯಿಂದ ನಿವೃತ್ತನಾಗಿದ್ದರೂ, ಹಲವು ಕಕ್ಷಿಗಾರರು ನನ್ನ ಗುರುತನ್ನು ಇದುವರೆಗೂ ಮರೆತಿಲ್ಲ. ಅಂಥ ಮನೆತನಗಳಲ್ಲಿ ಚಿನ್ನಪ್ಪನ ಮನೆತನವೂ ಒಂದು.

ಚಿನ್ನಪ್ಪನ ಗಂಡನಿಗೆ— ಅವಿಭಕ್ತಕುಟುಂಬದಿಂದ ಪಾಲು ಕೊಡಿಸುವ ಕೆಲಸದಲ್ಲಿ ನನ್ನಿಂದ ಸ್ವಲ್ಪ ಸಹಾಯವಾಗಿತ್ತು. ಅದಕ್ಕಾಗಿ ನನಗೆ ಆಗಲೇ 'ಫೀ'ರೂಪದಿಂದ ತಕ್ಕ ಪ್ರತಿಫಲದ ಸಂದಾಯವಾಗಿ ಬಿಟ್ಟಿತ್ತು. ಆದರೂ ನನ್ನ ಸಣ್ಣ ಕೆಲಸವನ್ನೇ ದೊಡ್ಡ ಉಪಕಾರವೆಂದು ಭಾವಿಸಿ, ಕೊನೆಯ ದಿನಗಳ ನನ್ನ ಕೂಡ ಸಂಬಂಧವನ್ನು ಇಟ್ಟುಕೊಳ್ಳಬೇಕೆಂಬುದರಲ್ಲಿ ಆತನಿಗೂ ಆತನ ಮನೆಯವರಿಗೂ ಆನಂದವೆನಿಸುತ್ತಿತ್ತು. ಚಿನ್ನಪ್ಪ, ಭೀಮಪ್ಪ, ಅವರ ಮಕ್ಕಳು ಎಂದರೆ ನನಗೂ ಬಲು ಪ್ರೀತಿಯೆನಿಸುತ್ತಿತ್ತು. ಅವರು ವರ್ಷದಲ್ಲಿ ಒಂದು ಸಲವಾದರೂ ನಮ್ಮ ಮನೆಗೆ ಬಾರದೆ ಇದ್ದರೆ, ನಮ್ಮ ಮನೆಯವರೆಲ್ಲರಿಗೂ ಚಡಪಡಿಕೆಯೆನಿಸುತ್ತಿತ್ತು. ನಮ್ಮ ಅವರ ಮನೆತನದ ಸಂಬಂಧವು ಹೀಗಿರುತ್ತಿರುವಾಗ, ಚಿನ್ನಪ್ಪ ಹಾಗೆ ಸಿಟ್ಟಿಸಿದ ಬುಟ್ಟಿಯನ್ನು ಕಂಡು ನನ್ನ ಅಂತಃಕರಣಕ್ಕೆ ಬರೆ ಎಳೆದಂತಾಯಿತು.

"ಎಷ್ಟು ಸೊರಗಿ ಹೋಗಿದ್ದೀಯವ್ವಾ! ಬಿಟ್ಟರೆ ನಿನ್ನ ಗುರುತು ಕೂಡ ಸಿಕ್ಕುತ್ತಿಲ್ಲ ನನಗೆ!" ನಾನೆಂದೆ.

"ಸೊರಗದೆ ಏನ ಮಾಡ್ಲಿ ಯಪ್ಪಾ! ಹೊಟ್ಟೆಯಾಕ ನಾಯೀನು ಇಲ್ಲಿ ತನ್ನನ್ನು ಮಾಡಿಸಿಕೊಳ್ಳಲಾಕ ಬಂದಿನಿ?" ಹೀಗೆ ಹೇಳುತ್ತಿರುವಾಗಲೇ ಚಿನ್ನಪ್ಪ, ಕೈಯಲ್ಲಿದ್ದ ಬುಟ್ಟಿಯನ್ನು ಕೆಳಕ್ಕೆ ಇಳಿಸಿ ಕುಳಿತಳು.

★

ಬರಗಾಲ, ಸ್ವರ್ಗದಂತಹದೆ ಎಷ್ಟೊಂದು ಸುಂದರ ಸಂಸಾರಗಳನ್ನು ನರಕಕೂಪದಲ್ಲಿ ಚೆಲ್ಲಿರುವುದೆಂಬುದನ್ನು, ಹೊಟ್ಟೆ ತುಂಬಿದವರು ಕಣ್ತೆರೆದು ನೋಡುವುದಿಲ್ಲ. ಭಾಗ್ಯಲಕ್ಷ್ಮಿಯಂತಿದ್ದ ಚಿನ್ನಪ್ಪ ಇಂದು ಬಡತನದ ಮೂರ್ತಿಯಾಗಿ ಬಿಟ್ಟಿದ್ದಾಳೆ.

★

ನನ್ನ ಕಣ್ಣಿಗೆ ಕತ್ತಲು ಕವಿದಂತಾಯಿತು. ಜೀವನದ ತೆರೆಯಲ್ಲಿ ತೆರೆಯುದು ತೆರೆಯುದು ಒಬ್ಬ ಕಂಬದ ವರೆಗೂ ಸರಿಯುತ್ತಿತ್ತು, ಹಾಗೆಗೆ ಕೈಹಚ್ಚಿಕೊಂಡು ಕುಳಿತ ಚಿನ್ನಪ್ಪನಾಗ ಕಣ್ಮರೆಯಾದಳು; ಆಕೆಯ ಸ್ಥಳದಲ್ಲಿ ಹಿಂದಿನ ಚಿನ್ನಪ್ಪ ನನಗೆ ಕಾಣತೊಡಗಿದಳು.

ಸಂತೆಯ ದಿನ ಚಿನ್ನಪ್ಪನು ತಪ್ಪದೆ ನಮ್ಮ ಮನೆಗೆ ಬರುತ್ತಿದ್ದಳು; ಆಕೆ ಹೊಸತಿಲೊಳಗೆ ಕಾಲಿಟ್ಟೊಡನೆಯೇ ನಮ್ಮ ಮನೆಯ ಹುಡುಗರು 'ಚಿನ್ನಪ್ಪ ಬಂದಳು! .... ಚಿನ್ನಪ್ಪ ಬಂದಳು!' ಎಂದು ಕುಣಿದಾಡುತ್ತಿದ್ದರು. ಚಿನ್ನಪ್ಪನೆಂದರೆ ನಮ್ಮ ಮಕ್ಕಳಿಗೆ ಅಷ್ಟೊಂದು ಪ್ರೀತಿ; ಏಕೆಂದರೆ ಆಕೆ ನಮ್ಮ ಮನೆಗೆ ಬರುವಾಗ ಬರಿಯ ಕೈಯಿಂದ ಎಂದೂ ಬರುತ್ತಿರಲಿಲ್ಲ. ಸವತೀಕಾಯಿ, ಬದನೆಕಾಯಿ, ಬಟಗಡಲೆ, ಏನೂ ಇಲ್ಲವೆಂದರೂ ಕೊನೆಗೆ ಕುಂಬಳಕಾಯಿ— ಸಂಗಡ ತಂದೇ ತರುತ್ತಿದ್ದಳು.

ಚಿನ್ನಪ್ಪನ ಉಡಿಗೆ-ತೊಡಿಗೆ ಅಷ್ಟೇನೂ ಡೌಲಿನವಿರದೆ, ಸಾಮಾನ್ಯತರದವು ಇರುತ್ತಿದ್ದುವು. ಜರದ ಗೊಂಡೆ ಹಚ್ಚಿದ ಸಕ್ಕಿಯ

ಚಪ್ಪಲಿಯನ್ನು ಕಾಲಲ್ಲಿ ಹಾಕಿಕೊಂಡು, ಅದರಾಚೆ ಅಂಚಿನ ಕುಂಕುಮಗೆರೆಯ ಸೀರೆಯನ್ನುಟ್ಟು, [illegible] ಕುಪ್ಪಸವನ್ನು ತೊಟ್ಟು ಆಕೆ ಬರುತ್ತಿದ್ದಳು. ತಲೆಯ ಸೆರಗ ಗಂಟು ಬಾಗಿಲ ಚೌಕಟ್ಟಿಗೆ ತಾಗಬಾರದೆಂದು ಬಹಳ [illegible]— ನಿಧಾನವಾಗಿ—ಬಾಗಿಲ ಹೊಸತಿಲೊಳಗೆ ಕಾಲಿಡುವುದನ್ನು ನೋಡಿದಾಗ, ನಮ್ಮ ಮನೆಯಲ್ಲಿ ಲಕ್ಷ್ಮೀಪ್ರವೇಶವಾಗುತ್ತಿರು-ವುದೋ ಏನೋ ಎಂದೆನಿಸುತ್ತಿತ್ತು. ನಮ್ಮ ಮನೆಯಲ್ಲಿಯ ಹುಡುಗರಲ್ಲಿ ಯಾರುಯಾರಿಗೆ ಏನೇನು ಬೇಕಾಗುವುದೆಂಬುದು ಚೆನ್ನವ್ವನಿಗೆ ಚೆನ್ನಾಗಿ ಗೊತ್ತು. ಒಬ್ಬನಿಗೆ ಎಳೆಸೌತೆಕಾಯಿ ಬೇಕಾಗುತ್ತಿದ್ದರೆ ಮತ್ತೊಬ್ಬನಿಗೆ ಬೊರೇಕಾಯಿ; ಮಗುದೊಬ್ಬಳಿಗೆ ನೇರಳೆಹಣ್ಣು ಬೇಕಾದರೆ ಮತ್ತೊಬ್ಬ ಮಗುವಿಗೆ ಮಾವಿನಕಾಯಿ ಬೇಕು. ಎಲ್ಲ ಹುಡುಗರನ್ನೂ ಮುಂದೆ ಕೂಡಿಸಿಕೊಂಡು ಚೆನ್ನವ್ವನು ತನ್ನ ಗಂಟು ಬಿಚ್ಚುತ್ತಿದ್ದಳಲ್ಲದೆ, ಎಲ್ಲರನ್ನು ಸಂತೋಷಪಡಿಸುತ್ತಿದ್ದಳು. ಪ್ರತಿಯಾಗಿ ಚೆನ್ನವ್ವನಿಗೆ [illegible]ವಂತಹ ಕೆಲವು ಪದಾರ್ಥಗಳು ನಮ್ಮ ಮನೆಯವರಿಗೆ ಗೊತ್ತಿದ್ದುವು. ಆಕೆ ಬಂದ ಕೂಡಲೆ ಅವುಗಳನ್ನು ಸಿದ್ಧ-ಮಾಡುವುದರಲ್ಲಿ ಅವರು ತಪ್ಪರು. ಪ್ರತಿಸಲವೂ ಚೆನ್ನವ್ವನಿಗೆ 'ಬಯಕೆ'ಯಾದ ಕೂಡಲೆ ಸಂಡಿಗೆ, ಹಪ್ಪಳ, ಉಪ್ಪಿನಕಾಯಿ ಮುಂತಾದುವುಗಳು ನಮ್ಮಲ್ಲಿಂದ ಹೋಗಲೇಬೇಕು. ಆಕೆಯು ಬಂದಾಗ 'ಸಂಡಿಗೆ, ಹಪ್ಪಳ ಬೇಕೇನು?' ಎಂದು ಕೇಳಿ ಎಷ್ಟೋಸಾರೆ ಚೇಷ್ಟೆಮಾಡುವ ವಾಡಿಕೆ ಇತ್ತು.

ಚೆನ್ನವ್ವನ ಊರಿಗೆ ನಾವು ಹೋದರಂತೂ ಚೆನ್ನವ್ವನ ಗಡಿಬಿಡಿ-ಯನ್ನು ಹೇಳಲಾಸಲ್ಲ. ಶೀನಪ್ಪನ ಮನೆಯಲ್ಲಿ [illegible] ಮನೆಯ ಗದ್ದಲವೇ ಆರಂಭವಾಗುವುದು. ವರ್ಷದಲ್ಲಿ ಒಂದೆ-ರಡು ಸಲವಾದರೂ ನಾವು ಅವರ ಊರಿಗೆ ಸಕುಟುಂಬ ಹೋಗುವ ವಾಡಿಕೆ. ನಮ್ಮನ್ನು ಕರೆದೊಯ್ಯಲಿಕ್ಕೆ ಮುನ್ನಾ ದಿವಸ ಅವರ ಊರಿಂದ ಎತ್ತಿನಬಂಡಿ ಬರುತ್ತಿತ್ತು. ಕೊರಳಲ್ಲಿ ಗೆಜ್ಜೆಸರ ಕಟ್ಟಿದ—ಗಂಡೆರಳೆಯಂತೆ ಚಪಲವಾದ—ಎತ್ತುಗಳನ್ನು ಹೂಡಿದ ಬಂಡಿಯಲ್ಲಿ ಕುಳಿತು ನಾವು, [illegible] ದೇವರ ಓಕಳಿಗಾಗಲಿ, ಮಾರ್ಗಶೀರ್ಷದಲ್ಲಿ [illegible] ನಾಗಣಾಪುರಕ್ಕೆ ಹೋಗುತ್ತಿದ್ದೆವು. ನಮ್ಮ ಬಂಡಿ ಶೀನಪ್ಪನ ಮನೆಯನ್ನು ತಲ್ಪುವ ಮೊದಲೆ, [illegible] ಚೆನ್ನವ್ವನು ಬಾಗಿಲಿಗೇ ಬಂದು ನಿಲ್ಲುತ್ತಿದ್ದಳು. [illegible] ಮೇಲಿನ ಪಟ್ಟೆಬಟ್ಟಿನ ಮೇಲೆ ಕುಂಕುಮದ ಬೊಟ್ಟಿಟ್ಟು ಪ್ರಸನ್ನವದನದಿಂದ ನಿಂತ ಚೆನ್ನವ್ವನನ್ನು ನೋಡಿದರೆ ನನಗೆ ಗ್ರಾಮದೇವತೆಯನ್ನು ನೋಡಿದಂತೆನಿಸುತ್ತಿತ್ತು. [illegible] ದೇವರ ಓಕಳಿ ಇದ್ದರೆ, ಸಾಯಂಕಾಲದಲ್ಲಿ ದೇವರ ದರ್ಶನ ಮಾಡಿಕೊಂಡು, ಕಾಯಿ ಒಡೆಸಿಕೊಂಡು ನಾವು [illegible] ಮರಳುತ್ತಿದ್ದೆವು. [illegible] ಸಮಾರಂಭ [illegible] ನಮ್ಮ ತಿಳಿವಿಗೆ ಬರುತ್ತಿರಲಿಲ್ಲ.

ಎಷ್ಟೋ [illegible] ಜನರಿಗೆ 'ಓಕಳಿ' ಎಂದರೇನು ಗೊತ್ತಿಲ್ಲ. [illegible]

[illegible]

[illegible]

ಬಗಲಲ್ಲಿ ಕುಳಿತ ನಮ್ಮ ಚಿಕ್ಕಮಕ್ಕಳು, ನಮ್ಮ ಕೂಡ ಊರಿಗೆ ಬರಲು ಒಪ್ಪುತ್ತಿರಲಿಲ್ಲ. ಅವುಗಳನ್ನು ಒತ್ತಾಯದಿಂದ ಬಂಡಿಯಲ್ಲಿ ಕೂಡಿಸಿದರೂ, ನಾಳೆ ಮತ್ತೆ ಕಡಲೆಗಿಡ, ಕಬ್ಬು ತರುವೆನೆಂದು ಚಿನ್ನವ್ವನು ಆಶ್ವಾಸನಕೊಡುವ ವರೆಗೂ ನಮ್ಮ ಮಕ್ಕಳು ಸಮಾಧಾನಗೊಳ್ಳುತ್ತಿರಲಿಲ್ಲ. ಒಂದೆರಡು ಚಿಕ್ಕಮಕ್ಕಳನ್ನು ತನ್ನ ಹತ್ತಿರ ಒಂದೆರಡು ದಿನಸ ಇಟ್ಟುಹೋಗಲು ಚಿನ್ನವ್ವನು ಎಂದಿನಂತೆ ಆಗ್ರಹಮಾಡುವಳು. ನಮ್ಮ ಕೂಡ ಬರಲು ಒಪ್ಪದ ಚಿಕ್ಕಮಗುವನ್ನು ಪ್ರೇಮದಿಂದ ಬಗಲಲ್ಲಿ ಅವಚಿಕೊಂಡು ನಗುತ್ತನಿಂತ ಚಿನ್ನವ್ವನು, ಇನ್ನೂ ನನ್ನ ಕಣ್ಣುಮುಂದೆ ಕಟ್ಟಿದಂತೆ ಇರುವಳು. ಆ ಚಿನ್ನವ್ವನನ್ನು ಹೇಗೆ ಮರೆಯಲಿ? ಈಗಿಲ್ಲ ಮಣ್ಣಿನ ಬುಟ್ಟಿಯನ್ನು ಮುಂದೆ ಒಗೆದುಕೊಂಡು ಸಿಟ್ಟುಸಿರುಬಿಡುತ್ತ ಕುಳಿತ ಬೇರೊಬ್ಬ ಚಿನ್ನವ್ವನು ಈ ಜಗತ್ತಿನಲ್ಲಿರುವುದನ್ನು ಹೇಗೆ ಅರಿಯಲಿ?

ಚಿನ್ನವ್ವನಂತೂ ನನ್ನ ಮುಂದೆ ಬುಟ್ಟಿ ಒಗೆದು ಕುಳಿತುಬಿಟ್ಟಳು. "ಗೈರಹಾಜರಿ ಹಾಕ್ತೈತಿ ನೋಡು— ಗಡಾ ಬಾ!" ಎಂದ ಗೆಂಗಣ್ಣನ ಕೂಗು ಆಕೆಯ ಕಿವಿಗೆ ಬಿದ್ದರೂ, ಅತ್ತ ಅವಳ ಲಕ್ಷ್ಯವಿಲ್ಲ. "ಹೋಗೋ, ಹೋಗು! ಹಚ್ಚು, ಗೈರ್‌ಹಾಜರಿ! ಹತ್ತರ ಉಪಾಸ ಸಾಯತೇನು" ಎಂದು ಅವಳು ಕೂಗಿ ಹೇಳಿದಳು. ನಾನಂತೂ ದಿಙ್ಮೂಢನಾಗಿ ಕುಳಿತಿದ್ದೆ; ಏನುಮಾತನಾಡಬೇಕೆಂಬುದು ತೋಚದರಲ್ಲವೆ ಮಾತನಾಡುವುದು?

ಭೀಮಣ್ಣನು ಕುಟುಂಬಸಹಿತವಾಗಿ ಗುಳೇಹೋಗಿದ್ದನೆಂಬುದು ಮಾತ್ರ ಗೊತ್ತಿತ್ತು; ಆ ಮೇಲೆ ಅವನ ಕುಟುಂಬದ ಸುದ್ದಿಯೆ ನಮಗಿರಲಿಲ್ಲ.

"ನಾಗಣಾಪುರದಲ್ಲಿ ಎಲ್ಲರೂ ನೆಟ್ಟಗಿದ್ದಾರಲ್ಲವೇ ಚಿನ್ನವ್ವಾ?" ಎಂದು ಏನಾದರೊಂದು ಮಾತನಾಡಬೇಕೆಂದು ಕೇಳಿದೆ.

"ಎಲ್ಲೀ ನಾಗಣಾಪುರೋ ಯಪ್ಪಾ! ನಾಗಣಾಪುರ್ನಬಿಟ್ಟು ಆತು ಈಗ ಆರು ತಿಂಗಳು! ಹೀಂಗss ಪಿರಿಪಿರೀ ಊರು ಊರು ತಿರಗಲಾಕಹತ್ತಿದೀವು. ಎರಡು ಮೂರು ವರಸದಿಂದ ಬೆಳೀನs ಇಲ್ಲ. ಈ ವರಸಂತೂ ಬಿತ್ತಿದ ಬೀಜ ನಾಟಲಿಲ್ಲ. ಸಂಕ್ರಾಂತಿಗೆ ನಮ್ಮ ಹಣೇಬಾರ ನಮಗ ತಿಳಿದುಹೋತು. ಮೊದಲ ಗುಳೇಕಿತ್ತಿ ಬಂಕಾಪುರ, ಅಲ್ಲಿಂದ ಕಲಘಟಗೀ ಕಡೆ ಹೋದ್ವಿ. ಹಾಂಗೂ ಹೀಂಗೂ ಹೊಟ್ಟೀತುಂಬಿಕೋತ ಇದ್ದೀವೇನಪಾ ಯಪ್ಪಾ! ಕೋಳೀ ತತ್ತೀಹಾಂಗ ಬೆಳ್ಳಗಿದ್ದ ಬಂಗಾರದಂತಾ ನಮ್ಮ ಎತ್ತುಗಳನ್ನ ನಾವs ಕೂತು ಕಟಕರ ಕೈಗೆ ಕೊಟ್ಟೆವು. ಕಲಘಟಗಿಗೆ ಹೋದವ್ಯಾಗ ಎತುಗೋಳು ಮೇವs ಬಿಟ್ಟವು, ಮಲ್ನಾಡದಾಗಿನ ನೊಣಾ ದನಗಳ ಮೈಗೆ ಕಡಿದರ ದನಗಳು ಮೇವು, ನೀರು ಎಲ್ಲಾ ಬಿಟ್ಟುಬಿಡತಾವೆಪ್ಪಾ...." ದಳದಳ ಕಣ್ಣಲ್ಲಿ ನೀರನ್ನು ಸುರಿಸುತ್ತ ತನ್ನ ದುಃಖದ ಕತೆಯನ್ನು ಸಾಗಿಸಿ, ಮತ್ತೆ ಹೀಗೆ ಹೇಳತೊಡಗಿದಳು: "ಹೀಂಗಾಗಿ ಸೊರಗಿ ಕಡ್ಡಿ ಆದೂ ದನ ಎಲುವು ಕಾಣಲಾಕ ಹತ್ತಿದು. ಅವುಗಳ ಬವಣೀ ನೋಡಿ ಮನಾ ಮರಿಗಿತು. ನೋಡುವದಾಗಲಿಲ್ಲ. ಮೆತ್ತನ್ನ ಮಾತು ಆಡತಾ ಅಲ್ಲಿಗೆ ಒಬ್ಬ ಬಂದ. ಅಂವಗ ನಮ್ಮ ಎತ್ತು ಮಾರಿಬಿಟ್ವಿ. ಅಂವ ಕಟಕರ ದಲಾಲ ಅಂಬೋದು ಹಿಂದಿನಿಂದ ತಿಳೀತು. ಏನುಮಾಡೂದೈತಿ? ನಮ್ಮ 'ದೇವ್ಯಾ,' 'ಪಟಾಣ್ಯಾ,' ಇಬ್ಬರನ್ನೂ ಇದs ಕೈಲೆ ಕಟಕರ ಕೈಯಾಗ ಬಲಿಕೊಟ್ಟು ಕುಂತೀವಿ!"

ಎತ್ತುಗಳ ಪುರಾಣವಿನ್ನೂ ಬೆಳೆಯುವಂತೆ ತೋರಿತು. ಹೊಟ್ಟೆಯಲ್ಲಿ ತುಂಬಿದ ದುಃಖವನ್ನು ತೋಡಿಕೊಳ್ಳಲಿಕ್ಕೆ ಕಳೆದ ಆರು ತಿಂಗಳಲ್ಲಿ ಚಿನ್ನವ್ವನಿಗೆ ಅವಕಾಶವೇ ಸಿಕ್ಕಿರಲಿಲ್ಲ. ಇಂದಿನ ಚಿಂತೆ ಅಂತೂ ದೂರವಾಯಿತೆನ್ನುವಷ್ಟರಲ್ಲಿ ಎರಡನೆಯ ದಿವಸ ಬರುವುದು. ಹೊಸ ದಿನದ ಸಂಗಡ ಹೊಸ ಚಿಂತೆಯೂ ಬರುವುದು. ಜೋಳ ಸಿಕ್ಕರೆ ಮೆಣಸಿನಕಾಯಿ ಇಲ್ಲ, ಮೆಣಸಿನಕಾಯಿ ಸಿಕ್ಕರೆ ಉಪ್ಪು ಇಲ್ಲ. ಅಡಿಗೆಯ ಸಾಮಾನು ಸಿಕ್ಕರೆ ಉರುವಲು ಇಲ್ಲ, ಉರುವಲು ಇದ್ದರೆ ಒಲೆಹೂಡಲಿಕ್ಕೆ ಸ್ಥಳವಿಲ್ಲ. ಈ ರೀತಿ ಆರುತಿಂಗಳು ಚಿನ್ನವ್ವನ ಸಂಸಾರ ಸಾಗಿತು. ಇಂತಹ ಪರಿಸ್ಥಿತಿಯಲ್ಲಿ ಪಾಪ ಅವಳೇನು ಮಾಡುವಳು?

"ರಾಮನು ದೊಡ್ಡವನಾಗಿರಬಹುದಲ್ಲವೆ?" ವಿಷಯ ಬದಲಿಸುವ ಉದ್ದೇಶದಿಂದ ನಾನು ಕೇಳಿದೆ. ಆದರೆ ಈ ಪ್ರಸಂಗವಾದರೂ ಮೈಮೇಲೆಯೆ ಬಂತು.

"ನನ್ನ ಮಗಾ ದೊಡ್ಡವನಾಗ್ಯಾನೆಪ್ಪಾ, ಬರಗಾಲ ಕೆಲಸದ ಬುಟ್ಟೀಹೊರಾಕ. ನನ್ನ ರಾಮು ಖಬ್ಬು ಆಗಿದ್ದ ಖಬ್ಬು! ಅಂವ ಗರಡೀ ಆಳು ಆಗಾಂವ ಇದ್ದ. ಅಂವಗಾಗಿ ಎಮ್ಮಿ ಒಂದು ಮೊಲೆಯ ಹಾಲನ್ನs ಮಾಸಲಾಗಿಡತಿದ್ದೆ!" 'ನಿನ್ನ ಮಗಾ ಏನು ಗಾಮಾ ಪಂಜಾಬೀ ಪೈಲ್‌ವಾನ್ ಆಗಾಂವ ಅದಾನೇನು? ಏಟೊಂದು ಅಚ್ಚೀವು ಮಾಡತೀ!' ಅಂತ ಅಂವ ನನಗ ಸಿಟ್ಟುಮಾಡತಿದ್ದ. ನಾನು ಅದೆಲ್ಲಾ ಪಂಚೇತಿಯಾಕ?— ಅಂತ ಹೇಳಿ, ಕೇಳಾಣಿಲ್ಲ ಅಂತ ಹೇಳತಿದ್ದೆ. ಆದರ, ಕಲಘಟಗೀಕಡೆ ಹೋದವ್ಯಾಗ ಎಲ್ಲಾ ಬದಲಾಯಿತ್ರಿ. ಖಬ್ಬನಂತಾ ಹುಡುಗನ ಹೊಟ್ಯಾಗ ಒಂದು ಗಂಟುಹುಟ್ಟಿತು ನೋಡೆಪ್ಪಾ! 'ಹೊಟ್ಟೀ ಡುಮ್ಮಾ ಕೈಕಾಲು ಸಣ್ಣಾ' ಆಗಿ, ಹುಡುಗ ಕೈಬಿಡಲಾಕs ಕುಂತಿತ್ತು. ದೇವರ ದಯದಿಂದ ಇಂದಿನ ತನಕಾ ಬದಿಕ್ಕಿ ಬಂದಾನು. ಅಲ್ಲಿ ನೋಡೆಪ್ಪಾ, ಆ ಬೇವಿನಗಿಡದಾಚೀಕ ಮಣ್ಣು ಹಚ್ಚತಾನು—ಅವನs ರಾಮು!' ಹೀಗೆಂದು ಅವಳು ಆ ದಿಕ್ಕಿನಕಡೆಗೆ ಬೆರಳುಮಾಡಿ ತೋರಿಸಿದಳು. ನನಗೆ ಆ ಕಡೆಗೆ ನೋಡುವ ಧೈರ್ಯವೆ ಆಗಲೊಲ್ಲದು.

ಈ ಮೊದಲು ನಾನು ರಾಮುನನ್ನು ನೋಡಿದ್ದು ಅವನು ೧೪ ವರ್ಷದವನಿದ್ದಾಗ; ಬೆಳಸಿಗಾಗಿ ಬಂಡಿಯನ್ನು ತಕ್ಕೊಂಡು ನಮ್ಮನ್ನು ಕರೆಯಲಿಕ್ಕೆ ಭೀಮಪ್ಪನ ಸಂಗಡ ಬಂದಾಗ. ಆದರೆ ನಾಗರಪಂಚಮಿ ಅಥವಾ ರಂಗಪಂಚಮಿಯಲ್ಲಿ ಆಗುವ ಪಂಬ್ಯಾಟಗಳಲ್ಲಿ ಅವನು, ೧೮–೨೦ ವಯಸ್ಸಿನ ಹುಡುಗರೂ ತನ್ನ

ಎದುರು ತಲೆತಗ್ಗಿಸುವಂತೆ ಮಾಡುತ್ತಿದ್ದನು. ಅಂತಹ ಆ ರಾಮು, ಇಂದಿನ ಈಗಿನ ಈ ಬರಗಾಲ ಕೆಲಸದ ಮೇಲಿನ ರಾಮು! ಎಷ್ಟು ಅಂತರ? ಅವನು ದೂರದಲ್ಲಿದ್ದದ್ದೇ ಒಳಿತಾಯಿತು. ಸಮೀಪದಲ್ಲಿ ಬಂದಿದ್ದರೆ ನನಗೆ ಅಳುವು ಬರಬಹುದಾಗಿತ್ತು. ಚಿನ್ನವ್ವನ ಕೂಡ ಮಾತನಾಡುವುದನ್ನು ಬಿಟ್ಟು ಎಲ್ಲಿಯಾದರೂ ಓಡಿಹೋಗಬೇಕೆಂಬ ವಿಚಾರಬಂದಿತು; ಆದರೆ ಅದಕ್ಕೂ ಮನಸ್ಸು ಒಪ್ಪಲಿಲ್ಲ.

"ಕಲಘಟಗಿಯಿಂದ ಇತ್ತ ಕಡೆಗೆ ಎಂದು ಬಂದಿರಿ ಚಿನ್ನವ್ವಾ?" ಎಂದು ಮತ್ತೆ ನಾನು ಕೇಳಿದೆ.

"ಉಗಾದೀ, ಪಾಡ್ಡೇ ಆದನಂತರ ಎಂಟ್ಹತ್ತು ದಿನಗಳಲ್ಲಿ ಅಲ್ಲಿಯ ಸುಗ್ಗಿ ಮುಗಿಯಿತು. ಮುಂದೆ ಅಲ್ಲಿ ಇದ್ದು ಏನು ಮಾಡೂದೈತಿ? ಕೆಲಸ ಹತ್ತಲಿಲ್ಲ. ಒಬ್ಬರಹಿಂದ ಒಬ್ಬರಿಗೆ ಸಣ್ಣಾಗಿ ಉರೀ ಬರಹತ್ತಿದು. ಏನಾಯಿತೋ ಯಾರಿಗೆ ಗೊತ್ತು, 'ಹಿರ್‍ಯಾ'ನ ಮುಂದಿನ ಹಲ್ಲು ಬಿದ್ದ ಮುದುಕನ ಗತಿ ಕಾಣಲಾಕ ಹತ್ತ್ಯಾನ! ಮುಂದೇನು ಮಾಡಬೇಕು ಇದಽ ತಿಳೀಲಿಲ್ಲ. ಊರಿಗೆ ತಿರಿಗಿ ಬಂದರ ಅಲ್ಲಿ ಇದ್ದುಕೊಂಡು ತಿನ್ನೂದೇನು? ಇಷ್ಟರಾಗಽ ಮೋಟಾರಿನವರು, ರಸ್ತೇದ ಕೆಲಸ ಸುರುವಾಗ್ಯಾವ ಅಂತ ಹೇಳಿದರು. ಇದು ತಿಳಿಯುತಲೇನಽ ನಾವೆಲ್ಲರೂ ಹೊಂಟುಬಂದಿವು."

"ನಿನ್ನ 'ಪುತಳಾ' ಎಲ್ಲಿ ಹೋದಳು?"—

ಚಿನ್ನವ್ವನನ್ನು ನಗಿಸುವ ಉದ್ದೇಶದಿಂದ ನಾನು ಕೇಳಿದೆ. ಪುತಳಾ' ಎಂದರೆ ಚಿನ್ನವ್ವನ ಪ್ರೀತಿಯ ಪುತ್ಥಳಿ ಎಮ್ಮೆ. ಅನೇಕ ಸಲ ಅದರ ಧಾರೋಷ್ಣ ಹಾಲನ್ನು ನಾವು ಕುಡಿದಿದ್ದೆವು. ಪುತಳಿಯ ಬಗ್ಗೆ ವಿಚಾರಿಸುವುದೆಂದರೆ ಚಿನ್ನವ್ವನ ಪ್ರೀತಿಯ ಮಗಳ ಕ್ಷೇಮಸಮಾಚಾರವನ್ನು ಕೇಳಿದಂತೆ. ಪುತಳಿಯು ಈದ ಸುದ್ದಿ ನಮಗೆ ತಿಳಿಯಲಿಕ್ಕೇ ಬೇಕು. ಯಾಕೆಂಗರೆ ಎಮ್ಮೆ ಈದೊಡನೆ ಗಿಣ್ಣದ ಹಾಲನ್ನು ಆಳಿನ ಸಂಗಡ ನಮಗೆ ಕಳಿಸಲು ಚಿನ್ನವ್ವನು ಎಂದೂ ತಪ್ಪುತ್ತಿದ್ದಿಲ್ಲ. ಪುತಳಿಯ ವಿಷಯ ಕೇಳಿದೊಡನೆ ಚಿನ್ನವ್ವನಿಗೆ ದುಃಖ ಹಿಡಿಸಲಾರದೆ ಉಕ್ಕಿ ಬಂದಿತು.

"ಹೋತೆಪ್ಪಾ ಪುತಳಿ, ಹೋತು! ಇನ್ನೆಲ್ಲೀ ಪುತಳಿ? ಹದ್ದಿನ ಪಾಲಾತು! ಎತ್ತುಗೋಳು ಕಟಕರ ಕೈಯಾಗ ಬಿದ್ದಾಗಿನಿಂದ 'ಏನಾದರೂ ಎಮ್ಮಾ ಮಾರೋದಿಲ್ಲ' ಅಂತ ಪಣಾಮಾಡಿದ್ದೆ. ಆದರ ಅದು ನಮಕೋತಽ ನಡೀತು. ಕಣಿಕಿ, ಹೊಟ್ಟು, ನುಚ್ಚು ಏನೂ ಸಿಗದಾಂಗ ಆತು. ಒಣಗಿದ ಹುಲ್ಲು ಮ್ಯಾಗ ಆದಾವರೂ ಎಷ್ಟುದಿನಾ ಬದಿಕೀತು? ಹೋರಗಿಂದ ಬಂತೂ ಅಂದರ ಮುರುವಿನ ದಸಿಂದ ನನ್ನ ಕಡೆಗೇನ ಓಡಿ ಬರತಿತ್ತು. ಕಲಘಟಗಿಗೆ ಹೋದಮ್ಯಾಗ ಮುರುವಿನ ಚಟಾ ಮರತೇಬಿಟ್ಟಿತು. ನನಗ ದಗದ ಇಲ್ಲ, ಪುತಳಿಗೆ ತಿನ್ನಾಕಿಲ್ಲ. ಹೀಂಗಾಗಿ ಒಬ್ಬರ ಮಾರೀ ಒಬ್ಬರು ನೋಡಿಕೋಂತ—ಮುಂಜಾನಿಂದ ಜಂಜೀಮಟಾ—ಕುಂದರತಿದ್ವಿ. ಒಂದುದಿನಾ, ಹೊರಗ್ಹೋದ ಎಮ್ಮಿ ತಿರಿಗಿ ಮನ್ನೀನಽ ಕಾಣಲಿಲ್ಲ. ಎಮ್ಮಿ ಹೋತೂ ಅಂತ ಹುಡುಕಲಾಕ ಹತ್ತಿದಿವಿ. ಹಿರ್‍ಯಾ ಎಮ್ಮಿ ತಗ್ಗಿನ್ಯಾಗ ಬಿದ್ದದ್ದು ನೋಡಿದ. ಗಿಡದ ಎಳೀ ತೊಪ್ಪಲಾ ತಿನ್ನಲಿಕ್ಕೆ ಹೋಗಿ ತಗ್ಗಿನಾಗ ಬಿದ್ದಿತ್ತು? ಎಲ್ಲಾರೂ ತಗ್ಗಿನ ಹತ್ಯಾಕ ಹೋಗಿ ನೋಡಿದ್ವಿ. ಎಮ್ಮಿಗೆಲ್ಲ ಹದ್ದು ಕಾಗಿ ಮುಕರಿದ್ದವು. ಹಣೀ ಹಣೀ ಬಡಕೋಂತ ಮನಿಗೆ ಬಂದಿವು. ಹೊತೆಪ್ಪಾ, ಬಂಗಾರದಂತಾ ಎಮ್ಮಿ ಕೈ ಬಿಟ್ಟು ಹೋತು...."

ಈ ರೀತಿ ಎಮ್ಮೆಯ ದುರಂತದ ಕತೆಯನ್ನು ಕೇಳಿ, ನಾನು ಕೇಳುವ ಪ್ರತಿಯೊಂದು ಪ್ರಶ್ನೆಯೂ ಅವಳ ದುಃಖದ ಮೇಲೆ ಬರೆಕೊಟ್ಟಂತಾಗುವುದೆಂದು, ನಾನು ಮನಸ್ಸು ಗಟ್ಟಿಮಾಡಿ, ಔಪಚಾರಿಕವಾಗಿ ಸುಮ್ಮಗೆ ನಾಲ್ಕು ಪ್ರಶ್ನೆಕೇಳಿ ಜಾರಿಹೋಗುವ ವಿಚಾರವನ್ನು ಬದಲಿಸಿದೆ; ಆಗಲೆ ಚಿನ್ನವ್ವನ ಸಂಗಡ ಅವಳ ಗುಡಿಸಿಲ ಕಡೆಗೆ ಹೊರಟೆ. ಎಂಟು-ಹತ್ತು ಅಡಿ ಅಗಲಳತೆಯ ಚಿನ್ನವ್ವನ ಗುಡಿಸಿಲಿನ ಬಾಗಿಲಿನಲ್ಲಿ ಪ್ರವೇಶಮಾಡುವುದು ಅಶಕ್ಯವೇ ಎನಿಸಿತು. ಬಾಗಿಲೆದುರಿನಲ್ಲಿಯೆ ಭೀಮಣ್ಣ ಮಲಗಿದ್ದ. ಅವನಿಗೆ ೩-೪ ನಾರುಗಳಾಗಿದ್ದವು. ಮತ್ತೊಂದು ಮೂಲೆಯಲ್ಲಿ ಒಲೆಯ ಮೇಲೆ ಒಂದು ಗಡಿಗೆ ಇದ್ದಿತು. ಒಲೆಯಿಂದ ಹೊಗೆ ಮಾತ್ರ ಸುತ್ತಿ ಬರುತ್ತಿತ್ತು.

"ಅಡಿಗಿ ಏನು ನಡದಽದ?" ಎಂದು ವಿಚಾರಿಸುವಷ್ಟರಲ್ಲಿ ಚಿನ್ನವ್ವನೇ ಗಡಿಗೆಯನ್ನೆತ್ತಿ ನನ್ನ ಮುಂದೆ ಹಿಡಿದಳು. ಅದರಲ್ಲಿ ಸಜ್ಜೆಯ ಗುಗ್ಗರಿ ಕುದಿಯುತ್ತಿತ್ತು.

"ಜೋಳ, ಸಜ್ಜಿ, ಮೂಕಣಿ (ಮಟಿಕೆ), ಹೆಸರು ಯಾವದು ಸಿಗತೈತಿ ಅದನ್ನ ತೊಗೊಂಡು, ಗುಗ್ಗರಿ ಕುದಿಸಿ ತಿಂದು ದಿನಾ ಹಾಕತೀವಿ. ಬೀಸೀನು ಅಂದರಽ ಕಲ್ಲು ಇಲ್ಲ. ವಾರದಾಗ ಒಂದುದಿನ ಕೆರೂರಿಗೆ ಹೋಗಿ, ಸೇರೆರಡು ಸೇರು ಬೀಸಿಗೊಂಡು ಬರತೀವಿ ಆತು. ಬೀಸಿಗೊಂಡು ಬಂದಾಗ ರೊಟ್ಟಿ ಮಾಡತೀನಿ; ಇಲ್ಲದಿದ್ದರ ಗುಗ್ಗರೀನಽ ನಮ್ಮ ಹಣೀಬಾರದಾಗ ಬರದೈತಿ. ಯಪ್ಪಾ! ಈ ಗುಗ್ಗರಿ ಸುದ್ದಾ ಸಿಗಬೇಕಾದರ ನಮ್ಮ ಪುಣ್ಯ ಎಲ್ಲಾ ಖರ್ಚಾಗತೈತಿ. ಹೋದವಾರ ಕೈಯಾಗ ದುಡ್ಡು ಹಿಡಕೊಂಡು ಊರೂರು ತಿರುಗಿದರೂ ಯಾರಿಗೂ ಒಂದು ಕಾಳು ಸಿಗಲಿಲ್ಲ. ಎರಡು ದಿನಾ ಬರ್ಲೀ ಸೇಂಗಾ ತಿಂದಿವು. ಎರಡು ದಿವ್ಸ ಒಂದಽಸಮನಽ ಎಲ್ಲಾರದೂ ಹೊಟ್ಟಿ ಝಾಡಸಲಾಕ ಹತ್ತಿತು. ಆಗ ಅನಿಸಿತು: 'ದೇವರು ಭಾಳ ದೊಡ್ಡಂವ; ಈ ದುಃಖದಿಂದ ಎಲ್ಲಾರನೂ ಒಮ್ಮಿಗಿಲೆ ಪಾರುಮಾಡಿ ತನ್ನ ಕಡಿಗೆ ಕರೀಲಾಕ, ಈ ಆವ್ವನ್ನಽ (ಮಾರೀ ಬೇನೆ) ಕಳಿಸ್ಯಾನ' ಅಂತ ಹಿಗ್ಗಿದೆವ್ರ. ಆದರ ದೇವರಿಗೆ ಎಲ್ಲಿ ಐತಿ ಕರುಳು? ಒಂದು ವಾರದಾಗ ಎಲ್ಲಾರಿಗೂ ನೆಟ್ಟಗಾತು ಹಾಂಗಽ! ಇನ್ನೂ ನಮ್ಮ ಹಣೀಬರದಾಗ ಈ ಸಜ್ಜೀ ಗುಗ್ಗರಿ ಏಸುದಿನಾ ತಿನ್ನೊದೈತ್ಯೋ ಯಾರಿಗ್ಗೊತ್ತು?"

ಅದೇ ವೇಳೆಗೆ ಚಿನ್ನವ್ವನು ಒಂದು ಜಾತಿಯ ಹಸಿರು ತೊಪ್ಪಲವನ್ನು ತೋರಿಸಿದಳು. ಮನುಷ್ಯರು ಇಂತಹ ತೊಪ್ಪಲ ತಿಂದದ್ದನ್ನು ನಾನಂತೂ ಎಂದೂ ನೋಡಿರಲಿಲ್ಲ. ಆದರೆ ಸದ್ಯ ಬರಗಾಲ ಕೆಲಸದ ಮೇಲಿರುವ ಎಲ್ಲಾ ಕೂಲಿ ಜನರೂ ಇದೇ

ತೊಪ್ಪಲು ತಿಂದು ಹೊಟ್ಟೆ ತುಂಬಿಕೊಳ್ಳುತ್ತಿದ್ದರು. ದೊಡ್ಡವರಿಗೆ ೩೦ ತೊಲಿ, ಮಕ್ಕಳಿಗೆ ೧೫ ತೊಲಿ—ಪ್ರಮಾಣದಿಂದ ಕೊಡುವ ಕಾಳು ದಿನದ ಒಂದು ಊಟಕ್ಕೆ ಸಹ ಸಾಲದಂತಿರಲು, ಹೊಟ್ಟೆಯನ್ನು ಭರತಿಮಾಡಲು ಅವರು ಈ ಪಲ್ಲೆಯನ್ನು ತಿನ್ನುತ್ತಿದ್ದರು. ಜನರು ಇಂತಹ ತೊಪ್ಪಲಪಲ್ಲೆಯನ್ನು ತಿನ್ನುತ್ತಿರಬಹುದೆಂದು ನನಗೆ ಮೊದಲೇ ಸಂಶಯ ಬಂದಿತ್ತು. ಯಾಕೆಂದರೆ ದುಷ್ಕಾಳ ಕೆಲಸದಿಂದ ಇನ್ನೂ ಕೆಲವು ಅಂತರದ ಮೇಲೆ ನಾವು ಇರುವಾಗಲೆ, ಅಲ್ಲಿ ಜನರು ಹಸಿರಾದ ಮತ್ತು ನೀರು-ನೀರಾದ ಮಲವಿಸರ್ಜನೆ ಮಾಡಿದ್ದನ್ನು ನೋಡಿ, ಈ ಜನರು ಇಂತಹ ತೊಪ್ಪಲವನ್ನು ತಿನ್ನುತ್ತಿರಬಹುದೆಂದು ಎನಿಸಿತ್ತು. ಆದರೆ ಚೆನ್ನವ್ವನ ಪಲ್ಲೆಯ ಗಡಿಗೆಯನ್ನು ನೋಡಿ ನನ್ನ ಸಂಶಯವು ದೃಢವಾಯಿತು.

"ಈ ತೊಪ್ಪಲವನ್ನು ನೀವು ತಿನ್ನುವಿರಾ?" ಎಂದು ಕೇಳಿದೆ.

ತೊಪ್ಪಲ ಅಂತ ಕೇಳತೀಯಾ ಯಪ್ಪಾ! ಹಸಿವ್ಯಾದರ ಮನಿಸ್ಯಾ ಬೇಕಾದ್ದು ತಿಂತಾನ. ಹೋದವಾರ ಹುಣಚೀಪಕ್ಕಾ ನೀರಾಗ ನೆನಿಸಿ ತಿಂದ್ವಿ. ಹೊಟ್ಟ್ಯಾಗ ಏನಾರೂ ಹಾಕಲಾಕ ಬೇಕಲ್ಲ! ಇಲ್ಲದಿದ್ದರ ಕೈಕಾಲಾಗ ತ್ರಾಣಾರೆ ಹ್ಯಾಂಗ ಉಳೀತೈತಿ?" ಎಂದು ಹೇಳಿದವಳೇ ಚೆನ್ನವ್ವನು ಹುರಿದ ಹುಣಸಿಯಪಕ್ಕವನ್ನು ಸಹ ನನಗೆ ತಂದು ತೋರಿಸಿದಳು.

ಅವಳಿಗೆ ಏನು ಸಮಾಧಾನ ಹೇಳಬೇಕೆಂಬುದು ಕೂಡ ನನಗೆ ತೋಚಲಿಲ್ಲ. ಕೈಯಲ್ಲಿ ದುಡ್ಡು ತೆಗೆದುಕೊಂಡು ಜೋಳ-ಸಜ್ಜೆಗಾಗಿ ಹಳ್ಳಿಹಳ್ಳಿಗೆ ಅಡ್ಡಾಡಿ, ಕೊನೆಗೆ ಕಾಳು ಸಿಗಲಾರದ್ದರಿಂದ ಆತ್ಮಹತ್ಯೆ ಮಾಡಿಕೊಂಡವರ ಉದಾಹರಣೆಗಳೂ ನನಗೆ ಗೊತ್ತಿದ್ದುವು. ಆದರೂ "ಈಗ ಮಳೆಯಾಗೇದ; ಸಜ್ಜೆ, ಜೋಳ-ಬಿತ್ತಲಿಕ್ಕೆ ನಾಗಣಾಪುರಕ್ಕ ಯಾಕ ಹೋಗೂದಿಲ್ಲ?" ಎಂದು ಭೀಮಣ್ಣನನ್ನು ಕೇಳಿದೆ.

"ಏನು ಮಾಡೂದೈತಿ? ಊರಿಗೆ ಹೋಗಿ ಹ್ಯಾಂಗ ಬದಕೋದು? ಇಲ್ಲಿ ಇದ್ದರ ವಾರದಾಗಾರೆ ಒಂದು ಎಂಟಾಣೇದ್ದು ಸಜ್ಜಿ ಸಿಕ್ಕೀತು ಅಂತ ಆಶಾ ಐತಿ. ಊರಾಗ ಏನೇನೂ ಸಿಗೂದಿಲ್ಲ! ಕೈಯಾಗ ದುಡ್ಡು ತೊಗೊಂಡು ತಿರುಗಿದರೂ ಒಂದು ಕಾಳು ಸಿಗೂದಿಲ್ಲ.. ಅಂತ ಹೇಳಿ ಇಲ್ಲೇ ಅದೀವು ಅತು!"— ಹೀಗೆ ಭೀಮಣ್ಣ ಹೇಳಿದ.

ಅವರೊಡನೆ ಮಾತನಾಡುತ್ತ ನಾನು ಎಷ್ಟೋ ವೇಳೆ ನಿಂತಿದ್ದೆ. ಯಾವ ವಿಷಯ ತೆಗೆದರೂ ತಿರುತಿರುಗಿ ಧಾನ್ಯದ ಕೊರತೆ—ಧಾನ್ಯದ ಅಭಾವ—ಇದೇ ಮುಂದೆ ಬಂದು ನಿಲ್ಲುತ್ತಿತ್ತು. 'ಇದೆಲ್ಲ ನಮ್ಮ ದುರ್ದೈವದ ಮೂಲಕ' ಎಂದು ಸಮಾಧಾನ ಹಚ್ಚಿಕೊಂಡ ಹೊರತು ಗತ್ಯಂತರವಿರಲಿಲ್ಲ. ನಾನು ಎಷ್ಟೋ ಹೊತ್ತು ಅಲ್ಲಿ ಕುಳಿತಿದ್ದರೂ ನನಗೆ 'ರುಕುಮಾ' ಕಾಣಲಿಲ್ಲ. ೭-೮ ವರ್ಷಗಳ ಹಿಂದೆ ನಾಗಣಾಪುರಕ್ಕೆ ಹೋದಾಗ, ರುಕುಮಾ ೧೦ ವರ್ಷದ ಹುಡುಗಿಯಿದ್ದಳು. ನಾವು ಹೋದ ದಿವಸ ರುಕುಮಾ ಕೈಯಲ್ಲಿ ಬೆಣ್ಣೆ ಹಚ್ಚಿದ ರೊಟ್ಟಿಯನ್ನು ತಿನ್ನುತ್ತ ಕಟ್ಟೆಯ ಮೇಲೆ ನಿಂತಿದ್ದಳು. ಅವಳ ಸಂಗಡ ಇನ್ನೂ ೩-೪ ಹುಡುಗಿಯರು ನಿಂತಿದ್ದರು. ರೊಟ್ಟಿಯನ್ನು ತಿನ್ನುತ್ತ ತಿನ್ನುತ್ತ, ಹಲ್ಲಿನಿಂದ ರೊಟ್ಟಿಯನ್ನು ಕಡಿದು ಬೇರೆ ಬೇರೆ ಆಕಾರದ ತುಂಡುಗಳನ್ನು ಮಾಡಿ, ಅವುಗಳಿಗೆ ಬೇರೆ ಬೇರೆ ಪ್ರಾಣಿಗಳ ಹೆಸರಿಟ್ಟು ತೋರಿಸುತ್ತಿದ್ದರು. ಹಲ್ಲಿನಿಂದ ಕಡಿದು ಕಡಿದು ರೊಟ್ಟಿಯ ತುಣುಕು ಸಣ್ಣದಾಗುತ್ತ ಆಗುತ್ತ ರೂಪಾಯಿ (ನೋಟಲ್ಲ-ನಾಣ್ಯ) ಅಥವಾ ಪಾವಲಿಯ ಆಕಾರದ್ದಾಗಿ ಮುಗಿಯುತ್ತಿತ್ತು. ರುಕುಮಾ ರೊಟ್ಟಿಯನ್ನು ಕೋಳಿಯಾಕಾರಕ್ಕೆ ಇಳಿಸಿದ್ದಳು. ಅದರ ಮೇಲೆ ದೊಡ್ಡ ಬೆಣ್ಣೆಯ ಮುದ್ದೆಯೊಂದು ಇದ್ದುದರಿಂದ, ರುಕುಮಾನ ರೊಟ್ಟಿಯು ಒಳ್ಳೆ ಪುಷ್ಟವಾದ ಬಿಳಿಯ ಕೋಳಿಯಂತೆ ಕಾಣುತ್ತಿತ್ತು. ಅವಳು ತುಂಬ ಉತ್ಸಾಹದಿಂದ ತನ್ನ ಚಿತ್ರಕಲೆಯ ನೈಪುಣ್ಯವನ್ನು ಉಳಿದವರಿಗೆ ತೋರಿಸುತ್ತಿದ್ದಳು. ಅವಳ ಈ ಉತ್ಸಾಹವನ್ನು ನೋಡಿ, ಅವಳ ಕೈಯಲ್ಲಿದ್ದ ಕೋಳಿಯಾಕಾರದ ರೊಟ್ಟಿಯನ್ನು ನೋಡುವ ಇಚ್ಛೆಯು ನಮಗೆ ಕೂಡ ಆಯಿತು. ಆದರೆ ನಾವು ಸಮೀಪಕ್ಕೆ ಹೋಗಿ ಅವಳ ಈ ಚಾತುರ್ಯಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕೆನ್ನುವಷ್ಟರಲ್ಲಿ, ಒಂದು ದುಷ್ಟ ಹದ್ದು ಅವಳ ರೊಟ್ಟಿಯ ಮೇಲೆ ಎರಗಿ ಅದನ್ನು ಕೊಚ್ಚಿಕೊಂಡು ಹೋಯಿತು. ಕೈಯಲ್ಲಿಯ ರೊಟ್ಟಿ ಹೋದುದರಿಂದ ರುಕುಮಾ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಇದನ್ನು ನೋಡಿ ಉಳಿದ ಹುಡುಗರು ನಗಲು ತೊಡಗಿದರು. ಅದುದರಿಂದ ಆಕೆ ಮತ್ತಿಷ್ಟು ಅಳಲಾರಂಭಿಸಿದಳು. ನನಗೂ ಕೊಂಚ ನಗು ಬಂದಿತು. ಆದರೂ ನಗುವನ್ನು ತಡೆದು ಆ ಮಗುವನ್ನು ಹತ್ತಿರ ಕರೆದು ಸಮಾಧಾನ ಮಾಡಿದೆನು. ಹುಡುಗರ ಸಲುವಾಗಿ ತಂದ ಪೆಪ್ಪರಮೆಂಟಿನ ಬಹುಭಾಗವನ್ನು ಅವಳಿಗೆ ಕೊಟ್ಟದ್ದಾಯಿತು. ಅಂದು ಸಂಜೆಯವರೆಗೆ ಅವಳನ್ನು ಕರೆದುಕೊಂಡು ತಿರುಗಾಡಿದ್ದಾಯಿತು. ಅಂದಿನಿಂದ ನಮ್ಮೊಡನೆ ಅವಳ ಸಲುಗೆಯು ಹೆಚ್ಚು ಬೆಳೆಯಿತು. 'ಕಾಕಾ ಬಂದರು' ಎಂಬ ಸುದ್ದಿ ತಿಳಿದೊಡನೆ ಮೊದಲು ಓಡಿಬಂದು ಸ್ವಾಗತಿಸುವವಳು ಅವಳೆ. ಆದರೆ ಅವಳು ಈಗ ಎಲ್ಲಿಯೂ ಕಾಣಲಿಲ್ಲ. ಅತ್ತೆಯ ಮನೆಗೆ ಏನಾದರೂ ಹೋಗಿರಬಹುದೆಂದು ಸಮಾಧಾನ ಮಾಡಿಕೊಂಡೆ; ಆದರೂ ಆ ರುಕುಮಾನ ಮುದ್ದುಮೊಗವು ನನ್ನ ಕಣ್ಣಮುಂದೆ ಕಟ್ಟಿತು. ನನಗೆ ತಡೆಯುವುದಾಗಲಿಲ್ಲ. ಕಟ್ಟಕಡೆಗೆ "ನಮ್ಮ ರುಕುಮಾ ಎಲ್ಲಿ? ಅತ್ತೆಯ ಮನೆಗೆ ಹೋಗಿರುವಳೇನು?" ಎಂದು ಕೇಳಿದೆ.

"ಇಲ್ಲ ಎಪ್ಪಾ! ಗುಡಿಸಲ ಹಿಂದ ಅಡಗಿಕೊಂಡಾಳ! ಏನು ಮಾಡೂದು; ಉಟ್ಟಸೀರಿ ತೂತೀನ್ಯಾಗ ಹರದೈತಿ. ನಾಚಿಕೊಂಡು ಕುಂತಾಳ ಕಾಣತೈತಿ! ಇಲ್ಲಾ ಅಂದರ ಕಾಕಾ ಬಂದರ ನನ್ನ ಮಗಳು ಕುಣಕೋತ ಮುಂದ ಬರತಿದ್ದಳು!"

ನನ್ನ ಕೈಕಾಲೇ ತಣ್ಣಗಾದುವು. ಕಣ್ಣಿಗೆ ಕತ್ತಲೆ ಕಟ್ಟಿತು. ನಾನು ಎದ್ದದ್ದು ಹೇಗೆ; ಹೊರಟದ್ದು ಹೇಗೆ; ನಾನು ಇಳಿದ ಸ್ಥಳಕ್ಕೆ ಬಂದದ್ದು ಹೇಗೆ—ಎಂಬ ಯಾವ ಎಚ್ಚರವೂ ನನಗೆ ಉಳಿದಿದ್ದಿಲ್ಲ.

ಜಯಂತಿ

ಸಂಶೋಧಕನ ಸಂತಾಪ

'ಶ್ರೀರಂಗ

ಲೇಖನೀರು— ೩

★

ಸಂಶೋಧನವೆಂದರೇನು? ಎಲ್ಲರಿಗೂ ಗೊತ್ತಿಲ್ಲದ್ದು ಸಂಶೋಧನ. ಎಲ್ಲರಿಗೂ ಗೊತ್ತಿದ್ದ ಮಾತಿನ ಬಗ್ಗೆ ಸಂಶೋಧನ ಎಲ್ಲಿಂದ ಬಂದೀತು? ಆದುದರಿಂದ ಎಲ್ಲರಿಗೂ ಗೊತ್ತಾಗು ವಂತೆ ಹೇಳಿದರೆ ಗತಿಯೇನು? ಯಾರಿಗೂ ತಿಳಿಯದಂತೆ ಸಂಶೋಧನದ ವಿಷಯ ಬರೆಯುವವನು ಶೀರ ಉಚ್ಚತರಗತಿಯ ಸಂಶೋಧಕನೆನಿಸುವನು!

★

ಯಜ್ಞದ ಉದಾಹರಣೆಯನ್ನು ಕೊಟ್ಟು, ವೇದಕಾಲದ ಋಷಿಗಳ ಸಂಸ್ಕೃತಿ ಹೇಗೆ ಕುರುಬತನದ ತಳಹದಿಯ ಮೇಲೆ ನಿಂತಿದ್ದಿತೆಂಬುದನ್ನು ಹಿಂದೆ ಸೂಚಿಸಿದೆಯಷ್ಟೆ? ಆ ಉದಾಹರಣೆಯಿಂದ ವಿಷಯಾಂತರಕ್ಕೆ ಸ್ಫೂರ್ತಿದೊರೆಯಲು ಅವಕಾಶವಿದ್ದುದರಿಂದ, ಈಗ ಅದನ್ನು ಬಿಟ್ಟುಕೊಟ್ಟು ಹೆಚ್ಚಾಗಿ ನೇರವಾದ ಮಾರ್ಗದಿಂದ ಹೊರಡುವ. ಆ ಮಾರ್ಗವೆಂದರೆ ಸಂಶೋಧನ; ಅದಕ್ಕೆ ಗುರಿಯೆಂದರೆ ಕುರುಬತನ.

ಅನೇಕ ವಾಚಕರಿಗೆ ಹಿಂದಿನ ಎರಡು ಲೇಖನೀರುಗಳನ್ನೋದಿ ಬಂದಿರಬಹುದಾದ ಸಂದೇಹಗಳನ್ನು, ಮುಂಚೆ ಈ ಸಂದರ್ಭದಲ್ಲಿಯೆ ನಿವಾರಿಸೋಣ; ಎಂದರೆ ಮಾರ್ಗದೊಳಗಿನ ಮುಳ್ಳನ್ನು ತೆಗೆದಂತಾಗುವುದು. ಮೊದಲನೆಯ ಸಂಶಯ: ಈ ಜಗತ್ತಿನಲ್ಲಿ, ಈ ಸಂಸಾರದಲ್ಲಿ, ಸಾಮಾನ್ಯ ಮಾನವನ ವ್ಯವಹಾರದಲ್ಲಿ ಸಂಶೋಧನದ ಅಗತ್ಯವಿದೆಯೆ? ಜೀವನಕ್ಕೆ ಸಂಶೋಧನ ಸಂಬಂಧಿಸಿದೆಯೆ? ಈ ಸಂಶಯ ಉಚಿತವಿದ್ದಷ್ಟೆ, ಇದರ ನಿವಾರಣೆ ಅಗತ್ಯವಿದೆ; ಅರ್ಥಾತ್ ನಾವು ಬರೆಯುವುದು ಬಿಡುವುದು ಇದರ ಮೇಲೆಯೆ ಅವಲಂಬಿಸಿದೆ. ಸಂಶೋಧನದ ಅಗತ್ಯವಿದೆಯೆ? ಸರಿ. ಮಾನವನ ಬೆಳವಣಿಗೆಯನ್ನೆ ನೋಡುವ. ಮಾನವನು ಯಾವ ಅವಸ್ಥೆಯಿಂದ ಬೆಳೆಯುವನು? ಶೈಶವಾವಸ್ಥೆ, ಅಲ್ಲವೆ? ಶಿಶುವು ಸ್ವತಂತ್ರವಾಗಿಯೆ ಬೆಳೆಯುವುದೆ? ಇಲ್ಲ, ಅದಕ್ಕೆ ಆಧಾರಗಳು ಬೇಕು. ಲಕ್ಷ್ಯದಲ್ಲಿರಲಿ! ಆಧಾರಗಳು. ಸೃಷ್ಟಿಯೊಳಗಿನ ಪ್ರತಿಯೊಂದು ವಸ್ತುವೂ ಯಾವುದಕ್ಕಾದರೂ ಆಧಾರವೆನಿಸದಿದ್ದರೆ ಅದಕ್ಕೆ ವಸ್ತುತ್ವವೆ ಇಲ್ಲ. ತಾಯ್ತನದ ಬಗ್ಗೆ ಕವಿಗಳು ಏನನ್ನ ಹೇಳಿದರೂ ಮಗುವಿಗೆ ತಾಯಿ ಆಧಾರ, ಮುಖ್ಯವಾಗಿ ಆಧಾರ. ಹೀಗೆ ಮಾನವನ ಸಂಸಾರ ಆಧಾರಮೂಲವಾಗಿಯೆ ನಿಂತಿದೆ. ಇತ್ತ ಸಂಶೋಧನವೂ ಆಧಾರಮೂಲವೆ ಆಗಿದೆ. ಆದುದರಿಂದ ಸಂಸಾರ=ಸಂಶೋಧನ. ಪೂರ್ವಕಾಲದಿಂದ, ಎಂದರೆ ಆಸಂಸ್ಕೃತಿಯ ಕಾಲದಿಂದ ದೇವ-ಧರ್ಮ ಎಂಬ ಕಾಲ್ಪನಿಕತತ್ತ್ವಗಳನ್ನು ಹುಡುಕುತ್ತ, ಇಂದಿನ ಸಂಸ್ಕೃತಿಯ ಕಾಲದಲ್ಲಿ ಮಾನವನು ವಾಸ್ತವಿಕವೆನಿಸಿದ ತತ್ತ್ವವನ್ನು ಹುಡುಕಿದ್ದಾನೆ; ಆತ್ಮಜ್ಞಾನವನ್ನು ಸಾಕ್ಷಾತ್ಕರಿಸಿದ್ದಾನೆ, ಅರ್ಥಾತ್ ತನ್ನಲ್ಲಿಯೆ ಆ ತತ್ತ್ವವಿದೆ ಎಂಬುದನ್ನು ಕಂಡುಹಿಡಿದಿದ್ದಾನೆ; ಯಾಕೆಂದರೆ, ಹೊಟ್ಟೆಯೆ ಆ ತತ್ತ್ವ. ಹೀಗಾಗಿ ಹೊಟ್ಟೆಯ ಆಧಾರದ ಮೇಲೆ ಸಂಶೋಧನ ನಿಂತಿರುವಾಗ, ಜೀವನವೂ ಹೊಟ್ಟೆಯ ಆಧಾರದ ಮೇಲೆ ನಿಂತಿರುವಾಗ, ಜೀವನ-ಸಂಶೋಧನ ಎಂದು ನಿರಾತಂಕವಾಗಿ ಹೇಳಬಹುದಲ್ಲವೆ?

ಅಥವಾ— ಈ ಮಾತನ್ನು ಹೆಚ್ಚಾಗಿ ವಿವರಿಸುವುದಕ್ಕಿಂತ ಎರಡನೆಯ ಸಂಶಯವನ್ನೆ ಮುಂದೆಮಾಡೋಣ. 'ಸಂಶೋಧನ ಎಂದರೇನು?'—ಎಂಬುದೆ ಆ ಸಂಶಯ. ಸಂಶೋಧನ ಎಂದರೇನು ಎಂಬ ಪ್ರಶ್ನೆಗೆ ಉತ್ತರ ಕೊಡುವುದೆಂದರೆ 'ಸತ್ಯ ಯಾವುದು?', 'ಪರಮಾತ್ಮ ಯಾರು?' ಎಂಬ ಪ್ರಶ್ನೆಗಳಿಗೆ ಉತ್ತರಕೊಡುವಂತೆಯೆ ಸಾಹಸ— ಎಂಬುದು ವಾಚಕರ ಲಕ್ಷ್ಯದಲ್ಲಿರಲಿ. ಯಾಕೆಂದರೆ ಸರ್ವವ್ಯಾಪಿಯಾದ ಪರಮಾತ್ಮನನ್ನು, ತ್ರಿಕಾಲಾಬಾಧಿತವಾದ ಸತ್ಯವನ್ನು 'ಇದು' ಎಂದು ಶಬ್ದಗಳಿಂದ ನಿರ್ದೇಶಗೊಳಿಸಿದರೆ, ಅದನ್ನು ತಪ್ಪಾಗಿ ತಿಳಿದುಕೊಂಡಂತೆಯೆ ಅಲ್ಲವೆ? ಅದರಂತೆಯೆ ಸಂಶೋಧನದ ಮಾತು. ಯಾರಿಗೂ ಗೊತ್ತಿಲ್ಲದ್ದು ಸಂಶೋಧನ. ಹೀಗಿರುವಾಗ 'ಇದು ಸಂಶೋಧನ' ಎಂದು ಶಬ್ದಗಳಿಂದ ಎಲ್ಲರಿಗೂ ಗೊತ್ತಾಗುವಂತೆ ಹೇಳಿದರೆ ಗತಿಯೇನು? ಸ್ಪಷ್ಟವಾದ ಮಾತಿದು. ಎಲ್ಲರಿಗೂ ಗೊತ್ತಿದ್ದ ವಿಷಯದ ಬಗ್ಗೆ ಸಂಶೋಧನ ಎಲ್ಲಿಂದ ಬಂದೀತು? ಯಾರಿಗೂ ಗೊತ್ತಿರಬಾರದು, ಎಲ್ಲರಿಗೂ ಗೊತ್ತಾಗುವಂತಿರಬಾರದು; ಆಗ ಅದು ನಿಜವಾದ ಸಂಶೋಧನ. ಈ ಕಾರಣಕ್ಕಾಗಿಯೆ ತಾನು ಸಂಶೋಧನವನ್ನು ಮಾಡಿರುವನು—ಎಂಬ ಸಂಗತಿಯನ್ನು ಕೂಡ ಎರಡನೆಯವರಿಗೆ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ತಿಳಿಯಗೊಡವವನು ಹೆಚ್ಚಿನ ಯೋಗ್ಯತೆಯ ಸಂಶೋಧಕನೆನಿಸುವನು. ತಾನೊಬ್ಬನೆ ತನ್ನ ಸಂಶೋಧನವನ್ನು ಅರಿತವ (ಜ್ಞ) ಎಂಬಂತಹನಂತೂ ತಜ್ಞಸಂಶೋಧಕನೆಂದು ಶ್ರೇಷ್ಠತರಗತಿಗೆ ಸೇರಿದವನಾಗುತ್ತಾನೆ. ಹೀಗಿರುವಾಗ ಸಂಶೋಧನವೆಂದರೇನು ಎಂಬುವನ್ನು ಸ್ಪಷ್ಟೀಕರಿಸಿದಷ್ಟು ಸಾಕಲ್ಲವೆ ?

ಮೂರನೆಯದಾಗಿ, ಇನ್ನೊಂದು ಮಾತನ್ನು ಹೇಳಬಹುದು: ಹೊಸ-ಹೊಸತಾಗಿ ಬೆಳೆಯುತ್ತಿರುವ ಜೀವನಕ್ಕೆ ಸಂಶೋಧನ ಸಂಬಂಧಿಸಿದೆ ಎಂದರೆ 'ಸಂಶೋಧನದಲ್ಲಿ ಅಂತಹ 'ಹೊಸಗಾರಿಕೆ' ಯಾವುದಿದೆ' ಎಂಬ ಸಂದೇಹ. ಈ ಸಂದೇಹದ ಬಗ್ಗೆ ಉತ್ತರವನ್ನು ಕೊಡುವುದಕ್ಕಿಂತ ಎಚ್ಚರವನ್ನು ಕೊಡುವುದೆ ಹೆಚ್ಚು ಯುಕ್ತವಾಗಿದೆ. ಯಾಕೆಂದರೆ, ಸಂಶೋಧನಕ್ಕೂ ಹೊಸತಕ್ಕೂ ಎಳ್ಳಷ್ಟಾದರೂ ಸಂಬಂಧವಿಲ್ಲ. ಇದ್ದೀತೆ ? ಸಂಗತಿ ಎಷ್ಟು ಹಳೆಯದೊ ಅಷ್ಟು ಆ ಸಂಶೋಧನದ ಬೆಲೆ ಹೆಚ್ಚು. ಅದರಂತೆಯೆ ಸಂಶೋಧಕನು ಕೂಡ ತನ್ನ ಸಂಶೋಧನದಲ್ಲಿ ತನ್ಮಯನಾಗಿ ಕೇವಲ ಹೊರಗಿನ ಆಚಾರ-ವೇಷ-ಭೂಷಣಗಳನ್ನೆ ಅಲ್ಲ; ಅಂತರಂಗಿಕವಾಗಿ ಬುದ್ಧಿ-ವಿಚಾರಗಳನ್ನು ಕೂಡ ಹಳೆಯದಾಗಿಸಿಕೊಳ್ಳುವನು. ಸಂಶೋಧಕನು ಎಷ್ಟೆಷ್ಟು ಹೆಚ್ಚಿನ ತರಗತಿಯವನೊ ಅಷ್ಟಷ್ಟು ಪುರಾತನವಿರುವುದು ಅವನ ಬುದ್ಧಿ; ಸಂಶೋಧಕನ ವಿಚಾರಗಳು ಎಷ್ಟೆಷ್ಟು ಹಳೆಯ ಕಾಲದುವೊ ಅಷ್ಟಷ್ಟು ಅವನ ಸಂಶೋಧನದ ಬೆಲೆ ಹೆಚ್ಚು.

ಸಂದರ್ಭ ದೊರೆತಿದೆಯಾದ್ದರಿಂದ ಈಗಲೇ ಈ ವಿಷಯಕ್ಕೆ ಹೊಂದಿಕೊಂಡ ಇನ್ನೂ ಒಂದೆರಡು ಮಾತುಗಳನ್ನು ಹೇಳಿಬಿಡೋಣ. ಮೇಲ್ತರಗತಿಯ ಸಂಶೋಧಕರಲ್ಲಿ ಎರಡು ವರ್ಗಗಳಿವೆ; ಅಥವಾ— ಒಂದೇ ವರ್ಗವಿದೆ, ಇನ್ನೊಂದಕ್ಕೆ ಏನೆನ್ನಬೇಕೊ ತಿಳಿಯದಂತಾಗಿದೆ ಎನ್ನೋಣ. ಸಂಶೋಧನಕ್ಕೆ ಯಾವಾಗಲೂ ಸನಾತನದ ಸಂಬಂಧವೆ ಹೆಚ್ಚು ಎಂದು ಮೇಲೆ ಹೇಳಿದೆಯಷ್ಟೆ ? ಇದಾಯಿತು ನಿಯಮ. ಇದನ್ನುಳಿದ ಅಪವಾದವರ್ಗದ ಸಂಶೋಧಕರು ಕೆಲವರಿದ್ದಾರೆ. ಇವರಾದರೂ ಯಾರಿಗೂ ಗೊತ್ತಿಲ್ಲದುದರ ವಿಷಯವಾಗಿಯೆ ಸಂಶೋಧನ ನಡೆಯಿಸಬೇಕೆಂಬ ತತ್ತ್ವದವರೆ. ಆದರೆ, ಕೇವಲ ಹಿಂದಿನ ಕಾಲದ ವಿಷಯಗಳೆ ಯಾರಿಗೂ ಗೊತ್ತಿಲ್ಲದ ವಿಷಯಗಳು ಎಂಬುವನ್ನು ಮಾತ್ರ ಇವರು ಒಪ್ಪುವುದಿಲ್ಲ. ಇವರ ದೃಷ್ಟಿಯಿಂದ— ನಿಜವಾಗಿ ಯಾರಿಗೂ ಗೊತ್ತಿಲ್ಲದ ವಿಷಯಗಳೆಂದರೆ ಮುಂದಣ ಕಾಲದ ವಿಷಯಗಳು. ಅದಕಾಗಿ ಇವರು ಅಂತಹ ವಿಷಯಗಳ ಸಂಬಂಧವಾಗಿಯೆ ಅಗಾಧ ಸಂಶೋಧನಗಳನ್ನು ನಡೆಯಿಸುವರು. ಉದಾಹರಣೆಗಾಗಿ ಒಂದು ವಿಷಯವನ್ನು ತೆಗೆದುಕೊಳ್ಳಬಹುದು: ಕರ್ನಾಟಕದ ಏಕೀಕರಣ. ಈ ಭವಿಷ್ಯತ್ಕಾಲದ ಬಗ್ಗೆ ನಡೆಸುವ ಸಂಶೋಧನವೆಂದರೆ ಹೀಗೆ... ಕರ್ನಾಟಕವು ಮುಂದೆ ಒಂದಾಗುವುದು, ಯಾಕೆಂದರೆ ಇಂದು ಒಂದಾಗಿಲ್ಲ; ಒಂದಾದ ಮೇಲೆ ಅಲ್ಲಿಯ ಜಾತಿಯೂ ಒಂದೇ ಆಗುವುದು' (ಅದು ಯಾವುದೆಂಬುದು ಆಯಾ ಸಂಶೋಧಕರನ್ನು ಅವಲಂಬಿಸಿದೆ), ಎಂದರೆ ಉಳಿದ ಜಾತಿಯವರಿಗೆ ಸ್ಥಾನವಿಲ್ಲ; ಅದಕಾಗಿ ಉಳಿದ ಜಾತಿಯವರು 'ಕರ್ನಾಟಕವನ್ನು ಒಂದಾಗಗೊಡಲಿಕ್ಕಿಲ್ಲ; ಹೀಗಾಗಿ ಏಕೀಕರಣವು ಯಾವಾಗಲೂ ಮುಂದಣ ಕಾಲದ, ಆದ್ದರಿಂದ ಯಾರಿಗೂ ತಿಳಿಯದ ವಿಷಯವಾಗಿಯೆ ಉಳಿಯುವುದು. ಈ ಕಾರಣಕ್ಕಾಗಿ ಸಂಶೋಧನಕ್ಕೆ ಅತ್ಯಂತ ತಕ್ಕುದಾದ ವಿಷಯವೂ ಅದೆನಿಸುವುದು.

ಸಂಶೋಧನಕ್ಕೆ ಒಂದು ಮಾರ್ಗವಿದೆ, ಒಂದು ಗುರಿ ಇದೆ ಎಂದು ಹೇಳಿ, ಆ ಮಾರ್ಗದಲ್ಲಿ ಬರಬಹುದಾದ ಸಂದೇಹಗಳ ನಿವಾರಣೆಯನ್ನು ಇದುವರೆಗೆ ಮಾಡಿದ್ದಾಯಿತು. ಮುಳ್ಳುಗಳನ್ನು ಕಿತ್ತೊಗೆದ ಮೇಲೆ ಮುಂದೆ ದಾರಿಯನ್ನು ಸಾಗಿಸಬಹುದಷ್ಟೆ ? ಇದುವರೆಗಿನ ವಿವರಣೆ ತೀರ ವಿಷಯಾಂತರವೆಂದು ಮಾತ್ರ ಯಾರೂ ತಿಳಿಯತಕ್ಕದ್ದಲ್ಲ. ಹಾಗೆ ತಿಳಿದುಕೊಂಬವರಿಗೆ 'ಸಂಶೋಧನದ ಗುರಿ ಕುರುಬತನ' ಎಂಬ ಮೇಲಿನ ಮಾತನ್ನು ಲಕ್ಷ್ಯಕ್ಕೆ ತಂದುಕೊಡಬೇಕಾಗುವುದು. ಗುರಿ ಕುರುಬತನ, ಬರೆವವ ಕುರುಬ, ಹೀಗಿರುವಾಗ ವಿಷಯಾಂತರಕ್ಕೆ ಆಸ್ಪದವಾದರೂ ಇದ್ದೀತೆ ? ಇಲ್ಲ, ಇಲ್ಲ, ಇಲ್ಲ ಎಂದು ಕುರಿಹಿಂಡಿನ ಸಾಕ್ಷಿಯಾಗಿ ಆಶ್ವಾಸನವನ್ನು ಕೊಡಬಯಸುವ

ಇತಿಶ್ರೀ—ರಂಗ

ಫ್ಯಾಸಿಝಮ್

ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ

ಲೇಖಾಂಕ ೧

"Fascism is a revolt against reason and an appeal to violence, to emotion and passion. Its outcome is inevitably cruelty, madness and gangsterism"

('ಫ್ಯಾಸಿಝಮ್' ಎಂದರೆ ಇದೊಂದು ವಿವೇಕದ ವಿರುದ್ಧ ಎದ್ದ ದೊಂಬಿ; ಮಾನವನ ಭಾವನೆ-ಸಂವೇದನೆಗಳನ್ನು ಹಿಂಸೆಗಾಗಿ ಕರೆಯುವ ಚಿತಣ. ಈ ವಾದದಿಂದ ಹೊರಬೀಳಬಹುದಾದ ವಿಷಗಳೆಂದರೆ ಕ್ರೌರ್ಯ, ಉನ್ಮತ್ತತೆ, ಪುಂಡತನ!)

Robert Dell (Germany Unmasked.)

ನಿರಂಕುಶ ರಾಜಸತ್ತೆ ಮತ್ತು ಜಮೀನುದಾರರು

'ಫ್ಯಾಸಿಝಮ್' ಎಂಬುದು, ಇಟಲಿ ದೇಶದಲ್ಲಿ ಒಂದು ವಿಶಿಷ್ಟ ಪರಿಸ್ಥಿತಿಯ ಮೂಲಕ ರಾಜಕೀಯ ವಾತಾವರಣದಲ್ಲಿ ಹುಟ್ಟಿದ ಒಂದು ಬಗೆಯ ಚಳವಳಿಯಾಗಿದೆ. ಅದರ ಹುಟ್ಟು ಮತ್ತು ಬೆಳವಣಿಗೆಗಳನ್ನು ಕುರಿತು ವಿಚಾರಿಸುವ ಮೊದಲು, ಅದು ಹುಟ್ಟುವುದಕ್ಕೆ ಹಿನ್ನೆಲೆಯಾದ ರಾಜಕೀಯ ವಾತಾವರಣವು ಅಲ್ಲಿ ಹೇಗೆ ನಿರ್ಮಾಣವಾಯಿತೆಂಬುದನ್ನು ನಿರೀಕ್ಷಿಸಿದರೆ, ಅದರ ಸಂಪೂರ್ಣ ಚಿತ್ರವು ಮನಸ್ಸಿನಲ್ಲಿ ಮೂಡಲು ಸಹಾಯವಾಗುವುದು. ಅದರ ನಿರೀಕ್ಷಣೆಗಾಗಿ ನಾವು, ೨೦ನೆಯ ಶತಮಾನದ ವರೆಗೆ, ಮನುಷ್ಯಸಮಾಜದಲ್ಲಿ ನಿರಂಕುಶ ಪ್ರಭುತ್ವ ಮತ್ತು ವ್ಯಕ್ತಿಸ್ವಾತಂತ್ರ್ಯಗಳ ನಡುವೆ ನಡೆದ ಕಾಳಗವನ್ನೇ ವರ್ಣಿಸಬೇಕಾಗುವುದು.

ಮನುಷ್ಯಪ್ರಾಣಿಗಳಂತಹ ಪ್ರಾಣಿಗಳು ಈ ಭೂಮಿಯ ಮೇಲೆ ಜನಿಸಿ, ೩-೪ ಲಕ್ಷ ವರುಷಗಳಾಗಿರಬಹುದೆಂದು ವಿಜ್ಞಾನಿಗಳ ಮತ. ಆದರೆ ಸದ್ಯದ ಮನುಷ್ಯರಂತಹ ಶರೀರ ಹಾಗೂ ಮೆದುಳುಳ್ಳ ಪ್ರಾಣಿಗಳು ಹುಟ್ಟಿ ಸುಮಾರು ೫೦-೬೦ ಸಹಸ್ರ ವರುಷಗಳಾಗಿರಲು ಸಾಕು, ಎಂದು ಅವರು ಅನುಮಾನಿಸುತ್ತಾರೆ. ಮಾನವನು ಬೆಂಕಿಯನ್ನು ಹೊತ್ತಿಸಿದುದು ೪೦ ಸಾವಿರ ವರುಷಗಳ ಪೂರ್ವದಲ್ಲಿ. ಬೇಯಿಸುವ ಕಲೆ ಅವನಿಗೆ ಅವಗತವಾದುದು ೧೫-೨೦ ಸಾವಿರ ವರುಷಗಳ ಹಿಂದೆ. ಭೂಮಿಯನ್ನು ಕೃಷಿಮಾಡಿ ಬಿತ್ತಿ ಬೆಳೆದುದು ೮-೧೦ ಸಾವಿರ ವರುಷಗಳ ಹಿಂದೆ. ಮಾನವನು ಕೃಷಿಜೀವಿಯಾಗುವ ಮೊದಲು ಅವನಾದರೂ ಮಿಕ್ಕ ಪ್ರಾಣಿಗಳಂತೆ 'ಬಲವೇ ಬಾಧ್ಯತೆ—Might is right' ಎಂಬ ತತ್ತ್ವವನ್ನೇ ಅಂಗೀಕರಿಸಿದ್ದನು. ಬೇಟೆಯನ್ನಾಡಿ ಇಲ್ಲವೆ ಗಡ್ಡೆಗೆಣಸುಗಳನ್ನು ತಿಂದು ಅವನು ಬದುಕುತ್ತಿದ್ದನು. ಆದರೆ ಮಾನವನು ಒಕ್ಕಲಿಗನಾದಂದಿನಿಂದ ದೊಡ್ಡ ದೊಡ್ಡ ರಾಜ್ಯಗಳನ್ನು ಕಟ್ಟಿದ ಕಾಲವು, ಅವನ ಬುದ್ಧಿಶಕ್ತಿಯು ಬೆಳೆದ ಬಗೆಯನ್ನು ತೋರಿಸುತ್ತದೆ. ಕಳೆದ ೫-೬ ಸಾವಿರ ವರುಷಗಳಲ್ಲಿಯೆ ಎಲ್ಲೆಡೆಯಲ್ಲಿಯೂ ರಾಜ್ಯ-ಸಾಮ್ರಾಜ್ಯಗಳಾಗಿ ಹೋದದ್ದು. ಇಜಿಪ್ತ, ಗ್ರೀಸ್, ಅಲೆಕ್ಝಾಂಡ್ರಿಯಾ, ಬಾಯಝಾಂಶಿಯಮ್ ಮತ್ತು ಇಟಲಿ ದೇಶಗಳಲ್ಲಿ ರಾಜಸತ್ತೆಯು ನೆಲೆಗೊಂಡಂತೆ, ನಮ್ಮಲ್ಲಿಯೂ ರಾಜಸತ್ತೆಯು ನೆಲೆಗೊಂಡಿತು. ಮೊದಲು ರಾಜಸತ್ತೆಯು ನಿರಂಕುಶವಾಗಿರದೆ, ಪ್ರಜಾಸತ್ತೆಗೆ ಅಂಕಿತವಾಗಿಯೆ ಇದ್ದಿತು. ವೇದಕಾಲದಲ್ಲಿ ನಮ್ಮಲ್ಲಿದ್ದ ಸಭೆ-ಸಮಿತಿಗಳೂ ಗಣ (ಜನ)ರಾಜ್ಯಗಳೂ ಪ್ರಜಾಸತ್ತೆಯ ಹಿರಿಮೆಯನ್ನು ಸೂಚಿಸುತ್ತವೆ. ನಮ್ಮಲ್ಲಿ ಸಮಿತಿಯೆ ರಾಜನನ್ನಾರಿಸುತ್ತಿತ್ತಲ್ಲದೆ ಆಡಳಿತದ ಎಲ್ಲ ಕೆಲಸಗಳ ಮೇಲ್ವಿಚಾರಣೆಯನ್ನೂ ಮಾಡುತ್ತಿದ್ದಿತು. ಅದರಂತೆ ಗ್ರೀಕರ Areopagus, ರೋಮನ್ ಜನರ Curia, ಆಂಗ್ಲೋಸಾಕ್ಸನ್ನರ Witanagemot ಎಂಬ ಸಭೆಗಳು ಆಡಳಿತದ ಎಲ್ಲ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿದ್ದುವು. ಆದರೆ ರಾಜರೂ ಮಹಾರಾಜರೂ ರಾಜಸತ್ತೆಯು ತಮ್ಮ ಮನೆತನದಲ್ಲಿಯೆ ನೆಲೆಗೊಳ್ಳುವುದಕ್ಕಾಗಿಯೂ, ತಮ್ಮ ಪ್ರಭುತ್ವಕ್ಕೆ ನಿಯಂತ್ರಣವಿರಕೂಡದೆಂಬುದಾಗಿಯೂ, ತಮ್ಮ ಸುತ್ತಲೂ ಪುರೋಹಿತರ ಮತ್ತು ಸರದಾರರ ಪರಿವಾರವನ್ನು ಕಟ್ಟಿಕೊಂಡು, ಉಪದೇಶದಿಂದಲೂ ಕತ್ತಿಯ ಬಲದಿಂದಲೂ ನಿರಂಕುಶರಾದರು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ತತ್ತ್ವವು ಪೂರ್ವದಲ್ಲಿ ನೆಲೆಗೊಂಡಂತೆ ಪಶ್ಚಿಮದಲ್ಲಿಯೂ ನೆಲೆಗೊಂಡಿತು. ಪುರೋಹಿತವರ್ಗವು ಆಧ್ಯಾತ್ಮವಾದ—ದೈವವಾದಗಳಿಂದ ಸಾಮಾನ್ಯಜನತೆಯನ್ನು ಮಂಕುಗೊಳಿಸಿದರೆ, ಸರದಾರರೂ, ಮಾಂಡಲಿಕರೂ, ಪಾಳೆಯಗಾರರೂ ಕತ್ತಿಯ ಬಲದಿಂದ ಜನರನ್ನು ಅಂಜಿಸುತ್ತಿದ್ದರು. ಇವರ ಸೇವೆಗಾಗಿ ರಾಜನಿಂದ ಇವರಿಗೆ ದೊಡ್ಡ ದೊಡ್ಡ ಭೂಪ್ರದೇಶಗಳು ಉಂಬಳಿಯಾಗಿ ದೊರೆತುವು. Feudalism ಎಂದರೆ ಜಹಗೀರ್‌ದಾರಿಕೆ; ಇದರಿಂದ ಭೂಮಿಯು ಎಲ್ಲರ ಸೊತ್ತಾಗದೆ ಬಲಿಷ್ಠರ ಸೊತ್ತಾಯಿತು. ಸರದಾರರು, ಮಾಂಡಲಿಕರು, ಪಾಳೆಯಗಾರರು ರಾಜನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಭೂಮಿಯ ಒಡೆಯರು ತಾವಾದರು. ರೈತರು ದುಡಿದ ಬಹುಭಾಗವು ಈ ಭೂಮಿಯ ಒಡೆಯರಿಗೆ ಹೋಗತೊಡಗಿತು. ಅವರು ತಮ್ಮ ವಿಲಾಸಕ್ಕಾಗಿ ರೈತರಿಂದ ಹೆಚ್ಚು ಹೆಚ್ಚು ಹಣವನ್ನು ಹೀರತೊಡಗಿದರು. ಮೊದಲಿನ ರೈತರ ಜೀವನದ ಮಟ್ಟವು (Standard of living) ಕೆಳಕ್ಕಿಳಿಯಿತು. ಈ 'ಫ್ಯೂಡಲ್' ರಾಜ್ಯಪದ್ಧತಿಯು ಯುರೋಪದಲ್ಲಿ

ಸುಮಾರು ೧೫ನೆಯ ಶತಮಾನದ ವರೆಗೂ ನಡೆದುಕೊಂಡು ಬಂದಿತು; ನಮ್ಮಲ್ಲಿ ಇನ್ನೂ ನಡೆಯುತ್ತಿದೆ.

ಬಂಡವಾಳವಾದ

ಹದಿನೈದನೆಯ ಶತಮಾನದ ಪ್ರಾರಂಭದಲ್ಲಿ ಯುರೋಪ್ಯರಿಗೆ ಗ್ರೀಕ್ ಸಂಸ್ಕೃತಿಯ ಸಂಪರ್ಕ ಉಂಟಾಯಿತು. ಅರಿಸ್ಟಾಟಲ್ಲಿನ ಕೃತಿಗಳು ಅವರ ಮನಸ್ಸಿನಲ್ಲಿ ಹೊಸ ಬೆಳಕನ್ನು ಕೆಡಹಿದುವು. ಜನರಲ್ಲಿ ಸ್ವತಂತ್ರ ವಿಚಾರಮಾಡುವ ಚಟವು ಬೆಳೆಯತೊಡಗಿತು. ಮುಂದೆ ೧೯ನೆಯ ಶತಮಾನದ ವರೆಗೆ ಎಂದರೆ ನಾಲ್ಕುನೂರು ವರುಷಗಳ ಅವಧಿಯಲ್ಲಿ, ಯುರೋಪದ ಬಣ್ಣವೇ ಬದಲಾಯಿತು. ಕೋಪರ್ನಿಕಸ್, ಗ್ಯಾಲಿಲಿಯೊ, ಕೆಪ್ಲರ್, ಸರ್ ಐಝಾಕ್ ನ್ಯೂಟನ್ ಮುಂತಾದ ತೇಜಸ್ವಿಗಳಾದ ವಿಜ್ಞಾನಿಗಳು ಹುಟ್ಟಿದುದಲ್ಲದೆ ಡೇಕಾರ್ಟ್‌ನಂತಹ ಗಣಿತಜ್ಞನೂ, ರೂಸೋ—ವ್ಹಾಲ್ಟೇರ್ ಮೊದಲಾದವರಂತಹ ನಾಸ್ತಿಕ ವೇದಾಂತಿಗಳೂ, ಆಡ್ಯಾಮ್ ಸ್ಮಿಥ್, ಎಡ್ಮಂಡ್ ಬರ್ಕ್‌ರಂತಹ ರಾಜಕಾರಣ ಪಟುಗಳೂ ಜನ್ಮತಾಳಿದರು. ಈ ಅವಧಿಯಲ್ಲಿ ವಿಜ್ಞಾನದಲ್ಲಿ ನಂಬಲಾರದಷ್ಟು ಪ್ರಗತಿಯುಂಟಾಯಿತು. ಸಾಹಸಿಗಳಾದ ಬುದ್ಧಿವಂತ ಜನರು ಯಂತ್ರಗಳ ನೆರವಿನಿಂದ—ಬಂಡವಾಳದ ಬೆಂಬಲದಿಂದ—ಶ್ರಮಜೀವಿಗಳ ಸಹಾಯದಿಂದ ಒಂದು ಹೊಸ ವರ್ಗವನ್ನೇ ನಿರ್ಮಿಸಿದರು. ಜಮೀನುದಾರರು ಭೂಮಿಯ ಆದಾಯದ ಬಹುಭಾಗವನ್ನು ತಿಂದು ಹಾಕಿದರೆ, ಈ 'ಬಂಡವಾಳಗಾರ'ರು ಕೈಕಸಬಿನ ಗ್ರಾಮೋದ್ಯೋಗಗಳನ್ನು ನಾಶಮಾಡಿ, ಬಂದ ಆದಾಯವನ್ನು ತಾವೇ ತಿನ್ನತೊಡಗಿದರು. ನಾನಾಬಗೆಯ ವಿಲಾಸಭೋಗಗಳಿಗೆ ಉಪಯುಕ್ತವಾದ ಪದಾರ್ಥಗಳನ್ನು ಸೃಜಿಸಿ, ಜಮೀನುದಾರರಿಂದಲೂ ದುಡ್ಡನ್ನು ಸೆಳೆಯತೊಡಗಿದರು. ಇದರಿಂದ ಯುರೋಪದ ಎಲ್ಲ ದೇಶಗಳಲ್ಲಿಯೂ ನಿರುದ್ಯೋಗತನವು ಬೆಳೆಯಿತು. ಕೈಕಸಬಿನವರ ಜೀವನದ ಮಟ್ಟವು ಇನ್ನೊಂದು ಹಂತ ಕೆಳಕ್ಕಿಳಿಯಿತು. ಸಾಮಾನ್ಯಜನರಲ್ಲಿ ಅಸಂತೋಷದ ಹೊಗೆಯಾಡತೊಡಗಿತು. ಕುಹಕಬುದ್ಧಿಗಳಾದ ಬಂಡವಾಳಗಾರರು ತಮ್ಮ ಸ್ಥಾನಕ್ಕೇ ಧಕ್ಕೆ ಬರಬಹುದೆಂದು ಯೋಚಿಸತೊಡಗಿದರು. ಅಸಂತುಷ್ಟ ಜನಸಾಮಾನ್ಯದ ಲಕ್ಷ್ಯವನ್ನು ಬೇರೆ ಕಡೆಗೆ ಎಳೆಯುವುದಕ್ಕಾಗಿ ಅವರು ಧಡಪಡಿಸತೊಡಗಿದರು. ಇದೇ ಕಾಲಕ್ಕೆ ವಾಸ್ಕೋಡಿಗಾಮನು ಹಿಂದೂದೇಶವನ್ನು ಕಂಡುಹಿಡಿದನು. ಹೊನ್ನಿನ ಹೊಗೆ ಹಾಯುತ್ತಿದ್ದ ಭಾರತವನ್ನು ನೋಡಿ, ಈ ಬಿಳಿಯ ವರ್ತಕರ ಬಾಯಲ್ಲಿ ನೀರೂರಿದುದು ಆಶ್ಚರ್ಯದ ಮಾತಲ್ಲ. ತುಸು ದಿವಸಗಳಲ್ಲಿಯೆ ಯುರೋಪದ ಪ್ರಮುಖ ರಾಷ್ಟ್ರಗಳ ವರ್ತಕರೆಲ್ಲರೂ, ನಿರುದ್ಯೋಗಿಗಳ ಗುಂಪುಗಳನ್ನು ಕಟ್ಟಿಕೊಂಡು ವ್ಯಾಪಾರಕ್ಕಾಗಿ ಇಲ್ಲಿ ಬಂದಿಳಿದರು. ಒಂದು ಕೈಯಲ್ಲಿ ತಕ್ಕಡಿಯನ್ನೂ ಮತ್ತೊಂದು ಕೈಯಲ್ಲಿ ಬಂದೂಕನ್ನೂ ಹಿಡಿದು ಅವರು, ಹಿಂದೂ ದೇಶವನ್ನು ತಮ್ಮ ಮನಸ್ಸಿಗೆ ಬಂದಂತೆ ಕುಣಿಸತೊಡಗಿದರು. ಕಾಲಕ್ರಮದಿಂದ ಸಮಗ್ರ ಭರತಖಂಡವೇ ಬ್ರಿಟಿಷ್ ಚಕ್ರಾಧಿಪತ್ಯದ ಕೆಳಗೆ ಬಂದಿತು. ಹಿಂದೂ ಜನರ ಫ್ಯಾಸಿಸ್ಟ್ ಮನೋವೃತ್ತಿಯ ಲಾಭವನ್ನೇ ಬ್ರಿಟಿಷರು ಪಡೆದರು. ಹಿಂದುಗಳ ವರ್ಣಭೇದವೂ ಜಾತಿ-ಕಲಹಗಳೂ ಇವರಲ್ಲಿ ಒಕ್ಕಟ್ಟನ್ನು ತರಲಿಲ್ಲ. ರಾಜರೂ ಸಂಸ್ಥಾನಿಕರೂ ಸರದಾರರೂ ತಂತಮ್ಮ ಸ್ಥಾನಮಾನಗಳ ಭದ್ರತೆಗಾಗಿ ಬ್ರಿಟಿಷರ ದಾಸ್ಯವನ್ನು ಅಂಗೀಕರಿಸಿದರು. ಇನ್ನೂ ಕೂಡ ಇಂಗ್ಲಿಷ್ ಸಾಮ್ರಾಜ್ಯವು ಹಿಂದೂದೇಶದಲ್ಲಿ ಸಂಸ್ಥಾನಿಕರನ್ನೂ ಸರದಾರರನ್ನೂ ಜಮೀನುದಾರರನ್ನೂ, ದೇಶೀಯ ಬಂಡವಾಳಗಾರರನ್ನೂ ಇರಗೊಟ್ಟು, ಇಲ್ಲಿ ಅವರ ಒಂದು ವರ್ಗವನ್ನೇ ನಿರ್ಮಾಣ ಮಾಡಿದೆ. ನಮ್ಮ ಸಂಸ್ಥಾನಿಕರೂ ಬಂಡವಾಳಗಾರರೂ ತಮ್ಮ ಹಿತಸಂಬಂಧಗಳಿಗೆ ಧಕ್ಕೆಬಂದಕೂಡಲೆ ಬ್ರಿಟಿಷ್ ಪಕ್ಷವನ್ನು ಸೇರುತ್ತಾರೆ. ತಮ್ಮ ಸ್ವಾರ್ಥ ಸಾಧಿಸುವಂತಿದ್ದರೆ ಮಾತ್ರ ಸ್ವರಾಜ್ಯಸಾಧನೆಗಾಗಿ ಪ್ರಯತ್ನಿಸುತ್ತಾರೆ. ಬ್ರಿಟಿಷರ ಈ ನೀತಿಯನ್ನೇ ಉಳಿದ ಎಲ್ಲ ಸಾಮ್ರಾಜ್ಯವಾದಿ ರಾಷ್ಟ್ರಗಳವರೂ ತಿಳಿದರು. ಇಪ್ಪತ್ತನೆಯ ಶತಮಾನವು ಪ್ರಾರಂಭವಾಗುವುದರೊಳಗಾಗಿ ಪಶ್ಚಿಮದಲ್ಲಿ ಇಂಗ್ಲಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಪೋರ್ತುಗಾಲ್ ಮುಂತಾದ ದೇಶಗಳು ಸಾಮ್ರಾಜ್ಯಗಳನ್ನು ಕಟ್ಟಿಕೊಂಡಿದ್ದುವು. ಪೂರ್ವದಲ್ಲಿ 'Dai Nippon' ಎಂದರೆ ಬಲಿಷ್ಠ ಜಪಾನು ತನ್ನ ಸಾಮ್ರಾಜ್ಯವನ್ನು ಪಸರಿಸತೊಡಗಿತ್ತು. ಇದುವರೆಗೆ, ಬಂಡವಾಳವಾದವು ತಾನು ಬದುಕಿ ಬಾಳುವುದಕ್ಕಾಗಿ ಸಾಮ್ರಾಜ್ಯಗಳನ್ನು ಕಟ್ಟಿ ಅಲ್ಲಿ ನೆಲೆನಿಂತ ಕತೆಯಾಯಿತು. ೧೯೧೪ರವರೆಗೆ ಎಲ್ಲ ಸಾಮ್ರಾಜ್ಯಗಳೂ ಭರದಿಂದ ಬೆಳೆದುಕೊಂಡಿದ್ದುವು. ಅಂದಿನಿಂದಲೇ ಅವುಗಳಿಗೆ ಮುಪ್ಪು ಬರತೊಡಗಿತು. ಯುರೋಪದಲ್ಲಿಯ ಸಾಮ್ರಾಜ್ಯಗಳು ಒಂದರ ಹೆಚ್ಚಳವನ್ನೊಂದು ಸಹಿಸದಾದುವು. ಶಕ್ತಿಯ ಸಮತೋಲನ (Balance of power) ವನ್ನು ಕಾಯುವುದಕ್ಕಾಗಿಯೆ ಮೊದಲನೆಯ ಜಾಗತಿಕ ಯುದ್ಧದ ಕಹಳೆಯು ಊದಲ್ಪಟ್ಟಿತು. ಕೊನೆಗೆ ಬಲಿಷ್ಠವಾದ ಜರ್ಮನ್ ಸಾಮ್ರಾಜ್ಯವು ಸೋತು, ಇಂಗ್ಲಿಷರ ಕೂಡ ಒಪ್ಪಂದಮಾಡಿಕೊಳ್ಳಬೇಕಾಯಿತು. ಉಭಯ ಪಕ್ಷಗಳೂ ಜರ್ಜರಿತವಾದುವು. ಬಂಡವಾಳವಾದಕ್ಕೆ ಅಂತ್ಯಾವಸ್ಥೆ ಬಂದೊದಗಿತು.

ರಶಿಯಾದ ರಾಜ್ಯಕ್ರಾಂತಿ

ಕಳೆದ ಮಹಾಯುದ್ಧದಿಂದ, ಮಧ್ಯಮವರ್ಗದ ಬುದ್ಧಿಜೀವಿಗಳ, ಮತ್ತು ಶ್ರಮಜೀವಿಗಳ ಮೇಲೆ ಅದ್ಭುತ ಪರಿಣಾಮವಾಯಿತು. ರಶಿಯದಲ್ಲಿ ಕಾರ್ಲ್ ಮಾರ್ಕ್ಸ್‌ನ ವಿಚಾರಗಳು ಅತ್ಯಂತ ಪ್ರಖರವಾದ ಬೆಳಕನ್ನು ಪಸರಿಸಿದುವು. ಗಾರ್ಕಿ, ಲೆನಿನ್ ಮುಂತಾದ ಪ್ರತಿಭಾವಂತರ ಗ್ರಂಥಗಳು ಜನರಲ್ಲಿ ಹೊಸ ಚೈತನ್ಯದ ಹೊಳೆಯನ್ನೇ ಹರಿಸಿದುವು. ಮಹಾಯುದ್ಧವು ಮುಗಿದ ಕೂಡಲೆ, ರಶಿಯದಲ್ಲಿ ಕ್ರಾಂತಿಯ ಝುಂಝಾವಾತವು ಬೀಸತೊಡಗಿತು. ಪ್ರಪಂಚದಲ್ಲಿಯೆ ಪ್ರಸಿದ್ಧವಾದ ಝಾರ್

ಮನೆತನದ ಒಂದು ನಾಯಿ ಕೂಡ ಉಳಿಯಲಿಲ್ಲ. ಮಿಂಚಿನ ವೇಗದಲ್ಲಿ ಇಡಿಯ ರಶಿಯದಲ್ಲಿ, ಸಮತಾವಾದವು ಹಬ್ಬಿ ಬೆಳೆದು ಕೊಂಡಿತು. ರಶಿಯದ 'ಸೋಶಾಲಿಝುಮ್' ಮತ್ತು 'ಕಮ್ಯು-ನಿಝುಂ'ಗಳ ಉಚ್ಚ ಆದರ್ಶಗಳನ್ನು ಎಲ್ಲ ಜನರೂ ಮೆಚ್ಚ ತೊಡಗಿದರು. ಪ್ರತಿಯೊಂದು ದೇಶದಲ್ಲಿಯೂ ಸಮತಾವಾದವು ಬೇರೆ ಬೇರೆ ಹೆಸರಿನಲ್ಲಿ ಹಬ್ಬತೊಡಗಿತು. ಎಲ್ಲ ದೇಶಗಳಲ್ಲಿಯೂ ಸಾಮ್ಯವಾದದ ವಿಚಾರಗಳು ಹಬ್ಬತೊಡಗಿದುವು. ಅನುಕೂಲ ಪರಿಸ್ಥಿತಿಯಿದ್ದ ದೇಶಗಳಲ್ಲಿ ಸಾಮ್ಯವಾದದ ಪಕ್ಷಗಳೂ ಹುಟ್ಟಿಕೊಂಡುವು. ಪ್ರತಿದಿನವೂ ಬೆಳೆಯುತ್ತಿರುವ ಪ್ರಜಾಸತ್ತೆಯನ್ನು ಬಗ್ಗುಬಡಿಯುವುದಕ್ಕಾಗಿ, ದಣಿದ ಬಂಡವಾಳಗಾರರು ತೂಕಹಾಕತೊಡಗಿದರು.

ಫ್ಯಾಸಿಝುಮ್

ರಶಿಯನ್ ರಾಜ್ಯಕ್ರಾಂತಿಯ ಅಲೆಗಳು ಜರ್ಮನಿ, ಇಟಾಲಿಗಳಿಗೂ ಬಡಿಯತೊಡಗಿದುವು. ೧೯೧೯ನೆಯ ಇಸ್ವಿಯಲ್ಲಿ ಇಟಲಿಯಲ್ಲಿ ಜರುಗಿದ ಬಂಡವಾಳಗಾರರ ವಿರುದ್ಧ ಕೂಲಿಕಾರರ ಸಂಪುಗಳು, ದಲಿತವರ್ಗದವರ ಅಸಂತೋಷದ ಬೆಳೆಗೆಯನ್ನು ತೋರಿಸುತ್ತವೆ. ೧೯೧೯ರಿಂದ ೧೯೨೨ರ ವರೆಗೆ ಎಂದರೆ ಮೂರು ವರುಷಗಳ ಅವಧಿಯಲ್ಲಿ ಕೃಷಿಕರ ೫೮೯ ಸಂಪುಗಳೂ, ಕೂಲಿಕಾರರ ೫೧೧೧ ಸಂಪುಗಳೂ ಜರುಗಿದುವು. ಇದರಲ್ಲಿ ೧೬,೫೫,೩೦೮ ಭೂಮಿಯಲ್ಲಿ ದುಡಿಯುವ ಕೂಲಿಗಳೂ, ೩೩,೮೮,೭೩೮ ಕಾರ-ಖಾನೆಗಳಲ್ಲಿ ದುಡಿಯುವ ಶ್ರಮಜೀವಿಗಳೂ ಭಾಗವಹಿಸಿದ್ದರು. ೧೯೧೯ನೆಯ ಮಾರ್ಚ್ ತಿಂಗಳಲ್ಲಿ ಮುಸೊಲಿನಿಯು, ಮಿಲಾನ್ ನಗರದಲ್ಲಿ ಫ್ಯಾಸಿಝುಮ್‌ನ ಪ್ರಾಣಪ್ರತಿಷ್ಠೆಯನ್ನು ಮಾಡಿದನು. ಆಗ 'ಫ್ಯಾಸಿಸ್ಟ' ಎಂದು ಹೇಳಿಕೊಳ್ಳುವವರು ೩೦-೪೦ ಜನರು ಮಾತ್ರ ಇದ್ದರು. 'ಫ್ಯಾಸಿಓ' ಎಂಬ ಶಬ್ದಕ್ಕೆ ಇಟಾಲಿಯನ್ ಭಾಷೆಯಲ್ಲಿ 'ಕಟ್ಟಿಗೆಯ ಹೊರೆ' ಎಂದು ಅರ್ಥ. ಆದರಿಂದಲೆ 'ಫ್ಯಾಸಿಝುಮ್' ಎಂಬ ಶಬ್ದವು ರೂಢವಾಗಿದೆ. ಕಟ್ಟಿಗೆಯ ಹೊರೆ ಮತ್ತು ಕೊಡಲಿಯು ಆದರ ಪ್ರತೀಕಗಳಾಗಿವೆ. ಕೊಡಲಿಯು ಸರಕಾರದ ದರ್ಪದ ಹೆಗ್ಗುರುತಾದರೆ, ಕಟ್ಟಿಗೆ ಹೊರೆಯು ಆ ದರ್ಪದಿಂದುಂಟಾದ ರಾಷ್ಟ್ರೀಯ ಒಕ್ಕಟ್ಟನ್ನು ಸೂಚಿಸುತ್ತದೆ. ಮುಸೊಲಿನಿಯು ಆ ಮೂರು ವರುಷಗಳ ಅವಧಿಯಲ್ಲಿ, ಕೇವಲ ಪಾಶವಶಕ್ತಿಯಿಂದ ಪ್ರಜಾಸತ್ತೆಯನ್ನು ಹತ್ತಿಕ್ಕಿ, ಸೋಶಾಲಿಝುಮ್ ತಲೆಯೆತ್ತದಂತೆ ನೋಡಿಕೊಂಡನು. ಅಲ್ಲಿಯ ಪ್ರಜಾ ಪ್ರತಿನಿಧಿಗಳೆಲ್ಲರೂ ಪ್ರಜೆಗಳಿಂದ ಆರಿಸಲ್ಪಡದೆ, ಫ್ಯಾಸಿಸ್ಟ ಪಕ್ಷದಿಂದಲೇ ಆರಿಸಲ್ಪಟ್ಟರು. ಇಟಲಿಯು ತುಂಬ ಫ್ಯಾಸಿ-ಝುಮ್ಮಿನ ತಾಂಡವನೃತ್ಯವು ನಡೆಯತೊಡಗಿತು.

ಇಟಲಿಯಂತೆ ಜರ್ಮನಿಯಲ್ಲಿಯೂ ಹಿಟ್ಲರನು ತಂತ್ರ-ಕುತಂತ್ರಗಳಿಂದ, ಸೈನ್ಯದ ಬೆಂಬಲದಿಂದ ಸರ್ವಾಧಿಕಾರಿಯಾದನು. ಇಟಲಿಯಲ್ಲಿಯ 'ಫ್ಯಾಸಿಝುಮ್' ಜರ್ಮನಿಯಲ್ಲಿ 'ನಾಝಿಝುಮ್' ಎಂದು ಕರೆಯಲ್ಪಟ್ಟಿತು. ಕಳೆದ ಮಹಾಯುದ್ಧದಲ್ಲಿ ಸೋತ ಜರ್ಮನ್ ಬಂಡವಾಳಗಾರರು ಸಿಟ್ಟಿನಿಂದ ಹುಚ್ಚಾಗಿದ್ದರು. ಇಡಿಯ ಜರ್ಮನ್ ಜನಾಂಗವೆ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದಿತು. ಜನರ ಈ ಮನೋವೃತ್ತಿಯ ಲಾಭವನ್ನೇ ಅಲ್ಲಿಯ ಬಂಡವಾಳಗಾರರು ತೆಗೆದುಕೊಂಡರು. ಈ ಕಾಲದಲ್ಲಿ ಸಮತಾವಾದಕ್ಕೆ ಜರ್ಮನಿಯಲ್ಲಿ ಇಂಬು ದೊರೆತಿದ್ದರೆ, ಅಲ್ಲಿಯ ಶ್ರಮಜೀವಿಗಳಿಗೆ ತಮ್ಮ ನಿಜವಾದ ಶತ್ರುಗಳು ಯಾರೆಂಬುದು ತಿಳಿಯು-ತ್ತಿದ್ದಿತು. ಆದರೆ ನಾಝಿಗಳು ಆದೇ ತಲೆಯೆತ್ತುತ್ತಿದ್ದ ಅನೇಕ ಸಮತಾವಾದಿಗಳನ್ನು ಗುಂಡಿಕ್ಕಿ ಕೊಂದು, ದೇಶದಲ್ಲಿ ತಮ್ಮ ವರ್ಚಸ್ಸನ್ನು ಬೆಳೆಯಿಸತೊಡಗಿದರು. ಅಲ್ಲಿಯ ಧನಿಕವರ್ಗವು ಜರ್ಮನ್ ಜನಾಂಗದಲ್ಲಿ ದೇಶಾಭಿಮಾನದ ಜ್ಯೋತಿಯನ್ನು ಪ್ರಖರಗೊಳಿಸಿತು. ಜಗತ್ತಿನಲ್ಲಿ ಜರ್ಮನ್ ಜನಾಂಗವೇ ಶ್ರೇಷ್ಠವೆಂದೂ Nordic (ಆರ್ಯ) ಕುಲದಲ್ಲಿ ಜನ್ಮಿಸಿದ ಜರ್ಮನರೇ ಜಗತ್ತನ್ನಾಳಲು ಹುಟ್ಟಿದವರೆಂದೂ ಸಾರತೊಡಗಿದರು. ಒಂದು ಕಾಲಕ್ಕೆ ಹಿಟ್ಲರನ ಅನುಯಾಯಿಯಾದ Hermann Rauschning ಎಂಬವನು, ಹಿಟ್ಲರನು ೧೯೩೪ರಲ್ಲಿ ಜರ್ಮನ್ ಜನಾಂಗದ ಕುಲದ ಶ್ರೇಷ್ಠತೆಯ ಬಗ್ಗೆ ನುಡಿದ ಮಾತುಗಳನ್ನು ತನ್ನ 'The Voice of Destruction' ಎಂಬ ಗ್ರಂಥದಲ್ಲಿ ಈ ರೀತಿ ಉದಾಹರಿಸಿದ್ದಾನೆ.

'We must win the Victory of the German race conciousness over the masses eternally fated to serve and obey. We alone can conquer the great continental spaces....We shall take this struggle upon us. It will open to us the door to permanent mastery of the world.'

(ಅನಂತಕಾಲದವರೆಗೂ ದಾಸ್ಯದಲ್ಲಿಯೇ ಕೊಳೆಯಲು ತಕ್ಕುದಾದ ಜನತೆಯ ಮೇಲೆ, ಜರ್ಮನ್ ಜನಾಂಗದ ಅರಿವು ಮೇಲುಗೈಯನ್ನು ಪಡೆಯಬೇಕು. ಈ ವಿಸ್ತಾರವಾದ ಯುರೋಪಖಂಡದ ಪ್ರದೇಶಗಳನ್ನು ಗೆದ್ದು ಆಳುವವರು ನಾವೇ ಜರ್ಮನ್ ಜನಾಂಗದವರು. ಅದಕ್ಕಾಗಿ ಹೋರಾಡುವ ಹೊಣೆಯನ್ನು ನಾವು ಹೊರಲೇಬೇಕಾಗಿದೆ. ಈ ನಮ್ಮ ಹೋರಾಟ ಜಗತ್ತಿನ ಪ್ರಭುತ್ವಕ್ಕಾಗಿ ನಮಗೆ ಬಾಗಿಲನ್ನು ತೆರೆದುಕೊಡುವುದು.)

ನಾಝೀ ಪಕ್ಷದ ಬಾಯಿಯಂತಿರುವ, ಹಿಟ್ಲರನು, ಜರ್ಮನ್ ಜನಾಂಗದಲ್ಲಿ ಆರ್ಯಕುಲ (ಜರ್ಮನ್‌ಕುಲ)ದ ಹಿರಿಮೆಯನ್ನೂ ಉಳಿದ ಜನಾಂಗದ ವಿಷಯಕ್ಕೆ ತಿರಸ್ಕಾರವನ್ನೂ ಹೇಗೆ ಉಂಟುಮಾಡುತ್ತಿದ್ದನೆಂಬುದು ಒಂದು ಪ್ರಸಂಗದಿಂದ ತಿಳಿದು ಬರುವಂತಿದೆ. ಒಮ್ಮೆ ಒಬ್ಬ ನಿಗ್ರೊ ಮನುಷ್ಯನು ವಕೀಲನಾದದ್ದಕ್ಕಾಗಿ ಅನೇಕ ವೃತ್ತಪತ್ರಗಳಲ್ಲಿ ಅವನ ಸ್ತುತಿಪರ ಲೇಖನಗಳು ಆಚ್ಚಾಗಿದ್ದುವು ಆ ವಿಷಯವನ್ನೇ ತೆಗೆದುಕೊಂಡು ಹಿಟ್ಲರನು ತನ್ನ ಆತ್ಮಚರಿತ್ರೆಯಾದ 'Mein Kampf' (ನನ್ನ ಹೋರಾಟ) ಎಂಬ ಗ್ರಂಥದಲ್ಲಿ ಈ ರೀತಿ ನುಡಿದಿದ್ದಾನೆ:

"It does not dawn on the murky bourgeois mind that the fact which is published for him is a sin against reason itself, that it is an act of criminal insanity to train a being who is only an anthropoid by birth until the pretence can be made that he has been turned into a lawyer. While on the other hand, millions who belong to the most civilized races have to remain in position which are unworthy of their cultural level. The bourgeois mind does not realise that it is a sin against the will of the Eternal Creator to allow hundreds of thousands of highly gifted people to remain floundering in the swamp of proletarian misery, while Hottentots and Zulus are drilled to fill positions in the intellectual professions. For here we have the product only of a drilling technique just as in the case of performing dog. If the same amount of care and effort were applied among intelligent races, each individual would become a thousand times more capable in such matters."

(ಇದು ಸಾಮಾನ್ಯಬುದ್ಧಿಯ ಜನರಿಗೆ ಹೊಳೆಯದ ವಿಷಯ. ನಿಗ್ರೋನ ಬಗೆಗೆ ಪ್ರಕಟವಾದ ಸಂಗತಿಯನ್ನು ನೋಡಿದರೆ, ಅದೊಂದು ವಿವೇಕಬುದ್ಧಿಗೆ ವಿರೋಧವಾದ ಪಾಪವೆಂದು ಎನಿಸದಿದು. ಮಂಗನ ಕುಲದವನನ್ನು ಮನುಷ್ಯನನ್ನಾಗಿ ಮಾಡಲು ಹವಣಿಸುವುದು ಹುಚ್ಚುತನವೇ ಸರಿ. ಇದರಿಂದ ಸುಸಂಸ್ಕೃತ ಜನಾಂಗದಲ್ಲಿಯ ಕೋಟ್ಯವಧಿ ಜನರು ಇನ್ನೂ ತಮ್ಮ ಸಾಂಸ್ಕೃತಿಕ ಮರ್ಯಾದೆಯನ್ನು ತಪ್ಪಿದ ಎಲ್ಲಿಯೋ ಬಿದ್ದುಕೊಂಡಿರಬೇಕಾಗುವುದು. ಹೀಗೆ ಆ ಕೋಟ್ಯವಧಿ ಜನರನ್ನು ಕೀಳುತನದ ಕೊಳೆಯಲ್ಲಿ ಉಳಿಯಗೊಡುವುದೆಂದರೆ ಅದೊಂದು ದೈವದ್ರೋಹವೆಂಬುದು ತಿಳಿಗೇಡಿಗಳಾದ ಬಹುಜನರಿಗೆ ಗೊತ್ತಾಗಲಾರದು. ಆದುದರಿಂದಲೆ ಅವರು ಅನಾಗರಿಕರಾದ ಜೂಲು—ಹಾಟೆಂಟಾಟ್ ಜನರನ್ನು ಬೌದ್ಧಿಕ ಉದ್ಯಮಗಳಲ್ಲಿ ಸೇರಿಸಲು ಪಳಗಿಸುವರು. ಹೀಗವರು ಮಾಡುವುದೆಂದರೆ ಸರ್ಕಸ್ಸಿನ ನಾಯನ್ನು ಪಳಗಿಸುವುದೇ ಸರಿ. ಇದೇ ಬಗೆಯ ಉತ್ಸಾಹ-ಶ್ರಮಗಳನ್ನು ಕುಲೀನಜನಾಂಗದವರನ್ನು ಪಳಗಿಸಲು ಬಳಸಿದರೆ, ಒಂದೊಂದು ವ್ಯಕ್ತಿಯೂ ಆ ನಿಗ್ರೋಗಿಂತ ಸಾವಿರಮಡಿಯಷ್ಟು ಕುಶಲತೆಯಿಂದ ರಾಷ್ಟ್ರಕ್ಕಾಗಿ ಕೆಲಸಮಾಡಬಹುದು.)

ಹಿಟ್ಲರನ ಈ ಕಟುನುಡಿಗಳು, ಜರ್ಮನೇತರ ಜನಾಂಗದ ವಿಷಯದಲ್ಲಿ ಅವನಿಗಿದ್ದ ತಿರಸ್ಕಾರವನ್ನು ಸೂಚಿಸುತ್ತವೆ. ಹಾಟೆಂಟಾಟರೂ, ಝೂಲೂಗಳೂ ಜರ್ಮನ್ನರಷ್ಟು ಬುದ್ಧಿವಂತರಾಗಲಾರರೆಂಬುದು ನಿಜ. ಅವರು ಇನ್ನೂ ೮-೧೦ ಸಾವಿರ ವರುಷ ಹಿಂದಿನ ಮನುಷ್ಯಜೀವನದಲ್ಲಿಯೆ ಬಾಳುತ್ತಿದ್ದಾರೆ. ಆದರೆ ಅವರು ಹಿಂದುಳಿಯಲು ಸುಧಾರಿಸಿದ ಜನಾಂಗಗಳೆ ಕಾರಣವಾಗಿವೆ. ಹಿಂದೂದೇಶದಲ್ಲಿ ಆರ್ಯರು ದ್ರಾವಿಡರನ್ನು ಹತ್ತಿಕ್ಕಿದರು. ಅಮೇರಿಕೆಯಲ್ಲಿ ನಿಗ್ರೋಗಳನ್ನು ಅಲ್ಲಿಯ ಬಿಳಿಯ ಜನರು ತಲೆಯೆತ್ತಗೊಡಲಿಲ್ಲ. ಆಸ್ಟ್ರೇಲಿಯದಲ್ಲಿ ಮೂಲನಿವಾಸಿಗಳನ್ನು ಬಿಳಿಯ ಜನರೆ ಹೊಡೆದೋಡಿಸಿದರು. ಎಂದಿನಿಂದಲೂ ಸಾಗಿಬಂದಿರುವ ಈ ಕುಲದ್ವೇಷಕ್ಕೆ ಬಂಡವಾಳವಾದವೇ ಕಾರಣವಾಗಿದೆ. ಹಿಂದುಳಿದ ಜನಾಂಗಗಳಲ್ಲಿ ಜ್ಞಾನಗಂಗೆಯನ್ನು ಹರಿಸಿ, ಅವರನ್ನೂ ಮನುಷ್ಯವರ್ಗದಲ್ಲಿ ಕೂಡಿಸುವುದು ಸುಸಂಸ್ಕೃತರ ಕರ್ತವ್ಯವಾಗಿದೆ. ಅದನ್ನು ಬಿಟ್ಟು ಅವರನ್ನು ದನಗಳಂತೆ ನಡೆಯಿಸಿಕೊಳ್ಳುವುದು, ಸಂಸ್ಕಾರವಂತರೆಂದು ತಿಳಿದುಕೊಂಡ ಜನರ ರಾಕ್ಷಸೀ ಮಹತ್ವಾಕಾಂಕ್ಷೆಗೆ ಸ್ಪಷ್ಟ ದ್ಯೋತಕವಾಗಿದೆ.

ಸಂಜೆ-ಬೆಳಗು

ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ ಹೊಂಬಳ.

ಪಡುವಣದ ಸಂಜೆಗೆಂಪನು ಮೂಡಣದ ಮುಂಬೆಳಗೆಂದು ಬಗೆದು ಮರುಳಾಗಬಹುದೇ? ಕಂಪಿಲ್ಲದ ಬರಿಯ ಕೆಂಪಿನಿಂದೇನು? ಮಿಂಚುವದೆಲ್ಲವು ಮಾಣಿಕವಲ್ಲವಷ್ಟೇ!

ಎಲ್ಲರನು ಹಾಡಿಹರಸಿ, ಹೊಸಹುರುಪನೀವ ಮುಂಬೆಳಗೆತ್ತ; ದಣಿಸಿ ನೆಲಹಿಡಿಸುವ ಸಂಜೆಗೆಂಪೆತ್ತ? ತಾವರೆ-ಮೊಗವ ಮೇಲೆತ್ತಿ ನಗಿಸುವ ಮುಂಬೆಳಗಿಗೆ, ಬಾಯಿ-ಬಗೆಗಳನು ಬಿಗಿದು ಅರಿವುದಪ್ಪಿಸಿ ಬಾಳನು ಹಾಳುಮಾಡುವ ಸಂಜೆಗೆಂಪು ಸಾಟಿಯಪ್ಪುದೇ? ನಾಡಿಗರ ಕಣ್ಬಗೆಗಳಿಗೆ ಹಬ್ಬಮಾಡುವ ಮುಂಬೆಳಗೂ, ಕಾಡುಮಿಗಗಳ ನಿಗ್ಗರದ ಬೀಡಾದ ಸಂಜೆಗೆಂಪೂ ಒಂದೆ ಆಗಬಹುದೆ?

ಮುಂಬೆಳಗಿನ ಸವಿಯನುಂಡು, ಕಿಲಕಿಲಿಸಿ ಹಾರಾಡುವ ಹಕ್ಕಿಗಳು, ಸಂಜೆಗೆಂಪನು ಕಂಡು ಕಳವಳಿಸಿ ಗಾಬರಿಯಾಗಿ ಗೂಡಿಗೋಡತೊಡಗುವುವು. ಮುಂಬೆಳಗಿನ ಹಿಂದೆ ಜಗವನು ಝುಗಝುಗಿಸ ಬೆಳಕಿನ ಗುಂಪು ಹೊಳೆ-ಹೊಳೆದು ಹರುಷ ಹೆಚ್ಚಿಸುವುದು. ಸಂಜೆಗೆಂಪಿನ ಹಿಂದೆ ಜಗವನು ಮುಚ್ಚುವ ಕಾಳ್ಗತ್ತಲೆಯು ಬಂದು ಬೆಚ್ಚಿಸುವುದು. ಇದರ ಹಿಂದೆ ಅಡಗಿದ ಕತ್ತಲೆಯು ಒಡೆದು ತೋರಲು, ಅದರಲ್ಲಿ ಹಾರಾಡುವ ಗೂಗೆಗಳ ದನಿಯು ಕಿವಿಗೆ ಕರ್ಕಶವಾಗಿ ಕೇಳುವುದು.

ಅಂಜುಗುಳಿಗಳ ಅಂಜಿಕೆಯನು ಕೇಳುವುದೀ ಮುಂಬೆಳಗು! ಬಾಳುವೆಯ ಗೋಳಿನಿಂದ ಬಾಡುತಿರುವ ಜೀವನ-ವಲ್ಲಿಗೆ ನವಜೀವನವನೆರೆವುದೀ ಮುಂಬೆಳಗು? ಸಂಜೆಗೆಂಪನು ನೋಡಿ, ಬಗೆಗೆಟ್ಟು ಹಾಹಾರಿ ಬಿದ್ದವರನೆಚ್ಚರಿಸಿ, ಅವರಿಗೆ ತಕ್ಕದಾರಿಯ ತೋರುವುದೀ ಮುಂಬೆಳಗು!

ಅದು ನಂಜಿನ ಹುತ್ತು! ಇದು ಸುಧೆಯ ಬಿತ್ತು

ರಾಜಾ-ರಾಣಿ

(ಅನುವಾದಿತ ಕಥೆ)

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ.ಎ.,ಬಿ.ಟಿ. ಗೋಕಾಕ

★

ಪ್ರೀತಿಯಲ್ಲಿ ಪಾಲುಗಾರರು ತಲೆದೋರಿದರೆ ಇಲ್ಲದ ಈರ್ಷೆ-ಮತ್ಸರಭೂತಗಳ ಅವತಾರವಾಗುವುದು ಎಲ್ಲೆಲ್ಲಿಯೂ ಕಂಡುಬರುವ ರೀತಿ. ರಾಣಿಯ ಪ್ರೀತಿಯಲ್ಲಿ ಬಿಪಿನಕಿಶೋರ ಪಾಲುಗಾರನಾದ; ಎಂತಲೆ ಚಿತ್ರರಂಜನನ ಕೆಳೆಯ ಹೊಳೆಯಿಂದ ಹೊರಗೊಗೆದ ಮೀನು ಆದ.

ಬಿಪಿನ ಕಿಶೋರನು ಆಗರ್ಭ ಶ್ರೀಮಂತನಾಗಿಯೆ ಜನ್ಮವೆತ್ತಿದ್ದುದರಿಂದ ಅವನಿಗೆ ಗಳಿಕೆಯ ಇಮ್ಮಡಿ ವೆಚ್ಚಮಾಡುವ ಅಭ್ಯಾಸವೇ ರಕ್ತಗತವಾಗಿಬಿಟ್ಟಿತ್ತು; ಅದರ ಪರಿಣಾಮವಾಗಿ ಅವನಿಗೆ ಬೆಳೆದ ಮನೆಯಲ್ಲಿ ಉಳಿಯುವ ಸೌಭಾಗ್ಯವು ಬಹುದಿನ ಉಳಿಯಲಿಲ್ಲ.

ಹರಯದ ಕಿಶೋರನು ಸುಂದರನಾಗಿದ್ದನಲ್ಲದೆ ಗಾನವಿದ್ಯಾವಿಶಾರದನೂ ಆಗಿದ್ದನು. ಆದರೆ ನಿತ್ಯಜೀವನಕ್ಕೆ ಬೇಕಾಗುವ ವ್ಯವಹಾರಚಾತುರ್ಯವು ಇಲ್ಲದುದರಿಂದ, ಅವನು ಜೀವನದ ತೆರೆ-ಮರೆಗಳನ್ನು ಎದುರಿಸಲು ಅಸಮರ್ಥನಾಗಿದ್ದನು. ಜೀವನದ ಹಾದಿಯಲ್ಲಿ ಆತ ಜಗನ್ನಾಥನ ತೇರಿನಂತೆ ಸಾಗಿದ್ದನು ಮಾತ್ರ. ಸಿರಿವಂತಿಕೆಯ ಬಾಳುವೆಯ ಹಿಡಿತವು ಹದತಪ್ಪಿ ಅವನನ್ನು ಹಾದಿತಪ್ಪಿಸಿಬಿಟ್ಟಿತು.

ಅನೇಕ ದಿನಗಳಿಂದ ಸರಕಾರದ ಸ್ವಾಧೀನದಲ್ಲಿದ್ದ ತನ್ನ ಆಸ್ತಿಯನ್ನು ಇದೀಗ ಮರಳಿ ಪಡೆದುಕೊಂಡ ರಾಜಾ ಚಿತ್ರರಂಜನನು ಒಂದು "ನಾಟ್ಯವಿಲಾಸೀ ಸಂಘ"ವನ್ನು ಏರ್ಪಡಿಸಲು ಮನಸ್ಸು ಮಾಡಿದನು. ಬಿಪಿನಕಿಶೋರನ ಕಳೆದುಂಬಿದ ಕಲಾವಂತ ಮುಖಸೌಂದರ್ಯದ ಮಾಟಕ್ಕೂ, ಅವನ ಗಾನವಿದ್ಯಾಪಾರಂಗತತೆಗೂ ಮಾರುಹೋದ ಚಿತ್ರರಂಜನನು, ಅವನನ್ನು ತುಂಬ ಅಭಿಮಾನದಿಂದ ತನ್ನ ಸಂಘದಲ್ಲಿ ಬರಮಾಡಿಕೊಂಡನು.

ಚಿತ್ರರಂಜನನು ಬಿ. ಎ. ಪದವೀಧರ, ಯಾವ ದುರಭ್ಯಾಸಗಳೂ ಅವನಲ್ಲಿ ಮನೆಮಾಡಿಕೊಂಡಿರಲಿಲ್ಲ. ಸಿರಿವಂತರ ಮಗನಾದರೂ ಸಾದಾಜೀವಿ; ಊಟ-ಉಪಚಾರಗಳನ್ನು ಆತ ಹೊತ್ತಿಗೆ ಸರಿಯಾಗಿ ಮಾಡುತ್ತಿದ್ದನು. ಅಲ್ಲದೆ ಅವನಷ್ಟು ವೇಳೆಯ ಮಹತ್ತ್ವವನ್ನು ಯಾರೂ ಅರಿಯರು. ಅವನು ಮಲಗುವುದು ಕೂಡ ಹೊತ್ತಿಗೆ ಸರಿಯಾಗಿ. ಬಿಪಿನನಲ್ಲಿ ಅದಾವ ಮೋಹಕಶಕ್ತಿಯು ಮನೆಮಾಡಿಕೊಂಡಿತ್ತೊ, ಬಲ್ಲವರಾರು! ಚಿತ್ರರಂಜನನು ಅವನಿಗಾಗಿ ಮುಗ್ಧನಾಗಿ ಬಿಟ್ಟ. ಆದರಿಂದಲೆ ಅವನ ಓರಣದ ಜೀವನವು ಶಿಥಿಲವಾಯಿತು. ಬಿಪಿನನ ಗಾನಗೀತಗಳನ್ನು ಕೇಳುವಾಗ ಅವನಿಗೆ ಊಟದ ಪರಿವೆ ಇರುತ್ತಿರಲಿಲ್ಲ. ಬಡಿಸಿದ ಎಡೆಯು ತಣ್ಣಗಾದರೂ ಅದರ ಲಕ್ಷ್ಯವೇ ಅವನಿಗಿರುತ್ತಿರಲಿಲ್ಲ. ಅವನೊಡನೆ ನಾಟ್ಯಗೀತಗಳ ಗುಣಾವಗುಣಗಳನ್ನು ಚರ್ಚಿಸುವಾಗ ಇರುಳು ಜಾರಿಹೋಗುತ್ತಿದ್ದಿತು. ದಿವಾನ್ ಸಾಹೇಬರು ಚಿತ್ರರಂಜನನಲ್ಲಾದ ಈ ಮಾರ್ಪಾಟಿಗಾಗಿ ಗೊಣಗುಡತೊಡಗಿದರು. ಬಿಪಿನ ಕಿಶೋರನಲ್ಲಿಟ್ಟ ಈ 'ಅತಿಪ್ರೇಮ'ವು ತನ್ನ ಒಡೆಯನಲ್ಲಿರುವ ಒಂದೇ ಒಂದು ಕುಂದೆಂದು ಆತ ಗಣಿಸಿದನು.

ರಾಣೀ ಬಸಂತಕುಮಾರಿಯು ತನ್ನ ಗಂಡನಲ್ಲಾದ ಈ ಸ್ಥಿತ್ಯಂತರವನ್ನು ಕಂಡು ಕೆರಳಿದಳು; ಅರ್ಭಟಿಸಿದಳು. ಒಬ್ಬ 'ಬೀದಿಯ ಭಿಕ್ಷುಕ'ನಿಗಾಗಿ ಜೀವನವನ್ನೇ ಹಾಳು ಮಾಡಿಕೊಳ್ಳುವಿರೆಂದು ಪತಿರಾಯನಿಗೆ ಎಚ್ಚರಿಕೆಕೊಟ್ಟಳು. ಅಲ್ಲದೆ ಈ 'ಭಿಕ್ಷುಕ'ನನ್ನು ತಳ್ಳಿದಷ್ಟು ತೀವ್ರ ತನಗೆ ಆನಂದಲಭಿಸುವುದೆಂದು ಭಾವಿಸಿದಳು.

ತನ್ನ ತರುಣಪತ್ನಿಯು ತೋರುವ ಈ 'ಹೊಟ್ಟೆಕಿಚ್ಚ'ಗಾಗಿ ರಾಜನಿಗೆ ಒಳಗೊಳಗೆ ಬಹಳ ಸಮಾಧಾನವಾಯಿತು. 'ಈ ಹೆಣ್ಣುಜೀವಿಗಳು ತಮ್ಮ ಪ್ರಿಯರನ್ನುಳಿದು ಇನ್ನೊಬ್ಬರನ್ನರಿಯುವ ಗೊಡವೆಗೂ ಹೋಗುವುದಿಲ್ಲ; ಬೇರವರಲ್ಲಿದ್ದ ಅಸಾಮಾನ್ಯಗುಣಗಳನ್ನೂ ವಿಚಾರಿಸುವುದಿಲ್ಲ!' ಎಂದು ಚಿತ್ರರಂಜನನು ಆಗಾಗ ವಿಚಾರಿಸುವನು. ಹೀಗೆ ವಿಚಾರಮಾಡುವಾಗ ಅವನ ಮೊಗದಲ್ಲಿ ಮುಗುಳುನಗೆಯು ಮಿನುಗುತ್ತಿದ್ದಿತು. ಆದರ್ಶಗುಣಗಳುಳ್ಳ, ಅನೇಕರು ಆದರಣೀಯರಾಗಿರುವರೆಂಬ ಮಾತು 'ಮಹಿಳಾಶಾಸ್ತ್ರ'ದಲ್ಲಿ ಬರೆದಂತೆ ಕಾಣುವುದಿಲ್ಲ. ಅವರಿಗೆ ಆದರಣೀಯ ವ್ಯಕ್ತಿಯೆಂದರೆ ಕೈಹಿಡಿದ ಪತಿದೇವ. ಅವನೇ ಉತ್ತಮ. ಅವನೇ ಪುರುಷೋತ್ತಮ. ದಿನದ ಊಟದ ವೇಳೆಗೆ ಗಂಡನು ತಡಮಾಡಿದರೆ ತೀರಿತು; ಇವರಿಗೆ ಚಿಂತೆಯು ಸಂತೆಯು ಒಬ್ಬುಳಿಗೊಡುವುದು. ಗಂಡನನ್ನು ಅವಲಂಬಿಸಿದವರಿಗೆ ಒಂದು ತುತ್ತು ಸಿಕ್ಕದಿದ್ದರೂ ಇವರಿಗೆ ಅದರ ಪರಿವೆಯಿರದು. ಗಂಡನ ಚಿಂತೆಯಲ್ಲಿ ಜಗತ್ತೇ ಶೂನ್ಯ ಈ ಮುಗ್ಧಮಹಿಳೆಯರಿಗೆ! ಈ ಹೆಣ್ಣುತನದ ವಿಚಾರಶೂನ್ಯ ತಾರತಮ್ಯದಲ್ಲಿ ಚಿತ್ರರಂಜನನು ತಪ್ಪೆಣಿಸಬಹುದಾಗಿತ್ತು; ಆದರೆ ಅವನಿಗೆ ತನ್ನ ಹೆಂಡತಿಯ ವರ್ತನೆಯಿಂದ ಅಸಮಾಧಾನವಾಗಲಿಲ್ಲ. ಇದು ತನ್ನ ಮೇಲಿನ ಪ್ರೀತಿಯ ಕುರುಹೆಂದು ಭಾವಿಸಿ, ಅವಳ ಸಮಕ್ಷಮದಲ್ಲಿ ಬಿಪಿನಕಿಶೋರನ ಗುಣಗಾನವನ್ನು ಬಣ್ಣನೆಯ ಮಾತುಗಳಿಂದ

*ವಿಶ್ವಕವಿ ರವೀಂದ್ರರ "Raja and Rani"ಯ ಅನುವಾದ. —ಲೇ

ಹೇಳಿ. ಅವಳ ಕೋಪದ ಕಿಡಿಗಳನ್ನು ಸಂತೋಷದಿಂದ ಅನುಭವಿಸತೊಡಗಿದನು. ಆ ಕಿಡಿಗಳಲ್ಲಿ ಸುಡುವ ಶಕ್ತಿಗಿಂತ ಮಡಗಿದ ಪ್ರೇಮವನ್ನೇ ಆತ ಕಂಡನು.

ಈ 'ರಾಜ' ದಂಪತಿಗಳ ಬಿಸದವು ಪಾಪ,—ಬಿಪಿನನ ಕೊರಳಿಗೆ ಬಂದಿತು. ರಾಣಿಯು ಬಿಪಿನನಲ್ಲಿ ತೋರುವ ಅನಾದರವನ್ನು ಮನೆಯಾಳುಗಳು ಕಂಡುಕೊಂಡರು. ಅವಳ ಅಸಹಾನು-ಭೂತಿಯು ಇವರ ಅಸಹಾನುಭೂತಿಗೆ ಕಾರಣವಾಯಿತು. ರಾಣಿಯು ಬಿಪಿನನನ್ನು ಕಡೆಗಣಿಸುವುದನ್ನು ನೋಡಿ ಸೇವಕರು ಅವನನ್ನು ತೀರ ತುಚ್ಛವಾಗಿ ಕಾಣತೊಡಗಿದರು. ಬಿಪಿನನ ನಿತ್ಯದ ಸೌಕರ್ಯಗಳನ್ನು ಬೇಕೆಂದು ಮರೆಯತೊಡಗಿದರು. ಬಿಪಿನನು ತನಗಾಗುತ್ತಿರುವ ಈ ಅವಮಾನವನ್ನೂ, ಹೇಳಲಾಗದ ವೇದನೆಯನ್ನೂ ತಾನೇ ಅನುಭವಿಸತೊಡಗಿದ್ದನಲ್ಲದೆ ಎಲ್ಲಿಯೂ ಬಿಟ್ಟೆಂದು ಬಾಯಿಬಿಡಲಿಲ್ಲ.

ಒಮ್ಮೆ ರಾಣಿಯು ಒಬ್ಬ ಆಳುಮಗನನ್ನು ಸಂಧಿಸಿ, ದರ್ಪದಿಂದ 'ಸೇವಕರೆಲ್ಲಾ ಮೈಗಳ್ಳರಾಗಿಬಿಟ್ಟಿರುವಿರಿ. ಕುಂಟು ನೆವ ಹೇಳಿ ಕೆಲಸ ತಪ್ಪಿಸುವಿರಿ. ಹಗಲೆಲ್ಲ ನೀವು ಮಾಡುವ ಕೆಲಸವಾದರೂ ಏನು?' ಎಂದು ಗದ್ದರಿಸಿದಳು. ರಾಣಿಯ ಗದ್ದರಿಕೆಗೆ ಆಳು ನಡುಗಿದನಾದರೂ ಸಮಾಧಾನದಿಂದ 'ತಾಯೀ! ಮಹಾರಾಜರ ಆಜ್ಞೆಯಂತೆ ಬಿಪಿನಬಾಬುವಿನ ಸೇವೆಯಲ್ಲಿಯೆ ಹಗಲೆಲ್ಲ ಕಳೆದು ಹೋಗುವುದು. ವೇಳೆಯುಳಿಯುವುದೇ ಕಷ್ಟ!" ಎಂದು ಉಸುರಿದನು.

'ಓಹೊ! ನಿಮ್ಮ ಬಿಪಿನಬಾಬುವು ಒಬ್ಬ ದೊಡ್ಡ ನವಾಬ-ನಾಗಿ ಬಿಟ್ಟಿರುವನೇನು' ಎಂದು ರಾಣಿ ಮುಖ ಮುದುರಿಸಿ ನುಡಿದಳು. ಆಳುಮಗನಿಗೂ ಇದೇ ಬೇಕಾಗಿತ್ತು. ರಾಣಿಯ ಮಾತಿನಿಂದ ತನ್ನ ಕೆಲಸದ ಸೂಚನೆಯನ್ನು ಕಂಡುಕೊಂಡನು. ಮರುದಿನ ಬಿಪಿನನು ಉಂಡು ಬಿಟ್ಟ ತಾಟು ಅಲ್ಲಿಯೆ ಉಳಿಯಿತು. ಉಣ್ಣುವ ತಾಟಿನ ಮೇಲೆ ಮುಚ್ಚುವುದನ್ನು ಕೂಡ ಆಳು ಬಿಟ್ಟುಬಿಟ್ಟನು. ಪಾಪ, ಬಿಪಿನನಿಗೆ ತಾಟು ತೊಳೆಯುವ ರೂಢಿ ಎಲ್ಲಿಂದ ಬರಬೇಕು? ಆದರೂ ಅವನು ಆ ಕೆಲಸವನ್ನು ಬಂದ ಹಾಗೆ ಮಾಡಬೇಕಾಯಿತು. ಅನೇಕವೇಳೆ ಅವನು ಕೂಳು ಕಾಣದೆ ಹೋದದ್ದೂ ಉಂಟು. ಈ ಸಂಗತಿಗಳನ್ನು ರಾಜನ ದೃಷ್ಟಿಗೆ ತಂದು, ಸೇವಕರ ಪಾರುಪತ್ಯ ಮಾಡಿಸಬೇಕೆಂದು ಅವನು ಕನಸಿನಲ್ಲಿಯೂ ವಿಚಾರಿಸಿರಲಿಲ್ಲ. ಅದು ಅವನ ಸ್ವಭಾ-ವವೇ ಆಗಿರಲಿಲ್ಲ. ಆಳುಮಕ್ಕಳೊಡನೆ ಬಾಯಿಮಾಡಿ ತನ್ನ ಯೋಗ್ಯತೆಯನ್ನು ಕೆಳಕ್ಕಿಳಿಸಿಕೊಳ್ಳುವ ಕ್ಷುದ್ರನೂ ಅವನಲ್ಲ. ಅವನು ಯಾವುದನ್ನೂ ಗಣಿಸದೆ ಎಲ್ಲವನ್ನೂ ಕಡೆಗಣಿಸಿ ಬಿಟ್ಟನು. ಎಲ್ಲವನ್ನೂ ತೀರ ಸಮಾಧಾನದಿಂದ ನುಂಗಿಕೊಂಡು, ಆನಂದದ ಆವಿರ್ಭಾವವನ್ನು ನಟಿಸುತ್ತ, ತನ್ನದೆಲ್ಲವೂ ಚೆನ್ನಾಗಿ ಸಾಗಿದೆ ಎಂಬುವವನಂತೆ ಕಾಲವನ್ನು ಹಾಕತೊಡಗಿದನು. ಬರುಬರುತ್ತ ರಾಜನ ಪ್ರೀತಿಯು ಇವನ ಮೇಲೆ ಹೆಚ್ಚಾದಂತೆ ರಾಣಿಯ ಕೋಪವು ಭುಗಿಲೆನ್ನಲಾರಂಭಿಸಿತು. ಕೊನೆಗೆ ರಾಣಿಯ ಕ್ರೋಧವು ಮೇರೆವಿಾರತೊಡಗಿತು. ಅವಳ ಕೆಂಗಣ್ಣ ಕಿಡಿಯಲ್ಲಿ ಬಿಪಿನನ ಸರ್ವನಾಶವು ಹುದುಗಿತು.

'ಸುಭದ್ರಾಹರಣ' ನಾಟಕದ ರಂಗತಾಲೀಮು ಮುಗಿದು ಆ 'ಗೀತನಾಟ್ಯ'ವು ರಂಗಭೂಮಿಗೆ ಸಿದ್ಧವಾಯಿತು. ಅರಮನೆಯ ಭವ್ಯ ಪಟಾಂಗಣದಲ್ಲಿ ರಂಗಭೂಮಿಯನ್ನು ಸಿದ್ಧಗೊಳಿಸ-ಲಾಯಿತು. ಆ ದಿನ ಶ್ರೀಕೃಷ್ಣನ ಪಾತ್ರವನ್ನು ರಾಜನೂ, ಅರ್ಜುನನ ಪಾತ್ರವನ್ನು ಬಿಪಿನನೂ ವಹಿಸಿದ್ದರು. ಬಿಪಿನನ ಕಲಾಕೌಶಲ್ಯವು ಅವರ್ಣನೀಯವಾಗಿತ್ತು. ಅವನ ಮಧುರ-ಗಾನಕ್ಕೆ ಮನಸೋಲದವರಿಲ್ಲ. ಅರ್ಜುನನ ಪಾತ್ರದಲ್ಲಿ ಅವನ ದೇಹಸೌಷ್ಟವವು ತುಂಬುತುಂಬಾಗಿ ಕಂಡು, ಅವನ ಸೌಂದ-ರ್ಯವು ಪ್ರೇಕ್ಷಕರ ಮನವನ್ನು ಸೆಳೆದುಬಿಟ್ಟಿತು. ನೋಟಕರು ಬಿಪಿನನ ಅಸಾಧಾರಣ ಸಾಮರ್ಥ್ಯವನ್ನು ಕಂಡು ಬೆರಗಾದರು. ಆನಂದದಲ್ಲಿ ಚಪ್ಪಾಳೆತಟ್ಟಿ ಮೈಮರೆತರು. ಅಂದು ಬಿಪಿನನ ಗುಣಗಾನವೇ ಗುಣಗಾನ. ಅವನ ಮಾತೇ ಮಾತು.

ಆಟ ಮುಗಿದ ಮೇಲೆ ರಾಜನು ರಾಣಿಯ ಹತ್ತಿರ ಬಂದು 'ಆಟ ಮನಸ್ಸಿಗೆ ಬಂದಿತೇ?' ಎಂದು ಕೇಳಿದನು. ರಾಣಿ ಆನಂದೋನ್ಮತ್ತಳಂತೆ 'ನಿಜವಾಗಿಯೂ ಬಿಪಿನಬಾಬುವು ಅರ್ಜುನನ ಪಾತ್ರವನ್ನು ಬಹಳ ಚೆನ್ನಾಗಿ ಅಭಿನಯಿಸಿದನು; ಆ ಪಾತ್ರದಲ್ಲಿ ಅವನೊಬ್ಬ ಅಸಾಧಾರಣ ನಟನಂತೆ ಕಂಡನು. ಅವನ ಮಾತುಗಳು ಅವನ ಮನೆತನದ ಉಚ್ಚ ಸಂಸ್ಕೃತಿಯನ್ನು ಸೂಚಿಸಿದುವು. ಆಹಾ! ಅವನ ಧ್ವನಿ ಅದೆಷ್ಟು ಮಧುರ! ಅವನ ಹಾಡುಗಾರಿಕೆಯ ಜಾಣ್ಮೆಯನ್ನು ಬಣ್ಣಿಸಲು ಆದೀತೆ? ಅವ-ನೊಬ್ಬ ಶಕ್ತಿವಂತ ಕಲಾಕೋವಿದ!" ಎಂದು ಬಣ್ಣನೆಯ ಮಳೆ-ಯನ್ನೆ ಸುರಿಸಿದಳು. ರಾಜನು ಅವಳ ಮಾತನ್ನು ಕೇಳಿ ವಿನೋದ ಬೆರೆತ ದನಿಯಲ್ಲಿ "ಬಿಪಿನನ ಸಂಗತಿಯನ್ನೆ ಹೇಳುವೆಯಲ್ಲ! ನಾನೆಂತು ಕಂಡೆ ಹೇಳಬಾರದೆ? ನಾನು ಚೆಲುವಾಗಿಲ್ಲವೆ? ನನ್ನ ಧ್ವನಿ ಮಧುರವಾಗಿಲ್ಲವೆ?" ಎಂದು ಕಣ್ಣು ಕುಣಿಸಿದನು. "ಓಹೋ, ನಿಮ್ಮ ಮಾತೇ ಬೇರೆ". ಎಂದು ರಾಣಿ ನಕ್ಕಳು. ಅಂದು ಬಿಪಿನಬಾಬುವನ್ನು ಅವಳು ಹೊಗಳಿದಷ್ಟು ಯಾರೂ ಹೊಗಳಿರಲಿಲ್ಲ. ಬಿಪಿನಬಾಬುವು ತನ್ನ ಸಾಮರ್ಥ್ಯದಿಂದ ಅವ-ಳನ್ನು ಗೆದ್ದುಬಿಟ್ಟಿದ್ದನು.

ಪರಿಸ್ಥಿತಿ ಒಮ್ಮೆಲೆ ಬದಲಾಗಿಬಿಟ್ಟಿತು. ಬಿಪಿನನನ್ನು ಮುಕ್ತ-ಕಂಠದಿಂದ ಹೊಗಳುತ್ತಿದ್ದ ರಾಜನು ಇಂದು ಮನಸೋಕ್ತವಾಗಿ ಅವನನ್ನು ತೆಗಳತೊಡಗಿದನು. ತನ್ನ 'ನಾಟ್ಯಸಂಘ'ದಲ್ಲಿ ಬಿಪಿನನ ಗುಣಗಾನದಲ್ಲಿ ದಣಿಯದ ರಾಜನೆ ಇಂದು ಎಲ್ಲರ ಎದುರಿಗೆ ಅವನನ್ನು ಒಮ್ಮೆಲೆ ಹಳಿಯತೊಡಗಿದನು. ವಿಚಾರ-ವಿಲ್ಲದ ಮೂಢರು ಬಿಪಿನನ ಅಲ್ಪಗುಣಗಳನ್ನೆ ಬಹುವಾಗಿ ಎಣಿಸಿ ಅವನನ್ನು ಆಕಾಶಕ್ಕೆ ತೂರಿದ್ದಾರೆಂದು ಹೇಳತೊಡಗಿದನು. "ಅವನಲ್ಲಿ ಹೇಳಿಕೊಳ್ಳುವಂತಹ ಅದಾವಗುಣವಿದೆ? ನಟನಿಗೆ

ತಕ್ಕ ಸೌಂದರ್ಯವಿದೆಯೆ? ಸನ್ನಿವೇಶಕ್ಕೆ ತಕ್ಕಂತೆ ಹಾಡುವ ಜಾಣ್ಮೆಯಿದೆಯೆ? ಹೋಗಲಿ, ಮಧುರವಾದ ಕಂಠವಾದರೂ ಇದೆಯೆ?" ಎಂದು ಕಂಡವರಿಗೆ ಕಂಡ ಪ್ರಶ್ನೆ ಕೇಳತೊಡಗಿದನು. ಎಲ್ಲರೂ ವಿಚಾರಶೂನ್ಯರಾದ ಮೂಢರೆಂದು ತನ್ನ ಅಭಿಪ್ರಾಯವನ್ನು ಬಿತ್ತತೊಡಗಿದನು. ಈ ಮೊದಲು ಇವನೂ 'ವಿಚಾರಶೂನ್ಯರಾದ ಮೂಢ'ರ ಸಾಲಿನಲ್ಲಿ ಒಬ್ಬನಾಗಿದ್ದನು; ಆದರೆ ಒಮ್ಮೆಲೆ ಏನಾಯಿತೊ, ರಾಜನಿಗೆ ಲೋಕವಿಲಕ್ಷಣವಾದ 'ವಿಚಾರಶಕ್ತಿ'ಯ ಕುರುಹುಗಳು, ಅಗಮ್ಯವಾಗಿ ಒಮ್ಮೆಲೆ ಬೆಳೆದು ನಿಂತುವು!

ಬಿಪಿನನಿಗೆ ಮತ್ತೆ ಈಗ ಎಲ್ಲ ಸೌಕರ್ಯಗಳು ದೊರೆಯತೊಡಗಿದುವು. ಸ್ವಚ್ಛವಾದ ಎಡೆಯಲ್ಲಿ ಸಮಾಚೀನವಾದ ಊಟ, ಉಂಡ ತಾಟನ್ನು ತಾನೇ ತೊಳೆಯಬೇಕಾದುದಿಲ್ಲ. ಇವನನ್ನು ಕಂಡರೆ ಕಣ್ಣುತಪ್ಪಿಸುವ ಆಳುಗಳು ಈಗ ಹೆಚ್ಚಿನ ದಕ್ಷತೆಯನ್ನು ತೋರತೊಡಗಿದರು. ಒಮ್ಮೆ ರಾಣಿಯು 'ಬಿಪಿನನನ್ನು ನೌಕರರ ಕೊಠಡಿಗಳಲ್ಲಿ ಇರಿಸುವುದು ತರವಲ್ಲ, ಒಂದು ಕಾಲಕ್ಕೆ ಅವನೂ ಸಿರಿವಂತನಾಗಿದ್ದನು....' ಎಂದೇನೋ ರಾಜನಿಗೆ ಹೇಳಲುಪಕ್ರಮಿಸಿದಳು. ರಾಜನು 'ಹೀಗೋ' ಎಂದು ಮೋರೆ ಕಿವುಚಿ ವಿಷಯಾಂತರವನ್ನೆ ಮಾಡಿಬಿಟ್ಟನು. ಮತ್ತೊಮ್ಮೆ ರಾಣಿಯು, ರಾಜಕುಮಾರನ ಅನ್ನಪ್ರಾಶನ ಸಮಾರಂಭದ ಕಾಲಕ್ಕೆ ಇನ್ನೊಮ್ಮೆ ನಾಟಕವನ್ನಾಡಬೇಕೆಂದು ರಾಜನಿಗೆ ಸೂಚಿಸಿದಳು; ರಾಜನು ಇದನ್ನು ಕೇಳಿದರೂ ಕೇಳದವನಂತೆ ನಟಿಸಿದ.

ತನ್ನ ಬಟ್ಟೆಗಳನ್ನು ಓರಣವಾಗಿರಿಸದ ಸೇವಕನನ್ನು ಕರೆಯಿಸಿ ರಾಜನೊಮ್ಮೆ ಮನಸ್ಸಿಗೆ ಬಂದಂತೆ ಬೈದನು; ಗದ್ದರಿಸಿದನು. ರಾಜನ ಕೋಪಾಗ್ನಿಗೆ ಸಿಲುಕಿದ ಆ ಸೇವಕನು ಅಂಜಂಜುತ್ತ "ದೊರೆಗಳೆ, ನಾನಾದರೂ ಏನು ಮಾಡಲಿ? ರಾಣೀಸಾಹೇಬರ ಆಜ್ಞೆಯಂತೆ ಬಿಪಿನಬಾಬುವಿನ ಯೋಗ-ಕ್ಷೇಮ ತೆಗೆದುಕೊಳ್ಳುವುದರಲ್ಲಿಯೆ ದಿನವೆಲ್ಲಾ ಹಾಳಾಗಿಹೋಗುತ್ತದೆ; ನನಗೆ ಒಂದು ನಿಮಿಷವೂ ಬಿಡುವಿಲ್ಲ; ದಯೆಯಿಟ್ಟು ಕ್ಷಮಿಸಬೇಕು ನನ್ನೊಡೆಯಾ!" ಎಂದು ಉಗುಳುನುಂಗುತ್ತ ಮಾತನ್ನು ಮುಗಿಸಿದನು. ಸೇವಕನ ಮಾತುಗಳನ್ನು ಕೇಳಿ ರಾಜನು ರೇಗಿ "ಬಿಪಿನನು ಬಾದಶಹನೆಂದು ತಿಳಿದಿರುವನೇನು? ಅಂ? ತಾನು ಉಂಡ ತಾಟನ್ನು ತೊಳೆಯಲು ಅವನಿಗೆ ಅವಮಾನವಾಗುವುದೇನು? ಏನೆಂದು ತಿಳಿದಿರುವನವನು?" ಎಂದು ಗದ್ದರಿಸಿದನು. ಸೇವಕನಿಗೆ ಇಷ್ಟೆ ಸಾಕಾಯಿತು. ತನ್ನ ಕರ್ತವ್ಯದ ಸೂಚನೆಯನ್ನು ಒಡೆಯನ ಮಾತಿನಲ್ಲಿ ಕಂಡುಕೊಂಡನು. ಬಿಪಿನಬಾಬುವಿಗೆ ಮತ್ತೆ ಕಂಗಾಲಸ್ಥಿತಿ ಪ್ರಾಪ್ತವಾಯಿತು. ಈಗ ಅದು ಅತಿರೇಕಕ್ಕಿಳಿಯಿತು.

ಬಿಪಿನನ ಗೀತಗಳನ್ನು ರಾಣಿ ಬಹುವಾಗಿ ಮೆಚ್ಚಿದಳು. ಆ ಮಧುರಕಂಠದಿಂದ ಹೊರಹೊಮ್ಮುವ ಸುಮಧುರ ಸಂಗೀತವನ್ನು ಮೆಚ್ಚದವರಾರು? ರಾಜನು ಬಿಪಿನನೊಡನೆ ಸಂಗೀತಸಮ್ಮೇಳನದಲ್ಲಿ ಮೈಮರೆಯುತ್ತಿರುವಾಗ, ರಾಣಿ ಪಕ್ಕದ ಕೋಣೆಯಲ್ಲಿ ಕುಳಿತು ಆ ರಸಾನುಭವವನ್ನು ತಾನೂ ಹೊಂದುತ್ತಿದ್ದಳು. ಬರುಬರುತ್ತ ರಾಜನ ಕಾರ್ಯಕ್ರಮವು ಬದಲಾಗತೊಡಗಿತು. ಅವನ ಓರಣದ ಜೀವನವು ಮತ್ತೆ ಮರುಕೊಳಿಸಿತು. ಸರಿಯಾದ ವೇಳೆಗೆ ಊಟ, ಸರಿಯಾದ ವೇಳೆಗೆ ನಿದ್ರೆ ಇವು ಅವನ ಜೀವನದ ನಿತ್ಯಕ್ರಮವಾಗಿಬಿಟ್ಟುವು. ಗಾನಲೋಲುಪತೆಯು ಮಾಯವಾಗಿಬಿಟ್ಟಿತು. ಸಂಗೀತದ ಸಮಾಧಿಯಾಯಿತು. ಬಿಪಿನನ 'ಸಂಧ್ಯಾಗೀತ'ಗಳ ಆವಶ್ಯಕತೆ ಅವನಿಗೀಗ ಇರಲಿಲ್ಲ. ಸಾಯಂಕಾಲದ ದೇವತಾಸ್ತೋತ್ರದ ಸಂಗೀತಕಚೇರಿಯು ಎಂದೋ ಕೊನೆಗಂಡುಬಿಟ್ಟಿತು.

ರಾಜಾ ಚಿತ್ತರಂಜನನು ತನ್ನ ಜಮೀನುದಾರೀಕೆಲಸಗಳನ್ನು ದಿನಾಲು ಮಧ್ಯಾಹ್ನ ನೋಡುತ್ತಿದ್ದನು. ಒಂದು ದಿನ ಅವನು ದಿನದ ವೇಳೆಗೆ ಮೊದಲೆ ಅಂತಃಪುರಕ್ಕೆ ಬಂದಾಗ, ಅವನ ರಾಣಿ ಏನನ್ನೊ ಓದುತ್ತಿದ್ದಳು. ಅದರಲ್ಲಿ ಅವಳು ಸಂಪೂರ್ಣ ತಲ್ಲೀನತೆ ಹೊಂದಿದ್ದಳು. ರಾಜನು ಅವಳ ಓದಿನ ಆ ಮಹಾವಿಷಯವಾವುದೆಂದು ಒಮ್ಮೆಲೇ ಕೇಳಲು, ಅವಳು ಸ್ವಲ್ಪ ಬೆದರಿದರೂ ಸಾವಧಾನಳಾಗಿ, ಕೂಡಲೆ 'ಬಿಪಿನಬಾಬುವಿನ ಗೀತಗಳ ಪುಸ್ತಕದೊಳಗಿನ ಕೆಲವು ಗೀತಗಳನ್ನು ಅಭ್ಯಾಸಮಾಡುತ್ತಿದ್ದೇನೆ' ಎಂದು ಹೇಳಿದಳು. ಅಲ್ಲದೆ ಮನೆಯಲ್ಲಿ ಸಂಗೀತವು ಒಮ್ಮೆಲೆ ಮಾಯವಾಗಿರುವುದನ್ನು ಟೀಕಿಸಿ, ರಾಜನ ಗಾನವಿನೋದವು ಹೀಗೆ ಒಮ್ಮೆಲೆ ಮಾಯವಾದದ್ದು ಆಶ್ಚರ್ಯವೆಂದುಸುರಿದಳು. ಪಾಪ! ರಾಜನ ಗಾನವಿನೋದವನ್ನು ತೊಡೆದುಹಾಕಲು ಅವಳು ಮೊದಲು ಪಟ್ಟ ಪ್ರಯತ್ನವೆಷ್ಟು? ಅವಳಾ ಪ್ರಯತ್ನಕ್ಕೆ ಕೊನೆ ಇತ್ತೆ?

ಮರುದಿನ ರಾಜನು ಬಿಪಿನನನ್ನು ಒಮ್ಮೆಲೆ ಕೆಲಸದಿಂದ ಕಡಿಮೆ ಮಾಡಿಬಿಟ್ಟನು. ಬಡಪಾಯಿಯಾದ ಬಿಪಿನನ ಹೊಟ್ಟೆಯ ಪಾಡು ರಾಜನ ಕಿವಿಗಳನ್ನು ಕಿವುಚಲಿಲ್ಲ. ಅವನೆಲ್ಲಿಗೆ ಹೋಗಬೇಕೆಂಬುದನ್ನೂ ರಾಜ ವಿಚಾರಿಸಲಿಲ್ಲ. ಅವನಿಗೆ ಒಂದು ತುತ್ತನ್ನು ಯಾರು ನೀಡಬಹುದೆಂಬುದನ್ನೂ ಗಮನಿಸಲಿಲ್ಲ!

ಕೆಲಸ ಹೋಯಿತೆಂದು ಬಿಪಿನನು ಮರುಗಲಿಲ್ಲ; ಅವನ ದುಗುಡದ ಕಾರಣವು ಆಳವಾಗಿತ್ತು. ಇಬ್ಬರ ಕರುಳುಗಳು ಕೂಡಿಹೋಗಿದ್ದುವು. ರಾಜನಿಗೆ ಬಿಪಿನನು ತನ್ನ ಸ್ನೇಹದ ಜೀವಜೀವಾಳವನ್ನೇ ಕೊಟ್ಟುಬಿಟ್ಟಿದ್ದನು. ರಾಜನಲ್ಲಿಟ್ಟ ಅವನ ಸ್ನೇಹಸಂಬಂಧವು ಅಭೇದ್ಯವಾಗಿತ್ತು. ಅಷ್ಟು ಆಳವಾಗಿ ಬೇರುಬಿಟ್ಟಿತ್ತು. ಬಿಪಿನನು ಸೇವೆಗೆ ನಿಂತದ್ದು ರಾಜನ ಸ್ನೇಹಕ್ಕಾಗಿ, ಅವನ ಒಲುಮೆಗಾಗಿ; ಕ್ಷುದ್ರಕೂಲಿಗಾಗಿ ಅಲ್ಲ. ಅವನು ಪ್ರೀತಿಸುತ್ತಿದ್ದುದು ಗೆಳೆಯನ ಪ್ರೇಮವನ್ನಲ್ಲದೆ, ಸಂಬಳವನ್ನಲ್ಲ. ಅವನಿಗೆ ಹಣದ ಅಭಿಲಾಷೆಗಿಂತ ಸ್ನೇಹಸಂಬಂಧವು ಅಚ್ಚುಮೆಚ್ಚಾಗಿತ್ತು. ತನ್ನನ್ನು ಹೊರದೂಡಿದ ಕಾರಣವನ್ನು ಬಿಪಿನನು ಆಳವಾಗಿ ವಿಚಾರಿಸಿದ. ಯಾವ

(೧೫೬ ನೆಯ ಪುಟ ನೋಡಿರಿ)

ಮಂತ್ರಿಯು ಲಂಡನ್‌ನಲ್ಲಿ ಬ್ರಿಟಿಶ ಮಂತ್ರಿಮಂಡಳದ ಸದಸ್ಯನಾಗಿರತಕ್ಕವನು, ಇಲ್ಲಿಯ ಪರಿಸ್ಥಿತಿಯ ಪ್ರತ್ಯಕ್ಷ ಪರಿಚಯ ಅವನಿಗಿರುವುದು ಶಕ್ಯವಿಲ್ಲ; ಕೇವಲ ಅಲ್ಲಿಯ ಮಂತ್ರಿಮಂಡಳದ ಧೋರಣೆಗೆ ಸಲ್ಲದ ಯಾವ ಕಾರ್ಯವೂ ಇಲ್ಲಿ ನಡೆಯದಂತೆ ನೋಡುವುದು, ಮತ್ತು ಪಾರ್ಲಮೆಂಟಿಗೆ ಅಧೀನನೂ ಹೊಣೆಗಾರನೂ ಆಗಿರುವುದು ಭಾರತಮಂತ್ರಿಯ ಸ್ಥಾನ. ಆದರೆ ಲಿನ್‌ಲಿಥ್‌ಗೋ ಸಾಹೇಬರ ಆಳಿಕೆಯಲ್ಲಿ ಅದೆಲ್ಲವೂ ವಿಪರೀತವಾಯ್ತು. ಭಾರತಮಂತ್ರಿಯಾದ ಅಮೆರಿಯವರು ನಿರ್ಣಯಿಸುವವರು, ಅದನ್ನು ಇಲ್ಲಿ ವೈಸರಾಯರು 'ಗಿಳಿಕರಿಸು'ವುದು! ಹೊಟ್ಟೆಗೆ ಒಂದು ತುತ್ತಿಲ್ಲದೆ ಬಯಲು-ಬೀದಿಯಲ್ಲಿ ಜನರು ಸಾಯುವಂತಹ ಸ್ಥಿತಿ ಇಲ್ಲಿದ್ದರೂ 'ಭಾರತದಲ್ಲಿ ಬರಗಾಲವಿಲ್ಲ, ಜನರು ಹೆಚ್ಚು ತಿನ್ನುವುದರಿಂದ ಆಹಾರದ ಕೊರತೆಯಾಗಿದೆ' ಎಂದು ಅಮೆರಿಸಾಹೇಬರು ಹೇಳುವಂತಹ ಅಪಹಾಸ್ಯಸ್ಥಿತಿಗೆ ವೈಸರಾಯರ ಪದವಿ ಇಳಿಯುವುದೆಂದರೆ? ಮೊದಲಿನಿಂದಲೂ ವೈಸರಾಯರು ಪ್ರಾಮಾಣಿಕವಾಗಿ ಇಲ್ಲಿಯ ಪರಿಸ್ಥಿತಿಯನ್ನು ಬ್ರಿಟಿಶ ಮಂತ್ರಿಮಂಡಳಕ್ಕೆ ತಿಳುಹಿದ್ದರೆ, ಇಂದಿನ ಯುದ್ಧದ ಕಾಲದಲ್ಲಿ ಜನತೆಯ ಬೆಂಬಲವಿಲ್ಲದೆ, ಜನತೆಯ ಮುಂದಾಳುಗಳ ವಿರುದ್ಧವಾಗಿ ಹೋರಾಡುವುದಾಗಲಿ ದುರ್ಬಲನಂತೆ ಇನ್ನೊಬ್ಬರ ಮೇಲೆಯೆ ತಪ್ಪನ್ನು ಹೊರಿಸುತ್ತ ಕೂಡ್ರುವುದಾಗಲಿ ಪ್ರಸಂಗ ಬರುತ್ತಿರಲಿಲ್ಲ. 'ಇಂದಿನ ಪ್ರಸಂಗದ ಮೂಲ ಹೊಣೆ ವೈಸರಾಯರಾದ ಲಿನ್‌ಲಿಥ್‌ಗೋರವರ ತಲೆಯ ಮೇಲೆಯೆ ಇದೆ' ಎಂದು ಇಂದಿನವರಷ್ಟೆ ಅಲ್ಲ, ಮುಂದೆ ನಿಷ್ಪಕ್ಷಪಾತದ ಇತಿಹಾಸಕರ್ತರು ಕೂಡ ಅಭಿಪ್ರಾಯಪಡುವುದರಲ್ಲಿ ಸಂದೇಹವಿಲ್ಲ.

ಭಾಷಣವಲ್ಲ, ಭ್ರಾಂತಿ!

ಇನ್ನು ವೈಸರಾಯರ ಭಾಷಣದ ಬಗ್ಗೆ ಬರೆಯುವ ಆವಶ್ಯಕತೆಯೆ ಇಲ್ಲ. ಇಂಗ್ಲಂಡಿನ ಪ್ರಮುಖ ಪತ್ರಿಕೆಗಳು ಕೂಡ ಏಕಕಂಠವಾಗಿ ಆ ಭಾಷಣದ ಬಗ್ಗೆ ಅಸಂತೋಷವನ್ನು ವ್ಯಕ್ತಮಾಡಿವೆ ಎಂದ ಮೇಲೆ ಅದರ ಮಹತ್ತ್ವ ಎಷ್ಟಿರಬಹುದಾಗಿದೆ? ಇದಲ್ಲದೆ ಭಾರತೀಯರಿಗೆ ಆ ಭಾಷಣ ಹೊಸತಲ್ಲ. ಹಿಂದಿನ ಅನೇಕ ವರ್ಷಗಳಲ್ಲಿ ತಾವು ಹೇಳಿದ್ದನ್ನೆ ವೈಸರಾಯರು ಈಗಲೂ ಹೇಳಿದರು. ಮುಖ್ಯವಾಗಿ, ಇಂದಿನ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಅವರು ಅದೇ ಸಂಕುಚಿತ, ನಿರುಪಯುಕ್ತ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸುವುದು ಹಿಂದೀಯರ ಕೈಯಲ್ಲಿಯೆ ಇದೆಯಂತೆ. ಇಲ್ಲಿಯ ಎಲ್ಲ ರಾಜಕೀಯ ಪಕ್ಷಗಳು ಒಪ್ಪಿದ ಯೋಜನೆಗೆ ಯಾವಾಗಲೂ ಬ್ರಿಟಿಶರ ಒಪ್ಪಿಗೆಯಂತೆ. ಎಲ್ಲ ರಾಜಕೀಯ ಪಕ್ಷಗಳು ಯೋಜನೆಯನ್ನು ಒಪ್ಪುವುದೆಂತು? ಹಾಗಾದರೆ, ಕಾಂಗ್ರೆಸ್ ಮುಂದಾಳುಗಳನ್ನು ಬಂಧಮುಕ್ತಮಾಡಬಹುದೆ— ಎಂಬ ಆಶೆ ಅನೇಕರಲ್ಲಿ ಮೂಡಿತು. ಅಷ್ಟರಲ್ಲಿ ತಮ್ಮನ ತೊದಲ್ನುಡಿಯನ್ನು ತಿದ್ದುವ ಅಣ್ಣನಂತೆ ಅಮೆರಿಸಾಹೇಬರು ಸ್ಪಷ್ಟಮಾಡಿದರು: 'ಕಾಂಗ್ರೆಸ್ ಮುಂದಾಳುಗಳೊಡನೆ ಚರ್ಚೆಗೆ ಅವಕಾಶವಾಗಲಿ, ಅವರನ್ನು ಬಂಧಮುಕ್ತಮಾಡುವುದಾಗಲಿ ಶಕ್ಯವಿಲ್ಲ' ಎಂದು! ಇಷ್ಟಾದ ಮೇಲೆ ವೈಸರಾಯರ ಮಾತಿಗೆ ಅರ್ಥವಿಲ್ಲದಂತಾಯಿತಲ್ಲವೆ? ಯಾಕೆಂದರೆ 'ಕಾಂಗ್ರೆಸ್ಸನ್ನು ಬಿಟ್ಟು ಮಿಕ್ಕ ರಾಜಕೀಯ ಪಕ್ಷಗಳು' ಎಂದು ಹೇಳದೆ 'ರಾಜಕೀಯ ಪಕ್ಷಗಳು' ಎಂದಿಷ್ಟೇ ಅವರು ಹೇಳಿದ್ದರು. ಅಥವಾ— ವೈಸರಾಯರ ಮಾತಿಗೆ ಅರ್ಥವಿರುವುದಾದರೆ 'ಕಾಂಗ್ರೆಸು ರಾಜಕೀಯ ಪಕ್ಷವೆ ಅಲ್ಲ' ಎಂದು ಅರ್ಥವಿರಬಹುದೆ? ಹಾಗಿದ್ದರೆ ಅದೊಂದು ಮರುಳ-ಭ್ರಾಂತಿ ಎಂದು ಸ್ಪಷ್ಟವಾಗಿ ಹೇಳಬಹುದು.

ಭಾರತಮಂತ್ರಿಯ ಬಿಸಿಲ್ಗುದುರೆ

ತುಸು ಸೂಕ್ಷ್ಮವಾಗಿ ನೋಡಿದರೆ ಅಮೆರಿಸಾಹೇಬರಲ್ಲಿ ಈ ಭ್ರಾಂತಿಯೆ ಕತ್ತಲುಗಟ್ಟಿದೆ ಎನಿಸುವಂತಿದೆ. 'ಕಾಂಗ್ರೆಸು ರಾಜಕೀಯ ಪಕ್ಷವಲ್ಲ' ಎಂದು ಹೇಳುವ ಪರಿಸ್ಥಿತಿ ಇಂದು ಇನ್ನೂ ಬಂದಿರಲಿಕ್ಕಿಲ್ಲ; ಆದರೆ ಅಂತಹ ಪರಿಸ್ಥಿತಿಯನ್ನು ತಂದೇ ಬಿಡಬೇಕೆಂದು ಅಮೆರಿ ಸಾಹೇಬರು ಪಣ ತೊಟ್ಟಂತೆ ತೋರುವುದು. ಅವರ ವಿಚಾರಸರಣಿ ಹೀಗಿರಬಹುದಾಗಿದೆ:— ಕಳೆದ ಆಗಸ್ಟ್‌ನಲ್ಲಿ ಪ್ರಾರಂಭವಾದ ಅನಾಯಕತ್ವದ ಅವ್ಯವಸ್ಥೆ ಅಡಗುತ್ತ ಬಂದಿತು. ಸದ್ಯಕ್ಕೆ ಜನತೆಗೆ ನಾಯಕರೆ ಇಲ್ಲದಂತಾಗಿದೆ. ಜನರು ಇನ್ನು ಮಾಡುವರೇನು? ಬಹು ದಿವಸ ನಾಯಕರಿಲ್ಲದೆ ಜನತೆ ಮುಂದೆ ನಡೆಯಲಾರದು. ಕಾಂಗ್ರೆಸಿನ ಮುಂದಾಳುಗಳನ್ನು ಬಂಧನದಲ್ಲಿಯೆ ಇಟ್ಟರೆ ಜನರು ಬೇಜಾರದಿಂದಾದರೂ ಕಾಂಗ್ರೆಸನ್ನು ಬಿಡಬಹುದಲ್ಲವೆ? ನಾಯಕರಿಲ್ಲದೆ ನಿರ್ವಿಣ್ಣವಾದರೂ ಆಗಬಹುದು, ಕಾಂಗ್ರೆಸಲ್ಲದ ಬೇರೆ ನಾಯಕರನ್ನಾದರೂ ಮಾಡಿಕೊಳ್ಳಬಹುದು. ಅಂತೂ ಕಾಂಗ್ರೆಸನ್ನು ಈ ರೀತಿ ಸದೆಬಡೆಯುವುದು ಶಕ್ಯವಿದೆ. ಒಂದೇ ಒಂದು ಸಂದೇಹ. ಸಾಮಾನ್ಯ ಜನತೆ ಈ ರೀತಿ ನಡೆಯಬಹುದಾದರೂ ದೇಶದ ಯುವಕರಲ್ಲಿ ಜಾಗೃತಿ ಹೆಚ್ಚಿದೆ, ಈ ಯುವಕರು ಕಾಂಗ್ರೆಸನ್ನು ಬಿಡಲಿಕ್ಕಿಲ್ಲ. ಅದಕಾಗಿ ಕ್ರಮೇಣ ಕಾಂಗ್ರೆಸಿನ ಕಾರ್ಯಕರ್ತರನ್ನು ಬಂಧಮುಕ್ತಮಾಡಿ ಕಾಂಗ್ರೆಸು ಸಂಸ್ಥೆಯಾಗಿ ನಡೆಯಲು ಶಕ್ಯವಾಗುವಂತೆ ಮಾಡಬೇಕು. ಆದರೆ ಹೀಗೆ ಮಾಡುವಾಗಲೂ ಗಾಂಧಿ-ನೆಹರು-ವಲ್ಲಭಭಾಯಿ-ಆಝಾದ ಮುಂತಾದ ಹಿರಿಯ ಹುದ್ದರಿಗಳನ್ನು ಬಿಡತಕ್ಕದ್ದಲ್ಲ. ಎಂದರೆ ಇವರ ನೇತೃತ್ವ ಇಲ್ಲದ್ದಕ್ಕಾಗಿ ಕಾಂಗ್ರೆಸು ಬೇರೆ ನೇತೃತ್ವದಲ್ಲಿ ಬೇರೊಂದು ಧೋರಣೆಯನ್ನೆ ತಾಳಬಹುದಲ್ಲ?— ಹೀಗೆ ಸಾಹೇಬರು ಹಗಲುಗನಸಿನ ಸುಖವನ್ನು ಸವಿಯುವುದರಲ್ಲಿ ಕಣ್ಣುಮುಚ್ಚಿದ್ದಾರೆಂದು ನಮ್ಮದಂತೂ ಬಲವಾದ ಸಂದೇಹ.

ಕಾಮವಿಜ್ಞಾನದ ಹೊಸದೊಂದು ಪುಸ್ತಕ !

ವಿಕೃತ-ಕಾಮ

SEXUAL DEVIATIONS

ಲೇಖಕರು :— ಡಾ. ಡಿ. ವಿ. ರಾವ್

ಬೆಲೆ ೮—೦—೦] ★ [ವ್ಹಿ.ಪಿ. ಹೆಚ್ಚು ಬೇರೆ

ಕಾಮೋದಯ, ಬಾಲ್ಯಾವಸ್ಥೆಯ ಕಾಮವಿಕಾರಗಳು, ಸ್ವಾನುರತಿ, ಪುಂಗಾರತಿ, ಸಲಿಂಗರತಿ, ಪ್ರದರ್ಶನರತಿ, ಮೃಗರತಿ ಇತ್ಯಾದಿ ನೂರಾರು ಗುಪ್ತ ವಿಷಯಗಳಿವೆ.

ಸ್ತ್ರೀಮೂಲಾ (೨ನೆಯ ಆವೃತ್ತಿ)	೧—೮—೦
ಪೌರುಷ	೧—೮—೦
ರತಿರಹಸ್ಯ	೧—೮—೦
ಕಾಮದಹನದ ಭ್ರಾಂತಿ	೦—೧೨—೦
ಫಿರಂಗಿ ಪರಮಾ ರೋಗ ಸಮಸ್ಯೆ	೦—೮—೦
ವಿದ್ಯಾಭ್ಯಾಸ ಮತ್ತು ಲೈಂಗಿಕ ಶಿಕ್ಷಣ ..	೦—೪—೦
ಕೈಗನ್ನಡಿ (ಕಾಮಪ್ರಿಯ ಶಾಸ್ತ್ರ) . ..	೧—೦—೦

ಇವಲ್ಲದೆ ನೂರಾರು ಕಥೆ ಕಾದಂಬರಿಗಳೂ ಉಂಟು.
ಕ್ಯಾಟಲಾಗಿಗೆ ೧ ಆಣೆ ಅಂಚೆ ಚೀಟಿ ಕಳಿಸಿರಿ.

ನವರಾಜ ಪುಸ್ತಕಾಲಯ, ಧಾರವಾಡ.

ವಿನಾಯಕನು ವಾನರನಾದರೂ ಅಕ್ಕೆ !

ಹೀಗೆ ಮಾಡುವಾಗ ಇನ್ನೊಂದು ಅನಿಷ್ಟ ಒದಗಬಹುದಾಗಿದೆ; ಆದಾದರಂತೂ ಆಮೆರಿಸಾಹೇಬರಿಗೆ ಇಷ್ಟಾಪತ್ತಿಯೆ! ಅದೆಂದರೆ, ಕಾಂಗ್ರೆಸಿನ ನೇತೃತ್ವ ಕಳೆದುದಕ್ಕಾಗಿ ಜನತೆಯು ಹಿಂದು-ಮಹಾಸಭೆಯಂತಹ ಸಂಸ್ಥೆಗೆ ಸೇರಿಹೋಗಬಹುದಾಗಿದೆ. ಹಾಗಾದರೆ ಹಾಲಿನಲ್ಲಿ ಸಕ್ಕರೆ ಸೇರಿಸಿದಂತೆಯೆ ಅಲ್ಲವೆ ಸಾಹೇಬರಿಗೆ? ಯಾಕೆಂದರೆ ಮಹಾಸಭೆಯು ಜಾತೀಯ ಸಂಸ್ಥೆ; ಅದಕ್ಕೆ ಇದಿರಾಗಿ ಮುಸ್ಲಿಂ ಲೀಗ್! ಅಂತೂ ಸುಂದೋಪಸುಂದರ ಸನ್ನಾಹವೆ ಶಾಶ್ವತವಾದಂತಾಗುವುದು. ಎಲ್ಲ ಜಾತಿಗಳನ್ನು ಮೀರಿ ನಿಂತ ಕಾಂಗ್ರೆಸಿನ ನೇತೃತ್ವವಿಲ್ಲದಿದ್ದರೆ ಜಾತೀಯತೆಯು ವಿಜೃಂಭಿಸುವ ಸಂಭವ ಹೆಚ್ಚು ಎಂಬುದಕ್ಕೆ ಇತ್ತೀಚಿನ ದೃಷ್ಟಾಂತವನ್ನು ಕೊಡಬಹುದು. ಕಳೆದ ತಿಂಗಳಲ್ಲಿ, ಸರಹದ್ದು ಪ್ರಾಂತದಲ್ಲಿ ನಾಲ್ಕು ಉಪಚುನಾವಣೆಗಳಾದುವು. ಈ ನಾಲ್ಕು ಚುನಾವಣೆಗಳು ಮುಸ್ಲಿಂ (Muslim Constituency) ಗಳಲ್ಲಿಯೆ ನಡೆದುದು ನಿಜ. ಆದರೆ ನಾಲ್ಕು ಸಂಘಗಳಲ್ಲಿ ಲೀಗಿನ ಪ್ರತಿನಿಧಿಗಳೆ ಚುನಾಯಿಸಲ್ಪಟ್ಟುದಕ್ಕೆ ಲೀಗಿನ ಪ್ರಭಾವಕ್ಕಿಂತ ಕಾಂಗ್ರೆಸ್ ಮುಂದಾಳುಗಳ ಅಭಾವವೆ ಕಾರಣವೆಂಬುದು ಸ್ಪಷ್ಟವಿದೆ. ದೇಶಕ್ಕೆ ಸ್ವರಾಜ್ಯ ಕೊಡಿಸುವ ಪಕ್ಷ ಇಲ್ಲದಿದ್ದಾಗ, ಜನರು ತಮ್ಮ ಜಾತಿಗೆ ಸ್ವರಾಜ್ಯ ಕೊಡಿಸುವ ಪಕ್ಷಕ್ಕೆ ಕೈಮುನ್ನೆತ್ತುವುದರಲ್ಲಿ ಆಶ್ಚರ್ಯವಿಲ್ಲ; ಜ್ಞಾನದ ಪ್ರಸಾರ ಕಡಮೆ ಇದ್ದ ಮುಸಲ್ಮಾನ್ ಜನತೆಯಲ್ಲಂತೂ ಎಳ್ಳಷ್ಟು ಆಶ್ಚರ್ಯವೆನಿಸುವಂತಿಲ್ಲ. ಆದರೆ ಇಂತಹ ಉಪಚುನಾವಣೆಗಳಿಗೆ ಇಲ್ಲದ ಮಹತ್ತ್ವವನ್ನು ಕೊಟ್ಟು ಮುಸ್ಲಿಂ ಲೀಗದ ಜಸ್ಸು ಹಸ್ತರಿಸುವ ಮುಂದಾಳುಗಳನ್ನು ನೋಡಿ ಮಾತ್ರ ಆಶ್ಚರ್ಯವೆನಿಸುವುದಲ್ಲದೆ, ಖೇದವೂ ಆಗುವುದು. ನಾಳೆ ಇಡಿಯ ಹಿಂದುಸ್ತಾನದ ತುಂಬ ಕಾಂಗ್ರೆಸಿಗರನ್ನೆಲ್ಲ ಬಂಧನದಲ್ಲಿರಿಸಿ, ಚುನಾವಣೆಗಳನ್ನು ಹೂಡಿ, ಮತದಾರರೆಷ್ಟು ಜನ ಮತವನ್ನು ಕೊಡುವರೆಂಬುದನ್ನು ಲಕ್ಷಿಸದೆ, 'ಕಾಂಗ್ರೆಸಿಗೆ ಜನತೆಯ ಬೆಂಬಲವಿಲ್ಲ' ಎಂಬ ಕೂಗನ್ನೆಬ್ಬಿಸುವುದು ಅಪಹಾಸ್ಯವಾಗಲಿಕ್ಕಿಲ್ಲವೆ? ಇದರೇನು? ನಮ್ಮ ಮುಂದಾಳುಗಳೆಲ್ಲ ಇತ್ತಿತ್ತಲಾಗಿ ಅವಸರಬುದ್ಧಿಯವರು ಆದಂತಿದೆ. ಆ ಬುದ್ಧಿ ಅಮೆರಿಯವರ ಕೈಯಲ್ಲಿ ಪರದೇಶದಲ್ಲಿ ಅಪಪ್ರಚಾರಕ್ಕಾಗಿ ಮಾಟದ ಗೊಂಬೆಯಾಗುವುದೆಂಬುದನ್ನು ಎಲ್ಲರೂ ಮರೆತಂತೆ ತೋರುವುದು.

ಇದೆಂಥದ ಸಂಧಾನಲಕ್ಷಣ ?

ಕಳೆದ ತಿಂಗಳು ಶ್ರೀ. ವರವಾನಿಯವರು ಮಹಾಸಭೆ ಮುಸ್ಲಿಂ-ಲೀಗುಗಳಲ್ಲಿ ಸಂಧಾನವನ್ನು ಮಾಡಲಿಕ್ಕೆ ಯತ್ನಿಸಿದ್ದರಷ್ಟೆ; ಆ ಸಮುದ್ರಮಂಥನಯತ್ನದಲ್ಲಿ ಕ್ರಮೇಣ ಹಾಲಾಹಲವು ಹೊರಬೀಳುತ್ತಲಿದೆ. ಮೊದಲಿಗಾಗಿ ಜಾತಿವೀರ ಸಾವರಕರರ ಒಂದು ಅಭಿಪ್ರಾಯವನ್ನು ಕಾಣಿಸಬಹುದು. "ಹಿಂದುಸ್ತಾನದ ರಾಷ್ಟ್ರವೆಂದರೆ ಹಿಂದುಗಳೆ; ಮುಸಲ್ಮಾನ ಮುಂತಾದ ಮಿಕ್ಕವರು ಜಾತಿಗಳು ಮಾತ್ರ" ಎಂದಿದ್ದಾರೆ. ಈ ಅಭಿಪ್ರಾಯದಲ್ಲಿ ಸಾವಿರಾರು ವರ್ಷಗಳಿಂದ ಬದಗೆಟ್ಟ ಹಿಂದುತ್ವದ ಮೂಢ ರೂಢಿ ಅಡಕವಾಗಿದೆ ಎಂದಷ್ಟೆ ಹೇಳಬಹುದು. ಅದರಂತೆಯೆ ತಮ್ಮ ಮಾತನ್ನು 'ಜಾತಿವೀರರ'ರು ಇನ್ನಷ್ಟು ಸ್ಪಷ್ಟ ಮಾಡಿದರೆಂದರೆ ಮೇಲೆ ಹೇಳಿದ ನಮ್ಮ ಮಾತನ್ನೂ ನಾವು ಸ್ಪಷ್ಟೀಕರಿಸುವೆವು. ಆದರೆ ಇಂತಹ ಸಾವರಕರರಾಗಲಿ, ಇಂತಹ ಜಿನ್ನಾಗಳಾಗಲಿ ರಾಷ್ಟ್ರವನ್ನು ದೃಢೀಕರಿಸುವ ಮಾಯೆಯಂತಾಗಿವೆ. ಅಥವಾ—ಮಹಾಸಭೆ ಮಾಯಾಶಕ್ತಿ, ಮುಸ್ಲಿಂ ಲೀಗ್ ಪ್ರಾಚೀನ ಕರ್ಮ—ಇವೆರಡರ ಮೂಲಕ ನಮ್ಮ ಬಂಧನದಿಂದ ಬಿಡುಗಡೆಯಾಗದಾಗಿದೆ ಎನ್ನೋಣವೆ? ಇಷ್ಟರಲ್ಲಿಯೆ ಸಂಧಾನವು ಶಕ್ಯವಿದೆ ಎಂದು ಶ್ರೀ. ವರವಾನಿಯವರು ಆಶೆ ತೋರಿಸಿದ್ದರು; ಆದರೆ ಈ ರೀತಿ ಸದ್ದು ಹೊಡೆದು ಪ್ರತಿಸ್ಪರ್ಧಿಯ ಮೈಮೇಲೆ ಮಣ್ಣು ತೂರುವುದೂ ಒಂದು ತರದ ಸಂಧಾನ ಎಂಬ ಕಲ್ಪನೆ ನಮಗಿರಲಿಲ್ಲ.

ಜಯಂತಿ ಸಣ್ಣಕತೆಗಳ ಪೈಪೋಟಿ

ಕೇವಲ ಉತ್ತರಕನ್ನಡ (ಕಾರವಾರ) ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಗೋಕರ್ಣದ 'ಕೆಳೆಯರ ಕೂಟ'ದವರು ಈ ಪೈಪೋಟಿಯನ್ನು ಏರ್ಪಡಿಸಿದ್ದಾರೆ.

೩ ಬಹುಮಾನಗಳು

೧ನೆಯದು ೧೦ ರೂಪಾಯಿ! ೨ನೆಯದು ೫ ರೂಪಾಯಿ! ೩ನೆಯದು ೩ ರೂಪಾಯಿ!

★ ಪೈಪೋಟಿಯ ನಿಯಮಗಳು ★

೧. ಉತ್ತರಕನ್ನಡ (ಕಾರವಾರ) ಜಿಲ್ಲೆಯಲ್ಲಿ ಹುಟ್ಟಿ ಬೆಳೆದವರೆಲ್ಲ—ಸದ್ಯ ಇನ್ನೊಂದು ಕಡೆಯಲ್ಲಿ ಕಾರ್ಯನಿಮಿತ್ತವಾಗಿ ಇದ್ದವರು ಕೂಡ—ಈ ಪೈಪೋಟಿಯಲ್ಲಿ ಭಾಗವಹಿಸಬಹುದು.

೨. ಕತೆಯು ಸ್ವತಂತ್ರವಾಗಿದ್ದು ಉತ್ತರಕನ್ನಡ ಜಿಲ್ಲೆಯ ಜನಜೀವನವನ್ನು ಚಿತ್ರಿಸುವಂತಹದಾಗಿರಬೇಕು. ಒಬ್ಬರು ಒಂದಕ್ಕಿಂತ ಹೆಚ್ಚಾಗಿಯೂ ಕತೆಗಳನ್ನು ಕಳಿಸಬಹುದು.

೩. ಕತೆಯು ಜಯಂತಿಯ ಮುದ್ರಿತ ಪುಟ ೮ಕ್ಕೆ ಮೀರದಷ್ಟು ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧಹಾಳೆಯ ೮ ಪುಟಕ್ಕೆ ಮಿಕ್ಕದಷ್ಟು ಇರಬೇಕು.

೪. ಪೈಪೋಟಿಯ ನಿರ್ಣಯಕಾರರನ್ನು 'ಜಯಂತಿ' ಪತ್ರಿಕೆಯ ಸಂಪಾದಕರ ಮಂಡಳಿಯು ಕಡೆಗೆ ಒಪ್ಪಿಸುವುದರಿಂದ ಎಲ್ಲರೂ ತಮ್ಮ ಕತೆಗಳನ್ನು 'ಜಯಂತಿ ಕಾರ್ಯಾಲಯ, ಧಾರವಾಡ' ಎಂಬ ವಿಳಾಸಕ್ಕೆ ಕಳುಹಬೇಕಲ್ಲದೆ ಕೈಬರೆಹದ ಪ್ರತಿಯ ಮೇಲೆ 'ಸಣ್ಣ ಕತೆ ಪೈಪೋಟಿಗಾಗಿ' ಎಂಬ ಮಾತನ್ನು ಸ್ಪಷ್ಟವಾಗಿ ಬರೆಯಬೇಕು.

೫. ಪೈಪೋಟಿಗೆ ಬರುವ ಕತೆಗಳೆಲ್ಲವೂ ಬರುವ ಡಿಸೆಂಬರ್ (೧೯೪೭) ೩೦ನೆಯ ತಾರೀಖಿನೊಳಗಾಗಿ ಜಯಂತಿ ಕಾರ್ಯಾಲಯಕ್ಕೆ ತಲ್ಪಬೇಕು. ಆಮೇಲೆ ಬಂದ ಕತೆಗಳನ್ನು ಪೈಪೋಟಿಗೆ ಸೇರಿಸಿಕೊಳ್ಳಲಾಗುವುದಿಲ್ಲ.

ಉತ್ತರಕನ್ನಡ (ಕಾರವಾರ) ಜಿಲ್ಲೆಯ ಕತೆಗಾರರೆಲ್ಲರೂ ಈ ಪೈಪೋಟಿಯಲ್ಲಿ ಭಾಗವಹಿಸಿ, ಕೆಳೆಯರ ಕೂಟದ ಈ ರೀತಿಯ ಉತ್ಸಾಹವನ್ನು ಮೆಚ್ಚಿಕೊಳ್ಳಬೇಕು.

ವ್ಯವಸ್ಥಾಪಕ : 'ಜಯಂತಿ' ಕಾರ್ಯಾಲಯ, ಧಾರವಾಡ.

ಜಯಂತಿಯ ೧-೨-೩-೪-೫ನೆಯ ವರ್ಷಗಳ ಸಂಪುಟಗಳೂ ಬಿಡಿಸಂಚಿಕೆಗಳೂ ಮಾರಾಟಕ್ಕೆ ದೊರೆಯುತ್ತವೆ. ಬೇಕಾದವರು ಬೆಲೆ ಮೊದಲಾದವುಗಳ ಬಗ್ಗೆ ಪತ್ರವ್ಯವಹಾರ ಮಾಡಿ ತಿಳಿಸಿಕೊಳ್ಳಬೇಕು. ಪ್ರತಿಗಳು ತೀರ ಸ್ವಲ್ಪವಿರುವುದರಿಂದ ಬೇಕಾದವರು ಬೇಗನೆ ಬರೆದು ಕೇಳಬೇಕು.

ವ್ಯವಸ್ಥಾಪಕ: ಜಯಂತಿ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾ ಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಕೆಮ್ಮಿನ ಪ್ರಥಮ ಚಿಹ್ನೆಯು ಕಂಡು ಬಂದೊಡನೆ "ಕಾಸ್ಫೊ" ಬಿಲ್ಲೆಗಳನ್ನು ಸೇವಿಸಲು ಆರಂಭಿಸಿ. ಅವುಗಳ ರುಚಿಯು ಸವಿಯಾಗಿದ್ದು ನಿಮ್ಮೊಡನೆ ಇಟ್ಟುಕೊಳ್ಳಲು ಅನುಕೂಲವಾಗಿದೆ.

ಈ ಬಿಲ್ಲೆಗಳು, ಕೆಮ್ಮಿನ ಸೋಂಕನ್ನು ತೀವ್ರವಾಗಿ ನಿವಾರಿಸುವುದರಲ್ಲಿ ಬೆಸಲಾಂಶ ವಸಾಕ, ಕರ್ಪೂರ, ಎಮೊ ಕ್ಲೋರೈಡ್, ಗ್ಲೀಸರಾಯಿರ್ಝಾ ಮೊದಲಾದ ಉಪಯುಕ್ತ ವಸ್ತುಗಳಿಂದ ಕೂಡಿವೆ.

ಕೆಮ್ಮನ್ನು ಅಲಕ್ಷಿಸಿದುದರಿಂದ ಮತ್ತು ಕೆಮ್ಮನ್ನು ಸುಮ್ಮನೇ ತಡೆದಿಟ್ಟು ಪರಿಸ್ಥಿತಿಯನ್ನು ಕೆಡಿಸುವ ಕೆಟ್ಟ ಔಷಧಿಯನ್ನು ಉಪಯೋಗಿಸಿದುದರ ಪರಿಣಾಮದಿಂದಾಗಿ ದೀರ್ಘಕಾಲದಿಂದ ನರಳುತ್ತಿರುವ ಸಾವಿರಾರು ಜನರನ್ನು 'ಕಾಸ್ಫೊವು' ಸಂರಕ್ಷಿಸಿದೆ.

"ಕಾಸ್ಫೊ" ವನ್ನು ನಿಮ್ಮೊಡನೆ ಇಟ್ಟುಕೊಂಡು "ಪೆಪ್ಪರ್ಮಿಂಟ" ನಂತೆ ಒಂದೊಂದು ಬಿಲ್ಲೆಯನ್ನು ೧–೨ ಗಂಟೆಗಳಿಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳಿ.

ಎಲ್ಲಾ ಔಷಧಾಲಯಗಳಲ್ಲಿ ದೊರೆಯುವುದು.
ಕೆಮ್ಮು ಶ್ವಾಸೋಚ್ಛ್ವಾಸದ ನಾಳದಲ್ಲಿ ಬರುವ ತೊಂದರೆ
ಗಳ ಒಂದು ಅಪಾಯಕರ ಸೂಚನೆ. ಕೆಮ್ಮನ್ನು ಅಲಕ್ಷಿಸು
ವುದರಿಂದ ಹೆಚ್ಚಾಗಿ 'ನಿಮೋನಿಯಾ' 'ಬ್ರೊಂಕೈಟಿಸ್'
ಕ್ಷಯ ಮೊದಲಾದ ರೋಗಗಳು ತಗಲುತ್ತವೆ. 'ಕಾಸ್ಫೊ'
ಅಂತಹ ಅಪಾಯದಿಂದ ಸಾವಿರಾರು ಜನರನ್ನು ಸಂರಕ್ಷಿಸಿದೆ.

Kaspho

ಆಶ್ಚರ್ಯಕರವಾದ ಕೆಮ್ಮು-ನಿವಾರಕ ಬಿಲ್ಲೆಗಳು

[illegible]

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಸಂಪಾದಕರು-
ಬೆಟಗೇರಿ ಕೃಷ್ಣಶರ್ಮರು

ಜಯಂತಿ

ಅಕ್ಟೋಬರ್ ೧೯೪೩

★

ಈ ಸಂಚಿಕೆಯಲ್ಲಿ

★ ರಂಗನಾಥ ನೆಗಳೂರ
★ ಆಲೂರ ವೆಂಕಟರಾಯರು
★ ಕು. ಶಿ. ಹರಿದಾಸ
★ ಸಿ. ಬಿ. ಬೆಲ್ಲದ
★ 'ವಿಹಾರಿ'
★ 'ಶ್ರೀಧರ'

ಅಲ್ಲದೆ ಬೇರೆ ಲೇಖಕರ
ಕವನ-ಕಥೆ-ಪ್ರಬಂಧಗಳು.

★

೧

ಬೆಲೆ.. ೬ ಆಣೆ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ …… ವ್ಹಿ. ಪಿ. ಯಿಂದ ೪-೫-೦ …… ಬಿಡಿಸಂಚಿಕೆಗೆ ೬ ಆಣೆ

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು

೬ ನೆಯ ವರ್ಷ	ಅಕ್ಟೋಬರ್ ೧೯೪೩	೫ ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಕಲಿ-ಬಲಿ (ಕವನ) …. …. …. ಶ್ರೀ. ರಾ. ವೆಂ. ಶ್ರೀನಿವಾಸ, ಶಿವಮೊಗ್ಗ ೧೬೧
ಕಾಲರಾಯನ ಕರೆಹ (ಕವನ) …. …. ಕು. ಬಸವರಾಜ ವಿ. ಬೆಲ್ಲದ, ಬೆಳಗಾಂವಿ ೧೬೧
ಸಂಪಾದಕೀಯ (ಕರಗುತ್ತಲಿರುವ ಕನ್ನಡಗಡಿ) …. ಸಂಪಾದಕರು ೧೬೨
ಮಂಗನ ಮಲ್ಲಿನಾಥತನ …. …. ' ಮಲ್ಲಿನಾಥ ' ೧೬೩
ಚೇತರಿಸುತ್ತಿರುವ ಚೀನ (ಸನ್‌ಯತ್‌ಸೆನ್) …. ಶ್ರೀ. ನೆಗಳೂರ ರಂಗನಾಥ, ಬಿ. ಎ., ಬಿ. ಟಿ. ಹುಬ್ಬಳ್ಳಿ ೧೬೪
ಸಾದರಸ್ವೀಕಾರ …. …. …. …. …. ೧೬೮
ಮಿಲನ ಮುಹೂರ್ತ (ಅನುವಾದಿತ ಕಥೆ) …. ಶ್ರೀ. ಕು. ಶಿ. ಹರಿದಾಸ 'ಕನ್ನಡ ಜಾಣ' ಉಡುಪಿ ೧೬೯
ಶ್ರೀ ಬಸವಣ್ಣನವರ ವೈಶಿಷ್ಟ್ಯ (ಚರ್ಚೆಗಳ ವಿಮರ್ಶೆ) …. ಶ್ರೀ. ಸಿ. ಬಿ. ಬೆಲ್ಲದ, ಇಟಗಿ ೧೭೫
ಫ್ರೆಂಚರ ರಾಷ್ಟ್ರಗೀತ (ಅನುವಾದಿತ ಕವನ) …. ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ ೧೭೮
ಕಳ್ಳರು ಯಾರು ? (ಸಣ್ಣಕತೆ) …. …. ಶ್ರೀ. ಸಿಂಹ ಎಂ. ಎ. 'ಲಕ್ಷ್ಮೀನಿವಾಸ' ಮಂಡ್ಯ ೧೮೦
ಇದು ಧ್ಯೇಯ, ಇದು ಧೋರಣ (ಕರ್ನಾಟಕತ್ವದ ಕಲ್ಪನೆ)…. ಶ್ರೀ. ಆಲೂರ ವೆಂಕಟರಾಯರು, ಬಿ.ಎ., ಎಲ್‌ಎಲ್.ಬಿ. ೧೮೨
ಸುಖವಸ್ತ್ರ೦ (ಜಗಳ) …. …. ಶ್ರೀ. ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್. ೧೮೩
ಫ್ಯಾಸಿಝಮ್ (ಲೇಖಾಂಕ ೨) …. …. ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪುರ ೧೮೮
ಸಾಹಿತ್ಯವಿಹಾರ (ವಿಮರ್ಶಾತ್ಮಕ ಟಿಪ್ಪಣೆ) …. ಶ್ರೀ. ' ವಿಹಾರಿ ' ಮುಂಬಯಿ ೧೯೫
ಪುಸ್ತಕ ವಿಮರ್ಶೆ (ನಗೆಯ ಬುಗ್ಗೆ, ದಾರಿಯ ಬುತ್ತಿ) …. ' ಕುಂಜವಿಹಾರಿ ' ಶ್ರೀ. ಬಿ. ಪಿ. ಎಸ್. ರಾವ್ ೧೯೬
ನಗೀಗೆ ನೇವೀದ್ಯ …. …. ' ನಕಲೀ ನಾರಾಯಣಾಚಾರ್‍ರು ' ೧೯೭
ನಾಲ್ಕೂ ನಿಟ್ಟಿನ ನೋಟ …. …. ' ನಿರೀಕ್ಷಕರು ' ೧೯೯

ಜಯಂತಿಯ ಮುಂಬೈ ಶಾಖಾ ಕಚೇರಿ

ಮೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಚರ್ಚ್‌ಗೇಟ್ ಸ್ಟ್ರೀಟ್, ೨ ನೆಯ ಮಾಳಿಗೆ
ಫೋರ್ಟ್—ಮುಂಬಯಿ.

ಪುಣೆಯಲ್ಲಿ ನಮ್ಮ ಏಜಂಟರು

ಆರ್. ರಾಮಮೂರ್ತಿ ಮತ್ತು
ಕೃಷ್ಣಮೂರ್ತಿ ಅಧ್ಯಯೂ
ಕನ್ನಡ ಪೇಪರ್ ಏಜಂಟ್ಸ್
' ವಿಶ್ರಾಮಧಾಮ '
ಮನೆ ನಂಬರು ೧೬೪೨, ಪೂನಾ ೪

ಜಯಂತಿ

ಸಂಪುಟ ೬ | ೧ ನೆಯ ಅಕ್ಟೋಬರ್ ೧೯೪೩ | ಸಂಚಿಕೆ ೫

ಕಲಿ-ಬಲಿ

ಶ್ರೀ. ರಾ. ನಂ. ಶ್ರೀನಿವಾಸ, ಶಿವಮೊಗ್ಗ

★

೧

ನವನಾಗರಿಕ ಯುಗದ ಅತ್ಯಂತ ಶಿಖರದಲಿ
ಕಾಣುತಿದೆ ಪ್ರಳಯ ಭೈರವನ ನೃತ್ಯ ;
ಇನಿತು ದಿನ ಶಿರಬಾಗಿ ನಡೆದಿಹೆವು ಹಾದಿಯಲಿ,
ಈಗ ತೋರುತಲಿಹುದು ಇದರ ಸತ್ಯ !

೨

ಬಾಳು ಗೋಳಾಗುತಿದೆ, ಬೀಡು ಹಾಳಾಗುತಿದೆ,
ನರಜೀವಿ ನಾಗರಿಕಮದ್ಯವನು ಕುಡಿದು ;
ಕಣ್ಣು ಕಿವಿ ಮೂಗು ಬಾಯ್–ಎಲ್ಲ ಸುಳ್ಳಾಗುತಿದೆ,
ಅಮಲೇರಿ ಆಜೀವ ಮರುಳು ಕವಿದು !

೩

ಕಾಳರಾತ್ರಿಯ ತಾರೆಗಳ ಮಿನುಗು ತಾಳದಲಿ,
ಹುಟ್ಟು ಸಾವಿನ ಚೀರು-ಚೀರ್ದನಿಯ ಮಿಡಿದು,
ಹಬ್ಬಿ ಹಾಸಿಹ ನಗದ ಶಿಖರವೇದಿಕೆಗಳಲಿ
ನೀರೆರೆವ ಘನಗಳನು ನುಂಗುತಲಿ ಕುಣಿದು—

೪

ಬಿಸಿಯುಸಿರ, ಹಸಿಯುಸಿರನುಗಿಯುತಲಿ, ಕೆರಳುತಲಿ
ಕೇಕರಿಸಿ, ಗಹಗಹಿಸಿ ಕುಣಿಯುತಿದೆ ಭೀರು !
ವಿಶ್ವಸೌಹಾರ್ದವೆಂಬುದು ಮಾಸಿ, ಮಸೆತದಲಿ
ಎಲ್ಲೆಲ್ಲು ಬಸಿಯುತಿದೆ ಬಿಸಿಯ ಕಣ್ಣೀರು!

೫

ಕಲಿಯ ಕುದುರೆಯ ಕುಣಿತ ಮೇರೆ ಮೀರಿಹುದು ;
ಕುಣಿತದಲಿ ಭೈರವನ ರೂಪು ತೋರಿಹುದು ;
ರೂಪಿನಲಿ ಪ್ರಗತಿಯುಗ ಕುಣಿತವಡಿ ಸಿಲುಕಿಹುದು ;
ಕುಣಿತಕ್ಕೆ ಮುಕ್ತಾಯ ಹೊಡಿದಂತಿಹುದು !

ಕಾಲಪುರುಷನ ಕರೆಹ

ಕು. ಬಸವರಾಜ ವಿ. ಬೆಲ್ಲದ

★

ಏಳೇಳು, ಏಳಿನ್ನು ಮೋಹನಿದ್ರೆಯ ತೊರೆದು,
ಬಾಲರವಿ ಬಾನೆಡೆಯೊಳಿಣುಕುತಿಹನು ;
ಪರದಾಸ್ಯದಿರುಳನ್ನು ಪರಿಹರಿಸಿ ಪ್ರೇಮದಲಿ
ಸ್ವಾತಂತ್ರ್ಯಲೋಕವನು ಬೆಳಗಲಿಹನು!
ಇನಿತಾದರೂ ನಿನಗೆ ತಿಳಿಯಲೊಲ್ಲದೆ ನಿದ್ರೆ ?
ಇರುಳನೇ ನೆನೆಯುತ್ತ ರವಿಬರವ ಮರೆಯುತ್ತ
ದಾಸ್ಯದೇಶದೊಳೆ ನೀನಲೆಯ ಬೇಕೆನುವೆಯೆ ?
ಆ ದೇಶದೊಳು ಜಂಪ್ರಸುವಯದಿಂದೇರಿದ್ದ
ಶೃಂಗಾರಸಾಗರವೆ ಸಾಕು-ಸಾಕೆನಿಸಿದೆಯೆ ?
ಅದರೊಳೇ ಮುಳುಗಿದರೆ ಜನ್ಮಸಾರ್ಥಕವೆಂದು
ಸ್ವಪ್ನಸೌಖ್ಯದ ಬಯಲೆ ನಿಜಸೌಖ್ಯವೆಂದು—
ಮೂಡುತಿರುವಾ ರವಿಯ ಬೆಳಕನ್ನು ತೆಗಳುತ್ತ
ಮುಸುಕನ್ನು ಮೊಗದ ಮೇಲೆಳೆಯುತಿಹೆಯೆ ?
ಅದೊಡಿದ ಮರೆಯದಿರು : ದಾಸ್ಯದಿರುಳಿನ ಕರಿಯ
ತೆರೆಯನ್ನು ದಿನಕರನು ಉಳಿಯಗೊಡನೆಂದು !
ಹೊಂದೇರನೇರಿ, ಹೊಂಗದಿರುಗಳನೆಸೆಯುತ್ತ
ಓಡುತಿಹ ಇರುಳನ್ನು ಬೆನ್ನಟ್ಟಿದಿರುವನೇ—
ಅಗೊ, ಕೇಳು, ಓ ಅಲ್ಲಿ ಡೋಲು ಜಾಗಟೆ ಕಹಳೆ ;
ಸ್ವಾತಂತ್ರ್ಯ ದೇವಿಯಾರಾಧಕರ ಕೂಗುಗಳ !
ನೆತ್ತರವನೆರೆಯುತ್ತ ಜೀವವರಳೇರಿಸುತ
ಗೆಯ್ವ ದೇವಿಯ ಪೂಜೆಯ್ಯಸಿರಿಯ ನೋಡು !
ಏಳು ಏಳೆಲೆ ಧೀರ, ಭಾಗ್ಯರವಿಯುವ ನಿನ್ನ
ಕರ್ತವ್ಯಪಥಕಾಗಿ ಕರೆಯುತಿಹನು !
ಸ್ವಾತಂತ್ರ್ಯ ದೇವತೆಯ ಪೂಜೆಗೇಳೇಳೆಂದು
ಕಿವಿಯೆದೆಗಳೊಡೆವಂತೆ ಮೊರೆಯುತಿಹನು !

ಸಂಪಾದಕೀಯ

ಕರಗುತ್ತಿರುವ ಕನ್ನಡದ ಗಡಿ

ಕನ್ನಡದ ಗಡಿ ' ಕಾವೇರಿಯಿಂದಮಾ ಗೋದಾವರಿ ವರೆಗಂ ' ಎಂದು ಅದನ್ನು ಆಳಿದ ದೊರೆ ನೃಪತುಂಗ ಹೇಳಿರುವುದು ಹಳೆಯ ಹಾಸ್ಯಾಯಿತು. ' ಹಾಗೆ ಇರಬಹುದೆ? ' ಎಂದು ಸಂದೇಹಪಟ್ಟುಕೊಳ್ಳುವಂತಹ ಸ್ಥಿತಿ ಇಂದು ಕರ್ನಾಟಕಕ್ಕೆ ಬಂದು ಒದಗಿದೆ. ಮೈಸೂರಿನ ದೊರೆಗಳ ಕನ್ನಡ ಪ್ರೀತಿಯ ಮೂಲಕ, ದಕ್ಷಿಣದಲ್ಲಿ ಕಾವೇರಿಯ ಗಡಿಯೊಂದು ಸುರಕ್ಷಿತವಾಗಿದೆಯೆಂದು ತಿಳಿದರೂ, ಮಿಕ್ಕ ಮೂರು ದಿಕ್ಕುಗಳ ಗಡಿಗಳು ದಿನದಿನಕ್ಕೂ ನೆರೆನಾಡಿನ ಗುದ್ದಲಿಯೇಟುಗಳನ್ನು ತಿನ್ನುತ್ತ ನಡೆದಿವೆ. ಗೋದಾವರಿಯಿಂದ ಕೃಷ್ಣೆಯ ವರೆಗಿನ ಉತ್ತರ ಕರ್ನಾಟಕ ಪ್ರದೇಶವನ್ನು ನಾವು ಕಳೆದುಕೊಂಡು ಬಹಳಷ್ಟೇ ದಿನಗಳಾಗಿವೆ. ಈಗ ' ಹಿರಿಯ ಹೊಳೆ ' ಕೃಷ್ಣೆ ಕೂಡ, ಕನ್ನಡದ ಉತ್ತರ ಗಡಿಯನ್ನು ಕಾಯಲು ಬೇಸರಿಯುವಷ್ಟು ಕನ್ನಡಿಗರು ಆತ್ಮಜಾಗೃತಿಯನ್ನು ಮರೆತು ವರ್ತಿಸುತ್ತಿದ್ದಾರೆ, ಈ ಮೈಮರೆವಿನ ಮೂಲಕವಾಗಿಯೇ, ಇದುವರೆಗೆ ಪಶ್ಚಿಮದ ಗಡಿಯನ್ನು ಕಾಯ್ದ ಸಾಗರರಾಜನು, ತನ್ನ ಹತ್ತಿರದವರಲ್ಲಿ, ಕನ್ನಡಿಗರ ಸಂಗತಿಯನ್ನು ಬಿಡಲು ಪ್ರೇರಣೆ ಮಾಡುತ್ತಿದ್ದಾನೆ. ಆ ಪ್ರೇರಣೆಯ ಶಕ್ತಿ ಪಶ್ಚಿಮ ಘಟ್ಟವನ್ನು ಹತ್ತಿ ಒತ್ತಿ ಬರುತ್ತಲಿದೆ. ಪೂರ್ವದ ಗಡಿಯನ್ನು ಯಾವಾಗಲೂ ಕನ್ನಡಿಗರ ಕರ್ತವ್ಯಶಕ್ತಿಯೆ ಕಾಯುತ್ತ ಬಂದಿದ್ದಿತು; ಆದರೆ ಇಂದು ಅದರ ಅಭಾವದ ಮೂಲಕ ಉತ್ತರ-ಪೂರ್ವ ಗಡಿಯನ್ನು ಮರಾಠಿಗರೂ, ದಕ್ಷಿಣ-ಪೂರ್ವ ಗಡಿಯನ್ನು ಆಂಧ್ರರೂ ಮುರಿದು ಮುಂದೆ ಮುಂದೆ ನುಗ್ಗುತ್ತ ಹೊರಟಿದ್ದಾರೆ. ಆಕ್ರಮಣ ವೃತ್ತಿ ' ಆಸುರೀ ವೃತ್ತಿ ' ಎಂದು ತೆಗಳಿ ಹೇಳಿದರೂ ಅದು ಬದುಕಿ ಬಾಳಬೇಕೆನ್ನುವವರ ಮಹತ್ವಾಕಾಂಕ್ಷೆಯ ದ್ಯೋತಕವಾಗಿದೆ. ಔದಾಸೀನ್ಯವೃತ್ತಿ ' ಯೋಗವೃತ್ತಿ ' ಎಂದು ಹೊಗಳಿ ಹೇಳಿಕೊಂಡರೂ, ಅದು ಬದುಕಲಾರದ ಅಶಕ್ತರ ನಿರಾಶಾವಾದಕ್ಕೆ ನಿದರ್ಶನವಾಗಿದೆ.

ಕನ್ನಡಿಗರು ಸಹಿಸಬೇಕಾಗಿರುವುದು ಇಮ್ಮಡಿಯ ದುಃಖ. ಎಲ್ಲ ಭಾರತೀಯರೊಂದಿಗೆ ಅನುಭವಿಸಬೇಕಾಗಿರುವ ಪರಾಧೀನತೆಯ ದುಃಖ; ತಾವಷ್ಟೇ ಅನುಭವಿಸಬೇಕಾಗಿರುವ ನೆರೆನಾಡಿಗರ ಆಕ್ರಮಣದ ದುಃಖ. ಮಿಕ್ಕವರೆಲ್ಲ ಒಂದೇ ನಿಟ್ಟಿನಿಂದ ಕಾರ್ಯ ಮಾಡಬೇಕಾಗಿದ್ದರೆ, ಕನ್ನಡಿಗರು ಎರಡು ನಿಟ್ಟುಗಳಿಂದವನ್ನು ಮಾಡಬೇಕಾಗಿದೆ. ಸ್ವಾತಂತ್ರ್ಯ ಸಂಪಾದನೆಯ ನಿಟ್ಟು ಒಂದು; ಸ್ವಸ್ಥಳದ ಸಂರಕ್ಷಣೆಯ ನಿಟ್ಟು ಇನ್ನೊಂದು. ಬರಿಯ ಭಾರತೀಯ ಸ್ವಾತಂತ್ರ್ಯಕ್ಕಾಗಿಯೆ ಕನ್ನಡಿಗರು ಕಾರ್ಯ ಮಾಡುತ್ತ ನಡೆದರೆ— ಅದು ದೊರೆಯುವಷ್ಟರಲ್ಲಿ ಸ್ವಸ್ಥಳವೆಲ್ಲ ಇನ್ನೊಬ್ಬರಿಂದ ಆಕ್ರಮಿತವಾಗಿ ಬಿಟ್ಟಿದ್ದರೆ— ಸ್ವಾತಂತ್ರ್ಯದ ಸುಖವನ್ನು ಕನ್ನಡಿಗರು ಎಲ್ಲಿದ್ದು ಅನುಭವಿಸುವರು? ಏನು, ಆಗ ಕನ್ನಡಿಗರಿಗಾಗಿಯೇ ಒಂದು ಪ್ರದೇಶವನ್ನು ನಿರ್ಮಾಣಮಾಡಿಕೊಡುವಂತಹ ವಿಶ್ವಾಮಿತ್ರ ಹುಟ್ಟುವನೆಂದು ಅವರ ನಂಬುಗೆಯೊ? ಆದರೆ ಅಂತಹ ವಿಶ್ವಾಮಿತ್ರನ ಕೃಪೆಗೆ ಪಾತ್ರರಾಗುವುದಕ್ಕು ತ್ರಿಶಂಕುವಿನಂತಹ ಕರ್ತೃತ್ವಶಾಲಿಗಳು ಬೇಕಾಗುವರೆಂಬುದನ್ನು ಯಾರೂ ಮರೆಯಲಾಗದು. ಸ್ವಾತಂತ್ರ್ಯಸಾಧನೆಯಷ್ಟೇ ಲಕ್ಷ್ಯವನ್ನು ಕನ್ನಡಿಗರಿಂದು ಸ್ವಸ್ಥಳಸಂರಕ್ಷಣೆಗಾಗಿ ಕೊಡಬೇಕಾಗಿದೆ. ಒಂದೇ ನಿಟ್ಟಿನಲ್ಲಿ ದೃಷ್ಟಿಯಿರಿಸಿ ಕಾರ್ಯ ಮಾಡುತ್ತ ನಡೆದರೆ, ಇಸೋಪನು ಹೇಳಿದ ' ಒಕ್ಕಣ್ಣಿನ ಜಿಂಕೆ ' ಯ ಗತಿ ಕನ್ನಡಿಗರಿಗೆ ಬಾರದೆ ಇರದೆಂಬುದನು ಎಲ್ಲರೂ ಖಂಡಿತ ತಿಳಿದುಕೊಳಬೇಕು.

ಬಳ್ಳಾರಿಯಲ್ಲಿ ' ಆಂಧ್ರ ಮಹಾ ಪರಿಷತ್ತು ' ಏತಕ್ಕಾಗಿ ಕೂಡಲಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ' ರಾಯಲು ಸೀಮೆಯ ' ಬರಗಾಲದ ಸಾಂದರ್ಭಿಕ ಲಾಭವನ್ನು ಪಡೆದು— ದೊಡ್ಡ ಸ್ವಾರ್ಥಸಾಧನೆಗಾಗಿ ಸಣ್ಣ ಸ್ವಾರ್ಥತ್ಯಾಗದ ವೇಷವನ್ನು ಹಾಕುವಂತೆ— ಆಂಧ್ರ ಮುಂದಾಳುಗಳು ಕಡಪಾ, ಕರ್ನೂಲ, ಅನಂತಪುರ, ಬಳ್ಳಾರಿ ಜಿಲ್ಲೆಯ ಜನರಿಗೆ ಹಣದ ನೆರವನ್ನು ಕೊಟ್ಟಂತೆ ಮಾಡಿ, ತಮ್ಮ ಆದರ್ಶವನ್ನು ಸಾಧಿಸುವ ಹವಣಿಕೆಯಲ್ಲಿದ್ದಾರೆ. ಆಂಧ್ರ ಮಹಾಸಭೆಯ ಆದರ್ಶವು ' ಆಂಧ್ರಪ್ರಾಂತದ ಏಕೀಕರಣ ' ಎಂದಿಷ್ಟೇ ಇದ್ದರೆ, ಅದನ್ನು ವಿರೋಧಿಸಬೇಕಾದ ಕಾರಣ ಕನ್ನಡಿಗರಿಗೆ ಇರಲೆ ಇಲ್ಲ. ಆದರೆ ಆ ' ಏಕೀಕರಣ ' ಪದದಲ್ಲಿ ಕರ್ನಾಟಕದ ' ಮೂಡಣ ಗಡಿಯ ಆಕ್ರಮಣ ' ಎಂಬ ಮಾತೂ ಹುದುಗಿಕೊಂಡಿದೆ. ಬಳ್ಳಾರಿಯಂತಹ ಸಿರಿವಂತಿಕೆಯ ಸುಂದರ ಪಟ್ಟಣವನ್ನು ಕನ್ನಡಿಗರಿಂದ ಸೆಳೆದುಕೊಳ್ಳಬೇಕೆಂಬ ಮರಾಸೆ— ಆಂಧ್ರ ಮುಂದಾಳುಗಳನ್ನು— ಎಲ್ಲರನ್ನೂ— ಇಂದು ತತ್ತ್ವಬಾಹಿರರನ್ನಾಗಿ ಮಾಡಿಬಿಟ್ಟಿದೆ. ಎಂತಲೇ ಅವರಿಂದು ಎಂತೆಂತಹ ರಾಜಕಾರ್ಯದ ಆಟಗಳನ್ನು ನಡೆಯಿಸಿದ್ದಾರೆ! ಹಂಚಿಕೆ ಮಾಡಿ ಗವರ್ನರ್ ಸಾಹೇಬರಿಂದ ಬಳ್ಳಾರಿಯಲ್ಲಿ ಸಭೆ ಸೇರಿಸಲು ಅಪ್ಪಣೆ ಪಡೆದುಕೊಂಡಿದ್ದಾರೆ. ವೈಯಕ್ತಿಕ ಸ್ನೇಹದ ದಾಕ್ಷಿಣ್ಯದ ಭಾರವನ್ನು ಹಾಕಿ, ಕನ್ನಡ ನಾಡಿನ ಒಬ್ಬ ಗಣ್ಯ ಧುರೀಣರನ್ನು ಸಭೆಯ ಪ್ರಾರಂಭೋತ್ಸವಕ್ಕೆ ಕರೆಯಿಸಲು ಹವಣಿಸಿದರು; ಆದರೆ ಅದು ಸಾಧ್ಯವಾಗಲಿಲ್ಲ. ಬಳ್ಳಾರಿಯ ಹಿರಿಯ ಮುಂದಾಳುಗಳ ಬಾಯಿ ಬಿಚ್ಚದಂತೆ ಅವರು ಅದಾವ ಉಪಾಯ ಮಾಡಿದ್ದಾರೋ ಏನೋ! ಅಲ್ಲಿ ಆ ಸಭೆಯ ವಿರುದ್ಧವಾಗಿ ಸ್ವರ ಕೇಳುತ್ತಿದ್ದರೆ, ಅದು ಅಲ್ಲಿಯ ತರುಣರಲ್ಲಿಯ ಕೆಲವರದು ಮಾತ್ರ. ಕೆಲವು ಮುಂದಾಳುಗಳು ಪ್ರಕಟನೆ ಹೊರಡಿಸಿ ವಿರೋಧ ಪ್ರಕಟಿಸಿರುವರಾದರೂ, ಆ ವಿರೋಧದಲ್ಲಿ ಕರ್ನಾಟಕದ ಹಿತಚಿಂತನೆಯು ಇಲ್ಲವೇ ಇಲ್ಲ; ಚುನಾವಣೆಯ ಹುರಿಯಾಳುಗಳ ಪಕ್ಷ-ಪಕ್ಷಗಳಲ್ಲಿರುವ ಸ್ಪರ್ಧೆಯಿದ್ದುದು ಮಾತ್ರ ಸ್ಪಷ್ಟವಾಗಿ ಕಾಣುವುದು. ಇಂತಹ ಸಂದರ್ಭದಲ್ಲಿ ಕನ್ನಡನಾಡನ್ನು ಕಟ್ಟಬೇಕೆಂದು ಬಯಸುವ ಕನ್ನಡಿಗರೂ, ಕನ್ನಡಿಗರ ಸಂಸ್ಥೆಗಳೂ ಮೈಮರೆತು ಕುಳಿತುಕೊಳ್ಳುವುದು ಯುಕ್ತವೆ? ಬದುಕಿಗೆ ಹಿತವೆ?

—ಸಂಪಾದಕರು.



೧. ಕನ್ನಡತಾಯಿಗೆ ಕಟ್ಟೋಲೆ

ಕನ್ನಡತಾಯೇ, ಕಣ್ಣುಕಾಣದ ಮಾಯೇ,

ಕೊನೆಗೆ ಇಂತಹ (ಕಲ್ಲು) ಕಟ್ಟೋಲೆಯನ್ನು ಬರೆಯುವ ಪ್ರಸಂಗ ಅನಿವಾರ್ಯವಾಗುವಂತೆ ಮಾಡಿದೆ! ಸಾವಿರಾರು ವರ್ಷಗಳ ಮುಪ್ಪಿನಿಂದ ನಿನ್ನ ಸಾರಾಸಾರ ಬುದ್ಧಿ ಕಳೆದಿದ್ದರೆ ಆಶ್ಚರ್ಯವಲ್ಲ, ಕಳೆದಿದೆ ಎಂಬುದು ಸ್ಪಷ್ಟವಾಗಿದೆ. ಇಲ್ಲವಾದರೆ ನಿನ್ನ ಮಕ್ಕಳಿಗೆ ನೀನಿಷ್ಟು ತೊಂದರೆಯನ್ನು ಕೊಡುತ್ತಿರಲಿಲ್ಲ. ಮಕ್ಕಳು ಗಳಿಸುವುದು ತಮ್ಮ ಹರಯದ ಸಂಸಾರವನ್ನು ಸಾಗಿಸುವುದಕ್ಕೆ; ಮುಪ್ಪಿನಿಂದ ಮೂಲೆಹಿಡಿದ ತಂದೆ-ತಾಯ್ಗಳ ಸಿಡಿ-ಸಿಂಗಾರಕ್ಕಲ್ಲ. ಇದನ್ನರಿಯದೆ ನೀನು ಹೆಚ್ಚಿನ ಪ್ರೋಟಿಗೆಗಾಗಿ ಕಾಡುವವರಂತೆ ವ್ಯವಹರಿಸುತ್ತಿರುವೆ! ಎಂತಹ ಹುಚ್ಚು! ನಿಜ— ನಮ್ಮ ಗಳಿಕೆ ಬೆಳೆಯುತ್ತಲಿದೆ, ನಿಜ. ಪರಿಷತ್ತುಗಳಲ್ಲಿ, ಸಮ್ಮೇಳನಗಳಲ್ಲಿ, ಸುವರ್ಣ-ರಜತ ಮಹೋತ್ಸವಗಳಲ್ಲಿ, ಬೇರೆ ಸಾವಿರ ಸಂದರ್ಭಗಳಲ್ಲಿ ನಾವು ಹಣವನ್ನು ಗಳಿಸುವೆವು, ಕೂಡಿಸುವೆವು; ನಿಜ. ಆದರೆ ಅದು ನಿನ್ನ ಮುಪ್ಪಿನ ದೇಹಕ್ಕೆ ಔಷಧಿಯನ್ನು ಕೊಟ್ಟು ಉಳಿಸುವುದಕ್ಕಲ್ಲ; ಎಷ್ಟಾದರೂ ಮುಪ್ಪು! ಉಳಿಸಿದರೂ ಎಷ್ಟು ದಿವಸ? ಅದಕ್ಕಾಗಿ ನೀನು ನಮ್ಮನ್ನು ಕಾಡಬೇಡ. ಮೊಲಮಕ್ಕಳು ನಿನ್ನನ್ನು ಇಟ್ಟುಕೊಳ್ಳುವಂತಿದ್ದರೆ ನಮಗೆ ಸಂತೋಷವೆ! ಪೀಡೆ ಕಳೆಯಿತು, ಅವರಲ್ಲಿಷ್ಟು, ಇವರಲ್ಲಿಷ್ಟು ನಿನ್ನ ಜೀವನವನ್ನು ಹರಿದು ಹಂಚಿ ಸಾಗಿಸು! ನಾವು, ಕನ್ನಡಿಗರು, ಉದಾರ ಧ್ಯೇಯವಾದಿಗಳು. ಧ್ಯೇಯ ಮುಂದಿದೆ, ಮುಪ್ಪಾದ ಹಿಂದಿನದರಲ್ಲಿಲ್ಲ. ಇಷ್ಟು ವಿಚಾರಿಯೂ ತೊಂದರೆ ಕೊಟ್ಟರೆ, ನಿನ್ನ ಮಹಿಮಾಟೀ ನಮ್ಮಲ್ಲಿಲ್ಲ ಎಂದು ಸಾಧಿಸಿ ನಿನ್ನನ್ನು— ಸಾಕು. ಕನ್ನಡ ತಾಯೇ, ಇನ್ನಾದರೂ ಎಚ್ಚರಾಗು! ಯಾಕೆಂದರೆ— ನಾವು ಎಚ್ಚರದಿಂದಲೆ ಇದ್ದೇವೆ. ಅಂತ ಬರೆದುಕೊಟ್ಟ ಈ ನೋಟೀಸು ನಿನಗೆ ಮುಟ್ಟಲಿ ಮುಟ್ಟದಿರಲಿ, ನಮ್ಮ ಮೇಲೆ ಯಾವ ಇಲಾಜೂ ನಡೆಯಲಾರದೆಂದು ಸಾರುವ

ಕೋಟಿ ಕನ್ನಡಿಗರು.

ಈ ನೋಟೀಸು ನಮ್ಮ
ಕೋರ್ಟಿನಲ್ಲಿ ರಜಿಸ್ಟರ್ ಆಗಿದೆ

ಸೀಲ್ (ಮಂಗರಾಯ ಕಚೇರಿ) ಸಹಿ

* * *

೨. ಪ್ರೇಮದ ಒಂದು ಕತೆ

ಒಂದಾನೊಂದು ಊರಲ್ಲಿ ಒಂದು ದಾಂಪತ್ಯ ಇದ್ದಿತು. ಗಂಡ-ಹೆಂಡಿರ ಪ್ರೇಮಸಂಪತ್ತಿ ಗಾಢವಾಗಿತ್ತು. ತನ್ನ ಹೆಂಡತಿಯ ಮೇಲಿನ ಪ್ರೇಮದಿಂದ ಗಂಡನು ಆಕೆಯನ್ನು ಯಾವಾಗಲೂ ಕೋಣೆಯಲ್ಲಿರಿಸಿ ಬೀಗಹಾಕುತ್ತಿದ್ದನು. ಆಕೆಯು ಯಾರೊಡನೆಯೂ ಮಾತನಾಡಬಾರದು ಎಂದು ಆಜ್ಞೆಯನ್ನು ವಿಧಿಸಿದ್ದನು. ಅದೆಂತಹ ಪ್ರೇಮ! ಆಕೆಯಾದರೂ ತನ್ನ ಹೃದಯದೊಡನೆ ಕೂಡ ಮಾತನಾಡುತ್ತಿರಲಿಲ್ಲ! ಗಂಡನ ಸೇವೆಯನ್ನೇ ಮಾಡುತ್ತಿದ್ದಳು. ಅವನಿಗೆ ಆಯಾಸವಾದರೆ ಹೆಗಲಲ್ಲಿರಿಸಿ ಆಫೀಸಿಗೆ ಒಯ್ಯಲು ಕೂಡ ಆವಳು ಸಿದ್ಧಳಾಗಬಹುದಾಗಿತ್ತು— ಮತ್ತೆ ಹೊರಗೆ ಕಾಲಿಡಲು ಪತಿದೇವನ ಅಪ್ಪಣೆ ಇರುವುದಾದರೆ. ಆದರೆ ಆ ಅಪ್ಪಣೆ ಇಲ್ಲದ್ದಕ್ಕೆ ಮನೆಯಲ್ಲಿಯೆ ಅವನ ಕಾಲ್ಗಳನ್ನು ತನ್ನ ತಲೆಯ ಮೇಲಿರಿಸಿಕೊಳ್ಳುತ್ತಿದ್ದಳು. ಅನಂತರ ಅನುಪಮ ಪ್ರೇಮ! ಗಂಡನಿಗೆ ಎಲ್ಲ ಆಹಾರವನ್ನೂ ಕೊಟ್ಟು, ತಾನು ಸಂತೋಷದ ಉಪವಾಸದಲ್ಲಿ ಕಾಲಕಳೆಯುತ್ತಿದ್ದಳು! ತಾನು ಯಾವಾಗಲೂ ಮನೆಯೊಳಗೆಯೆ ಇರಬೇಕಾದುದರಿಂದ, ತನಗೆ ಹರಕು ಚಿಂದಿಗಳೇ ಸಾಕೆಂದು ಅವನ್ನೇ ಉಡುತ್ತಿದ್ದಳು. ನಿಜವಿದ್ದ ಮಾತೆಂದರೆ ಗಂಡನು ಅವಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದನು; ಇಲ್ಲವಾದರೆ ಅವಳು ಉಪವಾಸದಿಂದಾಗಲಿ, ಹರಕು ಚಿಂದಿಗಳಿಂದಾಗಲಿ ಕಾಲ ಕಳೆಯುತ್ತಿರಲಿಲ್ಲ. ಇಂದಿಲ್ಲ ನಾಳೆ ಅವಳು ಹೀಗೆಯೇ ಎಲ್ಲ ರೀತಿಯಿಂದಲೂ ಸ್ವತಂತ್ರಳಾಗಲಿ ಎಂದೇ ಗಂಡನ ಹಾರೈಕೆ. ಆದರೆ ಇಂತಹ ಪ್ರೇಮದ ಶಕ್ತಿ ಮಿಕ್ಕವರಿಗೆ ತಿಳಿಯುವುದೆಂತು? ಗಂಡನ ಪ್ರೇಮಕ್ಕಾಗಿಯೆ ಅವಳು ಈ ರೀತಿ———ಏನೆಂದಿರಿ? ಏನು? ಲಾರ್ಡ ವೇವೆಲ್‌ರಿಗೆ ಹಿಂದುಸ್ತಾನದ ಮೇಲೆ ಪ್ರೇಮವಿದೆ ಎಂದು ಸುದ್ದಿ ಬಂದಿದೆಯೆ? ನಮ್ಮಷ್ಟಕ್ಕೆ ನಾವ, ಬಂದರೆ ಬರಲಿ ನಾವು! ಕತೆ ಮುಗಿಯಿತು.

* * *

೩. ಮಂಗಸಮಿತಿಯ ವರದಿ

ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯವರು ತಮ್ಮ ನಿರ್ಣಯದ ವರದಿಯನ್ನು ಒಪ್ಪಿಸಿದ್ದಾರಷ್ಟೆ. ಆದರೆ ಅದಕ್ಕೂ ಮುಂಚಿತವಾಗಿಯೆ ಮಂಗರಾಯನು ನಿಯಮಿಸಿದ ಮಹಾಸಮಿತಿಯವರು. ಕರ್ನಾಟಕ ವಿಶ್ವವಿದ್ಯಾಲಯದ ಬಗೆ ತಮ್ಮ ವರದಿ (= ಏಕಮತದ ವರದಿ) ಯನ್ನು ಒಪ್ಪಿಸಿದ್ದಾರೆಂಬುದು ಅಭಿಮಾನದ ಸಂಗತಿ (ಕಾಗದದ ಅಭಾವಕ್ಕಾಗಿ ಪ್ರಕಟವಾಗಿಲ್ಲ). ಆ ವರದಿಯ ಮುಖ್ಯ ಸಂಗತಿಗಳು ಹೀಗೆ:—

(೧) 'ಕಾವೇರಿಯಿಂದ ಮಾಗೋದಾವರಿ ವರೆಗಿರ್ವ' ಕರ್ನಾಟಕಕ್ಕೆ ಅನೇಕ ವಿಶ್ವವಿದ್ಯಾಲಯಗಳು ಅಗತ್ಯವಾದುದರಿಂದ, ಸದ್ಯಕ್ಕೆ ಮುಂಬಯಿ, ಮೈಸೂರು, ಅಗ್ರಾ-ವಟ್ಟಿ, ಹೈದರಾಬಾದು, ವಿದ್ಯಾಪಟ್ಟಣ— ಈ ಐದು ಕಡೆಗೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು.

(೨) ಕರ್ನಾಟಕವು ಫಲವತ್ತಾದ, ಧನವತ್ತಾದ ನಾಡಾದ್ದರಿಂದ, ಆಯಾ ಸ್ಥಳದವರೇ ಲಕ್ಷಾಂತರಗಳನ್ನು ಖಂಡಿತವಾಗಿ ಕೊಡುವರು. ಇದಕ್ಕಿವೆ ಇದಿಯ ಕರ್ನಾಟಕದಲ್ಲಿ ಅಲಕ್ಷ್ಮ್ಯಧೀಶರು (= ಅನೇಕ ಲಕ್ಷಾಧೀಶರು) ಇದ್ದುದರಿಂದ, ಸರಕಾರಕ್ಕೆ ಕಾಳಜಿಯೆ ಬೇಡ.

(೩) ಆಯಾ ಸ್ಥಳೀಯ ವಿಶ್ವವಿದ್ಯಾಲಯಗಳಲ್ಲಿ ಆಯಾ ಸ್ಥಳೀಯ ಭಾಷೆಯನ್ನೇ ಮಾಧ್ಯಮಿಕವಾಗಿರಬೇಕು; ಇಲ್ಲವಾದರೆ,

(೧೬೬ ನೇ ಪುಟ ನೋಡಿರಿ)

ಚೇತರಿಸುತ್ತಿರುವ ಚೀನ

ನವಚೀನದ ನಿರ್ಮಾತೃ ಡಾ. ಸನ್‌ಯತ್‌ಸೇನ

ಶ್ರೀ. ನೆಗಳೂರ ರಂಗನಾಥ, ಬಿ. ಎ., ಬಿ. ಟಿ. ಮಿತ್ರಮಂಡಲ, ಹುಬ್ಬಳ್ಳಿ.

★

ಡಾ. ಸನ್‌ಯತ್‌ಸೇನನು ಇಂದು ಚೀನಾಕ್ಕೆ ಒಂದು ಪೂಜ್ಯ-ವ್ಯಕ್ತಿ. ಸತತ ನಾಲ್ವತ್ತು ವರುಷಗಳ ವರೆಗೆ ದೇಶಹಿತವನ್ನೆ ಕಣ್ಣುಮುಂದಿಟ್ಟುಕೊಂಡು ದುಡಿದವನು ಪೂಜ್ಯನಾಗದೆ ಏನು? ಅವನ ಕೊನೆಯಾಶೆಯು ಮೊದಲಮಾತಾದರೂ ಇದೇ ಇರುವುದು: 'ಉಳಿದ ರಾಷ್ಟ್ರಗಳ ಜೊತೆಗೆ ಸಮನಾಗಿ, ಸ್ವಾತಂತ್ರ್ಯದಿಂದ— ಶ್ರೀಮಂತಿಕೆಯಿಂದ— ಸಮನಾಗಿ ಚೀನವೂ ತಲೆಯೆತ್ತಿ ನಿಲ್ಲ-ಬೇಕೆಂಬ ಒಂದೇ ಉದ್ದೇಶದಿಂದ, ಜನತೆಯಲ್ಲಿ ಕ್ರಾಂತಿ-ಯನ್ನುಂಟುಮಾಡಬೇಕೆಂದು ನಾನು ನಾಲ್ವತ್ತು ವರುಷಗಳವರೆಗೆ ಸತತ ಪರಿಶ್ರಮ ಪಟ್ಟಿದ್ದೇನೆ'. ಚೀನದಲ್ಲಿ ನವಸೃಷ್ಟಿಯನ್ನೇ ನಿರ್ಮಾಣಮಾಡಿದ ಭಾಗ್ಯವಿಧಾತನು ದೈವತ್ವವನ್ನು ಪಡೆದರೆ ಆಶ್ಚರ್ಯವೇನು? ಆಶ್ಚರ್ಯದ ಮಾತಲ್ಲ ಇದು, ಸತ್ಯಸಂಗತಿ! ಚೀನದ ಜನರಲ್ಲಿ ಅವನ ಬಗೆಗೆ ಅಷ್ಟು ಭಕ್ತಿ-ವಿಶ್ವಾಸ.

೧೮೬೬ ನೆಯ ನವಂಬರ್ ೧೨ ನೆಯ ದಿನ, **ಹ್ಸಿಯಾಂಗ್-ಶಾನ್** ಎಂಬ ಊರಿನ ಹತ್ತಿರದ ಒಂದು ಚಿಕ್ಕ ಹಳ್ಳಿಯಲ್ಲಿ ಸನ್-ಯತ್‌ಸೇನನು ಹುಟ್ಟಿದ. ಹ್ಸಿಯಾಂಗ್‌ಶಾನವು ಕ್ವಾಂಟಂಗ್ ಪ್ರಾಂತದಲ್ಲಿದೆ. ಇವನ ತಂದೆ-ತಾಯಿಗಳು ಬಡವರಾದ ಒಕ್ಕಲಿಗರು. ಸಾಮಾನ್ಯವಾಗಿ ಮಹಾಪುರುಷರು ತೀರ ಸಾದಾ ಪರಿ-ಸರದಲ್ಲಿಯೆ ಹುಟ್ಟಿ ಬೆಳೆದವರಿರುವರು. ಆದರೆ ಉಳಿದ ಬಾಲಕ-ರಲ್ಲಿ— ಅದೇ ಪರಿಸರದಲ್ಲಿದ್ದ ಉಳಿದ ಬಾಲಕರಲ್ಲಿ— ಇರದೆ ಇದ್ದ ಅಂತಃಶಕ್ತಿ ಮಹಾಪುರುಷನಾಗುವವನಲ್ಲಿರುವುದು. ಆದಕ್ಕಾ-ಗಿಯೆ ಉಳಿದವರಿಗೆ ಕಾಣದೆ ಇದ್ದುದು ಇವನಿಗೆ ಕಾಣುವುದು. ಉಳಿದವರು ಅಲ್ಲಿಯೆ ಉಳಿವರು; ಇವನು ಮುಂದೆ ಬರುವನು. ಆಗ ಇವನನ್ನು ನೋಡುತ್ತಿರುವವರಿಗೆ ಇವನ ಬಗೆ ವಿಚಿತ್ರ-ವೆಂದರೂ, ಮುಂದೆ ತಲೆಯೆತ್ತುವಂತಹ ದೊಡ್ಡಿತೆಯ ಲಕ್ಷಣ-ಗಳನ್ನು ಅವರು ಕಂಡಿರುವುದಿಲ್ಲ. ಅಂತಃಶಕ್ತಿಯು ಹೊರಗಣ್ಣಿಗೆ ಕಾಣದು; ಅದರ ಬಹಿರಂಗದರುಶನವೂ, ಅದು ಸಂಪೂರ್ಣ ಬೆಳೆದು ಒಳಗೆ ನಿಲ್ಲಲಾರದೆ ಹೊರಚೆಲ್ಲಿ ಕಾರ್ಯಮಾಡಿದಾಗಲೆ ಆಗುವುದು. ಕಾರ್ಯವಾದನಂತರವೆ ಕಾರಣ ಹುಡುಕುವ ಹವ್ಯಾಸವು ನಡೆವುದು. ಮಹಾಪುರುಷನಾದನಂತರ, ಅವನಿಗೆ ಆ ಸ್ಥಿತಿ ಬರಬೇಕಾದ— ಹಿಂದೆ ನಡೆದ— ಸಂಗತಿ ಸನ್ನಿವೇಶಗಳನ್ನು ಕಲೆಹಾಕಿ, ಈಗಿನ ಕಾರ್ಯಕ್ಕೂ ಆಗಿನ ಕಾರಣಗಳಿಗೂ ತಳುಕು ಹಾಕುವ ರೂಢಿಯಿದೆ. ಕಾರ್ಯವು ದೊಡ್ಡದು— ಅಸಾಮಾನ್ಯವಾದುದು ಇದ್ದರೆ, ಕಾರಣವಾದರೂ ದೊಡ್ಡದು— ಅಸಾಮಾನ್ಯ-ವಾದುದು ಇರುವುದು. ಆದಕ್ಕೇ ಮಹಾಪುರುಷರ ಬಾಲ್ಯಕ್ಕೆ ಮಹತ್ತ್ವಬರುವುದು ಅವರು ಮಹಾಪುರುಷರೆಂದು ಗಣನೆಗೆ ಬಂದನಂತರವೆ. 'ಬೀಜಕ್ಕೆ ಬಿಡುವ ಕಾಯನ್ನು ಹೀಚಿನಲ್ಲಿಯೆ ನೋಡು' ಎಂದು ಇದ್ದರೂ, ಫಲಬಿಟ್ಟಮೇಲಲ್ಲವೆ ಬೀಜಕ್ಕೆ ಬೆಲೆ ಬರುವುದು? ಬೀಜದಲ್ಲಿ ಅಂತಃಶಕ್ತಿಯಿದ್ದರೆ ಅದು ಹುಲುಸಾಗಿ ಬೆಳೆವುದು; ವಾತಾವರಣವನ್ನು ತನ್ನ ಗತಿಗೆ ತಿರುಗಿಸಿಕೊಳ್ಳು-ವುದು. ಬೀಜದಲ್ಲಿಯೆ ಶಕ್ತಿಯಿಲ್ಲದಿದ್ದರೆ ಕ್ಷೇತ್ರವೇನು ಮಾಡೀತು? ಕೃಷಿಯೇನು ಕೊಟ್ಟೀತು? ಮೂಲಶಕ್ತಿ ಬೀಜದಲ್ಲಿ. ಬೀಜ-ಶಕ್ತಿಯ ಮೂಲಕವೆ, ಕ್ಷೇತ್ರಕ್ಕೂ ಕೃಷಿಗೂ ಬೆಲೆ ಬರುವುದು. ಮಹಾಪುರುಷರ ಅದ್ಭುತ ಜೀವನದ ಮೂಲಕವೆ ಅವರ ತಂದೆ-ತಾಯಿಗಳಿಗೆ, ಅವರು ಬೆಳೆದ ಪರಿಸರಕ್ಕೆ ಬೆಲೆಯೂ ದೊಡ್ಡಿತೆಯೂ ಬರುವುದು. ಆಗಲ್ಲ— ಈಗ; ಚಿಕ್ಕವರಿದ್ದಾಗಲ್ಲ, ಬೆಳೆದ ಮೇಲೆ; ಕಾರ್ಯ ಮಾಡಿದ ಮೇಲೆ! ಕಾರಣವು ಮೊದಲಿದ್ದರೂ ಕಾರ್ಯ-ದಿಂದಲೇ ಕಾರಣದ ಸುಳಿವು ಹತ್ತುವುದು. ಕಾರ್ಯದ ಅಳತೆ ಕಾರಣಕ್ಕೆ ತಾಗುವುದು. ಕಾರ್ಯ ದೊಡ್ಡದಿದ್ದರೆ ಕಾರಣವೂ ದೊಡ್ಡದು.

ಎಳವೆಯಲ್ಲಿ **ಸನ್‌ಯತ್‌ಸೇನನಲ್ಲಿ** ಅಸಾಧಾರಣವೂ ಎತ್ತಿ ತೋರುವ ಘಟನೆಗಳು ಒದಗಲಿಲ್ಲ. ನೆರೆ-ಹೊರೆಯ ಮಕ್ಕಳೊಡನೆ ಆಟವಾಡುವಾಗ ಹೊಸತೇನೂ ಇರಲಿಲ್ಲ; ಎಲ್ಲ ಬಾಲಕರಂತೆ ಇದ್ದನಂತೆ. ಆಗ ಸನ್‌ಯತ್‌ಸೇನನ ಮನಸ್ಸು, ಪರಿಸರದ ಬಿಂಬ-ಗ್ರಹಣ ಮಾಡುವುದರಲ್ಲಿಯೆ ತೊಡಗಿರಬೇಕು. ಒಳಗೆ ನಡೆದ ವಿಚಾರದ ಸುಳಿವು ಯಾರಿಗೂ ಹತ್ತಿರಲಿಲ್ಲ. ಆದರೆ ಘಟನೆಗಳ ಪ್ರಭಾವವು ಅವನ ಮನಸ್ಸನ್ನು ಹದರುಗಟ್ಟಿಸುತ್ತಿತ್ತು— ಎಂದು ನಾವಿಂದು ಹೇಳಬಹುದು.

ತನ್ನ ಹದಿಮೂರನೆಯ ವಯಸ್ಸಿಗೆ **ಹೊನೊಲೂಲುಕ್ಕೆ** ಹೋದನು. 'ಹೊನೊಲೂಲು' ಇದು ಶಾಂತಿಸಾಗರದಲ್ಲಿಯ ಒಂದು ನಡುಗಡ್ಡೆಯೂರು. ಅಲ್ಲಿ ಐದು ವರುಷಗಳ ತನಕ ಇದ್ದು ಮಾಧ್ಯ-ಮಿಕ ಶಿಕ್ಷಣವನ್ನು ಮುಗಿಸಿದನು. ಅಲ್ಲಿ ಪಡೆದ ಶಿಕ್ಷಣವೆ ಹೆಚ್ಚು ಮಹತ್ತ್ವದ್ದು. ಆಗಿನ ಅವನ ವಯಸ್ಸು ಹದಯದ

ಹುಮ್ಮಸ್ಸುಳ್ಳುದು. ೧೩ ರಿಂದ ೧೮ ರ ವರೆಗಿನ ವರುಷಗಳೆಂದರೆ ಹರಯ ಅಡಿಯಿಡುತ್ತ ಮುಂದುವರೆಯುವ ದಿನಗಳು; ಹೊಸ ಶಕ್ತಿ ಬರುವ ದಿನಗಳು; ಏನು ಮಾಡಲೂ ಹಿಂಜರಿಯದ ದಿನಗಳು! ಜೀವನದ ಈ ಮಹತ್ತ್ವದ ಭಾಗವನ್ನು ಅವನು ಹೊನೊಲೂಲು ದಲ್ಲಿ ಕಳೆದನು. ಹೊನೊಲೂಲು ಅಮೇರಿಕನ್ನರ ಪ್ರಭಾವದಲ್ಲಿದ್ದುದು. ಅಮೇರಿಕೆಯು ಸ್ವತಂತ್ರ ರಾಷ್ಟ್ರ; ಸರ್ವತಂತ್ರ ಸ್ವತಂತ್ರವಾದುದು. ಸ್ವಾತಂತ್ರ್ಯದ ಗಾಳಿ ಅಮೇರಿಕೆಯ ಆಡಳಿತದಲ್ಲಿದ್ದ ಹೊನೊಲೂಲುದಲ್ಲಿಯೂ ಬೀಸುತ್ತಿದ್ದಿತು. ಹರಯದೇರಿಕೆಯ ವಯಸ್ಸಿನಲ್ಲಿ, ಹೊಸ ಶಕ್ತಿ ಬರುತ್ತಿರುವಾಗ, ಸ್ವಾತಂತ್ರ್ಯದ ಗಾಳಿಯಲ್ಲಿ ಸುಳಿದಾಡುವುದು ಹೊಸ ವಿಚಾರವನ್ನು ತರತೊಡಗಿತು. ಸ್ವಾತಂತ್ರ್ಯದ ಸತ್ತ್ವವು ಆತನಿಗೆ ಮೈಗೂಡಿತು.

ಹೀಗೆ ಮೈಗೂಡಿಸಿಕೊಂಡು ತಿರುಗಿ ತಾಯ್ನಾಡನ್ನು ಕಂಡಾಗ, ತಾಯ್ನಾಡಿನ ಬಂಧನದ ಅರಿವು ಸನ್‌ಯತ್‌ಸೇನನಿಗೆ ಎಂದೂ ಬಾರದಷ್ಟು ಬರತೊಡಗಿತು. ಸ್ವತಂತ್ರ ವಾತಾವರಣದಲ್ಲಿ ಅಲೆದಾಡಿ ತಾಯ್ನಾಡಿಗೆ ಬಂದ ಕೂಡಲೆ, ಪಂಜರದಲ್ಲಿ ಸಿಲುಕಿದ ಹಕ್ಕಿಯಂತೆ ಕಸವಿಸಿಯೆನಿಸತೊಡಗಿತು. ಸ್ವಾತಂತ್ರ್ಯದ ಸೌಖ್ಯವೂ ಬಂಧನದ ಬಳಲಿಕೆಯೂ ಆಗ ಅನುಭವಕ್ಕೆ ಬರತೊಡಗಿದುವು. ವಾತಾವರಣದಲ್ಲಿಯ ಈ ವ್ಯತ್ಯಾಸವು ವಿಚಾರದಲ್ಲಿಯೂ ಬರತೊಡಗಿತು. ವಿಚಾರದ ಸುಳಿಯು ಬೇರೊಂದು ದಿಕ್ಕನ್ನು ಪಡೆಯಿತು : ಸ್ವಾತಂತ್ರ್ಯ—ಸ್ವಾಯತ್ತತೆ !

ಹೊನೊಲೂಲುದಿಂದ ಬಂದು ಹಾಂಕಾಂಗ್‌ದಲ್ಲಿಯ 'ಮಹಾರಾಣಿ ವಿದ್ಯಾಲಯ (Queen's College)' ಕ್ಕೆ ಸೇರಿ ಆತ ಹೆಚ್ಚಿನ ಅಭ್ಯಾಸ ಮಾಡತೊಡಗಿದ. ಅಭ್ಯಾಸದ ಸೆಳೆತವೊಂದೆಡೆ; ನಾಡಿನ ರಾಜಕೀಯ ಜೀವನದ ಅಸಹಾಯತೆಯ ವಿಚಾರ ಮತ್ತೊಂದೆಡೆ. ಈ ಇಬ್ಬಗೆಯ ಸೆಳೆತ ಸಾಗಿರುವಾಗಲೆ, ತನ್ನ ಇಪ್ಪತ್ತನೆಯ ವಯಸ್ಸಿಗೆ ಸ್ನಾತಕನಾದ. ಸ್ನಾತಕನಾದ ಮೇಲೆ, ವೈದ್ಯಕವನ್ನು ಅಭ್ಯಾಸಿಸಬೇಕೆಂದು ಹಾಂಕಾಂಗ್ ವೈದ್ಯಕ ವಿದ್ಯಾಲಯವನ್ನು ಸೇರಿ, ೧೮೯೨ ರಲ್ಲಿ ಪದವೀಧರನಾದ.

ನಾಡಿನ ರಾಜಕೀಯ ಅಸಹಾಯತೆಯ ವಿಚಾರವು ಇವನನ್ನು ವೈದ್ಯಕವೃತ್ತಿಯಲ್ಲಿ ಬಹುದಿವಸ ಇರಗೊಡಲಿಲ್ಲ. ವೈದ್ಯಕವೃತ್ತಿಯು ತನ್ನ ಜೀವನದ ಕಾರ್ಯವಲ್ಲವೆಂದೆನ್ನಿಸತೊಡಗಿತು. ಮಾನವ ಜೀವನದ ರೋಗಗಳಿಗಿಂತ ಚೀನದ ಮಾನವರಿಗೆ ಆಧಾರವಾದ ಚೀನಾದೇಶದ ಬೇನೆಯ ಬಳಲಿಕೆಯನ್ನು ಪರಿಹರಿಸಬೇಕೆಂದು ಎನ್ನಿಸತೊಡಗಿತು. ಈ ವಿಚಾರದೊಲವಿಗೆ ಪುಟಕೊಟ್ಟುದು ೧೮೯೪ ರ ಸಂಗತಿಯೊಂದು. ಅದು ನಡೆದುದು ಚೀನ ಜಪಾನ ಯುದ್ಧದ ಪರಿಣಾಮ—ಚೀನದ ಸೋಲು! ಮೊದಲೇ ಸಿದ್ಧವಾಗುತ್ತಿದ್ದ ಅವನ ಮನಸ್ಸಿಗೆ ಇನ್ನೂ ಪುಟಸಿಕ್ಕಿತು. ವೈದ್ಯಕವೃತ್ತಿ ಸಂಪೂರ್ಣ ದೂರವಾಯಿತು. ನಾಡಸೇವೆಯ ಕರೆಯು ಪ್ರಬಲವಾಯಿತು. ಇನ್ನು ಇಬ್ಬಗೆಯ ಸೆಳೆತವಿಲ್ಲ; ಸೆಳೆತವೆಲ್ಲ ಒಂದು ಕಡೆ—ಒಂದೇ ಕಡೆ! ನಾಡಸೇವೆ, ನಾಡಬಂಧನವ ಕಡಿದೊಗೆವ ವಿಚಾರ! ಸೋತ ಚೀನಾವನ್ನು ಚೇತರಿಸುವ ವಿಚಾರ! ಕುಗ್ಗುವ ತಾಯ್ನಾಡನ್ನು ಕುದುರಿಸುವ ವಿಚಾರ! ಪರಕೀಯರ ಪ್ರಭಾವಕ್ಕೆ ಬಗ್ಗುತ್ತಿದ್ದ ನಾಡನ್ನು ಹಿಂದೆ ಜಗ್ಗಿ ಮೂಗು ಮೇಲೆ ಮಾಡಿ ಮೆರೆಯಿಸುವ ವಿಚಾರ! ಹೊನೊಲೂಲುದಿಂದ ಬಂದು ಹಾಂಕಾಂಗದಲ್ಲಿ ಕಾಲಿಟ್ಟಾಗ ಮೊದಲಾದ ವಿಚಾರದ ಸುಳಿಯು, ಇಂದು ಅತ್ತಿತ್ತ ಸುಳಿದಾಡದೆ ಒಂದು ಸ್ಥಿಮಿತಕ್ಕೆ ಬಂದಿದೆ. ಉಕ್ಕಿ ಬರುತ್ತಿರುವ ಹರಯದ ಹುಮ್ಮಸಕ್ಕೆ ಕಾರ್ಯದ ದಾರಿ ಸಿಕ್ಕಿದೆ.

ಹಾಂಕಾಂಗ್ ಇದು ಬ್ರಿಟಿಶರ ಅಧೀನದಲ್ಲಿದ್ದುದು. ಈ ಅಧೀನ ಸ್ಥಾನದಲ್ಲಿ, ಒಂದುದಿನ ಕಳೆವುದೆಂದರೆ ಯುಗಕಳೆದಂತೆ ಎನಿಸತೊಡಗಿತು. ಸ್ವಾತಂತ್ರ್ಯವಿಲ್ಲದ ಮೂಲಕ, ಆಡಿಸುವ ಉಸಿರು ತಟ್ಟಿಸುತ್ತಿತ್ತು. ಬೇರೆ ದೇಶಗಳೂ—ಬ್ರಿಟಿಶರಲ್ಲದೆ—ಚೀನವನ್ನು ಹಿಮ್ಮೆಟ್ಟಲು ಪ್ರಯತ್ನಿಸುತ್ತಿದ್ದುವು; ಕೆಲವು ರಾಜಕೀಯದಲ್ಲಿ, ಕೆಲವು ವ್ಯಾಪಾರ-ವ್ಯವಸಾಯದಲ್ಲಿ. ಈ ಹಿಮ್ಮೆಟ್ಟಿನ ಒಂದೊಂದು ಮೆಟ್ಟಿಲೂ ಭುಗಿಲ್ಲೆನ್ನುವ ಉರಿಯನ್ನು ಸನ್‌ಯತ್‌ಸೇನನ ಒಡಲಲ್ಲಿ ತುಂಬತೊಡಗಿತು. ಬಂಧನದಲ್ಲಿ ಬಾಳುವುದೆಂದರೆ 'ಹೊಗೆಸುತ್ತಿಕೊಂಡ ಮನೆಯಲ್ಲಿ ವಾಸಮಾಡಿದಂತೆ!' ಎಂದು ಆಗಾಗ ಎನ್ನಿಸತೊಡಗಿತು. ಮನೆಯು ಆರೋಗ್ಯಕರವಾಗಬೇಕಾದರೆ ಕಿಟಕಿ-ಬಾಗಿಲುಗಳನ್ನು ತೆರೆಯಬೇಕೆಂದೆನಿಸತೊಡಗಿತು. ಮನೆಯ ಜನರಿಗೆ ಆರೋಗ್ಯದ ಅರಿವನ್ನು ತಂದುಕೊಡಬೇಕು ಎಂದೆನಿಸತೊಡಗಿತು. ಹೊರಗಿನ ಹೊಸ ಗಾಳಿ ಬರುವುದರಿಂದ ಮನೆಯವರ ಆರೋಗ್ಯ ಬೆಳೆವುದು, ಹೊಸಹುಮ್ಮಸು ಬರುವುದು, ನವಚೈತನ್ಯ ಬರುವುದು, ಹಳೆಯದೇಶ ಹೊಸದಾಗುವುದು. ತಾನು ಅರಗಿಸಿಕೊಂಡ ಸ್ವಾತಂತ್ರ್ಯದ ಗಾಳಿಯನ್ನು ದೇಶದಲ್ಲಿ ಊದಿ, ದೇಶದಲ್ಲಿ ಸುತ್ತಿಕೊಂಡಿದ್ದ ಹೊಗೆಯನ್ನು ಹೊರದೂಡಬೇಕೆಂಬುದೆ ಸನ್‌ಯತ್‌ಸೇನನ ಮುಂದೆ ಇದ್ದ ಕಾರ್ಯ. ಕಾರ್ಯದ ಅರಿವು ಒಂದೊಡನೆ ನಡೆವುದು ಕಾರ್ಯಸಾಧನ—ಸಾಧನ-ಸಾಮಗ್ರಿ !

ದೇಶದಲ್ಲಿ, ಆಳುತ್ತೇವೆಂದು ಹೇಳುವುದಕ್ಕೆ ಮಾಂಚು ಮನೆತನವು ರಾಜ್ಯವಾಳುತ್ತಿತ್ತು. 'ಮಾಂಚು' ಮನೆತನವು ಅಳಿದುಳಿದಿತ್ತು. ಪಟ್ಟಕ್ಕೆ ಬಾಧ್ಯಸ್ಥರೇ ವಿನಾ ಪಟ್ಟದ ಹೊಣೆಗಾರಿಕೆ ಹೊರುವ ಶಕ್ತಿಯಿದ್ದವರಿರಲಿಲ್ಲ. ಆಳುವ ಅರಸರಿಲ್ಲದೆ ಇದ್ದರೆ ಒಂದು ರೀತಿಯಿಂದ ದೇಶಕಾರ್ಯ ಮಾಡುವವರಿಗೆ ಚೆನ್ನಾಗುತ್ತಿತ್ತು. ಆಳುವವರು ಇದ್ದು ಅವರಲ್ಲಿ ಶಕ್ತಿಯಿಲ್ಲದಾಗ ಮಾತ್ರ ತುಸು ಕಠಿಣ. ಅದರಲ್ಲಿಯೂ ಚೀನಾ-ಭಾರತಗಳಂತಹ ಸಂಪ್ರದಾಯವಂತ ದೇಶದಲ್ಲಿ ಇನ್ನೂ ಕಠಿಣ. ಅರಸನೇ ದೇವರೆಂದು ತಿಳಿವ ದೇಶದಲ್ಲಿ 'ಅರಸನು ಆಳಲಾರದ ಹೇಡಿ' ಎಂಬ ವಿಚಾರ ಸುಳಿವುದಾದರೂ ಹೇಗೆ? ಜನತೆಯಲ್ಲಿ ಬೇರೂರಿದ್ದ ಈ ವಿಚಾರವನ್ನು ತೊಡೆದೊಗೆವುದು ಮೊದಲ ಕಾರ್ಯ. ಪಟ್ಟದ ಮೇಲೆ

ಕುಳಿತಿರುವ ಅರಸನಿಗಿಂತ ಹೆಚ್ಚಿನ ಶಕ್ತಿ, ಕಾರ್ಯಕ್ಷಮತೆ ಬೇರೊಬ್ಬರಲ್ಲಿದೆ—ಎಂದು ಜನರಿಗೆ ತೋರಬೇಕು. ಅರಸನಾದವನು ದೇಶರಕ್ಷಣೆ ಮಾಡಬೇಕು, ಪ್ರಜಾಹಿತ ನೋಡಬೇಕು; ಈ ಎರಡೂ ಕಾರ್ಯ ಮಾಡಲಾಗದವನು ಅರಸನಾಗುವುದರಿಂದ ಏನು ಪ್ರಯೋಜನ? ಇಂತಹ ಅರಸು ಇಲ್ಲದಿರುವುದೇ ಒಳಿತು! ಅರಸೊತ್ತಿಗೆ ಪರಂಪರಾಗತವಾಗಿ ಬರುವುದರಿಂದ, ಆ ಮನೆತನದಲ್ಲಿ ಹುಟ್ಟಿದ ಹುಳು ಕೂಡ ಅರಸೊತ್ತಿಗೆ ಪಡೆವುದರಿಂದ, ಹೇಡಿಗಳು ಕೂಡ ಪಟ್ಟಕ್ಕೆ ಬರುವರು. ಈ ಪರಂಪರೆಯನ್ನೇ ತಪ್ಪಿಸಿದರೆ....ಹೇಡಿಗಳು—ಹೇಡಿ ಅರಸರು ಬರುವುದಿಲ್ಲ, ಜನಹಿತ ಮಾಡುವವರೇ ಮುಂಬರುವರು. ಜನತೆಯಲ್ಲಿ ವಿಶ್ವಾಸ ಬರುವುದು. ಜನಹಿತ ಸಾಧಿಸಿದರೆ ದೇಶಹಿತವು ತಾನೇ ಸಾಧಿಸಿದಂತಾಗುವುದು. ದೇಶ, ಜನ ಒಂದನ್ನೊಂದು ಅವಲಂಬಿಸಿವೆ. ಜನಹಿತವೇ ಮುಖ್ಯ ಗುರಿ. ಈ ಗುರಿ ಸಾಧಿಸಬೇಕಾದರೆ ಅಧಿಕಾರ ಬೇಕು. ಈಗ ಅಧಿಕಾರ ಅರಸನ ಕೈಯಲ್ಲಿ, ಅರಸನು ಕೈಯೆತ್ತಿ—ಎತ್ತಲಾರದೆ—ಕೊಟ್ಟ ಪರಕೀಯರ ಕೈಯಲ್ಲಿ! ಇದನ್ನು ಕಸಿಯಬೇಕು, ದೇಶ-ಜನ ಹಿತಕ್ಕೆ ಇದನ್ನು ಉಪಯೋಗ ಮಾಡಬೇಕು. ಆಗ ಚೀನವೂ ಒಂದು ರಾಷ್ಟ್ರವಾದೀತು. ನೆರೆಯವರ ಸರಿ ತಲೆಯೆತ್ತಿ ನಿಂತೀತು.... ಎಂಬ ವಿಚಾರದ ಅಲೆಗಳು ಅಪ್ಪಳಿಸುತ್ತಿದ್ದುವು ಸನ್‌ಯತ್‌ಸೇನನಲ್ಲಿ.

ಸದ್ಯದ ಪರಿಸ್ಥಿತಿಯಲ್ಲಿ ಬದಲು ಬರಲೇ ಬೇಕು! ಕ್ರಾಂತಿಯಾಗಲೇ ಬೇಕು! ಸಾವಕಾಶವಾಗಿ ಬದಲು ಬರುವುದೆಂದರೆ ಅದು ಮರಣಸಮ, ಬದಲು ಬೇಕು! ಹಳೆಯದು, ಕೊಳೆಯಾದುದು, ಬುಡ-ಬೇರುವೆರಸಿ ಕಿತ್ತು ಹೋಗಬೇಕು. ಹೊಸಬೀಜ, ಹೊಸ ಕೃಷಿ ನಡೆಯಬೇಕು. ಅದಕ್ಕಾಗಿ ಒಮ್ಮೆಲೆ ಬದಲಾವಣೆಯಾಗಬೇಕು, ಕ್ರಾಂತಿಯಾಗಬೇಕು! ಸನ್‌ಯತ್‌ಸೇನನ ತಲೆಯಲ್ಲಿ ಕ್ರಾಂತಿ, ಕ್ರಾಂತಿ! ಕ್ರಾಂತಿಯ ಹೊರತು ಬೇರೊಂದು ಬಾರದಂತಾಯಿತು.

'ಈ ಬಗೆಯ ಕ್ರಾಂತಿಯನ್ನು ಮಾಡುವುದಕ್ಕೇ ಬದುಕುವುದು ಬಾಳುವುದು!' ಎಂದು ನಿರ್ಧಾರವಾಯಿತು. ಮುಂದಿನ ತನ್ನ ಆಯುಷ್ಯವನ್ನೆಲ್ಲ ಈ ಕ್ರಾಂತಿಸಾಧನೆಯಲ್ಲಿಯೆ ಆತ ಕಳೆದನು. ತನ್ನ ಸಹಪಾಠಿಗಳಲ್ಲಿ ತನ್ನ ವಿಚಾರಕ್ಕೆ 'ಸಹಾನುಭೂತಿ ಸಹಕಾರ ತೋರಿಸಿದ ಕೆಲವರನ್ನು ಕಲೆ ಹಾಕಿಕೊಂಡು, ಮುಂದಿನ ದಾರಿಯನ್ನು ತುಳಿಯತೊಡಗಿದನು. ಅಜ್ಞಾನ, ಪಾರತಂತ್ರ್ಯವನ್ನು ತೊಡೆದೊಗೆದು, ಸ್ವತಂತ್ರ— ಬುದ್ಧಿವಂತ ಚೀನವನ್ನು ನಿರ್ಮಾಣ ಮಾಡುವುದೇ ತನ್ನ ಜೀವನದ ಧ್ಯೇಯವೆಂದು ತಿಳಿದನು.

ಕ್ರಾಂತಿಯನ್ನು ಮಾಡಬೇಕೆಂದು ಹೊರಟವರ ದಾರಿ ಎಂದೂ ಸುಗಮವಲ್ಲ. ಅದರಲ್ಲೂ ಅಜ್ಞಾನ-ಭಾವಿಕತನದಲ್ಲಿ ಮೂಗು ಮಟ ಮುಳುಗಿದ ಭಾರತ-ಚೀನಾಗಳಂತಹ ದೇಶದ ಮಾತಂತೂ ಇನ್ನೂ ಗಡಚು. ನಮ್ಮವರೇ ನಮಗೆ ಕಾಲ್ತೊಡಕಾಗುತ್ತಾರೆ. ನಮ್ಮವರು ಸಹಾಯಕರಾಗಿ—ನಾವು ತಿಳಿದಷ್ಟು ಬೇಗ—ಒದಗುವುದಿಲ್ಲವೆಂಬುದು ಸನ್‌ಯತ್‌ಸೇನನಿಗೆ ಬೇಗನೆ ತಿಳಿದು ಬಂದಿತು. ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ಅವಸರದಲ್ಲಿ ಕೈಯಿಕ್ಕಿದ ಬಂಡು ಯಶಸ್ವಿಯಾಗಲಿಲ್ಲ. ಅಪೇಕ್ಷಿಸಿದ ಸಹಾಯ ಬಾರದೆಹೋಯಿತು. ಅದಕ್ಕಾಗಿ ಅವನು ದೇಶತ್ಯಾಗ ಮಾಡಬೇಕಾಯಿತು. ೧೮೯೫ರಲ್ಲಿ ದೇಶಬಿಟ್ಟನು.

ಮುಂದೆ ಜೀವದ ಭೀತಿಯು ಗಂಡಾಂತರ ಬಂದಿತಾದುದರಿಂದ, ಸನ್‌ಯತ್‌ಸೇನನು ಸುರಕ್ಷಿತತೆಗಾಗಿ ದೇಶ ದೇಶ ಅಲೆಯಬೇಕಾಯಿತು. ಮೊದಲು ಜಪಾನ್, ಆಮೇಲೆ ಅಮೇರಿಕೆ—ಹೀಗೆ ಅಲೆದಾಡಿದನು. ಕೊನೆಗೆ ಇಂಗ್ಲಂಡಿಗೆ ಬಂದನು. ಒಂದು ದಿನ ಲಂಡನ್ನಿನ ಬೀದಿಯಲ್ಲಿ ಅಲೆಯುತ್ತಿದ್ದಾಗ, ಇವನನ್ನು ಹಿಡಿದು ಚೀನದ—ಅಲ್ಲಿಯ—ಅಧಿಕಾರಿಗಳಿಗೆ ಒಪ್ಪಿಸಿದರು. ಅಲ್ಲಿ ಹನ್ನೆರಡು ದಿನ ಕೊಳೆಯಬೇಕಾಯಿತು. ಮುಂದೆ ಜೇಮ್ಸ್ ಕ್ಯಾಂಟ್‌ಲೀ ಎಂಬಾತನ ಜಾಣತನದ ಸಹಾಯದಿಂದ ಪಾರಾದನು. ಇಲ್ಲವಾದರೆ, ಇವನನ್ನು ಹಾಗೆಯೆ ಲಂಡನ್‌ನಿಂದ ಮುಸುಕಿನಲ್ಲಿಯೆ ಚೀನಕ್ಕೆ ಕರೆತಂದು ಗಲ್ಲಿಗೇರಿಸಬಹುದಾಗಿತ್ತು. ಅನಂತರ ಯುರೋಪಕ್ಕೆ ಪ್ರಯಾಣ ಬೆಳಸಿದನು. ಅಲ್ಲಿಯ ಸಾಮಾಜಿಕ-ರಾಜಕೀಯ ಸಂಸ್ಥೆಗಳ ಇತಿಹಾಸ, ರಚನೆಗಳ ವಿವರವನ್ನು ಅಭ್ಯಾಸಮಾಡಿದನು. ಈ ಪ್ರವಾಸದ ಅನುಭವ-ಅಭ್ಯಾಸಗಳ ಪರಿಣಾಮವಾಗಿಯೆ ಅವನು "ಜನತೆಯ ಮೂರು ತತ್ತ್ವಗಳು" ಎಂಬ ತನ್ನ ಕ್ರಾಂತಿಸಿದ್ಧಾಂತವನ್ನು ಸಿದ್ಧಪಡಿಸಿದನು. ನಿಜವಾದ ಕಾರ್ಯವು ಈಗ ಆರಂಭವಾಯಿತೆನ್ನಬಹುದು.

ಆರಂಭವಾದ ಕ್ರಾಂತಿಕಾರ್ಯಕ್ಕೆ ಪುಟವು ಸಿಕ್ಕುದು ೧೯೦೦ರಲ್ಲಿಯ ಒಂದು ಘಟನೆಯಿಂದ. ಅದುವೆ 'ಬೊಕ್ಸರ ಕ್ರಾಂತಿ'! ಪೇಕಿನ್ ಎಂಬ ಪಟ್ಟಣದಲ್ಲಿ ಕೆಲವು ಸ್ವದೇಶಾಭಿಮಾನಿ ಚೀನಿಯರು ಪರದೇಶದ ಜನರ ವಿರುದ್ಧ ಬಂಡೆಬ್ಬಿಸಿದರು. ಅದಕ್ಕೆ ಕಾರಣವೆಂದರೆ ಪರಕೀಯರು ಚೀನಾದ ಮೇಲೆ ಹೇರಿದ ಅನ್ಯಾಯದ ಕರಭಾರ; ಅಲ್ಲದೆ ಪರಕೀಯರು ತಮ್ಮ ದಂಡನ್ನು ತಂದು ಚೀನಾದಲ್ಲಿ ಇರಿಸಿದುದು. ಪರಕೀಯರಿಗೆ ಈ ಸೈನ್ಯದ-ಕರದ— ಸವಲತ್ತು ಕೊಟ್ಟ ಮಾಂಚು ಮನೆತನವನ್ನು ಕಿತ್ತಿ ಒಗೆಯಬೇಕೆಂಬ ವಿಚಾರ ಪ್ರಬಲವಾಯಿತು—೧೯೦೦ರ ಬೊಕ್ಸರ ಬಂಡಿನಿಂದ.

ಆಗಿನ ಕಾರ್ಯಕ್ರಮವೆಂದರೆ 'ಮಾಂಚು' ಆಳ್ವಿಕೆಯ ಕೊನೆ ಮಾಡುವುದು. ಜಗತ್ತಿನಲ್ಲಿ ಅಲ್ಲಲ್ಲಿ ನೆಲಸಿದ ಚೀನೀಯರೆಲ್ಲ ಈ ಕಾರ್ಯಕ್ಕೆ ಸಹಾಯ-ಸಹಾನುಭೂತಿ ತೋರಿಸ ತೊಡಗಿದರು. ೧೯೦೫ರಲ್ಲಿ ಟೋಕ್ಯೊದಲ್ಲಿ ಪರಿಷತ್ತೊಂದು ನೆರೆಯಿತು. ಅನೇಕರು ಸದಸ್ಯರಾದರು. ಅಲ್ಲಿ ಎರಡು ಮಹತ್ತ್ವದ ಗೊತ್ತುವಳಿಗಳು ಗೊತ್ತಾದುವು:

(೧) ಎಲ್ಲ ಕ್ರಾಂತಿಕಾರರು **ಟೆಂಗ್‌ಮೆಂಗ್‌ಹುಯಿ** ಎಂಬ ಹೆಸರಿನ ಸಂಸ್ಥೆಗೆ ಒಳಪಡಬೇಕು, ಮತ್ತು

(೨) ಆಳುತ್ತಿರುವ ಮಾಂಚು ಮನೆತನವನ್ನು ಕಿತ್ತೊಗೆದು ಚೀನವನ್ನು ಪ್ರಜಾಸತ್ತಾತ್ಮಕವಾಗಿ ಮಾಡಬೇಕು.

ಈ ಪರಿಷತ್ತಿಗೆ ಚೀನದ ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳು ಬಂದಿದ್ದರು; ಎಲ್ಲ ದೇಶದಲ್ಲಿಯ ಚೀನೀಯರ ಪ್ರತಿನಿಧಿಗಳೂ ಬಂದಿದ್ದರು. ದೇಶದಲ್ಲಿಯ ಪ್ರತಿನಿಧಿಗಳು ಆಂತರಿಕ ಚಳವಳವನ್ನು ನಡೆಯಿಸತೊಡಗಿದರು; ಹೊರದೇಶದಲ್ಲಿ ನೆಲಸಿದ ಚೀನೀಯರು ತಮ್ಮ ಧನಸಹಾಯವನ್ನು ಸಂಕೋಚವಿಲ್ಲದೆ ನೀಡಿದರು. ಈ ಹೊರದೇಶದ ಚೀನೀ ಉದ್ಯಮಗಾರರ ಧನಸಹಾಯ ವಿಲ್ಲದಿದ್ದರೆ, ಕ್ರಾಂತಿಯ ಕಾರ್ಯವು ಸುಗಮವಾಗುತ್ತಿದ್ದಿಲ್ಲ. ಈ ಜನರಿಂದ ಬಂದ ಸಹಾಯವನ್ನು ನೆನೆದರೆ, ೧೮೯೫ ರಲ್ಲಿ **ಸನ್‌ಯತ್‌ಸೇನನು** ದೇಶತ್ಯಾಗಮಾಡಿ ದೇಶ ದೇಶ ಅಲೆದುದು ಚೆನ್ನಾಯಿತು—ಅಥವಾ, ಇದೇ ಉದ್ದೇಶದಿಂದಲೆ ಅವನು ಅಲೆದಿರಬಹುದು— ಎಂದು ತಿಳಿಯಲೂ ಬಹುದು. ಎಲ್ಲ ಜನತೆಯ ಸಹಾನುಭೂತಿ ದೊರೆಯಿತು. ಕ್ರಾಂತಿಕಾರ್ಯ ಸುಗಮವಾಯಿತು.

ಕ್ರಾಂತಿಯು ಶಿಖರಕ್ಕೇರಿದುದು ೧೯೧೧ನೆಯ ಆಕ್ಟೋಬರ ತಿಂಗಳಿನಲ್ಲಿ. ಆಗ **ವುಚಾಂಗ್‌**ನಲ್ಲಿ ರಣಕಹಳೆಯನ್ನೂದಿದರು. ಕ್ರಾಂತಿಕಾರರ ರಭಸಕ್ಕೆ ರಾಜಧಾನಿಯಾದ **ಹೊಪೇ** ಕುಸಿಯಿತು. ಇವರು ಮಾಡಿದ ಗತ್ತು ಗೊತ್ತಾಗಿ, ಅಪೇಕ್ಷಿಸಿದಂತೆ ಫಲ ಸಿಕ್ಕದೆ ಹೋದರೂ, ದೇಶದ ಉಳಿದ ಭಾಗದ ಜನತೆ, ಇವರ ಅಪೇಕ್ಷೆಗಿಂತ ಹೆಚ್ಚು ಕಾರ್ಯಕುಶಲರಾಗಿ— ಕ್ರಾಂತಿಕುಶಲರಾಗಿ—ಕೈಗೆ ಕೈ ಕೊಟ್ಟದ್ದರಿಂದ, ೧೦೦ ದಿನಗಳಲ್ಲಿ ಕ್ರಾಂತಿಯ ಕಾರ್ಯವು ಯಶಸ್ವಿಯಾಯಿತು. ಪರಿಣಾಮವೆಂದು ಆಳಿದು ಉಳಿದಿದ್ದ **ಮಾಂಚು** ಮನೆತನವು ಚೀನದ ಇತಿಹಾಸದಿಂದ ಮರೆಯಾಯಿತು. ಅನೇಕ ವರುಷಗಳಿಂದ ಕಾಣುತ್ತಿದ್ದ ಡಾ. ಸನ್‌ಯತ್‌ಸೇನನ ಕನಸು ನನಸಾಯಿತು. ಅವನು ಅವಿಶ್ರಾಂತವಾಗಿ ದುಡಿದುದಕ್ಕೆ ಪ್ರತಿಫಲ ಸಿಕ್ಕು, ದುಡಿದು ದಣಿದ ದೇಹಕ್ಕೆ ಕೊಂಚ— ನಸುವೆ—ಅಲ್ಪವಿರಾಮ ದೊರೆತಂತಾಯಿತು. ಜನತೆಯೆಲ್ಲವೂ ಇವನನ್ನು ಪ್ರಜಾಸತ್ತೆಯ ಮೊದಲ ಅಧ್ಯಕ್ಷನಾಗಬೇಕೆಂದು ಬಿನ್ನವಿಸಿತು. ಇವನ ಅಧ್ಯಕ್ಷತೆಯಲ್ಲಿ ಚೀನವು ಚೇತರಿಸಿಕೊಂಡು ಎದ್ದೇಳುವುದೆಂಬ ಆಶಾಂಕುರವು ಮೊಳೆಯ ತೊಡಗಿತು.

ಆದರೆ ೧೯೧೧ ರಲ್ಲಿ ಕ್ರಾಂತಿಯಾಗಿ ಯಶಸ್ಸು ಬಂದರೂ ಇನ್ನೂ ಮಾಡಬೇಕಾದ ಕಾರ್ಯ ಸಾಕಷ್ಟಿತ್ತು. ಅದು ಕೇವಲ ಹೊಸ ಕಾರ್ಯಾರಂಭ. ಇಲ್ಲಿ ಒಂದು ತೊಂದರೆ ಬಂದಿತು: ದೇಶಸೇವೆ ಮಾಡಬೇಕೆನ್ನುವ ಇಬ್ಬರಲ್ಲಿ ಮತಭೇದ. ಆರಂಭಕಾಲದಲ್ಲಿಯೆ ಮತಭೇದವಾಗುವುದು ಒಳ್ಳೆತಲ್ಲ; ಆದರೂ ಬಂದಿತಲ್ಲ! ಒಂದು ಪಂಗಡಕ್ಕೆ ಮುಂದಾಳು ಯುವಾನ್‌ಶೀಕೈ; ಮತ್ತೊಂದಕ್ಕೆ ಸನ್‌ಯತ್‌ಸೇನನು. ಮೊದಲನೆಯವನು ಸೈನ್ಯದ ಸಾಮರ್ಥ್ಯದಲ್ಲಿ ವಿಶ್ವಾಸವಿಟ್ಟವನು. ಸನ್‌ಯತ್‌ಸೇನನು ಜನತೆಯ ಅರಿವಿನಲ್ಲಿ ನಂಬುಗೆಯಿಟ್ಟವನು. ಜನತೆಯು ತನ್ನ ಹೊಸ ಫಲದ ಅರಿವನ್ನು ಪಡೆಯಬೇಕಲ್ಲದೆ, ಅದನ್ನು ಅರಗಿಸಿಕೊಳ್ಳುವ ಜ್ಞಾನವನ್ನು ಪಡೆಯಬೇಕು—ಎಂದು ಅವನು 'ಜ್ಞಾನಶಕ್ತಿಯೆ ಬಹುಕಾಲ ಬಾಳುವುದು' ಎಂದನು. ಈ ತೋಳು-ತಲೆಯ ತಿಕ್ಕಾಟ ಯಾವ ದೇಶದಲ್ಲಿಲ್ಲ? 'ಕೊನೆಗೆ ವಿಜಯಿಯಾಗುವುದು ತಲೆಯು!' ಎಂದು ಇತಿಹಾಸವಂತೂ ಹೇಳುವುದು. ನೋಡೋಣ.

ಚೀನದ ಭವಿಷ್ಯದ ಮೇಲೆ ಕಣ್ಣಿಟ್ಟ ಸನ್‌ಯತ್‌ಸೇನನು, ೩ ತಿಂಗಳಲ್ಲಿಯೆ ಅಧ್ಯಕ್ಷ ಪದವಿಯನ್ನು ಯುವಾನನಿಗೆ ಕೊಟ್ಟನು. ಮತಭೇದದಿಂದ ಸಾಧಿಸಿದ ಕಾರ್ಯ ಹಾಳಾದೀತೆಂದು ಸ್ವಾರ್ಥತ್ಯಾಗಮಾಡಿದನು. ತ್ಯಾಗದಿಂದಲ್ಲವೇ ಪ್ರೇಮದ ಅರಿವು ತಿಳಿವುದು? ಅಧ್ಯಕ್ಷಪದವನ್ನು ಪ್ರತಿಸ್ಪರ್ಧಿಗೆ ಕೊಟ್ಟು, ತಾನು ಜನತೆಯನ್ನು ಜಾಣರನ್ನಾಗಿ ಮಾಡುವುದರ ಕಡೆಗೆ ಲಕ್ಷ್ಯ ಹಾಕತೊಡಗಿದನು. ಜನತೆಗೆ ಪ್ರಜಾಸತ್ತೆಯ ಪಾಠವನ್ನು ಕಲಿಸತೊಡಗಿದನು. '**ಟೆಂಗ್‌ಮೆಂಗ್‌ಹುಯಿ**' ಸಂಸ್ಥೆಯನ್ನು ಸುಧಾರಿಸತೊಡಗಿದನು. ಅದನ್ನು ವಿಸ್ತರಿಸಿ, '**ಕೂಮಿಂಟಾಂಗ್**' ಎಂಬ ಹೆಸರಿನಲ್ಲಿ ಮುಂದೆ ಮಾಡಿದನು. ದೇಶದ ತುಂಬ ಉಗಿಬಂಡಿಯ ಸೌಕರ್ಯವಾಗಬೇಕೆಂದು ಕಾರ್ಯಕ್ರಮದಲ್ಲಿ ಅದನ್ನು ಮೊದಲನೆಯದನ್ನಾಗಿಟ್ಟನು. ಜನತೆಯನ್ನು ಒಟ್ಟಾಗಿಸಲು ಅದು ದೊಡ್ಡ ಸಾಧನ. ಅದರಿಂದ ಬಳಕೆ ಹೆಚ್ಚಿ ತಿಳಿವಳಿಕೆ ಬೆಳೆವುದು. ಅದು ಔದ್ಯೋಗಿಕತೆಯ ಮೊದಲ ಮೆಟ್ಟಿಲು. ಆದರೆ ಯುವಾನ್‌ಶೀಕೈಯ ಸ್ವಾರ್ಥಲಾಲಸೆಯು ಆಗಾಗ ಅಡ್ಡ ಬರತೊಡಗಿತು. ಸ್ವಾರ್ಥಸಾಧನೆಯು ಮಹತ್ವಾಕಾಂಕ್ಷೆಯಲ್ಲಿ ಪರಿಣಮಿಸತೊಡಗಿತು. 'ಜನಸಭೆ (Parliament)'ಯನ್ನು ಮನ್ನಿಸದೆ, ತಾನು ಸಮ್ರಾಟನಾಗಬೇಕೆಂಬ ವಿಚಾರವನ್ನವನು ತೋರಿದನು. ಸ್ವಾರ್ಥತ್ಯಾಗಮಾಡಿ ಅಧ್ಯಕ್ಷಪದವನ್ನು ಆವನಿಗೆ ಕೊಟ್ಟುದು ತಪ್ಪಾಯಿತೆಂದು ತಡವಾಗಿ ತಿಳಿಯಿತು ಸನ್-ಯತ್‌ಸೇನನಿಗೆ.

(೧೬೩ನೆಯ ಪುಟದಿಂದ ಮುಂದುವರಿದದ್ದು)

ವಿದ್ಯಾಲಯಗಳ ವಿಶ್ವತ್ವದ ತತ್ತ್ವವೆ ಕಳೆದಂತಾಗುವುದು.

(೪) ಏಕೀಕರಣದ ಮೊದಲ ಹೆಜ್ಜೆ ಇದು ಎಂದು ಸಮಿತಿಯ ಅಭಿಪ್ರಾಯ; ಯಾಕೆಂದರೆ, ಹೀಗೆ ವಿಶ್ವವಿದ್ಯಾಲಯಗಳಾದರೆ, ಕ್ರಮೇಣ ಕರ್ನಾಟಕವು 'ಏಕೀಕ' ಎಂದರೆ ಒಂದೊಂದಾಗಿ, ಅಲ್ಲಿ 'ರಣ' ರಣ ಹರಡುವುದು ಖಂಡಿತ.

(ಮುಂದೆ ಸಾಗಬಹುದೆ?)

ಕ್ರಾಂತಿಕಾರ್ಯವು ದ್ರೋಹದಿಂದ ಕುಸಿಯಿತು. ದ್ರೋಹವೆ ಎಲ್ಲರಿಗೂ ಮುಳುವಾಯಿತು. ಆಗ ಮಾಡಿದ ತಪ್ಪು—ನಂಬುಗೆಯ ತಪ್ಪು—ಕ್ರಾಂತಿಕಾರ್ಯವನ್ನು ೧೯೨೭ರ ವರೆಗೆ ತಡೆಯಿತು. ಆಗ ಮಾತ್ರ ಡಾ. ಸನ್ ಇರಲಿಲ್ಲ. ಅವನ ಪಟ್ಟಶಿಷ್ಯನಾದ, ಸದ್ಯದ ಚೀನದ ಸೂತ್ರಧಾರಿಯಾದ ಚಾಂಗ್ ಕೈಶೇಕನು ಆ ಕಾರ್ಯವನ್ನು ಸಾಧಿಸಿದನು. ಯುವಾನನು ತನ್ನ ಪಕ್ಷವೊಂದನ್ನು ಮಾಡಿಟ್ಟು, ಚೀನವನ್ನು ಒಳಗಿಂದಲೆ ಚುಚ್ಚುವಂತೆ ಮಾಡಿದನು. ಇಂತಹ ದ್ರೋಹಿಗಳು ಇರುವುದರಿಂದಲೆ ದೇಶದಲ್ಲಿ ಸ್ವಾತಂತ್ರ್ಯಕಾರ್ಯವು ಮಂದವಾಗುವುದು. ಆದರೇನು? ತಡವಾಗುವುದೇ ವಿನಾ ತೊಡೆದು ಹೋಗದು.

೧೯೧೧ ರಿಂದ ೧೯೨೫ರ ವರೆಗಿನ ದಿನಗಳೇನೂ ವ್ಯರ್ಥ ಹೋಗಲಿಲ್ಲ. ಡಾ. ಸನ್‌ಯತ್‌ಸೇನನ ಅವಿಶ್ರಾಂತ ದುಡಿತದಿಂದ ಜನತೆ ದಿನದಿನಕ್ಕೆ ಹೆಚ್ಚು ಹೆಚ್ಚು ಸ್ವದೇಶಾಭಿಮಾನಿಗಳೂ ರಾಷ್ಟ್ರೀಯ ಭಾವನೆಯುಳ್ಳವರೂ ಆಗತೊಡಗಿದರು. ಅನೇಕರು ಅವನ ಅನುಯಾಯಿಗಳಾದರು. ಆಗಾಗ ಬರುತ್ತಿದ್ದ ಗಂಡಾಂತರಗಳು ಇವನಿಗೆ ಹಲವು ಅನುಯಾಯಿಗಳನ್ನೊದವಿಸತೊಡಗಿದುವು. ಕ್ಯಾಂಟನ್‌ನಲ್ಲಿ ಆಗಾಗ ಬೇರೆ ಸರಕಾರವನ್ನು ಸ್ಥಾಪಿಸಿದ್ದುಂಟು. ಕೂಮಿಂಟಾಂಗನ್ನು ಮತ್ತೊಮ್ಮೆ ಸುಧಾರಿಸಿ, ಪಕ್ಷ-ಸರಕಾರದ (Party Govt.) ತಳಹದಿಯನ್ನು ಹಾಕಿದನು.

ಸನ್‌ಯತ್‌ಸೇನನ ಕ್ರಾಂತಿತತ್ತ್ವಗಳೆಲ್ಲವೂ 'ಜನತೆಯ ಮೂರು ತತ್ತ್ವ'ಗಳಲ್ಲಿ ಅಡಕವಾಗಿವೆ. ಅದೇ ಇಂದಿನ ಚೀನೀಯರ ಮಾರ್ಗದರ್ಶಿ. ಅದೇ ಅವರ ವೇದ-ಖುರಾನ್-ಬೈಬಲ್ಲು!

ಸನ್‌ನು ಒಬ್ಬ ಅಭ್ಯಾಸಿ, ದೂರದೃಷ್ಟಿಯುಳ್ಳ ರಾಜಕಾರಣಿ, ದಣಿವಿಲ್ಲದೆ ದುಡಿದವ. ಹತ್ತಿಕ್ಕಲಾರದ ಆಶಾವಾದಿ, ಚೀನೀಯರ ಪ್ರೇಮಪುತ್ಥಳಿ. ಧ್ಯೇಯಸಾಧನೆಯಲ್ಲಿ ಅವನ ನೋಟ ತಿಳಿ, ದಾರಿಗಟ್ಟಿ. ತಾನು ತುಳಿದ ದಾರಿಯನ್ನು ಗಟ್ಟಿಯಾಗಿ ಮಾಡಿಕೊಂಡಂತೆ, ತನ್ನ ಅನುಯಾಯಿಗಳಿಗೂ ಗಟ್ಟಿಯಾದ ದಾರಿ ಹಾಕಿ ಕೊಟ್ಟಿದ್ದಾನೆ. ಕುಸಿಯದ ಕುಗ್ಗದ ತಗ್ಗದ ದಾರಿ ಅವನದು! ತನ್ನ ನಾಲ್ವತ್ತು ವರುಷದ ದುಡಿತದ ಅನುಭವ-ಗಟ್ಟಿಯನ್ನು ಕೊಟ್ಟಿದ್ದಾನೆ, ತನ್ನ ಜನತೆಗೆ.

ಆದರೆ,......ಇದಿ ಚೀನ ಇಂದು ಒಂದಾಗಿದೆಯೆಂದು ಹೇಳುವ ದಿನ ಬರುವ ಮುನ್ನವೆ—೧೯೨೫ರ ಮಾರ್ಚ್ ೧೨ಕ್ಕೆ ಪೇಕೀನ್‌ನಲ್ಲಿ ತೀರಿದನು. ಇವನ ಸಾವಿನಿಂದ ಇವನ ಪಕ್ಷವು ಕುಸಿಯಬಹುದೆಂದು ಅನೇಕರು ಎಣಿಸಿದ್ದರು. ಆದರೆ ಇವನ ಮರಣದಿಂದ ಇವನ ಅನುಯಾಯಿಗಳು ಹಿಂದೆ ಎಂದೂ ಆಗದಷ್ಟು ಒಕ್ಕಟ್ಟಾದರು. ಒಕ್ಕಟ್ಟಿನಿಂದ ಎಂತಹ ಬಿಕ್ಕಟ್ಟಿನ ಪ್ರಸಂಗಗಳನ್ನೂ ದಾಟುವಂತೆಯಾದರು.

"ಕ್ರಾಂತಿಯು ನಡೆಯಬೇಕಾದ ವಿಷಯ; ಆಗಿ ಮುಗಿಯುವುದಲ್ಲ!" ಎಂದು ಆಗಾಗ ಎನ್ನುತ್ತಿದ್ದನು ಡಾ. ಸನ್‌ಯತ್‌ಸೇನನು. "ತೋಳಬಲದಿಂದ ಅಧಿಕಾರ ಕಸಿದುಕೊಂಡು, ಬುದ್ಧಿಬಲದಿಂದ ಅದನ್ನು ಉಳಿಸಿಕೊಂಡು, ಹೊಸ ಸೃಷ್ಟಿಯನ್ನು ನಿರ್ಮಾಣಮಾಡಬೇಕು; ಕಾಲಕಾಲಕ್ಕೆ ಬದಲಾವಣೆಯಾಗಬೇಕು! ಅದೇ ನಿಜವಾದ ಕ್ರಾಂತಿ!"

ತನ್ನ ತತ್ತ್ವಗಳನ್ನು ಅವನು ಕೊಟ್ಟಂತೆ, ತನ್ನದೆಲ್ಲವನ್ನೂ ಕೊಟ್ಟಿದ್ದಾನೆ. ಅವನು ಸಾಯುವ ಮುಂದೆ ಹಣದ ಸಂಚಯ ಅವನದೆಂಬುದು ಇದ್ದಿಲ್ಲ. ಆದರೆ ಅವನ 'ಹೊತ್ತಗೆಮನೆ' ಮಾತ್ರ ಸುತ್ತುಮುತ್ತಲೂ ಅಂತಹದಿನ್ನೊಂದಿಲ್ಲವೆಂದೆನ್ನುವಷ್ಟು ಚೆನ್ನಾಗಿತ್ತು. ಅದನ್ನೇ ಅವನು ದೇಶಕ್ಕಾಗಿ ಬಿಟ್ಟ ದತ್ತಿ.

ಅವನ ಕಾರ್ಯವನ್ನು ಅವನ ಪಟ್ಟಶಿಷ್ಯ—ಚಾಂಗ್‌ಕೈಶೇಕನೇ ಮುಂದುವರಿಸಿದ್ದಾನೆ. ಅವನ ಬಗೆಗೆ ಮುಂದೆ ತಿಳಿಯೋಣ.

ಸಾದರ ಸ್ವೀಕಾರ

೧೪. **ನಗೆಯ ಬುಗ್ಗೆ ಅಥವಾ ನಾಗಣ್ಣನ ಕತೆಗಳು** (ಕಥಾಸಂಗ್ರಹ): ಲೇಖಕರು ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ., ಬನಾರಸ ಅವರು. ತಂದವರು ಶ್ರೀಮಾನ್ ಜೋಶಿ ಶಂಕರರಾಯರು. ಧಾರವಾಡದ ಕನ್ನಡ ಸರಸ್ವತೀ ಭಾಂಡಾಗಾರದ 'ಮಕ್ಕಳ ಹಿಗ್ಗು' ಮಾಲೆಯ ೨ನೆಯ ಪ್ರಕಟನೆ. ಕ್ರೌ. ಅ. ೬೮ ಪುಟ. ಬೆಲೆ ೦-೮-೦.

೧೫. **ರುಚಿ:**— (ಕಲಾವಿಚಾರ ಗ್ರಂಥ) ಬರೆದವರು ಶ್ರೀಮಾನ್ ಎಸ್. ವಿ. ರಂಗಣ್ಣ ಎಂ. ಎ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೪೬ನೆಯ ಗ್ರಂಥ. ಫೂ. ಅ. ೬೪ ಪುಟ. ಬೆಲೆ ೦-೩-೦.

೧೬. **ಪ್ರಥಮ ಸತ್ಯಾಗ್ರಹಿ:**— (ಪೌರಾಣಿಕ ಕಥೆ). ಲೇಖಕರು ಶ್ರೀಮಾನ್ ಜಿ. ಅಶ್ವತ್ಥ ನಾರಾಯಣ ರಾವ್, ವ್ಯವಸ್ಥಾಪಕ ಖಾದೀಭಂಡಾರ ತುಮಕೂರು. ಮಾರಾಟಗಾರರು ಶ್ರೀ. ರಂಗನಾಥ ಹಾಲ್, ಬುಕ್ ಸೇಲರ್ಸ್, ಸ್ಟೇಷನರ್ಸ್ ಮತ್ತು ನ್ಯೂಜ್ ಏಜಂಟ್ಸ್ ತುಮಕೂರು. ಭಾರತ ಶಿಕ್ಷಣಮಾಲೆಯ ೧ನೆಯ ಪುಸ್ತಕವಿದು. ಫೂ. ಕ್ಯಾ. ಪ್ರದ ೨೬ ಪುಟಗಳು. ಬೆಲೆ ೦-೧-೬.

೧೭. **ಹೊಸಬಾಳು**-(ಪತ್ರಲೇಖನ). ಶ್ರೀಮಾನ್ 'ಎಚ್. ಎಸ್.' ಬರೆದುದು. ಧಾರವಾಡದ 'ರಂಗಮಂಗ ರಂಜನೋದ್ಯಾನ'ದ ೭ನೆಯ ಗೊಂಚಲು. ಫೂ. ಕ್ಯಾ. ಅ. ೬೨ ಪುಟಗಳು. ಬೆಲೆ ೦-೯-೦.

ಮಿಲನ-ಮುಹೂರ್ತ (ಸಣ್ಣ ಕತೆ)

ಶ್ರೀ. ಕು. ಶಿ. ಹರಿದಾಸ 'ಕನ್ನಡ ಜಾಣ' ಉಡುಪಿ

ಉಪಗುಪ್ತನ ಆದರ್ಶವ್ಯಕ್ತಿತ್ವ ಸ್ವರ್ಗೀಯ ಕವಿ ರವೀಂದ್ರರ 'ಅಭಿಸಾರ'ದ ಮೂಲಕ ನಾಕಷ್ಟು ಪರಿಚಿತವಾಗಿದೆ. ಅದೇ ವ್ಯಕ್ತಿತ್ವ ಇಲ್ಲಿ ಇನ್ನಿಷ್ಟು ಪರಿಪೂರ್ಣವಾಗಿ ರೂಪುಗೊಂಡಿದೆ.

★

ವಾಸವದತ್ತೆಯ ಸೌಂದರ್ಯವು ಪೂರ್ಣಚಂದ್ರನಿಗಿಂತಲೂ ಹೆಚ್ಚು ಪೂರ್ಣವಾಗಿತ್ತು. ಅವಳ ದೇಹ ಕಮಲಕ್ಕಿಂತಲೂ ಕೋಮಲವಾಗಿತ್ತು. ಲಜ್ಜಾಪೂರಿತವಾದ ಅವಳ ನೇತ್ರಗಳು ಜಿಂಕೆಯನ್ನು ನಾಚಿಸುತ್ತಿದ್ದುವು. ಸ್ವರ್ಗದ ಸೌಂದರ್ಯವು ತನ್ನ ರುಚಿಯಂತೆ, ತನ್ನವೇ ಕೋಮಲ ಕೈಗಳಿಂದ ಆ ಸಜೀವ ಸ್ವರ್ಣಪ್ರತಿಮೆಯನ್ನು ನಿರ್ಮಿಸಿದ್ದಿರಬೇಕು. ಇಂತಹ ಭುವನಮೋಹಿನೀ ಶೋಭೆಗೆ ಇಷ್ಟು ರುಚಿರ ರೂಪರಾಶಿಯನ್ನು ಕೊಟ್ಟೂ ಬ್ರಹ್ಮನು ಅವಳನ್ನು ವೇಶ್ಯೆಯನ್ನಾಗಿ ಮಾಡಬೇಕಿತ್ತೆ? ಕೆಸರಲ್ಲಿ ಕಮಲವನ್ನೂ ಮುಳ್ಳಿನಲ್ಲಿ ಹಣ್ಣನ್ನೂ ಉಂಟುಮಾಡುವವನಿಗೇ ಗೊತ್ತು.

ಆ ದಿನ, ಬಾಲವಸಂತನ ಸುಷಮಾಪೂರ್ಣ ಪ್ರಭಾತ ಸಮಯದಲ್ಲಿ, ಕೋಗಿಲೆಯ ಕರುಣಗಾನವನ್ನು ಹೃದಯದಲ್ಲಿ ತುಂಬಿಕೊಂಡು ಮಲಯಾನಿಲವು ಮನಬಂದಂತೆ ಬೀಸುತ್ತಿರುವ ಸಮಯದಲ್ಲಿ, ಶ್ರಮಣನೊಬ್ಬನು ವಾಸವದತ್ತೆಯ ಮಹಲಿನ ಬಾಗಿಲಲ್ಲಿ ಭಿಕ್ಷೆಗಾಗಿ ಬಂದು ನಿಂತನು. ಅಕಸ್ಮಾತ್ತಾಗಿ ವಾಸವದತ್ತೆಯ ದೃಷ್ಟಿ ಆ ಬೌದ್ಧಭಿಕ್ಷುವಿನ ಮೇಲೆ ಬಿತ್ತು. ಅವಳು ಅವನನ್ನು ಒಮ್ಮೆ ನೋಡಿದಳು, ನೂರುಸಲ ನೋಡಿದಳು—ನೋಡುತ್ತಾ ನಿಂತಳು.

ಅವನ ಹೆಸರು ಉಪಗುಪ್ತನೆಂದು. ಸಾಂಸಾರಿಕ ದೃಷ್ಟಿಯಿಂದ ಅವನು ಭಿಕಾರಿ, ಆದರೆ ಸ್ವರ್ಗೀಯ ದೃಷ್ಟಿಯಲ್ಲಿ ಅವನೇ ರಾಜ-ರಾಜೇಶ್ವರ. ಮನಸ್ಸಿಗಿಂತ ಶ್ರೇಷ್ಠವಾದ ಬೇರೊಂದು ರಾಜ್ಯವಿಲ್ಲ. ಉಪಗುಪ್ತನು ಅದೇ ಮನಸ್ಸನ್ನು ಗೆದ್ದಿದ್ದನು; ರಾಜರಾಜೇಶ್ವರನಾಗಿದ್ದನು. ಸಮಸ್ತ ಇಂದ್ರಿಯಗಳೇ ಅವನ ಪ್ರಜೆಗಳು.

ಜಗತ್ತಿನ ಚಂಚಲತೆ ಮತ್ತು ಅಶಾಂತಿಯ ಅರಿವು ಅವನಿಗೆ ಚೆನ್ನಾಗಿತ್ತು. ಅವನ ಕಣ್ಣುಗಳು ಅಚಂಚಲವೂ ಶಾಂತವೂ ಆಗಿದ್ದುವು. ಸ್ವರ್ಗೀಯ ಪ್ರಭೆಯಿಂದ ಅವನ ಮುಖಮಂಡಲವು ಬೆಳಗುತ್ತಿತ್ತು. ಕಾಷಾಯವಸ್ತ್ರಗಳು ಅವನಿಗೆ ಅಪೂರ್ವ ಶೋಭೆಯನ್ನೀಯುತ್ತಿದ್ದುವು.

* ಕಾಂಗ್ರೆಸ್ಸು ಅಧಿಕಾರ ವಹಿಸಿದ ಕಾಲದಲ್ಲಿ ಸಂಯುಕ್ತ ಪ್ರಾಂತ್ಯದ ಮುಖ್ಯ ಮಂತ್ರಿಗಳಾಗಿದ್ದ—ಹಿಂದೀ ಸಾಹಿತ್ಯ ಪ್ರಪಂಚದಲ್ಲಿ ಕವಿಗಳೆಂದೂ ಕತೆಗಾರರೆಂದೂ ಖ್ಯಾತನಾಮರಾದ—ಪಂಡಿತ ಗೋವಿಂದ ವಲ್ಲಭ ಪಂತರ ಕತೆಯೊಂದರ ಅನುವಾದವಿದು. —ಅನುವಾದಕ.

ತನ್ನ ಸೌಂದರ್ಯದಿಂದ ಜಗತ್ತನ್ನೇ ಸೋಲಿಸುವ ವಾಸವದತ್ತೆ ಆ ಭಿಕ್ಷುವಿನ ಮುಂದೆ ಸೋತಳು; ಅವನ ಸೌಂದರ್ಯಕ್ಕೆ ಮುಗ್ಧಳಾದಳು. ಅವಳ ಸೀರೆಯ ಸೆರಗು ಜಾರಿ ಬಿತ್ತು; ಮುಡಿ ಶಿಥಿಲವಾಯಿತು; ಅದರಲ್ಲಿದ್ದ ಹೂವಿನ ರಾಶಿ ನೆಲಕ್ಕೆ ಬಿತ್ತು!

ಅವಳು ಉಪಗುಪ್ತನ ಸನಿಯಕ್ಕೆ ಬಂದು ಹೇಳಿದಳು: 'ಭಿಕ್ಷು, ಭಿಕ್ಷಾಪಾತ್ರೆಯನ್ನು ಮುಂದೆಮಾಡು!'

ಭಿಕ್ಷಾಪಾತ್ರೆಯನ್ನು ಮುಂದುಮಾಡಿ, ಪರಾತ್ ಉಪಗುಪ್ತನು ಆಶ್ಚರ್ಯದಿಂದ ಕೇಳಿದನು: 'ಆದರೆ ನಿನ್ನೆರಡು ಕೈಗಳೂ ಬರಿಯವಾಗಿವೆ, ಇವು ನನಗೇನನ್ನು ಕೊಡಬಲ್ಲವು?'

ವಾಸವದತ್ತೆ:— ಇವು ನಿನಗೆ ಈ ಜಗತ್ತಿನಲ್ಲಿ ಬೇರಾರಿಗೂ ಸಿಕ್ಕದ ಮತ್ತು ಇದುವರೆಗೆ ಯಾರಿಗೂ ಕೊಡದ ವಸ್ತುವನ್ನು ಕೊಡುವುವು!

ಉಪಗುಪ್ತ:— ಎಂದರೆ?

ವಾಸವದತ್ತೆ:— ಈ ಕೈಗಳು ಬರಿಯವಾಗಿಲ್ಲ!

ಉ:— ಈ ಸ್ವರ್ಣಾಲಂಕಾರಗಳನ್ನು ನಾನೇನುಮಾಡಲಿ?

ವಾ:— ನಾನು ಈ ಒಡವೆಗಳ ವಿಷಯ ಹೇಳುವುದಿಲ್ಲ. ಅಬೋಧ ಯುವಕನೆ! ಈ ಕೈಗಳು ಬರಿಯವಲ್ಲ. ಇವು ಪ್ರೇಮದ ಆಲಿಂಗನದಿಂದ ಪರಿಪೂರ್ಣವಾಗಿವೆ. ನಾನು ಅದೇ ಆಲಿಂಗನವನ್ನು ನಿನಗೀಯುವೆನು. ಭಿಕ್ಷು, ಕಲ್ಪನೆ ಮಾಡು! ಯಾವ ವಾಸವದತ್ತೆಯ ನೆರಳನ್ನು ಮುಟ್ಟುವುದಕ್ಕಾಗಿ ದೊಡ್ಡ ದೊಡ್ಡ ರಾಜ-ರಾಜೇಶ್ವರರು ವ್ಯಾಕುಲರಾಗುವರೊ, ಅವಳು ನಿನಗೆ ಪ್ರೇಮದ ಆಲಿಂಗನವನ್ನು ಕೊಡುವಳು!

ಉಪಗುಪ್ತನ ಮೊಗದ ಭಾವನೆಯಲ್ಲಿ ಸ್ವಲ್ಪವೂ ಪರಿವರ್ತನೆಯಾಗಲಿಲ್ಲ. ವಾಸವದತ್ತೆ ಮತ್ತೆ ಹೇಳಿದಳು:— 'ಭಿಕ್ಷಾಪಾತ್ರೆಯನ್ನು ಮುಂದೆ ನೀಡು. ನಾನು ನನ್ನ ಹೃದಯವನ್ನು ಭಿಕ್ಷೆಯಾಗಿ ಕೊಡುವೆನು!'

ಉಪಗುಪ್ತನು ಕೇಳಿದನು: 'ಇದರ ಅರ್ಥ?'

ವಾಸವದತ್ತೆ:— ಇದೇ ಅರ್ಥ, ನಿನ್ನ ಈ ಸುಕುಮಾರ ದೇಹವು ತಿರುಪೆಗೆ ಹೇಳಿಸಿದ್ದಲ್ಲ. ಈ ಅನುಪಮ ಸೌಂದರ್ಯ-ಸುಮನವು ಜಗತ್ತಿಗೆ ಬಹು ದೂರದ ವನಮಾರ್ಗದಲ್ಲಿ ಬಾಡಿ

ಹೋಗಲಿಕ್ಕಿಲ್ಲ. ಭಿಕ್ಷುವೆ, ಬಾ, ನನ್ನ ಮನೆಯೊಳಕ್ಕೆ ಬಾ! ನಾನು, ಜಗತ್ತಿನ ಒಡತಿ, ನಿನ್ನ ದಾಸಿಯಾಗುವೆನು!

ವಾಸನಾರಹಿತವಾದ ಉಪಗುಪ್ತನ ಮೊಗದಲ್ಲಿ ನಗುವಿನ ಒಂದು ಕ್ಷೀಣರೇಷೆ ಹರಿದುಹೋಯಿತು; ಅವನು ಸುಮ್ಮಗಿದ್ದನು.

ವಾಸವದತ್ತೆ ವ್ಯಾಕುಲಸ್ವರದಿಂದ ಹೇಳಿದಳು:— 'ಭಿಕ್ಷು, ಉತ್ತರ ಕೊಡು!' ಉಪಗುಪ್ತನು ಉತ್ತರವಿತ್ತನು: 'ಹಲವು ಕಾರಣಗಳಿಂದ ಈಗ ಸಮಯವಿಲ್ಲ!'

ವಾಸವದತ್ತೆ:— ಹಾಗಾದರೆ ಎಂದು?

"ಇನ್ನು ಕೆಲವು ದಿನಗಳ ಮೇಲೆ ಬರುವೆನು."

"ಕೆಲವು ದಿನಗಳ ಮೇಲೆ ಬರುವೆನ್ನು," ವಾಸವದತ್ತೆ ಮನಸ್ಸಿನೊಳಗೆ ಯೋಚಿಸತೊಡಗಿದಳು: "ರಮಣಿಯ ರೂಪಕ್ಕೆ ಇಷ್ಟು ಅವಮಾನವೆ? ಒಬ್ಬ ಸಾಮಾನ್ಯ ಭಿಕ್ಷುವು ಇದನ್ನು ತಿರಸ್ಕರಿಸಿ ಬಿಟ್ಟನೇ? ನೋಡೋಣ! ಆ ದಿನದ ವರೆಗೆ ಕಾಯುವೆನು!"

ಉಪಗುಪ್ತನು ವೇಗವೇಗವಾಗಿ ಸಂಘದ ಕಡೆಗೆ ನಡೆದನು. ವಾಸವದತ್ತೆ ಭಂಗಾರದ ಗೊಂಬೆಯಂತೆ ನಿಶ್ಚಲಳಾಗಿ ನಿಂತು ನೋಡುತ್ತಾ ಇದ್ದಳು.

೨

ತನ್ನ ಸಣ್ಣ ಜೀವನದ ಒಂದು ಮಿಂಚನ್ನು ತೋರಿಸಿ ಸಂಧ್ಯಾ-ಕಾಮಿನಿಯು ತೀವ್ರಗತಿಯಿಂದ ಹೊರಟು ಹೋದಳು. ಶರತ್ಕಾಲದ ಶುಭ್ರಾಕಾಶದ ಪೂರ್ವದಿಕ್ಕಿನಲ್ಲಿ ಉದಯಕ್ಕೆ ಬರುತ್ತಿದ್ದ ಚಂದ್ರಮನ ಕಿರಣಗಳು ಅತ್ಯುಜ್ವಲ ಬೆಳುದಿಂಗಳನ್ನು ಚೆಲ್ಲುತ್ತಿದ್ದುವು!

ದಟ್ಟವಾದ ಕಾಡೊಂದರ ಅಂಚಿನಲ್ಲಿ ಗಂಗೆಯು ಹರಿಯುತ್ತಿದ್ದಳು. ದಿನವಿಡಿ ಭಿಕ್ಷಾಟನೆ ಮಾಡಿ ಆಯಾಸಗೊಂಡ ಉಪಗುಪ್ತನು ಆ ವನಮಾರ್ಗವಾಗಿ ತನ್ನ ಮಠಕ್ಕೆ ಹಿಂದಿರುಗುತ್ತಿದ್ದನು.

ಆ ಭಯಂಕರ ಕ್ರೂರ ಸಿಂಹದ ಮೇಲೆ ಭಗವಾನ್ ಬುದ್ಧನ ಕರುಣೋಪದೇಶದ ಪರಿಣಾಮ ಎಳ್ಳಷ್ಟೂ ಆಗಿರಲಿಲ್ಲ, ಅದರ ರಾಕ್ಷಸೀಪ್ರವೃತ್ತಿಯಲ್ಲಿ ಬದಲಾವಣೆಯಾಗಲಿಲ್ಲ. ಉಪಗುಪ್ತನು ಬರುವುದನ್ನು ನೋಡಿ ಅವನ ಮೇಲೆ ಹಾರುವುದಕ್ಕೆ ಅನುವಾಯಿತು. ಇದನ್ನು ನೋಡಿ ಭಿಕ್ಷುವು ತಲೆ ತಗ್ಗಿಸಿದನು.

ಒಂದು ಕಡೆ ಸಿಂಹವು ಉಪಗುಪ್ತನನ್ನು ತಿನ್ನಲನುವಾಗಿದೆ; ಇನ್ನೊಂದೆಡೆ ಉಪಗುಪ್ತನು ಸಿಂಹಕ್ಕೆ ಭೋಜನವಾಗಿ ನಿಂತಿದ್ದಾನೆ!

ಹತ್ತಿರದಲ್ಲೇ ದಟ್ಟವಾದ ಒಂದು ಪೊದರು, ಪೊದರಿನ ನಡುವೆ ಒಂದು ತೂತು. ವಸಂತಕಾಲದಲ್ಲಿ ಕೂಡಾ ಎಲೆಗಳಿಗೆ ಆ ಛಿದ್ರವನ್ನು ತುಂಬಲಾಗುತ್ತಿರಲಿಲ್ಲ. ಆ ತೂತಿನ ಮೂಲಕ ಒಬ್ಬ ಬೇಡನು ಈ ದೃಶ್ಯವನ್ನು ನೋಡಿದನು; ಅವನು ಕೂಡಲೆ ಬಿಲ್ಲಿಗೆ ಬಾಣವನ್ನೇರಿಸಿ ಸಿಂಹಕ್ಕೆ ಗುರಿಯಿಟ್ಟು ಹೊಡೆದು, ಅದನ್ನು ಭೂಮಿಯ ಮೇಲೆ ಒರಗಿಸಿದನು.

ಚಕಿತನಾಗಿ ಉಪಗುಪ್ತನು ನಾಲ್ದೆಸೆಗಳನ್ನೂ ನೋಡಿದನು. ತನ್ನ ಕಾರ್ಯದಲ್ಲಿ ಸಫಲತೆ ಹೊಂದಿದುದಕ್ಕೆ ನಗುತ್ತಿದ್ದ ಬೇಡನು ಅವನ ಕಡೆಗೆ ಬರುತ್ತಿದ್ದನು.

ದುಃಖಭರಿತ ಶಬ್ದಗಳಿಂದ ಭಿಕ್ಷುವು ಹೇಳಿದನು: "ಅಯ್ಯಾ! ಇದೇನು ಮಾಡಿಬಿಟ್ಟೆ? ಈ ಸಿಂಹವು ನಿನಗೇನು ಮಾಡಿತ್ತು? ಅಕಾರಣವಾಗಿ ನಿರಪರಾಧಿಯ ಹತ್ಯೆಯನ್ನೇಕೆ ಮಾಡಿದೆ?"

ವ್ಯಾಧನು ಮನಸ್ಸಿನಲ್ಲೆಣಿಸಿದನು: "ಸಿಂಹವು ನಿರಪರಾಧಿಯೆ?"

ತನ್ನ ದಯಾಹೀನ ಕಠೋರ ಜೀವನದಲ್ಲಿ ವ್ಯಾಧನು ಕರುಣಾದೇವಿಯ ದರ್ಶನ ಮಾಡಿದುದು ಇದೇ ಮೊದಲ ಬಾರಿ. ಅವನು ಚಿತ್ರಾಂಕಿತ ಗೊಂಬೆಯಂತೆ ಸ್ವಲ್ಪ ಹೊತ್ತು ನಿಂತುಬಿಟ್ಟನು. ಉಪಗುಪ್ತನು ತನ್ನ ಕರುಣಾಪೂರಿತ ದೃಷ್ಟಿಯನ್ನು ಅವನ ಕಡೆಗೆ ಹೊರಳಿಸಿದನು. ಕಣ್ಣುಗಳು ನೋಡಿದುವು; ಹೃದಯವು ಹೃದಯದ ಸಂದೇಶವನ್ನು ಅರಿತುಕೊಂಡಿತು.

ಬೇಡನ ಎರಡೂ ಕೈಗಳು ಅಲುಗಾಡಿದುವು. ಅವನು ಬಾಣವನ್ನು ಗಂಗೆಯ ವಕ್ಷಕ್ಕೆ ಎಸೆದನು— ಅವನ ನಿರ್ದಯತೆ ನದಿಯಲ್ಲಿ ಮುಳುಗಿಹೋಯಿತು. ತನ್ನ ಬಲಿಷ್ಠ ಕೈಗಳಿಂದ ಬಿಲ್ಲನ್ನು ಎರಡು ತುಂಡುಮಾಡಿ ನೆಲಕ್ಕೊಗೆದನು— ಅವನ ಕಠೋರತೆಯು ಅಂತಿಮಶ್ವಾಸ ಬಿಡತೊಡಗಿತು. ಬಳಿಕ ಬೇಡನು ಭಿಕ್ಷುವಿನ ಪಾದಗಳಿಗೆ ಅಡ್ಡಬಿದ್ದು ಎಂದನು: 'ದೇವಾ! ಇದು ನನ್ನ ಕೊನೆಯ ಹತ್ಯೆ!'

ಉಪಗುಪ್ತನು ಪ್ರಸನ್ನಮುಖದಿಂದ ಆಶೀರ್ವಾದವಿತ್ತನು. ಬೇಡನು ತನ್ನ ಹೊಸಜಗತ್ತಿನಲ್ಲಿ ಕಾಲಿಟ್ಟನು. ಕರುಣೆಯೆ ಅವನ ಪಥಪ್ರದರ್ಶಿಕೆಯಾಯಿತು.

ದಯಾರ್ದ್ರ ಉಪಗುಪ್ತನು ಸಿಂಹವನ್ನು ನೋಡಿದನು. ಬಾಣವು ಎದೆಯಲ್ಲಿ ಒಳತನಕ ನೆಟ್ಟಿತ್ತು. ಭಿಕ್ಷುವು ಅದನ್ನು ಕಷ್ಟಪಟ್ಟು ಗಂಗೆಯ ಕರೆಗೆ ತೆಗೆದುಕೊಂಡುಹೋಗಿ, ಅದರ ಗಾಯ ತೊಳೆಯತೊಡಗಿದನು.

ಗಂಗೆಯ ಚಂಚಲಹೃದಯದಲ್ಲಿ ದಶದಿಕ್ಕುಗಳಿಗೂ ಗಾನಸುಧೆಯನ್ನು ಸುರಿಸುತ್ತಾ ಒಂದು ನಾವೆ ಹೋಗುತ್ತಿತ್ತು. ಶರತ್ಕಾಲದ ನಿರ್ಮಲ ಬೆಳ್ದಿಂಗಳು ಹಿಟ್ಟುಚೆಲ್ಲಿದಂತೆ ಹಬ್ಬಿತ್ತು. ವನಪ್ರಾಂತ್ಯವೂ ಗಂಗೆಯೂ ಅಪೂರ್ವ ಶೋಭಾಮಯವಾಗಿ ತೋರುತ್ತಿದ್ದುವು.

ಉಪಗುಪ್ತನು ತನ್ನ ಕೆಲಸಮಾಡುತ್ತಿದ್ದನು. ಸಿಂಹದ ಉಳಿವಿನ ಆಶೆ ಇರಲಿಲ್ಲ. ಆದರೂ ಭಿಕ್ಷುವು ದತ್ತಚಿತ್ತನಾಗಿ ಕೆಲಸಮಾಡುತ್ತಿದ್ದನು.

ನಾವೆ ಅದೇ ಕಡೆಗೆ ಬರತೊಡಗಿತು; ಹಾಡಿನ ಸ್ವರ ಉಪಗುಪ್ತನಿಗೆ ಸ್ಪಷ್ಟತರವಾಗಿ ಕೇಳಿಸುತ್ತಿತು. ಅವನು ನೋಡಿದನು,

ಬೇರಾರೂ ಅಲ್ಲ; ಅವಳೇ— ಮು ಕ್ತ ಕುಂ ಠ ಳಿ ಯಾ ದ ವಾಸವದತ್ತೆ— ಹಾಡುತ್ತಿದ್ದ ಳು.

ಭಿಕ್ಷುವು ಸಿಂಹದ ಎದೆಯ ಬಾಣವನ್ನೆಳೆಯಲು ಕೈಚಾಚಿದನು. ಥಕ್ಕನೆ ಹಾಡುನಿಂತಿತು. ದೋಣಿ ಭಿಕ್ಷುವಿನ ಸಮೀಪಕ್ಕೆ ಬರಹತ್ತಿತು.

ದೋಣಿಯಿಂದ ವಾಸವದತ್ತೆ ಚಕಿತಳಾಗಿ ಕೂಗಿದಳು. "ಭಿಕ್ಷು, ಇದೇನು ಮಾಡುತ್ತಿರುವೆ? ಜೀವ ಬಂದ ಮೇಲೆ ಈ ಹಿಂಸ್ರಪಶುವಿಗೆ ಪ್ರಾಣಘಾತನ ಗುರುತುಹತ್ತದೆಂದು ನಿನಗರಿಯದೆ? ಇದು ನಿನ್ನ ಸರ್ವನಾಶ ಮಾಡಿಬಿಡುವುದು!"

ಉಪಗುಪ್ತನು ಹೇಳಿದನು: "ರಮಣಿ, ನಿನ್ನದು ತಪ್ಪು ಗ್ರಹಿಕೆ! ಇದು ಬಾಹ್ಯಸುಂದರ ಹಿಂಸ್ರಪಶುಗಳಿಗಿಂತ ಕ್ರೂರವಲ್ಲ. ಯಾವ ಸುಂದರರೂಪದ ಹಿಂದೆ ಅಡ್ಡದಿಂದ ಮನುಷ್ಯನ ಶತ್ರು ಕಾಮನು ಮನುಷ್ಯನನ್ನು ಕೊಲ್ಲಲು ಕಿವಿಯವರೆಗೆ ಹದೆಯೇರಿಸಿ ನಿಂತಿರುವನೋ, ಅದರಷ್ಟು ಭಯಂಕರವಲ್ಲ. ತನ್ನ ಬಂಧನದಿಂದ ಮನುಷ್ಯನನ್ನು ಕೈದಿಯಾಗಿರಿಸಿಕೊಂಡಿರುವ ಆ ಸುಂದರ ಮೋಹಕ್ಕಿಂತ ಹೆಚ್ಚು ಭಯಾನಕವಲ್ಲ. ಕೈಯಲ್ಲಿ ಸ್ವರ್ಣಮುಕುಟವನ್ನು ಹಿಡಿದುಕೊಂಡು ನೆರಳಿನಂತೆ ನಿಸ್ಸಾರವಾಗಿರುವ ಲೋಭಲಾಲಸೆಯಷ್ಟು ಭೀಷಣವಲ್ಲ!"

ವಾಸವದತ್ತೆಗೆ ಇದರ ಅರ್ಥವಾಗಲೆ ಇಲ್ಲ. ಪ್ರೇಮದಿಂದ ಅಧೀರಳಾಗಿ ಅವಳೆಂದಳು: 'ಭಿಕ್ಷು, ನಾನು ನಿನ್ನನ್ನು ಕಾದುಕಾದು ಬೇಸತ್ತೆನು. ನೀನು ಬರಲೇಇಲ್ಲ. ಮರೆತುಬಿಟ್ಟೆಯೇನು?'

ಉಪಗುಪ್ತ:— ಇಲ್ಲ! ಮರೆತಿಲ್ಲ. ಆದರೆ ಕೆಲವು ದಿನಗಳ ಮೇಲೆ ಬರುವೆನು.

ವಾ:— ಇಂದೆಯೆ ನಡೆ ಭಿಕ್ಷು! ಇದಕ್ಕಿಂತ ಹೆಚ್ಚು ಸುಂದರ ಅವಸರ ಇನ್ನೆಂದು ದೊರೆತೀತು? ನೀನು ಈ ಚಂದ್ರಮನನ್ನು ನೋಡು; ಜಗತ್ತನು ಬೆಳಗಿಸುತ್ತಿರುವನು. ನನ್ನ ಮನೆಯ ಅಂಧಕಾರವನ್ನು ನೀನು ದೂರಮಾಡು!

'ನಿಲ್ಲು' ಎಂದು ಹೇಳಿ ಭಿಕ್ಷುವು ಬಾಣವನ್ನೆಳೆಯತೊಡಗಿದನು. ವಾಸವದತ್ತೆ ಹೇಳಿದಳು: "ನೀನು ನಿನ್ನ ಸೌಂದರ್ಯಶರದಿಂದ ನನ್ನನ್ನು ಗಾಯಗೊಳಿಸಿದ್ದೀಯೆ. ಮೊದಲು ನನಗೆ ಪ್ರಾಣದಾನಮಾಡು!"

ಉಪ:— ಧೈರ್ಯವನ್ನವಲಂಬಿಸು ಸುಂದರಿ! ನಾನು ಅವಶ್ಯವಾಗಿಯೂ ಬರುವೆನು.

ವಾ:— ಎಂದು? ನಿನ್ನನ್ನು ಕಾದು ಕಾದು ನನ್ನ ಕಣ್ಣಿನ ಬೆಳಕು ಹೊರಟುಹೋದ ಮೇಲೋ? ದಿನ ಕಳೆದಂತೆ ನನ್ನ ಯೌವನವನ್ನು ಸಮಯವು ಸೆಳೆದುಕೊಂಡಾಗಲೋ?

ಅವಳ ಕಡೆಗೆ ನೋಡಿ, ಉಪಗುಪ್ತನು ಯೋಚಿಸಿದನು: "ಇಷ್ಟು ತಿಳಿದೂ ತಿಳಿದೂ, ಹೊಂಡದಲ್ಲಿ ಬೀಳುವುದೆ?"

ವಾಸವದತ್ತೆ ಮತ್ತೆ ಕೇಳಿದಳು: 'ಮತ್ತೆಯಾವಾಗ?'

ಉಪ:— ಇದೇ ಜೀವನದಲ್ಲಿ!

ವಾ:— ಇದೇ ಜೀವನದಲ್ಲಿ? ಇದು ಬಹಳ ದೊಡ್ಡ ಅವಧಿಯಾಯಿತು!

ಉ:— ಹಾಗಾದರೆ?

ವಾ:— ಇದೇ ಕ್ಷಣವೆಂದು ಹೇಳು!

ಉ:— ಇಲ್ಲ!

ವಾ:— ಇದೇ ತಿಂಗಳು?

ಉ:— ಇದೇ ವರ್ಷ ಬರುವೆ; ಸತ್ಯವೆಂದು ತಿಳಿ!

ವಾ:— ನಾನು ನನ್ನ ಬೆರಳುಗಳಿಂದ ದಿನಗಳನ್ನೂ, ಶ್ವಾಸದಿಂದ ಕ್ಷಣಗಳನ್ನೂ ಎಣಿಸುತ್ತಿರುವೆನು.

ವಾಸವದತ್ತೆ ಹೊರಟುಹೋದಳು. ಉಪಗುಪ್ತನು ತನ್ನ ಕಾರ್ಯದಲ್ಲಿ ಪ್ರವೃತ್ತನಾದನು.

ಶರತ್ಕಾಲ ಹೋಯಿತು, ಹೇಮಂತ ಹೋಯಿತು, ಶಿಶಿರ ಹೋಯಿತು, ಆದರೆ ಉಪಗುಪ್ತನು ಬರಲಿಲ್ಲ. ವಾಸವದತ್ತೆ ಎಷ್ಟೋಸಲ ಅಶ್ರುಗಳನ್ನು ತುಂಬಿಕೊಂಡು ಪ್ರತೀಕ್ಷೆಮಾಡಿದಳು, ಅವನು ಬರಲಿಲ್ಲ. ಅವಳು ಹಲವು ಸಲ ತನ್ನನ್ನು ಸಿಂಗಾರ ಮಾಡಿಕೊಂಡಳು; ಆದರೆ ಅವನ ಸುಳಿವಿಲ್ಲ.

ಸುಮನ, ಸುಗಂಧ, ಸಂಜೀವನಗಳನ್ನು ಹೊತ್ತುಕೊಂಡು ವಸಂತಋತುವೂ ಬಂತು; ಆದರೂ ಅವನು ಬರಲಿಲ್ಲ. ನೋಡನೋಡುತ್ತ ಅವಧಿಯು ಕಳೆಯುತ್ತ ಬಂತು. ಆದರೆ ಉಪಗುಪ್ತನಿಲ್ಲ. ವಾಸವದತ್ತೆ ಅವನ ದಾರಿನೋಡುತ್ತ ನಿಲ್ಲುವಳು. ಎಲ್ಲರೂ ಬಂದರು, ಉಪಗುಪ್ತನೊಬ್ಬನೇ ಬರಲಿಲ್ಲ.

ಅವಧಿ ಕಳೆಯಲು ಎರಡು ತಿಂಗಳು ಉಳಿಯಿತು— ಇನ್ನು ಒಂದೇ ತಿಂಗಳು. ಈ ಸಂಸಾರ-ಛತ್ರದಲ್ಲಿ ಉಳಿದುಕೊಂಡಿದ್ದ 'ವರ್ಷ'ನೆಂಬ ದಾರಿಹೋಕನು ಹೊರಡುವ ಸಿದ್ಧತೆ ಮಾಡತೊಡಗಿದನು. ಅವನು ಶಿಶಿರದ ಕಂಬಳಿಯನ್ನು ಹೆಗಲಲ್ಲಿ ಹಾಕಿಕೊಂಡಿದ್ದನು, ಹೇಮಂತದ ಹಾಸಿಗೆಯನ್ನು ಕಟ್ಟಿಟ್ಟಿದ್ದನು, ವಸಂತದ ಪುಷ್ಪವಸ್ತ್ರವನ್ನು ಸಜ್ಜುಗೊಳಿಸಿದ್ದನು; ಗ್ರೀಷ್ಮದ ಕೊಡೆ ಕೈಯಲ್ಲಿ, ಮೆಟ್ಟು ಕಾಲಲ್ಲಿ ಧರಿಸಿಕೊಂಡಿದ್ದನು. ವರ್ಷಾಕಾಲದ ಬರಿಯ ಚಂಬು ಮತ್ತು ಹಗ್ಗವನ್ನು ತೆಗೆದುಕೊಂಡಿದ್ದನು. ಅವನು ತನ್ನ ಕಟ್ಟಕಡೆಯ ವಸ್ತು ಶರತ್ಕಾಲದ ಬೆಳುದಿಂಗಳನ್ನು ತೆಗೆಯಲು ಕೈ ಮುಂದೆ ಮಾಡಿದಾಗ, ವಾಸವದತ್ತೆ ಏಕಲಳಾಗಿ ಹೇಳಿದಳು: "ನನ್ನ ಪ್ರಿಯತಮನು ನಿಜವಾಗಿಯೂ ಈ ವರ್ಷ ಬಾರನೇ?"

ರಾತ್ರಿಯ ಸಮಯ. ಸಮಸ್ತ ಸೃಷ್ಟಿ ಕತ್ತಲಲ್ಲಿ ಮುಳುಗಿತ್ತು. ವಾಸವದತ್ತೆಯ ಸೌಧವು ದೀಪಮಾಲೆಗಳಿಂದ ಬೆಳಗುತ್ತಿತ್ತು. ವಾಸವದತ್ತೆಯ ಮುಖಚಂದ್ರನ ಸುತ್ತಲೂ, ಎಣೆಯೆ ಇಲ್ಲದಷ್ಟು ದೀಪಗಳು ನಕ್ಷತ್ರಮಾಲೆಗಳಂತೆ ತೋರುತ್ತಿದ್ದುವು.

ಆ ದಿನ ಮಾನವವಕ್ತ್ರನಲ್ಲಿ [illegible]— [illegible] [illegible] ಲಕ್ಷ್ಮಣ [illegible] [illegible]ವಾಗಿ, [illegible] [illegible] [illegible] [illegible] [illegible] [illegible]. [illegible] [illegible] ಲಕ್ಷ್ಮಣನು [illegible] [illegible] ಮಾಡಿದ್ದನು.

[illegible] [illegible] [illegible] [illegible] [illegible] [illegible] [illegible] [illegible]. [illegible] [illegible] [illegible] [illegible] [illegible], '[illegible] ಲಕ್ಷ್ಮಣ, ಮಾನವವಕ್ತ್ರ [illegible] [illegible]. ಅಲ್ಲ, ಅಲ್ಲ, [illegible] [illegible] [illegible]. [illegible] [illegible] ?' [illegible] ಮಾನವವಕ್ತ್ರನು [illegible].

[illegible] [illegible] [illegible] [illegible], ಮಾನವವಕ್ತ್ರ [illegible] [illegible] [illegible] ಒಂದು [illegible] [illegible]. ರಾತ್ರಿಯ [illegible] [illegible] [illegible] [illegible] [illegible] ? [illegible] [illegible] [illegible] [illegible] [illegible] ?

[illegible] ಈ [illegible] [illegible] [illegible] [illegible]. [illegible] [illegible] [illegible] [illegible]. [illegible] 'ಲಕ್ಷ್ಮಣ ! [illegible] [illegible]. [illegible] [illegible] !' ಎಂದು [illegible] [illegible], ಈ [illegible] [illegible] [illegible] [illegible] ? [illegible] [illegible] ಲಕ್ಷ್ಮಣನು [illegible] [illegible] [illegible] ಲಕ್ಷ್ಮಣನು [illegible] [illegible]. [illegible] [illegible] [illegible]: "[illegible], [illegible], [illegible] !"

[illegible] [illegible]— [illegible] [illegible]— [illegible] [illegible] [illegible] [illegible]. [illegible] [illegible] [illegible] [illegible] : 'ಮಾನವವಕ್ತ್ರ !'

ಮಾನವವಕ್ತ್ರ [illegible] [illegible] [illegible] [illegible] [illegible] : '[illegible]' [illegible]— [illegible] [illegible] [illegible]. [illegible] [illegible] [illegible] : "[illegible] [illegible] ?"

[illegible]:— [illegible], [illegible] [illegible] [illegible] !

ಮಾ:— [illegible] ಈ [illegible] [illegible] [illegible] ?

[illegible]:— [illegible] [illegible] [illegible] [illegible] ([illegible]) [illegible] [illegible] [illegible] [illegible] [illegible]. [illegible] [illegible] [illegible] [illegible] [illegible] ಬಂದೆ !

ಮಾ:— [illegible] [illegible] !

[illegible]:— [illegible] [illegible] [illegible] [illegible] [illegible]. [illegible] [illegible] [illegible]. [illegible] ಒಂದು [illegible] [illegible].

ಮಾ:— ಸ್ವಲ್ಪ. ನಿನಗೆ ಪ್ರಶ್ನೆ [illegible] ?

ಅಜ:— ಹಾಂ !

ಮಾ:— ಹಿಂದೆ ಈ ಪರ್ವತದೊಳಗೆ ಬರುವ ಮೊದಲ [illegible] ?

ಅಜ:— [illegible] [illegible] [illegible] [illegible] ?

ಮಾ:— [illegible] [illegible] ಮಾತ್ರ !

ಅಜ:— [illegible] [illegible] [illegible] ಬರುವೆ !

ಮಾ:— [illegible] [illegible]. [illegible] [illegible]— [illegible] ಮಾಡುತ್ತಿರು.

ಅಜ:— [illegible] [illegible] ಒಂದು [illegible] [illegible]. [illegible] [illegible] [illegible].

[illegible] [illegible] [illegible]. ಮಾನವವಕ್ತ್ರ [illegible] [illegible] [illegible].

ಮಾನವವಕ್ತ್ರನು [illegible] [illegible]. [illegible] [illegible] [illegible] [illegible], [illegible] [illegible] [illegible] [illegible]; [illegible] [illegible] [illegible] [illegible] [illegible] [illegible] [illegible]. [illegible] [illegible] ? [illegible]. [illegible] [illegible] [illegible]. [illegible] [illegible]. [illegible] [illegible], [illegible] [illegible] [illegible] [illegible].

ಈ [illegible] [illegible] [illegible], [illegible] ಮಾನವವಕ್ತ್ರ [illegible] : "[illegible] ಒಂದು [illegible] [illegible] [illegible]; ಈ [illegible] [illegible] [illegible] [illegible] [illegible] [illegible] [illegible] !"

[illegible] [illegible] [illegible] [illegible]. [illegible] [illegible] [illegible] [illegible] [illegible] [illegible] ! [illegible] [illegible], [illegible] ಮಾನವ [illegible] [illegible] [illegible] [illegible] [illegible].

[illegible] [illegible] [illegible]. [illegible] [illegible] [illegible]. [illegible] [illegible] [illegible] [illegible] [illegible]. [illegible] [illegible] [illegible] [illegible] [illegible]. [illegible] [illegible]

[illegible] [illegible] [illegible] [illegible] [illegible] [illegible] [illegible] [illegible], [illegible] [illegible] [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible]

ಹಿಂದೂ ಮತಾಚಾರ್ಯರಲ್ಲಿ ಬಸವಣ್ಣನವರ ವೈಶಿಷ್ಟ್ಯ

(ಚರ್ಚೆಗಳ ವಿಮರ್ಶೆ)

★

ಶ್ರೀ. ಸಿ. ಬಿ. ಚೆಲ್ಲದ, ಇಟಗಿ

★

ಶ್ರೀಬಸವಣ್ಣನವರ ಮಹಾಕಾರ್ಯವೆಂತಹದೆಂಬುದಕ್ಕೆ ಯಾರೂ ಯಾವಬಗೆಯ ಸಂದೇಹವನ್ನೂ ಪಟ್ಟುಕೊಳ್ಳುವ ಕಾರಣವಿಲ್ಲ. ವೇದಕಾಲದನಂತರ, ಕಾಲಕ್ರಮದಿಂದ ಹಿಂದೂಧರ್ಮದಲ್ಲಿ ಸೇರಿಬಂದ ದೋಷಗಳನ್ನು ಹೋಗಲಾಡಿಸಿ, ಸಂಸ್ಕರಿಸಿ, ಅದಕ್ಕೆ ಪೂರ್ವದ ಉಜ್ವಲ ಸ್ವರೂಪ ತಂದುಕೊಡಲು ಮಾಡಿದ ಕ್ರಾಂತಿಪ್ರಯತ್ನವದು!

★

ಮಹಾಪುರುಷರ ಜೀವನಕಾರ್ಯಗಳು ಬಹುಮುಖವಾಗಿರುವುವು. ಅದರಿಂದ, ಇಂತಹ ಮಹಾಜೀವಿಗಳ ಕಾರ್ಯಕಲಾಪಗಳ ಮೇಲಿಂದ ಅವರ ಕರ್ತೃತ್ವವನ್ನಳೆದು, ಗುಣ-ದೋಷಗಳನ್ನು ವಿಮರ್ಶಿಸುವುದು ಅಷ್ಟೊಂದು ಸುಲಭವಲ್ಲ. ಬಹುತರವಾಗಿ ಇಂತಹ ಸಂದರ್ಭದಲ್ಲಿ ಆನೆಯನ್ನು ಪರೀಕ್ಷಿಸಿದ ಕುರುಡರಂತೆ ಇಂತಹರ ಜೀವನಕಾರ್ಯದ ಕೆಲವೊಂದು ಅಂಶವನ್ನು ಮಾತ್ರ ಅರ್ಥಮಾಡಿಕೊಂಡು ತಮ್ಮ ಮತವೇ ಸರಿಯೆಂದು ವಾದಿಸುವವರೇ ಹೆಚ್ಚುಜನರು. ಮಹಾನುಭಾವರಾದ ಬಸವಣ್ಣನವರ ವಿಷಯಕ್ಕೆ ಇಂತಹ ವಾದ-ವಿವಾದವೊಂದು ಇದೀಗ ' ಜಯಂತಿ '-ಯಲ್ಲಿ ಪ್ರತಿಧ್ವನಿತವಾಗುತ್ತಲಿದೆ.

ಶ್ರೀ. ' ಚಿಂತಾಮಣಿ 'ಯವರಿಗೆ, (ಜಯಂತಿ,ಮೇ) ಬಸವಣ್ಣನವರು ಸಮತಾವಾದದ (ಸೋಶಾಲಿಝಂ) ಪುರಸ್ಕರ್ತೃಗಳಾಗಿ ಕಂಡು ಬಂದರೆ, ಅವರ ವಿಧಾನವನ್ನು ಟೀಕಿಸಲು ಹೊರಟ ಶ್ರೀ. ಬಿ. ಎಸ್. ಎ. ರಾವರಿಗೆ (ಜಯಂತಿ, ಆಗಸ್ಟ್) ಅವರೊಬ್ಬ ಸಾಮಾನ್ಯ ಮತಸ್ಥಾಪಕರಾಗಿ ತೋರಿ ಬರುತ್ತಿದ್ದಾರೆ. ಇಷ್ಟೇ ಅಲ್ಲ, ಶ್ರೀ. 'ಚಿಂತಾಮಣಿ'ಯವರ ಲೇಖನದ ಖಂಡನದ ಭರದಲ್ಲಿ, ಶ್ರೀ. ರಾವ ಅವರ ಲೇಖನಿಯಿಂದ ' ವಿಮರ್ಶಕನು....ಬಸವಣ್ಣನವರ ಮಹಾತ್ಮ್ಯದ ಮುಂದೆ ಪ್ರಶ್ನಾರ್ಥಕ ಚಿಹ್ನೆಯೊಂದನ್ನು ಇಡದಿರಲಾರನು,' "........ಬಸವಣ್ಣನವರು ಇದ್ದ ಜಾತಿಗಳ ಪಟ್ಟಿಗೆ ಲಿಂಗವಂತರ ಜಾತಿಯೊಂದನ್ನು ಸೇರಿಸಿದ ಪುಣ್ಯಕೆಲಸವನ್ನು ಮಾಡಿದರು," ಮೊದಲಾದ ಮುಕ್ತಾಫಲಗಳು ಉದುರಿವೆ. ಬಸವಣ್ಣನವರ ಸ್ವರೂಪಜ್ಞಾನವನ್ನು ಮಾಡಿಕೊಡಲು ಹೊರಟ ಶ್ರೀ. ರಾವ ಅವರಿಂದ ಈ ಬಗೆಯಾಗಿ, ಬಸವಣ್ಣನವರ ನೈಜಸ್ವರೂಪಕ್ಕಿಂತ ಅವರ ವಿಕೃತರೂಪ ದರ್ಶನವೇ ಹೆಚ್ಚಿಗೆ ಆಗುವ ಸಂಭವವಿದ್ದುದರಿಂದ, ಈ ಲೇಖನದ ಮೂಲಕ ಬಸವಣ್ಣನವರ ನೈಜಸ್ವರೂಪದ ಮೇಲೆ ಪ್ರಕಾಶ ಬೀರಲು ಕೆಲಮಟ್ಟಿಗೆ ಯತ್ನಿಸಲಾಗಿದೆ.

ಬಸವಣ್ಣನವರ ಕಾರ್ಯದ ಮಹತ್ತ್ವವು ತಿಳಿಯಬೇಕಾದರೆ ಹಿಂದೂಧರ್ಮದ ಇತಿಹಾಸ ಹಾಗೂ ಆ ಆ ಕಾಲದ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯನ್ನು ಅರಿತುಕೊಳ್ಳುವುದು ಅವಶ್ಯವಿದ್ದುದರಿಂದ, ಮೊದಲು ಅವುಗಳ ಬಗೆಗೆ ಸ್ವಲ್ಪದರಲ್ಲಿ ವಿವೇಚಿಸಲಾಗಿದೆ.

ವೇದಕಾಲದಿಂದ ಇದುವರೆಗೆ ನಮ್ಮ ದೇಶದಲ್ಲಿ ಅನೇಕ ಮಹಾನುಭಾವರು ಜನಿಸಿ, ಭಾರತದ ಆಧ್ಯಾತ್ಮಿಕ ಜ್ಞಾನನಿಧಿಗಾಗಿ ತಮ್ಮ ಜೀವನವನ್ನು ಸವೆಯಿಸಿ ಸಂಪಾದಿಸಿದ ಜ್ಞಾನದ ಕಾಣಿಕೆಯನ್ನರ್ಪಿಸಿ, ಮಾನವ ಜನಾಂಗಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತ ಬಂದಿದ್ದಾರೆ—ವರ್ಣ-ಲಿಂಗಬೇಧಗಳಿಲ್ಲದೆ. ವೇದಕಾಲದಲ್ಲಿ ಈ ಜ್ಞಾನಾಮೃತವನ್ನು ಸೇವಿಸಲು ಎಲ್ಲ ತೃಷಾರ್ತರಿಗೂ ಮುಕ್ತದ್ವಾರವಿದ್ದಿತು. ಆದರೆ ಕಾಲಕ್ರಮೇಣ ಈ ಜ್ಞಾನನಿಧಿಯು, ಧರ್ಮಶಾಸಕರೆಂಬ ನೆಪದಿಂದ ಮೇಲಿನ ವರ್ಗದವರ ಸೊತ್ತಾಯಿತು (ಪೂರ್ವಕಾಲದಲ್ಲಿ ಸಮಾಜಶಾಸ್ತ್ರವು ಈಗಿನಂತೆ ಪ್ರತ್ಯೇಕವಾಗಿರದೆ, ಧರ್ಮಶಾಸ್ತ್ರದಲ್ಲಿಯೆ ಅಡಕವಾಗಿತ್ತು). ಬಲ್ಲಿದರಾದ ಕೆಲವು ಜನರು ಮಿಕ್ಕವರನ್ನೂ ತಮ್ಮಾಧೀನದಲ್ಲಿಟ್ಟುಕೊಳ್ಳಲು, ತಮ್ಮ ಪ್ರಾಧಿಮೆಯನ್ನು ಮೆರೆಯಿಸಿಕೊಳ್ಳಲು ಇದನ್ನು ತಮ್ಮ ಸಾಧನೆಯನ್ನಾಗಿ ಮಾರ್ಪಡಿಸಿಕೊಂಡರು. ಸ್ತ್ರೀಯರು, ಶೂದ್ರರು ಎಂದು ಬಹುಜನಸಮಾಜವು ತನ್ನ ಜ್ಞಾನಾರ್ಜನೆಯ ಅಧಿಕಾರದಿಂದ ವಂಚಿತವಾಗಿ, ಮೇಲುವರ್ಗದವರ ಊಳಿಗ ಮಾಡಬೇಕಾಯಿತು. ಅದರಂತೆ ಮಿಕ್ಕವರ್ಗದವರಿಗೂ ಅನೇಕ ನಿಬಂಧನೆಗಳು ಹಾಕಲ್ಪಟ್ಟುವು (ಆಗಿನ ಕಾಲಕ್ಕೆ ವೇದ-ಶಾಸ್ತ್ರಗಳ ಜೊತೆಗೆ ಇತರ ವಿದ್ಯೆಗಳನ್ನೂ ಕಲಿಸುತ್ತಿದ್ದರೆಂಬುದು ಗಮನಾರ್ಹವಾಗಿದೆ). ಹೀಗೆ

ಮೇಲುವರ್ಗದವರು ಧರ್ಮಶಾಸನದ ಅಧಿಕಾರವನ್ನು ತಮ್ಮ ವೈಯಕ್ತಿಕ ಸೊತ್ತನ್ನಾಗಿ ಮಾಡಿಕೊಂಡು, ತನ್ಮೂಲಕ ಸಾಮಾನ್ಯ ಜನರನ್ನು ತಮ್ಮಾಧೀನದಲ್ಲಿಟ್ಟುಕೊಂಡರು. ಈ ವರ್ಗದಲ್ಲಿಯ ಹಸಿ-ಬಿಸಿ ಪಂಡಿತರು ಅಹಂಮನ್ಯತೆಯಿಂದ ವಿಧಿಸಿದ ವಿಕಲ್ಪ ಧರ್ಮ ನಿಬಂಧನೆಗಳನ್ನು, ಅಜ್ಞಾನಾವಸ್ಥೆಯಲ್ಲಿಡಲ್ಪಟ್ಟ ಬಹುಜನ ಸಮಾಜವು ಸ್ವೀಕರಿಸಿ ತಮಗೆ ತಿಳಿದಂತೆ ಆಚರಿಸುತ್ತಾ ಬಂದದ್ದರಿಂದ, ಧರ್ಮದ ನೈಜಸ್ವರೂಪವು ಬದಲಾಗಿ ಯಜ್ಞಯಾಗಾದಿ ಬಾಹ್ಯಕರ್ಮಗಳಿಗೆ ಮಾತ್ರ ಅವಾಸ್ತವ ಮಹತ್ತ್ವವು ಪ್ರಾಪ್ತವಾಯಿತು. ಚಾತುರ್ವರ್ಣಗಳಲ್ಲಿ ಮೇಲು-ಕೀಳುಗಳೆಂಬ ಭಾವನೆಯು ಉದಯಿಸಿ ವರ್ಣಗಳಿಗೆ ಜಾತಿಯ ಸ್ವರೂಪವು ಬರತೊಡಗಿದ್ದರಿಂದ, ಆರ್ಯರ ಸರ್ವಾಂಗಸುಂದರವಾದ ಸಮಾಜ (ಧರ್ಮ) ಮಂದಿರವು ರೂಹುಗೆಟ್ಟಿತು.

ಹೀಗೆ ಅಜ್ಞಾನ-ದುರವಸ್ಥೆಗಳಿಗೊಳಗಾಗಿ ಪರಿತಪಿಸುತ್ತಿದ್ದ ಜನಸಾಮಾನ್ಯರನ್ನು ಕಂಡು ಮನಗರಗಿ, ಅವರ ಉದ್ಧಾರಕ್ಕಾಗಿ ಕೈನೀಡಿದವನು ಮಹಾತ್ಮಾ ಗೌತಮನು. ಈ ಕಾಲದಲ್ಲಿ ತಾನು ನಿಂತ ಸಮಾಜಮಂದಿರದ ಅಡಿಗಲ್ಲೇ ಅಲ್ಲಾಡಹತ್ತಿದ್ದರಿಂದ, ಅವನ ದೃಷ್ಟಿಯು ತನ್ನ ಪೂರ್ವದ ದಾರ್ಶನಿಕರಂತೆ ಕೇವಲ ಊರ್ಧ್ವಗಾಮಿಯಾಗದೆ ಅಧೋಮುಖವಾಗಬೇಕಾಯಿತು. ಗೌತಮನು ತನ್ನ ಅಮೃತಮಯ ಹಸ್ತದಿಂದ, ಪತಿತಜನತೆಯನ್ನು ಮೈದಡವಿ ಎಬ್ಬಿಸಿ, ಸಮಾಜದಲ್ಲಿ ಅವರಿಗೆ ಸಮಾನಸ್ಥಾನವನ್ನು ಕಲ್ಪಿಸಿಕೊಟ್ಟು, ಮಾನವತಾವಾದದ ಆದ್ಯ ಪುರಸ್ಕರ್ತೃವೆನಿಸಿಕೊಂಡನು. ದೇವಭಾಷೆಯಾದ ಸಂಸ್ಕೃತದಲ್ಲಿದ್ದ ಶಾಸ್ತ್ರಗ್ರಂಥಗಳು ಮಾನವರಿಗೂ ತಿಳಿಯುವಂತೆ ಅವರ ಭಾಷೆಯಲ್ಲಿ (ಪ್ರಾಕೃತದಲ್ಲಿ) ರಚಿತವಾದುವು. ಅಲ್ಲಲ್ಲಿ ವಿದ್ಯಾಲಯಗಳು ಸ್ಥಾಪಿತವಾಗಿ, ಸಾಮಾನ್ಯಜನರು ಜ್ಞಾನದ ಮಧುರಫಲವನ್ನು ಸವಿಯುವ ಅವಕಾಶ ದೊರೆಯಿತು. ಈ ಬಗೆಯಾಗಿ ಭಾರತದ ಸಮಾಜ ಪುರುಷನಿಗೆ ಪುನಃ ಚೇತರಿಸಲು ಅನುಕೂಲವಾಯಿತು. ಭಾರತದ ಇತಿಹಾಸದಲ್ಲಿ ಈ ಬೌದ್ಧಯುಗವು ಸುವರ್ಣಾಕ್ಷರಗಳಿಂದ ಬರೆದಿಡಲು ತಕ್ಕುದಾಗಿದೆ.

ಆದರೆ ಕಾಲಕ್ರಮೇಣ ಪೂರ್ವೋತ್ಸಾಹವು ಅಳಿಯುತ್ತಾ ಹೋದಂತೆ, ನಾಸ್ತಿಕ-ಬೌದ್ಧಮತದಲ್ಲಿ ಜನತೆಗೆ ಒಂದು ಬಗೆಯ ನ್ಯೂನತೆಯು ಕಂಡು ಬಂದಿರಬಹುದು. ಅಲ್ಲದೆ ಬೌದ್ಧಮತದ ತಿರುಳಾದ ಅಷ್ಟಾಂಗಶೀಲಗಳ ಪಾಲನೆಯು ಮಾನವನ ಉಚ್ಛೃಂಖಲವೃತ್ತಿಗೆ ಕಠಿನವೆನಿಸುತ್ತ ಹೋದಂತೆ, ಮತಾನುಯಾಯಿಗಳಲ್ಲಿ ಆಚರಣೆಯ ಶೈಥಿಲ್ಯವು ಕಂಡುಬರಹತ್ತಿ ನೈತಿಕತಾ ಅಧಿಷ್ಠಿತವಾದ ಬೌದ್ಧಧರ್ಮದ ಆಕರ್ಷಕತೆಯು ಕಡಿಮೆಯಾಗಿರಬಹುದು. ಹಾಗೂ ಹಿಂದುಸ್ಥಾನದ ಮೇಲೆ ಪ್ರಾರಂಭವಾದ ಪರಕೀಯರ (ಅರಬರ) ದಾಳಿಯಿಂದ ಜನತೆಗೆ ಕ್ಷಾತ್ರವೃತ್ತಿಯ ಆವಶ್ಯಕತೆಯೆನಿಸಹತ್ತಿದ್ದರಿಂದ, ಆತ್ಯಂತಿಕ ಅಹಿಂಸಾವಾದವನ್ನು ಸಾರುವ ಬೌದ್ಧಮತದ ವಿಷಯಕ್ಕೆ ಜುಗುಪ್ಸಾಭಾವನೆಯುಂಟಾಗಿರಲು ಸಾಕು. ಈ ಬಗೆಯಾಗಿ ಬೌದ್ಧಧರ್ಮವು ಇಳಿಮುಖವಾದ ಸಂಧಿಯಲ್ಲಿಯೇ ಶ್ರೀಕುಮಾರಿಲಭಟ್ಟ, ಶ್ರೀಶಂಕರಾಚಾರ್ಯರಂತಹ ಪ್ರತಿಭಾಶಾಲಿಗಳು ತಮ್ಮ ಅಮೋಘವಾದ ಜ್ಞಾನ, ವಾಗ್ವೈಖರಿಗಳಿಂದ ಅವನ್ನು ಹಿಮ್ಮೆಟ್ಟಿಸಿ, ಆ ಕಾಲದ ಕ್ಷತ್ರಿಯ ರಾಜರ ಬಲದಿಂದ ಪುನಃ ತಲೆಯೆತ್ತದಂತೆ ಮಾಡಿ, ಹಿಂದೂಧರ್ಮಕ್ಕೆ ಮೊದಲಿನ ಸ್ಥಾನವನ್ನು ಒದಗಿಸಿ ಕೊಟ್ಟರು.

ಬೌದ್ಧಮತದ ಸಂಘರ್ಷಣದಿಂದ ಹಿಂದೂಧರ್ಮದಲ್ಲಿ ಕೆಲ ಮಟ್ಟಿಗೆ ಮಾರ್ಪಾಡುಗಳಾದರೂ, ಸಾಮಾನ್ಯಜನರ ಮೇಲಿರುವ ವರಿಷ್ಠವರ್ಗದ ಹಿಡಿತವು ಸಡಿಲಾಗಲಿಲ್ಲ. ಜನತೆಯಲ್ಲಿ (ವರ್ಣಗಳ ಬದಲು) ಜಾತೀಯ ಭಾವನೆಯು ದಿನ-ದಿನಕ್ಕೆ ಬೆಳೆಯತೊಡಗಿತ್ತು. ಹೀಗೆ ಒಂದೆಡೆಗೆ ಹಿಂದೂಧರ್ಮವು ತನ್ನಲ್ಲಿಯ ದೋಷಗಳನ್ನು ಸರಿಪಡಿಸಿಕೊಳ್ಳಲು ಯತ್ನಿಸದೆ, ಪ್ರತಿಸ್ಪರ್ಧಿಗಳನ್ನು ಸೋಲಿಸಿದ ವಿಜಯೋನ್ಮಾದದಿಂದ ಸಾಮಾನ್ಯ ಜನರ ಹಕ್ಕು ಬಾಧ್ಯತೆಗಳನ್ನು ಮೆಟ್ಟಿ ತಾಂಡವನೃತ್ಯವಾಡುತ್ತಿದ್ದರೆ, ಇನ್ನೊಂದೆಡೆಗೆ ಬೌದ್ಧ-ಜೈನ ಮತಗಳು ಕಳೆಗುಂದಿ ಅಪ್ರತಿಭವಾಗಿ ನಿಂತಿದ್ದುವು. ಇಂತಹ ಸನ್ನಿವೇಶದಲ್ಲಿ ಸಮಾಜದಲ್ಲಿ ಹರಡಿದ ಕೊಳೆಯನ್ನು ತೆಗೆದುಹಾಕಿ, ಕೆಳಗಿನ ವರ್ಣದವರಿಗೆ ಸಮಾನತೆಯನ್ನು ಕಲ್ಪಿಸಿಕೊಟ್ಟು, ಸಮಾಜಮಂದಿರವನ್ನು ಭದ್ರಪಡಿಸುವ ಮತ್ತೊಂದು ಮಹಾಪ್ರಯತ್ನವಾಯಿತು. ಇದಕ್ಕೆ ಕಾರಣರಾದವರೇ ಮಹಾನುಭಾವ ಬಸವಣ್ಣನವರು.

ಈ ಬಗೆಯಾಗಿ ಸಮಾಜದ ಶುದ್ಧಿ — ಸುಸ್ಥಿರತೆಗಾಗಿ ಮೊದಲಿನ ಯತ್ನವು ಬೌದ್ಧಧರ್ಮದ ಸ್ಥಾಪನೆಯ ಮೂಲಕವಾದರೆ, ಅನಂತರದ ಪ್ರಯತ್ನವು ಹಿಂದೂಧರ್ಮಾನುಯಾಯಿಗಳಿಂದಲೆ ಮಾಡಲ್ಪಟ್ಟಿತು. ಅರ್ಥಾತ್ ವೇದಕಾಲದ ನಂತರ ಕಾಲಕ್ರಮದಿಂದ ಹಿಂದೂ ಧರ್ಮದಲ್ಲಿ ಸೇರಿಬಂದ ದೋಷಗಳನ್ನು ಹೋಗಲಾಡಿಸಿ, ದೇಶಕಾಲ ಪರಿಸ್ಥಿತಿಗೆ ಅನುಗುಣವಾಗುವಂತೆ ಸಂಸ್ಕರಿಸಿ, ಅದಕ್ಕೆ ಪೂರ್ವದ ಉಜ್ವಲ ಸ್ವರೂಪವನ್ನು ತಂದುಕೊಡಲು, ಹಿಂದೂ ಮತಾನುಯಾಯಿಗಳಿಂದಲೇ ಮಾಡಲ್ಪಟ್ಟ ಪ್ರಥಮ ಧಾರ್ಮಿಕ-ಸಾಮಾಜಿಕ ಕ್ರಾಂತಿಪ್ರಯತ್ನವಿದು. ಅದು ಕಾರಣ ಅದರ ಪ್ರವರ್ತಕರಾದ ಮಹಾನುಭಾವ ಬಸವಣ್ಣನವರಿಗೆ, ಸಮಾಜ-ಸುಧಾರಕರೆಂದೂ ಮಾನವತಾವಾದದ ಪುರಸ್ಕರ್ತೃಗಳೆಂದೂ ಹಿಂದೂ ಮತಾಚಾರ್ಯರಲ್ಲಿ ವಿಶಿಷ್ಟಸ್ಥಾನವೊಂದು ದೊರೆತಿದೆ.

ಸಮಾಜಬಾಂಧವರಲ್ಲಿ ಹರಡಿದ ಅಜ್ಞಾನ, ಅಂಧಶ್ರದ್ಧೆ, ದಾಂಭಿಕತೆಗಳನ್ನು ಕಂಡು ಬಸವಣ್ಣನವರು ಕಳವಳಗೊಂಡು, ಅವರೆಡೆಗೆ ಹೋಗಿ " ತೊರೆಯ ಮಿಂಡಣ್ಣಗಳಿರಾ, ತೊರೆಯಿರೋ ಪರಧನವ........ಕಳವ ತೊರೆದು ಮಿಂದರೆ ಕೂಡಿಕೊಂಬ ನಮ್ಮ ಕೂಡಲ ಸಂಗಮದೇವ ! " " ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ............ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವನನೊಲಿಸುವ

ಪರಿ ! '' ಎಂದು ತಿಳಿಯಾದ ಭಾಷೆಯಲ್ಲಿ ತಿಳಿಹೇಳಿ, ಅಂಧಶ್ರದ್ಧೆ-ಡಾಂಭಿಕತೆಗಳಿಂದ ಕೂಡಿದ ಪೂಜೆ, ಜಪ, ತಪಾನುಷ್ಠಾನಗಳಿಗಿಂತ, ಶುದ್ಧ ನೈತಿಕ ನಿರ್ಮಲ [ಜೀವನವೇ ಶ್ರೇಷ್ಠವೆಂದು ಮನಗಾಣಿಸಿಕೊಟ್ಟರು. "ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ..................." "ಸೆಟ್ಟಿಯೆಂಬೆನೆ ಸಿರಿಯಾಳನ, ಮಡಿವಾಳನೆಂಬೆನೇ ಮಾಚಯ್ಯನ, ಡೋಹರನೆಂಬೆನೇ ಕಕ್ಕಯ್ಯನ............ಆನು ಹಾರುವನೆಂದೊಡೆ ಕೂಡಲ ಸಂಗಮದೇವ ನಗುವನಯ್ಯ!" "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ................" ಎಂದು ವರ್ಣ-ಉದ್ಯೋಗ ಭೇದದಿಂದುಂಟಾದ ಮೇಲು-ಕೀಳುಭಾವನೆಯು (ಜಾತೀಯತೆಯು) ಕೃತ್ರಿಮವೆಂದೂ, ಪ್ರತಿಯೊಬ್ಬರು ತಮ್ಮ ಗುಣ-ಶೀಲ-ಕರ್ತೃತ್ವ ಶಕ್ತಿಗಳಿಂದ ಸಮಾಜದಲ್ಲಿ ಮನ್ನಣೆ ಪಡೆಯಬಹುದೆಂದೂ ಪ್ರತಿಪಾದಿಸಿದರು. 'ಕಾಯಕವೇ ಕೈಲಾಸ' ಎಂದು, ಉದ್ಯೋಗಗಳಿಗೆ ಮಹತ್ತ್ವವನ್ನು ಕೊಟ್ಟು, ಅಜ್ಞಜನರ ಕಷ್ಟಾರ್ಜಿತ ಅನ್ನದಿಂದ ಪುಷ್ಟರಾದ ಮೇಲುವರ್ಗದವರನ್ನು ಬೀಳುಗಳೆದರು. ಹೀಗೆ ಬಸವಣ್ಣನವರು ಸಮಾಜದಲ್ಲಿ ಮಾಡಿದ ಜಾಗೃತಿಯಿಂದ, ತಮ್ಮ ಸ್ಥಾನಕ್ಕೆ ಚ್ಯುತಿಬಂದುದನ್ನು ಕಂಡು, ಸಮಾಜದ ಸೂತ್ರಧಾರಿಗಳಾದ ಮೇಲುವರ್ಗದವರು ಕುಪಿತರಾಗಿ, ಧರ್ಮವಿರೋಧಿಯೆಂದು ಅವರನ್ನು ದ್ವೇಷಿಸತೊಡಗಿದುದು ಸ್ವಾಭಾವಿಕವಾಗಿದೆ. ಹೀಗೆ ಪ್ರತಿಭಟಿಸಿದವರಲ್ಲಿ ವೀರಶೈವಮತದ ಆದ್ಯಸ್ಥಾಪಕರೆನಿಸುವ ಪಂಚಾಚಾರ್ಯರ ಪರಂಪರೆಯವರೂ ಮಿಳಿತರಾಗಿದ್ದರೆಂಬುದು ಮನನೀಯವಾಗಿದೆ. ಇದರಿಂದ ಬಸವಣ್ಣನವರ ಹೋರಾಟದ ಸಾಮಾಜಿಕ ಸ್ವರೂಪವು ಮತ್ತಿಷ್ಟು ಸ್ಫುಟವಾಗುತ್ತದೆ.

ಬಸವಣ್ಣನವರ ವಚನ, ಅಲ್ಲಲ್ಲಿ ಕಂಡುಬರುವ ವೇದೋಪನಿಷತ್ತುಗಳ ಪ್ರಮಾಣ ವಾಕ್ಯಇವುಗಳನ್ನು ನೋಡಿದರೆ, 'ಬಸವಣ್ಣನವರು ವೈದಿಕಧರ್ಮಕ್ಕೆ ಪ್ರತಿಸ್ಪರ್ಧಿಯಾದ ಹೊಸಮತವನ್ನು ಸ್ಥಾಪಿಸಿದರು' ಎಂಬ ಶ್ರೀ. ಚಿಂತಾಮಣಿಯವರ ವಿಧಾನವು ಎಷ್ಟು ನಿರಾಧಾರವಾಗಿರುವುದೆಂಬುದು ಹೊಳೆಯದಿರದು. ಅದರಂತೆಯೆ ಬಸವಣ್ಣನವರು ಇದ್ದ ಜಾತಿಗಳ ಪಟ್ಟಿಗೆ ಲಿಂಗವಂತರ ಜಾತಿಯೊಂದನ್ನು ಸೇರಿಸುವ ಪುಣ್ಯಕೆಲಸ ಮಾಡಿದರು' ಎಂಬ ಶ್ರೀ. ಬಿ. ಎಸ್. ಎ. ರಾವರ ಆರ್ಭಟೆಗೂ ಅವಕಾಶವಿಲ್ಲ.

ಬಸವಣ್ಣನವರು ಸಂದರ್ಭಾನುಸಾರವಾಗಿ ತಮ್ಮ ವಚನಗಳಲ್ಲಿ ಉಪಯೋಗಿಸಿದ ಕೆಲವು ವಾಕ್ಯಗಳ ಕಡೆಗೆ ಬೆರಳುದೋರಿ, ಅವರ ಮೇಲೆ ಪರಮತ ಅಸಹಿಷ್ಣುತೆಯ ಆರೋಪವು ಹೊರಿಸಲ್ಪಡುತ್ತದೆ. ಆದರೆ ಇಂತಹ ಸತ್ಯಾರಾಧಕನ ವಿಶಾಲಹೃದಯಸಾಗರದಲ್ಲಿ ಅಂತಹ ಕ್ಷುಲ್ಲಕಭಾವನೆಯ ಸಾಚಿಯು ಮೊಳೆಯಬಹುದೇ? ಸ್ವತಃ ಮೇಲುವರ್ಣದವರಾದುದರಿಂದ, ಸವರ್ಣಿಗಳಲ್ಲಿ ಕಂಡುಬರುವ ದಾಂಭಿಕತೆಯೂ, ಬೌದ್ಧ-ಜೈನ ಮತಗಳ ನಿರೀಶ್ವರವಾದವೂ ಅವರಿಗೆ ಜುಗುಪ್ಸೆಯನ್ನುಂಟುಮಾಡಿರಬಹುದು. ಈ ಬಗೆಯ ಜುಗುಪ್ಸೆಯೂ, ಕೆಳಗಿನ ವರ್ಣದವರ ಅಜ್ಞಾನಜನ್ಯ ಮೂಢ ಧಾರ್ಮಿಕ ನಂಬಿಕೆಯನ್ನು ಕಂಡು ಉಂಟಾದ ಕಳವಳವೂ ಅಂತಹ ಉದ್ಗಾರಗಳ ಉಗಮಕ್ಕೆ ಕಾರಣವಾಗಿರುವುವೇ ಹೊರತು ಅಹಂಮನ್ಯತೆಯಾಗಲಿ, ದ್ವೇಷಬುದ್ಧಿಯಾಗಲಿ ಅಲ್ಲ.

ಮಹಾತ್ಮಾ ಗೌತಮನು ವಿವಾದಾತ್ಮಕವಾದ ದೈವವಾದವನ್ನು (ಆಧ್ಯಾತ್ಮಿಕ) ಬಿಟ್ಟು, ವಿಶ್ವವ್ಯಾಪಕವಾದ ಮಾನವತಾ (ನೈತಿಕ) ವಾದದ ತಳಹದಿಯ ಮೇಲೆ ತನ್ನ ಧರ್ಮಮಂದಿರವನ್ನು ಕಟ್ಟಿದ್ದರಿಂದ, ಅದರಲ್ಲಿಯ ಹೊಸತನದ ಮೂಲಕ ಅದು ಎಲ್ಲರಿಗೂ ಆಕರ್ಷಕವೆನಿಸಿತು. ಅದರಿಂದ ಗೌತಮನಿಗೆ ಧರ್ಮಸ್ಥಾಪಕನೆನ್ನುವುದಕ್ಕಿಂತ ಸಮಾಜಸುಧಾರಕನೆಂಬ ಹೆಸರೇ ಹೆಚ್ಚಿಗೆ ಒಪ್ಪುವುದು; ಹಾಗೂ ಅವನಿಗೆ ಇಂದಿಗೂ ಸಲ್ಲುತ್ತಿರುವ ಗೌರವಕ್ಕೆ ಈ ವೈಶಿಷ್ಟ್ಯವೇ ಕಾರಣವಾಗಿರುವುದು. ಆದರೆ ಬಸವಣ್ಣನವರು ಬೌದ್ಧಧರ್ಮದ ಈ ಏಕಾಂಗತೆಯು ಮಾನವನ ಸರ್ವಾಂಗೀಣ ಉನ್ನತಿಗೆ ಸಾಲದೆಂದು, ಮಾನವತಾವಾದಕ್ಕೆ ದೈವ (ಆಧ್ಯಾತ್ಮಿಕ) ವಾದದ ಮೆರುಗನ್ನು ಕೊಟ್ಟರು. ಧರ್ಮವನ್ನು ತಮ್ಮ ಸಮಾಜಸುಧಾರಣೆಯ ಸಾಧನೆಯನ್ನಾಗಿ ಮಾಡಿಕೊಂಡರು. ಅದರಿಂದ ಮತಾಚಾರ್ಯರ ಸಂಕುಚಿತರೂಪವು ಬಂದು, ಅನೇಕ ಮತಪಂಥಗಳಿಂದ ಬುಜುಗುಟ್ಟುವ ಈ ದೇಶದಲ್ಲಿ, ಸ್ವಾಭಾವಿಕವಾಗಿ ಅವರ ಕಡೆಗೆ ಅಷ್ಟೊಂದು ಗಮನವಿತ್ತಂತೆ ತೋರುವುದಿಲ್ಲ. ಆದರೆ ಯಾವುದೇ ವಿಮರ್ಶಕನು ಅವರ ಕಾರ್ಯಗಳನ್ನು ವಿಶ್ಲೇಷಿಸಿ ನೋಡಿದಲ್ಲಿ, ದಲಿತಜನರ ವಿಷಯಕವಾಗಿದ್ದ ಅವರ ಹೃದಯದ ಕಳವಳವೂ ತದನುಷಂಗಿಕವಾದ ಕ್ರಾಂತಿಮನೋವೃತ್ತಿಯೂ ಮಹಾತ್ಮಾ ಗೌತಮನಿಗಿಂತಲೂ ಪ್ರಖರವಾಗಿದ್ದುವೆಂಬುದನ್ನು ಮನಗಾಣದಿರನು. ಮಹಾತ್ಮಾ ಬುದ್ಧನ "ಭಿಕ್ಷುಣಿಯು ತಾನ ಸಂಘಕ್ಕೆ ಸೇರಿ ಎಷ್ಟೇಕಾಲವಾಗಿದ್ದರೂ, ಅಂದು ಸಂಘಕ್ಕೆಸೇರಿದ ಭಿಕ್ಷುವನ್ನು ಗೌರವಿಸಿ ಪೂಜಿಸಬೇಕು." "ಏನೇ ಆದರೂ ಯಾವಾಗಲೂ ಭಿಕ್ಷುಣಿಯು ಭಿಕ್ಷುವನ್ನು ದೂಷಿಸಕೂಡದು. ಸಂನ್ಯಾಸವನ್ನು ಕೈಕೊಂಡಂದಿನಿಂದ ಭಿಕ್ಷುಗಳಿಗೆ ಬದಲುಹೇಳಕೂಡದಲ್ಲದೆ ಭಿಕ್ಷುಣಿಯರೆದುರು ಭಿಕ್ಷುಗಳ ವಾಕ್ಯಕ್ಕೆ ಅಡ್ಡಬರಕೂಡದು !" ಮೊದಲಾದ ವಾಕ್ಯಗಳ ಮೇಲಿಂದ ನೋಡಲಾಗಿ, ಆ ಕಾಲದಲ್ಲಿ ಕೂಡ ಸ್ತ್ರೀಯರಿಗೆ ಸಂಪೂರ್ಣ ಹಕ್ಕು-ಬಾಧ್ಯತೆಗಳು ದೊರೆತಂತೆ ತೋರುವುದಿಲ್ಲ. ಅದರಿಂದ ವೇದಕಾಲದನಂತರ ಸ್ತ್ರೀಯರಿಗೆ ಸಮಾನಾಧಿಕಾರಗಳು ದೊರೆತದ್ದು ಬಸವಣ್ಣನವರ ಕಾಲದಲ್ಲಿಯೆ ಎಂದು ಸಿದ್ಧವಾಗುವುದು. ಈ ಕಾಲದಲ್ಲಿ ಮಾತ್ರ ಗಾಗಿ, ಮೈತ್ರೇಯಿ ಮೊದಲಾದ ವೇದಕಾಲೀನ ನಾರೀಮಣಿಗಳಂತೆ ಅಕ್ಕಮಹಾದೇವಿಯರೇ ಮೊದಲಾದ ಸ್ತ್ರೀರತ್ನಗಳು, ಧರ್ಮಚರ್ಚೆಯಲ್ಲಿ ಕೂಡ ಪುರುಷರೊಡನೆ ಸಮಾನಾಧಿಕಾರದಿಂದ ಭಾಗವಹಿಸತೊಡಗಿದರು.

ಆದರೆ ಈ ಸಮಯದಲ್ಲಿ ಜಾತೀಯಭಾವನೆಯು (ಬೌದ್ಧ ಕಾಲಕ್ಕಿಂತ) ಹೆಚ್ಚಿಗೆ ಬೆಳೆದು ದೃಢಮೂಲವಾದದ್ದರಿಂದಲೂ

ಶ್ರೀ. ಜಿ. ಪಿ. ರಾಜರತ್ನಂರವರ 'ಧರ್ಮದಾನಿ ಬುದ್ಧ'

ಬೌದ್ಧ ಧರ್ಮದಂತೆ ರಾಜಾಶ್ರಯವು ದೊರಕದ್ದರಿಂದಲೂ ಬಸವಣ್ಣನವರ ಮಹಾಸ್ವಪ್ನವು ಪೂರ್ಣವಾಗಿ ಮೂರ್ತಸ್ವರೂಪಕ್ಕೆ ಬರಲಿಲ್ಲ. ಸುಧಾರಿಸಿದ ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಸಮಾಜಸುಧಾರಕರು ಎದುರಿಸಬೇಕಾಗಿರುವ ಆತಂಕಗಳನ್ನು ನೆನೆದುಕೊಂಡಲ್ಲಿ, ಇಂದಿಗೆ ಎಂಟುನೂರು ವರ್ಷಗಳ ಹಿಂದೆ ಎಲ್ಲೆಡೆಗಳಲ್ಲಿಯೂ ಅಜ್ಞಾನಾಂಧಕಾರವು ವ್ಯಾಪಿಸಿದಾಗ ಬಸವಣ್ಣನವರು ಎದುರಿಸಿದ ವಿಷಮಪರಿಸ್ಥಿತಿಯ ಕಲ್ಪನೆಯು ಬಂದೀತು ? ಹಾಗೂ ಇಂತಹ ಪ್ರತಿಕೂಲ ಸನ್ನಿವೇಶದಲ್ಲಿ, ತಮ್ಮ ಅಲ್ಪಾಯುಷ್ಯದವಧಿಯಲ್ಲಿ, ಸಮಾಜಶ್ರೇಷ್ಠಿಗಳ ದ್ವೇಷವನ್ನೂ ರಾಜವಿರೋಧವನ್ನೂ ಜನರ ರೂಢನಂಬಿಕೆಗಳನ್ನೂ ಎದುರಿಸಿ "ಆಯುಷ್ಯ ತೀರಿದಲ್ಲದೆ ಮರಣವಿಲ್ಲ, ಭಾಗ್ಯತೀರಿದಲ್ಲದೆ ದಾರಿದ್ರ್ಯವಿಲ್ಲ, ಅಂಜಲೇಕೋ ಲೋಕವಿಗರ್ಹಣೆಗೆ" "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕಾರಂಜುವರು ? ಇದಕಾರಳುಕುವರು ? 'ಜಾತಸ್ಯಮರಣಂಧ್ರುವಂ'" ಎಂಬುದಾಗಿ ಹೇಳಿದುದನ್ನು ನೋಡಿದರೆ, ಅಸಾಮಾನ್ಯಕೆಚ್ಚಿನಿಂದ ತನ್ನ ಧ್ಯೇಯಸಿದ್ಧಿಗಾಗಿ ಹೋರಾಡಿದ ಆ ವೀರಜೀವದಯೋಗ್ಯತೆಯ ಅರಿವು ಸ್ವಲ್ಪವರೂ ಆದೀತು !!

ಇಂತಹ ಮಹಾಪುರುಷನಿಗೆ ಜನ್ಮವಿತ್ತ ಭಾಗ್ಯವು ಕರ್ನಾಟಕಕ್ಕೆ ದೊರೆತದ್ದು ನಮ್ಮೆಲ್ಲರಿಗೂ ಹೆಮ್ಮೆಯ ಮಾತೇ ಸೈ. ಇಂತಹ ಜಗದ್ವಿಖ್ಯಾತನಾಗುವ ಯೋಗ್ಯತೆಯುಳ್ಳ ರತ್ನದ ಬೆಲೆಯನ್ನು ಅರಿತುಕೊಳ್ಳಲು ಯತ್ನಿಸದೆ, ಉಪೇಕ್ಷಿಸುವ ಕನ್ನಡಿಗರ ಸ್ವಾಭಿಮಾನ ಶೂನ್ಯತೆ, ಬುದ್ಧಿಮತ್ತೆಗಳಿಗೆ ಏನೆನ್ನಬೇಕೋ ತಿಳಿಯದು. ನಮ್ಮವರ ಯೋಗ್ಯತೆಯ ಅರಿವು ನಮಗಾಗಬೇಕಾದರೆ, ಅದಕ್ಕೆ ಪಾಶ್ಚಿಮಾತ್ಯರ ಪ್ರಶಸ್ತಿಪತ್ರಿಕೆಯ ಜೋಡಿರಬೇಕೆಂಬುದು ಅನುಭವಸಿದ್ಧ ಮಾತು, ಅದಕ್ಕಾಗಿ ಟಾಯಿಮ್ಸ್ ಆಫ್ ಇಂಡಿಯಾ ಪತ್ರಿಕೆಯ ೧೭-೪-೧೯೧೮ನೆಯ ಸಂಚಿಕೆಯಲ್ಲಿ ಉಲ್ಲೇಖಿಸಿದ ಸರ್ ಜೇಮ್ಸ್ ಕ್ಯಾಂಬೆಲ್ ಎಂಬ ಆಂಗ್ಲ ಮಹಾನುಭಾವರ—ಬಸವಣ್ಣನವರ ವಿಷಯಕ—ಉದ್ಗಾರವನ್ನು ಕೆಳಗೆ ಕೊಡಲಾಗಿದೆ :

" It was the distinctiue feature of his mission that while illustrious, religious and social reformers in India, before him had each laid his emphasis on one or other items of religious and social reform, either subordinating more or less other items to it, or ignoring them altogether. Basawa sketched and boldly tried to work out a large and comprehensive programme of social reform with the elevation and indepedence of woman hood as its guiding point."

Neither social conferences which are annually held in these days in several parts of India, nor Indian social reformers, can improve upon that programme as to the essentials. As was in substance remarked by the late Sir 'James Campbell, whose knowledge of Indian history, customs and manners was almost phenominal. the present day social reformer in India, is but speaking the language and seeking to enforce the mind of Basawa.

ಭರತಖಂಡದಲ್ಲಿ ಬಸವನಿಗಿಂತ ಮುಂಚೆ ಪ್ರಸಿದ್ಧರಾದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರು ಆಯಾಯ ವಿಷಯಗಳಿಗೆ ಸಂಬಂಧಿಸಿದ ಯಾವುದಾದರೂ ಸಂಗತಿಗೇನೇ ಹೆಚ್ಚು ಮಹತ್ತ್ವಕೊಟ್ಟು, ಅನ್ಯವಿಷಯಗಳನ್ನು ಉಪೇಕ್ಷಿಸಿದ್ದರು, ಅಥವಾ ಅವುಗಳಿಗೆ ಗೌಣತ್ವವನ್ನು ಕೊಟ್ಟಿದ್ದರು. ಆದರೆ ಬಸವನು ಸ್ತ್ರೀಯರ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಗಳನ್ನೇ ಮುಂದಿಟ್ಟುಕೊಂಡು, ಸಮಾಜಸುಧಾರಣೆಯ ಸರ್ವಾಂಗವಿಶಿಷ್ಟವಾದ ಬಹು ದೊಡ್ಡ ಕಾರ್ಯಕ್ರಮವನ್ನು ಗೊತ್ತುಪಡಿಸಿ, ಅತಿ ಧೈರ್ಯದಿಂದ ಅದನ್ನು ಸಾಗಿಸಿದನು.

ಭರತಖಂಡದ ಎಲ್ಲ ಭಾಗಗಳಲ್ಲಿಯೂ ಈ ಕಾಲದಲ್ಲಿ ಪ್ರತಿವರುಷ ಸೇರುತ್ತಿರುವ ಸಾಮಾಜಿಕ ಪರಿಷತ್ತುಗಳಾಗಲಿ ಅಥವಾ ಈ ದೇಶದ ಸುಧಾರಕರಾಗಲಿ ಬಸವನ ಕಾರ್ಯಕ್ಕಿಂತ ಹೆಚ್ಚಿನದಾವುದನ್ನೂ ಮಾಡಲಾರರು. ಭರತಖಂಡದ ಚರಿತ್ರೆ ಮತ್ತು ಭಾರತೀಯರ ಆಚಾರಪದ್ಧತಿಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಲು ಯೋಗ್ಯತೆಯುಳ್ಳ ಸರ್ ಜೇಮ್ಸ್ ಕ್ಯಾಂಬೆಲ್-ರವರು ಹೇಳಿರುವಂತೆ, ಭರತಖಂಡದ ಈಗಿನ ಸಮಾಜಸುಧಾರಕರು ಬಸವನ ನುಡಿಯನ್ನೇ ನುಡಿಯುತ್ತಲೂ, ಆತನ ಅಭಿಪ್ರಾಯವನ್ನು ಬೋಧಿಸುತ್ತಲೂ ಇದ್ದಾರೆ.

ಸಂಕ್ರಮಣಾವಸ್ಥೆಯಲ್ಲಿದ್ದ ಇಂದಿನ ಕನ್ನಡ ಜನತೆ ಈ ಹಿರಿಯ ಕನ್ನಡ ಜೀವದ ಹೃದಯದ ಮಿಡಿತವನ್ನು ಅರ್ಥಮಾಡಿಕೊಂಡು, ಈ ಮಹಾನುಭಾವನ ಆದರ್ಶಚರಿತ್ರೆಯಿಂದ ಸ್ಫೂರ್ತಿಗೊಂಡು, ಕ್ರಾಂತಿವೃತ್ತಿಯನ್ನು ಮೈಗೂಡಿಸಿಕೊಂಡು ಅನುಷ್ಠಾನಕ್ಕೆ ತಂದಲ್ಲಿ, ಕೀರ್ತಿಶೇಷನಾದ ಈ ಮಹಾತ್ಮನಿಗೆ ತನ್ನ ಅಲ್ಪಕಾಣಿಕೆಯನ್ನು ಸಲ್ಲಿಸಿದಂತಾದೀತು !!

ಕೈನೂಲಿನ ಶುದ್ಧ ಪವಿತ್ರ ಖಾದಿ!

ಹತ್ತಿ ಹಿಂಜುವುದರಿಂದ ಮೊದಲು ಮಾಡಿ ಬಟ್ಟೆ ಒಗೆಯಿಸುವವರೆಗೆ ಎಲ್ಲವನ್ನೂ ಹಳ್ಳಿಗರಿಂದ ಮಾಡಿಸಿದ—'ಸ್ವದೇಶೀ' ಎಂಬ ಹೆಸರಿಗೆ ಸಂಪೂರ್ಣ ಯೋಗ್ಯವಾದ—ಖಾದಿಯ ಬಟ್ಟೆ, ಧೋತರ, ಪಂಜೆ ಇವೆಲ್ಲ ಬೇಕಾದವರು, 'ಜಯಂತಿ' ಕಾರ್ಯಾಲಯದಲ್ಲಿ ಬಂದು ವಿಚಾರಿಸಬೇಕು. ಉತ್ತಮೋತ್ತಮ ನೂಲು—ನೇಗೆ. ಹೆಚ್ಚಿನದಂತಹ ಬೆಲೆ.

೩-೬೩೨೨

ಫ್ರೆಂಚರ ರಾಷ್ಟ್ರಗೀತ*

“ ಲಾ ಮಾರ್ಸೇಲಾಯ್ಝು ”

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಬಿಡುಗಡೆಯ ಮಕ್ಕಳಿರ! ಎದ್ದೇಳಿರೈಸಿರಿಗೆ!
ಕೇಳಿ! ಶತಕೋಟಿ ಜನ “ ಏಳ್ ” ಎಂದು ಸಾರುತಿದೆ!
ನಿಮ್ಮ ಮಗು-ಮಡದಿಯರು ಮುದುಕ ತಾತರು ಮರುಗಿ,
ಕಾಣಿ ಕಣ್ಣುರಿಹನಿಯ, ಕೇಳಿ ಮೊರೆ ಬಿರಿಯುತಿದೆ!
ದಬ್ಬಾಳ್ವ ದುಷ್ಟರಾ ಕುಟಿಲ ಕುಹಕದ ಕಾಡು-
ತೊತ್ತು ದಂಡುಗಳಿಂದ ಪುಂಡಕಂಡಗಳಿಂದ
ಹಾಳ್ಗೇಡು ಗೋಳ್ಗೇಡು ಮಾಡಬಹುದೇ ನಾಡು ?—
ಶಾಂತಿ-ಸ್ವಾತಂತ್ರ್ಯಗಳು ಬಸಿಯೆ ನೆತ್ತರವಿಂದು ||೧||

ಶಸ್ತ್ರವಿಡಿ! ಶಸ್ತ್ರವಿಡಿ! ಧೀರರಿಹರಿ!
ಪ್ರತಿಭಟಿಪ ಕರವಾಲ ಒರೆಗಳೆಯಿರಿ!
ಮುನ್ನುಗ್ಗಿ, ಮುನ್ನುಗ್ಗಿ, ಕೂಡಿಸೆದೆಕಾವು!
ಗುರಿಯಿರಲಿ ‘ಸ್ವಾತಂತ್ರ್ಯ, ಇಲ್ಲದಿರೆ ಸಾವು!’ ||ಪಲ್ಲ||

ಸುತ್ತಿರುವ ಸೊತ್ತು-ಸಿರಿ ಮತ್ತಗರುವಾಯುದುಲಿ
ನೆತ್ತಿಗಣ್ಣಿನ ದುರುಳ ಲೋಲುಪರು ಲಾಲಸರು
ಮಿತಿಬಿಟ್ಟು ಮತಿಗೆಟ್ಟು ಸತ್ತೆ-ಸೊತ್ತಿಗೆ ಕನಲಿ
ಗಾಳಿಬೆಳಕನೆ ಅಳೆದು ಮಾರಲಣಿಯಾಗಿಹರು!
ಎತ್ತು-ಕತ್ತೆಗಳಂತೆ ನಮ್ಮನ್ನು ನಡೆಸುವರು,
ಎತ್ತರದ ದೇವರಂದದಿ ತಮ್ಮ ಹೊಗಳಿಪರು,
ಆದರೇಂ ? ಮಾನವನು ಮಾನವನೆ, ಮಿಗಿಲಾರು ?
ಇನ್ನನೋಲಿಯುಂ ನಮ್ಮ ಹೊಡೆಸಿ ದುಡಿಸರೆ ಇವರು? ||೨||

ಶಸ್ತ್ರವಿಡಿ! ಶಸ್ತ್ರವಿಡಿ! ಧೀರರಿಹರಿ!
ಪ್ರತಿಭಟಿಪ ಕರವಾಲ ಒರೆಗಳೆಯಿರಿ!
ಮುನ್ನುಗ್ಗಿ, ಮುನ್ನುಗ್ಗಿ, ಕೂಡಿಸೆದೆ ಕಾವು!
ಗುರಿಯಿರಲಿ ‘ ಸ್ವಾತಂತ್ರ್ಯ ಇಲ್ಲದಿರೆ ಸಾವು! ’

ಓ ದೇವಿ, ಸ್ವಾತಂತ್ರ್ಯ! ನರ ನಿನ್ನ ಬಿಡಲಹುದೆ ?
ಒಮ್ಮೆ ಸವಿಯಲು ನಿನ್ನ ಸಿರಿಬೆಳಕಿನುಸಿರನ್ನು
ಸೆರೆಯು ಮಿಡ ನಿಗಡಗಳು ನಿನ್ನ ತಡೆದಿಡಬಹುದೆ ?
ಕೊರಡೆ, ಕಶೆ ನಿನ್ನ ನವಸ್ಫೂರ್ತಿ ಮಣಿಸುವುವೇನು ?
ಚಿರಕಾಲ ಜಗವಿನಿತು ಮರುಗುತಿದೆ ಗತಿಗೆಟ್ಟು.
ಮೊರೆಸುವರು ಗೆದ್ದವರು ರಕ್ತರಂಜಿತ ಖಡುಗ,
ಪರಿವೆಯೇಂ ? ಬಿಡುಗಡೆಯೆ ನಮ್ಮ ಕವಚವು ಕತ್ತಿ!
ಪರಿಪರಿಯ ಅವರ ತಂತ್ರಗಳೆಲ್ಲ ಹುಸಿ ಈಗ! ||೩||

ಶಸ್ತ್ರವಿಡಿ! ಶಸ್ತ್ರವಿಡಿ! ಧೀರರಿಹರಿ!
ಪ್ರತಿಭಟಿಪ ಕರವಾಲ ಒರೆಗಳೆಯಿರಿ!
ಮುನ್ನುಗ್ಗಿ, ಮುನ್ನುಗ್ಗಿ, ಕೂಡಿಸೆದೆಕಾವು!
ಗುರಿಯಿರಲಿ ‘ ಸ್ವಾತಂತ್ರ್ಯ, ಇಲ್ಲದಿರೆ ಸಾವು! ’

*[“Ye sons of freedom wake to glory!” ಎಂಬ ಇಂಗ್ಲಿಷ್ ಅನುವಾದದಿಂದ ಕನ್ನಡಿಸಿದುದು. —ಲೇ.]

ಅವನು ತಂದೆಯಷ್ಟೇ ಉತ್ಸಾಹಶಾಲಿಯಾಗಿದ್ದಾನೆ

— ಅವರಿಬ್ಬರ ಸಾಹಸಕ್ಕೆ ಕೊನೆಯೇ ಇಲ್ಲ!

ನಿಜವಾಗಿಯೂ ಅವರಿಬ್ಬರೂ ಒಳ್ಳೆಯ ಜೋಡಿಯಾಗಿದ್ದಾರೆ! ನಿಜವಾಗಿಯೂ ಅವರಿಬ್ಬರೂ ಉತ್ಸಾಹಶಾಲಿಯರಾಗಿದ್ದಾರೆ! ಅವರಿಗೆ ಕೊಡುವ ಆಹಾರವು ಕಡಿಮೆಯಾದ ಚೇತನವನ್ನು ಪುನಃ ಪೂರ್ಣವಾಗಿ ಉಂಟುಮಾಡಲು ತಾಯಿ ಖಾತ್ರಿ ಮಾಡುತ್ತಾಳೆ — ವಿಟಮಿನ್‌ನಿಂದ ಕೂಡಿದ ಪೋಷಣ ಶಕ್ತಿಯುಳ್ಳ ಡಾಲ್ಡದಿಂದಲೇ ತಯಾರಿಸಿದ ರುಚಿಕರವಾದ ಆಹಾರವನ್ನು ಆಕೆ ಅವರಿಗೆ ಕೊಡುತ್ತಾಳೆ. ಶಕ್ತಿಕುಂದಿ ಆರೋಗ್ಯವು ಕೆಡಿಸಿಹೋಗುವ ಅಪಾಯವು ಅವರಿಗೆ ಎಂದೂ ಬಾರದು, ಏಕೆಂದರೆ, ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ಚೇತನಕ್ಕಾಗಿ — ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ. ಡಾಲ್ಡ ಆಹಾರಕ್ಕೆ ಹೆಚ್ಚು ರುಚಿಯನ್ನು ಕೂಡ ಕೊಡುತ್ತದೆ.

ಡಾಲ್ಡ ತನ್ನಲ್ಲಿರುವ ವಿಟಮಿನ್ ಮೂಲಕ ದೇಹಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯಮಾಡುತ್ತದೆ . . . ವಿಟಮಿನ್‌ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಎಲ್ಲಾ ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ ವಿಟಮಿನ್ ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.

ವಿಟಮಿನ್‌ದಿಂದ ಕೂಡಿದ ಡಾಲ್ಡ ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಡುತ್ತದೆ — ಸೀಲು ಮಾಡಿದ ಡಬ್ಬಗಳಲ್ಲಿ ಮಾತ್ರ ಮಾರಲ್ಪಡುತ್ತದೆ



HVM. 22-190 KN

THE HINDUSTAN VANASPATI MANUFACTURING CO., LTD., BOMBAY

ಕಳ್ಳರು ಯಾರು..?

(ಸಣ್ಣ ಕತೆ)

ಶ್ರೀ. ಸಿಂಹ ಎಮ್‌.ಎ. 'ಲಕ್ಷ್ಮೀನಿವಾಸ' ಮಂಡ್ಯ

★

ಶಾರದೆ ಮತ್ತು ರಾಮರಾಯರು, ಲೀಲೆಯ ಮದುವೆಯಾದ ಮಾರನೆಯ ರಾತ್ರಿಯೆ ತಮ್ಮೂರಿಗೆ ಹೊರಡಬೇಕಾಗಿತ್ತು. ಇದಕ್ಕೆ ಕಾರಣ ರಾಯರಿಗೆ ರಜೆಯು ಕೇವಲ ಕೊಂಚದಿನಗಳು ಮಾತ್ರ ಇದ್ದುದು. ಆವರಿಬ್ಬರೂ ಆದೇ ರಾತ್ರಿ ಹನ್ನೆರಡು ಗಂಟೆಗೆ, ಧರ್ಮಪುರಿ ಪ್ಲಾಟ್‌ಫಾರಮ್ಮಿಗೆ ಎರಡು ಗಂಟೆಯ ರೈಲಿಗಾಗಿ ಹೋದರು. ಗಾಡಿ ಬರಲು ಇನ್ನೂ ಎರಡು ಗಂಟೆಯ ಕಾಲ ಕಾಯಬೇಕಾಗಿತ್ತು. ಇಬ್ಬರೂ ಮದುವೆಯ ಗಲಾಟೆಯಲ್ಲಿ ನಿದ್ರೆಯಿಲ್ಲದೆ ಬಹಳ ಆಯಾಸ ಹೊಂದಿದ್ದರು. ನಿದ್ರಾದೇವಿಯು ಆವರನ್ನು ಹಿಡಿಯದೆ ಇರಲಿಲ್ಲ. ನಿದ್ದೆ ಹೋಗಲು ರೈಲು ತಪ್ಪುವುದೆಂಬ ಭಯ, ಅಲ್ಲದೆ ಜೋಬುಕಳ್ಳರ ಭೀತಿ ಬೇರೆ— ಇವುಗಳಿಂದ ನಿದ್ರೆಹೋಗಲು ಅವಕಾಶವಾಗಲಿಲ್ಲ.

ಅಂತೂ ಇಂತೂ ರಾಯರನ್ನು ನಿದ್ರಾದೇವಿ ಸುಮ್ಮಗೆ ಬಿಡಲಿಲ್ಲ. ಮತ್ತೊಂದು ಕಡೆ ಅವರಿಗೆ ಗಾಬರಿ. ಆಗ ರಾಯರು ಒಂದು ಯೋಚನೆ ಮಾಡಬೇಕಾಯಿತು. ಹಾಗೆ ಕೊಂಚ ಕುಳಿತು ಥಟ್ಟನೆ "ಶಾರದೆ..ದೆ, ಒಂದು ಉಪಾಯ ಹೇಳ್ತೀನಿ; ನೀನು ಒಪ್ತೀಯೋ ಇಲ್ವೋ? ಇದೇ ನನ್ನ ಯೋಚನೆ; ಏನೂಂದ್ರೆ: ರೈಲು ಬರುವವರೆಗೂ ನಾನು ನಿದ್ರಿಸುವೆನು; ನೀನು ಆಗ ಗಂಟು-ಮೂಟೆಗಳನ್ನು ನೋಡಿಕೊಳ್ಳಬೇಕು! ರೈಲಿನಲ್ಲಿ ನೀನು ನಿದ್ರಿಸುವುದು; ನಾನು ಗಂಟು-ಮೂಟೆಗಳನ್ನು ನೋಡಿಕೊಳ್ಳುವೆನು!" ಎಂದು ದೈನ್ಯದನಿಯಲ್ಲಿ ಹೇಳಿದರು. ಶಾರದೆಯು ಹಾಗೆಯೆ ಕೊಂಚ ಯೋಚಿಸಿ "ಸರಿ, ಹಾಗೆ ಆಗಲಿ!" ಎಂದಳು. ಕಾರಣ ರೈಲಿನಲ್ಲಿ ರಾಯರಿಗಿಂತ ಹೆಚ್ಚಾಗಿ ನಿದ್ರೆಮಾಡಲು ತನಗೆ ಕಾಲವು ಸಿಕ್ಕುವುದೆಂದು.

ಒಪ್ಪಂದದಂತೆ ರಾಯರು ಹಾಗೆ ಗಂಟಿನ ಮೇಲೆ ಒರಗಿದರು. ಶಾರದೆಯು ಸುಮ್ಮಗೆ ಕಾಲಚಕ್ರ (ಗಡಿಯಾರ) ವನ್ನು ನೋಡಿದಳು, ಕಾಲುಗಂಟೆ ಕಳೆದಿತ್ತು. ನಿದ್ರೆಯು ಇವಳನ್ನು ಕೂಡ ಆಕ್ರಮಿಸತೊಡಗಲು, ಟ್ರಂಕಿನಲ್ಲಿದ್ದ ಕಥೆಯ ಪುಸ್ತಕವನ್ನು ಓದಲಾರಂಭಿಸಿದಳು. ಕಾಲು ಜೋಮುಗಟ್ಟಿದ್ದರಿಂದ ಸ್ವಲ್ಪ ಹೊತ್ತು ನಿಲ್ಲುವುದು, ಕೂಡುವುದು— ಹೀಗೆ ಮಾಡಿದಳು, ಆಗ ರಾಯರ ಜೇಬಿನಲ್ಲಿ, ಥಳಥಳನೆ ಅಲ್ಲಿಯ ವಿದ್ಯುದ್ದೀಪಕ್ಕೆ ಹೊಳೆಯುತ್ತಿದ್ದ ಉಂಗುರವು ಕಣ್ಣಿಗೆ ಬಿತ್ತು, ಅದನ್ನು ಹಾಗೆ ತೆಗೆದು ಮುಚ್ಚಿ ಇರಿಸಿದಳು.

ಗಡಿಯಾರದಲ್ಲಿ ಒಂದು ಹೊಡೆದು ಮುಕ್ಕಾಲುಗಂಟೆಯಾಗಿತ್ತು. ಗಾಡಿಬರಲು ಇನ್ನು ಹದಿನೈದು ನಿಮಿಷಗಳು ಮಾತ್ರ ಉಳಿದಿದ್ದುವು. ಶಾರದೆಯು ರಾಯರನ್ನು ಬಹಳ ಶ್ರಮದಿಂದ ಎಚ್ಚರಿಸಿದಳು.

ನಿಲ್ದಾಣಕ್ಕೆ ಗಾಡಿಯು ಬಂದು ನಿಂತಿತು. ರಾಯರು ಒಂದು ಖಾಲೀ ಕಂಪಾರ್ಟ್‌ಮೆಂಟಿನಲ್ಲಿ ತಮ್ಮ ಗಂಟು-ಮೂಟೆಗಳನ್ನು ಹಾಕಿ, ಇಬ್ಬರೂ ಕುಳಿತರು.

ಬಂಡಿ ಹೊರಟಿತು. ಸರದಿಯ ಪ್ರಕಾರ ಶಾರದೆಯು ಮಲಗಿಬಿಟ್ಟಳು. ರಾಯರು ಗಂಟು-ಮೂಟೆಗಳನ್ನು ನೋಡಿಕೊಳ್ಳುತ್ತ, ಪತ್ನಿಯ ತಲೆಯಬದಿಯಲ್ಲಿ ಕುಳಿತರು. ಹಾಗೆ ಕುಳಿತು "ಹಿಂದು" ಪತ್ರಿಕೆಯನ್ನು ಓದಲು ಆರಂಭಿಸಿದರು. ಗಾಡಿಯು ಆಗಲೇ ಒಂದೆರಡು ಸ್ಟೇಷನ್ ಬಿಟ್ಟು ಮುಂದೆ ಹೊರಟಿತ್ತು. ಆಗ ರಾಯರು ಚಿಟಿಕೆಹಾಕುತ್ತ ಆಕಳಿಸುತ್ತ, ಅತ್ತಿತ್ತ ನೋಡಿದರು. ಶಾರದೆಯ ಕೈಯಲ್ಲಿದ್ದ ಉಂಗುರವು ತಳತಳನೆ

★

ರಾಮರಾಯರು ಮತ್ತು ಶಾರದೆ ತಂತಮ್ಮ ಕಳ್ಳತನಕ್ಕಾಗಿ ಪಡೆದ ಶಿಕ್ಷೆ ಎಂತಹದಿರಬಹುದು? ರಸಿಕ ದಂಪತಿಗಳೇ ಅದನ್ನು ಹೇಳಬಲ್ಲರು.

★

ಹೊಳೆಯುತ್ತಿದ್ದುದು ಕಣ್ಣಿಗೆ ಬಿತ್ತು. 'ಇರಲಿ......ಒಂದು ತಮಾಷೆ ಮಾಡುತ್ತೇನೆ!' ಎಂದು, ಮೆಲ್ಲಗೆ ಆವಳ ಕೈಯಿಂದ ಉಂಗುರವನ್ನು ಕಳಚಿ ಬಚ್ಚಿಟ್ಟರು.

ಬೆಳಗಿನ ಆರು ಗಂಟೆಯ ಹೊತ್ತಿಗೆ ಶಾರದೆಯೂ ರಾಯರೂ ಗಾಡಿಯಿಂದಿಳಿದು ಮನೆಸೇರಿದರು. ಎಂದಿನಂತೆ ರಾಯರು ಆಫೀಸಿಗೆ ತಮ್ಮ ಕೆಲಸಕ್ಕೆ ಹೊರಟರು. ಶಾರದೆಯು ಧೂಳು ತುಂಬಿ ಬಿದ್ದಿದ್ದ ಪಾತ್ರೆಗಳನ್ನು ತೊಳೆದು ಒಪ್ಪ ಮಾಡುವುದರಲ್ಲಿ ಹಗಲನ್ನು ಕಳೆದಳು.

ತಮ್ಮ ಕೆಲಸವನ್ನು ಮುಗಿಸಿಕೊಂಡು ರಾಯರು ಸಾಯಂಕಾಲ ಮನೆಗೆ ಬರಲು, ಶಾರದೆ, ತುಂಬ ಶ್ರದ್ಧಾಭಕ್ತಿಯಿಂದ ಒಂದು ತಟ್ಟೆಯಲ್ಲಿ ಕೊಂಚ ತಿಂಡಿಯನ್ನೂ, ಕೂಜಾದಲ್ಲಿ ಕಾಫಿಯನ್ನೂ ತಂದು ಮುಂದಿಟ್ಟಳು.

' ಒಂದು ಸಲ ಹುಸಿನಗು ನಕ್ಕು, ರಾಯರು 'ನಿನ್ನ ಕೈಯನ್ನು ತಾ!' ಎಂದರು. ಹಾಗೆಯೆ ಒಮ್ಮೆಲೆ 'ಉಂಗುರವೆಲ್ಲಿ?

ಏನಾಯಿತು ?' ಎಂದು ಒಂದು ಕಪಟಭಾವದ ರೀತಿಯಲ್ಲಿ ವ್ಯಂಗ್ಯವಾಗಿ ಪ್ರಶ್ನಿಸಿದರು. ಶಾರದೆಯು ಸರ್‍ರನೆ ಕೈ ನೋಡಿಕೊಂಡಳು ; ನಿಜವಾಗಿಯೂ ಕೈಯಲ್ಲಿ ಉಂಗುರವಿಲ್ಲ ! ಏನು ಮಾಡಿಯಾಳು ಪಾಪ ! ಇಟ್ಟ ಸ್ಥಳದ ನೆನಪೇ ಆಗಲೊಲ್ಲದು ? ತನ್ನ ಪರ್ಸನ್ನು ನೋಡಿದಳು ! ಟ್ರಂಕಿನಲ್ಲಿದ್ದ ಸಾಮಾನನ್ನೆಲ್ಲಾ ಒದರಿದಳು ; ವೃಂದಾವನದ ಬಳಿಯಲ್ಲಿಯೂ ನಲ್ಲಿಯ ಹತ್ತಿರವೂ ನೋಡಿದಳು ; ಸಿಕ್ಕಲಿಲ್ಲ. ಕೊನೆಗೆ ಅಡಿಗೆ ಮನೆಯಲ್ಲಿ ಸಾಸುವೆಯ ಡಬ್ಬದಿಂದ ಹಿಡಿದು, ಮೆಂತ್ಯದ ಡಬ್ಬ ಕಾಫಿ ಡಬ್ಬ ಎಲ್ಲಾ ಹುಡುಕಿದಳು ; ಉಂಗುರದ ಸುಳಿವೇ ಇಲ್ಲ.

ಪೆಚ್ಚುಮೋರೆಯಿಂದ ರಾಯರ ಬಳಿ ಬಂದು ನಿಂತಳು ! ರಾಯರು ಸುಮ್ಮಗಿರಲಿಲ್ಲ. " ಇನ್ನೂ ನಿದ್ದೆಯ ಜೋಗು ಬಿಟ್ಟಿಲ್ಲವೇನೋ ; ನಿಮಗೆಲ್ಲ ಏತಕ್ಕೆ ? " ಎಂದು ಮುಂತಾಗಿ ಮೂದಲಿಸಿದರು. ತಪ್ಪು ತನ್ನ ಮೇಲಿರುವಾಗ ರಾಯರನ್ನು ಮಾತಿನಲ್ಲಿ ಎದುರಿಸುವುದು ಕಷ್ಟವಾಯಿತು ; ಆದರೆ ರಾಯರನ್ನು ಮೂದಲಿಸಲು ಒಂದು ' ಛಾನ್ಸ್ ' ಇದೆ—ಎಂದು ಮನದಲ್ಲಿ ತಿಳಿದು ಸುಮ್ಮಗಾದಳು.

ತಾವು ಮಾಡಿದ ತಂತ್ರವು ಫಲಿಸಿತು ಎಂದು ರಾಯರು ಸಂತೋಷಗೊಂಡರು. ಅಷ್ಟಕ್ಕೆ ತಮ್ಮ ಮಾತಿನ ಸುರಿಮಳೆಯನ್ನು ನಿಲ್ಲಿಸಿ ಸುಮ್ಮಗಾದರು.

ರಾತ್ರಿ ಸುಮಾರು ಎಂಟು ಗಂಟೆಯ ಸಮಯ, ರಾಯರು ಊಟ ತೀರಿಸಿ ವರಾಂಡದಲ್ಲಿ ಅಡ್ಡಾಡುತ್ತ, ಹಾಗೆಯೆ ಇಜಿಛೇರಿನ ಮೇಲೆ ಕುಳಿತು, ತಾಂಬೂಲವನ್ನು ಅಗಿಯುತ್ತ, ಶಾರದೆಯೊಡನೆ ಮಾತನಾಡುತ್ತಿದ್ದರು.

ಶಾರದೆ ಒಪ್ಪಮಾಡಿದ ಒಂದು ತಾಂಬೂಲವನ್ನು ರಾಯರ ಕೈಗೆ ಕೊಡುತ್ತ " ನಿಮ್ಮ ಕೈಯಲ್ಲಿದ್ದ ಉಂಗುರವು ಕಾಣಿಸುವುದಿಲ್ಲವಲ್ಲ ? ಎಲ್ಲಿಯಾದರೂ ಊರಲ್ಲೇ ಮರೆತು ಬಂದಿರೋ ? ನಿಮ್ಮ ಉಂಗುರ ಎಲ್ಲಿಟ್ಟಿದ್ದೀರಿ ? " ಎಂದು ಮುಂತಾಗಿ ಪ್ರಸ್ತಾಪಿಸಿದಳು.

ರಾಯರು ತತ್‌ಕ್ಷಣ ಕೈನೋಡಿಕೊಂಡು, ತಮ್ಮ ಕೋಟಿನ ಜೋಬನ್ನು ನೋಡಿದರು. ಉಂಗುರವಿಲ್ಲ ! ನಿನ್ನೆಯ ರಾತ್ರಿ, ಸ್ಟೇಷನ್‌ನಲ್ಲಿರುವಾಗ ಜೋಬಿನಲ್ಲಿ ಇಟ್ಟ ಜ್ಞಾಪಕ ; ಹಾಗೆಯೆ ತಮ್ಮ ಡ್ರಾಯರನ್ನು ಜಪ್ತಿ ಮಾಡಿದರು ! ವೇಸ್ಟ್ ಪೇಪರ್ ಬುಟ್ಟಿಯಲ್ಲಿದ್ದ ಕಾಗದವನ್ನೆಲ್ಲಾ ಸುರಿದು ಹುಡುಕಿದರು ! ಇಲ್ಲ ! ಇಲ್ಲ !

ಕೊನೆಗೆ ರಾಯರು ತಾವೇ ಮೈಮರೆತು ಹಾಳುಮಾಡಿಕೊಂಡು, ಶಾರದೆಯನ್ನು ಬೈದದ್ದು ತಪ್ಪೆಂದು ಮನಗಂಡರು. ಪಾಪ ! ಏನು ಮಾಡಿಯಾರು ; ಕಾರಣ ಮಿಂಚಿತ್ತು !

ಆಶ್ಚರ್ಯ ! ಆಶ್ಚರ್ಯ ! ರಾಯರು ಹುಸಿನಗೆ ನಗುತ್ತ, ತಾವು ಬಚ್ಚಿಟ್ಟಿದ್ದ ಶಾರದೆಯ ಉಂಗುರ ಕೈಗೆ ಹಾಕಿಕೊಂಡು ಬಂದು ಯಥಾಸ್ಥಾನದಲ್ಲಿ ಕುಳಿತರು. ಅಷ್ಟರಲ್ಲಿ ಶಾರದೆಯು ತನ್ನ ಪರ್ಸಿನಲ್ಲಿಟ್ಟಿದ್ದ—ಅಂದು ಬಚ್ಚಿಟ್ಟಿದ್ದ—ರಾಯರ ಉಂಗುರವನ್ನು ಕೈಗೆ ಹಾಕಿಕೊಂಡು ರಾಯರ ಪಕ್ಕದಲ್ಲಿ ಎಂದಿನಂತೆ ಕುಳಿತಳು.

ರಾಯರು ಮೆಲ್ಲನೆ ನಕ್ಕು ' ಶಾರದೆ....ನೋಡು ! ' ಎಂದು ಕೈ ತೋರಿಸಿದರು. ಶಾರದೆ ಸುಮ್ಮನಿರದೆ ಪ್ರತಿಯಾಗಿ ತನ್ನ ಕೈಯನ್ನೂ ತೋರಿಸಿದಳು. ಏನು ಮಾಯೆ ! ಏನು ತಂತ್ರ ! ರಾಯರ ಉಂಗುರ ಶಾರದೆಯ ಕೈಯಲ್ಲಿ, ಶಾರದೆಯ ಉಂಗುರ ರಾಯರ ಕೈಯಲ್ಲಿ....; ಒಬ್ಬರನ್ನೊಬ್ಬರು ನೋಡುತ್ತ ಒಂದು ಸಲುಗೆಯ ನಗೆಯನ್ನು ನಕ್ಕರು. ರಾಯರಿಗೆ ಅಂದು ಸ್ಟೇಷನ್ನಿನಲ್ಲಿರುವಾಗ ತಮ್ಮ ಉಂಗುರವನ್ನು ಜೋಬಿನಲ್ಲಿಟ್ಟ ಜ್ಞಾಪಕ ಬಂತು. "ಶಾರದೇ ! ಏನಾದರೂ ಆಗಲಿ, ನಾನು ' ಮರ್ಚೆಂಟ್ ಆಫ್ ವೆನಿಸ್ (Merchant of venice)" ನಲ್ಲಿ " Ring Episode " ಓದಿದ್ದೆನಲ್ಲವೆ ; ಹಾಗೆಯೆ ನಮ್ಮದೂ ಆಯಿತು...." ಎಂದು ಎನ್ನಲು, ವಿದ್ಯುದ್ದೀಪವು ಪಣಕ್ಕನೆ ಆರಿತು... ಅಷ್ಟರಲ್ಲಿ ಒಂಬತ್ತನ್ನು ಕಾಲಚಕ್ರವು ಹೊಡೆಯಿತು.

ಕಾಮವಿಜ್ಞಾನದ ಹೊಸದೊಂದು ಪುಸ್ತಕ !

ವಿಕೃತ-ಕಾಮ

SEXUAL DEVIATIONS

ಲೇಖಕರು :— ಡಾ. ಡಿ. ವಿ. ರಾವ್

ಬೆಲೆ ೧—೮—೦] ★ [ವ್ಹಿ.ಪಿ. ವೆಚ್ಚ ಬೇರೆ

ಕಾಮೋದಯ, ಬಾಲ್ಯಾವಸ್ಥೆಯ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಸಲಿಂಗರತಿ, ಪ್ರದರ್ಶನರತಿ, ಪಶುಗರತಿ ಇತ್ಯಾದಿ ನೂರಾರು ಗುಟ್ಟಿನ ವಿಷಯಗಳಿವೆ.

ಪ್ರೇಮಕಲಾ (೩ನೆಯ ಆವೃತ್ತಿ)	೧—೮—೦
ಪೌರುಷ	೧—೮—೦
ರತಿರಹಸ್ಯ	೧—೮—೦
ಕಾಮದಹನದ ಭ್ರಾಂತಿ	೦—೧೨—೦
ಪಿರಂಗಿ ಪರಮಾ ರೋಗ ಸಮಸ್ಯೆ	೦—೮—೦
ವಿವಾಹ್ಯಾಖ್ಯಾನ ಮತ್ತು ಲೈಂಗಿಕ ಶಿಕ್ಷಣ ..	೦—೪—೦
ಕೈಗನ್ನಡಿ (ಸಾಮುದ್ರಿಕ ಶಾಸ್ತ್ರ)	೧—೦—೦

ಇವಲ್ಲದೆ ನೂರಾರು ಕಥೆ ಕಾದಂಬರಿಗಳೂ ಉಂಟು. ಕ್ಯಾಟಲಾಗಿಗೆ ೧ ಆಣೆ ಅಂಚೆ ಚೀಟಿ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಇದು ಧ್ಯೇಯ, ಇದು ಧೋರಣ!

ಶ್ರೀ. ಆಲೂರ ವೆಂಕಟರಾಯರು, ಧಾರವಾಡ

★

ಕರ್ನಾಟಕಕ್ಕೆ ಬೇಕಾಗಿರುವ ಪ್ರಮುಖ ಚಟುವಟಿಕೆಗಳೆಂದರೆ ಎರಡು. ಒಂದು ಸಾಂಸ್ಕೃತಿಕ ಏಕೀಕರಣಕ್ಕೆ, ಇನ್ನೊಂದು ರಾಜಕೀಯ ಏಕೀಕರಣಕ್ಕೆ. ಮೊದಲನೆಯ-ದಕ್ಕಾಗಿ ಕನ್ನಡ ಸಾಹಿತ್ಯಪರಿಷತ್ತು ದುಡಿಯಬೇಕು; ಎರಡನೆಯದಕ್ಕಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಹೋರಾಡಬೇಕು.

★

ಕರ್ನಾಟಕತ್ವದ ಬಗ್ಗೆ ಇರುವ ನನ್ನ ಕಲ್ಪನೆಗಳನ್ನು ನಾನು ಮುಂಚಿನಿಂದ ಸ್ಪಷ್ಟವಾಗಿ ಹೇಳುತ್ತಲೇ ಬಂದಿರುವೆ. ಆದರೂ ಕೆಲವರು ಆ ಬಗ್ಗೆ ನನ್ನ ವಿಚಾರಗಳನ್ನು ಪುನಃ ಪುನಃ ಕೇಳುತ್ತಿರುವುದರಿಂದ, ಈಗ ಅವನ್ನು ಇಲ್ಲಿ ಸಂಕಲಿತವಾಗಿ ಸಂಕ್ಷೇಪದಲ್ಲಿ ಇಟ್ಟಿರುವೆ. ಹೆಚ್ಚಿಗೆ ತಿಳಿದುಕೊಳ್ಳಲಿಚ್ಛಿಸುವವರು ೧೯೩೦ನೆಯ ಇಸ್ವಿಯಲ್ಲಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷನೆಂದು ಮಾಡಿದ ಪುಟ್ಟ ಭಾಷಣವನ್ನೂ "ನನ್ನ ಜೀವನಸ್ಮೃತಿಗಳು" ಎಂಬ ಗ್ರಂಥವನ್ನೂ ಓದಬೇಕು. ಮತ್ತೆ ಬರೆಯುವ ಗೋಜಿಗೆ ಹೋಗುವುದಿಲ್ಲ.

ನಾನು ಶ್ರೀ. ಬೇಂದ್ರೆಯವರಿಗೆ ತಾ. ೨೯-೩-೩೮ ನೆಯ ದಿವಸ ಕೊಟ್ಟ ಟಿಪ್ಪಣಿಯಲ್ಲಿಯ ಅವತರಣಿಕೆ ಇಲ್ಲಿ ಕೊಡುವೆ:— "ಕರ್ನಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಏಕೀಕರಣ-ಗಳನ್ನು ಸಾಧಿಸುವುದಕ್ಕೆ ಉಪಯೋಗವಾಗುವ ಸಂಸ್ಥೆಗಳು ಎರಡು; (೧) ಪರಿಷತ್ತು ಮತ್ತು (೨) ಕಾಂಗ್ರೆಸ್ಸು. ಇವೆರಡೂ ಸಂಸ್ಥೆಗಳನ್ನು ಹಾಗೆ ಉಪಯೋಗಿಸಿಕೊಳ್ಳಬೇಕೆಂದು ನನ್ನ ಇಚ್ಛೆ. ರಾಜಕೀಯ ಏಕೀಕರಣ ಚಳವಳಿಯು ಇತ್ತ ನಡೆಯ-ಬೇಕು; ಅದಕ್ಕೆ ಪಕ್ವಕಾಲ ಬರುವಷ್ಟರಲ್ಲಿ ಸಾಂಸ್ಕೃತಿಕ ಏಕೀಕರಣವು ಪರಿಷತ್ತಿನ ಮುಖಾಂತರವಾಗಿ ಪಕ್ವವಾಗಬೇಕು, ಎಂಬುದು ನನ್ನ ಧೋರಣೆ. ಆ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯವು ಸಾಂಸ್ಕೃತಿಕ ಧ್ಯೇಯ. ರಾಜಕೀಯ ಏಕೀಕರಣವು ರಾಜಕೀಯ ಧ್ಯೇಯ. ಎರಡೂ ಅರ್ಥಾತ್ ಧ್ಯೇಯಗಳೇ. ಇವೆರಡೂ ಧ್ಯೇಯಗಳನ್ನು ಒಟ್ಟುಗೂಡಿಸುವು-ದಕ್ಕೆ ಉಪಯೋಗವಾಗುವ ಚಳವಳಿಯೆಂದರೆ ಲಾಯಬ್ರರಿಗಳ ಸ್ಥಾಪನೆಯ ಚಳವಳಿಯು. ಅದು ಅವುಗಳನ್ನು ಜೋಡಿಸುವ ಕೊಂಡಿಯು. ಇದು ನನ್ನ ಮುಖ್ಯ ಧೋರಣ."

ಸಾರಾಂಶ, ನನ್ನ ಮುಖ್ಯ ಉದ್ದೇಶವು ಅಖಂಡ ಕರ್ನಾಟಕದ ನಿರ್ಮಾಣ. ಅದು ಒಮ್ಮೆಲೆ ಪೂರ್ಣವಾಗತಕ್ಕುದು ಅಲ್ಲ. ಅದಕ್ಕೆ ಕನ್ನಡಿಗರ ಕಡುತರವಾದ ತಪಶ್ಚರ್ಯ ಬೇಕು. ಸತತ ಸಾಧನೆ ಮಾಡುವುದು ಕನ್ನಡಿಗರ ಕೈಯಲ್ಲಿ ಇದೆ. ಮುಖ್ಯ ಧ್ಯೇಯ-ವನ್ನು ಕಣ್ಮರೆಮಾಡುವುದಾಗಲಿ ಅಥವಾ ಬಾಯಿಯಿಂದ ಏಕೀಕರಣದ ಜಪವನ್ನು ಮಾತ್ರ ಉಚ್ಚರಿಸಿ ಕೈಯಿಂದ ಕಾರ್ಯಮಾಡುವ ಪ್ರಸಂಗ ಬಂದಾಗ ಅದನ್ನು ಯಾವುದೊಂದು ನೆವದಿಂದ ತಪ್ಪಿಸಿಕೊಳ್ಳುವುದಾಗಲಿ ಇಷ್ಟವಲ್ಲ. ಸಾಹಿತ್ಯ ಪರಿಷತ್ತಿನಲ್ಲಿಯೂ ನನ್ನ ಕೈ ಸಾಗಲಿಲ್ಲ, ಕಾಂಗ್ರೆಸ್ಸಿನಲ್ಲಿಯೂ ಸಾಗಿಲ್ಲ. ಆದಕಾರಣ ನನ್ನ ಕನಸು ಇನ್ನೂ ಕನಸಾಗಿಯೆ ಉಳಿದಿದೆ.

ಸಾಹಿತ್ಯ ಪರಿಷತ್ತಿನ ನನ್ನ ಅಧ್ಯಕ್ಷ ಭಾಷಣದಲ್ಲಿ, ಕರ್ನಾಟಕದ ವಾಙ್ಮಯಜಾಗ್ರತಿಗೆ ಅತ್ಯವಶ್ಯವಾದ ಅದರ ಬಹಿರ್ವ್ಯಾಪ್ತಿ-ಯನ್ನು ಕುರಿತು ಹೀಗೆ ಹೇಳಿರುವೆ: "ಕರ್ನಾಟಕಕ್ಕಂತೂ ಈ ವ್ಯಾಪಕತೆಯ ಪ್ರಶ್ನೆಯ ಮಹತ್ತ್ವವು ಬಹಳವಿದೆ. ಕರ್ನಾಟಕವು ಎಲ್ಲ ಕಡೆಯಲ್ಲಿಯೂ ಕರಗುತ್ತ ನಡೆದಿದೆ. ನಾಲ್ಕೂ ದಿಕ್ಕುಗಳಲ್ಲಿ ನಮ್ಮ ಪ್ರದೇಶವು ಸಂಕುಚಿತವಾಗುತ್ತ ನಡೆದಿದೆ. ಗಡಿನಾಡಿನ ಗೋಳನ್ನು ನಾವು ಆಲಿಸಬಾರದೊ? ಕರ್ನಾಟಕವೆಂಬುದೊಂದು ಜನಾಂಗವು. ಅದಕ್ಕೆ ಒಂದೇ ಒಂದು ಶರೀರ, ಮನಸ್ಸು ಮತ್ತು ಆತ್ಮಗಳಿರುತ್ತವೆಂಬ ಭಾವನೆಯು ಎಲ್ಲಿಯವರೆಗೆ ನಮ್ಮಲ್ಲಿ ಉತ್ಪನ್ನವಾಗಿಲ್ಲವೋ ಅಲ್ಲಿಯ ವರೆಗೆ ನಮ್ಮ ಕನ್ನಡ ನುಡಿಯ ಅಭಿವೃದ್ಧಿಯು ಭರದಿಂದ ಸಾಗಲಾರದು. ಮನುಷ್ಯನ ಬಾಯಿ-ಯಲ್ಲಿ ನಾಲಗೆ ಇರುವುದೇನೋ ನಿಜ; ಆದರೆ ನಾಲಗೆಯು ಬಾಯಿಯ ಸೊತ್ತಲ್ಲ. ಕಾಲಿಗೂ ನಾಲಗೆಯಿರುವುದು, ತಲೆಗೂ ನಾಲಗೆಯಿರುವುದು. ಬಾಯಿಯೊಳಗಿನ ನಾಲಗೆಯೇ ಇವುಗಳ ನಾಲಗೆ. ಆದಕಾರಣ, ಆವೆಲ್ಲ ಅವಯವಗಳಲ್ಲುಂಟಾದ ದುಃಖಗಳನ್ನು ನಾಲಗೆಯು ಉಸುರಲೇ ಬೇಕು. ಶರೀರದ ಯಾವ ಭಾಗದಲ್ಲಿಯೇ ದುಃಖವಾಗಿರಲಿ, "ಅದು ನನ್ನ ದುಃಖವು" ಎಂಬುವಷ್ಟು ನಮ್ಮ ಸಂವೇದನಾಶಕ್ತಿಯು ತೀಕ್ಷ್ಣವಾಗಿರ-

ಬೇಕು. ಹೀಗೆ ಅದು ಈಗ ನಮ್ಮಲ್ಲಿ ಉಂಟಾಗಿರುವುದೊ? ಇಲ್ಲ. ನಾವು ಪಂಪ-ರನ್ನರ ಉತ್ಸವಗಳನ್ನು ಮಾಡುತ್ತೇವೇನೋ ನಿಜ, ಆದರೆ ಪಂಪ-ರನ್ನರ ವಾಸಸ್ಥಳಗಳು ಕನ್ನಡಿಗರ ಕೈಬಿಟ್ಟು ಹೋಗುತ್ತವೆಂಬುದರ ಅರಿವು ನಮಗಿರುವುದಿಲ್ಲ. ಇದು, ಗೋವುಗಳನ್ನು ಅನ್ಯರು ಸೆಳೆಯುತ್ತಿರುವಾಗ ಅವುಗಳನ್ನು ಸಂರಕ್ಷಿಸಿಕೊಳ್ಳುವುದಕ್ಕೆ ತಿಲಪ್ರಾಯವೂ ಪ್ರಯತ್ನಪಡದೆ, ಮನೆಯಲ್ಲಿ ಬಂಗಾರದ ಗೋವುಗಳನ್ನು ಮಾಡಿ ಪೂಜೆಯನ್ನು ಮಾಡುತ್ತ ಕುಳಿತಂತೆ ಅಲ್ಲವೆ? ಕನ್ನಡ ನುಡಿಯೆಂದರೆ ಕರ್ನಾಟಕ ಸರ್ವಸ್ವವೆಂದು ತಿಳಿಯುವುದೊಂದು ವರ್ಗವೂ ನಮ್ಮಲ್ಲಿದೆ. ಅದೂ ಸಂಕುಚಿತ ಭಾವನೆಯೇ. 'ಅತ್ಯತಿಷ್ಠತ್ ದಶಾಂಗುಲಂ' ಎಂಬಂತೆ, ಕರ್ನಾಟಕತ್ವವು ಇವೆಲ್ಲ ವಿಷಯಗಳನ್ನು ಒಳಗೊಂಡು. ಮೀರಿ ನಿಂತಿರುತ್ತದೆ. ಇದರ ನಿಜವಾದ ಕಲ್ಪನೆ ಇಲ್ಲದಿರುವುದರಿಂದಲೇ ಗಡಿನಾಡಿನ ಪ್ರಶ್ನೆ ಕೊಳೆಯುತ್ತ ಬಿದ್ದಿದೆ.

ಗಡಿನಾಡುಗಳ ವಿಷಯವಾಗಿ ಎಂದಿಗೂ ಈ ತೆರದ ಜಗಳಗಳು ಇರತಕ್ಕವೇ. ಹಿಂದಕ್ಕೆ ತುರುಗಾಳಗಗಳಲ್ಲಿ ತುರುಗಳನ್ನು ಸಂರಕ್ಷಿಸುವುದಕ್ಕೋಸ್ಕರ ವೀರಗಲಿಗಳ ಸಲುವಾಗಿ ವೀರಗಲ್ಲುಗಳು ನೆಡಿಸಲ್ಪಟ್ಟಿವೆ. ಈಗಿನ ದಿವಸಗಳಲ್ಲಿ ಗಡಿನಾಡುಗಳಲ್ಲಿಯ ನಮ್ಮ ಗ್ರಾಮಗಳೆಂಬ ಗೋವುಗಳನ್ನು ಬದುಕಿಸುವ ಕಲಿಗಳು ಹುಟ್ಟಬಾರದೇ?"

ಸಾಹಿತ್ಯಪರಿಷತ್ತಿಗೆ ನಾನು ಕೊಟ್ಟ ರಾಜೀನಾಮೆಯಲ್ಲಿ ಬರೆದುದು ಇದು:— "ನಾನೇನೂ ಸಾಹಿತಿಯಲ್ಲ, ನಾನು ಇಲ್ಲದಿದ್ದರೆ ಪರಿಷತ್ತು ನಿಂತುಹೋಗುವುದಿಲ್ಲ. ಅಲ್ಲಿ ಇರುವವರಲ್ಲಿ ಅನೇಕರು ಕನ್ನಡದಲ್ಲಿ ಉದ್ದಾಮಪಂಡಿತರು, ಕನ್ನಡದ ಉಜ್ವಲಭಕ್ತರು, ಕನ್ನಡದ ಬಗ್ಗೆ ಅತ್ಯಂತ ಕಳಕಳಿಯುಳ್ಳವರು, ಅದರ ಬಗ್ಗೆ ಹಗಲಿರುಳು ದುಡಿಯುವವರು—ಎಂಬುದು ನಿರ್ವಿವಾದವಾಗಿದೆ. ಅವರ ಆ ಕೆಲಸದ ಬಗ್ಗೆ ನನ್ನ ಆಕ್ಷೇಪ ಎಂದೂ ಇಲ್ಲ. ಶ್ರೀ. ಬೇಂದ್ರೆಯವರಿಗೆ, ಅವರ ಹೇಳಿಕೆಯ ಪ್ರಕಾರ ನಾನು ಕೊಟ್ಟ ಟಿಪ್ಪಣಿಯಲ್ಲಿ ಹೇಳಿದಂತೆ, ನನ್ನ ಮುಖ್ಯ ಉದ್ದೇಶವು ಅಖಂಡ ಕರ್ನಾಟಕದ ನಿರ್ಮಾಣ. ಆ ವಿಷಯದಲ್ಲಿ ಪರಿಷತ್ತು ತಾನು ಮಾಡತಕ್ಕ ಕಾರ್ಯವನ್ನು ಸಾಕಷ್ಟು ಮಾಡಲಿಲ್ಲ, ಮಾಡುವುದಿಲ್ಲ (ಸಮ್ಮೇಳನ ಕೂಡಿಸುವ ನನ್ನ ಸೂಚನೆ ಒಂದು ಹೊರತಾಗಿ)ವೆಂಬುದು ನನ್ನ ಮೊದಲನೆಯ ಆಕ್ಷೇಪ."

ಇದರಿಂದ, ನನ್ನ ವಿಚಾರಗಳೇನಿರುವುವೆಂಬುದು ಸ್ಪಷ್ಟವೇ ಅದೆ. ಕರ್ನಾಟಕದಲ್ಲಿ ಮುಖ್ಯವಾದ ಚಟುವಟಿಕೆಗಳು ಎರಡೇ ಇರಬೇಕು: (೧) ಸಾಂಸ್ಕೃತಿಕ ಏಕೀಕರಣ ಚಳವಳಿ. (೨) ರಾಜಕೀಯ ಏಕೀಕರಣ ಚಳವಳಿ. ರಾಜಕೀಯ ಏಕೀಕರಣಕ್ಕಾಗಿ ಬೇರೆ ಸಂಸ್ಥೆಯ ಆವಶ್ಯಕತೆ ಇದ್ದಿಲ್ಲ. ಕಾಂಗ್ರೆಸ್ ಕಮಿಟಿಯವರು ಅದನ್ನು ಕೈಕೊಳ್ಳುವುದಿಲ್ಲವೆಂದು ಮತ್ತೊಂದು ಸಂಸ್ಥೆ ಹೊರಟಿತು. ಮೇಲೆ ಹೇಳಿದ ಗಡಿನಾಡಿನ ಪ್ರಶ್ನೆ ಮುಖ್ಯವಾಗಿ— ಗೌಣದಿಂದ ಅಲ್ಲ— ಪರಿಷತ್ತಿನ ಕಾರ್ಯವೆಂಬುದು ನನ್ನ ಅಭಿಪ್ರಾಯ. ಅಲ್ಲಿ ಕನ್ನಡ ಜಾಗ್ರತಿಮಾಡುವುದು, ಕನ್ನಡ ವಾಚನಾಲಯಗಳನ್ನು ತೆರೆಯುವುದು, ಕನ್ನಡ ಶಾಲೆಗಳನ್ನು ಸ್ಥಾಪಿಸುವುದು, ಕನ್ನಡಕ್ಕಾಗಿ ಸ್ವತಃ ಮುಂದೆ ನಿಂತು ಬಡಿದಾಡುವುದು—ಇವೇ ಮೊದಲಾದುವುಗಳು, ಪರಿಷತ್ತು ಈ ವಿಷಯದಲ್ಲಿ ಮಾಡತಕ್ಕ ಮುಖ್ಯ ಕಾರ್ಯಗಳು. ಅವನ್ನು ಈ ವರೆಗೂ ಪರಿಷತ್ತು ಮಾಡಿರುವುದಿಲ್ಲ, ಆ ಹೊಣೆಯನ್ನು ಅದು ಸ್ವೀಕರಿಸುವುದೋ ಇಲ್ಲವೋ ಎಂದು ಸಂದೇಹವುಂಟಾಗಿದೆ. ಇದನ್ನು ನಾನು ಬಚ್ಚಿಟ್ಟಿಲ್ಲ; ಬಿಚ್ಚಿ ಬಿಚ್ಚಿ ಮತ್ತೆ ಮತ್ತೆ ಹೇಳಿರುವೆ. ಮೊನ್ನೆ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಮಾಡಿದ ಭಾಷಣದಲ್ಲಿ ಒಂದು ಸುಂದರವಾದ ವಾಕ್ಯವನ್ನು ನುಡಿದಿರುವರು. ಅದೇನೆಂದರೆ:"ಗಡಿನಾಡಿನ ಕನ್ನಡಿಗರ ಪ್ರಶ್ನೆ ಅವರೊಬ್ಬರೇ ಬಿಡಿಸತಕ್ಕ ಪ್ರಶ್ನೆಯಲ್ಲ, ಒಬ್ಬರಿಂದ ಬಿಡತಕ್ಕ ಪ್ರಶ್ನೆಯೂ ಅಲ್ಲ. ಗಡಿನಾಡಿನಲ್ಲಿ ಶತ್ರುಬಂದರೆ ಅವರ ಉಪಟಳವನ್ನು ತಗ್ಗಿಸುವುದಕ್ಕೆ ಹೇಗೆ ಇಡೀ ರಾಷ್ಟ್ರವೇ ಮುಂದಾಗಿ ನಿಲ್ಲಬೇಕೋ ಹಾಗೆ ನಾವೆಲ್ಲರೂ ಇದಕ್ಕೆ ಮುಂದಾಗಿ ನಿಲ್ಲಬೇಕು". ಎಂಥ ಸವಿಯಾದ ಮತ್ತು ಸತ್ಯವಾದ ನುಡಿಯಿದು! ಅದು ಕೃತಿಯಲ್ಲಿ ಬಂದರೆ ಕರ್ನಾಟಕವು ಧನ್ಯ. ಆದರೆ "ಕನ್ನಡನುಡಿ"ಯ ೨೭-೮-೪೩ನೆಯ ಸಂಚಿಕೆಯ ಅಗ್ರಲೇಖವಾದ "ಗಡಿನಾಡಿನ ಕನ್ನಡ" ಎಂಬುದರಲ್ಲಿ ಬರೆದ ವಾಕ್ಯವನ್ನು ಓದಿ ಸಂದೇಹವುಂಟಾಗಿದೆ. ಆ ವಾಕ್ಯವು ಇದು. "ಆ ಭಾಗದ ಪ್ರಮುಖ ಕನ್ನಡಿಗರು ತಮ್ಮ ಕನ್ನಡದ ಪ್ರೇಮವನ್ನೂ ಹುರುಪನ್ನೂ ದೃಢಪಡಿಸಿಕೊಂಡು, ಜಾಗ್ರತೆಯಾಗಿ ಕಾರ್ಯೋನ್ಮುಖರಾಗಬೇಕೆಂದು ಆಗ್ರಹಪೂರ್ವಕವಾಗಿ ಸೂಚಿಸಬಚ್ಛಿಸುತ್ತೇವೆ. ಈ ವಿಷಯದಲ್ಲಿ ಪರಿಷತ್ತು ತನ್ನ ಕೈಯಲ್ಲಾಗುವ ಸಹಾಯವನ್ನು ಮಾಡಲು ಸಿದ್ಧವಾಗಿದೆ." ಇದೇನು ಪರಿಷತ್ತು ತನ್ನ ಹೊಣೆಯನ್ನು ಹಾರಿಸಿಕೊಳ್ಳುವ ಚಿಹ್ನವೋ ಏನೊ? ಅದು ಸುಳ್ಳಾದರೆ ಸಂತೋಷ. ನನಗೇನೋ ಪರಿಷತ್ತು ಈ ಕಾರ್ಯವನ್ನು ಪ್ರಾಮುಖ್ಯವಾಗಿ ಇಟ್ಟುಕೊಂಡೀತೆಂಬ ಆಶೆಯಿಲ್ಲ. ಅಖಿಲ ಕರ್ನಾಟಕದ ಕೇಂದ್ರಸಂಸ್ಥೆಯೆಂದು ಹೇಳಿಕೊಳ್ಳುವ ಪರಿಷತ್ತಿನ ಕೆಲಸವಿದು ಎಂದು ನನ್ನ ಮತ. ಅದು ಸ್ವೀಕರಿಸದಿದ್ದರೆ ಮತ್ತೊಂದು ಪುರಾತನ ಕೇಂದ್ರಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಇದನ್ನು ಕೈಕೊಳ್ಳಬೇಕು. ಸುವರ್ಣಮಹೋತ್ಸವವಾದ ಬಳಿಕ ಸಂಘದವರು ಕರೆದ ಸಭೆಯಲ್ಲಿ ಪರಿಷತ್ತಿನ ಮತ್ತು ಸಂಘದ ಕಾರ್ಯನಿರ್ವಾಹಕ ಮಂಡಲದವರು ಒತ್ತಟ್ಟಿಗೆ ಕೂಡಿ, ತಮತಮಗೆ ಅನುಕೂಲವಾದ ಕಾರ್ಯಗಳನ್ನು ವಿಭಾಗಿಸಿಕೊಂಡು, ಎರಡೂ ಒಂದೇ ಸಂಘಟಿತ ಸಂಸ್ಥೆ (Federated) ಎಂಬ ಭಾವನೆಯಿಂದ ಕಾರ್ಯಮಾಡಬೇಕು. ಈ ವಿಷಯದಲ್ಲಿ ಯಾರು ಕೇಳಿದರೂ ಕೇಳ-

ದಿದ್ದರೂ ನಾನು ಹೇಳುವುದು ಇಷ್ಟೇ. ಕೇಳಿದರೆ ಹೇಳದೆ ಇರುವುದಿಲ್ಲ; ಕೇಳದಿದ್ದರೆ ನಾನಾಗಿಯೆ ಹೇಳಲಿಕ್ಕೆ ಹೋಗುವುದಿಲ್ಲ.

ಇದೇ ಸಂದರ್ಭದಲ್ಲಿ, ಇನ್ನೊಂದು ಚಿಕ್ಕ ವಿಷಯವನ್ನು ಕನ್ನಡಿಗರ ಮುಂದೆ ಇಡಲಿಚ್ಛಿಸುತ್ತೇನೆ. ಅದೇನೆಂದರೆ—ನಮ್ಮ ಪರಿಷತ್ತಿಗೆ 'ಕನ್ನಡ ಸಾಹಿತ್ಯಪರಿಷತ್ತು' ಎಂಬ ಹೆಸರು ಅಷ್ಟೊಂದು ಅನ್ವರ್ಥಕವಾಗಿಲ್ಲವೆಂಬ ವಿಚಾರ. ಪರಿಷತ್ತು ಸ್ಥಾಪಿತವಾದಾಗಿನ ಆ ವಿಷಯಕ್ಕೆ ನಡೆದ ಚರ್ಚೆ ಈಗ ಅನೇಕರಿಗೆ ಗೊತ್ತಿರುವ ಸಂಭವವಿಲ್ಲ. ಧಾರವಾಡದಲ್ಲಿ ೧೯೦೭ ಮತ್ತು ೮ ರಲ್ಲಿ ಸಮ್ಮೇಲನಗಳು ನಡೆದಾಗ ಅವು ಕೇವಲ ಕನ್ನಡನುಡಿಯ ಅಂತಃಪ್ರಭಾವದ ಅಭಿವೃದ್ಧಿಗಾಗಿ ಚರ್ಚಿಸದೆ, ಕನ್ನಡಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಕುರಿತು ವಿಚಾರ ಮಾಡಿದುವು. ಅವಕ್ಕೆ ಆಗ 'ಗ್ರಂಥಕರ್ತರ ಸಮ್ಮೇಳನ'ವೆಂದು ಹೆಸರು ಇತ್ತು. ಮುಂದೆ ೧೯೧೫ ರಲ್ಲಿ ಬೆಂಗಳೂರಲ್ಲಿ ಸಮ್ಮೇಲನವು ಕೂಡಿದಾಗ ಶಾಶ್ವತ ಸಭೆಯು ಸ್ಥಾಪನವಾಗಬೇಕೆಂದು ನಿಶ್ಚಿತವಾಯಿತು. ಆಗ ಅದಕ್ಕೆ ಯಾವ ಹೆಸರಿಡಬೇಕೆಂಬ ಬಗ್ಗೆ 'ಭವತಿ ನ ಭವತಿ' ಆಯಿತು. ಆ ಸಮ್ಮೇಲನದಲ್ಲಿ ಗಡಿನಾಡುಗಳ ಪ್ರತಿನಿಧಿಗಳಾಗಿ ಬಂದಿದ್ದ ಮಾನನೀಯ ರಬಕವಿಯ ತಮ್ಮಣ್ಣಪ್ಪನವರೂ, ತಿರಹಟ್ಟಿಯ ಮಂಗಸೂಳಿ ರಾಮರಾಯರೂ, ಕಂಠಗದ್ಗದಿತವಾಗುವಂಥ ತಮ್ಮ ಅತ್ಯಂತ ಸ್ಫೂರ್ತಿದಾಯಕ ಶೈಲಿಯಲ್ಲಿ ಗಡಿನಾಡಿನ ಗೋಳನ್ನು ಸಂಪೂರ್ಣವಾಗಿ ಬಣ್ಣಿಸಿದ್ದರಿಂದ, ಗಡಿನಾಡಿನ ಪ್ರಶ್ನೆಯನ್ನು ಆ ಶಾಶ್ವತಸಂಸ್ಥೆಯು ಕೂಡಲೆ ತೆಗೆದುಕೊಳ್ಳಬೇಕೆಂದು ನಿಶ್ಚಿತವಾಗಿತ್ತು. ಆದ ಕಾರಣ, ಈ ಮಾದರಿಯ ಎಲ್ಲ ಪ್ರಶ್ನೆಗಳನ್ನೂ ಒಳಗೊಳ್ಳುವಂಥ ವ್ಯಾಪಕವಾದ ಹೆಸರನ್ನು ಇಡಬೇಕೆಂದು ಗೊತ್ತಾಯಿತು. (ಶ್ರೀ. ಮುದವೀಡ ಕೃಷ್ಣರಾಯರು ಅದನ್ನು ಬಣ್ಣಿಸಿ, ತಮ್ಮ ಅಮೋಘವಾಣಿಯಿಂದ ಗಂಡು ವಕ್ತೃತ್ವವೆಂದರೆ ಹೇಗೆ ಇರುತ್ತದೆಂಬ ಮಾದರಿಯನ್ನು ಅಲ್ಲಿಯವರಿಗೆ ತೋರಿಸಿ, ಅವರನ್ನು ದಂಗುಗೊಳಿಸಿದ್ದರು.) ಆದರೆ, ನಾವು ಯಾವ ಹೆಸರನ್ನು ಸೂಚಿಸಿದರೂ ಅಲ್ಲಿ ಕೂಡಿದ ಪಂಡಿತವರ್ಗವು ಅದಕ್ಕೆ ವ್ಯಾಕರಣಗಳ ತಪ್ಪುಗಳನ್ನು ತೆಗೆಯುತ್ತಿತ್ತು. ಕೊನೆಗೆ ಸಭಿಕರೆಲ್ಲರೂ ಬೇಸತ್ತು 'ತಪ್ಪೇ ಇರಲಿ ಒಪ್ಪೇ ಇರಲಿ, ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬುವ ಹೆಸರು ಸದ್ಯಕ್ಕೆ ಇರಲಿ' ಎಂದು ಹೇಳಿ ಅಂಗೀಕರಿಸಿದರು. ಇದನ್ನು ಈಗ ಇಷ್ಟು ಒತ್ತಿ ಹೇಳುವುದಕ್ಕೆ ಒಂದು ಕಾರಣವಿದೆ. ಅದೇನೆಂದರೆ, 'ಕನ್ನಡ ಸಾಹಿತ್ಯಪರಿಷತ್ತು' ಎಂಬ ಈಗಿನ ಹೆಸರಿನಿಂದಲೂ ಹಿಂದಿನ ಹೆಸರಿನಿಂದಲೂ ವಾಙ್ಮಯಾಭಿಮಾನಿಗಳನೇಕರಲ್ಲಿ ಒಂದು ತಪ್ಪು ತಿಳಿವಳಿಕೆಯುಂಟಾದಂತೆ ನನಗೆ ತೋರುತ್ತದೆ. ಅದೇನೆಂದರೆ ಸಾಹಿತ್ಯವೆಂದರೆ ಭಾವವಾಙ್ಮಯ ಮಾತ್ರ, ಅದು ಬಹುಶಃ ಕಥೆ-ಕಾದಂಬರಿ ಕವಿತೆಗಳಿಗೆ ಮೀಸಲಾದದ್ದು. ನಿಜವಾಗಿ ಸಾಹಿತ್ಯವೆಂದರೆ ಯಾವತ್ತು ವಿಷಯಕ ವಾಙ್ಮಯ ಸಾಧನವೆಂದರೆ Literature on its widest sense ಎಂದು ನನ್ನ ತಿಳಿವಳಿಕೆ. ಆ ದೃಷ್ಟಿಯಿಂದ ವಿಜ್ಞಾನವೂ ಸಾಹಿತ್ಯವೇ, ಇತಿಹಾಸವೂ ಸಾಹಿತ್ಯವೆ, ಗಣಿತಶಾಸ್ತ್ರವೂ ಸಾಹಿತ್ಯವೇ; ಕಾಲೇಜುಗಳಲ್ಲಿ History & Literature ಎಂಬ ವಿಷಯಗಳನ್ನು ಪೃಥಕ್ಕರಿಸಿದಂತೆ ಮಾಡಿರುವ ಸಂಕುಚಿತ ಸಾಹಿತ್ಯವಲ್ಲವೆಂದು ನನಗೆ ಎನಿಸುತ್ತದೆ. ಅದು ನಿಜವಿರಲಿ ಇರದಿರಲಿ, ನಾವು ಸ್ಥಾಪಿಸಿದ ಪರಿಷತ್ತಿನ ಉದ್ದೇಶ ಅಷ್ಟು ಸಂಕುಚಿತವಲ್ಲವೆಂದು ನಾನು ಹೇಳಬಲ್ಲೆ. ಈ ಸಾಹಿತ್ಯವೆಂಬ ಹೆಸರಿಂದಲೋ ಏನೋ, ಗಡಿನಾಡಿನ ಕನ್ನಡದ ಪ್ರಶ್ನೆಯನ್ನದು ಪ್ರಾಮುಖ್ಯವಾಗಿ ಕೈಕೊಂಡಿಲ್ಲ, ಕೈಕೊಳ್ಳಲೊಲ್ಲದು ಏನೋ ಎಂದು ನನಗೆ ಭಯ. ನಾನು ಆ ವಿಷಯದಲ್ಲಿ ಮಾಡಿದ ಯಾವತ್ತು ಸೂಚನೆಗಳನ್ನು ಪರಿಷತ್ತು ನಿರಾಕರಿಸಿದ್ದಕ್ಕೆ ಇದೂ ಒಂದು ಮನಸ್ಸಿನೊಳಗಿನ ಕಾರಣವಿದ್ದರೂ ಇರಬಹುದು. ಪರಿಷತ್ತಿನ ಉದ್ದೇಶಗಳು ಅತ್ಯಂತ ವ್ಯಾಪಕವಾಗಿಯೆ ರಚಿಸಲ್ಪಟ್ಟಿರುತ್ತವೆಂದು—ಅವುಗಳನ್ನು ಸಿದ್ಧಗೊಳಿಸಿದವರಲ್ಲಿ ನಾನೊಬ್ಬನು ಇದ್ದುದರಿಂದ—ನೆನಪಿನಿಂದ ಹೇಳಬಲ್ಲೆ. (ಉದ್ದೇಶಗಳನ್ನು ನನ್ನಲ್ಲಿ ಹುಡುಕಿದೆ. ಸಿಗಲಿಲ್ಲ. ನಿಬಂಧನಾ ಪ್ರಕಟನೆಗಳಲ್ಲಿ ಅವುಗಳನ್ನು ಹಾಕುವ ಸಂಪ್ರದಾಯ ಬಿಟ್ಟುಹೋದಂತೆ ತೋರುತ್ತದೆ.) ಥಟ್ಟನೆ ಹಾಗೆ ಇಲ್ಲದಿದ್ದರೆ, ಉದ್ದೇಶಗಳನ್ನು ಮತ್ತಿಷ್ಟು ವ್ಯಾಪಕಗೊಳಿಸಬೇಕೆಂದು ಸೂಚನೆ. ಕರ್ನಾಟಕವೆಂಬ ಹೆಸರನ್ನಿತ್ತುದರಲ್ಲಿಯು ನಮ್ಮ ವಿಚಾರ ಹೀಗಿತ್ತು: 'ಕನ್ನಡ' ಎಂದಿಷ್ಟೆ ಹೇಳುವುದರಿಂದ, ಕರ್ನಾಟಕದಲ್ಲಿಯ ತುಳು ಮುಂತಾದುವುಗಳನ್ನು ಮಾತಾಡುವವರಿಗೆ ಇದಕ್ಕೂ ನಮಗೂ ಸಂಬಂಧವಿಲ್ಲವೆಂಬ ಭಾವನೆ ಬರಬಹುದೋ ಏನೋ ಎಂದು ತಿಳಿದು 'ಕರ್ನಾಟಕ' ಎಂಬ ದೇಶಭಾಷಾ ಹೆಸರನ್ನು ಇಟ್ಟಿತ್ತು. ಕೊನೆಗೆ ಶ್ರೀ. ದಿವಾಕರರಿಗೆ ಮತ್ತೊಂದು ಸಂದರ್ಭದಲ್ಲಿ ಬರೆದುದನ್ನೇ ಇಲ್ಲಿ ಹೇಳಿ ಮುಗಿಸುವೆ.

"ಇನ್ನು ನನ್ನ ಸ್ವಂತದ ವಿಚಾರ. ಪುನಃ ನಾನು ಚಳವಳಿಯಲ್ಲಿ ಬರಬೇಕೆಂದು ನೀವು ಇಚ್ಛಿಸುವುದು ನನ್ನ ಮೇಲಿನ ಪ್ರೇಮಾದರಗಳ ದ್ಯೋತಕ. ನಾನು ಬರುವಂತಿಲ್ಲವೆಂಬುದನ್ನು ಚಾಣಾಕ್ಷರಾದ ನೀವು ಕಂಡುಹಿಡಿದಿರಲಿಕ್ಕೆ ಸಾಕು. ಅದರ ಕಾರಣವು ಮತ್ತೇನಿರದೆ, ನನ್ನ ಸ್ವಂತದ ದುರ್ಬಲತೆ; ಹಾಗೆ ಬರುವುದಕ್ಕೆ ಬೇಕಾಗುವ ಯೋಗ್ಯತೆಯೂ ನನ್ನಲ್ಲಿ ಇಲ್ಲ, ಅನುಕೂಲತೆಯೂ ನನಗಿಲ್ಲ; ಅಲ್ಲದೆ ಅನುಕೂಲ ವಾತಾವರಣವೂ ನನಗಿಲ್ಲ. ಏನೋ, ಏನೂ ಸ್ವಂತವಿಚಾರಗಳೇ ಇಲ್ಲದಿದ್ದರೆ ಅದೊಂದು ರೀತಿಯಿಂದ ಸುಖವಾಗುತ್ತಿತ್ತು. ಹಾಗೂ ಇಲ್ಲ. ನನ್ನ ತಲೆಯಲ್ಲಿ ಮನೆಮಾಡಿಕೊಂಡಿರುವ ಕೆಲವು ವಿಚಾರಗಳು ನನ್ನನ್ನು ಚಳವಳಿಯಿಂದ ದಿನದಿನಕ್ಕೆ ದೂರಮಾಡಹತ್ತಿವೆ. ಆ ವಿಚಾರಗಳನ್ನು ಬಿಡದೆ, ಎಲ್ಲಿಯ ವರೆಗೆ ಕೆಲಸಮಾಡಲಿಕ್ಕೆ ಬರುತ್ತಿತ್ತೊ ಅಲ್ಲಿಯ ವರೆಗೆ ಮಾಡಿದೆ, ಚ್ಯುತಿಬರುವ ಪ್ರಸಂಗಬಂದಕೂಡಲೆ ಹೊರಬಿದ್ದೆ"

ಆದರೆ, ನಾನೇನು ಮಾಡಬೇಕೆಂಬ ಪ್ರಶ್ನೆ ತೀರಗೌಣ. ನಾನು ಮಾಡಬೇಕೆಂದು ಬಯಸುವ ಧ್ಯೇಯ ಇದು, ಧೋರಣ ಇದು!

ಸುಖವಸ್ತು ೧ ★ ಜಗಳ ★

ಶ್ರೀ. ಎಚ್. ಎಸ್. ಪಾಟೀಲ,
ಎಂ. ಎ., ಬಿಕಾಮ್, ಮುಂಬಯಿ

★

> ಈ ಮುಖ್ಯ ಶಿರೋಲೇಖದಡಿಯಲ್ಲಿ ಪ್ರತಿ ತಿಂಗಳೂ, ಇಂತಹ ಲೌಕಿಕ ವಿಚಾರಗಳ ವಿಚಾರ-ಚರ್ಚೆಯನ್ನು ಶ್ರೀ. ಪಾಟೀಲರು ಮಾಡಲಿರುವರು. —ಸಂ.

★

ಹಿರಿಯುತನ, ಹೆಣ್ಣು, ಹಣ ಇವೇ ಎಲ್ಲ ಜಗಳಗಳಿಗೂ ಮೂಲಕಾರಣವೆಂದು, ತಿಳಿದವರು ಅಭಿಪ್ರಾಯಪಡುವರು. ಆದರೆ ಯಾವುದಾದರೊಂದು ಜಗಳದ ಮೂಲಕಾರಣವನ್ನು ಕಂಡುಹಿಡಿವುದೆಂದರೆ, ಯಾವುದಾದರೊಂದು ರೋಗದ ಮೂಲವನ್ನು ಕಂಡುಹಿಡಿಯುವಷ್ಟು ಕಠಿನವಾಗಿದೆ!

★

ಜಗಳ! ಜಗಳದ ವಿಷಯವಾಗಿ ಅನೇಕರು ಅನೇಕಬಗೆಯಾಗಿ ಬರೆದಿದ್ದಾರೆ. ಜಗಳಗಳು ತರತರದ ಕಾರಣಗಳಿಂದುಂಟಾಗುತ್ತವೆ ಎಂದು ಅವರವರಿಗೆ ತೋಚಿದಂತೆ ಎಲ್ಲರೂ ಹೇಳುವವರೆ. ಆದರೆ ಅದರ ಬಗೆಯಲ್ಲಿ ಯಾವ ಬಗೆಯ ನಿಶ್ಚಿತಾರ್ಥದ ಮಾತೂ ನಿಷ್ಪನ್ನವಾಗಿಲ್ಲ. ಅದನ್ನು ಹಾಗೆ ನಿರ್ಧರಿಸಬೇಕು ಎಂದು ಹವಣಿಸಹೋದರೆ, ಅದೂ ಒಂದು ದೊಡ್ಡ ಜಗಳವೇ ಆಗಿ, ಇಲ್ಲಿಯವರೆಗೆ ಹೇಳಿದ ಅಸಂಖ್ಯ ಕಾರಣಗಳಿಗೆ ಅದನ್ನೂ ಸೇರಿಸಬೇಕಾದೀತು.

ಹಾಗೆ ಕೇಳಿದರೆ ಜಗಳಕ್ಕೆ ಕಾರಣ ಬೇಕಾದರೂ ಏಕೆ?— ಎಂಬುದೆ ಒಂದು ಪ್ರಶ್ನೆಯಾಗುವುದು. ಯಾವ ಜಗಳವನ್ನೆ ತೆಗೆದುಕೊಳ್ಳಲಿ, ಎಂತಹಬಗೆಯ ಜಗಳವನ್ನೆ ತಿಳಿದುಕೊಳ್ಳಲು ಪ್ರಯತ್ನಿಸಲಿ, ಅದರ ಕಾರಣ ಏನೂ ಇಲ್ಲ ಎನ್ನುವಷ್ಟು ಕ್ಷುಲ್ಲಕವಾದುದಿರುವುದು. ಆದರೂ ಸಹಿತ ಜನರು, ಏನಾದರೊಂದು ಕಾರಣ ಇದ್ದೇ ಇದೆ ಎಂಬ ಸಮಾಧಾನವನ್ನು ಹಚ್ಚಿಕೊಳ್ಳುವುದಕ್ಕಾದರೂ ಹಲವು ಕಾರಣಗಳನ್ನು ಸೂಚಿಸುತ್ತಾರೆ. ಒಂದು ಬೇನೆಗೆ ಇಂತಹ ಒಂದು ಅಥವಾ ಹಲವು ಸಂಗತಿಗಳು ಮೂಲದಲ್ಲಿವೆ ಎಂಬುದನ್ನು ನಿಶ್ಚಿತವಾಗಿ ಎಂತಹ ವೈದ್ಯನಿಗೂ ಹೇಳಲಿಕ್ಕಾಗದಂತೆ, ಜಗಳದ ಮಾತೂ ಇದೆ. ಎಷ್ಟೇ ಎದೆತಟ್ಟಿಕೊಂಡು ಆ ಕಾರಣಗಳನ್ನು ಹುಡುಕಿ ತೆಗೆಯಲು ಹೋದರೂ ಅದು ಪೂರ್ಣ ಸತ್ಯಕ್ಕೆ ಹೋಲಬಹುದು, ಇಲ್ಲವೆ ಅದರ ಬಳಿಯಲ್ಲಿ ಹೋಗಬಹುದು; ಹೊರತು ಅದೇ ಪೂರ್ಣಸತ್ಯವಾಗಲಾರದು.

ದೃಷ್ಟಾಂತಕ್ಕಾಗಿ ಗೆಳೆಯರ ಜಗಳವನ್ನೇ ತೆಗೆದುಕೊಳ್ಳೋಣ. ಗೆಳೆತನ ಮತ್ತು ಜಗಳ ಇವು ಮೊದಲು ಪರಸ್ಪರ ವಿರೋಧವಾದ ಪ್ರವೃತ್ತಿಗಳು ಎಂದು ಕಂಡುಬಂದರೂ, ಅವು ಒಂದನ್ನೊಂದು ಬಿಟ್ಟು ದೂರ ಇಲ್ಲ. ಗೆಳೆಯರ ಜಗಳಗಳಿಗೆ, ಮಿಕ್ಕ ಎಲ್ಲ ಜಗಳಗಳಂತೆ ಮೂಲ ಮೂರು ಕಾರಣಗಳೆ ಇರಬಹುದು. ಇವು ಮೂರು ಕಾರಣಗಳು ತೋರಿಕೆಗೆ ಕಂಡರೂ, ಅವುಗಳಲ್ಲಿ ಯಾವುದು ಎಂಬುದನ್ನು ನಿಶ್ಚಿತವಾಗಿ ಹೇಳುವುದು ಎಷ್ಟು ಬಿಗಿಯಾದ ವಿಷಯವೊ, ಅಷ್ಟೇ ಅದೇ ಮೂರು ಕಾರಣಗಳಿಗೆ ಮುಗಿಯಿತು ಈ ಪ್ರಶ್ನೆ— ಎಂಬುದೂ ಬಿಗಿಯಾಗಿರುವುದು. ಗೆಳೆಯರ ಬಡಿದಾಟಕ್ಕೆ ಹಣವು ಕಾರಣವೆಂದು ಕಂಡುಬಂದಲ್ಲಿ, ಅವರಲ್ಲಿ ಗೆಳೆತನದ ನಡತೆಯಿರದೆ, ಅವರು 'ಸಾವುಕಾರ-ಸಾಲಗಾರ' ಎಂಬ ಸಂಬಂಧವನ್ನು ಅಲ್ಲಿಯವರೆಗೆ ಸಾಗಿಸುತ್ತ ಬಂದಿದ್ದರು ಎಂದು ಹೇಳಬೇಕಾಗುವುದು. ಒಬ್ಬರ ಹಿತವೆ ಇನ್ನೊಬ್ಬರ ಅಹಿತ ಎಂಬ ಇಂತಹ ಸಂದರ್ಭಗಳಲ್ಲಿ ಜಗಳ ಹುಟ್ಟುವದು ಸ್ವಾಭಾವಿಕ ಎನಿಸಿದಂತೆ, ಗೆಳೆತನ ಬೆಳೆಯುವುದು ಸಹ ಎಂತಹ ಸೋಜಿಗ ಎನಿಸುವುದು. ಇದರ ಮೇಲಿಂದ, ಗೆಳೆಯರಲ್ಲಿ ಪರಸ್ಪರ ಸಹಾಯ ಮಾಡುವಂತಹ ಹಣದ ಸಂಬಂಧವಾಗಲಿ, ವ್ಯವಹಾರಗಳಾಗಲಿ ಆಗಲೇಬಾರದು ಎಂದು ಮಾತ್ರ ಎಂದಿಗೂ ತಿಳಿದುಕೊಳ್ಳಲಾಗದು. ಒಬ್ಬರ ತೊಂದರೆಯ ಸಮಯದಲ್ಲಿ ಇನ್ನೊಬ್ಬರು ನೆರವಾಗುವ ನೀರು, ಗೆಳೆತನದ ಸಸಿಯು ಚಿಗಿತು ಚಿಗುರೊಡೆಯಲು ಅಗತ್ಯವಾದುದು. ಆದರೆ ಈ ಬಗೆಯ ನೆರವು 'ನಾನು ಹೆಚ್ಚಿನವ, ನಾನು ಮೆಚ್ಚಿನವ' ಇಲ್ಲವೆ 'ಕೊಡುವವನು 'ಪಡೆದವ', ಬೇಡುವವನು ಬಡವ!' ಎಂಬ ಭಾವನೆಯ ನೆರಳಿನಲ್ಲಿ ಬೆಳೆಯಬಾರದು. ಅದೂ ಅಲ್ಲದೆ 'ಆತನು ತೊಂದರೆಯಲ್ಲಿರುವ, ಅವನಿಗೆ ತುಸು ಸಹಾಯವಾಗಲು ಎಂದು ಈ ಸಂಕಟ' ಎಂಬ ಡಂಗುರವನ್ನು ಸಾರಲಿಕ್ಕಾಗಲಿ, 'ಬೇಡುವವರಿಗೆ ನೀಡುವುದೇ ಒಂದು ಉದ್ದೇಶ' ಎಂದು ತಿಳಿದು ಅದನ್ನು ಸಾಧಿಸುವುದಕ್ಕಾಗಲಿ ಇಂತಹ ವ್ಯವಹಾರವನ್ನು ಮಾಡಲೆಳಸಿದರೆ ಒಂದಿಲ್ಲೊಂದು ದಿನ, ಅಂತಹ ಉದ್ದೇಶವಾಗಲಿ, ಅಭಿಮಾನವಾಗಲಿ, ಗೆಳೆತನದ ಗಿಡಕ್ಕೆ ಬುಡದಲ್ಲಿಯೆ ಕೊಡಲಿಯನ್ನು ಹಾಕುತ್ತದೆ. ಅಂತೆಯೆ ಗೆಳೆಯರಲ್ಲಿ ಪರಸ್ಪರ ಸಹಾಯದ ನೆನವು ಇರದಷ್ಟು ಇಲ್ಲವೆ ಅದಕ್ಕೆ ಮಹತ್ತ್ವವನ್ನೆ ಕೊಡದಂತಹ ಸ್ಥಾನವು ಹಣಕ್ಕೆ ಇರಬೇಕು. ಎಂದರೆ ಮಾತ್ರ ಅದು ಜಗಳದ ಕಾರಣ ಎನಿಸದೆ, ಗೆಳೆತನವು ಬೆಳೆಯಲು ಅವಕಾಶವನ್ನು ಕಲ್ಪಿಸಿಕೊಡುವುದು.

ಅದರಂತೆಯೆ ಹೆಣ್ಣಿನ ವಿಷಯ. ಇಂತಹ ಆಶೆಯಿಂದ ಒಬ್ಬರೊಬ್ಬರು ನೆರವಾಗುವುದು ಎಂದು ಗೆಳೆಯರಾದರೆ, ಅವರು ಶೀಘ್ರದಲ್ಲಿಯೆ ಪ್ರತಿಸ್ಪರ್ಧಿಗಳಾಗುವರು ಹೊರತು, ಗೆಳೆಯರಾಗಿ

ಉಳಿಯುವುದಿಲ್ಲ. ಆ ಬಗೆಯ ಪರಸ್ಪರ ವಿರೋಧ ಭಾವನೆಯು ಮೂಡುವುದೊಂದೇ ತಡ, ಅವರು ಒಬ್ಬರನ್ನೊಬ್ಬರು ದ್ವೇಷಿಸತೊಡಗುವರು. ಒಂದೇ ವಸ್ತು ಇಲ್ಲವೆ ವ್ಯಕ್ತಿಯ ವಿಷಯವಾಗಿ ಇರ್ವರಿಗೂ ಸ್ಪರ್ಧಾಭಾವನೆಯು ಉಂಟಾದರೆ, ಅಲ್ಲಿ ಗೆಳೆತನ ನೆಲಸುವುದು ಅಶಕ್ಯ.

ಇನ್ನು ಹಿರಿಮೆಯ ಸಲುವಾಗಿ ಗೆಳೆತನವನ್ನು ಮಾಡಿಕೊಳ್ಳಬೇಕು ಎಂದು ಯಾರಾದರೂ ಹೆಣಗಿದರೆ, ಅದೇ ಅವರ ಜಗಳಕ್ಕೆ ತಳಹದಿಯಾಗುವುದು. ಒಬ್ಬನಿಗೆ ಮಾರ್ಗದರ್ಶಿಯಾಗುವುದು, ಒಬ್ಬನಿಗೆ ಹಿರಿಯನಾಗುವುದು, ಒಬ್ಬನ ಮೇಲೆ ಅಧಿಕಾರದಿಂದ ನಡೆಯುವುದು ಎಂಬ ವಿಚಾರವನ್ನು ತಾಳಿ ಗೆಳೆಯನಾದರೆ, ಅಂತಹನು ತಿಳಿಗೇಡಿ ಎನಿಸಿಕೊಳ್ಳುವುದರಲ್ಲಿ ಎಷ್ಟೂ ಆಶ್ಚರ್ಯವಿಲ್ಲ. ಕೊನೆಗೆ 'ಅಂತಹ ಗೆಳೆಯನಿಂದ ಹೇಗೆ ಪಾರಾಗಲಿ?' ಎಂಬ ವಿಚಾರವು ಇನ್ನೊಬ್ಬನಲ್ಲಿ ಮೂಡುವುದು. ಎಷ್ಟೋ ಸಲ ಸಂಪತ್ಕಾಲಕ್ಕಿಂತ ವಿಪತ್ತಿನ ವೇಳೆಯಲ್ಲಿಯೆ ಗೆಳೆಯರು ಬರುವುದು ಹೆಚ್ಚು. ಆಗ ಅವರನ್ನು ಕಂಡು ಮರುಗಿ, ಅವರಿಗೆ ನೆರವಾಗುವ ಯೋಚನೆಯಿಂದ, ಅಲ್ಲಿ ಬರದಿರದೆ, ಆತನು ತಮ್ಮ ಗೆಳೆಯ ಎಂದು ಹೇಳುತ್ತ ಅವನ ಬವಣೆಯನ್ನು ಹೆರವರಿಗೆ ಬಣ್ಣಿಸುತ್ತ ಅಂತಹನಿಗೆ ತಾವು ಸಹಾಯಮಾಡುತ್ತಿರುವೆವು ಎಂಬ ಸಮಾಧಾನವನ್ನು ಪಡೆಯುವ ಗೆಳೆತನವು ಕೇವಲ ಅಜ್ಞಾನದ ಮೇಲೆ ನಿಂತಿರುವುದು— ಎಂಬುದು ಸಹಜವಾಗಿ ತಿಳಿಯಬಹುದಾದ ಮಾತು.

ಇನ್ನು 'ಕೇವಲ ಅಜ್ಞಾನಿಗಳಾಗಲಿ, ಅನಾಗರಿಕರಾಗಲಿ ಜಗಳಾಡುವರು' ಎಂಬ ಗೆರೆಯನ್ನು ಸಹ ಕೊರೆಯಲಿಕ್ಕೆ ಬರುವುದಿಲ್ಲ. ಜಗತ್ತಿನ ಇತಿಹಾಸವನ್ನು ನೋಡಿದರೆ, ಅದನ್ನು ಬರೆಯಲು ಪ್ರಾರಂಭಮಾಡಿದಂದಿನಿಂದ ಇಂದಿನ ವರೆಗೆ (ಜಗಳಾಡುವವರ ದಯೆಯಿದ್ದರೆ ಇನ್ನು ಮುಂದೆ ಸಹ) ಒಂದಿಲ್ಲೊಂದು ಸ್ವರೂಪದಲ್ಲಿ ಜಗಳಾಡುವ ಜನರಿದ್ದೇ ಇರುತ್ತಾರೆ; ಜಗಳಗಳಾಗುತ್ತಲೇ ಇವೆ. ಅದೂ ಅಲ್ಲದೆ, ಮೊದಲಿನ ಅನಾಗರಿಕ ಸ್ಥಿತಿಯಲ್ಲಿ ಸಹ ಎಂದೂ ಯಾವ ಕಾರಣದಿಂದಲೂ ಬಡಿದಾಡದ ಹಲವು ಪಂಗಡಗಳೂ ಸಿಗುತ್ತವೆ; ಅದರಂತೆಯೆ ಇಂದಿನ ಅತಿ ನಾಗರಿಕತೆಯ ದಿನಗಳಲ್ಲಿ ಸಹ ಕ್ಷಣಕ್ಷಣಕ್ಕೆ, ಕ್ಷುಲ್ಲಕವಾದ ಕಾರಣಗಳಿಂದ ಸಣ್ಣ-ದೊಡ್ಡ ಪ್ರಮಾಣಗಳಲ್ಲಿ ಕಾದಾಡುವುದು ಕಂಡುಬರುವುದು. ಈ ಸಂಗತಿಯು ಮೇಲಿಂದ ನೋಡ ಜಗಳಾಡಲಿಕ್ಕೆ 'ಕೇವಲ ಕೆಲವು ಕಾರಣಗಳು ಬೇಕು; ಇಲ್ಲವೆ ಒಂದು ಬಗೆಯ ಆವರಣ ಇರಬೇಕು, ಇಲ್ಲವೆ ನಿಶ್ಚಿತವಾದ ಕೆಲವು ಪರಿಸ್ಥಿತಿಗಳಲ್ಲಿಯೆ ಜಗಳಗಳು ಹುಟ್ಟುವವು' ಎಂದು ಹೇಳುವುದು ಕಠಿಣವಾದ ಮಾತು ಎಂಬುದನ್ನೇ ಮತ್ತೆ ಎತ್ತಿ ಹಿಡಿದಂತಾಗುವುದು.

ಇನ್ನೊಂದು ಉದಾಹರಣವೆಂದರೆ ಗಂಡ-ಹೆಂಡಿರ ಜಗಳ. ಗಂಡ-ಹೆಂಡಿರ ಜಗಳದ ಬಗೆಗೆ ನಮ್ಮ ನಾಣ್ಣುಡಿಯೊಂದನ್ನು ಇಲ್ಲಿ ಕಾಣಿಸಿದರೆ, ಅದು 'ಅಶ್ಲೀಲ ಬರೆಹ' ಎಂಬ ಸಂದೇಹವು ಉಂಟಾಗಿ ಕೊನೆಗೆ ಅದೂ ಒಂದು ದೊಡ್ಡ ಜಗಳವೇ ಆಗಬಹುದು. ಅಂತೆಯೆ ಅವರ ಜಗಳದ ಕಾರಣವನ್ನಾಗಲಿ, ಆ ಮಹಾಜ್ವಾಲೆಯ ಮೂಲ ಕಿಡಿಯನ್ನಾಗಲಿ ಹುಡುಕಹೋಗುವುದೆಂದರೆ, ಕೌಟುಂಬಿಕ ಸುಖಕ್ಕಾಗಿ ಅವರು ಪಡುವ ಕಷ್ಟಗಳನ್ನೂ, ಅವರು ಅಣಿಮಾಡಿಕೊಳ್ಳುತ್ತಿರುವ ಸಲಕರಣೆಗಳನ್ನೂ ಸಂಶೋಧಿಸಿದಂತೆಯೆ ಆಗುವುದು ಎಂದು ಹೇಳಬಹುದು. ಒಮ್ಮೊಮ್ಮೆಯಂತೂ ಮುದುಕಗಂಡನಿಗೆ ತನ್ನ ಒಡತಿಯೊಡನೆ ಏಕೆ ಕಡಿದಾಡುವೆ ಎಂದು ಕೇಳಿದಾಗ,'ಅದರಿಂದ ನನಗೆ ಆನಂದವಾಗುವುದು' ಎಂಬ ನಾವೀನ್ಯವಾದ, ಅಂತೆಯೆ ತಿಳಿದುಕೊಳ್ಳಲಸಾಧ್ಯವಾದ ಕಾರಣದಂತೆಯೆ ಗಂಡ-ಹೆಂಡಿರ ಜಗಳದ ಮಾತೂ ಇರುವುದು ಎಂಬುದು ಕಂಡು ಸೋಜಿಗವೆನಿಸುವುದು. 'ಕಾಫಿ ಕುಡಿಯುವುದಕ್ಕೆ ಕಾದಾಡುವುದು; ಕಾದಾಡುವುದು, ಕಾಫಿ ಕುಡಿಯುವುದು' ಹೀಗೆ ಮಾಡುವಂತಿದ್ದರೆ, ಕಾದಾಡುವುದಾದರೂ ಏಕೆ?— ಎಂದು ಯಾರಾದರೂ ಅರಸಿಕರು ಕೇಳಬಹುದು. ಅಂತಹ ಸಂದರ್ಭಗಳಲ್ಲಿ 'ಇನ್ನು ಮಾಡಬೇಕಾದರೂ ಏನು?' ಎಂಬ ಇನ್ನೊಂದು ಪ್ರಶ್ನೆಯಿಂದ ಉತ್ತರ ಕೊಡಬೇಕಾಗುವುದು. ಕಾರಣವೆಂದರೆ ಅಲ್ಲಿ ಜಗಳದ ಮೂಲವು ಪಾತಾಳದಲ್ಲಿರುವುದು ಎಂದರೆ ಅಗೋಚರವಾದುದಿರುವುದು— ಅರ್ಥಾತ್ ತಿಳಿಸಲಿಕ್ಕಾಗಲಿ, ತಿಳಿದುಕೊಳ್ಳಲಿಕ್ಕಾಗಲಿ ಒಂದಿಷ್ಟು ಸೂಕ್ಷ್ಮವಾಗಿರುವುದು. ಒಲವಿನಂತೆ ನಡೆಯುವ ಹೆಂಡತಿ, ಒಪ್ಪಿಗೆಯಿಂದ ಸಾಗುವ ಗಂಡ ಇವರಲ್ಲಿ ತುಸು ಜಗಳಗಳಾಗುತ್ತಿದ್ದರೇ ಅಲ್ಲವೆ ಸೊಗಸು ?

ಜಾತೀಯ ದೊಂಬಿಗಳು, ಧರ್ಮದ ಕಲಹಗಳು ಎಂಬ ಇನ್ನೊಂದು ಬಗೆಯ ಜಗಳವಿರುತ್ತದೆ. ಈ ಜಗಳಗಳ ಕಾರಣಗಳನ್ನಾಗಲಿ, ಅವುಗಳ ಬುನಾದಿಯನ್ನಾಗಲಿ ತಿಳಿದುಕೊಳ್ಳುವುದು ಕೂಡ ತುಸು ಕಷ್ಟಸಾಧ್ಯವಾದ ವಿಷಯವೆ. 'ಜಾತಿ' ಎಂದರೆ ಯಾರು ಎಂಬ ಪ್ರಶ್ನೆಯೆ ಮೊದಲು ನಮ್ಮನ್ನು ಬೆರಗುಪಡಿಸಿಬಿಡುವುದು. ಸಮಾಜದಲ್ಲಿ ಒಬ್ಬೊಬ್ಬ ವ್ಯಕ್ತಿಯೂ ತನ್ನ ನೆರೆಯವನೊಂದಿಗೆ ಒಳಿತಾಗಿ ಇದ್ದಾಗ, ಈ ಜಾತೀಯ ದೊಂಬಿಗಳು ಎಂಬುದು ಹೊರಟಿತಾದರೂ ಎಲ್ಲಿಂದ?— ಎಂಬುದೊಂದು ಪ್ರಶ್ನೆ. ಪ್ರೇಮದಲ್ಲಿ ಭೇದಗಳಿರುವುದಿಲ್ಲ, ವ್ಯವಹಾರದಲ್ಲಿ ಭಿನ್ನತೆಯ ಭಾವನೆಯಿರುವುದಿಲ್ಲ; ಜಾತಿಗಳು ದೂರ ಇರುವುದಿಲ್ಲ; ಧರ್ಮಧರ್ಮಗಳಲ್ಲಿ ಉಚ್ಚ-ನೀಚತೆಗಳಿರುವುದಿಲ್ಲ. ಇಷ್ಟಿದ್ದರೂ ಸಹ ಜಾತೀಯ ದೊಂಬಿಗಳೂ ಧಾರ್ಮಿಕ ಕಲಹಗಳೂ ಇಲ್ಲಿಯವರೆಗೆ ಬೆಳೆಯುತ್ತಲೇ ಇರುವುವು. ಇವಕ್ಕೆ ಏನಾದರೂ ಸಮಂಜಸ ಕಾರಣಗಳು ಇರಲಿಕ್ಕೆಬೇಕು ಎನ್ನಬಹುದೇ, ಇಲ್ಲವೆ ಕೇವಲ ಕೆಲವು ಜನ ಸ್ವಾರ್ಥಿಗಳ ಚಿನ್ನಾಟ ಎನ್ನಬೇಕೆ? 'ಆಕ್ರಮಣವೆ ನಮ್ಮ ಧರ್ಮದ ಮುಖ್ಯ ಮತ' ಎಂದು ಸಾರಿರುವ ಧರ್ಮವೇ 'ವಿಶ್ವಬಾಂಧವ್ಯವೆ ನಮ್ಮ ಧರ್ಮದ ಮೊದಲಪಾಠ' ಎಂದು ಕೂಡ ಹೇಳುತ್ತದೆ. 'ಪ್ರೇಮವೆ ನಮ್ಮ ಧರ್ಮ' ಎಂದು ಹೇಳುವವರೆ 'ಅದನ್ನು ಹೆಚ್ಚು ಜನರಲ್ಲಿ ಪಸರಿಸಬೇಕೆಂದು

ಅವರನ್ನು ಗೆಲ್ಲುವುದೇ ನಮ್ಮ ಕರ್ತವ್ಯ' ಎಂದು ಕೂಡ ನುಡಿದು ಅದರಂತೆ ನಡೆಯುತ್ತಾರೆ. ಇತ್ತ 'ಸಹಿಷ್ಣುತೆಯು ನಮ್ಮ ಧರ್ಮದ ಹಿರಿಯ ಹೆಮ್ಮೆ' ಎಂದು ಎದೆತಟ್ಟಿಕೊಂಡು ಹೇಳುವ ಧರ್ಮ-ಬಾಂಧವರು, ಎರಡನೆಯವರು ಆ ಎದೆಯನ್ನು ತುಳಿಯುವವರೆಗೆ ಸಹ ತಮ್ಮ ಸಹಿಷ್ಣುತೆಯನ್ನು ಪ್ರದರ್ಶಿಸುತ್ತಾರೆ. ಹೀಗಿದ್ದ ಮೇಲೆ ಜನರ ಜಗಳಗಳಿಗೆ ಧರ್ಮಗಳಾಗಲಿ, ಜಾತಿಗಳಾಗಲಿ ಕಾರಣಗಳಾಗುವವು— ಎಂದು ಹೇಗೆ ಹೇಳುವುದು ?

ಅದರಂತೆಯೆ ಜಗಳಗಳನ್ನು ತಡೆಯುವುದಕ್ಕಾಗಿ ಆಗುವ ಜಗಳಗಳು, ಯುದ್ಧಗಳನ್ನು ನಿಲ್ಲಿಸುವುದಕ್ಕಾಗಿ ನಡೆಯುವ ಯುದ್ಧಗಳು ಇವುಗಳ ಮಾತು. ಅಣ್ಣ-ತಮ್ಮಂದಿರ ಜಗಳಗಳು ಮೊದಲನೆಯ ಬಗೆಯವಾಗಿದ್ದರೆ, ರಾಷ್ಟ್ರ-ರಾಷ್ಟ್ರಗಳ ಯುದ್ಧ-ಗಳು ಎರಡನೆಯ ಬಗೆಯವು. ಎರಡೂ ಬಗೆಯಲ್ಲಿ ಆ ಬಗೆಯ ಪ್ರತಿಜ್ಞೆಯನ್ನು ಮಾಡುವುದೆಂದರೆ, ಮತ್ತೊಂದು ಕಲಹವನ್ನು ಔತಣಿಸಿದಂತೆಯೆ. 'ಇದು ಕೊನೆಯ ಜಗಳ' ಎಂದು ಹೇಳಿ ಜಗಳಾಡುವುದೆಂದರೆ, ಒಂದು ಹೊಸ ಜಗಳಕ್ಕೆ ಮೊದಲು ಮಾಡಿದಂತೆಯೆ. ಹಾಗೆಯೆ 'ಇನ್ನು ಯುದ್ಧಗಳೆ ಆಗದಂತೆ ಮಾಡುವುದು' ಎಂದರೆ, ಈಗಿನ ಪ್ರಮಾಣಕ್ಕಿಂತ ದೊಡ್ಡ ಪ್ರಮಾಣದಲ್ಲಿ ಇನ್ನೊಂದು ಯುದ್ಧವು ಖಂಡಿತ ಎಂಬುದು ತಿಳಿದಂತೆಯೆ. ಇನ್ನು ಪುಟಿಯದಂತೆಯೆ ಮಾಡುವೆ ಎಂದು ಹೆಚ್ಚು ಜೋರಿನಿಂದ ಚಂಡೊಂದನ್ನು ನೆಲಕ್ಕೆ ಅಪ್ಪಳಿ-ಸಿದರೆ, ಅದು ಫಟಲ್ಲೆಂದು ಮತ್ತಷ್ಟು ಎತ್ತರವಾಗಿ ಪುಟಿಯು-ವುದು. ಅಂತೆಯೆ ಜಗಳಗಳನ್ನು ಗೊತ್ತುಹಿಡಿದು ಅವುಗಳ ಆದ್ಯಂ-ತಗಳನ್ನು ತಿಳಿದುಕೊಂಡೇ ಬಿಡುವೆವು ಎಂಬ ಹಟವನ್ನು ಹಿಡಿ-ಯುವುದಕ್ಕಿಂತ, ಅವು ಅನಾದ್ಯನಂತವಾದುವು ಎಂದು ಹೇಳು-ವುದೇ ಸಯುಕ್ತಿಕವೆನಿಸುವುದು.

ಜೀವನಕ್ಕೂ ಕಲಹ ಎಂದೆನ್ನುವರು— ಯಾಕೋ ತಿಳಿಯದು. ಅದಕ್ಕಾದರೂ ಕಾರಣವನ್ನು ಹುಡುಕಲುಬ್ಜುಗಿಸಿದರೆ ಅನೇಕರು ಅನೇಕ ಬಗೆಯಾಗಿ ಹೇಳಬಹುದು. ಬಡವನನ್ನು ಕೇಳಿದರೆ, 'ಪಡೆವವರು ಮತ್ತು ದುಡಿವವರು ಇವರಲ್ಲಿರುವ ಜಗಳಕ್ಕಾಗಿಯೆ ಜೀವನಕ್ಕೆ ಕಲಹ ಎಂದೆನ್ನುವುದು' ಎಂದು ಹೇಳಬಹುದು. ಮತ್ತೊಬ್ಬರಾರಾದರೂ 'ಉಣ್ಣಲು ಅನ್ನವನ್ನು, ಉಡಲು ಬಟ್ಟೆ-ಯನ್ನು ದೊರಕಿಸುವುದೆಂದರೆ ಅದೊಂದು ಕಷ್ಟದ ಕೆಲಸ' ಎಂದು ಹೇಳಿ, ಅದಕ್ಕಾಗಿಯೆ ಜೀವನಕ್ಕೆ ಕಲಹ ಎನ್ನಬಹುದು. ಹಿರಿಯ-ರನ್ನು ಕೇಳಿದರೆ ತಿಳಿಯದ ಕಿರಿಯರೊಡನೆ ಗುದ್ದಾಡಿ, ಅವರನ್ನು ಅನುಭವದ ತಮ್ಮ ಮಾತಿಗೆ ಎಳೆತರುವುದೇ ಜೀವನಕಲಹ ಎನ್ನಬಹುದು ; ಇತ್ತ ಸ್ವಾಮಿ-ರಾಷ್ಟ್ರಗಳು 'ಹುಂಬರೊಡನೆ ಹೊಡೆದಾಡುತ್ತ ಅವರನ್ನು ಸುಸಂಸ್ಕೃತರನ್ನಾಗಿಸುವ ಅವರ ಯತ್ನವೇ ಜೀವನಕಲಹ' ಎಂದು ಸಾಧಿಸಿ, ತಮ್ಮ ಇಲ್ಲಿಯವರೆಗಿನ ಸಾಮ್ರಾಜ್ಯಧೋರಣೆಯೆ ಸಮರ್ಪಕವಾದುದು, ಎನ್ನಬಹುದು. ಇವುಗಳಲ್ಲಿ 'ಜೀವನಕಲಹ' ಎನ್ನಲಿಕ್ಕೆ ಯಾವ ಕಾರಣ ಇಲ್ಲವೆ ಕಾರಣಗಳು ಸಮರ್ಥನೀಯವೆನಿಸಬಹುದು ?

ಆದರೆ ಇವೆಲ್ಲ ಜಗಳಗಳಿಗಿಂತ ಇನ್ನೊಂದು ಬೇರೆ ಬಗೆಯ ಮಹತ್ತ್ವದ ಜಗಳವೊಂದಿದೆ. ಅದು ಕೂಡ ಎಂದಿನಿಂದ ಸಾಗಿದೆ, ಎಲ್ಲಿಗೆ ಹೊರಟಿದೆ, ಯಾವ ಸ್ಥಿತಿಗೆ ಬಂದಿದೆ ಎಂಬುದನ್ನು ಹೇಳಲಿಕ್ಕೆ ಬಾರದಷ್ಟು ಗೂಢವಾದುದಿದ್ದರೂ, ಆ ಜಗಳವು ಮಿಕ್ಕ ಜಗಳಗಳಂತೆ ಬದಲಾಗದೆ ನಿತ್ಯ ನೂತನವಾಗಿರುತ್ತದೆ ಎಂಬುದೊಂದು ಅದರ ವಿಶೇಷ. ಮನುಷ್ಯನು ತನ್ನ ಮನಸ್ಸಿನೊಡನೆ ಒಂದೇ ಸಮನಾಗಿ ಜಗಳಾಡುತ್ತ ಬಂದಿದ್ದಾನೆ. 'ಮೈಯನ್ನು ತಣಿಸಬೇಕೊ, ಮನಸ್ಸನ್ನು ಒಲಿಸಬೇಕೊ?' ಎಂಬುದಂತೂ ಎಂದಿನಿಂದಲೋ ಆ ಜಗಳದ ಕಾರಣವಾಗಿದೆ. ಆ ಮನಸ್ಸಿ-ನಲ್ಲಿಯೂ ಮತ್ತೆ 'ದುಷ್ಟಮನ' ಮತ್ತು 'ಶಿಷ್ಟಮನ' ಎಂಬ ಭಾಗಗಳನ್ನು ಮಾಡಿ, ಅವುಗಳಲ್ಲಿಯೂ ಜಗಳವನ್ನು ಹೂಡಿ-ದ್ದಾನೆ—ಮನುಷ್ಯ. ಎದುರಿಗಿನ ವಿಷಯಗಳ ಕಡೆಗೇ ಒಮ್ಮೆ ಎಳೆತವಾಗುತ್ತಿದ್ದರೆ, ಎಲ್ಲಿಯೂ ಕಾಣದ ವಿಚಾರಗಳ ಬಗೆಗೆ ಮತ್ತೊಮ್ಮೆ ಮನಸ್ಸು ಹರಿಯುತ್ತದೆ. ಈ ಬಗೆಯ ಉಯ್ಯಾಲೆಗೆ ಕಾರಣ ಏನು ಎಂಬುದನ್ನು ಹುಡುಕಬಹುದೆ? ಪುರಾಣಗಳಲ್ಲಿಯ ರಾಮ-ರಾವಣರ ಯುದ್ಧಗಳೂ, ಕೌರವ–ಪಾಂಡವರ ಕಲಹಗಳೂ ಈದೃಷ್ಟಿಯಲ್ಲಿ ನೋಡಿದರೆ ಒಳಿತು- ಕೆಡುಕುಗಳದೊಂದು ದೊಡ್ಡ ಜಗಳವೇ ಇದು ಎಂದು ಎನಿಸುವುದು. ಇಂತಹ ಪರಿ-ಸ್ಥಿತಿಯಲ್ಲಿ ಈ ಬಗೆಯ ಜಗಳಕ್ಕೆ ಕಾರಣ ಏನು?—ಎಂದು ಕೇಳುವುದು ಹಾಸ್ಯಾಸ್ಪದವೆನಿಸಲಿಕ್ಕಿಲ್ಲವೆ?

ಯಾಕೆಂದರೆ ಜಗಳಾಡುವವರಿಗೆ ಕಾರಣ ಹುಡುಕುವ ಪ್ರವೃತ್ತಿಯಿರುವುದಿಲ್ಲ ; ಅದರಂತೆಯೆ ಕೆಲಸಮಾಡುವವರಿಗೆ ಜಗಳಾಡುತ್ತ ಕೂಡ್ರಲು ಸಾಕಷ್ಟು ಸಮಯ ಇರುವುದಿಲ್ಲ.

ಶೀಲಧಾ
ಎಂಟೀಮಲೇರಿಯಾ ವನಸ್ಪತಿ ಪಿಲ್ಸ್
ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ ; ಲಿವರ್, ಹೊಟ್ಟೆನೋವು, ಮಲ-ಬದ್ಧತೆ ಸುಧಾರಿಸಿ ಶಕ್ತಿ ಕೊಡುತ್ತದೆ. ಕ್ವಿನ್ನಾನ್ ಸಿಗದ್ದ-ರಿಂದ ವೈದ್ಯ ಡಾಕ್ಟರರು, ದವಾಖಾನೆಗಳಲ್ಲಿ ವಾಪರಿ-ಸುವರು. ೧೦೦೦ ಗುಳಿಗೆಗೆ ರೂ. ೧೫. ೧೦೦ಕ್ಕೆ ೧-೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಿನಲ್ಲಿ ಮಾರುವ ಏಜಂಟರು ಬೇಕು.
ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.
ಸೋಲ ಏಜಂಟರು :—
ಎಸ್. ಎಲ್. (ಅಪ್ಪುರಾವ) ಥಾಕಪ್ಪ
ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ.

ಫ್ಯಾಸಿಝಮ್ ★

ಶ್ರೀ. ಆರ್. ಕೆ. ಕೊಪ್ಪರ, ಕಲ್ಲಾಪೂರ

★

ಲೇಖಾಂಕ ೨

" Fascism is a revolt against reason and an appeal to violence, emotion and passion. Its outcome is inevitably cruelty, madness and gangsterism."

('ಫ್ಯಾಸಿಝಮ್' ಎಂಬುದು ಇದೊಂದು ವಿವೇಕದ ವಿರುದ್ಧ ಎದ್ದ ದೊಂಬಿ. ಮಾನವನ ಭಾವನೆ-ಸಂವೇದನೆಗಳನ್ನು ಹಿಂಸೆಗಾಗಿ ಕರೆಯುವ ಔತಣ. ಈ ವಾದದಿಂದ ಹೊರಬೀಳಬಹುದಾದ ವಿಷಯಗಳೆಂದರೆ ಕ್ರೌರ್ಯ, ಉನ್ಮತ್ತತೆ, ಪುಂಡತನ !)

Robert Dell (Germany Unmasked.)

★

ಕಳೆದ ಲೇಖಾಂಕದಲ್ಲಿ ಫ್ಯಾಸಿಝಮ್ ಮತ್ತು ನಾಝಿಝಮ್‌ಗಳು ಹುಟ್ಟಿ ಬೆಳೆದ ರೀತಿಯನ್ನು ಚರ್ಚಿಸಿದ್ದಾಯಿತು. ಇನ್ನು ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿ ಜನರು ಯಾವ ರೀತಿಯಲ್ಲಿ ಬದುಕಿ ಬಾಳುವರೆಂಬ ಚಿತ್ರವನ್ನು ನೋಡೋಣ.

ನಿಯಂತ್ರಿತ ವಾಕ್‌ಸ್ವಾತಂತ್ರ್ಯ

ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿ ಸರ್ವಾಧಿಕಾರಿಯೇ ಮುಖ್ಯ. ಫ್ಯಾಸಿಸ್ಟ್ ಪಕ್ಷವೇ ಒಂದು ಪಕ್ಷ. ಅದಕ್ಕೆ ವಿರೋಧವಾಗಿ ಮಾತನಾಡುವ ಅಧಿಕಾರ ಯಾವ ವ್ಯಕ್ತಿಗೂ ಇಲ್ಲ. ಇದನ್ನೇ ಒಬ್ಬ ಫ್ಯಾಸಿಸ್ಟ್ ಲೇಖಕನು ಈ ರೀತಿ ಹೇಳಿದ್ದಾನೆ:

'The freedom of speech is not totally destroyed ; It is rather canalised, compelled to flow through certain forms of thought and doctrine. '

(ಭಾಷಣಸ್ವಾತಂತ್ರ್ಯವು ಸಂಪೂರ್ಣವಾಗಿಯೇನೂ ನಾಶವಾಗಿಲ್ಲ. ಅದೊಂದು ಮಾರ್ಗದಲ್ಲಿ ಸಾಗುವಂತೆ ವಿಚಾರಯುಕ್ತವಾಗಿದೆ ಅಷ್ಟೆ !)

ಆರ್ಥಿಕ ಧೋರಣ

'ದೇಶದೊಳಗಿನ ಧನೋತ್ಪಾದಕ ಉದ್ಯೋಗಗಳು ವ್ಯಕ್ತಿಯ ಒಡೆತನಕ್ಕೊಳಪಟ್ಟಿರಬೇಕಲ್ಲದೆ ರಾಷ್ಟ್ರದ ಒಡೆತನವು ಅವುಗಳ ಮೇಲಿರಬಾರದು' ಎಂಬುದಾಗಿ ಅವರ ಮತವಿದೆ.

ಸಾಮಾಜಿಕ ಜೀವನ

ಶಾಸ್ತ್ರಜ್ಞ ಮತ್ತು ಕಲಾವಿದರಿಗಿಂತ ಸೈನಿಕರಿಗೆ ಹೆಚ್ಚು ಮಾನಮರ್ಯಾದೆ. ಪ್ರತಿಯೊಬ್ಬನೂ ಸೈನಿಕಶಿಕ್ಷಣವನ್ನು ಪಡೆಯಲೇಬೇಕೆಂದು ಅವರ ಕಟ್ಟಾಜ್ಞೆ. ಸ್ತ್ರೀಯರ ವಿಷಯದಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬುದೇ ಅವರ ನೀತಿ. ಅದನ್ನೇ ಜರ್ಮನಿಯ ಪ್ರಚಾರಖಾತೆಯ ಮಂತ್ರಿಯಾದ ಗೆಬೆಲ್ಸ್ ಈ ರೀತಿ ಹೇಳಿದ್ದಾನೆ:—

'The woman's task is to be beautiful and to bring children into the world. The female bird, decorates her self for the male and hatches the eggs for him. In return the male looks after the food or else stands on guard and scares the enemy away.'

(ಬೆಡಗುಗಾತಿಯರಾಗಿರುವುದು, ಹುಡುಗರನ್ನು ಹೆರುವುದು ಇವೇ ಹೆಂಗುಸರ ಕರ್ತವ್ಯ. ಹೆಣ್ಣುಹಕ್ಕಿ ಗಂಡಿಗಾಗಿಯೆ ಬೆಡಗುಪಡೆಯಲು ಹವಣಿಸುವುದು, ಗಂಡಿಗಾಗಿಯೆ ತತ್ತಿಗಳನ್ನು ಇರಿಸುವುದು. ಗಂಡು ಇದಕ್ಕೆ ಪ್ರತಿಯಾಗಿ ಹೆಣ್ಣಿನ ಹೊಟ್ಟೆಯ ಹೊಣೆಯನ್ನೂ ಕಾಯುವ ಹೊಣೆಯನ್ನೂ ವಹಿಸುವುದು.)

ರಾಷ್ಟ್ರವಾದ

ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಘನತೆಗಾಗಿ ಬಲಿದಾನವನ್ನು ಮಾಡಲೇಬೇಕು. ಅಲ್ಲಿಯ ಸರಕಾರವು ಒತ್ತಾಯದಿಂದಲಾದರೂ ಅದನ್ನು ಮಾಡಹಚ್ಚುತ್ತದೆ.

ಧಾರ್ಮಿಕ ಧೋರಣ

ಫ್ಯಾಸಿಸ್ಟರು ದೇವ-ಧರ್ಮಗಳ ಹೆಸರಿನಲ್ಲಿ, ಬಂಡವಾಳವಾದವು ಚಿರಸ್ಥಾಯಿಯಾಗಿ ನಿಲ್ಲುವಂತೆ ಅಜ್ಞ ಜನರಲ್ಲಿ ಪ್ರಚಾರ ಮಾಡುತ್ತಾರೆ. ಧರ್ಮದ ಹೆಸರಿನಲ್ಲಿ ಮಾಡಿದ ಉಪದೇಶದಿಂದ ಜನರು ಮುಂಗಾಣದವರಾಗಿ ಇವರ ಬಲೆಗೆ ಬೀಳುತ್ತಾರೆ.

ಫ್ಯಾಸಿಝಮ್ ಮತ್ತು ಕಮ್ಯುನಿಝಮ್‌ಗಳ ಹೋರಾಟ

ಇಟಲಿ-ಜರ್ಮನಿಗಳಲ್ಲಿ ಸೋಶ್ಯಾಲಿಝಮ್ ಮತ್ತು ಕಮ್ಯುನಿಝಮ್‌ಗಳ ಉಚ್ಚಾಟನೆಯಾದಂತೆ ಉಳಿದದೇಶಗಳಲ್ಲಿ ಆಗುವಂತಿರಲಿಲ್ಲ. ಇಂಗ್ಲಂಡ್, ಫ್ರಾನ್ಸ್, ಅಮೇರಿಕಾ ಮುಂತಾದ ದೇಶಗಳಲ್ಲಿ ಅವುಗಳ ವಿಷಯಕ್ಕೆ ಇಲ್ಲದ ಅಪಪ್ರಚಾರವನ್ನು ಅಲ್ಲಿಯ ಬಂಡವಾಳಗಾರರು ನಡೆಯಿಸಿದರು; ಅದರಂತೆಯೆ ನಮ್ಮಲ್ಲಿಯೂ ನಡೆದಿದೆ. ಸಮತಾವಾದವನ್ನು ವಿರೋಧಿಸುವ ಜನರಲ್ಲಿ ಕೆಲವರು ಅದನ್ನು ಅಜ್ಞಾನದ ಮೂಲಕವಾಗಿಯೂ, ಕೆಲವರು ತಮ್ಮ ಸ್ವಂತ ಹಿತಸಂಬಂಧಗಳಿಗೆ ಧಕ್ಕೆ ಬರುವುದೆಂಬ ಸಂಕಟದಿಂದಲೂ, ಕೆಲವರು ಅದು ಕತ್ತಿಯ ಬಲದಿಂದ ಹಬ್ಬುವುದೆಂಬುದರಿಂದಲೂ, ಅದನ್ನು ಟೀಕಿಸುತ್ತಾರೆ. ಆದರೆ ಅದರ ನಿಜವಾದ ಉಚ್ಚತಮ ಆದರ್ಶಕ್ಕೆ ಮನಸೋತವರು ಅದನ್ನು ಸ್ವಾಗತಿಸಲೇ ಬೇಕು. **ಹ್ಯಾಮಿಲ್ಟನ್ ಫಿಶ್** ಎಂಬವನು 'What communism means to day' ಎಂಬ ಗ್ರಂಥದಲ್ಲಿ, ಕಮ್ಯುನಿಝಮ್ಮಿನ ವ್ಯಾಖ್ಯೆಯನ್ನು ಈ ರೀತಿ ಹೇಳಿದ್ದಾನೆ:

'From each according to ability to each according to needs (ಶಕ್ತ್ಯನುಸಾರವೆಂಬುದರಿಂದ ಅವಶ್ಯಕತಾನುಸಾರ ಎಂಬುದರ ಕಡೆಗೆ)' ಎಂತಹ ಘನವಾದ ಆದರ್ಶ! ಪ್ರತಿಯೊಬ್ಬನೂ ತನ್ನ ಕೈಯಿಂದಾದಷ್ಟು ದುಡಿದು, ಸರಳಜೀವನಕ್ಕೆ ಎಷ್ಟು ಅವಶ್ಯವೋ ಅಷ್ಟನ್ನು ಸರಕಾರದಿಂದ ದೊರಕಿಸುವುದು. ಆದರೆ ಜನರಲ್ಲಿ ಅಷ್ಟು ಪ್ರಾಮಾಣಿಕತೆ ಬೇಕಲ್ಲ! ಪ್ರತಿಯೊಬ್ಬನೂ ತನ್ನ ನೈತಿಕಹೊಣೆಯನ್ನು ಅರಿತಾಗಲೇ ಕಮ್ಯುನಿಝಮ್ಮಿನ ಸುಂದರ ಆದರ್ಶವು ನೆಲೆಗೊಳ್ಳಲು ಎಡೆಯಾಗುವುದು. ಮಹಾತ್ಮಾ ಗಾಂಧಿಯವರು ಹೇಳುವುದಾದರೂ ಇದನ್ನೇ—

ಆದರೆ ಗಾಂಧಿಯವರದು ಮುಗಿಲ ಮಲ್ಲಿಗೆ (Utopia). ಆ ಆದರ್ಶವನ್ನು ಸಾಧಿಸಬೇಕಾದರೆ, ಎಲ್ಲ ಜನರ ಹೊಟ್ಟೆಯ ಪ್ರಶ್ನೆಯು ಮೊದಲು ಬಿಡಿಸಲ್ಪಡಬೇಕು. ಅವರಲ್ಲಿ ಉಚ್ಚ ಸಂಸ್ಕೃತಿಯ ನಂದಾದೀಪವು ಬೆಳಗಬೇಕು. ಆದರೆ ಬಂಡವಾಳವಾದವು ಜಗತ್ತಿನಲ್ಲಿ ಬದುಕಿರುವವರೆಗೆ ಅದು ಸಾಧ್ಯವಿಲ್ಲ. ಅದರ ನಾಶಕ್ಕೆ ರಕ್ತಪಾತದ ಹೊರತು ಗತ್ಯಂತರವಿಲ್ಲ. ಗಾಂಧಿಯವರಂತಹ ಸತ್ಪುರುಷರ ಪ್ರಯೋಗದಲ್ಲಿ ಅಸಂಖ್ಯಾತ ಶ್ರಮಜೀವಿಗಳು ಹೊಟ್ಟೆಗಿಲ್ಲದೆ ದನ-ಕರುಗಳಂತೆ ಸತ್ತುಹೋಗುತ್ತಾರೆ. 'ಅದು ಅವರ ಕರ್ಮ' ಎಂದರೆ, ಅವರನ್ನು ಕೊಂದ ಶ್ರೇಯಸ್ಸನ್ನೇ 'ಧನಿಕರ ಧರ್ಮ' ಎಂದು ಒಪ್ಪಬೇಕು. ಗಾಂಧಿಯವರಿಗೆ ದರಿದ್ರನಾರಾಯಣನ ಸೇವೆಯೇ ಧರ್ಮವಾದರೆ, ಷೇಕ್ಸ್‌ಪಿಯರ್‌ನ ಶಾಯಿಲಾಕ್‌ನಂತಹನಿಗೆ ದುಡ್ಡೇ ದೇವರಾಗುವುದು. ಈ ಒಳದನಿಯ ತಪ್ಪು-ಒಪ್ಪುಗಳನ್ನು ತೀರಿಸುವರಾರು? ಈ ಅಂತರಾತ್ಮಗಳ ಕಲಹವು ಪ್ರಳಯಕಾಲ ಬರುವವರೆಗೂ ಮುಗಿಯುವಂತಿಲ್ಲ. ಮೇಲಾಗಿ ಆಧ್ಯಾತ್ಮವಾದವೇ ಬಂಡವಾಳಗಾರರ ರಕ್ಷಣಾಕವಚವಾಗಿದೆ. ಅದು ಅವರಿಂದಲೇ ನಿರ್ಮಿತವಾದದ್ದು.

ವ್ಯವಹಾರ ಕುಶಲರಾದ ರಷಿಯನ್ ರಾಜಕಾರಣಿಗಳು, ಕಮ್ಯುನಿಝಮ್ಮಿನ ಉತ್ಕಟತನು ಆದರ್ಶವನ್ನು ಸಾಧಿಸುವುದಕ್ಕಾಗಿಯೆ, ಅದಕ್ಕೆ ಮೊದಲಾದ ಸೋಶಾಲಿಝಮ್ ಸ್ಥಾಪಿಸಿದ್ದು. ಅದೇ ಲೇಖಕನೇ ಸೋಶಲಿಝಮ್ಮಿನ ಆದರ್ಶವನ್ನು ಹೀಗೆ ಹೇಳಿದ್ದಾನೆ:

'From each according to the ability to each according to the value of the work done.' (ಶಕ್ತ್ಯನುಸಾರವೆಂಬುದರಿಂದ ಕಾರ್ಯದ ಬೆಲೆಯ ಪ್ರಮಾಣದ ಕಡೆಗೆ) ಇದೇ ಮಾತನ್ನೇ ಬಿಡಿಸಿ ಅವನು ಹೀಗೆ ಬರೆದಿದ್ದಾನೆ.

"What is in force in Russia now is socialism in which people draw from the funds of the community the value of the work they do for the community instead of being forced to sell their labour to private employers for a subsistence wage."

(ಬದುಕಲು ಸಾಲುವಷ್ಟು ಕೂಲಿಯನ್ನು ಪಡೆವುದಕ್ಕಾಗಿ ಬಂಡವಾಳಗಾರನೊಬ್ಬನಿಗೆ ತಮ್ಮ ಶಕ್ತಿಯನ್ನು ಮಾರಿಕೊಳ್ಳುವುದರ ಬದಲು, ಸಮುದಾಯವಾದಿಯಾದ ರಷಿಯಾದಲ್ಲಿ. ಪ್ರತಿಯೊಬ್ಬನೂ ತನ್ನ ಕಾರ್ಯದ ಬೆಲೆಯನ್ನು ಸಮಾಜದ ಸಾಮಾನ್ಯ ಸಂಪಾದನೆಯಿಂದ ಪಡೆಯುವನು.)

ಫ್ಯಾಸಿಝಮ್ ಮತ್ತು ಕಮ್ಯುನಿಝಮ್‌ಗಳ ತಿಕ್ಕಾಟವು ಕೊಟ್ಟಿನ ಜಂಕಿಯಂತೆ, ೧೯೩೯ ಆಗಸ್ಟ್ ತಿಂಗಳ ವರೆಗೂ ನಡೆಯಿತು. ಪ್ರತಿದಿನವೂ ಪ್ರಜಾಸತ್ತೆಯು ಹೆಚ್ಚು ಬಲಿಷ್ಠವಾಗತೊಡಗಿತ್ತು. ಪ್ರತಿಯೊಂದು ದೇಶದಲ್ಲಿಯೂ ಬಂಡವಾಳವಾದದ ವಿರುದ್ಧ ಹೋರಾಟ ನಡೆದಿದ್ದಿತು. ಆದರೂ ಇಂಗ್ಲಂಡ್, ಫ್ರಾನ್ಸ್, ಅಮೇರಿಕಾ ಮುಂತಾದ ಮಿತ್ರರಾಷ್ಟ್ರಗಳಲ್ಲಿಯ ಬಂಡವಾಳಗಾರರಿಗೆ ಸಾಮ್ರಾಜ್ಯದ ಆಶೆ ತಪ್ಪಿರಲಿಲ್ಲ. ತಮ್ಮ ರಕ್ಷಣೆಗಾಗಿ, ತಮ್ಮ ಸಾಮ್ರಾಜ್ಯಗಳು ಶಿಥಿಲವಾಗದಂತೆ ಅವರು ನೋಡಿಕೊಳ್ಳುತ್ತಿದ್ದರು. ಫ್ಯಾಸಿಸ್ಟ್ ದೇಶಗಳು ತಮ್ಮ ಸಾಮ್ರಾಜ್ಯಗಳನ್ನು ಬೆಳೆಯಿಸುವ ಕಾಲವನ್ನು ನಿರೀಕ್ಷಿಸ ತೊಡಗಿದ್ದುವು. ಯುದ್ಧದ ಸಿದ್ಧತೆಯು ಸಂಪೂರ್ಣವಾದ ಕೂಡಲೆ, ಹಿಟ್ಲರನು ಡಾಂಜಿಗ್ ಬಂದರದ ವಿಷಯವಾಗಿ ಕಲಹವನ್ನು ತೆಗೆದನು. ಇಂಗ್ಲಂಡ್, ಫ್ರಾನ್ಸ್ ಅಮೇರಿಕಾ ಮುಂತಾದ



ಬಲಿಷ್ಠ ರಾಷ್ಟ್ರಗಳು ಹೊರಗಿನ ದೆವ್ವವು ಹೊರಗೇ ಹೋಗಲೆಂದು ಸುಮ್ಮಗಾದರು. ಹಿಟ್ಲರನು ಇದೇ ಹೊತ್ತನ್ನು ಸಾಧಿಸಿ ಪೋಲಂಡ್, ಝೆಕೊಸ್ಲೊವ್ಹಾಕಿಯಾ, ನಾರ್ವೆ ಮುಂತಾದ ದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು.

ತರುವಾಯ ಹಿಟ್ಲರನ ವಕ್ರದೃಷ್ಟಿಯು ಡೆನ್ಮಾರ್ಕ್, ಹಾಲಂಡ್, ಬೆಲ್ಜಮ್ ಮುಂತಾದ ಸಣ್ಣ ಸಣ್ಣ ರಾಷ್ಟ್ರಗಳ ಕಡೆಗೆ ಹರಿಯಿತು. ಮಿತ್ರರು ಅವರಿಗೆ ಸಹಾಯಮಾಡುವುದಾಗಿ ಆಶ್ವಾಸನವನ್ನಿತ್ತರು; ಆದರೆ ಅಲ್ಲಿಯ ಧನಿಕರು ತಮ್ಮ ಸ್ಥಾನಮಾನಗಳಿಗೆ ಧಕ್ಕೆ ಬರದಂತಾದರೆ ಸಾಕು ಎಂದು, ಪ್ರಬಲನಾದ ವೈರಿಯನ್ನೆದುರಿಸದೆ ಅವನಿಗೆ ಶರಣುಹೋದರು. ಡೆನ್ಮಾರ್ಕಿನ ಅರಸು ನಾಝಿ ಸೈನ್ಯಕ್ಕೆ ಹಾದಿಯನ್ನು ಕೊಟ್ಟನು. ಬೆಲ್ಜಿಯಮ್ಮಿನ ಅರಸಾದ ಲಿಪೋಲ್ಡ್‌ನು ಶರಣುಹೋದನು. ಹಾಲಂಡ್ ರಾಣಿ ವಿಲ್ಹೆಲ್ಮಿನಾ ಓಡಿ ಹೋದಳು. ವಿಜಯದ ಸೊಕ್ಕಿನಿಂದ ಹಿಟ್ಲರನ ಸೇನೆಯು ಫ್ರಾನ್ಸಿನ ಕಡೆಗೆ ತನ್ನ ಮೋರೆಯನ್ನು ತಿರುಗಿಸಿತು. ಫ್ರಾನ್ಸ್‌ಗೆ ಸಂಪೂರ್ಣ ಸಹಾಯ ಮಾಡುವುದಾಗಿ ಬ್ರಿಟಿಷರು ವಚನವನ್ನಿತ್ತರು. ಫ್ರಾನ್ಸ್ ವೈರಿಯನ್ನೆದುರಿಸಿತು; ಆದರೆ ಫ್ರೆಂಚರು ತಮ್ಮ ಬಂಡವಾಳವಾದಿ ಸ್ವಾರ್ಥಸಾಧನೆಗಾಗಿ, ತಮ್ಮ ಬಲಿದಾನವನ್ನು ಮಾಡಲು ಸಿದ್ಧರಿರಲಿಲ್ಲ. ಫ್ರೆಂಚ್ ಸರಕಾರವು ಇದ್ದು ಬಿದ್ದ ದಂಡನ್ನು ಕೂಡಿಸಿ ವೈರಿಯನ್ನು ಎದುರಿಸಿತು; ಆದರೆ ಪ್ರಬಲನಾದ ವೈರಿಯ ಮುಂದೆ ಅದರ ಆಟ ನಡೆಯದಾಯಿತು. ಕೊನೆಗೆ ಜರ್ಮನ್ ಸೈನ್ಯವು ರಾಜಧಾನಿಯ ಬಾಗಿಲಿಗೆ ಬಂದಕೂಡಲೆ ಅಲ್ಲಿಯ ಧನಿಕರು, ತಮ್ಮ ಯಂತ್ರಾಲಯಗಳೂ ಆಸ್ತಿಪಾಸ್ತಿಗಳೂ ನಾಶವಾಗುವವಲ್ಲ—ಎಂಬ ಸಂಕಟದಿಂದ, ತಮ್ಮ ಸರಕಾರವು ಶರಣುಹೋಗುವಂತೆ ಮಾಡಿದರು.

ಹಿಟ್ಲರನ ಹಸ್ತಕರಾದ ಲಾವಾಲ್, ಡಾರ್ಲಾನ್, ಪಿಟೇನ್ ಮುಂತಾದವರು ರಾಜ್ಯಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಪ್ರಜಾಸತ್ತೆಯು ತಲೆಯೆತ್ತದಂತೆ ನೋಡಿಕೊಂಡದ್ದಲ್ಲದೆ, ಹಿಟ್ಲರನ ಕೈಪಾಥದಲ್ಲಿ ಫ್ರೆಂಚ್ ಧನಿಕವರ್ಗವು ಬದುಕುವಂತೆ ನೋಡಿಕೊಳ್ಳತೊಡಗಿದರು.

೧೯೩೯ ಅಗಸ್ಟ್ ತಿಂಗಳಿನಿಂದ ೧೯೪೦ ಜೂನ್ ತಿಂಗಳು ಅರ್ಧ ಕಳೆಯುವುದರೊಳಗಾಗಿ, ಯುರೋಪದ ಅರ್ಧ ಭಾಗವೇ ಹಿಟ್ಲರನ ವಶಕ್ಕೆ ಹೋಯಿತು. ಫ್ಲಾಂಡರ್ಸ್ ಕಾಳಗದ ನಂತರ ಇಂಗ್ಲಿಷ್ ಜನತೆಯನ್ನು ಬಡಿದೆಬ್ಬಿಸಿದಂತೆ ಆಯಿತು. ಫ್ರಾನ್ಸಿನಂತೆ ಇಂಗ್ಲಂಡು ಕೂಡ ಜರ್ಮನ್ ಸಾಮ್ರಾಜ್ಯದ ಭಾಗವಾಗಬಹುದೆಂದು ಅವರಿಗೆ ಎನಿಸತೊಡಗಿತು. ಕೂಡಲೆ ಮಿಂಚಿನ ವೇಗದಲ್ಲಿ ಯುದ್ಧದ ಸಿದ್ಧತೆಯು ಭರದಿಂದ ನಡೆಯತೊಡಗಿತು. ಎಲ್ಲೆಲ್ಲಿಯೂ ದೇಶಸಂರಕ್ಷಕ ದಳಗಳು ಸ್ಥಾಪಿಸಲ್ಪಟ್ಟುವು. ಸೈನ್ಯದಲ್ಲಿ ಜನರು ಆತ್ಮಸಂತೋಷದಿಂದ ಸೇರತೊಡಗಿದರು. ಬ್ರಿಟಿಷ್ ಸಾಮ್ರಾಜ್ಯದಲ್ಲಿಯೆ ಯುದ್ಧದ ಸಿದ್ಧತೆಯು ಭರದಿಂದ ನಡೆಯತೊಡಗಿತು. ಹಿಟ್ಲರನಿಗೆ ತನ್ನ ಭೇದನೀತಿಯು ಇಲ್ಲಿ ನಡೆಯದೆಂದು ಎನಿಸತೊಡಗಿತು.

ಇದೇ ಕಾಲದಲ್ಲಿ ರಷಿಯವು ಸ್ವಸಂರಕ್ಷಣೆಯ ದೃಷ್ಟಿಯಿಂದ ಫಿನ್‌ಲಂಡ್, ಲ್ಯಾಟ್ವಿಯಾ, ಲಿಥುಯಾನಿಯಾ, ಮುಂತಾದ ಪ್ರದೇಶಗಳನ್ನು ತೆಗೆದುಕೊಳ್ಳುತ್ತ, ತನ್ನ ಗಡಿಯನ್ನು ಬೆಳೆಯಿಸತೊಡಗಿತ್ತು. 'ರಷಿಯವೂ ಕೂಡ ಸಾಮ್ರಾಜ್ಯ ಬೆಳೆಸತೊಡಗಿತು' ಎಂದು ಎಷ್ಟೋ ಸಮತಾವಾದಿಗಳೇ ಅದನ್ನು ಟೀಕಿಸತೊಡಗಿದರು. ಆದರೆ ಆ ಪ್ರದೇಶಗಳನ್ನು ತೆಗೆದುಕೊಳ್ಳದಿದ್ದರೆ ಇಂದು ರಷಿಯದ ಯುದ್ಧವೇ ಮುಗಿದು ಹೋಗಬಹುದಾಗಿತ್ತು. ರಷಿಯವು ಜರ್ಮನಿಯ ವಸಹಾತು ಪ್ರದೇಶವಾಗಬಹುದಾಗಿತ್ತು. ರಷಿಯದ ಈ ಮುಂಜಾಗ್ರತೆಯನ್ನು ಕಂಡು ಹಿಟ್ಲರನು ಹಲ್ಲುಕಡಿಯತೊಡಗಿದನು. ೧೯೪೧ ಜೂನ್ ೨೨ನೆಯ ತಾರೀಖು ಮುಂಜಾವಿನಲ್ಲಿ, ಜರ್ಮನ್ ಸೈನ್ಯವು ರಷಿಯದಲ್ಲಿ ನುಗ್ಗಿತು. ಅಂದು ಸಂಜೆಗೆ ಇಂಗ್ಲಂಡು ರಷಿಯಕ್ಕೆ ಎಲ್ಲ ಬಗೆಯ ಸಹಾಯ ಮಾಡುವುದಾಗಿ ಆಶ್ವಾಸನ ಕೊಟ್ಟಿತು. ಮರುದಿವಸವೇ ಅಮೇರಿಕೆಯೂ ತನ್ನ ಸಹಾಯವನ್ನು ರಷಿಯಕ್ಕೆ ನೀಡುವುದಾಗಿ ವಚನವಿತ್ತಿತು. ಮಿತ್ರರು ರಷಿಯಕ್ಕೆ ವಚನವಿತ್ತಂತೆ ಸಹಾಯವನ್ನು ಕಳಿಸುತ್ತಿದ್ದಾರೆ; ಆದರೆ ಸಾಕಷ್ಟು ಪ್ರಮಾಣದಲ್ಲಿ ಅದು ರಷಿಯನ್ನರಿಗೆ ಸಿಕ್ಕದಂತಾಗಿದೆ. ಮೂರು ವರುಷಗಳಾದರೂ ರಷಿಯವು ತನ್ನ ಆದರ್ಶವನ್ನು ಬಿಟ್ಟಿಲ್ಲ. ಅದರ ರಕ್ಷಣೆಗಾಗಿಯೆ ಅಸಂಖ್ಯಾತ ರಷಿಯನ್ನರು ಮಡಿಯುತ್ತಲಿದ್ದಾರೆ. ಸ್ಟಾಲಿನ್‌ಗ್ರಾಡ್ ರಣಭೂಮಿಯಲ್ಲಿ ರಷಿಯನ್ನರು ತೋರಿಸಿದ ಶೌರ್ಯಸಮಾಧಾನಗಳನ್ನು, ಪ್ರಪಂಚವು ಎಂದೂ ಮರೆಯುವಂತಿಲ್ಲ. ಈಗಾಗಲೇ ಬಹುದಿನಗಳಿಂದಲೂ ನಿರೀಕ್ಷಿಸಿದ ಎರಡನೆಯ ಯುದ್ಧಮುಖವು ಪ್ರಾರಂಭವಾಗಿದೆ. ಅದನ್ನು ಕಂಡು ಹಿಟ್ಲರನು ರಷಿಯದಲ್ಲಿ ತನ್ನ ಕೊನೆಯ ಅಸ್ತ್ರವಾದ ವಿಷವಾಯುವನ್ನು ಕೂಡ ಬಿಟ್ಟು ರಷಿಯನ್ನರನ್ನು ಹಣಿಯಲು ವಿಶ್ವಪ್ರಯತ್ನವನ್ನು ನಡೆಯಿಸುತ್ತಿದ್ದಾನೆ. ಮಿತ್ರರು ಇಟಲಿಯನ್ನು ಫ್ಯಾಸಿಝಮ್ಮಿನ ಪಾಶದಿಂದ ಬಿಡಿಸಿ ಅಲ್ಲಿಂದಲೇ ಹಿಟ್ಲರನನ್ನು ಹಣಿಯಲು ಹವಣಿಸುತ್ತಿದ್ದಾರೆ. ಅವರ ಆಶೆಯು ಫಲಿಸಲು ಜಗತ್ತಿನ ಎಲ್ಲ ಪ್ರಜಾಸತ್ತೆಯ ಬೆಂಬಲವೂ ಅವಶ್ಯವಾಗಿದೆ.

ಹಿಂದೀಯರ ಕರ್ತವ್ಯ

ಇಂದು ಪ್ರಪಂಚದ ಇತಿಹಾಸವೇ ಬದಲಾಗುವ ಕಾಲ ಬಂದಿದೆ. ಅತ್ತ ಯುರೋಪದಲ್ಲಿ ಯುದ್ಧದ ತಾಂಡವನೃತ್ಯವು ನಡೆಯುತ್ತಿರುವಾಗ, ಭಾರತದ—ಪೂರ್ವದ ಕ್ಷಿತಿಜದ ಮೇಲೆ ಯುದ್ಧದ ಕಾರ್ಮೋಡಗಳು ಕಾಣಿಸಿಕೊಳ್ಳತೊಡಗಿವೆ. ಅವು ಈಗಾಗಲೆ ಗುಡುಗತೊಡಗಿವೆ; ಎಂದು ಮಳೆಸುರಿವುದೆಂಬುದು ತಿಳಿಯುವಂತಿಲ್ಲ. ಬಲಿಷ್ಠ ಫ್ಯಾಸಿಸ್ಟ್ ರಾಷ್ಟ್ರವಾದ ಜಪಾನು

ಈಗಾಗಲೇ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿಕೊಂಡು, ಹಿಂದುಸ್ತಾನದ ಪೂರ್ವದ ಬಾಗಿಲಿಗೆ ಬಂದು ನಿಂತಿದೆ. ಹಿಂದೂ ದೇಶದಲ್ಲಿ ಬ್ರಿಟಿಷರು ಇಂಗ್ಲಿಷ್, ಅಮೇರಿಕನ್ ಮತ್ತು ಹಿಂದೀ ಸೈನ್ಯದ ನೆರವಿನಿಂದಲೂ ಆಧುನಿಕ ಮಾರಕ ಯಂತ್ರಗಳ ಸಹಾಯದಿಂದಲೂ ವೈರಿಯನ್ನು ಎದುರಿಸಲು ಸಾಹಸವನ್ನು ನಡೆಯಿಸುತ್ತಲಿದ್ದಾರೆ. ಆದರೆ ದಾಸ್ಯದಲ್ಲಿ ಬೀಳಬಹುದಾದ ನಮಗೇ ನಮ್ಮ ಸಂರಕ್ಷಣೆಯ ಎಚ್ಚರವಿಲ್ಲ; ಪರಕೀಯರಾದ ಬ್ರಿಟಿಷರಿಗೆ ಹಿಂದೀಯರು ಇದ್ದರೇನು, ಸತ್ತರೇನು?

ಹಿಂದೂ ದೇಶದಲ್ಲಿ ಬಲಿಷ್ಠಸಂಸ್ಥೆಯಾದ ಕಾಂಗ್ರೆಸ್ಸು ಬ್ರಿಟಿಷರ ಕೂಡ ಇಂದು ಸಹಕರಿಸಲು ಸಿದ್ಧವಿಲ್ಲ. ಇಷ್ಟೇ ಅಲ್ಲ, ಅದು ಬ್ರಿಟಿಷರ ವಿರುದ್ಧ ಹೋರಾಡಲು ಹಿಂದೀ ಜನತೆಯನ್ನು ಉಪದೇಶಿಸುತ್ತದೆ. ಎಷ್ಟೋ ಹಿಂದೀ ಜನರು, ಸುಭಾಸ ಬಾಬು ಅವರು ಜಪಾನಿನ ಸಹಾಯದಿಂದ ನಮಗೆ ಸ್ವರಾಜ್ಯವನ್ನು ತರುವರೆಂದು ತಿಳಿಯುತ್ತಿದ್ದಾರೆ. ಕಾಂಗ್ರೆಸ್ಸಿಗರು ಯುದ್ಧವು ಯಾವರೀತಿಯಲ್ಲಿ ನಡೆದಿದೆಯೆಂಬುದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. 'ಒಂದುವೇಳೆ ನಾವು ಬ್ರಿಟಿಷರಿಗೆ ಸಹಾಯವನ್ನಿತ್ತರೆ ಅವರು ಸ್ವರಾಜ್ಯವನ್ನು ಕೊಡುವರೆಂಬುದಾದರೂ ಏತರಮೇಲಿಂದ?' ಎಂದು ಕಾಂಗ್ರೆಸಿಗರ ಪ್ರಶ್ನೆ. ಯೋಗ್ಯವಾದ ಸಮಸ್ಯೆ. 'ಸ್ವರಾಜ್ಯವು ದಾನದ ವಸ್ತುವಲ್ಲ' ಎಂಬುದನ್ನು ಕಾಂಗ್ರೆಸಿಗರಾಗಲಿ, ಲೀಗದವರಾಗಲಿ, ಯಾರೇ ಆಗಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅದನ್ನು ನಾವು ಗೆಲ್ಲಬೇಕು. ಬ್ರಿಟಿಷರಿಂದ ಅದನ್ನು ಕಸಿದುಕೊಳ್ಳಬೇಕು. ನಾವು ಸಮಗ್ರ ಇಂಗ್ಲಿಷ್ ಜನತೆಯನ್ನೇ ವಿರೋಧಿಸುತ್ತಿದ್ದೇವೆ; ಅದು ಶುದ್ಧ ತಪ್ಪು. ಭಾರತೀಯರ ದಾಸ್ಯಕ್ಕೆ ಕಾರಣರಾದವರು ಬ್ರಿಟಿಷ್ ಬಂಡವಾಳಗಾರರೇ ಹೊರತು ಇಡಿಯ ಬ್ರಿಟಿಷ್ ಜನಾಂಗವಲ್ಲ. ಆ ಬಂಡವಾಳಗಾರರು ಹಣ್ಣಾದಾಗಲೇ ಅವರನ್ನು ನಾವು ಹಣಿಯಬೇಕು. ಈಗ ಆ ಕಾಲ ಬಂದಿದೆ. ಇಂಗ್ಲಂಡು ಯುದ್ಧದಲ್ಲಿ ಗೆದ್ದರೂ ಸರಿಯೆ, ಸೋತರೂ ಸರಿಯೆ; ಅಲ್ಲಿಯ ಬಂಡವಾಳವಾದದ ಗೋರಿಯಾಗುವುದು ಖಂಡಿತ. ಈಗಾಗಲೆ ಇಂಗ್ಲಂಡು ಅಮೇರಿಕೆಯ ಋಣದಲ್ಲಿದೆ. ಆರ್ಥಿಕ ದೃಷ್ಟಿಯಿಂದ ಇಂಗ್ಲಂಡು ಅಮೇರಿಕೆಯ ದಾಸ್ಯವನ್ನು ವಹಿಸಿದೆ. ಯುದ್ಧದಲ್ಲಿ ಸಿಕ್ಕು ಹುರುಪಳಿಸಿದ ಇಂಗ್ಲಿಷ್ ಜನಸಾಮಾನ್ಯವು ಬಂಡವಾಳವಾದದ ಗೋರಿಯನ್ನು ಕಟ್ಟಿ ಸೋಲಿಸಲಿದ್ದುದನ್ನು ಬಲವಾಗಿ ಕೊಂಡೇ ತೀರುವುದು. ಅದರಂತೆ ಉಳಿದ ಎಲ್ಲ ಯುರೋಪಿಯನ್ ರಾಷ್ಟ್ರಗಳಲ್ಲಿಯೂ ಸೋಶಾಲಿಝುಮ್ ಭರದಿಂದ ಬೆಳೆಯತೊಡಗಿದರೆ, ಅದೊಂದು ಆಶ್ಚರ್ಯಕರ ಘಟನೆಯಲ್ಲ. ಪಂಡಿತ ಜವಾಹಾರಲಾಲರು ಕೂಡ 'ಇಂಗ್ಲಂಡು ಯುದ್ಧದಲ್ಲಿ ಗೆದ್ದರೂ ಸರಿ, ಸೋತರೂ ಸರಿ, ಅದು ತನ್ನ ಸಾಮ್ರಾಜ್ಯವನ್ನು ಕಾಯ್ದುಕೊಳ್ಳಲಾರದು!' ಎಂದು ಹೇಳಿದ್ದಾರೆ. ಯುದ್ಧದ ತರುವಾಯ ಅಮೇರಿಕೆಯ ಬಂಡವಾಳಗಾರರ ಸಾಮರ್ಥ್ಯವು ಎಷ್ಟು ನಿಲ್ಲುವುದೋ ಎಂಬುದೊಂದು ಇನ್ನೊಂದು ಪ್ರಶ್ನೆಯಾಗಿದೆ. 'ಒಂದುವೇಳೆ ಅಮೇರಿಕೆಯು ಸಾಮ್ರಾಜ್ಯವನ್ನು ಕಟ್ಟಲು ಪ್ರಯತ್ನಿಸಿದರೆ!' ಎಂಬುದೊಂದು ಸಂದೇಹ. ಆದರೆ ಅಮೇರಿಕೆಯ ಬಂಡವಾಳಗಾರರು ಯುರೋಪದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವುದು ದೂರದ ಮಾತೇ ಸರಿ. ಒಂದುವೇಳೆ ಹಿಂದುಸ್ತಾನದಲ್ಲಿ ಅವರು ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರೆ, ಅದನ್ನು ನಾವು ಎದುರಿಸಲೇಬೇಕು. ಅಮೇರಿಕೆ ಕೂಡ ಮತ್ತೊಮ್ಮೆ ಯುದ್ಧದಲ್ಲಿ ಬಿದ್ದು ಗಾಸಿಯಾಗಲಾರದು. ಇಂಗ್ಲಂಡೆ ಆಗಲಿ ಅಮೇರಿಕೆಯೆ ಆಗಲಿ, ಹಿಂದೂ ದೇಶದಲ್ಲಿ ಮತ್ತೆ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಪ್ರಯತ್ನಿಸಿದರೆ, ನಮಗೆ ಪ್ರಜಾಸತ್ತೆಯ ಕೈವಾರಿಗಳಾದ ರಶಿಯಾ, ಚೀನಾಗಳ ಸಹಾಯವು ಸಿಕ್ಕಬಹುದಾಗಿದೆ. ಒಂದುವೇಳೆ ಅದು ಸಿಕ್ಕದಿದ್ದರೂ ೪೦ ಕೋಟಿ ಜನರ ಪ್ರಚಂಡಶಕ್ತಿಯ ಮುಂದೆ ಅವರು ತಡೆಯಲಾರರು. ಯುದ್ಧವು ಮುಗಿದ ಕೂಡಲೆ ನಾವು ನಮ್ಮಲ್ಲಿಯ ಜಮೀನುದಾರಿಕೆ ಮತ್ತು ಬಂಡವಾಳವಾದವನ್ನು ನಾಶಮಾಡಿ, ರೈತರ ಮತ್ತು ಕೂಲಿಕಾರರ ಜೀವನದ ಮಟ್ಟವನ್ನು ಏರಿಸಿದರೆ, ೪೦ ಕೋಟಿ ಜನರು ಕೂಡಿಕೊಳ್ಳಲು ತಡವಾಗುವುದಿಲ್ಲ. ಯಾವ ಸಂಸ್ಥೆಯೆ ಆಗಲಿ, ರೈತರ ಮತ್ತು ಶ್ರಮಜೀವಿಗಳ ಸಹಾಯವನ್ನಪೇಕ್ಷಿಸಬೇಕಾದರೆ, ಅವರ ಬಾಳಿನಲ್ಲಿ ಸತ್ತ್ವವು ಚಿಮ್ಮಬೇಕು; ಅದಕ್ಕಾಗಿ ರೈತರಿಗೆ ಅವರ ಸ್ವಂತದ ಹೊಲಗಳಿರಬೇಕು, ಕೂಲಿಕಾರರ ವೇತನವು ಹೆಚ್ಚಾಗಬೇಕು. ಕಾರಖಾನೆಗಳು ಸ್ಥಾಪಿಸಲ್ಪಟ್ಟು ನಿರುದ್ಯೋಗತನದ ಸಮಸ್ಯೆಯು ಬಿಡಿಸಲ್ಪಡಬೇಕು. ಸಾರಾಂಶ: ನಮ್ಮಲ್ಲಿದ್ದ ಫ್ಯಾಸಿಸ್ಟ್ ಮನೋವೃತ್ತಿಯು ನಾಶವಾಗಬೇಕು. ಕಾಂಗ್ರೆಸ್ಸು ಈ ಜಮೀನುದಾರರನ್ನೂ ಬಂಡವಾಳಗಾರರನ್ನೂ ಇರಗೊಟ್ಟು, ಅವರ ಸಹಾಯದಿಂದಲೇ ಸ್ವರಾಜ್ಯವನ್ನು ಗಳಿಸಲು ಹೊರಟಿದೆ. ಗಾಂಧಿಯವರು ಕೂಡ ಬಂಡವಾಳವಾದವು ಮನುಷ್ಯನ ನಿಸರ್ಗಸಿದ್ಧವಾದ ಮುಟ್ಟುಗುಣವೆಂದೂ, ಬಂಡವಾಳಗಾರರು ಅದನ್ನು ಪ್ರಜೆಗಳ ಕಲ್ಯಾಣಕ್ಕಾಗಿ ವೆಚ್ಚಮಾಡುವುದು ಧರ್ಮವೆಂದೂ ಹೇಳುತ್ತಾರೆ. ಗಾಂಧಿಯವರೇ ಹೇಳಲಿ, ಯಾರೇ ಹೇಳಲಿ! ಶುಷ್ಕೋಪಚಾರದಿಂದ ಜನರಲ್ಲಿ ಒಕ್ಕಟ್ಟುಂಟಾಗಲಾರದೆಂಬುದು ಸ್ವತಃಸಿದ್ಧವಾದ ಮಾತು. ಇಂದು ಕಾಂಗ್ರೆಸ್ಸು ನಡೆಯಿಸಿದ ಚಳವಳಿಗಳನ್ನೂ ನೋಡುತ್ತಿದ್ದೇವೆ. ಜೇಲಿನಲ್ಲಿ ದೇಶದ ಜನಸಂಖ್ಯೆಯ ೧/೫ ಭಾಗವನ್ನೂ ನಾವು ಕಾಣುವುದಿಲ್ಲ. ಎಂದ ಮೇಲೆ, ನಾಳೆ ಗುಂಡಿನೇಟಿಗೆ ಎಷ್ಟು ಮಂದಿ ಮುಂದೆಬರಬಹುದೆಂಬವನ್ನು ಸ್ವಲ್ಪ ಕಲ್ಪಿಸಿಕೊಳ್ಳಿ. ಜನರು ತಮ್ಮದೇನಾದರೂ ನಷ್ಟವಾಗುವಂತಿದ್ದರೆ ಮುಂದೆ ಬರಬಹುದು. ರಾಮರಾಜ್ಯವಾದರೇನು, ರಾವಣನ ರಾಜ್ಯವಾದರೇನು? ಅವರಿಗೆ ರಾಗಿಬೀಸುವುದು ತಪ್ಪಿದ್ದಲ್ಲ! ಕಾಂಗ್ರೆಸ್ಸು ಎಲ್ಲಿಯವರೆಗೆ ಈ ಧೋರಣೆಯನ್ನನುಸರಿಸುವುದೋ ಅಲ್ಲಿಯವರೆಗೆ ಅದಕ್ಕೂ ಬ್ರಿಟಿಷ್

ಬಂಡವಾಳಗಾರರ ಸರಕಾರಕ್ಕೂ ಏನೂ ಭೇದವಿಲ್ಲ. ಬಿಳಿಯ ಬಂಡವಾಳಗಾರರನ್ನು ಹಾರಿಸಿ ಅವರ ಸ್ಥಳದಲ್ಲಿ ಕರಿಯ ಬಂಡವಾಳಗಾರರನ್ನು ತರುವುದರಲ್ಲಿ ಏನು ಅರ್ಥವಿದೆ?

ಒಂದುವೇಳೆ ನಾವು ಮಿತ್ರರಿಗೆ ಸಹಾಯಮಾಡದಿದ್ದರೆ ಇಲ್ಲಿಯ ಇಂಗ್ಲೀಷ್ ಸೈನ್ಯವನ್ನು ಜಪಾನು ಸದೆಬಡಿದು ತುಸು ದಿವಸಗಳಲ್ಲಿಯೆ ನಮ್ಮ ದೇಶವನ್ನು ಆಕ್ರಮಿಸಿಕೊಳ್ಳುವುದು ಖಂಡಿತ. ಆ ಮೇಲೆ ಪಶ್ಚಾತ್ತಾಪಪಟ್ಟರೆ ಉಪಯೋಗವೇನು? ಜಪಾನು ಆದರೂ ಭೇದನೀತಿಯಿಂದಲೇ ಹಿಂದೂದೇಶವನ್ನು ಆಕ್ರಮಿಸಿಕೊಳ್ಳುವುದು. ನಮ್ಮಲ್ಲಿಯ ಸಂಸ್ಥಾನಿಕರೂ, ಜಮೀನುದಾರರೂ, ಧನವಂತರೂ ತಮ್ಮ ರಕ್ಷಣೆಗಾಗಿ ಅವರ ಸೇವೆಯನ್ನು ಸ್ವೀಕರಿಸಿ, ನಮ್ಮನ್ನೇ ತುಳಿದರು ಬಿಡಿದರೆ ಅದೊಂದು ಸೋಜಿಗವಲ್ಲ. ಒಂದು ವೇಳೆ ಫ್ಯಾಸಿಸ್ಟ್ ರಾಷ್ಟ್ರಗಳಿಗೇ ಜಯವಾದರೆ ನಾವು ಕಡೆತನಕ ಪಶುವೃತ್ತಿಯಲ್ಲಿಯೆ ಕಾಲಹರಣ ಮಾಡಬೇಕಾಗಿ ಬರುವುದು. ನಾಲ್ವತ್ತು ಕೋಟಿ ಭಾರತೀಯರ ಮುಂದೆ ಎರಡು ದಾರಿಗಳಿವೆ. ಒಂದು ಪ್ರಗತಿಪಥ—ಅದು ಕಲ್ಲುಮುಳ್ಳುಗಳಿಂದ ತುಂಬಿದೆ. ಇನ್ನೊಂದು ನೇರವಾಗಿ ನರಕಕ್ಕೆ ಹೋಗುವ ರಾಜಬೀದಿ—ಅದು ಹೊಕ್ಕಟವಾಗಿದೆ. ಯಾವುದನ್ನು ಹಿಡಿಯುವುದೂ ಅವರ ಬುದ್ಧಿಶಕ್ತಿಯನ್ನವಲಂಬಿಸಿದೆ. ಇಂದು ನಾವೆಲ್ಲರೂ ರಾಜ್ಯಕ್ರಾಂತಿಗಾಗಿ ಮಾತನಾಡುತ್ತಿದ್ದೇವೆ. ಆದರೆ ನೆಪೋಲಿಯನ್ ಹೇಳಿದ "Revolution is an idea that has found bayonets to support it (ಖಡ್ಗಗಳ ತಳಹದಿಯ ಮೇಲೆ ನಿಂತ ವಿಚಾರದ ಕಟ್ಟಡವೇ ಕ್ರಾಂತಿ)" ಎಂಬ ಮಾತನ್ನು ನಾವು ಅರಿತು, ಅದರಂತೆ ಆಚರಿಸುವ ಕಾಲವೀಗ ಬಂದಿದೆ.

ವಿ. ಸೂ:— ಈ ಬರೆಹದಲ್ಲಿ ಹಿಂದುಸ್ತಾನದ ವರ್ತಮಾನ ರಾಜಕೀಯ ಪರಿಸ್ಥಿತಿಯನ್ನು 'ರಾಯವಾದ'ದ ಕನ್ನಡಕವನ್ನಿರಿಸಿಕೊಂಡು ಲೇಖಕರು ವಿಮರ್ಶೆಮಾಡಿದ್ದಾರೆ. ರಾಜಕೀಯ ತತ್ತ್ವಜ್ಞಾನಿಗಳಲ್ಲಿ ಶ್ರೀಮಾನ್ ಎಂ. ಎನ್. ರಾಯರೂ ಒಂದು ಗಣ್ಯಸ್ಥಾನವನ್ನು ಪಡೆದವರಾಗಿರುವರು. ನಿರ್ದಾಕ್ಷಿಣ್ಯಭಾವದಿಂದ ಭಾರತದ ಮುಖ್ಯ ರಾಜಕೀಯ ಪಕ್ಷಗಳ ಗುರಿಯನ್ನೂ ಕಾರ್ಯವನ್ನೂ, ಅವರೂ ಅವರ ಪಕ್ಷದವರೂ ಟೀಕಿಸುತ್ತಾರೆ. ರಾಯವಾದಿಗಳ ಮಾತುಗಾರಿಕೆ ಕನ್ನಡನಾಡಿನ ಎಷ್ಟೋ ಜನ ತರುಣರ ಮನಸ್ಸನ್ನು ಆಕರ್ಷಿಸಿಬಿಟ್ಟಿದೆ. ಸದ್ಯ ತತ್ತ್ವಪ್ರಚಾರವೇ ಅವರ ಮುಖ್ಯ ಕಾರ್ಯಕಲಾಪವಾಗಿದೆ. ಜಯಂತಿಯ ವಾಚಕರಿಗೆ ಅವರ ವಿಚಾರಗಳೂ ತಿಳಿದಿರಲೆಂಬ ಉದ್ದೇಶದಿಂದ, ಈ ಲೇಖಾಂಕಗಳಿಗೆ ಎಡೆಕೊಡಲಾಗಿದೆ. ಬಿಡುಗಡೆಯ ತೊಡಕಿಗಾಗಿ ವಿಚಾರಿಸುವಾಗ, ಒಬ್ಬೊಬ್ಬರ ವಿಚಾರಪದ್ಧತಿಗಳು ಒಂದೊಂದು ರೀತಿಯವಾಗಿರುವುದು ಸಹಜ. ಇದಕ್ಕಾಗಿ ಯಾರೂ ಕೆರಳಬೇಕಾದ ಕಾರಣವಿಲ್ಲ. ಓದಿ ವಿಮರ್ಶೆಮಾಡಬೇಕು, ಇಷ್ಟೆ!

ಸಂ. ಜ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಸ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co Ltd., DHARWAR.

ಸಾಹಿತ್ಯ ವಿಹಾರ

“ ವಿಹಾರಿ ”

ಬೆಟ್ಟದ ಜೀವ’ದ ಗುರುತು; ಶಾ ಅವರ ಮುಪ್ಪು; ಆಧುನಿಕ ಮರಾಠಿ ಕಾದಂಬರಿ; ಹಿಂದುಸ್ತಾನಿ ಅಕೆಡೆಮಿಯವರ ಬಹುಮಾನ ವಿಚಾರ.

ಇಲ್ಲಿಂದ ಪ್ರತಿತಿಂಗಳೂ, ಮೇಲಿನ ಹಣೆಬರಹದ ಕೆಳಗೆ ಮುಂದಕ್ಕೆ ಸಾಗಬಹುದಾದ ಈ ‘ಸಾಹಿತ್ಯ ವಿಹಾರ’ದ ವಿಷಯವಾಗಿ, ಆರಂಭದ ಈ ಲೇಖನದಲ್ಲಿ ನಾಲ್ಕು ಮಾತುಗಳನ್ನು ಹೇಳುವುದು ಅವಶ್ಯವಾಗಿದೆ. ಇದೊಂದು ಸಾಹಿತ್ಯ ವಿಷಯಾತ್ಮಕವಾದ ದಿನಚರಿಯೆಂದು ಹೇಳಿದರೆ, ಇಲ್ಲಿ ಬರಬಹುದಾದ ಬರವಣಿಗೆಯ ಮುಖ್ಯಲಕ್ಷಣವನ್ನು ತಿಳಿಸಿದಂತಾಗಬಹುದು. ಹೊಸ ದಾರಿಯಲ್ಲಿ ಹರಿಯುತ್ತಿರುವ--ಇತ್ತೀಚೆಗೆ ಕ್ಷೀಣವಾಗಿಯಾದರೂ ಮುಂದೆ ಸಾಗುತ್ತಿರುವ—ಕನ್ನಡ ಸಾಹಿತ್ಯವೇ ಈ ವಿಹಾರಕ್ಕೆ ಮುಖ್ಯವಿಷಯ ; ಆದರೂ, ಭಾರತದ ಇತರ ಪ್ರಾಂತಗಳಲ್ಲಿ ಹೊಸಬಗೆಯ ಜೀವನದಲ್ಲಿ ಅರಳುತ್ತಿರುವ ಸಾಹಿತ್ಯದ ಹೊಳಪಿನ ಪರಿಚಯವನ್ನು ಮಾಡಿಕೊಡುವುದೂ ಈ ವಿಹಾರವಿಮರ್ಶೆಯ ಉದ್ದೇಶವಾಗಿದೆ. ದಿನಚರಿಯೆಂದಕೂಡಲೆ ಅದನ್ನು ಬರೆಯುವವನಿಗೆ ಇಂಥ ವಿಷಯವನ್ನೇ ಕುರಿತು ಬರೆಯಬೇಕೆಂಬ, ಅಥವಾ ಎಲ್ಲರಿಗೂ ಸರಿಹೋಗಿರಲೇಬೇಕೆಂಬ ರೀತಿಯಲ್ಲಿಯೆ ಬರೆಯಬೇಕೆಂಬ ಯಾವ ಒತ್ತಾಯವೂ ಇರುವುದಿಲ್ಲ. ಆದರಂತೆಯೆ ಕಾಲಕಾಲದಲ್ಲಿ ಅರಳಬಹುದಾದ ಸಾಹಿತ್ಯ“ರತ್ನ”ಗಳ ಬಗ್ಗೆ “ವಿಹಾರಿ” ಯು ತನಗೆ ತೋಚಿದ್ದನ್ನು, ತನ್ನ ವೈಯಕ್ತಿಕ ದೃಷ್ಟಿಕೋನದಿಂದ, ಸಮಯಾನುಸಾರವಾಗಿ, ವಿಷಯಕ್ಕನುಗುಣವಾಗಿ, ವ್ಯಂಗ್ಯವಾಗಿಯೊ, ಹಾಸ್ಯದಿಂದ ಕೂಡಿಯೊ, ವಿಮರ್ಶಾತ್ಮಕ ವಿಚಾರಪೂರ್ಣವಾಗಿಯೊ ಬರೆಯುವನು. ಕೆಲವೊಂದು ವೇಳೆ “ವಿಹಾರಿ”ಯ ವಿಮರ್ಶೆ ಕೇವಲ ಹರಟೆ ಎನಿಸಬಹುದು. ಕೆಲವು ವೇಳೆ ದೀರ್ಘವಾದ ವಿಮರ್ಶೆ ಎನಿಸಬಹುದು. ಇನ್ನೂ ಕೆಲವು ಬಾರಿ, ಸಾಹಿತಿಗಳ ವಿಷಯವಾಗಿ ಪರಿಚಯಾತ್ಮಕ ಲೇಖನವಾಗಬಹುದು. “ವಿಹಾರಿ”ಗೆ ನಿರ್ಬಂಧಗಳಿಲ್ಲ. ಸಾಹಿತ್ಯ ಆತನಿಗೆ ವಿಷಯ. ಇದರ ಸಂಬಂಧದಲ್ಲಿ ತನ್ನ ದಿನಚರಿಯಲ್ಲಿ ಅವನು ಬರೆದುದೇ ಈ ವಿಹಾರಕ್ಕೆ ಸಾಮಗ್ರಿ. ಆದ್ದರಿಂದ ಈ “ವಿಹಾರ”ದ ಸೆಳೆತದಲ್ಲಿ ಸಿಕ್ಕಬಹುದಾದ ಸಾಹಿತ್ಯಸೇವಕರು ಆಗಾಗ “ಹರಟ್ಯಾತ್ಮಕ” ಟೀಕೆಗೆ ಗುರಿಯಾಗಬಹುದಾದ್ದರಿಂದ, ಕನ್ನಡದಲ್ಲಿ ಇಂದು ಕೆಲಸಮಾಡುತ್ತಿರುವ ಸಾಹಿತಿಗಳಿಗೆ ಮೊದಲಿಗೆನೇ ಈ ಎಚ್ಚರದ ಮಾತನ್ನು, ಅಥವಾ ಸ್ನೇಹದ ಅರಿಕೆಯನ್ನು ತಿಳಿಸುತ್ತಿದ್ದೇನೆ. ಒಂದು ದೃಷ್ಟಿಯಿಂದ ಇದು ಹರಟೆಯೆ ಆದ್ದರಿಂದ, ಟೀಕೆ ಮಾಡಬಹುದಾದ ಪ್ರಸಂಗ ಒದಗಿದಾಗ ಬೇಡವಾದ ಟೀಕೆಯನ್ನು ಒಂದು ವೇಳೆ “ವಿಹಾರಿ”ಯು ಮಾಡಿದಲ್ಲಿ, ಅದಕ್ಕೆ ತುತ್ತಾದ ಸಾಹಿತಿಗಳು ಅದನ್ನು ಯಾವ ದೃಷ್ಟಿಯಿಂದ ಸ್ವಾಗತಿಸಬೇಕೋ ಆ ದೃಷ್ಟಿಯಿಂದ ಸ್ವೀಕರಿಸುವ ಮನೋಧೈರ್ಯವನ್ನೂ ಔದಾರ್ಯವನ್ನೂ ತೋರಿಸುವರೆಂದು “ವಿಹಾರಿ” ನಂಬಿದ್ದಾನೆ. ಆದುದರಿಂದಲೇ ಈ ಲೇಖನಮಾಲೆಗೆ “ಸಾಹಿತ್ಯವಿಹಾರ” ಎಂಬ ತಲೆಬರೆಹವನ್ನು ಕೊಡಲಾಗಿದೆ. ಸಾಹಿತ್ಯವನ್ನು ವಿಹಾರದ ದೃಷ್ಟಿಯಿಂದ ಪರಿಶೀಲಿಸುವುದೂ, ಸಾಹಿತ್ಯಸಾಮ್ರಾಜ್ಯದಲ್ಲಿ ನಡೆದ ಸ್ಥಿತ್ಯಂತರಗಳನ್ನು ಸಾಮಾನ್ಯ ಓದುಗನ ಮುಂದೆ ಸಾಮಾನ್ಯರೀತಿಯಲ್ಲಿ, ಸಾಧ್ಯವಾದಷ್ಟು ಮನೋರಂಜನೆಯಾಗಬಹುದಾದ ರೀತಿಯಲ್ಲಿ ಇಡುವುದೂ ಈ ವಿಹಾರದ ಮುಖ್ಯವಾದ ಉದ್ದೇಶವಾಗಿದೆ.

* * *

ಮನೋಹರ ಗ್ರಂಥಮಾಲೆಯಲ್ಲಿ ಇತ್ತೀಚೆಗೆ ‘ಬೆಟ್ಟದ ಜೀವ’ ಅರಳಿದೆ. ಸಾಗರದ ಕೂಡ ಸಾವಿರ ರೀತಿಯಲ್ಲಿ ಕಾದಿ, ‘ಮರಳಿ ಮಣ್ಣಿಗೆ’ ಹೋಗಿ, ಮೊದಲು ಏನೇನೊ ಇದ್ದು ಈಗ ಕಾದಂಬರಿಕಾರರಾದ ಶ್ರೀಮಾನ್ ಕಾರಂತರು ಅಡವಿಯನ್ನು ಸೇರಿದ್ದಾರೆ; ಎಂದರೆ ವಾನಪ್ರಸ್ಥಾಶ್ರಮ ತೆಗೆದುಕೊಂಡರೆಂದು ತಿಳಿಯುವ ಸಾಹಸವನ್ನು ದಯೆಮಾಡಿ ಮಾಡಬೇಡಿ. ಸಮುದ್ರ ಕರಾವಳಿಯ ಸಮಾಜದ ಹಳ್ಳಿಗಳ ಜೀವನದ ವಿಷಯವಾಗಿ ಅಮೋಘವಾದ ಕಾದಂಬರಿಯನ್ನು ಕನ್ನಡಿಗರಿಗೆ ಸಲ್ಲಿಸಿ, ಇದೀಗ ಮಲೆನಾಡಿನ ಬೆಟ್ಟಗಳ ಮಡಿಲಲ್ಲಿ ಹುದುಗಿಕೊಂಡು ಯಾವುದೋ ಒಂದು ರೀತಿಯಲ್ಲಿ ಮುಂದೆ ಸಾಗುತ್ತಿರುವ ಜೀವನದ ವಿಷಯದ ಇನ್ನೊಂದು ಕಾದಂಬರಿಯನ್ನು ಅಲ್ಪಾವಧಿಯಲ್ಲಿಯೇ ಸಲ್ಲಿಸಿದ್ದಾರೆ. ಈ ಕಾದಂಬರಿಯ ಬಗೆಗೆ ಈಗಲೆ ದಂತಕಥೆ ಹುಟ್ಟಿವೆ. ಪ್ರಕಟವಾದ ಕೆಲವು ದಿವಸಗಳಲ್ಲಿಯೇ ಇದನ್ನು ಓದಿಕೊಂಡು, ಕೂಡಲೆ ರಸಿಕರೊಬ್ಬರು ಕಾರಂತರಿಗೆ ಪತ್ರ ಬರೆದರಂತೆ: ‘ಈ ಕಾದಂಬರಿಯಲ್ಲಿ ಚಿತ್ರಿತವಾಗಿದ್ದ ಗೋಪಾಲಯ್ಯನವರು ನೀವೇಯೋ ಹೇಗೆ?’ ಎಂದು. ಇನ್ನೊಬ್ಬರಂತೂ ಕತೆಯನ್ನು ಮುಂದೆ ಸಾಗಿಸುವ “ನಾನು” ಕಾರಂತರೇ ಎಂದು ಹಟ ಹಿಡಿದರಂತೆ. ಕತೆ ಹೇಳುವವ ತನ್ನ ಹೆಸರು ಶಿವರಾಮನೆಂದು

ಹೇಳಿಕೊಂಡದ್ದರಿಂದ, ಆ "ನಾನು" ತಾವಲ್ಲವೆಂದು ಕಾರಂತರು ಎಷ್ಟು ಸರಿಯಾಗಿ ತಿಳಿಹೇಳಿದರೂ ಆ ಕೇಳುವವರಿಗೆ ತೃಪ್ತಿಯಾಗಲಿಲ್ಲವಂತೆ. ಇನ್ನೊಬ್ಬರು "ಇದು ಕಾರಂತರ ಆತ್ಮಚರಿತ್ರೆಯಾಗಿರಲೇಬೇಕು. ಅವರಂತೂ ಎಲ್ಲಿಯೂ ಕೆಲಸ ಮಾಡದೆ ತಿರುಗಾಡುವ ಸ್ವಚ್ಛಂದ ಪ್ರಾಣಿ; ಪುತ್ತೂರಿನ ಆಸುಪಾಸು ಗುಡ್ಡಗಾಡಿನಲ್ಲಿ ಅಲೆದಾಡಿ, ಯಾವನೋ ಬ್ರಾಹ್ಮಣನ ಮನೆಯಲ್ಲಿ ಎಂಟು ದಿವಸ ತಳವೂರಿ ಪುಕ್ಕಟೆಯಾಗಿ 'ಕುಟ್ಟಿದ' ಊಟ ಉಪಚಾರದ ಇತಿಹಾಸವೇ ಈ ಕಾದಂಬರಿಯಾಗಿದೆ" ಎಂದರಂತೆ. "ಕಾದಂಬರಿಯಂತೆ ಕಾದಂಬರಿ, ಇದೇನು ಮಹಾ! ಇದರಲ್ಲಿ ಇದ್ದುದಾದರೂ ಏನು? ಕಾಫಿ, ಸ್ನಾನ, ಊಟ, ನಿದ್ರೆ, ಅಲೆದಾಟ, ಮತ್ತೆ ಊಟ, ನಸ್ಯ, ನಿದ್ರೆ ಇದರ ಹೊರತು ಇದರಲ್ಲಿ ಏನಾದರೂ ಸಿಕ್ಕರೆ ದೇವರಾಣೆ! ಮುದಿಗೋಪಾಲಯ್ಯನ ಮುದಿಶಂಕರಿ! ಅವರಿಬ್ಬರ ರಗಳೆಯನ್ನು ಕೇಳಲು ಬೇಸರಿಯದ 'ನಾನು'! ಇವರೆಲ್ಲರ ಜೊತೆಯಲ್ಲಿ ತಲೆ ಇಲ್ಲದ ದೇರನೋ, ಇನ್ನಾವನೋ ಪೋರನೋ ಇವರನ್ನು ಬಿಟ್ಟರೆ, ಇದರಲ್ಲಿ ಏನಾದರೂ ಮನರಂಜಿಸುವಂಥ ಪಾತ್ರವಿದೆಯೇ? ಪ್ರೇಮವಿದೆಯೇ? ಯುವಕ-ಯುವತಿಯರ ಸರಸವಿದೆಯೇ? ಇದಕ್ಕೆ 'ಕಾದಂಬರಿ' ಎಂದು ಏತಕ್ಕೆ ಕರೆಯಬೇಕು? ಆ ಅಡವಿಯ ವಿಷಯದಲ್ಲಿ ನಮಗೆ ತಿಳಿಯಬೇಕಾಗಿದ್ದಲ್ಲಿ, ನಾವು ಅಲ್ಲಿಯ ಫಾರೆಸ್ಟ್ ರೇಂಜರ್‌ನನ್ನು ಬರೆದು ಕೇಳಿಕೊಳ್ಳುತ್ತಿದ್ದೆವು. ಈ ವಿಷಯದಲ್ಲಿ ಕಾರಂತರಿಗಿಂತಲೂ ಒಳ್ಳೆಯ ಮಾಹಿತಿಯನ್ನವರು ಕೊಡುತ್ತಿದ್ದರು." ಎಂದೂ ಇನ್ನೊಬ್ಬರು ಗೊಣಗುತ್ತಿದ್ದರು. 'ಈ ಕಾದಂಬರಿಯಲ್ಲಿ ಪುನರುಕ್ತಿ ದೋಷವಿದೆ' ಎಂದು ಪಂಡಿತರೊಬ್ಬರು ಆಕಾಶವಾಣಿಯಂತೆ ನುಡಿದರಂತೆ. ಈ ಮಾತಿರಲಿ, ಬರೆಹಗಾರರೇ ಏನು ಹೇಳುತ್ತಾರೆ, ಅದನ್ನಾದರೂ ಕೇಳೋಣ! "ಘಟ್ಟದ ಬಳಿಯ, ಕಗ್ಗಾಡಿನ ಜೀವನಚಿತ್ರವನ್ನು ಕೊಡಲು, ಇಲ್ಲಿ ಯತ್ನಿಸಿದ್ದೇನೆ. ನಾಡಿನ ಕಾಡುಗಳೊಡನೆ ಸೆಣಸಾಡಿ, ಜೀವನದ ನೆಲೆಯನ್ನು ನಿಲ್ಲಿಸಿದ ಹಳೆಯ ವೀರರ ಕೆಚ್ಚನ್ನೇ, ಇಲ್ಲಿ ಇಂದಿನ ಕಥಾನಾಯಕ-ನಾಯಕಿಯರಲ್ಲಿ ನೀವು ಕಾಣಬಹುದು." ಆದರೆ ಮೇಲೆ ಉದಾಹರಿಸಿದ ವಿಮರ್ಶಕರು 'ಕಾರಂತರು ಜೀವನವನ್ನು ದೂರದಲ್ಲಿ ಬಿಟ್ಟು ಕಾಡನ್ನೇಕೆ ಚಿತ್ರಿಸಿದರೊ!' ಎಂದು ಸಂಶಯಪಟ್ಟಿದ್ದಾರೆ; ಹಳೆಯ ವೀರರ ಕೆಚ್ಚನ್ನು ಕಾಣದೆ, ತುಟ್ಟಿಯ ಕಾಲದಲ್ಲಿ ಯಾವನೋ ಒಬ್ಬ ದಾರಿಹೋಕನಿಗೆ ಸವಿಭೋಜನವಾಗಿ ಊಟಕ್ಕೆ ಹಾಕಿದ ಗೋಪಾಲಯ್ಯನ ಹುಚ್ಚನ್ನು ಕಂಡಿದ್ದಾರೆ.

ಆದರೆ ಮೇಲಿನ ಈ ಯಾವತ್ತೂ ಅಭಿಪ್ರಾಯಗಳ ಮೇಲಿಂದಲೆ ಪ್ರಸ್ತುತ ಕಾದಂಬರಿಯ ವೈಶಿಷ್ಟ್ಯವನ್ನೂ ಅದರ ಮೇಲ್ಮೆಯನ್ನೂ ಗುರುತಿಸಬಹುದಾಗಿದೆ. ವಿಸ್ತಾರವಾದ ಕಥಾಭಾಗವಿರದಿದ್ದರೂ ಅದರಲ್ಲಿಯ ನಾಲ್ಕು ಪಾತ್ರಗಳು ಅತಿ ಸೂಕ್ಷ್ಮವಾಗಿ ಚಿತ್ರಿತವಾಗಿದ್ದು, ಎಡೆಬಿಡದೆ ಮಾನುಷ ಪ್ರಯತ್ನಕ್ಕೆ ಸುಲಭವಾಗಿ ಮಣಿಯದ ನಿಸರ್ಗದೊಡನೆ ನಿತ್ಯವೂ ಹೋರಾಡಿ, ಯಾವುದೋ ಒಂದು ದೂರದ ಆಶೆಯಲ್ಲಿ ಜೀವನವನ್ನು ಸಾಗಿಸುತ್ತಿದ್ದ ಭವ್ಯ-ದೃಶ್ಯವನ್ನು ಓದುಗರು ಇಲ್ಲಿ ಕಾಣಬಹುದು. ಪಾತ್ರಗಳು ಸಜೀವವಾಗಿವೆ ಎಂಬುದಕ್ಕೆ, ಇದರಲ್ಲಿಯ ಬೇರೆ ಬೇರೆ ಪಾತ್ರಗಳಲ್ಲಿ ಲೇಖಕರನ್ನು ಕಂಡುಹಿಡಿದವರ ಕುತೂಹಲದೃಷ್ಟಿಯೇ ನಿದರ್ಶನ. ಬೇರೆ ಬೇರೆ ಪಾತ್ರಗಳಲ್ಲಿ ಓದುಗರು ಕಾರಂತರನ್ನು ಕಾಣಬಹುದಾದರೆ, ಆ ಆ ಪಾತ್ರಗಳು ಕಾರಂತರಷ್ಟೇ ಸಜೀವವಾಗಿವೆ ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಇಲ್ಲದ ಕಥೆಯನ್ನು ಕಟ್ಟಿ ಹೇಳುವದಕ್ಕಿಂತ ಕಣ್ಣುಮುಂದೆ ಇದ್ದ ಪಾತ್ರಗಳನ್ನು ಬೇರೆ ಬೇರೆ ದೃಷ್ಟಿಕೋನದಿಂದ ನೋಡಿ, ಪರಿಪರಿಯಾಗಿ ಅವುಗಳ ಅಂತರಂಗವನ್ನು ಬಿಚ್ಚಿ ತೋರಿಸಿದ ಈ ಕಾದಂಬರಿಯಲ್ಲಿ ಇನ್ನೊಂದು ವಿಶೇಷವಿದೆ. ಅದೇನೆಂದರೆ ಅದರಲ್ಲಿಯ ಬೆಟ್ಟ, ದರಿ, ಕಂದರ, ನೀರು, ತೋಟ ಇವೆಲ್ಲವುಗಳು ಅದರಲ್ಲಿಯ ಜೀವನಕ್ಕೆ ಕೇವಲ ಹಿನ್ನೆಲೆಯಾಗಿರದೆ, ಆ ಜೀವನದ ಒಂದು ಭಾಗವಾಗಿ, ಅದರಿಂದ ಬೇರೆಯಾಗಿರದೆ ಅದನ್ನು ಮಾರ್ಪಡಿಸುತ್ತಿರುವ ಮಹಾಶಕ್ತಿಗಳಾಗಿವೆ. **ಥಾಮಸ್ ಹಾರ್ಡಿ** ಎಂಬ ಸುಪ್ರಸಿದ್ಧ ಆಂಗ್ಲ ಕಾದಂಬರಿಕಾರನ ಕೃತಿಗಳಲ್ಲಿ ಚಿತ್ರಿತವಾದ ನಿಸರ್ಗದೃಶ್ಯಗಳು ಕೇವಲ ದೃಶ್ಯಗಳಾಗಿರದೆ, ಅವಾದರೂ ಕಾದಂಬರಿಯಲ್ಲಿಯ ಪಾತ್ರಗಳೇ ಎಂದು ಹೇಳುವ ಮಾತನ್ನು ಇಲ್ಲಿ ಹೇಳಬಹುದಾಗಿದೆ. ಆದುದರಿಂದ ಇದೊಂದು ಹೊಸತರದ ಕಾದಂಬರಿ. ಇದಕ್ಕೆ 'ಪ್ರಾದೇಶಿಕ ಕಾದಂಬರಿ' ಎನ್ನಬಹುದು. ಇನ್ನು ಕಾರಂತರು ಬೆಟ್ಟವನ್ನು ಮುಗಿಸಿ ಗುಹೆಯನ್ನು ಸೇರತಕ್ಕವರಿದ್ದಾರೆಂದು ಗೊತ್ತಾಗಿದೆ. ಆ ಭಾಗದಲ್ಲಿ ಗುಹೆಗಳಲ್ಲಿಯೋ ತೀರ ದಟ್ಟಡವಿಗಳಲ್ಲಿಯೋ ವಾಸವಾಗಿದ್ದ ಮೂಲನಿವಾಸಿಗಳ ಬದುಕನ್ನು ಮುಂಬರುವ ತಮ್ಮ ಕಾದಂಬರಿಯಲ್ಲಿ ಚಿತ್ರಿಸಬೇಕೆಂದಿದ್ದಾರೆಂದು ತಿಳಿದುಬಂದಿದೆ.

* * *

ಬಂಡಾಯಕ್ಕಿಂತ ಒಂದು ವರ್ಷ ಮೊದಲು ಹುಟ್ಟಿ, ಆಂಗ್ಲ-ನಾಟಕ ಪ್ರಪಂಚದಲ್ಲಿಯೆ ಬಂಡಾಯವನ್ನೆಬ್ಬಿಸಿದ **ಬರ್ನಾರ್ಡ್ ಶಾ** ಅವರು ೯೪ನೆಯ ವರ್ಷದಲ್ಲಿ ಕಾಲಿಟ್ಟರು. ಮುದುಕರಿಗೆ ಮುದುಕರೆಂದರೆ, ತುಂಟನಿಗೆ ತುಂಟನೆಂದರೆ ಸಿಟ್ಟು! ಶಾ ಅವರು ಮುದುಕರೂ ಹೌದು, ತುಂಟರೂ ಹೌದು. ತುಂಟತನವನ್ನು ಒಪ್ಪಿಕೊಂಡರೂ ಇಷ್ಟು ದಿವಸ ತಮ್ಮ ಮುದುಕತನವನ್ನು ಒಪ್ಪದ ಈ ೯೨ ವರ್ಷದ ತರುಣ, ಕೊನೆಗೊಮ್ಮೆ ತನ್ನ ಮುದುಕತನವನ್ನು ಒಪ್ಪಿಕೊಂಡ! ವಾರ್ಧಕ್ಯವನ್ನು ಒಪ್ಪಿಕೊಂಡರೂ ಮುದುಕನ ಮಾತಿನಲ್ಲಿಯ "ಹುಳಿ" ಕಡಿಮೆಯಾಗಿಲ್ಲ. ಸ್ಪಷ್ಟೋಕ್ತಿಯ ಸಾಮರ್ಥ್ಯ ಕುಗ್ಗಿಲ್ಲ. ಇತ್ತೀಚೆಗೆ ಅವರಿಗೆ ಯಾರೋ ಕೇಳಿದರಂತೆ: ಭಾರತದಲ್ಲಿಯ ಬಿಕ್ಕಟ್ಟನ್ನು ಹೇಗೆ ಬಗೆಹರಿಯಿಸಬೇಕೆಂದು. ತಟ್ಟನೆ ಬಂದಿತು ಶಾ ಅವರ ಉತ್ತರ: 'ಮುಂದಾಳುಗಳನ್ನೆಲ್ಲ ಕೂಡಲೆ ಬಿಡುಗಡೆ ಮಾಡಿ, ತಮ್ಮ ಸರಕಾರದ ಮೂರ್ಖತನಕ್ಕಾಗಿ ಚಕ್ರವರ್ತಿಗಳು ಮಹಾತ್ಮರಿಗೆ

ಕ್ಷಮೆ ಕೇಳಿಕೊಳ್ಳಬೇಕು' ಎಂದು. ಇದು ಶಾ ಅವರ ರೀತಿ. ನಾಟಕದಲ್ಲಿಯಾಗಲಿ, ನಾಟಕಕ್ಕಿಂತಲೂ ದೊಡ್ಡದಾಗಿರುವ ಅವರ ಮುನ್ನುಡಿಗಳಲ್ಲಾಗಲಿ ಕಂಡುಬರುವ ನಿಷ್ಠುರವಾದ ನಿರ್ದಾಕ್ಷಿಣ್ಯವಾದ ರೀತಿ. ಬಿಸಿಲಲ್ಲಿ ಝಳಪಿಸುವ ಖಡ್ಗದಂತೆ ಅವರ ಲೇಖನ. ಆ ಲೇಖನ ಇನ್ನೂ ಅವ್ಯಾಹತವಾಗಿ ಸಾಗುತ್ತಿದೆ. ಇನ್ನೂ ಹೆಚ್ಚಾಗಿ ಬಾಳಿ, ಇನ್ನೂ ಹೆಚ್ಚಾಗಿ ನಾಟಕಗಳನ್ನು ಶಾ ಅವರು ಬರೆಯಲಿ ಎಂದು "ವಿಹಾರಿ"ಯು ಹಾರಯಿಸಿ ಶುಭ-ಚಿಂತನೆ ಮಾಡಿದರೆ, 'ನಿಮ್ಮ ಶುಭಚಿಂತನೆಯಿಂದ ನಾನು ಬದುಕಬೇಕಾಗಿಲ್ಲ, ನಿಮ್ಮ ಅಶುಭಚಿಂತನೆಯಿಂದ ನಾನು ಇಂದೇ ಸಾಯಬೇಕಾಗಿಲ್ಲ' ಎಂಬ ಅವರ ಉತ್ತರ ಖಂಡಿತ; ಆದುದರಿಂದ ಅವರಿಗಾಗಿ ಶುಭಚಿಂತನೆಯ ಉಸಾಬರಿಗೆ ಹೋಗದೆ ಇರುವುದೇ ಒಳ್ಳೆಯದು.

* * *

ಅಖಿಲಭಾರತ ಪಿ. ಈ. ಎನ್. ಸಂಸ್ಥೆಯ ಪರವಾಗಿ ಆಧುನಿಕ ಮರಾಠಿ ಕಾದಂಬರಿಯ ವಿಷಯವಾಗಿ ಮಾತನಾಡುತ್ತ ಪ್ರೊ. ಆಳತೇಕರರು 'ಇಂದಿನ ಮಹಾರಾಷ್ಟ್ರೀಯ ಕಾದಂಬರಿಯು ಜೀವನದಿಂದ ದೂರದೂರವಾಗುತ್ತ ನಡೆದಿದೆ' ಎಂದೂ 'ಇರುವ ಕಷ್ಟವನ್ನು ಮರೆಯಲು ಇಲ್ಲದ ಸುಖವನ್ನು ಕಲ್ಪಿಸಿ ಕಲ್ಪನಾ ಸಾಮ್ರಾಜ್ಯದಲ್ಲಿಯೆ ಹೆಚ್ಚಾಗಿ ತೇಲಾಡುತ್ತಿರುವುದು' ಎಂದೂ ಅಭಿಪ್ರಾಯಪಟ್ಟರು. 'ಮೊದಲನೆಯ ಮಹಾಯುದ್ಧದ ಪೂರ್ವ-ದಲ್ಲಿಯ ಪ್ರಮುಖ ಕಾದಂಬರಿಕಾರರಾದ ಹರಿ ನಾರಾಯಣ ಆಪಟೆಯವರಿಗೆ ಪುಣೆಯಲ್ಲಿಯ ಸದಾಶಿವ ಪೇಟೆಯ ಹೊರಗೆ ಕಾಲಿಡಲು ಸಾಧ್ಯವಾಗದಿದ್ದರೂ, ಆ ಸದಾಶಿವ ಪೇಟೆಯಲ್ಲಿಯೇ ಜಗತ್ತಿನ ದರ್ಶನವನ್ನುಕೊಟ್ಟಿರುವ ಅವರ ಅಸಂಖ್ಯ ಕಾದಂಬರಿ-ಗಳ ಮುಂದೆ, ಇಂದಿನ ಬರೆಹಗಾರರು ಸತ್ಯಜಗತ್ತಿನಲ್ಲಿ ಎಲ್ಲಿಯೂ ಕಾಲಿಡದೆ ಯಾವುದೋ ದಾರಿಹಿಡಿದು ಅಥವಾ ದಾರಿತಪ್ಪಿ ಮುಂದುವರಿಯುತ್ತಿದ್ದಾರೆ' ಎಂದು ಟೀಕಿಸಿದರು. 'ಆದರೆ ಕಳೆದ ೨೫ ವರ್ಷಗಳಲ್ಲಿ ಮರಾಠಿ ಕಾದಂಬರಿಯ ವಿಸ್ತಾರ ಅಪ್ರತಿಮವಾಗಿದೆ' ಎಂಬುದನ್ನೂ ಲೇಖನದ ತಂತ್ರದ ವಿಷಯ-ದಲ್ಲಿ—ಬರವಣಿಗೆಯ ವಿವಿಧತೆಯಲ್ಲಿ—ವಿಶೇಷವಾದ ಪ್ರಗತಿ-ಯನ್ನು ಸಾಧಿಸಲು ಸಾಧ್ಯವಾಗಿದೆ ಎಂಬುದನ್ನೂ ಎಷ್ಟೋ ಉದಾಹರಣೆಗಳಿಂದ ತೋರಿಸಿಕೊಟ್ಟರು. ಶ್ರೀ. **ಫಡಕೆ, ಖಾಂಡೇಕರ, ಮಾಡಖೋಲಕರ** ಮುಂತಾದ ಮಹಾರಾಷ್ಟ್ರದ ಇಂದಿನ ಕಾದಂಬರಿಕಾರರು, ಕಾದಂಬರಿಯ ಲೇಖನದಲ್ಲಿ ವಿಶೇಷವಾದ ಕೈವಾಡವನ್ನು ಸಾಧಿಸಿದ್ದಾರೆಂಬುದನ್ನು ಅವರ ಕೆಲವಾರು ಕೃತಿಗಳ ಪರಿಚಯವಿದ್ದ ಯಾರೂ ಅಲ್ಲಗಳೆಯ-ಲಾರರು. ಆ ಮಾನದಿಂದ ನೋಡಿದರೆ ನಮ್ಮ ಕನ್ನಡದ ಕಾದಂಬರಿಯ ಮಟ್ಟ ಎಲ್ಲಿಗಿದೆ ಎಂಬುದು ವಿಚಾರಾರ್ಹ-ವಾದ ವಿಷಯ.

* * *

ಅಲ್ಹಾಬಾದಿನ 'ಹಿಂದುಸ್ತಾನೀ ಅಕೆಡೆಮಿ' ಯವರು ಈ ವರ್ಷ ಕೆಲವು ಪ್ರದಾತೃಗಳ ಸಹಾಯದಿಂದ, ಹಿಂದೀ ಸಾಹಿತ್ಯದ ವಿಭಾಗಗಳಲ್ಲಿ ಉತ್ತಮ ಕೃತಿಗಳನ್ನು ಬರೆದವರಿಗೆ ಪಾರಿತೋಷಕಗಳನ್ನು ಕೊಡುವ ಏರ್ಪಾಡನ್ನು ಮಾಡಿದ್ದಾರೆ. ಪ್ರತಿಯೊಂದು ಪಾರಿತೋಷಕ ೧೦೦೦ ರೂಪಾಯಿಗಳದಿದ್ದು, ಇಂಥ ೧೦ ಪಾರಿ-ತೋಷಕಗಳನ್ನು ಕೊಡುವುದಾಗಿ ತಿಳಿಸುತ್ತಾರೆ. ಉತ್ತಮ ಖಂಡ ಕಾವ್ಯಗಳಿಗೆ ಎರಡು, ಸಣ್ಣ ಕವನಗಳ ಸಂಗ್ರಹಕ್ಕೆ ಒಂದು, ನಾಟಕಕ್ಕೆ ಒಂದು, ಕಾದಂಬರಿಗೆ ಒಂದು, ನಗೆಬರೆಹಕ್ಕೆ ಒಂದು, ಉತ್ತಮವೆನಿಸಿದ ಆರು ಸಣ್ಣ ಕತೆಗಳ ಸಂಗ್ರಹಕ್ಕೆ ಒಂದು, ನಾಲ್ಕು ಏಕಾಂಕನಾಟಕಗಳ ಸಂಗ್ರಹಕ್ಕೆ ಒಂದು, ಹನ್ನೆರಡು ನಿಬಂಧ-ಗಳನ್ನೊಳಗೊಂಡ ಎರಡು ಸಂಗ್ರಹಗಳಿಗೆ ಎರಡು—ಹೀಗೆ ಒಟ್ಟ-ನಲ್ಲಿ ೧೦ ಪಾರಿತೋಷಕಗಳನ್ನು ಹಂಚುವುದನ್ನು ಗೊತ್ತುಮಾಡಿ-ದ್ದಾರೆ. ಸಣ್ಣ ಕತೆ, ಏಕಾಂಕ ನಾಟಕ, ನಿಬಂಧ ಇವು ಕೆಲವಾರು ಉತ್ತಮ ಕೃತಿಗಳ ಸಂಗ್ರಹವಾಗಬೇಕಾದ್ದರಿಂದ, ಬೇರೆ ಬೇರೆ ಲೇಖಕರಿಗೆ ಅವರಿಂದ ಬಂದ ಉತ್ತಮಕೃತಿಗಳಿಗೆ ಅನುಗುಣವಾಗಿ ಆ ಆ ಪಾರಿತೋಷಕದ ಹಣವು ಹಂಚಲ್ಪಡುವುದು. ಕೃತಿಗಳನ್ನು ಕಳಿಸಲಿಚ್ಛಿಸುವವರು ೧೯೫೪ನೆಯ ಮಾರ್ಚ ತಿಂಗಳ ೩೧ ದಿನಾಂಕದ ಒಳಗಾಗಿ ಕಳಿಸಬೇಕೆಂದು ಅಕೆಡೆಮಿಯ ಕಾರ್ಯ-ಕಾರಿಣಿಯು ತಿಳಿಸುತ್ತದೆ. ನಮ್ಮ ಲೇಖಕರಿಗೆ ಇಂದು ಬೇಕಾ-ದದ್ದು ಸಹಾನುಭೂತಿ, ಸಹಾಯ, ಮಾನ್ಯತೆ. ಅವನ್ನು ಒದ-ಗಿಸುವ ಕೆಲಸವನ್ನು ಪರಿಷತ್ತಿನಂತಹ ಸಂಸ್ಥೆಗಳು ಕೈಕೊಳ್ಳ-ಬಹುದೇ ಹೊರತು ವ್ಯಕ್ತಿಶಃ ಮಾಡಲಾರದುದು. 'ಹಿಂದುಸ್ತಾನೀ ಅಕೆಡೆಮಿ'ಯವರು ಹಿಂದೀಸಾಹಿತ್ಯಕ್ಕೆ ನೀಡುತ್ತಿರುವ ಸಹಾಯ, ಅವರ ಲೇಖಕರು ಪಡೆಯುತ್ತಿರುವ ಸಹಾನುಭೂತಿ, ಅನುಕರ-ಣೀಯವಲ್ಲದೆ ಅಭಿನಂದನೀಯ. ನಮ್ಮ ಕನ್ನಡ ಸಾಹಿತ್ಯ-ಪರಿಷತ್ತಾದರೂ ಹಿಂದುಸ್ತಾನೀ ಅಕೆಡೆಮಿಯಂತೆ ಕಾರ್ಯ ಮಾಡಿದರೆ, ಪರಿಷತ್ತು ತನ್ನ ಕರ್ತವ್ಯವನ್ನು ನಿರ್ವಹಿಸಿದಂತಾಗು-ವುದಲ್ಲದೆ, ಸಹಾಯ-ಸಹಾನುಭೂತಿಗಳಿಗೆ ಹಾತೊರೆಯುತ್ತಿದ್ದ ಕನ್ನಡ ಬರೆಹಗಾರರಿಗೆ ತಮ್ಮ ಬರೆಹವನ್ನು ಮುಂದುವರಿಸಲು ಸಾಧ್ಯವಾಗುತ್ತದೆ. ನಮ್ಮ ಪರಿಷತ್ತಿನ ಉಪಾಧ್ಯಕ್ಷರುಗಳು ಯಾವಾಗಲೂ ಒಳ್ಳೇ ಮಾತುಗಾರಿಕೆಯವರು. ಇತ್ತೀಚೆಗೆ ನಿವೃತ್ತರಾದ ಉಪಾಧ್ಯಕ್ಷರು ತಮ್ಮ ಮಾತುಗಾರಿಕೆಯಲ್ಲಿ ತಮ್ಮನ್ನೂ ಪರಿಷತ್ತನ್ನೂ ಮರೆತುಬಿಡುತ್ತಿದ್ದರು. ಈಗಿನವರು ಹಾಗಲ್ಲ; ಮಾತುಗಾರಿಕೆಯ ಉಪಯೋಗವನ್ನು ಚೆನ್ನಾಗಿ ಮಾಡಿಕೊಳ್ಳುವ "ವೈದಿಕ ಬ್ರಾಹ್ಮಣನ" ಕೌಶಲವಿದೆ ಅವರಲ್ಲಿ. ಆದ್ದರಿಂದಲೇ ಪರಿಷತ್ತಿನ ಮುನ್ನಡೆ. ಏನೇ ಆಗಲಿ, ಪರಿಷತ್ತಿಗೆ ಬೇಕಾದ ಸಹಾಯ ಬರುತ್ತಿದೆ ಎಂಬುದು ಸಮಾಧಾನದ ವಿಷಯ. ಆ 'ಸಹಾಯ'ವನ್ನು ವಿಧಾಯಕವಾಗಿ ಉಪಯೋಗಿಸಿಕೊಂಡು, ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿಯೂ, ಸಂಸ್ಕೃತಿಯ ಅರಿ-ವನ್ನುಂಟುಮಾಡುವುದಕ್ಕಾಗಿಯೂ ಬಂದ ಧನಸಹಾಯವನ್ನೆಲ್ಲ ವಿನಿಯೋಗಿಸುವರೆಂಬುದರಲ್ಲಿ 'ವಿಹಾರಿ'ಗೆ ಸಂಶಯವಿಲ್ಲ.

ನಗೆಯ ಬುಗ್ಗೆ

ಅಥವಾ

ನಾಗಣ್ಣನ ಕತೆಗಳು

ಬರೆದವರು ಶ್ರೀ. ಎನ್. ಎಂ. ಕುಲಕರ್ಣಿ, ಎಂ. ಎ.; ಪ್ರಕಾಶಕರು ಕನ್ನಡ ಸರಸ್ವತೀ ಭಾಂಡಾರ, ಧಾರವಾಡ.

ಈ 'ನಗೆಯ ಬುಗ್ಗೆ' ಯನ್ನು ನಿರ್ಮಿಸಿದ ನಾಗಣ್ಣ ಜಯಂತಿಯ ವಾಚಕರಿಗೆ ಅಪರಿಚಿತನೇನೂ ಅಲ್ಲ. ಮೊದಲಿನೆರಡು ವರ್ಷಗಳ ಹಲವು ಸಂಚಿಕೆಗಳಲ್ಲಿ, ತನ್ನ ಜೀವನದಲ್ಲಿ ಕಂಡುಂಡ ಘಟನೆಗಳನ್ನು ಕತೆಮಾಡಿ ಹೇಳಿ ಹೇಳಿ, ವಾಚಕರ ಮನಸ್ಸನ್ನವನು ರಂಜಿಸಿದ್ದಾನೆ. ಇದರಲ್ಲಿ ಪ್ರಕಟವಾಗಿರುವ ಮೂರು ಕತೆಗಳಲ್ಲಿ 'ದೇವಲೋಕದ ದಂಪತಿಗಳು' 'ಪಾತ್ರ-ಪಟು' ಎಂಬ ಮೊದಲಿನ ಎರಡು ಕತೆಗಳು ಜಯಂತಿಯಲ್ಲಿ ಪ್ರಕಟವಾದುವು. ಕೊನೆಯ 'ಬಂಧುಪ್ರೇಮ' ಎಂಬ ಕತೆಯು ಹೊಸತಾಗಿ ಬರೆದುದು. ಹೊಸ-ತಾಗಿ ಬರೆದುದಾದರೂ ಕಥಾವಸ್ತು ಹೊಸದೇನೂ ಅಲ್ಲ. ಅಜ್ಜಿಯ ಕತೆಯಲ್ಲಿ ಬರುವ 'ಆಚಾರ್ಯರ ಶಿಷ್ಯ ತುಂಟ ನಾರಾಯಣ'ನೇ ಈ ಕಥೆಯ ನಾಯಕ. ನಾಗಣ್ಣನ ಬಾಯಲ್ಲಿ ಈ ನಾರಾಯಣನ ಕಥೆ ವ್ಯವಸ್ಥಿತವಾಗಿ ಬೆಳೆದಿದೆ ಇಷ್ಟೆ.

ಕೆಲಸಕ್ಕಿಟ್ಟುಕೊಂಡ ಆಚಾರ್ಯರು ನಾರಾಯಣನ ಅಣ್ಣ ಗುಂಡನನ್ನು ಕಲಿಯಂತೆ ಕಾಡಿದರು. ಬಳಿಕ ನಾರಾ-ಯಣನು ಅವರಲ್ಲಿ ಕೆಲಸಕ್ಕೆ ಬಂದು ಆಚಾರ್ಯರನ್ನು ಸೇರಿಗೆ ಸವ್ವಾಸೇರಾಗಿ ಕಾಡಿ ಸೇಡುತೀರಿಸಿಕೊಳ್ಳುವನು. ನಾರಾ-ಯಣನು ಕಾಡಿದ ಘಟನೆಗಳು ಕಿರಿಯ-ರನ್ನು ಹೊಟ್ಟೆಹುಣ್ಣಾಗುವಂತೆ ನಗಿಸ-ದಿರವು. ಪುಸ್ತಕದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದೊಂದು ಕತೆಗಳ ಬಗೆಗೂ ಟಿಪ್ಪಣಿ-ಗಳನ್ನು ಬರೆದು 'ಓದಿ ಸವಿಯಲು ನೆರವು' ಎಂಬ ಹೆಸರಿನಿಂದ ಪ್ರಕಟಿಸಲಾಗಿದೆ. 'ನಗೆಯ ಬುಗ್ಗೆ' ಮಕ್ಕಳಿಗಿಷ್ಟ ಹೆಚ್ಚಿಸಲಿ.

—'ಕುಂಜವಿಹಾರಿ'

ದಾರಿಯ ಬುತ್ತಿ

ತಂದವರು ಶ್ರೀ. ಜೋಶಿ ಶಂಕರರಾಯರು. ಕನ್ನಡ ಸರಸ್ವತೀ ಪುಸ್ತಕ ಭಾಂಡಾಗಾರ, ಧಾರವಾಡ.

ಇದೊಂದು ಸೂಕ್ತಿಗಳ ಸಂಗ್ರಹ. ಬಾಳ ದಾರಿಯಲ್ಲಿ ಬುದ್ಧಿಗೆ ಬುತ್ತಿಯ-ನ್ನೊದವಿಸುವ ಅನುಭವಸತ್ತ್ವವುಳ್ಳ ವಚನಮಾಲೆ. ಸ್ಪೇನ್ ದೇಶದಿಂದ ಇಂಗ್ಲಿಷ್ ಭಾಷೆಗೆ ಪರಿವರ್ತನಗೊಂಡು-ದನ್ನು ಕನ್ನಡಕ್ಕೆ ಅನುವಾದಿಸಲಾಗಿದೆ-ಯೆಂಬ ಮಾತನ್ನು, ಈ ಸಂಗ್ರಹದ ಬಗೆಗೆ ಪ್ರಕಾಶಕರು ತಮ್ಮ ಮಾತಿನಲ್ಲಿ ವಿದಿತ-ಪಡಿಸಿರುವರು. ಆದರೆ ಈ ಸೂಕ್ತಿಸಂಗ್ರಹ ದೊಳಗಿನ ಯಾವ ನೀತಿಯೂ ನಮಗೆ ಪರದೇಶೀಯವಾಗಿ ತೋರದು. ನಮ್ಮ ಪ್ರಾಚೀನ ಗ್ರಂಥಗಳಲ್ಲಿಯೂ ನೀತಿವಿದರ ವಚನಗಳಲ್ಲಿಯೂ ಹಿರಿಯರ ಹಿತದ ಮಾತುಗಳಲ್ಲಿಯೂ ಈ ಸೂಕ್ತಿಸುಮನ-ಗಳು ಅಲ್ಲಲ್ಲಿ ಅರಳಿರುವುದನ್ನು ನೋಡ-ಬಹುದು. ಇಲ್ಲಿಯ ತ್ರಿಕಾಲಾಬಾಧಿತ ಸತ್ಯವನ್ನು ಸೂಚಿಸುವಂತಹ ಮಾತು-ಗಳನ್ನು, ಮಹಾಭಾರತದ ಹಲವು ಜನ ಮಹಾತ್ಮರ ಬಾಯಲ್ಲಿ ನಾವು ಕಾಣ-ಬಹುದು. ದಾಸರು, ಶರಣರು, ಸರ್ವಜ್ಞ ಮೊದಲಾದವರ ಕೃತಿಗಳೊಳಗಿಂದ ಅವರ ಸಂಪ್ರದಾಯ ಶರಣ್ಯತೆಯನ್ನಷ್ಟು ಸೋಸಿ ತೆಗೆದರೆ, ಉಳಿವುದು ಈ ಮಾನವನ ಮೂಲ ಧರ್ಮವನ್ನು ಹೇಳುವ ಸೂಕ್ತಿಸಮುದಾ-ಯವೆ. ಈ 'ದಾರಿಯ ಬುತ್ತಿ' ಯಾವ ಕಸ-ಕೊಳೆಯೂ ಇಲ್ಲದ ಸಾರ್ವದೇಶಿಕ ಸಾರ್ವಕಾಲಿಕ ಸತ್ಯಾನುಭವವನ್ನು ಸೂಚಿಸುವಂತಹದಾಗಿದೆ. ಪ್ರತಿಯೊಬ್ಬ ಹಿರಿಯ-ಕಿರಿಯರೂ ಇದನ್ನು ಓದಿನ ಮೂಲಕ ತಿಂದು, ಮೆಲ್ಲಗೆ ಮೆಲುಕು ಹಾಕುತ್ತ, ಮೆಲ್ಲ ನುಂಗುತ್ತ ನಡೆದರೆ, ಬಾಳದಾರಿಯನ್ನು ನಡೆವ ಶಕ್ತಿಯನ್ನು ಖಂಡಿತವಾಗಿ ಒದಗಿಸಿಕೊಡುವಂತಹ ಜೀವಸತ್ತ್ವವೆನಿಸಬಲ್ಲದು. ಇದನ್ನು ಓದಿ ತಣಿದವರಾದ ಹಿರಿಯರೊಬ್ಬರು ಹೀಗೆಂದು ಉದ್ಗಾರ ತೆಗೆದಿದ್ದಾರೆ:

"ದಾರಿಯ ಬುತ್ತಿಯನ್ನು ತಿಂದು ತೇಗಿದೆನು. ನಿದಾನವಾಗಿ ಮೆಲ್ಲುಂತೆ ಇದರ ರುಚಿ ಹೆಚ್ಚು, ಸತ್ತ್ವಶಾಲಿಯಾದ ಆಹಾರ. ಇದು ವಚನಕವಿತೆ. ಅನುಭವದ ಸೂಕ್ತಿಸುಧೆ. ಒಂದೊಂದು ವಚನ ಜಾಣ್ನುಡಿ, ನಾಣ್ನುಡಿ, ಜೀವಾಳದ ನುಡಿ!"

ವಚನಗಳ ಭಾಷೆ ಹಳೆಯ ವಚನ-ಗಳಂತೆ ವೃತ್ತಗಂಧಿಯಲ್ಲಿರದಿದ್ದರೂ ಬಿಗುಹಿನದಾಗಿದೆ; ಅರ್ಥವನ್ನು ಉಚಿತ-ವಾದ ರೀತಿಯಲ್ಲಿ ಸ್ಫುಟಗೊಳಿಸುವಂತಹ ದಾಗಿದೆ. ಅಲ್ಲಲ್ಲಿ ಬಳಸಿದ ಅರ್ಥ-ಭರಿತ-ವಾದ ಅಚ್ಚಗನ್ನಡ ಶಬ್ದಗಳು ಕನ್ನಡದ ಹಿರಿಮೆಯನ್ನೂ ಕನ್ನಡಿಗರ ಸಂಸ್ಕೃತಿಯ ತೂಕವನ್ನೂ ಸೂಚಿಸುವಂತಹವಾಗಿವೆ. ಇಂದಿನ ಈ ಕಾಲದಲ್ಲಿ ಬಾಳುವ ಬಗೆ ಗೊತ್ತಿಲ್ಲದೆ ಹೇಗೆಹೇಗೋ ಹಜ್ಜೆಯಿಟ್ಟು ಹಳ್ಳಕ್ಕೆ ಬಿದ್ದು ಪೇಚಾಡುವ ಬುದ್ಧಿಬಲ-ಹೀನರ ಸಂಖ್ಯೆಯೇ ಬಹಳವಾಗಿರುವುದು. 'ದಾರಿಯ ಬುತ್ತಿ' ಯಂತಹ ಹುರುಳುಳ ಗ್ರಂಥಗಳು ಹೆಚ್ಚಾಗಿ ಹೊರಟು ಕಾರ್ಯ ಮಾಡತೊಡಗಿದರೆ, ಆ ಬಲಹೀನರ ಸಂಖ್ಯೆ ಎಷ್ಟೋ ಕಡಿಮೆಯಾಗಬಹುದು.

—ಬಿ. ಪಿ. ಎಸ್. ರಾವ್.

ನಗೆಗೆ ನೈವೇದ್ಯ

ಡಾಕ್ಟರರ ಅಭಿಪ್ರಾಯ

ಒಬ್ಬ :—ಏನ್ ಡಾಕ್ಟರೇ, ನನ್ನ ಹೆಂಡತಿಗೆ ಏನಾದರೂ ಗುಣಾ ಆಗೂ ಆಶಾ ಇದ ಅಂತೀರೋ, ಇಲ್ಲ ಅಂತೀರೋ ?

ಡಾಕ್ಟರ್ :— ಗುಣಾ ಆಗದ ಏನ್ರೀ! ಈಗಾಗಲೇ ನಾನು ಅವಳಿಗೆ ಹೇಳಿಬಿಟ್ಟೇನಿ, 'ನಿನ್ನ ಗಂಡನಿಗಾಗಿ ಬ್ಯಾರೇ ಒಬ್ಬ ಹುಡಿಗಿನ್ನ ನೋಡಿ ಇಟ್ಟೇನೀ' ಅಂತ!

* * *

ಪಾಪ, ಮನೆಗೆ ಬಂದು ಬಿಟ್ಟ !

ತರುಣ :— ನನ್ನ ಅರಗಿಳಿ, ಇಂದು ರಾತ್ರಿ ನನಗೆ ಮನೆಗೆ ಬರಲಿಕ್ಕೆ ತಡವಾಗಬಹುದು; ನೀನು ಹುಚ್ಚಿಯ ಹಾಗೆ ನನ್ನ ದಾರಿ ಕಾಯುತ್ತ ಕುಳಿತುಕೊಳ್ಳಬೇಡ! ತಿಳಿಯಿತೇನು ?

ತರುಣಿ :— ಇಲ್ಲ, ದಾರೀ ಕಾಯುತ್ತ ಯಾಕೆ ಕೂತುಕೊಳ್ಳಲಿ ? ನೀವು ಎಲ್ಲಿದ್ದೀರೆಂಬುದನ್ನ ಹುಡುಕುತ್ತಾ ಇದ್ದಲ್ಲಿಗೇ ಬಂದುಬಿಡುತ್ತೇನೆ!

ಅಂದು ರಾತ್ರಿ ತರುಣ ಎಂದಿಗಿಂತಲೂ ಮುಂಚಿತವಾಗಿಯೆ ಮನೆಗೆ ಬಂದು ಬಿಟ್ಟ, ಪಾಪ!

* * *

ರಾಯರ ರಸಭಂಗ

ಹೊಸತಾಗಿ ಕೈಹಿಡಿದು ತಂದ 'ರಾಣಿ'ಯೊಡನೆ ರಾಯರು ವಾಕಿಂಗಿಗಾಗಿ ಊರ ಮುಂದಿನ ತೋಟದ ಕಡೆಗೆ ಹೋದರು. ರಾಣಿಯನ್ನು ಒಂದೆಡೆಯಲ್ಲಿ ಕುಳ್ಳಿರಿಸಿ, ತೋಟದೊಳಕ್ಕೆ ತಾವೊಬ್ಬರೇ ಹೋಗಿ, ಉತ್ತಮವಾದ ಬಾಳೆಯಹಣ್ಣಿನ ಹಣಿಗೆಯೊಂದನ್ನು ಹಿಡಿದುಕೊಂಡು ಬಂದು ಹೇಳಿದರು :

"ಇಕೊ, ಒಳ್ಳೇ ರಸಬಾಳೆಹಣ್ಣು ಇವು!"

"ಆಹಾ, ಎಷ್ಟು ಒಳ್ಳೇ ಹಣ್ಣವು! ಎಲ್ಲಿಂದ ತಂದಿರಿ ಇವನ್ನು ?"

"ನಾನು ಮೊದಲೇ ಹೇಳಿಲ್ಲವೇ ನಿನಗೆ ? ನಾವು ಈ ಊರಿನ ಜಾಗಿರದಾರರು. ಯಾವ ಒಳ್ಳೆಯ ಪದಾರ್ಥವೇ ಇರಲಿ, ಜನರು ತಾವೇ ನಮಗೆ ತಂದು ತಂದು ಒಪ್ಪಿಸುತ್ತಿರುತ್ತಾರೆ, ಕಾಣಿಕೆ. . . ."

ಅಷ್ಟರಲ್ಲಿಯೆ ತೋಟಿಗನು ಅಲ್ಲಿಗೆ ಬಂದು, 'ಹಣ್ಣಿನ ರೊಕ್ಕಾ ಈಗ ಕೊಟ್ಟುಬಿಡ್ರಿ ರಾಯರ!' ಎಂದು ಹೇಳಿದ.

* * *

ಬಿಡುವು ಇರಲಿಲ್ಲ!

"ಅಲ್ಲ! ಅಖಂಡ ಎರಡು ತಾಸಾತು, ಹಾಂಗ ನೋಡತಾ ಕೂತುಕೊಂಡಿನಿ! ಬೀದೀ ಬಾಗಿಲದೊಳಗ ನಿಂತುಕೊಂಡು ಯಾರ ಜೋಡೀ ಮಾತು ನಡಿಸಿದ್ದಿ ?"

"ದಿವಾಣರ ಧೋಂಡಕ್ಕ ಇಲ್ಲ ? ಅವರ ಜೋಡಿ ಮಾತಾಡತಿದ್ದೆ. ಭಾಳ ಗಡಬಡಿಯಿಂದ ಹೊರಟಿದ್ದರು, ಒಳಗ ಬರುವಷ್ಟು ಕೂಡಾ ಅವರಿಗೆ ಬಿಡುವು ಇರಲಿಲ್ಲಂತ! ಅಂತಲೇ ಬಾಗಿಲದೊಳಗೇ ನಿಂತು ಮಾತಾಡಿದೆವು!"

* * *

ಆನೆಯನ್ನು ಮಿಕ್ಕಿದ ಆಳು

"ಇತ್ತೀಚಿಗೆ ನಿಮ್ಮ ಪ್ರಕೃತಿ ಯಾಕೋ ಸೂಕ್ಷ್ಮ ಆಗಲಿಕ್ಕೆ ಹತ್ತೇದ!"

"ಸೂಕ್ಷ್ಮ ? ಹುಚ್ಚಿ, ಇದ್ದೀದಿ ತೀರಿ ಹೋಯ್ತು! ನನ್ನ ಪ್ರಕೃತೀ ಅಂದರ ಏನಂತ ಮಾಡೀದಿ ? 'ಆನೀಕಿಂತಾ ಹೆಚ್ಚಿನ ಶಕ್ತಿ ನನ್ನ ಮೈಯೊಳಗ ಅದ ತಿಳೀತೇನು ?"

"ಏನರೆ ಹುಚ್ಚುಚ್ಚಾರ ಅಂತೀರಿ ಅತು!"

"ಇದು ಹುಚ್ಚುಚ್ಚಾರ ಅಲ್ಲ ಹುಡಿಗೀ, ಇಲ್ಲಿ ನೋಡು, 'ಒಂದು ಸಿಗರೇಟಿನೊಳಗ ಇರುವಷ್ಟು 'ನಿಕೋಟಿನ್' ವಿಷದಿಂದ ಒಂದು ಆನೆಯ ಜೀವವನ್ನು ಬೇಕಾದ ಹಾಗೆ ಕಳೆಯಬಹುದು!' ಎಂದು ಶಾಸ್ತ್ರಜ್ಞರು ಹೇಳತಾರೆ. ಆದರೆ ಈಗ ಹನ್ನೆರಡು ವರ್ಷದಿಂದಲೂ ದಿನಾಲು ಒಂದು ಡಬ್ಬಿ ಸಿಗರೇಟು ಹೊಡೆದು ಹಾರಿಸಿ ಬಿಡತೀನಿ.... ನೀನ ನೋಡತೀಯೋ ಇಲ್ಲೋ ?"

* * *

ಕಳವಿನ ಕಬೂಲಿ

"ಏನೋಂದ್ರೆ. ಗೊತ್ತಾಯಿತೇನು ? ನಿನ್ನೆ ದಿನ ಬಲಗಡೆಯ ಜೇಬಿನಲ್ಲಿಯ ನೋಟುಗಳನ್ನ ನಾನೇ ತೆಗೆದುಕೊಂಡಿದ್ದೇನೆಂಬುದನ್ನ ನಾನು ಒಪ್ಪಿಕೊಳ್ಳತೇನೆ!"

"ನೀನು ಅದನ್ನು ಕಳವು ಮಾಡತಿದ್ದಾಗ, ನಾನು ನೋಡಿಯೆ ಬಿಟ್ಟಿದ್ದೆನಲ್ಲ!"

"ಅಂತೇ—ನಾನೂ ಅದನ್ನೀಗ ಒಪ್ಪಿಕೊಂಡೇ ಒಪ್ಪಿಕೊಳತೇನಲ್ಲ!"

* * *



ಪುಸ್ತಕ ದೊರೆಯುವ ಸ್ಥಳ :
ನಾಗ್ವೇಕರ ಬುಕ್-ಡಿಪೋ, ಹುಬ್ಬಳ್ಳಿ.

ನಾಲ್ಕೂ ನಿಟ್ಟಿನ ನೋಟ

ಬಂಗಾಲವೊ? ದೇಶದ ಕಂಗಾಲವೊ?

ಕಳೆದ ಒಂದು ತಿಂಗಳಿನಿಂದ ಬಂಗಾಲ ಪ್ರಾಂತದಲ್ಲಿ ಹಾವಳಿಯನ್ನೆಬ್ಬಿಸಿದ ಅನಾಹಾರಪಿಡುಗು ಇನ್ನೂ ಶಾಂತವಾಗಿಲ್ಲ. ವೃತ್ತಪತ್ರಗಳಲ್ಲಿ ಬರುವ ಸುದ್ದಿಗಳನ್ನು ನೋಡಿದರೂ, ಪ್ರತಿಯೊಬ್ಬ ಭಾರತೀಯನ ಹೃದಯವು ಕನಿಕರದಿಂದಲೂ ನಾಚಿಕೆಯಿಂದಲೂ ಕರಗುವಂತಿದೆ; ಆದರೆ ನಿಜವಾದ ಪರಿಸ್ಥಿತಿಯು ಪತ್ರಿಕೆಗಳಲ್ಲಿ ಕಾಣಿಸಿದ್ದಕ್ಕಿಂತಲೂ ಘೋರವಾಗಿದೆ ಎಂದು ಹೇಳಬಹುದು. ಯಾಕೆಂದರೆ, ಬೇರೆ ಬೇರೆ ಜಿಲ್ಲೆಗಳಲ್ಲಿಯ, ಹಳ್ಳಿಗಳಲ್ಲಿಯ ಸರಿಯಾದ ಸುದ್ದಿಗಳು ತಿಳಿಯುವಂತಿಲ್ಲ. ಕಲಕತ್ತಾ ನಗರದಲ್ಲಿ ಕೂಡ ಅನಾಹಾರದ ದೃಶ್ಯವನ್ನು ಪೂರ್ತಿಯಾಗಿ ಪ್ರಕಟಿಸಲು ಪತ್ರಿಕೆಗಳಿಗೆ ಸ್ವಾತಂತ್ರ್ಯವಿದ್ದಂತೆ ತೋರುವದಿಲ್ಲ. ಆದರೂ ಪ್ರಕಟವಾಗುತ್ತಲಿರುವ ಸುದ್ದಿಗಳಿಂದಲೂ ಕೆಲವು ಚಿತ್ರಗಳಿಂದಲೂ ಇಂತಹ ಬರಗಾಲವು ಹಿಂದೆ ಎಂದಿಗೂ ಬಂದಿರಲಿಕ್ಕಿಲ್ಲ ಎಂದೆನಿಸುವಂತಿದೆ. ಇಪ್ಪತ್ತನೆಯ ಶತಮಾನದಲ್ಲಿ, ಬೀದಿಗೆ ಬಿಸಾಡಿದ ರೊಟ್ಟಿಯ ತುತ್ತಿಗಾಗಿ ಬಾಲಕನೂ ನಾಯಿಯೂ ಬಡಿದಾಡಿದ ಸಂಗತಿ ಘಟಿಸಬೇಕೆಂದರೆ ನಮ್ಮ ಸಂಸ್ಕೃತಿಗೂ ಸುಧಾರಣೆಗೂ ಎಂತಹ ಅವಮಾನ! ಯುದ್ಧದ ದೃಷ್ಟಿಯಿಂದ ನೋಡುವಾಗ ಕೂಡ ಪ್ರತಿಯೊಂದು ದೇಶವು ತಾಯಂದಿರ ಮತ್ತು ಚಿಕ್ಕಮಕ್ಕಳ ಆರೋಗ್ಯಕ್ಕಾಗಿ ಹೆಚ್ಚು ಜಾಗರೂಕತೆಯನ್ನು ವಹಿಸುತ್ತಿದೆ; ಆದರೆ ನಮ್ಮಲ್ಲಿ, ಕೂಳಿಲ್ಲದೆ ಕೊರಗಿದ ತಾಯಂದಿರು ಬಯಲಿನಲ್ಲಿ ಸತ್ತುಬಿದ್ದುದನ್ನರಿಯದೆ, ತಾಯಿಹಾಲನ್ನು ಕುಡಿಯಲಾಶಿಸಿ ಅವಳನ್ನು ಬಿಗಿದಪ್ಪಿ ಪ್ರಾಣಬಿಡುವ ಮಗುವಿನ ಚಿತ್ರ!

ಕಾರಣಕ್ಕಾಗಿ ಕಾಲಹರಣ

ಇಂತಹ ಪರಿಸ್ಥಿತಿಗೆ ಕಾರಣವೇನು?—ಎಂಬ ಪ್ರಶ್ನೆ ಕೂಡ ಈಗ ಗೌಣವಾಗಿದೆ. ಯಾಕೆಂದರೆ ಸಾವಿರಾರು ಜೀವಗಳನ್ನು ಬದುಕಿಸಿಕೊಳ್ಳುವುದಗತ್ಯವಾಗಿದೆ. ಇಂತಹ ಪ್ರಸಂಗದಲ್ಲೂ ಕಾರಣಗಳನ್ನಷ್ಟೇ ಶೋಧಿಸುವುದರಲ್ಲಿ ಕಾಲಹರಣವನ್ನು ಮಾಡುವ ತಾತ್ತ್ವಿಕ ಎದೆಗಾರರಿದ್ದುದು ನೋವಿನ ಮೇಲೆ ಬರೆಯನ್ನು ಕೊಟ್ಟಂತೆ ಎನಬಹುದು ದೇಶದ ಪರಿಸ್ಥಿತಿಯ ಮುಖ್ಯ ಹೊಣೆ ಸರಕಾರದ ಮೇಲೆ; ಇದನ್ನರಿತ ಸರಕಾರವು ತನ್ನ ಹೊಣೆಯನ್ನು ಸಡಿಲಿಸಿಕೊಳ್ಳುವುದಕ್ಕಾಗಿ ಇಂತಹ ಪರಿಸ್ಥಿತಿಗೆ ಕಾರಣವೇನು (ಅರ್ಥಾತ್ ತಾನೇ ಕಾರಣವಲ್ಲ) ಎಂಬ ಮಾತಿಗೆ ಹೆಚ್ಚು ಮಹತ್ತ್ವವನ್ನು ಕೊಡುವಂತಿದೆ. ಇಷ್ಟೇಕೆ? ಕೇಂದ್ರ ಸರಕಾರವು ಪ್ರಾಂತಿಕ ಸರಕಾರವನ್ನು, ಪ್ರಾಂತಿಕ ಸರಕಾರವು ಕೇಂದ್ರ ಸರಕಾರವನ್ನು ತಪ್ಪಿನಲ್ಲಿರಿಸಲು ಕೂಡ ಯತ್ನ ನಡೆಯಿತು! ಆ ಮೇಲೆ ಪರಸ್ಪರ ವಿಚಾರವಿನಿಮಯ! ಆ ಮೇಲೆ ಚರ್ಚೆ, ಆ ಮೇಲೆ ಪರಿಷತ್ತು, ಮತ್ತೆ ಚರ್ಚೆ, ಆ ಮೇಲೆ ನಿರ್ಣಯವೆಂದೊ? ಈ ನಿರ್ಣಯವಾಗುವವರೆಗೆ ಯಮನೊಡನೆ ಆರ್ಮಿಸ್ಟೀಸ (ಯುದ್ಧದ ತಾತ್ಕಾಲಿಕ ತಡೆ) ನ್ನು ಮಾಡಿಕೊಂಡಿದ್ದರೆ ಆ ಮಾತು ಬೇರೆ. ಆದರೆ ದಿನದಿನಕ್ಕೆ ಅನಾಹಾರದಿಂದ ಸಾಯುವವರ ಸಂಖ್ಯೆ ಹೆಚ್ಚುತ್ತಿರುವಾಗಲೂ ಇಂತಹ ಕಾಲಹರಣವೆಂದರೆ, ಅದು ಬರಿಯ ಅನ್ಯಾಯವಲ್ಲ, ಅಕ್ಷಮ್ಯವೂ ಆಗುವುದು.

ಸಹಾಯವು ಸಫಲವಾಗಬೇಕಾದರೆ—

ಈಗಾಗಲೆ ಅನೇಕ ಕಡೆಗಳಿಂದ ಸಹಾಯದ ಏರ್ಪಾಟಾಗಿದೆ, ಅನೇಕ ಧನನಿಧಿಗಳನ್ನು ಕೂಡಿಸಲಾಗಿದೆ. ಬಹುಶಃ ಎಲ್ಲ ಪ್ರಾಂತಗಳಿಂದ ಏಕಮಾರ್ಗವಾಗಿ ಸಹಾಯವು ಬಂಗಾಲಕ್ಕೆ ಹೋಗುತ್ತಲಿದೆ. ಕಲಕತ್ತೆಯಲ್ಲಿ ಜನಸಹಾಯದಿಂದ ನಡೆಸಲ್ಪಟ್ಟ ಅನಛತ್ರಗಳಿವೆ—ಇದೆಲ್ಲವೂ ನಿಜ. ಇದನ್ನರಿತೂ ನಾವು 'ಸಹಾಯಕ್ಕೆ ಸರಕಾರವೆ ಮುಖ್ಯವಾಗಿ ಹೊಣೆಗಾರ' ಎಂದು ಹೇಳುತ್ತಲಿದ್ದೇವೆ. ಅದಕ್ಕೆ ವಿಶೇಷವಾಗಿ ಇಂದಿನ ಯುದ್ಧಪರಿಸ್ಥಿತಿ ಕಾರಣ. ಈ ಕಾರಣಕ್ಕಾಗಿ ಅನ್ನಸಾಮಗ್ರಿಯ ಮತ್ತು ವಾಹನಸೌಕರ್ಯದ ಸಂಪೂರ್ಣ ಅಧಿಕಾರ ಸರಕಾರದ ಕೈಯಲ್ಲಿದೆ; ಮತ್ತು ಇವೆರಡರ ಮೊದಲ ಆವಶ್ಯಕತೆ ಸೈನ್ಯಖಾತೆಗಿದೆ. ಜನತೆಯು ಕೋಟಿಗಟ್ಟಲೆ ನಿಧಿಯನ್ನು ಕೂಡಿಸಿದರೂ ಆ ಸಹಾಯವು ಸಫಲವಾಗುವಂತಿಲ್ಲ. ಯಾಕೆಂದರೆ ಸಾವಿರಾರು ಜನರನ್ನು ಮೃತ್ಯುವಿನ ದವಡೆಯಿಂದ ಎಳೆದು ತರಲು ಆಹಾರ ಮುಖ್ಯ. ಆ ಆಹಾರವನ್ನು ಯಾವ ಆತಂಕ— ಕರಾರುಗಳಿಲ್ಲದೆ ಪೂರಯಿಸಲು ಸರಕಾರವು ಸಿದ್ಧವಾಗಬೇಕು. 'ಇಡಿಯ ಪ್ರಾಂತದ ಜನರನ್ನು ಅನಾಹುತದಿಂದ ರಕ್ಷಿಸುವುದು ದೇಶದ ಯುದ್ಧಮುಖದ ಮೊದಲ ಕಾರ್ಯಕ್ರಮ, ಯುದ್ಧಸಿದ್ಧತೆಗೆ ಪೋಷಕವಾದ ಸಂಗತಿ' ಎಂದು ಸರಕಾರವು ಧೈರ್ಯದಿಂದಲೂ ಸಹೃದಯತೆಯಿಂದಲೂ ಒಪ್ಪಬೇಕು. ಅದರಂತೆಯೆ ಪ್ರಾಂತದಿಂದ ಪ್ರಾಂತಕ್ಕೆ ಆಹಾರವನ್ನು ಕಳುಹಿಸುವುದಕ್ಕಾಗಿ ಶಕ್ಯವಾದುದನ್ನು ಮೀರುವಂತೆ ಕೂಡ ವಾಹನಸೌಕರ್ಯವನ್ನು ಒದವಿಸಿಕೊಡಬೇಕು; ಈ ಬಗ್ಗೆ ಸರ್ವಾಧಿಕಾರ ಸರಕಾರಕ್ಕಿದೆ. ಕೊನೆಯದಾಗಿ, ಇಡಿಯ ಬಂಗಾಲ ಪ್ರಾಂತದಲ್ಲಿ ಅನಾಹಾರದ ಮರಣಯಾತ್ರೆ ನಡೆದಿದೆಯಂತೆ; ಹಾಗಿದ್ದರೆ, ಪ್ರಾಂತದ ಎಲ್ಲ ಭಾಗಗಳಲ್ಲೂ ಸಮರ್ಪಕವಾದ, ಕಾಲಕ್ಕೆ ಸರಿಯಾದ ಸಾಕಷ್ಟಾದ ಸಹಾಯದ ವ್ಯವಸ್ಥೆಯನ್ನು ಮಾಡಬೇಕಲ್ಲವೆ? ಅದಕ್ಕಾಗಿ ಅನುಕೂಲತೆಯೂ ಸರಕಾರಕ್ಕೇ ಹೆಚ್ಚಾಗಿದೆ. ಸರಕಾರೀ ಅಧಿಕಾರಿಗಳು ಹಳ್ಳಿಯ

ವರೆಗೆ ಹರಡಿದ್ದಾರೆ. ಒಂದೇ ವ್ಯವಸ್ಥೆ, ಒಂದೇ ವೇಳೆಗೆ ವ್ಯವಸ್ಥೆ ಇದು ಸರಕಾರಕ್ಕೆ ಶಕ್ಯವಾದಷ್ಟು ಜನತೆಗೆ ಆಗಲಾರದು. ಜನತೆಯ ಸಹಾಯವೂ ಆದಷ್ಟು ಫಲಕಾರಿಯಾಗಿಯೆ ಆಗುವುದು. ಅದರ ಲಾಭವನ್ನು ಪಡೆದುಕೊಂಡು, ಸಂಪೂರ್ಣ ಫಲಕಾರಿಯಾಗುವಂತೆ ಸಹಾಯಮಾಡುವುದು ಸರಕಾರದ ಮುಖ್ಯಹೊಣೆ.

ಪರಸ್ಪರ ಸಹಾನುಭೂತಿ ಬೇಕು

ಇದುವರೆಗೆ 'ಸರಕಾರ' ಎಂದಿಷ್ಟೆ ಹೇಳಿರುವೆವಲ್ಲದೆ 'ಬಂಗಾಲದ ಸರಕಾರ' ಎಂದು ಹೇಳಿಲ್ಲ. ಅದಕ್ಕೊಂದು ವಿಶಿಷ್ಟವಾದ ಕಾರಣವಿದೆ. ಜನತೆಗೆ ಈ ರೀತಿ ಸಹಾಯ ಮಾಡಲು ಮುಂದಾಗಬೇಕಾದರೆ ಆ ಸರಕಾರಕ್ಕೆ ಧೈರ್ಯವಿರಬೇಕಾಗುವುದು; ಅದೂ ಯುದ್ಧಪರಿಸ್ಥಿತಿಯಲ್ಲಿ, ಬ್ರಿಟಿಷ್ ಗವರ್ನರನ ಆಳಿಕೆಯಲ್ಲಿ ಎಂದರೆ ಇನ್ನಿಷ್ಟು ಧೈರ್ಯ ಬೇಕಾಗುವುದು. ಮಂತ್ರಿಮಂಡಳಕ್ಕೆ ಇಷ್ಟೊಂದು ಧೈರ್ಯ ಬರಬೇಕಾದರೆ ಜನತೆಯ ಸಹಾಯವಿಲ್ಲದೆ ಶಕ್ಯವಿಲ್ಲ; ಜನತೆಗೆ ಹೊಣೆಗಾರಿಕೆಯಿಂದ ಬದ್ಧವಾಗದ ಮಂತ್ರಿಮಂಡಳದಿಂದ ಇಂತಹ ಆತ್ಮವಿಶ್ವಾಸದ, ಏಕನಿರ್ಣಯ ಶಕ್ತಿಯ ಕೆಲಸವಾಗದು. ಇಂದು ಬಂಗಾಲದಲ್ಲಿ ಜಾತಿ-ಮತ-ಪಂಥಗಳನ್ನು ಮೀರಿ ಎಲ್ಲರಿಗೂ ಆಪತ್ಕಾಲ ಬಂದಿದೆ. ಆಪತ್ತು ಸರ್ವಪಕ್ಷೀಯ, ಮಂತ್ರಿಮಂಡಳ ಏಕಪಕ್ಷೀಯ। ಇಡಿಯ ಪ್ರಾಂತದ ಜನತೆಯಲ್ಲಿ, ಏಕಪಕ್ಷೀಯ ಮಂತ್ರಿಮಂಡಳಕ್ಕಾಗಿ ವಿಶ್ವಾಸ ಹುಟ್ಟೀತು ಹೇಗೆ? ಇದಲ್ಲದೆ, ಬಂಗಾಲದ ಸದ್ಯದ ಮಂತ್ರಿಮಂಡಳವು ಇಂದಿನ ಪರಿಸ್ಥಿತಿಯನ್ನು ಇದಿರಿಸಲು (ಸುಧಾರಿಸುವ ಮಾತಂತೂ ಹಾಗಿರಲಿ) ಅಯೋಗ್ಯ ಎಂಬುದಕ್ಕೆ ಇನ್ನೊಂದು ಬಲವಾದ ಕಾರಣವಿದೆ. ಸರ್ ನಝಿಮುದ್ದೀನರ ಮಂತ್ರಿಮಂಡಳವು ಅಧಿಕಾರಪದಕ್ಕೇರಿದ್ದು ಜನತೆ ಕೊಟ್ಟ ಬಹುಮತದಿಂದಲ್ಲ; ಪ್ರಾಂತದ ಬ್ರಿಟಿಷ್ ಗವರ್ನರರ ಕೃಪಾದಿಂದ, ಸಹಾಯದಿಂದ. ಅದಕಾಗಿ ಈ ಮಂತ್ರಿಮಂಡಳಕ್ಕೆ ಜನತೆಯ ಬೆಂಬಲಕ್ಕಿಂತಲೂ ಮೇಲಿನ ಸಾಹೇಬರ ಸಹಾನುಭೂತಿಯೆ ಹೆಚ್ಚು ಮಹತ್ತ್ವದ್ದಾಗಿದೆ. ಸಾಹೇಬರ ಸಹಾನುಭೂತಿ ಸರಿಯಿತೆಂದರೆ, ಸರ್ ನಝೀಮರ ಮಂತ್ರಿತ್ವವು ಮುಗಿಯಿತೆಂಬೇ ತಿಳಿಯಬೇಕು. ವಸ್ತುಸ್ಥಿತಿ ಹೀಗಿರುವಾಗ, ಈ ಮಂತ್ರಿಮಂಡಳದ ಕಾರ್ಯಕ್ಷಮತೆಯಲ್ಲಿ ವಿಶ್ವಾಸ ಹುಟ್ಟುವುದು ಹೇಗೆ?

ಅಜ್ಞಾನದ ಅತಿರೇಕ ಇಲ್ಲವೆ ಕುತ್ಸಿತತನದ ಕಳಸ

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ವಾಚಕರ ಲಕ್ಷ್ಯಕ್ಕೆ ತಂದುಕೊಡುವುದಗತ್ಯವಾಗಿದೆ. 'ಬಂಗಾಲದ ಮಂತ್ರಿಮಂಡಳವು ಈ ಆಪತ್ಕಾಲವನ್ನು ಇದಿರಿಸಲು ಅಯೋಗ್ಯ' ಎಂದು ನಾವು ಹೇಳಿರುವೆವಷ್ಟೆ? ಕೆಲವು ಬ್ರಿಟಿಶ್ ಪತ್ರಿಕೆಗಳೂ ಸರಕಾರದ ಅಯೋಗ್ಯತೆಯನ್ನು ಟೀಕಿಸಿರುತ್ತವೆ. ಆದರೆ ಆ ಟೀಕೆಯಲ್ಲಿ ಒಂದು ಮೋಜು ಇದೆ. 'ಸರಕಾರವು ಅಯೋಗ್ಯ' ಎನ್ನುವಾಗ, 'ಇಂದಿನ ಪ್ರಾಂತಿಕ ಸರಕಾರಗಳೆಂದರೆ ಹಿಂದೀಯರಿಂದ ಕೂಡಿದ ಮಂತ್ರಿಮಂಡಳಗಳು' ಎಂಬ ಸಂಗತಿಗೇ ಈ ಪತ್ರಿಕೆಗಳು ಹೆಚ್ಚಿನ ಮಹತ್ತ್ವವನ್ನು ಕೊಟ್ಟಿವೆ. ಯಾಕೆನ್ನುವುದು ಸ್ಪಷ್ಟವೆ ಇಲ್ಲವೆ? 'ಹಿಂದೀಯರು ಅಧಿಕಾರವನ್ನು ವಹಿಸಲು, ಆಡಳಿತವನ್ನು ಸಾಗಿಸಲು (ಆದ್ದರಿಂದ ಸ್ವಾತಂತ್ರ್ಯಕ್ಕೂ) ಅಯೋಗ್ಯರು' ಎಂಬ ನಿಷ್ಕರ್ಷೆಯನ್ನು ಈ ಪತ್ರಿಕೆಗಳು ಹೊರಡಿಸಿವೆ! ಇದಕ್ಕೇನೆನ್ನಬೇಕು? ಅಜ್ಞಾನದ ಅತಿರೇಕವೆ? 'ಹಿಂದುಸ್ಥಾನದ ಜನರು ಎಂದಿಗಿಂತ ಹೆಚ್ಚು ತಿನ್ನುತ್ತಿರುವುದರಿಂದ ಇಂದು ಬರಗಾಲ ಬಂದಿದೆ' ಎಂದು ಹೊಣೆಗಾರ ಮೇಲಧಿಕಾರಿಯಾದ ಭಾರತಮಂತ್ರಿಗಳೆ ಹೇಳುವಾಗ, ಬ್ರಿಟಿಷ್ ಪತ್ರಿಕೆಗಳಿಗೆ ಅಜ್ಞಾನವಿರುವುದೇನಾಶ್ಚರ್ಯ?—ಎಂದು ಸಮಾಧಾನವನ್ನು ತಾಳೋಣವೆ? ಆದರೆ ಈ ಮಾತಿನಲ್ಲಿ ಅಷ್ಟೊಂದು ಅಜ್ಞಾನವಿಲ್ಲ. ಈ ಮಾತು ಬುದ್ಧಿಪೂರ್ವಕವಾಗಿದೆ ಎಂದು ನಮ್ಮ ಸಂದೇಹ. ಸಾವಿರಾರು ಜನರು ನಿಲ್ಲಲು ತ್ರಾಣವಿಲ್ಲದೆ ಇದ್ದಲ್ಲಿಯೆ ಬಿದ್ದು ಸಾಯುತ್ತಿರುವಂತಹ ಸಂದರ್ಭವನ್ನು ತಮ್ಮ ರಾಜಕೀಯ ಧೋರಣೆಗಾಗಿ ಉಪಯೋಗಿಸಿಕೊಳ್ಳುವ ಈ ಬುದ್ಧಿಗೆ ಏನೆನ್ನಬೇಕು? ಅಪಪ್ರಚಾರಕ್ಕಾಗಿ ಹೊರಟ ಕುತ್ಸಿತತನದ ಕಳಸವಿದು ಎಂದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ನಿಜವಿದ್ದ ಪರಿಸ್ಥಿತಿ ಎಂದರೆ, ಹಿಂದೀಯರ ಸರಕಾರವಿಲ್ಲದ್ದಕ್ಕೆ ಈ ದುರ್ದಶೆ ಒದಗಿದೆ ಎನಬಹುದಾಗಿದೆ. ದೇಶದ ಜನತೆಯೊಡನೆ ಆತ್ಮೀಯತೆಯಿಲ್ಲದ ಉಚ್ಚ ಅಧಿಕಾರಿವರ್ಗದಲ್ಲಿ ಜನತೆಯ ಗೋಳು ಹೃದಯದೊಳಗಿನ ನರಳಾಟವಾಗಿ ಯಾರಿಗೂ ಕೇಳಿಸುವುದಿಲ್ಲ. ಇಂದು ಅಲ್ಲಲ್ಲಿ ಹಿಂದೀಯರ ಮಂತ್ರಿಮಂಡಳಗಳಿರಬಹುದು. ಇವಕ್ಕೆ 'ಸರಕಾರ' ಎನ್ನುವುದು ರೂಢಿಗಾಗಿ; ವಸ್ತುಸ್ಥಿತಿಯಲ್ಲಿ ಗವರ್ನರರದೆ ಸರಕಾರ, ಗವರ್ನರರದೆ ಸರ್ವಾಧಿಕಾರ. 'ಪ್ರಾಂತಿಕ ಸ್ವಾಯತ್ತತೆ' ಎಂಬ ಹೆಸರು ಪಡೆದ ಕಾಯಿದೆಯಲ್ಲಿ ಕೂಡ ಗವರ್ನರರ ರಾಜ್ಯಕ್ಕೆ ಅವಕಾಶವಿರುವಾಗ, ಇಂದಿನ ಯುದ್ಧಪರಿಸ್ಥಿತಿಯಲ್ಲಿ ಗವರ್ನರರ ಸರ್ವಾಧಿಕಾರವಾಗಿದ್ದರೆ ಆಶ್ಚರ್ಯವೇನು? ಈ ಮಾತನ್ನು ಲಕ್ಷ್ಯದಲ್ಲಿಟ್ಟು ಬ್ರಿಟಿಷ್ ಪತ್ರಿಕೆಗಳು 'ಸರಕಾರವು ಅಯೋಗ್ಯ' ಎಂದಿದ್ದರೆ, ಇಡಿಯ ಭಾರತವು ಏಕಕಂಠವಾಗಿ ಆ ಮಾತಿಗೆ ಅನುಮೋದನವನ್ನು ಕೊಡುವುದು.

ಆತ್ಮವಿನಾಶದ ಅಧೋಗತಿ

ಬರಗಾಲವಾಗಲಿ, ಅನಾಹಾರದ ಗಂಡಾಂತರವಾಗಲಿ, ಒರಿಯ ಬಂಗಾಲ ಪ್ರಾಂತವೊಂದನ್ನೆ ಹಿಡಿದಿಲ್ಲ. ಸಾಮಾನ್ಯವಾಗಿ ಹಿಂದುಸ್ತಾನದ ಬೇರೆ ಬೇರೆ ಅನೇಕ ಭಾಗಗಳಲ್ಲಿ ಜನರು ಈ ಗೋಳಿಗೀಡಾಗಿ ಬೆಂಡಾಗಿದ್ದಾರೆ. ಇದರಿಂದ ಜನತೆಗೂ ಸರಕಾರಕ್ಕೂ ಹಾನಿಯಿದ್ದಷ್ಟೇ ಯುದ್ಧಸಿದ್ಧತೆಗೂ ಧಕ್ಕೆ ತಗಲುವುದೆಂದು ನಿಃಸಂದೇಹವಾಗಿ ಹೇಳಬಹುದು. ಕೂಳಿಲ್ಲದೆ ಸಾಯುವವರು ಒಂದು ದೃಷ್ಟಿಯಿಂದ 'ಬದುಕಿದರೆಂ'ದೇ ಹೇಳಬಹುದು. ಯಾಕೆಂದರೆ ಅರ್ಧಮರ್ಧ ಕೂಳನ್ನು ತಿಂದು

ಬದುಕುವವರ ಪಾಡು ತೀರ ಹೀನಾಯಮಾನವಾಗುವುದು. ಕೂಳಿಲ್ಲದೆ ಸಾಯುವವರು ಜೀವವನ್ನಷ್ಟೆ ಬಿಡುವರು; ಹೇಗಾದರೂ ಬದುಕುವವರು ಜೀವವನ್ನುಳಿಸಿಕೊಂಡರೂ ಸತ್ತ್ವವನ್ನೂ, ಆತ್ಮವನ್ನೂ ಮಾರಿಕೊಂಡವರಂತಾಗುವರು. ನಿರುತ್ಸಾಹ, ಲೋಕಜಿಗುಪ್ಸೆ, ಸ್ವಾಭಿಮಾನಶೂನ್ಯತೆ, ಸ್ವಾರ್ಥಲೋಲುಪತೆ ಇಂತಹ ಅನೇಕ ಅಸಾಮಾಜಿಕ ವೃತ್ತಿಗಳು ಹೇಗಾದರೂ ಬದುಕುವವನ ಸ್ವಭಾವವಾಗುವುವು. ದೇಶಕ್ಕೆ ಇದಕ್ಕಿಂತ ಹೆಚ್ಚಿನ ಅಧೋಗತಿ ಇದ್ದೀತೆ? ಅದರಲ್ಲಂತೂ, ಯುದ್ಧಕಾಲದಲ್ಲಿ, ಸ್ವಾಭಿಮಾನವನ್ನೂ ಸ್ವಾತಂತ್ರ್ಯವನ್ನೂ ಕಾಯ್ದುಕೊಳ್ಳುವುದಕ್ಕೆಂದು ಸಾರಲಾಗುವ ಯುದ್ಧಕಾಲದಲ್ಲಿ, ಜನತೆ ತನ್ನ ಆತ್ಮಬಲವನ್ನೇ ಕಳೆದುಕೊಳ್ಳತೊಡಗಿದರೆ ಅಧೋಗತಿಗೆ ಇಳಿಕಲು ದಾರಿಯನ್ನು ಮಾಡಿಕೊಟ್ಟಂತೆ. ಜಗತ್ತಿನ ಎಲ್ಲ ಸೈನ್ಯ-ಸಜ್ಜುಪಡೆಯನ್ನೂ ಎಲ್ಲ ವಿಮಾನಬಲವನ್ನೂ ತಂದರೂ ಉಳಿಸಲಾಗದಂತಹ ಅಧೋಗತಿ ಇದು.

ಮುಂದಾಳುಗಳನ್ನು ಬಂಧಮುಕ್ತ ಮಾಡಲೇಬೇಕು!

ಇಂದು ನಮ್ಮ ದೇಶದ ಸ್ವಾಭಿಮಾನವನ್ನೂ ಚಾರಿತ್ರ್ಯವನ್ನೂ ಉಳಿಸುವ ಮುಂದಾಳು ಯಾರು?—ಎಂಬುದರ ಬಗ್ಗೆ ಭಾರತೀಯರಿಗೆ ಸಂಶಯವೆ ಇಲ್ಲ. ಈಗಾಗಲೆ ಅನೇಕ ಸಭೆ-ಸಂಸ್ಥೆಗಳೂ ಪಕ್ಷೀಯ 'ಪುಢಾರಿ'ಗಳೂ ಆ ಮಾತನ್ನು ಪ್ರಕಟವಾಗಿಯೆ ಹೇಳಿದ್ದಾರೆ. ಅದೆಂದರೆ ಇಂದು ಬಂಧನದಲ್ಲಿದ್ದ ಕಾಂಗ್ರೆಸ್ ಮುಂದಾಳುಗಳನ್ನು ಕೂಡಲೆ ಬಿಡಬೇಕೆಂದು. ಬ್ರಿಟಿಶರಿಗಾಗಲಿ ಹೊರಗಿನವರಿಗಾಗಲಿ ಈ ಮಾತಿನ ಮರ್ಮ ಹೊಳೆಯುವುದೆ ಶಕ್ಯವಿಲ್ಲ. 'ತನ್ನ ಬಿಡುಗಡೆಯನ್ನು ಸಾಧಿಸಿಕೊಳ್ಳಲು ಗಾಂಧಿಯು ಮಾಟದ ಬರಗಾಲವನ್ನು ಹೂಡಿದ್ದಾನೆ' ಎಂದು ಬರೆದುಕೊಳ್ಳಲೂ ಒಂದು ವೇಳೆ ಬ್ರಿಟಿಶ್ ಪತ್ರಿಕೆಗಳು ಹಿಂದು-ಮುಂದು ನೋಡಲಿಕ್ಕಿಲ್ಲ. ಅವರ ಜ್ಞಾನವೂ ಅಷ್ಟೆ, ಸದ್ಬುದ್ಧಿಯೂ ಅಷ್ಟಕ್ಕಷ್ಟೆ! ಗಾಂಧಿಜಿಯವರಾಗಲಿ ಜವಾಹರರಾಗಲಿ, ಈ ಪರಕೀಯರಿಗೆ ಕೇವಲ 'ಒಂದು ರಾಜಕೀಯ ಪಕ್ಷದ ಕುಚೋದ್ಯಗಾರರು' ಎಂಬುದಿಷ್ಟೆ ಕಲ್ಪನೆ ಇದ. ಆದರೆ ಭಾರತೀಯರಿಗೆ ಈ ಎರಡು ವಿಭೂತಿಗಳು ರಾಜಕೀಯ ಪಕ್ಷದ ಸಂಬಂಧವಾಗಿಯೆ ಮಾತ್ರ ಮುಂದಾಳುಗಳೆನಿಸಿಲ್ಲ. ಭಾರತೀಯ ಸಂಸ್ಕೃತಿಯ, ಭಾರತೀಯ ಸ್ವಾಭಿಮಾನದ ಮೂರ್ತಿಮಂತ ಕುರುಪುಗಳು ಇವರಿಬ್ಬರು! ಈ ಸಂಗತಿ ಬ್ರಿಟಿಶರಿಗಾಗಲಿ ಬೇರೆ ಪರಕೀಯರಿಗಾಗಲಿ ಅರ್ಥವೆ ಆಗುವುದಿಲ್ಲ. ನಮ್ಮ ಆತ್ಮಬಲವನ್ನು ಚೇತರಿಸುವ ಶಕ್ತಿ ಇವರಲ್ಲಿದೆ; ಇವರ ನೇತೃತ್ವವಿದ್ದರೆ, ಊಟವಿಲ್ಲದೆ ಸಾಯುವ ಹೇಡಿಗಳಾಗದೆ ಸಾವನ್ನೇ ಎದುರಿಸುವ ಸಾಹಸಿಗರು ನಾವಾಗುವೆವು. ಇಷ್ಟೊಂದು ಮಹತ್ತ್ವವಿದೆ, ಇದೊಂದು ವೈಶಿಷ್ಟ್ಯವಿದೆ ಇವರ ಮುಂದಾಳುತನಕ್ಕೆ. ಅದಕಾಗಿ ದೇಶದ ದುಃಖಮಯ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಕೂಡಲೆ ಕಾಂಗ್ರೆಸ್ ಮುಂದಾಳುಗಳನ್ನು ಬಂಧಮುಕ್ತ ಮಾಡಬೇಕು.

ಇನ್ನೊಂದು ಕಾರಣ

ಕಾಂಗ್ರೆಸ್ ಮುಂದಾಳುಗಳನ್ನು ಕೂಡಲೆ ಬಂಧಮುಕ್ತ ಮಾಡಬೇಕೆಂಬುದಕ್ಕೆ ಇನ್ನೂ ಒಂದು ಕಾರಣವಿದೆ. ಕ್ವಿಬೆಕ್ ಪರಿಷತ್ತಿನಲ್ಲಿ ಜಪಾನಿನ ವಿರುದ್ಧ ಕೂಡಲೆ ಉಗ್ರೋಪಾಯಗಳನ್ನು ಕೈಕೊಳ್ಳಬೇಕೆಂದು ನಿರ್ಣಯವಾಯಿತಂತೆ. ಆ ನಿರ್ಣಯಕ್ಕನುಸರಿಸಿ ಈಗಾಗಲೆ ಪೂರ್ವ ಏಶಿಯಾ ರಣರಂಗದ ಸೇನಾಧಿಪತ್ಯಕ್ಕೆ ಅಧಿಕಾರಿಯನ್ನೂ ನಿಯಮಿಸಲಾಗಿದೆ. ಜಪಾನದ ವಿರುದ್ಧ ಯಾವ ರೀತಿಯಿಂದಲೆ ಉಗ್ರಯೋಜನೆಯನ್ನು ಕೈಕೊಂಡರೂ, ಆ ಯೋಜನೆಗೆ ಹಿಂದುಸ್ತಾನವೆ ಮುಖ್ಯಕೇಂದ್ರವಾಗುವುದು ಅನಿವಾರ್ಯವಾಗಿದೆ. ಹಿಂದುಸ್ತಾನವು ಇಡಿಯ ಪೂರ್ವಏಶಿಯಾ ರಣರಂಗದ ಮುಖ್ಯಕೇಂದ್ರವಾದರೆ, ಹಿಂದೀಯರ ಸ್ವಸಂತೋಷದ ಸಹಾಯ-ಸಹಾನುಭೂತಿಗಳು ಉಪಯುಕ್ತವಷ್ಟೇ ಅಲ್ಲ, ಅವಶ್ಯವೂ ಎನಿಸುವುವು. ಹಾಗೆ ಸ್ವಸಂತೋಷದ ಸಹಾಯ-ಸಹಾನುಭೂತಿಗಳು ದೊರಕಬೇಕಾದರೆ, ದೇಶದ ರಾಜಕೀಯ ಪರಿಸ್ಥಿತಿ-ಸುಧಾರಿಸಲೇಬೇಕು. ಕಾಂಗ್ರೆಸ್ ಮುಂದಾಳುಗಳ ಬಿಡುಗಡೆಯನ್ನುಳಿದು ಮತ್ತಾವ ಕಾರ್ಯದಿಂದಲೂ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸುವುದು ಶಕ್ಯವಾಗದು.

ಇಷ್ಟು ಸಾಲದು, ಇದು ಶೋಭಿಸದು!

ಬಳ್ಳಾರಿಯಲ್ಲಿ ಕೂಡಲಿರುವ ಆಂಧ್ರಮಹಾಸಭೆಯ ಅಧಿವೇಶನವನ್ನು ತಡೆಯಬೇಕೆಂಬ ಉದ್ದೇಶದಿಂದ ಪರಿಷತ್ತಿನ ವಾರಪತ್ರಿಕೆಯಾದ 'ಕನ್ನಡ ನುಡಿ' ಸಂಪಾದಕೀಯವಾಗಿ ಹೀಗೆ ಬರೆಯುತ್ತಿದೆ: 'ಈ ಪ್ರಶ್ನೆ ಮುಖ್ಯವಾಗಿ ರಾಜಕೀಯವಲ್ಲ, ಇದು ಮುಖ್ಯವಾಗಿ ಭಾಷಾವಿಷಯಕ; ಅನುಷಂಗದಿಂದ ರಾಜಕೀಯ. ಇಲ್ಲಿ ಕೋಪ-ತಾಪಗಳಿಗೆ ಎಡೆ ಕೊಡಬೇಕಾಗಿಲ್ಲ. ಕನ್ನಡಿಗರನಕ ಎಲ್ಲ ವೇಳೆಯಲ್ಲೂ ಸ್ಪಷ್ಟವಾಗಿ ಆದರೂ ಸಮಾಧಾನವಾಗಿ ಮಾತನಾಡಬೇಕು; ಧೈರ್ಯದಿಂದ ಆದರೂ ಶಾಂತಿಯಿಂದ ನಡೆಯಬೇಕು.' (೧೭-೯-೧೯೪೩). ಈ ಮಾತುಗಳು ಸ್ಪಷ್ಟವೂ ಇಲ್ಲ, ಸಮಾಧಾನಕರವೂ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಒಂದು ಜನವನ್ನು ಇನ್ನೊಂದು ಜನ ಆಕ್ರಮಿಸುವುದು 'ಮುಖ್ಯವಾಗಿ ಭಾಷಾವಿಷಯಕ'ವಲ್ಲ; ಮುಖ್ಯವಾಗಿ ಸಾಂಸ್ಕೃತಿಕ. ಸಂಸ್ಕೃತಿ ನಮ್ಮ ಬಾಳಬೆಡಗು; ಸಂಸ್ಕೃತಿಗೆ ಒಂದು ಅಂಗ ಭಾಷೆ. ಕನ್ನಡನಾಡನ್ನು ಕನ್ನಡೇತರರು ನುಗ್ಗುವುದೆಂದರೆ ಮುಖ್ಯವಾಗಿ ಕನ್ನಡತನಕ್ಕೆ ಧಕ್ಕೆ. ಭಾಷೆಯದೆ ವಿಷಯವಾಗಿದ್ದರೆ, ತೆಲುಗರು ನಿಮಗಾಗಿ ಒಂದು ಕನ್ನಡ ಶಾಲೆಯನ್ನಿಡಬಹುದು. ಇಂತಹ ಗಂಡಾಂತರವೆಂದೇ ಈ ವಿಷಯವಾಗಿ '**ಕೋಪ-ತಾಪ-ಶಾಂತಿ-ಸಮಾಧಾನ**'ಗಳ ಉಪನ್ಯಾಸ ಸಮಾಧಾನಕಾರಕವಾಗಲಾರದು. 'ಮುಖ್ಯವಾಗಿ ಬಳ್ಳಾರಿಯ ಕನ್ನಡಿಗರ ಕರ್ತವ್ಯ'ಎಂಬುದು, ಇಡಿಯ ಕರ್ನಾಟಕಕ್ಕೆ ಒಂದೇ ಒಂದು ಸಾಂಸ್ಕೃತಿಕ ಸಂಸ್ಥೆ ಎಂದು ಹೇಳಿಕೊಳ್ಳಲ್ಪಡುವ ಪರಿಷತ್ತಿನ ಧೋರಣೆಗೆ ಶೋಭಿಸದು.

ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ

ಪನವೇಲ, ಲಿಮಿಟೆಡ್.

ಪನವೇಲ TRADE MARK ಕುಲಾಬಾ

★

SHRI DHOOTAPAPESHWAR

PANVEL Ltd., PANVEL.

ಜಯಂತಿ ಸಣ್ಣಕತೆಗಳ ಮೇಲಾಟ

ಕೇವಲ ಉತ್ತರಕನ್ನಡ (ಕಾರವಾರ) ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಗೋಕರ್ಣದ 'ಕೆಳೆಯರ ಕೂಟ'ದವರು ಈ ಮೇಲಾಟವನ್ನು ಏರ್ಪಡಿಸಿದ್ದಾರೆ.

೩ ಬಹುಮಾನಗಳು

೧ನೆಯದು ೧೦ ರೂಪಾಯಿ! ೨ನೆಯದು ೫ ರೂಪಾಯಿ! ೩ನೆಯದು ೩ ರೂಪಾಯಿ!

★ ಮೇಲಾಟದ ನಿಯಮಗಳು ★

೧. ಉತ್ತರಕನ್ನಡ (ಕಾರವಾರ) ಜಿಲ್ಲೆಯಲ್ಲಿ ಹುಟ್ಟಿದವರೆಲ್ಲ ಅಥವಾ ಇನ್ನೊಂದು ಕಡೆಯಲ್ಲಿ ಕಾರ್ಯಾಂತರದಲ್ಲಾಗಿ ಇದ್ದವರು ಕೂಡ— ಈ ಮೇಲಾಟದಲ್ಲಿ ಭಾಗವಹಿಸಬಹುದು.

೨. ಕತೆಯು ಸ್ವತಂತ್ರವಾಗಿದ್ದು ಉತ್ತರಕನ್ನಡ ಜಿಲ್ಲೆಯ ಜನಜೀವನವನ್ನು ಚಿತ್ರಿಸುವಂತಹದಾಗಿರಬೇಕು. ಒಬ್ಬರು ಒಂದಕ್ಕಿಂತ ಹೆಚ್ಚಾಗಿಯೂ ಕತೆಗಳನ್ನು ಕಳುಹಬಹುದು.

೩. ಕತೆಯು ಜಯಂತಿಯ ಮುದ್ರಿತಪುಟ ೪ಕ್ಕೆ ಮೀರದಷ್ಟು ಎಂದರೆ ಕೈಬರೆಹದಲ್ಲಿ ಫೂಲ್ಸ್‌ಕ್ಯಾಪ್ ಅರ್ಧದಳತೆಯ ೮ ಪುಟಕ್ಕೆ ಮಿಕ್ಕದಷ್ಟು ಇರಬೇಕು.

೪. ಮೇಲಾಟದ ನಿರ್ಣಯಾಧಿಕಾರವನ್ನು 'ಜಯಂತಿ' ಪತ್ರಿಕೆಯ ಸಂಪಾದಕ ಮಂಡಲಿಯ ಕಡೆಗೆ ಒಪ್ಪಿಸಿರುವದರಿಂದ ಎಲ್ಲರೂ ತಾವು ಕತೆಗಳನ್ನು 'ಜಯಂತಿ ಕಾರ್ಯಾಲಯ, ಧಾರವಾಡ' ಎಂಬ ವಿಳಾಸಕ್ಕೆ ಕಳುಹಬೇಕಲ್ಲದೆ ಕೈಬರೆಹದ ಪ್ರತಿಯ ಮೇಲೆ 'ಸಣ್ಣ ಕತೆಗಳ ಮೇಲಾಟಕ್ಕಾಗಿ' ಎಂಬ ಮಾತನ್ನು ಸ್ಪಷ್ಟವಾಗಿ ಬರೆಯಬೇಕು.

೫. ಮೇಲಾಟಕ್ಕೆ ಬರುವ ಕತೆಗಳೆಲ್ಲವೂ ಬರಲಿರುವ ಅಕ್ಟೋಬರ (೧೯೪೩) ೩೦ನೆಯ ತಾರೀಖಿನೊಳಗಾಗಿ ಜಯಂತಿ ಕಾರ್ಯಾಲಯಕ್ಕೆ ಬರಬೇಕು. ಬಳಿಕಿನ ಕತೆಗಳನ್ನು ಮೇಲಾಟಕ್ಕೆ ಸೇರಿಸಿಕೊಳ್ಳಲಾಗುವುದಿಲ್ಲ.

ಉತ್ತರಕನ್ನಡ (ಕಾರವಾರ) ಜಿಲ್ಲೆಯ ಕತೆಗಾರರೆಲ್ಲರೂ ಈ ಮೇಲಾಟದಲ್ಲಿ ಭಾಗವಹಿಸಿ, ಕೆಳೆಯರ ಕೂಟದ ಈ ಹೊಸ ಉಪಕ್ರಮವನ್ನು ಯಶಸ್ವಿಯಾಗಿಸಬೇಕು.

ವ್ಯವಸ್ಥಾಪಕ: **'ಜಯಂತಿ' ಕಾರ್ಯಾಲಯ, ಧಾರವಾಡ.**

ಜಯಂತಿಯ ೧-೨-೩-೪-೫ನೆಯ ವರ್ಷಗಳ ಸಂಪುಟಗಳೂ ಬಿಡಿಸಂಚಿಕೆಗಳೂ ಮಾರಲಿಕ್ಕೆ ದೊರೆಯುತ್ತವೆ. ಬೇಕಾದವರು ಬೆಲೆ ಮೊದಲಾದುವುಗಳ ಬಗ್ಗೆ ಪತ್ರವ್ಯವಹಾರ ಮಾಡಿ ತಿಳಿಸಿಕೊಳ್ಳಬೇಕು. ಪ್ರತಿಗಳು ತೀರ ಸ್ವಲ್ಪವಿರುವುದರಿಂದ ಬೇಕಾದವರು ಬೇಗನೆ ಬರೆದು ಕೇಳಬೇಕು.

ವ್ಯವಸ್ಥಾಪಕ: ಜಯಂತಿ

Printed by Mr. V. Y. Jathar at the Karnatak Printing Works, Dharwar, and Published for the Proprietors, Jayanti Publications, by M. V. Mellegatti at the Jayanti Office, Dharwar.



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ ...... ವ್ಹಿ. ಪಿ. ಯಿಂದ ೪-೫-೦ ...... ಬಿಡಿಸಂಚಿಕೆಗೆ ೬ ಆಣೆ.

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೬ ನೆಯ ವರ್ಷ	ನವ್ಹಂಬರ್ ೧೯೪೩	೬ ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಬೆಳಕನೆರಚು (ಕವನ)	' ಆನಂದಕಂದ '	೨೦೧
ಸಂಪಾದಕೀಯ	ಸಂಪಾದಕರು	೨೦೨
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೨೦೩
ನಿನ್ನ ನೆಲೆ (ರವೀಂದ್ರರ ಕವನ)	ಶ್ರೀ. ನಾರಾಯಣ ಸಂಗಮ ಬಾಗಲಕೋಟ	೨೦೪
ಚೇತರಿಸುತ್ತಿರುವ ಚೀನ (ಕೀರ್ತಿಕಳಸದ ಹೊಳಪು)	ಶ್ರೀ. ನೆಗಳೂರ ರಂಗನಾಥ, ಬಿ. ಎ., ಬಿ. ಟಿ. ಹುಬ್ಬಳ್ಳಿ	೨೦೪
ಮಹೇಶ (ಶ್ರೀಶರಚ್ಚಂದ್ರರ ಕಥೆ)	ಶ್ರೀ. ಗುರುನಾಥ ಜೋಶಿ, ಶಿಕ್ಷಕರು ಟ್ರೇ. ಕಾಲೇಜು	೨೦೯
ದೇವ್ರು (ಕವನ)	ಶ್ರೀ. ವಿ. ಜಿ. ಭಟ್ಟ, ಕೊಲ್ಲಾಪುರ	೨೧೫
ಮಹಾತ್ಮಾ ಬಸವಣ್ಣನವರು ಪರಮತ ವಿಡಂಬಕರೇ ?	ಶ್ರೀ. ಗುರುಸಿದ್ಧಪ್ಪ ಬಸವಪ್ಪ ಬಳ್ಳಾರಿ, ಗದಗ	೨೧೬
ಸುಖವಸ್ತು ೨ (ಬೇಸರು)	ಶ್ರೀ. ಎಚ್.ಎಸ್. ಪಾಟೀಲ, ಎಂ.ಎ., ಬಿ.ಕಾಂ. ಮುಂಬೈ	೨೨೨
ನಮ್ಮ ರಾಷ್ಟ್ರಗೀತ (ವಿಮರ್ಶಾತ್ಮಕ ಪ್ರಬಂಧ)	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೨೨೫
ಜಟಕಾ ಸಾಬಿ (ಸಣ್ಣಕತೆ)	ಶ್ರೀ. ಬೇಂದ್ರೆ ಲಕ್ಷ್ಮಣರಾಯರಾಯರು, ಧಾರವಾಡ	೨೨೯
ಭವಿಷ್ಯದ ಭ್ರಾಂತಿ (ಹರಟೆ)	ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ., ಬಿ. ಟಿ.	೨೩೪
ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣಿಗಳು)	ಶ್ರೀ. ' ವಿಹಾರಿ ' ಮುಂಬಯಿ	೨೩೮
ಸಾದರಸ್ವೀಕಾರ	....	೨೪೪
ನಗೀಗೆ ನೇವೇದ್ಯ	' ನಕಲೀ ನಾರಾಯಣಾಚಾರ್ರು '	೨೪೫
ನಾಲ್ಕು ನಿಟ್ಟಿನ ನೋಟ	' ನಿರೀಕ್ಷಕರು '	೨೪೬

ಜಯಂತಿಯ ಮುಂಬೈ ಶಾಖಾ ಕಚೇರಿ

ಮೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಚರ್ಚಗೇಟ್ ಸ್ಟ್ರೀಟ್, ೨ನೆಯ ಮಾಳಿಗೆ
ಫೋರ್ಟ—ಮುಂಬಯಿ.

ಪುಣೆಯಲ್ಲಿ ನಮ್ಮ ಏಜಂಟರು

ಆರ್. ರಾಮಮೂರ್ತಿ ಮತ್ತು
ಕೃಷ್ಣಮೂರ್ತಿ ಅಧ್ಯಯರ್
ಕನ್ನಡ ಪೇಪರ್ ಏಜಂಟ್ಸ್
' ವಿಶ್ರಾಮಧಾಮ '
ಮನೆ ನಂಬರು ೧೨೪೨, ಪೂನಾ ೪

ಜಯಂತಿ

ಸಂಪುಟ ೬ | ೧ ನೆಯ ನವಂಬರ್ ೧೯೪೩ | ಸಂಚಿಕೆ ೬

ಬೆಳಕನೆರಚು!

★

‘ಆನಂದಕಂದ’

ಬೆಳಕನೆರಚು, ಬೆಳಕನೆರಚು, ಯುಗ-ಯುಗಾಂತ ಬೆಳಗಲಿ!
ಇಳೆಯ ಕವಿದ ಕಳ್ತಲೆಯನು ಕಳೆದೊಗೆ ದೀಪಾವಳಿ!

★ ಬರಿಯೆ ಒಂದೆ ಇರುಳು ಬಂದೆ,
ಮುಗಿಯಿತೇನು ಕಾರ್ಯ?
ವರುಷದಿ ನೂರಾರು ತಮಸಿ-
ನಿರುಳಿವೆ— ಅನಿವಾರ್ಯ!
ಅಂದಂದಿನ ಕಳ್ತಲಿಂದೆ
ಮುಂದಿಯ ಮನವಿಡಿದು ಮುಂದೆ—
ಕರೆದೊಯ್ಯುವರಾರು ತಂದೆ,
ಮರೆದು ಸರಿಯೆ ನೀನು?
ಮಿರುಗಿ ಮಾಯುವಾಗುತಿರುವ
ಮಿಂಚಿಗೆ ಬೆಲೆಯೇನು? ೧

★ ಬರುವುದು ದೀವಳಿಗೆಯೆಂದು
ತಿರೆಯೇ ಕುಣಿ-ಕುಣಿಯಿತು!
ತರುವುದು ಹಿರಿಬೆಳಕನೆಂದು
ಜನವು ದಿನವು ನೆನೆಯಿತು!
ಸಂತೆಗೆ ಹಸರಿಗನು ಬಂದು,
ಸಂತೆ ಹೆರಡಿ ದಿನವದೊಂದು,
ಕಂತೆ ಹೇರಿ ಮತ್ತೆ ದಾರಿ-
ಹಿಡಿದೆಲ್ಲಿಗೂ ನಡೆವನು;
ಅಂತೆ ನಿನ್ನ ಆಗಮವಿರೆ,
ಹಿರಿಮೆ ನಿನ್ನದೇನು? ೨

★ ನಿನಗಾಗಿಯೆ ಹೊಲ-ನೆಲಗಳು
ಬೆಳೆಯೊಳೇರಿ ನಿಂದಿವೆ;
ನಿನಗಾಗಿಯೆ ಹೊಳೆ-ಕೊಳಗಳು
ತಿಳಿಯ ನೀರನೊಂದಿವೆ!
ಬಿಳಿಯ ಹೊನ್ನ ಸೇವಂತಿಗೆ
ಹೊಳೆಮ ನಿನ್ನ ಮೈಕಾಂತಿಗೆ—
ಸವಿಗಾರರ ಬಗೆಯ ಸೆಳೆವ
ತವಕದಿ ಬಾಯ್ದೆರೆದಿವೆ;
ಬುವಿಯ ಜೀವಕುಲವೆ ದೇವ-
ದೂತ, ನಿನ್ನ ಕರೆದಿವೆ! ೩

★ ಕುರುಡಗೆರಡು ನಿಮಿಷ ಕಣ್ಣ
ನೋಟಗಳನೆ ನೀಡಿ,
ಧರೆಯ ಚಿನ್ನ ಸೊಬಗಿನನ್ನ-
ವೂಡುವಂತೆ ಮಾಡಿ,
ಮರಳಿ ಕಣ್ಣ ಕಳೆದೊಡವಗೆ
ಇರುವುದೇನು? ಬರಿ ತಗುಬಗೆ!
ವರುಷಕೊಂದು ಬಾರಿ ಬಂದು
ಬೆಳಕ ಕರೆವೆ ನೀನು;
ಉಳಿದ ಇರುಳ ತಮಸಿನುರುಳ
ಕಳೆಯೆ ದಾರಿಯೇನು? ೪

* * * *

ಬೆಳಕನೆರಚು, ಬೆಳಕನೆರಚು, ಯುಗಯುಗವಂ ಬೆಳಗಿಸು!
ಇಳೆಯ ಕವಿವ ಕಳ್ತಲಿರವ ಕಳೆದೇಗಲು ತೊಳಗಿಸು!



ಬೆಳಕಿಲ್ಲದ ದೀಪಾವಳಿ

'ಹೆಸರು ಮಾತ್ರವುಕ್ಕು; ಮನೆಯಲ್ಲಿ ಮಣ್ಣು ದಾವಣೆಗೆ ತಣ್ಣೀರು!' ಎಂಬಂತಾಗಿದೆ ಈ ಸಲದ ದೀಪಾವಳಿ. ಭಾರತೀಯರ ತತ್ತ್ವಜ್ಞಾನಕ್ಕೊಂದಗ್ಗ, ಪ್ರಧಾನವಾದ ಗೃಹಸ್ಥಜೀವನದಲ್ಲಿ, ದೀಪಾವಳಿಯೊಂದು ಬಹುಮುಖವಾದ ಹಬ್ಬ; ಸಂಸಾರಸಾಗರವನ್ನು ತೀರಿಸತಕ್ಕಂತಹ ಸುಸಂಧರ್ಭ; ಗಂಡ-ಹೆಂಡತಿ, ಅಕ್ಕ-ತಮ್ಮ, ಅಣ್ಣ-ತಂಗಿ, ಅತ್ತೆ-ಅಳಿಯ, ಗೆಳೆಯ-ಗೆಳೆಯ ಇವರೆಲ್ಲರ ಬಗೆಯೊಲವನ್ನು ಬೆಸೆದು ಒಪ್ಪವಾಗುವ ಸೌಂದರ್ಯಯೋಗ! ಎಂತಹ ದೀಪಾವಳಿಯನ್ನು ನಮ್ಮ ನಾಡಿನಲ್ಲಿ ಹೆಂಗಸರು-ಗಂಡಸರು, ಹಿರಿಯರು-ಕಿರಿಯರು, ಬಡವರು-ಬಲ್ಲಿದರು ಎಲ್ಲರೂ ಮನಸಾರೆ ಹಾರೈಸುವರು. 'ಸುಖ-ಜೀವನವೆಲ್ಲಿದೆ?' ಎಂದು ಹಲುಬುವ ಹಂಬಲಿಗರು, ದೀಪಾವಳಿ ಹಬ್ಬದ ಕಾಲದಲ್ಲಿಯ ನಮ್ಮ ನಾಡಿನ ಕುಟುಂಬಗಳನ್ನು ನೋಡಿ ಕಾಣಬೇಕು. ಒಬ್ಬರೊಬ್ಬರಲ್ಲಿ ಹರಿಯುವ ಪ್ರೀತಿಯ ಪ್ರವಾಹ, ಒಬ್ಬರೊಬ್ಬರಿಗಾಗಿ ತೋರುವ ತ್ಯಾಗಬುದ್ಧಿ, ಇದ್ದೆಲ್ಲ ದುಃಖವನ್ನು ಇದ್ದುದಿದ್ದಲ್ಲಿಯೆ ಅಡಗಿಸಿ ಉತ್ಸಾಹದ ಗುಡಿಯನ್ನಲ್ಲಿ ಕಟ್ಟಿ ನಿಲ್ಲಿಸುವ ಆಶಾವಾದಿತ್ವ, ಮಾನವ ಜೀವನಕ್ಕೆ ಸೊಗಸು-ಸೌಂದರ್ಯ-ಸರಸತೆಗಳು ಅಗತ್ಯವೆಂದೊಪ್ಪಿದ ರಸಿಕವೃತ್ತಿ, ಇವೇ ಮೊದಲಾದ ನಿಜವಾದ ಮನುಷ್ಯತ್ವದ ಲಕ್ಷಣಗಳೆಲ್ಲ ದೀಪಾವಳಿಯಲ್ಲಿ ತಲೆಯೆತ್ತಿ ನಿಂತಿರುವುವು. ಅದುದರಿಂದಲೆ ಮನುಷ್ಯರಾದ ನಾವೆಲ್ಲ, ಎಲ್ಲ ಹಬ್ಬಗಳಿಗಿಂತ ಹೆಚ್ಚಾಗಿ ದೀಪಾವಳಿ ಹಬ್ಬಕ್ಕಾಗಿ ತವಕ ಪಡುತ್ತಿದ್ದೆವು. ಆದರೆ ಈ ಸಲ, ದೀಪಾವಳಿ ಹಬ್ಬ ಮಾಡುವ ದಿನಗಳು ಮಾತ್ರ ಬಂದಿವೆ; ದೀಪಾವಳಿಯೆಲ್ಲಿದೆ? 'ಹೆಸರು ಮಾತ್ರ ದೀಪಾವಳಿ; ಮಿಣುಕುದೀಪದ ಜ್ಯೋತಿಯನ್ನೂ ಕಾಣುವಂತಿಲ್ಲ!' ಎಂಬಂತಾಗಿದೆ ನಮ್ಮ ಸ್ಥಿತಿ.

ಕತ್ತಲು ಮುಸುಕಿದ ಜೀವನದಲ್ಲಿ ಅವೆಗಳ ದೀಪದಾರತಿಯನ್ನು ಹಚ್ಚಿ, ಅವುಗಳ ಬೆಳಕನ್ನು ಅನುಭವಿಸಲು ಬಯಸಬೇಕೆಂಬ ಬಯಕೆಯನ್ನು ಹೆಚ್ಚಿಸಬಹುದಾದ ದೀಪಾವಳಿಯೊಂದು ಎಲ್ಲಿದೆ? 'ಸುಜಲಾಂ ಸುಫಲಾಂ, ಮಲಯಜ ಶೀತಲಾಂ, ಸಸ್ಯಶ್ಯಾಮಲಾಂ' ಎಂಬ ಭಾರತಮಾತೆಯ ಮಕ್ಕಳೆಂದು, ಕೂಳಿಲ್ಲದೆ ಸಾವಿರಸಂಖ್ಯೆಯಲ್ಲಿ ಸಾಯುತ್ತಲಿದ್ದಾರೆ. ಕಳೆದ ವರ್ಷದ ಬರಗಾಲದ ಬವಣೆಯಿಂದ ಬಳಲಿದ ಒಕ್ಕಲಿಗರು— ಮಳೆಯಾಗಿ ಬೆಳೆ ಬಂದುದರಿಂದ— ಈ ವರ್ಷವಾದರೂ ಹೊಟ್ಟೆತುಂಬ ತಿಂದು ಬದುಕೋಣವೆಂದಿರುವಾಗ, ಬೆಳೆದ ಬೆಳೆ ತಮ್ಮ ಬಾಯಿಗೆ ಬೀಳುವುದೋ ಇಲ್ಲವೋ ಎಂಬ ಭೀತಿಯ ಭೂತ ಅವರ ಮುಂದೆ ನಿಂತು— ಕ್ಷಣಕ್ಷಣಕ್ಕೂ— ಬೆದರಿಸುತ್ತಲಿದೆ. ರಸಿಕ-ಜೀವನವನ್ನು ನಿಜವಾಗಿಯೂ ಪರಿಪೋಷಿಸಬಲ್ಲವರಾದ ಮಧ್ಯಮ-ಸ್ಥಿತಿಯ ಜನರಂತೂ, ಬರಿಗೈಯವರಾಗಿ—ಕೆಲಸಕ್ಕಿಲ್ಲದೆ ಮನೆಯಲ್ಲಿ ಕೊಳೆತು—ಜೀವನ್ಮೃತರಾಗಿದ್ದಾರೆ. ಸಿರಿವಂತರು ಅವರ ಮನೆಯವರ ಮೊರೆಯಾಲಿಸದೆ ಸರಕಾರ ಸಿರಿವಂತ ಜನರ ಕೈಯಲ್ಲಿ ಕೊಟ್ಟ ಸ್ವಾತಂತ್ರ್ಯವನ್ನು ಬಿಡದೆ, ಕೂಳಿಗೆ ಕಾಳು ಹುಡುಕುವ ಅತಿ ಮುಕ್ತರಿದ್ದಾರೆ. ಅಧಿಕಾರವರ್ಗದ ದೊಡ್ಡವರಿಂದ ಸ್ವಾತಂತ್ರ್ಯದಾತರ ಕಡೆ, ಸರಕಾರ ಚಿಂತಿತರಾಗಿ ಶಿಕ್ಷೆಗಳನ್ನು ಕೊಡುತ್ತಿದ್ದಾರೆ. ಹಾಲು ಕೊಡುವುದೆ ಹೆಂಗುಸು ಹಸುಗೂಸುಗಳಿಗೆ ಎಷ್ಟು! ಎಷ್ಟು ಕೊಡುವುದೆ ದೀಪಕಾಲದ ಗುಡಿಸಲು-ಗೂಡಾರಗಳಿಗೆ ಎಷ್ಟು! ಅದೇ ಬೆಳಕಿನ ಕಳೆ ಬರಲು ನವಪ್ರೀತಿ ಸಂಪಾದನೆಗೆ, ಸ್ವಾಸ್ಥ್ಯವು ಕಣ್ಣುತಿರುಗಿದ ನಾಡನ್ನು ಬಿಡಲು ಬಿಟ್ಟಿದೆ. ಇಷ್ಟನ್ನು ಬಿಡಿ ಬಡವರಿಗೆ ಬೇಕಾದ ಆಹಾರವಸ್ತುಗಳನ್ನು ಕೊಡುವಿಕೆಯಕ್ಕೆಂದೇ ಬಿತ್ತನೆಗಳೂ, ಬಟ್ಟೆಗಳ ಮಳಿಗೆಗಳು, ದಲ್ಲಾಳಿಕಾರಗಳು ಸೇರಿಕೊಂಡಿವೆ. ಇಂತಹ ದೀಪಾವಳಿಯ ಹಬ್ಬದ ಉತ್ಸಾಹಕ್ಕೆ ಹಚ್ಚುವುದು ಎಲ್ಲಿಯದಿದೆ? ಆದರೂ ಸಂಪ್ರದಾಯವಾದಿಗಳಾದ ನಾವು ಕಣ್ಣುಮುಚ್ಚಿಕೊಂಡು 'ದೀಪಾವಳಿ ಬಂದಿತು' ಎಂದೇ ಎನ್ನುವೆವು; ಎಂದಿನಂತೆ ಅದು ತನ್ನ ಆನಂದಸೌಖ್ಯಗಳನ್ನು ತಂದೇ ತರುವುದೆಂದು ಭಾವಿಸುತ್ತಿರುವೆವು. ಹುಚ್ಚು ಭ್ರಮೆ! ಭ್ರಮೆ ಬರಗಾಲಕ್ಕೆ ಕಾರಣ, ಜನರ ಎದೆಯೊಡೆದು ಕೊರಗುತಿರಲಿ, ಇನ್ನೇ ದೀಪಕೆ.

ನಮಗೆ ನಿಜವಾಗಿಯೂ ಇಂದು ದೀಪಾವಳಿಯ ಸೊಗಸು-ಸಿರಿ ಸಿಕ್ಕಬೇಕಾದರೆ, ನರೆಮನೆಯಲ್ಲಿ ಮನೆಮಾಡಿಕೊಂಡಿರುವ ನಮ್ಮ ಜೀವಜ್ಯೋತಿಗಳು ಹೊರಕ್ಕೆ ಬಂದು, ಉಳಿದವರನ್ನೂ ಕಂಡು, ತಮ್ಮ ಪ್ರಭೆಯನ್ನು ಬೆಳಗಬೇಕು; ಜನಜಂಗುಳಿಯ ಮನದ ಮನೆಯನ್ನು ತೊಳೆಯಬೇಕು; ಅವರೆದೆ ಪ್ರೀತಿವತ್ಸಲತೆಯನ್ನದಕ್ಕೆ ತೋರಬೇಕು; ಅವುಗಳ ಆಶಾದೀಪಗಳನ್ನು ಹಚ್ಚಿ ಮೇಲಕ್ಕೇರಿಸಬೇಕು! ಅದಿಲ್ಲದೆ ಬರಿಯ ಈ ದಿನಗಳನ್ನು 'ದೀಪಾವಳಿ' ಎಂದು ಕರೆದರೆ ಅದೊಂದು ದೊಡ್ಡ ಅಭಾಸ; ತಿಳಿದವರು ನಗುವಂತಹ ಸಂಗತಿ.

ಆದರ್ಶ ಕಾಣದೆ ದಿಕ್ಕುಗೆಟ್ಟವರ ಮನೆಯಲ್ಲಿ, ಸಾವಿರ ಸಾವಿರ ಸೊಡರುಗಳು ಉರಿದರೇನು? ನಾಳೆಯ ಬದುಕಿನಲ್ಲಿಯೆ ಸಂದೇಹ ಹಿಡಿದವನು ನೂರಾರು 'ಕ್ಯಾಂಡಲ್' ಬೆಳಕಿನ ನೂರು ನೂರು ಬಲ್ಬುಗಳನ್ನು ಬೆಳಗಿಸಿದರೂ ಯಾವ ಸುಖವನ್ನು ಕಾಣಬಲ್ಲನು? ಹಸಿವೆಯ ಸ್ಮಶಾನದಿಂದ ಹಾಸಿಗೆ ಹಿಡಿದಿರುವ ಜೀವಚ್ಛವಗಳು, ಹಾರಾಡುವ ಆಕಾಶದೀಪಗಳಲ್ಲಿ ಯಾವ ಸೊಗಸನ್ನು ಕಂಡಾವು! ಬದುಕಿನ ದಾರಿಯನ್ನು ತಿಳಿದುಕೊಳ್ಳಲು ಬೇಕೇ ಬೇಕಾದುದು ನಿಚ್ಚಳವಾದ ಬೆಳಕು. ಬೆಳಕಿಗಾಗಿ ದೀಪಬೇಕು— ನಿಚ್ಚಳವಾದ ಬೆಳಕಿಗಾಗಿ ದೀಪಾವಳಿ ಬೇಕು. ದಾರಿಯನ್ನು ತೋರದ ದೀಪವು ದೀಪವೆನಿಸೀತೆ? ದೀಪಾವಳಿ ದೀಪಾವಳಿಯೆನಿಸೀತೆ? ಮೂಗಿಲ್ಲದ ಹೆಂಗಸೊಬ್ಬಳಿಗೆ 'ಸುಂದರಿ' ಎಂದು ಹೆಸರಿದ್ದಿತು; ಹಾಗೆಯೆ ಬೆಳಕಿಲ್ಲದ ಈ ದಿನಗಳಿಗೆ 'ದೀಪಾವಳಿ' ಎಂಬ ಹೆಸರು ಸಲ್ಲುವುದು! ಬರಲಿರುವ ದಿನಗಳಾದರೂ ನಮ್ಮ ನಾಡಿಗೆ ಬೆಳಕನ್ನು ತರಲಿ, ನಿಜವಾದ ದೀಪಾವಳಿಯನ್ನು ಜರುಗಿಸುವಂತಾಗಲಿ!

—ಸಂಪಾದಕರು.



೧. ಮಂಗಸಮಿತಿಯ ವರದಿ

(ಮುಂದೆ ಹೋಗಿದ್ದು)

(೫) ಎಲ್ಲ ತರದ ವಿಚಾರಗಳನ್ನು ಮಾಡಿ, ಕರ್ನಾಟಕದ ವಿಶ್ವವಿದ್ಯಾಲಯಗಳಿಗೆ 'ಇ ಬ್ರಾ ಹಿ ಮು' ವಿಶ್ವವಿದ್ಯಾಲಯ ಎಂದು ಹೆಸರಿಡಬೇಕೆಂದು ಒಮ್ಮತದ ನಿರ್ಣಯವಾಯಿತು.

ಟೀಪು:— ಇ = ಇಂಗ್ಲಿಶ್ ಮಾಧ್ಯಮದ ಕಿರಸ್ತಾನರು.
ಬ್ರಾ = ಬ್ರಾಹ್ಮಣರು.
ಹಿ = ಹಿಂದುಳಿದವರು.
ಮು = ಮುಸಲ್ಮಾನರು.

ಫೈದರು:— ಈ ರೀತಿ ಏಕೀಕರಣದ ಎರಡನೆಯ ಹೆಜ್ಜೆ.

(೬) ವಿಶ್ವವಿದ್ಯಾಲಯಗಳು ಬೇರೆಬೇರೆ ನಗರಗಳಲ್ಲಿ ನಡೆಯುತ್ತಿದ್ದರೂ ಅವುಗಳ ಕೇಂದ್ರ-ಕಚೇರಿ ಬೇರೊಂದು ಊರಲ್ಲಿ ಒಂದೇ ಕಡೆ ಇರತಕ್ಕದ್ದು. ಈ ಬಗ್ಗೆ ಸಾಮಾನ್ಯ ನಿಯಮವೆಂದರೆ ಇಡಿಯ ವರ್ಷದಲ್ಲಿ ಬೆಳಗಾಂವಿ, ಧಾರವಾಡ, ಗದಗು, ವಿಜಾಪುರ, ಕಾರವಾರ, ಮಂಗಳೂರು, ಮೈಸೂರು, ಬೆಂಗಳೂರು ಇವೆಲ್ಲ ಸ್ಥಳಗಳಲ್ಲಿ ಕೇಂದ್ರಕಚೇರಿಯು ಇರಲೇ ಬೇಕು. ಅದರಂತೆಯೆ ಉತ್ತರಕರ್ನಾಟಕದಲ್ಲಿ ಮರಾಟಿಗ, ಮೈಸೂರ ಕಡೆಗೆ ತಮಿಳಿನವ, ಬಳ್ಳಾರಿ ಕಡೆಗೆ ಆಂಧ್ರದವ, ಮಂಗಳೂರು ಕಡೆಗೆ ಕೊಂಕಣಿಯವ ಈ ಕಚೇರಿಗಳಿಗೆ ಉಪಾಧ್ಯಕ್ಷರಾಗಿರತಕ್ಕದ್ದು.

ಮಿ. ಸೂ.— ಏಕೀಕರಣದ ಮೂರನೆಯ ಹೆಜ್ಜೆ ಇದು.

(೭) ಇದರಂತೆಯೆ ವಿಶ್ವವಿದ್ಯಾಲಯಗಳ ಸ್ಥಾನ ಯಾವುದೇ ಇರಲಿ, ಕೇಂದ್ರಕಚೇರಿ ಯಾವ ಊರಲ್ಲಿಯೆ ಇರಲಿ. ಅವುಗಳ ಸ್ಥಾನ-ಉಪಪತಿ-ಅಲ್ಲ— ವೈಸ್‌ಚಾನ್ಸಲರ್ ಪದವಿಗಳ ವ್ಯವಸ್ಥೆ ಹೀಗಿರತಕ್ಕದ್ದು: ಪೂರ್ವಕ್ಕೆ ಬ್ರಾಹ್ಮಣೇತರ. ದಕ್ಷಿಣಕ್ಕೆ ಬ್ರಾಹ್ಮಣ, ಪಶ್ಚಿಮಕ್ಕೆ ಕಿರಸ್ತಾನ, ಉತ್ತರಕ್ಕೆ ಮುಸಲ್ಮಾನ. ಇವರು ಆಯಾ ದಿಕ್ಕಿನ ಕಡೆಯೆ ನೋಡುತ್ತಿರಬೇಕು.

ಮಿ. ಸೂ.— ಏಕೀಕರಣದ ನಾಲ್ಕನೆಯ ಎಂದರೆ ಕೊನೆಯ ಹೆಜ್ಜೆ. ಎಷ್ಟು ಕಾಲ್ಗಳೊ ಅಷ್ಟೇ ಹೆಜ್ಜೆಗಳಿರಬೇಕೆಂದು ಸಮಿತಿಯ ಅಭಿಪ್ರಾಯವಿದೆ,

* * *

೨. ಕೆಲವು ಮಂಗಪ್ರಶ್ನೆಗಳು

೧. ಕರ್ನಾಟಕದಲ್ಲಿ ಹಾಯ್ದು ಹೋಗುವ ರೈಲುಖಾತೆಯ ನೋಕರರಲ್ಲಿ ಎಲ್ಲರೂ ತಮಿಳರು ಇಲ್ಲವೆ ಮರಾಟಿಗರು. ಅದ್ದರಿಂದ ರೈಲಿನ ಹದ್ದನ್ನು ತಮಿಳುನಾಡಿಗೆ ಇಲ್ಲವೆ ಮಹಾರಾಷ್ಟ್ರಕ್ಕೆ ಸೇರಿಸಬೇಕಲ್ಲವೆ ?

೨. ಕರ್ನಾಟಕದ P. W. ಡಿಪಾರ್ಟ್‌ಮೆಂಟಿನ ಕೂಲಿಕಾರರೆಲ್ಲ ತೆಲುಗು ಮಾತನಾಡುವವರು. ಅದ್ದರಿಂದ P. W. D. ಕಟ್ಟಿದ ಕಟ್ಟಡಗಳಲ್ಲಿರುವವರೆಲ್ಲರ ಮಾತೃಭಾಷೆ ತೆಲುಗು ಎಂದು ಹೇಳಬೇಕಲ್ಲವೆ ?

೩. ಕರ್ನಾಟಕದಲ್ಲಿ ಪ್ರಾಣವಾಹಕಗಳನ್ನು ನಡೆಸುವವರೆಲ್ಲರ ಭಾಷೆ ಹೆಚ್ಚಾಗಿ ಉರ್ದು ಇದ್ದುದರಿಂದ, ಕರ್ನಾಟಕದ ಕುದಿರೆಗಳ ಮಾತೃಭಾಷೆಯೂ ಉರ್ದು ಇರಬೇಕೆಂದು ನಿಸ್ಸಂದೇಹವಾಗಿ ಹೇಳಬಹುದಲ್ಲವೆ ?

೪. ಎಲ್ಲ ಕನ್ನಡ ಜಿಲ್ಲೆಗಳಲ್ಲಿ ಮೇಲಧಿಕಾರಿಗಳು ತಮಿಳು, ತೆಲುಗು, ಇಂಗ್ಲಿಶ್, ಮರಾಠಿ, ಗುಜರಾತಿ, ಉರ್ದು ಭಾಷೆಗಳನ್ನು ಮಾತನಾಡುತ್ತಿರುವುದರಿಂದ, ಕರ್ನಾಟಕದ ಅಡಳಿತದ ಭಾಷೆ ಕನ್ನಡ ಅಲ್ಲ ಎಂಬುದು ಸ್ಪಷ್ಟವಲ್ಲವೆ ?

೫. ಬುದ್ಧಿವಂತರೂ ದೇಶಾಭಿಮಾನಿಗಳೂ ಯಾರವಡದಲ್ಲಿರುವುದರಿಂದ ಹೊರಗಿದ್ದು ಈ ಪ್ರಶ್ನೆಗಳನ್ನು ಮಂಗರಾಯನಿಗೆ ಕೇಳುವವರು—

—ಅಲ್ಲ, ಅಂದರೆ ಈ ಪ್ರಶ್ನೆಗಳಿಗೆ ಉತ್ತರವನ್ನು ಬರೆದು ಒಂದು ಪ್ರತಿಯನ್ನು ಮಂಗರಾಯನಿಗೂ ಇನ್ನೊಂದು ಪ್ರತಿಯನ್ನು ಅವಸ ಹೆಡ್ ಆಫೀಸಾದ ಕನ್ನಡ ಸಾಹಿತ್ಯ ಪರಿಷತ್ತಿಗೂ ಕಳುಹಿಸಬೇಕು. ಕಾಗದದ ಅಭಾವವಿದ್ದುದರಿಂದ ಒಂದೇ ಮಗ್ಗುಲಿಗೆ ಬರೆಯಬೇಕು— ಎಂದರೆ ಇನ್ನೊಂದು ಮಗ್ಗುಲನ್ನು ಉಪಯೋಗಿಸಲು ಅನುಕೂಲವಾಗುವುದು.

* * *

೩. ಒಂದು ವ್ಯುತ್ಪತ್ತಿ

ಬಳ್ಳಾರಿಯು ನಿಜವಾಗಿ ಎಂದರೆ ಇತಿಹಾಸದ ದೃಷ್ಟಿಯಿಂದ ಯಾವ ಪ್ರಾಂತಕ್ಕೆ ಸೇರಿದ್ದು ? ಈ ಶಬ್ದದ ಅನಾದಿಕಾಲದ ವ್ಯುತ್ಪತ್ತಿ ಏನು—? ಎಂದು ಮಂಗರಾಯನ ಕಚೇರಿಗೆ ರಾಶಿ-ರಾಶಿಯಾಗಿ ಕಾಗದಗಳು ಬಂದಿವೆ. ಪ್ರತಿಯೊಂದಕ್ಕೂ ಉತ್ತರ ಬರೆಯಲು ಸಾಧ್ಯವಿಲ್ಲೆಂಬ ವಿಷಾದದಿಂದ ಮಂಗರಾಯನು ಹೀಗೆ ಬರೆಯಬೇಕಾಗಿದೆ:—

(೧) **ಬಳ್ಳಾರಿ—** ಇದು ಮುಂಚೆ ಬೊಳ್ಳಾರಿ (= ಬೋಳಾರಿ ಎಂದಿದ್ದರೆ— ಬೋಳು-ಎಂದರೆ ದುಂಡು ಸುತ್ತಾವ ಕನ್ನಡಿಗರ ಎಂದರೆ ಮೈಸೂರಿಗರ ಅರಿ ಎಂದರೆ ಶತ್ರು ಎಂದರೆ ಒಟ್ಟು = ತಮಿಳು ಎಂದರ್ಥ.

(೨) **ಬಳ್ಳಾರಿ—** ಇದರ ಪ್ರಾಚೀನ ರೂಪವು ಬೆಳ್ಳಾರಿ (= ಬೆಲ್ಲಾರಿ) ಎಂದಿದ್ದರೆ, ಬೆಲ್ಲದ (ಸಿಹಿ ಪದಾರ್ಥಗಳ) ಅರಿ ಎಂದರೆ ಶತ್ರು, ಎಂದರೆ ಅಸಹ್ಯವಾಗಿ ಖಾರವನ್ನು ತಿನ್ನುವ ತೆಲುಗರು ಎಂದರ್ಥ.

ಕೊನೆಯದಾಗಿ (೩) **ಬಳ್ಳಾರಿ—** ಇದರ ಪೂರ್ತಿಯಾದ ಸ್ವರೂಪ ಬಲ್ಲಾರಿ (= ಬಲ್ಲವರ ಅರಿ) ಎಂದು ಆಗಿದ್ದರೆ, ಬಳ್ಳಾರಿಯು ಕನ್ನಡ ಎಂದು ನಿಸ್ಸಂದೇಹವಾಗಿ ಹೇಳಬಹುದೆ ?

ಇನ್ನಾರಿಗಾದರೂ ಉಪದ್ವ್ಯಾಪ— ಅಲ್ಲ-ವ್ಯುತ್ಪತ್ತಿ ಬೇಕೆ ? ಬೇಕಿದ್ದರೆ ತಂತಿಯನ್ನು ಕಳುಹಿಸಿ.

ವಿಳಾಸ :—

ಮಂಗರಾಯ ಹಳ್ಳಿರಿ C/o ಕನ್ನಡ ಸಿರಿ

* * *

ನಿನ್ನ ನೆಲೆ !

ಶ್ರೀ. ನಾರಾಯಣ ಸಂಗಮ, ಬಾಗಿಲುಕೋಟೆ.

(ರವೀಂದ್ರರ ಮೂಲ ಬಂಗಾಲಿಯ ಕವನದಿಂದ)

ಯಾವ ಸಂತೆಯಲ್ಲಿ ನೀನು ಮಾರಬಯಸುನೆ ?
ಎಲ್ಲಿ ಹೇಳು ನಿನ್ನ ಸ್ಥಾನವೆನ್ನ ಗಾನವೆ ?
ಪಂಡಿತಜನ ಮಂಡಿತರಹ ಜ್ಞಾನರತ್ನರಾ
ಓಣಿಯಲ್ಲಿ ಹೊಗಲು ನಿನಗೆ ಮಾನವಿಸ್ತರಾ ?
ಮಿಮುಳ ನುಸೆದು ಮಾತನೆಸೆದು ನಸ್ಯಧೂಳಿಯು
ಮೂಗ ಮುಸುಗಲಲ್ಲಿ ನಿಲ್ಲಲಾರ ಧೈರ್ಯವು ?
ಸದಾ ತುಮುಲ ತರ್ಕ : 'ಘಟಾಧಾರ ತೈಲವೊ,
ತೈಲಕಿಂಬು ಘಟವು ದಿಟವು ಇದುವೆ ಸಾಜವೊ ?'
ಶಬ್ದಸೂತ್ರ ವೇದಶಾಸ್ತ್ರ ಅಲಂಕಾರವು,
ಸಾಂಖ್ಯಯೋಗ ಬಲ್ಲೆನೆಂಬ ಅಹಂಕಾರವು !
ಆಹ ! ತಾಲಗ್ರಂಥ ರಾಶಿ-ರಾಶಿಯೊಟ್ಟಿದೆ,
ಮೋಹಧ್ವಾಂತ ನಾಶನಕ್ಕೆ ಕಟಿಯ ಕಟ್ಟಿದೆ.
ಅಲ್ಲಿಯೊಂದು ಬದಿಗೆ ತುದಿಗೆ ನಿನ್ನ ಹೆಸಿಯನೆ
ಹಾಸಿಕೊಳುವ ಹಂಬಲಿದೆಯೆ ? ಹೇಳು ಬೇಗನೆ ! ''
ಎನಲು, ಗಾನ ಕೇಳಿ ಬೆಚ್ಚಿ ಗುಂಯಿಗುಟ್ಟಿತು ;
ಮರೆಗೆ ಸರಿದು ಒಲ್ಲೆನೊಲ್ಲೆನೊಲ್ಲೆನೆಂದಿತು !

೨

ಯಾವ ಮಂದೆಯಲ್ಲಿ ನೀನು ಮಾರುವೋಗುವೆ ?
ಎಲ್ಲಿ ಹೇಳು ನಿನ್ನ ಸೆಳೆತವೆನ್ನ ಗಾನವೆ ?
ಶಿಲಾಮಯದ ಸೌಧದಲ್ಲಿ ಭಾಗ್ಯವಂತರು—
ವಿಲಾಸಿನಿಯರಲ್ಲಿ ಚಿರವು ಭೋಗನಿರತರು—
ದಂತ ತೇಗು ಗಂಧಖಚಿತ ಗೂಡುಗೊಂದಿಗೆ
ಮಾಡಮಂಚ ತುಂಬ ಗ್ರಂಥ—ಪಂಚಶತ ಮಿಗೆ !
ಪುಟದ ಮಗುಚರಾರು, ಲಿಪಿಯ ಹೊಳಪು ಹಾರದು;
ಮೂಸದಿರುವ ಮಲ್ಲಿಗೆಯೊಲು ಮಾಸದಿರುವುದು !
ಭೃತ್ಯ ನಿತ್ಯ ಜತನದಿಂದ ಧೂಳಿಯುಡುಗುವ ;
ಸಾಲುಗೆಡಿಸದಂತೆ ಸರಿಸಿ ಮತ್ತೆ ಮಡಗುವ.
ಓ ! ನನ್ನ ಸ್ವಚ್ಛಂದ ಛಂದರಾಣಿಯೆ,
ಅಲ್ಲಿ ವಾಸ ಲೇಸೆ ನಿನಗೆ ? ಮನದ ವಾಣಿಯೆ ! "
ಗಾನವಿದನು ಕೇಳಿ ಕಿವಿಯಕಚ್ಚಿ ನಿಂದಿತು ;
ಮುರ್ಮುರಿಸಿ ಒಲ್ಲೆನೊಲ್ಲೆನೊಲ್ಲೆನೆಂದಿತು.

"ಯಾವ ಸಂತೆಯಲ್ಲಿ ನೀನು ಮಾರುವೋಗುವೆ ?
ಎಲ್ಲಿ ಹೇಳು ನಿನಗೆ ವಾಸವೆನ್ನ ಗಾನವೆ ?
ಶಾಲೆ-ಹುಡುಗ ಮೂಲೆ ಹಿಡಿದ, ಪರೀಕ್ಷೆ ಬಂದಿದೆ,
ಓದಲೆಂದ; ಮನವುಮಾತ್ರ ಎತ್ತೊ ಸಂದಿದೆ !
ಘಟಕದಂಥ ಪಠ್ಯಪುಸ್ತಕಂಗಳೊಟ್ಟಿವೆ ;
ಯಾರ ಭಯಕೊ—ಕಥಾ-ಕಾವ್ಯ ಜಂತೆಗಿಟ್ಟಿವೆ!
ಅಸ್ತವ್ಯಸ್ತ ಚೂರು-ಚಿಂದಿ ಕಸದಗೂಡಲು,
ಅಲ್ಲಿ ಮನಸೆ ಹೇಳು ಗಾನ ಆಟ ಹೂಡಲು ? ''
ಗಾನವಿದನು ಕೇಳಿ ಮೌನಮುಖದಿ ನೋಡಿತು,
ದ್ವಿಧಾದ್ವಂದ್ವದಲ್ಲಿ ತಾನು ತೂಗಾಡಿತು.

೪

'' ಯಾವ ಸಂತೆಯಲ್ಲಿ ನೀನು ಮಾರುವೋಗುವೆ ?
ಎಲ್ಲಿ ಹೇಳು ನಿನಗೆ ತಾಣವೆನ್ನ ಗಾನವೆ ?
ಮನೆಯ ವಧುವು ಲಕ್ಷ್ಮಿ ಗೃಹಿಣಿ ಕಾರ್ಯನಿರತಳು —
ಅನುವು ದೊರೆಯೆ ಕವನ ಪಾಡಿ ಕೆಲಸ ಮರೆವಳು.
ತಲೆಯ ದಿಂಬ ತಲದಲಡಗಿಸಿಟ್ಟ ಹೊತ್ತಿಗೆ—
ಒಲುಮೆಯಿಂದ ಓದಲೆಂದು ತಿಳಿದು ಮೆತ್ತಗೆ—
ನೋಡುವಲ್ಲಿ, ಪುಟಗಳೆಲ್ಲ ಪುಟ್ಟಕೂಸಿನಾ
ತುಂಟ ಕೈಗೆ ಸಿಲುಕಿ ಕಲಕಿ ಹರಿದು ಹಾಸಿವೆ.
ಕಣ್ಣ ಕಪ್ಪು ಹಣೆಯ ಕೆಂಪು ಗಲ್ಲದರಿಸಿಣ—
ಕಬರಿ-ಕುಸುಮ.ಗಂಧತೈಲದಿಂದ ಚಿತ್ರಣ
ಸೆಜ್ಜೆ ಸಾರಲಿಂತು ಛಿನ್ನ-ಚಿತ್ರ ವೇಷವೇ,
ಹೆಜ್ಜೆಹೆಜ್ಜೆಗುಂಟು ವಿಪದ; ನಿಲಲು ತೋಷವೆ ? ''
ಎದೆಯು ಉಬ್ಬಿ ಉಸಿರ್ಕಟ್ಟಿ ಸ್ತಬ್ಧವಾಯಿತು ;
ಕಂಪಿಸುತ್ತ ಗಾನ ತಾನು ಲೋಭದೋರಿತು.

೫

" ಯಾವ ಸಂತೆಯಲ್ಲಿ ನೀನು ಮಾರುವೋಗುವೆ ?
ಯಾರ ನೆರೆಯ ಸಾರೆ ನೀನು ಪ್ರಾಣ ಪಡೆಯುವೆ ?
ಪ್ರೇಮಮುಗ್ಧ ಸುಖಕೆ ಲುಬ್ಧ ತರುಣಯುಗಲವು—
ಮೈಮರೆತು ಮಂಕರಾಗಿ ಗಾನಲೋಲವು—
ಸಜಲನಯನದಲ್ಲಿ ಮಿಂಚ ಮಂದಹಾಸವು—
ಜೊನ್ನವಕ್ಕಿ ತಾವದೆಂಬ ಬಗೆವಿಲಾಸವು—
ಹಕ್ಕಿ-ಹೊಳೆಯು ಹಾಡಿ, ಬೆಳೆಯು ಬಳ್ಳಿ-ಎಲೆಗಳು
ಮೊಗ್ಗೆ ಹೂಗಳೆಲರ್ಗೆ ಸರಿದು ತಾಲ-ಲಯಗಳು—
ಇದುವೆ ಕೇಳಿ ತಣಿವರಿದೆಯ ಕಡೆಗೆ ಸಾರೆಯಾ ?
ಮದುವೆ ಮಾಡಿ ಮಧುರ ಬಾಳು ಎನಿಸಲಾರೆಯಾ ?
ಅವರ ಪ್ರಣಯ ವೇಣುವಾಗಿ ವಿಶ್ವವಾಣಿಯೇ,
ಬಾಜಿಪಲ್ಲಿ ರಾಜಿಸಿರಲದಾವ ಊಣೆಯಾ ? ''
ಇದಕೆ ಗಾನದೆದೆಯು ತಿದಿಯದಾಗಿ ತೂರಿತು ;
ದ್ವಿಧಾದ್ವಂದ್ವವೊಂದು ಇಲ್ಲವೆಂದು ಸಾರಿತು !
ಹಾರಿ ಬಿದ್ದು ಪುಟದು ಎದ್ದು ಹುಂಗುಟ್ಟಿತು;
ಅಲ್ಲಿ ಸಲುವೆನೆಂಬ ಸೊಲ್ಲು ಕೇಸರಿಟ್ಟಿತು. !

ಚೇತರಿಸುತ್ತಿರುವ ಚೀನ

೨

ಚೀನ ದೇಶದ ಕೀರ್ತಿಕಳಸದ ಹೊಳಪು

ಶ್ರೀ. ರಂಗನಾಥ ನೆಗಳೂರ ಬಿ.ಎ., ಬಿ.ಟಿ. ಮಿತ್ರಮಂಡಲಿ, ಹುಬ್ಬಳ್ಳಿ

★

ಇಂದಿನ ಚೀನದ ಸಾಮಾಜಿಕ-ರಾಜಕೀಯ ಜೀವನಕ್ಕೆ ನಾಲ್ಕು-ಐದುಸಾವಿರ ವರುಷಗಳ ಹಿಂದಿನ ಇತಿಹಾಸದ ತಳಹದಿಯಿದೆ. ತಳಹದಿಯನ್ನು ಚೆನ್ನಾಗಿ ತಿಳಿದುಕೊಂಡಲ್ಲದೆ ಇಂದಿನ ಜೀವನದ ಮೇಲೆ ಬೆಳಕು ಬೀಳಲಾರದು!

★

ಸದ್ಯದ ಚೀನವನ್ನು ತಿಳಿಯಬೇಕಾದರೆ, **ಡಾ. ಸನ್**, ಮತ್ತು **ಚಾಂಗ್‌ಕೈಶೇಕರ** ಕಾರ್ಯವನ್ನು ತಿಳಿಯಬೇಕಾದರೆ, ತಳಹದಿಯಂತಿದ್ದ ಚೀನದ ಇತಿಹಾಸವನ್ನು ತಿಳಿಯಬೇಕು; ಡಾ. ಸನ್‌ನ ಕೈಗೆ ಬಂದಾಗ ದೇಶದ ಸ್ಥಿತಿ ಏನಿತ್ತು—? ಎಂಬುದನ್ನು ತಿಳಿಯಬೇಕು. ಅದರ ಜ್ಞಾನದಿಂದ ಅವನೂ ಅವನ ಪಟ್ಟಶಿಷ್ಯ ಚಾಂಗ್‌ಕೈಶೇಕನೂ ಹೇಗೆ ಮುಂದುವರಿದಿದ್ದಾರೆಂಬುದು ತಿಳಿವುದು.

ಚೀನವು ಒಂದು ವಿಚಿತ್ರ ದೇಶ. ಜಗತ್ತಿನ ಯಾವುದೇ ಭಾಗದಲ್ಲಿರದಷ್ಟು ಜನವಸತಿಯಿದೆ; ಜನತೆಯೂ ಉಳಿದ ದೇಶದ ಜನತೆಗಿಂತ ಬೇರೆಯಾಗಿದೆ. ಅವರ ವೇಷ-ಭೂಷಣ ಬೇರೆ, ನಡೆ-ನುಡಿಗಳು ಬೇರೆ, ಆಚಾರ-ವಿಚಾರಗಳು ಬೇರೆ. ಹೀಗಿದ್ದು, ಒಂದು ಮಹತ್ತ್ವದ ಮಾತೆಂದರೆ, ಈ ದೇಶವು—ಅತಿ ದೊಡ್ಡದಾದ ದೇಶವು—ಕಳೆದ ಮೂರುಸಾವಿರ ವರುಷಗಳಿಂದ ಒಂದೇ ಬಗೆಯಾಗಿ ವಿಚಾರಿಸುತ್ತಲಿದೆ; ಇಡಿ ದೇಶದ ತುಂಬ ಒಂದೇ ಮಾದರಿಯ ಸಂಸ್ಕೃತಿ-ಸಂಪ್ರದಾಯಗಳು; ಒಂದೇ ಲಿಪಿ—ಸಾಹಿತ್ಯ. ಇಷ್ಟು ವಿಶಾಲವಾದ ದೇಶದಲ್ಲಿ ಭಿನ್ನ ಪ್ರಕೃತಿಗಳು ಇರುವ ಸಂಭವ ಹೆಚ್ಚು. ಹೀಗಿದ್ದರೂ, ಒಂದೆ ಒಂದು ಸಾಮಾನ್ಯ ಸಂಸ್ಕೃತಿಯ ಸೆಲೆಯು ಹರಿಯುತ್ತದೆ. ಇದಕ್ಕೆ ಕಾರಣಗಳು ಮುಖ್ಯವಾಗಿ ಎರಡು: ಒಂದು ಆ ದೇಶದ **ಆಕಾರ**, ಇನ್ನೊಂದು ಆ ದೇಶದ **ಇತಿಹಾಸ**. ಆಕಾರವು ಭೌಗೋಲಿಕ ರಚನೆಯನ್ನು ಒಳಗೊಂಡಿದ್ದು, ಅದರ ಪ್ರಭಾವ ಜನತೆಯ ಮೇಲೆ ಆಗುವುದು. ಪ್ರಭಾವ ಬಿದ್ದು ಬೆಳೆದು ಬಂದ ಮೇಲೆ— ಇತಿಹಾಸವನ್ನು ಅರಿತ ಮೇಲೆ— ಭೌಗೋಲಿಕ ಕಾರಣಗಳನ್ನು ತಿಳಿದರೆ, ಆಗ ಕಾರ್ಯ-ಕಾರಣ ಸಂಬಂಧವು ತಿಳಿವುದು.— ಅದಕ್ಕೆ ಚೀನದ ಸದ್ಯದ ಜನತೆಯನ್ನೂ ಅವರ ಸಾಹಸದ ಕಾರ್ಯವನ್ನೂ ತಿಳಿಯಬೇಕಾದರೆ ಅವರ ದೇಶದ ರಚನೆ, ಜನರ ಇತಿಹಾಸ ತಿಳಿವುದಗತ್ಯ. ಮೊದಲು ಜನರ ಇತಿಹಾಸವನ್ನು ತಿಳಿದುಕೊಳ್ಳೋಣ.

ಚೀನದೇಶದ ಇತಿಹಾಸವು ಹೆಚ್ಚಿನ ಕಾಲಾವಧಿಯನ್ನು ವ್ಯಾಪಿಸಿದೆ. ಇಂದಿಗೆ ಸುಮಾರು ೪೦೦೦-೫೦೦೦ ವರುಷಗಳ ಹಿಂದಿನ ತನಕ ಚೀನದ ಇತಿಹಾಸವು ದೊರೆವುದು. ಇತಿಹಾಸಪೂರ್ವದ (Pre-historic) ಕುರುಹುಗಳೇನು ಕಡಿಮೆಯಿಲ್ಲ. ಭಾರತ-ಇಜಿಪ್ತ-ಬ್ಯಾಬಿಲೋನಿಯಾ-ಸುಮೇರುಗಳ ಜೊತೆಗೆ ನಿಲ್ಲುವುದು. ಅಲ್ಲದೆ ಇವೆಲ್ಲವನ್ನೂ ಮೀರಿ ನಿಲ್ಲುವುದು ಚೀನವು. ಮಾನವರ ಇತಿಹಾಸದ ಕುರುಹುಗಳಲ್ಲಿ ಎಲ್ಲಕ್ಕೂ ಹಳೆಯದೆಂದರೆ ಚೀನದಲ್ಲಿ ಸಿಕ್ಕದ್ದು: **ಚೌಕೌಟಿಯೂನ್** ಎಂಬಲ್ಲಿ ತಲೆಬುರುಡೆ—ಕೆಲವು ಎಲಬುಗಳು, ಒಂದು ಗುಹೆಯಲ್ಲಿ ಸಿಕ್ಕಿವೆ. ಅವು ಸುಮಾರು ೧ ಲಕ್ಷ ವರುಷಗಳ ಹಿಂದಿನವೆಂದು ಶಾಸ್ತ್ರಜ್ಞರಿಂದ ನಿರ್ಣಯಿತವಾಗಿವೆ. ಚೀನವು ಹಳೆಯ ದೇಶ; ಅತಿ ಪ್ರಾಚೀನ ರಾಷ್ಟ್ರ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಬಹು ಹಳೆಯ ಕಾಲದಿಂದ ಐತಿಹಾಸಿಕ ಸಂಗತಿಗಳ ಆಘಾತದಿಂದ ಪಡಗು-ಗಟ್ಟಿದ ದೇಶವಾಗಿದೆ ಅದು. ಅದಕ್ಕಾಗಿ ಸದ್ಯದ ಯಾವ ವಿಚಾರವನ್ನು ತಿಳಿಯಬೇಕಾದರೂ, ಹಿಂದಿನ ಆ ದೇಶದ ಜನತೆಯ ಜೀವನವನ್ನೂ ವಿಚಾರವನ್ನೂ ತಿಳಿಯಲೇಬೇಕಾಗುವುದು.

ಆದರೆ, ಇಷ್ಟು ಕಾಲಾವಧಿಯವರೆಗೆ ಹಬ್ಬಿದ ಇತಿಹಾಸವನ್ನು ವಿವರವಾಗಿ ಇಲ್ಲಿ ಹೇಳಲು ಆಗದು. ಅದು ಶಕ್ಯವೂ ಇಲ್ಲ. ಅಷ್ಟು ವಿವರಣಾತ್ಮಕ ಅಭ್ಯಾಸದ ಆಗತ್ಯವೂ ಸದ್ಯಕ್ಕೆ ಇಲ್ಲ.

ಚೀನಾದೇಶದ ಇತಿಹಾಸವು ಸಾಮಾನ್ಯವಾಗಿ 'ಮನೆತನ'ಗಳ ಕಾಲಾವಧಿಯಿಂದ ವಿಭಾಗಿಸಲ್ಪಟ್ಟಿದೆ. ಆಳುವ ಮನೆತನಗಳು ಬದಲಾದರೂ, ಯಾವುದೇ ಕಾಲದಲ್ಲಿ ಚೀನೀ ಸಂಸ್ಕೃತಿಯು ಹೊನಲು ಹರಿಗಡಿಯಲಿಲ್ಲ. ಹಿಂದಿನವರು ಬೆಳೆಯಿಸಿದ ಸಂಸ್ಕೃತಿಯನ್ನು, ತಮ್ಮ ಕಾಲದ ಹೊಸ ಪದ್ಧತಿ-ಸಂಪ್ರದಾಯಗಳಿಂದ ಹೊಸ ಮೆರುಗುಕೊಟ್ಟು ವೃದ್ಧಿಮಾಡುತ್ತಿದ್ದರು.

ಚೀನದ ಇತಿಹಾಸದಲ್ಲಿ ಆಳಿದ ಒಟ್ಟು ಮನೆತನಗಳು ಸುಮಾರು ಇಪ್ಪತ್ತು. ಕ್ರಿ. ಶ. ಪೂರ್ವದ ೨೨೦೦ ರಿಂದ ಮೊದಲಾಗುವ ಇತಿಹಾಸವು ಹ್‌ಸಿಯಾ ಮನೆತನದಿಂದ ಪ್ರಾರಂಭವಾಗಿ, ೧೯೧೧ ರಲ್ಲಿ ಕಿತ್ತೊಗೆಯಲ್ಪಟ್ಟ 'ಮಾಂಚು' ಮನೆತನದವರೆಗೆ ಹಬ್ಬಿದೆ. ೧೯೧೧ ರಿಂದ ಈಚೆ ಚೀನದಲ್ಲಿ ಪ್ರಜಾಸತ್ತೆ. ೧೯೧೧ ರಿಂದ ಇಂದಿನವರೆಗಿನ ಇತಿಹಾಸವು ಬೇರೆ; ೧೯೧೧ ರ ಮೊದಲಿನ ಇತಿಹಾಸ ಬೇರೆ. ಈಚೆಯ ಸಂಗತಿಗಳಿಗೆ ಆಚೆ ನಡೆದ ಸಂಗತಿಗಳು ನೆಲಗಟ್ಟು.

ಆಳಿದ ಮನೆತನಗಳ ಪಟ್ಟಿಯೊಂದನ್ನು ಕೊಟ್ಟು, ಅವರವರು ಚೀನಕ್ಕೆ—ಅದರ ಸಂಸ್ಕೃತಿಯು—ಯಾವ ಭಾಗವನ್ನು ಕೊಟ್ಟಿದ್ದಾರೆ ಎಂಬುದನ್ನು ವಿಚಾರಿಸೋಣ.

ಕ್ರಿ. ಶ. ಪೂ.

ಇತಿಹಾಸಪೂರ್ವ :	ಕ್ರಿ. ಪೂ. ೨೨೦೦ರ ಮೊದಲು.
ಹ್‌ಸಿಯಾ :	ಸು. ಕ್ರಿ. ಪೂ. ೨೨೦೦–೧೭೬೬.
ಶಾಂಗ್ ಅಥವಾ ಯಿನ್ :	ಸು. ಕ್ರಿ. ಪೂ. ೧೭೬೬–೧೧೫೦.
ಚೌ :	ಸು. ಕ್ರಿ. ಪೂ. ೧೧೫೦–೨೨೧.
ಚಿನ್ (ಶಿನ್) :	ಕ್ರಿ. ಪೂ. ೨೨೧–೨೦೭.
ಹಾನ್ :	ಕ್ರಿ. ಪೂ. ೨೦೬ರಿಂದ— ಕ್ರಿ. ಶ. ೨೨೦.

ಕ್ರಿಸ್ತಶಕದ ನಂತರ

ಮೂರು ರಾಜ್ಯಗಳು : ಆರು ಮನೆತನಗಳು :	೨೨೦–೫೮೯.
ಸುಯಿ :	೫೮೯–೬೧೮.
ಟಾಂಗ್ :	೬೧೮–೯೦೭.
ಐದು ಮನೆತನಗಳು :	೯೦೭–೯೬೦.
ಸುಂಗ್ :	೯೬೦–೧೨೭೯.
ಯುವಾನ್ ಅಥವಾ ಮೊಂಗೊಲ್ :	೧೨೮೦–೧೩೬೮.
ಮಿಂಗ್ :	೧೩೬೮–೧೬೪೪.
ಚಿಂಗ್ ಅಥವಾ ಮಾಂಚು :	೧೬೪೪–೧೯೧೧.

ಚೀನದ ಇತಿಹಾಸವು ಕ್ರಿ. ಶ. ಪೂ. ಸುಮಾರು ೨೦೦೦ ರಿಂದ ಪ್ರಾರಂಭವಾಯಿತೆನ್ನಬಹುದು. ಆಗ ಯಾಂಗ್‌ತ್ಸೆ ಮತ್ತು ಹಳದಿ ನದಿಯ ಕೊಳ್ಳದೊಳಗಿನ ಮೊಂಗೊಲ್ ಜನಾಂಗದವರು ಒಂದೆಡೆ ಸೇರಿ, ಆಮೇಲೆ ಸುತ್ತೆಲ್ಲ ಹಬ್ಬಿ, ಮೊದಲನೆಯ 'ಸಾಮ್ರಾಜ್ಯ' ಕಟ್ಟಿದರು. ಆಗಿನ ಆ ಸ್ಥಿತಿಗೆ ಸಾಮ್ರಾಜ್ಯವೆನ್ನಬೇಕೊ ಬಾರದೊ ಎಂಬುದು ತಿಳಿಯದು; ಆದರೆ ಸುತ್ತಲಿನ ಪ್ರದೇಶದಲ್ಲಿರುವವರು ಎಲ್ಲರೂ ಈ ಜನತೆಯ ಅಂಕಿತದಲ್ಲಿದ್ದರು, ಎಂದ ಮೇಲೆ ಅದೊಂದು ಸಾಮ್ರಾಜ್ಯವೆ. ಸಾಮ್ರಾಜ್ಯವೆಂದಮೇಲೆ ಆಳುವವನೊಬ್ಬ—ಅವನೇ ಸಮ್ರಾಟ. ಯಾವುದೊಂದು ವ್ಯಕ್ತಿ ಅನೇಕ-ಬಹುಸಂಖ್ಯಾಕ ಜನತೆಯ ಮೇಲೆ ಪ್ರಭಾವ ಬೀರುವುದೆಂದ ಬಳಿಕ, ಆ ವ್ಯಕ್ತಿಯ ಬಗೆಗೆ ಜನತೆಯಲ್ಲಿ ವಿಶೇಷ ಆದರ-ಭಕ್ತಿ ಬರುವುದು. ಅನಾಗರಿಕ ಕಾಲದ ಆ ಸ್ಥಿತಿಯಲ್ಲಿ ಆ ವ್ಯಕ್ತಿಯೆ ಸರ್ವಶಕ್ತಿಯುತ ದೇವಾಂಶನೆಂಬ ವಿಚಾರ ಬಂದರೆ ಆಶ್ಚರ್ಯವೇನು? ಹಾಗೆಯೆ ಆಯಿತು. ಇಡಿ ದೇಶದ ಜನತೆಯ ಮೇಲೆ ಕಣ್ಣಿಟ್ಟು, ಅವರನ್ನು ತನ್ನ ಅಧಿಕಾರದ ಒಳಗೆ ಹಿಡಿದಿಡುವ ಸಾಮರ್ಥ್ಯ ಕಡಿಮೆಯದೆ? 'ಸಮ್ರಾಟನು, ದೇವಾಂಶನು ದೇವರ ಮಗನೆ!' ಎಂಬ ಕಲ್ಪನೆಯು ಬಂದಿತು. (ಇದೇ ಕಲ್ಪನೆಯು ಮುಂದೆ ಜಪಾನಿಗಳಲ್ಲಿಯೂ ಸೇರಿ, ಅವರು 'ಸಮ್ರಾಟನೆ ದೇವರು!' ಎಂದು ತಿಳಿದಿರಬಹುದು.)

ನಾಡಿಗೆ ಹಿರಿಯ ಸಮ್ರಾಟ; ಅವನನ್ನು ಆದರಿಸುವಂತೆ ಮನೆಯ ಹಿರಿಯನನ್ನೂ ಆದರಿಸುವುದಕ್ಕೆ ಮೊದಲಾಯಿತು. ಈ ಕಾಲಕ್ಕೆಯೆ ಕುಟುಂಬವು ಸಂಸ್ಥೆಯಾಗಿರಬೇಕು. ಕುಟುಂಬದ ಹಿರಿಯನು 'ಪಿತೃ'ವಾಗಿರಬೇಕು. ಅವನ ಪೂಜೆಯು ಪ್ರಾರಂಭವಾಗಿರಬೇಕು—ಅದು ಅವನು ತೀರಿದನಂತರವೂ ನಡೆಯುವಂತೆ ಆಗಿರಬೇಕು. ಒಂದು ನಾಡಿನ ಜನರು ಒಬ್ಬ ಸಮ್ರಾಟನ ಆಡಳಿತಕ್ಕೆ ಒಳಪಟ್ಟಕೂಡಲೆ, ನಾಡಿನ ಜನದ ಹಿತದ ದೃಷ್ಟಿಯಿಂದ ಅನೇಕ ಚಿಕ್ಕ-ಪುಟ್ಟ ಉದ್ಯೋಗಗಳು ಮೊದಲಾಗಿರಬೇಕು. ಒಟ್ಟಿನಲ್ಲಿ ಎಲ್ಲ ಪದ್ಧತಿ-ಸಂಪ್ರದಾಯ-ಉದ್ಯಮಗಳು—ಸಂಸ್ಕೃತಿಯ ಮೊದಲ ಮೆಟ್ಟಲು—ಕಾಂಬುದು ಮೊದಲ 'ಮನೆತನ'ದ ಆಳಿಕೆಯಲ್ಲಿ.

ಸಂಸ್ಕೃತಿಯು ಬೆಳೆದು ಉಳಿಯಬೇಕಾದರೆ ಜನತೆ ತಳವೂರಬೇಕು. ಈ ಮೊದಲ ಮನೆತನದ ಸಾಮ್ರಾಜ್ಯವು ಉದಯವಾಗುವ ಮೊದಲು, ಈ ಜನತೆಯೆಲ್ಲವೂ 'ಓಡಾಡಿ'ಯೆ (Nomads) ಇತ್ತು. ತಾಣದಿಂದ ತಾಣಕ್ಕೆ ಅಲೆಯುವ ವಿಚಾರ-ವಿದ್ಯಾಗ ಕೊನೆಬಾಳುವ ಯಾವುದು ಹುಟ್ಟಿಬರಬೇಕು? ಜೀವನವೆ ಸ್ಥಾಯಿಯಲ್ಲವೆಂದಮೇಲೆ ಎಲ್ಲವೂ ಗಾಳಿಯೊಡನಾಟವೆ! ಕ್ರಿ. ಶ. ಪೂರ್ವದ ಸುಮಾರು ೨೦೦೦ ವರುಷಗಳ ಮೊದಲು, ಮಧ್ಯ ಏಸ್ಯದ ಜನರು ಹೊಟ್ಟೆಯ ಪಾಡಿಗಾಗಿ ಬೇರೆ ಬೇರೆ ಕಡೆಗೆ ಹೋದರು ಎಂದು ಕೇಳಿದ್ದೇವೆ. ಆಗ ಅಲೆದಾಟದ ಜೀವನ. ಹುಲ್ಲು-ನೀರು ಇದ್ದಲ್ಲಿಯೆ ತಂಗುವುದು. ಹುಲ್ಲು ತೀರಿದಕೂಡಲೆ ಮುಂದೆ ಪ್ರಯಾಣ. ಜನತೆ ಬೆಳೆಯುತ್ತ ಹೋದಂತೆ, ಆಹಾರದ ಕೊರತೆ ಹೆಚ್ಚಾದಂತೆ, ಈ ಅಲುಗಾರನ ಅಲೆದಾಟದ ಜೀವನವು

ಅಷ್ಟು ಸುರಕ್ಷಿತವೆನಿಸಲಿಲ್ಲ. ಅದಕ್ಕಾಗಿ ಎಲ್ಲಿಯಾದರೂ ನೆಲೆ ನಿಂತು ನೆಮ್ಮದಿಯಿಂದ ಜೀವನ ಸಾಗಿಸಬೇಕೆಂಬ ವಿಚಾರ-ಬಂದಿರಬೇಕು. ಹಾಗೆ ವಿಚಾರ ಬಂದು ಕೆಲ ಜನರು ಭಾರತಕ್ಕೆ ಬಂದರು; ಅವರೇ ಆರ್ಯರು. ಕೆಲರು ಪಶ್ಚಿಮಕ್ಕೆ ಹೋದರು, ಕೆಲರು ಚೀನದಲ್ಲಿ ನುಗ್ಗಿದರು.

ಚೀನದಲ್ಲಿ ನುಗ್ಗಿ ಅಲ್ಲಿಯ ಯಾಂಗ್‌ತ್ಸೆ ಮತ್ತು ಹಳದಿ ನದಿಯ ಕೊಳ್ಳದ ಪ್ರದೇಶವನ್ನು ಆಕ್ರಮಿಸಿಕೊಂಡರು. ಭಾರತ-ದಲ್ಲಿ ಬಂದ ಆರ್ಯರು ಸಿಂಧು, ಗಂಗಾ ನದಿಗಳನ್ನು ಆಶ್ರಯಿ-ಸಿದರಲ್ಲವೆ? ಬೆಳೆವ ಜನತೆಗೆ ಸುರಕ್ಷಿತತೆ ಹೆಚ್ಚು ಬೇಕಾದುದ-ರಿಂದ—ನೆಲೆಯೂರಿದ ಜೀವನ ಬೇಕಾದುದರಿಂದ—ಒಕ್ಕಲುತನ ಒದಗಿಬಂದಿತು. ಒಕ್ಕಲುತನವೆ ಎಲ್ಲ ಹಿರಿಯ ಸಂಸ್ಕೃತಿಗಳ ಮೂಲ. ಅಲೆದಾಟದ ಜೀವನದಲ್ಲಿ ಸಂಸ್ಕೃತಿಯಿರಲಿಲ್ಲ-ವೆಂದಲ್ಲ; ಆದರೆ ಅದು ಪದರುಗಟ್ಟಿದುದು ಒಕ್ಕಲುತನದ ಜೀವನದಲ್ಲಿಯೆ. ಆದಕ್ಕೆಯೆ ಮೊತ್ತಮೊದಲ ಸಂಸ್ಕೃತಿಗಳು ಹುಟ್ಟಿದುದು ನದಿಗಳ ಕೊಳ್ಳಗಳಲ್ಲಿ; ನೀರಿನ ಸಂಚಯದಲ್ಲಿ. ಇಂದು 'ಕಳೆದು ಹೋಗಿದ್ದ'— ಹುಡುಕಿದ-ಸಂಸ್ಕೃತಿಗಳೆಲ್ಲ ನದಿಯ ಕೊಳ್ಳಗಳಲ್ಲಿಯೆ ಸಿಕ್ಕಿವೆ. ಭಾರತದಲ್ಲಿ ಸಿಂಧೂ-ನದಿಯ ಕೊಳ್ಳದ ಮೊಹೆಂಜೊದಾರೊ, ಹರಪ್ಪ; ನಾಯಿಲ್ ನದಿಯ ಇಜಿಪ್ತದ ಸಂಸ್ಕೃತಿ; ಟೈಗ್ರಿಸ್; ಯುಫ್ರೆಟೀಸ್ ನದಿಗಳ ಮೆಸೊಪೊಟೇಮಿಯದ ಸಂಸ್ಕೃತಿ; ಬ್ಯಾಬಿಲೋನ್, ಸುಮೇರುಗಳ ಸಂಸ್ಕೃತಿ—ಇವುಗಳನ್ನು ನೆನೆದರೆ, ಈ ಮಾತಿನ ಅರ್ಥ ತಿಳಿದುಬರುವುದು. ಚೀನದಲ್ಲಿಯ ಸಂಸ್ಕೃತಿ ಬೆಳೆದುದು ಯಾಂಗ್‌ತ್ಸೆ-ಹಳದಿ ನದಿಗಳ ಕೊಳ್ಳಗಳಲ್ಲಿಯೆ. ಅಲ್ಲಿಯೆ ಚೀನದ ಮೊತ್ತಮೊದಲನೆಯ ಸಾಮ್ರಾಜ್ಯ ಹುಟ್ಟಿದುದು.

ಸಮ್ರಾಟನೆಂದು ಹೇಳಿಕೊಂಡ ಮೊದಲ ವ್ಯಕ್ತಿಯೆಂದರೆ **ಯಾವೊ.** ಸಮ್ರಾಟನೆಂದರೆ ಆಪನೊಬ್ಬ ಪಿತೃವು. ಯಾವೊ ಇವನು **ಹ್‌ಸಿಯಾ** ಮನೆತನದ ಮೂಲಪುರುಷ. ಆ ಅನಾ-ಗರಿಕ ಕಾಲದಲ್ಲಿ ಆಳುವವನು ಮುಂಗೈಯ ಜೋರಿನವನು ಇರಬೇಕಾದುದರಿಂದ, ಆಳಿಕೆಯು ಪರಂಪರೆಯಾಗಿರುತ್ತಿದ್ದಿಲ್ಲ. ಬಲವಂತನೇ ಮುಂದೆ ಬರುತ್ತಿದ್ದ. ಯಾವೋನು ಕೂಡ, ತನ್ನ ತರುವಾಯ ತನ್ನ ಮಗನನ್ನು ಪಟ್ಟಕ್ಕೆ ನಿಯಮಿಸದೆ, ಬಲವಂತ-ನಾದ ಬೇರೊಬ್ಬನನ್ನು ನಿಯಮಿಸಿದ. ಆದರೆ ಮುಂದೆ ಅರಸು ದೇವಾಂಶನೆಂಬ ವಿಚಾರ ಬರತೊಡಗಿ, 'ಹುಲಿಯ ಮರಿ ಹೇಡಿ-ಯಾಗಲಾರದು!' ಎಂದು ಅರಸುಮಗನೇ—ಹೇಡಿಯಿದ್ದರೂ—ಪಟ್ಟಕ್ಕೆ ಬರತೊಡಗಿ, ರಾಜತ್ವವು ಪರಂಪರೆಯದಾಯಿತು. ಆದರೂ ಜನಹಿತ ಸಾಧಿಸದ ಅರಸರನ್ನು ಆ ಕಾಲದಲ್ಲಿ ಪಟ್ಟದಿಂದ ತಳ್ಳಿದುದೂ ಉಂಟು. ಹ್‌ಸಿಯಾ ಮನೆತನದ ಕೊನೆಯರಸು ಕ್ರೂರನಾಗಿದ್ದುದರಿಂದ, ಜನರು ಬಂಡೆದ್ದು ಅವನನ್ನು ತಳ್ಳಿದರು. ಆಗ ಬೇರೊಂದು ಮನೆತನ ಮುಂದಕ್ಕೆ ಬಂದಿತು. ಅದು **ಶಾಂಗ್** ಅಥವಾ **ಯಿನ್** ಮನೆತನ. ಇವರು ಸುಮಾರು ೬೫೦ ವರುಷಗಳ ವರೆಗೆ ಆಳಿದರು. ಈ ಮನೆತನದವರ ಆಳಿಕೆಯಲ್ಲಿ ಚೀನವು ಒಂದು ದೇಶ—ಒಂದು ಜನಾಂಗ—ಒಂದು ರಾಷ್ಟ್ರ-ವಾಗಲು ಯತ್ನಿಸಿತು. ಹಾಗೆ ಆದುದರಿಂದ ಸಂಸ್ಕೃತಿಯ ಹೆಜ್ಜೆ ಮುಂದುವರಿಯಿತು.

ಈ ಸಾವಿರ ವರುಷಗಳಲ್ಲಿ ಅನೇಕ ಸ್ಥಿತ್ಯಂತರಗಳಾದುವು. 'ಪಿತೃಪಾಲಕ' ಸರಕಾರವು ಕರಗಿ, ಕೇಂದ್ರ ಸರಕಾರವು ಬರ-ತೊಡಗಿತು. ಸುಯಂತ್ರಿತ ಸರಕಾರದ ಚಿಹ್ನಗಳು ಕಾಣತೊಡ-ಗಿದುವು. ಬರೆವಣಿಗೆಗೆ ಮೊದಲಾಯಿತು. ಚೀನದ ಬರೆಹ ವಿಚಿತ್ರವಾಗಿದೆ....ಎಂದರೆ ತಪ್ಪು ತಿಳಿವಳಿಕೆಯಾಗುವುದು. ಅದು ವಿಚಿತ್ರವಲ್ಲ— ಸಚಿತ್ರ! ಎಂದರೆ ಅದು ಚಿತ್ರಲಿಪಿ. ಅವರಲ್ಲಿ ಹರ್ಣಮಾಲೆ ಇಲ್ಲ; ಚಿತ್ರ ಅಥವಾ ಅವುಗಳ ಚಿಹ್ನಗಳ ಮೂಲಕ ಬರೆವರು.

ಶಾಂಗ್ ಮನೆತನವೂ ಹೋಯಿತು, ಒಂದು ಕ್ರಾಂತಿಯ ಪರಿಣಾಮವಾಗಿ. ಹ್‌ಸಿಯಾದ ಕೊನೆ ಬಂಡಿನಲ್ಲಿ; ಶಾಂಗ್‌ದ ಕೊನೆ ಕ್ರಾಂತಿಯಲ್ಲಿ. ಈ ಕ್ರಾಂತಿಯ ಕೂಸು **ಚೌ** ಮನೆತನ. ಈ ಮನೆತನ ಬಹುಕಾಲ ಬಾಳಿತು—ಸುಮಾರು ೮೬೦ ವರುಷ. ಇದು ಉಂಬಳಿಗಾರರ (Feudal Dynasty) ಮನೆತನ. ಈ ಕಾಲಾವಧಿಯಲ್ಲಿ ಉಂಬಳಿಗಾರರ ಪ್ರಾಬಲ್ಯ ಹೆಚ್ಚಿತು. ಆದರೆ ಈ ಉಂಬಳಿಗಾರರಿಗೂ ಉಳಿದ ದೇಶದ ಉಂಬಳಿಗಾರ-ರಿಗೂ ಏನೂ ಹೋಲಿಕೆ ಇರಲಿಲ್ಲ.

ಈ ಮನೆತನದ ಆಳಿಕೆಯಲ್ಲಿ ಚೀನಿ ಸಂಸ್ಕೃತಿಯು ದೊಡ್ಡ ಹೆಜ್ಜೆಯನ್ನು ಮುಂದಿಟ್ಟಿತು. ನಾಗರಿಕ ಜೀವನ ಮೊದಲಾಯಿ-ತೆಂದಲ್ಲ; ಆದರೂ ತೀರ ಅನಾಗರಿಕ ಪದ್ಧತಿಯಿದ್ದಿಲ್ಲ. ಆದರೆ ಬರೆವಣಿಗೆ ಬೆಳೆದುಬಂದುದರಿಂದ, ಐತಿಹಾಸಿಕ ಘಟನೆಗಳೆಲ್ಲ ಬರೆಯಲ್ಪಟ್ಟುವು. ಸಾಹಿತ್ಯವು ಬೆಳೆಯಿತು. ಇವು ಸಂಸ್ಕೃತಿಗೆ ಆಧಾರಗಳು. ಸಾಹಿತ್ಯದ ಬೆಳವಣಿಗೆಗೆ ಚೀನೀ ತಾತ್ತ್ವಿಕರಾದ **ಕಾಂಫ್ಯೂಸಿಯುಸ್** ಮತ್ತು **ಲಾವೊತ್ಸೆ** ಇವರು ಕಾರಣರು. ಇವರು ಈ ಕಾಲದಲ್ಲಿಯೆ ಮೆರೆದರು. ಸಾಹಿತ್ಯದ ಜೊತೆಗೆ ಕಲೆಯೂ ಬೆಳೆಯಿತು. 'ಕಂಚಿನ ಕಲೆ' ಮುಂದಕ್ಕೆ ಬಂದಿತು.

ಉಂಬಳಿಗಾರರ ಪ್ರಾಬಲ್ಯ ಹೆಚ್ಚಾದುದರಿಂದ, ಅಧಿಕಾರವು ಕೇಂದ್ರೀಕೃತವಾಗಿರಲಿಲ್ಲ. ಆದರೂ ಆಳುವ ಮನೆತನದ ಹೆಸರು 'ಚೌ'! ಅನೇಕ ಉಂಬಳಿಗಾರರ ಅಧಿಕಾರವು ಆ ಆ ಸ್ಥಾನಗಳಲ್ಲಿ ಕಾಣಬರುತ್ತಿದ್ದುದರಿಂದ, ಈ ಕಾಲಾವಧಿಗೆ **'ಗೊಂದಲಯುಗ'** ಎಂದು ಹೆಸರುಬಂದಿದೆ. ಆಗಾಗ ಅರಾಜಕತೆಯ ಅವತಾರ-ಗಳೂ ಕಾಣಬರುತ್ತಿದ್ದುವು. ಇದರಿಂದ ಆಗಿನ ರಾಜತಂತ್ರಿಗಳಿಗೆ ಹೊಸ ಸಿದ್ಧಾಂತಗಳನ್ನು ಹುಡುಕುವುದಕ್ಕೆ ಅನುವಾಯಿತು. ರಾಜನೀತಿಯ ಬಗೆಗೆ ಹೆಚ್ಚಿನ ವಿಚಾರ ಬರತೊಡಗಿತು. ಈ ಉಂಬಳಿಗಾರರ ಉಪಟಳವೂ ಅರಾಜಕತೆಯ ಅವತಾರಗಳೂ

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನವನ್ನು ಪಡೆದುನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ಸಾಂಸ್ಕೃತಿಕ ಸೋಪಾನಗಳಿಗೇನೂ ಪೆಟ್ಟು ಕೊಡಲಿಲ್ಲ. ಸಾಂಸ್ಕೃತಿಕ ಸಂಬಂಧವೆ ಈ ಕಾಲಾವಧಿಯಲ್ಲಿ ದೇಶವನ್ನು ಒಟ್ಟಾಗಿಸಿದ್ದು. ಈ ಮಾತು ಚೌ ಮನೆತನಕ್ಕೆ ಕೀರ್ತಿತರುವುದು.

ಈ ಕಾಲದಲ್ಲಿ ಎರಡು ಮಹತ್ತ್ವದ ಮಾತುಗಳು ಕಾಣಬರುತ್ತಿದ್ದುವು: ಒಂದು, ಆಡಳಿತದಲ್ಲಿ ನೀತಿಗೆ ಸ್ಥಾನ; ಮತ್ತೊಂದು ಸಮಾಜದಲ್ಲಿ ಕುಟುಂಬವು ಘಟಿತವಾದುದು. ಈ ಎರಡೂ ಮಾತುಗಳಿಗೆ ಕಾರಣರು ಕಾಂಫ್ಯೂಸಿಯಸ್ ಮತ್ತು ಲಾವೊತ್ಸೆ. ಇವರ ವಿಚಾರಗಳು ಜನಮನಹಿಡಿದಿದ್ದುವು. ಕಾಂಫ್ಯೂಸಿಯಸ್‌ನ ವಿಚಾರದಷ್ಟು ಯಾವ ತಾತ್ತ್ವಿಕನ ವಿಚಾರಗಳೂ ಚೀನೀಯರನ್ನು ಹಿಡಿದಿಲ್ಲ. ಅವನ ಪ್ರಭಾವವು ಈ ಕಾಲದಿಂದಲೆ ಬೆಳೆಯುತ್ತ ಬಂದಿತು.

ಚೌ ಮನೆತನದವರು ಮೂಲ ಚೀನದ ವಾಯುವ್ಯದಿಕ್ಕಿನಿಂದ ಬಂದವರು; ಹಳದಿನದಿಯ ಮೇಲ್ಗಡೆಯ ಬದಿಯಲ್ಲಿ ತಳವೂರಿದವರು. ಅವರು ಒಂದೇ ಪಂಗಡವಾಗಿದ್ದರು. ಆಗ ಚೀನದಲ್ಲಿ ಆಳುತ್ತಿದ್ದವರು ಶಾಂಗ್ ಮನೆತನದವರು. ಅಲ್ಲದೆ ಅವರ ಅಧಿಕಾರವು ಅವನತವಾಗತೊಡಗಿತ್ತು. ಚೌ ಪಂಗಡದ **ವೆನ್‌ವಾಂಗ್** ಎಂಬವನು ಮುಂದೆಬಂದನು. ಅವನ ವಿಚಾರ ಬೇರೆಯೆ ಇತ್ತು. 'ಆಳುವವನು ಪ್ರಜೆಗಳ ಸಹಕಾರ-ಸಹಾನುಭೂತಿ ಪಡೆದವನಿರಬೇಕು' ಎಂದು. ಹಾಗೆ ತಿಳಿದು ತಾನು ಜನತೆಯ ಹಿತಸಾಧಿಸತೊಡಗಿದನು. ತನ್ನ ಆತ್ಮಬಲದಿಂದ ಜನತೆಯಲ್ಲಿ ಹೆಸರುಪಡೆದನು. ಇದರಿಂದ ಜನತೆಯ ಲಕ್ಷ್ಯವು ಆಳುವ **ಶಾಂಗ್** ಮನೆತನಬಿಟ್ಟು **ಚೌ**ದವರ ಕಡೆಗೆ ಹೊರಳಿತು. ಇದೇ ಸಮಯಕ್ಕೆ ವೆನ್‌ವಾಂಗನ ಮಗ **ವುವಾಂಗ**ನು ಸೈನ್ಯಬಲದಿಂದ ರಾಜ್ಯವನ್ನೆಲ್ಲ ತನ್ನ ಅಂಕಿತದಲ್ಲಿ ತಂದುಕೊಂಡನು. ಶಾಂಗ್ ಮನೆತನ ಮಾಯವಾಗಿ, ಚೌ ಮನೆತನದ ಉದಯವಾಯಿತು. ಚೌಮನೆತನದವರಿಗೆ ಕಾಂಫ್ಯೂಸಿಯಸ್‌ನ ವಿಚಾರಗಳು ಮಾರ್ಗದರ್ಶಿಯಾದುವು. ಅದಕ್ಕಂತೆಯೆ ಆಡಳಿತದಲ್ಲಿ ನೀತಿಗೆ ಅಷ್ಟು ಬೆಲೆಬಂದುದು.

ಸಮಾಜದಲ್ಲಿ ಕುಟುಂಬಕ್ಕೆ ಸ್ಥಾನಬಂದುದೂ ಕಾಂಫ್ಯೂಸಿಯಸ್‌ನಿಂದ. ಅದಕ್ಕೆ ಕಾರಣ ಒಕ್ಕಲುತನ. ಒಕ್ಕಲುತನದ ಜೀವನ ಒಟ್ಟುಜೀವನ— ಒಬ್ಬರನ್ನೊಬ್ಬರು ಅವಲಂಬಿಸಿದ್ದ ಜೀವನ. ಕುಟುಂಬವು ಸಮಾಜದ ಘಟಕವಾದುದು ಈ ಕಾರಣದಿಂದಲೆ; ಅಲ್ಲದೆ ಕಾಂಫ್ಯೂಸಿಯಸ್ ಅದಕ್ಕೆ ಕೊಟ್ಟ ಸ್ಥಾನದ ಮೂಲಕ. ಅವನ ವಿಚಾರದ ಮೂಲಕ ಜನರು, ಹೆಚ್ಚು ವ್ಯವಹಾರಕುಶಲರೂ ಕರ್ತವ್ಯದಕ್ಷರೂ ತಾಳ್ಮೆಯುಳ್ಳವರೂ ಆದರು. ಇವೆಲ್ಲ ಒಕ್ಕಲುತನದ ಜೀವನಕ್ಕೆ ಅಗತ್ಯ.

ಕುಟುಂಬವು ಸಂಸ್ಥೆಯಾದುದರಿಂದ ಪರಂಪರೆಗೆ ಅನುವಾಯಿತು. ಮನೆತನದಲ್ಲಿಯ ಜನ ಬಾಳಿಹೋದರೂ, ಅವರ ವಿಚಾರ ಪದ್ಧತಿ-ಸಂಪ್ರದಾಯಗಳು ಅಳಿದುಹೋಗದೆ ಉಳಿದು, ಮುಂದೆ ಬಾಳುವವರಿಗೆ ದಾರಿತೋರತೊಡಗಿದುವು. ಸಂಸ್ಕೃತಿಯು ಅಳಿಯದೆ ಉಳಿದುದು ಈ ಕುಟುಂಬಸಂಸ್ಥೆಗಳ ಮೂಲಕವೆ. ಬಾಳಿಹೋದ ಹಿರಿಯರಿಗೆ ತಮ್ಮ 'ಬಾಳ'ನ್ನು ಹೊಣೆಯಾಗಿರಿಸುವ ಪದ್ಧತಿ ಬಂದುದರಿಂದ 'ಪಿತೃಪೂಜೆ'ಯು ಸಂಸ್ಥೆಯಾಗತೊಡಗಿತು. ಪಿತೃಪೂಜೆಯ ವಿಚಾರ ಭಾರತೀಯರಿಗೇನೂ ಹೊಸದಲ್ಲ. ಇಂದಿನ ನಮ್ಮ 'ಶ್ರಾದ್ಧ'ಪದ್ಧತಿಯ ಉಗಮವಾದರೂ ಈ ವಿಚಾರದಲ್ಲಿಯೆ ಇದೆಯೆಂದು ಮನಗಾಣಬಹುದು.

ಈ ಕಾಲಾವಧಿಯಲ್ಲಿ ಆಳಿದ ಮನೆತನ '**ಚೌ**' ಆದರೂ, ಉಂಬಳಿಗಾರರು ಅಧಿಕಾರ ಬೀರಿದರೂ, ನಿಜವಾದ ಪ್ರಭಾವವಿದ್ದುದು ಕಾಂಫ್ಯೂಸಿಯಸ್‌ನದು. ಸಮಾಜಜೀವನದಲ್ಲಿ, ಸರಕಾರದಲ್ಲಿ—ಅವನ ಪ್ರಭಾವವೆ. ಅದಕ್ಕೆಂದೇ ಈ ಕಾಲಾವಧಿಯಲ್ಲಿ ನೈತಿಕಜೀವನಕ್ಕೆ—ವೈಯಕ್ತಿಕವೆ ಆಗಲಿ, ಕೌಟುಂಬಿಕವೇ ಆಗಲಿ, ಸಾಮಾಜಿಕವೆ ಆಗಲಿ, ಆಡಳಿತದಲ್ಲಿಯೆ ಆಗಲಿ— ಬೆಲೆ ಹೆಚ್ಚು, ಅದೇ ಅಳತೆಗೋಲು. ಚೌ ಮನೆತನದ ಆಳಿಕೆಯಲ್ಲಿ ಆದ ಗೊಂದಲದಷ್ಟು ಬೇರಾವ ಮನೆತನದ ಆಳಿಕೆಯಲ್ಲಿ ಆಗದಿದ್ದರೂ, ಕಾಂಫ್ಯೂಸಿಯಸ್ ಮತ್ತು ಲಾವೊತ್ಸೆ ಇವರ ವಿಚಾರಪ್ರಭಾವದಿಂದ, ಇತಿಹಾಸದಲ್ಲಿ ನೆನಪಿಡುವ ಕಾಲಾವಧಿಯೆಂದರೆ ಚೌ ಮನೆತನದ ಆಳಿಕೆಯೆ.

ಚೀನದ ಇತಿಹಾಸದಲ್ಲಿ ಇಲ್ಲಿಗೆ ಒಂದು ಮಟ್ಟ. ಜೀವನ ಒಂದು ಸ್ಥಿಮಿತಕ್ಕೆ ಬಂದಿದೆ. ಮುಂದಿನ ಏರಿಕೆಯ ಬೆಳವಣಿಗೆಯನ್ನು ಮುಂದಿನ ಸಲ ನೋಡುವಾ!

ಮಹೇಶ

(ಅನುವಾದಿತ ಕಥೆ)*

ಶ್ರೀ. ಗುರುನಾಥ ಜೋಶಿ, ಧಾರವಾಡ

★

ಬಲ್ಲಿದರ ಅತ್ಯಾಶೆಯೆ ಬಡವರ ನಿರಾಹಾರಕ್ಕೆ ಮೂಲಕಾರಣ! ನಿರಾಹಾರದ ಮೂಲಕವೆ 'ಮಹೇಶ' ಮಹಿಯನ್ನು ಬಿಟ್ಟಿತು; ಮಹೇಶನ ಮಿತ್ರ ಗಫೂರ್ ಮನೆ-ಮಾನಗಳನ್ನು ಬಿಟ್ಟ!

★

ಕಾಶೀಪುರವು ಚಿಕ್ಕ ಹಳ್ಳಿ; ಅಲ್ಲಿಯ ಜಮೀನುದಾರರು ಅದಕ್ಕೂ ಚಿಕ್ಕವರು. ಆದರೂ ಅವರ ದರ್ಪ ದೊಡ್ಡದು; ಎಂತಲೇ ಪ್ರಜರು ಪಿಟ್ಟೆನ್ನಲಾರರು.

ಚಿಕ್ಕಮಗನ ಹುಟ್ಟಿದ ಹಬ್ಬದ ಸಲುವಾಗಿ ಮಂದಿರದಲ್ಲಿ ಪೂಜೆಯಿದ್ದಿತು. ಪೂಜೆಯನ್ನು ಮುಗಿಸಿಕೊಂಡು 'ತರ್ಕರತ್ನ'ಮಹಾಶಯರು ಮಧ್ಯಾಹ್ನದಲ್ಲಿ ಮನೆಗೆ ಮರಳುತ್ತಿದ್ದರು. ವೈಶಾಖ ಮಾಸ ಮುಗಿಯುತ್ತ ಬಂದುದರಿಂದ, ಆಗಸದಲ್ಲಿ ಮೋಡಗಳ ಸುಳಿವೂ ಇರಲಿಲ್ಲ; ಅನಾವೃಷ್ಟಿಯ ಮೂಲಕ ಆಗಸದಿಂದ ಕಿಡಿಗಳು ಸುರಿಯುತ್ತಿರುವುವೇನೋ ಎಂಬಂತೆನಿಸುತ್ತಿದ್ದಿತು.

ಎದುರಿನಲ್ಲಿರುವ ದಿಗಂತವ್ಯಾಪಿಯಾದ ಬಯಲು, ಬಿಸಿಲಿನ ತಾಪದಿಂದ ಬಿರಿದುಹೋಗಿರುವುದು, ಆ ಬಿರುಕುಗಳೊಳಗಿಂದ ಧರಿತ್ರಿಯ ನೆತ್ತರು ಉಗಿಯಾಗಿ ಹೊರಚಿಮ್ಮುತ್ತಿರುವುದೇನೊ ಎಂಬಂತೆ ತೋರುತ್ತಿದ್ದಿತು. ಅದರ ಕಡೆಗೆ ನೋಡುವುದರಿಂದ ತಲೆತಿರುಗುವುದು; ಕಣ್ಣು ಕತ್ತಲುಗೂಡಿಸುವುದು.

ಆ ಬಯಲಿಗೆ ಹೊಂದಿರುವ ಬೀದಿಯ ಬಳಿಯಲ್ಲಿ, ಗಫೂರ್ ನೇಕಾರನ ಮನೆಯಿದ್ದಿತು. ಮನೆಗಿದ್ದ ಮಣ್ಣಿನ ಗೋಡೆಗಳು ಬಿದ್ದುಹೋಗಿದ್ದುವು. ಅಂಗಳವು ಬೀದಿಗೆ ಬಂದು ತಗುಲಿದ್ದಿತು; ಅಂತಃಪುರದ ನಾಚಿಕೆ ಮತ್ತು ಮರ್ಯಾದೆ, ಪಥಿಕರ ಕರುಣೆಯ ಎದುರಿನಲ್ಲಿ ಆತ್ಮಸಮರ್ಪಣಮಾಡಿ ನಿಶ್ಚಿಂತವಾಗಿರುವಂತೆ ಕಾಣುತ್ತಿದ್ದಿತು.

ಬೀದಿಯ ದಂಡೆಯಲ್ಲಿರುವ ಒಂದು ಗಿಡದ ನೆರಳಲ್ಲಿ ನಿಂತುಕೊಂಡು ತರ್ಕರತ್ನಮಹಾಶಯರು ಕೂಗಿದರು: "ಎಲೋ ಗಫೂರ್, ಮನೆಯಲ್ಲಿದ್ದೀಯೇನೊ ?"

ಸುಮಾರು ಹತ್ತುವರ್ಷ ವಯಸ್ಸಿನವಳಾದ ಹುಡುಗಿ—ಗಫೂರನ ಮಗಳು— ಬಾಗಿಲಬಳಿಗೆ ಬಂದು "ಯಾಕೆ? ಅಪ್ಪನಿಗೆ ಜ್ವರ ಬಂದಿದೆ!" ಎಂದು ಉತ್ತರವಿತ್ತಳು.

"ಜ್ವರ! ಕರೆ ಅವನನ್ನು! ನಾಸ್ತಿಕ! ಮ್ಲೇಚ್ಛ!"

ಧ್ವನಿಯನ್ನು ಕೇಳಿ ಗಫೂರ್ ನಡುಗುತ್ತ ಹೊರಗೆ ಬಂದುನಿಂತ. ಮನೆಯ ಹೊರಗೆ ಬಿದ್ದ ಗೋಡೆಗೆ ಹೊಂದಿ ಒಂದು ಹಳೆಯ ಅರಳೆಯ ಮರವಿದ್ದಿತು, ಅದಕ್ಕೆ ಒಂದು ಎತ್ತನ್ನು ಕಟ್ಟಲಾಗಿದ್ದಿತು. ತರ್ಕರತ್ನಮಹಾಶಯರು ಅತ್ತ ಸನ್ನೆಮಾಡಿ "ಇದೇನು? ಇದು ಹಿಂದುಗಳ ಊರು! ಜಮೀನುದಾರರು ಬ್ರಾಹ್ಮಣರು! ನೈಮೇಲೆ ಎಚ್ಚರವಿದೆಯೊ ಇಲ್ಲವೊ?" ಎಂದರು.

ಅವರ ಮುಖವು ಸಿಟ್ಟು ಮತ್ತು ಬಿಸಿಲಿನಿಂದ ಕೆಂಪಾಗಿದ್ದಿತು; ಬಾಯಿಂದಾಗ ಕಟುಮಾತುಗಳೇ ಹೊರಬೀಳಬೇಕು. ಕಾರಣವು ತಿಳಿಯದುದರಿಂದ ಗಫೂರ್ ಅವರ ಮುಖವನ್ನೇ ನೋಡುತ್ತನಿಂತ.

"ಮುಂಜಾನೆ ಹೋಗುವಾಗ ನೋಡಿಹೋಗಿದ್ದೆ; ಎತ್ತು ಇಲ್ಲೇ ಕಟ್ಟಿದ್ದಿದ್ದಿತು. ಈಗ ಮಧ್ಯಾಹ್ನದಲ್ಲಿಯೂ ಇಲ್ಲೇ ಇದೆ. ಗೋಹತ್ಯೆಯಾದರೆ ಒಡೆಯರು ನಿನ್ನನ್ನು ಜೀವಂತ ಹುಗಿದುಬಿಡಬಹುದು; ಅವರು ಅಂತಿಂತಹ ಬ್ರಾಹ್ಮಣರಲ್ಲ!"

"ಏನುಮಾಡಲಿ ಪಂಡಿತರೆ, ನಿರುಪಾಯನಾಗಿದ್ದೇನೆ! ಬಹಳ ದಿನಗಳಿಂದ ಜ್ವರ ಹಿಡಿದಿದೆ. ಸ್ವಲ್ಪ ದೂರಹೋಗಿ ಮೇಯಿಸಿಕೊಂಡೂ ಬರುವಂತಿಲ್ಲ. ದೂರಹೋಗಬೇಕೆಂದರೆ, ಕಣ್ಣು ಕತ್ತಲು ಗೂಡಿಸುವುದು; ಬಿದ್ದುಬಿಡುತ್ತೇನೆ!"

"ಹಾಗಾದರೆ ಬಿಚ್ಚಿಬಿಡು, ತಾನೇ ಮೆಯ್ದುಬರುವುದು!"

"ಎಲ್ಲಿ ಬಿಚ್ಚಿಬಿಡಲಿ ಪಂಡಿತರೇ? ಇನ್ನೂ ಹೊಲದೊಳಗಿನ ಬೆಳೆ ಪೂರ್ತಿ ಕೊಯ್ದಾಗಿಲ್ಲ; ಮನೆಗೆ ಕಾಳನ್ನು ಒಯ್ದಾಗಿಲ್ಲ, ಕಣದಲ್ಲಿಯೆ ಇವೆ! ಬಯಲು ಒಣಗಿಹೋಗಿದೆ; ಎಲ್ಲಿಯೂ ಒಂದಿಷ್ಟೂ ಹುಲ್ಲು ಇಲ್ಲ! ಯಾರದಾದರೂ ಕಣಕ್ಕೆ ಬಾಯಿಹಾಕಿದರೆ ಏನು ಮಾಡುವುದು? ಪಂಡಿತರೇ, ಹೇಗೆ ಬಿಚ್ಚಿಬಿಡಲಿ?"

ತರ್ಕರತ್ನಮಹಾಶಯರು ಸ್ವಲ್ಪ ತಣ್ಣಗಾಗಿ "ಎಲ್ಲಾದರೂ ನೆರಳಿನಲ್ಲಿ ಕಟ್ಟಿ ಮೇವುಹಾಕು, ಮೆಲುಕಾಡಿಸಲಿ! ನಿನ್ನ ಮಗಳು ಅಡಿಗೆಮಾಡಿಲ್ಲವೇನು? ಗಂಜಿ ಇಡು ಸ್ವಲ್ಪ, ಕುಡಿಯಲಿ ಅದು!" ಎಂದರು.

ಗಫೂರ್ ಉತ್ತರಕೊಡಲಿಲ್ಲ; ನಿರುಪಾಯನಂತಾಗಿ ತರ್ಕರತ್ನರ ಕಡೆಗೆ ನೋಡುತ್ತ ನಿಂತ; ನೀಳವಾಗಿ ಒಮ್ಮೆ ಉಸಿರ್ಗರೆದ.

"ಅದೂ ಇಲ್ಲವೇನು? ಮೇವನ್ನೆಲ್ಲ ಏನು ಮಾಡಿದೆ? ಸಿಕ್ಕಿದನ್ನೆಲ್ಲ ಮಾರಿ 'ಜಠರಾಯಸ್ವಾಹಾ' ಮಾಡಿದೆಯೇನೊ! ಎತ್ತಿಗಾಗಿ ಸ್ವಲ್ಪವೂ ಉಳಿಸಲಿಲ್ಲವೆ? ಕುಡುಕಾ!"

ನಿಷ್ಠುರವಾದ ಈ ಅಭಿಯೋಗದಿಂದ ಗಫೂರನ ಬಾಯಿಂದ ಮಾತು ಹೊರಬೀಳಲಿಲ್ಲ. ಸ್ವಲ್ಪಸಮಯದ ಬಳಿಕ ಮೆಲುದನಿಯಲ್ಲಿ

* ವಂಗೀಯ ಸಾಹಿತ್ಯಸಂಸಾರದಲ್ಲಿ ಖ್ಯಾತನಾಮರಾದ ದಿವಂಗತ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಕತೆಯಿದು. —ಲೇ

ಅವನು "ಸಿಕ್ಕಷ್ಟನ್ನು ಒಡೆಯರು ಹಿಂದಿನ ಬಾಕಿಯನ್ನು ತೀರಿಸಿಕೊಳ್ಳುವುದಕ್ಕಾಗಿ ಇಟ್ಟುಕೊಂಡರು. ಅತ್ತೆ, ಕರೆದೆ; ಕಾಲುಬಿದ್ದೆ. 'ಸರಕಾರ್, ತಮ್ಮ ರಾಜ್ಯವನ್ನು ಬಿಟ್ಟು ನಾನೆಲ್ಲಿಗೆ ಓಡಿಹೋಗುವೆ? ನನಗೆ ಸ್ವಲ್ಪ ಮೇವು ಇರಗೊಡಿರಿ; ಮನೆಯೂ ಬಿದ್ದಿದೆ, ತಂದೆ-ಮಗಳು ಇಬ್ಬರೇ ಇರುವವರು, ತಾಳಿಚೆಕ್ಕೆಯನ್ನು ಬೇಯಿಸಿಕೊಂಡು ತಿಂದು ಉಪಜೀವಿಸುವೆವು; ಆದರೆ ನನ್ನ ಮಹೇಶ ಹಸಿವೆಯಿಂದ ಸಾಯುವ' ಎಂದು ಹೇಳಿಕೊಂಡೆ" ಎಂದ.

ತರ್ಕರತ್ನರು ನಕ್ಕು "ಓಹೋ! ಇದರ ಹೆಸರನ್ನು 'ಮಹೇಶ' ಎಂದು ಇಟ್ಟಿರುವೆಯಾ? ನಗು ಬರುವುದು!" ಎಂದು ನುಡಿದರು.

ಈ ವ್ಯಂಗ್ಯವು ಗಫೂರನಿಗೆ ಕೇಳಿಸಲಿಲ್ಲ; ಅವನು ಮತ್ತೆ ಹೇಳತೊಡಗಿದ: "ಆದರೂ ಒಡೆಯರು ದಯೆ ತೋರಿಸಲಿಲ್ಲ; ತಿಂಗಳೆರಡಕ್ಕಷ್ಟಕ್ಕೆ ಸಾಲುವಷ್ಟು ಧಾನ್ಯವನ್ನು ನಮಗೆ ಕೊಟ್ಟರು; ಮೇವನ್ನು ಕೊಡಲೇ ಇಲ್ಲ, ಹಿಡಿದುಕೊಂಡರು. ಈ ಬಡಪ್ರಾಣಿಗಾಗಿ ಒಂದು ಹುಲ್ಲಿನ ಎಸಳನ್ನೂ ಇರಿಸಲಿಲ್ಲ...." ಗಫೂರನ ಕಂಠವು ಬಿಗಿದುಬಂದಿತು. ಆದರೂ ತರ್ಕರತ್ನರಿಗೆ ದಯೆಬರಲಿಲ್ಲ. ಅವರು "ನೀನೂ ಒಳ್ಳೆಯ ಮನುಷ್ಯ! ಮೊದಲೇ ತೆಗೆದುಕೊಂಡಿರುವೆ, ಈಗ ಕೊಡುವುದಿಲ್ಲವೇನು? ಜಮೀನುದಾರರು ತಮ್ಮ ಮನೆಯಿಂದ ನಿನಗೆ ಊಟಕ್ಕೆ ಹಾಕಬೇಕೇನು? ನೀವು ರಾಮರಾಜ್ಯದಲ್ಲಿ ವಾಸಿಸುವಿರಿ—ಆದರೆ ನೀಚಜಾತಿ ನಿಮ್ಮದು, ಅಲ್ಲವೆ? ಆದುದರಿಂದಲೇ ಹೀಗೆ ನುಡಿಯುತ್ತಿರುವೆ!" ಎಂದರು.

ಗಫೂರ್ ಲಜ್ಜಿತನಾಗಿ "ಅವರಿಗೇನು ಕೆಡುಕು ಬಗೆದಿರುವೆ ಪಂಡಿತರೆ! ನಾವು ಅವರಿಗೆ ಕೆಡುಕೆಣಿಸಲಾರೆವು! ಆದರೆ ನಾನು ಕೊಡಬೇಕೆಲ್ಲಿಂದ? ನಾಲ್ಕು ಗುಂಟೆ ಮಾತ್ರ ಹೊಲವನ್ನು ಊಳುವೆ; ಈಗ ಒಂದೇ ಸವನೆ ಎರಡುವರ್ಷ ಮಳೆಯಿಲ್ಲ; ಹೊಲದ ಹುಲುಸು ಹೊಲದಲ್ಲೇ ಉಳಿದುಹೋಯಿತು. ತಂದೆ-ಮಗಳಿಗೆ ಹೊಟ್ಟೆತುಂಬ ಕೂಳು ಕೂಡ ದೊರೆಯುವುದಿಲ್ಲ. ಮನೆಯ ಕಡೆಗೆ ನೋಡಿರಿ, ಮಳೆಬಂದಾಗ ಮಗಳನ್ನು ಹತ್ತಿರ ಕುಳ್ಳಿರಿಸಿಕೊಂಡು ಒಂದು ಮೂಲೆಯಲ್ಲಿ ಕುಳಿತುಕೊಳ್ಳುತ್ತೇನೆ ಕಾಲು ಚಾಚಿ ಮಲಗುವುದಕ್ಕೂ ಸ್ಥಳವಿಲ್ಲ! ಮಹೇಶನ ಕಡೆಗೆ ನೋಡಿರಿ, ಎಲುಬುಗಳು ಎದ್ದು ಕಾಣುತ್ತವೆ! ಮಹಾರಾಜ, ನೀವಾದರೂ ಮೇವನ್ನು ಸ್ವಲ್ಪ ಕೈಗಡ ಕೊಡಿರಿ; ಇದಕ್ಕೆ ಒಂದೆರಡು ದಿನವಾದರೂ ಹೊಟ್ಟೆತುಂಬ ತಿನ್ನಿಸುತ್ತೇನೆ!" ಗಫೂರ್ ಬ್ರಾಹ್ಮಣನ ಕಾಲಬಳಿ ಕುಳಿತ. ತರ್ಕರತ್ನಮಹಾಶಯರು ಮಿಂಚಿನಂತೆ ಹಿಂದೆ ಸರಿದು "ನೀನು ಸತ್ತುಹೋಗಾ! ಮುಟ್ಟುತ್ತೀಯೇನೊ?" ಎಂದರು.

"ಇಲ್ಲ 'ಮಹಾರಾಜ, ಮುಟ್ಟುವುದಿಲ್ಲ; ಮುಟ್ಟುವುದಿಲ್ಲ! ಈ ವರ್ಷ ಸ್ವಲ್ಪ ಮೇವನ್ನು ಕೊಡಿರಿ! ತಮ್ಮ ಮನೆಯ ಹಿಂದೆ ಎರಡು-ಮೂರು ಬಣವೆ ಹುಲ್ಲು ಒಟ್ಟಿದೆ. ನಾನು ಮೊನ್ನೆ ತಾನೇ ನೋಡಿಬಂದಿದ್ದೇನೆ. ಸ್ವಲ್ಪ ಕೊಟ್ಟರೆ ತಮಗೆ ಗೊತ್ತೂ ಆಗದು—ಭಾರವೂ ಆಗದು. ಬಹಳ ಒಳ್ಳೆಯ ಜೀವ—ಬಾಯಿಂದ ಏನನ್ನೂ ಹೇಳುವುದಿಲ್ಲ, ಕೇವಲ ಕಣ್ಣು-ಬಿಟ್ಟು ನೋಡುತ್ತ ನಿಲ್ಲುವುದು; ಕಣ್ಣೀರು ಸುರಿಸುತ್ತಿರುವುದು!"

"ಕೈಗಡ ಕೇಳುತ್ತೀಯೆ, ಆದರೆ ಮುಟ್ಟಿಸುತ್ತೀ ಹೇಗೆ?"

ಗಫೂರ್ ಆಶಾಪೂರಿತ ದನಿಯಿಂದ "ಹೇಗಾದರೂ ಮಾಡಿ ಮುಟ್ಟಿಸುವೆನು; ತಮಗೆ ಮೋಸ ಮಾಡಲಾರೆ!" ಎಂದು ನುಡಿದ.

ತರ್ಕರತ್ನ ಮಹಾಶಯರು ಗಫೂರನ ದನಿಯಂತೆ ದನಿಮಾಡಿ "ಮೋಸ ಮಾಡಲಾರೆ! ಹೇಗಾದರೂ ಮಾಡಿ ತೀರಿಸುವೆ! ಸದ್ಗುಣಿ ಶಿವಯೋಗಿ ಮಗ! ಸರಿ, ದಾರಿ ಬಿಡು! ಮನೆಗೆ ಹೋಗಬೇಕು, ಬಹಳ ಹೊತ್ತಾಯಿತು!" ಎಂದು ನುಡಿದು, ನಸುನಗುತ್ತ ಮುಂದಕ್ಕೆ ಸ್ವಲ್ಪ ಹೋಗಿದ್ದರೊ ಇಲ್ಲವೊ, ಒಂದೆರಡು ಹೆಜ್ಜೆ ಹಿಂದೆ ಸರಿದು ಕೋಪದಿಂದ "ಸತ್ತು ಹೋಗಾ! ಕೋಡು ಮುನ್ನೀಡಿ ಇರಿಯಲಿಕ್ಕೆ ಬರುವುದಲ್ಲಾ! ಇರಿಯುವುದೇನೊ?" ಎಂದರು.

ಗಫೂರ್ ಎದ್ದುನಿಂತ. ಪಂಡಿತರ ಕೈಯಲ್ಲಿ ಹಣ್ಣು-ಹಂಪಲಗಳ ತಟ್ಟೆಯಿದ್ದಿತು, ಹಸಿ ಅಕ್ಕಿ ಇದ್ದುವು. ಅವನ್ನು ತೋರಿಸುತ್ತ ಗಫೂರ್ ಎಂದ. "ವಾಸನೆ ಹತ್ತಿದೆಯಲ್ಲವೆ ಅದಕ್ಕೆ, ಆದುದರಿಂದಲೇ ತಿನ್ನಲು ಬೇಡುವುದು!"

"ತಿನ್ನಲು ಬೇಡುವುದೇ? ಸರಿ! ಅಸಭ್ಯ ಒಕ್ಕಲಿಗ, ಅಸಭ್ಯ ಎತ್ತು! ಮೇವು ಸಿಕ್ಕುವುದಿಲ್ಲ, ಅಕ್ಕಿ-ಹಣ್ಣು ಬೇಕಂತೆ! ದಾರಿ ಬಿಡಿಸಿ ಕಟ್ಟು! ಎಂತಹ ಕೋಡುಗಳಿವು, ಯಾರದಾದರೂ ಜೀವಗೀವ ತೆಗೆದುಕೊಂಡಾವು!" ಎನ್ನುತ್ತ ತರ್ಕರತ್ನ ಮಹಾಶಯರು ಒಂದು ಬದಿಯಿಂದ ಮೆಲ್ಲಗೆ ನುಸುಳಿಕೊಂಡು ಹೊರಟರು.

ಬಳಿಕ ಗಫೂರ್ ಪಂಡಿತರ ಕಡೆಯಿಂದ ತನ್ನ ದೃಷ್ಟಿಯನ್ನು ಕಿತ್ತುಕೊಂಡು ಮಹೇಶನಲ್ಲಿ ನೆಟ್ಟ. ಅದರ ಗಂಭೀರ ನೇತ್ರಗಳು ವೇದನೆಯಿಂದಲೂ ಹಸಿವೆಯಿಂದಲೂ ತುಂಬಿಕೊಂಡಿದ್ದುವು. ಅವನೆಂದ: "ನಿನಗೊಂದು ಹಿಡಿ ಹುಲ್ಲನ್ನೂ ಕೊಡಲಿಲ್ಲವೆ? ಅವರ ಬಳಿ ಬೇಕಾದಷ್ಟಿದೆ, ಆದರೂ ಅವರು ಯಾರಿಗೂ ಕೊಡುವುದಿಲ್ಲ! ಕೊಡದಿದ್ದರೆ ಹೋಗಲಿ ಬಿಡು!" ಎನ್ನುತ್ತಿರುವಾಗ ಅವನ ಕಂಠ ಬಿಗಿದು ಬಂದಿತು, ಮತ್ತು ನಯನಗಳು ನೀರನ್ನು ಸುರಿಸತೊಡಗಿದುವು. ಮಹೇಶನ ಬಳಿಗೆ ಬಂದು, ಅದರ ಕುತ್ತಿಗೆ-ಹಣೆ ಬೆನ್ನು-ಕಾಲುಗಳ ಮೇಲೆ ಪ್ರೀತಿಯಿಂದ ಕೈಯಾಡಿಸುತ್ತ ಮೆಲ್ಲಗೆ ಎನ್ನತೊಡಗಿದ: "ಮಹೇಶ, ನೀನು ನನ್ನ ಮಗ! ನೀನು ನಮಗೆ ಎಂಟುವರ್ಷಗಳಿಂದ ಉಣಿಸುತ್ತಲಿದ್ದೀಯೆ! ಈಗ ಮುದುಕನಾಗಿದ್ದೀಯೆ; ನಿನಗೆ ನಾನೀಗ ಹೊಟ್ಟೆತುಂಬ ತಿನ್ನಿಸಲಾರದವನಾಗಿದ್ದೇನೆ. ಆದರೆ ನಿನ್ನನ್ನು ನಾನೆಷ್ಟು ಪ್ರೀತಿಸುತ್ತಿರುವೆನೆಂಬುದು ಗೊತ್ತಿದೆ ನಿನಗೆ!"

ಮಹೇಶ ಇದಕ್ಕೆ ಉತ್ತರರೂಪವಾಗಿ ಕುತ್ತಿಗೆಯನ್ನು ಮುನ್ನೀಡಿ ಕಣ್ಣುಗಳನ್ನು ಆನಂದದಿಂದ ಮುಚ್ಚಿಕೊಂಡಿತು. ಗಫೂರ್ ತನ್ನ ಕಂಬನಿಗಳನ್ನು ಅದರ ಮೇಲೆ ಒರಸುತ್ತ ಹಾಗೆಯೆ ಅಸ್ಫುಟಸ್ವರದಲ್ಲಿ ಎನ್ನತೊಡಗಿದ: "ಜಮೀನುದಾರರು ನಿನ್ನ ತುತ್ತನ್ನು

ಕಸಿದುಕೊಂಡರು ; ಮಸಣದ ಬಳಿಯಲ್ಲಿಯ ಹುಲ್ಲುಗಾವಲನ್ನೂ ದುಡ್ಡಿನ ಆಶೆಯಿಂದ ಗುತ್ತಿಗೆಗೆ ಕೊಟ್ಟುಬಿಟ್ಟರು. ನಿನ್ನನ್ನು ಈ ಬರಗಾಲದಲ್ಲಿ ಹೇಗೆ ಬದುಕಿಸಿಡಲಿ ಹೇಳು? ನಿನ್ನನ್ನು ಬಿಚ್ಚಿಬಿಟ್ಟರೆ ಅನ್ಯರ ಧಾನ್ಯಕ್ಕೆ ಬಾಯಿ ಹಾಕಬಹುದು ನೀನು! ಬಾಳೆಗಿಡಗಳನ್ನು ಕೆಡಹಿ ತಿನ್ನಬಹುದು ನೀನು! ನಿನಗಾಗಿ ಈಗ ನಾನೇನು ಮಾಡಲಿ? ನಿನ್ನ ದೇಹದಲ್ಲಿ ಈಗ ಬಲವೂ ಇಲ್ಲ; ನಿನ್ನನ್ನು ಊರವರಾರೂ ಬೇಡರು! ನಿನ್ನನ್ನು ಮಾರಿಬಿಡಲು ಜನರು ಹೇಳುತ್ತಿರುವರು!" ಮನದಲ್ಲಿ ಈ ಮಾತುಗಳನ್ನು ನುಡಿಯುತ್ತಿರುವಾಗಲೆ ಗಫೂರನ ಕಣ್ಣುಗಳೊಳಗಿಂದ ನೀರು ಹರಿಯತೊಡಗಿತು. ಕಂಬನಿಗಳನ್ನು ಒರಸಿಕೊಂಡು, ಮನೆಯ ಚಪ್ಪರದಿಂದ ಸ್ವಲ್ಪ ಹಳೆಯ ಹುಲ್ಲನ್ನು ಕಿತ್ತು ತಂದು ಅದರ ಮುಂದೆ ಹಾಕಿ, ಮೆಲ್ಲಗೆ ಎನ್ನತೊಡಗಿದ: "ತಿನ್ನು, ಬೇಗನೆ ತಿಂದು ಬಿಡು! ತಡ ಮಾಡಿದರೆ..

"ಅಪ್ಪ?"

"ಏಕೆ ಮಗೂ?"

"ಬಾ, ಅನ್ನವಾಗಿದೆ; ಊಟಕ್ಕೆ ಬಾ!" ಎಂದು ಎನ್ನುತ್ತ ಅಮಿನಾ ಮನೆಯ ಹೊರಗೆ ಬಂದು ಬಾಗಿಲ ಬಳಿಯಲ್ಲಿ ನಿಂತಳು. ಸ್ವಲ್ಪ ಹೊತ್ತು ನೋಡಿ "ಮಹೇಶನಿಗೆ ಪುನಃ ಮನೆಯ ಮಾಳಿಗೆಯ ಹುಲ್ಲನ್ನು ತಿನ್ನಿಸುತ್ತಿರುವೆಯೇನು ಅಪ್ಪಾ?" ಎಂದಳು.

ಇದೇ ಅಂಜಿಕೆಯಿದ್ದಿತು ಅವನಿಗೆ, "ಹಳೆಯ ಹುಲ್ಲು; ಬಿದ್ದು ಹೋಗುತ್ತಿದ್ದಿತು ಮಗೂ!" ಎಂದ ಗಫೂರ್.

"ಅಪ್ಪಾ, ನೀನು ಹುಲ್ಲನ್ನು ಹಿರಿಯುತ್ತಿದ್ದೆ; ನಾನು ಒಳಗಿಂದಲೇ ಶಬ್ದ ಕೇಳಿದೆ!"

"ಇಲ್ಲ ಮಗೂ, ಹಿರಿಯಲಿಲ್ಲ!"

"ಹೀಗೇ ಹಿರಿಯುತ್ತ ಹೋದರೆ ಗೋಡೆ ಬೀಳುವುದು ಅಪ್ಪ?"

ಗಫೂರ್ ಸುಮ್ಮಗಿದ್ದ. ಕೇವಲ ಒಂದು ಕೋಣೆಯನ್ನುಳಿದು ಎಲ್ಲ ಮನೆಯೂ ಬಿದ್ದು ಹೋಗಿರುವುದು. ಹೀಗೆ ಮಾಡಿದರೆ ಮುಂದಿನ ಮಳೆಗಾಲದಲ್ಲಿ ಇದೂ ಉಳಿಯದು ಎಂಬ ಮಾತನ್ನು ಅವನಿಗಿಂತ ಚೆನ್ನಾಗಿ ಹೆಚ್ಚಾಗಿ ಯಾರು ಬಲ್ಲರು? ಈ ರೀತಿಯಾಗಿ ಇನ್ನೆಷ್ಟು ದಿನಗಳನ್ನು ದೂಡಬಹುದು ಎಂಬುದನ್ನೂ ಅವನ ಹೊರತಾಗಿ ಇನ್ನಾರು ಹೇಳಬಲ್ಲರು?

"ಕೈಕಾಲನ್ನು ತೊಳೆದುಕೊಂಡು ಊಟ ಮಾಡು ಅಪ್ಪಾ! ಬಡಿಸಿ ಕೂಡ ಇಟ್ಟಿದ್ದೇನೆ!" ಎಂದಳು ಮಗಳು.

"ಗಂಜಿ ಸ್ವಲ್ಪ ಕೊಟ್ಟು ಹೋಗು ಮಗೂ, ಮಹೇಶನಿಗೆ ಕುಡಿಸಿ ಬಳಿಕ ಸಮಾಧಾನದಿಂದ ಉಣ್ಣುತ್ತೇನೆ!".

"ಗಂಜಿ ಬಸಿಯಲಿಲ್ಲ ಈವೊತ್ತು ಅಪ್ಪಾ!"

"ಇಲ್ಲವೆ?" ಎಂದು ಗಫೂರ್ ಸುಮ್ಮಗಾದ. ಇಂತಹ ಕಷ್ಟಕಾಲದಲ್ಲಿ ಇನಿತನ್ನೂ ಕೆಡಿಸಲಾಗದೆಂಬುದನ್ನು ಹತ್ತು ವರುಷದ ಹುಡುಗಿಯೂ ಅರಿತಿರುವಳು. ಕೈಕಾಲು ಮುಖ ತೊಳೆದುಕೊಂಡು ಅವನು ಒಳಕ್ಕೆ ಹೋದ. ತಂದೆಗೆ ಒಂದು ಹಿತ್ತಾಳೆಯ ತಟ್ಟೆಯಲ್ಲಿ ಅನ್ನ ಮತ್ತು ಬೇಳೆಯನ್ನು ಬಡಿಸಿ, ತನಗೊಂದು ಮಣ್ಣಿನ ತಟ್ಟೆಯಲ್ಲಿ ಬಡಿಸಿಕೊಂಡು ಮಗಳು ಕುಳಿತಿದ್ದಳು. ಗಫೂರನೆಂದ: "ಮಗೂ, ಮತ್ತೆ ಚಳಿಎನಿಸತೊಡಗಿದೆ; ಜ್ವರದಲ್ಲಿ ಊಟ ಮಾಡುವುದು ಸರಿಯೆ?"

ಅಮಿನಾ ಉದ್ವಿಗ್ನಳಾದಳು; ಬಳಿಕ "ಆಗ ಬಹಳ ಹಸಿವೆಯಾಗುತ್ತಿರುವುದೆಂದು ಹೇಳಿದ್ದೆಯಲ್ಲಪ್ಪಾ!" ಎಂದಳು.

"ಆಗ—ಆಗ ಜ್ವರ ಇರಲಿಕ್ಕಿಲ್ಲ ಮಗೂ!"

"ಮುಚ್ಚಿಡಲೇ ಹಾಗಾದರೆ? ಸಾಯಂಕಾಲ ಉಣ್ಣುತ್ತಿಯಾ?"

ಗಫೂರ್ ತಲೆಯಲ್ಲಾಡಿಸಿ "ತಣಿದ ಅನ್ನವನ್ನು ಉಣ್ಣುವುದರಿಂದ ಇನ್ನೂ ಪ್ರಕೃತಿ ಕೆಡುತ್ತದೆ ಅಮಿನಾ!" ಎಂದ.

"ಹಾಗಾದರೆ?"

ಗಫೂರ್ ಈ ಸಮಸ್ಯೆಯನ್ನು ಕುರಿತು ಕೂಡಲೆ ನಿರ್ಣಯ ಹೇಳಿಬಿಟ್ಟ: "ಅಮಿನಾ, ಒಂದು ಕೆಲಸ ಮಾಡು! ಇದನ್ನು ಮಹೇಶನಿಗೆ ತಿನ್ನಿಸಿಬಿಡು! ರಾತ್ರಿಗಾಗಿ ನನಗೊಂದು ಹಿಡಿ ಅನ್ನ ಮಾಡಲಾರೆಯಾ ಮಗೂ?"

ಅಮಿನಾ ಮುಖವೆತ್ತಿ ಸ್ವಲ್ಪ ಸಮಯ ತಂದೆಯ ಮುಖವನ್ನು ನೋಡುತ್ತ ಕುಳಿತಳು; ಬಳಿಕ ತಲೆಬಾಗಿಸಿ "ಮಾಡುತ್ತೇನೆ ಅಪ್ಪಾ!" ಎಂದಳು.

ಗಫೂರನ ಮುಖವು ಕೆಂಪೇರಿತು. ತಂದೆ ಮತ್ತು ಮಗಳ ನಡುವಿನ ಈ ಸ್ವಲ್ಪ ಮಾಯೆಯ ಅಭಿನಯವನ್ನು, ಆ ಇರ್ವರು ಪ್ರಾಣಿಗಳ ಹೊರತಾಗಿ ಇನ್ನೂ ಒರ್ವನು ಅಂತರಿಕ್ಷದಲ್ಲಿದ್ದುಕೊಂಡು ನೋಡಿದನು.

೨

ಆರೇಳು ದಿನಗಳ ನಂತರ ಒಂದು ದಿನ, ರೋಗಿ ಗಫೂರ್ ಚಿಂತಿತನಾಗಿ ತನ್ನ ಮನೆಯಂಗಳದಲ್ಲಿ ಕುಳಿತಿದ್ದ. ಅವನ ಮಹೇಶ ನಿನ್ನೆಯಿಂದ ಮನೆಗೆ ಹಿಂತಿರುಗಿ ಬಂದಿಲ್ಲ. ಗಫೂರ್ ಅಶಕ್ತನಾಗಿದ್ದುದರಿಂದ ಅಮಿನಾ ಮಹೇಶನನ್ನು ಬೆಳಗಿನಿಂದ ಹುಡುಕುತ್ತಿರುವಳು. ಕತ್ತಲಾಗುವ ಮುನ್ನ ಅವಳು ಬಂದು "ಅಪ್ಪಾ, ಮಾಣಿಕ ಬಾಬುಗಳು ಅದನ್ನು 'ಕೊಂಡವಾಡೆ'ಗೆ ಕಳಿಸಿರುವರು!" ಎಂದು ಹೇಳಿದಳು.

"ಹೋಗೇ ಹುಚ್ಚೀ!"

"ಇಲ್ಲಪ್ಪಾ, ನಿಜ! ಅವರ ಆಳುಮಗನೇ ನನಗೆ ಸ್ವತಃ ಹೇಳಿದ; ನಿನಗೆ ತಿಳಿಸಲಿಕ್ಕೂ ಹೇಳಿದ!"

"ಅದೇನು ಮಾಡಿತ್ತು?"

"ಅವರ ತೋಟದಲ್ಲಿ ಹೊಕ್ಕು ಗಿಡ-ಗಂಟಿಗಳನ್ನು ಹಾಳುಮಾಡಿದೆಯಂತೆ!"

ಗಫೂರ್ ದಿಙ್ಮೂಢನಾಗಿ ಕುಳಿತ. ಮಹೇಶನ ಬಗ್ಗೆ ಅನೇಕ ಕೆಟ್ಟ ಕಲ್ಪನೆಗಳನ್ನು ಮಾಡಿಕೊಂಡಿದ್ದ; ಆದರೆ ಇಂತಹ ಕಲ್ಪನೆಯನ್ನೆಂದೂ ಮಾಡಿರಲಿಲ್ಲ. ಅದು ಈ ರೀತಿ ಮಾಡುವ ಪ್ರಾಣಿಯಲ್ಲ, ಇಂತಹ ಶಿಕ್ಷೆಯಾಗುವ ಕೆಲಸವನ್ನೆಂದಿಗೂ ಮಾಡು-

ವಂತಹದಲ್ಲ. ಮಾಣಿಕ ಬಾಬುಗಳೂ ಅಂತಹ ಮನುಷ್ಯರಲ್ಲ. ಅವರ ಬ್ರಾಹ್ಮಣಭಕ್ತಿ, ಗೋಭಕ್ತಿ ಬಹು ಪ್ರಸಿದ್ಧವಾಗಿರುವುದು. ಅಂಥಹರಿಂದ ಇಂತಹ ಕೆಲಸವಾಗುವುದೆಂಬ ಸಂಶಯವಿರಲಿಲ್ಲ.

"ಕತ್ತಲಾಗುತ್ತ ಬಂದಿತು, ಮಹೇಶನನ್ನು ತರುವುದಕ್ಕೆ ಹೋಗುವುದಿಲ್ಲೇನು ಅಪ್ಪ ?" ಮಗಳು ಕೇಳಿದಳು.

"ಇಲ್ಲ!"

"ಮೂರು ದಿನಗಳೊಳಗಾಗಿ ಬಿಡಿಸಿಕೊಳ್ಳದಿದ್ದರೆ, ಪೋಲೀಸರು ಅದನ್ನು ಒಯ್ದು ದನದ ಸಂತೆಯಲ್ಲಿರಿಸಿ ಮಾರಿಬಿಡುವರೆಂದೂ ಹೇಳಿರುವನು!"

"ಮಾರಲಿ ಬಿಡು!"

'ದನದ ಸಂತೆ' ಎಂದರೇನೆಂಬುದು ಅಮೀನಾಳಿಗೆ ಚೆನ್ನಾಗಿ ಗೊತ್ತಿರಲಿಲ್ಲ. ಅದರ ಹೆಸರನ್ನೆತ್ತಿದ ಕೂಡಲೆ ತನ್ನ ತಂದೆಯು ಎಷ್ಟು ನಿಸ್ತೇಜನಾಗುವನೆಂಬುದನ್ನು ಈ ಮೊದಲು ಅಮೀನಾಳು ಅನೇಕ ಸಲ ನೋಡಿದ್ದಳು. ಆದರೆ ಈವೊತ್ತು ತಂದೆ ಹೀಗೆ ನುಡಿದುದರಿಂದ ಅವಳಿಗೆ ಆಶ್ಚರ್ಯವೆನಿಸಿತು. ಗಫೂರ್ ಮೆಲ್ಲಗೆ ಹೊರಗೆ ಹೊರಟು ಹೋದ. ಮೆಲ್ಲಗೆ ಅವನು ಬನ್ಸಿಯ ಅಂಗಡಿಗೆ ಹೋಗಿ "ಕಾಕಾ, ಈವೊತ್ತು ಒಂದು ರೂಪಾಯಿ ಕೊಡಬೇಕು" ಎಂದು ತನ್ನ ಹಿತ್ತಾಳೆಯ ತಟ್ಟೆಯನ್ನು ಬನ್ಸಿಯ ಮುಂದಿಟ್ಟ. ಬನ್ಸಿಯು ಆ ತಟ್ಟೆಯನ್ನು ತೂಗಿ ಹಿಂದೊಂದು ಸಲ ಅಡವು ಇಟ್ಟುಕೊಂಡು ಹಣ ಕೊಟ್ಟಿದ್ದರಿಂದ, ಈ ಸಾರೆಯೂ ಒಂದು ರೂಪಾಯಿಯನ್ನು ಕೊಡಲು ಹಿಂದುಮುಂದು ನೋಡಲಿಲ್ಲ.

* * *

ಮರುದಿನ ಅದೇ ಸ್ಥಾನದಲ್ಲಿ 'ಮಹೇಶ' ಕಟ್ಟಲ್ಪಟ್ಟಿದ್ದ. ಅದೇ ಮರ, ಅದೇ ಕಣ್ಣೆ, ಅದೇ ಗೂಟ, ಅದೇ ಆಹಾರ, ಅದೇ ಕ್ಷುಧಾತುರ ಜಲಪೂರಿತ ನಯನಗಳು. ಒಬ್ಬ ಮುದುಕ ಮುಸಲ್ಮಾನ ಅದನ್ನು ಅತ್ಯಂತ ತೀಕ್ಷ್ಣದೃಷ್ಟಿಯಿಂದ ನೋಡುತ್ತಿದ್ದ. ಅದರ ಬಳಿಯಲ್ಲಿಯೆ ಗಫೂರ್ ಎರಡೂ ಮೊಣಕಾಲುಗಳನ್ನು ಕೂಡಿಸಿಕೊಂಡು ಕುಳಿತಿದ್ದ. ಆ ಮುದುಕ ತನ್ನ ಕಿಸೆಯೊಳಗಿಂದ ಹತ್ತು ರೂಪಾಯಿಗಳ ನೋಟನ್ನು ಹೊರಕ್ಕೆ ತೆಗೆದು ಅದರ ಮಡಿಕೆಯನ್ನು ಸರಿಮಾಡುತ್ತ ಗಫೂರನ ಬಳಿಗೆ ಹೋಗಿ "ಇನ್ನು ನಿನ್ನ ಕೂಡ ಧಾರಣೆ ಮಾಡಿ, ಈ ನೋಟನ್ನು ಮುರಿಸುವುದಿಲ್ಲ! ಇಗೋ, ಹತ್ತು ರೂಪಾಯಿಗಳನ್ನು ಕೊಟ್ಟುಬಿಡುವೆ; ತೆಗೆದುಕೊ!" ಎಂದ.

ಗಫೂರ್ ಕೈಯನ್ನು ಮುನ್ನೀಡಿ ಹತ್ತು ರೂಪಾಯಿಗಳ ನೋಟನ್ನು ತೆಗೆದುಕೊಂಡು ಹಾಗೆಯೆ ಕುಳಿತ. ಆ ಮುದುಕನ ಕೂಡ ಬಂದವರಿಬ್ಬರೂ ಅದರ ಕಣ್ಣಿಗೆ ಕೈಹಚ್ಚುತ್ತಲೆ, ಗಫೂರ್ ಎದ್ದುನಿಂತ. ಗಟ್ಟಿಯಾಗಿ "ಕಣ್ಣಿಗೆ ಕೈ ಹಚ್ಚೀರಿ—ಹುಷಾರಿ! ಒಳ್ಳೆಯದಾಗಲಿಕ್ಕಿಲ್ಲ!" ಎಂದ.

ಅವರು ಬೆಚ್ಚಿಬಿದ್ದರು. ಮುದುಕ ಆಶ್ಚರ್ಯದಿಂದ "ಏಕೆ?" ಎಂದು ಕೇಳಿದ.

ಗಫೂರ್ ಕೋಪದಿಂದ ಅದೇ ಧ್ವನಿಯಲ್ಲಿ "ಏಕೆ? ನನ್ನ ವಸ್ತು! ನಾನು ಮಾರುವುದಿಲ್ಲ! ನನ್ನ ಇಚ್ಛೆ!" ಎಂದು ನೋಟನ್ನು ಮುದುಕನತ್ತ ಚೆಲ್ಲಿಬಿಟ್ಟ.

ಆ ಜನರು "ನಿನ್ನೆ ದಾರಿಯಲ್ಲಿ ಸಂಚುಗಾರಿಕೆ ತೆಗೆದುಕೊಂಡು ಬಂದಿದ್ದೆಯಲ್ಲ?" ಎಂದರು.

"ತೆಗೆದುಕೊಳ್ಳಿರಿ ನಿಮ್ಮ ಸಂಚುಗಾರಿಕೆ!" ಎಂದು, ಸೊಂಟದೊಳಗಿನ ಎರಡು ರೂಪಾಯಿಗಳನ್ನು ತೆಗೆದು ತಿರುಗಿ ಕೊಟ್ಟುಬಿಟ್ಟ. ಜಗಳವಾಗುವುದೆಂದು ಮುದುಕ ನಕ್ಕು "ಇನ್ನೆರಡು ರೂಪಾಯಿ ಹೆಚ್ಚಿಗೆ ಬೇಡುತ್ತೀ ಅಲ್ಲವೆ? ಕೊಟ್ಟುಬಿಡಿರಿ ಇನ್ನೆರಡು ರೂಪಾಯಿ; ಅವನ ಮಗಳ ಕೈಯಲ್ಲಿ ಕೊಟ್ಟು ಬಿಡಿರಿ! ಸರಿ, ಇಷ್ಟೇ ಅಲ್ಲವೆ?" ಎಂದ.

"ಊಹೂಂ!"

"ಇದಕ್ಕೂ ಹೆಚ್ಚಿಗೆ ಒಂದು ಕಾಸನ್ನು ಕೂಡ ಯಾರೂ ಕೊಡರು, ಗೊತ್ತೇನು?" ಗಫೂರ್ ತಲೆಯಲ್ಲಾಡಿಸಿ "ಊಹೂಂ" ಎಂದ. ಮುದುಕ ಸಿಟ್ಟಾಗಿ "ಏನು? ಚರ್ಮಕ್ಕೆ ಮಾತ್ರ ಬೆಲೆ ಬರುವುದು. ಮತ್ತೇನಿದೆ ಇದರಲ್ಲಿ?" ಎಂದ.

"ತೋಬಾ! ತೋಬಾ—" ಗಫೂರನ ಬಾಯಿಂದ ಅಕಸ್ಮಾತ್ ಒಂದು ಕೆಟ್ಟ ಶಬ್ದವು ಹೊರಬಿದ್ದು ಹೋಯಿತು. ಕೂಡಲೆ ಅವನು ತನ್ನ ಮನೆಯೊಳಗೆ ಹೋಗಿ ಕೂಗಿ ಕೂಗಿ "ನೀವು ಬೇಗ ಈ ಊರು ಬಿಟ್ಟುಹೋಗದಿದ್ದರೆ, ಜಮೀನುದಾರರಿಗೆ ಹೇಳಿ ಹೊರಗೆ ಹಾಕಿಸುತ್ತೇನೆ!" ಎಂದು ಬೆದರಿಸತೊಡಗಿದ.

ಕೂಗನ್ನು ಕೇಳಿ ಜನರು ಸೇರಿದರು; ಇಷ್ಟರಲ್ಲಿ ಜಮೀನುದಾರರಿಂದಲೂ ಕರೆಯು ಬಂದಿತು. ಈ ಸುದ್ದಿ ಜಮೀನುದಾರರವರೆಗೂ ಮುಟ್ಟಿ ಬಿಟ್ಟಿದ್ದಿತು.

ಕಚೇರಿಯಲ್ಲಿ ಆಗ ಉಚ್ಚ, ಕೀಳು, ಸಭ್ಯ, ಅಸಭ್ಯರಾದ ಎಲ್ಲ ತರಗತಿಯ ಜನರೂ ಕುಳಿತಿದ್ದರು. ಶಿವಶಂಕರ ಬಾಬುಗಳು ಕಣ್ಣುಗಳನ್ನು ಅಗಲವಾಗಿಸಿ "ಗಫೂರ್, ನಿನಗೆ ಯಾವ ಶಿಕ್ಷೆ ಕೊಡಬೇಕೆನ್ನುವುದು ತಿಳಿಯದಾಗಿದೆ! ನೀನು ಯಾರ ಜಮೀನುದಾರಿಯಲ್ಲಿರುವೆಯೆಂಬುದು ಗೊತ್ತಿರುವುದೇನು?" ಎಂದರು.

ಗಫೂರ್ ಕೈಜೋಡಿಸಿ "ಗೊತ್ತಿದೆ ದೇವರು! ನಾವು ಹೊಟ್ಟೆಗಿಲ್ಲದೆ ಸಾಯುತ್ತಿರುವೆವು; ತಾವು ಇಂದು ಯಾವ ದಂಡವನ್ನು ವಿಧಿಸಿದರೂ ನಾನು ಅದಕ್ಕೆ ವಿರುದ್ಧ ಹೋಗುತ್ತಿದ್ದಿಲ್ಲ!" ಎಂದು ನುಡಿದ.

ಎಲ್ಲರಿಗೂ ಆಚ್ಚರಿಯಾಯಿತು. ಎಲ್ಲರೂ ಗಫೂರ್‌ನನ್ನು 'ಹಟಮಾರಿ, ಕೆಟ್ಟ ಸ್ವಭಾವದವ' ಎಂದು ತಿಳಿಯುತ್ತಿದ್ದರು. ಗಫೂರ್ ಬಿಗಿದ ಕಂಠದಿಂದ "ಇನ್ನು ಇಂತಹ ಕೆಲಸವನ್ನೆಂದಿಗೂ ಮಾಡುವುದಿಲ್ಲ ರಾಯರೆ!" ಎಂದು ಅವನು ಸ್ವತಃ ತನ್ನ ಕಿವಿಗಳನ್ನು ಹಿಡಿದುಕೊಂಡು, ಅಂಗಳದಲ್ಲಿ ತನ್ನ ಮೂಗುತಿಕ್ಕಿದ.

ಶಿವಶಂಕರ ಬಾಬುಗಳು ದಯೆದುಂಬಿದ ದನಿಯಿಂದ "ಹೋಗು, ಹೋಗು! ಇನ್ನೆಂದೂ ಹೀಗೆ ಮಾಡಬೇಡ!" ಎಂದರು.

ಇದಲ್ಲವನ್ನೂ ಕೇಳಿ ಎಲ್ಲರ ಮೈನವಿರುಗಳು ನಿಮಿರಿನಿಂತುವು. ಒಂದು ಮಹಾಕಾಂಡವಾಗುವುದಿದ್ದಿತು, ಅದು ಜಮೀನುದಾರರ ಪುಣ್ಯಪ್ರಭಾವದಿಂದ ಮತ್ತು ಶಾಸನದ ಬಲದಿಂದ ನಿಂತಿತು ಎಂಬುದರ ಬಗ್ಗೆ ಯಾರಿಗೂ ತಿಲಮಾತ್ರ ಸಂದೇಹವೂ ಉಳಿಯ-ಲಿಲ್ಲ! 'ತರ್ಕರತ್ನ' ಮಹಾಶಯರೂ ಅಲ್ಲಿದ್ದರು; ಅವರು 'ಗೋ' ಶಬ್ದದ ಶಾಸ್ತ್ರೀಯ ವ್ಯಾಖ್ಯೆಯನ್ನು ಮಾಡಿದರು, ಅಲ್ಲದೆ ಇಂತಹ ಧರ್ಮಜ್ಞಾನಶೂನ್ಯ ಮ್ಲೇಚ್ಛ ಜಾತಿಯವರನ್ನು ಊರ ಹತ್ತಿರ ಕೂಡ ಏತಕ್ಕೆ ಇರಗೊಡಬಾರದೆಂಬ ವಿಷಯವನ್ನೂ ಹೇಳಿ, ಜನರ ಜ್ಞಾನಚಕ್ಷುಗಳನ್ನು ತೆರೆದರು!

ಗಫೂರ್ ಯಾವ ಮಾತಿಗೂ ಉತ್ತರವೀಯಲಿಲ್ಲ; ಆದರೆ 'ಈ ಅಪಮಾನ ಮತ್ತು ತಿರಸ್ಕಾರಗಳು ಯಥಾರ್ಥವಾದುವು. ಮತ್ತು ತನಗೆ ದೊರೆಯತಕ್ಕುವು!' ಎಂದು ತಿಳಿದು ಅದನ್ನು ಸ್ವೀಕರಿಸಿದ; ಪ್ರಸನ್ನಚಿತ್ತದಿಂದ ಮನೆಗೆ ಹೋದ. ಪಕ್ಕದ ಮನೆಯವರಿಂದ ಕಲಗಚ್ಚನ್ನು ಬೇಡಿತಂದು ಅದನ್ನು ಮಹೇಶನಿಗೆ ಕುಡಿಸಿದ; ಅದರ ಶರೀರ ಹಾಗೂ ಕೋಡುಗಳ ಮೇಲೆ ಕೈಯಾಡಿಸುತ್ತ ಏನೇನನ್ನೋ ಅಸ್ಫುಟಸ್ವರದಲ್ಲಿ ನುಡಿಯುತ್ತಿದ್ದ.

ಜ್ಯೇಷ್ಠಮಾಸವು ಮುಗಿಯತೊಡಗಿದ್ದಿತು. ವೈಶಾಖದ ಕೊನೆ-ಯಲ್ಲಿ ಆತ್ಮಪ್ರಕಾಶವನ್ನು ತೋರಿಸಿದ ರುದ್ರನ ಮೂರ್ತಿಯು ಎಷ್ಟು ಭೀಷಣ ಮತ್ತು ಕಠೋರವಾಗಬಲ್ಲುದು ಎಂಬುದರ ಕಲ್ಪನೆಯು, ಇಂದಿನ ಆಕಾಶದ ಕಡೆಗೆ ನೋಡದೆ ಹೋದರೆ ಬಾರದು. ಎಲ್ಲಿಯೂ ಕರುಣೆಯ ಆಭಾಸವು ಇರಲಿಲ್ಲ. 'ಎಂದಾ-ದರೂ ಈ ಆಗಸದಲ್ಲಿ ಮೇಘಗಳು ಮೂಡಿಯಾವು' ಎಂಬುವರ ಕಲ್ಪನೆಯನ್ನು ಇಂದು ಮಾಡುವುದಕ್ಕೂ ಹೆದರಿಕೆಯಾಗುವುದು. ಪ್ರಜ್ವಲಿತವಾದ—ನಭಸ್ಥಲ ವ್ಯಾಪ್ತವಾದ—ಅಗ್ನಿಯ ವರ್ಷಾವಕ್ಕೆ ಅಂತ್ಯವಿರಲಿಲ್ಲ, ಸಮಾಪ್ತಿಯಿರಲಿಲ್ಲ. ಎಲ್ಲರನ್ನೂ ಸುಡದೆ ಅದು ನಿಲ್ಲಲಿಕ್ಕಿಲ್ಲವೆಂದು ಎನಿಸುತ್ತಿದ್ದಿತು.

ಇಂತಹ ಹೊತ್ತಿನಲ್ಲಿ ಒಂದುದಿನ ಗಫೂರ್ ಮನೆಗೆ ಬಂದ. ಅನ್ಯರ ಬಾಗಿಲ ಬಳಿ ಕೂಲಿಯ ಕೆಲಸವನ್ನು ಮಾಡುವ ಅಭ್ಯಾಸವು ಗಫೂರನಿಗೆ ಇರಲಿಲ್ಲ. ಜ್ವರ ನಿಂತು ಮೂರು ನಾಲ್ಕು ದಿನಗಳು ಮಾತ್ರ ಆಗಿವೆ, ಶರೀರದಲ್ಲಿ ಇನ್ನೂ ಬಲವು ಬಂದಿಲ್ಲ; ಆದರೂ ಈಹೊತ್ತು ಅವನು ಕೆಲಸವನ್ನು ಹುಡುಕಲು ಹೊರಟಿದ್ದ. ಭಯಂಕರ ಬಿಸಿಲ ಹಣ್ಣು ಅವನಿಗೆ ದೊರೆಯಿತೇ ವಿನಾ ಮತ್ತೇನೂ ದೊರೆಯಲಿಲ್ಲ. ಹಸಿವು, ಬಾಯಾರಿಕೆ, ದಣಿವುಗಳಿಂದ ಅವನ ಕಣ್ಣು ಕತ್ತಲುಗೂಡಿಸತೊಡಗಿದ್ದುವು. ಅಂಗಳದಲ್ಲಿ ನಿಂತು ಅವನು "ಅಮೀನಾ, ಅನ್ನವಾಯಿತೇನು?" ಎಂದು ಕೂಗಿ ಕೇಳಿದ.

ಅಮೀನಾ ಸುಮ್ಮಗೆ ಹೊರಗೆ ಬಂದು ಬಾಗಿಲಬಳಿ ನಿಂತಳು.

ಉತ್ತರವು ಬಾರದುದನ್ನು ಕಂಡು ಅವನು ಚೀರತೊಡಗಿದ: "ಆಯಿತೇನು ಅನ್ನ? ಏನೆಂದೆ? ಆಗಲಿಲ್ಲವೆ? ಏಕೆ, ಏಕಾಗ-ಲಿಲ್ಲ ಹೇಳು!"

"ಅಕ್ಕಿ ಇಲ್ಲ ಅಪ್ಪಾ!"

"ಅಕ್ಕಿ ಇಲ್ಲವೆ? ಬೆಳಗ್ಗೆ ನನಗೇಕೆ ಹೇಳಲಿಲ್ಲ?"

"ರಾತ್ರಿಯಲ್ಲೇ ಹೇಳಿದ್ದೆ!"

ಗಫೂರ್ ಅವಳಂತೆಯೆ ಅಣಕಿಸಿ ನುಡಿದ: "ರಾತ್ರಿಯಲ್ಲೇ ಹೇಳಿದ್ದೆ! ರಾತ್ರಿಯಲ್ಲಿ ಹೇಳಿದರೆ ನೆನಪು ಉಳಿಯುವುದೇನು?" ಎಂದ ಕರ್ಕಶಕಂಠದಿಂದ. ಅವನ ಕೋಪ ಇಮ್ಮಡಿ ಯಾಯಿತು. ಅವನು ಮುಖಾಕೃತಿಯನ್ನು ವಿಕೃತಮಾಡುತ್ತ "ಅಕ್ಕಿ ಇರುವುದಾದರೂ ಹೇಗೆ? ರೋಗಿತಂದೆ ಉಂಡರೇನು, ಉಣ್ಣದಿದ್ದರೇನು? ಈ ಮಗಳಿಗೆ ಮೂರು ಮೂರು—ನಾಲ್ಕು ನಾಲ್ಕು—ಸಲ ನುಂಗಲು ಬೇಕು! ಈಹೊತ್ತಿನಿಂದ ನಾನು ಅಕ್ಕಿಯನ್ನು ಕಪಾಟಿನಲ್ಲಿಟ್ಟು ಬೀಗ ಹಾಕಿ ಬಿಡುವೆನು! ಕೊಡು, ಒಂದು ತಂಬಿಗೆ ನೀರು ಕೊಡು! ಬಾಯಾರಿಕೆಯಿಂದ ಎದೆ ಬಿರಿದು ಹೋಗುತ್ತಿದೆ! ಹುಂ, ನೀರೂ ಇಲ್ಲ ಎಂದು ಹೇಳಿ ಬಿಡು!" ಎಂದು ನುಡಿದ.

ಅಮೀನಾ ತಲೆಬಾಗಿಸಿಕೊಂಡು ಸುಮ್ಮಗೆ ನಿಂತಿದ್ದಳು. ಸ್ವಲ್ಪ ಹೊತ್ತಾದ ಬಳಿಕ ಮನೆಯಲ್ಲಿ ಕುಡಿಯಲು ನೀರು ಸಹ ಇಲ್ಲ ವೆಂಬುದು ಅವನಿಗೆ ತಿಳಿಯಿತು. ಅವನ ಸಿಟ್ಟು ಸೀಮೆ ಬಿಟ್ಟಿತು. ಹುಡುಗಿಯ ಕೆನ್ನೆಯ ಮೇಲೆ ಒಂದೇಟು ಕೊಟ್ಟು ಬಿಟ್ಟ, ಮತ್ತು ಹೇಳಿದ: "ಹತಭಾಗಿ ಹುಡುಗೀ, ನೀನು ದಿವಸವೆಲ್ಲ ಏನು ಮಾಡುತ್ತಿರುವೆ? ಇಷ್ಟು ಜನರು ಸಾಯುವರು, ನೀನೇಕೆ ಸಾಯುವುದಿಲ್ಲ?"

ಹುಡುಗಿಯು ಉತ್ತರವೀಯದೆ, ಮಣ್ಣಿನ ಕೊಡವನ್ನು ತೆಗೆದು ಕೊಂಡು ಆ ಉರಿಬಿಸಿಲಿನಲ್ಲೇ ಕಣ್ಣೊರಸಿಕೊಳ್ಳುತ್ತ ನಡೆದಳು. ಅವಳು ಕಣ್ಮರೆಯಾದೊಡನೆಯೆ ಗಫೂರನ ಎದೆಯಲ್ಲಿ ಶೂಲ ಚುಚ್ಚಿದಂತಾಗತೊಡಗಿತು. ತಾಯಿಯಿಲ್ಲದ ಆ ಹುಡುಗಿ ಯನ್ನು ಯಾವ ಬಗೆಯಾಗಿ ಜೋಪಾನಮಾಡಿರುವನೆಂಬುದನ್ನು ಅವನೇ ಬಲ್ಲ.

ಕಾರ್ಯಪರಾಯಣೆಯೂ ಶಾಂತಳೂ ಆದ ಆ ಹುಡುಗಿಯ ದೋಷ ಯಾವುದೂ ಇಲ್ಲ ಎಂದು ಅವನಿಗೆನಿಸತೊಡಗಿತು. ಹೊಲದ ಕಾಳು ತೀರಿದ ಬಳಿಕ, ಎರಡೂ ಹೊತ್ತು ಹೊಟ್ಟೆ ತುಂಬ ಅವಳಿಗೆ ಅನ್ನ ಕೂಡ ದೊರೆಯುತ್ತಿಲ್ಲ; ಒಂದೊಂದು ದಿನ ಬರೀ ಗಂಜಿಯನ್ನೇ ಕುಡಿದಿರುವಳು; ಒಂದೊಂದು ದಿನ ಅದೂ ಅವಳಿಗೆ ದೊರೆಯುವುದಿಲ್ಲ. ದಿನಕ್ಕೆ ನಾಲ್ಕು ನಾಲ್ಕು ಸಲ ಉಣ್ಣುವ ಮಾತು ಅಸಂಭವವಿದ್ದಷ್ಟೇ ಸುಳ್ಳೂ ಇದ್ದಿತು. ಮನೆ ಯಲ್ಲಿ ನೀರಿನ ಅಭಾವದ ಕಾರಣವು ಅವನಿಗೆ ಗೊತ್ತು ಇದ್ದಿಲ್ಲ ವೆಂತಲ್ಲ. ಊರಲ್ಲಿದ್ದ ಎರಡು ಮೂರು ಕೆರೆಗಳೂ ಬತ್ತಿ ಹೋಗಿರುವುವು. ಶಿವಚರಣ ಬಾಬುಗಳ ಮನೆಯ ಹಿಂದೆ ಇದ್ದ ಪುಷ್ಕರಿಣಿಯಲ್ಲಿ ಸ್ವಲ್ಪ ನೀರು ಇದೆ, ಆದರೆ ಅದು ಎಲ್ಲರಿಗೂ ಸಿಕ್ಕುವಂತಿಲ್ಲ. ಕೆರೆಗಳಲ್ಲಿ ತಗ್ಗು ತೋಡಿದರೆ ಸ್ವಲ್ಪ ನೀರು ಸಿಕ್ಕುವುವು; ಅದಕ್ಕೂ ಹೊಡೆದಾಟ ಬಡಿದಾಟ. ಜನ-

ದಟ್ಟಣೆಯೂ ಹೆಚ್ಚು. ಮುಸಲ್ಮಾನರಿದ್ದುದರಿಂದ ಬಳಿಗೆ ಹೋಗು ವಂತೆಯೂ ಇಲ್ಲ. ಗಂಟೆಗಟ್ಟಲೆ ಕಾಲ ದೂರ ನಿಂತುಕೊಂಡು— ಯಾರಾದರೂ ಕರುಣೆಯಿಂದ ನೀರು ಹನಿಸಿದರೆ ತೆಗೆದುಕೊಂಡು ಬರಬೇಕು. ಈ ಸಂಗತಿಯು ಗಫೂರನಿಗೆ ಗೊತ್ತಿದ್ದಿತು. ನೀರಿಗಾಗಿ ಜನರಲ್ಲಿ ಹೊಡೆದಾಟ-ಬಡಿದಾಟವಾಗಿರಬಹುದು, ಮಗಳಿಗೆ ಯಾರೂ ನೀರು ಹನಿಸಿರಲಿಕ್ಕಿಲ್ಲ— ಎಂಬ ಮಾತು ಹೊಳೆದು, ಅವನ ಕಣ್ಣುಗಳಲ್ಲಿ ನೀರು ತುಂಬಿಬಂದುವು.

ಇಷ್ಟರಲ್ಲಿ ಜಮೀನುದಾರರ ಆಳುಮಗನು ಯಮದೂತನಂತೆ ಅಂಗಳಕ್ಕೆ ಬಂದು ನಿಂತು "ಗಫೂರ್, ಮನೆಯಲ್ಲಿರುವೆಯೇನು?" ಎಂದು ಕೂಗಿದ.

ಗಫೂರ್ ತಿಕ್ತಸ್ವರದಲ್ಲಿಯೆ "ಹೂಂ, ಇದ್ದೇನೆ! ಏನು?" ಎಂದ.

"ಬಾಬೂ ಸಾಹೇಬರು ಕರೆಯುತ್ತಿದ್ದಾರೆ, ನಡೆ!"

"ಇನ್ನೂ ನಾನು ಉಂಡಿಲ್ಲ, ಸ್ವಲ್ಪ ತಡೆದು ಬರುತ್ತೇನೆ!"

ಇಷ್ಟು ಉದ್ಧಟತನವನ್ನು ಸಹಿಸಿಕೊಳ್ಳಲಾಗಲಿಲ್ಲ ಆ ಆಳು ಮಗನಿಗೆ; ಅವನು ಎಂದ: "ಬಾಬೂ ಸಾಹೇಬರು ಜೋಡಿನಿಂದ ಹೊಡೆಯುತ್ತ ಎಳೆದು ತರಲು ಆಜ್ಞಾಪಿಸಿದ್ದಾರೆ!"

ಗಫೂರ್ ಮೈಮರೆತ; ಅವನೂ ಒಂದು ಕಟುವಾಗಿ ಮಾತನಾಡಿದ: "ಮಹಾರಾಣಿಯ ರಾಜ್ಯದಲ್ಲಿ ಯಾರೂ ಯಾರ ಗುಲಾಮರಾಗಿರುವುದಿಲ್ಲ! ಕಂದಾಯ ಕೊಡುತ್ತೇನೆ, ಇರುತ್ತೇನೆ; ಪುಕ್ಕಟೆ ಇರುವುದಿಲ್ಲ! ಈಗ ನಾನು ಬರುವುದಿಲ್ಲ!" ಎಂದು ನುಡಿದ.

ಈ ಜಗತ್ತಿನಲ್ಲಿ ಇಷ್ಟು ಸಣ್ಣ ಮಾತಿಗಾಗಿ ಇಷ್ಟು ದೊಡ್ಡಸ್ತನದ ಮಾತನಾಡುವುದು ವ್ಯರ್ಥವಷ್ಟೇ ಅಲ್ಲ, ವಿಪತ್ತಿಗೂ ಕಾರಣವಾಗಿರುವುದು. ಇಷ್ಟೊಂದು ಒಳಿತಾಯಿತು:—ಈ ಕ್ಷೀಣ ಕಂಠದ ಸ್ವರವು ಅಷ್ಟು ದೊಡ್ಡವರ ಕಿವಿಯ ವರೆಗೆ ಮುಟ್ಟಲಿಲ್ಲ. ಇಲ್ಲದೆ ಹೋಗಿದ್ದರೆ ಬಾಯಿಗೆ ಬರುವ ತುತ್ತು ಅನ್ನ ಮತ್ತು ಕಣ್ಣಿಗೆ ಬರುವ ನಿದ್ರೆ ಕೂಡ ಹೋಗಿಬಿಡುತ್ತಿದ್ದಿತು.

ಇದಾದ ಬಳಿಕ ಏನಾಯಿತೆಂಬುದನ್ನು ವಿಸ್ತಾರವಾಗಿ ಹೇಳುವುದವಶ್ಯವಿಲ್ಲ. ಗಂಟೆಯ ನಂತರ ಜಮೀನುದಾರರ ಬಳಿಗೆ ಹೋಗಿ ಬಂದ ಬಳಿಕ, ಅವನು ಮಲಗಿರುವಾಗ ಅವನ ಮುಖ ಮತ್ತು ಕಣ್ಣುಗಳು ಊದಿಕೊಂಡಿದ್ದುವು. ಇದಕ್ಕೆ ಮುಖ್ಯ ಕಾರಣ ಅವನ ಮಹೇಶ. ಗಫೂರ್ ಮನೆಬಿಟ್ಟು ಹೊರಬೀಳುತ್ತಲೆ ಅದೂ ಕಣ್ಣಿಯನ್ನು ಹರಿದುಕೊಂಡು ಓಡಿಹೋಯಿತು. ಜಮೀನುದಾರರ ತೋಟವನ್ನು ಹೊಕ್ಕು ಹೂವಿನ ಗಿಡಗಂಟಿಗಳನ್ನೆಲ್ಲ ಹಾಳುಮಾಡಿಬಿಟ್ಟಿತು. ಕೊನೆಗೆ ಅದನ್ನು ಹಿಡಿಯಲು ಯತ್ನಿಸಲಾಯಿತು; ಅದು ಜಮೀನುದಾರರ ಚಿಕ್ಕಮಗಳನ್ನು ಕೆಡಹಿ ಓಡಿಹೋಯಿತು. ಇಂತಹ ಸಂಗತಿಯು ಜರುಗಿದುದು ಇದೇ ಮೊದಲನೆಯ ಸಲವಲ್ಲ; ಇದಕ್ಕೂ ಮೊದಲು ಆಗಿರುವುದು, ಆದರೆ ಅವನು ಬಡವನಾದುದರಿಂದ ಕ್ಷಮಿಸಲಾಗುತ್ತಿದ್ದಿತು. ಆದರೆ ಈ ಬಾರಿ ಅವನು 'ಪ್ರಜೆಯಾಗಿದ್ದುಕೊಂಡು ಕಂದಾಯ ಕೊಡುತ್ತೇನೆ, ಇರುತ್ತೇನೆ, ಗುಲಾಮನಲ್ಲ!' ಎಂದು ಹೇಳಿದುದನ್ನು ಜಮೀನುದಾರರು ಸಹಿಸದಾದರು. ಅವರ ಬಳಿಯಲ್ಲಿ ಅವನನ್ನು ಅಪಮಾನಿತನನ್ನಾಗಿ ಮಾಡಿದರೂ ಹೊಡೆದರೂ ಗಫೂರ್ ವಿರುದ್ಧವಾಗಿ ಏನನ್ನೂ ಮಾಡಲಿಲ್ಲ, ಎಲ್ಲವನ್ನೂ ಬಾಯಿಗೆ ಬೀಗ ಹಾಕಿಕೊಂಡು ಸಹಿಸಿದ; ಮನೆಗೆ ಬಂದ ಮೇಲೆಯೂ ಹಾಗೆಯೇ ಮಲಗಿಕೊಂಡಿದ್ದ. ಹಸಿವು ಬಾಯಾರಿಕೆಗಳು ಮರೆತು ಹೋಗಿದ್ದುವು: ಆದರೆ ಎದೆಯಲ್ಲಿ ಮಾತ್ರ ಉರಿಯನ್ನು ಹೊತ್ತಿಸಿದಂತೆ ಆಗಿದ್ದಿತು. ಈ ರೀತಿಯಾಗಿ ಎಷ್ಟು ಹೊತ್ತು ಕಳೆದು ಹೋಯಿತೊ ಏನೊ, ಅವನಿಗೆ ಅದರ ಅರಿವಿರಲಿಲ್ಲ. ಅಕಸ್ಮಾತ್ ಅವನ ಮಗಳ ಆರ್ತಕಂಠಸ್ವರವು ಕೇಳಿಬಂದಿತು. ಅವನು ಎದ್ದು ಹೊಯ್ದಾಡುತ್ತ ಹೊರಗೆ ಬಂದ; ಅಮೀನಾ ಭೂಮಿಯ ಮೇಲೆ ಬಿದ್ದು ಬಿಟ್ಟಿರುವುದನ್ನೂ ಮಣ್ಣಿನ ಕೊಡವು ಒಡೆದು ಸೋರುವುದನ್ನೂ, ಮಹೇಶ ಮರುಭೂಮಿಯಲ್ಲಿ ನೀರು ಕುಡಿಯುತ್ತಿರುವ ಪಶುಗಳಂತೆ ನೆಕ್ಕಿ ನೆಕ್ಕಿ ನೀರು ಕುಡಿಯುತ್ತಿರುವುದನ್ನೂ ಕಂಡ. ಗಫೂರನ ಕೋಪಕ್ಕೆ ಮಿತಿ ಉಳಿಯದಾಯಿತು. ಅವನು ತನ್ನನ್ನೇ ಮರೆತುಬಿಟ್ಟ; ರಂಟೆಯನ್ನು ಸರಿಪಡಿಸುವುದಕ್ಕೆಂದು ಮರದ ಎಳೆಯೊಂದನ್ನು ತೆಗೆದಿಟ್ಟಿದ್ದ ನಿನ್ನೆ; ಅದನ್ನೇ ಈಗ ಎತ್ತಿಕೊಂಡು, ಬಾಗಿದ ಮಹೇಶನ ತಲೆಯ ಮೇಲೆ ಬಲವಾಗಿ ಹೊಡೆದುಬಿಟ್ಟ.

ಒಂದು ಬಾರಿ, ಕೇವಲ ಒಂದೇ ಬಾರಿ ಮಹೇಶ ತಲೆಯೆತ್ತಲು ಯತ್ನಿಸಿತು; ಆದರೆ ಅದರ ಹಸಿವು-ಬಾಯಾರಿಕೆಗಳಿಂದ ಬಳಲಿ ಕೃಶವಾದ ಶರೀರವು ಭೂಮಿಯ ಮೇಲೆ ಬಿದ್ದುಬಿಟ್ಟಿತು. ಅದರ ಕಣ್ಣುಗಳಿಂದ ಕೆಲವು ಕಂಬನಿಗಳು ಕಿವಿಯ ಹತ್ತಿರದಿಂದ ಹರಿದು ಬಂದುವು; ಕಿವಿಯಿಂದ ಒಂದಿಷ್ಟು ರಕ್ತವೂ ಹೊರಬಿದ್ದಿತು; ಒಂದೆರಡು ಬಾರಿ ದೇಹವು ನಡುಗಿತು; ಬಳಿಕ ಕಾಲುಗಳು ಎಲ್ಲಿಯ ವರೆಗೆ ಸೆಟೆಯಲು ಸಾಧ್ಯವಿದ್ದುವೊ ಅವನ್ನು ಅಲ್ಲಿಯ ವರೆಗೆ ಸೆಟೆಯಿಸಿ, ಮಹೇಶ ತನ್ನ ಕೊನೆಯುಸಿರನ್ನು ಬಿಟ್ಟಿತು.

ಅಮೀನಾ ಅಳತೊಡಗಿದಳು; ಆಗ "ಇದೇನು ಮಾಡಿದೆ ಅಪ್ಪಾ, ನಮ್ಮ ಮಹೇಶ ತೀರಿಕೊಂಡ!" ಎಂದಳು.

ಗಫೂರ್ ನಿಂತಂತೆಯೆ ನಿಂತಿದ್ದ, ಯಾವ ಉತ್ತರವನ್ನೂ ಕೊಡಲಿಲ್ಲ. ಕೇವಲ ಎದುರಿಗೆಬಿದ್ದಿರುವ ಮಹೇಶನ ರೆಪ್ಪೆಯಲುಗದ ಕಪ್ಪಾದ— ಕಣ್ಣುಗಳನ್ನು, ಎವೆಯಿಕ್ಕದೆ ನೋಡುತ್ತ ಕಲ್ಲಿನಂತೆ ನಿಶ್ಚಲನಾಗಿ ನಿಂತಿದ್ದ.

ಎರಡು ಗಂಟೆಗಳ ನಂತರ ಸುದ್ದಿ ಹತ್ತಿ ಮೋಚಿಗಳು ಬಂದು ಮಹೇಶನನ್ನು ಹೊತ್ತುಕೊಂಡು ಹೋದರು ವಧಸ್ಥಾನದ ಕಡೆಗೆ. ಅವರ ಕೈಗಳಲ್ಲಿ ಹೊಳೆಯುವ ಹದನಾದ ಚೂರಿಗಳನ್ನು ನೋಡಿ ಗಫೂರ್ ನಡುಗಿದ, ಕೂಡಲೇ ಕಣ್ಣುಗಳನ್ನು ಮುಚ್ಚಿಕೊಂಡ. ಅವನ ಬಾಯಿಂದ ಒಂದು ಶಬ್ದವೂ ಹೊರಡಲಿಲ್ಲ.

ಓಣಿಯ ಜನರು "ತರ್ಕರತ್ನಜೀಯವರಿಂದ ಪ್ರಾಯಶ್ಚಿತ್ತ-ವನ್ನು ಮಾಡಿಸಲು ಜಮಾನುದಾರರು ಮನುಷ್ಯನನ್ನು ಕಳುಹಿ-ದ್ದಾರೆ; ಅದಕ್ಕೆ ತಗಲುವ ವೆಚ್ಚಕ್ಕಾಗಿ ನಿನ್ನ ಮನೆ— ಮಠ ಎಲ್ಲವೂ ಮಾರಿಹೋಗುವುದು!" ಎಂದು ಎನ್ನತೊಡಗಿದರು.

ಈ ಮಾತುಗಳಿಗೆ ಗಫೂರ್ ಉತ್ತರವೀಯದೆ ಮೊಣಕಾಲುಗಳ ನಡುವೆ ಮುಖವಿಟ್ಟು ಸುಮ್ಮಗೆ ಕುಳಿತಿದ್ದ.

ಬಹಳ ರಾತ್ರಿಯಾಯಿತು. ಗಫೂರ್ ಮಗಳನ್ನು ಎಚ್ಚರಿಸಿ "ಅಮೀನಾ, ನಡೆ, ನಾವು ಇಲ್ಲಿಂದ ಹೋಗೋಣ ನಡೆ!" ಎಂದ.

ಅವಳು ಕಣ್ಣುಜ್ಜಿಕೊಳ್ಳುತ್ತ "ಎಲ್ಲಿಗೆ ಬಾಪೂ?" ಎಂದಳು.

"ಫುಲವಾಡಿಯ ಜೂಟುಮಿಲ್ಲಿನಲ್ಲಿ ಕೂಲಿಮಾಡುವುದಕ್ಕೆ!"

ಹುಡುಗಿಗೆ ಆಶ್ಚರ್ಯವಾಯಿತು; ತಂದೆಯ ಮುಖವನ್ನು ದಿಟ್ಟಿಸಿ ನೋಡತೊಡಗಿದಳು. ಇದಕ್ಕೂ ಕಷ್ಟದ ಕಾಲದಲ್ಲಿಯೂ ಅವನು ಜೂಟುಮಿಲ್ಲಿನಲ್ಲಿ ಕೆಲಸಮಾಡಲು ಒಪ್ಪಿರಲಿಲ್ಲ. 'ಅಲ್ಲಿಗೆ ಹೋದರೆ ಧರ್ಮವು ಉಳಿಯುವುದಿಲ್ಲ, ಹುಡುಗಿಯರ ಮಾನ-ಮರ್ಯಾದೆಯು ರಕ್ಷಣೆಯಾಗದು' ಇತ್ಯಾದಿ, ಇತ್ಯಾದಿ ಹೇಳಿದ್ದ.

ಗಫೂರನೆಂದ: "ತಡಮಾಡಬೇಡ ಮಗಳೆ! ನಡೆ, ಬಹಳ ದೂರ ಹೋಗಬೇಕು!"

ಅಮೀನಾ ಕುಡಿಯುವ ನೀರಿನ ತಂಬಿಗೆಯನ್ನೂ ತಂದೆಯ ಊಟದ ತಟ್ಟೆಯನ್ನೂ ತೆಗೆದುಕೊಳ್ಳತೊಡಗಿದ್ದಳು. ಗಫೂರ್ ಅವಳನ್ನು ತಡೆದು "ಇವೆಲ್ಲವೂ ಇಲ್ಲಿಯೆ ಇರಲಿ ಬಿಡು ಮಗಳೆ! ಇವುಗಳಿಂದ ಮಹೇಶನ ಪ್ರಾಯಶ್ಚಿತ್ತವಾಗುವುದು!" ಎಂದ.

ಅಂಧಕಾರಮಯವಾದ ಗಭೀರ ಕತ್ತಲಲ್ಲಿ ಗಫೂರ್ ಮಗಳ ಕೈಯನ್ನು ಹಿಡಿದುಕೊಂಡು ಮನೆಯಿಂದ ಹೊರಬಿದ್ದ. ಹಳ್ಳಿಯಲ್ಲಿ ಅವನ ಆತ್ಮೀಯರಾರೂ ಇರಲಿಲ್ಲ, ಯಾರಿಗೂ ಹೇಳಿಹೋಗಬೇಕಾಗಿರಲಿಲ್ಲ. ಅಂಗಳವನ್ನು ದಾಟಿ ಮಾರ್ಗಕ್ಕೆ ಹತ್ತುವ ಮೊದಲು, ಆ ಮರದ ಕೆಳಗೆ ಬಂದಾಗ ಗಫೂರ್ ನಿಂತ; ಬಿಕ್ಕಿಬಿಕ್ಕಿ ಅಳತೊಡಗಿದ. ನಕ್ಷತ್ರಮಂಡಲದಿಂದ ಮಂಡಿತ-ವಾದ ಆಕಾಶದ ಕಡೆಗೆ ಮುಖವೆತ್ತಿ "ಅಲ್ಲಾಹ್! ನನ್ನ ಮಹೇಶ ನೀರಡಿಕೆಯಿಂದ ಸತ್ತುಹೋಯಿತು. ಅದಕ್ಕೆ ಮೇಯಲು ಯಾರೂ ಒಂದುಗೇಣು ಭೂಮಿಯನ್ನೂ ಬಿಡಲಿಲ್ಲ. ನೀನು ನನಗೆಷ್ಟು ಬೇಕಾದರೂ ಶಿಕ್ಷೆಯನ್ನು ವಿಧಿಸು; ಆದರೆ ನೀನು ಹಸಿದವರಿಗಾಗಿ ಕೊಟ್ಟಂತಹ ಹುಲ್ಲನ್ನು, ನೀರಡಿಸಿದವರಿಗಾಗಿ ನೀನು ಕೊಟ್ಟ ನೀರನ್ನು ಯಾರು ಅದಕ್ಕೆ ಕೊಡಲಿಲ್ಲವೊ, ಅವರನ್ನು ನೀನೆಂದಿಗೂ ಕ್ಷಮಿಸಬೇಡ!" ಎಂದು ದೇವರಲ್ಲಿ ಮೊರೆಯಿಟ್ಟನು.

ದೇವ್ರು

ಶ್ರೀ. ವಿ. ಜಿ. ಭಟ್ಟ, ಕೊಲ್ಲಾಪುರ

ದೇವ್ರು ದೇವ್ರು ಅಂತಾರ್ ಎಲ್ರು
  ನೋಡ್ಯಾರೇನ್ ಅವನ್ ಅವ್ರು ?
ಮನ್ಸ್ಯಾರ್ ರೂಪ್ದಿಂದ್ ಅಂವ ಇಲ್ ಬರಬೇಕ್
  ಕಲಸ್ತೇನ್ ಹರಿಸ್ಲಾಕ್ ಬೆವ್ರು !

ಮೂರ್ ದಿವಸ್ ಬಿಸ್ಲಲ್ ಹೊಲ್ದಾಗ್ ದುಡ್ಸಿ,
  ಉಪವಾಸ್ ಮಣ್ಣಾಗ್ ಮಲ್ಗ್ಸಿ,
ಸಾಕೋ ಬೇಕೋ ಮಾಡಿಬಿಟ್ ಬಿಡ್ತೇನ್
  ದೇವ್ರಿಗೆ ಹೋರೇ ಕಲ್ಸಿ !

'ಹಸ್ವಿಹಸ್ವಿ' ಅಂದ್ ಕೋತ್ ಸತ್ರು—
  ಅವ್ವ— ಹೆಂಡ್ತಿ— ಮಕ್ಳು !
ದೇವ್ರಿಗ್ ಪೂಜೀ ಮಾಡ್ಯಾಡ್ ಸಾಕಾಯ್ತು
  ಅವನ್ ಸಣ್ಣ ಕಣ್ಣಿಗೆ ಒಕ್ಲು—

ಕಸದ್ಹಾಂಗ್ ಕಾಣ್ತಾರ್ ; ಅಲ್ದಿದ್ರ ನಾವ್ಯಾಕ್
  ಹರ್ ಹರ್ ಕಂಟ್ಲಿ ಹೊದ್ದು
ದಣಿಗೋಳ್ ಕಣಜಾ ತುಂಬ್ಲಾಕ್ ಬಾಳ್ಬೇಕ್
  ದುಡ್ದು ದುಡ್ದು ಉಪಾಸ್ ಬಿದ್ದು ?

ಸಿರಿಮಂತ್ರಂದ್ರ ದೇವ್ರಿಗ್ ಪ್ರೀತಿ,
  ಬಡ್ವರ್ ಕಂಡ್ರ ಅಂವಗ್ ಸಿಟ್ಟು !
ಅದಕೇ ದೊಡ್ಡೋರ್ ಸುಕ್ದಾಗ ಇಟ್ಟಾನ್
  ಕಸಗೊಂಡ್ ನಮ್ಮವ್ರ ಹಿಟ್ಟು !

ಕಣ್ಣಿಗ್ ಬೀಳ್‌ಬೇಕ್ ದೊಡ್ಡವ್ರು ದೇವ್ರು,
  ಹಾಕ್ತೇನ್ ನಾನ್ ಅಂವಗ್ ಹದಾ !
ನೇಗಲಿಗ್ ಬಿಗ್ದು ಹೊಲ್ದಾಗ್ ಹೂಡಿ
  ಕರ್ಗ್ಸ್ ಬಿಡ್ತೇನ್ ಅವನ್ ಮದಾ !

ನ್ಯಾಯಾ-ನೀತೀ ಅವನೊಳಗ್ ಇದ್ರ
  ನಮ್ಮನ್ ದೊಡ್ಡವರ್ನ್ ಎಲ್ಲಾ
ಸರಿಯಾಗ್ ನೋಡ್ಬೇಕ್, ಇಲ್ದಿದ್ರ ಮುರ್ದೇನ್
  ಸ್ವರ್ಗಕ್ ಹೋಗ್ಯವನ್ ಕಲ್ಲ !

ದೇವ್ರು ದೇವ್ರು ಅಂತಾರ್ ಎಲ್ರು
  ನೋಡ್ಯಾರೇನ್ ಅವನ್ ಅವ್ರು ?
ಮನ್ಸ್ಯಾರ್ ರೂಪ್ದಿಂದ್ ಅಂವ ಇಲ್ ಬರಬೇಕ್
  ಕಲಸ್ತೇನ್ ಹರಿಸ್ಲಾಕ್ ಬೆವ್ರು !

ಮಹಾತ್ಮಾ ಬಸವಣ್ಣನವರು ★ ಪರಮತ ವಿಡಂಬಕರೇ?

(ಚರ್ಚೆಗಳ ವಿಮರ್ಶೆಯಿನ್ನೊಂದು)

ಶ್ರೀ. ಗುರುಸಿದ್ದಪ್ಪ ಬಸವಪ್ಪ ಬಳ್ಳಾರಿ, ಗದಗ

ಬಸವರಾಜ, ನಿಮ್ಮ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ! ಈವನ ವಿಾಸಲಪ್ಪ ಭಕ್ತ,
ನಿನಗೆಣೆಯಿಲ್ಲ, ಪಡಿಯಿಲ್ಲ, ಪಾಸಟಿಯಾಪಂ?

—ಸರಸಕವಿ ಸಾರ್ವಭೌಮ **ಹರಿಹರ**

★

'ಜಯಂತಿ'ಯ ಮೇ ಸಂಚಿಕೆಯಲ್ಲಿ "**ಚಿಂತಾಮಣಿ**"ಯವರ 'ಮಹಾತ್ಮಾ ಬಸವಣ್ಣನವರ ಮಾನವತಾವಾದ' ಎಂಬ ಲೇಖವೊಂದು ಪ್ರಕಟವಾಗಿದೆ. ಅದಕ್ಕೆ 'ಜಯಂತಿ'ಯ ಮಾನ್ಯ ಸಂಪಾದಕರು ತಮ್ಮ ಮತಭೇದದ ಟಿಪ್ಪಣಿಯನ್ನು ಜೋಡಿಸಿ ಅದರಲ್ಲಿ "ಈ ನೋಟವನ್ನು ಅಲ್ಲಗಳೆದು ಬರುವ ಒಳ್ಳೆಯ ಲೇಖಗಳಿಗೂ ಜಯಂತಿಯಲ್ಲಿ ಎಡೆಕೊಡಲಾಗುವುದು" ಎಂದು ಬಿನ್ನಹವನ್ನು ಮಾಡಿಕೊಂಡಿದ್ದರು. ಇದನ್ನು ಸ್ವೀಕರಿಸಿದವರಲ್ಲಿ ಪುಣೆಯ **ಶ್ರೀ. ಬಿ. ಎಸ್. ರಾವ್, ಬಿ. ಎಸ್‌ಸಿ.** ಎಂಬವರು ಮೊದಲಿಗರು. ಇವರು '**ಚಿಂತಾಮಣಿ**' ಯವರ ಲೇಖನಕ್ಕೆ ಬರೆದು ಕಳುಹಿದ '**ಮಹಾತ್ಮಾ ಬಸವಣ್ಣನವರ ಸ್ವರೂಪ**' ಎಂಬ ಲೇಖನವು ಅಗಸ್ಟ್ ತಿಂಗಳ ಜಯಂತಿಯಲ್ಲಿ ಬೆಳಕಿಗೆ ಬಂದಿದೆ. ಈ ತಮ್ಮ ಬರಹಕ್ಕೆ ವಿದ್ವಾನ್ ಲೇಖಕರು '**ನಿಷ್ಪಕ್ಷಪಾತದ ನೋಟ**' ಎಂದು ಕರೆದಿದ್ದಾರೆ. ಇಂತಹ ತಮ್ಮ ಲೇಖನವು 'ನಿಷ್ಪಕ್ಷಪಾತದ ನೋಟ'ವಾದರೆ ಶ್ರೀ. 'ಚಿಂತಾಮಣಿ'ಯವರದೂ ಏಕಲ್ಲ? ಇದರ ಮೇಲಿಂದ ಯಾರು ಯಾರ ಮೇಲೆ ತಮ್ಮ ಅಭಿಪ್ರಾಯಗಳನ್ನು ಒತ್ತಾಯದಿಂದ ಹೇರಿದಂತಾಯಿತು? ತಮ್ಮ ಮೂಗಿನ ನೇರಕ್ಕೆ ನಿಕ್ಕವರನ್ನು ಎಳೆದಂತಾಯಿತು?

ಇನ್ನು ಇವರ ಲೇಖನದಲ್ಲಿಯ ಮುಖ್ಯಸಂಗತಿಗಳನ್ನಷ್ಟು ನೋಡೋಣ: ಇವರು ತಮ್ಮ ಲೇಖನದಲ್ಲಿ ಹೇಳುವಂತೆ, ಜೈನ-ಬೌದ್ಧ ಮತಗಳ ಸಿದ್ಧಾಂತಗಳಿಗೂ ವೇದೋಪನಿಷತ್ತುಗಳೇ ತಳಹದಿಯಾದ ಮೇಲೆ—ಅಪ್ರತಿಹತ ಧೀಮಂತರಾದ ಶ್ರೀಮಚ್ಛಂಕರರೇ ಮೊದಲಾದವರು ಈ ಮತಗಳನ್ನು ಖಂಡಿಸಲು ತಮ್ಮ ಬುದ್ಧಿ-ಶಕ್ತಿ-ಸಾಹಸಾದಿಗಳನ್ನೆಲ್ಲ ಸೂರೆಗೊಂಡದ್ದೇಕೆ? ಇವರುಗಳ ಖಂಡನೆಯೆಂದರೆ ಅಪ್ರತ್ಯಕ್ಷವಾಗಿ ತಮ್ಮ ಬಂಧುಗಳ ಮತ್ತು ವೇದೋಪನಿಷತ್ತುಗಳ ಖಂಡನೆಯೆನಿಸುವುದಿಲ್ಲವೇ? ಬಸವಣ್ಣನವರು ವೇದೋಪನಿಷತ್ತುಗಳಿಗೆ ಕಟ್ಟುಬೀಳದೆ, ಅದರಲ್ಲಿ ತಮಗೆ ಸತ್ಯವೆಂದು ತೋರಿದ್ದನ್ನು ಮನ್ನಿಸಿ—ಅಸತ್ಯವೆಂದೆನಿಸಿದ್ದನ್ನು ಅಲ್ಲಗಳೆದಿದ್ದಾರೆ. ಅವರ ದರ್ಶನವು ಬರಿ ತರ್ಕಬದ್ಧವಾಗಿರದೆ ಅನುಭವಪೂರ್ಣವಾಗಿದೆ ಎಂಬುದು ಇವರಿಗೆ ಹೊಳೆದಿದ್ದರೆ "ನಿಜವಾದ ಜ್ಞಾನಿಯು ಪರಧರ್ಮನಿಂದೆಯನ್ನೆಂದಿಗೂ ಮಾಡುವುದಿಲ್ಲ, ಮತ್ತು ತಾನು ಕಂಡ ಸತ್ಯವೇ ಜಗನ್ಮಾನ್ಯವೆಂದು ಜನರಿಗೆ ಅದನ್ನೇ ಅನುಸರಿಸುವಂತೆ ಒತ್ತಾಯಪಡಿಸುವುದಿಲ್ಲ!" ಎಂದು ಬರೆಯುವ ಗೋಜಿಗೆ ಹೋಗುತ್ತಿರಲಿಲ್ಲ. ಪಾಶ್ಚಾತ್ಯಕವಿಯಾದ **ಲಾಂಗ್‌ಫೆಲೋ** ಅವರು ಹೀಗೆ ಹೇಳಿದ್ದಾರೆ:

"Honour to those whose words or deeds
Thus help us in our daily needs
And by their overflow
Raise us from what is low."

ಎಂದರೆ ನಮ್ಮ ಪ್ರತಿನಿತ್ಯದ ಅಗತ್ಯದಲ್ಲಿ ಯಾರ ನಡೆ-ನುಡಿಗಳು ನಮಗೆ ಸಹಾಯಕವಾಗುವವೋ— ಯಾರು ತಮ್ಮ ಆತ್ಮಬಲದಿಂದ ಸಮಾಜದಲ್ಲಿ ತಳಕಂಡವರನ್ನು ಮೇಲಕ್ಕೆತ್ತುವರೋ ಅವರೇ ಗೌರವಾರ್ಹರು ಎಂದು. ಈ ಮಾತು ಶ್ರೀಬಸವಣ್ಣನವರ ವಿಷಯದಲ್ಲಿ ಸರಿಹೋಗುತ್ತದೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಯಾಕೆಂದರೆ ಶ್ರೀಬಸವಣ್ಣನವರ ನಡೆ-ನುಡಿಗಳು ಕೃತ್ರಿಮ ಚಲನವಲನ (ಖೊಟ್ಟಿನಾಣ್ಯ) ದಂತಿರದೆ ಬಂಗಾರದ ನಾಣ್ಯಗಳಂತೆ ಅವು ಎಲ್ಲ ಕಾಲದಲ್ಲಿ—ಎಲ್ಲ ದೇಶಗಳಲ್ಲಿ—ಎಲ್ಲ ಜನಾಂಗದವರಿಂದ ಬಳಕೆಯಲ್ಲಿ ತರಲು ಯೋಗ್ಯವಾದುವುಗಳಾಗಿವೆ. ಅಂತೆಯೆ ಅವರ ತತ್ತ್ವಗಳು ತ್ರಿಕಾಲಾಬಾಧಿತವಾಗಿದ್ದು ದಿನಗಳೆದಂತೆ ಮಾಸದೆ—ಕಾಲಕ್ಕೆ ತಕ್ಕಂತೆ ನೂತನವಾದುವುಗಳಾಗಿ ಕಂಡು, ಅದರಂತೆ ಆಚರಿಸುವವರನ್ನು ಅವು ಅಂದು ಉದ್ಧರಿಸಿದಂತೆ ಇಂದಾದರೂ ಮುಂದಾದರೂ ಉದ್ಧರಿಸುವುವುಗಳಾಗಿರುವುದರಿಂದ, ಸರ್ವರ ಮನ್ನಣೆಗೆ ಪಾತ್ರವಾದುವುಗಳಾಗಿವೆ.

ಶ್ರೀ. ರಾವ್ ಅವರು "ಶ್ರೀಮಚ್ಛಂಕರರೇ ಮೊದಲಾದ ಅಪ್ರತಿಹತ ಧೀಮಂತರು........ಸನ್ಮಾರ್ಗದರ್ಶಕರಾದರು"

ಎಂದು ಹೇಳಿದುದರಲ್ಲಿ, ಶ್ರೀಮಚ್ಛಂಕರರೇ ಮೊದಲಾದವರು ಶ್ರೀಬಸವಾವತಾರದ ಮೊದಲು ಎಲ್ಲ ಎಡರು-ತೊಡರುಗಳನ್ನೂ ನಿವಾರಿಸಿ, ದೇಶದಲ್ಲಿ ಶಾಂತತೆ ನೆಲೆಗೊಳಿಸಿ, ಮಾರ್ಗವನ್ನು ಸರಳ ಸುಲಭ ಮತ್ತು ಸ್ವಚ್ಛ (Line clear) ಮಾಡಿದುದರಿಂದ, ಬಸವಣ್ಣನವರ ಪಾಲಿಗೆ ಮಾಡುವ ಅಂತಹ ಯಾವ ಮಹತ್ಕಾರ್ಯವೂ ಉಳಿಯದಂತಾಗಿ, ಅವರು ಬರಿ ಹಳ್ಳಿಯ ಪಾಮರರಿಗೆ ಹಿತೋಪದೇಶಮಾಡುವ ಹಿರಿಯತನವನ್ನು ವಹಿಸಬೇಕಾಯಿತೆಂದು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಇವರು ಇಷ್ಟಕ್ಕೆ ನಿಲ್ಲದೆ "ಪಕ್ಷಾತೀತ ಪಂಗಡವೆಂದು ಹೆಸರಿಟ್ಟುಕೊಂಡು ಪಕ್ಷಗಳ ಪಟ್ಟಿಗೆ ಹೊಸದೊಂದು ಪಕ್ಷವನ್ನು ಸೇರಿಸಿದವರಂತೆ—ಜಾತಿಭೇದವಿರಬಾರದೆಂದು ಬೋಧಿಸುತ್ತಾ ಬಸವಣ್ಣನವರು ಇದ್ದ ಜಾತಿಗಳ ಪಟ್ಟಿಗೆ ಲಿಂಗವಂತರ ಜಾತಿಯೊಂದನ್ನು ಸೇರಿಸಿದ ಪುಣ್ಯಕೆಲಸವನ್ನು ಮಾಡಿದರು," ಎಂದು ಮೂದಲಿಸಿ ನುಡಿದಿದ್ದಾರೆ. ಇದರ ಮೇಲಿಂದ ಇವರಿಗೆ ಬಸವಣ್ಣನವರು ಮಾಡಿದ ಕಾರ್ಯದ ಕಲ್ಪನೆಯೆ ಇದ್ದಂತೆ ಕಾಣಲಿಲ್ಲ. "ಬ್ರಾಹ್ಮಣ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೆ ಎಂಬೆ!" ಎಂದು ನುಡಿದ ಬಸವಣ್ಣನವರು, ಹರಳಯ್ಯ-ಮಧುವಯ್ಯಗಳ ಬಂಧುತ್ವ ಮಾಡಿಸಿ ಆದರಂತೆ ನಡೆದು ತೋರಿಸಿದರು. ಕಡೆಗೆ ಈ ತತ್ತ್ವಕ್ಕಾಗಿ ತಮ್ಮ ಆತ್ಮಾರ್ಪಣವನ್ನು ಕೂಡ ಮಾಡಿದರು. ಇಂಥವರು ಅದ್ವಿತೀಯರಲ್ಲವೇ? ಇದಕ್ಕಿಂತ ಹೆಚ್ಚಿನ ಜಾತಿಭೇದ ನಿವಾರಣೆಯು ಮತ್ತಾವುದಿದೆ?

ವೈದ್ಯನ ಆವಶ್ಯಕತೆಯು ರೋಗಿಗಲ್ಲದೆ ನಿರೋಗಿಗಲ್ಲ. ಅದರಂತೆ ಅವತಾರಿಗಳ ಅವತಾರವಾದರೂ ಬಿದ್ದವರನ್ನು ಎತ್ತುವುದಕ್ಕಲ್ಲದೆ—ಎದ್ದವರನ್ನು ಎತ್ತುವುದಕ್ಕಲ್ಲ. ಈ ನ್ಯಾಯದಂತೆ ನೋಡಿದಲ್ಲಿ, ಬಸವಣ್ಣನವರು ಮಾಡಿದ ಕಾರ್ಯವು ಶ್ರೀ. ರಾವ್ ಅವರು ತಿಳಿದುಕೊಂಡಂತೆ ಅಷ್ಟು ಸಾಮಾನ್ಯವಾಗಿರದೆ—ಅಸಾಮಾನ್ಯವಾಗಿದ್ದಿತು, ಅದ್ಭುತವಾಗಿದ್ದಿತು. ಹಿಂದೂ ಸಮಾಜದಲ್ಲಿದ್ದ ಕೃತ್ರಿಮ ವಿಷಮತೆಯನ್ನೂ—ಲಿಂಗಭೇದವನ್ನೂ ನಿವಾರಿಸಿ, ಸಮಾಜದಲ್ಲಿ ಎಲ್ಲರಿಗೆ ಸಮಾನತೆ-ಸಹೋದರತೆ ಮತ್ತು ಸ್ವಾತಂತ್ರ್ಯವನ್ನು ಕೊಟ್ಟವರೆಂದರೆ ಬುದ್ಧದೇವನ ತರುವಾಯ ಬಸವಣ್ಣನವರು ಮತ್ತು ಲಿಂಗವಂತ ಸಮಾಜವು. ಶ್ರೀಬಸವಣ್ಣನವರ ಉಪದೇಶವು ಎಂತಹದಿತ್ತು, ಯಾರಿಗಿತ್ತು ಮತ್ತು ಅವರು ಎಂತಹ ಸಮಾಜವನ್ನು ನಿರ್ಮಿಸಿದರೆಂಬುದಕ್ಕೆ ಹಿರಿಯ ಸಾಹಿತಿಗಳ—ದೇಶಭಕ್ತರ ಹೇಳಿಕೆಗಳನ್ನು ಶ್ರೀ. ರಾವ್ ಅವರ ಶಂಕಾಸಮಾಧಾನಕ್ಕಾಗಿ ಇಲ್ಲಿ ಕೊಟ್ಟಿದೆ:

"ವಚನಕಾರರು ಸ್ಥಾಪಿಸಿದ ಆತ್ಮವಿಶ್ವಾಸದ ರಮ್ಯೋದ್ಯಾನವು ಅರಮನೆಯ ಹಿತ್ತಲ ತೋಟದಂತೆ ಹಲವರಿಗೆ ಸೇವಿಸಲಿಕ್ಕೆ ಬರುವಂತೆ ಇರದೆ, ಚೌಪಥದಲ್ಲಿರುವ ನಗರೋಪವನದಂತೆ ಸಕಲರಿಗೂ ತೆರೆದಿಟ್ಟಿದೆ."

(—ವಚನಶಾಸ್ತ್ರರಹಸ್ಯ, ಪುಟ ೧೭೮)

"ವಚನಕಾರರು ಉಪದೇಶಿಸಿದ ಮುಕ್ತಿಪಥದಲ್ಲಿ ಎಲ್ಲರಿಗೂ ಮುಕ್ತದ್ವಾರವಿರುವುದರಿಂದ 'ನಾವು ಇದನ್ನೊಲ್ಲೆವು' ಎಂಬವರೇ ಹಠಭಾಗಿಗಳು ಹೊರತು, ಅವರು ವಿಶ್ವಕ್ಕೆಯೆ ಆಮಂತ್ರಣವನ್ನು ಕೊಟ್ಟಿರುವರು. ಒಂದೇ ದೈವತ, ಒಂದೇ ಗುರುವು, ಒಂದೇ ಮಂತ್ರ, ಒಂದೇ ಆಚಾರ ಇವುಗಳಿಂದ ಏಕಸೂತ್ರದಲ್ಲಿ ಬದ್ಧವಾದ ಮತ್ತು ಸಮತೆಯ ತಳಹದಿಯ ಮೇಲೆ ರಚಿಸಲ್ಪಟ್ಟ ಸಮಾಜವನ್ನು ನಿರ್ಮಿಸಲು ಅವರು ಯತ್ನಿಸಿದರು. ಬಸವಾದಿ ಪ್ರಮಥರು ತಮ್ಮ ಜೀವಮಾನದಲ್ಲಿ, ಈ ಪ್ರಯತ್ನವನ್ನು ಎಷ್ಟೋಮಟ್ಟಿಗೆ ಯಶಸ್ವಿಯನ್ನಾದರೂ ಮಾಡಿದರು."

(—ವಚನಶಾಸ್ತ್ರರಹಸ್ಯ, ಪುಟ ೨೦೫)

"ಬನ್ನಿರಿ, ಎಲ್ಲರೂ ಬನ್ನಿರಿ! ದೊಡ್ಡವರು ಚಿಕ್ಕವರು, ಸ್ತ್ರೀಯರು ಪುರುಷರು, ಹೊಲೆಯರು ಬ್ರಾಹ್ಮಣರು, ಸಮಗಾರರು ಅರ್ಚಕರು, ಆಳುಗಳು-ಅರಸರು, ಸೈನಿಕರು ಸೇನಾಪತಿಗಳು, ಜಾಲಗಾರರು ಸಂಗೀತಗಾರರು, ಬನ್ನಿರಿ, ಎಲ್ಲರೂ ಬನ್ನಿರಿ! ನಿಮ್ಮೆಲ್ಲರಿಗೂ ಪರಮ ಸುಖವು ಬೇಕಾಗಿದ್ದರೆ ಇತ್ತ ಬನ್ನಿರಿ! ನಿಮ್ಮ ನಿಮ್ಮ ಕ್ಷುದ್ರ ಅಹಂಭಾವಗಳನ್ನು ಮರೆಯಿರಿ. 'ನಾವು ಆ ಕುಲದವರು ಈ ಕುಲದವರು' 'ಇಂತಹ ಉಚ್ಚ ಉದ್ಯೋಗಮಾಡುವವರು— ಅಂತಹ ಹೆಚ್ಚಿನ ಕಾಯಕದವರು' ಎಂಬ ವೃಥಾಭಿಮಾನವನ್ನು ತೊರೆಯಿರಿ! ನಿಮ್ಮಲ್ಲಿ

ಇರುವ ಶಕ್ತಿಗಳೆಲ್ಲ ವಿಶ್ವಸಂಗೀತದೊಡನೆ ಮೇಳಗೂಡಿಸಲು ಕೊಟ್ಟ ಸಾಧನ ಸಾಮಗ್ರಿಗಳಿರುವುವು. ಅವುಗಳನ್ನು ತಿದ್ದಿ ತೀಡಿ ನೆಟ್ಟಗೆ ಮಾಡಿ, ಸ್ವರಗೊಳಿಸಿ ಸರಿಪಡಿಸಿರಿ!"

(—ವಚನಶಾಸ್ತ್ರರಹಸ್ಯ, ಪುಟ ೪೯೫)

"ಈಗಿನ ಕಾಲದಂತೆ ಆ ಕಾಲದಲ್ಲಿ ಗಾಡಿ, ತಾರು, ವಾಯರ್‌ಲೆಸ್, ರೇಡಿಯೋ ಮೊದಲಾದ ಸಾಧನಸಾಮಗ್ರಿಗಳು ಇದ್ದಿದ್ದರೆ, ಇಂದು ಅಖಂಡ ಭೂಮಂಡಲದಲ್ಲಿ ಲಿಂಗವಂತ ಸಮಾಜವನ್ನು ಕಾಣಬಹುದಾಗಿತ್ತು. ಆ ಕಾಲದಲ್ಲಿ ಯಾವ ತರದ ಅನುಕೂಲತೆಯಿಲ್ಲದಿದ್ದರೂ ಇವರ ಧಾರ್ಮಿಕ ಪ್ರಭಾವವು ಉತ್ತರ ದಿಕ್ಕಿನಲ್ಲಿ ಕಾಶ್ಮೀರದ ವರೆಗೂ ದಕ್ಷಿಣ ದಿಕ್ಕಿನಲ್ಲಿ ರಾಮೇಶ್ವರದ ವರೆಗೂ ಹಬ್ಬಿತ್ತು; ಅಷ್ಟೇ ಅಲ್ಲದೆ ಬೇರೆ ಬೇರೆ ದೇಶಗಳಲ್ಲಿದ್ದ ಅನೇಕರು ಧಾವಿಸಿ ಕಲ್ಯಾಣಕ್ಕೆ ಬಂದು ಬಸವಣ್ಣನವರ ನೇತೃತ್ವದ ಕೆಳಗೆ ಒಂದೊಂದು ಕಾಯಕವನ್ನು ಕೈಕೊಂಡರು. ಇವರಲ್ಲಿ ಕೆಲವರು ರಾಜರೂ ಇದ್ದರೆಂಬುದು ತಿಳಿದುಬರುತ್ತದೆ. ಅಂತೂ ಎತ್ತ ನೋಡಿದರೂ ವೀರಶೈವ ಧರ್ಮದ ಚರ್ಚೆಯು ನಡೆದಿತ್ತು.

(—ವೀರಶೈವ ತತ್ತ್ವಪ್ರಕಾಶ, ಪುಟ ೧೨೭)

—ಶ್ರೀ. ದಿವಾಕರ ರಂಗರಾಯರು, ಎಂ. ಎ., ಎಲ್ ಎಲ್. ಬಿ.

"ವೀರಶೈವ ಅನುಭಾವಿಗಳು ತಮ್ಮ ಜೀವನದ ಜೇನುಕೊಡವನ್ನು 'ಅನುಭವಮಂಟಪ'ದಲ್ಲಿ ಶೇಖರಿಸಿ, ಜೇನುಹೊಂಡವನ್ನೇ ನಿರ್ಮಾಣಮಾಡಿಬಿಟ್ಟರು. ಇದರಲ್ಲಿ ಎಲ್ಲ ಪುಷ್ಪಗಳ ಸೌರಭ–ಪರಿಮಳಗಳ ಸವಿಗಳು ಬೆರೆತುಕೊಂಡಿವೆ. ಎಲ್ಲ ಧರ್ಮಗಳೂ ಒಂದೊಂದು ಜಾಡನ್ನು ಹಿಡಿಯುತ್ತೋಗಿ ಕಂಡ ಸತ್ಯದ ಕೇಂದ್ರವನ್ನೇ ವೀರಶೈವ ಧರ್ಮವು ಅರಿಸಿತು. ಇದು ಎಲ್ಲ ಧರ್ಮಗಳ ಸಾರವಾಯಿತು. ಅಂತೆಯೆ ವಿಶ್ವಧರ್ಮವೆನಿಸಿಕೊಳ್ಳಲು ಪೂರ್ಣ ಅರ್ಹತೆಯನ್ನು ಪಡೆಯಿತು. ವಿಶ್ವಧರ್ಮವನ್ನೆ ಗುರಿಯಾಗಿಟ್ಟುಕೊಂಡು ಮಧ್ಯಯುಗದಲ್ಲಿ ಅರೇಬಿಯಾ ಪರ್ಶಿಯಾ ದೇಶಗಳಲ್ಲಿ 'ಸೂಫಿ ಧರ್ಮ' ಬೆಳೆಯಿತ್ತು. ಆದರೆ ಇಸ್ಲಾಮಿನ ಕಟುಧರ್ಮೀಯತೆಯನ್ನು ತಾಳಲಾರದೆ, ಅದು ಒಂದು ಮತದ ಸ್ವರೂಪ ತಾಳಿ, ಅಲ್ಲಿ ಇಲ್ಲಿ ಕಳೆದುಳಿಸಿಕೊಳ್ಳಬೇಕಾಯಿತು. ಹದಿನಾರನೆಯ ಶತಮಾನದಲ್ಲಿ ಅಕಬರ್ ಸ್ಥಾಪಿಸಲು ಯತ್ನಿಸಿದ 'ದಿನ್ ಇ ಇಲಾಹಿ' ಎನ್ನುವ ವಿಶ್ವಧರ್ಮವೂ ಇದೇ ಗತಿಯನ್ನು ಪಡೆಯಿತು. ಅದು ಮುಂದಿನ ಶತಮಾನದ ತನಕ ಕೂಡ ಹೋಗಲಿಲ್ಲ. ಆದರೆ ವೀರಶೈವ ಧರ್ಮ ಜೀವಂತ ಧರ್ಮವಾಗಿ ಉಳಿದಿದೆ. ಅನುಭವ ಮಂಟಪದ ಮಹಾನುಭಾವಿಗಳ ಕೃತಿಗಳು ನಾಡವರ ಕೊರಳಲ್ಲಿ ಮುಕ್ತಾಮಣಿಗಳಾಗಿ ರಾರಾಜಿಸುತ್ತವೆ. ಇಂದಿನ ಜಗತ್ತಿನ ಧರ್ಮ ಹಾಗು ಜೀವನ ಸಮಸ್ಯೆಗಳಿಗೆ ತನ್ನಲ್ಲಿ ನಿವಾರಣೋಪಾಯಗಳನ್ನು ಧರಿಸಿದೆಯೋ ಏನೋ! ಜಗತ್ತಿನ ಕಲ್ಯಾಣಕ್ಕೆ ಆವಶ್ಯಕವಾದ ಬೆಳಕನ್ನು ನೀಡುವ ಸೌಭಾಗ್ಯವನ್ನು ಅನುಭವಮಂಟಪದ ಶಿವಾನುಭಾವಿಗಳು ತನ್ನದಾಗಿಸಿಕೊಳ್ಳಬಾರದೇಕೆ?

(—ವೀರಶೈವ ತತ್ತ್ವಪ್ರಕಾಶ, ಪುಟ ೨೬೭)

ಶ್ರೀ. ಅ. ನ. ಕೃಷ್ಣರಾಯರು.

ಇದರ ಮೇಲಿಂದ ಬಸವಣ್ಣನವರು ಮಾಡಿದ ಪುಣ್ಯಕೆಲಸದ ಕಲ್ಪನೆಯಾಗಿ ಶ್ರೀ. ರಾವ್ ಅವರ 'ನೋಟ'ದಲ್ಲಿ ಬದಲಾವಣೆಯಾಗುವುದೇ?

ಕೊನೆಯದಾಗಿ ಮಹಾತ್ಮಾ ಬಸವಣ್ಣನವರು ಪರಮತ ವಿಡಂಬಕರಿದ್ದರೆಂದು ಇವರ ಆರೋಪ. ಇದಕ್ಕಾಗಿ ಇವರು ಕೊಟ್ಟ ದೃಷ್ಟಾಂತವೆಂದರೆ 'ಆಗಲೇ ಶಿಥಿಲವಾಗಿದ್ದ ಯಜ್ಞಪದ್ಧತಿಯನ್ನು ಬೊಟ್ಟುಮಾಡಿ ತೋರಿಸಿ, ಕೇವಲ ಆ ಕಾರಣದಿಂದ ವೈದಿಕಧರ್ಮವನ್ನು ಹೀನವೆಂದು ಹಳಿದು, ಸ್ವಮತದ ಉತ್ಕರ್ಷವನ್ನು ಡಂಗುರ ಹೊಡೆದ ಬಸವಣ್ಣನವರ ಮಹಾತ್ಮ್ಯದ ಮುಂದೆ ವಿಮರ್ಶಕನು ಪ್ರಶ್ನಾರ್ಥಕ ಚಿಹ್ನೆಯೊಂದನ್ನು ಇಡದಿರಲಾರನು!" ಎಂಬುದು. ಬಸವಣ್ಣನವರಿಗೆ ಹೀಗೆ ಹೆಸರಿಡುವ ಈ ಪಂಡಿತರಿಗೆ, ಶ್ರೀಮಚ್ಛಂಕರರೇ ಮೊದಲಾದವರು ಪರಮತ ಖಂಡನೆಯಲ್ಲಿ ಆಯಾ ಮತಗಳನ್ನು ಎಷ್ಟು ಗೌರವದಿಂದ ಕಂಡು ಎಂತಹ ಸೌಮ್ಯಶಬ್ದಗಳನ್ನು ಬಳಸಿರುವರೆಂಬುದು ಗೊತ್ತಿದೆಯೆ? ಸ್ಮೃತಿಕಾರರ ಶಾಸನಗಳು ಎಷ್ಟು ಕಠೋರವಾಗಿವೆ–ಪಕ್ಷಪಾತದುವಾಗಿವೆ–ಅಮಾನುಷವಾಗಿವೆ ಎಂಬುದು ಇವರ ಲಕ್ಷ್ಯದಲ್ಲಿಡೆಯೇ? ಆದಿಜನರ ಸಭೆಯಲ್ಲಿ ಹಿಂದೆ ಕೆಲ್ವಮ್ಮೆ ಈ ಗ್ರಂಥಗಳ ಹೋಳಿಯಾಗಲಿಲ್ಲವೇ? ಯಾವ ಧರ್ಮಶಾಸ್ತ್ರ ಪುರಾಣಗಳನ್ನು ನೋಡಿದರೂ ಅದರಲ್ಲಿ ಪರಧರ್ಮ ಸಹಿಷ್ಣುತೆಯು ಅದೆಷ್ಟರ ಮಟ್ಟಿಗೆ ಕಂಡುಬರುತ್ತದೆ? ಎಲ್ಲ ಧರ್ಮಗ್ರಂಥಗಳಲ್ಲಿಯೂ ದುರ್ವ್ಯಸನಿ–ದುರಾಚಾರಿಗಳನ್ನು ಕಟುವಾಗಿ ಜರಿದದ್ದುಂಟು. ಅದಕ್ಕಾಗಿ ಶಾಸ್ತ್ರಕಾರರಿಗೆ 'ಪಕ್ಷಪಾತಿಗಳು–ನಿಂದಕರು' ಎಂದೆನ್ನಬಹುದೇ? ಇವರು ಗೀತೆಯ ದೃಷ್ಟಾಂತ ಕೊಟ್ಟಿರುವರಷ್ಟೇ? ಇಕೋ, ಅದೇ ಗೀತೆಯ ಮೇಲೆ "On Rama Rajya" ಎಂಬ ಪುಸ್ತಕದಲ್ಲಿ ವಿಮರ್ಶೆ ಬಂದಿದೆ. ಅದರಲ್ಲಿ ಶ್ರೀಕೃಷ್ಣನು "ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ | ಸ್ತ್ರಿಯೋ ವೈಶ್ಯಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂಗತಿಂ|| ಕಿಂ ಪುನರ್‌ಬ್ರಾಹ್ಮಣಾಃ ಪುಣ್ಯಾಭಕ್ತಾ ರಾಜರ್ಷಯಸ್ತಥಾ| ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್ || (ಪಾರ್ಥನೆ, ಪಾಪಯೋನಿಗಳಾದ ಸ್ತ್ರೀ-ವೈಶ್ಯ-ಶೂದ್ರಾದಿಗಳು ನನ್ನನ್ನು ಆಶ್ರಯಿಸಿ ಪರಮಗತಿಯನ್ನು ಹೊಂದುವರು; ಇನ್ನು ಪುಣ್ಯವಂತರಾದ ಬ್ರಾಹ್ಮಣರೂ—ರಾಜರ್ಷಿಗಳಾದ ಕ್ಷತ್ರಿಯರೂ ಆದ ನನ್ನ ಭಕ್ತರ ಮಾತನ್ನು ಹೇಳಲೇಕೆ? ನೀನು ಅನಿತ್ಯವಾಗಿಯೂ—ಅಸುಖವಾಗಿಯೂ ಇರುವ ಈ ಲೋಕದಲ್ಲಿ ಇರುವೆಯಾದುದರಿಂದ, ನನ್ನನ್ನು ಭಜಿಸು)" ಎಂದು ಹೇಳಿರುವ ಈ ಉಪದೇಶದಲ್ಲಿ, ಲೋಕವು ಅನಿತ್ಯವಾದದ್ದು–ಅಸುಖವಾದದ್ದು ಎಂದು ಹೇಳಿದ್ದು ತಪ್ಪೋ–ಒಪ್ಪೋ ಈ ವಿಚಾರವನ್ನು ಇಲ್ಲಿ ಬಿಟ್ಟುಕೊಟ್ಟರೂ, ಜನಾಂಗದ ಬಹುಭಾಗವಾದ ಸ್ತ್ರೀ-ವೈಶ್ಯ-ಶೂದ್ರಾದಿಗಳನ್ನು–ಅದರಲ್ಲಿ ತಾಯಿಯ ಸ್ಥಾನದಲ್ಲಿರುವ ಸ್ತ್ರೀಯನ್ನು "**ಪಾಪ-**

ಯೋನಿ"ಗಳೆಂದು ಇಷ್ಟು ತುಚ್ಛವಾಗಿ ಸಂಬೋಧಿಸಿರುವುದು ಪ್ರತ್ಯಕ್ಷವಾಗಿ ಸ್ತ್ರೀ-ವೈಶ್ಯ-ಶೂದ್ರಾದಿಗಳ ನಿಂದೆಯಲ್ಲವೇ? ಎಲ್ಲೆಲ್ಲಿಯೂ ತ್ರೈವರ್ಣಿಗಳಲ್ಲಿ ಎಂದರೆ ಬ್ರಾಹ್ಮಣ-ಕ್ಷತ್ರಿಯ-ರೊಡನೆ ಸೇರಿಸಲ್ಪಡುತ್ತ ಬಂದಿದ್ದ ವೈಶ್ಯರು ಇಲ್ಲಿ ಸ್ತ್ರೀ-ಶೂದ್ರರ ಪಙ್ತಿಗೆ ಎಳೆಯಲ್ಪಟ್ಟಿರುವುದು ಆದೆಷ್ಟರ ಮಟ್ಟಿಗೆ ನ್ಯಾಯ-ವಾದುದು? ಹುಟ್ಟುತ್ತಲೆ ಒಬ್ಬರಿಗೆ "ಪಾಪಯೋನಿ" ಗಳೆಂದೂ ಮತ್ತೊಬ್ಬರಿಗೆ "ಪುಣ್ಯಾತ್ಮ"ರೆಂದೂ ಕರೆಯುವುದು ಪಕ್ಷಪಾತ-ವಲ್ಲವೇ? ಹೀಗೆ ಜನಿಸುವುದು ಎಂದಾದರೂ ಸಂಭವನೀಯವೆ?

ಇದೆಲ್ಲ ಹಿಂದಿನ ಮಾತಾಯಿತು. ಈಗ ಸತ್ಯ-ಅಹಿಂಸೆಗಳ ಸಾಕಾರ ಮೂರ್ತಿಯಾದ ಮಹಾತ್ಮಾ ಗಾಂಧಿಯವರಿರುವರು; ಅವರಿಗೆ ಸನಾತನಿಗಳು ಸನಾತನಧರ್ಮದ ವೈರಿಗಳೆಂದು ಕರೆ-ಯುವರು. ಹಾಗೆ ಕರೆಯುವರೆಂದು ಮ. ಗಾಂಧಿಯವರಿಗೆ ಸನಾತನಧರ್ಮದ ವೈರಿಗಳೆಂದೆನ್ನಬಹುದೇ? ಇಂತಹ ಮಹಾ-ತ್ಮರು ಹಿಂದೆ ಸರಕಾರಕ್ಕೆ "ಸೈತಾನಿ" "ರಾಕ್ಷಸ" "ಕ್ರೂರ" ಮೊದಲಾದ ವಿಶೇಷಣಗಳನ್ನುಪಯೋಗಿಸಿರುವುದಿಲ್ಲವೇ? ಪರದೇಶಿ ಬಟ್ಟೆಗಳ ಹೋಳಿ ಮಾಡಿಸಲಿಲ್ಲವೇ? ಇದರ ಮೇಲಿಂದ ಮಹಾತ್ಮರು ಪರದೇಶಿಗರಾದ ಆಂಗ್ಲೇಯರ ದ್ವೇಷಿಕರೆಂದೂ—ನಿಂದಕರೆಂದೂ ಹೇಳಲಿಕ್ಕಾಗುತ್ತದೆಯೇ? ಈ ವಿಷಯದಲ್ಲಿ ಒಬ್ಬರು ಮಹಾತ್ಮರಿಗೆ 'ತಾವು ಹೀಗೆ ಮಾತನಾಡುವುದು ನಿಂದೆ-ಯಲ್ಲವೇ? ಇದು ವಾಕ್‌ಹಿಂಸೆಯನಿಸುವುದಿಲ್ಲವೇ?' ಎಂದು ಕೇಳಿದ್ದಕ್ಕೆ ಅವರು 'ನಾನು ಸರಕಾರದ ರಾಜ್ಯಪದ್ಧತಿಯನ್ನು ಟೀಕಿಸಿರುವೆನಲ್ಲದೆ—ಇಂಗ್ಲೀಷ್ ಜನಾಂಗವನ್ನಲ್ಲ—ಅದು ನಿಂದೆ ಅಥವಾ ಹಿಂಸೆಯೆನಿಸುವುದಿಲ್ಲ'ಎಂದು ಹೇಳಿ, ಅದರ ಸಮರ್ಥನೆಗಾಗಿ ಅವರು ಕೊಟ್ಟ ಉತ್ತರವು, ತಾ. ೧೭ ನವಂಬರ್ ೧೯೨೧ನೆಯ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ "what is abuse" "ನಿಂದೆಯೆಂದರೇನು" ಎಂಬ ಅಂಕಿತದ ಕೆಳಗೆ ಪ್ರಸಿದ್ಧವಾಗಿದೆ. ಅದರಲ್ಲಿಯ ಮುಖ್ಯಾಂಶವನ್ನು ಇದರಡಿ ಕೊಟ್ಟಿದೆ:

"When we call a thief a thief or a rogue a rogue we do not abuse him. A leper takes no offence being described as such."

"The Hindu Shastras are full of condemnation of evil-doers. They have pronounced curses upon them, Tulasidas who was the quality of mercy personified has filled the Ramayana with adjectives against the enemies of Rama, which it would be difficult to excel. Indeed the names themselves chosen for the evil-doers are significant of their qualities. Jesus did not hesitate to draw down divine wrath upon those whom he called 'a generation of vipers, hypocrites whited sepulchres. Buddha did not spare those who killed the innocent goats in the name of religion. Nor are the Kuran or the Zend Avesta free from such use. Only all these seers and prophets had no evil intention in them. They had to describe persons and things as they were and respect to language so as to enable us to make owr choice between good and evil."

"ಕಳ್ಳನಿಗೆ ಕಳ್ಳ ಅಥವಾ ಅಪ್ರಾಮಾಣಿಕನಿಗೆ—ಅಪ್ರಾಮಾಣಿಕನೆಂದರೆ ಅದು ಅವನ ನಿಂದೆಯಲ್ಲ; ಕುಷ್ಠರೋಗಿಗೆ ಅದರಂತೆ ಎಂದರೆ ಅದರಲ್ಲಿ ತಪ್ಪಿಲ್ಲ."

"ಹಿಂದು ಶಾಸ್ತ್ರಗಳು ಪಾಪಿಗಳ ಖಂಡನೆಯಿಂದ ತುಂಬಿವೆ. ಅವು ಅವರ ಮೇಲೆ ಶಾಪಗಳನ್ನು ವಿಧಿಸಿವೆ. ದಯಾಮೂರ್ತಿ-ಯಾದ ತುಳಸೀದಾಸನು ತನ್ನ ರಾಮಾಯಣದಲ್ಲಿ ರಾಮನ ವೈರಿಗಳ ವಿರುದ್ಧ ಉಪಯೋಗಿಸಿದಂತಹ ವಿಶೇಷಣಗಳನ್ನು ಮೀರುವುವು ಸಿಕ್ಕುವುದು ದುರ್ಲಭ. ಅದರಲ್ಲಿ ಪಾಪಿಗಳಿಗೆ ಆರಿಸಿಟ್ಟ ಹೆಸರುಗಳ ಮೇಲಿಂದ ಅವರ ಕೃತಿಯು ಕಲ್ಪನೆಯು

ಕೋಪ್ರಾನ್ ಕೆಮಿಕಲ್ ಕಂಪನಿಯವರ
೩ ಟೂಥ್‌ಪೇಸ್ಟುಗಳು

೧ ಕೋಪ್ರಾನ್ ಟೂಥ್‌ಪೇಸ್ಟ್
ಜಾಲಿ(ಬೊಬ್ಬುಳ)ಯಲ್ಲಿರುವ ಕಾರ್ಯಕಾರಿಯಾದ ಸತ್ತ್ವಭಾಗವನ್ನೊಳಗೊಂಡುದು. ವಿಷಹಾರಿಯಾದುದು.
ದೊಡ್ಡ ಸ್ಯಾಜ್ ರೂ. ೨/೮
ಮಧ್ಯಮ ಸ್ಯಾಜ್ ರೂ. ೧/೪

೨ ಕೋಪ್ರಾನ್ ವೈಟ್ ಟೂಥ್‌ಪೇಸ್ಟ್
ಹಲ್ಲುಗಳನ್ನು ಸ್ವಚ್ಛವಾಗಿಯೂ ಆರೋಗ್ಯವಾಗಿಯೂ ಇರಿಸುವುದು. ಬೆಲೆ ೧-೭-೬

೩ ಟೆಂಡರ್‌ಗಮ್ ಟೂಥ್‌ಪೇಸ್ಟ್
ಹಲ್ಲುಗಳಿಗೆ ಬಲಕೊಡುವುದಲ್ಲದೆ, ಒಸಡುಗಳ ರಕ್ತಸ್ರಾವವನ್ನು ನಿಲ್ಲಿಸುವುದು! ಬೆಲೆ ೧-೬-೦

ಎಲ್ಲೆಲ್ಲಿಯೂ ದೊರೆಯುವುದು!
ಯಾವಾಗಲೂ ಉಪಯೋಗಿಸಬಹುದು!

ಆಗುವಂತಿದೆ. ಜೀಸಸ್ ಕ್ರೈಸ್ತನು, ದುಷ್ಟರೂ-ಕಪಟಿಗಳೂ-ಸುಣ್ಣಹಚ್ಚಿದ ಸಮಾಧಿಯಂತಿರುವರೆಂದು ತಾನು ಯಾವ ಜನಾಂಗವನ್ನು ಕರೆದನೊ— ಅವರ ಮೇಲೆ ದ್ವೇಷೋತ್ಕ್ಷೇಪವಾಗುವುದೆಂದು ಹೇಳಲು ಹಿಂಜರಿಯಲಿಲ್ಲ. ಬುದ್ಧನು, ಧರ್ಮದ ಹೆಸರಿನಿಂದ ಮೂಕಪ್ರಾಣಿಗಳ ಆಹುತಿ ತೆಗೆದುಕೊಳ್ಳುತ್ತಿದ್ದವರ ಸಮಾಚಾರವನ್ನು ತೆಗೆದುಕೊಂಡಿರುವನು. ಇದಕ್ಕೆ ಕುರಾಣವೂ ಹೊರತಾಗಿಲ್ಲ. ಈ ಎಲ್ಲ ಅವತಾರಿಕರ ಮತ್ತು ತತ್ತ್ವಜ್ಞಾನಿಗಳ ಉದ್ದೇಶವು ದುಷ್ಟವಾಗಿರಲಿಲ್ಲ. ಮನುಷ್ಯರನು ಮತ್ತು ಪದಾರ್ಥಗಳನ್ನು ಅವು ಇದ್ದಕ್ಕಿದ್ದ ಸ್ಥಿತಿಯಲ್ಲಿ ತೋರಿಸಿಕೊಡುವುದು ಅವರ ಉದ್ದೇಶವಾಗಿದೆ. ಮತ್ತು ಆ ಭಾಷೆಯ ಮೇಲಿಂದಲೇ ಚಲೋ-ಕೆಟ್ಟದ್ದನ್ನು ನಾವು ಕಂಡುಹಿಡಿಯಬಹುದಾಗಿದೆ!"

ಇವೆಲ್ಲವುಗಳು ನಿಂದೆಯೆನಿಸದಿದ್ದಮೇಲೆ, ಮಹಾತ್ಮಾ ಬಸವಣ್ಣನವರಾದರೂ 'ತಂದೆ ಮಕ್ಕಳಿಗೆ ಬುದ್ಧಿ ಹೇಳುವಲ್ಲಿ ಅವನ ಅವಗುಣಕ್ಕೆ ಮುನಿವನಲ್ಲದೆ ದೇಹಕ್ಕೆ ಮುನಿಯ'ಎಂದೇ ಹೇಳಿರುವರಲ್ಲವೇ? ಅವರು ಆಗಿನ ಕಾಲದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ ಪಶುಯಜ್ಞವನ್ನೂ— ಧರ್ಮದ ಹೆಸರಿನಿಂದ ತಾಂಡವವಾಡುತ್ತಿದ್ದ ಅಧರ್ಮಕೃತಿಗಳನ್ನೂ—ಅಜ್ಞಾನದ ಮೂಲಕ ಆಚರಿಸುತ್ತಿದ್ದ ಮೂಢ ನಂಬುಗೆಗಳನ್ನೂ 'ನಮ್ಮವರು—ಪರರು' ಎಂಬ ಭೇದಭಾವವಿಲ್ಲದೆ, ಸರಿಯಾಗಿ ಅಲ್ಲಗಳೆದು—ತಿಳಿಯಾಗಿ ಬುದ್ಧಿ ಹೇಳಿರುವರು. "ಜೈದವರೆನ್ನ ಬಂಧುಗಳೆಂಬೆ" "ತನ್ನ ಬಣ್ಣಿಸಬೇಡ— ಇದಿರ ಹಳಿಯಲು ಬೇಡ" ಎಂದು ಬೋಧಿಸಿದ ಬಸವಣ್ಣನವರನ್ನು ಪರಮತ ವಿಡಂಬಕರೆಂದು ಆರೋಪಿಸಲಿಕ್ಕಾದೀತೇ?

ಪಶುಯಜ್ಞಕ್ಕೆ ಪ್ರತಿಕೂಲವಿರುವ ಇಂತಹ ಪ್ರಗತಿಕಾಲದಲ್ಲಿಯೂ ಪಶುಯಜ್ಞವು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿದೆ. ವಿದ್ಯೆಯ ಕೇಂದ್ರವೂ-ಪ್ರಸಿದ್ಧ ಪಟ್ಟಣವೂ ಆದ, ಶ್ರೀ. ರಾವ್ ಅವರು ಇರುವ ಪುಣ್ಯನಗರಿ (ಪುಣೆ)ಯಲ್ಲಿ ಹಿಂದಕ್ಕೆ ಯಜ್ಞಾಭಿಮಾನಿಗಳೂ—ಅದರ ಭಕ್ತರೂ ಆದ ವೈದಿಕ ಶ್ರೇಷ್ಠರ ಏಕನಿಷ್ಠೆಯ ಫಲವಾಗಿ ಪಶುಯಜ್ಞವು—ಅದೆಷ್ಟೋ ಪ್ರತಿಭಟಿಸಿದರೂ ನಿಲ್ಲದೆ—ಒಳ್ಳೇ ಅಟ್ಟಹಾಸದಿಂದ ಜರುಗಿದುದು ಇವರಿಗೆ ಗೊತ್ತಿಲ್ಲವೇ? ಈ ಕಾಲದಲ್ಲಿಯೂ ಅದು ಆಗಾಗ ಅಲ್ಲಲ್ಲಿ ತಲೆ ಎತ್ತಿ ಕಾಣಿಸಿಕೊಂಡು, ತನ್ನ ಪ್ರಭಾವವನ್ನು ಸಾಕಷ್ಟು ಬೀರುತ್ತಿರುವಾಗ, ಅದರದೇ ಆದ ಆಗಿನ ಕಾಲದಲ್ಲಿ ಅದರ ಚೆಲ್ಲಾಟವು ಅದೆಷ್ಟು ನಡೆದಿರಬೇಡ? ಇಂತಹ ಪಶುಯಜ್ಞವನ್ನು ಕರುಣಾಮೂರ್ತಿ ಬಸವಣ್ಣನವರು ಜರಿದಿದ್ದರೆ—ಅದನ್ನು ನೋಡಿ ಶ್ರೀ. ರಾವ್ ಅವರಿಗೇಕೆ ಕೆಡುಕೆನಿಸಬೇಕು? ಇದಕ್ಕಾಗಿ ತಾಳ ತಪ್ಪಿ ಮಹಾತ್ಮಾ ಬಸವಣ್ಣನವರ ಮಹಾತ್ಮ್ಯದ ಮುಂದೆ ಪ್ರಶ್ನಾರ್ಥಕ ಚಿಹ್ನೆ ಇಡಹೋದರೆ—ಅದು ತಮ್ಮ ಮುಂದೆ ಬಿದ್ದೀತೆಂಬ ವಿಚಾರವಾದರೂ ಇವರಿಗಿರಬೇಡವೇ? "**ಬಸವರಾಜ, ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ! ಈಶನ ವಿಶ್ವಾಸಲಪ್ಪ ಭಕ್ತ, ನಿನಗೆಣೆಯಿಲ್ಲ ಪಡಿಯಿಲ್ಲ ಪಾಸಟಿಯಾವಂ?**" ಎಂದು ಆಹ್ವಾನಿಸಿದ ರಸಿಕಚಕ್ರಿ ಹರಿಹರನು ಈಗಿದ್ದಿದ್ದರೆ "ಏನು, ಮಾನವ ಕುಲೋದ್ಧಾರಕ ಬಸವಣ್ಣನವರ ಮಹಾತ್ಮ್ಯವನ್ನು ಪ್ರಶ್ನಿಸುವ ಮಹನೀಯರುಂಟೇ ಜಗದೊಳಗೆ?" ಎಂದು ಆಶ್ಚರ್ಯದಿಂದ ಬೊಟ್ಟು ಕಚ್ಚದಿರುತಿರಲಿಲ್ಲ. ಹೀಗೆ ಇವರು ಅಕ್ಷರಕ್ಕೊಂದು ಅರ್ಥ ಮಾಡುತ್ತ ಹೋದಲ್ಲಿ, ಒಬ್ಬ ವ್ಯಕ್ತಿಗಾಗಲಿ— ಸಮಾಜಕ್ಕಾಗಲಿ ಕಾಯಾ-ವಾಚಾ-ಮನಸಾ ಅಹಿತಬಯಸದ—ಒಂದಾದರೂ ಬಿರುನುಡಿಗಳನ್ನಾಡದ ಸರ್ವಮಾನ್ಯವಾದ ಒಂದು ಗ್ರಂಥವನ್ನಾಗಲಿ—ಒಬ್ಬ ಮಹಾತ್ಮನ ಹೆಸರನ್ನಾಗಲಿ ಹೇಳಲಿ, ನೋಡೋಣ!

ಲೇಖನದ ಕಡೆಗೆ ಶ್ರೀ. ರಾವ್ ಅವರು "ಬಸವಣ್ಣನವರು ಮಾನ್ಯ ಲೇಖಕರಿಗೆ (ಚಿಂತಾಮಣಿಯವರಿಗೆ) ಸರ್ವಮಾನ್ಯರೆನಿಸಿದರೂ ಲೋಕವೇನೆಂದೀತು (ಯಾರಿಗೆ?) ಎಂಬುದನ್ನು ವಾಚಕರೇ ಊಹಿಸಲಿ. ಇಷ್ಟಾದರೂ '**ಗುಣಾಯಂತೇ ದೋಷಾಃ ಸುಜನವದನೇ**' ಎಂಬಂತೆ, ಒಟ್ಟಿನ ಮೇಲೆ ಮಹಾತ್ಮಾ ಬಸವಣ್ಣನವರು ತಮ್ಮ ಅಪಾರವಾದ ಸದ್ಗುಣಗಳಿಂದ ಇರುವ ಅಲ್ಪ ದೋಷಗಳನ್ನು ಮರೆಮಾಡಿ, ಜನೋಪಕಾರಿಗಳಾಗಿದ್ದಾರೆಂದರೆ ಯಾರೂ ಅಲ್ಲಗಳೆಯಲಾರರು" ಎಂದು ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ಬಂದ ವಿದ್ಯಾರ್ಥಿಗೆ ಪಾರಿತೋಷಕ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದಂತೆ ಮಾಡಿರುವರು. "ರವಿಯನ್ನರಸಲು ಕೈದೀವಿಗೆಯೇ?" ಎಂಬಂತೆ ಸ್ವಯಂಪ್ರಕಾಶನಾದ ಆ ಬಸವಭಾನುವಿಗೆ ಯಾರ ಹೊಗಳಿಕೆ ತೆಗಳಿಕೆಯಿಂದೇನಾಗಬೇಕಾಗಿದೆ? ಒಟ್ಟಿನ ಮೇಲೆ ಶ್ರೀ. ರಾವ್ ಅವರು 'ಮಹಾತ್ಮಾ ಬಸವಣ್ಣನವರ ಸ್ವರೂಪ' ವನ್ನು ಕಾಣಹೋಗಿ—ಕಾಣದೆ—ತಮ್ಮ ಸ್ವರೂಪವನ್ನು ಬಯಲಿಗೆ ಹಾಕಿಕೊಂಡುದು ವಿಚಿತ್ರವು, ವಿಷಾದವು. ಹೀಗೆ ವ್ಯರ್ಥವಾಗಿ ಮಹಾತ್ಮಾ ಬಸವಣ್ಣನವರನ್ನು ಟೀಕಿಸಿ—ತಮ್ಮ ಲೆಕ್ಕಣಿಕೆಯ ಶಕ್ತಿಯನ್ನು ಕುಂದಿಸಿ—ಅಶಾಂತತೆಗೀಡುಮಾಡುವುದಕ್ಕಿಂತ 'on Rama Rajya' ಎಂಬ ಪುಸ್ತಕದಲ್ಲಿ ಶ್ರೀರಾಮನ, ಗೀತೆಯ, ಮತ್ತು ಧರ್ಮಶಾಸನಕಾರರ ಮೇಲೆ ಬಂದ ಟೀಕೆಗಳನ್ನು, ತಮ್ಮ ಲೆಕ್ಕಣಿಕೆಯಲ್ಲಿ ಸಾಮರ್ಥ್ಯವಿದ್ದರೆ ಸಾಧಾರ ಖಂಡಿಸಿ, ತಮ್ಮ ಲೆಕ್ಕಣಿಕೆಯನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಶ್ರೀ. ರಾವ್ ಅವರಲ್ಲಿ ನಮ್ಮ ಪ್ರೇಮದ ಸೂಚನೆಯು.

ಅವನು ತಂದೆಯಷ್ಟೇ ಉತ್ಸಾಹಶಾಲಿಯಾಗಿದ್ದಾನೆ
—ಅವರಿಬ್ಬರ ಸಾಹಸಕ್ಕೆ ಕೊನೆಯೇ ಇಲ್ಲ!
ನಿಜವಾಗಿಯೂ ಅವರಿಬ್ಬರೂ ಒಳ್ಳೆಯ ಜೋಡಿಯಾಗಿದ್ದಾರೆ! ನಿಜವಾಗಿಯೂ ಅವರಿಬ್ಬರೂ ಉತ್ಸಾಹಶಾಲಿಯರಾಗಿದ್ದಾರೆ! ಅವರಿಗೆ ಕೊಡುವ ಆಹಾರವು ಕಡಿಮೆಯಾದ ಚೇತನವನ್ನು ಪುನಃ ಪೂರ್ಣವಾಗಿ ಉಂಟುಮಾಡಲು ತಾಯಿ ಖಾತ್ರಿ ಮಾಡುತ್ತಾಳೆ — ವಿಟೆಮಿನ್‌ನಿಂದ ಕೂಡಿದ ಪೋಷಣ ಶಕ್ತಿಯುಳ್ಳ ಡಾಲ್ಡದಿಂದಲೇ ತಯಾರಿಸಿದ ರುಚಿಕರವಾದ ಆಹಾರವನ್ನು ಆಕೆ ಅವರಿಗೆ ಕೊಡುತ್ತಾಳೆ. ಶಕ್ತಿಕುಂದಿ ಆರೋಗ್ಯವು ಕೆಡಿಸಿಹೋಗುವ ಅಪಾಯವು ಅವರಿಗೆ ಎಂದೂ ಬಾರದು, ಏಕೆಂದರೆ, ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟೆಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ಚೇತನಕ್ಕಾಗಿ — ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ. ಡಾಲ್ಡ ಆಹಾರಕ್ಕೆ ಹೆಚ್ಚು ರುಚಿಯನ್ನು ಕೂಡ ಕೊಡುತ್ತದೆ.
ಡಾಲ್ಡ ತನ್ನಲ್ಲಿರುವ ವಿಟಮಿನ್ ಮೂಲಕ ದೇಹಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯಮಾಡುತ್ತದೆ . . . ವಿಟಮಿನ್‌ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಎಲ್ಲಾ ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ ವಿಟಮಿನ್ ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.
ವಿಟೆಮಿನ್‌ದಿಂದ ಕೂಡಿದ ಡಾಲ್ಡ ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಡುತ್ತದೆ — ಸೀಲು ಮಾಡಿದ ಡಬ್ಬಗಳಲ್ಲಿ ಮಾತ್ರ ಮಾರಲ್ಪಡುತ್ತದೆ
HVM 22-193 KN
THE HINDUSTAN VANASPATI MANUFACTURING CO., LTD., BOMBAY

ಸುಖವಸ್ತು ೨ ★ ಬೇಸರು ★

ಶ್ರೀ. ಎಚ್. ಎಸ್. ಪಾಟೀಲ,
ಎಂ.ಎ., ಬಿ.ಕಾಮ್, ಮುಂಬಯಿ

★

ಈ ಮುಖ್ಯ ಶಿರೋಲೇಖಮಾಲಿಯಲ್ಲಿ ಪ್ರತಿ ತಿಂಗಳೂ, ಇಂತಹ ಲೌಕಿಕ ವಿಚಾರಗಳ ವಿಚಾರ-ಚರ್ಚೆಯನ್ನು ಶ್ರೀ. ಪಾಟೀಲರು ಮಾಡಲಿರುವರು. —ಸಂ.

★

ಬೇಸರು ಕಾರ್ಯಶಕ್ತಿಯು ಶಸ್ತ್ರಕ್ಕೆ ಸಾಣೆ ಹಿಡಿವ ಸಾಣೆಗಾರನಿದ್ದಂತೆ. ಒಂದು ಕಾರ್ಯದ ಸಲುವಾಗಿ ಬೇಸರು ಬಂದಾಗ ಇನ್ನೊಂದು ಕಾರ್ಯವನ್ನದು ಹುಡುಕ ಹಚ್ಚುವುದು!

★

ಜನರಿಗೆ ಬೇಸರು ಬಂದಿದ್ದರೆ, ಜಗತ್ತಿನಲ್ಲಿ ಉತ್ಸಾಹವೆ ಉಳಿಯುತ್ತಿದ್ದಿಲ್ಲವೋ ಏನೋ! ಒಂದು ಕೆಲಸವನ್ನು ಹಾಗೆಯೆ ಹುರುಪಿನಿಂದ ಮನುಷ್ಯನು ಮಾಡುವುದಾದರೂ ಎಲ್ಲಿಯವರೆಗೆ? ಅವನಶಕ್ತಿಗೆ ಮರ್ಯಾದೆಯಿದೆ; ಅವನ ಮನಕ್ಕೆ ಮಿತಿಯಿದೆ; ಅವನ ಮಿಕ್ಕ ಪರಿಸ್ಥಿತಿಗೆ ಕೊನೆಯಿದೆ. ಅಂತೆಯೆ ಇವೆಲ್ಲ ಬಂಧನಗಳ ಒತ್ತಾಯದಿಂದಷ್ಟೇ ಅವನು ತನ್ನ ಕೆಲಸದಲ್ಲಿ ಬೇಸರಿಯುವುದುಂಟು! ಆದರೆ ತುಸುಹೊತ್ತಿನಲ್ಲಿಯೆ ಅತನು ಆ ಬೇಸರಕ್ಕೇ ಬೇಸರ ತೋರಿಸಿದರೆ, ತನ್ನ ಮೊದಲಿನ ಕೆಲಸವು ಮತ್ತೆ ಮುಂದೆ ಸಾಗುವುದು. ಇಂತಹ ಉದಾಹರಣೆಗಳಿಗಿಂತ ಇದಕ್ಕಿರುವ ಅಪವಾದಗಳೆ ಹೆಚ್ಚು. ಇತ್ತ ಜಗತ್ತಿನಲ್ಲಿ ಸಂಭವಿಸಿದ ಉತ್ತಮ ಇಲ್ಲವೆ ಉಪಯುಕ್ತ ಕಾರ್ಯವನ್ನು ಪರಿಶೀಲಿಸಿದರೆ, ಅದನ್ನು ಮಾಡಿದವರು ಈ ಅಪವಾದಜೀವಿಗಳೆ— ಅಂತಹರು ತೀರ ಸ್ವಲ್ಪ ಜನರೇ ಇರುವರು. ತಮ್ಮ ಶಕ್ತಿಯ ಶಕ್ತಿಯನ್ನು ಅರಿತ ಅವರು, ನಡುಗೆಲಸದಲ್ಲಿಯೆ ತುಸು ತುಸು ಬೇಸರನ್ನು ತೋರಿಸಿದರೂ, ಆ ಬೇಸರಿಕೆಯ ಸಮಯದಲ್ಲಿ ಅವರು ತಮ್ಮ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳುವರು, ಹೊರತಾಗಿ ಕಾರ್ಯವನ್ನು ತೊರೆಯುವುದಿಲ್ಲ. ಅದಕ್ಕಾಗಿ ಹೇಳುವುದು: ಅವರಿಗೆ ಬೇಸರು ಬಂದಿದ್ದರೆ ಅವರ ಉತ್ಸಾಹವು ಕಮರಿ ಅವರು ಕೈಕೊಂಡ ಕೆಲಸವು ಕುಸಿಬೀಳುತ್ತಿತ್ತು— ಎಂದು!

ಇದು ಅಪವಾದದವರ ಮಾತಾಯಿತು. ಇನ್ನು ಅಪವಾದವಿಲ್ಲದ ಅನೇಕ ಜನರನ್ನು ತೆಗೆದುಕೊಂಡರು ಕೂಡ ಜಗತ್ತಿನಲ್ಲಿಯ ಉತ್ಸಾಹಕ್ಕೆ ಅವರ ಬೇಸರಿಕೆಯೆ ಕಾರಣ ಎನ್ನಬಹುದು. ಗಿರಣಿಗಳಲ್ಲಿ ದುಡಿಯುವ ಅಸಂಖ್ಯ ಜನರಿಗೆ ತಮ್ಮ ಕೆಲಸದ ಬೇಸರುಬರುವುದೆಂದೇ—ಅದನ್ನು ಕೆಲಕಾಲವಾದರೂ ಮರೆಯಲಿಕ್ಕೆ—ಅವರಿಗೆ ಚಿತ್ರಪಟಗಳು-ನಾಟಕಗಳು ಬೇಕಾದುವು; ಕಚೇರಿಗಳಲ್ಲಿ ದಿನಂಪ್ರತಿ ಅದೇ ಕುರ್ಚಿಯಲ್ಲಿ ಕುಳಿತು ಅದೇ ಮೇಜಿನ ಮೇಲೆ ಗೀಚಿದ್ದನ್ನೆ ಗೀಚುವುದಕ್ಕೊ, ಅದೇ ಜನರನ್ನು ಮತ್ತೆಮತ್ತೆ ಅವೇ 'ಪ್ರಣಾಮ' 'ಒಳಿತಾಗಿದ್ದಿರಾ?' ಎಂಬ ಮಾತುಗಳನ್ನಾಡಲಿಕ್ಕೊ ಕಾರಕೂನರು ಬೇಸರಿಯುತ್ತಿದ್ದರೆಂದೇ ಅವರಿಗಾಗಿ ಅನೇಕ ಪುಸ್ತಕ-ಪತ್ರಿಕೆಗಳು ಹೊರಟುವು; ಮನೆಯೊಡೆತಿಯರು ದಿನ ದಿನ ಅದೇ ಅಡುಗೆಮನೆಯ—ಜೀವಿಸುವ ವ್ಯವಸ್ಥೆಗಳಿಗಾಗಿ ಬೇಸತ್ತಾಗಲಿ, ಪ್ರತಿದಿನ ಮಧ್ಯಾಹ್ನದಲ್ಲಿ ಎರಡು ಮೂರು ಗಂಟೆಯ ಕಾಲ ನಿದ್ದೆಮಾಡಲು ಬೇಸರಿಸಿಯಾಗಲಿ, ಬಾನುಲಿಯಲ್ಲಿ ಆ ಹೊತ್ತಿಗೆ ಅವರಿಗೆ ಬೇಕಾಗುವ ವಿಷಯಗಳನ್ನಿಡಲು ಅಧಿಕಾರಿಗಳಿಗೆ ವಿಚಾರಮಾಡಹಚ್ಚಿದರು, ಎಂದು ಹೇಳಬಹುದು. ಹೀಗಾಗಿ ಬೇರೆಬೇರೆ ಜನರು ಬೇಸರನ್ನು ತೋರಿದ್ದರಿಂದಲೇ ಅನೇಕ ಬಗೆಯ ಹೊಸ ಹೊಸ ವಿಚಾರ-ವ್ಯವಸ್ಥೆಗಳಲ್ಲಿ ಮಿಕ್ಕವರು ಆಸ್ಥೆಯನ್ನೂ ಉತ್ಸಾಹವನ್ನೂ ತಳೆಯಬೇಕಾಯಿತು. ಅಂತೆಯೆ ಹೇಳುವುದು: ಬಹಳ ಜನರು ಒಂದೇಬಗೆಯಾದ ಬೇಸರನ್ನು ತೋರಹತ್ತಿದರೆಂದೇ ತುಸು ಜನರು ಅನೇಕ ಬಗೆಯಾಗಿ ಚಟುವಟಿಕೆಯನ್ನು ಪಡೆಯಬೇಕಾಯಿತು— ಎಂದು.

ಕೆಲಕೆಲವು ಬಗೆಯ ಬೇಸರನ್ನು ತಿಳಿದುಕೊಳ್ಳಲಿಕ್ಕೆ ಕೂಡ ಬೇಸರಿಯುವಂತೆನಿಸಿದರೂ, ಮೋಜೆನಿಸುವುದು. ಉದಾಹರಣಾರ್ಥವಾಗಿ ಕಲಿತ ಹೆಂಗುಸರಿಗೆ ಅಡಿಗೆ ಮುಂತಾದ ಮನೆಗೆಲಸಗಳನ್ನು ಮಾಡಲಿಕ್ಕೆ ಬೇಸರೆನಿಸಿದರೆ, ಒಮ್ಮೆ ಕಲಿತ ಗಂಡುಸರಿಗೆ ಮತ್ತೊಂದೇನಾದರೂ ಓದಲಿಕ್ಕೆ ಬೇಸರೆನಿಸುವುದು. ಈ ಪಂಗಡಗಳಲ್ಲಿ ಪ್ರತಿಯೊಂದು ವ್ಯಕ್ತಿಯನ್ನು ಆ ಆ ಪರಿಸ್ಥಿತಿಗಳ ಪರೀಕ್ಷೆಯನ್ನು ಮಾಡಿಯೆ ತಿಳಿದುಕೊಳ್ಳಬೇಕಾದರೂ, ಸಾಮಾನ್ಯವಾಗಿ ಕೆಲವು ಲಕ್ಷಣಗಳನ್ನು ಅವರ ಬಗೆಗಾಗಿ ಹೇಳಬಹುದು. ಮೊದಲಿನ ಗುಂಪಿನವರಿಗೆ, ಅವರ ಜಾತಿಯವರು ತಲೆತಲಾಂತರಗಳಿಂದ ಅದೇ ಕೆಲಸವನ್ನು ಮಾಡುತ್ತ ಬಂದಿರುವುದರಿಂದ ಮತ್ತು ಇವರು ಅದಕ್ಕೆ ಬೇಸತ್ತು ವಿದ್ಯೆಯನ್ನು ಗಳಿಸಿದರೆಂದೊ ಏನೊ, ಆ ಮೂಲಕಾರ್ಯಕ್ಕೆ ಬೇಸರಿಯುವರು ಎನಿಸುತ್ತದೆ. ಇತ್ತ ಎರಡನೆಯ ಗುಂಪಿನವರ ಕೂಡ ಚಿಕ್ಕತನದಿಂದ— ಅದೇಕೆ ಅಜ್ಜಮುತ್ತಜ್ಜರಿಂದ— ಅವೇ ಅವೇ ವಿಷಯ. ಇಲ್ಲವೆ ಪುಸ್ತಕಗಳನ್ನೆ ಓದುವ ಉದ್ಯೋಗವನ್ನು ಮಾಡಿರುವರೆಂದೇ, ಒಮ್ಮೆ ಅವರು ತಮ್ಮ ಪರೀಕ್ಷೆಯನ್ನು ದಾಟಿದರೆಂದರೆ 'ಇನ್ನು-ಮುಂದೆ ಎಂದೂ ಯಾವಬಗೆಯ ಪುಸ್ತಕವನ್ನೂ

ಹಿಡಿಯುವುದಿಲ್ಲ ’ ಎಂಬ ಪಣವನ್ನು ತೊಟ್ಟಂತೆಯೆ ಜಗತ್ತಿನಲ್ಲಿ ಕಾಲಿಡುವರು; ಮತ್ತು ನೂರಕ್ಕೆ ತೊಂಬತ್ತು ಜನರು ಆ ಪ್ರತಿಜ್ಞೆಯನ್ನು ಪಾಲಿಸುವರು. ಅಂತೆಯೆ ಹೇಳುವುದು: ಮೊದಲಿನವರ ಬೇಸರದಿಂದಲೆ ಎರಡನೆಯ ಬಣದವರು ಪಾಕಶಾಸ್ತ್ರದ ಶಾಲೆಗಳನ್ನೂ ಭೋಜನಮಂದಿರವನ್ನೂ ಸುವ್ಯವಸ್ಥಿತವಾದ ಪದ್ಧತಿಯಲ್ಲಿ ಆರಂಭಮಾಡಲು ಉತ್ಸಾಹವನ್ನು ತೋರಿಸಿದುದು ಮತ್ತು ಅದರಂತೆಯೆ ಎರಡನೆಯ ಪಂಥದವರ ಬೇಸರಕ್ಕಾಗಿಯೆ ಅವರು ಬೇಸತ್ತುಬಿಟ್ಟ ಪುಸ್ತಕಗಳನ್ನು ಮೊದಲನೆಯ ಸಮೂಹದವರು ಎತ್ತಿಕೊಳ್ಳಲು ಹೆಚ್ಚಿನ ಹುರುಪನ್ನು ತಳೆದುದು, ಎಂದು.

ಬಹುತರವಾಗಿ ಜನರಿಗೆ ಮಾಡಿದ್ದನ್ನು ಮತ್ತೆ ಮತ್ತೆ ಮಾಡಲು ಬೇಸರೆನಿಸುವುದು; ನಿಜ. ಶಿಕ್ಷಕರಿಗೆ ಹುಡುಗರಿಗಾಗಿ ಬೇಸರು; ನಟ-ನಟಿಯರಿಗೆ ತಮ್ಮ ಚಿತ್ರಪಟ-ನಾಟಕಗಳಿಗಾಗಿ ಬೇಸರು, ಲೇಖಕರಿಗೆ ಬರೆಯಲು ಬೇಸರು, ವಿದ್ಯಾರ್ಥಿಗಳಿಗೆ ಓದಲು ಬೇಸರು. ಅವರಂತೆಯೆ ರೇಲ್ವೆಗಳಲ್ಲಿ ಕೆಲಸ ಮಾಡುವವರಿಗೆ ಪ್ರವಾಸ ಮಾಡಲಿಕ್ಕೆ ಬೇಸರೆನಿಸಬಹುದು; ಅಂಚೆಯ ವಿಭಾಗದಲ್ಲಿದ್ದವರಿಗೆ ಓಲೆ ಬರೆಯಲು ಬೇಸರೆನಿಸಬಹುದು. ಅದರಂತೆಯೆ ಪೋಲಿಸ್-ಇಲ್ಲವೆ-ಮಿಲಿಟರಿಯಲ್ಲಿ ದುಡಿಯುವವರಿಗೆ ಖಾಕಿಯ ಬಗೆಯಲ್ಲಿ ಬೇಸರು— ಅದೇಕೆ— ಕೀಸರಿಸಿಸಬಹುದು; ಆದರೆ ಉತ್ತರಹಿಂದುಸ್ಥಾನದ ಜನರಿಗೆ ಗೋದಿಯ ಕೂಳು ತಿನ್ನಲು ಬೇಸರಿಕೆಬರುವುದೆ? ದಕ್ಷಿಣಹಿಂದುಸ್ಥಾನದ ಜನರಿಗೆ ಲುಂಗಿಯನ್ನುಡಲು ಬೇಸರೆನಿಸಬಹುದೆ? ಕನ್ನಡ ಜನರಿಗೆ ಸಿದ್ದೆ ಮಾಡಲು ಬೇಸರೆನಿಸಬಹುದೆ? ಅದರಂತೆಯೆ ಬೀಡಿಯಂಗಡಿಯವರಿಗೆ ವಾಕ್ಪಟ ಸಂಗೀತದಲ್ಲಿ, ಕುದುರೆ ಗಾಡಿಯವರಿಗೆ ವಾದವಿವಾದದಲ್ಲಿ ಮತ್ತು ಸಲೂನುಗಳಲ್ಲಿಯ ನೌಕರರಿಗೆ ಹೈಲವಾನರಲ್ಲಿ ಹೇಗೆ ಬೇಸರೆನಿಸುವುದಿಲ್ಲ ಎಂಬುದನ್ನು ತಿಳಿದುಕೊಳ್ಳುವುದು ಸಹ ಮನೋರಂಜಕವೆನಿಸಿದರೂ, ಅದರ ಸಮರ್ಪಕ ನಿದಾನವನ್ನು ಹುಡುವುದು ಕೊಂಚ ಬಿಗಿಯಾದ ವಿಷಯವೆನಿಸುವುದು.

ಇತ್ತ ಬೇಸರನ್ನು ಹೋಗಲಾಡಿಸುವುದೂ ಒಂದು ದೊಡ್ಡ ವಿಚಾರಾಸ್ಪದವಾದ,ವೈಚಿತ್ರ್ಯಗಳಿಂದ ತುಂಬಿದ ಮತ್ತು ವಿರೋಧವನ್ನು ಅಪೇಕ್ಷಿಸಬಹುದಾದ ವಿಷಯವಾಗಿದೆ. ಇತ್ತೀಚೆಗಂತೂ ಬೇಸರಕ್ಕೆ ಉಪಾಯವನ್ನು ಹುಡುಕುವುದೊಂದು ಗಂಭೀರವಾದ ಶಾಸ್ತ್ರವಾಗಿ ಪರಿಣಮಿಸಿದೆ; ಹಾಗೂ ಬೇಸರನ್ನು ಇಲ್ಲದಂತೆ ಮಾಡುವುದೊಂದು ಲಲಿತಕಲೆಯಾಗಿ ಸಂಭವಿಸಿದೆ. ಒಂದು ಚಿಕ್ಕ ದೃಷ್ಟಾಂತವನ್ನು ತೆಗೆದುಕೊಳ್ಳೋಣ: ಈಗ ನೀವು ಒಬ್ಬ ಗೆಳೆಯನೊಡನೆ ಮಾತನಾಡುತ್ತ ಒಂದು ಕೂಟದಲ್ಲಿ ನಿಂತಿರುವಿರಿ ಎಂದಿಟ್ಟುಕೊಳ್ಳುವಾ, ಮತ್ತು ಬೇರೊಂದು ಕೆಲಸಕ್ಕೆ ಹೋಗಬೇಕೆಂದು, ಆತನು ನಿಮ್ಮ ಆಪ್ತ ಮಿತ್ರನೊಬ್ಬನಲ್ಲ ಎಂದಾಗಲಿ ಇಲ್ಲವೆ ಆತನು ಆಡುತ್ತಿರುವ ಮಾತು ನಿಮಗೆ ಆಕರ್ಷಕ ಇಲ್ಲ ಎಂದಾಗಲಿ ಇದ್ದಾಗ, ನಿಮಗೆ ಅಲ್ಲಿಂದ ಆದಷ್ಟು ಬೇಗನೆ ಕಾಲ್ತೆಗೆಯುವುದಿದೆ; ಆದರೆ—ಇಲ್ಲವೆ ಆದರೂ—ಆತನು ತುಂಬಾ ರಭಸದಿಂದ— ನಿಮ್ಮ ಚಿತ್ತವನ್ನು ತನ್ನಕಡೆಗೆ ಹಿಡಿದೆಳೆಯುವನೇನೊ ಎಂಬ ಶಕ್ತಿಯಿಂದ— ಹಾಗೆಯೆ ತನ್ನ ಮಾತುಗಳನ್ನು ಮುಂದುವರಿಸಿದ್ದಾನೆ. ಅಂತಹ ಪರಿಸ್ಥಿತಿಯಲ್ಲಿ ಆತನ ವಾಕ್ಸ್ಪರ್ಧೆಗೆ ನೀವು ಬೇಸತ್ತರೆ, ಆ ಬೇಸರನ್ನು ವ್ಯಕ್ತಪಡಿಸದೆಯೆ ಅಲ್ಲಿಂದ ಪಲಾಯನ ಹೂಡಿಸುವುದೆಂದರೆ ಅದೆಂತಹ ಯುಕ್ತಿ ಬೇಕು ನೋಡಿರಿ! ಆ ಸಂದರ್ಭವನ್ನೆ ಇದಿಯಾಗಿ ಮತ್ತು ಶಾಸ್ತ್ರೀಯ ರೀತಿಯಲ್ಲಿ ಅಭ್ಯಾಸಿಸುವ ತಾಳ್ಮೆ ಬೇಕು, ಮತ್ತು ಆ ಪ್ರಸಂಗದಿಂದ ಯಾವ ತೊಂದರೆಯೂ ಇಲ್ಲದೆ ಪಾರಾಗುವ ನೈಪುಣ್ಯಬೇಕು. ಹೀಗಾಗಿ ಅದೊಂದು ತಜ್ಞರ ವಿಷಯವೆನಿಸುವುದು.

ಹೆಚ್ಚಿನ ಬೌದ್ಧಿಕ ಕಾರ್ಯಗಳಲ್ಲಿ ತೊಡಗಿದವರದೊಂದು ಗಹನ ಪ್ರಕರಣವೆ! ಅವರಿಗೆ ತಮ್ಮ ಉದ್ಯೋಗವನ್ನು ಬಿಟ್ಟು ತೆರಳುವುದೆಂದರೆ ಮೈಗೆ ಮುಳ್ಳು ಬಂದಂತೆ! ಅಂತೆಯೆ ತಮ್ಮ ಕೆಲಸವು ಎಂದಿನಂತೆ ಸಾಗಿರಬೇಕು, ಎಂದರೆ ಅದರಿಂದ ದೊರೆಯುತ್ತಿರುವ ಎಲ್ಲ ಲಾಭ ಮತ್ತು ಯಶಸ್ಸು ಮತ್ತು ಕೀರ್ತಿಗಳ ಧುರಿಯು ಅನಿರುದ್ಧವಾಗಿ ಸಾಗಿರಬೇಕು; ಆದರೆ ಅವರಿಗೆ ಅದರಲ್ಲಿ ಬೇಸರವುಂಟಾಗಬಾರದು—ಇಂತಹ ಕರಾರಿನೊಂದಿಗೆ ದೊಡ್ಡ ದೊಡ್ಡ ವಿದ್ವಾಂಸರು, ಉದ್ಯೋಗಪಟುಗಳು ಇಲ್ಲವೆ ಸರಕಾರದ ಹುದ್ದೆದಾರರು ತಮ್ಮ ಬೇಸರನ್ನು ಕಳೆಯಲು ಯಾರಿಗಾದರೂ ಹೇಳಿದಾಗ, ಅದು ಸಾಮಾನ್ಯನಿಗೊಬ್ಬನಿಗೆ ಸಾಧ್ಯವಾಗಬಹುದೆ?

ಈಗಿನ ಮುಂದುವರೆದ ರಾಷ್ಟ್ರಗಳ ಸಾಮಾಜಿಕ ಮತ್ತು ಸಾಮೂಹಿಕ ಜೀವನವನ್ನು ಪರಿಶೀಲಿಸಿದರೆ ನಮಗೆ ತಿಳಿಯುವುದೇನು? ಭಾರತದಂತಹ ಕೇವಲ ಕೃಷಿಪ್ರಧಾನವಾದ ದೇಶದಲ್ಲಿಯ ಜನರಿಗೆ ಸುದೈವದಿಂದ ಬೇಸರು ಬರುವಂತಹದೇನೂ ಇಲ್ಲದೆ, ಕೇವಲ ಆಲಸ್ಯ ತುಂಬಿದೆ; ಎಂದೇ ನಮ್ಮ ಹೊರತು ಬೇರೆ ರಾಷ್ಟ್ರಗಳ ಕಡೆಗೆ ನಮ್ಮ ಅಂತರ್ದೃಷ್ಟಿಯನ್ನು ಹೊರಳಿಸೋಣ: ಪಡುವಣದಲ್ಲಿ ಮಧ್ಯಯುಗದ ಅಂಕವು ಮುಗಿದು, ಯಂತ್ರಯುಗದ ಈಗಿನ ಅಂಕವು ಆರಂಭವಾದಂತೆ, ಕಾರಖಾನೆಗಳಲ್ಲಿ ಯಂತ್ರದೊಡನೆ ಯಂತ್ರದಂತೆ ದುಡಿಯುವ ಜನರನ್ನೂ ತಮ್ಮ ಬೇಸರನ್ನೂ ಕಳೆಯಲು, ಕೂಲಿಕಾರರ ಕ್ರೀಡಾಭವನ, ವಾಚನ ಮಂದಿರ ಮುಂತಾದ ಸಂಸ್ಥೆಗಳನ್ನು ಸಂಪತ್ತು, ಸೌಕರ್ಯಗಳು—ಮೊದಲಾದ ಪ್ರಯತ್ನಗಳಿಂದಲೂ, ಸಮಾಜಸಂಘಟನೆ, ಸಾಂಸ್ಕೃತಿಕ ಸಂವರ್ಧನೆ ಮೊದಲಾದುವುಗಳಿಗೆ ಉತ್ತೇಜನಗಳನ್ನು ನೀಡಿಯೂ ಪ್ರೋತ್ಸಾಹಿಸಬೇಕಾಯಿತು. ಇತ್ತೀಚೆಗಂತೂ ಹೊಸ ಹೊಸ ಯಂತ್ರಗಳ ಶೋಧಗಳಿಂದ, ತುಸು ಶ್ರಮದಲ್ಲಿಯೆ ಎಲ್ಲ ಸೌಕರ್ಯಗಳೂ ಸಿಗಹತ್ತಿದಕಾರಣ, ಒಂದು ಬದಿಯಿಂದ ಹೆಚ್ಚು ವೇಳೆಯನ್ನು ಬೇಸರಿಯದೆ ಕಳೆಯುವುದೆಂತು ಎಂಬ ಪ್ರಶ್ನೆಯೂ, ಮತ್ತೊಂದು ಬದಿಯಿಂದ ಹೀಗೆಯೆ ಈ ವಿರಾಮವು ಬೆಳೆಯ ಹತ್ತಿದರೆ ಕೊನೆಗೆ ಜನರು ಈಗ ನಡೆದಂತಹ ಮಹಾಸಮರಗಳಲ್ಲಿ ಧುಮುಕಬಹುದೆಂಬ ಹೆದರಿಕೆಯೂ

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ!
ವಿಳಾಸ:— ಗಣೇಶ ರಾಮಚಂದ್ರ, ಕರ್ಕ ಮತ್ತು ಕಂಪನಿ.
ಗಿರಗಾಂವ, ಮುಂಬಯಿ.

ವಿಚಾರವಂತರನ್ನು ಕಾಣಬಹುದು. ಹೀಗೆ ಬಹಳ ಜನರು, ತಮ್ಮ ವೇಳೆಯನ್ನು ಸುಮ್ಮನೆ ಹೇಗೆ ಕಳೆಯುವುದು ಎಂದು ಬೇಸರಿಯುವುದಕ್ಕಿಂತಲೆ, ಕೆಲವು ಜನರು ಆ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಾರೆ.

ಸಾಹಿತ್ಯ, ಸಂಗೀತ, ಲಲಿತಕಲೆಗಳಂತೆಯೆ ಬೇಸರನ್ನು ಹೋಗಲಾಡಿಸಲು ಪ್ರವಾಸವೂ ಒಂದು 'ಚಾಲೀಮ್' ಉಪಾಯ. ಹಣವನ್ನು ವೆಚ್ಚ ಮಾಡದೆ ಪುಸ್ತಕಗಳನ್ನು ಓದುವುದಕ್ಕಿಂತಲೂ, ತಿಳಿಯದ ಸಂಗೀತಕ್ಕೆ ತಲೆದೂಗುತ್ತ ನಿದ್ರೆಹೋಗುವುದಕ್ಕಿಂತಲೂ, ಕೇವಲ ಗಿರಿಶಿಖರಗಳಲ್ಲಿ ಮಾತ್ರ ಗೋಚರಿಸುವ ಕಲಾವಂತರನ್ನು ಅರಿಯಲು ಅಲೆದಾಡುವುದಕ್ಕಿಂತಲೂ, ತನ್ನ ದುಡ್ಡನ್ನು ತಾನು ವೆಚ್ಚಮಾಡಿ, ತನ್ನಿಷ್ಟಕ್ಕೆ ತಾನು ತಿಳಿದಕಡೆಗೆ ಇಲ್ಲವೆ ಎಲ್ಲಿಗೆ ಎಂಬುದನ್ನು ತಿಳಿದುಕೊಳ್ಳದೆಯೆ ಪ್ರವಾಸವೊಂದನ್ನು ಕೈಕೊಳ್ಳುವುದು ಬೇಸರನ್ನು ಕಳೆದುಕೊಳ್ಳಲಿಕ್ಕೆ ಎಷ್ಟೋ ಮಿಗಿಲಾದ ಕೆಲಸವೆನಿಸುವುದು. ಆದರೆ ಪ್ರವಾಸ ಮಾಡುವರೆಯೆ ಜೀವಿತಾರ್ಥ ಸಾಗುವ ಪ್ರಚಾರಕರಿಗೂ ಪ್ರಯಾಣ-ಮಾಡುವುದೇ ತಮ್ಮ ಕೆಲಸ ಎಂದಿರುವ ವಾಹಕವಿಭಾಗದ ಸೇವಕರಿಗೂ ಏನು ಹೇಳಬೇಕು? ಅವರಿಗೆ ಪ್ರವಾಸವೆಂದರೇ ಬೇಸರು.

ಮೇಲಾಗಿ ಮತ್ತೊಂದು ಪ್ರಶ್ನೆ ಇದೆ. ಎಷ್ಟೋ ಜನರಿಗೆ ಹಣ ಇರಬಹುದು, ಹುರುಪು ಇರಬಹುದು; ಆದರೆ ತಮ್ಮ ಬೇಸರನ್ನು ಕಳೆದುಕೊಳ್ಳುವ ಒಳ್ಳೆಯ ಉಪಾಯವಾದ ಪ್ರವಾಸಕ್ಕೆ ಸಾಕಷ್ಟು ಸಮಯ ಇರದಿದ್ದರೆ......! ಇಂತಹ ಸಮಯದಲ್ಲಿ ಕೂಡ ಕೆಲಸವನ್ನು ಬದಲುಮಾಡುವುದೇ ಒಂದು ಸಾಧನ ಎಂದೆನ್ನಬಹುದು. ತಾವು ಮಾಡುತ್ತಿರುವ ಕೆಲಸದ ಬೇಸರು ಅಲ್ಲವೇ ಅವರಿಗೆ? ಅಂತಹರು ಕೆಲಕಾಲ ತಮ್ಮ ಕೆಲಸವನ್ನೇ ಬದಲುಮಾಡಬೇಕು—ಇಲ್ಲವೆ ಮಾಡುವ ಕೆಲಸದ ರೀತಿಯನ್ನೇ ಬೇರೆಮಾಡಿಕೊಳ್ಳಬೇಕು. ಯಾಂತ್ರಿಕತೆಯನ್ನು ತಪ್ಪಿಸಲು ಮತ್ತೊಂದು ಬಗೆಯ ಯಾಂತ್ರಿಕಕಾರ್ಯವನ್ನು ಸ್ವೀಕರಿಸಿ ಏನು ಪ್ರಯೋಜನ?— ಎಂದೂ ಒಂದು ಸಂದೇಹ ಬಂದು ನಿಲ್ಲುವುದು; ಇತ್ತ ಬೇಸರುಬಂದೊಡನೆಯೆ ಹೀಗೆಯೆ ಕೆಲಸಗಳನ್ನು ಬದಲಿಸುತ್ತ ಹೋದರೆ ಮುಂದೆ ಗತಿಯೇನು?— ಎಂಬಇನ್ನೊಂದು ದಿಗಿಲುಬಂದು ಬಡಿವುದು. ಇಂತಹ ಪ್ರಸಂಗದಲ್ಲಿ ನಾವು ಕಾರ್ಯಮಾಡುತ್ತಿರುವುದು ಯಾವ ಧ್ಯೇಯದಿಂದ ಎಂಬುದು ನಿಶ್ಚಿತವಾಗಿ ಗೊತ್ತಿದ್ದರೆ, ಅದರ ಧೋರಣೆಯನ್ನು ಅದಕ್ಕೆ ಸರಿಹೋಗುವಂತೆ ಮಾರ್ಪಡಿಸಿಕೊಳ್ಳಬಹುದು. ದಿನದ ದಾರಿಯ ಬಗೆಗೆ ಬೇಸರುಬಂದಿದ್ದರೆ, ನಡುವೆ ತುಸು ಅತ್ತಿತ್ತ ಅಲೆದಾಡಿ ಸಹ, ಗುರಿಯನ್ನು ನಿರ್ಧರಿಸಿಕೊಂಡಿದ್ದರೆ, ಅದನ್ನು ಪಡೆಯಲು ಸಹಜ ಶಕ್ಯ ಆಗುವುದು. ಆಗ ನಡುವಿನ ಬದಲು-ಕೆಲಸವು ಕೂಡ ಮುಖ್ಯ ಕಾರ್ಯಕ್ಕೆ ಸಹಾಯಕವೆ ಆಗುವುದು.

ಕಾರ್ಯ ಮಾಡಲಿಕ್ಕೆ ಹೊತ್ತು ಬೇಕಾದಷ್ಟಿದ್ದು, ಮನಸ್ಸಿಲ್ಲದೆಯೊ, ಮಾರ್ಗ ಗೊತ್ತಾಗದ ಮೂಲಕವೊ, ಬೇಸರದಲ್ಲಿಯೆ ಕಾಲಕಳೆವ ಓದುಬಲ್ಲ ಹೆಂಗುಸರದೊಂದು ಇನ್ನೊಂದು ಸಮಸ್ಯೆಯೆ ಇದೆ. ಈ ಬಗೆಯ ಮಹಿಳೆಯರಿಗೆ ಪರ್ಲ್ ಬಕ್ (Pearl Buck) ಎಂಬ ವಿದುಷಿಯು ಗಜಗೌರಿಯರು (ಎಂದರೆ Gunpowder woman) ಎಂದು ಸಂಬೋಧಿಸಿದ್ದಾಳೆ. ಈ ಗಜಗೌರಿಯರಿಗೆ ತಾವು ಕಲಿತವರಿರುವರೆಂದು ಮುಂದೆ ಓದಿನಲ್ಲಿ ಬೇಸರು; ಅವರ ಗಂಡಂದಿರು ಸಾಕಷ್ಟು ಗಳಿಸುವರೆಂದು ಅಡಿಗೆಯಲ್ಲಿ ಬೇಸರು; ಮನೆಯಲ್ಲಿ ಆಳುಗಳಿರುವರೆಂದು ಸ್ವಂತ ಮಕ್ಕಳಲ್ಲಿ ಬೇಸರು. ಒಟ್ಟು ಜೀವನವೆಂದರೇ ಬೇಸರದ ಒಂದು ದೊಡ್ಡ ಗಂಟು. ಅಷ್ಟೇ ಏಕೆ, ಉಂಡುಂಡು ಗಜದಂತೆ ಆಗಿ, ಗೌರಿಯಂತೆ ಕುಳ್ಳಿರಲಿಕ್ಕೆ ಸಹ ಅವರಿಗೆ ಬೇಸರು. ಇತ್ತ ಆ ಬೇಸರನ್ನು ಕಳೆದುಕೊಳ್ಳಲಿಕ್ಕೆ ಸಹ ಬೇಸರು ಎಂದೇ ಎನ್ನಬಹುದು. ಇಂತಹರು ತಮ್ಮ ಅಕ್ಕ-ತಂಗಿಯಂದಿರ ತೊಂದರೆಗಳನ್ನು ಕಡಿಮೆ ಮಾಡುವ, ಅಣ್ಣ-ತಮ್ಮಂದಿರ ಗೋಳಾಟಕ್ಕೆ ಉಪಾಯ ಮಾಡುವ ಅನೇಕ ಬಗೆಯ ಸಾಮಾಜಿಕ ಕಾರ್ಯದಲ್ಲಿ ತಮ್ಮ ಹಣ, ಹೊತ್ತು ಹಾಗೂ ಹುರುಪುಗಳನ್ನು ಅಣಿಮಾಡಿಕೊಳ್ಳಲು ಮನಸ್ಸು ಮಾಡಬೇಕು ಎಂದು ಆ 'ಮುತ್ತಕ್ಕ'ನು ಬರೆದುಕೊಂಡಿದ್ದಾಳೆ.

ಹೀಗೆ ಕಾರ್ಯೋತ್ಸಾಹಕ್ಕಿಂತ ಬೇಸರವೇ ಜಗತ್ತಿನಲ್ಲಿ ಹೆಚ್ಚಾಗಿ ಹರಡಿದೆ; ಹುರುಪಿನವರಿಗಿಂತ ಬೇಸರಿಯುವ ಜನರೇ ಬಹುಸಂಖ್ಯಾಕರಿರುತ್ತಾರೆ. ಆದರೆ ಆ ಬೇಸರದ ಅವಧಿಯನ್ನೇ ತಮ್ಮ ಕಾರ್ಯಕ್ಕಾಗಿ ಹೇಗೆ ವಿನಿಯೋಗಿಸಿಕೊಳ್ಳಬೇಕು. ಎಂಬುದನ್ನು ಕೆಲವರೇ ಅರಿತಿದ್ದರೂ, ಹುರುಪಿನ ಆ ಕಿರಿದಾದ ಹೊತ್ತಿನಲ್ಲಿಯೆ ಮಾಡಿದ ಕೆಲಸವು ಹಿರಿದಾಗುವುದು. ಬೇಸರವು ಸಹಜ, ಬೇಸರವು ಸಾಮಾನ್ಯ ಎನಿಸಿದಂತೆಯೆ, ಬೇಸರವೂ ಒಂದು ಸಾಧನ. ಯಾಕೆಂದರೆ ಈಗ ನನಗೆ ಓದಿ ಬೇಸರು ಬಂದಿತೆಂದು ಇದನ್ನು ಬರೆದೆ; ತಮಗೆ ಬರೆದು ಬೇಸರು ಬಂದಿದ್ದರೆ ಇದನ್ನು ಓದಿಕೊಳ್ಳಬಹುದು।

ನಮ್ಮ ರಾಷ್ಟ್ರಗೀತ

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ಹಾಡು ಭಾವದ ಬುಗ್ಗೆ. ಮನದ ಮೊಗ್ಗೆ ಅರಳಿದಾಗ ಇಂಪಿನ ಕಂಪು ಬೀರುವ ಹಿಗ್ಗಿನ ಹೂವು. ಎದೆಯಿಂದ ಎದೆಗೆ ಹೋಗುವ ಮಿಂಚಿನ ಕರೆ. ಹಾಡಿನ ಬಗೆ ಯಾವುದೇ ಇರಲಿ, ಅದರ ಗತ್ತಿನಲ್ಲಿ ಬಾಳಿನ ಜೀವಾಳವನ್ನೇ ಸೋಲಿಸುವ ಗತ್ತುಗಾರಿಕೆಯಿರಬೇಕು; ಕೇಳುವ ಜೀವವನ್ನು ಹಾಡುವ ದನಿಯ ಜೀತದಾಳನ್ನಾಗಿ ಮಾಡುವ ಮೋಹಕಗಾರಿಕೆಯಿರಬೇಕು; ಕೊರಳು ನುಡಿಸುವ ಪದದಲ್ಲಿ ಕರುಳು ಮಿಡಿಯುವ ಹದವಿರಬೇಕು. ಪ್ರತಿಯೊಂದು ಕಲೆಯೂ ಭಾವನೆಯ ವಿಕಾಸ-ವಿಲಾಸಗಳ ಭಾಷೆ. ಆದರೆ ಈ ಬಗೆಯಲ್ಲಿ ಎಲ್ಲಕ್ಕೂ ಮಿಗಿಲಾದ ಕಲೆಯೆಂದರೆ ಸಂಗೀತ. ಅದೊಂದು ಜೀವಂತ ಸಂದೇಶ. ಕಾವ್ಯದಿಂದ, ಚಿತ್ರದಿಂದ, ಶಿಲ್ಪದಿಂದ ನಮಗೆ ಬರುವ ಆನಂದ, ನಾವು ಪಡೆವ ಆದೇಶ-ಆವೇಶಗಳು ನೇರವಾಗಿ ಬರುವಂತಹವಲ್ಲ. ಅವೆಲ್ಲವುಗಳಲ್ಲಿ ಕಲಾಕೃತಿಯು ಕಲಾವಿದನಿಂದ ಬೇರೆಯಾಗಿ, ಕಲಾವಿದನು ಕಲಾಕೃತಿಯ ಬೆನ್ನಿಗೆ ನಿಂತು ರಸಿಕರ ಕಣ್ಮನಗಳನ್ನು ಉನ್ಮನಗೊಳಿಸುವ **ಪರೋಕ್ಷಾನುಭವವಿದೆ; ಆದರೆ ಸಂಗೀತವು ಅಪರೋಕ್ಷಾನುಭವ.** ಹಾಡಿನ ಹುರುಳು, ಹಾಡುಗಾರಿಕೆಯ ತಿರುಳು ಹಾಡುವ ಕೊರಳಿನಿಂದಲೇ ಜೀವಂತವಾಗಿ ಕೊನರಿ-ಕಳೆಗೊಂಡು, ಕೇಳುವವರ ಎದೆಯನ್ನು ಅರಳಿಸುವುದು; ಮನವನ್ನು ಮರುಳುಗೊಳಿಸುವುದು. ಜ್ಞಾತೃ, ಜ್ಞೇಯ ಮತ್ತು ಜ್ಞಾನ ಈ ಮೂರು ಒಂದಾಗುವುದರಲ್ಲಿಯೇ ಅದ್ವೈತದ ಬ್ರಹ್ಮಾನಂದವಿದೆಯಂತೆ. ಅದು ಹೇಗೋ, ವೇದಾಂತಿಗಳಿಗೇ ಗೊತ್ತು. ನಮ್ಮ ಪಾಲಿಗೆ ಅಂತಹ ಬ್ರಹ್ಮಾನಂದದ ತೀರ ಹತ್ತಿರದ ಅನುಭವವೆಂದರೆ ಸಂಗೀತದ ಆಸ್ವಾದನೆಯೆ! ಗಾಯಕ, ಗಾಯನ ಮತ್ತು ಅದನ್ನು ಗಮನಿಸುವ ರಸಿಕ ಈ ಮೂರು ಸಂಗತಿಗಳೂ ಬೆರೆತು ಏಕಕವಾಗಿ, ಸಂಗೀತದ ರಸಾನುಭೂತಿಯು ಅವತರಿಸುತ್ತದೆ.

ಸಂಗೀತದ ಈ ತನ್ಮಯಗೊಳಿಸುವ ಶಕ್ತಿಯಲ್ಲಿಯೆ ವಿಶೇಷವಾದುದೊಂದು ಅದರ ಉಪಯೋಗವನ್ನೂ ಬಲ್ಲವರು ಕಂಡಿದ್ದಾರೆ. ಹಾಡನ್ನು ಕೇಳುವ ಎದೆಯು ಹಾಡುಗಾರನ ಎದೆಯ ಕರೆಗೆ ದನಿಗೊಡುವಂತೆ, ಅದೇ ಹಾಡನ್ನು ಕೇಳುತ್ತಿರುವ ಇನ್ನೊಂದು ಎದೆಯೊಂದಿಗೂ ಏಕಕವಾಗಬಹುದು. ಇನ್ನೊಂದು ವಿಶೇಷವೆಂದರೆ, ಹಾಡುವ ಎದೆಯೂ ತನ್ನ ಸಂಗೀತವನ್ನು ತಾನೇ ಸವಿಯುತ್ತ, ಕೇಳುವನರೊಂದಿಗೂ ಇನ್ನೊಬ್ಬ ಹಾಡುವಾತನೊಂದಿಗೂ ಸಮರಸವಾಗಿ ರಮಿಸಬಹುದು. ಒಬ್ಬರ ಸಂಗೀತಶ್ರವಣದಲ್ಲಿಯೇ ಇಂತಹ ಅಖಂಡವಾದ **ಹೃದಯ ಸಂವಾದವು** ನೆಲಸುತ್ತಿರುವಾಗ, ಒಂದೇ ಹಾಡನ್ನು, ಒಂದೇ ಶ್ರುತಿಗೆ, ಒಂದೇ ಭಾವಪರವಶತೆಯಿಂದ ನೂರಾರು ಕಂಠಗಳು ಅಕುಂಠಿತವಾಗಿ ಹಾಡಿದರೆ, ಆಗಿನ ಪ್ರಚಂಡವಾದ ನಾದ ತರಂಗಿಣಿಯ ಅಂತರಂಗದಲ್ಲಿ ಎಂತಹ ಸ್ವಾರಸ್ಯವು—ಎಂತಹ ಸಾಮರಸ್ಯವು—ಉಂಟಾಗಬಹುದು? ಈ ಸ್ವಾರಸ್ಯವನ್ನು ಕಂಡುಕೊಂಡವರೇ, ಸಂಗೀತವನ್ನು ಜನಾಂಗದ ರಾಷ್ಟ್ರೀಯತೆಯ ಸಾಧನೆಯಲ್ಲಿ ಒಂದು ಆಯುಧವನ್ನಾಗಿ ಅಳವಡಿಸಿಕೊಳ್ಳುವ ಜಾಣ್ಮೆ ತೋರಿಸಿದರು; ರಾಷ್ಟ್ರಗೀತವನ್ನು ಹಾಡುವ ರೂಢಿಯನ್ನು ಬೆಳಸಿದರು. ರಾಷ್ಟ್ರಕ್ಕೊಂದು ಧ್ವಜವಿರುವಂತೆ, ಅದರ ನೆರಳಲ್ಲಿ ನೆರೆದು ನಲಿದು, ಏಕಮುಖವಾಗಿ ಏಕಕಂಠದಿಂದ ಏಕಾಗ್ರತೆಯಲ್ಲಿ ಸಾವಿರ ಸಾವಿರ ಜನರು ಧ್ವನಿಗೂಡಿಸಿ ಹಾಡುವ ಒಂದು ರಾಷ್ಟ್ರಗೀತವೂ ಪ್ರತಿಯೊಂದು ಜನಾಂಗದಲ್ಲಿ ರೂಢವಾಯಿತು. ರಾಷ್ಟ್ರೀಯತೆಯ ಅಖಂಡ ಐಕ್ಯದ ಭಾವನೆಯು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ಉತ್ಕಟ ಪ್ರಸಂಗವೆಂದರೆ, ರಾಷ್ಟ್ರಗೀತವನ್ನು ಹಾಡುವ ಸಂದರ್ಭ! ವ್ಯಕ್ತಿವ್ಯಕ್ತಿಗೂ ಒಂದು ಮನಸ್ಸಿರುವಂತೆ ಸಮಾಜಕ್ಕೂ

★

ರಾಷ್ಟ್ರೀಯ ಭಾವದ ಪರಿಪೋಷಣೆಗೆ ರಾಷ್ಟ್ರಗೀತ ತುಂಬ ಆವಶ್ಯಕವಾದುದು. ಭಾರತದಲ್ಲಿ ಪ್ರಚಲಿತವಿರುವ 'ವಂದೇಮಾತರಂ' ಗೀತವು ರಾಷ್ಟ್ರಗೀತವೆನಿಸಿಕೊಳ್ಳಲು ತಕ್ಕದಾಗಿದೆಯೆ?

★

ಜನಾಂಗಕ್ಕೂ ಒಂದು ಸಾಮಾಯಿಕವಾದ ಮನಸ್ಸಿದೆ, ಎಂಬ ಭಾವನೆಯು ತೀವ್ರವಾಗಿ ಎನಿಸುವ ಸಂದರ್ಭವದು. ಹನಿಗೆ ತಾನು ಹಳ್ಳದ ಅಂಶವೆಂದೂ, ತೆರೆಗೆ ತಾನು ಕಡಲಿನ ಅಂಗವೆಂದೂ ತನ್ಮಯತೆಯಿಂದ ತೋರಿ ಬರುವ ರಸ-ನಿಮಿಷವು ರಾಷ್ಟ್ರಗೀತವನ್ನು ಹಾಡುವಾಗ ತಲೆದೋರುವುದು.

ಇದು ಬರೀ ತಾತ್ವಿಕ ವಿಚಾರವಲ್ಲ; ನಿತ್ಯದ ಆಚಾರದಲ್ಲಿ ಕಂಡು ಬರುವ ಸಂಗತಿಯು. ಇಂದಿನ ಯಾವುದೇ—ತಲೆಯೆತ್ತಿ ನಿಂತ—ಪ್ರತಾಪಶಾಲಿಯಾದ ರಾಷ್ಟ್ರದ ಜೀವನವನ್ನು ನೋಡಿಕೊಂಡರೂ, ರಾಷ್ಟ್ರಗೀತದ ಹಾಡುವಿಕೆಯಲ್ಲಿ ಮೂಡುವ ಈ ಉತ್ಕಟ ಐಕ್ಯಭಾವವು ಹೊಳೆಯದೆ ಇರದು. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಅವರವರ ರಾಷ್ಟ್ರೀಯ ಅಭಿಮಾನವನ್ನೂ, ಅಭಿಲಾಷೆಗಳನ್ನೂ, ಅಭ್ಯುದಯದ ಕನಸುಗಳನ್ನೂ, ಇತಿಹಾಸದ ನೆನಸುಗಳನ್ನೂ ಕೊಂಡಾಡಿ, ಮೂಡಿಸಿ ಹಾಡುವ ಉಚಿತವಾದ ರಾಷ್ಟ್ರಗೀತಗಳಿವೆ. ಯಾವುದೇ ದೇಶದ ರಾಷ್ಟ್ರಗೀತವನ್ನು **ನೋಡಿದರೆ, ಅದರ ರಾಷ್ಟ್ರೀಯ ಜೀವನದ ಸ್ಥಾನ-ಮಾನಗಳನ್ನು ಅರಿತುಕೊಳ್ಳಬಹುದೆಂದು** ಧೈರ್ಯದಿಂದ ಧಾರಾಳ

ವಾಗಿ ಹೇಳಬಹುದು. ಇನ್ನು, ಕೆಲವೊಮ್ಮೆ, ರಾಷ್ಟ್ರಗೀತವು ಜನಾಂಗವನ್ನು ರಾಷ್ಟ್ರೀಯತೆಯ ಕುರಿತು ಪ್ರೇರಿಸಬಹುದು. ಇನ್ನೂ ಕೆಲವು ಸಲ, ಘನತೆಯ ಶಿಖರವೇರಿದ ರಾಷ್ಟ್ರವೇ ತನ್ನ ಅಧಿಕಾರ—ಐಶ್ವರ್ಯದ ಪ್ರಭೆಯಿಂದ ತನ್ನ ರಾಷ್ಟ್ರಗೀತವನ್ನು ಕಳೆಗೊಳ್ಳುವಂತೆ ಮಾಡಬಹುದು. ರಾಷ್ಟ್ರಗೀತವು ಏಳಲಿರುವ ರಾಷ್ಟ್ರದ ಉದಯರಾಗವಾಗಬಹುದು; ಎಷ್ಟು ಏಳ್ಗೆ ಹೊಂದಿದ ರಾಷ್ಟ್ರದ ತುಷ್ಟಿ-ಪುಷ್ಟಿಯ ಶಾಂತಿಪಾಠವಾಗಬಹುದು. ಜಗತ್ತಿನ ಎಲ್ಲ ರಾಷ್ಟ್ರಗೀತಗಳಲ್ಲಿ ತೀರ ಸರಳವೂ ಸಾರಹೀನವೂ ಆದುದೆಂದರೆ ಬ್ರಿಟಿಷರ ರಾಷ್ಟ್ರಗೀತ.—ಅದು ನಿಜವಾಗಿಯೂ ರಾಷ್ಟ್ರಗೀತವಲ್ಲ, ರಾಜನಿಷ್ಠೆಯ ನಿತ್ಯಪಾಠ. ಆದರೂ, ನೆನಪಿಡುವ ಸಂಗತಿಯೆಂದರೆ, ಅದನ್ನು ಹಾಡುವುದರಲ್ಲಿಯೂ, ಹಾಡಿದುದನ್ನು ಕೇಳುವುದರಲ್ಲಿಯೂ ಪ್ರತಿಯೊರ್ವ ಬ್ರಿಟನ್ನನೂ ಸಹಜವಾಗಿ ತೋರಿಸುವ ತತ್ಪರತೆ, ತನ್ಮಯತೆ. ಹಾದಿಯಲ್ಲಿರಲಿ, ಹೋಟೆಲಿನಲ್ಲಿರಲಿ, ದುಡಿಯುತ್ತಿರಲಿ, ಕುಡಿಯುತ್ತಿರಲಿ, "God Save our Gracious King" ಎಂಬ ಸೊಲ್ಲನ್ನು ವಾದ್ಯಗಳ ಮೇಲೆ ನುಡಿಸುವ ಸ್ವರಗಳು ಕಿವಿಗೆ ಬಿದ್ದೊಡನೆ, ಪ್ರತಿಯೊರ್ವ ಬ್ರಿಟನನೂ ಇದ್ದಲ್ಲಿ ಎದ್ದು ನಿಂತು ಸದ್ದಿಲ್ಲದೆ ತಲೆಬಾಗುವುದನ್ನು ನೋಡಿದರೆ, ನಾಗರಿಕತೆಗೇ ಧನ್ಯವೆನಿಸೀತು!

ಒಂದು ತೀರ ಸಾಮಾನ್ಯವಾದ ಸಾತ್ತ್ವಿಕ ಸ್ವಸ್ತಿವಾಚನದಂತಿರುವ ಸೊಲ್ಲಿನಲ್ಲಿಯೂ, ಒಂದು ಘನತೆಗೇರಿದ ರಾಷ್ಟ್ರದ ಜನತೆಯು ಇಷ್ಟೊಂದು ಆಸಕ್ತಿಯನ್ನು ಸಕ್ತಿಯಿಲ್ಲದೆ ತೋರಿಸುವಾಗ, ಒಂದು ಬಿದ್ದ ರಾಷ್ಟ್ರದ ಜನತೆಯು, ತನ್ನ ತೊತ್ತುಳಿಗೊಂಡ ತೊಳಲಾಟದ ತಲ್ಲಣದೊಳಗಿಂದ ಎಚ್ಚತ್ತು ಎದ್ದು ಎದೆಗಾರಿಕೆಯಿಂದ, ಹೊಸದೊಂದು ರಾಷ್ಟ್ರೀಯತೆಯನ್ನೂ ಸಂಘಟನೆಯ ಶಕ್ತಿಯನ್ನೂ ಬೇಮರಿಸಿಕೊಳ್ಳಲಿಕ್ಕೆ— ಸುಖದ ಶಿಖರವನ್ನು ಏರಲಿಕ್ಕೆ— ಸ್ಫೂರ್ತಿಯನ್ನು ಪಡೆಯಲು— ಅದೆಷ್ಟು ಅಭಿಮಾನದಿಂದ ಅದೆಷ್ಟು ಅಭಿರುಚಿಯಿಂದ ತನ್ನ ರಾಷ್ಟ್ರಗೀತವನ್ನು ಹಾಡಬೇಕು?

ಆದರೆ ನಮ್ಮಲ್ಲಿ ಈ ಅಭಿಮಾನ, ಈ ಅಭಿರುಚಿ ತೋರುವುದೇ? ನಮ್ಮ ರಾಷ್ಟ್ರಗೀತವನ್ನು ಹಾಡುವವರೆಷ್ಟು ಜನ? ಸಭೆ-ಸಮ್ಮೇಲನಗಳಲ್ಲಿ, ಉಪಚಾರವೆಂದು ಅರಿಯದ ಹುಡುಗಿಯರಿಂದ ಹಾಡಿಸಿದರೂ ಅದನ್ನು ಕೇಳುವವರೆಷ್ಟು ಜನ? ರಾಷ್ಟ್ರಗೀತವನ್ನು ಹಾಡುವಾಗ ಎದ್ದು ನಿಲ್ಲುವವರೆಷ್ಟು ಜನ? ನಿಲ್ಲುವುದಿರಲಿ, ಅಲ್ಲಿ ಕುಳಿತು ಕೇಳುವವರಾದರೂ ಎಷ್ಟು ಜನ? ಕೆಲವೊಮ್ಮೆ ರಾಷ್ಟ್ರಗೀತವನ್ನು ಮೊದಲೇ ಹಾಡುವ ಪರಿಪಾಠವಿಡಲಾಗುತ್ತಿದೆ. ಇದರಲ್ಲಿ ಯಾವ ಔಚಿತ್ಯವಿದ್ದರೂ, ವ್ಯವಸ್ಥಾಪಕರ ಘೋರಣೆಯೆ ಒಡೆದುಕಾಣುತ್ತದೆ. ರಾಷ್ಟ್ರಗೀತದ ಉಪಚಾರ ಮುಗಿಯುವ ತನಕ, ಸಭೆಗೆ ಬಂದು ಕೊಡ್ರುವ ಮಂದಿಯ ಗಲಾಟೆಯಾದರೂ ತುಸು ಕಡಿಮೆಯಾಗಲು ಇಂಬು ದೊರೆಕಿಸಿಕೊಡುವ ವ್ಯಾವಹಾರಿಕ ಧೂರ್ತತೆಯೇ ಈ ಕಾರ್ಯಕ್ರಮದಲ್ಲಿ ಕಂಡುಬರುವುದಿಲ್ಲವೇ?

ಇದು ಅತ್ಯಂತ ಲಾಂಛನದ ಮಾತು! ನಮ್ಮ ನಾಯಕರು ಗಮನಿಸಬೇಕಾದ ಮಾತು! **ನಮ್ಮ ಈವರೆಗಿನ ರಾಷ್ಟ್ರೀಯ ಚಳವಳಿಯಲ್ಲಿ ಕಂಡುಬರುವ ಅವ್ಯವಸ್ಥೆ-ಅನವಸ್ಥೆಗಳ ಪ್ರತೀಕವೇ ನಮ್ಮ ರಾಷ್ಟ್ರಗೀತದ ಅವಸ್ಥೆ-ಅನಾಸ್ಥೆಗಳಲ್ಲಿ ಕಣ್ಣುಕಟ್ಟುತ್ತದೆ.** ನಮ್ಮ ಧುರೀಣರು ಜನಶಕ್ತಿಯ ಸಂಘಟಿತ ಬಲವನ್ನು ಕಟ್ಟಲು ಹೆಣಗಲೇ ಇಲ್ಲವೆಂಬುದು ನಮ್ಮ ರಾಷ್ಟ್ರಗೀತದ ಸಮಸ್ಯೆಯಲ್ಲಿಯೆ ಕಂಡುಬರುತ್ತದೆ. ನಮ್ಮ ರಾಷ್ಟ್ರದ ಕಾರಣಪುರುಷರಿಗೆ "ಕೀಜೈ!" ಎಂದು ಕಂಠಬಿರಿಯುವಂತೆ ಕೂಗುವ—ಕಿವಿ ಬಿರಿಯುವಂತೆ ಚಪ್ಪಾಳೆ ಬಾರಿಸುವ—ಸಂತೆಯ ಸಂದಣಿಯಂತಹ ಮಂದಿಯ ಮುಂದೆಯೇ ಬೇಕಿರಬಹುದು. ಒಂದು ತಾಲಕ್ಕೆ ಹೆಜ್ಜೆಯಿಟ್ಟು, ಒಂದು ರಾಗಕ್ಕೆ ದನಿಗೊಟ್ಟು, ಒಂದು ರಾಷ್ಟ್ರಗೀತವನ್ನು ಒಟ್ಟಾಗಿ ಹಾಡುತ್ತ, ತಲೆಯೆತ್ತಿ ತೋಳ್ನೆಗೆದು ಸಾಲಾಗಿ ಮುಂದುವರೆವ ಬಂಟರ ಬಲವು ಬೇಡವಾಗಿರಬಹುದು. ಮುಂದಾಳುಗಳೇ ಈ ಕುರಿತು ಉದಾಸೀನರಾದ ಮೇಲೆ ಮಿಕ್ಕವರು ಮಾಡುವುದೇನು?

ನಿಜವಾಗಿಯೂ ಸಾಮುದಾಯಿಕ ಸಂಗೀತದ ರೂಢಿಯು ನಮ್ಮವರಿಗೆ ಏನೂ ಹೊಸತಲ್ಲ. ಪಾಶ್ಚಾತ್ಯ ದೇಶಗಳಿಗಿಂತ ಮಿಗಿಲಾಗಿ ನಮ್ಮ ಜನರು ಗಾನಮುಗ್ಧರೂ ನಾದಲುಬ್ಧರೂ ಆಗಿ ಬೆಳೆದಿದ್ದಾರೆ. ಆದರಲ್ಲಿಯೂ ಭಕ್ತಿಸಂಪ್ರದಾಯಗಳ ತವರೂರಾದ ನಮ್ಮಲ್ಲಿ ಭಜನೆಗಳಿಗೆ ಏನೂ ಕೊರತೆಯಿಲ್ಲ. ದಾರಿಯುದ್ದಕ್ಕೂ ತಾಳಗೆಟ್ಟು ತಾಳಹಾಕುತ್ತ, ಬೇತಾಳರಂತೆ ಅಲೆಯುತ್ತ, ಹತ್ತುಮಂದಿ ಕೂಡಿ ಹತ್ತು ಕಂಠಗಳಲ್ಲಿ ದಶಕಂಠನಂತೆ ಹಾಡುತ್ತ, ಕೇಳುವವರ ತಲೆ ಹತ್ತು ಹೋಳಾಗುವಂತೆ ಊರತುಂಬ ಗುಲ್ಲೆಬ್ಬಿಸುವುದು ನಮ್ಮದೇ ಆದ ಒಂದು ವೈಶಿಷ್ಟ್ಯ! ಇಂತಹ ರೂಢಿಯಲ್ಲಿಯೆ ಒಂದು ಮಟ್ಟ-ಒಂದು ಕಟ್ಟು ಇರಿಸಿಕೊಂಡು, ಹೊಸ ರೀತಿಯನ್ನು ವಾಡಿಕೆಗೊಳಿಸುವುದು ಅಶಕ್ಯವೇನೂ ಅಲ್ಲ. ಆದರೆ ಆ ನಿಟ್ಟಿನಲ್ಲಿ ಯಾವ ದೃಷ್ಟಿಯೂ ಹೊರಳಲಿಲ್ಲ. **ರಾಷ್ಟ್ರಗೀತ ಹಾಡುವ ಬಗೆಯ ಮಾತು ಬದಿಗಿರಲಿ, ರಾಷ್ಟ್ರಗೀತವೇ ಯಾವುದಾಗಬೇಕೆಂಬುದು ಪಾಕಿಸ್ತಾನದ ಪ್ರಶ್ನೆಯಂತೆಯೆ, ಸಂಪೂರ್ಣ ಸ್ವಾತಂತ್ರ್ಯದ ಸಮಸ್ಯೆಯಷ್ಟೇ ಬಿಗಿಯಾಗಿ ಕುಳಿತಿದೆ.** ಇವು ಯಾವುವೂ ಅಟ್ಲಾಂಟಿಕ್ ಘೋಷಣೆಯಲ್ಲಿ ಬಂದಿಲ್ಲವಷ್ಟೇ! ಅಂತೆಯೆ ನಿರುಪಾಯವಾಗಿದೆ! ಹರಿಪುರಾ ಅಧಿವೇಶನದಲ್ಲಿ "ರಾಷ್ಟ್ರಗೀತ" ವನ್ನು ಗೊತ್ತುಪಡಿಸುವ ಕುರಿತು ಒಂದು **ಗೊತ್ತುವಳಿಯಾಗಿತ್ತು;** ಒಂದು ಸಮಿತಿಯೂ ಉಂಟಾಗಿತ್ತು! ಆದರೆ "ಕಾರ್ಯಬಾಹುಳ್ಯ" ದ ಮೂಲಕವೇನೊ, ಆ ಚಿಕ್ಕ ಕೆಲಸ ಹಾಗೆಯೆ ಬಿದ್ದುಹೋಯಿತು. ನಡುವೆ ಈ ಹಾಳು ಯುದ್ಧ-ಅಷ್ಟ ಬಂದಿತು. ಮೇಲಾಗಿ, **ಹಿಂದುಸ್ತಾನವು ಒಂದು**

ರಾಷ್ಟ್ರವೆಂಬುದೇ ಇನ್ನೂ ನಿರ್ಣಯವಾಗಿಲ್ಲ; ಎಂದಮೇಲೆ ಗೀತವೆಲ್ಲಿಯದು ?

ನಮ್ಮ ರಾಷ್ಟ್ರಗೀತದ ಸಮಸ್ಯೆಯು ಮೂರು ಪ್ರಶ್ನೆಗಳನ್ನೊಳಗೊಂಡಿದೆ:— (೧) ರಾಷ್ಟ್ರಗೀತವು ಹೇಗಿರಬೇಕು ?— ಇದು ಮೂಲಭೂತ ಪ್ರಶ್ನೆ. (೨) ಈಗ ಇದ್ದ ರಾಷ್ಟ್ರಗೀತವು ಯೋಗ್ಯವಿದೆಯೆ ?—ಇದು ಸದ್ಯ ಭೂತದಂತೆ ಬಾಧೆಗೆ ಮುಳುವಾದ ಪ್ರಶ್ನೆ. (೩) ರಾಷ್ಟ್ರಗೀತವು ಒಂದಿರಬೇಕೋ ಹಲವಿರಬೇಕೋ ?— ಅರ್ಥಾತ್ ಇದು ಭಾರತದ ಭಾವೀ ಪ್ರಾಂತ ರಚನೆಯ ಕುರಿತು ಏಳುವ ಪ್ರಶ್ನೆ. ಇವುಗಳ ಕುರಿತು ಸ್ಥೂಲವಾಗಿ ಕೆಲವು ವಿಚಾರಗಳನ್ನು ಇಲ್ಲಿ ಮುಂದಿಸಬೇಕಾಗಿದೆ.

ರಾಷ್ಟ್ರಗೀತವು ಹೇಗಿರಬೇಕು ? ಇದು ಅತ್ಯಂತ ಮಹತ್ತ್ವದ ಪ್ರಶ್ನೆ. ಏಕೆಂದರೆ ಈ ಪ್ರಶ್ನೆಯ ಮೇಲೆಯೆ ಮುಂದಿನವು ನಿಂತಿವೆ. ರಾಷ್ಟ್ರಗೀತದ ಉದ್ದೇಶವೇ ಅದರ ರೂಪವನ್ನು ಗೊತ್ತುಪಡಿಸುತ್ತದೆ. ಒಂದು ಜನಾಂಗದ **ಉತ್ಸಾಹವನ್ನು ಕೆಂಬುರಿಸಿ, ಅದನ್ನು ಉಪ್ಯೋಗಕ್ಕೆ ಹೂಡಿ, ಉತ್ಕರ್ಷದ ಗುರಿಗೆ ರಾಷ್ಟ್ರದ ರಥವು ನುಗ್ಗಿ ನಡೆಯುವಂತೆ ಮಾಡುವ ಸ್ಫೂರ್ತಿ ರಾಷ್ಟ್ರಗೀತದಲ್ಲಿ ಇರಬೇಕು.** ಈ ಉದ್ದೇಶವು ಕೈಗೂಡಬೇಕಾದರೆ— ಜನಾಂಗದ ಕೊರಳಲ್ಲಿ ಆ ಗೀತವು ಸುಗಮವಾಗಿ ಇಳಿಯುವಂತಹದಿರಬೇಕು. ಅವರ ಮಿದುಳಿನಲ್ಲಿ ಅದರ ಹುರುಳು ಸುಲಭವಾಗಿ ಹೊಳೆಯುವಂತಹದಿರಬೇಕು. ಎಂದರೆ **ಹಾಡಿನ ಶೈಲಿಯಲ್ಲಿ ಸುಬೋಧತೆ-ಸರಳತೆಗಳು ತುಂಬಿ** ತುಳುಕಬೇಕು. ಹೇಳಿದ ಮಾತ್ರಕ್ಕೆ ಕೇಳಿದ ಕೂಡಲೆ ಮನಮುಟ್ಟುವ ಮತ್ತು ಎದೆತಟ್ಟುವ ರೀತಿಯಲ್ಲಿ ಹಾಡಿನ ರಚನೆಯೂ ಭಾವದ ವ್ಯಂಜನೆಯೂ ಇರಬೇಕು. ಆದರೆ **ಇದೆಲ್ಲ ಸಪ್ಪಗೆ ಗದ್ಯದಂತೆ ಆಗಬಾರದು;** ಅದರಲ್ಲಿ ಕಾವ್ಯದ ಕಾವು ಭಾವದ ಬೆಳಕಿನೊಂದಿಗೆ ಬೆರೆತು ಬೆಳಗಬೇಕು. ಹಾಡುವ ಮತ್ತು ಕೇಳುವ ಎದೆಗಳು ಹಿಗ್ಗುವಂತೆ ಬಿಚ್ಚುವಂತೆ ಉತ್ತೇಜನವು ತುಂಬಿರಬೇಕು. **ರಾಷ್ಟ್ರೀಯತೆಯ ಆವೇಶ, ರಾಷ್ಟ್ರಕಾರ್ಯದ ಆವೇಶ ಇವೆರಡೂ ಅಂತಹ ಗೀತದ ವಾದಿ-ಸಂವಾದಿ ಸ್ವರಗಳಂತಿರಬೇಕು.**

ಜಗತ್ತಿನ ಉತ್ತಮ ರಾಷ್ಟ್ರಗೀತಗಳಲ್ಲಿ ಇವೆಲ್ಲ ಲಕ್ಷಣಗಳು ಕಾಣುತ್ತವೆ. ಇಂತಹ ಅತ್ಯಂತ ಉತ್ತೇಜಕವಾದ ಗೀತವೆಂದರೆ ಫ್ರೆಂಚ್ ರಾಷ್ಟ್ರಗೀತವು.* ಇಂದಿನ ದೀನ—ದಲಿತ ಫ್ರೆಂಚ್ ಜನತೆಯನ್ನು ನೆನೆದುಕೊಂಡಾಗ, ಅವರ ಅಂತಹ ಉದ್ದಾಮ ಉದ್ದೀಪಕವಾದ ರಾಷ್ಟ್ರಗೀತಕ್ಕೆ ಒಂದು ಕರುಣಾಮಯ ಭಾವವು ಆವರಿಸುವಂತೆ ಎನಿಸುತ್ತದೆ. ಆ ರಾಷ್ಟ್ರಗೀತದ ಹೆಸರು " ಮಾರ್ಸೆಲ್ಲಾಯ್ಸ್ " ಎಂದು. ಅದನ್ನು ರಚಿಸಿದ ಕವಿಯು **ಕ್ಲಾಡ್ ಜೋಸೆಫ್ ರೋಗೆಟ್ ಲಿಸ್ಲೆ** ಎಂಬವನು. ಆ ರಾಷ್ಟ್ರಗೀತದ ಶಕ್ತಿಯ ಕುರಿತು ಒರ್ವ ಫ್ರೆಂಚ್ ಸೇನಾಪತಿಯು ಹೀಗೆಂದನು : "ಈ ಹಾಡು, ಒಂದು ಸಾವಿರ ಹೊಸ ಹುರುಪಿನ ಸೈನಿಕರಷ್ಟು ಪರಿಣಾಮಕಾರಿಯಾಗಿದೆ!". ಒರ್ವ ಜರ್ಮನ್ ಕವಿಯು ಈ ಗೀತವನ್ನು ಕುರಿತು ಹೀಗೆ ಉದ್ಗಾರ ತೆಗೆದನು: "ಈ ಹಾಡು ಐವತ್ತು ಸಾವಿರ ಜರ್ಮನರ ಸಾವಿಗೆ ಮುಳುವಾಯಿತು!" ಕಾವ್ಯವೇ ಕತ್ತಿಯಾದಲ್ಲಿ ಕಲಿತನವು ಬೇರೆ ಬೇಕೇ ?

ಈ ಹಾಡು ಹುಟ್ಟಿದ್ದೂ ತೀರ ಆಕಸ್ಮಿಕವಾಗಿ. ೧೭೯೨ರಲ್ಲಿ ಫ್ರಾನ್ಸ್ ದೇಶದಲ್ಲಿ ರಾಜ್ಯಕ್ರಾಂತಿಯ ಪ್ರಚಂಡ ಅಗ್ನಿಪ್ರಲಯವು ಹಬ್ಬಿತ್ತು. ಆಗ ಒಂದು ಚಿಕ್ಕ ದಂಡು ಸ್ಟ್ರಾಸ್‌ಬರ್ಗ್ ಪಟ್ಟಣದಿಂದ ಹೊರಡುವುದಿತ್ತು. ಆ ದಂಡಿನ ಪ್ರೀತ್ಯರ್ಥವಾಗಿ ಅಲ್ಲಿಯ ನಗರಸಭೆಯ ಅಧ್ಯಕ್ಷರು ಒಂದು ಮೇಜವಾನಿಯನ್ನಿತ್ತರು. ದಂಡು ಕೂಚುಮಾಡುವಾಗ ಹುರಿದುಂಬಿಸಲು ಹಾಡುವಂತಹ ಸರಿಯಾದ ಹಾಡುಗಳೇ ಇಲ್ಲವೆಂದು, ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೂರಿಕೊಂಡರು. ನೆರೆದ ಸೈನಿಕರಲ್ಲಿ ಕ್ಲಾಡ್ ಜೋಸೆಫ್ ರೋಗೆಟ್ ಲಿಸ್ಲೀ ಎಂಬ ತರುಣ ದಳವಾಯಿಯೊಬ್ಬನು ಈ ಮಾತ ಕೇಳಿದನು. ಆಯಿತು. ಆ ರಾತ್ರಿ ಆ ಉತ್ಸಾಹಿ ತರುಣನಿಗೆ ನಿದ್ದೆಯೆ ಇಲ್ಲ. ಅವನು ಕೆಲಮಟ್ಟಿಗೆ ಕವಿಯೂ ಸಂಗೀತಗಾರನೂ ಆಗಿದ್ದನು. ಮರುದಿನ ಹಗಲಾಗುವುದರೊಳಗೆ, ರೋಗೆಟ್ ಲಿಸ್ಲೆಯು ತನ್ನ ಹಾಡನ್ನು ಕಟ್ಟಿ ಬರೆದು ಹಾಡಿ ಕಾಣಿಸಿದನು! ಆ ಹಾಡಿನ ಗತ್ತಿಗೆ ಕ್ರಾಂತಿಯೇ ಹೆಜ್ಜೆಯಿಟ್ಟು ಕುಣಿಯಿತು!

ಅಂದಿನ ಸಭೆಯು ಮುಗಿಯುವುದರೊಳಗೆ, ಆ ಹಾಡನ್ನು ಕೇಳಿ ಹುರುಪಿನಿಂದ ಹುರಿದುಂಬಿ ೪೦೦ ಹೊಸ ತರುಣರು ದಂಡಿಗೆ ಸೇರಿದರು. ಬಾಯಿಂದ ಬಾಯಿಗೆ ದಂಡಿನಿಂದ ದಂಡಿಗೆ ದೇಶದಲ್ಲೆಲ್ಲ ಹಾಡು ಕಾಡುಕಿಚ್ಚಿನಂತೆ ಹಬ್ಬಿತು. ಪ್ಯಾರೀಸ್ ರಾಜಧಾನಿಯನ್ನು ರಕ್ಷಿಸುವುದಕ್ಕಾಗಿ ಮಾರ್ಸೆಲ್ಸ್‌ದ ರಾಷ್ಟ್ರೀಯ ಸಂರಕ್ಷಕ ದಂಡು ಹೊರಟಿತು. ನೂರಾರು ಮೈಲು ದಾರಿಯುದ್ದಕ್ಕೂ ರೋಗೆಟ್ ಲಿಸ್ಲೆಯ ಆ ಹಾಡನ್ನು ಹಾಡುತ್ತ ಆ ಪ್ರಸಿದ್ಧ ದಂಡು ಕೂಚುಮಾಡಿತು. ದಾರಿಗುಂಟ ಹಳ್ಳಿ-ಪಟ್ಟಣಗಳಲ್ಲೆಲ್ಲ ಅವರನ್ನು ಕಾಣಲು ನೆರೆದ ಜನಸಮುದಾಯವೆಲ್ಲ, ಮೊದಲೇ ಲೋಕಪ್ರಿಯವಾದ ಆ ಹಾಡಿನ ಪಲ್ಲವಿಯನ್ನು, ದಂಡಿನೊಂದಿಗೇ ಒಕ್ಕೊರಲಿನಿಂದ ಹಾಡುತ್ತಿದ್ದರು! ಹಾಡಿನ ಮೂಲವು ಎಲ್ಲಿಯದೆಂದು ತಿಳಿಯದೆ, ಮಾರ್ಸೆಲ್ಸ್‌ದ ದಂಡು ತಂದ ಹಾಡೆಂದು, ಆ ಗೀತವು ದೇಶದ ತುಂಬೆಲ್ಲ **"ಮಾರ್ಸೆಲ್ಲಾಯ್ಸ್"** ಎಂದು ಹೆಸರು ಪಡೆಯಿತು. ದಂಡಿನ ಹಾಡು ರಾಷ್ಟ್ರಗೀತವಾಯಿತು. ಒಂದು ಕವಿತೆ ಬರೆದು ರೋಗೆಟ್ ಲಿಸ್ಲೆಯು ಅಜರಾಮರನಾದನು! " ಮಾರ್ಸೆಲ್ಲಾಯ್ಸ್ " ರಾಷ್ಟ್ರಗೀತವೇ ಹಾಗೆ ನೆತ್ತರ ಕುದಿಸುವಂತಹದಿದೆ! ಫ್ರೆಂಚರು ಆ ಹಾಡನ್ನು ಕೇಳಿದರೆ, ಮಿಂಚು ಸಂಚರಿಸಿದಂತೆ ಪರವಶರಾಗುತ್ತಾರೆ! ರಶಿಯನ್ನರ ರಾಷ್ಟ್ರಗೀತವೂ ಅಂತರ್‌ರಾಷ್ಟ್ರೀಯ ಗೀತವೂ ಹಾಗೆಯೆ

* ಕಳೆದ ಸಂಚಿಕೆಯಲ್ಲಿ ಇದರ ಅನುವಾದ ಪ್ರಕಟವಾಗಿದೆ. —ಸಂ.

ರೋಮಾಂಚಕಾರಿಯಾದ ಉತ್ತೇಜನದಿಂದ ತುಂಬಿವೆ! ಅಂತರ್‌ರಾಷ್ಟ್ರೀಯ ಗೀತವು ಜಗತ್ತಿನ ಎಲ್ಲ ಮುಂದುವರಿದ ದೇಶಗಳಲ್ಲಿ ಮುಂದುವರಿದ ಭಾಷೆಗಳಲ್ಲಿ ಅನುವಾದಿಸಿ ಹಾಡಲಾಗುತ್ತದೆ. ಅದು ಜಗತ್ತಿನ ಸಾಮ್ಯವಾದಿಗಳ ಯುದ್ಧಗೀತ. ಯಾವ ಭಾಷೆಯಲ್ಲಿದ್ದರೂ ಅದರ ಭಾವ ಒಂದೇ, ಅರ್ಥ ಒಂದೇ. ಅದೇಕೆ, ರಾಗ-ತಾಲಗಳು ಕೂಡ ಒಂದೇ! ಅಖಿಲ ವಿಶ್ವದ ದಲಿತ ಮಾನವರ ದುಃಖವಿಮೋಚನೆಯ ಅಖಂಡ ಆಹ್ವಾನವನ್ನು ಕೊಡುವ ಆ ಗೀತವು ಎಷ್ಟೊಂದು ಹೃದಯಸಂವಾದವನ್ನು ಬಾಂಧವ್ಯ-ಮಾನವ್ಯಗಳನ್ನು ಉಂಟುಮಾಡುತ್ತಿರಬಹುದು!

ಈ ದೃಷ್ಟಿಯಿಂದ ನಮ್ಮ ರಾಷ್ಟ್ರಗೀತವು ತೀರ ನಿರ್ಜೀವವೆನಿಸುತ್ತದೆ! ಈ ಮಾತು ನಮ್ಮ ಎರಡನೆಯ ಪ್ರಶ್ನೆಯನ್ನು ಎಬ್ಬಿಸುತ್ತದೆ. ನಮ್ಮ ರಾಷ್ಟ್ರಗೀತದ ಹುಟ್ಟೇ ಕಲ್ಪನಾಲೋಕದ್ದಾಗಿದೆ. ಅದನ್ನು ಬರೆದ ಕವಿಗೆ ಕೂಡ ಅದರ ಭವಿಷ್ಯ ಗೊತ್ತಿದ್ದಿಲ್ಲ. ಬಂಗಾಲದ ಆದಿ ಕಾದಂಬರಿಕಾರರಾದ ಬಂಕಿಮಚಂದ್ರರ "ಆನಂದಮಠ" ಎಂಬ ಕಾದಂಬರಿಯಲ್ಲಿ ಒಂದು ಕುಂಟ ಸಂನ್ಯಾಸಿಗಳ ಪಡೆಯು ಬರುತ್ತದೆ. ಅವರು ತಮ್ಮ ಕಾಳೀದೇವಿಯನ್ನು ಕುರಿತು ಗವಿಯಲ್ಲಿ ಹಾಡುವ ಪ್ರಾರ್ಥನೆಯಿದು. ಅದು ಬರಿಯೆ ದೇವೀಸ್ತವನವಲ್ಲವೆಂಬುದು ಹಾಡಿನ ಅರ್ಥದಿಂದ ಸ್ಪಷ್ಟವಾಗುತ್ತದೆ. ಆದರೆ ಅದು **ರಾಷ್ಟ್ರಗೀತವಾದದ್ದು ತೀರ ಯೋಗಾಯೋಗದಿಂದ.** ವಂಗಭಂಗ ಪ್ರಕರಣದಲ್ಲಿ ಬಂಗಾಲಿಗಳು ಅದನ್ನು ತಮ್ಮ ವಂಗದೇವಿಯ ಆಹ್ವಾನಕ್ಕಾಗಿ ಪ್ರಚಾರದಲ್ಲಿ ತಂದರು. ಮುಂದೆ ಭಾರತೀಯ ಸ್ವಾತಂತ್ರ್ಯದ ಆಂದೋಲನವೂ ಬಂಗಾಲದಿಂದಲೇ ಪ್ರೇರಣೆ ಪಡೆದುದರಿಂದ, ಆ ಗೀತವು ಸರ್ವತೋಮುಖವಾಯಿತು. **ನಿಜವಾಗಿಯೂ "ವಂದೇ ಮಾತರಂ" ಇದು ಒಂದು ರಮ್ಯವಾದ ಗೀತ. ಆದರೆ ಅದು ರಾಷ್ಟ್ರೀಯ ಆಂದೋಲನೆಯ ದಂಡಿನ ಕಿಷ್ಕಿಂಧೆಯಲ್ಲಿ ಹಾಡಲು ನೀರಸವು. ಸ್ವತಂತ್ರ ಭಾರತದ ಸೌಭಾಗ್ಯ ಲಕ್ಷ್ಮಿಯ ಆರಾಧನೆಯ ಅಯೋಧ್ಯೆಯಲ್ಲಿ ಹಾಡಲೇ ಅದು ಚೆಂದ.** ರಾಷ್ಟ್ರಗೀತವಾಗಲು ಅದು ಕೆಲವು ಮುಖ್ಯ ಕಾರಣಗಳ ಮೂಲಕ ಯೋಗ್ಯವಲ್ಲ. ೧. ಅದು **ಕೇವಲ ಭೌಗೋಲಿಕ ವರ್ಣನೆ**ಯನ್ನೂ ಪ್ರಾದೇಶಿಕ ಪ್ರಶಸ್ತಿಯನ್ನೂ ಒಳಗೊಂಡಿದೆ. ಮೂಲತಃ ಅದು ಬರಿಯೆ ಬಂಗಾಲದ "ಸುಜಲ ಸುಫಲ ಸಸ್ಯಶಾಮಲ" ಭೂಮಿಯನ್ನು ಕಣ್ಣೆದುರಿಟ್ಟುಕೊಂಡು ಬರೆದುದಾಗಿತ್ತು. ಈಗಲಾದರೂ ಇವಿಷ್ಟು ಲಕ್ಷಣಗಳುಳ್ಳ ಯಾವುದೇ ಬೆಳೆಯುಳ್ಳ ಪ್ರದೇಶಕ್ಕೆ ಅದು ಅನ್ವಯಿಸಬಹುದಾಗಿದೆ. ರಾಷ್ಟ್ರಗೀತೆಯಲ್ಲಿ ಭೂಮಿಯ ವರ್ಣನೆ ಬರಬಾರದೆಂತಲ್ಲ; ಆದರೆ ಹಾಗೆ ಬಂದಲ್ಲಿ ಅದು ರಾಷ್ಟ್ರದ ಮಹತ್ತ್ವದ ವೈಶಿಷ್ಟ್ಯಗಳನ್ನು ಉಲ್ಲೇಖಿಸಿರಬೇಕು. ಈ ದೃಷ್ಟಿಯಿಂದ ಕವೀಂದ್ರ ರವೀಂದ್ರರ "ದೇವೀ ಭುವನ ಮನಮೋಹಿನೀ!" ಎಂಬ ಗೀತವೂ ಡಾ. ಇಕ್ಬಾಲರ "ಸಾರೇ ಜಹಾಂಸೆ ಅಚ್ಛಾ" ಎಂಬ ಸ್ಫೂರ್ತಿಮಯ ಗೀತವೂ ರಾಷ್ಟ್ರಗೀತವಾಗಲು ಹೆಚ್ಚು ಯೋಗ್ಯವಿರುತ್ತವೆ. ಇವುಗಳಲ್ಲಿಯೂ ಇಕ್ಬಾಲರ ಗೀತವು ಹಿಂದುಸ್ತಾನಿಯಲ್ಲಿ ಇದ್ದುದರಿಂದ, ಅದರ ಪ್ರಚಾರವು ರಾಷ್ಟ್ರೀಯತೆಗೆ ಹೆಚ್ಚು ಪೋಷಕವಿದೆ. ೨. ನಮ್ಮ ರಾಷ್ಟ್ರಗೀತವು **ತೀರ ಸಂಸ್ಕೃತ** ಪ್ರಚುರ **ವಂಗ ಭಾಷೆ**ಯಲ್ಲಿದೆ. ಸದ್ಯಕ್ಕೆ ಬಳಕೆಯಲ್ಲಿದ್ದ ಚರಣಗಳಂತೂ ಕೇವಲ ಸಂಸ್ಕೃತವೇ ಆಗಿವೆ. ಇದರಿಂದ ಎರಡು ಹಾನಿಗಳಿವೆ: **ಅಜ್ಞ ಜನತೆಗೆ ಯಾವ ಅರ್ಥಸ್ಫೂರ್ತಿಯೂ ಸಿಗುವುದಿಲ್ಲ;** ಹೆಚ್ಚಿನ ತೊಡಕೆಂದರೆ, ಸಂಸ್ಕೃತವು ಹಿಂದೂಸಂಸ್ಕೃತಿಯ ವಾಹಕವಾದುದರಿಂದ, ಇಸ್ಲಾಮಿ ಸಂಸ್ಕೃತಿಯ ಜನಾಂಗಕ್ಕೆ ಅದು ಅಸಹ್ಯವೆನಿಸಬಹುದು— ಎನಿಸುತ್ತದೆ, ಜಾತಿವಾದದ ನಂಜಿನ ಸುಳಿಯಲ್ಲಿ ಸುತ್ತಾಡುವ ನಮ್ಮ ರಾಜಕಾರಣಕ್ಕೆ ಹೊಸದೊಂದು ತಲೆತಿರುಕತನದ ತಿರುಗಣಿಯನ್ನು ಕೊಟ್ಟಂತಾಗುತ್ತದೆ. ೩. ಅರ್ಥಸ್ಫೂರ್ತಿಯ ದೃಷ್ಟಿಯಿಂದ ಈಗ ಹಾಡಲಾಗುವ ಭಾಗವು ತೀರ ಸಾಮಾನ್ಯವಿದೆ. ಮುಂದಿನ ನುಡಿಗಳು ಒಳ್ಳೇ ಆವೇಶಯುಕ್ತವಿವೆ. ಆದರೆ ಅವು ನಿರ್ವಿವಾದವಾಗಿ ಮೂರ್ತಿಪೂಜಕತೆಯ ಕಡೆಗೆ ಒಲಿದಿವೆ. ಇಲ್ಲಿಯೂ ರಾಷ್ಟ್ರಗೀತವಾಗುವ ಮಾರ್ಗದಲ್ಲಿ ಇಸ್ಲಾಮಿ ಸಂಸ್ಕೃತಿಯು ಅಡ್ಡ ನಿಲ್ಲುತ್ತದೆ. ೪. ಮುಖ್ಯ ಮಾತೆಂದರೆ **ನಮ್ಮ ಈಗಿನ ರಾಷ್ಟ್ರಗೀತವು ಗತಿಮಯ (Dynamic) ವಿರುವುದಿಲ್ಲ.** ಅದರಲ್ಲಿ **ಓಜಸ್ವಿತೆಗಿಂತ ಮಾಧುರ್ಯವೆ ಹೆಚ್ಚಿದೆ.** ಸಮುದಾಯದ ಕಲಕಂಠಕ್ಕಿಂತ ಸಂಗೀತಗಾರನ ಕೋಕಿಲಕಂಠಕ್ಕೇ ಅದು ಹೆಚ್ಚು ಒಪ್ಪುತ್ತದೆ. **ಚೇತರಿಸುವ ಜನಾಂಗದ ಚೈತನ್ಯಮಯವಾದ ಚಾಂಚಲ್ಯವು ಅದರಲ್ಲಿ ಮೂಡಿಲ್ಲ.** "ವಂದೇ ಮಾತರಂ" ಗೀತಕ್ಕೆ ಜನಪ್ರಿಯತೆಯು ಅದರ ಹುರುಳುಹುರುಪುಗಳಿಂದ ಬಂದಿಲ್ಲ; ಅದನ್ನು ಹಾಡಿಹೋದ ಹುತಾತ್ಮರ ಸ್ಮೃತಿಯಿಂದ. **ಪರರಾಷ್ಟ್ರಗಳವರು ನಮ್ಮ ಗೀತದಲ್ಲಿ ಯಾವ ಪ್ರಭಾವವನ್ನೂ ಪಡೆಯಲಾರರು; ಯಾವ ಪ್ರತಾಪವನ್ನೂ ನೋಡಲಾರರು!** ರವೀಂದ್ರರ "ಜನಗಣ ಮನ ಅಧಿನಾಯಕ" ಎಂಬ ಗೀತವು ಹೆಚ್ಚು ಸ್ಫೂರ್ತಿದಾಯಕವಿದೆ. ಆದರೆ ಅದರಲ್ಲಿಯ ಕಾವ್ಯಶೈಲಿಯು ಜನಗಣ ಮನಕ್ಕೆ ತಿಳಿಯದಂತಹದಾಗಿದೆ. **ಇದ್ದವುಗಳಲ್ಲಿ ತಿಳಿಯಾದ ರಾಷ್ಟ್ರಗೀತವಾಗಲು ಯೋಗ್ಯವಾದ ಗೀತವೆಂದರೆ ನಮ್ಮ "ಧ್ವಜಗೀತ";** ಆದರೆ ಅದರಲ್ಲಿಯೂ ಒಂದು ನ್ಯೂನವಿದೆ. "ವಿಶ್ವವಿಜಯ" ಮಾಡಿ ಕಾಣಿಸಿಯೇ ತಮ್ಮ "ಪಣವನ್ನು ಪೂರ್ಣ" ಮಾಡುವ ಮಹದಾಕಾಂಕ್ಷೆಯು, ನಮ್ಮ ರಾಷ್ಟ್ರೀಯತೆಯಲ್ಲಿ ಹುದುಗಿದ ಭಾವೀ ಸಾಮ್ರಾಜ್ಯವಾದಿತ್ವವನ್ನು ಸೂಚಿಸುವಂತಿದೆ. ಇಲ್ಲವಾದರೆ ಆ ಪದ್ಯವೇ ಸದ್ಯಕ್ಕೆ ನಮ್ಮ ರಾಷ್ಟ್ರಗೀತವಾಗಲು ತಕ್ಕುದಿದೆ. ಆದರೂ ಅದರ ಸ್ವರರಚನೆಯು ಉತ್ಸಾಹಭರಿತ.

(೨೩೨ ನೆಯ ಪುಟ ನೋಡಿರಿ)

ಜಟಕಾ ಸಾಬಿ

(ಸಣ್ಣ ಕತೆ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

ಮನುಷ್ಯತ್ವ ಮನುಷ್ಯನಲ್ಲಿ ಇರದೆ ಮತ್ತೆಲ್ಲಿ ಇರಬೇಕು ? ಮೇಲು-ಕೀಳು ಎಂಬ ಭಾವನೆಯೆ ಮನುಷ್ಯತ್ವವನ್ನು ಮರೆಯಿಸುವುದು. ಸಾಬಿಯಂತಹ ಒಂದೊಂದು ವ್ಯಕ್ತಿತ್ವದಲ್ಲಿ, ಆ ಭಾವನೆಯೂ ಇದನ್ನು ಮರೆಯಿಸಲಾರದು !

★

“ಚಾಮರೇಜಪೇಟೆ, ೧ನೇ ಕ್ರಾಸ್! ಏನ್ಸಾಬು ಬಾಡಿಗೆ?”

“ ಒಂದು ರೂಪಾಯಿ ಸಾಮಿ ! ”

ಪ್ರಶ್ನೆ ಕೇಳಿದವನು ಪೂರ್ತಿ ಸೂಟಿನಲ್ಲಿದ್ದ ; ಅವನ ಜೊತೆ-ಗಿದ್ದವನೂ ಅದೇ ವೇಷದಲ್ಲಿದ್ದ. ಸೂಟು ಎಂದರೆ ಸಾದಾ ಚೆಕ್ಕಿನ ಸೂಟು. ಅವರ ಮುಖ—ಅವರ ವೇಷ ನೋಡಿದರೆ, ಕಚೇರಿಯಲ್ಲೊ ಕಂಪನಿಯಲ್ಲೊ ಗುಮಾಸ್ತರಾಗಿರಬೇಕು ಎನಿಸುವದು. ನಿಜವೂ ಅವರು ಮಿಲಿಟರಿ ಎಂಜಿನಿಯರಿಂಗ್ ಖಾತೆ-ಯಲ್ಲಿ ಗುಮಾಸ್ತರೇ ಆಗಿದ್ದರು. ಬೆಂಗಳೂರಿಗೆ ಬಂದು ಕೆಲವು ವರ್ಷಗಳಾಗಿದ್ದರೂ, ಬೆಂಗಳೂರ ಯಾವ ವಿಷಯವೂ ಅವರಿಗೆ ಸರಿಬರುತ್ತಿರಲಿಲ್ಲ. ಮನೆಗಳ ಕೊರತೆ, ಹೋಟೆಲುಗಳಲ್ಲಿಯ ಗಲಾಟೆ, ಧಾನ್ಯದ ಅಭಾವ, ಬಸ್ಸಿನ ಅನನುಕೂಲ—ಇವುಗಳ ಜೊತೆಗೆ ಅಲ್ಲಿ ಮಿಕ್ಕ ಯಾವ ಪದಾರ್ಥವೂ ಬೇಕಾದಾಗ ದೊರೆ-ಯುವ ಪರಿಸ್ಥಿತಿ ಇರಲಿಲ್ಲ, ದೊರೆತರೂ ಅಗ್ಗವಾಗಿ ದೊರೆಯು-ತ್ತಿರಲಿಲ್ಲ. ಅಗ್ಗವಾಗಿ ದೊರೆಯುವ ಪದಾರ್ಥವೆಂದರೆ ಅಲ್ಲಿ ಮಾತೊಂದೆ! ಆದರೆ ಈ ಹೊತ್ತು ಅದೂ ಅವರಿಗೆ ದೊರೆಯಲಿಲ್ಲ. ಒಂದು ರೂಪಾಯಿ ಬಾಡಿಗೆ ಕೇಳಿದ ಜಟಕಾದವನು, ಬಾಯಿ-ತುಂಬ ಮಾತನಾಡಿಯಾದರೂ ಬಾಡಿಗೆ ಹಿಡಿಯಬೇಕಷ್ಟೆ? ಅದಾವುದನ್ನೂ ಅವನು ಮಾಡಲಿಲ್ಲ. ‘ಒಂದು ರೂಪಾಯಿ ಸಾಮಿ’ ಎಂದಿಷ್ಟೇ ನುಡಿದು, ಎದುರಿನ ಅಂಗಡಿಗೆ ಹೋಗಿ, ಬೀಡಿಹೊತ್ತಿಸಿ, ಮೂಗಿನ ಎರಡೂ ಸೊಳ್ಳೆಗಳಿಂದ ಹೊಗೆಬಿಡುತ್ತ ನಿಂತುಕೊಂಡ.

“ ಎಷ್ಟು ಸೊಕ್ಕು ನೋಡಿದೆಯಾ ಇವನಿಗೆ? ನಮಗೀಗ ಜಟಕಾ ಬೇಕು; ಈ ಮೂರುಕಾಸಿನ ಮುಟ್ಠಾಳ ಎಷ್ಟೇ ಏರಿ ಕುಳಿತರೂ ಇವನನ್ನು ಆಶ್ರಯಿಸಲೆ ಬೇಕು” ಪ್ರಾರಂಭದಲ್ಲಿ ಪ್ರಶ್ನೆಮಾಡಿದವನು ಜೊತೆಗಾರನಿಗೆ ಹೇಳಿದ.

“ ಒಂದೇ ಜಟಕಾ ಇದೆ; ಸುಮ್ಮಗೆ ಕೇಳಿದ ಬಾಡಿಗೆ ಕೊಡ್ತಾರೆ ಎಂದು ಅವನಿಗೆ. . . . ! ” ಇನ್ನೊಬ್ಬನೆಂದ.

“ ಬಾರಯ್ಯಾ ಇಲ್ಲಿ ! ”

ಜಟಕಾಸಾಬಿ ಎದುರು ಬಂದು ನಿಂತ. ಅವನು ಬಾಯಿಂದ ಬೀಡಿಯ ಹೊಗೆಯನ್ನು ಬಿಡುತ್ತಲೆ ಕೇಳಿದ :

“ ಏನು ಸಾಮಿ ! ”

“ ಏನಯ್ಯಾ ಹೀಗೆ ಕೇಳಿದರೆ? ನಾಚಿಕೆ ಬರೋದಿಲ್ಲವೆ ? ”

“ ಕಷ್ಟಮಾಡಿ ತಿನ್ನೋಕೆ ನಾಚಿಕೆ ಯಾತಕ್ಕೆ ಸಾಮಿ ? ನಾವೇನು ಪುಗಸಾಟೆ ಕೇಳ್ತೀವಾ ? ”

“ ಅಲ್ಲವಯ್ಯಾ, ಇಲ್ಲಿಂದ ಚಾಮರಾಜಪೇಟೆಗೆ ಒಂದು ರೂಪಾಯಿಯೆ ? ”

“ ಅಷ್ಟೇ ಸಾಮಿ! ”

“ ಸರಕಾರೀ ರೂಲ್ಸು ಎಷ್ಟಯ್ಯಾ—ಇರೋದು ? ”

“ ನಿಮಗೆ ರೂಲ್ಸು ಬೇಕೊ, ಜಟಕಾಬೇಕೋ ಸಾಮಿ ? ”

“What an impertinent fellow this is? He must be Sacked, Blackguard”

“ ಸಾಮಿ, ಈ ಇಂಗ್ಲೀಷ್ ಗಾಲೀಗಳ್ನ ಬಿಟ್‌ಬಿಡಿ ! ಜಟಕಾದವನು ಅಂದರೆ ಏನು ತಿಳಿದಿದ್ದೀರಾ ? ”

“ಮತ್ತೇನಯ್ಯಾ, ಏನೋ ಮಹಾ ಮಾತಾಡ್ತಿಯಾ ? ಬಾಡಿಗೆ ಹೊಡಿಯೋ ಜಟಕಾದವನಿಗೆ ಎಷ್ಟಯ್ಯಾ ಔದ್ಧತ್ಯ ? ”

“ ಸರ್, ದುಬಾರಿ ಮಾತು ಬಳಸ ಬೇಡಿ! ಜೇಬಿನಲ್ಲಿ ರೂಪಾಯಿ ಇದ್ದರೆ ಹತ್ತಿ, ಜಟಕಾದಲ್ಲಿ ! ಇಲ್ಲದಿದ್ದರೆ ನಿಮ್ಮ ಪಾಡಿಗೆ ನೀವು, ನಮ್ಮ ಪಾಡಿಗೆ ನಾವು! ”

“ ಪತ್ತಾಣೆ ನೋಡು ; ಬರೋಹಾಗಿದ್ದರೆ ಬಾ ! ”

“ ನನ್ನದು ಸಾಮಿ, ಒಂದೇ ಮಾತು—ಒಂದು ರೂಪಾಯಿ ಕೊಡಬೇಕು; ಜಟಕಾ ಹತ್ತಬೇಕು ! ”

ಆ ಹೊತ್ತಿಗೆ ಬೇರೊಂದು ಜಟಕಾ ಕಾಣಿಸಿಕೊಂಡಿತು; ಆ ಜಟಕಾದವನು ಬಂದರೆ ಇವನು ಬಾಡಿಗೆ ತಗ್ಗಿಸಬಹುದು ಎಂದು ಇವರಿಗೆ ಆಶೆ ತಲೆದೋರಿತು. ಆ ಜಟಕಾದವನು ಹತ್ತಿರಕ್ಕೆ ಬಂದ.

“ ಬರ್ತೀಯೇನಯ್ಯಾ ಚಾಮರಾಜಪೇಟೆಗೆ ? ”

ಅವನು ಇವರ ಪ್ರಶ್ನೆಗೆ ಉತ್ತರಕೊಡದೆ, ಈ ಜಟಕಾದವನನ್ನೇ ಕೇಳಿದ :—“ ಪೂಛೇ ಕ್ಯಾಬೀ ಭಾಯಾ ? ”

“ ಹೋ ! ”

ಅವನು ಜಟಕಾ ಓಡಿಸಿಕೊಂಡು ಮುಂದೆ ಹೊರಟೇ ಹೋದ.

“ ಯಾಕಯ್ಯಾ ? ”

“ ಇಲ್ಲ ಸಾಮಿ, ಬೇರೆ ಬಾಡಿಗೆ ಐತೆ ! ”

ಇಬ್ಬರ ಮೋರೆಯೂ ಇಳಿಯಿತು. ಒಬ್ಬನೆಂದ: “ಬಾರೋ ನಡೀತಾ ಹೋಗೋಣ! ಅರ್ಧಗಂಟೆ ತಡ; ಆದರೆ ಆಯ್ತು ! ”

"ಏನಯ್ಯಾ? ಹನ್ನೆರಡಾಣೆ! ಬರ್‍ತೀಯಾ ಇಲ್ವೊ?"

"ಸಾಮಿ, ನನ್ನದ್ಯಾವಾಗ಼್ಲೂ ಒಂದೇ ಮಾತು! ಒಮ್ಮೆ ಬಾಡಿಗೆ ಹೇಳಿಬಿಟ್ಟಮ್ಯಾಲೆ ಎಂದೂ ಕಮ್ಮಿ ತಕ್ಕೊಳ್ಳೋಕಿಲ್ಲ! ಜಾಸ್ತಿ ಕಮ್ಮಿ ಇದ್ದರೆ ದಮಡೀನೂ ಕೊಡಬೇಡಿ; ಹಾಗೇ ಜಟಕಾ ತರ್‍ತೀನೆ!"

"ಎದೆಗುಂಡಿಗೆ ಗಟ್ಟಿ ಇದೆಯೇನಯ್ಯಾ?"

"ಸಾಮಿ, ಮಾತಿಗೆ ತಪ್ಪಿದರೆ ಮುಸಲ್ಮಾನ್‌ನೇ ಅಲ್ಲ! ಜಿದ್ದಿಗೆ ಬಿದ್ದರೆ ಜಟಕಾ ಒಗೆದು ಬಿಡೋ ಸೂಳೇಮಗ ನಾನು! ನಿಮ್ಮ ಒಂದು ರೂಪಾಯಿಗೆ ಅಂಜತೀನೇ?"

"ರುಸ್ತುಮ್‌ನಯ್ಯಾ ನೀನು! ಸರಿ! ಹಾಗೇ ಕರೆದುಕೊಂಡು ಹೋಗು! ನಮ್ಮ ರೂಪಾಯಿ ಉಳಿಯಿತು! ತಕ್ಕೊಂಡು ಬಾ, ನಿನ್ನ ಜಟಕಾ!"

"ಮನೆಗೆ ಹೋದಮೇಲೆ ಬಾಡಿಗೆ ಕೊಟ್ಟರೆ ತಕ್ಕೊಳ್ಳೋಕಿಲ್ಲ ಸಾಮಿ, ಇವಾಗ಼್ಲೇನೆ ಹೇಳಿಬಿಟ್ಟಿರ್‍ತೇನೆ!"

ಸಾಬಿ ಜಟಕಾದ ಹತ್ತಿರ ಹೋದ.

"This seems to be a crack, I say! ನಡೆ ಜಯಾ, ಒಮ್ಮೆ ಬೇಗ ಮನೆ ಸೇರಿದರೆ ಬದುಕಿಕೊಂಡೆವು." ಮೊದಲು ಮಾತಾಡಿದವನು ಇನ್ನೊಬ್ಬನಿಗೆ ಹೇಳಿದ. ಜಟಕಾ ಬಂದಿತು. ಇಬ್ಬರೂ ಕುಳಿತರು. ಸಾಬಿ ಮಾತಿಗೆ ಮೊದಲು ಮಾಡಿದ:

"ಸಾಮಿ, ನೀವು ಎಲ್ಲಿ ಕೆಲಸಕ್ಕಿರೋದು? ನಮ್ಮ ಗೌರ್ಮೆಂಟಾ, ಇಲ್ಲಾ ಬ್ರಿಟಿಷ್ ಗೌರ್ಮೆಂಟಾ?"

"ನಿಮ್ಮ ಗೌರ್ಮೆಂಟಾಗಿದ್ದರೆ ನಿನಗೆ ಗೊತ್ತಿರೋದಿಲ್ವೇನಯ್ಯಾ?"

"ಸಾಮಿ, ಹಾಸ್ಯಮಾಡಬೇಡಿ! ನಾನೂನು ಫರ್ಸ್ಟ್‌ಫಾರ್ಮ್ ಓದಿದೇನೆ. ಮೊದಲಿಗೆ, ಸಾಮಿ, ನಾವೂ ನೆಟ್ಟಗೆ ಉಂಡು ತಿಂದು ಇದ್ದವರು! ನಮ್ಮಣ್ಣ ಕೋಳೀಪಂದ್ಯಾ ಆಡಿ ಎಲ್ಲ ಹಾಳುಮಾಡಿದ ಸಾಮಿ! ಈಗ ಈ ಜಟಕಾ ನನ್ನ ಪಾಲಿಗೆ ಬಂದೈತೆ!"

"ದಿನಾಲು ಎಷ್ಟು ಸಿಕ್ಕುತ್ತೆಯ್ಯಾ...ಇದರಲ್ಲಿ?"

"ಎಷ್ಟು ಬಂದರೂ ನಮ್ಮ ಮುಸಲ್ಮಾನರ ಕಸಾಲೆ ತಪ್ಪೋದಿಲ್ಲ ಸಾಮಿ!"

"ಯಾಕಯ್ಯಾ, ಅದು ಹಾಗೆ?"

"ನಮಗೆ ಕೊಡೊ ದೇವರು ಒಬ್ಬನೆ— ನಮ್ಮ ಅಲ್ಲಾ! ಎಲ್ಲಾರಿಗೂ ಕೊಡಬೇಕೆಂದರೆ ಎಷ್ಟೆಂದು ಕೊಟ್ಟಾನು ಸಾಮಿ! ನಿಮ್ಮ ಹಿಂದೂ ಜನದಾಗ ಸಾವಿರಾರು ದೇವರು! ಸಾವಿರ ಕೈಯಿಂದ ನಿಮಗೆ ಕೊಡ್ತಾ ಇರ್‍ತಾರೆ!"

"ನಿನ್ನ Philosophy ಚೆನ್ನಾಗಿದೆ! ಇರಲಿ. ಎಷ್ಟು— ನಾಲ್ಕೈದು ರೂಪಾಯಿ ಸಂಪಾದಿಸ್ತೀಯಾ ನಿತ್ಯವೂ?"

ಎಷ್ಟೇ ಸಂಪಾದಿಸಿದರೂ ಬೆಳಗಿದರೆ ೫ ರೂಪಾಯಿ ಕೊಡಬೇಕಲ್ಲ ಸಾಮಿ, ಜಟಕಾದ ಮಾಲೀಕನಿಗೆ? ಇದರ ಮೇಲೆ ಬಂದದ್ದು ನನ್ನದು!"

ಅಲ್ವಯ್ಯಾ, ಸ್ವಂತ ಜಟಕಾ ಅಲ್ಲದವನು ನೀನು—ಎಷ್ಟು ಹಾರಾಡ್ತೀಯಾ? ಈಗ ನಮ್ಮ ಕಡಿಂದ ಸಿಕ್ಕೋ ಬಾಡಿಗೆ ತಕ್ಕೊಳ್ಳೋದು ಬಿಟ್ಟು, ನೀನೇನದನ್ನು ಕೈಯಿಂದ ಹಾಕ್ತೀಯಾ?"

"ಸಾಮಿ, ನಿಮ್ಮ—ಕಡಿಂದಾನೇ ಒಂದಕ್ಕೆರಡು ತಕ್ಕೊಳ್ಳೊ ಧೈರ್ಯ ಐತೆ ನನಗೆ! ಆದರೆ ಜುಲುಮಿ ಜಬರದಸ್ತಿ ಅಲ್ಲ, ಖುಷಿಯಿಂದ ತಗೋತೇನೆ, ನೋಡತಾ ಇರಿ ತಾವೇ!"

"ನಿನಗಿದ್ದ ಧೈರ್ಯ ನಮಗಿಲ್ಲ!"

"ಇದಕ್ಕೆ ಧೈರ್ಯ ಬೇಕಾಗಿಲ್ಲ ಸಾಮಿ, ಮನಸು ಬೇಕು!"

"ನಿಜಾನಪ್ಪಾ ಅದು!"

ಮಾತು ಅಲ್ಲಿಗೇ ನಿಂತಿತು—ಜಯ ಆಫೀಸಿಗೆ ಸಂಬಂಧಿಸಿದ ಮಾತನ್ನು ತೆಗೆದ—ವಿಷಯ ಬೇರೆ ಹೊರಟಿತು. ಅವರಿಬ್ಬರೇ ಮಾತಿನಲ್ಲಿ ತೊಡಗಿದರು.

ರಂಗನ ಮನೆಯ ಹತ್ತಿರದ ಚೌಕು ಬಂದಿತು.

"ನಾನು ಇಲ್ಲಿಗೇ ಸಾಮಿ ನಿಲ್ಲಿಸೋದು; ಮುಂದೆ ಬರಾಕಿಲ್ಲ!" ಜಟಕಾದವನನ್ನು ಮತ್ತೆ ಕೆಣಕುವ ಮನಸ್ಸು ಅವರಿಗಿರಲಿಲ್ಲ,

"ಹಾಂ; ಇದು ಹಿಡಿ, ತಕರಾರು ಬೇಡ!" ರಂಗ ಒಂದು ರೂಪಾಯಿ ತೆಗೆದು ಸಾಬಿಗೆ ಕೊಡಲು ಹೋದ.

"ಆ ಮಾತಾಗೋದಿಲ್ಲ, ಸಾಮಿ, ತಕ್ಕೊಳ್ಳೋಕಿಲ್ಲಾ ಅಂದರೆ ತಕ್ಕೊಳ್ಳೋಕೇ ಇಲ್ಲ!"

ರಂಗ ರೂಪಾಯಿಯನ್ನು ಜಟಕಾದಲ್ಲಿ ಎಸೆದ. ಆದನ್ನೆತ್ತಿದವನೇ ಸಾಬಿ ರಂಗನೆದುರಿಗೆ ಬೀಸಾಡಿ, ಜಟಕಾ ಏರಿದವನೇ ನಡೆದೇ ಬಿಟ್ಟ! ಇಬ್ಬರೂ ಬೆಪ್ಪನಂತೆ ನಿಂತುಬಿಟ್ಟರು.

* * *

ರಂಗ ಮತ್ತು ಜಯ ಹೈಸ್ಕೂಲ್ ಕಾಲದಿಂದಲೂ ಗೆಳೆಯರು. ಬಿ. ಎಸ್ಸಿ., ಪರೀಕ್ಷೆ ಪುಣೆಯಲ್ಲಿ ಪಾಸ್ ಮಾಡಿದ ಮೇಲೆ, ಒಂದೇ ಕಾಲಕ್ಕೆ ಕೆಲಸದಲ್ಲಿ ಸೇರಿದರು. ಬೆಂಗಳೂರಿಗೆ ಬಂದ ಸ್ವಲ್ಪ ದಿನಗಳಲ್ಲಿಯೆ ಜಯ ಮದರಾಸಿಗೆ ವರ್ಗವಾಗಿ ಹೋದ. ರಂಗ ಒಬ್ಬನೇ ಬೆಂಗಳೂರಲ್ಲಿ ಉಳಿದ. ಮೇಲೆ ವಿವರಿಸಿದ ಜಟ್ಕಾದ ಸಂಗತಿ ಜರುಗಿದಾಗ, ಜಯ ಒಂದು ವಾರದ ರಜೆಯಮೇಲೆ ಬಂದಿದ್ದ. ಹೊರಡುವಾಗ ಅವನು ರಂಗನಿಗೂ ಮದರಾಸಿಗೆ ಬಂದು ಹೋಗಲಿಕ್ಕೆ ಆಗ್ರಹದಿಂದ ಹೇಳಿಹೋದ.

ಕೆಲವುದಿನ ಕಳೆದುವು. ರಂಗನಿಗೆ ಜಯನಿಂದ ಪತ್ರಬಂದಿತು: 'ನಾಲ್ಕುದಿನದ ಬಿಡುವು ದೊರೆಕಿಸಿ, ಆದಷ್ಟು ಬೇಗ ಬಂದು ಹೋಗಬೇಕು' ಎಂದು. ಆಗ ರಂಗನ ಹೆಂಡತಿ ತುಂಬಿದ ಬಸಿರೆ. ಪ್ರಸವಕ್ಕೆ ಅವಧಿ ಅವರ ಲೆಕ್ಕದಿಂದ ಹೆಚ್ಚು ದಿನ ಇರಲಿಲ್ಲವಾದರೂ, ಇನ್ನೂ ಎರಡು ವಾರಗಳಾದರೂ ಹೋಗಬಹುದೆಂದು ಗಂಡ-ಹೆಂಡತಿ ಲೆಕ್ಕಹಾಕಿದ್ದರು. ಜಯನ ಪತ್ರ ಬಂದ ಎರಡು ದಿನಗಳಲ್ಲಿಯೆ ರಂಗ ರಜೆಯನ್ನು ಪಡೆದು ಮದರಾಸಿಗೆ ಹೊರಟು

ಬಿಟ್ಟ. ಹೊರಡುವಾಗ ರಂಗ ಸಿಂಧುವಿಗೆ ಹೇಳಿದ: " ಹಾಗೆ ಏನಾದರೂ ಸಂದರ್ಭ ಒದಗಿದರೆ, ನೆರೆಮನೆಯ ಸರೋಜಮ್ಮ-ನವರಿಗೆ ತತ್‌ಕ್ಷಣ ತಿಳಿಸು! ಅಂತಹ ಸಂದರ್ಭವೇ ಬರಲಾರದು; ಆದರೂ ಹೇಳಿರ್ತೇನೆ.— ನಾನೇನೋ ಇಂದಿನಿಂದ ನಾಲ್ಕನೆಯ ದಿವಸ, ತಪ್ಪದೆ ಇಲ್ಲಿ ಇರುತ್ತೇನೆ! "

ರಂಗ ಮದರಾಸಿಗೆ ಹೋದ ಮೂರನೆಯ ದಿನ, ಸಿಂಧು ಸರೋಜಮ್ಮನ ಜೊತೆಗೆ ಸಿನೇಮಾ ನೋಡಿಬಂದಳು. ಬರುವಾಗ ಹೊಟ್ಟೆಯಲ್ಲಿ ಒಮ್ಮೆರಡು ಸಲ ಒಂದು ತರದ ನೋವೆದ್ದಿತು. ಆ ದಿನ ಸರೋಜಮ್ಮನ ಮನೆಯಲ್ಲಿ ನಾಲ್ಕು ಒಡೆಗಳನ್ನು ಹೆಚ್ಚು ತಿಂದಿದ್ದಳು. ಇದ್ದರೆ ಅದರದೇ ನೋವು ಇರಬೇಕೆಂದು ಎಂದುಕೊಂಡಳು. ಸರೋಜಮ್ಮನಿಗೆ ತಿಳಿಸುವ ಅಗತ್ಯ ಆಗ ಆಕೆಗೆ ತೋರಲಿಲ್ಲ. ಆದರೆ ಮನೆಗೆ ಬಂದ ಮೇಲೆ ಬೇನೆ ಹೆಚ್ಚಾಯಿತು. ಬರುಬರುತ್ತ ಅದರ ಬಾಧೆಯನ್ನು ಸಹಿಸುವುದು ಆಕೆಗೆ ಅಸಾಧ್ಯವೆನಿಸತೊಡಗಿತು.

ರಾತ್ರಿಯ ಒಂದು ಗಂಟೆಯ ಸುಮಾರು; ಮಳೆ ಸುರಿದು ಆದೇ ನಿಂತಿತ್ತು. ಆದರೂ ಮೋಡಗಳು ಹಿಂಡು-ಹಿಂಡಾಗಿ ಬಂದೇ ಬರುತ್ತಿದ್ದುವು. ಕ್ಷಣಕ್ಷಣಕ್ಕೂ ಮಳೆಯ ಅಂಜಿಕೆ ಹೆಚ್ಚುತ್ತಲೇ ಇತ್ತು.

ಇಂತಹ ಹೊತ್ತು ಜಟಕಾ ಸಾಬಿಗಳಿಗೆ ಬಲು ಖುಷಿಯ ಹೊತ್ತು. ಎಲ್ಲರೂ ಥಿಯೆಟರುಗಳ ಬಳಿ ನುಗ್ಗಿದ್ದರು. ನಗರದ ಜಟಕಾಗಳೆಲ್ಲ ಅಲ್ಲೇ ನೆರೆದಹಾಗಿತ್ತು. ಚಾಮರಾಜಪೇಟೆಯ ೧ನೆಯ ಕ್ರಾಸಿನಲ್ಲಿ ಒಂದು ಜಟಕಾಗಾಡಿಯೂ ಇರಲಿಲ್ಲ. ಸರೋಜಮ್ಮನ ಮುಪ್ಪಿನ ಮಾವ, ಜಟಕಾಗಾಡಿಗಾಗಿ ಪಾಪ ಬೀದಿಬೀದಿ ಅಲೆಯುತ್ತಿದ್ದರು. ಅವರು ಮನೆಯನ್ನು ಬಿಟ್ಟು ಒಂದು ಗಂಟೆಯಮೇಲಾಗಿತ್ತು. ಸಿಂಧುವಿನ ಅವಸ್ಥೆ ಏನಾಗಿರ-ಬಹುದು ಎಂಬುದನ್ನು ಅವರು ಊಹಿಸದಾದರು. ಅವರು ಮನೆಯಿಂದ ಹೊರಡುವಾಗಲೆ, ಸಿಂಧುವಿನ ಬೇನೆಯ ಕಳವಳ ನೋಡಿ ಸರೋಜಮ್ಮ ಗಾಬರಿಯಾಗಿದ್ದರು. ಮನೆಯಲ್ಲಿ ಸಿಂಧು ಒಬ್ಬಳೇ, ಗಂಡ ಬೇರೆ ಊರಲ್ಲಿಲ್ಲ. ತಾನೋ ವಿಧವೆ! ತನ್ನ ಮನೆಯಲ್ಲಿಯೂ ಗಂಡಸು ಎಂದರೆ ಮುದುಕ ಸೋದರ-ಮಾವ! ತನ್ನ ಜೀರ್ಣದೇಹವನ್ನು ಎಳೆಯುತ್ತ, ಆಯಾಸವನ್ನು ಲೆಕ್ಕಿಸದೆ, ಅಂತಹ ಕಗ್ಗತ್ತಲೆಯಲ್ಲಿ ಆ ಮಾವ ಹೊರಟಿದ್ದ. ಅಲೆಯುತ್ತ ಅಲೆಯುತ್ತ ಒಂದು ಚೌಕಿನ ಹತ್ತಿರ ಬಂದ; ಅಲ್ಲಿ ಒಂದು ಜಟಕಾ ನಿಂತದ್ದು ಅವನ ಕಣ್ಣಿಗೆ ಬಿತ್ತು. "ಬರುವನೋ ಇಲ್ಲವೊ, ಬಂದರೂ ಬಾಡಿಗೆ ಏನು ಕೇಳುವನೊ!' ಎಂಬ ಸಂಶಯ-ನಿರಾಶೆಗಳಲ್ಲಿ ಮುದುಕ ಜಟಕಾದವನನ್ನು ಕೇಳಿದ:—

" ಏನಯ್ಯಾ, ಒಬ್ಬ ಹೆಣ್ಣುಮಗಳನ್ನು ಹೆರಿಗೆ-ಆಸ್ಪತ್ರೆಗೆ ಸಾಗಿಸ-ಬೇಕು— ಬಾಡಿಗೆ ಬರ್‍ತೀಯಾ ? "

" ಬರ್‍ತೇನೆ, ಎಲ್ಲಿಂದ ಸಾಮಿ ಕೂಡ್ಕೊಂಡು ? "

" ಚಾಮರಾಜಪೇಟೆ, ಒಂದನೇ ಕ್ರಾಸ್‌ನಿಂದ! "

" ನೋಡಿ, ಸಾಮಿ, ಮಳೆಮಾರಿನ ಹೊತ್ತು! ಅದೂ ಅಲ್ಲದೆ ಹೆಣ್ಣುಮಗಳನ್ನು ಆಸ್ಪತ್ರೆಗೆ ಸಾಗಿಸಬೇಕು. ಆರು ರೂಪಾಯಿ ಆದರೆ ಬರ್‍ತೇನೆ! "

ಮುದುಕ ಲೆಕ್ಕ ಹಾಕಿದ್ದ: ಹೆಚ್ಚಾದರೆ ಅವನು ಒಂದು— ಒಂದೂವರೆ ರೂಪಾಯಿ ಕೇಳಬಹುದು ಎಂದು. ಮುದುಕನ ಎಣಿಕೆಯಿಂದ ಇದು ನಾಲ್ಕು ಮಡಿ ಮೀರಿಹೋಯಿತು. 'ಜಟಕಾ ಸಾಬಿಗಳಂತಹ ದುಷ್ಟರೂ ಕಟುಕರೂ ಜಗತ್ತಿನಲ್ಲಿಯೆ ಬೇರೆ ಇರಲಾರರು!' ಎಂದು ಆತ ನುಡಿದುಕೊಂಡರು. 'ಇವ-ರಲ್ಲಿ ಅಂತಃಕರಣ, ಮನುಷ್ಯತ್ವ, ಏನಾದರೂ ಇದೆಯೇ? ದುಡ್ಡು ಸಂಪಾದಿಸುವ ಹೊತ್ತೇ ಇದು? ಒಂದು ಪ್ರಾಣ ಗಂಡಾಂತರ-ದಲ್ಲಿದೆ! ಸಂಕಟದಲ್ಲಿ ಸಿಕ್ಕವರ ಪ್ರಾಣ ಮೊದಲು ಉಳಿಸಬೇಕು ಎಂಬ ಭಾವನೆ ಇದೆಯೇ ಇವರಿಗೆ? ಇಂಥವರನ್ನು ಗುಂಡಿಕ್ಕಿ ಕೊಂದರೂ ದೋಷ ಬರಲಾರದು!' ಎಂದು ಏನೇನೊ ವಿಚಾರ ಅವರ ತಲೆಯಲ್ಲಿ ಬಂದುಹೋಯಿತು. ಆದರೂ ಬಂದ ಸಿಟ್ಟನ್ನು ಒಳಗೇ ಹತ್ತಿಟ್ಟು, ಆರ್ಜವ ವೃತ್ತಿಯನ್ನು ಧ್ವನಿಯಲ್ಲಿ ತಂದು-ಕೊಂಡು ಮುದುಕ ಹೇಳಿದ:

" ಇದು ನೋಡು, ಹೆಣ್ಣುಮಗಳು ಪಾಪ, ಸಂಕಟದಲ್ಲಿದ್ದಾಳೆ! ಎರಡು ರೂಪಾಯಿ ಕೊಡ್ತೇನೆ; ಬಂದು ಬಿಡು! ಇಂಥ ಹೊತ್ತಿ-ನಲ್ಲಿ ಅನ್ಯಾಯದಿಂದ ಸಂಪಾದಿಸಿದರೂ ನಿನಗದು ದಕ್ಕಲಾರದು! ನೀನು ಮಕ್ಕಳು-ಮರಿ ಹಡೆದವನಿದ್ದರೆ, ಇಂಥ ಕಷ್ಟ ನಿನಗೂ ಗೊತ್ತಿರಲು ಸಾಕು—"

" ನಮಗೆಲ್ಲ ಗೊತ್ತೈತೆ ಸಾಮಿ! ಇಂತಾ ಮಳೇಲಿ ಬಾಡಿಗೆ ಹೊಡೆದು ನಾವೂನೂ ಬದುಕಬೇಕು! ಆರು ರೂಪಾಯಿಗೆ ಕಡಿಮೆ ಆಗೋಕಿಲ್ಲ; ರೂಪಾಯಿಗೆ ಎರಡು ಸೇರು ಅಕ್ಕಿ, ಮೂರು ಸೇರು ಹುರುಳಿ! ನಾವೇನು ತಿನ್ನೋಣ, ಕುದುರೆಗೇನು ಹಾಕೋಣ ಸಾಮಿ? "

ಮುದುಕ ಸ್ವಲ್ಪಹೊತ್ತು ಏನೂ ತೋಚದೆ ನಿಂತ. ಬೇಗನೆ ಮನೆಸೇರಬೇಕೆಂಬ ಚಿಂತೆಯೊಂದು, ಆರು ರೂಪಾಯಿ ಬಾಡಿಗೆ ಕೇಳಿದನಲ್ಲಾ ಎಂಬ ಸಂತಾಪವೊಂದು; ಈ ಉಭಯ ಸಂಕಟದ ಮೂಲಕ ತೆರೆಯಲ್ಲಿ ಸಿಕ್ಕ ತೆಂಗಿನಕಾಯಂತೆ ಮುದುಕನ ಅವಸ್ಥೆ ಆಯಿತು. ಆಗಿನ ಒಂದೊಂದು ಕ್ಷಣವೂ ಮಹತ್ತ್ವದ್ದಿತ್ತು. ಆಗ ದುಡ್ಡಿನ ಮೋರೆ ನೋಡುವಹಾಗಿರಲಿಲ್ಲ. ಪ್ರಾಣ ಉಳಿದರೆ ಸಾಕಾಗಿತ್ತು. ಆದರೂ ಸ್ವಲ್ಪ ಜಗ್ಗಾಡಿ ನೋಡೋಣ ಎಂದು ಮುದುಕನಿಗೆ ಆಸೆಯುಂಟಾಯಿತು. 'ಸ್ವಲ್ಪ ಹೋದಹಾಗೆ ಮಾಡಿದರೆ ಕಡಿಮೆ ಬಾಡಿಗೆಗೆ ಬಂದರೂ ಬರಬಹುದು' ಎಂದು ಆಲೋಚಿಸಿ, ಮುದುಕ ಮುಂದಕ್ಕೆ ಹೊರಟ. ಆ ಚೌಕನ್ನು ದಾಟಿ ಒಂದು ಗಲ್ಲಿಗೆ ಬಂದ. ಅದೇ ಹೊತ್ತಿಗೆ ಒಂದು ಜಟಕಾ ಎದುರಿಗೆ ಕಾಣಿಸಿಕೊಂಡಿತು. ಅದು ಕೂಡ ಚೌಕಿನ ನಿಲ್ದಾಣಕ್ಕೇ ಹೊರಟಿತ್ತು. ಮುದುಕನಿಗೆ ಅರಿಯದ ಧೈರ್ಯ ಬಂದಿತು.

“ ಬರ್ತೀಯೇನಯ್ಯಾ ? ”

“ ಎಲ್ಲಿಗೆ ಸಾಮಿ ? ”

“ ಬಸ್ಸಿ ಹೆಣ್ಣುಮಗಳನ್ನು ಹರಿಗೆ ಆಸ್ಪತ್ರೆಗೆ ಒಯ್ಯಬೇಕು! ಆಕೆಯ ಗಂಡ ಊರಲ್ಲಿಲ್ಲ, ನಾವು ನೆರೆಮನೆಯವರು! ಆಕೆಗೆ ನಾವೀಗ ಸಹಾಯಮಾಡಬೇಕು. ನೀನೂ ಅಷ್ಟು ಪುಣ್ಯಕಟ್ಟಿಕೊ! ನೋಡು, ಏನು ಕೊಡಬೇಕು ಬಾಡಿಗೆ? ಹೆಚ್ಚು ಕೇಳಬೇಡ! ”

“ ಮೂರು ರೂಪಾಯಿ ಕೊಡಿ ಸಾಮಿ! ನಿಮ್ಮ ಮನೆ ಯೆಲ್ಲಿ ? ”

“ ಚಾಮರಾಜಪೇಟೆ, ಒಂದನೆಯ ಕ್ರಾಸ್! ”

“ ಸರಿ, ಹತ್ತಿ ; ಹೋಗೋಣ! ”

ಮುದುಕನಿಗೆ ಈ ಬಾಡಿಗೆಯೂ ಹೆಚ್ಚೇ ಎನಿಸಿತು; ಆದರೆ ವಿಚಾರಕ್ಕೆ ಆಗ ಸಮಯವಿರಲಿಲ್ಲ. ಮುದುಕ ಜಟಕಾ ತಕ್ಕೊಂಡು ಮನೆಗೆ ಬಂದ.

ಮನೆಯಲ್ಲಿ ಅದೇನು ಗಾಬರಿ, ಅದೆಷ್ಟು ಗೊಂದಲ! ಅವರ ಅವಸ್ಥೆಯನ್ನು ದೇವರೇ ಬಲ್ಲ! ಸಿಂಧುವಿನ ಸ್ಥಿತಿ ಬಹಳ ಕಷ್ಟಕ್ಕಿಟ್ಟುಕೊಂಡಿತ್ತು. ಈ ಜಟಕಾ ಸಾಬಿ ಬಾರದೆ ಇನ್ನೊಬ್ಬರು ಯಾರಾದರೂ ಬಂದಿದ್ದರೆ, ಅವರು ಆಸ್ಪತ್ರೆಗೆ ಹೋಗುವ ಸಾಹಸವನ್ನೇ ಮಾಡುತ್ತಿರಲಿಲ್ಲವೇನೊ! ಈ ನಮ್ಮ ಜಟಕಾ-ಸಾಬಿ ಬಾಗಿಲಿನಲ್ಲಿ ಜಟಕಾ ನಿಲ್ಲಿಸಿ, ಅವರು ಬರುವವರೆಗೆ ಸುಮ್ಮಗೆ ಕೂಡಲಿಲ್ಲ; ಮುದುಕನ ಹಿಂದೆ ತಾನೂ ಒಳಗೆ ಬಂದ. ಸರೋಜಮ್ಮನವರನ್ನು ಎಲ್ಲ ಸಮಾಚಾರ ವಿಚಾರಿಸಿ ತಿಳಿದುಕೊಂಡ; ಅವರಿಗೆ ಮನೆಯವನಂತೆ ಧೈರ್ಯ ಹೇಳಿದ :

“ ಅಮ್ಮಾ, ನೀವು ಗಾಬರಿಯಾಗಬೇಡಿ! ಆಯಮ್ಮಗೆ ಐದು ನಿಮಿಷದಲ್ಲಿ ಕರಕೊಂಡು ಹೋಗ್ತೀನೆ! ನೀವು ಆ ಯಮ್ಮನ ಸೀರೆ, ರವಿಕೆ, ಉಳಿದ ಬಟ್ಟೆ ತಕ್ಕೊಳ್ಳಿ. ಅವರು ಹತ್ತುದಿನ ಆಸ್ಪತ್ರೆಯಲ್ಲಿರಬೇಕು. ಜಟಕಾದಲ್ಲಿ ಮೆತ್ತಗೆ ಹಾಸೋಕೆ ಏನಾದರೂ ಇದ್ದರೆ ಕೊಡಿ. ಚಳಿ! ಬೆಚ್ಚಗೆ ಹೊಚ್ಚಿರಿ ಆ ಯಮ್ಮಗೆ! ಕಷ್ಟದ ಹೊತ್ತು ಯಾರಿಗಾದರೂ ಬರೋ-ದುಂಟಮ್ಮಾ! ನನಗೂ ತಂಗೀ-ತಾಯಿ ಇದ್ದಾರೆ. ಈ ಯಮ್ಮನೂ ನನಗೊಬ್ಬ ತಂಗಿ ಇದ್ದ ಹಾಗೆ! ”

ಜಟಕಾಸಾಬಿಯ ಮಾತು ಅವರಿಗೆಷ್ಟೋ ಧೈರ್ಯ ಕೊಟ್ಟಿತು. ಸಾಬಿ ಒಂದು ಚಿಕ್ಕ ಹಾಸಿಗೆ ಮಾಡಿ ಜಟಕಾದಲ್ಲಿ ಹಾಕಿದ. ಮನೆಯ ಕಿಟಕಿಗಳನ್ನೆಲ್ಲ ಮುಚ್ಚಿದ. ಸಾಮಾನುಗಳನ್ನೆಲ್ಲ ಸವರಿಸಿ ಹೊಂದಿಕೆಯಾಗಿಟ್ಟ. ಒಳಗಿನ ಬಾಗಿಲುಗಳನ್ನಿಕ್ಕಿ, ‘ಬನ್ನಿ ತಾಯಿ, ಹೋಗೋಣ! ’ ಎಂದು ಸಿಂಧುವಿನ ಎದುರು ಬಂದು ನಿಂತ. ಸಿಂಧುವನ್ನು ತಂದು ಗಾಡಿಯಲ್ಲಿ ಕುಳ್ಳಿರಿಸಿದರು. ಗಾಡಿ ಹೊರಟಿತು. ಸಾಬಿ ಗಾಡಿಯನ್ನು ಬಹು ಜಾಗರೂಕತೆಯಿಂದ—ಆದರೂ ಅದಷ್ಟು ಜಾಗ್ರತೆಯಾಗಿ—ತಂದ.

ಸಿಂಧುವನ್ನು ಡಾಕ್ಟರ ಸ್ವಾಧೀನಕ್ಕೆ ಒಪ್ಪಿಸಿ, ಸರೋಜಮ್ಮ ಮತ್ತು ಮುದುಕ ಆಸ್ಪತ್ರೆಯ ಹೊರಗೆ ಬರುವವರೆಗೆ, ಜಟಕಾ ಸಾಬಿ ಬಾಡಿಗೆಗಾಗಿ ಕಾದುಕೊಂಡೇ ಇದ್ದ. ಸಾಬಿಗೆ ಬಾಡಿಗೆ ಕೊಡದೆ ಹಾಗೇ ನಿಲ್ಲಿಸಿದ್ದೇ ಅವರಿಗೆ ಮೊದಲು ಲಕ್ಷ್ಯಕ್ಕೆ ಬರಲಿಲ್ಲ! ಸಾಬಿ ತಿಳಿದುಕೊಂಡ: ‘ ಮುದುಕ ಮರಳಿ ಮನೆಗೆ ಹೋಗಬಹುದು, ಅದಕ್ಕಾಗಿ ಜಟಕಾ ನಿಲ್ಲಿಸಿಕೊಂಡಿರಬೇಕು! ’ ಎಂದು. ಜಟಕಾ ಕಣ್ಣಿಗೆ ಬಿದ್ದಮೇಲೆ, ಸರೋಜಮ್ಮ ಮನಸ್ಸಿನಲ್ಲಿಯೆ ವ್ಯಥೆಪಟ್ಟುಕೊಂಡು, ಬಾಡಿಗೆ ಕೊಡಲು ಮುದುಕನಿಗೆ ಹೇಳಿದಳು. ಆದರೆ ಪಾಪ, ಬರುವ ಗೊಂದಲದಲ್ಲಿ ಮುದುಕ ದುಡ್ಡಿನ ಪಾಕೀಟನ್ನೇ ಮನೆಯಲ್ಲಿ ಮರೆತು ಬಂದಿದ್ದ.

“ ನೀನು ಪರ್ಸ್‌ನ್ನೇ ಹ್ಯಾಗೆ ಮರೆತು ಬಂದೆ ? ”

“ ಏನೋಮ್ಮಾ, ಪರ್ಸ್ ತರಬೇಕೆಂದು ಪೆಟ್ಟಿಗೆಯಿಂದ ತೆಗೆದು ಹೊರಗಿಟ್ಟವನು, ಹಾಗೇ ಮರೆತು ಬಂದುಬಿಟ್ಟೆ. ಇತ್ತೀಚಗೆ ಹೀಗೇ ಆಗುತ್ತೆ. ಎಲ್ಲ ಅಭ್ರಮ-ಸುಭ್ರಮ! ಅದರಲ್ಲಿ ಗಾಬರಿಯಲ್ಲಿ ಯಾವುದೂ ತೋಚಲಿಲ್ಲ! ”

“ ಈಗ ಹ್ಯಾಗೆ ಮಾಡೋದು ? ಇಲ್ಲಂತೂ ಯಾರೂ ಗುರ್ತಿನವರಿಲ್ಲ! ”

“ ಜಟಕಾಸಾಬಿಗೆ ನಾಳೆ ಬಾ ಅಂತ ಹೇಳಿದರೆ ? ”

“ ಹ್ಯಾಗೆ ಹೇಳೋದಪ್ಪಾ ? ಪಾಪ, ಸಾಬಿಯಾದರೂ ನಮಗಾಗಿ ಎಷ್ಟೊಂದು ತೊಂದರೆಪಟ್ಟುಕೊಂಡ! ಬಾಡಿಗೆ ತಕ್ಕೊಂಡರೂ ಹೀಗೆ ಪ್ರಸಂಗಕ್ಕೆ ಅನುಕೂಲವಾಗೋದು ಹೇಳು! ”

“ ಮತ್ತೇನು ಮಾಡಂತಿಯಾ ? ”

ಇವರಾಡುವ ಒಂದೆರಡು ಮಾತು— ಸಾಬಿಯ ಕಿವಿಯ ಮೇಲೆ ಬಿದ್ದುವು. ಸಾಬಿ ಹತ್ತಿರ ಬಂದು ಕೇಳಿದ:— “ಏನು ಅಮ್ಮನವರೆ, ಅದು ? ”

(೨೩೮ ನೆಯ ಪುಟದಿಂದ ಮುಂದುವರಿದುದು)

ದಾಗಿಲ್ಲ. ಹೆಚ್ಚು ವೇಗ, ಹೆಚ್ಚಿನ ವೀರವೃತ್ತಿ ಧಾಟಿಯಲ್ಲಿ ಸೇರುವಂತೆ ಅವರ ಹೊಸ ಗತ್ತು ಕಟ್ಟಬೇಕು. ಆದರೆ ಇದು ಅಶಕ್ಯಪ್ರಾಯವೇ.

ಅಷ್ಟರಿಂದ ನಮಗೆ ಹೊಸದೊಂದು ರಾಷ್ಟ್ರಗೀತವಾಗ. ಬೇಕು. ಅದರ ಅನುವಾದ ಎಲ್ಲ ಪ್ರಾಂತೀಯ ಭಾಷೆಗಳಲ್ಲಿ ಒಂದೇ ಧಾಟಿಯಲ್ಲಿ ಆಗಬೇಕು. ಅದರಲ್ಲಿಯ ಭಾವನೆಯು ಪ್ರಾತಿನಿಧಿಕವಿರಬೇಕು. ದಲಿತ ಜನಾಂಗವನ್ನು ಜಾಗೃತ-ಗೊಳಿಸಿ; ಜಾಗೃತರನ್ನು ಸಜ್ಜುಗೊಳಿಸಿ, ಸಜ್ಜರನ್ನು ಸಿದ್ಧಿಗೆ ಒಯ್ಯುವಂತೆ ಅದು ಇರಬೇಕು. ಇದು ನಮ್ಮ ಮೂರನೆಯ ಪ್ರಶ್ನೆಯ ಬಗೆಹರಿಕೆ.

" ಏನಿಲ್ಲಪ್ಪಾ, ಮುದುಕರು ಪಾಪ, ಬರುವಾಗ ಗಾಬರಿ-ಪಟ್ಟುಕೊಂಡು, ಹೊರಗೆ ಇಟ್ಟ ಪರ್ಸ್ಸ ತಾರದೆ, ಹಾಗೇ ಬಿಟ್ಟು ಬಂದಿದ್ದಾರೆ. ಹ್ಯಾಗೆ ಮಾಡೋಣಾ... ಅಂತ!"

"ಪರವಾ ಇಲ್ಲಮ್ಮಾ, ಗಾಬರಿಗೆ ಯಾರಿಗಾದರೂ ಹೀಗೇ ಆಗೋದುಂಟು! ನಾನು ಮನೆಗೆ ಬಂದು ತಕ್ಕೊಂಡು ಹೋಗ್ತೀನೆ. ನೀವೇನು ಯೋಚನೆ ಮಾಡಬೇಡಿ! ನಾಳೆ ಆಯಮ್ಮನ ಗಂಡನ್ನ ತಂತೀ ಕಳಿಸಿ ಕರೆಯಿಸಿಕೊಳ್ರಮ್ಮಾ; ನಾನು ಬರ್ತೀನೆ!"

ಇಷ್ಟು ನುಡಿದವನೇ ಸಾಬಿ, ಅಲ್ಲಿ ಒಂದು ಕ್ಷಣ ಕೂಡ ನಿಲ್ಲದೆ, 'ಚಲ್ ಬೇಟಾ' ಎಂದು ತನ್ನ ಕುದುರೆಗೆ ಹೇಳಿ, ಜಟಕಾ ಏರಿ, ಕತ್ತಲಲ್ಲಿ ಕಾಣದಂತಾದ.

* * *

ಸಿಂಧು ಗಂಡುಮಗುವನ್ನು ಹೆತ್ತಳು— ಹತ್ತು ದಿನ ಆಸ್ಪತ್ರೆಯಲ್ಲಿದ್ದು ಮನೆಗೆ ಮರಳಿಬಂದಳು. ಅವಳು ಹಡೆದ ಮಾರನೆಯ ದಿನವೆ, ರಂಗ ಮದರಾಸಿನಿಂದ ಬಂದುಬಿಟ್ಟಿದ್ದ.

ಇಂದು ಅವನ ಮನೆಯಲ್ಲಿ ತೊಟ್ಟಿಲುಸಂಭ್ರಮ! ಸಿಂಧುವಿನ ತಾಯಿ-ಅಣ್ಣಂದಿರು ಸಮಾರಂಭಕ್ಕೆ ಬಂದಿದ್ದರು. ರಂಗ ಆಫೀಸಿಗೆ ರಜೆಗೆ ಬರೆದು, ಅವರೊಡನೆ ಚಕ್ಕಂದದಲ್ಲಿ ಕುಳಿತಿದ್ದ. ಅವನ ಮಗು ತೊಟ್ಟಿಲಲ್ಲಿ ಮಲಗಿತ್ತು. ಸಿಂಧು ಮಂಚದ ಮೇಲೆ ಒರಗಿಕೊಂಡು, ಅಂದು ಸಾಯಂಕಾಲಕ್ಕೆ ಬೇಕಾಗುವ ಕೂಸಿನ ಅಂಗಿ-ಟೊಪ್ಪಿಗೆಗಳನ್ನು ಸಿದ್ಧಪಡಿಸುತ್ತಿದ್ದಳು. ತಲೆ-ಬಾಗಿಲಲ್ಲಿ ಯಾರೋ— 'ಸಾಮಿ' ಎಂದು ಕೂಗಿದರು. ರಂಗ ಎದ್ದು ಕೋಣೆಯ ಹೊರಗೆ ಬಂದು ನೋಡುತ್ತಾನೆ—ಎದುರಿಗೆ ಬಾಡಿಗೆ ರೂಪಾಯಿ ಬಿಟ್ಟು ಹೋದ ಜಟಕಾ ಸಾಬಿ!

" ಏನಯ್ಯಾ, ಬಂದೆ ?"

" ಬಾಡಿಗೆ ಸಾಮಿ!"

" ಆಗ ಕೊಡೋವಕ್ಕೆ ಬಂದರೆ ಬೇಡಾ ಅಂದವನು, ಈಗ ಕೇಳೋದಕ್ಕೆ ನಾಚಿಕೆ ಬರೋದಿಲ್ಲವೆ? ದಿನಹೋದರೆ ನಿನ್ನ ಬಾಡಿಗೆ ರೂಪಾಯಿ ಈಯುತ್ತೇ—ಅಂತ ತಿಳಿದಿದ್ದೀಯಾ ?"

" ಆ ಬಾಡಿಗೆ ಅಲ್ಲ ಸಾಮಿ, ಬೇರೆ ಬಾಡಿಗೆ ಐತೆ! ಒಳಗೆ ಅಮ್ಮಾ ಅವರಿಗೆ ಗೊತ್ತು; ಅವರಿಗೆ ತಿಳಿಸಿ, ಅವರೆಲ್ಲ ಕೊಡ್ತಾರೆ!"

ಸಾಬಿಯ ದನಿಯ ಗುರುತು ಸಿಂಧುವಿಗೆ ಹತ್ತಿತು. ಕೂಡಲೆ ಅವಳು ಹೊರಗೆ ಬಂದಳು. ಸರೋಜಮ್ಮನೂ ಅದೇ ಹೊತ್ತಿಗೆ ಬಂದರು.

" ಅಮ್ಮಾ, ಸುಖವಾಗಿದ್ದೀರಾ ?" ಸಾಬಿ ಕೇಳಿದ.

" ಸುಖವಾಗಿದ್ದೇನಪ್ಪಾ! ಎಲ್ಲಾ ನಿನ್ನ ಪುಣ್ಯ!"

ಸಿಂಧು ಕೃತಜ್ಞತಾಭಾವದಿಂದ ನುಡಿದಳು.

" ನನ್ನ ಪುಣ್ಯ ಏನು ಬಂತು ತಾಯಿ! ದೇವರು ಕಾಯೋ ಹೊತ್ತು!"

" ಬಾ, ಕೂಡಪ್ಪಾ ಇಲ್ಲಿ!"

ಸಾಬಿ ಕುಳಿತ; ರಂಗ ಮತ್ತು ಉಳಿದವರೆಲ್ಲರೂ ಆಶ್ಚರ್ಯದಿಂದ ಸಾಬಿಯನ್ನೇ ನೋಡುತ್ತಿದ್ದರು. ಸಿಂಧು 'ಅಂದಿನ ಜಟಕಾ ಸಾಬಿ ಇವನೇ!' ಎಂದು ಹೇಳಿದಳು. ಆ ಮಾತನ್ನು ಕೇಳಿ ಎಲ್ಲರಿಗಿಂತಲೂ ರಂಗನಿಗೆ ಸಾಬಿಯ ಬಗ್ಗೆ ಹೆಚ್ಚು ಆಶ್ಚರ್ಯವೂ ಆದರವೂ ಉಂಟಾದುವು; ಸಾಬಿಯಾದರೆ ಏನಾಯಿತು! ಅವನಿಗೂ ಅಂತಃಕರಣವಿಲ್ಲವೇ ?

'ನನಗೆ ಮೂರು ರೂಪಾಯಿ ಕೊಡಿ!' ಸಿಂಧು ರಂಗನನ್ನು ಕೇಳಿದಳು. ರಂಗ ಐದು ರೂಪಾಯಿಯ ಒಂದು ನೋಟನ್ನು ತೆಗೆದು ಅವಳ ಕೈಯಲ್ಲಿಟ್ಟು 'ಇದನ್ನು ಸಾಬಿಗೆ ಕೊಟ್ಟು ಬಿಡು!' ಎಂದು ಹೇಳಿದ.

ಸಿಂಧು ತಾಂಬೂಲದಲ್ಲಿ ನೋಟನ್ನಿಟ್ಟು ಅದನ್ನು ಸಾಬಿಗೆ ಕೊಟ್ಟಳು. ಅದನ್ನು ತಕ್ಕೊಳ್ಳುತ್ತ ಸಾಬಿ ಹೇಳಿದ: "ಅಮ್ಮಾ, ನಿಮ್ಮ ಮಗೂನ ಸ್ವಲ್ಪ ನನ್ನ ಕಣ್ಣಿಗೆ ಹಾಕ್ತೀರಾ? ನೋಡಿ ಸಂತೋಷ ಪಡ್ತೇನೆ!"

ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನೆತ್ತಿ ಸರೋಜಮ್ಮ ಸಾಬಿಗೆ ತೋರಿಸಿದರು. ಸಾಬಿಗೆ ಆಗ ಉಕ್ಕಿ ಬಂದ ಆನಂದವು ಮಾನವತೆಗೆ ಸಂಬಂಧಿಸಿದ ಆನಂದ! ಜಾತಿ-ಪಂಥದ ಪಡಿಯಚ್ಚಿನಲ್ಲಿ ಪಾಕಹೊಂದಿದ್ದಲ್ಲ ಅದು!

* * *

ಈ ಮಾತು ಜರುಗಿ ಈಗ ಎಷ್ಟೋ ಕಾಲವಾದರೂ, ಸಾಬಿ ಅದನ್ನು ಈಗಲೂ ಒಳ್ಳೆಯ ಹುರುಪಿನಿಂದ ಹೇಳುತ್ತಿರುತ್ತಾನೆ! ಆದರೆ ಕೇಳುವವರಿಗೂ ಅಂತಹ ಸಹೃದಯತೆ ಬೇಕು! ಅದಿದ್ದರೆಯೆ ಇದಕ್ಕೆ ಸವಿ!

ಶೇಲಧಾ

ಎಂಟೀ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಸುತ್ತವೆ! ಕ್ವಿನೈನ್ ಸಿಗದ್ದರಿಂದ ವೈದ್ಯ ಡಾಕ್ಟರರು, ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗೆ ರೂ. ೧೫. ೧೦೦ಕ್ಕೆ ೧-೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಿನಲ್ಲಿ ಮಾರುವ ಏಜಂಟರು ಬೇಕು.

ಶೇಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜಂಟರು:—

ಎಸ್. ಎಲ್. (ಅಪ್ಪುರಾವ) ಧಾಕಪ್ಪ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ.

“ ಬರ್ತ್ತೀಯೇನಯ್ಯಾ ? ”

“ ಎಲ್ಲಿಗೆ ಸಾಮಿ ? ”

“ ಒಬ್ಬ ಹೆಣ್ಣುಮಗಳನ್ನು ಹೆರಿಗೆ ಆಸ್ಪತ್ರೆಗೆ ಒಯ್ಯಬೇಕು! ಆಕೆಯ ಗಂಡ ಊರಲ್ಲಿಲ್ಲ, ನಾವು ನೆರೆಮನೆಯವರು! ಆಕೆಗೆ ನಾವೀಗ ಸಹಾಯಮಾಡಬೇಕು. ನೀನೂ ಅಷ್ಟು ಪುಣ್ಯಕಟ್ಟಿಕೊ! ನೋಡು, ಏನು ಕೊಡಬೇಕು ಬಾಡಿಗೆ? ಹೆಚ್ಚು ಕೇಳಬೇಡ!”

“ ನೂರು ರೂಪಾಯಿ ಕೊಡಿ ಸಾಮಿ! ನಿಮ್ಮ ಮನೆ ಯೆಲ್ಲಿ ? ”

“ ಚಾಮರಾಜಪೇಟೆ, ಒಂದನೆಯ ಕ್ರಾಸ್! ”

“ ಸರಿ, ಹತ್ತಿ ; ಹೋಗೋಣ! ”

ಮುದುಕನಿಗೆ ಈ ಬಾಡಿಗೆಯೂ ಹೆಚ್ಚೇ ಎನಿಸಿತು ; ಆದರೆ ವಿಚಾರಕ್ಕೆ ಆಗ ಸಮಯವಿರಲಿಲ್ಲ. ಮುದುಕ ಜಟಕಾ ತಕ್ಕೊಂಡು ಮನೆಗೆ ಬಂದ.

ಮನೆಯಲ್ಲಿ ಅದೇನು ಗಾಬರಿ, ಅದೆಷ್ಟು ಗೊಂದಲ! ಅವರ ಅವಸ್ಥೆಯನ್ನು ದೇವರೇ ಬಲ್ಲ! ಸಿಂಧುವಿನ ಸ್ಥಿತಿ ಬಹಳ ಕಷ್ಟಕ್ಕಿಟ್ಟುಕೊಂಡಿತ್ತು. ಈ ಜಟಕಾ ಸಾಬಿ ಬಾರದೆ ಇನ್ನೊಬ್ಬರು ಯಾರಾದರೂ ಬಂದಿದ್ದರೆ, ಅವರು ಆಸ್ಪತ್ರೆಗೆ ಹೋಗುವ ಸಾಹಸವನ್ನೇ ಮಾಡುತ್ತಿರಲಿಲ್ಲವೇನೋ! ಈ ನಮ್ಮ ಜಟಕಾ-ಸಾಬಿ ಬಾಗಿಲಿನಲ್ಲಿ ಜಟಕಾ ನಿಲ್ಲಿಸಿ, ಅವರು ಬರುವವರೆಗೆ ಸುಮ್ಮಗೆ ಕೂಡಲಿಲ್ಲ ; ಮುದುಕನ ಹಿಂದೆ ತಾನೂ ಒಳಗೆ ಬಂದ. ಸರೋಜಮ್ಮನವರನ್ನು ಎಲ್ಲ ಸಮಾಚಾರ ವಿಚಾರಿಸಿ ತಿಳಿದುಕೊಂಡ ; ಅವರಿಗೆ ಮನೆಯವನಂತೆ ಧೈರ್ಯ ಹೇಳಿದ :

“ ಅಮ್ಮಾ, ನೀವು ಗಾಬರಿಯಾಗಬೇಡಿ! ಆಯಮ್ಮಗೆ ಐದು ನಿಮಿಷದಲ್ಲಿ ಕರಕೊಂಡು ಹೋಗ್ತೀನೆ! ನೀವು ಆ ಯಮ್ಮನ ಸೀರೆ, ರವಿಕೆ, ಉಡದ ಬಟ್ಟೆ ತಕ್ಕೊಳ್ಳಿ. ಅವರು ಹತ್ತುದಿನ ಆಸ್ಪತ್ರೆಯಲ್ಲಿರಬೇಕು. ಜಟಕಾದಲ್ಲಿ ಮೆತ್ತಗೆ ಹಾಸೋಕೆ ಏನಾದರೂ ಇದ್ದರೆ ಕೊಡಿ. ಹಳೆ! ಬೆಚ್ಚಗೆ ಹೊಚ್ಚಿರಿ ಆ ಯಮ್ಮಗೆ! ಕಷ್ಟದ ಹೊತ್ತು ಯಾರಿಗಾದರೂ ಬರೋ-ದುಂಟಮ್ಮಾ! ನನಗೂ ತಂಗೀ-ತಾಯಿ ಇದ್ದಾರೆ. ಈ ಯಮ್ಮನೂ ನನಗೊಬ್ಬ ತಂಗಿ ಇದ್ದ ಹಾಗೆ! ”

ಜಟಕಾಸಾಬಿಯ ಮಾತು ಅವರಿಗೆಷ್ಟೋ ಧೈರ್ಯ ಕೊಟ್ಟಿತು. ಸಾಬಿ ಬಂದು ಚಿಕ್ಕ ಹಾಸಿಗೆ ಮಾಡಿ ಜಟಕಾದಲ್ಲಿ ಹಾಕಿದ. ಮನೆಯ ಕಿಟಕಿಗಳನ್ನೆಲ್ಲ ಮುಚ್ಚಿದ. ಸಾಮಾನುಗಳನ್ನೆಲ್ಲ-ಸವರಿಸಿ ಹೊಂದಿಕೆಯಾಗಿಟ್ಟ. ಒಳಗಿನ ಬಾಗಿಲುಗಳನ್ನಿಕ್ಕಿ, ‘ಬನ್ನಿ ತಾಯಿ, ಹೋಗೋಣ!’ ಎಂದು ಸಿಂಧುವಿನ ಎದುರು ಬಂದು ನಿಂತ. ಸಿಂಧುವನ್ನು ತಂದು ಗಾಡಿಯಲ್ಲಿ ಕುಳ್ಳಿರಿಸಿದರು. ಗಾಡಿ ಹೊರಟಿತು. ಸಾಬಿ ಗಾಡಿಯನ್ನು ಬಹು ಜಾಗರೂಕತೆಯಿಂದ—ಆದರೂ ಆದಷ್ಟು ಜಾಗ್ರತೆಯಾಗಿ—ತಂದ.

ಸಿಂಧುವನ್ನು ಡಾಕ್ಟರ ಸ್ವಾಧೀನಕ್ಕೆ ಒಪ್ಪಿಸಿ, ಸರೋಜಮ್ಮ ಮತ್ತು ಮುದುಕ ಆಸ್ಪತ್ರೆಯ ಹೊರಗೆ ಬರುವವರೆಗೆ, ಜಟಕಾ ಸಾಬಿ ಬಾಡಿಗೆಗಾಗಿ ಕಾದುಕೊಂಡೇ ಇದ್ದ. ಸಾಬಿಗೆ ಬಾಡಿಗೆ ಕೊಡದೆ ಹಾಗೇ ನಿಲ್ಲಿಸಿದ್ದೇ ಅವರಿಗೆ ಮೊದಲು ಲಕ್ಷ್ಯಕ್ಕೆ ಬರಲಿಲ್ಲ! ಸಾಬಿ ತಿಳಿದುಕೊಂಡ: ‘ ಮುದುಕ ಮರಳಿ ಮನೆಗೆ ಹೋಗಬಹುದು, ಅದಕ್ಕಾಗಿ ಜಟಕಾ ನಿಲ್ಲಿಸಿಕೊಂಡಿರಬೇಕು! ’ ಎಂದು. ಜಟಕಾ ಕಣ್ಣಿಗೆ ಬಿದ್ದಮೇಲೆ, ಸರೋಜಮ್ಮ ಮನಸ್ಸಿನಲ್ಲಿಯೆ ವ್ಯಥೆಪಟ್ಟುಕೊಂಡು, ಬಾಡಿಗೆ ಕೊಡಲು ಮುದುಕನಿಗೆ ಹೇಳಿದಳು. ಆದರೆ ಪಾಪ, ಬರುವ ಗೊಂದಲದಲ್ಲಿ ಮುದುಕ ದುಡ್ಡಿನ ಪಾಕೀಟನ್ನೇ ಮನೆಯಲ್ಲಿ ಮರೆತು ಬಂದಿದ್ದ.

“ ನೀನು ಪರ್ಸ್ನನ್ನೇ ಹ್ಯಾಗೆ ಮರೆತು ಬಂದೆ ? ”

“ ಏನೋಮ್ಮಾ, ಪರ್ಸ್ನ ತರಬೇಕೆಂದು ಪೆಟ್ಟಿಗೆಯಿಂದ ತೆಗೆದು ಹೊರಗಿಟ್ಟವನು, ಹಾಗೇ ಮರೆತು ಬಂದುಬಿಟ್ಟೆ. ಇತ್ತೀ-ಚೆಗೆ ಹೀಗೇ ಆಗುತ್ತೆ. ಎಲ್ಲ ಅಭ್ರಮ-ಸುಭ್ರಮ! ಅದರಲ್ಲಿ ಗಾಬರಿಯಲ್ಲಿ ಯಾವುದೂ ತೋಚಲಿಲ್ಲ! ”

“ ಈಗ ಹ್ಯಾಗೆ ಮಾಡೋದು ? ಇಲ್ಲಂತೂ ಯಾರೂ ಗುರ್ತಿನವರಿಲ್ಲ! ”

“ ಜಟಕಾಸಾಬಿಗೆ ನಾಳೆ ಬಾ ಅಂತ ಹೇಳಿದರೆ ? ”

“ ಹ್ಯಾಗೆ ಹೇಳೋದಪ್ಪಾ ? ಪಾಪ, ಸಾಬಿಯಾದರೂ ನಮಗಾಗಿ ಎಷ್ಟೊಂದು ತೊಂದರೆಪಟ್ಟುಕೊಂಡ! ಬಾಡಿಗೆ ತಕ್ಕೊಂಡರೂ ಹೀಗೆ ಪ್ರಸಂಗಕ್ಕೆ ಅನುಕೂಲವಾಗೋದು ಹೇಳು! ”

“ ಮತ್ತೇನು ಮಾಡಂತಿಯಾ ? ”

ಇವರಾಡುವ ಒಂದೆರಡು ಮಾತು— ಸಾಬಿಯ ಕಿವಿಯ ಮೇಲೆ ಬಿದ್ದುವು. ಸಾಬಿ ಹತ್ತಿರ ಬಂದು ಕೇಳಿದ:— “ಏನು ಅಮ್ಮನವರೆ, ಅದು ? ”

(೨೨೮ ನೇ ಪುಟದಿಂದ ಮುಂದುವರಿದುದು)

ವಾಗಿಲ್ಲ. ಹೆಚ್ಚು ವೇಗ, ಹೆಚ್ಚಿನ ವೀರವೃತ್ತಿ ಧಾಟಿಯಲ್ಲಿ ಸೇರುವಂತೆ ಅದರ ಹೊಸ ಗತ್ತು ಕಟ್ಟಬೇಕು. ಆದರೆ ಇದು ಅಶಕ್ಯಪ್ರಾಯವೇ.

ಆದ್ದರಿಂದ ನಮಗೆ ಹೊಂದಿಕೊಂಡು ರಾಷ್ಟ್ರಗೀತವಾಗಬೇಕು. ಅದರ ಅನುವಾದ ಎಲ್ಲ ಪ್ರಾಂತೀಯ ಭಾಷೆಗಳಲ್ಲಿ ಒಂದೇ ಧಾಟಿಯಲ್ಲಿ ಆಗಬೇಕು. ಅದರಲ್ಲಿಯ ಭಾವನೆಯು ಪ್ರಾತಿನಿಧಿಕವಿರಬೇಕು. ದಲಿತ ಜನಾಂಗವನ್ನು ಜಾಗೃತ-ಗೊಳಿಸಿ; ಜಾಗೃತರನ್ನು ಸಜ್ಜುಗೊಳಿಸಿ, ಸಜ್ಜರನ್ನು ಸಿದ್ಧಿಗೆ ಒಯ್ಯುವಂತೆ ಅದು ಇರಬೇಕು. ಇದು ನಮ್ಮ ಮೂರನೆಯ ಪ್ರಶ್ನೆಯ ಬಗೆಹರಿಕೆ.

“ಏನಿಲ್ಲಪ್ಪಾ, ಮುದುಕರು ಪಾಪ, ಬರುವಾಗ ಗಾಬರಿ-ಪಟ್ಟುಕೊಂಡು, ಹೊರಗೆ ಇಟ್ಟ ಸರ್ಸ್ಪ್ಟ್ ತಾರದೆ, ಹಾಗೇ ಬಿಟ್ಟು ಬಂದಿದ್ದಾರೆ. ಹ್ಯಾಗೆ ಮಾಡೋಣಾ... ಅಂತ!”

“ಪರವಾ ಇಲ್ಲಮ್ಮಾ, ಗಾಬರಿಗೆ ಯಾರಿಗಾದರೂ ಹೀಗೇ ಆಗೋದುಂಟು! ನಾನು ಮನೆಗೆ ಬಂದು ತಕ್ಕೊಂಡು ಹೋಗ್ತೀನಿ. ನೀವೇನು ಯೋಚನೆ ಮಾಡಬೇಡಿ! ನಾಳೆ ಆಯಮ್ಮನ ಗಂಡನ್ನ ತಂತೀ ಕಳಿಸಿ ಕರೆಯಿಸಿಕೊಳ್ರಮ್ಮಾ; ನಾನು ಬರ್ತೀನಿ!”

ಇಷ್ಟು ನುಡಿದವನೇ ಸಾಬಿ, ಅಲ್ಲಿ ಒಂದು ಕ್ಷಣ ಕೂಡ ನಿಲ್ಲದೆ, ‘ಚಲ್ ಬೇಟಾ’ ಎಂದು ತನ್ನ ಕುದುರೆಗೆ ಹೇಳಿ, ಜಟಕಾ ಏರಿ, ಕತ್ತಲಲ್ಲಿ ಕಾಣದಂತಾದ.

* * *

ಸಿಂಧು ಗಂಡುಮಗುವನ್ನು ಹೆತ್ತಳು— ಹತ್ತು ದಿನ ಆಸ್ಪತ್ರೆಯಲ್ಲಿದ್ದು ಮನೆಗೆ ಮರಳಿಬಂದಳು. ಅವಳು ಹಡೆದ ಮಾರನೆಯ ದಿನವೆ, ರಂಗ ಮದರಾಸಿನಿಂದ ಬಂದುಬಿಟ್ಟಿದ್ದ.

ಇಂದು ಅವನ ಮನೆಯಲ್ಲಿ ತೊಟ್ಟಿಲುಸಂಭ್ರಮ! ಸಿಂಧುವಿನ ತಾಯಿ-ಅಣ್ಣಂದಿರು ಸಮಾರಂಭಕ್ಕೆ ಬಂದಿದ್ದರು. ರಂಗ ಆಫೀಸಿಗೆ ರಜೆಗೆ ಬರೆದು, ಅವರೊಡನೆ ಚಕ್ಕಂದದಲ್ಲಿ ಕುಳಿತಿದ್ದ. ಅವನ ಮಗು ತೊಟ್ಟಿಲಲ್ಲಿ ಮಲಗಿತ್ತು. ಸಿಂಧು ಮಂಚದ ಮೇಲೆ ಒರಗಿಕೊಂಡು, ಅಂದು ಸಾಯಂಕಾಲಕ್ಕೆ ಬೇಕಾಗುವ ಕೂಸಿನ ಅಂಗಿ-ಟೊಪ್ಪಿಗೆಗಳನ್ನು ಸಿದ್ಧಪಡಿಸುತ್ತಿದ್ದಳು. ತಲೆ-ಬಾಗಿಲಲ್ಲಿ ಯಾರೋ— ‘ಸಾಮಿ’ ಎಂದು ಕೂಗಿದರು. ರಂಗ ಎದ್ದು ಕೋಣೆಯ ಹೊರಗೆ ಬಂದು ನೋಡುತ್ತಾನೆ— ಎದುರಿಗೆ ಬಾಡಿಗೆ ರೂಪಾಯಿ ಬಿಟ್ಟು ಹೋದ ಜಟಕಾ ಸಾಬಿ!

“ಏನಯ್ಯಾ, ಬಂದೆ?”

“ಬಾಡಿಗೆ ಸಾಮಿ!”

“ಆಗ ಕೊಡೋದಕ್ಕೆ ಬಂದರೆ ಬೇಡಾ ಅಂದವನು, ಈಗ ಕೇಳೋದಕ್ಕೆ ನಾಚಿಕೆ ಬರೋದಿಲ್ಲವೆ? ದಿನಹೋದರೆ ನಿನ್ನ ಬಾಡಿಗೆ ರೂಪಾಯಿ ಈಯುತ್ತೇ— ಅಂತ ತಿಳಿದಿದ್ದೀಯಾ?”

“ಆ ಬಾಡಿಗೆ ಅಲ್ಲ ಸಾಮಿ, ಬೇರೆ ಬಾಡಿಗೆ ಐತೆ! ಒಳಗೆ ಅಮ್ಮಾ ಅವರಿಗೆ ಗೊತ್ತು; ಅವರಿಗೆ ತಿಳಿಸಿ, ಅವರೆಲ್ಲ ಕೊಡ್ತಾರೆ!”

ಸಾಬಿಯ ದನಿಯು ಗುರುತು ಸಿಂಧುವಿಗೆ ಹತ್ತಿತು. ಕೂಡಲೆ ಅವಳು ಹೊರಗೆ ಬಂದಳು. ಸರೋಜಮ್ಮನೂ ಅದೇ ಹೊತ್ತಿಗೆ ಬಂದರು.

“ಅಮ್ಮಾ, ಸುಖವಾಗಿದ್ದೀರಾ?” ಸಾಬಿ ಕೇಳಿದ.

“ಸುಖವಾಗಿದ್ದೇನಪ್ಪಾ! ಎಲ್ಲಾ ನಿನ್ನ ಪುಣ್ಯ!”

ಸಿಂಧು ಕೃತಜ್ಞತಾಭಾವದಿಂದ ನುಡಿದಳು.

“ನನ್ನ ಪುಣ್ಯ ಏನು ಬಂತು ತಾಯಿ! ದೇವರು ಕಾಯೋ ಹೊತ್ತು!”

“ಬಾ, ಕೊಡಪ್ಪಾ ಇಲ್ಲಿ!”

ಸಾಬಿ ಕುಳಿತ; ರಂಗ ಮತ್ತು ಉಳಿದವರೆಲ್ಲರೂ ಆಶ್ಚರ್ಯದಿಂದ ಸಾಬಿಯನ್ನೇ ನೋಡುತ್ತಿದ್ದರು. ಸಿಂಧು ‘ಅಂದಿನ ಜಟಕಾ ಸಾಬಿ ಇವನೇ!’ ಎಂದು ಹೇಳಿದಳು. ಆ ಮಾತನ್ನು ಕೇಳಿ ಎಲ್ಲರಿಗಿಂತಲೂ ರಂಗನಿಗೆ ಸಾಬಿಯ ಬಗ್ಗೆ ಹೆಚ್ಚು ಆಶ್ಚರ್ಯವೂ ಆದರವೂ ಉಂಟಾದುವು; ಸಾಬಿಯಾದರೆ ಏನಾಯಿತು! ಅವನಿಗೂ ಅಂತಃಕರಣವಿಲ್ಲವೇ?

‘ನನಗೆ ಮೂರು ರೂಪಾಯಿ ಕೊಡಿ!’ ಸಿಂಧು ರಂಗನನ್ನು ಕೇಳಿದಳು. ರಂಗ ಐದು ರೂಪಾಯಿಯ ಒಂದು ನೋಟನ್ನು ತೆಗೆದು ಅವಳ ಕೈಯಲ್ಲಿಟ್ಟು ‘ಇದನ್ನು ಸಾಬಿಗೆ ಕೊಟ್ಟು ಬಿಡು!’ ಎಂದು ಹೇಳಿದ.

ಸಿಂಧು ತಾಂಬೂಲದಲ್ಲಿ ನೋಟನ್ನಿಟ್ಟು ಅದನ್ನು ಸಾಬಿಗೆ ಕೊಟ್ಟಳು. ಅದನ್ನು ತಕ್ಕೊಳ್ಳುತ್ತ ಸಾಬಿ ಹೇಳಿದ: “ಅಮ್ಮಾ, ನಿಮ್ಮ ಮಗೂನ ಸ್ವಲ್ಪ ನನ್ನ ಕಣ್ಣಿಗೆ ಹಾಕ್ತೀರಾ? ನೋಡಿ ಸಂತೋಷ ಪಡ್ತೀನಿ!”

ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನೆತ್ತಿ ಸರೋಜಮ್ಮ ಸಾಬಿಗೆ ತೋರಿಸಿದರು. ಸಾಬಿಗೆ ಆಗ ಉಕ್ಕಿ ಬಂದ ಆನಂದವು ಮಾನವತೆಗೆ ಸಂಬಂಧಿಸಿದ ಆನಂದ! ಜಾತಿ-ಪಂಥದ ಪಡಿಯಚ್ಚಿನಲ್ಲಿ ಪಾಕಹೊಂದಿದ್ದಲ್ಲ ಅದು!

* * *

ಈ ಮಾತು ಜರುಗಿ ಈಗ ಎಷ್ಟೋ ಕಾಲವಾದರೂ, ಸಾಬಿ ಅದನ್ನು ಈಗಲೂ ಒಳ್ಳೆಯ ಹುರುಪಿನಿಂದ ಹೇಳುತ್ತಿರುತ್ತಾನೆ! ಆದರೆ ಕೇಳುವವರಿಗೂ ಅಂತಹ ಸಹೃದಯತೆ ಬೇಕು! ಅದಿದ್ದರೆಯೆ ಇದಕ್ಕೆ ಸವಿ!

ಶೀಲಧಾ

ಎಂಟೀ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳೆಸುತ್ತದೆ! ಕ್ವಿನೈನ್ ಸಿಗದ್ದರಿಂದ ವೈದ್ಯ ಡಾಕ್ಟರರು, ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗೆ ರೂ. ೧೫. ೧೦೦ಕ್ಕೆ ೧-೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಿನಲ್ಲಿ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜಂಟರು :—

ಎಸ್. ಎಲ್. (ಅಪ್ಪುರಾವ) ಧಾಕಪ್ಪ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ.

ಭವಿಷ್ಯದ ಭ್ರಾಂತಿ

(ಹರಟೆ)

ಶ್ರೀ. ಎನ್. ಕೆ. ಕುಲಕರ್ಣಿ

ಒಟ್ಟಿನ ಮೇಲೆ, ಭವಿಷ್ಯ ಪ್ರಪಂಚದಲ್ಲಿ ಕಂಡು ಬರುವ ಸಂಗತಿಗಳು ಏನು? ಭವಿಷ್ಯವಾದಿಯ ಚಾಣಾಕ್ಷತನ; ಭವಿಷ್ಯ ಕೇಳುವವರ ಬುದ್ಧಿಯ ದೌರ್ಬಲ್ಯ! ಆರೋಗ್ಯಕ್ಕೆ ವೈದ್ಯಶಾಸ್ತ್ರದ ಆವಶ್ಯಕತೆ ಇಲ್ಲ; ಸುಖಜೀವನಕ್ಕೆ ಜ್ಯೋತಿಷವು ಬೇಕಾಗಿಲ್ಲ!

ಜ್ಯೋತಿಷ್ಯವನ್ನು ಕೇಳುವುದರಲ್ಲಿ ನನಗೆ ಸಾಕಷ್ಟು ಹುಚ್ಚು. ಅದರಲ್ಲಿ ವಿಶ್ವಾಸವೂ ತಕ್ಕಮಟ್ಟಿಗೆ ಬೆಳೆದಿದೆ. ಯಾಕೆಂದರೆ ಹಲವಾರು ಜ್ಯೋತಿರ್ವಿದ್ವಾನರು ನನಗೆ ಹೇಳಿದ ಭವಿಷ್ಯದಲ್ಲಿ, ಆಗಾಗ ಒಂದೆರಡು ಅನಿಷ್ಟ ಸಂಗತಿಗಳು ಸತ್ಯವೆಂದು ನನ್ನ ಪ್ರತ್ಯಯಕ್ಕೆ ಬಂದಿವೆ. ಈ ಅನಿಷ್ಟ ಸಂಗತಿಗಳು ನಿಜವಾಗಿ ಪರಿಣಮಿಸಿದುದರಿಂದಲೆ, ಒಳ್ಳೆಯ ಸಂಗತಿಗಳೂ ಯಾಕೆ ನಿಜವಾಗಬಾರದೆಂಬ ಹಟ ನನಗೆ!

ಮನುಷ್ಯ ಯಾವಾಗಲೂ ಆಶಾವಾದಿ. ತನ್ನ ಆಪ್ತ-ರೋಗಿಯ ನಾಡಿ ನಿಂತು ಕೈ ಬಿಡುವ ಹೊತ್ತು ಬಂದಿದ್ದರೂ, ಮತ್ತೂ ಅವನು ಬದುಕಬಹುದೆ?—ಎಂಬ ಆಶೆಯಿಂದಲೆ ಭವಿಷ್ಯವಾದಿಯ ಬಳಿಗೆ ಹೋಗುತ್ತಾನೆ. ಆಗ ಜ್ಯೋತಿಷಿ ಏನಾದರೂ ಅನಿಷ್ಟ ಸಂಭವಿಸಬಹುದೆಂದು ಹೇಳಿದರೆ, ಅವನ ಮುಂದೆ ಇವನು ಜಡೆಯನ್ನೆ ಅಪ್ಪಳಿಸಬಹುದು. ಸಾಯುವುದೇ ಖಂಡಿತವೆಂದಿದ್ದರೆ ಅವನು ಜ್ಯೋತಿಷಿಯ ಬಳಿಯೇ ಯಾಕೆ ಹೋಗುವ? ಅವನಿಗೆ ಬೇಕು, ಆಶಾಕಿರಣ! 'ರೋಗಿಗೆ ಖಂಡಿತ ವಾಸಿಯಾಗುತ್ತದೆ,' ಎಂದು ಜ್ಯೋತಿಷಿ ಹೇಳಲೇಬೇಕು. ಆಗಲೆ ಅವನಿಗೆ ಸಮಾಧಾನ. ತದ್ವಿರುದ್ಧವಾಗಿ, ಆ ಮೇಲೆ ರೋಗಿ ಕೈಬಿಟ್ಟರೂ ಚಿಂತೆಯಿಲ್ಲ. ಆದರೆ ಇದ್ದುದನ್ನು ಇದ್ದಂತೇ ಹೇಳಿಬಿಟ್ಟರೆ, ರೋಗಿಗಿಂತ ಭವಿಷ್ಯ ಕೇಳುವವನೇ ಮೊದಲು ಕೈಬಿಡಬಹುದು.

ಜ್ಯೋತಿಷಿಗಳಾದರೂ ಯಾವಾಗಲೂ ಪಾಮರ ಮಾನವನಿಗೆ ಆಶಾವಾದಿತ್ವದ ಅಮೃತಪಾನವನ್ನು ಮಾಡಿಸುವರೆಂದೇ, ಇಂದಿನ ಸಮಾಜದಲ್ಲಿ ಜ್ಯೋತಿಷಿಗಳು ಬ್ರಹ್ಮನ ಹೆಗಲೆಣೆಯಾಗಿ ಮೆರೆಯುತ್ತಲಿದ್ದಾರೆ. ಜ್ಯೋತಿಷಿಗೆ ಜ್ಯೋತಿಷಶಾಸ್ತ್ರ ಬರಲಿ ಬಿಡಲಿ, ಮೊದಲು ಮಾನಸಶಾಸ್ತ್ರ ಸಂಪೂರ್ಣ ಬರುತ್ತಿರಬೇಕು. ಯಾಕೆಂದರೆ ಪ್ರಶ್ನೆ ಕೇಳುವವನ ಮನೋದೌರ್ಬಲ್ಯವನ್ನು ಅವನು ಸಂಪೂರ್ಣ ಅರಿತುಕೊಂಡಿರಬೇಕು. ಬಿಸಗೊಂಬಾತನಿಗೆ ಬೇಕಾದುದು ಲಾಟ್ರಿಯಲ್ಲಿ ಧನಪ್ರಾಪ್ತಿ, ಹೆಂಡಿರು-ಮಕ್ಕಳ ಚಿರಂತನ ಸೌಖ್ಯ, ನೌಕರಿ-ಧಂದೆಗಳಲ್ಲಿ ಉತ್ತರೋತ್ತರಾಭಿವೃದ್ಧಿ—ಒಟ್ಟೇನು ಮುಟ್ಟಿದ್ದೆಲ್ಲಾ ಚಿನ್ನವಾಗುವ ಕೈವಾಡ—ಇವು ಬೇಕು. ತಾನು ದಿಲ್ಲಿಯ ಬಾದಶಹನಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಒಬ್ಬನು ಜ್ಯೋತಿಷಿಯ ಬಳಿಗೆ ಹೋದರೆ— ಅವನಿಗೆ ಬಾದಶಾಹಿತ್ವವು ಕರತಲಾಮಲಕವಾಗಿ ದೊರೆಯುವುದೆಂದೇ ಜ್ಯೋತಿಷಿ ಹೇಳಬೇಕು. ಎಂದರೆ ಇದರಿಂದ ಅವನ ಸಾಹಸಕ್ಕೆ ಇಮ್ಮಡಿ ಉತ್ತೇಜನ ದೊರೆತು ಒಮ್ಮೊಮ್ಮೆ 'ದುಃಸಾಧ್ಯ ಸಂಭಾವ್ಯ'ವೆನುವಂತಹದೂ ಸಾಧ್ಯವಾಗಬಹುದು. ಸ್ವರ್ಗ-ನರಕಗಳನ್ನು ಮನಸ್ಸೇ ಸೃಷ್ಟಿಸಬಲ್ಲುದಂತೆ—ಇಂಗ್ಲಿಷ್ ಕವಿಯೊಬ್ಬ ಹೇಳಿದ್ದಾನೆ. ಹಾಗೆ ಸ್ವರ್ಗವನ್ನೂ ಸೃಷ್ಟಿಸುವಂತಹ ಮನಸ್ಸನ್ನು ಸಿದ್ಧಗೊಳಿಸುವ ಮಂತ್ರ ಜ್ಯೋತಿಷಿಯಲ್ಲಿದ್ದರೆ ಸಾಕು, ಅವನ ಶಾಸ್ತ್ರ ಏನೇ ಹೇಳಲಿ!

ಹೀಗೆನ್ನುತ್ತಲೆ ನೆನಪಾಗುತ್ತದೆ: 'ಈ ಭವಿಷ್ಯವೂ ಒಂದು ಶಾಸ್ತ್ರವೆ?' ಎಂದು. ಮನುಷ್ಯಸಾಹಸಕ್ಕೆ ಮಿತಿ ಇಲ್ಲ. ದೇವರ ಸೃಷ್ಟಿವೈಚಿತ್ರ್ಯವನ್ನು ಕೈವಶಮಾಡಿಕೊಳ್ಳಲು ಮಾನವನು ಅಧ್ಯಾತ್ಮ, ವಿಜ್ಞಾನ, ಜ್ಯೋತಿಷ್ಯ ಎಂದು ಕ್ಷಣಕ್ಷಣಕ್ಕೆ ಸಾಹಸಪಡುತ್ತಿದ್ದಾನೆ. ಇಷ್ಟಾದರೂ ಮಾನವನು ಪ್ರಕೃತಿಯ ಗುಟ್ಟನ್ನು ಎಷ್ಟರ ಮಟ್ಟಿಗೆ ಅರಿತಿದ್ದಾನೋ ದೇವರೇ ಬಲ್ಲ. ನಾಳಿನ ತೆರೆಯನ್ನು ಸರಿಸಬಲ್ಲವರಾರು? ಭವಿಷ್ಯದ ಗರ್ಭವನ್ನು ಬಗಿಯಬಲ್ಲವರಾರು? ನಾಳಿನ ಗುಟ್ಟನ್ನು ಮನುಷ್ಯನು ಇಂದೇ ಅರಿತುಕೊಳ್ಳಬಲ್ಲನಾದರೆ, ನಾಳೆ ಆದರೂ ಅರುಣೋದಯವಾಗುತ್ತಿತ್ತೋ ಇಲ್ಲವೋ—ಅಥವಾ ಮನುಷ್ಯನಿಗೆ ಮುಂದಾಗುವುದನ್ನು ತಿಳಿದುಕೊಳ್ಳುವ ಮಂತ್ರವು ಸಾಧಿಸಿತೆಂದು ಇಟ್ಟುಕೊಂಡರೂ ಅದರಲ್ಲಿ ನಿಜವಾದ ಸ್ವಾರಸ್ಯವಿದೆಯೆ? ನಾಳಿನ ಬಾನ್-ಬಯಲಲ್ಲಿ ಆಶೆಯ ಮಿಂಚೂ ಇರಬಹುದು, ನಿರಾಸೆಯ ಸಿಡಿಲೂ ಇರಬಹುದು. ಅದನ್ನು ಅಜ್ಞಾನದ ಮೋಡವು ಯಾವಾಗಲೂ ಹೊದ್ದುಕೊಂಡಿರುವುದೆಂದೇ ನಾವು ಬದುಕಿಕೊಂಡಿದ್ದೇವೆ. ತಾನು ನಾಳೆ ಸಾಯುವೆನೆಂದು ಇಂದು ತನಗೆ ತಿಳಿದರೆ, ಒಂದು ವೇಳೆ ಅವನ ಭವಿಷ್ಯವು ಸುಳ್ಳಾಗಿ ನಾಳೆ ಸಾಯುವವನು ಇಂದೇ ಸಾಯಬಹುದು! ನಾಳೆಯ ಬೀಗಮುದ್ರೆಯನ್ನು ಒಡೆಯದಿರುವುದೇ ಬಾಳಿನ ಸಾರತತ್ತ್ವ. ಅಜ್ಞಾನಭಾಂಡಾರವೇ ನಮ್ಮ ಕಲ್ಯಾಣಮಂಟಪವೆಂಬ ಮಾತು ಸುಳ್ಳಲ್ಲ. ಇದರಲ್ಲಿಯೆ ಜೀವನದ ಸ್ವಾರಸ್ಯವಿದೆ. ಇದನ್ನೇ ತಪಸ್ವಿಗಳು ಮಾಯೆಯೆಂದು ಕರೆದರು; ತಾತ್ತ್ವಿಕರು ಮಿಥ್ಯೆಯೆಂದು ಬಗೆದರು. ಈ ಮಾಯೆಯೇ ನಮ್ಮನ್ನು ಬದುಕಿನ ಕಗ್ಗತ್ತಲೆಯಲ್ಲಿ ಆಶಾಕಿರಣ

ವನ್ನು ಹುಡುಕಹಚ್ಚುತ್ತದೆ. ಜ್ಞಾನಯೋಗದಿಂದ ಈ ಮಾಯೆಯನ್ನು ಹರಿದು ಬಿಸುಡುವ ವೀರರಿರಬಹುದು; ಆದರೆ ಅವರಿಗೆ ಜೀವನದ ಸ್ವಾರಸ್ಯವೇ ತಿಳಿದಿಲ್ಲವೆನ್ನಬೇಕು. ಸಂಸಾರವು ಅಸಾರವೆಂದೇ ಅವರ ಕಲ್ಪನೆ. ಆದರೆ ಅಸಾರದಲ್ಲಿಯೆ ಸಾರದ ಸೆಲೆಯನ್ನು ಹುಡುಕಬೇಕು, ಇದೀಗ ರಸಿಕತೆಯ ಲಕ್ಷಣ; ಬಾಳಿನ ಗುಟ್ಟು!

ಅಂತೂ ಸಂಸಾರದಲ್ಲಿ ಸಾರವನ್ನು ಹುಡುಕುವ ಸಂಸಾರಸಾರ-ಹಂಸಗಳಿಗೆ ಜ್ಯೋತಿಷವು ಒಂದು ಉತ್ತಮ ಸಾಧನವಾಗಿದೆ.

ಜ್ಯೋತಿಷ್ಯವು ಶಾಸ್ತ್ರವೇ ಆಗಿದ್ದರೆ 'ಪಂಚ ನ ಭವತಿ' ಎಂಬ ಶಿವನ ಶಾಪವೇಕೆ ಬರಬೇಕೋ ಅದಕ್ಕೆ ಒಮ್ಮೊಮ್ಮೆ! ಅಂತೂ ನನ್ನ ಅನುಭವಕ್ಕೆ ಬಂದ ಮಾತೆಂದರೆ, ನಮ್ಮ ಜ್ಯೋತಿರ್ವಿದ್ವಾನರು ಹೇಳಿದ ಭವಿಷ್ಯವಾಣಿಯಲ್ಲಿ, ಒಳ್ಳೆಯ ಭವಿಷ್ಯವೆಲ್ಲಾ 'ಪಂಚ ನ ಭವತಿ'ಯಲ್ಲಿ ಬಂದು ಹೋಗಿದೆ, ಅನಿಷ್ಟವೆಲ್ಲಾ 'ಪಂಚಭವತಿ' ಯಲ್ಲಿ ಬಂದೇ ತೀರಿದೆ. ಆದರೂ ಭವಿಷ್ಯವನ್ನು ಕೇಳುವುದನ್ನು ಮಾತ್ರ ನಾನು ಬಿಟ್ಟಿಲ್ಲ. ಕೆಲವರಲ್ಲಿ ಅಂಗ-ಸಾಮುದ್ರಿಕವನ್ನೂ ಕೇಳಿದ್ದೇನೆ, ಕೆಲವರಿಗೆ ಕೈಯನ್ನೂ ತೋರಿಸಿದ್ದೇನೆ; ಮತ್ತೆ ಕೆಲವರು ರಮಲದವರನ್ನೂ ಕಾಣದೆ ಇಲ್ಲ. ಒಬ್ಬರು ಮುಖನೋಡಿ ಭವಿಷ್ಯ ಹೇಳುವವರು ಬಂದಿದ್ದರು, ಎಂದರೆ ಇಂಗ್ಲಿಷಿನಲ್ಲಿ 'ಫಿಜಿಯಾಗ್ನಮಿಸ್ಟ್' ಎನ್ನುವರಲ್ಲಾ ಅವರು! ಮುಖನೋಡಿ ಭವಿಷ್ಯ ಹೇಳಿದರೂ, ಕಣ್ಣುಮುಚ್ಚಿ ಭವಿಷ್ಯ ಹೇಳುವವರಷ್ಟೆ ಅವರೂ ಸತ್ಯವಾಗಿ ಹೇಳಿದರು.

ಇತ್ತೀಚೆಗಂತೂ ನನ್ನ ಪರಮ ಮಿತ್ರರೊಬ್ಬರೇ ನನ್ನ ಪಾಲಿನ ಭವಿಷ್ಯವಾದಿಗಳಾಗಿದ್ದಾರೆ; ಅಥವಾ ಭವಿಷ್ಯವಾದಿಗಳೊಬ್ಬರೇ ನನ್ನ ಪರಮಮಿತ್ರರಾಗಿದ್ದಾರೆಂದರೇ ಹೆಚ್ಚು ಸರಿಹೋಗ-ಬಹುದು. ಹಲ್ಲುಸೂಲಿ, ಕಣ್ಣುಬೇನೆಗಳನ್ನು ಮೊದಲ್ಗೊಂಡು ಅಘಟಿತ ಘಟನೆಯ ವರೆಗೂ ಅವರನ್ನೆ ನಾನು ವಿಚಾರಿಸುತ್ತೇನೆ. ನನಗೆ ಸ್ವಲ್ಪ ಬಹಿರ್ದೆಶೆಯ ಬಾಧೆಯಾದಾಗ, ಸರಿಯಾಗಿ ಆಗಿನ ಮಂಗಳನು ಸುಮಾರಾಗಿರುತ್ತಾನೆ. ಮೊನ್ನೆ ಮೊನ್ನೆ ನನಗೆ 'ಪಂಚಗ್ರಹಯೋಗವಿದೆ, ಹುಷಾರಿ!' ಎಂದು ನನ್ನ ಮಿತ್ರರು ಎಚ್ಚರ ಕೊಟ್ಟಿದ್ದರು. ಆದರ ಯೋಗ ೪೮ ತಾಸು ಇದ್ದಿತಂತೆ. ನನಗೆ ೪೮ ತಾಸು ಕಳೆಯುವ ವರೆಗೂ ಅದೇ ಹಳವಂಡ— ಎಲ್ಲಿ ಏನಾಗುವುದೋ ಎಂದು. ೪೮ನೆಯ ತಾಸು ಕಳೆಯಿತೆಂದು, ಬ್ರಹ್ಮಾನಂದದಿಂದ ಸುಷುಪ್ತಿ ಸುಖಪಡೆಯಲೆಂದು ಮುಸುಕು ಎಳೆದೆ; ಮುಸುಕಿನಲ್ಲಿಯೆ ಚಟ್ಟನೆ ಒಂದು ಚೇಳು ಹೊಡೆಯಿತು. ಇದಕ್ಕೇನೆನ್ನುವಿರಿ? ಅಂತೂ ಪಂಚಗ್ರಹದ ಅನಿಷ್ಟ ಒಂದು ಚೇಳಿನ ಮೇಲೇ ಹೋಯಿತೆಂದು ಸಮಾಧಾನ ಹೊಂದಿದೆ. ನಾನೂ ನನ್ನವಳೂ ಬಡಿದಾಡದೆ ಒಂದು ವಾರವೇನೂ ಕಳೆ-ದಿರುವುದಿಲ್ಲ; ಅದಕ್ಕೆ ಸಕಾರಣವಾಗಿ ನನ್ನ ಮಿತ್ರರು ಶನಿ-ಮಂಗಳ ಯುತಿಯೊ, ರಾಹುವಿನ ಅಂತರ್ದಶೆಯೊ ಎಂದು ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸುತ್ತಾರೆ.

ಹಾಯ್ ಹಾಯ್! ಮೊನ್ನೆ ಮೊನ್ನೆ ನನಗೆ '**ಸಾಡೇಸಾತ**' ಸುರುವಾಗಿದೆ. ಸರಿ, 'ಸಾಡೇಸಾತ-ಸುರುವಾಯಿತು' ಎಂಬ ಚಿಂತೆಯಿಂದಲೆ ಆರಂಭವಾಯಿತು, ನನ್ನ 'ಸಾಡೇಸಾತ'! ಆದರೂ ನನ್ನ ಜನ್ಮಕುಂಡಲಿಯಲ್ಲಿ ಶನಿ ಸ್ವಗೃಹಿಯಾಗಿದ್ದನಂತೆ; 'ಸಾಡೇಸಾತ'ಇದ್ದರೂ ಅಂಜುವ ಕಾರಣವಿಲ್ಲೆಂದು ನನ್ನ ಮಿತ್ರರು ಹೇಳಿದರು. ಸಾಡೇಸಾತ ಸ್ವಲ್ಪ ಬಿಟ್ಟಂತಾಗಿ ಮನಸ್ಸಿಗೆ ಹಾಯೆನಿಸಿತು. ಹೀಗೆ ಹಾಯೆನಿಸಿದಾಗಲೆ ಆ ತಿಂಗಳು ವಿಪರೀತ ಹಣ-ಕಾಸಿನ ತೊಂದರೆ! ಎಂದರೆ ತಿಂಗಳ ಪಗಾರ ಬಂದಿತ್ತು; ಆದರೆ ಸಾಡೇಸಾತಕ್ಕೆ ಸಮತೂಕವಾಗಿ ಇನ್ಶೂರನ್ಸಿನ ಕಂತು! ಕಂತು ತುಂಬಿದ್ದಾಯಿತು; ಆ ತಿಂಗಳಿನ ನಮ್ಮ ಪಗಾರವೆಲ್ಲಾ ಕಂತೆಗೇ ಕೂತಿತು. ನಮ್ಮ ಮಿತ್ರರನ್ನು ಕಂಡೆ; 'ಸಾಡೇಸಾತಕ್ಕೆ ಸರಿಯಾಗಿ ಆರಂಭದಲ್ಲಿ ಹಣದ ಅಡಚಣಿ ಬಂದು, ಮನಸ್ಸಿಗೆ ವ್ಯಾಪ ಆಗಲೇಬೇಕು'—ಎಂದು ನುಡಿದರು. 'ಎಲಾ ಇವನ!' ನಾನೆಂದುಕೊಂಡೆ—ನಾನು ಇನ್ಶೂರನ್ಸ್ ಇಳಿಸಿರುವೆನೆಂದು ಈ ಶನಿಮಹಾರಾಯನಿಗೆ ಹೇಗೆ ಗೊತ್ತಾಯಿತು? ಅವನು ಕಾಡ-ಬೇಕೆಂದೇ ನಾನು ಕಂತು ತುಂಬಿದೆನೊ, ನಾನು ಕಂತು ತುಂಬಿದೆ-ನೆಂದೇ ಅವನು ಕೈ ತೋರಿಸಿದನೋ—ಯಾವುದೂ ಅರ್ಥವಾಗ-ಲಿಲ್ಲ. 'ಈಗೇನೋ ಕಷ್ಟದಿಂದ ಹಣ ತುಂಬಿದೆ; ಮುಂದೆ ಇನ್ಶೂರನ್ಸು ಫಲಿತವಾಗಿ ಕೈಗೆ ಬಂದ ಮೇಲೆ?— ಆಗೇನು ಮಾಡುವನು ಶನಿ?' ಎಂದು ನನ್ನ ಮಿತ್ರರಿಗೆ ನಾನು ಸವಾಲು ಹಾಕಿದೆ. ಆದರೆ 'ಆಗ ಆ ಹೊತ್ತಿಗೆ ಸರಿಯಾಗಿ ನಿಮಗೆ ಒಳ್ಳೇ ಶನಿಯು ಬರಲಿಕ್ಕೇ ಬೇಕು' ಎಂದರವರು.

ಏನೀ ಗ್ರಹಗಳ ಕಾಟ? ಅಖಿಲಕೋಟಿ ಬ್ರಹ್ಮಾಂಡದಲ್ಲಿರತಕ್ಕ ೮೪ ಲಕ್ಷ ಯೋನಿಯಿಂದ ಹೊರಬಂದ ಜೀವಜಂತುಗಳದೆಷ್ಟೊ! ಇಷ್ಟೆಲ್ಲಾ ಜೀವರಾಶಿಯ ಒಂದು ಅಣುವನ್ನೂ ಬಿಡದೆ ಈ ನವ-ಗ್ರಹಗಳು ಚಿನ್ನಟ್ಟುತ್ತವೆಯೆಂದರೇನು ಸಾಮಾನ್ಯ ಮಾತೇ? ಮನೆಯಲ್ಲಿ ಅರ್ಧ ಡಜನ್ನಿಗಿಂತ ಒಂದು ಮಗು ಹೆಚ್ಚಾದರೆ, ಮಕ್ಕಳ ಹೆಸರೇ ನಮಗೆ ಮರೆತು ಹೋಗುತ್ತವೆ; ಅಂತಹುದು, ಈ ಗ್ರಹಗಳು ಅವರವರಿಗೆ ಚಾಚೂ ತಪ್ಪದಂತೆ ನ್ಯಾಯ-ನೀತಿಗೆ ಚ್ಯುತಿಬಾರದಂತೆ ಹೇಗೆ ಪರಿಣಾಮವನ್ನೆಸಗುವುವೊ! ಅದೂ ಹೋಗಲಿ, ಎರಡೂ ಎರಡೂ ನಾಲ್ಕು—ಎಂಬಷ್ಟು ಸತ್ಯವಾಗಿ ಇಂತಹ ಗ್ರಹಗಳ ಯೋಗದ ಭವಿಷ್ಯ ಇಂತಿಷ್ಟೇ ಎಂದು ಕೋಷ್ಟಕವನ್ನು ಬರೆದಿಟ್ಟ ಮಹನೀಯರಾದರೂ ಯಾರು? ಹೇಗೆ ಬರೆದಿಟ್ಟರು? ಯಾವ ಸಂಶೋಧಕನ ತಲೆಗೆ ಹೊಳೆದೀತು ಈ ಸಮಸ್ಯೆ?

ಮುಂಚೊಮ್ಮೆ ಕಾಲವಿತ್ತು: ಸರಕಾರಕ್ಕೆ ಬರೆದು ಗೀಚುವ ಕಾರಕೂನರು ಬೇಕಿದ್ದರು. ಆಗ ಮ್ಯಾಟ್ರಿಕ್ ಆದವರನ್ನು ಕೂಡ ಕರೆಕರೆದು ನೌಕರಿ ಕೊಟ್ಟರಂತೆ. ಈಗಿನ ಎಂ. ಎ., ಪಿ. ಎಚ್. ಡಿ. ಯವರಿಗೆ ಸಹ ಸರಕಾರೀ ನೌಕರಿಯೆಂದರೆ

ಮುಗಿಲ ಮಲ್ಲಿಗೆಯಾಗಿದೆ. ಮೋಜು ನೋಡಿರಿ, ಆಗ ಹುಟ್ಟಿದವರಿಗೆಲ್ಲಾ ಸರಕಾರಿ ನೌಕರಿ ಯೋಗವುಳ್ಳ ಗ್ರಹಗಳೇ ಇದ್ದುವಂತೆ. ಈಗಿನ ಪರಿಸ್ಥಿತಿಗೆ ಸರಿಯಾಗಿ ಇಂದಿನ ಗ್ರ್ಯಾಜುಯೇಟರಿಗೂ ಆ ಗ್ರಹಗಳು 'ನಸ್ತು' ಕೊಟ್ಟಿವೆ! ಸರಕಾರದ ಆಗು-ಹೋಗುಗಳನ್ನು ಸಹ ಈ ಗ್ರಹಗಳು ಕಂಡುಕೊಳ್ಳುವುವಲ್ಲವೆ? ಏನೀ ಚಾಣಾಕ್ಷತನ! ಆರನೆಯ ಜಾರ್ಜ್ ಬಾದಶಹರು ಹುಟ್ಟಿದ ದಿನವೇ ಮತ್ತಾವ ಕುನ್ನಿಯೂ ಹುಟ್ಟಲಿಲ್ಲವೆ? ಆದರೆ ಆ ಕುನ್ನಿ ಕುನ್ನಿಯೆ ಆಯಿತು; ಈ ಆನೆ ಆನೆಯೇ ಆಯಿತು. ಇದಕ್ಕೂ ಸಬಲಕಾರಣವನ್ನು ನನ್ನ ಮಿತ್ರರು ಕೊಡದೆ ಇಲ್ಲ: ಆನರಲ್ಲಿ ಮತ್ತೆ ಅಂಶಕುಂಡಲಿ ಬೇರೆ ಇರುತ್ತದಂತೆ; ಇದಲ್ಲದೆ ಆ ದೇಶದ ಕುಂಡಲಿ ಇರುತ್ತದಂತೆ. ಅಂತೂ ರಾಜನು ರಾಜನಾಗುವ ಗ್ರಹವನ್ನು ಹುಡುಕಬೇಕಲ್ಲವೆ? ಪಾಪ! ವಿಂಡ್ಸರನ ಕುಂಡಲಿಯಲ್ಲಿ ರಾಜಯೋಗಕ್ಕಿಂತ 'ರಾಜಯೋಗಿ'ಯ—ಅನಂಗರಂಗನ—ಯೋಗವೇ ಪ್ರಬಲವಾಗಿದ್ದಿತೇನೊ!

ಜ್ಯೋತಿಷ್ಯಶಾಸ್ತ್ರದಲ್ಲಿ ನನ್ನ ಮಿತ್ರರು ಪಡೆದಿದ್ದ ಇನ್ನೊಂದು ಅಪೂರ್ವಸಿದ್ಧಿಯನ್ನು ಹೇಳದಿದ್ದರೆ ಈ ಲೇಖನವು ಸಾರ್ಥಕವಾದೀತೆ? ಅದೇನೆಂದರೆ ಅವರು ಪ್ರಶ್ನ-ಕುಂಡಲಿ ಹಾಕಿ ನಿಮ್ಮ ಮನದ ಇಂಗಿತವನ್ನು ಆಗಿಂದಾಗಲೇ ಹೇಳಿ ಬಿಡುತ್ತಿದ್ದರು. ನೀವು ಬೆಳಗಿನ ಲಕ್ಷ್ಮೆ ಹೋದರೆ, ಆಗಿನ ವೇಳೆಯ ಲಗ್ನಕುಂಡಲಿ ಹಾಕಿ 'ನೀವು ಇಂತಹದಕ್ಕೇ ಬಂದಿದ್ದೀರಿ' ಎಂದು ಹೇಳುವರು. ಈ ಸಂದರ್ಭದಲ್ಲಿ ಅವರು ಅನೇಕ ಸಲ ನನ್ನ ಹುಚ್ಚು ಬಿಡಿಸಿಬಿಟ್ಟಿದ್ದಾರೆ. ಆದರೆ ಬರುಬರುತ್ತ, ಈ ಪ್ರಶ್ನಕುಂಡಲಿಯಲ್ಲಿ ಜ್ಯೋತಿಷ್ಯಶಾಸ್ತ್ರಕ್ಕಿಂತ ಮಾನಸಶಾಸ್ತ್ರದ ಮೇಲೆಯೇ ಅವರು ಹೆಚ್ಚು ಅವಲಂಬಿಸುತ್ತಿದ್ದರೆಂಬುದು, ನನಗೆ ಕ್ರಮೇಣ ತಿಳಿಯಹತ್ತಿತು. ಕಲಿತಂತೆ ಊಹಾಪೋಹ ಮಾಡಿಕೊಂಡು ಜೂನ್-ಜುಲೈ ತಿಂಗಳಲ್ಲಿ ಬರುವ ತರುಣರು ಉದ್ಯೋಗದ ಪ್ರಶ್ನೆಯನ್ನು ಬಿಟ್ಟು ಉಳಿದುದನ್ನು ಕೇಳುವರೇಕೆ? ಇನ್ನು ಗೃಹಸ್ಥರಾಗಿ ನಡುವಯಸ್ಸು ವಿಾರಿದವರಿದ್ದರೆ, ಅವರಿಗೆ ಗೃಹಕೃತ್ಯವನ್ನು ಬಿಟ್ಟು ಬೇರೆ ಯಾವ ಜಾಗತಿಕ ಸಮಸ್ಯೆ ಇರಬೇಕು? 'ಗೃಹಕೃತ್ಯ' ಎಂಬ ಸ್ಥೂಲ ಶೀರ್ಷಿಕೆಯಲ್ಲಿ ಸಂತಾನದ ಆರೋಗ್ಯ, ಮಕ್ಕಳ ಮದುವೆ, ಕುಟುಂಬದ ಪ್ರಕೃತಿ, ಸ್ಥಾವರ ಜಂಗಮ ಆಸ್ತಿ, ಕೊಡು-ತಕ್ಕೊಳ್ಳುವ ವಿಚಾರ, ಇತ್ಯಾದಿ ಇತ್ಯಾದಿಗಳೆಲ್ಲ ಉಪಪ್ರಶ್ನೆಗಳೂ ಶಾಖೋಪಶಾಖೆಗಳಾಗಿ ಬರತಕ್ಕುವೆ. ನಡುಹರಯವನ್ನು ವಿಾರಿದ ಸರಕಾರೀ ನೌಕರದಾರರಿದ್ದರೆ, ಅನೇಕ ಸಲ 'ಬಢತಿ'ಯ ಪ್ರಶ್ನೆಯನ್ನು ಸಂಕಲ್ಪಿಸಿಕೊಳ್ಳದೆ ಬರಲಿಕ್ಕಿಲ್ಲವೆಂದು ನನ್ನ ಮಿತ್ರರಿಗೆ ಗೊತ್ತೇ. ಅಂತೇ ಇಂತಹ ಪ್ರಸಂಗಗಳಲ್ಲಿ 'ನಿಮ್ಮ ಪ್ರಶ್ನೆ ಈಗ, ಗೃಹಕೃತ್ಯ ಇಲ್ಲವೆ—ಅಥವಾ ಮತ್ತು—ನೌಕರಿ ಧಂದೆ ಎಂದು ತೋರಹತ್ತಲಿದೆ' ಎಂದು ಬಹು ಸೂಕ್ಷ್ಮವಾಗಿ ತಮ್ಮ ಭವಿಷ್ಯದ ಕ್ಷಿತಿಜವನ್ನು ಹಿಗ್ಗಿಸುತ್ತಿದ್ದರು. ಒಮ್ಮೊಮ್ಮೆ ತೀರ ಸಂದಿಗ್ಧವೆಂದು ತೋರಿದಾಗ, 'ಈಗ ಸ್ವಲ್ಪ ಜರೂರಿನ ಕೆಲಸವಿದೆ; ಹೊರಗೆ ಹೊರಟಿದ್ದೇನೆ'—ಎಂದು ಬಹು ನಯವಿನಯದಿಂದ—ಚಾಣಾಕ್ಷತೆಯಿಂದ ಬಂದ ವಿಷಯ-ಸನ್ನಿವೇಶಗಳನ್ನು ಜಾಳಿಸಿಬಿಡುತ್ತಿದ್ದರು.

ಆದರೂ ತಮ್ಮ ಈ ಶಾಸ್ತ್ರವನ್ನು ಸಮರ್ಥನಮಾಡಿಕೊಳ್ಳುವುದರಲ್ಲಿ ನನ್ನ ಮಿತ್ರರು ಅಸಾಮಾನ್ಯವಾದ ತರ್ಕವನ್ನು ತೋರುತ್ತಿದ್ದರು. ಈ ಪ್ರಶ್ನ ಕುಂಡಲಿಯಿಂದ ಇಡೀ ನಮ್ಮ ವಂಶಾವಳಿಯ ಚರಿತ್ರವನ್ನು ಹೇಳಲು ಸಾಧ್ಯವೆಂದು ಅವರು ಸಾಧಿಸುತ್ತಿದ್ದರು. ಯಾವ ವೇಳೆಯ ಲಗ್ನಕುಂಡಲಿಯೇನು— ಕಾಲವಾಹಿನಿಯ ಯಾವ ತೆರೆಯ ಮೇಲೆ ತೇಲಿದರೂ ಅದು ದಂಡೆಗೆ ಒಯ್ಯಲೇ ಬೇಕೆಂದು ಅವರ ಮತ. ಈ ವೇಳೆಯ ಲಗ್ನಕುಂಡಲಿಯ ಮೇಲಿಂದ ಹಿಂದಿನ ಮೂರುಜನ್ಮಗಳನ್ನೂ ಮುಂದಿನ ಮೂರು ಜನ್ಮಗಳನ್ನೂ ಸಹ ಹೇಳಲು ಸಾಧ್ಯವಿದೆಯೆಂದು ಅವರು ಸ್ಫೂರ್ತಿಯಿಂದ ಸಾಧಿಸುತ್ತಿದ್ದರು. ಹೀಗೆನ್ನುತ್ತ—ನಾನೇನೋ ಹಿಂದಿನ ಜನ್ಮದಲ್ಲಿ ಕಾಶಿಯಲ್ಲಿ ಒಬ್ಬ ಬ್ರಾಹ್ಮಣನಾಗಿದ್ದೆನಂತೆ—ಹೀಗೆಂದು ಹೇಳಿದರು. ಇರಬೇಕು, ನನ್ನ ಮಿತ್ರನ ಹೊರತು ಬಲ್ಲವರಾರು? ಅವರು ಹೀಗೆ ಹೇಳಿದ ಕೂಡಲೆ, ಈಗಲೆ ಕಾಶಿಗೆ ಹೋಗಿ ಸಾಧ್ಯವಿದ್ದರೆ ನನ್ನ ಹೆಂಡಿರು-ಮಕ್ಕಳನ್ನು ನೋಡಿ ಬರಲೇ—ಎನಿಸಿತು. ಅದರ ಹಿಂದಿನ ಜನ್ಮದಲ್ಲಿ ಮಂಗಳಲೋಕದಲ್ಲಿ ಯಾವುದೋ ಒಂದು ಪ್ರಾಣಿಯಾಗಿದ್ದೆನಂತೆ. ಅಬ್ಬಾ! ನನ್ನ ಆತ್ಮ ಎಷ್ಟು ವಿಶಾಲ— ಪುರಾತನವಾಗಿದೆಯೆಂದು ಬಲು ಆಶ್ಚರ್ಯವಾಯಿತು. 'ಮುಂದಿನ ಜನ್ಮದಲ್ಲಿ ಸಾಧ್ಯವಿದ್ದರೆ ಅಮೇರಿಕೆಯಲ್ಲಿ ಹುಟ್ಟಬಹುದಲ್ಲ?' ಎಂದೆ. ಏನೆನಿಸಿತೊ, ನನ್ನ ಮಿತ್ರರು ನಕ್ಕು— 'ಏಕೆ? ಸ್ವತಂತ್ರ ಭಾರತದಲ್ಲಿ ಜನ್ಮಕೊಡು ಎಂದು ಪರಮಾತ್ಮನನ್ನು ಪ್ರಾರ್ಥಿಸಿರಿ!' ಎಂದರು. 'ಎಲ! ನನ್ನ ಮುಂದಿನ ಮೂರುಜನ್ಮದ ಡೈರಿ ಆಗಲೇ ಸಿದ್ಧವಾಗಿದೆಯಲ್ರೀ! ಇನ್ನು ಮೇಲೆ ಪ್ರಾರ್ಥಿಸಿ ಮಾಡಬೇಕೇನು?' ಎಂದೆ. ಮತ್ತೂ ನಕ್ಕರು. ಆ ಮೇಲೆ ನಾನು ಮತ್ತೊಂದು ಪ್ರಶ್ನೆ ಮಾಡಿದೆ:—'ದೈವವು ಇನ್ನೊಂದು ಬರೆದಿಟ್ಟ ಹೊತ್ತಗೆಯಾಗಿದ್ದರೆ, ಮನುಷ್ಯಪ್ರಯತ್ನದ ಪ್ರಯೋಜನವೇನು?' ಅವರೆಂದರು:—'ಮನುಷ್ಯನನ್ನು ಕಾರ್ಯಕ್ಕೆ ಪ್ರವರ್ತಿಸುವಂತಹವೇ ಈ ಗ್ರಹಗಳು. ಬರಿ ಪ್ರಯತ್ನದಿಂದ ಕೆಲಸವಾಯಿತು ಎಂತಲ್ಲ. ಒಬ್ಬನು ಪ್ರಯತ್ನ ಮಾಡುತ್ತಾನೆ, ಇನ್ನೊಬ್ಬನು ಮಾಡುವುದಿಲ್ಲ. ಇದಕ್ಕೆ ಕಾರಣವೇನು?' 'ಗ್ರಹಗಳಾಟ—' ಎಂದು ನಾನು ಉತ್ತರ ಕೊಡದೆ ಗತ್ಯಂತರವೇ ಇದ್ದಿಲ್ಲ.

ಅವರೂ—'ಸರಿ'ಎಂದು ತಮ್ಮ ವಿಜಯಚಿಹ್ನವನ್ನು ಮುಗುಳು ನಗೆಯಲ್ಲಿ ಸೂಸಿದರು. ನಾನು ಇನ್ನೊಂದು ಪ್ರಶ್ನೆಮಾಡಿದೆ; 'ನಮ್ಮ ಜೀವನಗತಿಗೆ ಗ್ರಹಗಳೇ ಚುಕ್ಕಾಣಿಯಂತಿದ್ದ ಮೇಲೆ ನಾವು 'ಒಳ್ಳೇದು ಮಾಡಪ್ಪ'ಎಂದು ದೇವರನ್ನು ಪ್ರಾರ್ಥಿಸುವುದರಲ್ಲಿಯಾದರೂ ಪ್ರಯೋಜನವೇನು?' 'ಅದು ಮನಶ್ಶಾಂತಿಗೆ. ಶನಿಯ ಕಾಡಾಟ ಇರುತ್ತದೆ— ಶನಿಯ ಜಪಮಾಡಿರಿ ಎನ್ನುತ್ತೇವೆ; ಮಂಗಳನ ಕಾಡಾಟಕ್ಕೆ ಮಂಗಳನ ಜಪ ಮಾಡಿ

ಎನ್ನುತ್ತೇವೆ!' ಎಂದುತ್ತರ ಕೊಟ್ಟರು. ಸರಿ, ನನಗೂ ಬೇಕಾದದ್ದೇ ಇಷ್ಟು. ಜ್ಯೋತಿಷ್ಯ ಶಾಸ್ತ್ರಕ್ಕಿಂತ ಮಾನವನ ಮನಶ್ಶಾಸ್ತ್ರವೇ ಹೆಚ್ಚು ಗೊತ್ತಿರಬೇಕು—ಎಂದು. ಮನುಷ್ಯನಿಗೆ ಗ್ರಹಗಳು ಕಾಡುತ್ತವೆಯೆಂಬ ಭಯ ಹೊಕ್ಕಿತೆಂದರೆ ಗ್ರಹಗಳ ಕಾಟಾಟಕ್ಕಿಂತ ಅವನ ಮನಸ್ಸಿನ ಕಾಡಾಟವೇ ಹೆಚ್ಚಾಗುತ್ತದೆ. ಆದ್ದರಿಂದ ಗ್ರಹಗಳು ಯಾವಾಗಲೂ ನಮಗೆ ಒಳಿತನ್ನೇ ಮಾಡುತ್ತವೆಯೆಂದು ಹೊರಟರೆ, ಅಲ್ಲಿಯೆ ಶಾಂತಿಯ ನೆಲೆಯಿದೆ,ಸುಖದ ಗೊತ್ತಿದೆ !

ಇಲ್ಲಿಯ ವರೆಗೆ ಎಲ್ಲ ಜ್ಯೋತಿಷಿಗಳೂ ಮುಂದಿನ ಮಹಾ ಸೌಖ್ಯವನ್ನೆ ಸಾರಿಸಾರಿ ಹೇಳುತ್ತ ಬಂದಿರುವುದರಿಂದ, ಜ್ಯೋತಿಷ್ಯ ಶಾಸ್ತ್ರಕ್ಕೆ ಇಂದು ಅಷ್ಟೊಂದು ಮಹತ್ತ್ವ ಬಂದಿದೆ. ಕೈತೋರಿಸಿ ಅಮಂಗಳ ಹೇಳಿಸಿಕೊಂಡವರು ಯಾರೂ ಇಲ್ಲ. ಪತ್ರಿಕೆಗಳಲ್ಲಿ ಬರುವ ವರ್ಷಭವಿಷ್ಯ, ಮಾಸಭವಿಷ್ಯ, ವಾರಭವಿಷ್ಯಗಳಲ್ಲಿ ಬಹು ಜೋಕೆ-ತೂಕಗಳಿಂದ ಭವಿಷ್ಯ ಬರೆಯಲ್ಪಟ್ಟಿರುತ್ತದೆ. 'ಪ್ರಕೃತಿಗೆ ಸ್ವಲ್ಪ ಅನಾರೋಗ್ಯ, ಆದರೂ ಪ್ರಾಪಂಚಿಕ ಸುಖ ಉತ್ತಮ; ಅಕಸ್ಮಾತ್ತಾಗಿ ದ್ರವ್ಯಲಾಭ— ನೌಕರಿ ಧಂದೆಗಳಲ್ಲಿ ಉನ್ನತಿ; ಪ್ರಯಾಣ-ಪತ್ರವ್ಯವಹಾರಗಳಲ್ಲಿ ಮಾತ್ರ ಮನಸ್ಸು ಸ್ವಲ್ಪ ಕೆಡುವ ಸಂಭವ—' ಹೀಗೆ ಹೇಳುವುವೆಂದೇ ಹನ್ನೆರಡು ರಾಶಿಯವರೂ ಪತ್ರಿಕೆಗಳನ್ನು ಕೊಳ್ಳುತ್ತಾರೆ. ನನ್ನ ಮಿತ್ರರ ಮನೆಗೆ ಅರುಣೋದಯದಿಂದ ಮಧ್ಯರಾತ್ರಿಯ ವರೆಗೆ ಬರುವ ಪ್ರಶ್ನಾರ್ಥಿಗಳು— ಒಬ್ಬರಾದರೂ ಖೇದಪಟ್ಟು ಹೊರಬೀಳುತ್ತಿರಲಿಲ್ಲ. ನನ್ನ ಮಿತ್ರರ ಮನೆಯಲ್ಲಿ ನೆರೆಯುತ್ತಿದ್ದ ಆ ತಾಂಡವ ಮಂಡಲವನ್ನು ನೋಡಿ— ಜಗತ್ತಿನ ಆಶೆ-ಆಕಾಂಕ್ಷೆಗಳು ಮೈಗೊಂಡು ಇಲ್ಲಿ ತಾಂಡವವಾಡುತ್ತಿವೆಯೊ ಎನ್ನುವಂತಿತ್ತು. ಸಂಸಾರದಲ್ಲಿ ಸುಖದ ಹಾದಿಯನ್ನು ಹುಡುಕಲು ಹೊರಟ ವೀರರವರು. ಯಾರು ಸಿರಸ್ತೇದಾರರಾದಲ್ಲಿ ವಿಶೇಷ ಲಂಚ—ಅಲ್ಲ ಲಾಭ-ವಿಲ್ಲವೆಂದು ಮಾಮಲತಿಯ ಚಾನ್ಸ್ ಕೇಳುವವರು; ಯಾರು ತಮ್ಮ ಪಂಚಮ ಪತ್ನಿಯಿಂದಲಾದರೂ ಪುತ್ರಸಂತಾನವಿದೆಯೆ—ಎಂದು ಕೇಳುವವರು; ಯಾರು ತಾವು ವ್ಯಾಪಾರದಲ್ಲಿ ಗಳಿಸಿದ ಲಕ್ಷಾವಧಿ ಹಣವನ್ನು ಹೇಗೆ ಜೋಪಾನಮಾಡಬೇಕು?—ಎಂದು ಕೇಳುವವರು; ಯಾರು ವೈದ್ಯರಿಗೆ ತೋರಿಸಬೇಕಾದ ದೇಹಾರೋಗ್ಯವನ್ನು ಕುರಿತು, ಜಪ-ತಪಗಳನ್ನು ಮಾಡುವ ವಿಧಾನ ಕೇಳುವವರು; ಯಾರು ವಧೂ-ವರರ ತಪಾಸಣೆಗಾಗಿ ರಹಸ್ಯದ ರೀತಿಗಳನ್ನು ಕೇಳುವವರು; ಯಾರು ತಮಗೆ ಸರಕಾರಿ ಕಾರಕೂನಿಕೆ ಸಿಕ್ಕು ಜನ್ಮ ಪಾವನವಾಗಬಹುದೆ ? ಎಂದು ಅಂಗಲಾಚಿ ಕೇಳುವರು, ಎಲ್ಲರೂ ಸಂತುಷ್ಟರಾಗುವಂತೆ ನನ್ನ ಮಿತ್ರರು ಹೇಳುತ್ತಿದ್ದ ಉತ್ತರವನ್ನು ಕೆಳಗಿನಂತೆ ಸಂಗ್ರಹಿಸಬಹುದು :—

'Astrology is true but astrologers may be false' ಎಂದು ನನ್ನ ಮಿತ್ರರು ಯಾವಾಗಲೂ ಆರಂಭಿಸುವ ವಿಶ್ವಾಸವರ್ಧಕ ಗುಳಿಗೆ ಇದು. ಆ ಮೇಲೆ—

'ಸದ್ಯ ಸ್ವಲ್ಪ ತ್ರಾಸ ಇದೆ, ಆದರೂ ಯತ್ನಿಸಿರಿ; ಗ್ರಹಗಳು ಉತ್ತಮವಾಗಿವೆ, ಕೆಲಸ ಆಗಲೇಬೇಕು; ಇನ್ನೊಂದು ಸ್ವಲ್ಪ ಅವಧಿಯಾದ ನಂತರ ಕೆಲಸಕ್ಕೆ ತೊಡಗಿರಿ; ನೀವು ಪ್ರಯತ್ನ ಬಹಳಮಾಡಬೇಕು; ಇದು ಸ್ವಲ್ಪ ಸಂಶಯಗ್ರಸ್ತವಾಗಿದೆ ಆದರೂ ನಿರಾಶೆಗೆ ಕಾರಣವಿಲ್ಲ—' ಈ ಮಾತಿನಿಂದ ನೊಂದುಕೊಳ್ಳುವವರಾರು? ಅವರಿಗೆ ಸಿಕ್ಕಷ್ಟೆ, ನನ್ನ ಮಿತ್ರರು ಕೊಟ್ಟಷ್ಟೆ ಸ್ಫೂರ್ತಿ. ಇದರಲ್ಲಿ ಬಂದ ಪಾಪವೇನು? ಯಾರನ್ನೂ ಎದೆಯೊಡಿಸುವಂತಿಲ್ಲ, ಯಾವ ಪ್ರಯತ್ನದ ಬೇರಿಗೂ ಬಿಸಿನೀರೆರೆಯುವಂತಿಲ್ಲ.

ಒಟ್ಟು ಈ ಭವಿಷ್ಯಪ್ರಪಂಚದಲ್ಲಿ ಕಂಡುಬರುವುದಾದರೂ ಏನು? ಭವಿಷ್ಯವಾದಿಯ ಜಾಣಾಕ್ಷತನ, ಕೇಳುವವರ ಮನೋದೌರ್ಬಲ್ಯ—ಸಂಸಾರದಾರಿದ್ರ್ಯ, ಇವೇ ಅಲ್ಲವೆ? ಭಾರತೀಯ ದಾರಿದ್ರ್ಯವು ಹೆಚ್ಚತೊಡಗಿದಂತೆ ಜನತೆಯ ಭವಿಷ್ಯಪಿಪಾಸೆಯೂ ಹೆಚ್ಚುತ್ತಿದೆ. ಸುಖದಲ್ಲಿ ಜ್ಯೋತಿಷ್ಯದ ನೆನಪಾಗುವುದಿಲ್ಲ; ಆರೋಗ್ಯದಲ್ಲಿ ವೈದ್ಯರ ನೆನಪಾಗುವುದಿಲ್ಲ. ನಾಲ್ಕೂ ಮೂಲೆಗಳಿಂದ ಆರ್ಥಿಕ, ಪ್ರಾಪಂಚಿಕ, ವ್ಯಾವಹಾರಿಕ, ಮಾನಸಿಕ ತಾಪತ್ರಯಗಳು ಪುಂಖಾನುಪುಂಖಿಯಾಗಿ ಮಾನವನನ್ನು ನಿರ್ಬಲಪಡಿಸುತ್ತಿರುವಾಗ, ಎಲ್ಲಿಂದಲೋ ಆಶೆಯನ್ನು ಹುಡುಕಿ ಕೆಡುಕನ್ನು ಮರೆತು ನೆಮ್ಮದಿಯಿಂದ ಬಾಳಬೇಕೆಂದು ಹಾತೊರೆಯುವ ಮಾನವನಿಗೆ, ಭವಿಷ್ಯವಾದಿಗಳೆಂದರೆ ಸುಲಭಸಾಧ್ಯವಾದ ಕಾಮಧೇನುಗಳಿದ್ದಂತಲ್ಲವೆ? ನಿಜವಾಗಿಯೂ ಮನುಷ್ಯನಲ್ಲಿ ಆಶಾವಾದಿತ್ವವನ್ನು ಬಿತ್ತಿ 'ಮತ್ತೆ ಟೊಂಕಕಟ್ಟು' ಎಂದು ನರರನ್ನು ಹುರಿದುಂಬಿಸುವ ಶ್ರೀಕೃಷ್ಣರಲ್ಲವೆ ಭವಿಷ್ಯವಾದಿಗಳು? ಭವಿಷ್ಯವಾದಿಯು ಕೇಡು ಒದಗುವುದೆಂದು ಹೇಳಿದಾಗಲ್ಲವೆ ಸಾಮಾಜಿಕ ಹಾನಿ ಆಗಬಹುದಾದ ಭೀತಿ? ಆದರೆ ಆತನೇಕೆ ಹಾಗೆ ಹೇಳುವನು? ಸಮಾಜ ಕಲ್ಯಾಣದ ಕಡೆಗೆ ಅವನಿಗೆ ಕಳಕಳಿಯಿಲ್ಲವೆ, ತನ್ನ ಚಿಂತೆಯಿಲ್ಲವೆ?

ಭವಿಷ್ಯಶಾಸ್ತ್ರದಲ್ಲಿ ಸತ್ಯವಿರಲಿ, ಬಿಡಲಿ! ಅದರಲ್ಲಿ ಮನುಷ್ಯನನ್ನು ಪ್ರೇರೇಪಿಸುವ ಐಂದ್ರಜಾಲಿಕ ಸಾಮರ್ಥ್ಯವಿದೆಯೆಂಬುದನ್ನು ಮಾತ್ರ ಯಾರೂ ಅಲ್ಲಗಳೆಯರು. ಅಂತೇ ಇಂದಿಗೂ— ಇಷ್ಟೊಂದು ಅನುಭವ ತಲೆಗೆ ಬಡಿದಾಗಲೂ—ನನಗೆ ಭವಿಷ್ಯದ ಭ್ರಾಂತಿ ಬಿಟ್ಟಿಲ್ಲ. ಈ ಲೇಖನವನ್ನು ಬರೆಯಹಚ್ಚಿದುದು, ಯಾವ ಗ್ರಹವೇ ಇರಲಿ,— ಅದಾವ ಗ್ರಹವೊ ನನಗೆ ಗೊತ್ತಿಲ್ಲ— ನನ್ನ ಉಜ್ವಲ ಅನುಭವವೇ ಎಂಬ ಮಾತು ಸುಳ್ಳಲ್ಲ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸು ವುದರಿಂದ, ಎಲ್ಲರ ನಂಬಿಗೆಗೂ ಹಕ್ಕುದಾರಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧-೮-೦

ಸ್ತ್ರೀ-ಪುರುಷ ಲಕ್ಷಣ, ಸಂಭೋಗಕಾಲ ನಿರ್ಣಯ, ರತಿಸಮಯದ ಹಾವ-ಭಾವಗಳು, ದ್ರಾವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧-೮-೦

ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧-೪-೦

ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧-೮-೦

ಸಂತತಿನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ. ಗೋಪಾಲಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧-೮-೦

ಸಂಭೋಗಸುಖ, ಗಂಡಹೆಂಡಿರಲ್ಲಾಗುವ ಆತ್ಮೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿಸೌಖ್ಯಕ್ಕೂ ಸಂತಾನ ಸುಪ್ರಥತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ॥ ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧-೮-೦

ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ, ಶಯನ ಇತ್ಯಾದಿ........

ಪ್ರೇಮಕಲಾ ೧-೮-೦

ಅಶ್ಲೀಲವಲ್ಲ, ಶಾಸ್ತ್ರೀಯಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧-೮-೦

ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು. ಉನ್ಮಾದ, ವೇಶ್ಯಾವೃತ್ತಿಯ ಹಾವಳಿ, ಲೈಂಗಿಕ ಹಾಗೂ ಗುಪ್ತರೋಗಗಳ ಚಿಕಿತ್ಸೆ........

ವ್ಹಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗಾಗಿ ಒಂದಾಣೆ ಅಂಚೆಯ ಚೀಟಿ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಸಾಹಿತ್ಯ ವಿಹಾರ

" ವಿಹಾರಿ "

ಸಾಹಿತ್ಯಸಂಸಾರದಲ್ಲಿ ಕಳವು; ಕೆರೂರ-ವಾಸ್ತಿಗಳವರ ಕಥೆಯ ರೀತಿ; ಮುಂಬಯಿ ವಿ. ವಿ. ನಿಲಯದ ಕನ್ನಡ ಸಂಶೋಧನ ವೇತನ; ದೇವರಾಜ ಬಹಾದ್ದೂರ್ ಬಹುಮಾನ; ಹ್ಯಾಮ್ಲೆಟ್ ಹೆಂಗುಸು!; ಮರಾಠಿ ನಾಟಕದ ಶತಸಾಂವತ್ಸರಿಕ; ಪ್ರೊ. ಅಯ್ಯಂಗಾರ್ಯರಿಗೆ ಅಭಿನಂದನೆಗಳು.... ಇ. ಇ.

★

'ಅ' ಎಂಬ ಸಾಹಿತಿಯೊಬ್ಬನು ಒಂದು ಪುಸ್ತಕವನ್ನು ಪ್ರಸಿದ್ಧಮಾಡಿದ ಕೆಲವು ದಿವಸಗಳ ತರುವಾಯ, 'ಬ' ಎಂಬ ಇನ್ನೊಬ್ಬನು, 'ಅ'ನ ಪುಸ್ತಕದಲ್ಲಿದ್ದ ವಿಷಯವನ್ನೇ ಅಲ್ಲೊಂದು ಇಲ್ಲೊಂದು ಶಬ್ದ ಬದಲಾಯಿಸಿ, ಜೇರೊಂದುಕಡೆ ತನ್ನ ಹೆಸರಿನಲ್ಲಿ ಮುದ್ರಿಸಿದ ಪಕ್ಷದಲ್ಲಿ, ಎರಡರಲ್ಲೊಂದು ಮಾತು ಸ್ಪಷ್ಟವಾಗಿರಲೇ ಬೇಕು; ಮೊದಲನೆಯದೆಂದರೆ 'ಅ'ನಿಗೆ ಪರಕಾಯಪ್ರವೇಶ ಸಾಧ್ಯವಾಗಿರಬೇಕು; ಇಲ್ಲವಾದರೆ 'ಬ'ನು ಬರೆಹಗಳ್ಳನಿರಬೇಕು— ಬರೆಯಲು ಬಾರದಿದ್ದರೂ ಬರೆಹಗಾರನೆನಿಸಿಕೊಳ್ಳುವ ಹವ್ಯಾಸವುಳ್ಳವನಾಗಿರಬೇಕು! 'ಅ'ನಿಗೆ ಒಂದುವೇಳೆ ಪರಕಾಯ ಪ್ರವೇಶ ಸಾಧ್ಯವಿದ್ದರೂ, ಸಾಹಿತಿಯಾದ ಆತನು ಒಮ್ಮೆ ಬರೆದು ಪ್ರಕಟಗೊಳಿಸಿದ್ದನ್ನೇ ಹರಕುಮುರುಕಾದ ಭಾಷೆಯಲ್ಲಿ ಮತ್ತೊಮ್ಮೆ ಬರೆದು ಪ್ರಕಟಗೊಳಿಸಲಾರನೆಂಬುದು ಸ್ಪಷ್ಟವಾಗಿದ್ದರಿಂದ, ಇಂತಹ ಸಂದರ್ಭದಲ್ಲಿ 'ಬ'ನು ಬರೆಹಗಳ್ಳನಿರಲೇಬೇಕೆಂಬ ನಿರ್ಧಾರ ನಿಃಸಂಶಯವಾಗಿ— ನೇರವಾಗಿ— ಹೊರಡುತ್ತದೆ. ಇತ್ತೀಚೆಗೆ ಇಂತಹದೊಂದು ವಿಷಯ '**ವಿಹಾರಿ**'ಯ ದೃಷ್ಟಿಗೆ ಬಿದ್ದುದನ್ನು ಓದುಗರಿಗೆ ತಿಳಿಸುವುದು— ತುಸು ನಿಷ್ಠುರದ ಕೆಲಸವಾದರೂ— ಅವಶ್ಯ ಕರ್ತವ್ಯವಾಗಿದೆ. ಇಲ್ಲಿ 'ಅ' ಎಂದರೆ, ಹಳ್ಳಿಯ ಜೀವನದ ಸೊಗಸು-ಸೌಂದರ್ಯಗಳನ್ನು ಕನ್ನಡ ಸಾಹಿತ್ಯದಲ್ಲಿ ತಂದುಕೊಟ್ಟ ಶ್ರೀ. ಗೊರೂರು **ರಾಮಸ್ವಾಮಿ ಅಯ್ಯಂಗಾರ್ಯರು**. 'ಬ' ಎಂದರೆ '**ಶರಣಸಾಹಿತ್ಯ**'ದ ಮೇ ತಿಂಗಳ ಸಂಚಿಕೆಯಲ್ಲಿ ಹಳ್ಳಿಯ ಸಾಹಿತ್ಯದ ವಿಷಯದಲ್ಲಿ ಬರೆಯಲು ಹಾತೊರೆದ ಶ್ರೀ. ತಿರುಮಲೇಶ್ವರ ಅವರು. ಈ ಬರೆಹಗಳ್ಳತನವನ್ನು ಬಯಲಿಗೆಳೆದು ತೋರಿಸುವುದಾದರೆ, ಅವರಿಬ್ಬರ ಲೇಖನದಿಂದ ಕೆಲವು ಭಾಗವನ್ನು ಉದ್ಧರಿಸಿಕೊಟ್ಟರೆ ಓದುಗರೇ ತೀರ್ಮಾನಮಾಡಿಕೊಳ್ಳಬಹುದು. ಶ್ರೀಯುತ 'ತಿರುಮಲೇಶ್ವರ' ಅವರು ೭೬ನೆಯ ಪುಟದ ಮೇಲೆ ಹೀಗೆ ಬರೆಯುತ್ತಾರೆ :—

" ನಮ್ಮ ನಾಡಿನ ಆಸ್ತಿವಾರ ಹಳ್ಳಿಯ ರೈತ. ಅವನು ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯ ವಿಶಾಲವಾದುದು, ಕೋಮಲವಾದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ನೇಹಸಮಾನತೆ, ಇವಿಷ್ಟು ಸಿಕ್ಕಿದರೆ ಸಾಕು. ಇತರ ದೇಶದ ರೈತರಿಗೆ ಸಮಾನವಾಗುವುದಂತಿರಲಿ ಅವರೆಲ್ಲರನ್ನು ಹಿಂದಿಟ್ಟು ಮುಂದೆನಿಲ್ಲುವ ಶಕ್ತಿ ಅವನಿಗೆ ಬರುವುದು. ಎಲ್ಲಿಯ ತನಕ ಅವನನ್ನು ಸುಧಾರಿತರಾದವರು ಸರಿಸಮಾನವಾಗಿ ಆರಿಸಿಕೊಂಡು ತಮ್ಮ ಜೊತೆಯಲ್ಲಿ ಕರೆದೊಯ್ದರೋ ಅಲ್ಲಿಯ ತನಕ ಆತನೂ ಶ್ರೇಷ್ಠನಾಗಿಯೇ ಇದ್ದನು. ಹಿಂದಿನ ರಾಜರು ಕೀರ್ತಿಗಳಿಸಿ ರಾಜ್ಯವಾಳಿದ್ದರೆ ಅದು ಹಳ್ಳಿಯ ರೈತನ ಸಹಾಯದಿಂದ. ರಾಜ್ಯಗಳನ್ನು ಗೆದ್ದು ಏಕಚಕ್ರಾಧಿಪತ್ಯ ಸ್ಥಾಪಿಸಿದರೂ ಅದಕ್ಕೂ ಕಾರಣನು ಅವನೇ ರೈತ. ರಾಮಾಯಣ, ಭಾರತ ಇಂಥಾ ಮಹತ್ತಾದ ಕಾವ್ಯಗಳು ಅವನಿಗೆ ತಿಳಿದಷ್ಟು ಲಲಿತವಾಗಿ, ಇಂದಿನ ಸುಧಾರಿತವರ್ಗಕ್ಕೆ ಅರಿಯದು ಎಂದರೆ ಅತಿಶಯೋಕ್ತಿಯಾಗಲಾರದು. ಅವನಿಗೆ ಅದರಲ್ಲಿ ನಂಬಿಕೆ ಇದೆ. ನ್ಯಾಯ, ಅನ್ಯಾಯ, ಸತ್ಯ, ಅಸತ್ಯ ಅವನ ಅಸಂಸ್ಕೃತ ಜ್ಞಾನಕ್ಕೆ ತಿಳಿದಷ್ಟು ಸುಲಭವಾಗಿ ಸುಸಂಸ್ಕೃತನೆನಿಸಿಕೊಂಡ ನಮಗೂ ಗೋಚರವಾಗದು. ಅವನಲ್ಲಿ ಎಷ್ಟರ ತನಕ ನಾವು ನಂಬಿಗೆ ಇಟ್ಟು ಅವನ ಶಕ್ತಿಗೆ, ನಚ್ಚಿಗೆ ಮೆಚ್ಚುತ್ತಿದ್ದೆವೊ? ಅಲ್ಲಿಯ ತನಕ ಆತ ದೇಶದಲ್ಲಿ ತಲೆಯೆತ್ತಿ ನಡೆದು ಇತರರೂ ತಲೆಯೆತ್ತಿ ನಡೆಯುವಂತೆ ಮಾಡಬಲ್ಲನು. ಅನಂತರ ಅವನ ಹಾದಿಯೂ ನಮ್ಮ ಹಾದಿಯೂ ಬೇರೆಯಾಯಿತು. ತೀರಾ ಇತ್ತ ಪಾಶ್ಚಾತ್ಯ-ಕವಿದು ಒಂದೇ ಸಂಸ್ಕೃತಿಯ ಮಟ್ಟದಲ್ಲಿದ್ದ ನಮ್ಮ ದೇಶದ ಜನರಲ್ಲಿ ಎರಡು ಭಾಗವಾಯಿತು. ದತ್ತುಕೊಟ್ಟ ಮಕ್ಕಳಂತೆ ನಾವೆಲ್ಲ ಪರಭಾಷೆಯ ಪರಸಂಸ್ಕೃತಿಯ ವ್ಯಾಮೋಹಕ್ಕೆ ಬಲಿಬಿದ್ದೆವು.... ಇತ್ಯಾದಿ "

ಇದನ್ನೋದಿದ ನಂತರ ಶ್ರೀ. ಗೊರೂರು ರಾಮಸ್ವಾಮಿಯವರ "ಹಳ್ಳಿಯ ಚಿತ್ರಗಳು" ಎಂಬ ಹೊಸ ಪುಸ್ತಕದ ೯೦-೯೧ನೆಯ ಪುಟವನ್ನು ತೆರೆದು ಓದಿ:—

ನಮ್ಮ ರೈತ ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯ ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ವಲ್ಪ ಸ್ನೇಹ, ಸ್ವಲ್ಪ ಸಮಾನತೆ ಇವು ಸಿಕ್ಕಿದರೆ ಸಾಕು; ಅವನು ಇತರ ದೇಶದ ರೈತರಿಗೆ ಸಮಾನನಾಗುವುದಂತೂ ಸರಿಯೆ— ಎಲ್ಲರನ್ನೂ ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು. ನಾವು ಎಲ್ಲಿಯವರೆಗೆ ಅವನನ್ನು ನಮ್ಮ ಸರಿಸಮಾನನಾಗಿ ಎಣಿಸಿ ನಮ್ಮ ಜತೆಯಲ್ಲಿ ಕರೆದುಕೊಂಡು ಹೋದೆವೊ ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ಶ್ರೇಷ್ಠನಾಗಿಯೇ ಇದ್ದನು. ಅಶೋಕನ ರಾಜ್ಯವನ್ನು ಕಟ್ಟಿದವನು ಅವನೇ. ಪುಲಕೇಶಿಯ ಸೈನ್ಯಕ್ಕೆ ಇತಿಹಾಸದಲ್ಲಿ ಕೀರ್ತಿ ಮನ್ನಣೆ ತಂದವನು ಅವನೇ. ಶಿವಾಜಿಯ ಜತೆಯಲ್ಲಿ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದವನೂ, ಎಂದೆಂದಿಗೂ ಮರೆಯದ ವಿಜಯನಗರ ಚಕ್ರಾಧಿಪತ್ಯವನ್ನು ಸೃಷ್ಟಿಸಿದವನೂ ಅವನೇ. ರಾಮಾಯಣ, ಭಾರತ ಅವನಿಗೆ ತಿಳಿದಂತೆ ವಿದ್ಯಾವಂತರೆನಿಸಿಕೊಂಡ ನಮ್ಮಲ್ಲಿ ಅನೇಕರಿಗೆ ತಿಳಿದಿಲ್ಲ. ನ್ಯಾಯ ಅನ್ಯಾಯಗಳು ಅವನ 'ಅಸಂಸ್ಕೃತ ಅಜ್ಞಾನಕ್ಕೆ" ಗೋಚರವಾಗುವಷ್ಟು ಸುಲಭವಾಗಿ ನಮಗೆ ಗೋಚರವಾಗುವುದಿಲ್ಲ. ಅವನಲ್ಲಿ ನಾವು ಎಲ್ಲಿಯವರೆಗೆ ನಂಬಿಕೆಯನ್ನಿಟ್ಟು ಅವನ ಶಕ್ತಿಯಲ್ಲಿ ನಂಬಿಕೆಯನ್ನೂ ನೆಚ್ಚನ್ನೂ ತೋರಿಸಿದೆವೋ, ಅಲ್ಲಿಯವರೆಗೆ ಅವನು ಜಗತ್ತಿನಲ್ಲಿ ತಾನೂ ತಲೆ ಎತ್ತಿಕೊಂಡು ನಡೆದು, ನಾವೂ ತಲೆ ಎತ್ತಿಕೊಂಡು ನಡೆಯುವಂತೆ ನಮಗೆ ಕೆಚ್ಚನ್ನು ಕೊಟ್ಟನು. ಅನಂತರ ನಮ್ಮ ದಾರಿಯೂ ಅವನ ದಾರಿಯೂ ಬೇರೆಯಾಯಿತು; ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸಂಸ್ಕೃತಿಯ ಮಟ್ಟದಲ್ಲಿದ್ದ ನಮ್ಮ ದೇಶದ ಜನ ಎರಡು ಭಾಗ ವಾಯಿತು. ದಸ್ತು ಕೊಟ್ಟ ಮಕ್ಕಳಂತೆ ನಾವೆಲ್ಲಾ ಪರಭಾಷೆ-ಪರ ಸಂಸ್ಕೃತಿಯ ವ್ಯಾಮೋಹಕ್ಕೆ ತುತ್ತಾದೆವು.... ಇತ್ಯಾದಿ."

ಉದಾಹರಣೆಗೆಂದು ಶ್ರೀ. ತಿರುಮಲೇಶ್ವರ ಅವರ ಲೇಖನದ ಒಂದು ಭಾಗವನ್ನು ಮಾತ್ರ ಎತ್ತಿ ತೋರಿಸಲಾಗಿದೆ. ಇನ್ನೂ ಕೆಲವು ಮಾತುಗಳನ್ನು ತೋರಿಸಬಹುದಾಗಿತ್ತು. ವಿಸ್ತಾರ ಭಯದ ಮೂಲಕ ನಿಲ್ಲಿಸಿದೆನೆಂಬುದನ್ನು ಲಕ್ಷ್ಯದಲ್ಲಿಟ್ಟು ಕೊಂಡು, ಅಲ್ಲಿ ಒಂದು ಶಬ್ದ— ಇಲ್ಲಿ ಒಂದು ಕ್ರಿಯಾಪದ— ಈ ರೀತಿ ಬದಲಾವಣೆ ಮಾಡಿ, ಬರೆಹಗಾರಿಕೆಯನ್ನು ಸಾಧಿಸಿದ ಬರೆಹಗಾರರ ಕೌಶಲವನ್ನು ಅಥವಾ ಕೀಳುತನವನ್ನು ಓದುಗರು ನಿರ್ಣಯಿಸಿಕೊಳ್ಳಬೇಕು. ಇಂದು ನಮ್ಮ ಕನ್ನಡ ಸಾಹಿತ್ಯವು ಹೊಸದಾರಿಗಳಲ್ಲಿ ಕಾಲಿಡುತ್ತಿದೆ ಎಂಬ ಮಾತನ್ನು ವಿಮರ್ಶಕರು ಮೇಲಿಂದ ಮೇಲೆ ಹೇಳುವುದುಂಟು. ಸಾಹಿತ್ಯದ ಬೆಳವಣಿಗೆಗೆ ಇದೂ ಒಂದು ಹೊಸ ದಾರಿಯೆ? ಶ್ರೀ. ಗೊರೂರರವರಂತಹರ ಪುಸ್ತಕದಲ್ಲಿದ್ದುದನ್ನೇ ಎತ್ತಿಕೊಂಡು, ಹಳ್ಳಿಗರ ಜೀವನದ ವಿಷಯದಲ್ಲಿ ಸಹಾನುಭೂತಿಯನ್ನು ಹುಟ್ಟಿಸುವ ಸದುದ್ದೇಶದ ಮೂಲಕ, ಬರೆಹಗಳ್ಳತನಕ್ಕೂ ಹೆದರದೆ, ಎದೆಯೊಡ್ಡಿ ಕೆಲಸ ಮಾಡುವ ಶ್ರೀ. ತಿರುಮಲೇಶ್ವರರ ಧೈರ್ಯವನ್ನು "ವಿಹಾರಿ"ಯು ಕೊಂಡಾಡದೆ ಇರನು. ಸಂಪಾದಕರ— ಅರ್ಥಾತ್ "ಶರಣ ಸಾಹಿತ್ಯ"ದ ಸಂಪಾದಕರಾದ ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳ— ನೆರವು ಸಿಕ್ಕಲ್ಲಿ, ತಮ್ಮ ಲೇಖನವನ್ನು ಸೋದಾಹರಣವಾಗಿ ಮುಂದುವರಿಸುವುದಾಗಿ ತಿರುಮಲೇಶ್ವರರು ತಿಳಿಸಿದ್ದಾರೆ. ಸಂಪಾದಕರ ನೆರವೇನೋ ಸಹಜವಾಗಿ ಈಗ ಸಿಕ್ಕಂತೆ ಸಿಗಬಹುದು; ಆದರೆ ದಯೆಮಾಡಿ ಶ್ರೀ. ಗೊರೂರರ ಪುಸ್ತಕದ ನೆರವನ್ನು ಮಾತ್ರ ತೆಗೆದುಕೊಳ್ಳಬಾರದೆಂದೂ, ತೆಗೆದುಕೊಂಡರೂ ಎತ್ತಿಕೊಂಡ ಭಾಗ ಇಂತಹವರದೆಂದು ಒಪ್ಪಿಕೊಳ್ಳುವ ಸೌಜನ್ಯವನ್ನು ತೋರಬೇಕೆಂದೂ, "ಮುದ್ದಾಮ" ಸಾಹಿತಿಯಾಗುವ ಹವ್ಯಾಸದಲ್ಲಿ ಹಾಸ್ಯಕ್ಕೆ ಗುರಿಯಾಗಬಾರದೆಂದೂ "ವಿಹಾರಿ"ಯು ಬಿನ್ನವಿಸುತ್ತಾನೆ.

ಹೊಸಗನ್ನಡದ ಕವಿಗಳೂ ಕಥಾಲೇಖಕರೂ ಆದ ಶ್ರೀಯುತ ಕೃಷ್ಣಕುಮಾರರು, ಮೊನ್ನೆ ಮುಂಬಯಿಯ ಆಕಾಶವಾಣಿಯಲ್ಲಿ ಮಾತನಾಡುತ್ತ ಕನ್ನಡ ಸಣ್ಣಕತೆಯ ಬಗೆಗೆ ಕೆಲವು ಸೊಗಸಾದ ಮಾತುಗಳನ್ನು ಹೇಳಿದರು. "ಕಾದಂಬರಿ ಪ್ರೇಯಸಿಯೊಡನಾಟದ ಇಡಿಯ ಇರುಳಾದರೆ, ಸಣ್ಣಕತೆ ಹೊತ್ತು-ಗೊತ್ತಿನ ಹವಣದಲ್ಲಿ ಕಿತ್ತುಕೊಂಡ ಒಂದು ಮುತ್ತಿನಂತೆ. ಮೊದಲಿನದರ ಘಟಾಟೋಪವೇ ಬೇರೆ; ಎರಡನೆಯದರ ಬೆರಕೆಯಿಲ್ಲದ ಸವಿಯೇ ಬೇರೆ. ಇದರ ಒಂದು ಕ್ಷಣದ ಸವಿ ಅಕ್ಷಯ್ಯದ ನೆನಪು ತರುವಂತಹುದು." ಇತ್ಯಾದಿ. ಇಂದಿನ ಸಣ್ಣ ಕತೆಗೆ ಪಿತೃಸ್ಥಾನದಲ್ಲಿದ್ದ ಶ್ರೀ. ಮಾಸ್ತಿಯವರ ಮತ್ತು ಕೆರೂರ ವಾಸುದೇವಾಚಾರ್ಯರ ಕತೆಗಳ ಬಗೆಗಾದರೂ ಅವರು ಹೇಳಿದ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸಬಹುದು: "ಶ್ರೀಯುತ ಕೆರೂರ ಅವರು, ಜೀವನವನ್ನು ಬೊಗಸೆತುಂಬ ಹಿಡಿದು ನೋಡುವವರು; ಶ್ರೀ. ಮಾಸ್ತಿಯವರು, ಆರಿಸಿದ ಒಂದೊಂದೇ ಹೂವನ್ನು ಎತ್ತಿ ಮೂಸುವವರಂತೆ, ಜೀವನವನ್ನು ತುದಿಬೆರಳಿನಿಂದ ಹಿಡಿದು ನೋಡುವವರು. ಅಂತೆಯೆ ಒಬ್ಬರಲ್ಲಿ ಸಮಷ್ಟಿಯ ಸಾಮರಸ್ಯ, ಇನ್ನೊಬ್ಬರಲ್ಲಿ ವ್ಯಷ್ಟಿಯ ವ್ಯಾಪಕತ್ವ ಹೆಚ್ಚಾಗಿ ಕಂಡುಬರುತ್ತದೆ. ಸಾಂಪ್ರದಾಯಿಕ ವಾಸ್ತವವಾದದ ಕತೆಗಾರರಾದ ಇವರಿರ್ವರ ಕತೆಯ ರೀತಿಯ ವಿಷಯದಲ್ಲಿ ಶ್ರೀ. ಕೃಷ್ಣಕುಮಾರರು ಕೆಲವು ಮಾತುಗಳನ್ನು ಹೇಳಿದರು: "ಶ್ರೀ. ಮಾಸ್ತಿಯವರ ಕಲಾಸ್ತ್ರವು ಅವರ ಹೃದಯದ ಮೇಲೇ ಹರಿತವಾದದ್ದು; ಶ್ರೀ. ಕೆರೂರ ಅವರ ಕಲಾಸ್ತ್ರವು ಜನಹೃದಯದ ಮೇಲೆ ಹರಿತವಾದದ್ದು. ಮಾಸ್ತಿಯವರು ತಮ್ಮ ಪಾತ್ರಗಳನ್ನು ಒಳಹೊಕ್ಕು ನೋಡುವವರು; ಕೆರೂರರವರು ಪಾತ್ರಗಳನ್ನು ಹೊರಗೆಳೆದು ನೋಡುವವರು. ಮಾಸ್ತಿಯವರು ಅಂತರಂಗದ ಕತೆಗಾರರಾದರೆ ಕೆರೂರರವರು ರಂಗಭೂಮಿಯ ಕತೆಗಾರರು. ಒಬ್ಬರಲ್ಲಿ ಭಾವಗೀತೆಯ ಆಳವಿದ್ದರೆ ಇನ್ನೊಬ್ಬರಲ್ಲಿ ದೃಶ್ಯಕಾವ್ಯದ ಹರವಿದೆ. ಮಾಸ್ತಿಯವರು ಹೆರಳುಬೆಚ್ಚಿ ಬಿಡಿಗುರುಳುಗಳ ಸೊಗಸನ್ನು ತೋರುವರಾದರೆ, ಕೆರೂರವರು

ಕೇದಗಿಯ ಮುಡಿ ಕಟ್ಟಿ ಮಲ್ಲಿಗೆಯ ಮಾಲೆಯನ್ನು ತೊಡಿಸಿದ ಸೊಬಗನ್ನು ತೋರುವವರು. ಒಬ್ಬರು ಜೀವಛವನ್ನು ಬಿಚ್ಚಿ ತೋರುವವರು; ಇನ್ನೊಬ್ಬರು ಅದನ್ನು ಹೆಣೆದು ತೋರುವವರು!" ಇತ್ಯಾದಿ.

* * *

“ಕನ್ನಡಸಾಹಿತ್ಯ ಬಹು ಪ್ರಾಚೀನಕಾಲದಿಂದ ಬೆಳೆದು ಬಂದದ್ದು; ಇಪ್ಪತ್ತನೆಯ ಶತಮಾನದಲ್ಲಿ ಅದರ ಉತ್ಕರ್ಷ ವಿಶೇಷವಾಗಿ ಬೆಳೆದಿದೆ!” ಎಂಬುದಾಗಿ ಎದೆತಟ್ಟಿ ಹೇಳಿಕೊಳ್ಳುವ ವ್ಯಾಖ್ಯಾತರೊಬ್ಬರನ್ನು ‘ಇಂತಹ ಮಹಾಸಾಹಿತ್ಯದ ಇತಿಹಾಸವು ಇನ್ನೂವರೆಗೆ ಯಾಕೆ ಬರೆಯಲ್ಪಟ್ಟಿಲ್ಲ?’ ಎಂದು ಕೇಳಿದರಂತೆ. ವ್ಯಾಖ್ಯಾತರಿಗೆ ಹೇಳಲಿಕ್ಕೆ ಕಾರಣ ಸಿಕ್ಕಲಿಲ್ಲವೆಂಬುದು ಹೇಳದೆಯೆ ತಿಳಿಯಬಹುದಾದ ಮಾತು. ಅಂತೂ ಈಗಾಗಲೇ ಬರೆದಿರಬೇಕಾದ ಇತಿಹಾಸ ಇನ್ನೂವರೆಗೆ ಬರೆಯಲ್ಪಟ್ಟಿಲ್ಲವೆಂಬುದು ನಿರ್ವಿವಾದ ವಿಷಯ. ಅಥವಾ ‘ಅಂತಹ ಇತಿಹಾಸವನ್ನು ಬರೆದು ಮಾಡುವುದಾದರೂ ಏನು? ಬರೆಯದೆ ಹೋದರೆ ನಮ್ಮ ಸಾಹಿತ್ಯದ ಸುದೀರ್ಘ ಪರಂಪರೆಯೇನೂ ಸುಳ್ಳಾಗಬೇಕಿಲ್ಲ. ಎಲ್ಲರಿಗೂ ಗೊತ್ತಿದ್ದ ವಿಷಯ; ಅದನ್ನು ಬರೆಯಲೇಬೇಕೆಂಬ ಆವಶ್ಯಕತೆಯೇ ಇಲ್ಲವಲ್ಲ!’ ಎಂಬ ವಿಚಾರಸರಣಿಯ ಮೂಲಕವೇ ನಮ್ಮ ಸಾಹಿತ್ಯದ ಇತಿಹಾಸವಿನ್ನೂ ಬರೆಯಲ್ಪಟ್ಟಿರಲಿಕ್ಕಿಲ್ಲವೆ? ಅಥವಾ ಹೀಗೂ ಇರಬಹುದು: ತಮ್ಮ ದೊಡ್ಡಿಸ್ತಿಕೆಯನ್ನು ತಾವೇ ಹೇಳಿಕೊಳ್ಳುವುದರಲ್ಲಿ ಯಾವ ಶೋಭೆ? ಆ ಕೆಲಸವನ್ನು ಯಾವಾಗಲೂ ಎರಡನೆಯವರೇ ಮಾಡಬೇಕು! ಈ ವರೆಗೆ ನಡೆದುದಾದರೂ ಹೀಗೆಯೆ. ಎಷ್ಟೇ ಚಿಕ್ಕದಾದರೂ ಮೊತ್ತಮೊದಲನೆಯ ಕನ್ನಡಸಾಹಿತ್ಯದ ಸ್ಥೂಲಪರಿಚಯವನ್ನು ಕೂಡ, ಪರದೇಶದಿಂದ ಬಂದ ರೈಸ್ ಸಾಹೇಬರೆ ಮಾಡಲಿಲ್ಲವೆ? ಎಂದಿನ ರೈಸ್‌ಸಾಹೇಬರೇ ನಮಗೆ ಇಂದಿನವರೆಗೆ ಮಾರ್ಗದರ್ಶಕರು! ಆದರೆ ಈ ವಿಷಮಪರಿಸ್ಥಿತಿಯನ್ನು ಹೋಗಲಾಡಿಸಲು ಇಂದಿನ ಕನ್ನಡಸಾಹಿತ್ಯದ ವಿಮರ್ಶಕರೆಂದು “ಗಡಿಬಿಡಿ” ನಡೆಯಿಸಿರುವ ಶ್ರೀ. ವ್ಹಿ. ಎಂ. ಇನಾಮದಾರರು, ೧೮೦೦ ರಿಂದ ಇಂದಿನವರೆಗಿನ ಕನ್ನಡಸಾಹಿತ್ಯದ ಸಿಂಹಾವಲೋಕನವನ್ನು ಕೈಕೊಂಡಿರುವುದು ಅಭಿನಂದನಾರ್ಹವಾದುದು. ಇದಲ್ಲದೆ, ಈ ಕೆಲಸಕ್ಕೆ ನೆರವೆಂದು ಮುಂಬಯಿಯ ವಿಶ್ವವಿದ್ಯಾನಿಲಯದವರು ಅವರಿಗೆ ತಿಂಗಳಿಗೆ ೭೫ ರೂ. ಗಳ ಸಂಶೋಧನ ವೇತನವನ್ನು ದಯೆಪಾಲಿಸಿದ್ದಾರೆಂಬುದು ಇನ್ನೂ ಹೆಚ್ಚಿನ ಆನಂದದ ವಿಷಯ. ಈವರೆಗೆ ಮುಂಬಯಿ ವಿಶ್ವವಿದ್ಯಾನಿಲಯದವರು ಕನ್ನಡಕ್ಕೆ ಈ ತೆರದ ಉತ್ತೇಜನವನ್ನು ಕೊಟ್ಟಿರಲಿಲ್ಲ.

ವೇತನವನ್ನು ಮೊದಲಿಗರಾಗಿ ಪಡೆದ ಬಹುಮಾನದೊಂದಿಗೆ, ಕನ್ನಡಸಾಹಿತ್ಯದ ಇತಿಹಾಸದ ಒಂದು ಭಾಗವನ್ನಾದರೂ ಯಥಾಯೋಗ್ಯವಾಗಿ ಬರೆದು ಅಲ್ಲಿಯೂ ಮೊದಲಿಗರಾಗುವ ಬಹುಮಾನವನ್ನು ಶ್ರೀ. ಇನಾಮದಾರರು ಪಡೆದೇ ಪಡೆಯುವ-ರೆಂಬ ಭರವಸೆ ನಮಗಿದೆ. ವಿಶ್ವವಿದ್ಯಾನಿಲಯಕ್ಕೆ ವೇತನವನ್ನು ಕೊಟ್ಟದ್ದಕ್ಕಾಗಿಯೂ, ಶ್ರೀ. ಇನಾಮದಾರರಿಗೆ ಈ ಮಹತ್ತ್ವದ ಕೆಲಸವನ್ನು ಕೈಕೊಂಡದ್ದಕ್ಕಾಗಿಯೂ ನಮ್ಮ ಹಾರ್ದಿಕವಾದ ಅಭಿನಂದನೆಗಳು.

* * *

ಈ ವರುಷದ **ದೇವರಾಜ ಬಹಾದ್ದೂರ್ ಪಾರಿತೋಷಕದ** ಹಣದಲ್ಲಿ ಕಾರಂತರ ಮಹಾ ಕಾದಂಬರಿಯಾದ "ಮರಳಿ ಮಣ್ಣಿಗೆ" ಎಂಬುದಕ್ಕೆ ೪೦೦ ರೂ. ಕೊಟ್ಟುದನ್ನು ಕೇಳಿ "ವಿಹಾರಿ"ಯು ಸಂತೋಷಿಸುತ್ತಾನೆ. ಅದೇ ಪಾರಿತೋಷಕದ ಉಳಿದ ಭಾಗವನ್ನು, ಇನ್ನೂ ಹಸ್ತಪ್ರತಿಯ ಅವಸ್ಥೆಯಲ್ಲಿದ್ದ ಪುಸ್ತಕಗಳಿಗೆ ಕೊಟ್ಟುದನ್ನು ಕೇಳಿ, ಪ್ರಕಟವಾಗದ ಪುಸ್ತಕಗಳಿಗೆ ಬಹುಮಾನ ದೊರೆಯುವುದಾದರೆ, ಇನ್ನೂ ಬರೆಯದೆ ಇದ್ದು, ಆದರೆ ಬರೆಯಬೇಕೆಂದು ಸಂಕಲ್ಪಿಸಿರುವ ಪುಸ್ತಕಗಳಿಗೆ ಯಾಕೆ ಕೊಡಬಾರದೆಂದು ಕೆಲವರು ವಿಹಾರಿಯನ್ನು ಕೇಳಿದ್ದಾರೆ. ಆ ವಿಷಯ ಪಾರಿತೋಷಕವನ್ನು ಕೊಡುವ ಬಗೆಯಲ್ಲಿ ನಿರ್ಣಯ ಹೇಳುವವರಿಗೆ ಸಂಬಂಧಿಸಿದ್ದು, ಅವರೇ ಹೇಳಬೇಕು!

* * *

ಹ್ಯಾಮ್ಲೆಟ್ ಪಾತ್ರದ ವಿಷಯದಲ್ಲಿ ಚರ್ಚಾತ್ಮಕ ಸಾಹಿತ್ಯ ಈಗಾಗಲೆ ಹತ್ತೆಂಟು ವಾಚನಾಲಯಗಳನ್ನು—ಅಥವಾ ಮೊನ್ನೆ ತಾನೆ ಹುಬ್ಬಳ್ಳಿಯಲ್ಲಿ ಸರ್ ಸಿದ್ದಪ್ಪನವರು ಸಂಸ್ಕೃತದ ಮೇಲಿನ ಆಕ್ರೋಶದಿಂದ, ಎಂದರೆ ಕನ್ನಡದ ಮೇಲಿನ ಅಭಿಮಾನದಿಂದ—ಹೇಳಿದ ರೀತಿಯಲ್ಲಿ ಹೇಳುವದಾದರೆ, ಹತ್ತೆಂಟು "ಓದುಮನೆ"ಗಳನ್ನು—ತುಂಬುವಷ್ಟು ಬೆಳೆದಿದ್ದರೂ, ಸಂಶೋಧನೆಗೆ ಇನ್ನೂ ಆಸ್ಪದವಿದ್ದೇ ಇದೆ. ಅದರಲ್ಲಿ ವಿಶೇಷ ಅಭಿಮಾನದ ಸಂಗತಿಯೆಂದರೆ, ಆ ಕ್ಷೇತ್ರದಲ್ಲಿ ಕೆಲಸಮಾಡಿ ಅಳಿಸಲಾರದ ಕೀರ್ತಿ ಸಂಪಾದಿಸಿದ **ಬ್ರಾಡ್ಲೆ, ಸ್ಟಾಲ್, ಕ್ಯಾಂಪ್‌ಬೆಲ್**, ರ್‍ಯಾಲೆ ಪ್ರಭೃತಿಗಳ ವಿಚಾರಗಳಿಗೂ ಮಣ್ಣೆರಚಿ ಅವರೆಲ್ಲರನ್ನೂ ಮುಗಿಲಿಗೆ ತೂರುವಂತಹ ಸಂಶೋಧನೆಯನ್ನು ಕನ್ನಡಿಗನೊಬ್ಬನು ಸಾಧಿಸಿದನೆಂಬುದು! ಹ್ಯಾಮ್ಲೆಟ್‌ನ ಅನಿಶ್ಚಯ, ಮ್ಯಾಕ್‌ಬೆತ್‌ನ ಪತನ, ಲಿಯರ್‌ನ ದುಃಖ, ಆಥೆಲೋವಿನ ವಿನಾಶ, ಇವುಗಳೆಲ್ಲಕ್ಕೂ ಸಮರ್ಪಕವಾದ ಉತ್ತರಗಳನ್ನು ಹೇಳುವ ವಿಖ್ಯಾತ ವಿಮರ್ಶಕರಿಗೆ ಹ್ಯಾಮ್ಲೆಟ್‌ನು ಗಂಡುಸೋ ಹೆಂಗುಸೋ ಎಂಬುದರ ಕಡೆಗೆ ವಿಚಾರ ಹರಿಯಲಿಲ್ಲ. ಕನ್ನಡ ವಿಮರ್ಶಕರಲ್ಲೊಬ್ಬ, ಹ್ಯಾಮ್‌ಲೆಟ್ಟನು ಹೆಂಗುಸೆಂಬುದನ್ನು ಇದೀಗ ನಿಶ್ಚಯಿಸಿದ್ದ-ಕ್ಕಾಗಿ, ಆತನ ವಿಮರ್ಶಾವಿಚಕ್ಷಣೆಯನ್ನೂ ಅರಣ್ಯಪ್ರಾಯವಾದ ಪಾಂಡಿತ್ಯವನ್ನೂ ಎಷ್ಟು ಕೊಂಡಾಡಿದರೂ ಸಾಲದು. "ಹ್ಯಾಮ್ಲೆಟ್ಟಳ ದುಃಖಾಂತ ಜೀವನದ ಕಾರಣವು **ಅವಳ** ಅನಿಶ್ಚಯವೇ ಆಗಿದೆ!" ಎಂದು, ಬೆಂಗಳೂರಿನ 'ರಾಷ್ಟ್ರಭಾಷಾ-ವಿಶಾರದ'ರಾದ ಶ್ರೀ. ಕೆ. ಗಣಪತಿಭಟ್ಟ ಅವರು, ವಿಶ್ವಸಾಹಿತ್ಯ-ದಲ್ಲಿ ಸ್ಥಾನಪಡೆದ ಮೂವರು ಪ್ರಸಿದ್ಧ ನಾಟ್ಯಾಚಾರ್ಯರಾದ **ಕಾಳಿದಾಸ, ಶೇಕ್ಸ್‌ಪಿಯರ್** ಮತ್ತು **ದ್ವಿಜೇಂದ್ರಲಾಲ್-ರಾಯ್** (?) ಅವರ ಬಗ್ಗೆ, ಆಗಸ್ಟ್ ತಿಂಗಳ **ಸುಬೋಧ**ದಲ್ಲಿ ಪ್ರಕಟಮಾಡಿದ ಲೇಖನದ ಮುಖಾಂತರ, ಈ ಹೊಸ ಮಾತನ್ನು ಮೊದಲು ಬಾರಿ ಪಂಡಿತರ ನಿದರ್ಶನಕ್ಕೆ ತಂದಿದ್ದಾರೆ. ಶ್ರೀ. ಗಣಪತಿಭಟ್ಟರು ತಮ್ಮ ಅಮೋಘವಾದ ಸಂಶೋಧನೆ-ಯನ್ನು ಇದೇ ರೀತಿಯಲ್ಲಿ ಮುಂದುವರಿಸಿ ಅಲೌಕಿಕವಾದ ಲೌಕಿಕವನ್ನು ಸಂಪಾದಿಸಲೆಂದು 'ವಿಹಾರಿ'ಯು ಮನಃಪೂರ್ವಕವಾಗಿ ಬಯಸುತ್ತಾನೆ. ಭಾಪು ಕನ್ನಡ ಕಡುಗಲಿ! ವಿಮರ್ಶಕ "ಅಡ್ಡಬಲಿಷ್ಠ" ಹುಲಿ!

* * *

ಮರಾಠಿ ನಾಟಕದ ಶತಸಾಂವತ್ಸರಿಕೋತ್ಸವವು ಸಾಂಗಲಿಯಲ್ಲಿ ಇದೇ (ನವ್ಹಂಬರ್) ತಿಂಗಳ ದಿನಾಂಕ ೫ ರಿಂದ ೮ ರ ವರೆಗೆ ನಡೆಯುವುದು. ಅದೇ ಕಾಲಕ್ಕೆ ವಾರ್ಷಿಕ ಸಾಹಿತ್ಯ ಸಮ್ಮೇಳನವಾದರೂ ಸೇರಲಿರುವುದೆಂದು ತಿಳಿಯುತ್ತದೆ. ಇಂದಿನ ಮರಾಟಿ ನಾಟಕದ ನೂರು ವರ್ಷದ ಪರಂಪರೆಯು ಸಾಂಗಲಿಯಲ್ಲಿ ಜನ್ಮತಾಳಿದ್ದರಿಂದ, ಈ ಉತ್ಸವವನ್ನು ಅಲ್ಲಿಯೆ ಜರುಗಿಸುವು-ದಾಗಿ ಗೊತ್ತುಮಾಡಿದ್ದಾರೆ

*

ಎರಡು ಶತಮಾನಕ್ಕೆ ಮೀರಿದ ರಾಜಕೀಯ ಸಂಬಂಧವನ್ನು ಭಾರತದೊಡನೆ ಬೆಳಸಿದ ಬ್ರಿಟನ್ನಿಗೆ ಇಲ್ಲಿಯ ಸಾಹಿತ್ಯ, ಕಲೆ ಇವುಗಳ ಬಗ್ಗೆ ಎಷ್ಟೂ ಜ್ಞಾನವಿಲ್ಲವೆಂದೂ; ಈ ತೆರದ ಅಜ್ಞಾನ ಇಂಗ್ಲೆಂಡಿಗೆ ಲಾಂಛನಾಸ್ಪದವೆಂದೂ; **ಸರ್ ವಿಲಿಯಮ್ ಜೋನ್ಸ್** ಮುಂತಾದ ಮಹಾನುಭಾವರು ಮೊದಲು ಮಾಡಿದ ದಿವ್ಯಪರಂಪರೆಯನ್ನು ಮುಂದುವರಿಸಲಿಕ್ಕೆ ಇದುವರೆಗೆ ಯಾರೂ ಪ್ರಯತ್ನಪಡದಿರುವುದು ಆಳುವ ದೇಶಕ್ಕೆ ದೊಡ್ಡ ಕಲಂಕ-ವೆಂದೂ ಸ್ಪಷ್ಟವಾಗಿ, ವಿಖ್ಯಾತ ಆಂಗ್ಲ ಕಾದಂಬರಿಕಾರರೂ ವಿಮರ್ಶಕರೂ ಆದ ಇ. **ಎಂ. ಫಾರ್‌ಸ್ಟರ್** ಅವರು, ಇದೀಗ ಪ್ರಸಿದ್ಧವಾದ ಪ್ರೊ. **ಕೆ. ಆರ್. ಶ್ರೀನಿವಾಸ್ ಐಯಂಗಾರ್‍ಯರ** "**ಭಾರತದಲ್ಲಿಯ ಸಾಹಿತ್ಯ ಮತ್ತು ಬರೆವಣಿಗೆ**" ಎಂಬ ಪುಸ್ತಕಕ್ಕೆ ತಾವು ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ. "**ಭಾರತಮಾರ್ಗ**"ವನ್ನು ಓದಿದ ಕನ್ನಡಿಗರಿಗೆ ಫಾರ್‌ಸ್ಟರ್ ಅವರ ಸ್ಪಷ್ಟೋಕ್ತಿಯ ಪರಿಚಯವಾಗಿರಲಿಕ್ಕೆ ಸಾಕು. ಪ್ರೊ. ಅಯ್ಯಂಗಾರ್ಯರ ಪುಸ್ತಕದಿಂದ ಇಂದಿನ ಭಾರತದಲ್ಲಿ ಹೊಸ ಚೇತನದಿಂದ ಅರಳುತ್ತಿರುವ ವಿವಿಧ ಸಾಹಿತ್ಯಗಳ ಪರಿಚಯ, ತುಸುಮಟ್ಟಿಗಾದರೂ ಇಂಗ್ಲೆಂಡ್-ಅಮೇರಿಕೆಯ ಓದುಗರಿಗೆ ಆಗುವುದೆಂಬುದನ್ನು ಫಾರ್‌ಸ್ಟರ್ ಅವರು ಮುನ್ನುಡಿಯಲ್ಲಿ ಹೇಳಿದ್ದು, ಅವರ ನಿದಾರ್ಕ್ಷಿಣ್ಯಬುದ್ಧಿಗೂ, ಶ್ರೀ. ಅಯ್ಯಂಗಾರ್‍ಯರ ಬರೆವಣಿಗೆಗೂ ಯೋಗ್ಯ ಸನ್ಮಾನ. ಪ್ರೊ. ಅಯ್ಯಂಗಾರ್ಯರು

ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ಆಂಗ್ಲ ಭಾಷೆಯ ಪ್ರಾಧ್ಯಾಪಕರು. ಮೇಧಾವಿಗಳು. ಆಂಗ್ಲಭಾಷೆಯ ಮೇಲೆ ತುಂಬ ಪ್ರಭುತ್ವವುಳ್ಳವರು. ಪ್ರತಿತಿಂಗಳೂ ಎಲ್ಲೆಲ್ಲಿಯ ಪತ್ರಿಕೆಗಳಲ್ಲಿಯೂ ಲೇಖನಗಳನ್ನು ಬರೆಯುತ್ತಲೇ ಇರುತ್ತಾರೆ. 'ಅವು ಮುಟ್ಟದ ಗಿಡವಿಲ್ಲ, ಅಯ್ಯಂಗಾರ್ಯರು ಬರೆಯದ ವಿಷಯವಿಲ್ಲ' ಹೀಗಾಗಿದೆ ಈಗಾಗಲೆ! ಅರವಿಂದ ಘೋಷರ ಯೋಗ, ಸಾಹಿತ್ಯ ಮೊದಲು ಮಾಡಿ, ವೆಂಡೆಲ್ ವಿಲ್ಕಿಯವರ ವಕ್ತೃತ್ವದ ವರೆಗೆ ಹರಿದಿದೆ.. ಈ ಲೇಖಕರ ಲೇಖನಪ್ರವಾಹ! ಇವರನ್ನು ನೋಡಿದರೇನೇ ಗೊತ್ತಾಗುವುದು—ಇವರು ದೊಡ್ಡ ಬರೆಹಗಾರರೆಂದು! ಇವರ ಕೆದರಿದ ಕೂದಲು, ಬೆಳೆದ ಗಡ್ಡ, ಹಾಗೂಹೀಗೂ ಸುತ್ತಿಕೊಂಡ "ಲುಂಗಿ" ಇದರ ಮೇಲಿಂದಲೇ ಗುರುತಿಸಬಹುದು, ಇವರಿಗೆ ನಿತ್ಯಕರ್ಮಗಳ ಕಡೆಗೂ ಲಕ್ಷ್ಯಪೂರಯಿಸಲಿಕ್ಕಾಗುವುದಿಲ್ಲವೆಂಬುದನ್ನು! ಅಖಿಲ ಭಾರತ ಪಿ. ಇ. ಎನ್. ಸಂಸ್ಥೆಯಿಂದ ಇವರದೊಂದು "ಇಂಡೋ ಆಂಗ್ಲಿಯನ್ ಲಿಟರೇಚರ್" ಎಂಬ ಪುಸ್ತಕವಾದರೂ ಸುಮಾರು ಎರಡು ತಿಂಗಳ ಹಿಂದೆ ಪ್ರಕಟವಾಯಿತು. ಇದಲ್ಲದೆ "ಭಾರತೀಯರು ಇಂಗ್ಲಿಷ್ ಸಾಹಿತ್ಯಕ್ಕೆ ಮಾಡಿದ ಸೇವೆ" ಎಂಬ ಹಿರಿದಾದ ಗ್ರಂಥವಾದರೂ ಶೀಘ್ರದಲ್ಲಿಯೇ ಪ್ರಕಟವಾಗಲಿದೆ ಎಂದು ತಿಳಿದಿದೆ. ಆಂಗ್ಲ–ತಮಿಳುಸಾಹಿತ್ಯದ ಆಳ ಅಭ್ಯಾಸಮಾಡಿ, ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದು, ಇಂಗ್ಲೆಂಡಿನವರೆಗೂ ಖ್ಯಾತಿ ಬೆಳಸಿದ ಪ್ರೊ. ಅಯ್ಯಂಗಾರ್ಯರಿಗೆ ಅಭಿನಂದನೆಗಳು.

* * *

ಸುಪ್ರಸಿದ್ಧ ಸಾಹಿತಿಯ ಅಪ್ರಸಿದ್ಧ ಹೆಂಡತಿಯೊಬ್ಬಳು ಪರಲೋಕವಾಸಿಯಾದಳೆಂದು ಸುದ್ದಿ ಬಂದಿದೆ. ಹೀಗೆ "ಪುಣ್ಯವಂತೆ"ಯಾದವಳು ಶಾನ ಮಡದಿ. ಬರ್ನಾರ್ಡ್‌ಶಾನು ಕರ್ನಾಟಕದಲ್ಲಿ ಹುಟ್ಟಿದ್ದರೆ, ಆತನ ಹೆಂಡತಿಯೂ ಸಾಹಿತಿಯೆಂದು ಹೆಸರು ಪಡೆಯಬಹುದಾಗಿತ್ತೋ ಏನೋ, ಯಾರುಬಲ್ಲರು?

* * *

ಅಮೇರಿಕಾ ದೇಶದ ಸುವಿಖ್ಯಾತ ಕಾದಂಬರೀಕಾರರಾದ ಅಪ್ಟನ್ ಸಿಂಕ್ಲೇರನಿಗೆ ಆತನ "ಡ್ರಾಗನ್ಸ್ ಟೀಥ್" ಎಂಬ ಕಾದಂಬರಿಗೆ ಈ ವರ್ಷದ ಪುಲಿಟ್‌ಝರ ಪಾರಿತೋಷಕವು ಕೊಡಲ್ಪಟ್ಟಿತು. ಇದು ದೊಡ್ಡ ಸನ್ಮಾನ. ಈ ಪಾರಿತೋಷಕವು, ಇದೀಗ ಅವ್ಯಾಹತವಾಗಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಸಾಹಿತ್ಯಸೇವೆ ಮಾಡುತ್ತಲಿದ್ದ ಸಿಂಕ್ಲೇರರಿಗೆ ಎಂದೋ ದೊರಕಬೇಕಾಗಿತ್ತು. ನೋಬೆಲ್ ಪಾರಿತೋಷಕವನ್ನು ಅವರಿಗೆ ಕೊಡಬೇಕೆಂಬ ವಿಚಾರವಾದರೂ ಕೆಲಕಾಲದ ಹಿಂದೆ ನಡೆದಿತ್ತು. ಆದರೆ ಇದುವರೆಗೆ ಅವರಿಗೆ ಸಿಕ್ಕಬೇಕಾದ ಸನ್ಮಾನಗಳಿಗೆ ಅಡ್ಡಿಮಾಡಿದ ವಿಷಯವೆಂದರೆ ಅವರ ಸಮಾಜವಾದ. ಆ ವಿಚಾರಪ್ರಣಾಲಿಯ ಮೂಲಕ ಅವರಿಗೆ ಅವರ ಅಸಂಖ್ಯ ಓದುಗರ ಪ್ರೀತಿಯ ಹೊರತಾಗಿ ಬೇರೆ ಯಾವ ಸನ್ಮಾನವೂ ದೊರೆಯಲಿಲ್ಲ. ಈಗ ಪುಲಿಟ್‌ಝರ ಸನ್ಮಾನ ಸಿಕ್ಕಿತೆಂದ ಕೂಡಲೆ, ಅವರು **ತಮ್ಮ ವಿಚಾರಗಳನ್ನೇ ಬದಲಾಯಿಸಿದರೆಂದು ತಿಳಿಯಬೇಡಿ.** "ಡ್ರಾಗನ್ಸ್ ಟೀಥ್" ಕಾದಂಬರಿಯಲ್ಲಿ ಅವರ ಸ್ವಂತ ವಿಚಾರಗಳನ್ನು ಪ್ರತಿಪಾದಿಸಿದ್ದರೂ, ಅದರಲ್ಲಿ ಹೆಚ್ಚಾಗಿ ಎದ್ದು ಕಾಣುವುದು ನಾಝೀ ಪಕ್ಷದ ನಿರ್ದಯವಾದ ಖಂಡನೆ. ಅಂತೂ ಅವರ ಬುದ್ಧಿಶಕ್ತಿ-ಬರೆವಣಿಗೆಗಳು ಸಾಧಿಸಲಾರದ್ದನ್ನು ಯುದ್ಧ ವಿಷಯದ ಪ್ರಚಾರ ಸಾಧಿಸಿತು. ಬುದ್ಧಿಗೂ ಪ್ರಚಾರಕ್ಕೂ ಯಾವ ಸಂಬಂಧವೂ ಇರುವುದಿಲ್ಲವೆಂಬ ಮಾತು, ಅವರ ವಿಷಯವಾಗಿಯೇ ನಡೆದ ಪ್ರಚಾರ ಅಥವಾ ಅಪಪ್ರಚಾರದ ಮೇಲಿಂದ ತಿಳಿಯುವಂತಿದೆ. ಸಿಂಕ್ಲೇರ್‌ರು ಭಾರತದ ವಿಷಯದಲ್ಲಿ ಮೊದಲಿನಿಂದ ಸಹಾನುಭೂತಿಯುಳ್ಳವರು. ಸ್ವಾತಂತ್ರ್ಯವನ್ನು ಬೇಡುವುದು ಯೋಗ್ಯ ಕೊಡುವುದವಶ್ಯವೆಂಬುದೇ ಅವರ ಖಂಡಿತವಾದ ಮತವಿದ್ದಾಗ್ಯೂ, ಇತ್ತೀಚೆಗೆ ಅವರು ಬೇರೆಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರೆಂದೂ, ಯುದ್ಧಕಾಲದಲ್ಲಿ ಭಾರತವು ಸ್ವಾತಂತ್ರ್ಯಕ್ಕಾಗಿ ಬ್ರಿಟಿಶರನ್ನು ಒತ್ತಾಯಪಡಿಸುವುದು ಅಸಮಂಜಸವೆಂದು ಹೇಳಿದರೆಂದೂ, ಅಮೇರಿಕೆಯ ಪ್ರಚಾರಖಾತೆಯ ಮುಖಾಂತರವಾಗಿ ಹೇಳಲ್ಪಡುತ್ತದೆ. ಇದು ನಿಜವಾದರೆ, ಸಿಂಕ್ಲೇರ್‌ರು ತಮ್ಮ ಇಡೀ ಆಯುಷ್ಯದಲ್ಲಿ ಬರೆದ ಸಾಹಿತ್ಯ ತೀರ ಸುಳ್ಳು ಎಂದೇ ಹೇಳಬೇಕಾಗಬಹುದು.

* * *

ದೀವಳಿಗೆ ಮತ್ತು ಹೊಸವರ್ಷದ

ಶುಭಚಿಂತನೆ!

ಆಯುರ್ವೇದ ರಸಶಾಳಾ

ಪುಣೆ ಲಿಮಿಟೆಡ್

ಪುಣೆ ೪.

ಸಾದರ ಸ್ವೀಕಾರ

★

೧೮. ಗೀತಾ ಪ್ರವಚನಗಳು— (ಅಧ್ಯಾಯ ೧–೨). ಆಚಾರ್ಯ ವಿನೋಬಾ ಭಾವೇಯವರ ಗ್ರಂಥದ ಅನುವಾದ. ಪ್ರಕಾಶಕರು ಶ್ರೀಮಾನ್ ದತ್ತಾತ್ರೇಯ ಶಿವಾನಂದ ಬಂಕಾಪುರ, ಅವಧೂತ ಗ್ರಂಥಾಲಯ 'ಶ್ರೀ ಶಿವಾನಂದ ಮಂದಿರ' ಹುಬ್ಬಳ್ಳಿ. ಕ್ರಾ. ೮. ೩೬ ಪುಟಗಳು. ಬೆಲೆ ೦–೪–೦.

೧೯. ಅಮೃತವಾಣಿ— (ಕೈ ಬರೆಹದ ತ್ರೈಮಾಸ ಪತ್ರಿಕೆ — ಸಚಿತ್ರ). ಸಂಪಾದಕ ಮಂಡಳಿಯಲ್ಲಿ ಶ್ರೀಯುತರುಗಳಾದ ಪಿ. ಎಲ್. ಉಪಾಧ್ಯ, ಯು. ಆರ್. ರಾವ್, ಆರ್. ಕೆ. ದೇವ್‌ಗಾರ್, ಎನ್. ಎ. ಪದ್ಮಸಾಲಿ ಈ ನಾಲ್ವರ ಹೆಸರುಗಳಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ತರುಣ ಸಾಹಿತ್ಯಿಕರ ನೆರವಿನಿಂದ ಪ್ರಕಟವಾಗುತ್ತಲಿದೆ. ಜಯಂತಿಯಳತೆಯ ಪುಟಗಳು.

ನಮ್ಮ ಕಡೆಗೆ ಒಂದನೆಯ ಸಂಪುಟದ ೬–೮ ಸಂಚಿಕೆಗಳೂ ಎರಡನೆಯ ಸಂಪುಟದ ೧ನೆಯ ಸಂಚಿಕೆಯೂ ಬಂದಿವೆ. ಪ್ರತಿಯೊಂದು ಸಂಚಿಕೆಯ ಮುಖಚಿತ್ರವೂ, ಓರಣದ ಹೊರರೂಪೂ ಯಾರ ಮನವನ್ನೂ ಸೆಳೆದುಕೊಳ್ಳುವಂತಿವೆ. ಸುಂದರವಾದ ಕೈಬರೆಹದಲ್ಲಿರುವ ಈ ಸಂಚಿಕೆಗಳ ಪ್ರತಿಯೊಂದು ಲೇಖನ-ಕವನಗಳೂ ರಂಗುರಂಗಿನ ರಮಣೀಯ ಸಂದರ್ಭಚಿತ್ರಗಳಿಂದ ಕೂಡಿದ್ದು, ಪಂಡಿತ-ಪಾಮರರಿಬ್ಬರ ಲಕ್ಷ್ಯವನ್ನೂ ಆಕರ್ಷಿಸುವಂತಿವೆ. ಪ್ರತಿಯೊಂದು ಲೇಖನದ ಶಿರೋಲೇಖದ ಸುಳಿವಿನಕ್ಷರಗಳ ಚಮತ್ಕೃತಿಯು ಎಂಥಹರನ್ನೂ ಬೆರಗುಗೊಳಿಸುವಂತಿವೆ. ಕೈಬರೆಹದ ಪತ್ರಿಕೆಗಳನ್ನು ಪ್ರಕಟಿಸುವ ಕನ್ನಡ ತರುಣರ ತಂಡಗಳಿಗೆ, ಈ 'ಅಮೃತವಾಣಿ' ಪತ್ರಿಕೆಯು ಖಂಡಿತ ಆದರ್ಶವೆನಿಸಬಹುದಾಗಿದೆ. ದ. ಕ. ಜಿಲ್ಲೆಯ ಹಿರಿಯ ಸಾಹಿತ್ಯಿಕರಾದ ಶ್ರೀ ಕಡೆಂಗೋಡ್ಲು ಶಂಕರಭಟ್ಟರು, ಪಂಡಿತ ಮುಳಿಯ ತಿಮ್ಮಪ್ಪಯ್ಯನವರು, ಶ್ರೀ. ಬನ್ನಂಜೆ ರಾಮಾಚಾರ್ಯರು, ಕೊರಡ್ಕಲ್ ಶ್ರೀನಿವಾಸರಾಯರು, ಶ್ರೀ. ಎಂ. ವಿ. ಹೆಗಡೆ ಮೊದಲಾದವರು ಈ ತರುಣರ ಪ್ರಯತ್ನವನ್ನು ಮನಸಾರೆ ಮೆಚ್ಚಿ ಹೊಗಳಿ ಹರಸಿದ್ದಾರೆ. ಲೇಖನಗಳ ವೈವಿಧ್ಯ ಸಾಕಷ್ಟಿದೆ. ಕತೆ-ಕವನ-ಹರಟೆ-ಪ್ರಬಂಧ-ಏಕಾಂಕನಾಟಕ—ಅನುವಾದಿತ ಲೇಖನ ಎಲ್ಲವೂ ಇದ್ದು, ಕೇವಲ 'ಪ್ರಥಮ ಪ್ರಯತ್ನ'ಗಳಂತೆ ಕೊರತೆಗೂಡಿದುವಾಗಿಲ್ಲ. ಪ್ರತಿ ಸಂಚಿಕೆಯ ಪ್ರಾರಂಭದ ಪುಟಗಳಲ್ಲಿರುವ 'ಅಮೃತವಚನ'ಗಳು ತುಂಬ ಸಾರವತ್ತಾಗಿದ್ದು, ಸಂಪಾದಕ ಮಂಡಲಿಯವರ ಆದರ್ಶಗಳನ್ನು ರೂಪಿಸುವಂತಹವಾಗಿವೆ. ಕನ್ನಡ ನಾಡು-ನುಡಿಯ ಪ್ರೀತಿಯನ್ನೂ ಭಾರತದ ಪಾರತಂತ್ರ್ಯವಿಷಯಕವಾದ ಕಳವಳಗಳನ್ನೂ ಇಲ್ಲಿಯ ಹಲವು ಪುಟಗಳಲ್ಲಿ, ಶಬ್ದಚಿತ್ರ-ರೇಖಾಚಿತ್ರಗಳ ಮುಖಾಂತರ ಕಾಣಬಹುದು. ಸಿನೇಮಾ ಸಮಾಚಾರ, 'ರಾಜಕೀಯದಿಂದ' 'ಸಂಪಾದಕೀಯ' 'ವಿನೋದ ಲಹರಿ' ಮೊದಲಾದ ಸಂಪಾದಕೀಯ ಬರೆಹಗಳಿಂದಲೂ ಸಂಚಿಕೆಗಳು ಶೋಭೆಗೊಂಡಿವೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ಇಂತಹ ಪತ್ರಿಕೆಯ ಉದಯವೆಂದರೆ, ಕನ್ನಡ ತರುಣರ ಕಾರ್ಯೋನ್ಮುಖತೆಯ ಜಾಗೃತಚಿಹ್ನವೆಂದು ಹೇಳಬಹುದು. 'ಅಮೃತವಾಣಿ'ಯ ಸಂಪಾದಕ ಮಂಡಲಿಯ ಕಾರ್ಯ ಕನ್ನಡಕ್ಕೆ ಹೊಸಬಗೆಯ ಸೊಬಗನ್ನು ನೀಡುವ ಸಾಮರ್ಥ್ಯವನ್ನು ಪಡೆಯಲಿ! ಪತ್ರಿಕೆ ಚಿರಾಯುವಾಗಿ ಬೆಳಗಲಿ!

೨೦. ಶ್ರೀ. ಖಂಡೋ ಕೃಷ್ಣ ಉರ್ಫ್ ಬಾಬಾಸಾಹೇಬ ಯೆರಾಂಚೀ ಆಠವಣ ವ ಆಧ್ಯಾತ್ಮ ವಿಷಯಾವರೀಲ ಬೋಲ (ವ್ಯಕ್ತಿಪರಿಚಯ). ಲೇಖಕರು ಶ್ರೀಮಾನ್ ನಾರಾಯಣಶಾಸ್ತ್ರಿ ಗುಡೇಕರ್ 'ವೇದಾಂತವಿಶಾರದ' ಧಾರವಾಡ. ಪ್ರಕಾಶಕರು ಶ್ರೀಮಾನ್ ವಿಟ್ಠಲ ಯಶವಂತ ಜಠಾರ, ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ. ಫೂ. ಕ್ಯಾ. ೮. ೩೬ ಪುಟಗಳು. ಬೆಲೆ ೦–೬–೦.

ಈ ಚಿಕ್ಕ ಪುಸ್ತಕಕ್ಕೆ ಕೈ. ವಾ. ಬಾಬಾಸಾಹೇಬರನ್ನು ಬಲ್ಲ—ಅವರ ವೇದಾಂತದಲ್ಲಿ ಶ್ರದ್ಧೆಯುಳ್ಳ— ಮಹನೀಯರಾದ ಶ್ರೀ. ಚಿದಂಬರ ದೀಕ್ಷಿತ ಬಹಲಿಯವರೂ, ರಾವ್ ಬಹಾದ್ದೂರ ಬಿ. ಎಸ್. ಸಾವುಕಾರ, ಬಿ. ಎ. ಎಲ್‌ಎಲ್‌ಬಿ. ಅವರೂ, ಶ್ರೀ. ಎಂ. ಎಂ. ಹ್ಯಾಮಣ್ಣವರ ರಿಟಾಯರ್ಡ್ ಹುಜೂರ್ ಮಾಮಲೇದಾರ್ ಅವರೂ, ಶ್ರೀ. ಎನ್. ಬಿ. ಸಂಕೊಳ್ಳಿ ಮಾಮಲೇದಾರರೂ ಮುನ್ನುಡಿಗಳನ್ನು ಬರೆದು, ಲೇಖಕರನ್ನು ಪ್ರೋತ್ಸಾಹಿಸಿದ್ದಾರೆ. ಲೇಖಕರು ಕೈ. ವಾ. ಬಾಬಾಸಾಹೇಬರ ಪ್ರತ್ಯಕ್ಷ ಶಿಷ್ಯರು; ಅವರ ನಿಕಟವರ್ತಿಗಳಾಗಿದ್ದವರು. ಅವರ ಉಪದೇಶದಿಂದ ವಿದ್ಯಾರ್ಥಿಜೀವನದಲ್ಲಿಯೆ ವೇದಾಂತ ವಿಷಯಕ್ಕೆ ಮಾರುಹೋಗಿ ಮನೆಬಿಟ್ಟು ಹೊರಟವರು. ಇಂತಹರು ಪ್ರಾಮಾಣಿಕ ಬುದ್ಧಿಯಿಂದ ಬಾಬಾಸಾಹೇಬರಂತಹರ ಜೀವನವನ್ನು— ಸಾಂಪ್ರದಾಯಿಕ ಭಾವನೆಯನ್ನು ಬಿಟ್ಟು ವಿಮರ್ಶಾತ್ಮಕ ಬುದ್ಧಿಯನ್ನುಪಯೋಗಿಸಿ—ವಿಶದವಾಗಿ ಬರೆದರೆ, ಎಷ್ಟೊ ಉಪಯೋಗವಾದೀತು.

೨೧. MYSoRE TRIBUNE (ವಾರಪತ್ರಿಕೆ) ಸಂಪಾದಕರು ಶ್ರೀಮಾನ್ ಸಿ. ಆರ್. ಕಾಮತ ೭೬ ಹಾಸ್ಪಿಟಲ್ ರೋಡು ಬೆಂಗಳೂರು. ಕ್ರಾ. ಫೋ. ೧೨ ಪುಟಗಳು. ವಾರ್ಷಿಕ ಚಂದಾ ಐದು ರೂಪಾಯಿ. ಬಿಡಿಸಂಚಿಕೆಗೆ ೦–೧–೬.

ನಗೀಗೆ ನೈವಿದ್ಯ

ಮೋಟಾರ್ ಏಜಂಟನ ಮಗಳು

“ನನ್ನ ಹೆಂಡ್ತಿ ಭಾಳ ತಿಳವಳಿಕೀ ಹುಡಿಗಿ ಇದ್ದಾಳೀನಪಾ! ನಾ ಕೇಳಿದೆ: ದೀಪಾವಳಿಗೆ ನಿನಗೆ ಏನು ಕೊಡಲೀ ಅಂತ. ಅದಕ್ಕ ಆಕಿ ಏನು ಹೇಳಬೇಕು? ‘ಏನು ಕೊಡತೀರಿ ಅದನ್ನ ಕೊಡ್ರೀ’ ಅಂತ ಹೇಳಿದಳು!”

“ಅದು ಸರಿ ಆಯ್ತಲಾ! ಇಲ್ನೋಡು, ಆಕಿ ಮೋಟಾರ್ ಏಜಂಟನ ಮಗಳು! ‘ಏನು ಕೊಡತೀರಿ ಅದನ್ನ ಕೊಡ್ರಿ’ ಅಂತ ಪ್ಯಾಸಿಂಜರರನ್ನ ಕೂಡಿಸೋದು; ಆ ಮ್ಯಾಲ ಅವರ ಜೋಡಿ ಜಗಳಾಟಾ ಹೂಡೋದು....”

* * *

ಸ್ವಭಾವ ವಿಶ್ಲೇಷಣ

“ಏನ್ರೀ ತುಂಗಾಕಕ್ಕೀ, ನಿಮ್ಮ ಅಳ್ಯಾ ದೇವರ ಸ್ವಭಾವ ಏನೋ ವಿಚಿತ್ರ ಇದ್ದಾಂಗ ಕಾಣಿಸತದ! ಹೋದ ದೀಪಾವಳಿಗೆ ಇಲ್ಲಿಗೆ ಬಂದಾಗ, ನನ್ನ ಜೋಡೀ ಎಷ್ಟು ಸಂವಿ ಸಂವಿ ಮಾತನಾಡತಿದ್ದರು; ಈ ಸಲ ಯಾಕೋ ಸಿಟಿ-ಸಿಟಿಕೊಂಡೇ ನಡೀತಾ ಇದ್ದಾರಲ್ಲಾ!”

“ನಿನಗ ಗೊತ್ತಿಲ್ಲೇನು ಶೀನಾ! ಹೋದ ಸಲ ನಮ್ಮ ಅಳಿಯದೇವರು ಸಕ್ಕರೀ ಕಾರ ಖಾನೆಯೊಳಗ ಕೆಲಸಾ ಮಾಡತಿದ್ದರು; ಈಗ ಮಿಲ್ಟ್ರಿಯೊಳಗ ಸೇರಿಕೊಂಡಾರ!”

* * *

ವಿಮೆಯ ಕಂತು, ಹಬ್ಬದ ಉಡುಗೊರೆ

ಆತ:— ಅಲ್ಲಾ, ನೀನೇ ತಿಳಿದು ನೋಡು: ವಿಮಾದ ಕಂತು ತುಂಬುವುದು ಹೆಚ್ಚಿನದೋ, ನಿನ್ನ ದೀಪಾವಳಿ ಉಡುಗೊರೆ ಹೆಚ್ಚಿನದೊ? ವಿಮಾದ ಕಂತು ತುಂಬದಿದ್ದರೆ, ಪಾಲಿಸೀ ಕೆಲಸಕ್ಕ ಬಾರದ್ಹಾಂಗ ಆಗತದ ನೋಡು!

ಆಕೆ:— ಕಂತು ತುಂಬದೆ ಇದ್ದರೆ ಪಾಲಿಸಿ ಯಂಥಾ ನಿರ್ಜೀವ ಕಾಗದ ಕೆಲಸಕ್ಕ ಬಾರ ದ್ಹಾಂಗ ಆಗತದಂತ ನೀವೇ ಹೇಳತೀರಿ! ಅಂದಮ್ಯಾಲೆ, ದೀವಳಿಗಿ ಉಡುಗೊರೀ ಕೊಡ ದಿದ್ದರೆ, ಜೀವ ಇರುವ ಹೆಂಡಂದಿರು ಏನಾಗ ಬಹುದಂಬೂ ಕಲ್ಪನಾ ನಿಮಗ ಇರಬಾರ ದೇನು?

* * *

ಅನುಭವದ ಉಪಮೆ

ಆಕೆ:— ಅದೇ ಹಿಟ್ಟು; ಆದರೆ ಕೋಡ ಬಳೆ ಮಾಡಿದರೆ ಅದರ ರುಚಿ ಬ್ಯಾರೆ; ಅದನ್ನೇ ಪಾತ್ರಿಯೊಳಗ ಹಾಕಿ ಚಕ್ಲಿ ಹಾಂಗ ರೂಪಾಂತರಿಸಿದರೆ ಅದರ ಸವಿ ಬ್ಯಾರೆ— ಅಲ್ಲೇನು?

ಆತ:— ಇಲ್ನೋಡು; ಹುಡುಗಿ ಒಬ್ಬಳೆ! ಆದರೆ ಆಕೀಗುರುತು ಆದದ್ದರ ಸಂವಿ ಬ್ಯಾರೆ; ಮತ್ತ ಗುರುತು ಪ್ರೇಮದಲ್ಲಿ ರೂಪಾಂತರ-ಗೊಂಡರೆ ಅದರ ರುಚಿ ಬ್ಯಾರೇ—ಅಲ್ಲೇನು?

* * *

ಸಕ್ಕರೆಯ ಸಾಲ

ಗುಂಡೇರಾಯ:— ನನ್ನ ಮುಂದ ಸಂವಿ ಸಂವಿ ಸಕ್ಕರೀ ಗುಡ್ಡಾ ಒಟ್ಟಿ ನನ್ನ ಹೆಂಡ್ತಿ, ದೀಪಾವಳಿಗಾಗಿ ಒಂದು ಜರದ ಸೀರಿ ಎಬ್ಬಿಸೇ ಬಿಟ್ಲು!

ಬಂಡೇರಾಯ:— ಎಲಾ ಇವನ! ನಿಮ್ಮ ಮನ್ಯಾಗ ಗುಡ್ಡಾ ಒಟ್ಟುವಷ್ಟು ಸಕ್ಕರೀ ಸಂಗ್ರಹಿಸ್ಯಾಳೇನ ನಿನ್ನ ಹೆಂಡ್ತಿ? ಭಲೆ! ಅಲ್ಲೋ, ನನಗೊಂದು ಎರಡು ಥಡೇದಷ್ಟು ಕೈಗಡ ಕೊಡಿಸಲಾ ಹಬ್ಬಕ್ಕ! ಸಿಕ್ಕಾಗ ತರಿಸಿ ಕೊಡ್ತೇನಂತ!

ನಗಿಸುವ ಪ್ರಯತ್ನ

“ನಗತಾ ಇರುವಾಗ ನನ್ನ ಹೆಂಡ್ತಿ ಭಾಳ ಚಂದ ಕಾಣಿಸತಾಳ ನೋಡು, ಭೀಮೂ! ಅದಕ್ಕs ನಾನು ಯಾವಾಗಲೂ ಆಕಿನ್ನ ನಗಿಸ ಲಿಕ್ಕೆ ಪ್ರಯತ್ನ ಮಾಡತಿರತೇನಿ!”

“ನಾನೂ ನಮ್ಮಾಕಿನ್ನ ನಗಿಸಲಿಕ್ಕೆ ಎಷ್ಟೋ ಪ್ರಯತ್ನ ಮಾಡತೀನೇನಪಾ! ಆದರ ಆಕಿಗೆ ಕಟ್ಯಾಡಕಿನೇ (ಚಕ್ಕಲಗುಳಿ) ಆಗೂದಿಲ್ಲೋ, ಏನು ಮಾಡಬೇಕು?”

* * *

ಆಕೆ–ಆತರ ಸಂವಾದ

ಆಕೆ:— ಈ ರೇಶ್ಮೀ ಸ್ಕಾರ್ಫಿಗೆ ಬೆಲೆ ಏನು ಕೊಟ್ರಿ!

ಆತ:— ಆರುವರೆ ರೂಪಾಯಿ.!

ಆಕೆ:— ಸರಿ! ಆರೂವರೆ ಕೊಟ್ರೆ ಒಂದು ಸುಂದರವಾದ ಪತ್ತಲ ಬರಬಹು ದಾಗಿತ್ತಲ್ಲಾ!

ಆತ:— ಬರಬಹುದಾಗಿತ್ತು; ಆದರೆ ಪತ್ತಲಾ ಕೊರಳಿಗೆ ಸುತ್ತಿಕೊಳ್ಳಲಿಕ್ಕೆ ಬರತದ ಏನು?



ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್-ಡಿಪೋ, ಹುಬ್ಬಳ್ಳಿ.

ಕನ್ನಡಿಗರಲ್ಲ, ತಣ್ಣಡಿಗರು

ಕಳೆದ ಒಂದು-ಒಂದುವರೆ ತಿಂಗಳುಗಳಿಂದ ಕರ್ನಾಟಕದಲ್ಲಿ ಒಂದು ಆಕಳಿಕೆ ಕೇಳಬರುತ್ತಲಿದೆ. (ಯಾವಾಗಲೂ ನಿದ್ದೆ-ಹೋಗುವ ಸ್ವಭಾವವು ಕನ್ನಡಿಗರದಾದ್ದರಿಂದ, ಆಗಾಗ ಎಚ್ಚತ್ತು ತೋರುವ ಚಟುವಟಿಕೆಗೆ ಆಕಳಿಕೆ ಎಂದಿದ್ದೇವೆ). ಅದೆಂದರೆ ಬಳ್ಳಾರಿಯಲ್ಲಿ ಸೇರುವ ಆಂಧ್ರ ಮಹಾಸಭೆಗಾಗಿ ವಿರೋಧ-ವನ್ನು ಬುರುಗಿಸುವ ಭಾಷಣಗಳು, ಪ್ರಕಟನೆಗಳು. ಈ ವಿರೋ-ಧದ ಅಬ್ಬರವನ್ನು ನೋಡಿದರೆ, ಕನ್ನಡಿಗರ ಕೆಚ್ಚು ಅದೆಂತಹದು–ಎನಿಸುವಂತಿದೆ. ಆದರೆ ಕನ್ನಡಿಗರಂತೆ ನೆರೆಯುವವರೂ ಇಂತಹ ಅಡ್ಡಮಳೆಯ ಅಬ್ಬರವನ್ನು ಅನೇಕ ಸಲ ನೋಡಿದ್ದಾರೆ; ಅಡ್ಡ-ಮಳೆಯಂತೆ ನಮ್ಮ ಇಂತಹ ಚಳವಳಗಳೂ ಕ್ಷಣಾರ್ಧದಲ್ಲಿ ಹೇಳಹೆಸರಿಲ್ಲದಂತಾಗಿವೆ— ಹಿಂದೆ ಅನೇಕ ಸಲ- ಒಂದು ಕೂಗನ್ನೆಬ್ಬಿಸಿ, ಜನತೆಯ ಕೆಚ್ಚನ್ನು ಕನಲಿ, ಕೊನೆಗೆ ತಣ್ಣಡಿಗ-ರಾಗುವುದರಿಂದ, ಜನತೆಯ ಮೇಲೆ ಯಾವ ಕೆಲಸಗೇಡಿತನದ ಪರಿಣಾಮವಾಗಬಹುದೆಂಬುದನ್ನು ನಮ್ಮ ಮುಂದಾಳುಗಳು ಅರಿತಂತೆ ತೋರುವುದಿಲ್ಲ. ವಿಶ್ವವಿದ್ಯಾನಿಲಯ, ಶಿಕ್ಷಣ, ಏಕೀ-ಕರಣ— ಇವುಗಳ ವಿಷಯವಾಗಿ ಎಷ್ಟು ಸಭೆ-ಸಮ್ಮೇಳನಗಳನ್ನು ನಾವು ಸೇರಿಸಿಲ್ಲ? ಅದೆಲ್ಲವೂ ಇಂದು ಅವಶೇಷ ಕೂಡ ಇಲ್ಲದ ಮಾತಾಗಿದೆ: ಇಂದಿನ ವರೆಗೆ ನಮ್ಮ ಕೂಗಾಟ-ಕುಣಿದಾಟ-ಗಳಿಂದ ಒಂದು ಹೆಜ್ಜೆಯನ್ನಾದರೂ ಮುಂದಿಟ್ಟೇಯೆಂದು ಹೇಳು-ವಂತಿಲ್ಲ. ಮುಂದಿಡುವ ಮಾತಂತಿರಲಿ, ಇಂದು ಆಂಧ್ರರು ಬಳ್ಳಾರಿಯನ್ನು ತಮ್ಮ ಪ್ರಾಂತಕ್ಕೆ, ಮರಾಟಿಗರು ಅನೇಕ ಭಾಗ-ವನ್ನು ತಮ್ಮ ವಿಶ್ವವಿದ್ಯಾನಿಲಯದ ಒಳಪಡೆಗೆ ಸೇರಿಸಿಕೊಳ್ಳ-ಬೇಕೆಂದು ಅತ್ಯಂತ ಆತ್ಮವಿಶ್ವಾಸದಿಂದ ಧೈರ್ಯದಿಂದ ಹೇಳುತ್ತಿದ್ದಾರೆ!

ಮುಂದಾಳುತನಕ್ಕಾಗಿ ಮುಗ್ಗಲಗೇಡಿತನ

ಈ ನಮ್ಮ ಮುಗ್ಗಲಗೇಡಿತನಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಸ್ತುತವಾದ ಒಂದೆರಡನ್ನು ಇಲ್ಲಿ ಸ್ಪಷ್ಟವಾಗಿ ಹೇಳುವುದು ಅಗತ್ಯವಾಗಿದೆ. ಒಂದು—ನಮ್ಮ ಮುಂದಾಳುತನ. ಇಡಿಯ ಕರ್ನಾಟಕದ ದೃಷ್ಟಿಯಿಂದ ಹೇಳುವುದಾದರೆ ನಮ್ಮಲ್ಲಿ ಮುಂದಾಳುತನವೆ ಇಲ್ಲವೆನಬಹುದು. ಯಾರು ಹಿಂದುಸ್ತಾನದ ದೇಶಭಕ್ತರು, ಯಾರು ಮೈಸೂರಿನ ಮಹಾಪುರುಷರು, ಯಾರು ಉತ್ತರ ಕರ್ನಾಟಕದ ಉಜ್ವಲಾಭಿಮಾನಿಗಳು, ಇನ್ನು ಯಾರೋ ದಕ್ಕಿಸಿಕೊಳ್ಳುವ ದಾಂಭಿಕರು! ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಬಗ್ಗೆ ಕೈಕೊಂಡ ಕೆಲಸಕ್ಕೆ ತಪೋಬಲವೆ ಇಲ್ಲ-ದಂತಾದರೆ ಆಶ್ಚರ್ಯವೇನು? ಧಾರವಾಡದಲ್ಲಿ ಏಕೀಕರಣದ ಪರಿಷತ್ತು ಸೇರಿತು, ಅಖಂಡವಾಗಿ ಕೆಲಸವನ್ನು ಸಾಗಿಸಲು ಏಕೀಕರಣ ಕಚೇರಿಯು ಸ್ಥಾಪನವಾಯಿತು. ಆ ಕಚೇರಿ ಇಂದು ಎಲ್ಲಿದೆಯೊ! ಬಾಗಿಲಿಗೆ ಬೀಗಹಾಕಿದೆಯಲ್ಲದೆ, ಬೀಗದ ಕೈ ಕಳೆದಿದ್ದರೂ ಆಶ್ಚರ್ಯವಿಲ್ಲ! ಒಂದು ಶಿಕ್ಷಣ ಪರಿಷತ್ತು ಸೇರಿತು. ಮುಂಬಯಿ ಪ್ರಾಂತದ ಮುಖ್ಯ ಮತ್ತು ಶಿಕ್ಷಣ-ಮಂತ್ರಿಗಳ ಹಸ್ತದಿಂದ ಉದ್ಘಾಟನ. ಕೂಡಿದವರೆಲ್ಲ ಅತಿರಥಿ-ಮಹಾರಥಿಗಳು. ಬೆರಗುಗೊಳಿಸುವಂತಹ ಬಾಯ್ಮಾತು. ಬೆಮರೊಡೆಸುವಂತಹ ಗೊತ್ತುವಳಿಗಳು. ಆ ಪರಿಷತ್ತು ಸೇರಿ ಇಂದಿಗೆ ಎಷ್ಟು ವರ್ಷಗಳಾದುವೊ! ಒಂದು ಶಿಕ್ಷಣಸಂಸ್ಥೆ-ಯಾದರೂ ಆ ಪರಿಷತ್ತಿನ ಮೂಲಕ ಅಸ್ತಿತ್ವದಲ್ಲಿ ಬಂದಿದ್ದರೆ ಸರಸತಿಯ ಆಣೆ! ಇಷ್ಟೇಕೆ? ಕರ್ನಾಟಕ ವಿಶ್ವವಿದ್ಯಾನಿಲಯ ಸಮ್ಮೇಳನಸೇರಿ, ಒಂದು ಸಮಿತಿಯನ್ನು, ಇಡಿಯ ಕಾರ್ಯವನ್ನು ನೆರವೇರಿಸುವುದಕ್ಕಾಗಿ ನಿಯಮಿಸಿತು. ಅದೇ ಕಾಲದಲ್ಲಿ ಮಹಾ-ರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯು ತನ್ನ ವರದಿಯನ್ನು ಪ್ರಕಟಿಸಿದರೂ, ನಮ್ಮ ಸಮಿತಿ ಇನ್ನೂ ಒಂದೂ ಸಭೆಯನ್ನೂ, ಸೇರಿಸಿಲ್ಲ! ಇಂದಿನ ಬಳ್ಳಾರಿಯ ವಿಷಯವನ್ನೇ ನೋಡೋಣ. ಅಖಂಡಕರ್ನಾಟಕದ ಏಕಮೇವ ಪ್ರತಿನಿಧಿ ಎಂದು ಹೇಳಿಕೊ-ಳ್ಳುವ ಒಂದು ಸಂಸ್ಥೆಯ ಸಂಚಾಲಕರಿಗೆ, ಸಪ್ಟೆಂಬರ್ (ಇದೇ ವರ್ಷದ) ಮಧ್ಯದ ವರೆಗೆ ಬಳ್ಳಾರಿಯಲ್ಲಿ ಆಂಧ್ರಮಹಾಸಭೆ ಸೇರುವುದಿದೆ, ಅಲ್ಲಿಯ ಕನ್ನಡಿಗರು ವಿರೋಧವನ್ನು ವ್ಯಕ್ತಪಡಿಸಿ-ದ್ದಾರೆ ಎಂಬ ಸಂಗತಿಯೆ ಗೊತ್ತಿರಲಿಲ್ಲವಂತೆ! ಇಂತಹದು ನಮ್ಮ ಇಂದಿನ ಮುಂದಾಳುತನದ ಮಾದರಿ!

ಜಯಂತಿ

ಸಂಸ್ಥಾಜೀವನ ಸರಿಯಾಗಿಲ್ಲ

ಹೀಗೆ ಹೇಳುವ ಮಾತ್ರಕ್ಕೆ ನಾವು ಇಂದಿನ 'ಮುಂದಾಳು'-ಗಳನ್ನು ಹಳಿಯುತ್ತಲಿದ್ದೇವೆ ಎಂದು ಯಾರೂ ಅವಸರವಾಗಿ ತಿಳಿಯಬೇಕಾಗಿಲ್ಲ. ಹಾಗೆ ಮಾಡುವುದು ವಿಚಾರದ ಮತ್ತು ವೇಳೆಯ ಅಪವ್ಯಯ ಎಂದು ನಾವು ತಿಳಿದಿದ್ದೇವೆ. ದೋಷವನ್ನು ಹೊರಿಸುವ ಕಾಲವಿಲ್ಲ ಈಗ, ದಾರಿಯನ್ನು ಹಿಡಿಯಲೇ ಬೇಕಾದ ಕಾಲ ಬಂದಿದೆ. ನಿಂದೆಗಿಂತ ನಿರ್ಣಯವನ್ನು ಕೈಕೊಳ್ಳುವುದು ಮುಖ್ಯವಾಗಿದೆ. ನಿರ್ಣಯವು ಯೋಗ್ಯವಾಗಬೇಕಾದರೆ ಪರಿಸ್ಥಿತಿಯ ಜ್ಞಾನವು ಸಮರ್ಪಕವಾಗಿರುವುದವಶ್ಯವಾದ್ದರಿಂದ, ನಾವೀ ವಿ ಷಾ ದ ಕ ರ ವಿಮರ್ಶೆಯಲ್ಲಿ ತೊಡಗಬೇಕಾಗಿದೆ. ಮುಂದಾಳುತನದಂತೆ ನಮ್ಮ ಸಂಸ್ಥಾಜೀವನವೂ ಇಂದಿನ ನಮ್ಮ ಕೆಲಸಗೇಡಿತನಕ್ಕೆ ಕಾರಣವಾಗಿದೆ ಎನಬಹುದು. ಅ ಖಿ ಲ ಕರ್ನಾಟಕ ಸಂಸ್ಥೆಗಳೆಷ್ಟಿವೆ? ಎಂದರೆ ಅಖಿಲವಾದ ಕರ್ನಾಟಕ-ವನ್ನೇ ಗುರಿಯಾಗಿಟ್ಟುಕೊಂಡು ದುಡಿಯುವ ಸಂಸ್ಥೆಗಳೆಷ್ಟಿವೆ? ಅದರ ಜೊತೆಗೆ ಅಖಿಲಕರ್ನಾಟಕ— ಆಯಾ ಜಾತೀಯ— ಸಂಸ್ಥೆಗಳೆಷ್ಟಿವೆ? ಇಡಿಯ ಕರ್ನಾಟಕದಲ್ಲಿದ್ದ ತನ್ನ ಜಾತಿ-ಬಾಂಧವರಿಗಾಗಿ ದುಡಿಯುವ ಸಂಸ್ಥೆಗೆ, ಎಲ್ಲ ಜಾತಿ-ಮತ-ಪಂಥಗಳಿಗೂ ಒಪ್ಪಿಸುವ ಅಖಂಡಕರ್ನಾಟಕ—ಭೂಮಿ-ತಾಯಿಯ ಕಲ್ಪನೆ ಬಂದೀತಾದರೂ ಹೇಗೆ? ಇಷ್ಟೇ ಅಲ್ಲ; ಎಷ್ಟು ಅಖಿಲಕರ್ನಾಟಕ ಸಂಸ್ಥೆಗಳೊ ಅಷ್ಟು ಅಖಿಲಕರ್ನಾಟಕ ಮುಂದಾಳುಗಳು! ಎಂದರೆ ಮುಂದಾಳುಗಳೆಬ್ಬಿಸಿದ ಧೂಳಿ-ಯಲ್ಲಿ ಹಿಂದಾಳುಗಳಿಗೆ ದಾರಿಯೆ ಕಾಣದಂತಹ ಪರಿಸ್ಥಿತಿ!

ಅಖಂಡದೃಷ್ಟಿಯ ಅಭಾವ

ಅಖಿಲಕರ್ನಾಟಕಕ್ಕಾಗಿಯೆ ಅಖಂಡವಾಗಿ ಆಂದೋಲನ-ವನ್ನೆಬ್ಬಿಸಬಹುದಾದ ಒಂದೂ ಸಂಸ್ಥೆಯಿಲ್ಲ ಎಂದೇ ನಮ್ಮ ಅಭಿ-ಪ್ರಾಯ. ಸಾಹಿತ್ಯಪರಿಷತ್ತು, ವಿದ್ಯಾವರ್ಧಕ ಸಂಘ, ಇತಿಹಾಸ ಸಂಶೋಧನ ಮಂಡಳ, ವಣಿಕ್ ಸಂಘ— ಇಂತಹ ನಾಲ್ಕಾರು ಹೆಸರುಗಳನ್ನು ಮುಂದೆ ಮಾಡಿ, ಯಾರೂ ನಮ್ಮನ್ನು ಸಮಾಧಾನ-ಗೊಳಿಸಲಾರರು, ನಮ್ಮ ಅಭಿಪ್ರಾಯವನ್ನು ಅಲ್ಲಗಳೆಯಲಾರರು. ಯಾಕೆಂದರೆ ಒಂದಿಲ್ಲೊಂದು ಕಾರಣಕ್ಕಾಗಿ ಈ ಸಂಸ್ಥೆಗಳೂ 'ಅವ್ಯಾಹತವಾಗಿ ಅಖಂಡ ಕರ್ನಾಟಕತ್ವವನ್ನು ಸಾಧಿಸುವುದೆ ತಮ್ಮ ಮೊದಲ ಧ್ಯೇಯ'ಎಂದುಕೊಂಡಿಲ್ಲ. ಕರ್ನಾಟಕವು ಅಖಂಡ-ವಾಗಿ ಉಳಿದರೆ ಮಾತ್ರ ಅದರ ಸಾಹಿತ್ಯದ ಸೊಬಗು, ವಾಣಿಜ್ಯದ ವೈಭವ, ವಿದ್ಯೆಯ ಅಭಿವೃದ್ಧಿ ಎಂದು ಯಾರೂ ತಿಳಿದಿಲ್ಲ; ತಿಳಿ-ದಿದ್ದರೆ ಅದರಂತೆ ನಡೆದಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳು-ವೆವು. ಇಂದು ಕನ್ನಡನಾಡಿನ ಜಳವಳದ ಇತಿಹಾಸ ಬೇಕಿದ್ದರೆ ಒಂದೆಡೆ ಸಿಕ್ಕುವಂತಿಲ್ಲ; ಅಖಂಡಕರ್ನಾಟಕತ್ವವನ್ನು ಸಾಧಿ-ಸಲು ಧೋರಣೆ ಯಾವುದೆಂದರೆ ಒಬ್ಬರೂ ಹೇಳುವಂತಿಲ್ಲ; ಇದ್ದ ಕರ್ನಾಟಕವನ್ನು ಉಳಿಸಿಕೊಳ್ಳಲು ಯಾವ ಸಂಸ್ಥೆಯು ಯಾವ ನಿಶ್ಚಿತ ಇಲ್ಲವೆ ಶಾಶ್ವತ ಯೋಜನೆಯನ್ನು ಮಾಡಿಕೊಂಡಿದೆ ಎನುವಂತಿಲ್ಲ. ತಿಂದಿ ಬಿಟ್ಟಾಗ ತುರಿಸುವಂತೆ, ಜಳವಳವನ್ನು ಎಬ್ಬಿಸುವುದು ರಕ್ತಶುದ್ಧಿಯನ್ನು ಮಾಡಿಕೊಳ್ಳದಷ್ಟೆ ಮೂರ್ಖತನ ಎಂದು ಬೇರೆ ಹೇಳಬೇಕಾಗಿಲ್ಲ.

ಕುರುಬನಿಗೆ ತಕ್ಕ ಕುರಿಹಿಂಡು

ನಮ್ಮ ಮುಂದಾಳುತನವೂ ನಮ್ಮ ಸಂಸ್ಥಾಜೀವನವೂ ಯಾವ ಮಟ್ಟಿನಲ್ಲಿವೆಯೊ ಅದಕ್ಕನುಗುಣವಾಗಿಯೆ ನಮ್ಮ ಜನತೆಯು ಮಟ್ಟೂ ಇರುವುದು ಸಹಜವೆ. ಹಾಗೆ ನೋಡಿದರೆ ಭಾರತದ ಮಿಕ್ಕ ಪ್ರಾಂತಗಳ ಜನತೆಗೂ ನಮ್ಮ ಜನತೆಗೂ ಸಾಮ್ಯವಿದೆ, ಸರಿತೂಕವಿದೆ, ಇದೆಲ್ಲವೂ ಸಹಜವಾಗಿಯೆ ಇದೆ. ಶಿಕ್ಷಣ, ಬಡತನ, ಬುದ್ಧಿಸಂಸ್ಕಾರ, ಪರಾವಲಂಬಿತ್ವ— ಇವು ಬ್ರಿಟಿಶರ ಏಕರೂಪ ಆಡಳಿತಕ್ಕಾಗಿ ಎಲ್ಲ ಪ್ರಾಂತದ ಜನತೆಗಳಲ್ಲೂ ಏಕ-ರೂಪವಾಗಿಯೆ ಇವೆ. ಅದರಂತೆಯೆ ಮಿಕ್ಕ ಪ್ರಾಂತಗಳಲ್ಲಿ-ಯಂತೆ ನಮ್ಮಲ್ಲೂ ಕೆಲವು ಧನವಂತರಿದ್ದಾರೆ, ಬೆರಳು ಮಾಡಿ ತೋರಿಸುವಂತಹ ಲಕ್ಷಾಧೀಶರೂ ಇದ್ದಾರೆ, ವ್ಯಾಪಾರ-ವ್ಯವ-ಸಾಯಗಳ ಘನವಂತರೂ ಇದ್ದಾರೆ. ಆದರೆ ಒಂದು ವಿಷಯ-ದಲ್ಲಿ ಮಾತ್ರ ನಮ್ಮ ವೈಭವಶಾಲಿಗಳು ಮಿಕ್ಕ ಪ್ರಾಂತಗಳಲ್ಲಿಯ ತಮ್ಮ ಬಂಧುಗಳಿಗಿಂತ ಬೇರೆಯಾಗಿದ್ದಾರೆ. ಅದೂ ಮಹತ್ತ್ವದ ವಿಷಯದಲ್ಲಿ. ಮಿಕ್ಕ ಪ್ರಾಂತಗಳ ಧನವಂತರು ತಮ್ಮ ಜನತೆಯ ಜೀವನದೊಡನೆ, ತಮ್ಮ ಪ್ರಾಂತದ ಪರಿಸ್ಥಿತಿಯೊಡನೆ ನಿಕಟವಾದ ಸಂಬಂಧವನ್ನಿಟ್ಟುಕೊಂಡಿದ್ದಾರೆ ತಮ್ಮ ವೈಭವಕ್ಕೆ ಕಾರಣ-ವಾದ ಪ್ರಾಂತಕ್ಕೂ ಜನತೆಗೂ ಆ ವೈಭವದ ಕಾಣಿಕೆಯನ್ನು ಸಲ್ಲಿಸಿ, ತಾವು ಧನವಂತರಲ್ಲದೆ ಬುದ್ಧಿವಂತರೂ ಕೂಡ ಆಗಿ-ದ್ದಾರೆಂದು ತೋರಿಸಿದ್ದಾರೆ. ಆದರೆ ಕನ್ನಡ ಕುಬೇರರ ಮಾತೇ ಬೇರೆ. ತಮ್ಮ ಜಿಲ್ಲೆಯಲ್ಲಿ ಬರಗಾಲದ ಹಾವಳಿ ಎದ್ದು, ಪರ-ಪ್ರಾಂತದಿಂದ ಧನವಂತರ ಧನ,ಮನವಂತರ ಸಹಾಯ ಬಂದರೂ ಇವರಿಗೆಚ್ಚರವಿರುವುದಿಲ್ಲ. ಆದೇ ಕಾಲಕ್ಕೆ ಅನೇಕ ಜಾಗತಿಕ (?) ಉದ್ದೇಶಗಳಿಗಾಗಿ ಸಾ ವಿ ರ ಗ ಟ್ಟ ಲೆ ಹಣವನ್ನು ಸುರಿಯು-ವರು! ಕರ್ನಾಟಕಕ್ಕೆ ಸೃಷ್ಟಿಸಂಪತ್ತಿದೆ; ಹೊರಗಿನವರು ಬಂದು ಕಂಪನಿಗಳನ್ನು ಕಟ್ಟಿ ಅದನ್ನು ಸೂರೆಗೊಳ್ಳುವರು! ಒಂದು ಶಿ ಕ್ಷ ಣ ಸಂ ಸ್ಥೆ, ಒಂದು ಉದ್ಯೋಗಕೇಂದ್ರ, ಒಂದು ವಾಚನಾಲಯ, ಒಂದು ವ್ಯವಸಾಯ ಸಂಸ್ಥೆ— ಇಂತಹದೊಂದಕ್ಕೆ ಒಬ್ಬ ಧನವಂತನು ಸಾ ವಿ ರ ಗ ಟ್ಟ ಲೆ ಹಣವನ್ನು ಕೊಟ್ಟ ಉದಾಹರಣೆ ಇದೆಯೆ? ಈ ಸಂದರ್ಭ-ದಲ್ಲಿ ಜಾತೀಯ ಸಂಸ್ಥೆಗಳನ್ನು ನಾವು ಎಣಿಸುವುದೆ ಇಲ್ಲ. ಅಂತಹ ಸಂಸ್ಥೆಗಳು ಎಷ್ಟು ಬೆಳೆದರೂ ಅಖಂಡ ಕರ್ನಾಟಕತ್ವದ ಕಲ್ಪನೆ ಅಲ್ಲಿ ಗೌಣವಾಗಿಯೆ ಉಳಿಯುವುದು. ಕರ್ನಾಟಕಕ್ಕೆ (ಬ್ರಿಟಿಶ್ ಕರ್ನಾಟಕಕ್ಕೆ) ವಿಶ್ವವಿದ್ಯಾಲಯ ಬೇಕಾದರೆ ಸಾಕಷ್ಟು ಬೇರೆ ಬೇರೆ ವ್ಯವಸಾಯದ ಶಿಕ್ಷಣಸಂಸ್ಥೆಗಳು ಕೂಡ ಇಲ್ಲ! ಜಳವಳ ಬಡವರ ಬಾಯಿಯಲ್ಲಿ; ಕುಬೇರರ ಕೈ ಅವರವರ ಕಿಸೆ.

ಯಲ್ಲಿ ! ಈ ಕಾಸಿನ ಕಟುಕರಲ್ಲಿ ಕರ್ನಾಟಕಕ್ಕಾಗಿ ಅಭಿಮಾನವನ್ನು (ಕೊನೆಗೆ ಹೆದರಿಕೆಯನ್ನು) ಹುಟ್ಟಿಸುವ ತಪ್ಪೋಬಲ ನಮ್ಮ ಮುಂದಾಳುತನದಲ್ಲಿಲ್ಲ.

ನಿರಾಶೆಯ ವಿಷಯರಹಸ್ಯ

ಸದ್ಯದ ಸಂದರ್ಭದಲ್ಲಿ ಇವೆಲ್ಲ ಮಾತುಗಳನ್ನು ಹೇಳುವುದರಿಂದ, ಬಳ್ಳಾರಿ ನಮ್ಮ ಕೈಬಿಟ್ಟುಹೋಗುವುದೆಂದಾಗಲಿ ಹೋದರೂ ನಮಗದು ನಮ್ಮ ಯೋಗ್ಯತೆಗೆ ತಕ್ಕ ಫಲವೆಂದಾಗಲಿ ನಮ್ಮ ಅಭಿಪ್ರಾಯವಲ್ಲ. ನಿರಾಶೆಯ ಪುರಾಣವನ್ನೆ ಹೇಳುವುದಾಗಿದ್ದರೆ ಮೇಲಿನ ಮಾತುಗಳನ್ನು ನಾವು ಹೇಳುತ್ತಿರಲಿಲ್ಲ. ಆದರೆ ಆಶಾಂಕುರವು ಈಗಲೆ ಮೊಳಕೆಯೊಡೆಯಲಿಲ್ಲವಾದರೆ ಯಾರಿಗೂ ಆಶ್ಚರ್ಯವೆನಿಸಬಾರದು, ಇಂದಿನ ಪರಿಸ್ಥಿತಿಗೆ ಅದು ಅಸಹಜವಾದುದಲ್ಲ ಎಂದು ತೋರಿಸಿಕೊಡುವುದೇ ನಮ್ಮ ಉದ್ದೇಶ. ಇತಿಹಾಸದಲ್ಲಿ ಯಾರಾರ ಅಧಿಪತ್ಯದಲ್ಲಿ ಏನೇನನ್ನು ಅನುಭವಿಸಿದರೂ, ಇಂದು ಮತ್ತೆ ನಮ್ಮ ಕನ್ನಡತನ ಪ್ರತಿಭಟಿಸುತ್ತ ಚೇತರಿಸಿ ನಿಂತಿಲ್ಲವೆ? ಒಂದು ಆಂಧ್ರರ ಇಲ್ಲವೆ ಒಂದು ಮರಾಟಿಗರ ಆಕ್ರಮಣದಿಂದ ನಮ್ಮ ಸತ್ತ್ವ ಅಡಗಬೇಕಾಗಿಲ್ಲ. ಆದರೆ—ಇಂದು ನಾವು ಇಂತಹ ಆಕ್ರಮಣಕ್ಕೆ ಹೂಡಿದ ವಿರೋಧಕ್ಕೆ ಬೆಲೆ ಇದೆಯೆ, ಯೋಗ್ಯತೆ-ಯಶಸ್ಸುಗಳು ದೊರೆಯುವುವೆ—ಎಂದು ಸಂದೇಹ. ನಮ್ಮ ಸಾರ್ವಜನಿಕ ಜೀವನ, ನಮ್ಮ ಮುಂದಾಳುತನ—ಇವೆರಡೂ ಹಿಂದುಳಿದ ವಸ್ತುಗಳಾಗಿವೆ; ಮಣ್ಣಿನ ಬೊಂಬೆಗಳಾಗಿವೆ. ಹೊರಗೆ ಎಷ್ಟೊಂದು ಬಣ್ಣಬಣ್ಣದ ಚೆಂದವಿದ್ದರೂ ಅವುಗಳಿಗೆ ಚೈತನ್ಯ ಬಂದೀತು ಹೇಗೆ? ಅವುಗಳ ಯೋಗ್ಯತೆ ಮಾರ್ಕೆಟಿನ ಮೇಲಾಟದ ಯೋಗ್ಯತೆ, ಒಳಗಿನ ಶಕ್ತಿಗಳಿಗೆ ಸಂಬಂಧಿಸಿದ ಯೋಗ್ಯತೆ ಅಲ್ಲ. ಸಾರ್ವಜನಿಕ ಜೀವನದಲ್ಲಿ ಬಿರುಗಾಳಿ ಎದ್ದು ಮಳೆ ಬಡಿದಾಗ ಅವುಗಳ ಬಣ್ಣ ತೊಳೆದು ಹೋಗಬಹುದಾಗಿದೆ; ಅವುಗಳ ಸ್ವರೂಪ ಕೆಸರಿನ ಮುದ್ದೆಯಾಗಬಹುದಾಗಿದೆ. ಈ ಮಾತನ್ನು ವಿಚಾರವಂತರು, ಉತ್ಸಾಹಿಗಳು, ಆಶಾವಾದಿಗಳು ಮುಂಚೆ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಸಹಜವಾಗಿ ಪ್ರಗತಿಗೆ ತಡೆಯುಂಟಾದಲ್ಲಿ, ಹಠಾತ್ತಾದ ಕ್ರಾಂತಿ ಧಾವಿಸುವುದು. ಮೇಲಿಂದ ಮೇಲೆ ಬರುವ ಆಘಾತಗಳು ಅಂತಹ ಕ್ರಾಂತಿಯ ಪೂರ್ವಚಿಹ್ನಗಳು!

ಪ್ರಾದೇಶಿಕ ವಿಶ್ವವಿದ್ಯಾಲಯಗಳು

ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯವರ ವಿಚಾರಣೆ ಮುಗಿದು ಅವರ ವರದಿ ಪ್ರಸಿದ್ಧವಾಗಿದೆ. ಪ್ರಾದೇಶಿಕ ವಿಶ್ವವಿದ್ಯಾಲಯಗಳು, ಅವುಗಳ ಆವಶ್ಯಕತೆ, ಕಾರ್ಯಕ್ಷೇತ್ರ, ಸ್ವರೂಪ ಮುಂತಾದ ಸಾಮಾನ್ಯ ವಿಷಯಗಳನ್ನು ಸಮಿತಿಯವರು ಕೂಲಂಕಷವಾಗಿ ವಿವರಿಸಿದ್ದಾರೆ. ಎಷ್ಟೊ ಮಾತುಗಳನ್ನು ಮಿಕ್ಕ ಪ್ರಾಂತದವರು ಒಪ್ಪಬಹುದಾಗಿದೆ. ನಿಜವಾಗಿ ಹಿಂದುಸ್ತಾನದ ಎಲ್ಲ ಪ್ರಾಂತಗಳಿಗಿಂತ ಮುಂಬಯಿ ಪ್ರಾಂತದ ಪರಿಸ್ಥಿತಿ ಬೇರೆಯಾಗಿದೆ. ಕನ್ನಡ, ಮರಾಟಿ, ಗುಜರಾತಿ—ಈ ಮೂರು ಪ್ರಮುಖ ಭಾಷೆಗಳನ್ನಾಡುವ ಜನಾಂಗಗಳು ಈ ಪ್ರಾಂತದಲ್ಲಿ ಸೇರಿವೆ. ಮದ್ರಾಸದಲ್ಲೂ ತಮಿಳು-ತೆಲುಗುಗಳಿವೆ; ಆದರೆ ಈಗಾಗಲೆ ಅಲ್ಲಿ ಆಂಧ್ರ ವಿಶ್ವವಿದ್ಯಾಲಯದ ಸ್ಥಾಪನೆಯಾಗಿದ್ದುದರಿಂದ ನಮ್ಮಲ್ಲಿ ಉದ್ಭವಿಸಬಹುದಾದ ಪ್ರಶ್ನೆಗಳು ಅಲ್ಲಿ ತೊಡಕನ್ನು ಹುಟ್ಟಿಸಲಾರವು. ಕನ್ನಡದ ಮಾತು ಇನ್ನೂ ವಿಶಿಷ್ಟವಾಗಿದೆ. ಇದು ಮುಂಬಯಿಯಲ್ಲಿಯಂತೆ ಮದರಾಸು—ನೈಜಾಂ ಪ್ರಾಂತಗಳಲ್ಲೂ, ತ್ರಿಶಂಕುವಿನಂತೆ ಮೂರನೆಯದೊಂದು ಜಾಗೆಯನ್ನು ಆಕ್ರಮಿಸಿಕೊಂಡಿದೆ. ಯಾವ ಪ್ರಾಂತದಲ್ಲೂ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಬೇಡುವಷ್ಟು ಪ್ರಬಲವಾಗಿಲ್ಲ. ಇನ್ನು ಎಲ್ಲ ಪ್ರಾಂತಗಳಲ್ಲಿಯ ಕನ್ನಡ ಜಿಲ್ಲೆಗಳು ಒಂದೆಡೆ ಸೇರಿ ಬೇಡುವುದೆಂದರೆ ಆ ಏಕೀಕರಣದ ಮುಂಚೆ ಬೇರೆ ಭಾಷೆಗಳ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಿ, ಅವುಗಳನ್ನೇ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಆಶ್ರಯಿಸುವ ಅನಿವಾರ್ಯ ಪರಿಸ್ಥಿತಿ ಬರಬಹುದಾಗಿದೆ. ಆದಕ್ಕಾಗಿ, ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸಮಕಾಲಿಕವಾಗಿಯೆ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಾಗುವುದು ಅಗತ್ಯ ಎಂಬುದನ್ನು ನಮ್ಮವರು ಅರಿತು, ಆ ರೀತಿ ಕಾರ್ಯವನ್ನು ನಡೆಸಬೇಕು, ಸರಕಾರವನ್ನೂ ಎಚ್ಚರುಗೊಳಿಸಬೇಕು. ಇಲ್ಲವಾದರೆ ಮತ್ತೊಮ್ಮೆ ಕೇವಲ ಅಖಿಲ-ಕರ್ನಾಟಕ-ನಿಷೇಧ-ದಿನವೊಂದನ್ನು ಆಚರಿಸುವ ಜಾಗ್ರತಿಯಾಗಬಹುದು. ಕರ್ನಾಟಕ ವಿಶ್ವವಿದ್ಯಾಲಯದ ಚಳವಳಿಗಾಗಿ ಯಾವುದಾದರೊಂದು ಸಂಸ್ಥೆ ಇಲ್ಲವೆ ವ್ಯಕ್ತಿ ಇದ್ದರೆ, ಅಲ್ಲಿಗೆ ಈ ನಮ್ಮ ನಲಿವೆ ಮುಟ್ಟಲೆಂದು ಹಾರಯಿಸುತ್ತೇವೆ.

ಜಯಂತಿಯ ಚಂದಾದಾರರಿಗೂ ಸಹಾಯಕರಿಗೂ ಹಿತೈಷಿಗಳಿಗೂ
ದೀಪಾವಳಿಯು ನಿಜವಾದ ಬೆಳಕನ್ನು ಕೊಡಲಿ!
ಈಗ ಪೂಜೆಗೊಳ್ಳುವ ಸಿರಿ-ಸರಸತಿಯರು ಕನ್ನಡನಾಡನ್ನು
ಸುಖ ಶಾಂತಿಗಳ ನೆಲೆವೀಡನ್ನಾಗಿಸಲಿ!

ಬಂದರೆ "ಕಾಂಚನ"ವು ಮನೆಗೆ, ಅಂದೆಯೆ ದಸರೆ-ದೀವಳಿಗೆ!

ಶ್ರೀಧೂತಪಾಪೇಶ್ವರ ಪನವೇಲ ಲಿಮಿಟೆಡ್, ಪನವೇಲ.

ಹುಬ್ಬಳ್ಳಿಯ ಕೇಂದ್ರ: ಮೆಸರ್ಸ್ ಯುನೈಟೆಡ್ ಏಜನ್ಸೀಜ್, 'ಶಿವನಿಕೇತನ'

ಧಾರವಾಡ: ಎನ್. ಜಿ. ಟಿಕಾರೆ

ಈ ಹೊಸ ವರುಷವು ನಮ್ಮ ಗ್ರಾಹಕರಿಗೂ ಮತ್ತೂ ಹಿತಚಿಂತಕರಿಗೂ ಆನಂದದಾಯಕವಾಗಲಿ !

ಬಳಲುತ್ತಿರುವ ಬಾಂಧವರಿಗೆ—

“ಅಜಿತ್” ರವರ ಮೂರು ದಿವ್ಯ ಕಾಣಿಕೆಗಳು—

೧. ಆಮೃರಾಯಿನ್ ★ ಅಶಕ್ತತೆಯು ಮತ್ತು ಅನೀಮಿಯಾ (Anemia) ಗಳ ಮೇಲೆ ಅಪ್ರತಿಮ ಟಾನಿಕ್. ಪ್ರಸಿದ್ಧ ಡಾಕ್ಟರರಿಂದ ಹೊಗಳಲ್ಪಟ್ಟಿದೆ.

೨. ಜೆನ್-ಓ-ಮಿಲ್ಕ್ ★ ತಾಯಂದಿರ ಹಾಲನ್ನು ಶುದ್ಧಗೊಳಿಸಿ ಹೆಚ್ಚಿಸಲಿಕ್ಕೆ ಭಾರತದಲ್ಲಿಯ ಮೊದಲನೇ ಹೆಸರಾದ ಔಷಧವು. ಅನೇಕ ತಾಯಂದಿರು ಉಪಯೋಗಿಸಿ ಮೆಚ್ಚಿದ್ದಾರೆ.

೩. ಕ್ವಿನೋಜಿತ್ ★ ಮಲೇರಿಯಾ ಮೊದಲಾದ ಚಳಿಜ್ವರಗಳ ಮೇಲೆ ಕ್ವಿನ್ಯಾನ್ (Quinine) ನಂತೆಯೇ ಉಪಯುಕ್ತವಾದದ್ದು; ಜ್ವರವಿದ್ದರೂ ಕೊಡಬಹುದು.

Sole Agents for—
Karnatak, Goa, & S. M. C. States:-
PRABHA DISTRIBUTORS,
'Savitri Nivas' SANGLI.

ಶ್ರೇಷ್ಠತೆಯ ಹೆಗ್ಗುರುತು
TRADE MARK
Hall-Mark of Reliability

Manufactured by—
THE AJIT CHEMICAL & PHARMACEUTICAL WORKS.
SANGLI.

Stockists:— ೧. ಧಾರವಾಡ ಫಾರ್ಮಸಿ ಮತ್ತು ಅವರ ಶಾಖೆಗಳು, ೨. ಕರ್ನಾಟಕ ಫಾರ್ಮಸಿ, ಧಾರವಾಡ, ೩. ಭಾರತ ಮೆಡಿಕಲ್ ಸ್ಟೋರ್ಸ, ಬೆಳಗಾಂವಿ, ೪. ಸ್ವಸ್ತಿಕ ಫಾರ್ಮಸಿ ಸ್ಟೋರ್ಸ, ಶಹಾಪುರ ಮ. K., ೫. ಸೆಂಟ್ರಲ್ ಫಾರ್ಮಸಿ, ಬಾಗಟನ್ನೂರು, ೬. ಬೆಳಗಾಂವ ಮೆಡಿಕಲ್ ಸ್ಟೋರ್ಸ, ೭. ಸಿ. ಬಿ. ಮಾನಗೆ, ಸವಣೂರು.

ಕೆಮ್ಮನ್ನು ಅಲಕ್ಷಿಸಿದ ವಿಶೇಷ ದುಷ್ಪರಿಣಾಮಗಳಿಂದ, ಸಾವಿರಾರು ಜನರನ್ನು ಪ್ರಸಿದ್ಧಿ ಹೊಂದಿದ ಈ ಔಷಧವು ಸಂರಕ್ಷಿಸಿದೆ.
“ಕಾಸ್ಫೊ”ದಲ್ಲಿ ಎರಡು ರೀತಿಯ ಗುಣಗಳಿವೆ:— ಹೊರಭಾಗದಿಂದ:—ಅದರ ಸವಿಯಾದ ಶಕ್ತಿಯು ಗಂಟಲೊಳಗೆ ತಾಗಿಕೊಂಡು ಕೆಮ್ಮನ್ನು ಹೊರಡಿಸುವ ನರಗಳನ್ನು ಶಾಂತಪಡಿಸುತ್ತದೆ. ಒಳಭಾಗದಿಂದ:— ಅದು ಗಂಟಲೊಳಗಿನ ಸ್ವಾಭಾವಿಕವಾದ ಉಸಿರುವಿಕೆಗೆ ಚೈತನ್ಯವನ್ನುಂಟುಮಾಡುತ್ತದೆ. ಕಫವನ್ನು ಕತ್ತರಿಸಲು ಸಹಾಯ ಮಾಡುತ್ತದೆ. ಶ್ವಾಸೋಚ್ಛ್ವಾಸದ ನಾಳಗಳನ್ನು ಶುದ್ಧಪಡಿಸುತ್ತದೆ. ಮತ್ತು ಕೆಮ್ಮನ್ನು ಹೊರಡಿಸುವ ಸೋಂಕನ್ನು ಅಲ್ಪಕಾಲದಲ್ಲಿಯೆ ನಿರ್ಮೂಲಪಡಿಸಿ, ಎಂದೆಂದಿಗೂ ಕೆಮ್ಮಿನ ಬಾಧೆಯನ್ನು ನಿಲ್ಲಿಸುತ್ತದೆ.
“ಪೆಪ್ಪರ್ಮಿಂಟ್” ನಂತೆ ಒಂದು ಬಿಲ್ಲೆಯನ್ನು ೧-೨ ಗಂಟೆಗೊಮ್ಮೆ ಕೆಮ್ಮು ಶಮನವಾಗುವತನಕ ತೆಗೆದುಕೊಳ್ಳುವುದು.
ಎಲ್ಲಾ ಔಷಧಾಲಯಗಳಲ್ಲಿಯೂ ದೊರಕುವುದು.

ಕೆಮ್ಮಿನ ಬಾಧೆಯಿಂದ ಎಷ್ಟೋ ಕಾಲದಿಂದ ನರಳುತ್ತಿರಿ- ಅದಕ್ಕಾಗಿ ಎಷ್ಟೋ ಔಷಧೋಪಚಾರಗಳನ್ನು ಮಾಡಿದ್ದರಿ-ನೀವು “ಕಾಸ್ಫೊ”ವನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ, ಕೆರಳುವ ಮತ್ತು ವೇದನೆಯುಳ್ಳ ಕೆಮ್ಮು ಕೂಡಲೇ ಸಂಪೂರ್ಣವಾಗಿ ಮಾಯವಾಗುವುದು. “ಕಸ್ಫೊ” ಕೆಮ್ಮನ್ನು ಬಚ್ಚಿಡುವುದಿಲ್ಲ— ಅದನ್ನು ಚಿಕಿತ್ಸೆಗೈಯುತ್ತದೆ.

Kaspho
ಆಶ್ಚರ್ಯಕರವಾದ ಕೆಮ್ಮು-ನಾಶಕರ ಬಿಲ್ಲೆಗಳು
ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದನಗರ.

ಕರ್ನಾಟಕ ಶಾಖೆ:— ಸ್ಟೇಶನ್ ರೋಡು, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಜಯಂತಿ

ಸಂಪಾದಕರು-
ಬೆಟಗೇರಿ ಕೃಷ್ಣಶರ್ಮರು

ಡಿಸೆಂಬರ್ ೧೯೪೩

★

ಈ ಸಂಚಿಕೆಯಲ್ಲಿ

★ ರಂಗನಾಥ ನೆಗಳೂರ

★ ಪ್ರೊ. ಕೆ. ಆರ್. ಮುಟಿಸಿ

★ ಸರ್ವಮಂಗಳಾಂಬಾ

★ ಸಿ. ಜಿ. ಶಾನಭಾಗ

★ ಶ್ರೀ. ಮಂಗಳವೇಢೆ

★ ಎಚ್. ಎಸ್. ಪಾಟೀಲ

ಅಲ್ಲದೆ ಬೇರೆ ಲೇಖಕರ

ಕವನ-ಕಥೆ-ಪ್ರಬಂಧಗಳು.

★

ಬೆಲೆ_ ೬ ಆಣೆ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ .... ವ್ಹಿ. ಪಿ. ಯಿಂದ ೪-೫-೦ .... ಬಿಡಿಸಂಚಿಕೆಗೆ ೬ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು

೬ನೆಯ ವರ್ಷ	**ಡಿಸೆಂಬರ್ ೧೯೪೩**	**೬ ನೆಯ ಸಂಚಿಕೆ**

ಮುಖ್ಯ ವಿಷಯಗಳ ಪರಿವಿಡಿ

ಆಹ್ವಾನ (ಕವನ)	ಶ್ರೀ. ' ಚಿದಾನಂದ ' ವಿ. ಕಾಲೇಜ, ಸಾಂಗಲಿ	೨೪೯
ಸಂಪಾದಕೀಯ	ಸಂಪಾದಕರು	೨೫೦
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೨೫೧
ಸಣ್ಣಕತೆಯ ಪೋಲಾಟದ ನಿರ್ಣಯ	....	೨೫೨
ಚೇತರಿಸುತ್ತಿರುವ ಚೀನ (ಚಿನ್ ಮತ್ತು ಹಾನ್ ಮನೆತನ)	ಶ್ರೀ. ನೆಗಳೂರ ರಂಗನಾಥ, ಬಿ. ಎ., ಬಿ. ಟಿ. ಹುಬ್ಬಳ್ಳಿ	೨೫೩
ನನ್ನ ವಿವಾಹ (ಸಣ್ಣಕತೆ)	ಶ್ರೀ. ಎಸ್.ಎನ್. ಜೋಶಿಬೇಲೆ ಬಿ.ಎಸ್‌ಸಿ. ಗೋಕರ್ಣ	೨೫೬
ಕಾಲಿದಾಸ ಮತ್ತು ಭವಭೂತಿ (ರೇಡಿಯೊ ಉಪನ್ಯಾಸಕ)	ಪ್ರೊ. ಕೆ. ಆರ್. ಮಹಿಷಿ ಎಂ. ಎ., ಧಾರವಾಡ	೨೬೦
ಮಮತೆ (ಕವನ)	ಶ್ರೀ. ರಾ. ವೆಂ. ಶ್ರೀನಿವಾಸ, ಶಿವಮೊಗ್ಗ	೨೬೩
ಕೊಡಗಿನ ಕರೆ (ಕವನ)	ಶ್ರೀ. ಅನಂತನಾರಾಯಣ, ಮೈಸೂರು	೨೬೩
ಹಸಿವೆಯ ಲಾಭ (ಅನುಭವ ಚಿತ್ರ)	ಶ್ರೀ. ಟಿ. ಸರ್ವಮಂಗಳಾಂಬಾ, ಬಳ್ಳಾರಿ	೨೬೪
ಕನ್ನಡದ ಸಂಘಟನೆ (ವಿ. ಪ್ರ. ಲೇಖನ)	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೨೬೬
ಅಂಗಿ (ಒಂದು ಭಾವಕಥೆ)	ಶ್ರೀ. ವ್ಹಿ. ಜಿ. ಶಾನಭಾಗ, ಕುಮಟಾ	೨೭೧
ಬಳ್ಳಾರಿಯ ಅನುಭವ, ಗಡಿನಾಡಿನ ಸಮಸ್ಯೆ (ನಾಡ ವಿಚಾರ)....	ಶ್ರೀ. ಮಂಗಳವೀಡು ಶ್ರೀನಿವಾಸರಾಯರು, ಬಾಗಲಕೊಟೆ	೨೭೪
ಸಂಖವಸ್ತು ೩ (ಕೊರತೆ)	ಶ್ರೀ. ಎಚ್.ಎಸ್. ಪಾಟೀಲ, ಎಂ.ಎ.,ಬಿ.ಕಾಂ. ಮುಂಬೈ	೨೭೬
ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣೆಗಳು)	ಶ್ರೀ. ' ವಿಹಾರಿ ' ಮುಂಬಯಿ	೨೮೦
ಸಾದರಸ್ವೀಕಾರ	....	೨೮೪
ನಗೀಗೆ ನೇವೀದ್ಯ	' ನಕಲೀ ನಾರಾಯಣಾಚಾರ್ರು '	೨೮೫
ನಾಲ್ಕ್ಯಾ ವಿಟ್ಟಿನ ನೋಟ	' ನಿರೀಕ್ಷಕರು '	೨೮೬

ಜಯಂತಿಯ ಮುಂಬೈ ಶಾಖಾ ಕಚೇರಿ

ಮೊಗವೀರ ಯುವಕ ಸಂಘದ ಕಾರ್ಯಾಲಯ,

೪೬ ಚರ್ಚಗೇಟ್ ಸ್ಟ್ರೀಟ್, ೨ನೆಯ ಮಾಳಿಗೆ

ಫೋರ್ಟ—ಮುಂಬಯಿ.

ಪುಣೆಯಲ್ಲಿ ನಮ್ಮ ಏಜಂಟರು

ಆರ್. ರಾಮಮೂರ್ತಿ ಮತ್ತು

ಕೃಷ್ಣಮೂರ್ತಿ ಅಧ್ವರ್ಯು

ಕನ್ನಡ ಪೇಪರ್ ಏಜಂಟ್ಸ್

' ವಿಶ್ರಾಮಧಾಮ '

ಮನೆ ನಂಬರು ೧೨೪೨, ಪೂನಾ ೪

ಸಂಪುಟ ೬ | ೧ನೆಯ ಡಿಸೆಂಬರ್ ೧೯೪೩ | ಸಂಚಿಕೆ ೭

ಆಹ್ವಾನ

' ಚಿದಾನಂದ '

೧

ಚೆಲುವಿನಾರಾಧಕನೆ, ಚೆಲುವಿಕೆಯ ಬೋಧಕನೆ,
ಇಲ್ಲಿ ಬಾ ರಣದಲ್ಲಿ
ಬಾಳುವೆಯು ಕಣದಲ್ಲಿ—
ರುದ್ರರವ್ಯಕ್ತಿಯೊಂದು ತೋರುವಲ್ಲಿ—
ಪ್ರಳಯನರ್ತನವಿಂದು ಸಾಗಿದಲ್ಲಿ!

೨

ಕಲೆಯ ಸವಿಗಾರ, ಓ ನಿಜದ ನೆಲೆಗಾರ!
ಲೆಕ್ಕಣಿಕೆಯನು ಬಿಸುಟಿ
ಬಾ ಹೊರಗೆ ನಡುಕಟ್ಟಿ!
ರಣದ ಕಹಳೆಯು ನಿನ್ನ ಕರೆಯುತಿಹುದು,
ಕ್ರಾಂತಿತೂರ್ಯವು ನಿನಗೆ ಮೊರೆಯುತಿಹುದು!

೩

ಕವನಕಾಮಿನಿಯೋಜ, ರಸದ ರಾಣಿಯ ರಾಜ,
ಸಾವಿನಾ ರಚ್ಚೆಯಲಿ
ಹಸಿವಿನಾ ಕಿಚ್ಚಿನಲಿ
ಬಿದ್ದು ಬೇಯುವ ಜನವು ಒರಲುತಿಹುದು,
' ಕಾಯಿಕಾಯಿರಿ ' ಎಂದು ಕಿರಿಚುತಿಹುದು!

೪

ಎಸೆದು ನಡೆ ಹೊತ್ತಗೆಯ, ಬಿಸುಟಿ ನಡೆಯೈ!
ಪ್ರಳಯ ನಾಟಕದಲ್ಲಿ
ಅಳಿದ ಹೆಣಬಳಗದಲಿ
ಉಳಿದವರ ಕೈಹಿಡಿದು ನಡೆಸ ಬಾರೈ!
ರಣಮಾರಿಯನು ಶಾಂತಗೊಳಿಸ ಬಾರೈ!

೫

ಕಾವ್ಯಸೃಷ್ಟಿಯ ಬೊಮ್ಮ, ಕರ್ಮಸೃಷ್ಟಿಯ ತಮ್ಮ,
ಕೆನ್ನೀರ ಮಡುವಿನಲಿ
ಕಣ್ಣೀರ ಕಡಲಿನಲಿ
ಈಜಿ ಹೊಸ ನೆಲೆಯನ್ನು ಹುಡುಕ ಬಾರೋ!
ಕಲೆಯ ರಾಜ್ಯವನಲ್ಲಿ ಕಟ್ಟಿ ತೋರೋ!

೬

ಚೆಲುವಿನಾರಾಧಕನೆ, ನಲ್ಮೆಯಾ ಬೋಧಕನೆ,
ಇಲ್ಲಿ ಬಾ ರಣದಲ್ಲಿ,
ಜೀವನದ ಕಣದಲ್ಲಿ,
ಚೆಲುವು-ನಲುಮೆಗಳೆಲ್ಲ ಉರಿಯುವಲ್ಲಿ;
ಆಶಾಪಿಶಾಚಿಗಳು ಕೆಲೆಯುವಲ್ಲಿ!



ಸಾಹಿತ್ಯಸಮ್ಮೇಳನಾಧ್ಯಕ್ಷರು

ಇದೇ ತಿಂಗಳ ಕೊನೆಯ ವಾರದಲ್ಲಿ, ಶಿವಮೊಗ್ಗೆಯಲ್ಲಿ ಸೇರಲಿರುವ ೨೭ ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದಕ್ಕೆ ಶ್ರೀಮಾನ್ ದ. ರಾ. ಬೇಂದ್ರೆಯವರು ಆಯ್ಕೆಹೊಂದಿ ಬಂದಿರುವುದು ತುಂಬ ಸಂತೋಷದ ಸಂಗತಿ. ನಾವು ಕೇಳಿದುದು ಸತ್ಯಸಂಗತಿಯಾಗಿದ್ದಲ್ಲಿ ಸಾಕಷ್ಟು ದೊಡ್ಡ ಬಹುಮತದಿಂದ ಇವರು ಆಯ್ಕೆ ಹೊಂದಿದ್ದಾರೆಂದು ಹೇಳಬಹುದು. ಇದೊಂದು ಆಶ್ಚರ್ಯದ ವಿಷಯವೆಂದು ಯಾರೂ ಭಾವಿಸಬೇಕಾಗಿಲ್ಲ. ಶ್ರೀ. ಬೇಂದ್ರೆಯವರು ತಮ್ಮ ಹೃನ್ಮನೋಹಾರಿಯಾದ ಕೃತಿ-ಕವನಗಳ ಮೂಲಕವೂ ಬುದ್ಧಿವಂತಿಕೆಯಿಂದ ಕೂಡಿದ ಮಾತುಗಾರಿಕೆಯ ಮೂಲಕವೂ ಕನ್ನಡ ಜನತೆಯ ಮನದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಸ್ಥಾಪಿಸಿಯೇ ಬಿಟ್ಟಿದ್ದಾರೆ. 'ಪಾತರಗಿತ್ತಿ ಪಕ್ಕಾ— ನೋಡಿದೇನ ಅಕ್ಕಾ' ಎಂಬ ಅವರ ಕವಿತೆಯನ್ನು ಹಾಡಿ ಕುಣಿಯದ ಕಿರಿಯರಿಲ್ಲ. 'ಕುಣಿಯೋಣು ಬಾರಾ ಕುಣಿಯೋಣು ಬಾ' ಎಂಬ ಕವನವನ್ನು ಕೇಳಿ ಕುಣಿಯದ ತರುಣ-ತರುಣಿಯರಿಲ್ಲ. 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ!' ಎಂಬ ಭಾವಗೀತವನ್ನೋದಿ— ಕೇಳಿ— ತಲೆದೂಗದ ರಸಿಕರಿಲ್ಲ. ಸಂಪ್ರದಾಯಪ್ರಿಯರಾದ ಹಿರಿಯ ಪಂಡಿತರು, ಶ್ರೀಯುತರ ಕೃತಿಗಳಿಗಾಗಿ— ಹೊಸಕಾಲದುವುಗಳೆಂದು— ಎಷ್ಟೇ ಮೌನದ ಮೂಗನ್ನು ಮುರಿಯಲಿ, ಹೊಸ ಕನ್ನಡನಾಡು ಕವಿಗಳಾದ ಬೇಂದ್ರೆಯವರ ಕೃತಿಗಳನ್ನು ಮನಸಾರೆ ಮೆಚ್ಚಿರುವುದು. ಈ ಮೆಚ್ಚಿಕೆಯೇ ಅವರಿಗಿಂದು ಅಧ್ಯಕ್ಷಪದದ ಮನ್ನಣೆಯ ಮಾಲೆಯನ್ನು ಕೊರಳಿಗೆ ಹಾಕಿರುವುದು. ಈ ಸಲದ ಆಯ್ಕೆ ಹೊಸಕನ್ನಡ ನಾಡಿನ ಉದಯದ ಲಕ್ಷಣವನ್ನು ಸಾರುತ್ತಿದೆಯೆಂದು ಹೇಳಿದರೆ ಅದೊಂದು ಅತಿಶಯೋಕ್ತಿಯ ಮಾತಲ್ಲ. ಏಕೆಂದರೆ ಹೊಸಕನ್ನಡನಾಡ ಜಾತಿ-ಕುಲ-ಧರ್ಮ-ಮತ-ಸ್ಥಾನ-ಮಾನ ಮೊದಲಾದುವುಗಳ ಅಭಿನಿವೇಶವನ್ನು ಹೋಳಿ ಮಾಡಿ, ಗುಣೈಕಪಕ್ಷಪಾತಭಾವದಿಂದ ನಿರ್ಮಿತವಾಗಬೇಕಾಗಿದೆ. ಶ್ರೀ. ಬೇಂದ್ರೆಯವರ ಅಧ್ಯಕ್ಷಪದದ ಆಯ್ಕೆ ಈ ಭಾವದಿಂದಲೆ ಆಗಿದೆಯೆಂದು ಯಾರೂ ಒಪ್ಪಬಹುದಾಗಿದೆ. ಆದುದರಿಂದಲೇ ಆಯ್ಕೆಗಾರರಾದ ಪರಿಷತ್ ಸದಸ್ಯರನ್ನು ಮೊದಲು ಅಭಿನಂದಿಸಿ, ಆಮೇಲೆ ಶ್ರೀ. ಬೇಂದ್ರೆಯವರಿಗೆ ನಮ್ಮ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

ಸಾಹಿತ್ಯ ಸಮ್ಮೇಳನ

ಈಗ ೨೭ ವರ್ಷಗಳಿಂದಲೂ ನಮ್ಮಲ್ಲಿ ಸಾಹಿತ್ಯಸಮ್ಮೇಳನದ ಅಧಿವೇಶನಗಳು ಸೇರುತ್ತ ಬಂದಿವೆ. ಆದರೆ ನಿಜವಾದ ಸಾಹಿತ್ಯಸಮ್ಮೇಳನವಾಗಿ ಪರಿಣಮಿಸಿದುದು ಒಂದೂ ಇಲ್ಲವೆಂದು ಬಹುಜನರ ಅಭಿಪ್ರಾಯ. ಎಲ್ಲ ಸಮ್ಮೇಳನಗಳ ಯಾತ್ರೆಯನ್ನು ಮಾಡಿ ಬಂದ ಸಾಹಿತ್ಯ ಭಕ್ತರೊಬ್ಬರು ಆಗಾಗ ಅನ್ನುತ್ತಿದ್ದರು: "ನಮ್ಮ ಸಾಹಿತ್ಯ ಸಮ್ಮೇಳನಗಳು ಹೆಸರಿಗೆ ಮಾತ್ರ ಸಾಹಿತ್ಯ ಸಮ್ಮೇಳನಗಳು. ಉತ್ತರ ಕರ್ನಾಟಕದಲ್ಲಿ ಕೂಡಿದ ಸಮ್ಮೇಳನಗಳು ಜನದ ಜಾತ್ರೆಗಳಾಗಿರುವುವು; ಮೈಸೂರು ದೇಶದಲ್ಲಿ ಸೇರುವ ಅಧಿವೇಶನಗಳು ಮೈಸೂರು ಸರಕಾರದ ಜರೀಪೇಟಗಳ ನೌಕರರ ಕೂಟಗಳಾಗಿರುವುವು. ಉತ್ತರ ಕರ್ನಾಟಕದಲ್ಲಿ ಉತ್ಸಾಹ ಹೆಚ್ಚು ಕಂಡರೂ ಸೋಡಾಬಾಟ್ಲಿಯ ಬುರುಗಿನಂತಿರುವುದು. ಮೈಸೂರು ದೇಶದಲ್ಲಿ ಕಾರ್ಯಕಾರಿತ್ವ ಕಾಣುತ್ತಿದ್ದರೂ ಹೃದಯಕ್ಕೂ ಅದಕ್ಕೂ ಸಂಬಂಧವಿರದ ನಾಟಕ ಪ್ರಪಂಚಕ್ಕೆ ಸೇರಿದುದು!" ಎಂದು. ಅವರು ಹೀಗೆ ಹೇಳುತ್ತಿದ್ದುದನ್ನು ಕೇಳಿ ಮಾತ್ರ ನಮಗೆ ಗೊತ್ತು; ನಿಜಸ್ಥಿತಿ ಪ್ರತ್ಯಕ್ಷ ಕಂಡವರಿಗೆ ಗೊತ್ತು.

ಉತ್ತರ ಕರ್ನಾಟಕದಲ್ಲಿ ಸೇರಿದ ನಾಲ್ಕಾರು ಸಮ್ಮೇಳನಗಳನ್ನು ನೋಡಿದ ನಮಗೂ 'ಇವು ಸಾಹಿತ್ಯ ಸಮ್ಮೇಲನಗಳೆ?' ಎಂದೆನಿಸದೆ ಇಲ್ಲ. ನಮ್ಮಲ್ಲಿ ಸಾರ್ವಜನಿಕ ಕಾರ್ಯದ ಪರಿಚಯವು ರಾಜಕೀಯ ಆಂದೋಲನದ ಮೂಲಕವೇ ಜನತೆಗಾದುದರಿಂದ, ರಾಜಕೀಯ ಸಭೆಗಳೇ ನಮ್ಮವರ ಅಳತೆಗೋಲಾಗಿ ಕುಳಿತಿವೆ. ಅಲ್ಲಲ್ಲಿ ಸಮ್ಮೇಳನಗಳನ್ನು ನೆರೆಯಿಸುವ ಸಂಚಾಲಕರು ಅಲ್ಲಲ್ಲಿಯ ರಾಜಕೀಯ ಕಾರ್ಯಕರ್ತರೇ ಇರುವುದರಿಂದ, ಸಂಸ್ಕೃತಿಪ್ರಚಾರ-ಪ್ರಸಾರ-ಪ್ರದರ್ಶನ ಪ್ರಧಾನವಾದ ಸಾಹಿತ್ಯ ಸಮ್ಮೇಳನದ ಬಣ್ಣ ಮಾರ್ಪಟ್ಟು, ಬರಿ ಪ್ರಾದೇಶಿಕ ತೊಡಕು-ತೊಂದರೆಗಳನ್ನು ನಿವಾರಿಸುವಂತಹ ಗೊತ್ತುವಳಿಗಳನ್ನು ಮಾಡುವ ರಾಜಕೀಯ ಸಭೆಯ ಸ್ವರೂಪಕ್ಕೆ ಇಳಿಯುತ್ತವೆ. ಸಾಹಿತ್ಯಸಂಶೋಧಕರ ಸಂಶೋಧನೆಗಳಿಗೆ ಇಲ್ಲಿ ಎಡೆಯಿರದು; ವಿಮರ್ಶಕರ ವಿಮರ್ಶೆಗಳಿಗೆ ಅವಕಾಶದೊರೆಯದು. ಬಾಯಿಬಂಟರು ಹೇಗೋ ತಮ್ಮ ಬಾಯಿತಿಂದಿ ತೀರಿಸಿಕೊಂಡು ಸಮಯವನ್ನು ಕಳೆದುಬಿಡುವರು. ಲೆಕ್ಕಣಿಕೆಯ ಒಕ್ಕಲಾದ ನಿಜವಾದ ಸಾಹಿತ್ತಿಕರ ಕೃತಿಪ್ರದರ್ಶನಕ್ಕೆ ಸರಿಯಾದ ಸಮಯವೆ ಅಲ್ಲಿ ಸಿಕ್ಕದಂತಾಗುವುದು. ಗಂಭೀರ ವಿಷಯಗಳ ವಿಮರ್ಶೆ-ಚರ್ಚೆಗಳನ್ನು ಕೇಳುವ ಸಹನೆ ಸಭಿಕರಲ್ಲಿ ಇರುವುದೇ ಇಲ್ಲ. ಕೆಲವರಿಗೆ ಅಟ್ಟದಾಟದಲ್ಲಿಯ ವಿದೂಷಕನ ನಗೆಮಾತುಗಳು ಬೇಕು; ಹಲವರಿಗೆ ರಾಜಕೀಯ ಪುರೀಣರ ಧಾಟಿಯ ಉತ್ಸಾಹದ ಹುಚ್ಚುಹೊಳೆ ಬೇಕು. ವಿಧಾಯಕ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವ ತಾಳ್ಮೆ ಸಭಿಕರಲ್ಲಿ ಇರುವುದೇ ಇಲ್ಲ. ಇದುವರೆಗಿನ ನಮ್ಮ ಸಾಹಿತ್ಯ-ಸಮ್ಮೇಳನಗಳು ಇಂತಹ ರುಚಿಯನ್ನೇ ಜನತೆಗೆ ಒದಗಿಸಿಕೊಟ್ಟಿವೆ. ಇನ್ನು ಮುಂದೆಯೂ ಇದೇ ಪರಂಪರೆಯನ್ನು ಸಾಗಿಸಿಕೊಂಡು ನಡೆದರೆ, ಸಮ್ಮೇಳನದಿಂದ ಕರ್ನಾಟಕವು ನಿಜವಾಗಿಯೂ ಬಯಸುತ್ತಿರುವ ಪ್ರಯೋಜನ ಸಿಕ್ಕಲಾರದೆಂಬುದನ್ನು ನಾವೆಲ್ಲ ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಶಿವಮೊಗ್ಗೆಯ ಕನ್ನಡ ಕಾರ್ಯಕರ್ತರಿಗೆ, ನಾಡಿಗೆ ಅವಶ್ಯಕವಾದ ಸಾಂಸ್ಕೃತಿಕ ಕಾರ್ಯವಾವುದೆಂಬುದರ ಕಲ್ಪನೆ ಸಾಕಷ್ಟು ಇದೆ; ಈ ಮಾತನ್ನು ಅಲ್ಲಿಯ ಕರ್ನಾಟಕ ಸಂಘದ ವಿವಿಧ ಮುಖ.

(೨೫೬ ನೆಯ ಪುಟ ನೋಡಿರಿ)



೧. ಏಕೀಕರಣದ ಮಂಗವಳಿ

ಬಳ್ಳಾರಿಯಲ್ಲಿ ಸೇರಲಿರುವ ಕನ್ನಡ ಏಕೀಕರಣ ಸಮ್ಮೇಳನಕ್ಕೆ ಮಂಗರಾಯನು ಈ ಕೆಳಗಿನಂತೆ ಒಂದು ಗೊತ್ತುವಳಿಯನ್ನು ಕಳುಹಿಸಬೇಕೆಂದಿದ್ದಾನೆ:

"ಕರ್ನಾಟಕವು ನಿಜವಾಗಿಯೂ ಎರಡು ದೇಶ; ಒಂದು, 'ಕರ್ಣಾಟಕ' ಇನ್ನೊಂದು 'ಕನಾ೯ಟಕ;' ಕರ್ನಾ(ರ್ಣಾ)ಟಕಗಳಲ್ಲಿ ನೂರಾರು ದೇಶೀಯ ಸಂಸ್ಥೆಗಳು; ಸಾವಿರಾರು ಜಾತೀಯ ಸಂಸ್ಥೆಗಳು; ಲಕ್ಷಾವಧಿ ಅಖಿಲ ಕರ್ನಾ(ರ್ಣಾ)ಟಕ ಕೇಂದ್ರ ಸಂಸ್ಥೆಗಳು. ಇವೆಲ್ಲ ಪಂಗಡಗಳನ್ನು ಅಭಿಮಾನದಿಂದ ಒಪ್ಪಿ ... ... ಇಟ್ಟಿರುವಾಗಲೂ 'ಕನ್ನಡ ದೇಶವು ಒಂ... ...ಂದು ಅಭಿಪ್ರಾಯ ಪಟ್ಟು, ಹೀಗೆ ಅನೇಕವಾಗಿರುವುದರಿಂದಲೆ ಏಕೀಕರಣವು ಶಕ್ಯವಿದೆ ಎಂಬ ನಿರ್ಧಾರ ಮಾಡಿ, ಎಲ್ಲ ಸಂಸ್ಥೆ-ಸಂಸ್ಥಾನಿಕರ ಸ್ವಾತಂತ್ರ್ಯವನ್ನೂ ಅಸ್ತಿತ್ವವನ್ನೂ ಇಟ್ಟುಕೊಂಡೇ ಏಕೀಕರಣ ಮಾಡಬೇಕೆಂದೂ; ಹಾಗೆ ಮಾಡುವುದು ಅಶಕ್ಯವೆನಿಸಿದ್ದರಿಂದ ಪ್ರತಿವರ್ಷ ತಪ್ಪದೇ ಈ ಸಮ್ಮೇಳನದ ಅಧಿವೇಶನವನ್ನು ಕರೆಯಬೇಕೆಂದೂ; ಈ ಪ್ರಶ್ನೆ ಅನಂತವಾಗಿರುವುದರಿಂದ ಅನಾದಿಯೂ ಆಗಿರಬೇಕು.— ಅದಕ್ಕಾಗಿ ಚಿರಂಜೀವಿ ಪರಂಪರೆಯು ಮಂಗರಾಯನಿಗೆ ಈ ಭೂತ-ಭಾವಿ-ವರ್ತಮಾನ ಕೆರೆಹಳ್ಳಗಳ ಸಮ್ಮೇಳನಾಧ್ಯಕ್ಷ ಪದವಿಯನ್ನು ಕೊಡಬೇಕೆಂದೂ ಟಿಕೆಟ್ಟನ್ನು ಕೊಂಡ ಪ್ರತಿನಿಧಿಗಳ ಈ ಅಧಿವೇಶನವು ನಿರ್ಣಯಿಸುತ್ತಿದೆ. ಹಿ! ಹ! ಹಿಹಿಹಿ!!!"

*　　*　　*

೨. ವಿಶ್ವಮಂಗಾಲಯ

"ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಮಹತ್ತ್ವವನ್ನು ಮಂಗರಾಯನು ಅರಿತಿಲ್ಲವೆ" ಎಂದು ಕೆಲ ವಾಚಕರು ಆರ್ಭಟಿಸಿದ್ದಾರೆ. ಅದಕ್ಕಾಗಿ ಮಂಗಸಮಿತಿಯ 'ವರದಿ' ಯನ್ನು ಮುಂದೆ ಸಾಗಿಸುವ ಮುಂಚೆ, ಒಂದು ಸ್ಪಷ್ಟೀಕರಣವನ್ನು ಮಂಗರಾಯನು ಸ್ಪಷ್ಟಿಸಬೇಕಾಗಿದೆ. ಅದೇನೆಂದರೆ:—

ವಿಶ್ವವಿದ್ಯಾಲಯವು ಅತ್ಯಂತ ಮಹತ್ತ್ವದ್ದಾದ್ದರಿಂದ ಮಂಗರಾಯನು ಆ ಪ್ರಶ್ನೆಯನ್ನೆ ಆತ್ಮೀಕರಿಸಿಕೊಂಡಿದ್ದಾನೆ. ಅರ್ಥಾತ್, ವಿಶ್ವಮಂಗಾಲಯಗಳ ಸ್ಥಾಪನೆಗೆ ಸ್ವೈತುರಿಸಿಕೊಂಡಿದ್ದಾನೆ. ಕರ್ನಾಟಕದ ಮೂಲೆ-ಮೂಲೆಗೂ ಮಂಗಾಲಯ, ಕರ್ನಾಟಕದ ಎಲ್ಲೆಡೆಯಲ್ಲೂ ಮಂಗಾಲಯ, ಅದೇ ವಿಶ್ವಮಂಗಾಲಯ. ಇದಕ್ಕಾಗಿ ಪರಿಶ್ರಮವಿಲ್ಲ, ಪ್ರಯತ್ನವಿಲ್ಲ. ಒಂದೂರಲ್ಲಿ ನಡೆದುದನ್ನು ನೋಡುವುದು ಮುಖ್ಯ; ನೋಡಿದ್ದೊಂದೇ ತಡ, ಅದರಂತೆಯೆ ಮಾಡುವುದು. ಒಂದು ಪ್ರಾಂತದವರನ್ನು ನೋಡುವುದು, ನೋಡಿದ್ದೊಂದೇ ತಡ, ಅದರಂತೆ ಮಾಡುವುದು. ಒಂದು ಜಾತಿಯವರನ್ನು ನೋಡುವುದು, ನೋಡಿದ್ದೊಂದೇ ತಪ್ಪು, ಅದನ್ನೆ ಮಾಡುವುದು. ಇಂತಹ ಮಂಗಾಲಯಗಳ ಸ್ಥಾಪನೆಯಾದ ನಂತರ, ಅವನ್ನೆಲ್ಲಾ ಒಂದೆಡೆ ಸೇರಿಸಿ, ಒಂದುಗೂಡಿಸಿ, ಒಂದೆಂದರೆ ಎಲ್ಲ ಎನುವಂತೆ ನೆಲಸವು ಮಾಡಿದರೆ— ಅರ್ಥಾತ್— ವಿದ್ಯಾಲಯದ ಸ್ಥಾಪನೆಯಾದಂತೆಯೆ. ಸದಸ್ಯರಾಗುವವರು ಮಂಗಾಲಯ c/o ಮಂಗರಾಯ, ಬೇಕಾದ್ದೂರಿಗೆ ಬರೆಯಬಹುದು. ಅನ್ನೊಂದು ಉಪದ್ವ್ಯಾಪಿಯಾಗಿದ್ದಾನೆ ಮಂಗರಾಯ್—ಅಲ್ಲಲ್ಲ— ಅಷ್ಟೊಂದು ವಿಶ್ವವ್ಯಾಪಿಯಾಗಿದೆ ಮಂಗಾಲಯ.

*　　*　　*

೩. ಮಂಗರಾಯ್‌ಲ್ ಕಮಿಶನ್

ಬಂಗಾಲದ ಬರಗಾಲವನ್ನು ಕುರಿತು ವಿಚಾರಣೆಯನ್ನು ಮಾಡಲು ನಿಯಮಿಸಿದ ಮಂಗರಾಯಲ್ ಕಮಿಶನ್ನಿನ ವಿಷಯ ತಮಗೆ ಗೊತ್ತಿದೆಯಷ್ಟೆ? ಆ ಕಮಿಶನ್ನಿನ ಕೆಲಸ ಮುಗಿದಿದೆ. ಆ ವಿಚಾರಣೆಯಲ್ಲಿ ಕಾಣಿಸಿದ ಮುಖ್ಯ ಮುದ್ದೆಗಳನ್ನು ಅಧಿಕೃತವಾಗಿ ಹೀಗೆ ಸಾರಲಾಗಿದೆ, ಎಂದು ಪ್ರಾಣವಾಯು ರೇಡಿಯೋ ಸಂಸ್ಥೆಯ ಸ್ಪೆಶಲ್ ಸುದ್ದಿಗಾರನಾದ ಜ. ಕ. ರಾಗ್ಗಿ ಎಂಬವನು ತಿಳಿಸುತ್ತಾನೆ. ಮುದ್ದೆಗಳ ವಿವರ:—

(೧) ಬಂಗಾಲದಲ್ಲಿ ಅನ್ನವಿಲ್ಲೆಂಬುದು ಸರಿಯಲ್ಲ; ಅನ್ನವಿದೆ, ಅಲ್ಲಿಯವರಿಗೆ ಅದನ್ನು ಪಡೆಯಲು ಜನರಿಗೆ ಯೋಗ್ಯತೆ ಇಲ್ಲ.

(೨) ಕೆಲವು ಕಡೆ ಬರಗಾಲಕ್ಕೆ ವಿಶಿಷ್ಟ ಕಾರಣಗಳಿವೆ. ಉಪಯೋಗದಲ್ಲಿ ತಾರದ ಅವಯವಗಳು ಕಳೆಯುವುವೆಂದು ಪ್ರಗತಿಶಾಸ್ತ್ರ ಹೇಳುವುದು. ಅದಕ್ಕನುಗುಣವಾಗಿ ಅನೇಕ ಜನರಿಗೆ ಹೊಟ್ಟೆಯೆ ಇಲ್ಲದಂತಾಗಿದೆ. ಆದುದರಿಂದ ಅವರು ಅನ್ನಾಭಾವಕ್ಕೆ ಗುರಿಯಾಗಿದ್ದಾರೆ.

(೩) 'ಧಾನ್ಯವನ್ನು ಹೆಚ್ಚಾಗಿ ಬೆಳೆಯಿರಿ' ಎಂಬ ಪ್ರಚಾರದಿಂದ ಹುಲ್ಲು ಕಡಿಮೆಯಾಗಿ ಶಾಕಾಹಾರಿಗಳಿಗೆ ಆಹಾರದ ಕೊರತೆ ಎನಿಸಿದೆ; ಹುಲ್ಲು ಇಲ್ಲದ್ದಕ್ಕೆ ದನಗಳೂ ಇಲ್ಲ. ದಂತಾಗಿ ಮಾಂಸಾಹಾರಿಗಳೂ ನಿರಾಹಾರಿಗಳಾಗಬೇಕಾಗಿದೆ.

(೪) ಪ್ರಚಾರದ ಆವಶ್ಯಕತೆ ಬೆಳೆದುದಕ್ಕಾಗಿಯೊ ಏನೊ—ದೊಡ್ಡದೊಡ್ಡ ನಗರಗಳಲ್ಲಿ ನಾಯಿಗಳ ಸಂಖ್ಯೆ ಪ್ರಮಾಣ ಮೀರಿ ಹೆಚ್ಚಿದೆ. ಅದಕ್ಕಾಗಿ ಬೀದಿಗುಂಟಲೂ ಅನ್ನದ ಅಂಗಡಿಗಳೆ ಸಾಲುವಂತಾಗಿವೆ. ಕೊನೆಯದಾಗಿ,

(೫) ಬಂಗಾಲದಲ್ಲಿ ಅನ್ನವಿಲ್ಲ ಎನ್ನುವುದು ಸರಿಯಲ್ಲ, ಬಂಗಾಲಿಗಳಿಗೆ ಜೀವವಿದೆ ಎಂಬುವುದು ತಪ್ಪು.

*　　*　　*

೪. ಮಂಗರಾಯನ ಕನಸಿನಲ್ಲಿ ಕಣಸು!

ಮಂಗರಾಯನಿಗೊಂದು ಮಹತ್ತ್ವದ ಸಂಗತಿಯನ್ನೊಳಗೊಂಡ ಕನಸೊಂದು ಬಿದ್ದಿತ್ತು.

ಅವನ ಕನಸಿನಂತೆಯೇ ನನಸೂ ಆದರೆ, ಧಾರವಾಡದ 'ಕರ್ನಾಟಕ ಕಾಲೇಜ್' ಎಂಬ ಪದವೀಧರರ ಫ್ಯಾಕ್ಟರಿಯು ಹೇಗಾಗಬಹುದು? ಅವನ ಕನಸಿನ ಕತೆ ಹೀಗೆ:—

ಮುಂಬಯಿ ವಿದ್ಯಾಖಾತೆಯ ಮುಖ್ಯಾಧಿಕಾರಿಗಳು ಒಂದು ಪ್ರಕಟನೆ ಹೊರಡಿಸಿ ಅಭಿಪ್ರಾಯಕ್ಕಾಗಿ ಮಂಗರಾಯನ ಕಡೆಗೆ ಕಳುಹಿದ್ದರು. ಅದರೊಕ್ಕಣೆ ದರ್ಶನಂತಿದೆ :

"ಮಂಗರಾಯರೇ, ಧಾರವಾಡದ ಕರ್ನಾಟಕ ಕಾಲೇಜನ್ನು ಒಂದು ಹೊಸಬಗೆಯಿಂದ ನಡೆಯಿಸಬೇಕೆಂದು ಮಾಡಿದ್ದೇವೆ. ಅದೇನೆಂದರೆ ಅಲ್ಲಿ ಯಾವ ವಿಷಯಕ್ಕೂ ಅಧ್ಯಾಪಕರನ್ನು ಇರಿಸದಿರುವುದು. ಅದರ ಪ್ರಯೋಗಕ್ಕಾಗಿಯೇ ಅರ್ಥಶಾಸ್ತ್ರದ ಅಧ್ಯಾಪಕರನ್ನು ಅಲ್ಲಿ ಇಲ್ಲದಂತೆ ಮಾಡಿದ್ದೇವೆ. ಇಲ್ಲದಿದ್ದರೂ ಎಲ್ಲ ಕೆಲಸ ಸರಿಯಾಗಿ ನಡೆದಿದೆಯೆಂದು ನಮಗೆ ವರದಿಗಳು ಬಂದಿವೆ. ಇದರಂತೆಯೇ ಈ ವರುಷದ ಕೊನೆಯೊಳಗಾಗಿ ಒಬ್ಬೊಬ್ಬರಂತೆ ಎಲ್ಲ ಅಧ್ಯಾಪಕರನ್ನೂ ಅಲ್ಲಿಂದ ಎತ್ತಿಹಾಕಬೇಕೆಂದು ಮಾಡಿದ್ದೇವೆ. ಪ್ರಾಧ್ಯಾಪಕರೆಲ್ಲ ಹೋದಮೇಲೆ ಪ್ರಿನ್ಸಿಪಾಲರ ಅಗತ್ಯವಾದರೂ ಏನು? ವಿದ್ಯಾರ್ಥಿಗಳ ಫೀ ವಸೂಲ್ ಮಾಡುವ ಮಟ್ಟಿಗೆ ಒಂದು ಆಫೀಸನ್ನು ಅಲ್ಲಿ ಇರಿಸಿದರೆ ಸಾಕು. ಮಿಕ್ಕ ಭಾಗಗಳಿಗಿಂತ ಕರ್ನಾಟಕ ಬೆಳೆಯುಳ್ಳ ಭಾಗವಾಮುದರಿಂದಲೂ, ಕರ್ನಾಟಕದ ಜನರಲ್ಲಿ ಸರಕಾರಕ್ಕೆ ಸಡಿಲುಗೈಯಿಂದ ಸಹಾಯ ಮಾಡಬೇಕೆಂಬ ಸುಬುದ್ಧಿ ಸಾಕಷ್ಟು ಇರುವುದರಿಂದಲೂ, ಕರ್ನಾಟಕ ಕಾಲೇಜಿನ ಮಟ್ಟಿಗೆ ಫೀ ಹಣವನ್ನು ಇಮ್ಮಡಿಯಷ್ಟು ಹೆಚ್ಚಿಸಬೇಕೆಂದು ಈಗಾಗಲೆ ನಿರ್ಣಯಿಸಿ ಬಿಟ್ಟಿದ್ದೇವೆ. ಮಿಕ್ಕೆಲ್ಲ ವಿಷಯದ ಅಧ್ಯಾಪಕರನ್ನು ಹೇಗಾದರೂ ಅಲ್ಲಿಂದ ಎತ್ತಬಹುದು; ಆದರೆ ಕನ್ನಡ ಅಧ್ಯಾಪಕರದೊಂದು ಮಾತ್ರ ಸಮಸ್ಯೆಯಾಗಿ ಕುಳಿತಿದೆ, ಪ್ರಾಂತದ ಬೇರೆ ಯಾವ ಕಾಲೇಜಿನಲ್ಲಿಯೂ ಕನ್ನಡದ ಸ್ಥಳಗಳಿಲ್ಲವಾದುದರಿಂದ ಅವರನ್ನು ಏನು ಮಾಡಬೇಕೆಂಬುದು ತಲೆಯದಾಗಿದೆ. ಬರಗಾಲ; ಪಾಪ.......ಅವರನ್ನು ಮನೆಗೆ......"

ಮನವು ನಡುಗಿತು ತನುವು
ನವಿರಿಗೊಳಗಾಯ್ತು!
ಹಾಗೆಯೇ ಮಂಗರಾಯನಿಗೆಚ್ಚರಾಯ್ತು!

ಉತ್ತರಕನ್ನಡ ಜಿಲ್ಲೆಯ ಕತೆಗಾರರಿಗಾಗಿ ಮಾತ್ರ ಏರ್ಪಡಿಸಿದ

ಸಣ್ಣಕತೆಗಳ ಮೇಲಾಟದ ತೀರ್ಮಾನ

ಸ್ಪರ್ಧೆಗೆ ಬಂದ ಒಟ್ಟು ಕತೆಗಳು ೨೦

ನಿರ್ಣಾಯಕರು

ಶ್ರೀ. ಬೇಂದ್ರೆ ಲಕ್ಷ್ಮಣರಾಯರು ★ ಶ್ರೀ. ಬೆಟಗೇರಿ ಕೃಷ್ಣಶರ್ಮರು

ಬಹುಮಾನ ಪಡೆದ ಕತೆಗಳು

೧ ನೆಯ ಬಹುಮಾನ "ದೋಣಿ" .. .. ಶ್ರೀ. ವಿ. ಜಿ. ಭಟ್ಟ, ಕಡತೋಕಾ
೨ ನೆಯ ಬಹುಮಾನ "ಕೊಲೆಗಾರ" .. .. ಶ್ರೀ. ಗ. ವೆಂ. ಶಾಸ್ತ್ರಿ, ಗೋಕರ್ಣ
೩ ನೆಯ ಬಹುಮಾನ "ಪರೋಪದೇಶ" .. .. ಶ್ರೀ. ರಾಮಪ್ಪ ವೆಂ. ಸುಬ್ಬಯ್ಯ ಐನಕೈ, ಸಿದ್ದಾಪುರ

ಆ ಮೇಲೆ ಹೆಚ್ಚಿನ ಗುಣಗಳನ್ನು ಪಡೆದವರ ಪರಿವಿಡಿ

೧. ಶ್ರೀ. 'ಶ್ರೀರಾಗ' ಶೆಟ್ಟಿ, ಕ. ಜಾ. ಸಾ. ಮಂಡಲ ಹುಬ್ಬಳ್ಳಿ .... (ಕತೆಯ ಹೆಸರು 'ಕಂಬನಿ')
೨. ಶ್ರೀ. ಗ. ನಾ. ಸಭಾಹಿತ ಅಗ್ರಹಾರ, ಹಳದೀಪುರ .... (ಕತೆಯ ಹೆಸರು 'ಜಾಲಗಾರನ ಜೀವನ')
೩. ಶ್ರೀ. ನಾ. ರಾ. ಹೆಗಡೆ, ಕೆ. ಇ. ಬೋರ್ಡ್ ಹೈಸ್ಕೂಲ್, ಧಾರವಾಡ .... (ಕತೆಯ ಹೆಸರು 'ತಾರೀದೋಣಿ')
೪. ಶ್ರೀ. ಎಲ್. ಆರ್. ಹೆಗಡೆ, ಹೊಲಗದ್ದೆ, ಕುಮಟಾ .... (ಕತೆಯ ಹೆಸರು 'ನಸ್ಯದ ಡಬ್ಬಿ')

ಬಹುಮಾನ ಪಡೆದ ಕತೆಗಾರರಿಗೆ ನಮ್ಮ ಅಭಿನಂದನೆಗಳು!

(೨೫೦ ನೆಯ ಪುಟದಿಂದ ಮುಂದೆಸಾಗಿದ್ದು)

ಪಾದ ಕಾರ್ಯದಿಂದ ಪ್ರತ್ಯಕ್ಷವಾಗಿ ಕಾಣಬಹುದು. ಈಗ ಅವರೇ ಸಮ್ಮೇಳನದ ಸಂಚಾಲಕರಾಗಿರುವುದರಿಂದಲೂ, ಸಾಹಿತ್ಯಸಮ್ಮೇಳನದ ಕಾರ್ಯವ್ಯಾಪ್ತಿಯೆಂತಹುದೆಂಬುದನ್ನು ಮನಗಂಡ ಅಧ್ಯಕ್ಷರ ನೆರವು ಅವರಿಗಿರುವುದರಿಂದಲೂ, ಈ ಸಲದ ಸಾಹಿತ್ಯಸಮ್ಮೇಳನವು ನಿಜವಾದ ಸಾಹಿತ್ಯಸಮ್ಮೇಳನವಾಗಬಹುದೆಂದು ನಮ್ಮ ನಿರೀಕ್ಷೆಯಿದೆ.

ಸಾದಕರು.

ಚೇತರಿಸುತ್ತಿರುವ ಚೀನ

೪

'ಚಿನ್' ಮತ್ತು 'ಹಾನ್' ಮನೆತನಗಳು

ಶ್ರೀ. ನೆಗಳೂರ ರಂಗನಾಥ, ಬಿ. ಎ., ಬಿ. ಟಿ. ಮಿತ್ರಮಂಡಲ, ಹುಬ್ಬಳ್ಳಿ

★

ಚೀನದ ಪ್ರಾಚೀನ ಚರಿತ್ರೆ, ಹಲವು ಚಮತ್ಕೃತಿಗಳಿಂದಲೂ ತೇಜಸ್ವಿಗಳಾದ ರಾಜಕೀಯ ವ್ಯಕ್ತಿಗಳಿಂದಲೂ ತುಂಬಿದುದು. ಕಾಗದ-ಮುದ್ರಣ ತಲೆದೋರಿದುದು ಮೊದಲು ಚೀನದಲ್ಲಿ! ರಾಜ್ಯವ್ಯವಸ್ಥೆಯಲ್ಲಿ ಹಲವು ಹೊಸ ಹೊಸ ಪ್ರಯೋಗಗಳು ನಡೆದುದು ಚೀನದಲ್ಲಿ!

'ಚೌ' ಮನೆತನದ ಆಳ್ವಿಕೆಯ ಕಾಲದಲ್ಲಿ ಉಂಬಳಿಗಾರರ ಪ್ರಾಬಲ್ಯವು ಬಹಳವಾಗಿತ್ತೆಂದು ನಾವು ತಿಳಿದಿದ್ದೇವೆ. ದೇಶದ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿದ್ದ ಉಂಬಳಿಗಾರರು ತಮ್ಮ ನೆರೆಯ ಪ್ರದೇಶದ ಮೇಲೆ ಪ್ರಭಾವ ಬೀರುತ್ತಿದ್ದರು. 'ನಾವು ಹೆಚ್ಚಿನವರು' 'ತಾವು ಹೆಚ್ಚಿನವರು' ಎಂಬ ಭಾವನೆಯ ಮೂಲಕ ಆಗಾಗ ಪರಸ್ಪರರಲ್ಲಿ ಕಿರುಕುಳಗಳು, ಕಾಳಗಗಳು ಆಗುತ್ತಿದ್ದುದರಿಂದಲೆ, ಉಂಬಳಿಗಾರರ ಮನೆತನವಾದ 'ಚೌ' ಮನೆತನದ ಆಳ್ವಿಕೆಯ ಅವಧಿಗೆ '**ಗೊಂದಲಯುಗ**' ಎಂಬ ಹೆಸರು ಬಂದಿತ್ತು. ಈ ಮನೆತನದ ಆಳ್ವಿಕೆಯ ಕೊನೆಗಾಲದಲ್ಲಿ ಸುತ್ತಣವರನ್ನೆಲ್ಲ ಸದೆಬಡೆದು ಮೇಲಕ್ಕೆ ತಲೆಯೆತ್ತುತ್ತಿತ್ತು ಒಂದು ಮನೆತನ; ಅದೇ **ಚಿನ್** ಎಂಬುದು.

ಆಗ ಆಳುತ್ತಿದ್ದ ಉಂಬಳಿಗಾರರಲ್ಲಿ ಚಿನ್ ಮನೆತನವೆ ದೊಡ್ಡದು; ಪ್ರಬಲವಾದುದು; ಪ್ರಭಾವಶಾಲಿಯಾದುದು. ಈ ಮನೆತನದವರು ತಮ್ಮ ಮುಂಗೈಯ ಜೋರಿನಿಂದ, ಉಳಿದ ಉಂಬಳಿಗಾರರ ಅಧಿಕಾರವನ್ನು ಕಸಿದುಕೊಂಡು ತಮ್ಮಲ್ಲಿ ಕೇಂದ್ರೀಕರಿಸಿದರು. ಸಾವಿರ ವರುಷಗಳಿಂದ ಸ್ಥಳೀಯ ಕಿರುಕುಳಗಳಿಂದ ಕೊಳೆಯುತ್ತಿದ್ದ ನಾಡು ಒಮ್ಮೆ ಒಟ್ಟಾಯಿತು. ಒಂದೆ ಮನೆತನದ ಆಡಳಿತದಲ್ಲಿ ಇಡಿ ದೇಶವು ಬಂದುದು ಚೀನದ ಇತಿಹಾಸದಲ್ಲಿಯ **ಚಿನ್** ಮನೆತನದ ಕಾಲದಲ್ಲಿ. ಅದಕ್ಕೆ ಕಾರಣವೆಂದರೆ ಅಧಿಕಾರವು ಹರಿದು ಹಂಚಿಹೋಗದೆ ಕೇಂದ್ರೀಕೃತವಾಯಿತು. ಸೈನ್ಯದ ಸಹಾಯದಿಂದ ಇಡಿ ದೇಶವನ್ನು ತಮ್ಮ ಅಂಕಿತದಲ್ಲಿ ತರಲಾಯಿತು.

ಈ ಅದ್ಭುತ ಕಾರ್ಯಮಾಡಿದ ಅಸಾಮಾನ್ಯ ವ್ಯಕ್ತಿಯೆಂದರೆ **ವಾಂಗ್‌ಜೆಂಗ್**. ಚಿನ್ ಮನೆತನದ ಕೀರ್ತಿಯನ್ನು ಮೆರೆಯಿಸಿದವನು ಇವನು. ಇವನಿಂದ ಇವನ ಮನೆತನ ಹೆಸರುವಾಸಿಯಾಯಿತು. ಹೆಸರುವಾಸಿಯಾದ ಈ ಮನೆತನದ ಹೆಸರೇ ದೇಶಕ್ಕೆ ಅಂಟಿಕೊಂಡಿತು. ಚಿನ್ ಮನೆತನದ ಕಾಲದಲ್ಲಿ ಇಡಿ ದೇಶವು ಒಂದೇ ಆಡಳಿತಕ್ಕೆ ಒಳಪಟ್ಟಿದ್ದುದರಿಂದ, ಇಡಿ ದೇಶವು 'ಚಿನ್' ಆಗಿ, ಮುಂದೆ ಬರುಬರುತ್ತ ಅದೇ ಇಂದಿನ 'ಚೀನ' ಆಯಿತು.

ತನ್ನ ಅಂಕಿತದಲ್ಲಿದ್ದ ಪ್ರದೇಶವನ್ನು ವಾಂಗ್‌ಜೆಂಗನು ೩೬ ಪ್ರಾಂತಗಳಲ್ಲಿ ವಿಭಾಗಿಸಿದನು. 'ಚೌ' ಮನೆತನದವರಿಗೆ ತಲೆಬಾಗದ ಎಷ್ಟೊ ಭಾಗವನ್ನೂ ಹಿಡಿತದಲ್ಲಿ ತಂದನು. ಉಂಬಳಿಗಾರರ ಆಳ್ವಿಕೆಯು ಕೊನೆಗಂಡಿತು. ಅವರ ಸ್ಥಳದಲ್ಲಿ ಆಡಳಿತಕ್ಕಾಗಿ ಅಲ್ಲಲ್ಲಿ ಅಧಿಕಾರಿಗಳನ್ನು ನಿಯಮಿಸಿದನು, ಮತ್ತು ಈ ಅಧಿಕಾರಿಗಳನ್ನು ಆಗಾಗ ವರ್ಗಾಯಿಸುವ ಪರಿಪಾಠವನ್ನು ಹಾಕಿದನು... ಅಧಿಕಾರಿಗಳು ಒಂದೇ ಸ್ಥಳದಲ್ಲಿ ಬಹುಕಾಲ ಇರುವುದರಿಂದ, ಅಲ್ಲಿ ಬೇರೂರಿ ತಮ್ಮ 'ಸತ್ತೆ'ಯನ್ನು ಅವರು ಸ್ಥಾಪಿಸಬಹುದೆಂದು. ಯಾವ ಒಳ್ಳೆಯ ಸರಕಾರವೂ ಹೀಗೆ ಮಾಡುವುದು. ಚೀನದಲ್ಲಿ ಅಷ್ಟು ಅನಾಗರಿಕ ಕಾಲದಲ್ಲಿಯೂ ಈ ವಿಚಾರವಿತ್ತು; ಅದನ್ನು ಅವರು ಆಚಾರದಲ್ಲಿ ತಂದಿದ್ದರು, ಇದು ಹೊಗಳತಕ್ಕುದು.

ಅಧಿಕಾರವೆಲ್ಲ ಕೇಂದ್ರೀಕೃತವಾದೊಡನೆ ವಾಂಗ್‌ಜೆಂಗ್‌ನಿಗೆ ತನ್ನ ಹೆಸರನ್ನು ಬದಲಿಸಬೇಕೆಂದು ಎನ್ನಿಸತೊಡಗಿತು. ಹಿಂದೆ ಯಾರೂ ಮಾಡದ ಕೆಲಸವನ್ನು ತಾನು ಮಾಡಿದ್ದೇನೆಂದು ಅವನಿಗೆ ಹೆಮ್ಮೆಯೆನ್ನಿಸತೊಡಗಿತು. ಹೆಮ್ಮೆಯು ಮೊರಸೂಸಿ ಆಗಾಗ ಉನ್ಮಾದದ ಲಕ್ಷಣಗಳು ಕಂಡುಬರತೊಡಗಿದುವು. ಕರ್ತೃತ್ವಶಾಲಿಯಾದ ಅವನು, ತನ್ನ ಕಾರ್ಯಶಕ್ತಿಯ ಉನ್ಮಾದದಿಂದ ಅನೇಕ ಕಾರ್ಯಗಳನ್ನು ಮಾಡಿದನು. ಉನ್ಮಾದದಿಂದ

ಕಾರ್ಯಗಳೇನೋ ಆಗುವುದು. ಆದರೆ ಕೆಲವು ನಾಡ-ನಾಡವರ ಹಿತಕ್ಕೆ ವಿಘಾತುಕವಾಗುವಂತಹವೂ ಆದುವು.

ಕೇಂದ್ರೀಕೃತ ಅಧಿಕಾರದ ಮೊದಲ ಲಕ್ಷಣವೆಂದು ಅವನು ತನ್ನ ಮೂಲ ಹೆಸರನ್ನು ಬಿಟ್ಟು '**ಶೀ ಹುವಾಂಗ್ ಟಿ,**' ಎಂದು ಇಟ್ಟುಕೊಂಡನು. ಇದು ಹೆಸರೆಂಬುದಕ್ಕಿಂತ 'ಬಿರುದು' ಆಗಿರಬಹುದಾಗಿದೆ. ಅದರ ಅರ್ಥ 'ಮೊದಲನೆಯ ಸಮ್ರಾಟ' ಎಂದು ಆಗುತ್ತದೆ. ತನ್ನನ್ನೇ 'ಮೊದಲ ಸಮ್ರಾಟ' ಎಂದು ಜನತೆ ಕರೆಯಬೇಕೆಂಬ ಹಂಬಲವು ಅವನಲ್ಲಿ ಕಂಡುಬಂದಿತು. ಕ್ರಮೇಣ ಆ ವಿಚಾರ ಬೇರೂರಿತು. ಹಾಗೆ ನೋಡಿದರೆ ಚೀನದ ಇತಿಹಾಸದಲ್ಲಿ ಮೊಟ್ಟಮೊದಲು ಸಮ್ರಾಟನೆಂದು ಹೇಳಿಕೊಂಡವನು ಹ್ಸಿಯಾ ಮನೆತನದ ಮೂಲಪುರುಷ— **ಯಾವೊ.** ಯಾವೊನು ಸಮ್ರಾಟನೆಂದು ಹೇಳಿಕೊಂಡರೂ ಅವನಾಳುವುದಕ್ಕೆ ಸಾಮ್ರಾಜ್ಯವೆನ್ನಬಹುದೋ ಬಾರದೋ ತಿಳಿಯದಾಗಿತ್ತು. ಆದರೂ ಅವನೊಬ್ಬ ನಾಡಿಗೆ ಹಿರಿಯ; ತನ್ನ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಹಿರಿಯನಾದುದರಿಂದ ಸಮ್ರಾಟ: ಆ ಪ್ರದೇಶವೆ ಸಾಮ್ರಾಜ್ಯ. ಒಂದು ಮಾತು ಮಾತ್ರ ನಿಜ. ಯಾವೊನಲ್ಲಿ ಸಮ್ರಾಟನ ಗಾಂಭೀರ್ಯವಿತ್ತು. ವಾಂಗ್‌ಚೆಂಗ್‌ನನ್ನು ಮೊದಲನೆಯ ಸಮ್ರಾಟನೆನ್ನುವುದಕ್ಕಿಂತ, ಮೊದಲನೆಯ 'ಸರ್ವಾಧಿಕಾರಿ' ಎಂದು ಹೇಳಿದರೆ ಹೆಚ್ಚು ಶೋಭಿಸುವುದು. ಸರ್ವಾಧಿಕಾರಿಗಳಿಗೆ ತಕ್ಕ ಉನ್ಮಾದವು ಅವನಲ್ಲಿ ಇತ್ತು. ಸರ್ವಾಧಿಕಾರಿಗಳ ಕಾರ್ಯಶಕ್ತಿ, ಮಹತ್ವಾಕಾಂಕ್ಷೆ ಆತ್ಮಪೌರುಷದ ಉನ್ಮಾದ ಇವೆಲ್ಲವೂ ಅವನಲ್ಲಿ ಕಂಡುಬಂದುವು.

'ಮೊದಲನೆಯ ಸಮ್ರಾಟನೆ ತಾನು' ಎಂದು ಹೇಳಿಕೊಂಡನಷ್ಟೆ ಅಲ್ಲ; 'ಜನತೆಯೂ ಹಾಗೆ ನಂಬಬೇಕು' ಎಂದು ಅವನ ಬಲವಾದ ಹಂಬಲು. ಆದರೆ ಹಿಂದೆ ನಡೆದ ಸಂಗತಿಗಳು ಇತಿಹಾಸರೂಪವಾಗಿ ಬರೆದಿದ್ದುವು ಇರುವತನಕ ಇದೆಲ್ಲ ಹೇಗೆ ಸಾಧ್ಯ? ಆ ಕಾಲದವರು ಮಾತ್ರ ಆಳರಸನ ಅಂಜಿಕೆಯಿಂದ ಇವನನ್ನು 'ಮೊದಲ ಸಮ್ರಾಟ' ಎಂದು ಕರೆಯಬಹುದು.... ಈ ವಿಚಾರಸರಣಿಯು ಅವನನ್ನು ಬೇರೆ ದಾರಿಗೆ ಒಯ್ಯತೊಡಗಿತು. ತನ್ನ ಮನಸ್ಸಿಗೆ ವಿರುದ್ಧವಾದುದನ್ನು ಇತಿಹಾಸ ಗ್ರಂಥಗಳು ಹೇಳುವುವೆಂದ ಮೇಲೆ, ಅವುಗಳನ್ನಿಟ್ಟು ಮಾಡುವುದೇನು? ಇತಿಹಾಸವು ಅವನಿಗೆ ಅಸಹ್ಯ ವೇದನೆಯನ್ನುಂಟುಮಾಡತೊಡಗಿತು. ವೇದನೆ ಬಲವತ್ತರವಾಗತೊಡಗಿತು. ಇವನಿಗಿಂತ ಹಿಂದೆ ಸುಮಾರು ಎರಡುಸಾವಿರ ವರುಷಗಳತನಕ ಒಳ್ಳೆಯ ರೀತಿಯಿಂದ ಆಳಿಹೋದವರು ಇವನ ಕಣ್ಣಿಗೆ ಕಸವಾದರು. ಅವರ ಹೆಸರು— ಕಾರ್ಯ-ನಿರ್ನಾಮವಾಗಬೇಕೆಂದು ಎನಿಸತೊಡಗಿತು. ಕೇವಲ ಅರಸರಷ್ಟೆ ಅಲ್ಲ, ಘನತೆಗೇರಿದ ಮಹನೀಯರು— **ಕಾಂಫ್ಯೂಶಿಯಸ್, ಲಾವೊತ್ಸೆ** ಮುಂತಾದವರು ಕೂಡ ಹೇಳಹೆಸರಿಲ್ಲದಂತಾಗಬೇಕೆನಿಸಿತು. ಹಿಂದಿನ ಯಾವ ಸಂಗತಿಯಿಂದಲೂ ತನ್ನ ಇಂದಿನ ಬೆಲೆ ಕಡಿಮೆಯಾಗಬಾರದೆಂಬ ಉತ್ಕಟೇಚ್ಛೆಯಿಂದ 'ಅಳತೆಗೋಲಾಗಬಹುದಾದ ಹಿಂದಿನ ಯಾವ ಕಾರ್ಯವೂ ಉಳಿಯಬಾರದು, ಆ ಸಂಗತಿಗಳನ್ನೊಳಗೊಂಡ ಗ್ರಂಥಗಳು ಯಾವುವೂ ಉಳಿಯಬಾರದು' ಎಂದು ಅವುಗಳನ್ನೆಲ್ಲ ಸುಟ್ಟು ಹಾಕಲು ಆಣತಿಯಿತ್ತನು. ಅಲ್ಲದೆ ಹೀಗೊಂದು ಶಾಸನವನ್ನೂ ಹೊರಡಿಸಿದನು: "ಹಳೆಯದನ್ನು ಆಧಾರವಾಗಿಟ್ಟುಕೊಂಡು ಯಾರು ಈಗಿನದಕ್ಕೆ ಬೆಲೆ ಕಡಿಮೆ ಮಾಡಲು ಯತ್ನಿಸುವರೊ ಅವರನ್ನು, ಅವರ ಸಂಬಂಧಿಕರೊಡನೆ ಮರಣಕ್ಕೀಡುಮಾಡಲಾಗುವುದು!"

ಅವನು ಅದರಂತೆಯೆ ನಡೆದನು. ಗ್ರಂಥಗಳನ್ನು ಸುಡಲಾಗದೆ ಅವುಗಳನ್ನು ಉಳಿಸಿಕೊಳ್ಳಬೇಕೆಂದು ಅಲ್ಲಲ್ಲಿ ಬಚ್ಚಿಡತೊಡಗಿದವರನ್ನು ಜೀವಂತ ಹುಗಿಸಿದನು. ಅಂದು ನಡೆದುದು ಇದೇನು ಅಚ್ಚರಿಯಲ್ಲ. ಇಂದಿನ ನಾಗರಿಕ ಜೀವನದಲ್ಲಿಯೆ ಸರ್ವಾಧಿಕಾರಿಗಳು ಗ್ರಂಥಭಾಂಡಾರಗಳನ್ನು ಸುಡಿಸುವುದೂ ಪಂಡಿತರನ್ನು ಹಿಂಸಿಸುವುದೂ ನಡೆಯುತ್ತಿರುವಾಗ, ಆ ಅನಾಗರಿಕ ಕಾಲದಲ್ಲಿ ನಡೆದರೆ ಅದೇನು ಅಚ್ಚರಿ! ಅಥವಾ ಹೀಗೂ ಹೇಳಬಹುದು: ಯಾವ ಕಾಲವಾದರೇನು, ಮಾನವನು ಮಾನವನೆ. ಮಹತ್ವಾಕಾಂಕ್ಷಿಯಾದ ಮಾನವನು ಏನು ಮಾಡಲಾರ? ಆ ಮಹತ್ವಾಕಾಂಕ್ಷಿಗಳಿಗೆ ಸರ್ವಾಧಿಕಾರಿತ್ವವು ಜತೆಗೆ ಇದ್ದರೆ, ಗ್ರಂಥಗಳನ್ನೇಕೆ, ಜಗತ್ತನ್ನೆ ಸುಡಬಲ್ಲರು. ಆ ತೆರದ ಉದಾಹರಣೆಗಳಿಗೇನು ಕಡಿಮೆಯಿಲ್ಲ!

ಈ ಸಂದರ್ಭದಿಂದ ಒಂದು ಪಾಠ ಕಲಿಯುವಂತಿದೆ. **ಶೀಹುವಾಂಗ್‌ಟಿ**ಯು ಹಳೆಯದನ್ನೆಲ್ಲ ಸುಡಿಸಿ ಹುಗಿಸಿದನು. ಕಾರಣವೆಂದರೆ ಜನರು ಯಾವಾಗಲೂ ಹಳೆಯದರ ಅಳತೆಗೋಲಿನಿಂದ ಹೊಸದನ್ನು ಅಳೆದು ಹೊಸದೆಲ್ಲವನ್ನೂ ಹೀಗಳೆವ ರೂಢಿಯವರು ಇರುವರೆಂದು. ಇಂದಿನ ಜೀವನಕ್ಕೆ ಹಿಂದಿನ ಪದ್ಧತಿ-ಸಂಪ್ರದಾಯಗಳನ್ನು ಅನುಸರಿಸುವುದು ಕಂಡುಬರುತ್ತದೆ. ಇಂತಹರ ಸಲುವಾಗಿ ಅವನು ಹಳೆಯದೆಲ್ಲವನ್ನೂ ಹಾಳುಮಾಡಿರಬಹುದು. 'ಹಳೆಯದು ಹಳೆಯದೆಂದ ಮಾತ್ರಕ್ಕೆ ಎಲ್ಲವೂ ಒಳ್ಳೆಯದೂ ಅಲ್ಲ, ಎಲ್ಲವೂ ಕೆಟ್ಟುದೂ ಅಲ್ಲ!' ಎಂಬುದನ್ನು ಭಾರತೀಯರು ಸದ್ಯ ಕಲಿಯಬೇಕಾದ ವಿಷಯ. ನಮ್ಮ ಇಂದಿನ ಅದೆಷ್ಟೋ ಆಚಾರಗಳು ೨-೩ ಸಾವಿರ ವರುಷದ ಹಿಂದಿನವು ಇವೆ. ಇಂದಿನ ಜೀವನಕ್ಕೆ ಅವು ಹೊಂದುಗೂಡುವುದಿಲ್ಲವಷ್ಟೆ ಅಲ್ಲ; ಇಂದು ಅವಕ್ಕೆ ಯಾವ ಅರ್ಥವೂ ಆಗದು, ಮೇಲಾಗಿ ಅವು ಕಾಲ್ತೊಡಕಾಗಿವೆ. ಭಾರತದ ಈ ಕಾಲ್ತೊಡಕಿನ ಜೀವನವನ್ನು ನೋಡಿದರೆ, ಹುದುಲಲ್ಲಿ ಸಿಕ್ಕ ಸ್ಥಿತಿಯನ್ನು ನೆನೆದರೆ, **ಶೀಹುವಾಂಗ್‌ಟಿ** ಮಾಡಿದ ಕಾರ್ಯವನ್ನು ಹೊಗಳಬೇಕೆನ್ನಿಸುತ್ತದೆ. ಆದರೆ ತಪ್ಪು ಗ್ರಂಥಗಳದಲ್ಲ; ಅದನ್ನು ಬಳಸುವ ಜನತೆಯದು. ದಂಡನೆ ಜನತೆಗೆ ಆಗಬೇಕು ಹೊರತು ಗ್ರಂಥಗಳಿಗಲ್ಲ. ಗ್ರಂಥಗಳನ್ನು ಸುಡಿಸುವುದು ಮಹಾ ಅಪರಾಧ; ಅಕ್ಷಮ್ಯ ಅಪರಾಧ!

ಅವನ ಆಜ್ಞೆ ಏನಾರಿ ಎಷ್ಟೋ ಗ್ರಂಥಗಳನ್ನು ಬಚ್ಚಿಟ್ಟರೆಂದೆ ಇಂದು ನಮಗೆ ಚೀನದ ಅತಿ ಪ್ರಾಚೀನ ಸಂಗತಿಗಳು ತಿಳಿಯುತ್ತವೆ. ಆದರೂ ಹಿಂದಿನ ಸಂಗತಿಗಳಿಗೆ ಎಷ್ಟು ಮನ್ನಣೆಕೊಡಬೇಕೆಂಬುದು ಇದರಿಂದ ತಿಳಿಯಲು ಸಾಕು.

"ಮಾನವನು ಹಿನ್ನೋಟದಿಂದಲೆ ಇಂದಿನ ಜೀವನ ಸಾಗಿಸುವಂತಿದ್ದರೆ ಮುನ್ನೋಟಕ್ಕಾಗಿ ಮೊಗದ ಮುಂದಿನ ಭಾಗದಲ್ಲಿ ಕಣ್ಣುಗಳೇಕೆ?" ಎಂದು ಪ್ರಶ್ನೆ ಕೇಳುವುದುಂಟು. ಅದಕ್ಕೆ ಜವಾಹರರು ಅನ್ನುವಂತೆ, 'ನಮ್ಮ ದೇಶದಲ್ಲಿಯ ಹಳೆಯದನ್ನೆಲ್ಲವನ್ನು ಅಭ್ಯಸಿಸೋಣ; ತಕ್ಕದ್ದಾದುದನ್ನು ಹೊಗಳೋಣ; ಆದರೆ ನಮ್ಮ ಕಣ್ಣುಗಳು ಯಾವಾಗಲೂ ಮುನ್ನೋಟಕ್ಕೆ. ನಮ್ಮ ಹೆಜ್ಜೆಗಳು ಮುಂದೆಮುಂದೆ—ಆಗಬೇಕು.' ಹಳೆಯುದು ಹಿನ್ನೆಲೆಯಾಗಿ ಮುಂದಿನದಕ್ಕೆ ಸಹಕಾರಿಯಾಗಬೇಕು; ಕಾಲೆಳೆಯುವುದಕ್ಕಲ್ಲ; ಕಾಲೆಳೆಯುವಂತಾಗುತ್ತಿದ್ದರೆ ಆ ಬಂಧನ ಕಡಿದೊಗೆಯಬೇಕು; ಕಾಲನ್ನು ಮುಂದೆ ಸಾಗಗೊಡಬೇಕು.

ಶೀಹುವಾಂಗ್‌ಟಿಯು ಕೇಂದ್ರೀಕೃತ ಸರಕಾರವು ನೆಲೆಯೂರಬೇಕೆಂದು ಮನಸ್ಸುಮಾಡಿದ್ದನು. ಆದರೆ ಜನತೆಯ ಸಹಾಯ-ಸಹಕಾರ-ಸಹಾನುಭೂತಿಯನ್ನು ಕಸುರಿಸುವಂತಹ ಕಾರ್ಯವನ್ನು—ಗ್ರಂಥಗಳನ್ನು ಸುಡಿಸುವುದು, ಪಂಡಿತರನ್ನು ಜೀವಂತ ಹುಗಿಸುವುದು — ಮಾಡಿದುದರಿಂದ, ಅವನಿಂದ ಮಾಡಲಾದುದು ಅವನ ಜತೆಗೇ ಹೊರಟುಹೋಗುವಂತಾಯಿತು. ಎಲ್ಲ ಮನೆತನಗಳಲ್ಲಿ ಚಿನ್ ಮನೆತನದ ಆಳ್ವಿಕೆಯ ಅವಧಿ ತೀರ ಅಲ್ಪ. ಉಳಿದ ಮನೆತನಗಳು ಸಾವಿರ ವರುಷಗಳ ಬಾಳಿದುವು. ಆದರೆ ಅಂತಹವುಗಳ ಮೇಲೆ ತಲೆಯೆತ್ತಿ ನಾಡನ್ನು ಒಟ್ಟಾಗಿಸಿ, ಅಧಿಕಾರವನ್ನು ಕೇಂದ್ರೀಕರಿಸಿ ಪ್ರಭಾವ ಬೀರಿದ ಚಿನ್ ಮನೆತನವು ಬಾಳಿದುದು ಕೇವಲ ೫೦ ವರುಷ. ಶೀಹುವಾಂಗ್‌ಟೀಯ ನಂತರ ಅವನ ಸ್ಥಳಕ್ಕೆ ಬರುವವರು ಯಾರೂ ಇರಲಿಲ್ಲ. ಎರಡನೆಯವರು ಮುಂದೆ ಬಂದಿದ್ದರೆ ಇವನು ಮಾಡಿದ ಕಾರ್ಯ ಸ್ಥಿರವಾಗಬಹುದಾಗಿತ್ತು.

ಆದರೂ ಆತ ತನ್ನ ಶಕ್ತಿಗೆ ನಿಲುಕಿದಷ್ಟು ಸ್ಥಿರಕಾರ್ಯ ಮಾಡಿದನು. ಎಷ್ಟೋ ಪದ್ಧತಿ-ಸಂಪ್ರದಾಯಗಳನ್ನು ದೃಢೀಕರಿಸಿ ಸಂಸ್ಥೆಗೊಳಿಸಿದನು. ಅಳತೆ-ತೂಕಗಳನ್ನು ಗೊತ್ತುಪಡಿಸಿದನು. ಲಿಪಿ ಸುಧಾರಿಸಿದನು. ಇವನ ಕಾಲದ ನಂತರ ಚೀನದ ಲಿಪಿಯಲ್ಲಿ ಹೆಚ್ಚೇನು ಬದಲಾವಣೆಯಾಗಿಲ್ಲ. ಈ ರೀತಿಯ ದೃಢೀಕರಣದಿಂದಲೆ ವಿಶಾಲವಾದ ನಾಡು ಒಂದಾಗಿ ಸಾಮಾನ್ಯ ಸಂಸ್ಕೃತಿಯ ಬೆಳವಣಿಗೆಗೆ ಅನುವಾಯಿತು.

ಮೇಲೆ ವಿವರಿಸಿದ ಸಂಗತಿಗಳು ಚಿಕ್ಕವೂ ಬಹುಕಾಲದಲ್ಲಿ ಅವುಗಳ ಬೆಲೆ— ಉಪಯುಕ್ತತೆ ಕಂಡುಬರುವಂತಹವೂ ಬಹಿರಂಗದಲ್ಲಿ ಏನೂ ಕಾಣದಂತಹವೂ ಇದ್ದುವು. ಆದರೆ ಇವನ ಹೆಸರಿಗೆ ಅಂಟಿಕೊಂಡ—ಜಗತ್ತಿನ ಕಣ್ಣಿಗೆ ಒತ್ತುವಂತಹ ಅದ್ಭುತ ಕಾರ್ಯವನ್ನು ಈತ ಮಾಡಿದ್ದಾನೆ. ಅದು ಚೀನಾ ಗೋಡೆಯ ಕಟ್ಟು. ಅದು ತುಂಬ ವೆಚ್ಚದ ವಿಷಯ. ಆದರೂ ಕಟ್ಟಲೇಬೇಕಿತ್ತು. ಅದರ ಕೆಲಭಾಗ ಅಲ್ಲಲ್ಲಿ ಮೊದಲು ಕಟ್ಟಲ್ಪಟ್ಟಿತ್ತು. ಉತ್ತರದ-ಪೂರ್ವದ ಹುಂಟರ ತಂಡಗಳನ್ನು ತಡೆಹಿಡಿಯುವುದಕ್ಕೆಂದು ಅದನ್ನು ಕಟ್ಟಲಾಯಿತು. ಒಟ್ಟು ಅದರ ಉದ್ದಳತೆ ೧೫೦೦ ಮೈಲು. ಅದು ೨೦ ರಿಂದ ೩೦ ಅಡಿ ದಪ್ಪವಾಗಿದೆ; ೧೮ ರಿಂದ ೩೦ ಅಡಿಗಳ ವರೆಗೆ ಎತ್ತರವಿದೆ. ಅದನ್ನು ಇಟ್ಟಿಗೆ, ಕಲ್ಲು, ಮಣ್ಣಿನಿಂದ ಕಟ್ಟಿದ್ದಾರೆ. ಅಲ್ಲಲ್ಲಿ ಬಿಗುವಿಗಾಗಿ— ಕಾವಲಿಗಾಗಿ— ಚೌಕು ಕೊತ್ತಳಗಳಿವೆ.

ಇಂತಹ ಗೋಡೆಯಿಂದ, ಶತ್ರುಗಳ ಆಕ್ರಮಣವು ದೊಡ್ಡ ಪ್ರಮಾಣದಿಂದಾಗಿದ್ದರೆ ಏನೂ ಪ್ರಯೋಜನವಾಗುತ್ತಿದ್ದಿಲ್ಲ; ಆದರೆ ಚಿಕ್ಕ ಪುಟ್ಟ ಪಂಗಡಗಳು ಮಾತ್ರ ಏನನೂ ಮಾಡಲಾರದುವಾದುವು. ಒಂದೇ ಮಾತು ಮನಸ್ಸಿಗೆ ನಾಟುವುದು: ಆ ಅದ್ಭುತ ಕಾರ್ಯದ ಹಿಂದೆ ಚೀನಿಯರ ಶಾಂತತೆಯ ಪ್ರೇಮವು ಕಾಣುವುದು. 'ನಾಡು ಜಗಳದಲ್ಲಿ ಬಡಿದಾಟದಲ್ಲಿ ಬೀಳಬಾರದು, ಶಾಂತಿಭಂಗವಾಗಬಾರದು' ಎಂಬುದು ಅವರ ಮನೀಷೆ ಎಂಬುದು ಎದ್ದುಕಾಣುವುದು.

ಮುಂಬರುವ ಚೀನದ ಚಿತ್ರವನ್ನೇ ಕಣ್ಣಿಗೆ ಕಟ್ಟಿಕೊಂಡು ಹೊರಟದ್ದರಿಂದ, ಶೀಹುವಾಂಗ್‌ಟೀಯ ಕೈಯಿಂದ ಆ ಕಾಲಕ್ಕೆ ಹಿತವೆಂಬುದಾಗಲಿಲ್ಲ. ತಾನೇ 'ಮಾದರಿ ಸಮ್ರಾಟ'ನೆಂದು ಹೇಳಿಸಿಕೊಳ್ಳಬೇಕೆಂಬ ಹಂಬಲದಿಂದ ಗ್ರಂಥಭಾಂಡಾರ ಸುಡಿಸಿದನು; ಪಂಡಿತರನ್ನು ಪೀಡಿಸಿದನು; ಶತ್ರುಗಳ ಕಾಟ ಕಡಿಮೆಯಾಗಬೇಕೆಂದು ಲಕ್ಷಾಂತರ ಜನರನ್ನು ಕೂಲಿಗೆಳೆದು ಕೋಟಿಗಟ್ಟಲೆ ವೆಚ್ಚಮಾಡಿ ಜನರನ್ನು ಹಿಂಡಿ, ಅನೇಕ ಆಹುತಿ ಕೊಟ್ಟು ೧೫೦೦ ಮೈಲುದ್ದದ ಗೋಡೆಯನ್ನು ನಿಲ್ಲಿಸಿದನು: ಇಷ್ಟೆಲ್ಲ ಅದ್ಭುತ ಅನಾಹುತಗಳು ಆಗಿದ್ದರೂ ಎರಡು ಮಾತುಗಳು ಮಾತ್ರ ಗಟ್ಟಿಯಾದುವು: ಒಂದು, ಚೀನವು ಒಕ್ಕಟ್ಟಾದುದು; ಇನ್ನೊಂದು, 'ಉಂಬಳಿಗಾರಿಕೆ' ನಾಶವಾದುದು.

ಶೀಹುವಾಂಗ್‌ಟೀಯು ನಾಡಿಗೆ ಮಾಡಿದ ಲಾಭ-ಹಾನಿಗಳನ್ನು ನೆನೆದರೆ ಹೆಚ್ಚುಕಡಿಮೆ ಅವನ ಸಮಕಾಲೀನನಾದ ಭಾರತೀಯ ಸಮ್ರಾಟನೊಬ್ಬನೂ ಇದಿರು ಬರುವನು. ಅವನು ಮೌರ್ಯವಂಶದ ಅಶೋಕನು. ಕಲಿಂಗದಂಡಯಾತ್ರೆಯಲ್ಲಿಯ ಅವನ ಕ್ರೌರ್ಯವು ಅವನ ರೌದ್ರರೂಪವನ್ನು ತೋರುವುದು. ಅನಂತರದ ಜನಹಿತಸಾಧನೆಯು ಅವನ ಒಳ್ಳೆಯತನವನ್ನು ತೋರುವುದು. ಚೀನದೊಡನೆ ಭಾರತದ ಸಂಬಂಧ ಬಂದುದು ಮೊಟ್ಟಮೊದಲಿಗೆ ಅಶೋಕನ ಕಾಲದಲ್ಲಿಯೆಂದು ಹೇಳಬಹುದು. ಕಲಿಂಗ ದಂಡಯಾತ್ರೆಯ ತರುವಾಯ ಮನಸ್ಸು ಬದಲಾದ ಅಶೋಕನು ಬೌದ್ಧಧರ್ಮ ಸ್ವೀಕರಿಸಿ ಧರ್ಮಪ್ರಸಾರ ಮಾಡತೊಡಗಿದನು. ಪ್ರಸಾರಕರನ್ನು ದೇಶ-ವಿದೇಶಗಳಿಗೆ ಕಳಿಸಿದನು. ಹಾಗೆ ಕೆಲವರನ್ನು ಚೀನಕ್ಕೂ ಕಳಿಸಿರಬೇಕು. ಈ ಕಾಲದಿಂದಲೆ ಚೀನದಲ್ಲಿ ಬೌದ್ಧಧರ್ಮದ ಕೂಗು ಕೇಳತೊಡಗಿತು.

ಸರ್ವಾಧಿಕಾರಿತ್ವದ ಸೋಂಕಿನಿಂದ ತಲೆಯೆತ್ತಿ, ಅದರ ಲಾಭ-ಹಾನಿಗಳನ್ನು ದೇಶದ ಮೇಲೆ ಹೇರಿ, ೫೦ ವರುಷಗಳಲ್ಲಿಯೆ ಚಿನ್ ಮನೆತನವು ಮಾಯವಾಯಿತು. ಆ ಅವಧಿಯಲ್ಲಿ ಮೊಗದೋರಿದುದು '**ಹಾನ್**' ಮನೆತನ.

ಈ '**ಹಾನ್**' ಮನೆತನವು ಸುಮಾರು ೪೦೦ ವರುಷ ಬಾಳಿತು. (ಕ್ರಿ. ಶ. ಪೂ. ೨೦೬ ರಿಂದ ಕ್ರಿ. ಶ. ೨೨೦) ಚಿನ್ ಮನೆತನದ ಕಾಲದಲ್ಲಿ ಪ್ರಾರಂಭವಾದ ಜನಹಿತಪದ್ಧತಿ- ಸಂಪ್ರದಾಯಗಳು ಈ ಮನೆತನದ ಕಾಲದಲ್ಲಿ ಬೆಳೆದು ಬೇರೂರಿದುವು. ಚಿನ್ ಮನೆತನದವರು ಮಾಡಿದುದನ್ನು ಗಟ್ಟಿಮಾಡಿದರು. ಸಾಮ್ರಾಜ್ಯದ ಗಡಿಗಳು ಹಬ್ಬಿದುವು. ಭೌಗೋಲಿಕ ಜ್ಞಾನವು ಹೆಚ್ಚಿತು. ಚೀನೀ ಸಂಸ್ಕೃತಿಯು ಬೇರೆ ನಾಡುಗಳಿಗೆ ಹಬ್ಬಿತು. ಇತ್ತೀಚಿನ ಸಂಶೋಧನಗಳ ಮೂಲಕ, ಹಾನ್ ಮನೆತನದಲ್ಲಿ ಮಾಡಿರ-ಬಹುದಾದ ಅರಗಿನ- ಬಂಗಾರದ ಆಭರಣಗಳು ದೊರೆತಿವೆ. ಅಲ್ಲದೆ ಕಾಗದದ ಮೇಲೆ ಬರೆದ ಪತ್ರ-ಪುಸ್ತಕಗಳು ದೊರೆತಿವೆ.

ಈ ಮನೆತನದಲ್ಲಿ ಆಳಿದ ಮೊದಲಿಗರಲ್ಲಿ ಒಬ್ಬಳು ಸಮ್ರಾಜ್ಞಿ ಇದ್ದಳೆಂದು ತಿಳಿದುಬರುತ್ತದೆ. ಆದರೆ ಹೆಚ್ಚು ಪ್ರಭಾವಶಾಲಿ-ದವನು ಈ ಮನೆತನದಲ್ಲಿ ಆರನೆಯವನಾದ **ವೂಟೀ**ಯು. ಇವನು ೫೦ ವರುಷಗಳವರೆಗೆ ಆಳಿದನು. ಉತ್ತರದಿಂದ ಮೇಲೇರಿ ಬರುವ ತಾರ್ತರರನ್ನು ಹಿಂದೂಡಿದನು. (ಈ ತಾರ್ತರಿಯ ತುಂಟ ಪಂಗಡಗಳಿಗೆ ಹೂಣರೆಂದು ಹೆಸರುಬಂದಿದೆ. ಚೀನಿ ಭಾಷೆಯಲ್ಲಿ ಅವರಿಗೆ 'ಹೂಯಿಂಗ್‌ನು,' ಎನ್ನುವರು. ಅದೇ ಉಚ್ಚಾರದಲ್ಲಿ ಮುಂದೆ ಹೂನ್-ಹೂಣ್ ಆಯಿತು.) ವೂಟೀಯ ಸಾಮ್ರಾಜ್ಯವು ಪಶ್ಚಿಮದಲ್ಲಿ ಕ್ಯಾಸ್ಪಿಯನ್ ಸಮುದ್ರದ ವರೆಗೆ ಹಬ್ಬಿತ್ತು. ವೂಟೀಗೆ ಈ ಪ್ರದೇಶದಲ್ಲಿ ತಲೆಬಾಗದವರೇ ಇರಲಿಲ್ಲ.

ಆದರೂ ಉತ್ತರದ ಹೂಣರ ಹಾವಳಿಯನ್ನು ತಡೆಯಬೇಕೆಂದು, ಪಶ್ಚಿಮದಲ್ಲಿಯ ಅರಸರ ಜತೆಗೆ ಗೆಳೆತನ ಬೆಳೆಸಬೇಕೆಂದು **ಚೋಂಗ್ ಚೀಯೆನ್** ಎಂಬುವವನನ್ನು ಪಶ್ಚಿಮ ದೇಶಗಳಿಗೆ ಕಳಿಸಿದನು. ಚೋಂಗನು ಕ್ರಿ. ಶ. ಪೂ. ೧೩೮ರಲ್ಲಿ ಪಶ್ಚಿಮಕ್ಕೆ ಹೊರಟನು. ಆದರೆ ದಾರಿಯಲ್ಲಿ ಹೂಣರ ಕೈಗೆ ಸಿಕ್ಕಿಬಿದ್ದವನು ಹತ್ತು ವರುಷಗಳ ವರೆಗೆ ಸೆರೆಯಾಳಾಗಿದ್ದನು. ಮುಂದೆ ಪಾರಾಗಿ ಪಶ್ಚಿಮದ ನಾಡಿಗೆ ಬಂದುಮುಟ್ಟಿದನು.

ಅಲ್ಲಿ ಅವನು ಫಲವತ್ತಾದ ಪ್ರದೇಶವನ್ನೂ ತನ್ನ ನಾಡಿನ ಕುದುರೆಗಳಿಗಿಂತ ವೇಗ ಸಾಗುವ ಕುದುರೆಗಳನ್ನೂ ಕಂಡನು. ಭಾರತದೊಡನೆ ನಡೆದ ವ್ಯಾಪಾರದ ಸುದ್ದಿಯನ್ನೂ ವ್ಯಾಪಾರ ಮಾರ್ಗವನ್ನೂ ತಿಳಿದನು. ಇನ್ನೂ ದೂರದಲ್ಲಿ ರೋಮು ಸಾಮ್ರಾಜ್ಯವಿದೆಯೆಂದೂ ಮುಂತಾಗಿ ತನ್ನ ಸಮ್ರಾಟನಿಗೆ ಸುದ್ದಿ ತಂದನು. ಬರುವಾಗ ದ್ರಾಕ್ಷೆಯ ಸಸಿಗಳನ್ನು ತಂದನು. ಕ್ರಿ. ಶ. ಪೂ. ೧೨೬ರಲ್ಲಿ ಮರಳಿ ಬಂದನು.

ಈ ಸುದ್ದಿ-ಸಂಗತಿಗಳನ್ನು ಕೇಳಿದ **ವೂಟೀ**ಯು ಪಶ್ಚಿಮದ ಕಡೆಗೆ ದಂಡಯಾತ್ರೆಗೆ ಹೊರಟು, ಚೀನಿ ತುರ್ಕಸ್ತಾನವನ್ನು ವಶಪಡಿಸಿಕೊಂಡನು. ಉತ್ತರದ ಹೂಣರನ್ನು ಇನ್ನೂ ದೂರ ಸರಿಸಿದನು. ರೋಮು-ಭಾರತಗಳ ಜತೆಗೆ ವ್ಯಾಪಾರ ಸಾಗಿಸಬೇ-ಕೆಂದು ನಿರ್ಧರಿಸಿದನು. ಪ್ರಾಯಶಃ ಇವನ ಆಳ್ವಿಕೆಯಲ್ಲಿಯೇ ವ್ಯಾಪಾರಸಂಬಂಧ ಬೆಳೆದಿರಬೇಕು.

ಈ ಕಾಲದಲ್ಲಿಯೆ ಚೀನದ ಇತಿಹಾಸಕಾರನಾದ '**ಸುಮಾ ಚಿಯೆನ್**'ನು ಬಾಳಿದನು. ಅವನು '**ಶೀ ಚೀ**' ಎಂಬ ಹೆಸರಿನ ಇತಿಹಾಸಗ್ರಂಥವೊಂದನ್ನು ಬರೆದನು. ಅದರಲ್ಲಿ ಅತಿ ಪ್ರಾಚೀನ ಕಾಲದಿಂದ ಅಲ್ಲಿಯವರಿಗೆ ನಡೆದ ಸಂಗತಿಗಳ ಸವಿಸ್ತರವಾದ ಕತೆಯಿದೆ. ಅದನ್ನೇ ಇಂದು ಆಧಾರವಾಗಿಟ್ಟುಕೊಂಡಿದ್ದಾರೆ. ಅಷ್ಟು ಅಧಿಕಾರಯುಕ್ತವಾಣಿಯುಳ್ಳದೆ ಆ ಗ್ರಂಥ.

'ಹಾನ್'ರು 'ಚಿನ್' ಮನೆತನದವರು ಮೊದಲು ಮಾಡಿದು-ದನ್ನೆ ಮುಂದೂಡಿದರು. ಇಷ್ಟೆ ಅಲ್ಲ, ನಾಡನ್ನು ಬಟ್ಟಾಗಿರಿ-ಸಿದರಲ್ಲದೆ ಸಂಸ್ಕೃತಿಯು ಸಾಮ್ರಾಜ್ಯದಲ್ಲಿಯೂ ಒಕ್ಕಟ್ಟುಂಟಾ-ಗುವಂತೆ ಮಾಡಿದರು. ಚಿನ್ ಮನೆತನದ ಕಾಲದಲ್ಲಿ ಕುಗ್ಗಿದ್ದ **ಕಾಂಫ್ಯೂಶಿಯಸ್** ಪ್ರಭಾವವು ಮತ್ತೆ ಉದಯವಾಯಿತು. ಅವನ ವಿಚಾರಗಳು ಸರಕಾರಸಮ್ಮತವಾದುವು; ಸರಕಾರದ ಮನ್ನಣೆಪಡೆದುವು. ಈ ಮನೆತನದ ಕಾರ್ಯವನ್ನು ನೆನೆವಾಗ ಎರಡು ವಿಷಯ ಮರೆಯುವಂತಿಲ್ಲ: ಒಂದು ಕಾಗದ ಮಾಡುವುದು ಅಚ್ಚುಹಾಕುವುದು; ಇನ್ನೊಂದು ಹೆಚ್ಚು ಮಹತ್ವದ್ದೆಂದರೆ ಅಧಿಕಾರಿವರ್ಗದವರನ್ನು ಆರಿಸುವುದಕ್ಕೆ ಪರೀಕ್ಷೆಯ ಪರಿಪಾಠ (Civil Service Examinations)ವು. ಜಗತ್ತಿನಲ್ಲಿಯೆ ಕಾಗದ ಹುಟ್ಟಿದುದು ಚೀನದಲ್ಲಿ ಮೊದಲು. ಅಚ್ಚು ಹುಟ್ಟಿದುದು ಚೀನದಲ್ಲಿ ಮೊದಲು. ಅಧಿಕಾರಿವರ್ಗದ ಪರೀಕ್ಷೆಗಳು ಮೊದಲಾದುದು ಚೀನದಲ್ಲಿ ಮೊದಲು. ಇವೆಲ್ಲವೂ ಹಾನ್ ಮನೆತನದ ಆಳ್ವಿಕೆಯಲ್ಲಿ ಎಂಬುದು, ಆ ಮನೆತನಕ್ಕೆ ಕೀರ್ತಿತರುವ ಮಾತುಗಳು.

ಬೌದ್ಧ ಧರ್ಮವು ಹೆಚ್ಚು ಮುಂದಡಿಯಿಟ್ಟಿತು. ಆದರಿಂದ ಚೀನ-ಭಾರತಗಳ ಸಂಬಂಧ ನಿಕಟದ್ದಾಗತೊಡಗಿತು. ಭಾರತವು ಚೀನೀಯರಿಗೆ ಧರ್ಮಭೂಮಿ-ಯಾತ್ರಾಸ್ಥಳ-ಪುಣ್ಯಭೂಮಿ-ಯಾಗತೊಡಗಿತು. ಅದೇ ನಿಮಿತ್ತದಿಂದ ಚೀನ-ಭಾರತಗಳ ನಡುವಿನ ವ್ಯಾಪಾರಸಂಬಂಧವು ಬೆಳೆಯತೊಡಗಿತು. ಚೀನ-ಭಾರತಗಳ ಸಂಬಂಧವು ಎರಡುಸಾವಿರ ವರುಷಗಳಿಂದಲೂ ಬಂದುದು. ಈ ಸಂಬಂಧವಿವರವನ್ನು ಮುಂದಿನ ಸಲ ನೋಡುವ.

ಜಯಂತಿ

(ಸಣ್ಣಕತೆ)

ನನ್ನ ವಿವಾಹ

ಶ್ರೀ. ಎಸ್. ಎನ್. ಜೋಶಿಬೇಲೆ, ಬಿ.ಎಸ್‌ಸಿ.
ಗೋಕರ್ಣ

★

ಒಂದು ಲಗ್ನಕ್ಕೆ ಸಾವಿರ ವಿಘ್ನವೆಂದು ಹೇಳು-ವುದು ಸುಳ್ಳಲ್ಲ. ಬರು-ಬರುತ್ತ ಈ ವಿಘ್ನಗಳ ಸಂಖ್ಯೆ ಬೆಳೆಯುತ್ತಲೆ ಹೊರಟಿದೆ. ಲಗ್ನವಿಲ್ಲದ ತರುಣ-ತರುಣಿಯರ ನಿಟ್ಟುಸಿರುಗಳ ಮೂಲಕ ನಾಡಿನ ವಾತಾವರಣವೆ ಹದಗೆಡುತ್ತಲಿದೆ!

★

ಎಂತಹ ಔದಾಸೀನ್ಯವಾವರಿಸಲಿ, ಎಷ್ಟೇ ಸಂಕಟಗಳಲ್ಲಿ ಮುಳುಗಿರಲಿ, ಎಂತಹ ಭೀಷಣರೋಗದಿಂದ ನರಳುತ್ತಿರಲಿ, 'ವಿವಾಹ' ಎಂದೊಡನೆ ಮನುಷ್ಯನು ಉಲ್ಲಸಿತನಾಗುತ್ತಾನೆ. ಅದರಲ್ಲೂ ತಮ್ಮ ತಮ್ಮ ವಿವಾಹದ ಪ್ರಸ್ತಾಪವು ಪ್ರತಿಯೊಬ್ಬ-ರಿಗೂ ವಿವಾಹದಂತೆಯೆ ಆನಂದವನ್ನು ಕೊಡುವುದು. ಇದು ಜಗತ್ತಿನ ನಿಯಮ. ಈ ನಿಯಮಕ್ಕೆ ನಾನಾದರೂ ಹೇಗೆ ಅಪ-ವಾದವಾಗಿ ಉಳಿಯುವೆ?

ಎಲ್ಲಕ್ಕೂ ಮೊದಲು ವಿವಾಹದ ಪ್ರಸ್ತಾಪವು ನನ್ನನ್ನು ಸಂತಸ-ಗೊಳಿಸಿದುದು ನನ್ನ ಎಂಟನೆಯ ವಯಸ್ಸಿನಲ್ಲಿ. ಆಗ 'ವಿವಾಹ-ವೆಂದರೆ ಒಳ್ಳೊಳ್ಳೆಯ ಒಡವೆ-ಅಲಂಕಾರಗಳ, ತಿಂಡಿ-ತಿನಿಸುಗಳ ಸುರಿಮಳೆ' ಎಂದಿಷ್ಟೇ ನನ್ನ ತಿಳುವಳಿಕೆಯಿದ್ದಿತು. ಈಗ ಆ ಮಾತಿಗೆ ಹದಿನೈದು ವರುಷಗಳು ಕಳೆದುವು. ಆದರೆ ಆ ದಿನವೆ 'ನನ್ನ ವಿವಾಹ' ಶಬ್ದದ ಮುಂದೆ ಒಡಮೂಡಿದ ಪ್ರಶ್ನಾರ್ಥ ಚಿಹ್ನೆಯು ಇದುವರೆಗೂ ಹಾಗೆಯೆ ಇದೆ. ಅದನ್ನು ಒರಸುವ ಕಾಲವು ಯಾವಾಗ ಬರುವುದೆಂಬುದನ್ನು ನಾನರಿಯೆ.

ನನ್ನ ತಂದೆಯವರು ಸರಕಾರಿ ನೌಕರಿಯಲ್ಲಿದ್ದವರು; ಆದರೆ ಇತರರಂತೆ ಅವರಿಗೆ ಸುಧಾರಣೆಯಲ್ಲಿ ಪ್ರೀತಿಯಿಲ್ಲ. ಪ್ರಾಚೀನ ಪರಂಪರೆಯ ಶಾಸ್ತ್ರಗಳ ಮನೆತನದವರವರು. "ಕುಸುಮಾ ಎಂಟನೆಯ ವರುಷದಲ್ಲಿ ಕಾಲಿಟ್ಟಳು; ಇವಳಿಗೆ ಈಗ ಲಗ್ನ ಮಾಡುವುದು ಯುಕ್ತ!" ಎಂದು ಒಂದು ದಿನ ನನ್ನ ತಾಯಿ-ಯೊಡನೆ ಹೇಳಿದರು. ಸ್ಮೃತಿಕಾರರ ಬಾಲ್ಯವಿವಾಹವೇ ಪ್ರಶಸ್ತ-ವೆಂದಿವರ ಅಭಿಮತ. ಅದರಂತೆ ಲಗ್ನವಾಗಲು ಕೆಲವು ಗಂಡು ಹುಡುಗರ ಜಾತಕಗಳನ್ನು ಕೂಡಿಹಾಕಿದರು. ಕೆಲವು ಜಾತಕ-ಗಳು ಹೊಂದಿಕೆಯಾದುವು; ಆದರೆ ಯಾರ ಜಾತಕವು ಒಳ್ಳೆಯ-ದಿತ್ತೋ ಅವರು ವರದಕ್ಷಿಣೆಯನ್ನಪೇಕ್ಷಿಸಿದರು; ವರದಕ್ಷಿಣೆಯ ಆಶೆಯಿಲ್ಲದವರ ಜಾತಕವು ನನ್ನ ಜಾತಕಕ್ಕೆ ಮೇಳಗೂಡಲಿಲ್ಲ. ಬಂದ ಸಂಬಳ ತಂದೆಯವರ ಸಂಸಾರದ ವೆಚ್ಚದ ಮಟ್ಟಿಗೆ ಮಾತ್ರ ಇತ್ತು. ಹೀಗಾಗಿ ತಮ್ಮ ಪ್ರಾಚೀನ ಪರಂಪರೆಯನ್ನು ಕಾಯ್ದುಕೊಳ್ಳುವ ಗೊಡವೆಯನ್ನವರು ಬಿಡಬೇಕಾಯಿತು. ನನ್ನ ವಿವಾಹಕಾರ್ಯವು ಮುಂದೂಡಲ್ಪಟ್ಟಿತು.

ಮುಂದೆ ನಾಲ್ಕು ವರುಷಗಳ ವರೆಗೆ ವಿವಾಹದ ಪ್ರಸ್ತಾಪವು ಅಷ್ಟೇನೂ ಪ್ರಬಲವಾಗಿ ಏಳಲಿಲ್ಲ. ಅವಕಾಶ ದೊರೆತಾಗ— ನೆನಪಾದಾಗ— ಮಗಳ ಮದುವೆಯ ಮಂಟಪವನ್ನು ಮನಸ್ಸಿ-ನಲ್ಲಿಯೆ ಕಟ್ಟುತ್ತಿದ್ದರಾ ನನ್ನ ತಂದೆ-ತಾಯಿಗಳು. ಮಳೆಗಾಲ ಕಳೆದೊಡನೆಯೆ ತಂದೆಯವರು ಗಟ್ಟಿಮನಸ್ಸು ಮಾಡಿದರು: "ಹುಡುಗಿಯು ಋತುಮತಿಯಾಗುವ ಮೊದಲು ಕನ್ಯಾದಾನ ಮಾಡದಿದ್ದರೆ ಗತ್ಯಂತರವಿಲ್ಲ! ಈ ವರುಷ ಬೇಸಗೆಯು ಮುಗಿ-ಯುವುದರೊಳಗೆ ಲಗ್ನಮಾಡಿಯೇ ಬಿಡಬೇಕು! ವರದಕ್ಷಿಣೆಗಾಗಿ ಸಾವಿರಾರು ರೂಪಾಯಿಯ ಸಾಲವು ಮೈಮೇಲೆ ಬಂದರೂ ಬರಲಿ!" ಎಂಬ ನಿರ್ಧಾರಕ್ಕೆ ಬಂದರು. ತಂದೆಯವರ ಪುಣ್ಯ-ದಿಂದ ರೂಪ-ಯೌವನ-ಸಂಪತ್ತುಗಳಿಂದ ಯುಕ್ತನಾದ ವರನೂ ದೊರೆತನು. ವೈಶಾಖಮಾಸದಲ್ಲಿ ವಿವಾಹವು ನಿಶ್ಚಯಿಸಲ್ಪಟ್ಟಿತು. ವರನಿಗೆ ವರದಕ್ಷಿಣೆಯ ಅಪೇಕ್ಷೆಯಿರಲಿಲ್ಲ. ಆದರೇನು? ಸರಿ-ಯಾಗಿ ಡಾ. ಹರವಿಲಾಸ ಶಾರದಾರವರು 'ಬಾಲ್ಯವಿವಾಹ ಪ್ರತಿ-ಬಂಧಕ ಕಾನೂನು' ಒಂದನ್ನು ಪಾಸ್‌ಮಾಡಿಕೊಂಡು, ಎಲ್ಲ ಕನ್ಯಾಪಿತೃಗಳ— ಮುಖ್ಯವಾಗಿ ನನ್ನ ತಂದೆಯವರ— ಎದೆಯ-ನ್ನೇರಿ ಕುಳಿತರು. ಈ ಕಾನೂನನ್ನು ಮೀರಲು ತಂದೆಯವರಿಗೆ ಧೈರ್ಯ ಸಾಲಲಿಲ್ಲ. ಎಲ್ಲಾದರೂ ಇದ್ದ ನೌಕರಿಗೆ ಸಂಚಕಾರ ಬಂದರೆ ಮಾಡುವುದೇನು? ವರಪಕ್ಷದವರು ಬಹು ಗಟ್ಟಿಗರು; ಅವರು ಈ ಕಾನೂನನ್ನು ಲಕ್ಷಿಸಲೇ ಇಲ್ಲ. ಬೇರೊಂದು ಹತ್ತು ವರುಷದ ಹುಡುಗಿಯೊಡನೆ ತಮ್ಮ ಲಗ್ನಕಾರ್ಯವನ್ನು ನಡೆಯಿ-ಸಿಯೆ ನಡೆಯಿಸಿದರು. ಅಂತೂ ನನ್ನ 'ವಿವಾಹ' ಶಬ್ದದ ಮುಂದಿನ ಪ್ರಶ್ನಾರ್ಥಕ ಚಿಹ್ನದ ಆಯುಷ್ಯವು ಬೆಳೆಯಿತು.

* * *

ಒಂದು ಯುಗಾದಿಯ ಹಬ್ಬದ ದಿವಸ, ನಾವೆಲ್ಲರೂ ಪ್ರತಿ-ವರುಷದಂತೆ "ನೂತನ ವರ್ಷಫಲ" ವನ್ನು ಕೇಳಲು ಶ್ರೀರಾಮ ದೇವರ ಗುಡಿಯೊಳಗೆ ಕಲೆತಿದ್ದೆವು. ನಾನು ಆಗ ಋತುಮತಿ-ಯಾಗಿ ಒಂದು ವರುಷವಾಗಿತ್ತು. ಕುಲಪುರೋಹಿತ ರಾಮಾ-ವಧಾನಿಗಳು ತಮ್ಮ ವಿನೋದಮಿಶ್ರಿತ ಶೈಲಿಯಲ್ಲಿ, ದೊಡ್ಡ ಧ್ವನಿ ಯಿಂದ ಬ್ರಹ್ಮಕಲ್ಪವನ್ನು ಹೇಳಲಾರಂಭಿಸಿದ್ದರು. ಬ್ರಹ್ಮನ ಆಯುಷ್ಯ, ಕೃತ-ತ್ರೇತಾ-ದ್ವಾಪರ ಯುಗಗಳು ಇವುಗಳನ್ನು ವರ್ಣಿಸಿ, ಕಲಿಯುಗವನ್ನು ವರ್ಣಿಸುವಾಗ, ಅದರಲ್ಲಿದ್ದ "ಕಲಿ-ಯುಗೇ ಸ್ತ್ರೀಯೋ ದ್ವಾದಶೇ ವರ್ಷೇ ಗರ್ಭಂ ಧಾರಯಂತಿ" ಎಂಬುದನ್ನು ಹೇಳಿ, ಅಷ್ಟಕ್ಕೇ ಸುಮ್ಮನಾಗಲಿಲ್ಲ. ಅವರದು

ಸ್ವಲ್ಪ ಅಧಿಕತನದ ಸ್ವಭಾವ. “ ನಮ್ಮ ಕುಸುಮಳಿಗೆ ಲಗ್ನವಾಗಿದ್ದರೆ, ಇಷ್ಟರಲ್ಲೊಂದು ತಂಕುಳಲ್ಲಿ ಅಪತ್ಯರತ್ನವು ಶೋಭಿಸುತ್ತಿತ್ತು,” ಎಂದು ನನ್ನಕಡೆಗೆ ದೃಷ್ಟಿಹೊರಳಿಸಿ ನುಡಿದರು. ನಾನು ತಲೆತಗ್ಗಿಸಿದೆನು. “ ಯಾವುದಕ್ಕೂ ಕಾಲ ಬರಬೇಕು ; ಬರದೇ ಈಜಾಡಿದರೆ ಏನೂ ಆಗುವುದಿಲ್ಲ!” ಎಂದರು ನನ್ನ ತಂದೆಯವರು. ಫಲಶ್ರುತಿಯು ಮುಂದುವರಿದು ಮುಗಿಯಿತು. ಎಲ್ಲರೂ ಪ್ರಸಾದ ಸ್ವೀಕರಿಸಿ ಮನೆಯ ಹಾದಿ ಹಿಡಿದೆವು. ತಂದೆಯವರು ಮನೆಯನ್ನು ಮುಟ್ಟುವ ವರೆಗೂ ಏನೇನೋ ಎಣಿಕೆಹಾಕುತ್ತಿದ್ದರೆಂದು ತೋರುತ್ತದೆ. ಮನೆಗೆ ಬಂದವರೇ ತಾಯಿಯೊಡನೆ ಹೇಳಿದರು: “ ಸರಕಾರದ ಹುಕುಮಿಗೆ ಅಪೀಲು ಇದೆ, ಪುನರ್ವಿಚಾರಣೆಯಿದೆ! ಪ್ರಕೃತಿಯ ಶಾಸನಕ್ಕೆ ಮರುಮಾತಿಲ್ಲ ! ಅವಳು ನನ್ನನ್ನು ಧ್ಯೇಯರಹಿತನನ್ನಾಗಿ ಮಾಡಿರುವಳು. ನಾನು ಮೊದಲಿನಿಂದ ಪ್ರಾಚೀನ ಪರಂಪರೆಯ ಅಭಿಮಾನಿಯು ; ಆದರೆ ಮಗಳ ಲಗ್ನಮಾಡಲಾಗದೆ ಇಂದು ನಿರುಪಾಯನಾಗಿ ಆಧುನಿಕನಾಗಿದ್ದೇನೆ. ಮುಂದೇನಾಗುವದೆನೋ ದೇವರೇ ಬಲ್ಲ ! ”

ನಾನು ಇಂಗ್ಲಿಷ್ ಶಾಲೆಯಲ್ಲಿಯ ಕ್ಲಾಸಿನ ಮೆಟ್ಟಲನ್ನು ವರುಷಕ್ಕೊಂದರಂತೆ ಏರುತ್ತ, ಏಳನೆಯ ಕ್ಲಾಸನ್ನು ಮೆಟ್ಟಿದೆನು. ನಮ್ಮೂರಿಗೆ ಇದ್ದುದು ಒಂದೇ ಹಾಯ್‌ಸ್ಕೂಲು. ಹುಡುಗ-ಹುಡುಗಿಯರು ಸೇರಿಯೇ ಕಲಿಯಬೇಕಾಗಿತ್ತು. ನಮ್ಮೂರಿಗೆ ಸುಧಾರಣೆಯ ಗಾಳಿ ಇನ್ನೂ ಬೀಸಿರಲಿಲ್ಲ. ನಾನಾಯಿತು, ನನ್ನ ಅಭ್ಯಾಸವಾಯಿತು ! ಸುಮ್ಮನೆ ತಲೆತಗ್ಗಿಸಿಕೊಂಡು ಹಾಯ್‌ಸ್ಕೂಲಿಗೆ ಹೋಗುವುದು ಬರುವುದು— ಇಷ್ಟು ನನ್ನ ಕೆಲಸ! ಹೀಗಿರುವಾಗ ಒಂದುದಿನ, ಕವರೊಂದನ್ನು ಪೋಸ್ಟ್‌ಮನ್ನನು ನನಗೆ ‘ಬಟವಡೆ’ಮಾಡಿ ಹೋದನು. ಒಡೆದು ನೋಡಲಾಗಿ, ಅದರಲ್ಲಿ “ಪ್ರೇಮದ ಸ್ವರೂಪ” ಎಂಬ ಒಂದು ಹಸ್ತಲಿಖಿತ ಪ್ರಬಂಧವಿತ್ತು. ಬರೆದವರ ನಾಮನಿರ್ದೇಶವಿಲ್ಲ. ಮೇಲಿಂದ ಮೇಲೆ— ಜುಗುಪ್ಸೆಯಿಂದಲೆ— ತುದಿಯತನಕ ಓದಿದೆನು. ಹೇಯ— ಅಶ್ಲೀಲ— ವಿಚಾರವೊಂದೂ ಅದರಲ್ಲಿರಲಿಲ್ಲ. ಆದುದರಿಂದ ಸ್ವಲ್ಪ ಸಮಾಧಾನವಾಯಿತು, ಲೇಖಕನ ಬಗ್ಗೆ ಆದರಭಾವವೂ ಒಡಮೂಡಿತು. “ ಇದು ನಮ್ಮದೇ ಕ್ಲಾಸಿನ ಯಾವನೊಬ್ಬ ವಿದ್ಯಾರ್ಥಿಯ ಕೃತಿಯಿರಬೇಕು ; ಅವನ ಈ ರೀತಿಯಲ್ಲಿ ಉದ್ದೇಶವಿಲ್ಲದೆ ಇಲ್ಲ, ಆದರೆ ತನ್ನ ಹೆಸರನ್ನೂ ಈ ನಿಬಂಧ ಬರೆಯುವ ಉದ್ದೇಶವನ್ನೂ ಪತ್ರದ ಸಂಗಡಲೇ ಅವನು ತಿಳಿಸುವುದು ಯುಕ್ತವಿತ್ತು. ಅವನು ಯೋಗ್ಯನಾದರೆ— ನನ್ನ ತಂದೆಯವರೂ ಒಪ್ಪಿದರೆ—ನಾವಿಬ್ಬರೂ ನನ್ನ ವಿವಾಹಸಮಸ್ಯೆಯನ್ನು ಬಗೆಹರಿಸಬಾರದೇಕೆ?.... ವಿವಾಹಶಬ್ದದ ಮುಂದಿನ ಪ್ರಶ್ನಾರ್ಥಕ ಚಿಹ್ನವನ್ನು ಒಡಿಸಬಾರದೇಕೆ ? ”....ತಿರುತಿರುಗಿ ಈ ವಿಚಾರವು ತಲೆಯಲ್ಲಿ ಸುಳಿಯಿತು. ‘ ಪ್ರಾಚೀನಪರಂಪರೆಯ ಅಭಿಮಾನಿಗಳ ಮಗಳಾದ ನಾನು, ವಿವಾಹಕ್ಕಾಗಿ ಇಂತಹ ದಾರಿಯನ್ನು ಆಶ್ರಯಿಸುವುದು ತಪ್ಪಾಗಲಿಕ್ಕಿಲ್ಲವೇ ?’ ಎಂದೊಂದು ಭಯಭೂತವು ಬೆದರಿಸಿತು. ನಾನು ಸ್ಥೈರ್ಯದಿಂದ ಉತ್ತರಕೊಟ್ಟೆನು: “ ವಿವಾಹವೆಂದರೆ ಪ್ರವಾಹಪತಿತ ಎಲೆಗಳು ಒಂದಕ್ಕೊಂದು ಸಂಧಿಸುವಂತೆ ಸಂಧಿಸುವುದಲ್ಲ; ಪ್ರೇಮಸಂಮಿಲನ ! ಹಾಗೆ ಸಂಧಿಸುವ ಮೊದಲು ನಾವು ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸುವೆವೆಂದು ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಂಡು ಮುಂದುವರಿಯುವುದು ತಪ್ಪಲ್ಲ ! ” ಕೆಲವೇ ದಿನಗಳಲ್ಲಿ ನನಗೆ ಅವನ ಭೆಟ್ಟಿ-ಪರಿಚಯಗಳಾದುವು. ಅವನು ಸದಾಚಾರಿಯೂ ಸುರೂಪಿಯೂ ಆಗಿದ್ದನು. ಅವನು ಕನಸಿನಲ್ಲಿಯೂ ನನ್ನ ಹೆಸರನ್ನು ಹೇಳಿ ಬಡಬಡಿಸಿದನಂತೆ. ಅವನ ಹೆಸರು ‘ ಕೃಷ್ಣಮೂರ್ತಿ’ ಎಂಬುದಾಗಿತ್ತು. ನಾವಿಬ್ಬರೂ ಪರಸ್ಪರ ವಿವಾಹಕ್ಕೆ ಸಮ್ಮತಿಸಿದೆವು. ಕೃಷ್ಣಮೂರ್ತಿಯು ನನ್ನ ತಂದೆಯವರೊಡನೆ ವಿವಾಹಪ್ರಸ್ತಾಪ ಮಾಡಬೇಕೆಂದೂ ನಾನು ತಂದೆಯವರಿಗೆ ಒಪ್ಪಿಗೆ ಕೊಡುವಂತೆ ಸಲಹೆಯನ್ನೀಯಬೇಕೆಂದೂ ಗೊತ್ತಾಯಿತು. ಕ್ರಿಸ್‌ಮಸ್ ಬಿಡುವಿನಲ್ಲಿ ಕೃಷ್ಣಮೂರ್ತಿಯು, ನನ್ನ ತಂದೆಯವರೆದುರು ವಿವಾಹದ ಪ್ರಸ್ತಾಪಮಾಡಿದನು. ಅವರು ಅವನ ಜಾತಕ ತರಿಸಿ, ನಮ್ಮಿಬ್ಬರ ಜಾತಕಗಳನ್ನು ಪರಿಶೀಲಿಸಲು ಜೋಯಿಸರಿಗೊಪ್ಪಿಸಿದರು. ಕೃಷ್ಣಮೂರ್ತಿಯೂ ನಾನೂ ಒಂದೇ ಭಾರದ್ವಾಜ ಗೋತ್ರದವರೆಂದೂ ಸಗೋತ್ರವಿವಾಹವು ನಿಷಿದ್ಧವೆಂದೂ, ಆದುದರಿಂದ ಇವರಿಬ್ಬರ ವಿವಾಹ ಸಂಘಟಿಸಲು ಬರಲಾರದೆಂದೂ ಜೋಯಿಸರ ಅಭಿಪ್ರಾಯವಾಯಿತು. “ಒಂದೇ ಗೋತ್ರದವರೊಡನೆ ಯಾಕೆ ವಿವಾಹವಾಗಕೂಡದು ? ಗೋತ್ರದ ಮೂಲವೇನು ? ” ಎಂಬುದಾಗಿ ನಾನು ಜೋಯಿಸರೊಡನೆ ವಾದಿಸ ಹೊರಟೆನು. ವಾದದ ಮಧ್ಯದಲ್ಲಿ “ ವರನು ನನಗಿಂತ ಎರಡು ತಿಂಗಳು ಕಿರಿಯನು” ಎಂಬ ಮತ್ತೊಂದು ಸಂಗತಿಯು ನನಗೆ ತಿಳಿದು, ಬಿಸಿನೀರು ಸುರುವಿದಂತಾಯಿತು. ಕಿರಿಯನೊಡನೆ ಲಗ್ನವಾಗಲು ನನ್ನ ಮನೋದೇವತೆಯು ಒಪ್ಪಲಿಲ್ಲ. ನನ್ನ ವಿವಾಹಸಮಸ್ಯೆಯು ಸಮಸ್ಯೆಯಾಗಿಯೆ ಉಳಿಯಿತು.

ನನ್ನ ಮೆಟ್ರಿಕ್ ಪರೀಕ್ಷೆಯು ಮುಗಿದ ಎರಡು ವರ್ಷಗಳಲ್ಲಿ ತಂದೆಯವರಿಗೆ ಪೇನ್ಶನ್ ಆಯಿತು. ಇನ್ನೇನು ಸರಕಾರಿ ಕೆಲಸದ ಗಡಬಡಿಯಿಲ್ಲ; ಬೇಕಷ್ಟು ಪುರಸತ್ತು ಸಿಕ್ಕಿತು. ಎಲ್ಲಿಂದಾದರೂ ವರನನ್ನು ಹುಡುಕಿ ತರಬೇಕೆಂದು ಸ್ವತಃ ತಂದೆಯವರೇ ಹೊರಟರು. ಜಗತ್ತಿನಲ್ಲಿ ವಿವಾಹೇಚ್ಛುಗಳಾದ ಸ್ತ್ರೀ-ಪುರುಷರು ಕೋಟಿಗಟ್ಲೆ ಇರುವರು. ಆದರೆ ನಮ್ಮ ನಮ್ಮ ಸಾಣಿಗೆಗಳಲ್ಲಿ ಗಾಳಿಸಿದರೆ ಸಿಕ್ಕುವ ಮಂದಿಯನ್ನು ಕೈಬೆರಳಿನಲ್ಲಿ ಲೆಕ್ಕಮಾಡಬಹುದು. ಈ ಸಂಗತಿಯು ನಮ್ಮ ತಂದೆಯವರ ಅನುಭವಕ್ಕೂ ಬಂತು. ಧಾರವಾಡ,-ವಿಜಾಪುರಗಳನ್ನು ಸುತ್ತಾಡಿ ವರನೊಬ್ಬನನ್ನು ಆರಿಸಿದರು. ತಂದೆಯವರಿಗೆ ವರನಲ್ಲಿ ದೋಷಕಾಣಲಿಲ್ಲ. ವರನು ತನ್ನ ಆಕಾರಕ್ಕೂ ಮಿಕ್ಕಿ ದಪ್ಪನಾಗಿದ್ದನು. ಆಗ ನನ್ನ ಮನಸ್ಸೊಪ್ಪಲಿಲ್ಲ. ಹೀಗಾಗಿ ಆ ಸಂಬಂಧವನ್ನು ತಿರಸ್ಕರಿಸ-

ಬೇಕಾಯಿತು. ಮನಸ್ಸು ಮಹಾ ವಿಚಿತ್ರ ವಸ್ತು. ಈ ಹೊತ್ತು ಅದು ಒಂದು ವಸ್ತುವನ್ನು ತಿರಸ್ಕರಿಸಿದರೆ ಯಾವಾಗಲೂ ಹಾಗೆಯೆ ತಿರಸ್ಕರಿಸುತ್ತದೆಂಬ ನಿಯಮವಿಲ್ಲ. ನನ್ನ ಅವಸ್ಥೆಯೂ ಹಾಗೆಯೆ ಆಯಿತು. ಸ್ವಲ್ಪೇ ದಿವಸಗಳಲ್ಲಿ ಗೆಳತಿ ಮಾಲತಿಯು ಆ ವರನನ್ನು ವರಿಸಿದಾಗ, ನಾನೂ ಆತನನ್ನೇ ವರಿಸಬಹು-ದಿತ್ತೆಂದು ತೋರಿತು.

ಮೆಟ್ರಿಕ್ ಮುಗಿದ ಮೇಲೆ ಪತ್ರಿಕಾವಾಚನದಲ್ಲಿ ನಾನು ಹೆಚ್ಚು ಆಸಕ್ತಳಾದೆನು. ಓದುತ್ತೋದುತ್ತ ವಾಚನಾಭಿರುಚಿಯು ಬೆಳೆಯಿತು. ದಿನ ಹೋದಂತೆ "ನಾನೂ ಯಾಕೆ ಕತೆ-ಲೇಖನ-ಗಳನ್ನು ಬರೆಯಬಾರದು? ಇದರಿಂದ ಎಷ್ಟೋ ಜನರ ಪರಿಚಯವೊದಗಿ ಮುಖ್ಯವಾದ ವಿವಾಹಸಮಸ್ಯೆಯನ್ನು ಅನಾಯಾಸ-ವಾಗಿ ಬಿಡಿಸಬರಬಹುದು!" ಎಂಬ ಆಶಾಂಕುರವು ಉತ್ಪನ್ನ-ವಾಯಿತು. ಇದನ್ನು ಆಲೋಚಿಸಿದಾಗ ನನಗೆ ಸುಲಭವೆಂತಲೇ ತೋರಿತು; ಆದರೆ ಫೌಂಟನ್‌ಪೆನ್ನನ್ನು ಹಿಡಿದು ಬರೆಯಲಾರಂ-ಭಿಸಿದಾಗ, ಕಾಗದದ ಹಾಳೆಗಳೆಷ್ಟು ಹಾಳಾದುವು! ಪ್ರತಿಭಾದೇವಿ ಯಾರ ತೊತ್ತು? ನಾನು ಹತಾಶಳಾಗಲಿಲ್ಲ. ಉದ್ದೇಶವನ್ನು ಸಾಧಿಸಲು ಅಲ್ಲೇ ಬೇರೊಂದು ಮಾರ್ಗ ಹಿಡಿದೆನು: ಕತೆ-ಲೇಖನಗಳಿಗಾಗಿ ಪಂಡಿತರೊಬ್ಬರನ್ನು ಯಾಚಿಸಿದೆನು. ಎಲ್ಲೆಲ್ಲೂ ಖ್ಯಾತಿಹೊಂದಬೇಕೆಂಬುದು ನನ್ನ ಮುಖ್ಯೋದ್ದೇಶವಲ್ಲ; ನನ್ನ 'ವಿವಾಹ'ಶಬ್ದದ ಮುಂದಿನ ಪ್ರಶ್ನಾರ್ಥಕ ಚಿಹ್ನವನ್ನು ಅಳಿಸುವು-ದಿತ್ತು. ಪಂಡಿತರು ಲೇಖನಗಳನ್ನು ಬರೆದು ಕೊಟ್ಟರು. ಪತ್ರಿಕೆಗಳಿಗೆ ಕಳುಹಿದೆನು. ಇನಾಮು-ಸನ್ಮಾನಗಳೆಷ್ಟೋ ಬಂದುವು. ಆದರೆ ವಿವಾಹ ಸಮಸ್ಯೆಯು ಅಳಿಯಲಿಲ್ಲ.

ಗಾನವಿಶಾರದರೊಬ್ಬರು ನಮ್ಮ ನೆರೆಮನೆಯನ್ನು ಬಾಡಿಗೆಗೆ ಹಿಡಿದಿದ್ದರು. ಆಗಾಗ ತಮ್ಮ ಮಧುರಧ್ವನಿಯಲ್ಲಿ ಅವರು ಚೆನ್ನಾಗಿ ಹಾಡುತ್ತಿದ್ದರು. ನನಗವರ ಪರಿಚಯವಿರಲಿಲ್ಲ, ಅವರಿಗೆ ನನ್ನ ಗುರುತಿರಲಿಲ್ಲ. ಆದರೆ ನಮ್ಮಿಬ್ಬರಿಗೂ ಗಾನದಲ್ಲಿ ಆಸಕ್ತಿ-ಯಿತ್ತು. ಹೀಗಾಗಿ ಪರಸ್ಪರ ಪರಿಚಯವಾಯಿತು. ಗೆಳೆತನವು ಬೆಳೆಯಿತು. ನಾನವರನ್ನು ವಿವಾಹದ ವಿಷಯವಾಗಿ ಪ್ರಸ್ತಾಪಿಸು-ವುದರಲ್ಲಿದ್ದೆ. ಇದನ್ನು ಬರೆಯಲು ನಾನು ನಾಚುವುದಿಲ್ಲ. ಯಾಕೆಂದರೆ ಜಗತ್ತಿನಲ್ಲಿ ಪ್ರತಿಯೊಬ್ಬರೂ ವಿವಾಹೇಚ್ಛುಗಳೇ, ನಾನೊಬ್ಬಳೇ ಏಕೆ ನಾಚಬೇಕು? ಹಲವರು ತಮ್ಮ ವಿವಾಹೇಚ್ಛೆ-ಯನ್ನು ಬಾಹ್ಯತಃ ವ್ಯಕ್ತಪಡಿಸುವುದಿಲ್ಲ. ಅವರೆಲ್ಲ ಕಪಟಿ-ಗಳೆಂದು ನನ್ನ ಹೇಳಿಕೆ. ಇರಲಿ, ಗಾನವಿಶಾರದರು ವಿವಾಹದ ಬಗ್ಗೆ ತೀರ ಭಿನ್ನಾಭಿಪ್ರಾಯವುಳ್ಳವರು.

"ವಿವಾಹೇಚ್ಛುಗಳಾದ ಸ್ತ್ರೀ-ಪುರುಷರು ಕೆಲಕಾಲ ವಿಹಾರ-ವ್ಯವಹಾರಗಳನ್ನು ಒಟ್ಟಾಗಿ ನಡಿಸಿ, ತತ್‌ಪರಿಣಾಮವಾಗಿ ಪ್ರೇಮಾಂಕುರ ಉದ್ಭವಿಸಿದರೆ ಮಾತ್ರ ವಿವಾಹವಾಗಬೇಕು!" ಎಂದವರಭಿಪ್ರಾಯ. ಇದು ಅಯೋಗ್ಯವೆಂದು ನನ್ನ ಸಿದ್ಧಾಂತ. ವ್ಯಕ್ತಿ-ವ್ಯಕ್ತಿಗಳಲ್ಲಿ ವಿಚಾರಭಿನ್ನತೆಯಿರುವುದು ಸ್ವಾಭಾವಿಕ, ಈ ಬಗ್ಗೆ ನಾನವರನ್ನು ನಿಂದಿಸಲಾರೆ; ಆದರೆ ನನ್ನ ವಿವಾಹದ ಪ್ರಸ್ತಾಪವನ್ನು ಎತ್ತುವ ಗೊಡವೆಗೆ ಮಾತ್ರ ಹೋಗಲಿಲ್ಲ. ಏನಂತ ನನ್ನ 'ವಿವಾಹ'ಶಬ್ದದ ಪ್ರಶ್ನಾರ್ಥಕ ಚಿಹ್ನೆಯು ಹಾಗೆಯೆ ಉಳಿಯಿತು.

ಇಷ್ಟು ದಿನಗಳವರೆಗೆ ನಾನು ನನ್ನ ವಿವಾಹ ಶಬ್ದದ ಮುಂದಿನ ಪ್ರಶ್ನಾರ್ಥಕ ಚಿಹ್ನೆಯೊಂದನ್ನೇ ಅರಿತಿದ್ದೆನು. ಆದರೆ ದಿನ-ಹೋದಂತೆ ನನ್ನಿಂದುಳಿದ ಜಗತ್ತಿನ ಕಡೆಗೆ ದೃಷ್ಟಿ ಹೊರಳಿಸಿ-ದೆನು. ನಮ್ಮ ಊರಲ್ಲಿಯೆ ನನ್ನಂತಹ ಕನ್ಯೆಯರು ನೂರಾರನ್ನು ಮಿಕ್ಕಿದ್ದರು. ಒಂದುಸಲ ನನ್ನ ಅಜ್ಜಿಯ ಊರಿಗೆ ಹೋಗಿದ್ದೆನು; ಅಲ್ಲಿಯೂ ಇದೇ ಹಾಡು. ಈ ಘಟನೆಗಳಿಂದ ನನ್ನ ಬೇಸರಿಕೆಯು ಸ್ವಲ್ಪ ಕಡಿಮೆಯಾಯಿತು. "ಹತ್ತರ ಸಾವು ಮದುವೆಗೆ ಸರಿ"ಯಂತೆ! ನನ್ನೊಬ್ಬಳಿಗೇ ಈ ಅವಸ್ಥೆಯಲ್ಲ, ನನ್ನಂತಹ ಬಹು ದೊಡ್ಡ ಸ್ತ್ರೀಸಾಮ್ರಾಜ್ಯವೇ ಈ ಪ್ರಶ್ನಾರ್ಥ ಚಿಹ್ನೆಯ ಹಿಂಬದಿ-ಗಿದೆ. ಜಗತ್ತಿನಲ್ಲಿ ಅವಿವಾಹಿತರ ಸಮಸ್ಯೆಗಿಂತಲೂ ಅವಿವಾಹಿತೆ-ಯರ ಸಮಸ್ಯೆಯೇ ದೊಡ್ಡದು. ನಿಜವಾಗಿ ಇವು ಬೇರೆ ಬೇರೆ ಸಮಸ್ಯೆಗಳಲ್ಲ. ಒಂದನ್ನು ಬಿಡಿಸಿದೊಡನೆಯೆ ಇನ್ನೊಂದು ತಾನಾಗಿಯೆ ಬಿಡಿಸಬರಬೇಕು. ಆದರೆ ಪರಿಸ್ಥಿತಿಯು ಹಾಗಿಲ್ಲ. ಪುರುಷರಿಗಿಂತಲೂ ಸ್ತ್ರೀಯರ ಸಂಖ್ಯೆಯೇ ಜಗತ್ತಿನಲ್ಲಿ ಹೆಚ್ಚು. ಮೇಲಾಗಿ ಎಷ್ಟು ಅವಿವಾಹಿತರಿರುವರೋ ಅಷ್ಟು ಅವಿವಾಹಿತೆಯ-ರಾದರೂ ಈ ಸಮಸ್ಯೆಗೆ ತಪ್ಪಿರುವುದಿಲ್ಲ.

ಈ ಬಗ್ಗೆ ನಾನು ಎಷ್ಟೋಸಾರೆ ಬಿಕ್ಕಿಬಿಕ್ಕಿ ಅತ್ತಿದ್ದೇನೆ, ಮತ್ತೂ ಅಳಬೇಕೆನ್ನಿಸುವುದು. ಅಶ್ರುಪ್ರವಾಹದಲ್ಲಿ ನನ್ನ—ನನ್ನ ಸೋದರ ಭಗಿನಿಯರ ವಿವಾಹಸಮಸ್ಯೆಯು ತೇಲಿಹೋಗುವವರೆಗೆ ಅಳಬೇಕೆನ್ನಿಸುವುದು. ಅಳುವುದರಿಂದ ಮನಸ್ಸೂ ಹಗುರಾ-ಗುವುದು.

ಕಾಮವಿಕಾರಗಳನ್ನು ಹಳಿದು ಪಾರಾಗುವುದರಲ್ಲೇನೂ ಅರ್ಥವಿಲ್ಲ. ಅದಕ್ಕಧೀನರಾಗದಿದ್ದವರಾರಿಲ್ಲ. ಬರೇ ಒಣ ಆಡಂಬರದಿಂದ ಈ ಸಮಸ್ಯೆಯನ್ನು ದುರ್ಲಕ್ಷ್ಯಿಸಲಿಕ್ಕೆ ಬರ-ಲಾರದು. ಕಾರಣ ಜಗತ್ತು ಅವಿವಾಹಿತೆಯರ ಸಮಸ್ಯೆಯನು ಬಿಡಿಸುವುದರ ಕಡೆಗೆ ತನ್ನ ಲಕ್ಷ್ಯವನ್ನು ಹೊರಳಿಸುವ ಕಾಲ ಬಂದಿದೆ. ಅವಿವಾಹಿತೆಯರ ಸಮಸ್ಯೆಯು ಪರಿಹಾರವಾದಾಗ ನನ್ನ 'ವಿವಾಹ' ಶಬ್ದದ ಮುಂದಿನ ಪ್ರಶ್ನಾರ್ಥಕ ಚಿಹ್ನೆಯು ತನ್ನಷ್ಟಕ್ಕೆ ಮಾಯವಾಗುವುದು!

ಕಾಲಿದಾಸ ಮತ್ತು ಭವಭೂತಿ

ಪ್ರೊ. ಕೆ. ಆರ್. ಮಹಿಷಿ ಎಂ.ಎ. ಧಾರವಾಡ ★ (ಒಂದು ಉಪನ್ಯಾಸ)

ತಾ. ೨೮-೧-೪೩ ನೆಯ ದಿನ, ಮುಂಬಯಿಯ ಆಲ್ ಇಂಡಿಯಾ ರೇಡಿಯೋ ಸ್ಟೇಷನಿನಲ್ಲಿ, ವಿದ್ಯಾರ್ಥಿಗಳಿಗಾಗಿ 'ಬ್ರಾಡ್‌ಕಾಸ್ಟ್' ಮಾಡಿದ ಭಾಷಣವಿದು. ರೇಡಿಯೊ ಅಧಿಕಾರಿಗಳ ಅಪ್ಪಣೆ ಪಡೆದು ಪ್ರಕಟಿಸಲಾಗಿದೆ. —ಸಂ. ಜ.

ಚಿಕ್ಕಮಕ್ಕಳೇ,

ಇಂದು ನಾನು ಕಾಲಿದಾಸಕವಿಯ "**ಶಾಕುಂತಲ**" ನಾಟಕದ ಬಗ್ಗೆ ಹಾಗು **ಭವಭೂತಿ** ಕವಿಯ ಬಗ್ಗೆ ಮಾತನಾಡುವೆನು.

೧

'ಶಾಕುಂತಲ'ವು ಕಾಲಿದಾಸನ ಅಮರ ಕೃತಿ. "ಕಾವ್ಯಗಳಲ್ಲಿ ನಾಟಕ ರಮ್ಯ; ನಾಟಕಗಳಲ್ಲಿ ರಮ್ಯ ಶಾಕುಂತಲ!" ಎಂದು ಹೊಗಳಿಸಿಕೊಂಡ ಸರ್ವಾಂಗಸುಂದರ ಕಲಾಕೃತಿ. ಇದರ ಅದ್ವಿತೀಯ ರಮ್ಯತೆಯ ಮೂಲಕವೆ ಕಾಲಿದಾಸನಿಗೆ ವಿಶ್ವಕವಿಯ ಸ್ಥಾನ-ಮಾನಗಳು ದೊರೆತಿದೆ. ಏಳಂಕದ ಈ ನಾಟಕ ಪ್ರಾರಂಭವಾಗುವುದು ಕಣ್ವಮುನಿಗಳ ಶಾಂತ ತಪೋವನದಲ್ಲಿ; ಮುಗಿಯುವುದು ಮರೀಚಿಯ ಪುಣ್ಯಾಶ್ರಮದಲ್ಲಿ. ಇದರ ನಾಯಿಕೆ ಅಪ್ಸರೆಯ ಮಗಳು; ಲತೆಗಳೊಡನೆ ಲತೆಯಾಗಿ ನಿಸರ್ಗದ ಮಡಲಿನಲ್ಲಿ ಬೆಳೆದವಳು. ಗಿಡಗಳಿಗೆ ನೀರೆರಚುವುದು, ಬಳ್ಳಿಗಳನ್ನು ಅಕ್ಕರತೆಯಿಂದ ತಂಗಿಯರಂತೆ ಬೆಳೆಯಿಸಿ—ಚೆಂದ ಚೆಂದದ ಹೆಸರಿಟ್ಟು— ಅನುರೂಪ ಗಿಡಗಳಿಗೆ ಹಬ್ಬಿಸಿ, ಅವು ಹೂಬಿಡಲು ಆನಂದಿಸುವುದು; ತನ್ನಂತೆಯೆ ತಾಯನ್ನು ಕಳೆದುಕೊಂಡ ಜಿಂಕೆಯ ಮರಿಯನ್ನು ಜೋಪಾನ ಮಾಡುವುದು— ಇವೇ ಆ ರಮಣಿಯ ರಮಣೀಯ ಕೆಲಸಗಳು. ಇವಳು ಪ್ರೇಮಪತ್ರ ಬರೆಯುವುದು ಕಮಲಪತ್ರದ ಮೇಲೆ. ಇವಳ ಮಗ ಭರತಖಂಡದ ಪ್ರಥಮ ಚಕ್ರವರ್ತಿ. ಆತನ ಬಾಲ್ಯದ ಆಟ ಸಿಂಹದ ಮರಿಯನ್ನು ಗುದ್ದಿ ಬಾಯನ್ನು ತೆರೆಯಿಸಿ ಅದರ ಹಲ್ಲುಗಳನ್ನು ಎಣಿಸುವುದು.

ಈ ಸುಂದರಿ ಮದುವೆಯಾಗುವುದು ಗಾಂಧರ್ವ ವಿಧಿಯಿಂದ. ವರಿಸುವ ಭಾಗ್ಯಶಾಲಿ ಇಂದ್ರನಿಗೆ ಸಂಕಟಕಾಲದಲ್ಲಿ ಸಹಾಯ ಮಾಡುವವ, ಬಿಲ್ಲಿನ ಟಂಕಾರದಿಂದಲೇ ರಾಕ್ಷಸರನ್ನು ಓಡಿಸುವ ಧೀರಲಲಿತ ದುಷ್ಯಂತ. ಈಕೆಯನ್ನು ದುಷ್ಯಂತ ಮರೆಯುವಂತೆ ಮಾಡಿ ಈಕೆಯ ಪ್ರೇಮವನ್ನು ದುಃಖದ ಸಾಣೆಗೆ ಹಚ್ಚುವುದು ದೂರ್ವಾಸಋಷಿಯ ಶಾಪ.

ಶಾಕುಂತಲ ನಾಟಕ ಶಕುಂತಲೆಯ ಕಥೆ. ನಾವು ಮೊದಲು ಕಂಡಾಗ ಶಕುಂತಲೆ ಏನೂ ಅರಿಯದ ಮುಗ್ಧೆ; ನೂತನ ಯೌವನದ ಸೌರಭ ಸೂಸುವ ಅನಾಘ್ರಾತ ಪುಷ್ಪ. ಕಡೆಯ ಅಂಕದಲ್ಲಿ ಕಂಡಾಗ ಪ್ರೇಮ-ದುಃಖ ಕಂಡು ಉಂಡ ಪ್ರೌಢೆ; ನಲ್ಲನು ಬಿಸುಟಿದ ಬಾಡಿದ ಹೂ. ಪ್ರೇಮ-ದುಃಖಮೂಲಕವಾದ ಅವಳ ಸ್ವಭಾವ ವಿಕಸನ-ಪರಿವರ್ತನಗಳೇ ಈ ನಾಟಕದ ವಸ್ತು.

ಮೊದಲಿನ ಮೂರು ಅಂಕಗಳಲ್ಲಿ ಗಾಂಧರ್ವ ವಿವಾಹದಲ್ಲಿ ಪರಿಣಮಿಸುವ ಅವಳ ಪ್ರೇಮದ ರಮ್ಯ ಕಥೆ; ೪ನೆಯ ಅಂಕದಲ್ಲಿ ಗಂಡನ ಮನೆಗೆ ಹೋಗುವ ತವಕವಿದ್ದರೂ ಸಾಕುತಂದೆಯನ್ನೂ ಸಾಕಿದ ತರುಲತೆ-ಜಿಂಕೆಗಳನ್ನೂ ಅಕ್ಕರತೆಯ ಗೆಳತಿಯರನ್ನೂ ಬಿಟ್ಟು, ಗಂಡನ ಮನೆಗೆ ಹೋಗಲಾರದೆ ಹೋಗುವ ಅವಳ ಕರುಣಕಥೆ; ೫ನೆಯ ಅಂಕದಲ್ಲಿ ಶಕುಂತಲೆಯನ್ನು ದೂರ್ವಾಸ ಶಾಪಗ್ರಸ್ತ ದುಷ್ಯಂತ ನಿರಾಕರಿಸಿದ ದಾರುಣ ಕಥೆ; ೬ನೆಯ ಅಂಕದಲ್ಲಿ ಗುರುತಿನ ಉಂಗುರ ಕಂಡೊಡನೆ ಶಾಪ ನಿವೃತ್ತಿಯಾಗಿ ಎಲ್ಲವೂ ನೆನಪಾಗಲು, ಶಕುಂತಲೆಗಾಗಿ ದುಷ್ಯಂತನ ಪಶ್ಚಾತ್ತಾಪ-ಪರಿತಾಪ. ೭ನೆಯ ಅಂಕದಲ್ಲಿ ಪತ್ತಾರು ಗುರುತುಗಳಿಂದ ಆಕೆಯ ಮಗನಾದ ಭರತನು ತನ್ನ ಮಗನೇ ಎಂದು ದುಷ್ಯಂತ ಕಂಡುಹಿಡಿಯುವುದು; ಮರೀಚಿಯ ಆಶ್ರಮದಲ್ಲಿ ದುಷ್ಯಂತ-ಶಕುಂತಲೆಯರ ಪುನರ್ಮಿಲನ.

ನೀವೆಲ್ಲರೂ ಓದಬೇಕಾದ ಈ ನಾಟಕದ ಒಂದೇ ಒಂದು ದೃಶ್ಯವನ್ನು ರುಚಿಗಾಗಿ ಎತ್ತಿ ತೋರಿಸುತ್ತೇನೆ. ಈ ಅತ್ಯುತ್ತಮ ದೃಶ್ಯ ನಾಲ್ಕನೆಯ ಅಂಕದಲ್ಲಿಯದು. "ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ. ತತ್ರಾಪಿಚ ಚತುರ್ಥೋಂಕೋ ತತ್ರ ಶ್ಲೋಕ ಚತುಷ್ಟಯಃ" ಎಂದು ನಮ್ಮವರು ಕೊಂಡಾಡುವ ದೃಶ್ಯವಿದು :

ಶಕುಂತಲೆ ಇಂದು ಅತ್ತೆಯ ಮನೆಗೆ ಹೋಗುವಳೆಂಬ ವಿಚಾರದಿಂದ ಕಣ್ವರಿಗೆ ತುಂಬ ದುಃಖವಾಗುತ್ತದೆ. "ಶಕುಂತಲೆ ಇಂದು ಹೋಗುವಳಲ್ಲಾ! ಈ ವಿಚಾರದಿಂದ ನನ್ನ ಹೃದಯ ದುಃಖದಿಂದ ತುಂಬಿದೆ, ಕಂಠ ಸದ್ಗದಿತವಾಗಿದೆ, ದೃಷ್ಟಿ ಜಡವಾಗಿದೆ! ಚಿಂತೆಯಿಂದ ಅರಣ್ಯವಾಸಿಯಾದ ನಾನು ಸಾಕಿದ ಮಗಳ ಪ್ರೇಮದಿಂದ ಇಷ್ಟು ವ್ಯಾಕುಲನಾದ ಮೇಲೆ, ಹೆತ್ತ ಮಗಳನ್ನು ಅತ್ತೆಯ ಮನೆಗೆ ಮೊದಲು ಕಳುಹುವಾಗ ಸಂಸಾರಿ ಜನರ ಗತಿ ಏನಾಗುತ್ತಿರಬಹುದು!" ಎಂದು ಯೋಚಿಸಿ, ತಪೋವನದ ತರುಗಳಿಗೆ ಹೇಳುತ್ತಾರೆ : "ನಿಮಗೆ ನೀರುಣಿಸದೆ ನೀರು ಕುಡಿಯುತ್ತಿದ್ದಿಲ್ಲ ಇವಳು. ಆಭರಣಗಳ ಮೇಲೆ ಆಶೆ ಇದ್ದರೂ

ನಿಮ್ಮ ಪಲ್ಲವಗಳನ್ನು ಹರಿಯುತ್ತಿದ್ದಿಲ್ಲ. ನೀವು ಹೂ ಬಿಟ್ಟದ್ದನ್ನು ಕಂಡರೆ ಈಕೆಗೆ ಎಷ್ಟು ಆನಂದ! ಇಂತಹ ಶಕುಂತಲೆ ನಿಮ್ಮನ್ನು ಬಿಟ್ಟು ಹೋಗುತ್ತಿದ್ದಾಳೆ. ಅಪ್ಪಣೆ ಕೊಡಿರಿ!" ಶಕುಂತಲೆ ಹೊರಟುದನ್ನು ನೋಡಿ ಚಿಗುರಿ ಹುಲ್ಲನ್ನು ತಿನ್ನುವುದಿಲ್ಲ; ನವಿಲು ಕುಣಿತ ನಿಲ್ಲಿಸುತ್ತದೆ; ಅವಳು ಚಿಕ್ಕಂದಿನಿಂದ ಸಾಕಿದ ಜಿಗರಿ ಬೆನ್ನೇ ಹತ್ತುತ್ತದೆ. ಸಖಿಯರು ಕಣ್ಣುತುಂಬ ನೀರು ತರುತ್ತಾರೆ. ದುಃಖವನ್ನು ಹತ್ತಿಕ್ಕಿ, ಬಿಗಿದ ಕಂಠದಿಂದ ಕಣ್ವರು ಶಕುಂತಲೆಗೆ, ಅತ್ತೆಯ ಮನೆಯಲ್ಲಿ ಹೇಗೆ ನಡೆಯಬೇಕೆಂಬ ಬಗ್ಗೆ ದಿವ್ಯವಾದ ಉಪದೇಶ ಮಾಡುತ್ತಾರೆ. "ಗುರುತಿನ ಉಂಗುರ ಜೋಕೆ!" ಎಂದು ಪ್ರಿಯಂವದೆ ಎಚ್ಚರಿಕೆ ಕೊಡುತ್ತಾಳೆ. ಶಕುಂತಲೆಯು ಹೋಗಲಾರದೆ ಹೋಗುತ್ತಾಳೆ. ಮಗಳನ್ನು ಕಳುಹಿದ ಕಣ್ವರು ಲೋಕದಲ್ಲಿಯ ಸಾವಿರಾರು ತಂದೆಯರಂತೆ "ಹೆಣ್ಣು ಹೆರವರ ಸೊತ್ತು!" ಎಂದು ಸಮಾಧಾನ ಹಚ್ಚಿಕೊಳ್ಳುತ್ತಾರೆ. ಇಂತಹ ದೃಶ್ಯ ಓದಿದಷ್ಟೂ ಇನ್ನೂ ಓದಬೇಕು ಎನಿಸುತ್ತದೆ. ವಯಸ್ಸಾದ ಹಾಗೆ—ಅನುಭವ ಆಳವಾದ ಹಾಗೆ ಇದರ ಸ್ವಾರಸ್ಯ ಹೆಚ್ಚು ಹೆಚ್ಚು ತಿಳಿಯತೊಡಗುತ್ತದೆ.

೨

ಭವಭೂತಿ ಕಾನ್ಯಕುಬ್ಜದ **ಯಶೋವರ್ಮನ** ಆಸ್ಥಾನ ಕವಿ. ಏಳನೆಯ ಶತಮಾನದ ಕೊನೆಯಲ್ಲಿ ಬಾಳಿದವ. ವಿದರ್ಭ ದೇಶದಲ್ಲಿ, ಪದ್ಮಪುರವೆಂಬ ಗ್ರಾಮದಲ್ಲಿ, 'ಉದುಂಬರ' ಎಂಬ ಅಡ್ಡಹೆಸರಿನ ಬ್ರಾಹ್ಮಣವಂಶದಲ್ಲಿ ಭವಭೂತಿ ಹುಟ್ಟಿದ. ತಾಯಿ ಜತುಕರ್ಣಿ; ತಂದೆ ನೀಲಕಂಠ. ಈತನಿಗೆ 'ಶ್ರೀಕಂಠ' ಎಂಬ ಬಿರುದು ಇತ್ತು. ಜ್ಞಾನನಿಧಿಯ ಶಿಷ್ಯನಾದ ಭವಭೂತಿ ಪಂಡಿತ. ವ್ಯಾಕರಣ-ನ್ಯಾಯ-ಮೀಮಾಂಸಾ ವಿಶಾರದ.

ಈತನ ಉಪಲಬ್ಧ ಗ್ರಂಥಗಳು ಮೂರು. ಅವೆಲ್ಲ ನಾಟಕಗಳೆ: **ಮಹಾವೀರಚರಿತ, ಮಾಲತೀಮಾಧವ, ಉತ್ತರರಾಮಚರಿತ**— ಇವು ಆತನ ಮೂರು ನಾಟಕಗಳು. ಮಹಾವೀರಚರಿತದಲ್ಲಿ ವೀರರಸ; ಮಾಲತೀಮಾಧವದಲ್ಲಿ ಶೃಂಗಾರರಸ; ಉತ್ತರರಾಮಚರಿತದಲ್ಲಿ ಕರುಣರಸ.— ಹೀಗೆ ಮೂರು ರಸಗಳನ್ನು ಚಿತ್ರಿಸಿದ್ದರೂ, ಕರುಣರಸವೇ ಭವಭೂತಿಯ ವಿಶಿಷ್ಟ ರಸ. ವೀರ-ಶೃಂಗಾರಗಳಂತೆ ಕರುಣವಾದರೂ ನಾಟಕದ ಪ್ರಧಾನ ರಸವಾಗಬಹುದು— ಎಂದು ತೋರಿಸಿಕೊಟ್ಟವನೆಂದರೆ ಭವಭೂತಿಯೆ. ಸಂಸ್ಕೃತ ನಾಟಕಗಳಲ್ಲಿ "ಟ್ರ್ಯಾಜಡಿ" ಗಳು ಇಲ್ಲವೇ ಇಲ್ಲ. ಅಂತೆಯೇ ಅದಕ್ಕೆ ಶಬ್ದವೂ ಇಲ್ಲ. ಭವಭೂತಿಯ ಉತ್ತರರಾಮಚರಿತ ಸುಖಾಂತವಾದರೂ ಷೇಕ್ಸ್‌ಪಿಯರನ ಇಲ್ಲವೆ ಗ್ರೀಕ್ ನಾಟಕಕಾರರ ಟ್ರ್ಯಾಜಡಿಗಳ ಮಟ್ಟಕ್ಕೆ ಬರುವಂಥ ಕರುಣರಸಪ್ರಧಾನ ನಾಟಕ.

ರಾಮಾಯಣದ ಕತೆಯನ್ನು ನೀವು ಕೇಳಿರುವಿರಲ್ಲವೇ? ಶ್ರೀರಾಮನ ಅದ್ಭುತ ಚರಿತೆಯು ಮಹಾವೀರ ಚರಿತದ ವಸ್ತು. ಬಾಲ್ಯ ಮೊದಲುಮಾಡಿ, ರಾಮನು ಲಂಕೆಯಿಂದ ಅಯೋಧ್ಯೆಗೆ ಮರಳಿ ಬರುವ ವರೆಗಿನ ಸಂಪೂರ್ಣ ರಾಮಾಯಣ ಇಲ್ಲಿ ಇದೆ. ಇಷ್ಟು ದೊಡ್ಡ ಕತೆಯನ್ನು ಇಷ್ಟು ಕಿರಿದರಲ್ಲಿ ಸಂಗ್ರಹಿಸಿರುವುದೇ ಒಂದು ಕೌಶಲ. ಮೂಲದಲ್ಲಿಯ ರಾಮನ ಅದ್ಭುತ ಕೃತ್ಯಗಳು ಬಿಡಿಬಿಡಿಯಾಗಿವೆ. ಒಂದಕ್ಕೊಂದು ಹೊಂದಿಕೊಂಡಿಲ್ಲ. ಭವಭೂತಿ ಅವುಗಳಲ್ಲಿ ಏಕಸೂತ್ರತೆ, ಕಾರ್ಯಕಾರಣ ಸಂಬಂಧ ಅಂಗಾಂಗೀ ಭಾವ ಇವುಗಳನ್ನು ತರಲು ಯತ್ನಿಸಿದ್ದಾನೆ. ಕೈಕೇಯಿ-ಸೀತೆಯರ ಪಾತ್ರಗಳನ್ನು ಉದಾತ್ತಗೊಳಿಸಿದ್ದಾನೆ. ಇದಕ್ಕಾಗಿ ಕವಿ ಅಲ್ಲಲ್ಲಿ ತನಗೆ ಬೇಕಾದ ಬದಲನ್ನು ಮಾಡಿಕೊಂಡಿದ್ದಾನೆ. ಈ ನಾಟಕ ಆತನ ಪ್ರಥಮಪ್ರಯತ್ನ. ಅಸ್ಟು ಸರಸವಾಗಿಲ್ಲ.

ಮಾಲತೀಮಾಧವ ಒಂದು ಅದ್ಭುತ ರಮ್ಯ "ಪ್ರಕರಣ". ಇಂತಹ ನಾಟಕಕ್ಕೆ ಇಂಗ್ಲಿಷಿನಲ್ಲಿ Romantic Comedy ಎನ್ನುತ್ತಾರೆ. "It is an Indian **Romeo & Juliet** with a happy ending." ಎಂದು ಮೆಕ್‌ಡೊನೆಲ್ಲರ ಅಭಿಪ್ರಾಯ. **ಮಾಲತೀಮಾಧವ**ದ ಕಥೆ ಕಾವ್ಯಮಯ ಪ್ರೇಮ-ಕಥೆ; ಪ್ರತಿಕೂಲ ನರರು, ಪ್ರತಿಕೂಲ ವಿಧಿ ತಂದೊಡ್ಡಿದ ಎಡರುಗಳನ್ನೆಲ್ಲಾ ತೊಡೆದು ಹಾಕಿ, ಪ್ರಣಯಿಗಳ ಆತ್ಮ-ದೇಹಗಳನ್ನು ಒಂದುಗೂಡಿಸಿ ವಿಜೃಂಭಿಸುವ ಪ್ರೇಮದ ಲೀಲಾವಿಲಾಸ. ಇಲ್ಲಿಯ ನಾಯಕರು ಪ್ರೀತಿ ಗಳಿಸುವ ರೀತಿಯೇ ಅದ್ಭುತ. ಉಪನಾಯಕನಾದ ಮಕರಂದ, ಮದಯಂತಿಕೆಯನ್ನು ಹುಲಿಯ ಬಾಯಿಂದ ಉಳಿಸುತ್ತಾನೆ; ಅವಳ ಪ್ರೇಮ ಗಳಿಸುತ್ತಾನೆ. ಹೆಣ್ಣು ವೇಷ ಧರಿಸಿ, ಅವಳ ಅಣ್ಣನನ್ನು ವರಿಸಿ, ಮದಯಂತಿಕೆಯ ಮನೆ ಸೇರುತ್ತಾನೆ; ಮನೆಯಿಂದ ಅವಳನ್ನು ಓಡಿಸಿಕೊಂಡು ಹೋಗುತ್ತಾನೆ. ಪ್ರೇಮಕ್ಕಾಗಿ ಮಾಧವ ಸ್ಮಶಾನದಲ್ಲಿ ತಿರುಗುತ್ತಾನೆ; ನರಮಾಂಸ ಮಾರುತ್ತಾನೆ. **ಅಘೋರಘಂಟ**ನೆಂಬ ಕಾಪಾಲಿಕನು ಮಾಲತಿಯನ್ನು ನರಬಲಿಕೊಡುವಾಗ, ಅಘೋರಘಂಟನನ್ನು ಕೊಂದು, ಮಾಲತಿಯ ಪ್ರಾಣ ಉಳಿಸಿ, ಪ್ರಾಣೇಶ್ವರನಾಗುತ್ತಾನೆ. ಇಲ್ಲಿಯ ಪ್ರೇಮನಾಟಕ, ಮುಂದೆ ಸಾಗುವುದು ಕಪಟ ನಾಟಕದಿಂದ. ಕಾಮಂದಕಿ ಆ ಕಪಟನಾಟಕದ ಸೂತ್ರಧಾರಿಣಿ. ಮಾಲತಿಯ ತಂದೆ, ಮಾಧವನ ತಂದೆ ಮಂತ್ರಿಗಳು; ಮಿತ್ರರು; ಕೂಡಿ ಕಲಿತವರು. ಕೂಡಿ ಕಲಿಯುವಾಗ ಮಾಲತಿಯ ತಂದೆ "ನನಗೆ ಮಗಳು ಹುಟ್ಟಿದರೆ ನಿನ್ನ ಮಗನಿಗೆ ಕೊಡುವೆ" ಎಂದು, ಮಾಧವನ ತಂದೆಗೆ ಕಾಮಂದಕನ ಎದುರು ವಚನ ಕೊಟ್ಟಿದ್ದ. ಆ ವಚನ ಪಾಲಿಸಲು ಆತನು ಸಿದ್ಧನಿದ್ದರೂ ಅರಸನು ತನ್ನ ನರ್ಮ ಸಚಿವನಾದ ನಂದನನಿಗೆ ಮಾಲತಿಯನ್ನು ಕೊಡಬೇಕು ಎಂದು ಆಗ್ರಹ ಹಿಡಿದದ್ದರಿಂದ, ಕೆಲಸ ಕಠಿನವಾಗಿತ್ತು. ಇತ್ತ ಮಾಧವನ ತಂದೆ ಮಾಧವನನ್ನು ಕಾಮಂದಕಿಯ ಕಡೆಗೆ ಕಳಿಸುತ್ತಾರೆ. ಹೇಗಾದರೂ ಮಾಡಿ, ಮಾಲತೀ-ನಂದನರ ಮದುವೆ ಮುರಿದು, ಮಾಲತೀ-ಮಾಧವರ ಮದುವೆ ಮಾಡಿಸಬೇಕು. ಎಂದು ಕಾಮಂದಕಿಗೆ ಬಿನ್ನವಿಸುತ್ತಾರೆ. ಕಾಮಂದಕಿ ಕಪಟನಾಟಕ ಹೂಡುತ್ತಾಳೆ. ಮಾಲತೀ-ಮಾಧವರನ್ನು ಒಬ್ಬರ ಕಣ್ಣಿಗೊಬ್ಬರು ಬೀಳುವಂತೆ ಮಾಡಿ, ಪರಸ್ಪರ

ಪ್ರೇಮ ಹುಟ್ಟಿಸುತ್ತಾಳೆ. ನಂದನನ ಬಗ್ಗೆ ದ್ವೇಷವನ್ನೂ ಮಾಧವನ ಬಗ್ಗೆ ಪ್ರೇಮವನ್ನೂ ಮದುವೆಯ ವಿಷಯದಲ್ಲಿ ತಂದೆಯ ಆಜ್ಞೆಗೆ ಅನಾದರವನ್ನೂ ಮಾಲತಿಯ ಮನದಲ್ಲಿ ಮೂಡಿಸುತ್ತಾಳೆ. ಮಾಲತೀ-ನಂದನರ ಮದುವೆಯ ದಿವಸ ಮಕರಂದನಿಗೆ ಮಾಲತಿಯ ವೇಷಹಾಕಿ, ಮಕರಂದ-ನಂದನರ ಮದುವೆಯನ್ನೇ ಮಾಡಿಸಿ ಬಿಡುತ್ತಾಳೆ. ಹೀಗೆ ಕಪಟಜಾಲದಿಂದ ಮಾಲತೀ-ಮಾಧವರ ಪ್ರೇಮನಾಟಕವನ್ನು ಸುಖಾಂತವಾಗಿ ಮಾಡುತ್ತಾಳೆ. ಅಂತೂ, ಇಲ್ಲಿ ಮೂರು ಕಥೆಗಳಿವೆ: ಮಾಧವ— ಮಾಲತಿಯರ ಪ್ರೇಮಕಥೆ; ಮಕರಂದ-ಮದಯಂತಿಕೆಯರ ಇನ್ನೊಂದು ಪ್ರೇಮಕಥೆ; ನಂದನ-ಮಕರಂದರ ವಿವಾಹದ ಹಾಸ್ಯಕಥೆ. ಈ ಮೂರು ಕಥೆಗಳನ್ನು ಒಂದಾಗಿ ಹೊಂದಿಸಿ ಹಣೆದಿರುವುದರಲ್ಲಿ ಜಾಣ್ಮೆಯಿದೆ; ಸಂಭಾಷಣೆಗಳಲ್ಲಿ ಚತುರತೆ ಇದೆ; ಘಟನೆಗಳಲ್ಲಿ ವೈಚಿತ್ರ್ಯವಿದೆ; ರಸಗಳಲ್ಲಿ ವೈವಿಧ್ಯವಿದೆ. ಇಲ್ಲಿ ಶೃಂಗಾರ ಕರುಣ ರೌದ್ರ ಭೀಭತ್ಸ ರಸಗಳಿವೆ. ಹುಲಿಗಳು, ಪ್ರೇಮಿಗಳು, ಸ್ಮಶಾನ, ಕುಸುಮಾಕರೋದ್ಯಾನ, ಕಾಪಾಲಿಕರು ಎಲ್ಲವೂ ಇಲ್ಲಿ ಇವೆ. ಅಂತೂ ನೀವು ಈ ನಾಟಕ ಓದಬೇಕು; ಓದಿ ನಲಿಯಬೇಕು!

ಉತ್ತರ ರಾಮಚರಿತ ಭವಭೂತಿಯ ಕಡೆಯ ನಾಟಕ, ಪರಿಣತಪ್ರಜ್ಞನಾದ ಕವಿಯ ಸರ್ವೋತ್ಕೃಷ್ಟ ನಾಟಕ. ಇದರ ಬಲದಿಂದಲೆ "ಈತ ಕಾಲಿದಾಸನಷ್ಟು—ಕಾಲಿದಾಸನಿಗಿಂತ—ದೊಡ್ಡ ನಾಟಕಕಾರ" ಎಂಬ ಕೀರ್ತಿಬಂದಿದೆ ಇವನಿಗೆ. ಆದರೆ ಅದರ ಯೋಗ್ಯತೆಗೆ ತಕ್ಕ ವಿಶ್ವಪ್ರಖ್ಯಾತಿ ಇನ್ನೂ ದೊರೆತಿಲ್ಲ.

ಇದರ ಕಥೆ ಮಹಾವೀರದ ಮುಂದಿನ ಕಥೆ; ಪಟ್ಟಾಭಿಷೇಕದ ನಂತರದ ಸೀತಾಪರಿತ್ಯಾಗದಿಂದ ರಾಮ-ಸೀತಾ ಪುನರ್ಮಿಲನದ ವರೆಗಿನ ಕತೆ. ದುಷ್ಯಂತನಂತೆ, ರಾಮ ಗರ್ಭಿಣಿಯಾದ ಪತ್ನಿಯನ್ನು ತ್ಯಾಗಮಾಡುತ್ತಾನೆ. ದುಷ್ಯಂತನಂತೆ ವಿರಹದುಃಖ ಪರಿತಾಪ ಅನುಭವಿಸಿ, ಸತಿಯನ್ನೂ ಮಕ್ಕಳನ್ನೂ ಮರಳಿ ಪಡೆಯುತ್ತಾನೆ. ಆದರೆ ಆ ಕಥೆಗೆ ಈ ಕಥೆಗೆ ಎಷ್ಟು ಅಂತರ? ದುಷ್ಯಂತ ಶಕುಂತಲೆಯನ್ನು ತ್ಯಜಿಸುವುದು, ಶಾಪಗ್ರಸ್ತನಾದಾಗ; ತಾನೇನು ಮಾಡುತ್ತೇನೆ ಎಂಬುದು ತಿಳಿಯದಾಗ; ಇವಳು ತನ್ನ ಪತ್ನಿಯೆಂದು ಕೂಡ ಆತನಿಗೆ ನೆನಪಿರುವುದಿಲ್ಲ. ಶಕುಂತಲೆ ಬೇಟೆಗೆ ಹೋದಾಗ ನಾಲ್ಕು ದಿನ ಸಿಕ್ಕ ಜೇಟಿ. ಸೀತೆಯ ಮಾತೇ ಬೇರೆ. ಸೀತೆ ಹದಿನಾಲ್ಕು ವರುಷ ರಾಮನೊಡನೆ ವನವಾಸ ಉಪವಾಸ ಸಹಿಸಿದ ಸಹಧರ್ಮಚಾರಿಣಿ. ರಾಮನ ಗೃಹಲಕ್ಷ್ಮಿ, ಹೃದಯದ ರಾಣಿ. ಅವಳ ಸಚ್ಚಾರಿತ್ರ್ಯದ ಬಗ್ಗೆ ಆತನಿಗೆ ಎಳ್ಳಷ್ಟೂ ಸಂಶಯವಿಲ್ಲ. ಅವಳ ವಿರಹ ಅವನಿಗೆ ದುಃಸಹ. ಇಂತಹ ಪತ್ನಿ ತುಂಬು ಗರ್ಭಿಣಿ ಇದ್ದಾಗ, ವಿಶ್ವಾಸದಿಂದ ಆತನ ಎದೆಯಮೇಲೆ ತಲೆ ಇಟ್ಟು ಮಲಗಿದಾಗ, ವಜ್ರಾಘಾತದಂತೆ ಗೂಢಚಾರನಾದ ದುರ್ಮುಖನ ಮುಖದಿಂದ ಸೀತೆಯ ಬಗ್ಗೆ ಆಡುವ ಜನರ ಕೆಟ್ಟ ಮಾತು ರಾಮನ ಕಿವಿಗೆ ಬೀಳುವುದು. ರಾಮ ಧರ್ಮಸಂಕಟಕ್ಕೆ ಈಡಾಗುತ್ತಾನೆ. ಪತಿಧರ್ಮ-ರಾಜಧರ್ಮದ ಇರುಕಿನಲ್ಲಿ ಸಿಕ್ಕುತ್ತಾನೆ. ತಿಳಿದೂ ತಿಳಿದೂ ತನ್ನ ಹೃದಯದ ರಾಣಿಯನ್ನು ಲೋಕಾರಾಧನೆಗಾಗಿ ತ್ಯಜಿಸುತ್ತಾನೆ. ತನ್ನ ಸುಖದ ಹೋಳಿಯನ್ನು ತಾನೇ ಮಾಡುತ್ತಾನೆ. ಆಗ ಮನೆಯಲ್ಲಿ ಗುರು-ಹಿರಿಯರು ಇರಲಿಲ್ಲ. ರಾಮ ಅದೇ ಪಟ್ಟಕ್ಕೆ ಬಂದವ. ಲೋಕಾರಾಧನೆಗಾಗಿ ರಾಮನನ್ನೂ ಪ್ರಾಣವನ್ನೂ ಬಿಟ್ಟ ದಶರಥನ ಪುತ್ರ. ಇಂತಹನು ವಿಷದಂತೆ ಹರಡಿದ ಅಪವಾದವನ್ನು ಅಲಕ್ಷ್ಯಮಾಡುವುದು ಹೇಗೆ? ಆದರೆ ಸೀತೆಯನ್ನು ಬಿಡುವುದು ಹೇಗೆ? ಹೀಗೆ ರಾಜಧರ್ಮ-ಪತಿಧರ್ಮಗಳ ವಿರೋಧದಿಂದ ಜರ್ಜರಿತನಾಗಿ, ಲೋಕಾರಾಧನೆ ವ್ರತವೆಂದು ತಿಳಿದು, ಅದಕ್ಕಾಗಿ ಸೀತೆಯನ್ನೂ ತನ್ನ ಸರ್ವಸ್ವವನ್ನೂ, ತಿಳಿದೂ ತಿಳಿದೂ ಆಹುತಿಮಾಡಿದ ಉದಾತ್ತ ಕರುಣಾಜನಕ ನಾಯಕ ರಾಮ.

ಪುನರ್ಮಿಲನದ ಮಾತೂ ಹೀಗೆಯೆ: ಶಕುಂತಲೆ ದುಷ್ಯಂತ ಸೊರಗಿದ್ದುದನ್ನು ನೋಡುತ್ತಾಳೆ. ಅವನ ಪರಿತಾಪದ ಬಗ್ಗೆ ಕೇಳಿದ್ದಾಳೆ. ಅವನು ಅವಳ ಕಾಲ್ಗೆರಗಿ ಕ್ಷಮೆ ಬೇಡುತ್ತಾನೆ. ಅವಳು ಕ್ಷಮಿಸಿಯೆ ಬಿಡುತ್ತಾಳೆ. ಷೇಕ್ಸ್‌ಪೀಯರನ Winter's Tale ನಲ್ಲಿಯೂ ಹೀಗೆಯೆ ಇದೆ; ಆದರೆ ಗಂಡ ನಿಷ್ಕಾರಣವಾಗಿ ಹೆಂಡತಿಯನ್ನು ಬಿಸಾಟಿ ಕೇವಲ ತಪ್ಪಾಯಿತೆಂದು ಗಲ್ಲ ಗಲ್ಲಬಡಿದುಕೊಂಡರೆ ನಿಜವಾದ ಪುನರ್ಮಿಲನವಾದೀತೇ? ಪುನರ್ಮಿಲನ ನಿಜವಾದ ಪುನರ್ಮಿಲನವಾಗಬೇಕಾದರೆ, ಇಬ್ಬರ ಹೃದಯಗಳೂ ಪರಿಶುದ್ಧವಾಗಬೇಕು; ಹೃದಯಗಳ ಪುನರ್ಮಿಲನವಾಗಬೇಕು. ಹೃದಯದಲ್ಲಿಯ ಸಿಟ್ಟು, ಸಂಶಯ, ತಪ್ಪು ತಿಳಿವಳಿಕೆ ಮಾಯವಾಗಬೇಕು. ಭವಭೂತಿ ಈ ಹೃದಯ ಸಂಮಿಲನವನ್ನು ಮೂರನೆಯ ಅಂಕದಲ್ಲಿ ಸರಸವಾಗಿ ನಿರೂಪಿಸಿದ್ದಾನೆ. ಈ ವಿಷಯದಲ್ಲಿ ಕಾಲಿದಾಸನಿಗಿಂತ—ಹೆಚ್ಚೇನು ಷೇಕ್ಸ್‌ಪಿಯರ್‌ಗಿಂತ—ಭವಭೂತಿಯ ಕೈ ಮೇಲು.

ಭವಭೂತಿಯ ಸಂವಿಧಾನಕ ಚಾತುರ್ಯ ಹೆಚ್ಚಿನದು. ಉತ್ತರ ರಾಮಚರಿತದ ಒಂದನೆಯ, ಮೂರನೆಯ ಅಂಕಗಳು ಶಾಕುಂತಲದ ನಾಲ್ಕನೆಯ ಅಂಕದಂತೆ ವಿಶ್ವನಾಟ್ಯ ಸಾಹಿತ್ಯದ ಉತ್ತಮ ಅಂಕಗಳಲ್ಲಿ ಗಣಿಸಲು ಯೋಗ್ಯವಾಗಿವೆ.

ಭವಭೂತಿ-ಕಾಲಿದಾಸರು ಸಂಸ್ಕೃತ ನಾಟಕದ ಚೂಡಾಮಣಿಗಳು. ಭವಭೂತಿ ಪಂಡಿತ ಕವಿ; ಕಾಲಿದಾಸ ವರಕವಿ. ಭವಭೂತಿ ಕಾಲಿದಾಸನಷ್ಟು ದೊಡ್ಡ ನಾಟಕಕಾರ; ಆದರೆ ಅಷ್ಟು ದೊಡ್ಡ ಕವಿಯಲ್ಲ. ಕಾಲಿದಾಸ ವಿನಯಶೀಲ; ಭವಭೂತಿಗೆ ಅಪಾರ ಆತ್ಮವಿಶ್ವಾಸ. ಕಾಲಿದಾಸ ಬಣ್ಣಿಸುವುದು ಸೌಮ್ಯವಾದ ಪ್ರಕೃತಿಸೌಂದರ್ಯ; ಭವಭೂತಿ ಬಣ್ಣಿಸುವುದು ನಿಸರ್ಗದ ಕಠೋರ—ಗಂಭೀರ ಸ್ವರೂಪ. ಕಾಲಿದಾಸ ಸೂಚಿಸುವುದನ್ನು ಭವಭೂತಿ ಉಚ್ಚಿ, ಬಿಚ್ಚಿ, ಹೇಳುತ್ತಾನೆ. ಕಾಲಿದಾಸ ಶೃಂಗಾರದ ಕವಿ; ಭವಭೂತಿ ಕರುಣ ರಸದ ಖನಿ. ಭವಭೂತಿಗಾಗಿ ನಮಗೆ ಆದರ; ಕಾಲಿದಾಸನಿಗಾಗಿ ಪ್ರೀತಿ.

ಮಮತೆ

ಶ್ರೀ. ರಾ. ನಂ. ಶ್ರೀನಿವಾಸ, ಶಿವಮೊಗ್ಗ

೧

ಹೆಸರ ಕೇಳಿದ ಮೇಲೆ ಏನು ಮಮತೆ!
‘ಏನು ಇಂಪಿನ ಹೆಸರು, ಅಯ್ಯೊ!’ ಎನುತ
ತವಕದಲಿ ತಬ್ಬಿದಳು ತಾಯಿಯಂತೆ;
ಕಂಬನಿಯ ಸುರಿಸಿದಳು. ಬಾಗಿನಿಂತೆ,
ಮನವೆಲ್ಲೊ ಮೈಯೆಲ್ಲೊ ತಿಳಿಯದಂತೆ—
ಅವಳ ಕೈಯೊಳಗಿದ್ದ ಹೂವಿನಂತೆ!
‘ತಾಯಿಯಿಲ್ಲದ ನನಗೆ ತಾಯಿಯಾಗಿ
ಬಂದಿಹಳು’ ಎಂದೆನ್ನ ಮನವು ಕೂಗಿ,
ಎನ್ನ ತೋಳೊಳಗವಳ ಬಿಗಿದಪ್ಪಿಸಿತ್ತು;
ತಾನೆಲ್ಲೊ ದೂರದಲಿ ಮಾಯವಾಗಿತ್ತು.
‘ನಾನು ಹೊಲೆಯನ ಮಗಳು, ಈಕೆ ರಾಯರ ಒಡತಿ!
ನಾನೇಕೆ ಇಲ್ಲಿ ಬಂದೆ?’
ಎಂದು ಮನಕೆನ್ನಿಸಲು, ತೋಳೊಡೆಸಿ ದೂರದಲಿ
ಭಯದಿಂದ ಹೋಗಿ ನಿಂದೆ.
ಆಕೆ ದೂರದಿ ನಿಂತು ಕಣ್ಣ ಮುಚ್ಚಿ,
ಅಪ್ಪಿದ್ದ ಕರಗಳನು ಹಾಗೆ ಬಿಚ್ಚಿ,
ಕಣ್ಮುಚ್ಚಿ ಕಂಬನಿಯನಿಳಿಸಿ, ಸುರಿಸಿ,
ನಿಂತಿದ್ದಳಲ್ಲಿಯೇ ಮಮತೆ ಹರಿಸಿ.
ನಾನು ಓಡಿದೆ ಹಟ್ಟಿಯೆಡೆಗೆ ತಿರುಗಿ,
ಕಣ್ಮುಚ್ಚಿ ನಿಂತಿದ್ದ ಶಿಲೆಗೆ ಮರುಗಿ.

೨

ಅವಳು ರಾಯರ ಒಡತಿ, ಸಿರಿವಂತೆಯಂತೆ;
ಎನ್ನಂಥ ಮಗಳನ್ನು ಕಳಕೊಂಡಳಂತೆ!
ಅಂದು ಊರಿನ ತೇರು, ಭಾರಿ ಜನವಂತೆ;
ಆ ಮೇಲೆ ಆ ಮಗಳು ಸಿಗಲಿಲ್ಲವಂತೆ!
ನನ್ನ ಮಾವನ ಮನೆಗೆ ಹೊಸದಾಗಿ ಬಂದೆ,
ಕೆರೆಯ ದಂಡೆಯ ಮೇಲೆ ‘ನೀರು’ ಎಂದೆ.
ಅಲ್ಲಿದ್ದ ರಾಯರೊಡತಿಯು ನನಗೆ ಜಲವ
ತುಂಬಿ ಸುರಿದಳು, ಕಣ್ಣೊರೆಸಿ ಒಲವ.
ನನ್ನ ನಗೆ ಅವಳ ಮೊಗವನ್ನೆಳೆಯಿತೇನೊ!
‘ಹೆಸರೇನು? ಹೇಳಕ್ಕ, ಯಾರ ಮಗಳು?’
ಎಂದಾಕೆ ತವಕದಲಿ ಕೇಳೆ ಹೇಳಿದೆನು:
‘ಗೌರಿ ಎಂಬನು ಅಪ್ಪ, ಅಮ್ಮನಿಲ್ಲ!’
ಹೆಸರ ಕೇಳಿದ ಮೇಲೆ ಏನು ಮಮತೆ!
‘ಏನು ಇಂಪಿನ ಹೆಸರು, ಅಯ್ಯೊ!’ ಎನುತ
ತವಕದಲಿ ತಬ್ಬಿದಳು ತಾಯಿಯಂತೆ;
ಕಂಬನಿಯ ಸುರಿಸಿದಳು. ಬಾಗಿ ನಿಂತೆ!

ಕೊಡಗಿನ ಕರೆ

ಶ್ರೀ. ಎಸ್. ಅನಂತನಾರಾಯಣ, ಮೈಸೂರು

೧

ಅಮ್ಮನನು ಅಪ್ಪಿರುವ ಎಳೆಯ ಕಂದನ ತೆರದಿ
ಮೈಸೂರ ಕಂಕುಳಲಿ ಕೊಡಗ ನಾಡು
ಗಿರಿಶಿಖರ ಮಲೆಮಾನ ಕಾಡು ಕಳುಹುವ ಕಂಪು,
ತೊರೆಯ ನೀರಿನ ಗೀತೆ ಸೊಗದ ಬೀಡು!

೨

ಕಾವೇರಿ ಬರುತಿಹಳು ಕೊಡಗಿನಲಿ ಜನಿಸುತ್ತ
ಅಂಕು-ಡೊಂಕಿನ ಕೊಂಕು ಬಿಂಕದಿಂದ;
ಸಂದೇಶ ತರುತಿಹಳು ಕೊಡಗುನಾಡೊಳಗಿಂದ
ಜಗಕೆಲ್ಲ, ಬಂದದನು ನೋಡಿರೆನುತ!

೩

ಕೊಡಗುಸೀಮೆಯ ಬೆಡಗ, ಮಲೆಗಳಾ ಮೌನವನು,
ಬಾಲೆಯರ ಬಿನ್ನಾಣ ಬಿಂಕದಾಟ,
ರಮಣಿಯರ ಧೀರತನ ಎಲ್ಲವನು ಬಿಂಬಿಸುತ
ಕೊಡಗುಪುತ್ರಿಯು ಭರದಿ ಹರಿಯುತಿಹಳು!

೪

ಕೊಡಗ ಕಿತ್ತಳೆಹಣ್ಣ ನೋಡೆ ನೆನಪಾಯ್ತು ನನಗೆ
ಮಡಿಕೇರಿಯೊಳಗಿರುವ ಕೊಡಗ ಕುವರಿ—
ನೋಡಿದುದು ಒಂದೆ ಚಣ, ಮೂಡಿದಳು ಮನದಲ್ಲಿ,
ಮರೆಯಲಾರೆನು ಅವಳ ನಿಲುವ-ಚೆಲುವ!

೫

ಬೆಳ್ಳಿಯಂಚಿನ ಕಪ್ಪುಬಣ್ಣ ಸೀರೆಯನುಟ್ಟು
ಸಡಗರದಿ ಒಡನಾಡಿಯೊಡಗೂಡುತ
ಮುಗಿಲ ಬಣ್ಣದ ರವಿಕೆ ತೊಟ್ಟಿಹಳು, ಮಲ್ಲಿಗೆಯ
ಮುಡಿದಿಹಳು, ಜೋಲುತಿದೆ ಜಡೆಯು ಕೆಳಗೆ!

೬

ಕಲೆತ ಚಿತ್ರಕೆವರ್ಣ, ಮೆದುವಾದ ಕೆನ್ನೆಗಳು,
ತೊಳೆಯಂತೆ ರಸದುಂಬಿದಾ ತುಟಿಗಳು;
ನಿಲುವಿನಲಿ ವೈಯಾರ, ನೋಟದಲಿ ದಿಟ್ಟತನ
ಬಿನ್ನಾಣ-ಬೆಡಗುಗಳ ಹಾಸ್ಯಮಯಿಯು!

೭

ನೋಡಿದುದು ಒಂದೆ ಚಣ, ಮೂಡಿದಳು ಮನದಲ್ಲಿ,
ನೋಡಬೇಕೆಂಬುವಾ ಬಯಕೆ ಬಹಳ!
ಕನಸಿನಲಿ ಕುಣಿಯುತ್ತ ಕಲೆಯುತ್ತ ಕಾಣುವುದು
ಅವಳ ರೂಪವು; ಅದುವೆ ಕೊಡಗ ಕರೆಯು!

ಹಸಿವೆಯು ಲಾಭ!

(ಒಂದು ಅನುಭವಚಿತ್ರ)

ಶ್ರೀಮತಿ ಟಿ. ಸರ್ವಮಂಗಳಾಂಬಾ, ಬಳ್ಳಾರಿ

★

ದುಃಖವನ್ನು ಅನುಭವಿಸಿದವರೇ ದುಃಖಿಗಳನ್ನು ಅರಿಯಬಲ್ಲರು. ಸಿದ್ಧಾರ್ಥ ಸಿರಿವಂತನಾಗಿ ಅರಮನೆಯಲ್ಲಿಯೆ ಕುಳಿತುಬಿಟ್ಟಿದ್ದರೆ, ಭಾರತಕ್ಕೆ ಗೌತಮಬುದ್ಧನ ತಾಯಿಯೆನಿಸಿಕೊಳ್ಳುವ ಸೌಭಾಗ್ಯವು ಸಿಕ್ಕುತ್ತಿದ್ದಿತೆಲ್ಲಿ?

★

ಮಾನವನು, ತನ್ನ ಅನ್ನಪ್ರಶ್ನೆಯ ಬೇಗುದಿಯು ಕಿಕ್ಕಿರಿದು ತುಂಬಿರುವಾಗ ತೀಕ್ಷ್ಣತೆ, ನಿರ್ಲಕ್ಷ್ಯತೆಯ ಠೀವಿಯಿಂದಲೆ ಇರುವನು. ಏಕೆಂದರೆ "ಕೂಳು ಇದ್ದರೆ ಬರುಸು," ಎನ್ನುವ ಸರ್ವಜ್ಞನ ನುಡಿಯನ್ನು ಅಲ್ಲಗಳೆಯಲು ಅಲ್ಪಮಾನವನಿಗೆ ಸಾಧ್ಯವೇ? ಪೊರೆ ಬಿಟ್ಟ ಹಾವಿನಂತೆ ಮಬ್ಬು ಕಳೆದು, ತನ್ನ ತೀಕ್ಷ್ಣತೆ-ನಿರ್ಲಕ್ಷ್ಯತೆಯ ಸ್ಥಳಗಳಲ್ಲಿ ಸಹನೆ, ಸೌಹಾರ್ದಗಳಿಗೆ ಎಡೆಗೊಟ್ಟು, ಮಿಕ್ಕವರು ಕೂಡ ತನ್ನಂತಹ ಏಳು ಗೇಣಿನ ಪ್ರಾಣಿಗಳು ಎನ್ನುವ ತಿಳುವು ಮಾನವನಿಗೆ ಹೊಳೆಯಬೇಕಾದರೆ, ಒಡಲಿನ ಉಗ್ರಾಣವು ಬರಿದಾಗಲೇ ಬೇಕು. ಅದು ಬರಿಯದಾದಾಗಲೇ ಮಾನವನು ಮಾನವನನ್ನು ಸಹನೆ-ಸೌಹಾರ್ದಗಳಿಂದ ಕಾಣುವನು. ಈ ಮಾತು ಕೆಲವು ದಿನಗಳ ಹಿಂದೆ ಹಾದಿಯಲ್ಲಿ ಅನುಭವಿಸಿದ ಒಂದು ಘಟನೆಯಿಂದ ನನಗೆ ತಿಳಿದು ಬಂದಿತು.

ಎರಡೂವರೆ ಘಂಟೆಗಳ ಕಾಲ ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದರೂ— ಪಕ್ಕಪಕ್ಕದಲ್ಲಿ ಕುಳಿತವರು ಕೂಡ— 'ಯಾರು' 'ಎಲ್ಲಿಗೆ?' 'ಏನು?' ಎನ್ನುವ ಪರಿಚಯದ ಗೊಡವೆಗೆ ಹೋಗದೆ, ಗಂಭೀರವಾಗಿ ಕುಳಿತಿದ್ದೆವು. ಬಸ್ಸು ಭರದಿಂದ ಸಾಗಿತ್ತು. ಹರಿಹರವನ್ನು ಹಿಂದೂಡಿ, ಬ್ರಿಟಿಷ್ ಗಡಿಯಲ್ಲಿ ಬಲಗಾಲಿರಿಸಿ ಮೈಸೂರು ಗಡಿಯಲ್ಲಿಯ ಎಡಗಾಲನ್ನು ಕೀಳಬೇಕಾದರೆ ಒಂದು ಹಳ್ಳವನ್ನು ದಾಟಬೇಕಾಗಿತ್ತು. ಎರಡು ದಿನಗಳ ಹಿಂದೆ ದೊಡ್ಡ ಮಳೆಯಾದುದರಿಂದ ಆ ಹಳ್ಳಕ್ಕೆ ಕಳೆಯೇರಿ ಕಡಿಮೆಯಾಗಿದ್ದಿತು. ಒಳಸಂಚು ಹೂಡಿ ಮೇಲೆ ನಿರ್ವಂಚನೆಯನ್ನು ತೋರುವ ಮೋಸಗಾರನಂತೆ— ನೋಡುವವರಿಗೆ 'ನೀರು ಅಷ್ಟೇನಿಲ್ಲ' ಎನ್ನುವ ಸಮಾಧಾನವನ್ನು ತೋರುತ್ತಿತ್ತು. ಮೊದಲು ಕ್ಲೀನರ್‌ನು ಇಳಿದು, ಕನ್ಯೆಯನ್ನು ಕೊಡಲು ಬಂದ ಅತಿಥಿ ಒಳಗಣ್ಣಿನಿಂದ ಮನೆತನವನ್ನು ಈಕ್ಷಿಸುವಂತೆ ಅಗಲಕ್ಕೂ ನಡೆದು ನೋಡಿದ; ಉದ್ದಕ್ಕೂ ನಡೆದು ನೋಡಿದ. ತನಗೆಲ್ಲಿಯ ತಂಟೆ ಎಂದು ಡ್ರೈವರ್‌ನನ್ನೂ ಕರೆದ. ಇಬ್ಬರೂ ಸೇರಿ ಮತ್ತೂ ನಡೆದು ನೋಡಿದರು. ನೀರಿನ ಆಳ ನೋಡಿದರೆ, ನಿಂತವರ ಮೊಣಕಾಲ ಕೆಳಗನ್ನು ಮುದ್ದಿಸುತ್ತಿತ್ತು. ಆಳವನ್ನು ಅರಿತುಕೊಂಡ ಮೇಲೆ ಡ್ರೈವರ್‌ನು ಸ್ವಸ್ತಿಕ ಸೈನ್ಯದ ದರ್ಜೆಯಲ್ಲಿ "ಏ ಕೆತ್ತಾ ಪಾನೀ ಜೇ, ಸೊಬ್ ಬನೇಬೀ ಜರಾ ಉತ್ರೋ!" ಎಂದು ಆಜ್ಞಾಪಿಸಿದನು. ಅವನ ಆಳಿನಂತೆ—ಅವನು ಮಾಡಿದ ಆಜ್ಞೆಗೆ 'ಜೇಂಹಾ' ಎಂದು—ಎಲ್ಲರೂ ಇಳಿದೆವು. ರಣರಂಗದಲ್ಲಿ ಕತ್ತಿ ಹಿರಿವ ವೀರನ ಭಂಗಿಯಲ್ಲಿ ಆತ ಸ್ಟೀರಿಂಗ್‌ನ್ನು ಹಿಡಿದು ಸ್ಟಾರ್ಟ್ ಮಾಡಿ, ಆ ಮದ್ದಾನೆಯನ್ನು ಮುಂದೂಡಿದ. ಹಳ್ಳದ ಮಧ್ಯಕ್ಕೆ ಬಂದು, ಮಲೇರಿಯಾ ಪೇಶಂಟಿನಂತೆ ಗಡಗಡಗಡ ಶಬ್ದದೊಂದಿಗೆ ನಡುಗುತ್ತ ಅದು ನಿಂತುಬಿಟ್ಟಿತು. "ಬಾ! ಬಾ! ಇಷ್ಟುದಿನ ನನ್ನನ್ನು ಗುದ್ದಿಗುದ್ದಿ ಹೋಗುವ ನಿನ್ನನ್ನು ಈಗ ಒಪ್ಪೊದ್ದು ನಿಲ್ಲಿಸುತ್ತೇನೆ!" ಎಂದು ಕುಚೇಷ್ಟೆಯ ಕೊಂಕುನಗು ನಗುತ್ತಿರುವಂತೆ ಕಂಡಿತೇನೋ ಆ ಹಳ್ಳ ಡ್ರೈವರ್‌ನಿಗೆ. "ಕ್ಯಾ ದೇಕ್ತೇ? ಅಬ್ ಜೇ, ಸಬ್ ಬನೇಬೀ ಜರಾ ಢಕ್ಲೋ" ಎಂದು ಕೆರಳಿದ ಧ್ವನಿಯಲ್ಲಿಯೆ ಕಿರಿಚಿದ. ಕುಷ್ಟೆ—ತಿಷ್ಟೆ ಎನ್ನುವ ಭೇದವಿಲ್ಲದೆ, ಕುಂಬಳಕಾಯಿ— ನುಗ್ಗೇಕಾಯಿಯನ್ನು ಹೋಲುವ ಜನರೆಲ್ಲರೂ ಧಾವಿಸಿದರು; ಧಾವಿಸಿ ಅವರವರ ಶಕ್ತ್ಯನುಸಾರವಾಗಿ, ನಿಂತ ಬಸ್ಸಿನ ಸಿಕ್ಕಸಿಕ್ಕ ಅವಯವಗಳನ್ನೂ ಹಿಡಿದು ಕೇಕೆಯೊಂದಿಗೆ ದೂಡಿದರು!....ದೂಡಿದರು ಎನ್ನುವುದೇನು, ವಿಶ್ವಪ್ರಯತ್ನ ಮಾಡಿದರು. ವಿಶ್ವಪ್ರಯತ್ನ ಎನ್ನುವುದು ನನಗೆ ತಿಳಿದುದು ಹೇಗೆ ಎಂದರೆ, ಅವರೆಲ್ಲರ ಮುಖಗಳು ಒಡ್ಡೆಯಿಂದ ಮುದ್ದೆಯಾಗಿದ್ದುವು. ತಿಜೋರಿಯನ್ನು ಕಾಯುವ ಸ್ಥೂಲಕಾಯದ ಮಾರ್ವಾಡಿಯಂತೆ, ಅತ್ತೊಮ್ಮೆ ಇತ್ತೊಮ್ಮೆ ಅಲುಗಿ ಅಲ್ಲಿಯೇ ನಿಂತುಬಿಟ್ಟಿತು ಬಸ್ಸು. ದೂಡಲು ಹೋದವರೆಲ್ಲರು "ಯಶಸ್ವಿಯಾಗಿ ಹಿಂದೆಗೆದೆವು" ಎಂಬ ಮಿತ್ರರ ಸೈನ್ಯದಂತೆ ದಂಡೆಗೆ ಬಂದು ಮುಟ್ಟಿದರು. ಡ್ರೈವರು ಕ್ಲೀನರು ಮುಂದಿನ ಹಾದಿಯನ್ನು ಹುಡುಕಲು ಹತ್ತಿರವಿದ್ದ ಹಳ್ಳಿಗೆ ಹೋದರು.

ಬಸ್ಸಿನಲ್ಲಿ ಉಃಫೆದು ಊದಿಕೊಂಡು ಕುಳಿತ ವ್ಯಕ್ತಿಗಳೆಲ್ಲಾ ಈಗ ಹಿಂದಿನ ಮೌನವನ್ನು ಆಚರಿಸಲು ಸಾಧ್ಯವಾಗಲಿಲ್ಲ. ತಮ್ಮ ತಮ್ಮ ಅನುಭವಗಳನ್ನು ಹೇಳಲು ಪ್ರಾರಂಭಿಸಿ, ರಣಭೂಮಿಯಿಂದ ಹಿಡಿದು ರಂಗಭೂಮಿಯ ವರೆಗೂ ಮಾತುಗಳನ್ನು ಹೊರಳಿಸಿದರು. ಉಗ್ರಾಣದಲ್ಲಿ ಕಾಫಿಯ ಕಾವು ಕರಗಿ ಶೀತ ಮುಖಕ್ಕೆ ಇಳಿದಿರಬೇಕು. ಇಲ್ಲದೆ ಹೋದರೆ, ಇಲ್ಲಿಯ ವರೆಗೂ ಇಲ್ಲದ ಈ ಸ್ನೇಹ ಈಗ ಬಂತು ಎಲ್ಲಿಂದ? ಹಾಂ! 'ಹಸಿವೆಯೇ ಸೊಕ್ಕಿದ ಮಾನವನಿಗೆ ಸರಿಯಾದ ಶಿಕ್ಷಕ' ಎಂದು ಗ್ರಹಿಸಿಕೊಂಡು, ಗೇಣು ಅಗಲದ ಮಧ್ಯಪ್ರಾಂತವೇ,

ಮೊಳದ ಮಿಕ್ಕಿದ ಮಾನವನನ್ನು ಮೂಗುದಾರವಿಲ್ಲದೆ ಆಡಿಸುವ ನಿನ್ನ ಆಳಿಕೆಗೆ ಆಶ್ಚರ್ಯವಾಗುತ್ತದೆ! ದಾನವನಂತಹವನನ್ನು ಕೂಡ ಮಾನವನನ್ನಾಗಿ ಮಾಡುವ ಸಾಹಸವು ನಿನ್ನಲ್ಲಿದೆಯಲ್ಲಾ! ಧನ್ಯ ! ಹಸಿದ ಹೊಟ್ಟೆಯೇ ನೀನೇ ಧನ್ಯ! — ಎಂದು ಹಸಿದ ಉದರಕ್ಕೆ ಧನ್ಯತೆಯನ್ನರ್ಪಿಸಿದೆ.

ಸಮಯ ನೋಡಿದರೆ ನೇಸರು ನಡುನೆತ್ತಿಗೆ ಛತ್ರಿಯಾಗಿ, ತನ್ನ ಕೆಂಗಣ್ಣುಗಳಿಂದ ಕೆಂಡವನ್ನು ಕಾರುತ್ತಿದ್ದನು. ಎಲ್ಲರ ಒಡಲಲ್ಲಿಯೂ ಡೊಂಬನು ಸ್ವಾರಸ್ಯವಾದ ಗಣೆಯ ಆಟ ಹೂಡಿ ಆಗಲೇ ಸ್ವಲ್ಪಹೊತ್ತು ಆಗಿದ್ದಿತು. ಕಣ್ಣುಗಳು ಹಸಿವೆಯಿಂದ ಆಳಸೇರಿದ್ದುವು. ಮುಖಗಳು ನೀರೆರೆಯದ ಲತೆಯಂತೆ ಬಾಡಿಹೋಗಿದ್ದುವು. ಕೈಕಾಲುಗಳು ನಮಗೆ ನಾವೇ ಎಷ್ಟು ಜಡವೆಂದು ಮಂದಗತಿವಹಿಸಿದ್ದುವು. ಆದರೂ, ಆಳ ಸೇರಿದ ಕಣ್ಣುಗಳಲ್ಲಿ ತೇಜವಿರಲಿಲ್ಲವಾದರೂ ಉಳಿದವರ ಬಳಲಿಕೆಗೆ 'ಅಯ್ಯೋ' ಎನ್ನುವ ತಿಳುಹು ಹೊಳೆಯುತ್ತಿದ್ದುವು. ಬಾಡಿದ ಮುಖಗಳಲ್ಲಿ 'ನೊಂದ-ನೊಂದವರೆಲ್ಲ ಒಂದೇ' ಎನ್ನುವ ಭಾವವು ಒಡೆದು ಮೂಡಿದ್ದಿತು. ಸೋತುಹೋದ ಕೈಕಾಲುಗಳು ಸಹಾಯ ನೀಡಲು ಸಾಹಸಪಡಹತ್ತಿದ್ದುವು. ಮಾನವನಿಂದ ಮಾನವನಿಗೆ ಬೇಕಾದುದು ಇಂತಹ ಉತ್ಕೃಷ್ಟ ಗುಣವಲ್ಲದೆ ಮತ್ತೇನು? ದಿನದಿನಕ್ಕೂ ಇಂತಹ ಘಟನೆಗಳು ನೂರಾರು ಅಥವಾ ಸಾವಿರಾರು ಜರುಗಿದರೇನೇ ಜವಾಹಿರಲಾಲರ ಸಮತಾವಾದದ ತತ್ತ್ವಕ್ಕೆ ಒಪ್ಪ ದೊರೆಯುವುದು ಅತಿ ಸುಲಭ ಸಾಧ್ಯವೆಂದು, ನನ್ನ ಹಸಿದು ಆಡದ ತಲೆಯಲ್ಲಿಯೆ ಈ ಒಂದು ಆಲೋಚನೆಯು ಹರಿದು ಹೋಯಿತು.

"ತಿಂದು ಬಂದ ನುಚ್ಚೆಲ್ಲಾ ಸುತರ್ನ ಒತು..ಇದ್ನ ನೂಕಿ!" ಎಂದು, ಕಟ್ಟಿತಂದ ರೊಟ್ಟಿಯ ಪೀಠದ ಮೇಲೆ ಹಣ್ಣು ಮೆಣಸಿನ ಚಟ್ನಿಯ ಮೂರ್ತಿಯನ್ನು ಸ್ಥಾಪಿಸಿ, ಸೇವೆಯನ್ನು ಕೈಕೊಂಡ ರುಮಾಲಿನ ರೈತನೊಬ್ಬ. "ಧೂಳು ಮುಸುಕಿದ ಪದಾರ್ಥವು ಆರೋಗ್ಯಕ್ಕೆ ಅನಾಹುತ' ಎಂದು ಸಿದ್ಧಾಂತ ಮಾಡಿದ ನಾಗರಿಕರ ಬಾಯೊಳಗೆ, ಆ ರೊಟ್ಟಿ-ಚಟ್ನಿಯು ನೀರನ್ನು ತಾರದೆ ಬಿಡಲಿಲ್ಲ. 'ಅವನ ಭಾಗ್ಯ ನನಗಿಲ್ಲವಲ್ಲಾ!' ಎನ್ನುವ ವ್ಯಥೆಯನ್ನು, ಹಲ್ಲಿಲ್ಲದ ಬರಿಬಾಯನ್ನೇ · ಅಗಿನಗಿದು ಕಳೆದುಕೊಳ್ಳುತ್ತಿದ್ದರು ಶಿವಪೂಜಾ ಧುರಂಧರರಾದ ಮುಪ್ಪಿನ ವೀರಕ್ಕವರೊಬ್ಬರು. ಕಾಲಿನ ವಸ್ತ್ರವನ್ನು ಕೈಯಲ್ಲಿ ಹಿಡಿದು ದಂಡೆಗೆ ಬಂದು, ಹಸಿವೆಯ ಆರ್ಭಟವನ್ನೆಲ್ಲಾ ತನ್ನ ಮೆಟ್ಟುಗಳ ಮೇಲೆ ತೀರಿಸಿಕೊಂಡಂತೆ ಅವುಗಳನ್ನು ಬೀಸಿ ನೆಲಕ್ಕೊಗೆದು, ಆತುರದಿಂದ ಅವುಗಳಲ್ಲಿ ಕಾಲು ಹಾಕಿ, ಮುಂದಿನ ಹಳ್ಳಿಯಲ್ಲಿ ಹಾಲು ಹುಡುಕಲು ಹೊರಟ—ಹಳ್ಳಿಎಂದರೆ ಮುಳ್ಳು ತುಳಿದಂತೆ ಮುಖ ಮಾಡುತ್ತಿದ್ದ ಪ್ರವೃಜರಿನ ವಿದ್ಯಾರ್ಥಿಯೊಬ್ಬ. 'ನಾನು ಸತ್ತಮೇಲೆ ನೀನು ಅಗಸನ ಮನೆಗೆ' ಎಂದು ಪಂಥದಿಂದ ತೊಟ್ಟ ಕೋಟನ್ನು 'ಕೈಮಾರಿದುದು ಕೃಷ್ಣಾರ್ಪಣ' ಎನ್ನುವಂತೆ, ಹಸಿವೆಯ ಆಯಾಸವನ್ನು ನೀಗಲು, ಆ ತೊಟ್ಟ ಕೋಟನ್ನೇ ತಲೆದಿಂಬಾಗಿ ಮಾಡಿಕೊಂಡ—ಜಿಪುಣ ಸಾಹುಕಾರನೊಬ್ಬ. ಕೆಲವರು ಡ್ರೈವರನ ಮೇಲೆ ಹಾರಿಬಿದ್ದರೆ, ಉಳಿದ ಕೆಲವರು ಹರಿಯುತ್ತಿರುವ ತಿಳಿನೀರನ್ನೇ ಕುಡಿಯುತ್ತಾ "ಅವನ ಮೇಲೆ ಮಾತ್ರ ರೇಗಬ್ಯಾಡ್ರಪ್ರೋ, ನಮ್ಮ ಜೀವೆಲ್ಲಾ ಅವನ ಕೈಯಾಗ! ಸದ್ಯಕ್ಕೆ ಅವನೇ ನಮಗೆ ಮೃತ್ಯುಂಜಯ!" ಎಂದರು. ಒಬ್ಬೊಬ್ಬರು ಒಂದೊಂದು ವಿಧಾನವನ್ನು ಕೈಕೊಂಡರೂ, ಹಸಿವೆ ಮಾತ್ರ ಎಲ್ಲರ ಮೇಲೂ ನಿಷ್ಪಕ್ಷಪಾತದಿಂದ ಒಂದೇ ಬಗೆಯ ಮಮತೆಯನ್ನು ತೋರಿದ್ದಿತು.

ಇಲಿಗೆ ಪ್ರಾಣಸಂಕಟವಾದರೆ ಬೆಕ್ಕಿಗೆ ಚೆನ್ನಾಟವೆಂದಹಾಗೆ, ಹತ್ತಿರವಿದ್ದ ಹಳ್ಳಿಯ ಮಕ್ಕಳೆಲ್ಲಾ ಮಿಡಿತೆಯ ದಂಡಿನಂತೆ ಬಂದು "ಈಗ ಸಿಕ್ಕಿಯೇ ನಮ್ಮ ಕೈಗೆ?" ಎಂದು ನಿಂತ ಬಸ್ಸಿಗೆ ಮುತ್ತಿಗೆ ಹಾಕಿ, ಡ್ರೈವರ್— ಕ್ಲೀನರ್‌ರಿಂದ ಕೇಳಿದ ಮಾತುಗಳನ್ನು "ಸುವ್ವರ್, ಹರಾಮ್‌ಕಾ" ಮುಂತಾದ ಶಬ್ದಕೋಶವನ್ನೇ ಕಂಠಪಾಠವಾಗಿ ಒಪ್ಪಿಸುತ್ತಾ, ಅದರ ಕಣ್ಣು, ಕಿವಿ, ಬಾಯಿಗಳ ಮೇಲೆಲ್ಲಾ ಕೈಯಾಡಿಸುತ್ತಾ, "ನಮ್ಮನ್ನೆಲ್ಲಾ ಮೆಟ್ಟಿಬೀಳಿಸಿ, · ಹಿಂದೆಸರಿಯುವುದರೊಳಗೆ ನಮ್ಮ ಕಣ್ಣು-ಬಾಯಿಗಳಲ್ಲಿ ಮಣ್ಣನ್ನೆರಚಿ ಮುಂದೋಡುತಿದ್ದೆಯಲ್ಲಾ! ಎಲ್ಲಿ, ಈಗ ಓಡು ನೋಡುವ!" ಎಂದು ಕೇಳುತ್ತಿರುವರೋ ಎನ್ನುವಂತೆ, ಅದರ ಹಾರ್ನ್‌ನನ್ನೆ ಒತ್ತಿ ಅದನ್ನೇ ಕುಚೇಷ್ಟೆ ಮಾಡಿ ಕುಣಿದಾಡುತ್ತಿದ್ದರು— ಹಳ್ಳಿಯ ಮಕ್ಕಳು— ಅದರ ಸುತ್ತುಮುತ್ತು. 'ಅತ್ತೆಗೊಂದುಕಾಲ, ಸೊಸೆಗೊಂದುಕಾಲ, ಆಗಲಿ!' ಎಂದು, ತನ್ನ ದೊಡ್ಡ ದೇಹವನ್ನು ಆ ಪುಟ್ಟ ಕೈಗಳಿಗೆ ಒಪ್ಪಿ ನಿಂತಿತ್ತು ಆ ಬಸ್ಸು. ಆ ನೋಟವನ್ನು ನೋಡಿದರೆ 'ರಾಜನ ಕಿವಿಯೂ ರೈತನ ಕೈಗೂ ದೊರೆಯಬಹುದಲ್ಲಾ, ಸಮಯ ಯಾರ ಮನೆಯ ಆಳು?' ಎನ್ನಿಸುವಂತಿತ್ತು.

ಅಸ್ತವ್ಯಸ್ತವಾಗಿ ಅಲ್ಲಲ್ಲಿಯೇ ಬಿದ್ದಿದ್ದ ಪ್ರಯಾಣಿಕರನ್ನು ನೋಡಿ "ಯಂತಾ ನತ್ಲಾಗ ನಿಂತುಬಿಟ್ಟೈತೇ, ಯಾ ಊರ್ಗೆ ಸೋಮಿ ಓಗೋದು?" ಎಂದು ಕೇಳಿದ—ಹಳ್ಳಿಯಿಂದ ಹಳ್ಳಿಗೆ ಹೋಗುತ್ತಿದ್ದ ಕನಿಕರದ—ಮಾದನೊಬ್ಬ. "ಕಾಲು ಜಾರಿದರೆ ಕೈಊರಿಗೆಸ್ವಾ" ಎಂದ ಹಸಿವೆಯ ಧ್ಯಾನದಲ್ಲಿಯೇ ಮಗ್ನನಾದ ಆಸಲ ಭಕ್ತನೊಬ್ಬ. "ನಮ್ಮನ್ನು ಘಟ್ಟೀತಿಗೆ ಮುಟ್ಟಿಸಬೇಕಪ್ಪಾ ಇನ್ನ ಈ ಬಸ್ಸು!" ಎಂದ, ಬಸ್ಸಿನ ಮೇಲೆ ತನಗಿದ್ದ ತಿರಸ್ಕಾರವನ್ನು ಕಾರುತ್ತಾ ಇನ್ನೊಬ್ಬ. ತನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯದೆ ಹೋದರೂ ಸೋಲಲಿಲ್ಲ ಮಾದ. "ಅಗ್ಲೇ ಆ ಎರ್ಡೂರಗ್ಗೆ ಮುಟ್ಸೈತಲ್ರೀ ನಿಮ್ಮನ್ನ!" ಎನ್ನುತ್ತಾ ಹೊರಟ. "ಇವರ ಕೊಬ್ಬು ಇನ್ನಾ ಕರಗಿಲ್ಲ, ಗಂಗಮ್ಮತಾಯಿ, ಇಗ್ಲೇ ಬರದೂಡಬ್ಯಾಡ ಇದ್ನ!" ಎಂದು ಹೇಳುತ್ತಿರುವನೋ ಎನ್ನುವಂತೆ ಹಳ್ಳಕ್ಕೆ ಇಳಿದ ಮಾದ.

ಹಳ್ಳಿಗೆ ಹೋದ ಡ್ರೈವರ್‌ನೂ ಕ್ಲೀನರ್‌ನೂ, ಬಳ್ಳಾರಿಯಲ್ಲಿ ಜರುಗಿದ ೨೩ ನೆಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ-ಸ್ವಾಗತಾಧ್ಯಕ್ಷರಂತೆ, ೮-೯ ಜೊತೆ ಎತ್ತುಗಳನ್ನೂ ಅವುಗಳ ಒಡೆಯರನ್ನೂ ಒಡಗೊಂಡು ಬರುತ್ತಿದ್ದರು. ಇನ್ನು ಜರುಗಲಿರುವ ಮೆರವಣಿಗೆಯನ್ನು ನೋಡಲು ಕುತೂಹಲಿಗಳಾಗಿ, ತಮ್ಮ ಮೈಗಂಟಿದ ಮಳಲನ್ನು ಕೊಡಹಿಕೊಂಡು ಮೈಮುರಿದು ಎದ್ದು ನಿಂತರು ಕೆಲವರು ರಸಿಕರು. "ನಮ್ಮ ತೇರೇ ಎಳೆಯುವಂತಾಗಿರುವಾಗ, ಅದರ ತೇರು ಯಾರಿಗೆ ಬೇಕು?" ಎಂದು ಮಲಗಿದಲ್ಲಿಯೇ ಮುದುಡಿಕೊಂಡರು ಉಳಿದ ಅರಸಿಕರು.

ಬಸ್ಸು ನಿಂತ ಸ್ಥಳಕ್ಕೆ ಬಂದು ಮುಟ್ಟಿತು ಸಮೂಹವು. "ನಿನ್ನಂತಹ ಎಷ್ಟೋ ಜಂಭದ ಕೋಳಿಗಳನ್ನು ದಂಡೆಗೆ ತಂದು ಬಿಟ್ಟಿದ್ದೇವೆ; ಆದರೇನು ನಿಮ್ಮ ವಂಶವೆಲ್ಲಾ ಒಂದೇ! ಉಪಕಾರ ಅರಿಯದ ಜಾತಿ ನಿಮ್ಮದು! ನಿಮ್ಮ ಆರ್ಭಟಕ್ಕೆ ಅಂಜಿ ಒಗ್ಗಾಲಿಯಾಗಿ ಬಿದ್ದ ನಮ್ಮ ವಂಶಜರಿಗೆ, ನೀವು ಎಲ್ಲಿಯಾದರೂ ದಯೆ ತೋರಿರುವುದು ಜ್ಞಾಪಕವಿದೆಯೇ?" ಎಂದು ಕೇಳಿ, ಆ ಅಪಕಾರದ ಸೇಡನ್ನು ತೀರಿಸಿಕೊಳ್ಳುತ್ತಿರುವುವೋ ಎನ್ನುವಂತೆ, ಬಸ್ಸನ್ನು ಕಂಡು ಅತ್ತ ಇತ್ತ ಕೊಸರಿಕೊಳ್ಳುತ್ತಿದ್ದುವು ಬಿಸಿರಕ್ತದ ಎತ್ತುಗಳು. "ಉಪಕಾರಿಗಳಿಗೇ ಆಗಲಿ, ಅಪಕಾರಿಗಳಿಗೇ ಆಗಲಿ, ಉಪಕಾರವಮಾಡುವುದೇ ನಮ್ಮ ಕಾಯಕ. 'ಎತ್ತು' ಎಂದು ದೇವನು ನಮ್ಮನ್ನು ಸೃಷ್ಟಿಸಿದ ಮೇಲೆ, ಯಾವುದೇ ಆಗಲಿ ಬಿದ್ದ ವಸ್ತುವನ್ನು ಎತ್ತುವುದೇ ನಮ್ಮ ಕರ್ತವ್ಯ!" ಎಂದು ಬಿಸಿರಕ್ತದ ತಮ್ಮ ಬಳಗಕ್ಕೆ ಬೋಧನೆ ಮಾಡಿ ಕರ್ತವ್ಯಕ್ಕೆ ಕರೆದುಕೊಂಡುವೋ ಎನ್ನುವಂತೆ, ತಮ್ಮ ದೇಹವನ್ನು ಕೆಲಸಕ್ಕೆ ಬಗ್ಗಿಸಿ ನಿಂತುಕೊಂಡುವು.... ಅದರಲ್ಲಿಯ ಒಂದು ಜೊತೆ ಸಾಧು ಎತ್ತುಗಳು.

ದಂಡೆಗೆ ಬಂದು ನಿಂತ ಬಸ್ಸನ್ನು ಕ್ಲೀನರ್ "ತಾವು ಬಂದಂಥವರು ದಾರು ಸ್ವಾಮಿ ಹೋಹೋತ್" ಎಂದು ಹ್ಯಾಂಡ್ಲ್ ಮಾಡಿ ಮಾಡಿ ಮಾಡಿ ಮಾತನಾಡಿಸಿದ ಮೇಲೆ, ಬಸ್ಸು "ಛಲಲಲಲಾ ಸಾರಥಿ, ನಾನು ಧಾರೆಂದರೇ" ಎನ್ನುವ ಹೊತ್ತಿಗೆ, ವೇಳೆ ಆಗಲೇ ಅನ್ನವನ್ನು ಅಪಹರಿಸಿದ್ದಲ್ಲದೆ ಕಾಫಿಯನ್ನು ಸಹ ಕಸಿದುಕೊಂಡು ಹೋಗಿತ್ತು. ಎಲ್ಲರೂ ಸಹನದ ಮೂರ್ತಿಗಳಾಗಿ, ಏಕಕಂಠದಿಂದ "ಬಿಡಪ್ಪಾ ಮಹಾರಾಯಾ" ಎಂದರು.

—— ೦ ——

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ

★ ನೀವು ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಖಾತೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಕನ್ನಡದ ಸಂಘಟನೆ ★

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಲೇಖಾಂಕ ೧

ನಾಡಿನ ಏಳಿಗೆಗಾಗಿ ಸರ್ವತೋಮುಖವಾಗಿ ಕಾರ್ಯಮಾಡುವ ಶಕ್ತಿಯು ಕೆಳಗಿನ ಸ್ತರಗಳಿಂದ ನೆಗೆದು ಬರಬೇಕಾಗುತ್ತದೆ. 'ಉದ್ಧಾರ'ದ ಕಲ್ಪನೆಯು ಪರಾವಲಂಬಿತವಾದುದು ಇಲ್ಲಿ ಬೇಕಾಗಿಲ್ಲ. 'ಉದಯ'ದ ಕಲ್ಪನೆಯು ಸ್ವಾವಲಂಬನೆಯ ಸಾಧನೆಯೆ ನಮ್ಮ ಸಂಘಟನೆಗೆ ದಾರಿಯಾಗಿದೆ!

ಜಯಂತಿಯ ಅಕ್ಟೋಬರ್ (೧೯೪೩) ಸಂಚಿಕೆಯಲ್ಲಿ ಕನ್ನಡ ಕುಲಪುರೋಹಿತರ ಲೇಖನ ಒಂದು—ಕನ್ನಡದ ಸಂಘಟನೆಯ ಧ್ಯೇಯ-ಧೋರಣೆಗಳ ಕುರಿತು—ಬಂದಿದೆ. ಆ ಬರೆಹವನ್ನೋದಿ ಮೂಡಿದ ಕೆಲವು ವಿಚಾರಗಳನ್ನು ಇಲ್ಲಿ ಕನ್ನಡಿಗರ ಕಣ್ಣೆದುರಿಗೆ ಇಡಲು ಸಾಹಸಪಡುತ್ತೇನೆ. ಸಾಹಸವೆನ್ನಲು ಕಾರಣವಿಷ್ಟೇ:— ಶ್ರೀ. ಆಲೂರ ವೆಂಕಟರಾಯರ ಮುಖ್ಯ ವಿಧಾನಗಳು ಸ್ಫಟಿಕದಂತೆ ಸ್ಫುಟವಾಗಿದ್ದರೂ, ಅವರ ಬರೆಹದುದ್ದಕ್ಕೂ ಒಂದು ಬಗೆಯ ಉದ್ವೇಗದ ಒಳದನಿಯು ಹರಿದಂತಿದೆ. ಆದುದರಿಂದ ಅವರು ಬರೆದಿಟ್ಟ ಮಾತುಗಳಿಗಿಂತಲೂ ಬರೆಯದೆ ಬಿಟ್ಟ ಮಾತುಗಳು ಹೆಚ್ಚು ಮಹತ್ತ್ವದುವಿದ್ದಿರಬಹುದೆಂಬ ಹೊಳಹಾಗುತ್ತಿದೆ. ಆ ಲೇಖನಕ್ಕೆ ಕೆಲವೊಂದು ವಾದಸಂದರ್ಭವಿದ್ದು—ಅದರ ಪೂರ್ವಾಪರಗಳನ್ನು ಅರಿತವರಿಗಾಗಿಯೆ ಅದರ ಇಂಗಿತವಿದ್ದಂತೆ ಎನಿಸುವಂತಿದೆ. ಹೀಗಿದ್ದುದರಿಂದ, ನನ್ನ ಮತಪ್ರದರ್ಶನವು ಆಗಂತುಕನ ಅವ್ಯಾಪಾರವೆಂದು ಆಲೂರರಾಗಲಿ ಇತರರಾಗಲಿ ಬಗೆಯಬಹುದಾಗಿದೆ. ಆದರೂ, ಅವರ ಕನ್ನಡದ ಸಂಘಟನೆಯ ಕುರಿತು ಹಠಾತ್ತಾಗಿ ಹಾಕಿಕೊಟ್ಟ ಸೂತ್ರಗಳು ಅತ್ಯಂತ ಮಹತ್ತ್ವದವಿರುವುದರಿಂದ, ಆ ಕುರಿತು ಒರ್ವ ಹಾದಿಹೋಕ ಕನ್ನಡಿಗನ ತಿಳಿವಳಿಕೆಯ ಪ್ರತಿಕ್ರಿಯೆಗಳನ್ನು ಮಂಡಿಸಿ, ಬಲ್ಲವರ ಮುಂದಿಡುವುದು ಅಷ್ಟೇ ಯುಕ್ತವಾದುದೆಂದು ನನಗೆ ಎನಿಸಿತು; ಅಂತೆಯೆ ಈ ಸಾಹಸ.

ಕನ್ನಡ ಸಂಘಟನೆಯೆಂದರೆ ಮೂಲತಃ ಕನ್ನಡ ಸಂಸ್ಕೃತಿಯ ಸಂಘಟನೆ—ಸಂವರ್ಧನೆಯೆಂಬುದು ನಿರ್ವಿವಾದ ಸತ್ಯವಾಗಿದೆ. ಆದರೆ ಈ ಜೀವಾಳದ ಚಟ್ಟಿಗೆಲಸಕ್ಕೆ ಅಷ್ಟೇ ಅವಶ್ಯಕವಿರುವ ರಾಜಕೀಯ ಜಾಗೃತಿಯ ಮತ್ತು ಸಾಮಾಜಿಕ ಚಳವಳಿಯ ಮಹತ್ಕಾರ್ಯವನ್ನು ಪ್ರಾಂತಿಕ ಕಾಂಗ್ರೆಸ್ಸಿಗೆ ಒಪ್ಪಿಸುವುದು ಅತ್ಯಂತ ಅನಿಷ್ಟವಾದುದೆಂದು ನನ್ನ ಅಭಿಪ್ರಾಯ. ಏಕತಂತ್ರ ಕರ್ನಾಟಕವು ಸ್ವತಂತ್ರಭಾರತದ ಪಿರಿಗನಸಿನೊಳಗಿನ ಒಂದು ಹೊಂಗಣಸಾಗಿದ್ದರೂ, ಅದರ ಸಾಧನೆಯ ಕಾರ್ಯಭಾರವನ್ನು ಪ್ರಾಂತಿಕ ಕಾಂಗ್ರೆಸ್ ಕಚೇರಿಯ ಗೂಟಕ್ಕೆ ತೂಗುಹಾಕುವುದು ಸರ್ವಥಾ ಸರಿಯಲ್ಲ. ಇದಕ್ಕೆ ಹಲವು ಕಾರಣಗಳನ್ನು ಕೊಡಬಹುದು. ಮೊತ್ತದಲ್ಲಿ ಶ್ರೀಮಾನ್ ಆಲೂರರೇ ಎತ್ತಿಹೇಳಿದಂತೆ ಕಾಂಗ್ರೆಸ್ಸಿನಿಂದ ಆ ಕೆಲಸ ಸಾಕಷ್ಟು ಸಾಗಲಿಲ್ಲವೆಂತಲೆ ಕರ್ನಾಟಕ ಏಕೀಕರಣ ಪರಿಷತ್ತಿನ ಏರ್ಪಾಡಾಯಿತು. ಅಂದು ಅದು ಏರ್ಪಡುವಾಗಿನ ನೈಮಿತ್ತಿಕ ಕಾರಣಗಳು ಏನೇ ಇರಲಿ, ಮೂಲತಃ ಈ ಬಗೆಯ ಬೇರ್ಪಾಟವು ಒಂದಿಲ್ಲೊಂದು ದಿನ ಒದಗಲೆ ಬೇಕಿತ್ತು. ಅದು ಏಕೆಂಬುದನ್ನು ನೋಡೋಣ.

ತತ್ತ್ವದ ದೃಷ್ಟಿಯಿಂದ ಕಾಂಗ್ರೆಸ್ಸು ಭಾಷಾನುಗುಣ ಪ್ರಾಂತರಚನೆಯ ಆವಶ್ಯಕತೆಯನ್ನೂ, ಅದರೊಂದಿಗೆ ಬರುವ ಕರ್ನಾಟಕದ ಪುನರ್ಘಟನೆಯ— ಏಕೀಕರಣದ— ಪ್ರಶ್ನೆಯನ್ನೂ ಮಾನ್ಯ ಮಾಡಿ, ತನ್ನಮಟ್ಟಿಗೆ ಬಗೆಹರಿಸಿಬಿಟ್ಟಿದೆ. ಕಾಂಗ್ರೆಸ್ ಸಂಘಟನೆಯಲ್ಲಿ ಕರ್ನಾಟಕವನ್ನು ಒಂದು ಭಾಷಾಬಂಧದ ಅಖಂಡ ಪ್ರಾಂತವೆಂದು ಪರಿಗಣಿಸಲಾಗಿದೆ. ಆದುದರಿಂದ ಕೇವಲ ಕಾಂಗ್ರೆಸ್ ಶ್ರೇಷ್ಠಿಗಳನ್ನು ನಮ್ಮ ನಾಡಿನ ಏಳ್ಗೆಯ ಕುರಿತು ಎಚ್ಚರುಗೊಳಿಸಿ, ಬರಲಿರುವ ಸ್ವತಂತ್ರಭಾರತದ ರಾಜ್ಯಘಟನೆಯಲ್ಲಿ ನಮ್ಮ ಸ್ಥಾನ-ಮಾನಗಳನ್ನು ಅವರ ದೃಷ್ಟಿಯಲ್ಲಿ ಭದ್ರಗೊಳಿಸುವುದಿಷ್ಟೇ ನಮ್ಮ ವ್ಯಾವಹಾರಿಕ ಧ್ಯೇಯವಾಗಿದ್ದರೆ, ಅದು ೧೯೨೧ರಲ್ಲಿಯೇ ಸಿದ್ಧವಾಗಿದೆ. ಅರ್ಥಾತ್, ಕನ್ನಡದ ಸಂಘಟಕರು ಕಾಂಗ್ರೆಸ್ಸಿನ ವಿಚಾರಕ್ಷೇತ್ರದಲ್ಲಿ, ಮತ್ತು ಆ ಮುಖಾಂತರ ರಾಷ್ಟ್ರದ ಭಾಗ್ಯನಿರ್ಣಯದಲ್ಲಿ ತಮ್ಮ ಪ್ರತಿಪಾದನೆಯ ಪ್ರಭಾವವನ್ನು ಬೀರುವ ಪರಿಸ್ಥಿತಿಯು ಈಗ ಉಳಿದಿಲ್ಲ. ಏಕೆಂದರೆ ನಮ್ಮ ಅಖಂಡ ಪ್ರಾಂತೀಕರಣಕ್ಕೆ ಆ ಸಂಸ್ಥೆಯು ಬದ್ಧೀಕೃತವಾಗಿದೆ.

ಆದರೆ ಶ್ರೀ. ಆಲೂರರು ಇಡಬೇಕೆಂದು ಬಯಸುವ ಕಾಂಗ್ರೆಸ್ ಸಂಸ್ಥೆಯ ಸಂಬಂಧವು, ಇದಕ್ಕಿಂತ ಮುಂದಿನ ಮಿಗಿಲಾದ ಸಾಧನೆಗಾಗಿ. ಇಲ್ಲಿಯೇ ಮತಭೇದಕ್ಕೆ ಎಡೆಯಾಗುತ್ತದೆ, ಮತ್ತು ಈ ಭೇದವು ನಿರಾಧಾರವೂ ಅಲ್ಲ. ಪ್ರಾಂತಿಕ ರಾಷ್ಟ್ರೀಯ ಸಭೆಯನ್ನೇ ಏಕೀಕರಣ ಕಾರ್ಯಕ್ಕೆ ಹೂಡುವುದು ನನಗೆ ತಿಳಿದಮಟ್ಟಿಗೆ ಅಸಮಂಜಸವೂ, ಅವ್ಯವಹಾರ್ಯವೂ, ಅತಏವ ಅಯಶಸ್ಕರವೂ ಆಗಿದೆ. ಅದು ಹೇಗೆ?

ಕಾಂಗ್ರೆಸ್ ಕಾರ್ಯಪದ್ಧತಿ ಮತ್ತು ಪ್ರಾಂತೀಯ ಸಂಘಟನೆಯ ಕಾರ್ಯಪದ್ಧತಿ ಇವೆರಡೂ ಭಿನ್ನವಿವೆ. ಇನ್ನು ಅವು ಹೀಗೆ ಭಿನ್ನವಿರಲೇ ಬೇಕೋ?— ಎಂಬ ಪ್ರಶ್ನೆ ಈಗಿಲ್ಲ. ಇದ್ದ

ಪರಿಸ್ಥಿತಿಯಲ್ಲಿ— ಈಗಿನ ರಾಷ್ಟ್ರೀಯ ಸಂಸ್ಥೆಯ ಕಾರ್ಯ-ವ್ಯವಸ್ಥಿತಿಯಲ್ಲಿ, ಈ ಕಾರ್ಯಪದ್ಧತಿಯ ಭೇದವು ಅಪರಿಹಾರ್ಯವಿದೆ. ಸ್ಥೂಲವಾಗಿ ನೋಡಿದರೂ ಈ ಮಾತು ಮನದಟ್ಟಾಗುವುದು.

ರಾಷ್ಟ್ರೀಯ ಸಂಸ್ಥೆಯ ಚಟುವಟಿಕೆಗಳು ಒಂದು ವಿಶಾಲವಾದ ಉಪಖಂಡದ ವ್ಯಾಪಕ ಸಾಧನೆಯ ದೃಷ್ಟಿಯಿಂದ ನಡೆಯುವಂತಹವು. ಆ ಸಂಸ್ಥೆಯ ಧುರೀಣರ ಕಾರ್ಯತಂತ್ರವು ದೇಶದ ವಿಭಿನ್ನ ವೈಶಿಷ್ಟ್ಯಗಳನ್ನು ಒತ್ತಿನೋಡುವುದಕ್ಕಿಂತ, ಅಖಿಲ ಹಿಂದೀ ಜನಾಂಗದ ಸರ್ವಸಮ್ಮತ— ಸರ್ವಸಾಧಾರಣವಾದ— ಬೇಡಿಕೆಗಳನ್ನೇ ಎತ್ತಿಹಿಡಿದು, ಏಕಮುಖಿಯಾದ ಚಳವಳಿಯ ಪಾತಳಿಯಮೇಲೆ ರಾಷ್ಟ್ರೀಯ ಐಕ್ಯದ ರಂಗವನ್ನು ಅಣಿಗೊಳಿಸುವ ನಿಟ್ಟಿನಲ್ಲಿ ಸಾಗುತ್ತದೆ. ಪರಕೀಯ ಶಾಸನಕರ್ತರಿಂದ ಸತ್ತೆಯ ಸಂಕ್ರಮಣವನ್ನಾಗಲಿ ಆಕ್ರಮಣವನ್ನಾಗಲಿ ಮಾಡಿಕೊಳ್ಳಲಿಕ್ಕೆ ಅವಶ್ಯವಾದ ಶಕ್ತಿಯನ್ನು— ಅದೊಂದೇ ತಾತ್ಕಾಲಿಕ ಧ್ಯೇಯವನ್ನು ಕಣ್ಣಿದುರಿಗಿಟ್ಟು— ಕೇಂದ್ರೀಕರಿಸುವುದು ಅವರ ಅವ್ಯಾಹತ ಹಂಬಲವಾಗಿದೆ. "ಪರತಂತ್ರ ರಾಷ್ಟ್ರಕ್ಕೆ ಸ್ವಾತಂತ್ರ್ಯ ಒಂದೇ ಮೊತ್ತದ ರಾಜಕಾರಣ!" ಎಂಬುದು ಅವರ ಕಾರ್ಯದ ಸೂತ್ರ. ಇದು ಒಂದು ಬಗೆಯಾಗಿ ಯುದ್ಧಕಾರಣ; ಬರೇ ರಾಜಕಾರಣವಲ್ಲ. ಆದರೆ ಪ್ರಾಂತೀಯ ಸಂಘಟನೆ, ಭಾಷಾನುಗುಣ ಸಾಂಸ್ಕೃತಿಕ ಸಂಘಟನೆ ಈ ಧ್ಯೇಯವು ಶಾಂತಿಕಾರಣದ ಚಟುವಟಿಕೆಗಳ ಗುರಿ. ಅಖಿಲ ಭಾರತೀಯ ಏಕಮುಖ ಆಂದೋಲನದ ದೃಷ್ಟಿಯಿಂದ ಇದು ವಿಘಟಕವಾದ— ಪ್ರಾಂತವಿಶೇಷಗಳ ವೈಶಿಷ್ಟ್ಯಗಳನ್ನು ಒತ್ತುವ, ವಿಭಿನ್ನ ಸಂಸ್ಕೃತಿಗಳನ್ನು ವಿಂಗಡವಾಗಿ ಎತ್ತಿಹಿಡಿದು ಏಳ್ಗೆಗೆ ತರಲು ಹೆಣಗುವ, ಬಹುಮುಖವಾದ ಆಂದೋಲನದ ಪ್ರವೃತ್ತಿಯು.

ನಮ್ಮ ಭಾರತೀಯ ಭಾಗ್ಯೋದಯಕ್ಕೆ ಇವೆರಡೂ ಆಂದೋಲನಗಳೂ ಅಗತ್ಯವಿವೆ; ಇಷ್ಟೇ ಅಲ್ಲ, ಇವೆರಡೂ ಒಮ್ಮೆಯೇ ಸಮಾಂತರವಾಗಿ ಒದಗುವುದೂ ಅಗತ್ಯವಿದೆ. ಇಂಥಲ್ಲಿ ಇವೆರಡೂ ಆಂದೋಲನಗಳು ಒಂದೇ ಸಂಸ್ಥೆಯ ಮುಖಾಂತರ ಸಾಗುವ ಬಗೆಯೆಂತು? ಈ ಸಂದರ್ಭದಲ್ಲಿ ಚಿಯಾಂಗ್-ಕೈ-ಶೇಕರ ಉಕ್ತಿಯೊಂದು ನೆನಪಾಗುತ್ತದೆ: "ನಾವು ಯುದ್ಧದಲ್ಲಿ ತೊಡಗಿದ್ದಾಗ ಶಾಂತಿಯ ಕುರಿತು ಸಿದ್ಧತೆ ನಡೆಸಬೇಕು; ಶಾಂತಿಯಲ್ಲಿದ್ದಾಗ ಯುದ್ಧದ ಕುರಿತು ಸಿದ್ಧತೆ ನಡೆಸಬೇಕು!" ಇವೆರಡೂ ಸಿದ್ಧತೆಗಳು ಸರಿಯಾಗಿ ಸಮಕಟ್ಟಾಗಿ ನಡೆಯಬೇಕಾದರೆ, ಅವುಗಳಿಗಾಗಿ ಪ್ರತ್ಯೇಕ ಕಾರ್ಯಯಂತ್ರವು ಉಂಟಾಗಬೇಕು. ರಾಜಕೀಯ ಸ್ವಾತಂತ್ರ್ಯದ ಧ್ಯೇಯವು ಸಿದ್ಧವಾಗುವ ಸಂಧಿಗೆ ಸರಿಯಾಗಿ, ನಮ್ಮ ಪ್ರಾಂತೀಯ ಸಂಸ್ಕೃತಿಯ ಏಕತಂತ್ರದ ಸಾಧನೆಯೂ ಪಾಕಕ್ಕೆ ಬರಬೇಕಾಗಿದೆ. ದೇವಾಲಯದ ಕೆಲಸ ಒಂದೆಡೆಗೆ ಸಾಗಿದಾಗಲೆ ದೇವರ ಬೇರೆ ಬೇರೆ ಮೂರ್ತಿಗಳನ್ನು ಕಡೆದು ಕೊರೆಯುವ ಕೈಗಾರಿಕೆಯೂ ಇನ್ನೊಂದೆಡೆಗೆ ಸಾಗುವುದಿಲ್ಲವೇ? ಹಾಗೆಯೇ! ಆದುದರಿಂದ ರಾಷ್ಟ್ರೀಯ ಸಂಸ್ಥೆಯ ಕಾರ್ಯದೊಂದಿಗೆ, ಪ್ರಾಂತೀಯ ಸಂಘಟನೆಯ ಕಾರ್ಯವನ್ನೂ ಕಟ್ಟಲು ಬರುವಂತಿಲ್ಲ; ಕಟ್ಟುವುದು ಶರವೂ ಅಲ್ಲ.

ಕೆಲವೊಂದು ಕಾರಣಗಳ ಮೂಲಕ ರಾಷ್ಟ್ರೀಯ ಸಂಸ್ಥೆಯ ಕಾರ್ಯವು ಮೇಲಿಂದ ಕೆಳಮುಖವಾಗಿ ಸಾಗುತ್ತದೆ. ವರ್ಕಿಂಗ್ ಕಮಿಟಿಯ ಆದೇಶ-ಆಜ್ಞೆಗಳನ್ನೂ ಸಂದೇಶ-ಸಂಜ್ಞೆಗಳನ್ನೂ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಚಾರಗೊಳಿಸಿ ಕಾರ್ಯರೂಪಕ್ಕೆ ತರುವ ಮಟ್ಟಿಗೇ, ಸದ್ಯಕ್ಕೆ ಪ್ರಾಂತೀಯ ಸಂಸ್ಥೆಗಳ ಕರ್ತವ್ಯವಾಗಿದೆ. ಇನ್ನು ಇಂತಹ ಪರಿಸ್ಥಿತಿಯಲ್ಲಿಯೂ ಕೆಲಮಟ್ಟಿಗೆ ನಮ್ಮ ಪ್ರಾಂತೀಯ ಸಮಸ್ಯೆಗಳನ್ನು ಭಾರತೀಯ ಸ್ವರೂಪದ ಸಾಧನೆಗಳೊಂದಿಗೆ ಹೊಂದಿಸಿಕೊಳ್ಳಲು ಬರುವಂತಿತ್ತು. ಆದರೆ ಅದಕ್ಕೆ ಮೊದಲು, ರಾಷ್ಟ್ರೀಯ ಸಂಸ್ಥೆಯ ಸತ್ತಾಕೇಂದ್ರದಲ್ಲಿ ನಮ್ಮ ಪ್ರಾಂತಿಕ ಮುಖಂಡರ ಪ್ರಭಾವವಿರಬೇಕು. ವಲ್ಲಭಭಾಯಿಯವರು ಗುಜರಾತದ ಹಿತವನ್ನು, ಭಾರತೀಯ ಆಂದೋಲನದೊಂದಿಗೇ ಸಾಧಿಸಲು ಬಲ್ಲರು. ಜವಾಹಿರಲಾಲರು ತಮ್ಮ ಪ್ರಾಂತದ ಗೌರವ-ಮಹತ್ವಗಳನ್ನು ತಮ್ಮ ಮುಖಾಂತರ ಬೆಳೆಯಿಸಲು ಸಮರ್ಥರು. ರಾಜಾಜಿಯವರು, ಪಟ್ಟಾಭಿಯವರು, ರಾಷ್ಟ್ರೀಯ ನಾಯಕತ್ವದ ವರಿಷ್ಠ ಮಂಡಲದಲ್ಲಿಯ ತಮ್ಮ ಪತ್ತಿನೊಂದಿಗೆ ತಮ್ಮ ಪ್ರಾಂತೀಯ ರಾಜಕಾರಣಕ್ಕೂ ಮಹತ್ತ್ವವನ್ನು ತಂದುಕೊಡಲು ಶಕ್ತರು. ಆದರೆ ಈ ಭಾಗ್ಯ ನಮ್ಮ ಪ್ರಾಂತದ ಮುಂದಾಳುತನಕ್ಕೆ ಇದೆಯೆ? ನಮ್ಮ ನಾಯಕರೂ, ಅವರನ್ನು ನಂಬಿ ನಾಡಿನವರೂ, ಬರೇ ವರಿಷ್ಠರನ್ನು ಹಿಂಬಾಲಿಸುವ ಏಕನಿಷ್ಠ ಕಾರ್ಯಕರ್ತರು. "ಹಿಂಬಾಲ" ಕ್ಕೆ ಆಚಾರ-ವಿಚಾರಗಳ ಸ್ವಾತಂತ್ರ್ಯವೆಲ್ಲಿ?

ಅಖಿಲಭಾರತದ ರಾಷ್ಟ್ರೀಯ ಕಾರ್ಯರಂಗದಲ್ಲಿ ಗಣ್ಯನಾಗುವಂತಹ ವ್ಯಕ್ತಿತ್ವವನ್ನು ಪಡೆಯುವ ಪುಣ್ಯ ನಮ್ಮ ನಾಯಕರಿಗೆ ಬರುವತನಕವೂ ಕಾಂಗ್ರೆಸಿನ ನೆರಳಿಯಲ್ಲಿ ನಮ್ಮ ಪ್ರಾಂತಕ್ಕೆ ಬಣ್ಣದ ಕಳೆ ಬರಲಾರದು. ಅಂತಹ ವ್ಯಕ್ತಿತ್ವ ಬಂದಾಗ ಕೂಡ, ಪ್ರಾಂತೀಯ ಸಮಸ್ಯೆಗಳನ್ನು ಬಿಡಿಸಲು ಅದರಿಂದ ವ್ಯಾವಹಾರಿಕ ಲಾಭವೇನೂ ಆಗಲಾರದು. ಹೊರಗಿನ ಪ್ರತಿಷ್ಠೆಯನ್ನು ನಮ್ಮ ಪಾಲಿಗೆ ಬಂದೀತು. ಏಕೆಂದರೆ ಕಾಂಗ್ರೆಸ್ ರಾಜಕಾರಣದಲ್ಲಿ ನೆನಪಿಡತಕ್ಕ ಸಂಗತಿಯೆಂದರೆ, ಮಹಾತ್ಮರ ಪ್ರಭಾವಲಯದಲ್ಲಿ ಬೆಳಗುವ ಭಾಗ್ಯವಿರುವತನಕವೇ ಪ್ರಾಂತೀಯ ಧುರೀಣರಿಗೆ ಭಾರತೀಯ ಪ್ರತಿಷ್ಠೆ ಲಭಿಸುವುದು. ರಾಷ್ಟ್ರೀಯ ಸಭೆಯ ಕಾರ್ಯವ್ಯಾಪ್ತಿಯು ಒಂದು ಕಂಬದ ಡೇರೆಯಂತೆ ಈ ಪರಿಸ್ಥಿತಿಯು ಇರುವನಕ ಪ್ರಾಂತೀಯ ಸಂಘಟನೆಯ ಕಾರ್ಯವು ರಾಷ್ಟ್ರೀಯ ಸಂಸ್ಥೆಯ ಶಾಖಾ-ಸಂಸ್ಥೆಗಳಿಂದ ಸಾಗಬಹುದೆಂಬ ಆಶೆಯು ಹುಸಿಯಾದುದು.

ಪ್ರಾಂತೀಯ ಸಂಘಟನೆಯಲ್ಲಿ ಎಲ್ಲ **ಉಪಕ್ರಮದ ಅಧಿಕಾರವು** (Initiative) **ಜನತೆಯ ಕೈಯಲ್ಲಿ ಇರಬೇಕಾಗುತ್ತದೆ.** ಜನಾಂಗದ ನಾಡು-ನುಡಿಗಳ ಸಂಘಟನೆಯ ತಂತ್ರವು ಜನತೆಯನ್ನು ಬಿಟ್ಟು ನಡೆಯಲಾರದು. ಹಳ್ಳಿ-ಪಟ್ಟಣಗಳ ಶಾಲೆ-ಸಂಸ್ಥೆಗಳ, **ಮನೆ-ಮಠಗಳ** ನಡೆನುಡಿಗಳಿಂದ ಸಂಸ್ಕೃತಿಯು— ಸಾಮಾಜಿಕ ಜೀವನದ ನೆಲೆಯು— ಬಲಗೊಂಡು ಬೆಳೆಯಬೇಕಾಗುತ್ತದೆ. ಹೀಗೆ ಸರ್ವತೋಮುಖಿಯಾಗಿ ಕಾರ್ಯಮಾಡುವ ಶಕ್ತಿಯು **ಕೆಳಗಿನ ಸ್ಥರಗಳಿಂದ ನೆಗೆದು ಬರಬೇಕಾಗುತ್ತದೆ. ಉದ್ಧಾರದ** ಕಲ್ಪನೆಯ ಪರಾವಲಂಬಿತನವು ಇಲ್ಲಿ ಬೇಕಾಗಿಲ್ಲ. ‘ **ಉದಯ** ’ ದ ಕಲ್ಪನೆಯ ಸ್ವಾವಲಂಬನೆಯ ಸಾಧನೆಯೇ ನಮ್ಮ ನಾಡಿನ ಸಂಘಟನೆಯ ದಾರಿಯಾಗಿದೆ. ಕನ್ನಡ ಸಂಘಟನೆಯು ಶ್ರೀ. ಆಲೂರರು ಹೇಳುವಂತೆ ಸಾಂಸ್ಕೃತಿಕ ಸಂಘಟನೆ. ಅದರ ರಾಜಕಾರಣವು ಒಂದು ಆಗಂತುಕ ಅಂಗ. **ಎಲ್ಲ ರಾಜಕಾರಣವೂ ಸಾಮಾಜಿಕ ಕಾರ್ಯತಂತ್ರದ ಒಂದು ಉಪಾಂಗವು** (Politics only a branch of social scienec). ಆದ್ದರಿಂದ ನಮ್ಮ ಚಟುವಟಿಕೆಗಳಿಗೆ ಪ್ರಾಮುಖ್ಯವಾಗಿ ಸಾಮಾಜಿಕ ಆಶಯವಿರಬೇಕು. ಇದಕ್ಕಾಗಿ **ನಮ್ಮ ಚಳವಳಿಯು ಕನ್ನಡಿಗರ ಜೀವನದ ಎಲ್ಲ ಬದಿಗಳನ್ನು ಮುಟ್ಟಬೇಕು.** ನಮ್ಮ ಕಾರ್ಯಪದ್ಧತಿಯನ್ನು ಕಾಂಗ್ರೆಸ್ ಪದ್ಧತಿಯಲ್ಲಿ ನಡೆಯಿಸಿ ಉಪಯೋಗವಿಲ್ಲ. ನಮ್ಮದು ಮುಂದಾಳುಗಳನ್ನು ಮುಂದೆ ತರುವ ಕಾರ್ಯವಲ್ಲ. ಎಲ್ಲರನ್ನೂ **ಕೂಡಿ ಕಟ್ಟಿ,**ಹಿಂದು-ಮುಂದೆಂಬ ಭೇದವಿಲ್ಲದೆ ಒಂದು **ಸಾಮುದಾಯಿಕ ಜಾಗೃತಿಯನ್ನು** ಉಂಟುಮಾಡುವ ಕಾರ್ಯ. ನಮ್ಮ ಪದ್ಧತಿಯು ಕೆಲಮಟ್ಟಿಗೆ ಸಾಮ್ಯವಾದೀ ಆಂದೋಲನದ **ತಂತ್ರವನ್ನು** ಅನುಸರಿಸಬೇಕು. ಕನ್ನಡ ಜೀವನದ ವಿವಿಧ “ ರಂಗ (Front)” ಗಳನ್ನು ಕಲ್ಪಿಸಿ, ಅವೆಲ್ಲವುಗಳಲ್ಲಿ ಹೆಣಗುವ ಹುರಿಯಾಳುಗಳ, **ತಜ್ಞ ಕಾರ್ಯಕರ್ತರ ಪಡೆಯನ್ನು ಮೊದಲು ಕಟ್ಟಬೇಕಾಗಿದೆ.** ಈ ಪಡೆಯ “ ಕನ್ನಡ ಸೈನಿಕ ” ರು ಪ್ರತಿಯೊಂದು ಹಳ್ಳಿಗೆ ಹೋಗಿ,ತಮ್ಮದೊಂದು ಕಾರ್ಯಶಕ್ತಿಯ “ ಅಣಿಕೋಶ ” ವನ್ನೇ ಉಂಟುಮಾಡಬೇಕು. ಇವೆಲ್ಲ, ದೈನಂದಿನ ದುಡಿತದ ವಿವರವಾದ ವಿವಿಧವಾದ ಕೆಲಸ. ಕನ್ನಡಿಗರ ದೈನಿಕ ದುಃಖ-ದುಗುಡಗಳಲ್ಲಿ ಕನ್ನಡ ಕಾರ್ಯಕರ್ತನು ತನ್ನ ಅಮೂಲ್ಯ ಸೇವೆಯನ್ನು ಸಲ್ಲಿಸಿದರೆ, ಕನ್ನಡಿಗರ ವ್ಯಾಪಕ ಋಣಾನುಬಂಧದ ಅಭೇದ್ಯವಾದ ಅಖಂಡವಾದ ಶಕ್ತಿಯನ್ನು ನಿಲ್ಲಿಸಬಹುದು.

ಇವೆಲ್ಲ ಕಾರ್ಯ ಪ್ರಾಂತಿಕ ಕಾಂಗ್ರೆಸ್ಸಿನಿಂದ ಸಾಧ್ಯವಿಲ್ಲ. **ದ್ವಿಧಾನಿಷ್ಠೆ** (Divided loyalties)**ಯು ಉಭಯರಿಗೂ ಅಪಕಾರಿಯಾದದ್ದು.** ಸ್ವತಃ ಕಾಂಗ್ರೆಸ್ಸೇ ಅನನ್ಯವಾಗಿ ತನ್ನ ರಾಜಕೀಯ ಚಟುವಟಿಕೆಗಳನ್ನು ಸಾಗಿಸುತ್ತಿಲ್ಲ. ಭಾರತದ ಆರ್ಥಿಕ ಸಾಮಾಜಿಕ ಅಭ್ಯುದಯಕ್ಕೆಂದು ಪ್ರಚಂಡವಾದ ಪ್ರತ್ಯೇಕವಾದ ಸಂಸ್ಥೆಗಳು ಏರ್ಪಟ್ಟಿದ್ದರೂ, ಅವುಗಳ ಪ್ರಚಾರದ ಕಲಸು-ಮೇಲೋಗರವನ್ನೇ ಕಾಂಗ್ರೆಸ್ಸು ತನ್ನ ವಿಧಾಯಕ ಕೆಲಸವನ್ನಾಗಿ ಮಾಡಿಕೊಂಡಿದೆ. ಭಾರತೀಯ ಚರಖಾಸಂಘದ ಖಾದೀಪ್ರಚಾರ, ಭಾರತೀಯ ಹರಿಜನ ಸೇವಕ ಸಂಘದ ಅಸ್ಪೃಶ್ಯತಾ ನಿವಾರಣದ ಪ್ರಚಾರ, ರಾಷ್ಟ್ರಭಾಷಾ ಸಮಿತಿಯ ಹಿಂದೀ ಪ್ರಚಾರ, ಭಾರತೀಯ ಗ್ರಾಮೋದ್ಯೋಗ ಸಂಘದ ವೃತ್ತಿ-ವ್ಯವಸಾಯಗಳ ಪ್ರಚಾರ, ಗಾಂಧೀ ಸೇವಾಸಂಘದ ಅಹಿಂಸಾ-ಆಧ್ಯಾತ್ಮ ಪ್ರಚಾರ, ಇವೆಲ್ಲ ಕಾರ್ಯಗಳನ್ನು ಕಲೆಸಿ-ಕೂಡಿಸಿ, ಕಾಂಗ್ರೆಸ್ ಕಾರ್ಯಕರ್ತನ ಕರ್ತವ್ಯದ ವರದಿ ಸಿದ್ಧವಾಗುತ್ತದೆ! ಈ ನಡುವೆ ನಮ್ಮ ಕನ್ನಡ ಪ್ರಚಾರವನ್ನೂ ಆ ಕಲಸನ್ನದ ಬುತ್ತಿಯಲ್ಲಿ ಕಟ್ಟಿಕೊಟ್ಟರೆ ಬೇರೆ ಕೇಳುವುದಿದೆಯೇ ?

ತಾತ್ಪರ್ಯ, ಕನ್ನಡದ ಏಕೀಕರಣದ ಕಾರ್ಯವನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಒಪ್ಪಿಸುವುದು ಅವ್ಯವಹಾರ್ಯವು. ಇದರಿಂದ ಹಲವೊಮ್ಮೆ ಕಾಂಗ್ರೆಸ್ ಕಾರ್ಯಕರ್ತರಿಗೂ ಅಸಡ್ಡಾಳವೆನಿಸುವ ಪೇಚು ಬರುತ್ತದೆ. ಒಂದೇ ಪಾತಳಿಯ ಮೇಲೆ, ಒಂದೇ ನಿಟ್ಟಿನಲ್ಲಿ ಸಾಗುವ ಸಮಾಂತರ ಕಾರ್ಯಗಳಿಗೆ ಕೂಡ ಬೇರೆ ಬೇರೆ ಚಾಲನೆ-ಚಾಲಕರು ಬೇಕಾಗುವಾಗ, ಭಿನ್ನ ಪಾತಳಿಯಲ್ಲಿ, ಕೆಲವೊಮ್ಮೆ ವಿಸಂಗತ ವಿರುದ್ಧವಾಗುವಂತ ಬಗೆಯಲ್ಲಿ ಕೆಲಸ ಮಾಡುವ ಚಳವಳಿಗಳನ್ನು, ಒಂದೇ ಸಂಸ್ಥೆಗೆ ಒಪ್ಪಿಸುವುದರಲ್ಲಿ ಯಾವ ಸಮಂಜಸತನವೂ ಉಳಿಯಲಾರದು. ಕಾರ್ಯಕ್ಷಮತೆಯು ಶ್ರಮವಿಭಾಗದ ಪರಿಣಾಮವಾಗಿರುತ್ತದೆ. ಅದಕ್ಕೆ ಸಮಾಂತರ ಸಂಸ್ಥೆಗಳೇ ಬೇಕು.

ಇನ್ನೊಂದು ದೃಷ್ಟಿಯಿಂದಲೂ ಕಾಂಗ್ರೆಸ್ ಸಂಸ್ಥೆಯೊಂದಿಗೆ ಕರ್ನಾಟಕ ಏಕೀಕರಣದ ರಾಜಕಾರಣವನ್ನು ಗಂಟುಹಾಕುವುದು ಅಸಮಂಜಸವಾಗುವುದು. ಮೊತ್ತದಲ್ಲಿ ಬ್ರಹ್ಮನಿಂದಲೇ ಸೃಷ್ಟಿ-ಪ್ರಪಂಚವು ಹುಟ್ಟಿ ಬಂದಂತೆ, ನಮ್ಮ ಭಾರತದ ಎಲ್ಲ ಬಗೆಯ ಸಾಮುದಾಯಿಕ ಚಳುವಳಿಗೆ ರಾಷ್ಟ್ರೀಯ ಆಂದೋಲನದಿಂದಲೇ ಸ್ಫೂರ್ತಿ ಸಿಕ್ಕಿದ್ದು ನಿರ್ವಿವಾದ. ಆದರೆ ಈಗ ಪರಿಸ್ಥಿತಿಯು ಅಷ್ಟು ಸರಳವಾಗಿಲ್ಲ. ದೇಶದ ರಾಜಕಾರಣವು ಎಷ್ಟೋ ದೂರ— ಅಡ್ಡತಿಟ್ಟಾಗಿ— ಸರಿದು ಬಂದಿದೆ. ೧೯೩೦ ರಲ್ಲಿ ಇಲ್ಲವೆ

೫೧ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರಗಡ್ಡೆಯ ಗುಳಿಗೆ

ಬಾಟ್ಲಿಗೆ ೧ ರೂ. ೪ ಆಣೆ.

ಎಂತಹ ಜ್ವರಗಡ್ಡೆಯನ್ನೂ ಕಳೆಯುವದು.

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,

ಗಿರಗಾಂವ, ಮುಂಬಯಿ.

೧೯೨೦ ರಲ್ಲಿಯು ಕಾಂಗ್ರೆಸ್ ಕಾರ್ಯದ ಭೂಮಿಕೆಯು—ತತ್ತ್ವತಃ ಹೇಗೂ ಇದ್ದರೂ—ವ್ಯವಹಾರದಲ್ಲಿ ಒಂದೇ ಬಗೆಯಾಗಿ ಈಗ ಉಳಿದಿಲ್ಲ. ಅಂದು ಅದು ಸರ್ವವನ್ನೂ ಸಮನ್ವಯಿಸುವ ಅಖಿಲ ಭಾರತೀಯ ಜನಾಂಗಗಳ ಸಮಾನವಾದ ಪೀಠವಾಗಿತ್ತು. ಭಾರತೀಯ ಸ್ವಾತಂತ್ರ್ಯದ ಧ್ಯೇಯವನ್ನು ಒಪ್ಪುವ ಎಲ್ಲ ಪಕ್ಷ-ಸಂಘಟನಗಳೂ ಅದರ ವೇದಿಕೆಗೆ ತಮ್ಮ ತ್ಯಾಗದ ಕಾಣಿಕೆಯನ್ನು ಸೇರಬಹುದಾಗಿತ್ತು. ಆದರೆ ೧೯೩೭ ನೆಯ ವರ್ಷದಿಂದ—ಹೊಸ ಪ್ರಾಂತಿಕ ಸ್ವಾಯತ್ತತೆಯನ್ನು ಕಾರ್ಯಕಾರಿಯಾಗಿ ಮಾಡುವ ಸಂದರ್ಭದಿಂದ—ಕಾಂಗ್ರೆಸ್ಸು ವ್ಯಾಪಕ ಸರ್ವಪಕ್ಷಗಳ ವ್ಯಾಸ-**ಪೀಠವನ್ನು ಕಳೆದುಕೊಂಡು**, ರಾಜಕೀಯ ಸತ್ತೆಗಾಗಿ ಇತರ ಪಕ್ಷಗಳೊಡನೆ ಸೆಣಸಾಟಕ್ಕೆ ನಿಲ್ಲುವ ಒಂದು **ಪಕ್ಷವಾಯಿತು.** ಅರ್ಥಾತ್ ಹಿಂದೂ ಮಹಾಸಭೆ, ಮುಸ್ಲಿಮ್ ಲೀಗ ಮುಂತಾದುವುಗಳೊಂದಿಗೆ ವಿರೋಧ-ವಿವಾದಗಳಿಗೆ ಎಡೆಯಾಯಿತು; ಈರ್ಷೆ-ಸ್ಪರ್ಧೆಗಳಿಗೆ ಇಂಬಾಯಿತು. ಈಗಿನ ಸಂದರ್ಭದಲ್ಲಿ ರಾಜಕೀಯ ವಾತಾವರಣವು ಇಷ್ಟೊಂದು ಜಟಿಲವಾಗಿದೆ: ಮಿಕ್ಕ ಪ್ರಾಂತಗಳಂತೆ ಕರ್ನಾಟಕದಲ್ಲಿಯೂ ಮೇಲೆ ಹೇಳಿದಂತಹ ಮಹಾಸಂಸ್ಥೆಗಳ ಅನುಯಾಯಿಗಳೂ ಶಾಖಾ-ಸಂಸ್ಥೆಗಳೂ ಇವೆ. ಇಲ್ಲಿ ಯಾವುದೇ ಪಕ್ಷದ ಹೇತು, ಹಿತ-ವಾದಗಳನ್ನು ಶಂಕಿಸಬೇಕಾಗಿಲ್ಲ. ಆದರೆ ಪರಸ್ಪರ ತೀವ್ರ ಮತಭೇದವಿರುವ ರಾಜಕೀಯ ಪಕ್ಷಗಳಲ್ಲಿ ಒಂದನ್ನು ಅವ-ಲಂಬಿಸುವುದರಿಂದ, ನಮ್ಮ ಕನ್ನಡ ಸಂಘಟನೆಯ ಕಾರ್ಯವು ಮಿಕ್ಕವರ ಅನುಯಾಯಿಗಳಾದ ಕನ್ನಡಿಗರನ್ನು ಕಳೆದುಕೊಳ್ಳ-ಬೇಕಾಗುವುದಿಲ್ಲವೇ? ಒಂದು ವಿಷಯ ನಮಗೆ ಅತ್ಯಂತ ಮಹ-ತ್ತ್ವದ್ದು, ಅದೇನೆಂದರೆ: ಕನ್ನಡ ಸಂಘಟನೆಯು—**ಕರ್ನಾ-ಟಕ** ಏಕೀಕರಣದ ಪ್ರಶ್ನೆಯು— ಎಂದೆಂದಿಗೂ **ಪಕ್ಷಾತೀ-ತವಾಗಿರಬೇಕು.** ಎಲ್ಲ ಕನ್ನಡಿಗರೂ—ಹಿಂದೂ **ವಾದಿಗಳಿ-ರಲಿ, ಮುಸ್ಲೀಮರಿರಲಿ, ಸಾಮ್ಯವಾದಿಗಳಿರಲಿ, ಗಾಂಧೀವಾದಿ-ಗಳಿರಲಿ,—ಕನ್ನಡಕ್ಕಾಗಿ** ಹೆಣಗಬೇಕು. ಕನ್ನಡ ಜನಾಂಗವು ತನ್ನ ಮನೆ ತಾನು ಕಟ್ಟಿಕೊಂಡು ಬಾಳುವುದು ನ್ಯಾಯವು. ಭಾರತೀಯ ಸ್ವಾತಂತ್ರ್ಯದ ಕೋಟೆಯಲ್ಲಿ ಕನ್ನಡನಾಡಿನ-ದೊಂದು ಬೇರೆಯಾದ ಭದ್ರವಾದ ಕೊತ್ತಳವು ನೆಲಸಿರಬೇಕು. ಈ ತತ್ತ್ವವು ಸರ್ವಮಾನ್ಯ ಸಾರ್ವಭೌಮವಾಗಿರಬೇಕು. ಇಂಥಲ್ಲಿ—ಈಗಂತೂ ಕಾಂಗ್ರೆಸ್ಸು "ಸ್ವಯಂನಿರ್ಣಯ" ವನ್ನೇ ಮಾನ್ಯಮಾಡಲು ಸಂದಿಗ್ಧ ಮನಸ್ಥಿತಿಯನ್ನು ತೋರಿಸುವ ಪ್ರಸಂಗದಲ್ಲಿ—ಅದರ ಆಧಾರ-ಅಲಂಬನವು ಕನ್ನಡ ಸಂಘಟನೆಗೆ ಎಷ್ಟೊಂದು ಸಹಕಾರಿಯಾದೀತು?

'**ಕರ್ನಾಟಕ**' ದ ಬದಲು '**ಕನ್ನಡ**' ಎಂದು ವಿಶೇಷಣ-ವಿಟ್ಟ ಮಾತ್ರಕ್ಕೆ ತುಳು ಬಾಂಧವರಿಗೆ ಮನಸ್ತಾಪವಾಯಿತೆಂದು ಕಳವಳ ಪಡುವಾಗ, ನಾವು ಕಾಂಗ್ರೆಸ್ ಸಂಸ್ಥೆಯನ್ನು ನಮ್ಮ ಆಧಾರ-ಆಯುಧವನ್ನಾಗಿಟ್ಟುಕೊಂಡರೆ, ಇತರ ಪಕ್ಷಗಳ ಕನ್ನಡಿ-ಗರ ಮನಃಸ್ಥಿತಿ ಏನಾದೀತೆಂದು ಗಮನಿಸುವುದು ಬೇಡವೇ? ರಾಷ್ಟ್ರೀಯ ಸ್ವಯಂಸೇವಕರ ಸಂಘವು ಹಿಂದೂ ಮಹಾ-ಸಭೆಯನ್ನು ಕಟ್ಟಿಕೊಂಡುದನ್ನು ನಾವು ಕಂಡಿಲ್ಲವೇ?

ಶ್ರೀ. ಆಲೂರ ವೆಂಕಟರಾಯರ ಸ್ಪಷ್ಟೀಕರಣ

ಶ್ರೀ. ಕಾಯಕಿಣಿಯವರ ಲೇಖನ ಓದಿದೆ. ಅವರಿಗೂ ನನಗೂ ಮುಖ್ಯಾಂಶಗಳಲ್ಲಿ ವಿಶೇಷ ಮತಭೇದವಿಲ್ಲ. ಆದಕಾರಣ ಈ ನನ್ನ ಸ್ಪಷ್ಟೀಕರಣವೇ ಸಾಕು:

೧. ಗಡಿನಾಡುಗಳಲ್ಲಿ ಭಾಷಾಭಿಮಾನ ಮತ್ತು ಪ್ರಾಂತಾಭಿ-ಮಾನ ಹುಟ್ಟಿಸುವುದೇ ಮುಖ್ಯ ಕಾರ್ಯ. ಭಾಷಾಭಿಮಾನ ಹುಟ್ಟಿಸುವುದು ಸಾಂಸ್ಕೃತಿಕ ಚಳವಳಿಗೆ ಸೇರಿದ್ದು; ಪ್ರಾಂತಾ-ಭಿಮಾನ ಹುಟ್ಟಿಸುವುದು ರಾಜಕೀಯ ಚಳವಳಿಗೆ ಸೇರಿದ್ದು.

೨. ಪರಿಷತ್ತು ಸಾಂಸ್ಕೃತಿಕ ಚಳವಳಿಯ ಈಗಿನ ಮುಖ್ಯ ಪ್ರತಿನಿಧಿ. ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ರಾಜಕೀಯ ಚಳ-ವಳಿಯ ಮುಖ್ಯ ಪ್ರತಿನಿಧಿ. ಕರ್ನಾಟಕದಲ್ಲಿ ಬೇರೆ ಯಾವ ಪ್ರಬಲ ಸಂಘಟವೂ ಈಗ ಇರುವುದಿಲ್ಲ. ಈ ಸಂಬಂಧದ ಮಿಕ್ಕೆರಡು ಸಂಸ್ಥೆಗಳು ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾ-ಟಕ ಏಕೀಕರಣ ಸಂಘ. ವಿದ್ಯಾವರ್ಧಕ ಸಂಘವು ಇಷ್ಟು ದಿವಸ ಸಾಲದಲ್ಲಿ ಮುಳುಗಿತ್ತು. ಏಕೀಕರಣ ಸಂಘವು ಪಕ್ಷಾ-ತೀತವಾಗಿಯೆ ಹೊರಟಿದೆ. ಆದರೆ ಇನ್ನೂ ನಿರ್ಜೀವವಾಗಿಯೇ ಇದೆ. ಇತಿಹಾಸ ಮಂಡಲ, ಪಣಿಕ್-ಮಂಡಲ ಮುಂತಾದುವು ಗಳು ಈ ಕಾರ್ಯವನ್ನು ಅಪ್ರತ್ಯಕ್ಷವಾಗಿಯೇ ಮಾಡಬಲ್ಲವು. ಈ ಮೂವತ್ತು ವರ್ಷಗಳಲ್ಲಿ 'ಗಡಿನಾಡಿನ ಪ್ರಶ್ನೆಯು ತಮ್ಮದೇ ಮುಖ್ಯ ಪ್ರಶ್ನೆಗಳಲ್ಲೊಂದು ಎಂಬ' ಭಾವನೆಯಿಂದ ಸತತವಾಗಿ ಬಹುಶಃ ಯಾವ ಸಂಸ್ಥೆಯೂ ಕೆಲಸಮಾಡಿಲ್ಲವೆಂದು ನಾನು ಧೈರ್ಯದಿಂದ ಹೇಳಬಲ್ಲೆ. ಆದರೆ, ಹೋಗಲಿ, ಈಗಲಾದರೂ ಅದನ್ನು ಕೈಕೊಂಡರೆ ಸಾಕು.

೩. ಮೇಲ್ಕಾಣಿಸಿದ ಸಂಸ್ಥೆಗಳಿಗಷ್ಟೇ ಆ ಕಾರ್ಯವು ಗುತ್ತಿಗೆ ಹಾಕಿಕೊಟ್ಟಿದೆಯೆಂತಲ್ಲ. ಎಲ್ಲ ಸಂಸ್ಥೆಗಳೂ ಎಲ್ಲ ವ್ಯಕ್ತಿ-ಗಳೂ ಕೂಡ ಮಾಡಬಹುದು. ಆದರೆ, ಅವರಿಂದ ಆ ಕಾರ್ಯವು ತೃಪ್ತಿಕರವಾಗಿ ಜರುಗಲಾರದು. ಕರ್ನಾಟಕದ ಯಾವತ್ತು ಬಗೆಯ ಪ್ರಶ್ನೆಗಳನ್ನು ಕುರಿತು ಯಾವತ್ತೂ ಕನ್ನಡಿಗರು ಒಟ್ಟು-ಗೂಡಿ ವಿಚಾರ ಮಾಡುವುದಕ್ಕಾಗಿಯೇ ನಾನು, ೧೯೨೦ ರಲ್ಲಿ, ದಿವಾಣ ವ್ಹಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ, ಅಖಿಲ ಕರ್ಣಾಟಕ ಪರಿಷತ್ತನ್ನು ಕೂಡಿಸಿದ್ದು. ಆ ಬಳಿಕ ಇನ್ನೂ ವರೆಗೆ ಕೂಡಿಲ್ಲ. ಕೂಡಿದರೆ ಲೇಸು. ಇದು ನಮ್ಮ ಕೆಲಸವೆಂಬ ಭಾವನೆಯೇ ಸರ್ವರಲ್ಲಿ ಬೆಳೆಯಲಿ, ಇದು ನಮ್ಮ ಕೆಲಸವಲ್ಲ-ವೆಂಬ ಭಾವನೆ ಯಾವ ವ್ಯಕ್ತಿಗೂ ಯಾವ ಸಂಸ್ಥೆಗೂ ಹುಟ್ಟದಿರಲಿ!

ಅಂಗಿ ★ (ಒಂದು ಭಾವಕಥೆ)

ಶ್ರೀ. ವ್ಹಿ. ಜಿ. ಶಾನಭಾಗ, ಕುಮಟಾ

★

“ನಾನು ಎಣಿಸಿದೆ: ನನ್ನ ಹತ್ತಿರ ಹನ್ನೆರಡು ಶರ್ಟುಗಳಿವೆ. ಒಂದಲ್ಲ, ಎರಡಲ್ಲ; ಹನ್ನೆರಡು! ಬಿಳಿಯ ಬಣ್ಣದುವು ಆರು; ಟೇನಿಸ್ ಖಾಕಿಯವು ಎರಡು; ಟ್ವೀಲ್ ಖಾಕಿಯವು ಎರಡು. ಇನ್ನೆರಡು ಡಿರ್ವ್ಯುನಿನವು. ಲೆಕ್ಕ ಮಾಡಿದೆ, ಹನ್ನೆರಡು. ಅವುಗಳ ವಣಟ, ಬಣ್ಣ ಎಲ್ಲವೂ ಅವು ನನ್ನ ಮುಂದಿದ್ದಂತೆ ಕಂಡಿತು. ಆವರೂ ‘ಇಗೊಳ್ಳಯ್ಯಾ; ಹಾಕಿಕೋ!’ ‘ಚಳಿ-ಮಳೆಯ ದಿನಗಳು; ಬಡವ ತೊಟ್ಟುಕೊಳ್ಳಲಿ!’ ಎಂದು ನಾನು ಕೊಡಲಿಲ್ಲ. ‘ಈಗೇನು ಅಂಗಿಯಿಲ್ಲವೋ!’ ಎಂದೆ ಮಾತ್ರ. ಇಷ್ಟೇ ಅಲ್ಲ, ‘ದಿನಮಾನ ಕೆಟ್ಟದೆ. ನಿಷ್ಠುರ ಮಾತು ಬಿಡು, ಹೊಸಅಂಗಿ ಹೊಲಿಸುವುದು ನಮಗೂ ಕಷ್ಟಕ್ಕೆ ಬಂದಿದೆ!’ ಎಂದೂ ನುಡಿದೆ. ಇದನ್ನೇಕೆ ಹೇಳಿದೆನೆಂದು ಈಗ ಯೋಚಿಸುತ್ತೇನೆ. ಇದರಿಂದ ಆತನಿಗೆ ನಮ್ಮ ಅಡಚಣಿಗಿಂತ ತನ್ನ ಬಡತನ, ತನ್ನ ದಯನೀಯತೆ ನಿಚ್ಚಳವಾಗಿ ಅನುಭವವಾಗಿರಬೇಕು.... ಇದನ್ನು ಕೇಳಿ. ಒಂದೋ ಎರಡೋ ಮೂರೋ; ಎಷ್ಟು ವರ್ಷಕಾಲವೋ—ಯುದ್ಧ ನಿಂತು ಪರಿಸ್ಥಿತಿ ತಿಳಿಯಾಗುವ ವರೆಗೆ—ಆ ಕಾಲ ತಾನು ಕಾಣುವೆನೋ—ಅಂಗಿ ತನ್ನ ಕನಸಿನ ಕೈಗೂ ನಿಲುಕಿನಾಚೆಯದು ಎಂದು ಆತನಿಗೆ ಹೊಳೆದಿರಬಹುದು. ಎದ್ದು ನಡೆದನವ. ಮರು ಮಾತಾಡಲಿಲ್ಲ. ಮರುಬಾರಿ ಬೇಡಲಿಲ್ಲ. ವಿನಂತಿ ಮಾಡಲಿಲ್ಲ. ಆಗ್ರಹ ಪಡಿಸಲಿಲ್ಲ. ಎದ್ದು ಹೊರಕ್ಕೆ ನಡೆದ....

“ನಾನು ಕೊಡಲಿಲ್ಲ. ನಾನು ಕೊಟ್ಟರೆ ಮಾತ್ರ ಆತನಿಗೆ ಪ್ರಾಪ್ತಿ, ನಾನು ಕೊಟ್ಟದ್ದು ಆತನಿಗೆ ಪ್ರಾಪ್ಯ—ನಾನು ಕೊಡಲಿಲ್ಲವಾದುದು ಆತನಿಗೆ ಅಪ್ರಾಪ್ಯ—ಹೀಗೆ ನಿಯಮವಿಲ್ಲ. ಆತನ ಬದುಕಿಗೆ ನಾನು ವಿಧಿಯೆಂದೂ ಇರುವುದಿಲ್ಲ. ಆತನ ವಿಧಿ ನಾನಲ್ಲ, ಆತನೂ ನನ್ನ ವಿಧಿಯಲ್ಲ! ನಮ್ಮಿಬ್ಬರಿಗೂ ಬೇರೆಯೊಬ್ಬ ವಿಧಿಯಿರಬೇಕು. ನಾನು ಕೊಡಲಿಲ್ಲವೆಂದು ಇನ್ನು ಬೇರೆ ಯಾರೂ ಆತನಿಗೆ ಕೊಡರು—ಎಂದಲ್ಲ. ಅಥವಾ ಅಂಗಿಯ ಅಭಾವದಲ್ಲಿ ಚಳಿ-ಮಳೆ-ಗಾಳಿಯಲ್ಲಿ ಆತನು ಕಷ್ಟಪಡಬೇಕಾಯಿತೆಂದು ನನಗೆ ವ್ಯಸನವಿಲ್ಲ. ಅಂಗಿ ಇಲ್ಲದವರು, ಕೇವಲ ಅದರ ಅಭಾವದಿಂದ ದುಃಖಿಗಳಾಗುತ್ತಾರೆ ಹೀಗೂ ಇರದು. ನಮ್ಮೂರಿನಲ್ಲಿಯೇ ಒಬ್ಬರಿದ್ದಾರೆ, ಅವರು ಅಂಗಿಯನ್ನು ತೊಟ್ಟದ್ದಿಲ್ಲ. ಏನೋ ಪ್ರತಿವರುಷ ಆಸ್ಥೆಯಿಂದಲೂ ಆಸಕ್ತಿಯಿಂದಲೂ ದಿಗ್‌ದೇಶದಿಂದ ಚೆಲೋ ಅರಿವೆ ತಂದು ಅಂಗಿ ಹೊಲಿಸುತ್ತಾರಲ್ಲದೆ, ಅದನ್ನು ಮೈಯಲ್ಲಿ ಧರಿಸಿ ಅರಿಯರು. ಇದರಿಂದ ಅವರಿಗೆ ಕಷ್ಟ ಅಷ್ಟಕ್ಕೇ ಇದೆ! ಇನ್ನು ಅಂಗಿ ತೊಟ್ಟುಕೊಂಡವರು ಮಹಾ ದಿವ್ಯಸುಖಕ್ಕೆ—ಶಾಶ್ವತ ಶಾಂತಿಗೆ—ಪ್ರಾಪ್ತರಾಗುತ್ತಾರೆಂದು ಯಾವ ಸದ್‌ವಾಕ್ಯ ಸತ್ಯವಾಗಿ ನುಡಿದರೂ, ಅದರಲ್ಲಿ ನನ್ನ ಅನುಭವ ಕೇಳಿದರೆ, ಸತ್ಯಾಂಶ ಒಂದಿಷ್ಟು ಸಹ ಇಲ್ಲ. ಹೀಗಿದ್ದರೂ ಬೇಡಿದ ವೆಂಕಪ್ಪನಿಗೆ ನಾನೊಂದು ಅಂಗಿಯನ್ನು ಕೊಡಲಿಲ್ಲ. ಇನ್ನು ಅಂಗಿಯೊಂದನ್ನು ಆತನಿಗೆ ಕೊಟ್ಟಿದ್ದರೆ ಅದೊಂದು ನನ್ನ ದುಃಖಕ್ಕೆ ಕಾರಣವಾಗುತ್ತಿತ್ತು ಎಂದು ಕೊಡಲಿಲ್ಲ—ಎಂದು ಇಟ್ಟುಕೊಂಡರೆ, ಕೊಡಲಿಲ್ಲವೆಂದು ನನಗೆ ಸುಖ ತೋರಲಿಲ್ಲ. “ಕೊಡಲಿಲ್ಲ ಏಕೆ?” ಎಂದು ನಾನು ಯೋಚಿಸುತ್ತೇನೆ....

“ವೆಂಕಪ್ಪ ಜತೆಯವ. ನನಗೂ ಅವನಿಗೂ ಜಾತಿಯೊಂದೆ; ಧರ್ಮವೊಂದೆ! ನಾವು ಹುಟ್ಟಿ ಬೆಳೆದುದು ಒಂದೇ ಊರಿನಲ್ಲಿ. ಬಹು ಸಣ್ಣವರಿದ್ದಾಗ ನಾನೂ ಆತನೂ ಒಂದೇ ಶಾಲೆಯಲ್ಲಿ ಓದಿದ್ದೇವೆ, ಜತೆಯಾಗಿಯೇ. ವೆಂಕಪ್ಪನ ತಂದೆ ನಮ್ಮಲ್ಲಿ ಅಡಿಗೆಯವ. ಅವರು ಬಹು ದರಿದ್ರರು. ವೆಂಕಪ್ಪ ಅಭ್ಯಾಸದಲ್ಲಿ ಹೇಗಿದ್ದನೆಂಬುದು ಈಗ ಅಷ್ಟು ಸ್ಮರಣವಿಲ್ಲದಿದ್ದರೂ, ಬಾಯಿಲೆಕ್ಕದಲ್ಲಿ ‘ಹದಿನಾರು ಮೆಟ್ಟಿನ ಹುಲಿ!’ ಬಾಯಿಲೆಕ್ಕ ತಪ್ಪಿ ನಾನು ಆತನಿಂದ ಹೇರಳ ಬಾರಿ ಗಲ್ಲಗಲ್ಲ ಬಡಿಸಿ ಕೊಂಡದ್ದುಂಟು. ನಾನು ಮುಂದೆ ಕಲಿತು ಈಗ ಆಫೀಸಿನಲ್ಲಿ ಖರಡು ಗೀಚುತ್ತೇನೆ—ಸಂಪಾದನೆಗಾಗಿ. ಸಂಪಾದಿಸಿದ್ದೇನೆ. ಮುಂಚಿನ ವರ್ಷ ನಮ್ಮ ಚಿಕ್ಕಪ್ಪನ ಮನೆಯಲ್ಲಿ ನಾನು ದೇವಕಾರ್ಯಕ್ಕೆ ನಡೆದಾಗ, ವೆಂಕಪ್ಪನನ್ನು ಹೇರಳ ವರ್ಷಗಳ ಮೇಲೆ ನೋಡಿದೆ. ತಂದೆಯ ಅಡಿಯ ಮೇಲೆ ಅಡಿಯಿಟ್ಟಂತೆ ಅವನು ಅಲ್ಲಿ ಅಡಿಗೆಮಾಡುತ್ತಲಿದ್ದ. ‘ಇವನಿಗೂ ಇದೇ ಪಾಡೆ!’ ಎಂದು ನನ್ನ ಅಂತರ್ಯದ—ಪೀಳಿಗೆಯ ಬಗೆಗಿರುವ—ಕೋಮಲ ಭಾಗಕ್ಕೆ ಕೊಂಚ ಮಾತ್ರ ಅಘಾತವಾಗಿ ವಿಷಾದವಾಯಿತು. ಊಟ ಮುಗಿದ ಬಳಿಕ ವೆಂಕಪ್ಪ ನನ್ನ ಬಳಿಗೆ ಬಂದು, ನಾನೆಲ್ಲಿದ್ದೇನೆ—? ಏನು ಮಾಡುತ್ತೇನೆ—ಎಂದು ಮೊದಲಾಗಿ ಕೇಳಿದ. “ಈ ‘ಮಾಡುವ’ ಜಗತ್ತಿನಲ್ಲಿ ನಾನು ಗೀಚುವುದನ್ನು ಮಾಡುತ್ತೇನೆ” ಎಂದೆ. ಆ ಮೇಲೆ ತನಗೊಂದು ಅಂಗಿಯನ್ನು ದಯಪಾಲಿಸು ಎಂದನವ. ‘ದಯಪಾಲಿಸಿದೆ’. ಅದೇ ಅಂಗಿ ಈಗಲೂ ಆತನ ಮೈಯಲ್ಲಿ ಇದ್ದುಬಿಟ್ಟಿದೆ. ಈ ಜಗತ್ತು ನಶ್ವರವೆಂದು ಅರಿತವರು ಹೇಳಿದರೆ, ಪ್ರತ್ಯಕ್ಷ ವಿಶ್ವಾಸವೆನಿಸುವುದೇ ಇಲ್ಲ. ಅಂಗಿಯನ್ನು ಹೊಲಿಸುವಾಗ ಇದು ನಶ್ವರವೆಂದು ತೋರಿದ-

★

‘ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ’ ಎಂದು ಸರ್ವಜ್ಞ ಕವಿ ಹೇಳಿದುದರಲ್ಲಿ ಎಷ್ಟೊಂದು ಸತ್ಯ ಹುದುಗಿಕೊಂಡಿದೆ! ಹನ್ನೆರಡು ಅಂಗಿಗಳಿದ್ದೂ ವೆಂಕಪ್ಪನಿಗೆ ಅಂಗಿಯಿಲ್ಲವೆಂದು ಹೇಳಿದುದೇಕೆ?

★

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಲಿಲ್ಲ; ಆದರೆ ವೆಂಕಪ್ಪನ ಮೈಮೇಲಿರುವ— ಆ ಅಂಗಿಯನ್ನು ನೋಡಿ, ಅರಿತವರ ನಶ್ವರಸಿದ್ಧಾಂತ ತ್ರಿಕಾಲ ಸತ್ಯವೆಂದು ತೋರುವುದು. ಅಂಗಿಯಲ್ಲಿ ಇನ್ನು ಹರಿಯಲು ಸ್ಥಳವಿಲ್ಲದಾಗಿದೆ. ವೆಂಕಪ್ಪ ಅದನ್ನು ಸಾಧನೆಯಿಂದ ತೊಟ್ಟು ತೆಗೆಯುತ್ತಿರಬಹುದು. ತುಸು ಕೈತಪ್ಪಿದರೆ ಅಂಗಿ ಅಂಗಿಯಾಗಿ ಉಳಿಯದೆ, ಚಿಂದಿ-ಚಿಂದಿಯಾಗುವ ಭಯವಿದೆ....

"ಹೀಗಿರುತ್ತಲೂ ನಾನವನಿಗೆ ಅಂಗಿಯನ್ನು ಕೊಡಲಿಲ್ಲ. 'ಬೆರಳು ಕೊಟ್ಟರೆ ಕೈನುಂಗುವರಲ್ಲ! ಒಮ್ಮೆ ನಾನು ಕೊಟ್ಟೆ; ಆಯಿತು. ಇನ್ನು ಬೇರೆಯವರನ್ನು ಕೇಳಬಾರದೇಕೆ? ಬೇರೆಯವರು ಕೊಡ-ಬಾರದೇಕೆ? ಜಗತ್ತಿನಲ್ಲಿ ನಾನೊಬ್ಬನೇ ದಾತನೇ? ನನಗೇನು ಅವಶ್ಯ? ಹಿಂದೆ ಕೊಟ್ಟೆ, ಈಗ ಕೇಳುತ್ತಾನೆ! ಈಗ ಕೊಡುತ್ತೇನೆ, ಮುಂದೆ ಕೇಳುವ! ಹಾಳು ಪರಿಪಾಠ ಬೀಳುವುದು.' ಒಂದುಕ್ಷಣ 'ಕೊಡಬೇಕಿತ್ತು' ಎಂದೆನಿಸಿದಾಗ, ನನಗೆ ಹೀಗೆ ವಿಚಾರಗಳು ತೋರಿದುವು: 'ಮನೆಯಲ್ಲಿ ಬಾಯಾರಿದಾಗ ಒಳಮನೆಯ ತಪ್ಪೇ-ಲಿಯ ಬಳಿ ನೇರವಾಗಿ ನಡೆಯುತ್ತೇನೆ. ಅಥವಾ ಬಾವಿಗೆ ಹೋಗು-ತ್ತೇನೆ. ಇವ್ರೂ 'ಈಗ ಕೊಟ್ಟರೆ ಮುಂದೆ ಬರುತ್ತೀಯೆ' ಎಂದು ತರ್ಕಮಾಡಿ ಕೋಪಿಸಿಕೊಂಡರೆ ಹೇಗೆ?' ನೀರಡಿಸಿದವನು ನೀರಿಗಲ್ಲದ ಮರುಭೂಮಿಗೆ ತೆರಳುವನೆ? — ಎಂದು ಆಗ ಹೊಳೆಯಲಿಲ್ಲ....

"ಈಗೇನು ಅಂಗಿಯಿಲ್ಲ—ಎಂದೆ. ಬೇಂಕಿನಲ್ಲಿ ನನ್ನ ಸಂಗಡಿಗ ವ್ಯವಸಾಯಿಗಳು ನನ್ನ ಸುಜ್ಞತೆ ಒಪ್ಪುವವರು. ನನ್ನ ಗೆಳೆಯರು ನನ್ನನ್ನು 'ಫಿಲಾಸಫರ್' ಎಂದು ಕರೆಯುವರು. ಬೇಂಕಿನಲ್ಲಿ ನಾವೆಲ್ಲರೂ ನಮ್ಮ ಪಾಲಿಗೆ ಬಿದ್ದ ಕೆಲಸಗಳಿಂದ ತೃಪ್ತರಾಗಿದ್ದರೂ ಸಿಕ್ಕುವ ಸಂಬಳದ ಮಟ್ಟಿಗೆ ಅತೃಪ್ತರಾಗಿಯೆ ಇದ್ದೆವು. ಒಬ್ಬ-ನಿಗೆ ಅರುವತ್ತು, ಇನ್ನೊಬ್ಬನಿಗೆ ಐವತ್ತು, ಮಗುದೊಬ್ಬನಿಗೆ ಇಪ್ಪತ್ತು ಹೀಗೆ ತಾರತಮ್ಯವೇಕೆ?—ಎಂದು ನಾವು ವಾದಮಾಡು-ವುದು. ಎಲ್ಲರಿಗೂ ಸಮವಾಗಿದ್ದರೆ ಏನು ಹಾನಿ?—ಎಂದು ತರ್ಕಿ-ಸುವುದು. ಸಾಮ್ಯವಾದವೇ ಸರಳಮಾರ್ಗ, ಅದರ ಮೇಲೆ ನಡೆದರೆ ಸಾಮೂಹಿಕ ಸುಖ-ಶಾಂತಿ ದೊರೆವುದು. ಮಾರ್ಕ್ಸ್‌ನ ಸಿದ್ಧಾಂತ-ಗಳು ಯಾವಾಗಲೂ ನನ್ನ ನಾಲಗೆಯ ಮೇಲೆ. ಇದೆಲ್ಲಕ್ಕೂ ನನ್ನ ಸಂಬಳದ ಬಗ್ಗೆ ಇದ್ದ ಅಸಂತೋಷವೇ ಕಾರಣವಾಗಿದ್ದರೂ ಬರುಬರುತ್ತ ಎಲ್ಲರ ಸುಖದ ಈ ಸವಿಗನಸನ್ನು ಪ್ರತ್ಯಕ್ಷದಲ್ಲಿ ಕಾಣ-ಬಾರದೇಕೆ?—ಎಂಬ ನಿಜವಾದ ಆಗ್ರಹ ನನ್ನೊಳಗೆ ಮೂಡುತ್ತಿತ್ತು. ಸಮತಾವಾದದಲ್ಲಿ ಅಖಂಡ ಶ್ರದ್ಧೆ ನನಗಿರುವುದನ್ನು ಎಲ್ಲರೂ ಬಲ್ಲರು. ಉರಿಬಿಸಿಲಿನಲ್ಲಿ ಬಳಲುತ್ತ, ಜಡಿಮಳೆಯಲ್ಲಿ ತೊಯ್ಯುತ್ತ ಕೆಲಸಮಾಡಿ ಶ್ರಮಪಡುವ— ಇಡೀ ಬಾಳು ದುಡಿದೂ ಕೊನೆಗೂ ಬರಿಗೈಯ 'ತೆರವು'ಕರುಳಿನ ದೀನ-ದುಃಖಿತ ಜನರನ್ನು ನೋಡಿ, 'ದೇವರೇ, ಇವರ ಮೇಲೆ ನಿನಗೆ ದಯೆಬಾರದೇ? ಇವರೂ ಇವರ ಸಾವಿರಾರು ತಲೆಮಾರಿನವರೂ, ಸಾವಿರಾರು ವರ್ಷಗಳ ದೀರ್ಘ-ಸಮಯದಿಂದಲೂ, ಕೊಂಚ ಜನರ ಸುಖಕ್ಕೆ ರಕ್ತ-ಮಾಂಸ ನೀರ್ಮಾಡಿ ದುಡಿದು ಸತ್ತದ್ದು ಸಾಲದೇ? ಈ ಅನ್ಯಾಯ ಎಂದಿಗೂ ನಿಲ್ಲದೇ? ಇವರ ಈ ದಾಸ್ಯ ದೂರವಾಗದೇ? ನಿನಗೆ ದಯೆಯೆಂ-ಬುದಿಲ್ಲವೇ? ದಯೆಯಿಲ್ಲದಿದ್ದರಿಲ್ಲ; ನೀ ನಿರುವುದಾದರೂ ಖಂಡಿತವೆ?' ಎಂದು ಮೊದಲಾಗಿ ನಾನು ಮರುಗಿದುದುಂಟು.

"ಹಿಂದಿನ ಮಾತು ಹೋಗಲಾಚೆ! ನನ್ನ ಕೋಣೆಯಲ್ಲಿ ನಿಂತೇ ವೆಂಕಪ್ಪ ಅಂಗಿ ಕೇಳಿದ. ಆ ದಿನ ಬೇಂಕಿಗೆ ಸೂಟಿಯಿತ್ತು. ಊಟ ಮಾಡಿ ನಾನು ಸುಖವಾಗಿ ಪವಡಿಸಿದ್ದೆ. ಒಂದು ಮಾಸಿಕ ಪತ್ರ ಓದಲು ತೆರೆದಿದ್ದೆ. ದೃಷ್ಟಿಯನ್ನು ಆತನ ದಿಕ್ಕಿಗೆ ಕೊಂಚ ಹೊರಳಿಸಿ, ನಾನು ಆತನನ್ನು ನೋಡುತ್ತಲಿದ್ದೆ. ವೆಂಕಪ್ಪ ಅಂಗಿ ಕೇಳಿ—ಬೇಡಿ ಎಂದರೆ ಹೆಚ್ಚುಸರಿ—ಆಚೆ ಈಚೆ ನಾಲ್ಕುಬದಿಗೆ ವ್ಯವಸ್ಥಿತ-ವಾಗಿ ಇಟ್ಟ ಒಳ್ಳೆ ಪಾಲಿಶಿನ ನಾಲ್ಕಾರು ಕುರ್ಚಿಗಳನ್ನು ಒಂದೊಂ-ದಾಗಿ ನೋಡುತ್ತ, ಒಂದು ಕುರ್ಚಿಯ ಬಳಿ ಸಾರಿ, ಅದರ ಕೂಡ್ರುವ ಸ್ಥಳದ ನೀಸವಿನ್ಯಾಸ ಲಖಲಖಿಸುವ ಹಲಗೆಯಲ್ಲಿ ದೃಷ್ಟಿಯಿಟ್ಟು, ಕುರ್ಚಿಯ ಕೈಮೇಲೆ ಬೆರಳಾಡಿಸುತ್ತ ನಿಂತಿದ್ದ. ಆ ಕುರ್ಚಿ—ಈ ಕುರ್ಚಿಯ ಬಳಿ ತಿರುಗುತ್ತ, ಅವುಗಳನ್ನು ನೋಡುವ ಅವನ ದೃಷ್ಟಿ-ಯಿಂದ—ಒಂದರಲ್ಲಿ ಕುಳಿತು ಸುಖ-ದುಃಖದ ಒಂದೆರಡು ಮಾತು-ಗಳನ್ನು, ಸಲುಗೆಯಿಂದ, ಆಡುವ ಧೋರಣ ಅವನಿಗಿರಬೇಕು

ಎಂದು ತೋರುತ್ತಿತ್ತು. ಆದರೆ ತನ್ನ ದೂಷಿತ— ಮಲಿನ— ಮಸುಕು ಬಟ್ಟೆಗಳಿಂದ ಕುರ್ಚಿ ಮೈಲಿಗೆಯಾಗುವುದೆಂಬ ಭಯದಿಂದಲೊ, ತನ್ನ ಯೋಗ್ಯತೆ ಅಲ್ಲಿ ಕೂಡ್ರುವುದು ಅಲ್ಲವೆಂದೊ, ಅದರಿಂದ ಅದರಲ್ಲಿ ತನ್ನ ಉದ್ಧಟತನ ಸನಗರಿವಾಗುವುದೆಂತಲೊ ಅವನು ಯಾವುದರಲ್ಲಿಯೂ ಕೂಡ್ರಲಿಲ್ಲ. ಬಂದವರು ಕೂಡ್ರಬೇಕು; ಬಂದವರಿಗೆ ಕೂತುಕೊಳ್ಳಿ ಎಂದು ಹೇಳಲಿಕ್ಕೆ ನಾನು ನಾಲ್ಕಾರು ಕುರ್ಚಿಗಳನ್ನು ರೂಮಿನಲ್ಲಿ ಇಟ್ಟ ಉದ್ದೇಶ. ಇಲ್ಲದಿದ್ದರೆ ನನಗೊಬ್ಬನಿಗೆ ಒಂದು ಕುರ್ಚಿ ಸಾಲುವಂತಿದೆ. ಆದರೆ ವೆಂಕಪ್ಪನು ರೂಮಿನಲ್ಲಿ ಬಂದರೂ, ಒಳ್ಳೇ ಆತುರ-ಕಾತರದಿಂದ ಕುರ್ಚಿಗಳ ಬದಿಗೆ ತಿರುಗಿದುದನ್ನು ನೋಡಿಯೂ, ಕುಳಿತುಕೊಳ್ಳಯ್ಯಾ— ಎಂದು ಹೇಳುವುದು ನನ್ನ ಕರ್ತವ್ಯವೆಂದು ನನ್ನ ಅಂತರ್ಯಕ್ಕೆ ಹೊಳೆದರೂ, ಮಾತು ಮಾತ್ರ ಬಾಯಿಂದ ಈಚೆ ಬರಲಿಲ್ಲ.......

"ಅಂಗಿಯಿಲ್ಲವೊ— ಎಂದೆ, ಅವನು ತೆರಳಿದ. ಅವನು ತೆರಳಿದ ಮೇಲೆ ನಾನು ಪತ್ರವನ್ನು ತೆರೆದೆ. ಯಾವುದೋ ನಡುವಿನ ಪೇಜು ಮುಂದೆ ಬಂದಿತು. ಅದೊಂದು ಏಕಾಂಕ ದೃಶ್ಯವಾಗಿತ್ತು. ಈಗ ನಡೆದಿರುವ ಚೀನ-ಜಪಾನ ಯುದ್ಧದ ಒಂದು ಚಿತ್ರ. ಚೀನೀಸೈನ್ಯದ ಹುತಾತ್ಮಪಡೆಯು ಕಾಳಗಕ್ಕೆ ಹೋಗಲು— ಜಪಾನಿಯರನ್ನು ತಡೆಯಲು— ಹೊರಡುವುದರಲ್ಲಿದೆ. ಪ್ರತಿಯೊಬ್ಬ ಕಾಲಾಳಿನ ಹೃದಯ 'ಕೊಲ್ಲುವೆವು ಇಲ್ಲವೆ ಮಡಿಯುವೆವು' ಎಂಬ ದೃಢನಿಶ್ಚಯದಿಂದ ಕಲ್ಲಾಗಿದೆ. ಸಾಯುವ ಸಂದರ್ಭ ನಿಶ್ಚಿತವಾಗಿ ಇದ್ದರೂ ಯಾರೂ ಗಾಬರಿಸಿಲ್ಲ. ತಾವು ತಮ್ಮ ಕರ್ತವ್ಯಪೂರ್ತಿಯಲ್ಲಿ ಇನ್ನು ಮಡಿಯಲಿದ್ದರೂ ಯಾರಿಗೂ ವಿಷಾದವಿಲ್ಲ. ಇನ್ನು ಹೊರಡುವವರು; ಆಗಲೇ ಕಪ್ತಾನನು ಬಂದು 'ನಿಮ್ಮ ನಿಮ್ಮ ಆಪ್ತೇಷ್ಟರಿಗೆ ಕೊನೆಯೋಲೆ ಬರೆಯುವುದಾದರೆ ಬರೆದುಕೊಳ್ಳಿ!' ಎನ್ನುತ್ತಾನೆ. ಒಬ್ಬನು ಹೆಂಡತಿಗೆ ಬರೆದ; ಇನ್ನೊಬ್ಬನು ತನ್ನ ಮಗನಿಗೆ, ಮಗುದೊಬ್ಬನು ತನ್ನ ವೃದ್ಧ ತಂದೆಗೆ. ನನ್ನ ಹೃದಯ ದ್ರವಿಸಿತು; ಕಣ್ಣು ತುಂಬಿತು. ಆಗಲೇ ಗಳಿಗೆಮೊದಲು ಅಂಗಿಬೇಡಿದ ವೆಂಕಪ್ಪನ ನೆನಪಾಯಿತು. ನೋಡದ ಚೀನಾವೇಶ, ಆಗಿನ ವರೆಗೂ ಕೇಳದ ಆ ಚೀನೀ ಸೈನಿಕರ ದುಃಖ ಇವನ್ನು ನೆನೆದು ಮರುಗಿದ ನನ್ನೆದೆಗೆ, ನಮ್ಮ ವೆಂಕಪ್ಪನ ಮೇಲೆ ದಯೆಬಾರದಿರಲು -- ಆತನನ್ನು ಚಳಿಮಳೆಯ ಕಷ್ಟದಿಂದ ಉಳಿಸಲು ಒಂದು ಅಂಗಿ ಕೊಡದಿರಲು— ಕಾರಣವೇನು? ನಾನು ಯೋಚಿಸುತ್ತೇನೆ. ನನ್ನ ಬಳಿ ಬೇಡಲು, ನನ್ನ ಮುಂದೆ ಪ್ರಾರ್ಥಿಯಾಗಿ ನಿಲ್ಲಲು, ನನ್ನಂತಿರುವ ಆತನಾತ್ಮನಿಗೆ ಕಷ್ಟವಾಗಲಿಲ್ಲವೇ? ಲಜ್ಜೆಯಾಗಲಿಲ್ಲವೇ? ಕ್ಲೇಶವಾಗಲಿಲ್ಲವೇ? ಇದೆಲ್ಲ ಸಹಿಸಿ ಬೇಡಿದರೂ ಸಾರ್ಥಕವಾಯಿತೇ! ಅತ್ತ ಕ್ಷೋಭ ಇತ್ತ ಕ್ಷೋಭವಾಗಿ, ಈ ಉಭಯ ಕ್ಷೋಭಗಳಲ್ಲಿ ಎಷ್ಟು ಬಳಲಿದನೋ!! ಹನ್ನೆರಡು ಅಂಗಿಗಳಲ್ಲಿ ಒಂದನ್ನು ಕೊಡಬಾರದಿತ್ತೆ? ಕೊಡುವ ಮನಸ್ಸು ಆಗಲೇ ಇಲ್ಲ. 'ಅಂಗಿಯಿಲ್ಲವೊ!' ಎಂದು ಕೊಡದಿರುವಾಗ 'ಆ ಅಂಗಿ ನನಗೆ ಬೇಕು, ಒಂದು ವಿಶಿಷ್ಟ ಹೊತ್ತಿಗೆ ಧರಿಸುವುದದು. ನಾನು ಹಾಕಿ ತಿರುಗಬೇಕು; ಇದರಲ್ಲಿ ಕೊಟ್ಟರೆ ವ್ಯತ್ಯಾಸವಾಗುವುದು' ಎಂದು ವಿಚಾರಬೋಧವಾಗಿರಲಿಲ್ಲ. ಬರೇ ಕೊಡಬಾರದು ಎಂದೆನಿಸಿತ್ತು. ಅಂಗಿಯ ವಿಯೋಗಕ್ಕೇನೆ ನಾನು ಸಿದ್ಧನಿರದೆ ಅಂಗಿಯನ್ನು ಕೊಡಲಿಲ್ಲ. ಯೋಚಿಸುತ್ತೇನೆ: ಬಹು ಜಿಗುಟಾದ ಅಂಟುತನ ನನ್ನನ್ನೂ ಅಂಗಿಗಳನ್ನೂ ಒಂದಾಗಿಸಿದೆ. ವಸ್ತು-ಒಡವೆಗಳನ್ನು ಶೇಖರಿಸಿ ಅದರ ಮೇಲೆ ಪ್ರಭುತ್ವ ನಡೆಯಿಸುವುದು ಎಲ್ಲರ ಸ್ವಭಾವ ಧರ್ಮ. ವಸ್ತು ಒಡವೆಗಳ ಮೇಲೆ ಕುಳಿತು ಸ್ವಾಮಿತ್ವನಡೆಯಿಸುವ ನನ್ನಾತ್ಮ, ತನ್ನ ಕುದುರೆಯೆಂದು ಕುದುರೆಯ ಮೇಲೆ ಕುಳಿತುಕೊಳ್ಳದೆ, ಅದನ್ನು ತಲೆಯ ಮೇಲೆ ಹೊತ್ತುಕೊಳ್ಳುವ ಹವ್ಯಾಸದಲ್ಲಿ ಕುದುರೆಯ ಭಾರದಿಂದ ನೆಲಕ್ಕೆ ಕುಸಿದು ಮಣ್ಣುಗೂಡಿದ ಮೂರ್ಖನಂತೆ, ಮೋಹದಿಂದ ಅಂಗಿಗೆ ಮೈಸೋತಿತು! 'ನಾನು ಅಂಗಿಗಾಗಿ ಇದ್ದೇನೋ, ಅಂಗಿ ನನಗಾಗಿ ಇದೆಯೋ' ಎಂಬುದು ಸೂಚಿಸಲಿಲ್ಲ. ನನಗೆ ಮೂರು ಕಾಸಿನ ಅಂಗಿಗಾಗಿ ಬಹುಮೂಲ್ಯವಾದ ನನ್ನಾತ್ಮನನ್ನು ನಾನು ಮಾರಿಕೊಂಡಂತಿತ್ತು. ಅದರಿಂದಲೇ, ನಾನು ಅಂಗಿಯವನಾಗಿದ್ದರಿಂದಲೇ ಅದನ್ನು ವೆಂಕಪ್ಪನಿಗೆ ಕೊಡುವುದಾಗಲಿ ಬಿಡುವುದಾಗಲಿ ನನ್ನ ಇಚ್ಛೆಯ ಮೇಲೆ ಅವಲಂಬಿಸಿರಲಿಲ್ಲ. ಆಗ ನನ್ನಿಚ್ಛೆಯೆಂಬುದು ಇರಲೇ ಇಲ್ಲ. ಅದು ಆ ಹೊತ್ತಿಗೆ ಅಂಗಿಯ ಇಚ್ಛೆಯ ಮೇಲೆ ಅವಲಂಬಿಸಿತ್ತು. ಈಗ ಯೋಚಿಸುತ್ತೇನೆ "ಕೊಡಬೇಕಿತ್ತು" ಎಂದು. ವೆಂಕಪ್ಪನ ಮೇಲೆ ಉಪಕಾರ ಮಾಡಲಿಕ್ಕಲ್ಲ! ನನ್ನ 'ನನ್ನತನ'ದ ರಕ್ಷಣೆಗಾಗಿ. ಅದರಲ್ಲಿಯೇ ನನ್ನ ನಿಜವಾದ ಒಡವೆಯ ಒಡೆತನವು ಇರುವುದು!"

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು— 'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನವನ್ನು ಪಡೆದುನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ಬಳ್ಳಾರಿಯ ಅನುಭವ, ★ ಗಡಿನಾಡಿನ ಸಮಸ್ಯೆ!

ಶ್ರೀ. ಮಂಗಳವೇಢೆ ಶ್ರೀನಿವಾಸರಾಯರು
ಬಾಗಲಕೋಟೆ

ಕನ್ನಡಿಗರು ತಮ್ಮ ನಾಡಿನ ಗಡಿಗಾಪಿನವರನ್ನು ಎಚ್ಚರಿಸಿ, ಸಕಾಲದಲ್ಲಿ ಕರ್ತವ್ಯಕ್ಕೆ ತೊಡಗಿಸದಿದ್ದರೆ, ಎಲ್ಲರೂ ಸುಖ-ಶಾಂತಿಗಳನ್ನು ಅನುಭವಿಸಬಹುದಾದ ಕಾಲದಲ್ಲಿಯೂ ದುಃಖ-ಅಶಾಂತತೆಗಳನ್ನು ಅನುಭವಿಸಬೇಕಾಗುವುದು. ಎಚ್ಚರ!

★

ಕರ್ನಾಟಕದ ಗಡಿನಾಡಿನಲ್ಲಿಯ ಕನ್ನಡಿಗರು ಜಾಗೃತರಾಗಿಲ್ಲ, ಅದ್ದರಿಂದ ಗಡಿಸೀಮೆಯಲ್ಲಿ ನೆರೆಹೊರೆಯ ಭಾಷೆಯವರು ಅತಿಕ್ರಮಣ ಮಾಡುವುದುಂಟೆಂಬುದಂತೂ ಸರಿಯೆ; ಆದರೆ ಪರಿಸ್ಥಿತಿ ಹೀಗಿದೆಯೆಂದು ಜಾಗೃತರಾಗಿದ್ದ ಒಳನಾಡಿನ ಕನ್ನಡಿಗರು ಸುಮ್ಮನೆ ಕುಳಿತರೆ ಹಾನಿ ಯಾರದು? ಅಖಿಲ ಕರ್ನಾಟಕದ ಪ್ರಶ್ನೆಯಿದು; ಅದ್ದರಿಂದ ಕರ್ನಾಟಕದ ಎಲ್ಲ ಸಂಸ್ಥೆಗಳೂ ಎಲ್ಲ ಮುಂದಾಳುಗಳೂ ಲಕ್ಷ್ಯಿಸತಕ್ಕ ವಿಷಯವಿದು! ಪೂರ್ವ-ದಿಕ್ಕಿನ ಗಡಿಪೂದ ಬಳ್ಳಾರಿ ಜಿಲ್ಲೆಯು ಇದೀಗ ಜೇತರಿಸಿ-ಕೊಂಡು ಬಿದ್ದಿದೆ. ಆಂಧ್ರರು ತಮ್ಮ ಮಹಾಸಭೆಯನ್ನು ಅಲ್ಲಿ ನೆರವೇರಿಸಿ, ಕನ್ನಡಿಗರನ್ನು ಜಾಗೃತಗೊಳಿಸಿದುದರಿಂದ, ಅವರಿಗೆ ಧನ್ಯವಾದವನ್ನು ಸಹ ಅರ್ಪಿಸಬಹುದಾಗಿದೆ.

'ಕೇಳಕರ-ತೀರ್ಪು' ೧೯೩೦ ರಲ್ಲಿ ಆಯಿತು. ಆಗ ದೊರೆತ ಆಧಾರದ ಮೇಲಿಂದ ಅವರು, ಬಳ್ಳಾರಿ ಜಿಲ್ಲೆಯ ಪೂರ್ವದ ತಾಲ್ಲೂಕುಗಳಾದ ರಾಯದುರ್ಗ, ಆದವಾನಿ, ಆಲೂರು ಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದು ನಿರ್ಣಯಿಸಿದರು. ಆದರೆ ಇಡಿ ಹಿಂದುಸ್ಥಾನದಲ್ಲಿ ಜಿಲ್ಲೆಯನ್ನು ವಿಭಾಗ ಮಾಡಿದ ಉದಾ-ಹರಣೆ ಇದೊಂದೇ ಆಗಿದೆ. ಕೇಳಕರರು ಕೂಡ ಈ ವಿಭಜನೆಯು ಅಸ್ವಾಭಾವಿಕವೆಂದು ಹೇಳಿದ್ದಾರೆ. ಈ ಮೂರು ತಾಲ್ಲೂಕು-ಗಳನ್ನು ಸಂಚರಿಸಿ ಬಂದವರಿಗೆ 'ಕನ್ನಡ ತಾಲ್ಲೂಕುಗಳು ಅನ್ಯಾಯವಾಗಿ ಕನ್ನಡಿಗರ ವಶದಿಂದ ಹೋದುವಲ್ಲಾ!' ಎಂದು ಚಡಪಡಿಕೆಯಾಗುತ್ತದೆ. ನನ್ನ ಮಿತ್ರರಾದ ಶ್ರೀಯುತ ಜಂಗಿನ ಮುರಿಗೆಪ್ಪನವರೂ ನಾನೂ ಈ ತಾಲ್ಲೂಕುಗಳಲ್ಲಿ ಸಂಚರಿಸಿ-ದೆವು. ಖಾನೇಸುಮಾರಿ ಲೆಕ್ಕದಂತೆ ಎಲ್ಲಿ ತೆಲುಗಿನ ಪ್ರಮಾಣವು ಹೆಚ್ಚಿದ್ದಿತೋ ಅಂತಹ ಹಳ್ಳಿಗಳಿಗೆ ಹೋದೆವು. ಅಲ್ಲಿಯ ವಸ್ತುಸ್ಥಿತಿ ಜನಗಣನೆಯ ಲೆಕ್ಕಕ್ಕೆ ತೀರ ವಿರುದ್ಧವಾಗಿದ್ದಿತು! ಒಟ್ಟು ಜನರು ಆಡುವ ಭಾಷೆ ಕನ್ನಡವಿದ್ದರೂ, ತೆಲುಗರ ಪ್ರಮಾಣ ಹೆಚ್ಚೆಂದು ಜನಗಣನೆಯಲ್ಲಿ ನಮೂದಿಸಲ್ಪಟ್ಟಿತ್ತು! ಜನರು ಮಾತನಾಡುವ ಭಾಷೆ ಕನ್ನಡವಾದರೂ ಪ್ರಾಥಮಿಕ ಶಾಲೆಗಳು ತೆಲುಗಿನವು! ಸರಕಾರಿ ಲೆಕ್ಕ-ಪತ್ರ ಆಂಧ್ರದಲ್ಲಿ. ಕನ್ನಡವಿಲ್ಲ. ಅಧಿಕಾರಿಗಳು ಇರದುದರಿಂದಲೂ, ಸ್ಥಾನಿಕ ಸಾಹುಕಾರರೂ ವ್ಯಾಪಾರಸ್ಥರೂ ವೈಶ್ಯರಿದ್ದು ಅವರು ಆಂಧ್ರ ಮಾತನಾಡುವವರಿದ್ದುದರಿಂದಲೂ, ಹೇಳಲಾರದಷ್ಟು ಅನ್ಯಾಯ ಅಲ್ಲಿಯ ಕನ್ನಡಿಗರಿಗೆ ಆದದ್ದನ್ನು ಕಣ್ಣಾರೆ ಕಂಡೆವು. ಆಗ, ಕನ್ನಡ ಶಾಲೆಗಳು ಬೇಕೆಂದು ಅರ್ಜಿ-ಗಳನ್ನು, ಅನೇಕ ಹಳ್ಳಿಗಳಿಂದ ಮಾಡಿಸಿದ್ದಾಯಿತು. ಜಿಲ್ಲಾ ಬೋರ್ಡಿಗೆ ಬಂದ ಆ ಅರ್ಜಿಗಳಂತೆ, ಶ್ರೀಯುತ ವೈ. ಮಹಾ-ಬಳೇಶ್ವರಪ್ಪನವರು ಅಧ್ಯಕ್ಷರಾಗಿದ್ದರಿಂದ—ಹಲವು ಕಡೆ ಕನ್ನಡ-ಶಾಲೆಗಳನ್ನು ಪ್ರಾರಂಭಿಸಲಾಯಿತು. ಆದರೆ ಅವರ ಅಧ್ಯಕ್ಷ-ಪದವು ಬದಲಾದೊಡನೆ, ವಿದ್ಯಾಖಾತೆಯ ಮೇಲಧಿಕಾರಿಗಳು ಕನ್ನಡಶಾಲೆಗಳಿಗೆ ಉತ್ತೇಜನ ಕೊಡಲಿಲ್ಲ. 'ಆಂಧ್ರ ಶಾಲೆ-ಗಳನ್ನು ಕಿತ್ತಿಹಾಕಿದರೆ, ಕಾಯಮ್ ನೌಕರರಾದ ಆಂಧ್ರ-ಶಿಕ್ಷಕರನ್ನು ಎಲ್ಲಿಗೆ ಕಳಿಸುವಿರಿ?' ಎಂಬ ಬೆದರಿಕೆಯನ್ನು ಬೋರ್ಡಿಗೆ ತೋರಿಸಿ, ತೆಲುಗು ಶಾಲೆಗಳನ್ನು ಕಿತ್ತು ಹಾಕುವ ಕ್ರಮವು ಕೃತಿಯಲ್ಲಿ ಬಾರದಂತೆ ಅಪ್ಪಣೆ ಮಾಡಿದರು. ಹೀಗಾಗಿ ೧೯೩೩ರಲ್ಲಿಯ ಈ ಅಲ್ಪ ಚಳವಳಿಯು ಕಮರಿಹೋಯಿತು!

ಈಗ ೧೯೫೩ ರಲ್ಲಿ ಆಂಧ್ರ ಮಹಾಸಭೆಯ ಪ್ರತಿಭಟನೆಯ ಕೂಗು ಎದ್ದಾಕ್ಷಣ, ಇಡಿ ಜಿಲ್ಲೆಯಿಂದ ತರುಣ ಕನ್ನಡಿಗರು ಧಾವಿಸಿ ಬಂದರು! ಅಲ್ಪಾವಧಿಯಲ್ಲಿ ೫೦೦ ಜನರು ಹೇಗೆ ಬಂದ-ರೆಂಬುದು ನಮಗೆ ಆಶ್ಚರ್ಯವನ್ನುಂಟುಮಾಡಿತು! ಆದವಾನಿ-ರಾಯದುರ್ಗ-ಆಲೂರು ತಾಲ್ಲೂಕುಗಳಿಂದ ಕೂಡ ಪ್ರತಿ-ನಿಧಿಗಳು ಬಂದಿದ್ದರು!! ಕೇಳ್ಕರ ತೀರ್ಪಿನಿಂದ ತಮಗಾದ ಅನ್ಯಾಯವನ್ನು ಆಧಾರಯುಕ್ತವಾಗಿ ಜಿಲ್ಲಾ ಯುವಕ ಪರಿಷತ್ತಿ-ನಲ್ಲಿ ಮಂಡಿಸಿದರು. ಈ ಅನ್ಯಾಯವನ್ನು ಕಂಡು, ಗಡಿನಾಡಿನ ಸಂರಕ್ಷಣ ಸಮಿತಿಯು ಸ್ಥಾಪಿತವಾಗಿ, ೫೦೦ ಸ್ವಯಂಸೇವಕ-ರನ್ನೂ, ೧೫೦೦ ರೂಪಾಯಿಗಳನ್ನೂ ಕಲೆಹಾಕುವ ಠರಾವುಗಳಾದುವು. ಸ್ಥಾನಿಕ ಜನರು ಜನಗಣನೆಯಲ್ಲಿ— ೧೯೫೧ ರಲ್ಲಿ ಬಡ ಆಂಧ್ರರ ಕೈಚಳಕವನ್ನು ನೋಡಿ ವ್ಯಥೆಪಟ್ಟಿದ್ದರು; ಆದರೆ ತಾಲ್ಲೂಕುಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವವರು, ತಾವೊ-ಬ್ಬರೇ ಮಾಡುವುದೇನೆಂಬ ನಿರಾಶೆಯುಂಟಾಗಿ, ಸುಮ್ಮನಿದ್ದ-

ಕೊಂಡರು. ಆಂಧ್ರರ ಅತಿಕ್ರಮಣದ ಪ್ರತಿಭಟನೆಯ ಕಹಳೆಯನ್ನು ಕೇಳಿದೊಡನೆ ಸ್ಫೂರ್ತಿಯುಬ್ಬಿದವರಾಗಿ, ತಂಡತಂಡವಾಗಿ ಬಳ್ಳಾರಿಗೆ ಬಂದು ಸೇರಿದರು— ತರುಣ ಕನ್ನಡಿಗರು! ಇಡಿ ಜಿಲ್ಲೆಯಲ್ಲಿ ಪ್ರಚಾರ ತನ್ನಷ್ಟಕ್ಕೆ ತಾನೇ ಆಗಿ ಹೋಯಿತು! ಕ್ಷಣಿಕವಾದ ಈ ಉತ್ಸಾಹವು ಆರಿಹೋಗಿ ಮತ್ತೆ ಕುಂಭಕರ್ಣನ ನಿದ್ದೆಗೆ ತಾವು ತುತ್ತಾಗಬಾರದೆಂದು, ಇಡಿ ಜಿಲ್ಲೆಯಲ್ಲಿ ಅವಿರತ ಪ್ರಚಾರಕಾರ್ಯ ನಡೆಯಿಸಬೇಕೆಂದು ತರುಣರು ಆಕಾಂಕ್ಷೆಪಟ್ಟರು. ಇದಕ್ಕಾಗಿ ಸ್ವಯಂಸೇವಕರ ದಲ ನಿರ್ಮಾಣಮಾಡಲಿಕ್ಕೂ ೧೫೦೦ ರೂ. ಕೂಡಿಸಲಿಕ್ಕೂ ಒಪ್ಪಿದರು. ಈ ಎರಡೂ ಕಾರ್ಯ ಕೊನೆಗಂಡ ಕೂಡಲೆ, ಕೆಲಸ ಹಾಗೂ ಪ್ರಚಾರಗಳನ್ನು ಕೈಕೊಳ್ಳುವ ಧೋರಣವನ್ನು 'ಗಡಿಸಂರಕ್ಷಕ ಸಮಿತಿ' ಯವರು ಇಟ್ಟುಕೊಂಡಿದ್ದಾರೆ.

ಬಳ್ಳಾರಿಯ ಈ ಅನುಭವದಿಂದ ಗಡಿನಾಡಿನ ಸಮಸ್ಯೆಯನ್ನು ಇಡಿ ಕನ್ನಡನಾಡು ಬಿಡಿಸಬೇಕಾಗಿ ಬಂದಿದೆ. ಕೇವಲ ಕನ್ನಡ ಶಾಲೆಗಳನ್ನು ತೆರೆಯುವ ಚಳವಳಿ ಫಲಕಾರಿಯಾಗುವುದಿಲ್ಲ; ಒಂದು ಸಲ ಪ್ರಚಾರಕ್ಕಾಗಿ ಹೋಗಿಬಂದರೆ ಉಪಯೋಗ ಬೀಳುವುದಿಲ್ಲ—ಎಂಬುದು ಮೇಲೆ ವಿವರಿಸಿದ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಹಾಗಾದರೆ ಯಾವ ದಿಶೆಯಲ್ಲಿ ಕಾರ್ಯವಾಗಬೇಕು? ಗಡಿನಾಡಿನಲ್ಲಿ ಸ್ಥಾನಿಕ ಸಂಸ್ಥೆಗಳನ್ನು ಸ್ಥಾಪಿಸಬೇಕು. ಈ ಸಂಸ್ಥೆಗಳಿಗೆ ಹೊರಗಿನವರು ಕೂಡ ಧನಸಹಾಯ ಮಾಡಿ, ಕಾರ್ಯ ಪ್ರವೃತ್ತರಾಗಲು ಮುಂದಾಳುಗಳು ಮೇಲಿಂದ ಮೇಲೆ ಅಲ್ಲಿಗೆ ಹೋಗಿ ಬರಬೇಕು. ಕನ್ನಡ ಶಾಲೆಗಳನ್ನು ಪ್ರಾರಂಭಿಸಲಿಕ್ಕೆ ಕರ್ನಾಟಕದಲ್ಲಿದ್ದ ಶಿಕ್ಷಣಸಂಸ್ಥೆಗಳನ್ನು ಕೇಳಿಕೊಳ್ಳಬೇಕು. ಯಾಕೆಂದರೆ ಅಲ್ಲಿ ಸರಕಾರಿ ಶಾಲೆಗಳನ್ನು ಸ್ಥಾಪಿಸಲು ಪರಭಾಷೆಯ ಅಧಿಕಾರಿಗಳು ಆತಂಕಗಳನ್ನು ಒಡ್ಡುತ್ತಾರೆ. ಪ್ರಾಥಮಿಕ ಶಾಲೆಗಳೊಂದಿಗೇನೇ ಮಾಧ್ಯಮಿಕ ಶಾಲೆಗಳಲ್ಲಿಯೂ ಕನ್ನಡವನ್ನು ಕಲಿಸುವ ಏರ್ಪಾಡಾಗಬೇಕು. **ಕರ್ನಾಟಕದ** ಹಿರಿಯ ಸಂಸ್ಥೆಗಳಾದ **ಕಾಂಗ್ರೆಸ್ ಕಮಿಟಿ, ಸಾಹಿತ್ಯಪರಿಷತ್ತು, ಏಕೀಕರಣ ಸಂಘ** ಇವೆಲ್ಲ ಒಂದೊಂದು ಕೆಲಸವನ್ನು ಕೃತಿಯಲ್ಲಿ ತರುವ ಹೊಣೆ ಹೊರಬೇಕು. ಜಿಲ್ಲಾ ಅಧಿಕಾರಿಗಳನ್ನೂ ಪ್ರಾಂತದ ಮುಖ್ಯಾಧಿಕಾರಿಗಳನ್ನೂ ಕಂಡು ಸರಕಾರಿ ನಮೂನೆಗಳು ಕನ್ನಡದಲ್ಲಿರುವಂತೆಯೂ, ಸಬ್‌ರಜಿಸ್ಟರ್ ಕಚೇರಿಗಳಲ್ಲಿ ಕನ್ನಡ ಕಾಗದಗಳು ನೋಂದಾಯಿಸಲ್ಪಡುವಂತೆಯೂ, ಜಜ್ಜ್ ಕೋರ್ಟುಗಳಲ್ಲಿ ಕನ್ನಡಕ್ಕೂ ಮನ್ನಣೆ ದೊರೆಯುವಂತೆಯೂ, ಕನ್ನಡ ಬಲ್ಲ ಅಧಿಕಾರಿಗಳ ನೇಮಕವಾಗುವಂತೆಯೂ ಕಾರ್ಯಮಾಡಿದ ವಿನಾ, ಕನ್ನಡದ ಚಳವಳಿ ಗಡಿಪ್ರದೇಶದಲ್ಲಿ ಬೇರೂರಲಾರದು. ಜನಗಣನೆಯನ್ನು ಹೊಣೆಗಾರ ಸಂಸ್ಥೆಗಳು ಮಾಡಿಸಬೇಕು.

ಹಾಗೆ ಮಾಡಬೇಕು ಹೀಗೆ ಮಾಡಬೇಕೆಂದು, ಇನ್ನೂ ದೊಡ್ಡ ಯಾದಿಯನ್ನು ಸಿದ್ಧಪಡಿಸಲಿಕ್ಕೆ ತಡವಾಗಲಾರದು; ಆದರೆ ಕಾರ್ಯಮಾಡುವವರಾರು? ಹಿಂದುಸ್ಥಾನ ಸಂರಕ್ಷಕ ಕಾನೂನಿನ ಪ್ರಕಾರ, ಪ್ರಾಂತಿಕ ಕಾಂಗ್ರೆಸ್ ಕಮಿಟಿಯಾಗಲಿ, ಜಿಲ್ಲಾ ಕಾಂಗ್ರೆಸ್ ಕಮಿಟಿಗಳಾಗಲಿ ಕೆಲಸಮಾಡದೆ ಬೀಗಹಾಕಿಕೊಂಡು ಸ್ತಬ್ಧವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಏಕೀಕರಣ ಪರಿಷತ್ತುಗಳು ಈ ಕಾರ್ಯ ಹೊರುವಂತೆ ಕನ್ನಡಿಗರು ಪ್ರೇರಿಸಬೇಕು. ಶಿವಮೊಗ್ಗೆಯಲ್ಲಿ ಸಾಹಿತ್ಯ ಪರಿಷತ್ತೂ, ಬಾದಾಮಿಯಲ್ಲಿ ಏಕೀಕರಣ ಪರಿಷತ್ತೂ ಸೇರಲಿವೆ. ಅಖಂಡ ಕರ್ನಾಟಕದ ಕಲ್ಪನೆಯಿದ್ದವರೆಲ್ಲ ಈ ಎರಡೂ ಪರಿಷತ್ತುಗಳಿಗೆ ಧಾವಿಸಿ, ಗಡಿನಾಡಿನ ಸಮಸ್ಯೆಗಾಗಿಯೆ ಉಪಸಮಿತಿಗಳನ್ನು ಸ್ಥಾಪಿಸಿ, ಕಾರ್ಯವು ಮುಂದುವರಿಸುವಂತೆ ಮಾಡುವುದೊಂದು ಹಾದಿಯಿದೆ.

ಸಾರ್ವಜನಿಕ ಕೆಲಸಕ್ಕಾಗಿಯೆ ಮೀಸಲಾಗಿದ್ದು, ತಮ್ಮ ಆಯುಷ್ಯವನ್ನೆಲ್ಲ ಕರ್ನಾಟಕದ ಸೇವೆಯಲ್ಲಿ ಸವೆಯಿಸಲು ಯೋಗ್ಯರಾದ ಕಾರ್ಯಕರ್ತರು ದೊರೆಯಬಹುದು; ಆದರೆ ಗುಜರಾಥದವರೂ, ಸಂಯುಕ್ತಪ್ರಾಂತದವರೂ ಗಾಂಧೀ-ಸೇವಾಸಂಘದವರೂ, ಸರ್ವಂಟ್ಸ್ ಆಫ್ ಇಂಡಿಯಾ ಸೋಸೈಟಿಯವರೂ ಇಂತಹ ಕಾರ್ಯಕರ್ತ್ಯರಿಗೆ ಮಾಸಿಕವೇತನ ಸಲ್ಲಿಸಿ, ಅವರ ಮುಪ್ಪಿನ ಹೊಟ್ಟೆಯ ಚಿಂತೆಯನ್ನೂ ಸಂಸಾರದ ಪ್ರಶ್ನೆಯನ್ನೂ ಬಿಡಿಸಿದಂತೆ, ಕರ್ನಾಟಕವೂ ಈ ವಿಷಯವಾಗಿ ಪ್ರಯತ್ನಿಸುವುದು ಅವಶ್ಯವಾಗಿದೆ. ಅಲ್ಪಾರಂಭವು ಶ್ರೇಯಸ್ಕರವಂತೆ. ಆದುದರಿಂದ ತೆಲುಗುಗಡಿ, ತಮಿಳುಗಡಿ ಮತ್ತು ಮಹಾರಾಷ್ಟ್ರಗಡಿ ಹೀಗೆ ಮೂರು ಗಡಿಗಳಿಗೆ ಒಬ್ಬೊಬ್ಬನಂತೆ ಕನಿಷ್ಠ ಮೂರು ಜನ ಕಾರ್ಯವಾಹಕರನ್ನಾದರೂ, ವೇತನಕೊಟ್ಟು, ಕರ್ನಾಟಕವು ಸದ್ಯದಲ್ಲಿ ನಿಯಮಿಸಿದರೆ, ಈ ದಿಸೆಯಲ್ಲಿ— ಎಂದರೆ ಯೋಗ್ಯ ಕಾರ್ಯಕರ್ತ್ಯರಿಗೆ ಮಾಸಿಕವೇತನ ಕೊಟ್ಟು ಕಾರ್ಯವು ಯೋಗ್ಯರೀತಿಯಲ್ಲಿ ಸಾಗುವ ದಿಸೆಯಲ್ಲಿ— ಅಖಿಲ ಕರ್ನಾಟಕದ ಕಾರ್ಯಕ್ಕಾಗಿಯೆ ಮೀಸಲಾದ ಕೆಲಸಗಾರರನ್ನು ನಿರ್ಮಿಸುವ ಕಾರ್ಯದಲ್ಲಿ ಕರ್ನಾಟಕವು ತಡವಾದರೂ ಸಿದ್ಧವಾದಂತಾಗುವುದು. ಈ ಬಗೆಯ ಗಡಿಸೀಮೆಯ ಕೆಲಸವಿಂದು ಅತ್ಯವಶ್ಯವಾಗಿದೆ.

ನೆರೆಹೊರೆಯ ಭಾಷೆಯವರ ಅತಿಕ್ರಮಣ ಜೋರಾಗಿದೆ. ಪೂರ್ವದಿಕ್ಕಿನಲ್ಲಿ ಆಂಧ್ರರು ಪ್ರಕಟವಾಗಿಯೆ ತಮ್ಮ ಕಾರ್ಯ ಸಾಗಿಸಿದ್ದಾರೆ. **ಪುಣೆ-ವಿಶ್ವವಿದ್ಯಾಲಯದ** ಯೋಜನೆಯಿಂದ ಮರಾಟಿಗರೂ ಜಾದೂ ಆಟವನ್ನು ಉತ್ತರದಿಕ್ಕಿನಲ್ಲಿ ನಡೆಯಿಸಿದ್ದಾರೆ. ದಕ್ಷಿಣಗಡಿಯಾದ ಸೇಲಮ್- ಕೊಯಿಮತ್ತೂರು-ನೀಲಗಿರಿಗಳಲ್ಲಿ, ತಮಿಳರು ಸಪ್ಪಳಿಲ್ಲದೆ ಭದ್ರವಾದ ಕೋಟೆ ಕಟ್ಟಿದಂತೆ ಮಾಡಿದ್ದಾರೆ. ನೀಲಗಿರಿಯು ಮದ್ರಾಸ ಗವ್ಹರ್ನರರ ಬೇಸಗೆಯ ರಾಜಧಾನಿಯಾಗಿದ್ದುದರಿಂದ, ತಮಿಳು ಅಧಿಕಾರಿಗಳೂ ಸೇವಕರೂ ಅಲ್ಲಿ ಧುಮ್ಮಿಕ್ಕಿ, ಕನ್ನಡವನ್ನು ಈಗಾಗಲೇ

(೬೭೨ ನೆಯ ಪುಟ ನೋಡಿರಿ)

ಸುಖವಸ್ತು ೩ ★ ಕೊರತೆ ★

ಶ್ರೀ. ಎಚ್. ಎಸ್. ಪಾಟೀಲ,
ಎಂ. ಎ., ಬಿ. ಕಾಮ್, ಮುಂಬಯಿ

★

ಈ ಮುಖ್ಯ ಶಿರೋಲೇಖದಡಿಯಲ್ಲಿ ಪ್ರತಿ ತಿಂಗಳೂ, ಇಂತಹ ಲೌಕಿಕ ವಿಚಾರಗಳ ವಿಚಾರ-ಚರ್ಚೆಯನ್ನು ಶ್ರೀ. ಪಾಟೀಲರು ಮಾಡಲಿರುವರು. —ಸಂ.

★

'ಕೊರತೆಯೆಂಬುದು ಧರಣಿಯ ಕಾಮಧೇನು!' ಎಂದೂ ಹೇಳಬಹುದು; 'ಕೊರತೆ ಕಣ್ಣು-ಮನಗಳನ್ನು ಕುರುಡುಗೊಳಿಸುತ್ತದೆ' ಎಂದೂ ಹೇಳಬಹುದು. ಜ್ಞಾನದ ಕೊರತೆಯಿರುವಲ್ಲಿ ಇದ್ದೆಲ್ಲ ತುಂಬುತನವೂ ಹಾಳು ಹಾಳು; ಅದೊಂದರ ಕೊರತೆಯಿರದಿದ್ದರೆ, ಮಿಕ್ಕ ಎಲ್ಲ ಕೊರತೆಗಳಿಗೂ ಹಾರುಗಾಲು!

ಕೊರತೆಯ ಬಗೆಗೆ ಬರೆಯ ತೊಡಗಿದ ಕೂಡಲೆ, ಮೊದಲು ಹಾಗೆ ಬರೆಯಲು ಬೇಕಾಗುವ ಹಾಳೆ, ಮಸಿ ಮುಂತಾದುವುಗಳ ಕೊರತೆಯೆ ಎದುರು ಬಂದು ನಿಲ್ಲುವುದು. ಒಮ್ಮೊಮ್ಮೆ ಈ ಬರಹಗಾರರ ಕಾಟಕ್ಕೆ ತಲೆನೋವು ಎದ್ದಾಗ 'ಇಂತಹ ಕೊರತೆ ಯಾವಾಗಲೂ ಇರಲಿ!' ಎಂದೆನಿಸಬಹುದು. ಆದರೆ ಇದು ಕೇವಲ ಬರೆಹದ ಮಟ್ಟಿಗೆ ಮರ್ಯಾದಿತವಾದ ಕೊರತೆಯಲ್ಲ; ಬರೆಯುವ ಕೆಲಸವನ್ನು ಈಗ ಮಾಡಬೇಕಾಗಿದ್ದುದರಿಂದ, ಆ ಕೆಲಸಕ್ಕೆ ಅಡೆಯಾಗುವುದು, ಎಂದರೆ ಕೊರತೆಯು ತಲೆದೋರುವುದು. ಅದರಂತೆಯೆ ಬೇರೆ ಇನ್ನಾವ ಕಾರ್ಯವನ್ನು ಮಾಡುವುದಿದ್ದರೂ, ಅಲ್ಲಿ ಈಗಿನ ದಿನಗಳಲ್ಲಿ ಆ ಕಾರ್ಯಕ್ಕೆ ಆವಶ್ಯಕ ಎನಿಸುವ ಸಾಮಗ್ರಿಗಳ ಕೊರತೆಯು ಕಂಡು ಬರುವುದು. ಚಹಾ ಕುಡಿಯ ಬೇಕೆಂದರೆ ಸಕ್ಕರೆ-ಚಹಾಪುಡಿಗಳ ಕೊರತೆ; ಊಟ ಮಾಡಬೇಕೆಂದರೆ ಅನ್ನ-ಧಾನ್ಯಗಳ ಕೊರತೆ; ಬಟ್ಟೆಗಳ ಬೆಡಗಿನಲ್ಲಿ ಅಲೆದಾಡಬೇಕೆಂದರೆ ಅವುಗಳ ಕೊರತೆ; ಕೊನೆಗೆ ಕುಳಿತಲ್ಲಿಯೆ ಕುಳಿತು ಬಾಯಿತುಂಬ ಮನಬಿಚ್ಚಿ ಹರಟಬೇಕೆಂದರೆ, ಸುದ್ದಿ-ಸ್ವಾತಂತ್ರ್ಯಗಳ ಕೊರತೆ; ಇನ್ನು ಇದ್ದ ಪರಿಸ್ಥಿತಿಗಳನ್ನಾದರೂ ಎದ್ದು ಒಪ್ಪಬೇಕೆಂದರೆ ಅಂತಹ ಬುದ್ಧಿಯ ಕೊರತೆ. ಈ ಬಗೆಯ ಕೊರತೆಯ ಕತ್ತರಿಯು ನಮ್ಮ ಕತ್ತಿನ ಸುತ್ತಲೂ ಇದ್ದರೆ— ಇದ್ದರೂ ಕೂಡ— ನಾವು ಎಂದಿನಂತೆ ಬಾಳುತ್ತಿರುವೆವಲ್ಲ....ಎಂಬುದು ಆಶ್ಚರ್ಯದಷ್ಟೆ ಆನಂದದ ಮಾತು.

'ಈ ಬಗೆಯ ಕೊರತೆಯು ಉಂಟಾಗುವುದಾದರೂ ಹೇಗೆ?' ಎಂದು ಯಾರಾದರೂ ಕೇಳಬೇಕೆಂದರೆ, ನಾವು ಮೊದಲೇ ಅರ್ಥಶಾಸ್ತ್ರಜ್ಞರ ಕಡೆಗೆ ನೋಡಹೇಳುತ್ತೇವೆ. ಇಂಗ್ಲಂಡ್-ಜಪಾನುಗಳಲ್ಲಿ ಆಹಾರಸಾಮಗ್ರಿಗಳ ಹುಟ್ಟುವಳಿಯೆ ಕೊರತೆಯಲ್ಲಿರಬಹುದು. ಅದಕ್ಕೆ ಕಾರಣರಾರು? ರಶಿಯಾ-ಚೀನಗಳಲ್ಲಿ ಹುಟ್ಟುವಳಿಗಿಂತ ಜನರ ಪ್ರಮಾಣದ ಮಿತಿಯೆ ಮೀರಿ, ಅನ್ನ-ವಸ್ತ್ರಗಳು ಕಡಿಮೆಯೆನಿಸುತ್ತಿರಬಹುದು. ಅದಕ್ಕೆ ಕಾರಣರಾರು? ಅಮೇರಿಕೆ-ಜರ್ಮನಿಗಳಲ್ಲಿ ಜನರ ಜೀವನವೇ ಹೆಚ್ಚು ವೆಚ್ಚ ಮಾಡುವಂತಹದಿದ್ದು, ಅವರಿಗೆ ಎಷ್ಟು ಒದಗಿಸಿದರೂ ಅದು ಸಾಲಲಿಕ್ಕಿಲ್ಲ. ಅದಕ್ಕೆ ಕಾರಣರಾರು? ಆಫ್ರಿಕಾ-ದಕ್ಷಿಣ ಅಮೇರಿಕೆಗಳಲ್ಲಿ ಇದ್ದ ವಸ್ತುಗಳನ್ನು ಸಿದ್ಧಮಾಡಿ ಅವುಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುವ ಜ್ಞಾನದ ಕೊರತೆಯಿರಬಹುದು. ಅದಕ್ಕೆ ಕಾರಣರಾರು? ಹಿಂದುಸ್ಥಾನದಂತಹ ಧನ-ಧಾನ್ಯಗಳ ಸಮೃದ್ಧಿಯಿದ್ದ ದೇಶದಲ್ಲಿ, ಅದರ ಸುಖವನ್ನು ಹಚ್ಚಿಕೊಳ್ಳಲು ಬೇಕಾಗುವ ಸ್ವಾತಂತ್ರ್ಯ-ಐಕ್ಯಗಳ ಕೊರತೆಯಿರಬಹುದು. ಅದಕ್ಕೆ ಕಾರಣರಾರು?..., ಹೀಗೆ ಅನೇಕ ಬಗೆಯ ಕಾರಣಗಳು— ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೂಪದಲ್ಲಿ ಕಾಣುವ— ಕೊರತೆಗೆ ಮೂಲಗಳಾಗಿರುತ್ತವೆ.

ಇದರ ಮೇಲಿಂದ 'ಕೊರತೆಯು ಕೇವಲ ಕಾಳಗದ ಕೂಸು' ಎಂದು ಮಾತ್ರ ತಿಳಿಯಬಾರದು. ಕೊರತೆಯು ಅನಾದ್ಯನಂತವಾಗಿ ಸಾಗಿದೆ. ಹಾಗೆ ನೋಡಿದರೆ, ಇಡಿಯ ಬದುಕಿನ ಮೊದಲೇ ಕೊರತೆಯ ತಿಳಿವಿನಲ್ಲಿದೆ ಎಂದು ಹೇಳಬೇಕಾಗುವುದು. ಮನುಷ್ಯನಿಗೆ ಮೊದಲು ತನ್ನ ಹೊಟ್ಟೆ-ಬಟ್ಟೆಗೆ ಯಾವುದೊ ಒಂದು ಕೊರತೆಯಿದೆ ಎಂಬ ತಿಳವು ಉಂಟಾದಹೊರತು, ಅವನು ಅದನ್ನು ದೊರಕಿಸಿ ಆ ಕೊರತೆಯನ್ನು ಹೋಗಲಾಡಿಸಿಕೊಳ್ಳಲು ಹೆಣಗುವುದು ಹೇಗೆ? ಬಡ ಜನರಿಗೆ ತಮ್ಮ ಬಡತನದ ಅರಿವು ಆಗದೆ ಇದ್ದರೆ ಅವರು ಹೆಚ್ಚು ಹಣ-ವಸ್ತುಗಳನ್ನು ದೊರಕಿಸಲು ಹವಣಿಸುವುದು ಹೇಗೆ? ಶ್ರೀಮಂತರಿಗೆ ತಮ್ಮಲ್ಲಿ ಏನಾದರೊಂದು ಕೊರತೆಯಾಗಲಿ, ಬೇನೆ ಬಳಲಿಕೆಯಾಗಲಿ ಇದ್ದುದರಿಂದಲೇ, ತಮ್ಮ ಪಾಲಿಗೆ ಸಾಕಷ್ಟು ಸುಖವಿಲ್ಲ ಎಂಬುದನ್ನು ಮನಗಂಡ ಹೊರತು, ಅವರು ಅದಕ್ಕಾಗಿ ಇಲ್ಲದ ತೋರಿಕೆ ಮಾಡುವುದನ್ನಾಗಲಿ ಇಲ್ಲವೆ ಕಂಡಂತೆ ಹಣವನ್ನು ವೆಚ್ಚ ಮಾಡುವ ಹಾದಿಗೆ ಹತ್ತುವುದನ್ನಾಗಲಿ ಮಾಡುತ್ತಿದ್ದರೇಕೆ? ಪಡುವಣದ ದೇಶಗಳಲ್ಲಿಯ ಜನರಿಗೆ ಇರಲು ಜಾಗವು ಕಡಿಮೆ ಇದೆ ಎಂಬುದು ಗೊತ್ತಾಗದೆ ಅವರು ಸುಧಾರಣೆ, ಮತಪ್ರಚಾರ, ವಿದ್ಯಾಪ್ರಸಾರ, ಸಂಸ್ಕೃತಿ ಸಂವರ್ಧನ ಮೊದಲಾದ ಹೆಸರು-

ಗಳಿಂದ ಬೇರೆ ದೇಶಗಳಲ್ಲಿ ಹೋಗಿ ನೆಲಸುವ ಹಂಚಿಕೆಗಳನ್ನು ಮಾಡುತ್ತಿದ್ದರೇಕೆ ? ಅಷ್ಟೇಕೆ, ಗಂಡ-ಹೆಂಡಿರಲ್ಲಿ ಸಮಾಧಾನ-ವಿಲ್ಲದ್ದಕ್ಕೆ ಅವರಿಬ್ಬರಲ್ಲಿ ಪರಸ್ಪರ ತಿಳಿವಿನ ಕೊರತೆಯೆ ಕಾರಣ ಎಂಬುದು ತೋಚದ ವಿನಾ, ಅವರಿಬ್ಬರೂ ಒಬ್ಬರಿನ್ನೊಬ್ಬರನ್ನು ತಿಳಿದು ತೋಷಿಸಲು ತವಕಪಡಬಹುದೆ ? ಈ ಜಗತ್ತಿನಲ್ಲಿ ನಮಗೆ ಬೇಕಾದುದನ್ನು ದೊರೆಕಿಸುವ ಶಕ್ತಿಯಾಗಲಿ, ಇದ್ದುದರಲ್ಲಿ ಸಂತೋಷಪಡುವ ಬುದ್ಧಿಯಾಗಲಿ ಕೊರತೆಯಿದ್ದ ಹೊರತು ಮನುಷ್ಯನು ದೂರದ ದೈವಕ್ಕೆ ಹೆಸರಿಡಬಹುದೆ? ಸುಳ್ಳು ಸ್ವರ್ಗಕ್ಕೆ ಮನಸೋಲಬಹುದೆ ?

ಈ ಕೊನೆಯ ವಾಕ್ಯವೇ ನಮ್ಮನ್ನು ಬೇರೊಂದು ವಿಚಾರಕ್ಕೆ ಎಳೆದು ತರುವ ಉದಾಹರಣೆಯಾಗಿದೆ. ಒಂದು ಕೊರತೆಯೆನಿ-ಸಿದಾಗ ಅದು ಸಿಕ್ಕಲಾರದಂತಾಗಲು, ಮನುಷ್ಯನು ಅದರಂತಹ ಬೇರೆ ವಸ್ತು-ವ್ಯಕ್ತಿಗಳಿಂದ ತನ್ನ ಹಸಿವನ್ನು ಹಿಂಗಿಸಿಕೊಳ್ಳು-ತ್ತಾನೆ. ಇದಕ್ಕೇ ಅರ್ಥಶಾಸ್ತ್ರಜ್ಞರು **ಬದಲು** ಎನ್ನುವರು. ಮೊದಲು ಉಣ್ಣೆ-ರೇಶಿಮೆಗಳ ಕೊರತೆಯೆನಿಸಿದಾಗ ನೂಲಿನ ಬಟ್ಟೆಯ ವಿಚಾರವು ಹೊಳೆದಿರಲಿಕ್ಕೆ ಸಾಕು. ಈಗ ಜೋಳ-ಅಕ್ಕಿ-ಗೋದಿಗಳು ಕಡಿಮೆಯೆನಿಸುವುದರಿಂದಲೇ ನಮಗೆ ಸಜ್ಜೆ-ರಾಗಿಗಳು, ಅದೇಕೆ ಹುಲ್ಲು-ಕಡ್ಡಿಗಳು ಸಹ ಕಾಣಹತ್ತುತ್ತವೆ. ಇಂತಹ ಸಮಯದಲ್ಲಿ, ಸಿಕ್ಕ ವಸ್ತುಗಳೇ ಸಮಾಧಾನದ ಸಾಧನ-ಗಳಾಗುತ್ತವೆ. ಅಂತೆಯೆ ಅಲ್ಲವೇ ಸಲ್ಲದ ಸ್ವರ್ಗವು ಬೆಲ್ಲ-ದಂತಹ ಬಾಳುವೆಗಿಂತ ಹೆಚ್ಚು ಮೋಹಕವೆನಿಸುವುದು ? ಇದ-ಕ್ಕೇನು 'ಕೊರತೆಯ ಕಿಡಿಗೇಡಿತನ' ಎನಬೇಕೊ ಇಲ್ಲವೆ ಅಭಾವ ವೈರಾಗ್ಯವೆನಬೇಕೊ ?

ಇನ್ನು ಒಂದು ಕಡೆಯಲ್ಲಿ ಒಂದು ಬಗೆಯ ಕೊರತೆಯೆನಿಸು-ತ್ತಿದ್ದರೆ, ಇನ್ನೊಂದು ಕಡೆಯಲ್ಲಿ ಅದರ ಇಲ್ಲವೆ ಅದರ ಪರಿ-ಣಾಮವಾಗಿ ಬೇರೆ ಬಗೆಯ ಸಮೃದ್ಧಿಯಿರುತ್ತದೆ. ಬಡತನದಲ್ಲಿ ಊಟ-ಉಡಿಗೆಗಳ ಕೊರತೆಯಿದ್ದರೆ, ಅದೆ ಅವಸ್ಥೆಯಲ್ಲಿ ಸಂತತಿಯ ಸಮೃದ್ಧಿಯಿರುತ್ತದೆ. ದೈವವುಳ್ಳವರು—ಅಂತೆಯೆ ಶ್ರೀಮಂತರು ಹಣವನ್ನು ಹೇಗೆ ವೆಚ್ಚ ಮಾಡಬೇಕು ಎಂಬ ಚಿಂತೆಯಲ್ಲಿರುವಂತೆ ಅದರ ಸಮೃದ್ಧಿಯನ್ನು ಪಡೆದಿದ್ದರೆ, ಆರೋಗ್ಯದ ಕೊರತೆಯಿಂದಾಗಲಿ, ಅಜ್ಞಾನದ ಅಂಧಕಾರದಲ್ಲಿಯಾಗಲಿ ಬಳಲುತ್ತಿರುತ್ತಾರೆ. ಅದರಂತೆಯೆ ಯುದ್ಧಕಾಲದ ಕೊರತೆಗಳು ಕೂಡ ಏಕಾಂಗೀನವಾದುವಿರುತ್ತವೆ. ಕಡಿಮೆ ಗಳಿಕೆಯ ಜನರಿಗೆ ಕೂಡಿಡು-ವಷ್ಟು ಬಿಡಲಿ, ಕೊನೆಗೆ ಬೇಕಾಗುವಷ್ಟು ಸಾಮಗ್ರಿಗಳನ್ನಾದರೂ ಕೊಂಡುಕೊಳ್ಳಬೇಕೆಂದರೆ 'ಸಾಕಷ್ಟು ಹಣ ಇರುವುದಿಲ್ಲ; ಇದ್ದ ತುಸು ಹಣದಿಂದ ಸಾಮಾನ್ಯ ಜೀನಸುಗಳನ್ನಾದರೂ ಪಡೆಯಬೇಕೆಂದರೆ ಇತ್ತ ಅವುಗಳ ಕೊರತೆಯಿರುತ್ತದೆ; ಅತ್ತ ಸಿರಿವಂತರು, ವ್ಯಾಪಾರಿಗಳು ಮತ್ತು ಬೇರೆ ಕೆಲವರು ಬೇಕಾಗ-ದಿದ್ದರೂ ಕೂಡಿಡುತ್ತಾರೆ; ಹೆಚ್ಚು ಲಾಭ ಬರಬಹುದು ಎಂದು ಮುದುಗಿಸಿಡುತ್ತಾರೆ; ಮುಂದೆ ಬೇಕಾಗಬಹುದು ಎಂದು ಇಂದು ಇಟ್ಟು ಕೆಡಿಸುತ್ತಾರೆ; ಇಲ್ಲವೆ '**ನಾವು ಪಡೆಯುವವರೆ**, ಅದು ಕೆಡಲಿ ಇಲ್ಲವೆ ಸುಡಲಿ !' ಎಂಬ 'ಹೆಚ್ಚುತನ' ದಿಂದ ಹಿಡಿದಿಡುತ್ತಾರೆ. ಇನ್ನು ಒಕ್ಕಲುತನದ ದೇಶಗಳಲ್ಲಿ ಆಹಾರ ಸಾಮಗ್ರಿಗಳ ಕೊರತೆಯೆನಿಸುವಾಗ, ಮುಂದುವರಿದ ರಾಷ್ಟ್ರಗಳಲ್ಲಿ ಅದರ ಸಮೃದ್ಧಿಯಿರುವುದು ಸಹ ಇದೇ ಬಗೆಯ ಸ್ಥಿತಿಯ ಉದಾಹರಣೆಯಾದರೂ, ಅದಕ್ಕೆ ಕಾರಣಗಳು ಮಾತ್ರ ಬೇರೆ ಇರಬಹುದು.

ಇದಕ್ಕೆ ಪ್ರತಿಯಾಗಿ ಕೆಲವು ಸಂದರ್ಭಗಳಲ್ಲಿ 'ಅಜ್ಞಾನವೇ ಕೊರತೆಯ ತವರು' ಎಂದು ಹೇಳಿದರೆ, ಇನ್ನು ಕೆಲವೆಡೆಯಲ್ಲಿ 'ಕೊರತೆಯ ಅಜ್ಞಾನವೆ ಆನಂದದ ಮೂಲ' ಎಂದು ಹೇಳು-ವಂತಹ ಸ್ಥಿತಿಯಿರುತ್ತದೆ. 'ಎರಡೂ ಮನೆಗಳನ್ನು ಹಸನಾಗಿ-ರಿಸಿಕೊಂಡರೆ ಇಬ್ಬರಿಗೂ ಆರೋಗ್ಯ ಎನಿಸುವುದು' ಎಂಬ ತಿಳಿವಿನ ಕೊರತೆಯಲ್ಲಿ ನಾವು ಸುಮ್ಮನೆ ಕೊಳೆಯುತ್ತ, ನೆರೆಮನೆಯವ-ರೊಡನೆ ಸಹಕರಿಸದೆ, ಅಸಹ್ಯವಾದ ಹೇಸಿಕೆಯನ್ನು ಸಹಿಸಿ-ಕೊಳ್ಳುತ್ತೇವೆ; ಮೇಲೆ ಬದಿಯ ಮನೆಯೆದುರು ನಮ್ಮ ಕಸವನ್ನು ಚೆಲ್ಲಿ, ಇಬ್ಬರಿಗೂ ಅಪಾಯವಾಗುವಂತೆ ಮತ್ತು ಹೆಚ್ಚಿನ ರೋಚ್ಚು ಹುಟ್ಟುವಂತೆ ನಮ್ಮ ಆಚರಣೆಯನ್ನಿಟ್ಟುಕೊಳ್ಳುತ್ತೇವೆ. ಅದರಂತೆಯೆ, ಎಲ್ಲರನ್ನೂ ಒಂದೇ ಬಗೆಯಾಗಿ ತಿಳಿದರೆ, ಎಲ್ಲಿ ನೋಡಿದಲ್ಲಿ ಅದರ ಪರಿಣಾಮವಾಗಿ ಸುಖ-ಸಮಾಧಾನಗಳು ನೆಲೆ ನಿಲ್ಲಬಹುದು' ಎಂಬ ಜ್ಞಾನದ ಕೊರತೆಗಾಗಿಯೆ ಕೆಲವರು, ತಾವು ತಿಳಿದವರು ಎಂದುಕೊಂಡು ತೊಳಲಾಡುತ್ತಾರೆ; ಮಿಕ್ಕ-ವರನ್ನು 'ತಿಳಿಗೇಡಿಗಳು' ಎಂದು ಕೆಳಕ್ಕೆ ನೂಕಲು ತವಕಪಡು-ತ್ತಾರೆ, ಹಾಗೂ ಆ ಪ್ರಯತ್ನದಲ್ಲಿ ಕೆಳಗಿನವರಿಗೆ ಕೂಡ ಮೇಲಿನ ವಿಚಾರಗಳು ನಿಲುಕಲಾರದಂತೆ ಚನ್ನಾಟವಾಡುತ್ತಾರೆ.

ಈ ಬಗೆಯ ತಿಳಿವಿನ ಕೊರತೆಯನ್ನು ಹೋಗಲಾಡಿಸುವುದಕ್ಕೂ ಅದರ ಸ್ಥಾನದಲ್ಲಿ ಆಶೆ-ಆಕಾಂಕ್ಷೆಗಳ ಬೆಳಕನ್ನು ಕೆಡಹಲಿಕ್ಕೂ ಬೇರೆ ಬೇರೆ ವಿದ್ವಾಂಸರು ಬಗೆಬಗೆಯ ಉಪಾಯಗಳನು ಸೂಚಿಸಿರುತ್ತಾರೆ. ಅದರಲ್ಲಿಯೂ **ಆಲ್ಡಸ್ ಹಕ್ಸ್ಲೀ** (Aldus Huxley) ಎಂಬ ಇಂದಿನ ತತ್ತ್ವಜ್ಞಾನಿಯು ಎರಡು ಬಗೆಯ ಯೋಜನೆಗಳನ್ನು ಸೂಚಿಸುತ್ತಾನೆ. ಮೊದಲ-ನೆಯದಾಗಿ "ಬೇರೆ ಬೇರೆ ಸಾಂಪತ್ತಿಕ ಇಲ್ಲವೆ ಸಾಮಾಜಿಕ ಮಟ್ಟಗಳ ಜನರಲ್ಲಿ ಅವರವರ ದೈನಂದಿನ ಕೆಲಸಗಳನ್ನು ಅದಲು ಬದಲು ಮಾಡಬೇಕು" ಎಂದು. ಉದಾಹರಣಾರ್ಥವಾಗಿ "ಒಬ್ಬ ಪ್ರೊಫೆಸರ್ ಮತ್ತು ಒಬ್ಬ ಗಿರಣಿಯ ಕೆಲಸಗಾರ ಇವರು ತಮ್ಮ-ತಮ್ಮೊಳಗೆ ಕೆಲಕಾಲದ ಮಟ್ಟಿಗೆ ತಮ್ಮ ಉದ್ಯಮಗಳನ್ನು ಬದಲು ಮಾಡಿಕೊಳ್ಳಬೇಕು. ಅದರಂತೆಯೆ ಒಬ್ಬ ಉಂಡಾಡುವ 'ಆದರ್ಶಮಹಿಳೆ' ಮತ್ತು ಇನ್ನೊಬ್ಬ ಹೊಲ-ಮನೆಗಳಲ್ಲಿ ದುಡಿದು ಹೊಟ್ಟೆತುಂಬಿಕೊಳ್ಳುವ 'ಭೂಮಿಜೆ', ಇವರು ತಮ್ಮ ಪಾಲಿನ ಹೊಣೆಯನ್ನು ಬದಲಿಸಿಕೊಳ್ಳಬೇಕು. ಎಂದರೆ ಅವರವರಿಗೆ ಪರಸ್ಪರ ಜ್ಞಾನವಾಗಿ, ಆ ಆ ಕೆಲಸದ ಹೊಣೆಯು

ತಿಳಿದು ಮುಂದೆ ಅವರಲ್ಲಿರುವ ಅಸದೃಶವಾದ ಅಂತರಗಳು ಕೂಡ ನಿಜವಾಗಿಯೂ ಅದೃಶ್ಯವಾಗುವವು" ಎಂದು. ಇನ್ನು ಎರಡನೆಯದಾಗಿ ಆತನು "ಇಂತಹ ಸಂಗಡಗಳಲ್ಲಿಯ ಇರುವಿಕೆಯೆ ಬದಲಾಗಬೇಕು" ಎಂದು ಹೇಳುತ್ತಾನೆ. ಅತಿ ಶೀಘ್ರವಾದ ಭೇದಭಾವಗಳು ಸಮಾಜದಲ್ಲಿ ಗೋಚರಿಸುತ್ತಿದ್ದಾಗ ಒಬ್ಬ ಬಡವನನ್ನು ಕೆಲಕಾಲ ಶ್ರೀಮಂತರ ನಡುವೆ ತಂದಿಡಬೇಕು; ಮತ್ತು ಆ ಸಿರಿವಂತನನ್ನು ಬಡವನ ಗುಡಿಸಿಲಿನಲ್ಲಿ ಒಯ್ದಿಡಬೇಕು. ಅದರಂತೆಯೆ ಒಬ್ಬ ಸಾಮಾನ್ಯ ಮನುಷ್ಯನ ಸ್ಥಾನವನ್ನು ಒಬ್ಬ ವಿದ್ವನ್ಮಣಿಯ ಜಾಗದಲ್ಲಿ ಬದಲು ಮಾಡಬೇಕು. ಇದರಿಂದ ಕೂಡ ಒಬ್ಬನಿಗೆ ಆಗುವ ಕಷ್ಟ-ನಷ್ಟಗಳು ಇನ್ನೊಬ್ಬನಿಗೆ ತಿಳಿದು, ಒಬ್ಬನ ಇರವಿನ ನಿಜವಾದ ಅನುಭವಗಳು ಇನ್ನೊಬ್ಬನಿಗೆ ಉಂಟಾಗಿ, ಒಬ್ಬನು 'ಸುಖಿ' ಎಂದು ತಿಳಿದ ಬಿಳಿಯ ವಸ್ತು ನಿಜವಾದ ಹಾಲಲ್ಲ ಎಂಬುದು ಮನಗಂಡು, ಅನ್ಯೋನ್ಯ ಸಂಬಂಧವು ಹೆಚ್ಚು ಅನುರಾಗ, ಅನುಕಂಪ ಹಾಗೂ ಅನುಭೂತಿಗಳಿಂದ ತುಂಬಬಹುದು.

ಅದರಂತೆಯೆ ಕೆಳಗೆ ಕಾಣಿಸಿದ ಮೂರು ಉದಾಹರಣೆಗಳು ಕೂಡ ಈ ಬಗೆಯ ಕೊರತೆಯನ್ನು ಹೋಗಲಾಡಿಸಲು—ಎಂದರೆ ಆ ಕೊರತೆಯ ತಿಳುಹನ್ನುಂಟುಮಾಡಲು— ಉಪಯುಕ್ತ ಉಪಾಯವೆಂದೆನ್ನಬಹುದು.

ಒಂದು ಹುಣ್ಣಿಮೆಯ ಇರುಳು. ಪೂರ್ಣಚಂದ್ರನು ತನ್ನ ಅಂಗೈಗಳಿಂದ ಇಡಿಯ ಪೊಡವಿಯನ್ನೇ ತಣಿಸಹತ್ತಿದ್ದಾನೆ. ಅಂತಹ ಸಮಯದಲ್ಲಿ ಒಂದು ನವದಂಪತಿಯು ಕಡಲಂಚಿನಲ್ಲಿ ಸಾಕಾಗುವಷ್ಟು ನಲಿದಾಡಿ, ನಟ್ಟಿರುಳಿನಲ್ಲಿ ನಗುತ್ತ ಕೆಲೆಯುತ್ತ ಮನೆಗೆ ಬಂದು, ಆ ಮೇಲೆ ಆಯಾಸವಾದಂತೆನಿಸಿ, ಹಾಗೆಯೆ, ತೊಟ್ಟಿಲಲ್ಲಿ ಮಲಗಿದ ಕೂಸನ್ನು ಮರೆತು ತಾವು ಮಲಗಿಬಿಡುತ್ತಾರೆ. ಆಗ ಇತ್ತ ಬೆಳದಿಂಗಳು, ಅತ್ತ ಸೂಸುಗಾಳಿ, ಬಳಿಯಲ್ಲಿ ತುಂಬುಗಡಲು, ಮೇಲೆ ಸಾಲ್ಗಡಲು! ಇಷ್ಟಿದ್ದರೂ ಕೂಡ ಕೂಸು ಚಿಟ್ಟೆಂದು ಚೀರಹತ್ತುತ್ತದೆ. ಆ ತಂದೆ-ತಾಯಂದಿರಿಗೆ ಮೊದಲೇ ತಮ್ಮ ದಣಿವಿನ ನೋವು; ಇತ್ತ ನಿದ್ದೆಯ ಹೊತ್ತು. ಹೀಗಿದ್ದಾಗ ಆ ಕೂಸು ಏಕೆ ಅಳುವುದು ಎಂಬುದು ತಿಳಿಯದೆ ಹೋಗುವುದು; ಮುಂದೆ ಸಿಟ್ಟು ಬರುವುದು; ಕೊನೆಗೆ ನಿರುಪಾಯರಾಗಿ ಎದ್ದು ಬಂದು ನೋಡಲಾಗಿ, ಆ ಕೂಸು ಹಸಿದುದು ಕಂಡುಬರುವುದು.

ಒಂದು ಚಂದವಾದ ಹಳ್ಳಿ. ಅಲ್ಲಿರುವ ಹಲವಾರು ಹಳ್ಳಿಗರಲ್ಲಿ ಒಬ್ಬನು ತನ್ನ ಮನೆ-ಮಾರುಗಳೊಂದಿಗೆ ಸುಖಿಯಾಗಿದ್ದಾನೆ. ಆದರೆ ಆತನ ಮಡದಿಯು ಮಾತ್ರ ಹಾಕಿದಷ್ಟು ತಿಂದು, ಹೇಳಿದಷ್ಟು ಮಾಡಿ, ತೋರಿಸಿದಲ್ಲಿ ಕುಳಿತುಕೊಂಡು ಸುಮ್ಮನೆ—ಎಂದರೆ ಪಿಟ್ಟೆಂದು ಮಾತನಾಡದೆ—ಕಾಲ ಕಳೆಯುತ್ತಾಳೆ. ಅಂತಹ ಪರಿಸ್ಥಿತಿಯಲ್ಲಿ ಆಕೆಯು ಅಷ್ಟು ಮೌನವನ್ನು ಏಕೆ ಧರಿಸಿರಬಹುದು ಎಂಬುದು ಯಾರಿಗೂ ತಿಳಿಯುವುದಿಲ್ಲ. ಆದರೆ ಆಕೆಯ ಕೈಹಿಡಿದವನಿಗೆ ಮಾತ್ರ ಗೊತ್ತು, ತಾನು ಪ್ರಾಮಾಣಿಕನಿಲ್ಲ ಎಂಬುದು.

ಅಂತಹದೇ ಆದ ಒಂದು ಸುಖಸಂಪದಭಿವೃದ್ಧಿಯ ನಾಡು. ಅಲ್ಲಿ ಬೇಕಾದುದೆಲ್ಲ ಬೆಳೆಯುತ್ತದೆ. ಜಾಣರೂ ಜಾಗರೂಕರೂ ಇರುತ್ತಾರೆ. ಆಗ ಅವರ ಮೈಮೇಲೆ ಸುಮ್ಮಸುಮ್ಮನೆ ನೆರೆನಾಡಿನ ಒಂದು ಜನಾಂಗವು ಮುತ್ತಿಗೆ ಹಾಕಿ ಬಂದು ಅವರನ್ನು ಪೀಡಿಸಹತ್ತುತ್ತದೆ. ಆಗ ಆ ನಾಡಿನವರು ತಲೆಗಳನ್ನು ಎತ್ತಿ, 'ಅವುಗಳನ್ನು ಕಡಿಯಿರಿ' ಎಂದು ನೆರೆಯವರೆದುರಿಗಿಡುತ್ತಾರೆ. ಆಗ ಅವರಿಗೆ ತಿಳಿಯುತ್ತದೆ ತಮ್ಮ ಕಸುವಿನ ಕೊರತೆ. ಈ ಮೂರು ದೃಷ್ಟಾಂತಗಳಲ್ಲಿ, ಕಸುವು-ತಿಳಿವುಗಳ ಕೊರತೆಯೇ ಆ ಕೊರತೆಯ ಕಸುವು-ತಿಳಿವುಗಳನ್ನುಂಟುಮಾಡುತ್ತದೆ; ಹೆಚ್ಚಿಸುತ್ತದೆ.

(೨೬೫ ನೆಯ ಪುಟದಿಂದ ಮುಂದೆಸಾಗಿದ್ದು)

ಊಟೀ- ಕುನೂರುಗಳಲ್ಲಿ ಲೂಟಿಮಾಡಿಬಿಟ್ಟಿದ್ದಾರೆ! ಹಳ್ಳಿಗಳೂ ಕೊಳ್ಳೆಬೀಳುವ ಪೂರ್ವದಲ್ಲಿ ಕನ್ನಡದ ಬಾವುಟ ಅಲ್ಲಿ ಹಾರಾಡಲೇ ಬೇಕಾಗಿದೆ. ಇದೊಂದು ಕಾರಣ; ಎರಡನೆಯ ಕಾರಣವೂ ಒಂದಿದೆ: ಈ ಯುದ್ಧದ ಕಾಲದಲ್ಲಿಯೆ ರಾಷ್ಟ್ರೀಯ ಸರಕಾರ ಬಂದರೂ ಬರಬಹುದು. ಕದಾಚಿತ್ ಯುದ್ಧಾವಧಿಯಲ್ಲಿ ಬಾರದಿದ್ದರೂ, ಯುದ್ಧ ಮುಗಿದೊಡನೆ ಹಿಂದುಸ್ಥಾನಕ್ಕೆ ಹೊಸದೊಂದು ಪ್ರಜಾಸತ್ತೆಯುಳ್ಳ ಯುಗಪ್ರಾರಂಭವಾಗದೆ ಇರದು. ಪ್ರಜಾಸತ್ತೆ ಪ್ರಾರಂಭವಾದೊಡನೆ ಭಾಷಾನ್ವಯ ಪ್ರಾಂತರಚನೆ ಬಾರದೆ ಹೋಗದು. ಆಗ ಗಡಿ-ನಿರ್ಮಾಣದ ಬಗ್ಗೆ—ಕಮಿಶನ್ನಿನ ಕಾರ್ಯ ಪ್ರಾರಂಭವಾದರೆ, ಕನ್ನಡದ 'ಕೇಸು' ದುರ್ಬಲವಾಗುವ ಸಂಭವವಿದೆ—ಆದರೆ ಗಡಿನಾಡನ್ನು ನಾವು ಈಗಲೆ ಚೇತರಿಸಿದರೆ ಮಾತ್ರ ಕನ್ನಡಿಗರ ಅಲ್ಲಿಯ ಶಕ್ತಿ ಪ್ರಚಂಡವಾಗಿ ಬೆಳೆಯುವುದು. ಇಲ್ಲಿ ಮುಚ್ಚಿದ ಕೆಂಡದ ಕಾವು ಸಾಕಷ್ಟಿದೆ. ಈ ಸುಪ್ತವಹ್ನಿಯು ಹೊರಗೆ ಬಂದು ಪ್ರಜ್ವಲಿಸಲಿಕ್ಕೆ ಕನಿಷ್ಟ ಎರಡು ವರ್ಷದ ಸತತ ಪ್ರಯತ್ನ ಅತ್ಯವಶ್ಯ. ಆದುದರಿಂದ ಈ ಗಡಿನಾಡಿನ ಸಮಸ್ಯೆಯನ್ನು ಕನ್ನಡಿಗರು ಈಗಲಾದರೂ ತಮ್ಮ ಕಾರ್ಯದ ಪ್ರಥಮ ಶ್ರೇಣಿಯಲ್ಲಿರಿಸಿಕೊಳ್ಳಬೇಕಾಗಿ ನಮ್ರವಾದ ವಿನಂತಿಯಿದೆ.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧-೮-೦

ಸ್ತ್ರೀ-ಪುರುಷ ಲಕ್ಷಣ, ಸಂಭೋಗಕಾಲ ನಿರ್ಣಯ, ರತಿಸಮಯದ ಹಾವ-ಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧-೮-೦

ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧-೮-೦

ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧-೮-೦

ಸಂತತಿನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ. ಗೋಪಾಲಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧-೮-೦

ಸಂಭೋಗಸುಖ, ಗಂಡಹೆಂಡಿರಲ್ಲಾಗುವ ಆತ್ಮೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿಸೌಖ್ಯಕ್ಕೂ ಸಂತಾನ ಸುವ್ಯಕ್ತತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ. ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧-೮-೦

ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ, ಶಯನ ಇತ್ಯಾದಿ........

ಪ್ರೇಮಕಲಾ ೧-೮-೦

ಅಶ್ಲೀಲವಲ್ಲ. ಶಾಸ್ತ್ರೀಯಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧-೮-೦

ಪ್ರಸಿದ್ಧ ಡಾಕ್ಟರುಗಳ ನೂರು ಶಾಸ್ತ್ರೀಯ ಪುಸ್ತಕಗಳು: ಉನ್ಮಾದ, ವೇಶ್ಯಾವೃತ್ತಿಯ ಹಾವಳಿ, ಲೈಂಗಿಕ ಹಾಗೂ ಗುಪ್ತರೋಗಗಳ ಚಿಕಿತ್ಸೆ........

ವ್ಹಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗಾಗಿ ಒಂದಾಣೆ ಅಂಚೆಯ ಚೀಟಿ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಅಚ್ಚಾಗಿದೆ! **ಪ್ರಕಟವಾಗಿದೆ!!**

❁ ಸಂತಾನಸಂಯಮ ❁

ಬರೆದವರು: **ಡಾ. ದೊಡ್ಡೇರಿ ವೆಂಕಟಗಿರಿರಾವ್**

ಸಂತಾನಸಂಯಮವೆಂದರೇನು, ಅದರ ನೀತಿಧರ್ಮಗಳೇನು, ಅದರ ಆವಶ್ಯಕತೆ ಕಾಮನಿರೋಧವೆ, ಗರ್ಭನಿರೋಧನೆ, ಗರ್ಭನಿರೋಧದ ಮಾರ್ಗಗಳಾವುವು, ಗರ್ಭನಿರೋಧಕ್ಕೆ ಸಹಕಾರಿಯಾಗುವ ಸಂಭೋಗಾಸನಗಳು, ಕೃತ್ರಿಮ ವಿಧಾನಗಳು ಮೊದಲಾದುಗಳೆಲ್ಲ ಶಾಸ್ತ್ರೀಯವಾಗಿ ವಿವೇಚಿಸಿ ಬರೆಯಲ್ಪಟ್ಟಿವೆ.

ಬೆಲೆ ರೂ. ೧-೦-೦, ಅಂಚೆ ವೆಚ್ಚ ಬೇರೆ

ಸಿಗುವ ಸ್ಥಳ :—

ಮಾಡರ್ನ್ ಫಾರ್ಮಸಿ, ದೊಡ್ಡಬಳ್ಳಾಪುರ

ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು

ಸಮಾಜ ಪುಸ್ತಕಾಲಯ, ಧಾರವಾಡ

ಶೀಲಧಾ

ಎಂಟೀ ಮಲೇರಿಯಾ ವನಸ್ಪತಿ ಪಿಲ್ಸ್

ಎಲ್ಲ ತರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆಯ ಮೇಲೆ ರಾಮಬಾಣ! ಲಿವರ್, ಹೊಟ್ಟೆನೋವು, ಮಲಬದ್ಧತೆ ಸುಧಾರಿಸಿ ಶಕ್ತಿ ಬೆಳಿಸುತ್ತದೆ! ಕ್ವಿನ್ಯಾನ್ ಸಿಗದ್ದರಿಂದ ವೈದ್ಯ ಡಾಕ್ಟರರು, ದವಾಖಾನೆಗಳಲ್ಲಿ ವಾಪರಿಸುವರು. ೧೦೦೦ ಗುಳಿಗೆಗೆ ರೂ. ೧೫. ೧೦೦ಕ್ಕೆ ೧ ೧೨-೦. ಔಷಧದಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಬಹುಮಾನ. ಪ್ರತಿ ಊರಿನಲ್ಲಿ ಮಾರುವ ಏಜಂಟರು ಬೇಕು.

ಶೀಲಧಾ ಕೆಮಿಕಲ್ ಕಂಪನಿ, ಸಿರಸಿ, ಉ. ಕ.

ಸೋಲ್ ಏಜಂಟರು :—

ಎಸ್. ಎಲ್. (ಅಪ್ಪುರಾವ) ಧಾಕಪ್ಪ

ಬಡವರ ಔಷಧಿ ಸರ್ವಿಸ್, ಸಿರಸಿ, ಉ. ಕಾನಡಾ.

ಸಿರಸಿ-ಸಿದ್ದಾಪುರಗಳಲ್ಲಿ ಜಯಂತಿಯ

ಏಜಂಟರು

ಶ್ರೀ. ಎನ್. ಕೆ. ಭಗತ್, ನ್ಯೂಜ್ ಏಜಂಟ್.

ಸಾಹಿತ್ಯ ವಿಹಾರ

"ವಿಹಾರಿ"

'ಶ್ರೀನಿವಾಸ'ರ ಸಣ್ಣಕತೆಗಳ ಇಂಗ್ಲಿಷ್ ಭಾಷಾಂತರ; ಕನ್ನಡ ಪತ್ರಿಕೆಗಳ ವಿಶೇಷ-ಸಂಚಿಕೆ; ಕನ್ನಡದ ಗ್ರಂಥಪ್ರಕಾಶನ; ಮರಾಟಿ ನಾಟಕದ ಹುಟ್ಟು ಕನ್ನಡದಿಂದ!; ಮರಾಟಿ ಸಾಹಿತ್ಯ ಸಮ್ಮೇಳನಾಧ್ಯಕ್ಷರ ನಿರ್ದಾಕ್ಷಿಣ್ಯದ ವಿಮರ್ಶೆ; 'ಪದ್ಮ' ಪ್ರಕಟನಾಲಯದವರ 'ಟುಮಾರೊ'!

★

ಸಣ್ಣಕತೆಗಳ ಶ್ರೀನಿವಾಸರು ಇದೀಗ, ಕಳೆದ ೩೫ ವರ್ಷಗಳಲ್ಲಿ ತಾವು ಬರೆದ ೩೩ ಕತೆಗಳನ್ನು ತಾವೇ ಇಂಗ್ಲಿಷಿಗೆ ಭಾಷಾಂತರಿಸಿ, ನಾಲ್ಕು ಸಂಗ್ರಹಗಳಲ್ಲಿ ಪ್ರಕಟಿಸಿದ್ದಾರೆ. ಈ ಮೊದಲೆ ಅವರ ಒಂದೆರಡು ಕಥೆಗಳ ಭಾಷಾಂತರಗಳು 'ತ್ರಿವೇಣಿ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅವರ 'ಮಸುಮತ್ತಿ ಅಥವಾ ಪರಕಾಯ ಪ್ರವೇಶ' ಕತೆಯೂ 'ಹೇಮಕೂಟದಿಂದ ತಿರುಗಿ ಬಂದಮೇಲೆ' 'ಇಂದಿರೆಯೋ ಅಲ್ಲವೊ?' ಮತ್ತು 'ಇನ್ನೊಂದು ಹಳೆಯ ಕತೆ' ಇವು ಈ ಮೊದಲೇ ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದುವು. ಈ ಭಾಷಾಂತರಗಳ ಮೂಲಕವೇ ಮಾಸ್ತಿಯವರ ಕತೆಗಾರಿಕೆಯ ವಿಷಯವಾಗಿ ವಿಶೇಷ ಆದರತೋರಿಸಿದ ಪರಭಾಷೆಗಳಲ್ಲಿಯ ಸಾಹಿತಿಗಳ ಆಗ್ರಹದ ಮೂಲಕವೋ, ಕನ್ನಡದಲ್ಲಿಯ ಸಣ್ಣ ಕತೆಯ ಬರೆಹಗಾರಿಕೆಯು ಯಾವ ಮಟ್ಟಕ್ಕೆ ಮುಟ್ಟಿದೆ ಎಂಬುದನ್ನು ಭಾರತದ ಇತರ ಪ್ರಾಂತಗಳಿಗೆ ತೋರಿಸುವುದಕ್ಕಾಗಿಯೋ, ಇದೀಗ 'ಶ್ರೀನಿವಾಸ'ರು ತಮ್ಮ ಯಾವತ್ತು ಕತೆಗಳನ್ನೂ ಇಂಗ್ಲಿಷಿನಲ್ಲಿ ಪ್ರಕಟಗೊಳಿಸಿದ್ದಾರೆ. ಅವರು ತಮ್ಮ ಮುನ್ನುಡಿಯಲ್ಲಿ ಕೆಲವು ಆಪ್ತಮಿತ್ರರ ಒತ್ತಾಯದ ಮೂಲಕವೇ ಈ ಉಪಕ್ರಮಕ್ಕೆ ತೊಡಗಿದ್ದೇನೆಂದು ತಿಳಿಸಿದ್ದಾರೆ. ಕಾಗದದ ವಿಷಯ ವಿಪರೀತ ಕಷ್ಟದ ಕಾಲವಿದ್ದಾಗ, ನಾಲ್ಕು ಪುಸ್ತಕಗಳನ್ನು ತಾವಾಗಿಯೇ ಪ್ರಕಟಿಸಿ ವಿಶೇಷವಾಗಿ ಹಣವನ್ನು ವೆಚ್ಚಮಾಡಬೇಕಾಗಿ ಬಂದರೂ— ಮಾಡಬೇಕಾದ ಕೆಲಸ ಮಾಡುತ್ತಿರಬೇಕೆಂಬ ಕರ್ತವ್ಯಬುದ್ಧಿಯಿಂದ—ತಮ್ಮ ಕೆಲಸವನ್ನು ಬಗೆಹರಿಸಿದ್ದಾರೆ. ನಮ್ಮ ಕತೆಗಾರರಿಗೆ ಹೊರಗಿನವರ ಕಡೆಯಿಂದ ಮನ್ನಣೆ ಬರುವಂತಿದ್ದರೆ ಅದು ನಾವೆಲ್ಲರೂ ಸಂತೋಷಪಡತಕ್ಕ ಸಂಗತಿಯೆ ಸರಿ. "ಕನ್ನಡ ಸಾಹಿತ್ಯವೆಂಬ ಸಾಹಿತ್ಯವಿದೆಯೋ?" ಎಂದು ಕೇಳುವವರು ಭಾರತದಲ್ಲಿ ಬೇಕಾದಷ್ಟು ಜನರಿರುವಾಗ, ತಮ್ಮ ಶ್ರೇಷ್ಠಕೃತಿಗಳ ಪರಿಚಯವನ್ನು ಇಂಗ್ಲಿಷಿನ ಮೂಲಕ ಮಾಡಿಕೊಡಲೆಳಸಿದ ಮಾಸ್ತಿಯವರು ಅಭಿನಂದನಾರ್ಹರು. ಆದರೆ ಯಾವುದೇ ಕಾರಣದ ಮೂಲಕ ಆ ಕೃತಿಗಳ ಬಗೆಗೆ ಪರಭಾಷೆಗಳಲ್ಲಿಯ ಸಾಹಿತಿಗಳಿಗೆ, ಅಥವಾ ಕನ್ನಡ ತಿಳಿಯದ ಸಾಮಾನ್ಯ ಓದುಗನಿಗೆ ಅವರ ಕನ್ನಡ ಕತೆಗಳಲ್ಲಿಯ ಸೌಂದರ್ಯ ಸರಲತೆಗಳು ತಿಳಿಯದೆ ಹೋದರೆ, ಅಥವಾ ಮೂಲದಲ್ಲಿಯಷ್ಟು ಪರಿಣಾಮವನ್ನು ಅವು ಭಾಷಾಂತರದ ಮೂಲಕ ಸಾಧಿಸದೆ ಹೋದರೆ, ಮಾಸ್ತಿಯವರಿಗೂ ಅವರ ಕಥೆಗಳಿಗೂ ಅನ್ಯಾಯವಾಗಬಹುದು. ಈ ತೆರದ ಅನ್ಯಾಯ ತುಸುಮಟ್ಟಿಗಾದರೂ ಆಗಿದೆ ಎಂಬುದು ಸ್ಪಷ್ಟವಾದುದರಿಂದಲೆ ಈ ಅಸಮಾಧಾನಕರವಾದ ಮಾತನ್ನು ಹೇಳಬೇಕಾಗಿದೆ.

* * *

ಈ ಕಥಾಸಂಗ್ರಹಕ್ಕೆ ರಾಜಕಾರ್ಯಪ್ರವೀಣರಾದ— ಇದು ಕೇವಲ ವಿಶೇಷಣ, ಮೈಸೂರಿನ ಆಡಳಿತದ ಮುಂಡಾಸವಲ್ಲ— ರಾಜಗೋಪಾಲಾಚಾರ್ಯರು ತಮ್ಮದೇ ಆದ ಶೈಲಿಯಲ್ಲಿ ಮುನ್ನುಡಿಯೊಂದನ್ನು ಬರೆದಿದ್ದಾರೆ. ಎಷ್ಟೋ ವರ್ಷಗಳ ಹಿಂದೆ ತಾವು ಮಾಸ್ತಿಯವರ 'ಮಸುಮತ್ತಿ' ಕತೆಯನ್ನು ತಮಿಳಿಗೆ ಭಾಷಾಂತರಿಸಿದ್ದರೆಂದೂ, ಆ ಭಾಷಾಂತರದ ಮೂಲಕ ಮಾಸ್ತಿಯವರ ಕತೆಗಾರಿಕೆಯ ಪರಿಚಯ ತಮಗೆ ಆಗಿದ್ದು, 'ಶ್ರೀನಿವಾಸ'ರು ಭಾರತದ ಕತೆಗಾರರಲ್ಲಿ ಮೇಲ್ಪಂಕ್ತಿಗೆ ಸೇರತಕ್ಕವರೆಂಬುದಾಗಿ ಹೇಳಿ, ಭಾಷಾಂತರದ ವಿಷಯದಲ್ಲಿ ತಮಗೆ ಹೇಳಬೇಕಾದ ನಾಲ್ಕು ಮಾತುಗಳನ್ನು ಹೇಳಿದ್ದಾರೆ. ಒಟ್ಟಿನಲ್ಲಿ ಮಾಸ್ತಿಯವರ ಕಥೆಗಳ ಭಾಷಾಂತರದ ಯೋಗ್ಯಾಯೋಗ್ಯತೆಯ ಮಾತಿಗಿಂತ, ಭಾಷಾಂತರದ ಕಲೆಯ ಬಗೆಗೇ ಹೆಚ್ಚಾಗಿ ಅವರು ಬರೆದಿದ್ದಾರೆ. ಅವರ ರಾಜಕಾರಣದಲ್ಲಿಯ ಧೂರ್ತತೆ— ಎಂದರೆ ಎರಡೂ ದಂಡೆಗಳ ಮೇಲೆ ಕೈ ಇಡಲು ಹವಣಿಸುವ ಹವ್ಯಾಸ— ಇದು ಈ ಚಿಕ್ಕ ಮುನ್ನುಡಿಯಲ್ಲಿಯೂ ಕಾಣಬರುತ್ತಿದೆ.

ಭಾಷಾಂತರದ ಕೆಲಸ ಆಗಬೇಕಾದಷ್ಟು ಸರಸವಾಗಿಲ್ಲ' ಎಂದು ಹೇಳಲಾರದೆ, ನಮ್ಮ ಭಾಷೆಗಳಲ್ಲಿಯ ಕೃತಿಗಳನ್ನು ಇಂಗ್ಲಿಷಿನಲ್ಲಿ ಭಾಷಾಂತರಿಸುವುದು ಎಂತಹ ಕಷ್ಟಸಾಧ್ಯವಾದದ್ದು....ಎಂಬುದನ್ನೇ ಮೂಲಮಂತ್ರವನ್ನಾಗಿಟ್ಟುಕೊಂಡು, 'ಕನ್ನಡದಿಂದ ತೆಲುಗಿಗಾಗಲಿ, ತಮಿಳಿಗಾಗಲಿ ಭಾಷಾಂತರಿಸುವುದು ಎಷ್ಟು ಸುಲಭವೋ ಅಷ್ಟು ಸುಲಭ ಮಾಸ್ತಿಯವರು ಇಲ್ಲಿ ಕೈಕೊಂಡ ಕೆಲಸವಲ್ಲ; ತಾಯ್ನುಡಿಯಲ್ಲಿ ಸಹಜವಾಗಿ ವ್ಯಕ್ತಪಡಿಸಬಹುದಾದ ಭಾವ-ಕಲ್ಪನೆ—ಊಹಾವಿಲಾಸಗಳನ್ನು ಪರಭಾಷೆಯಾದ ಇಂಗ್ಲಿಷಿನಲ್ಲಿ ಸಂಪೂರ್ಣವಾಗಿ, ಮೂಲದಲ್ಲಿಯಂತೆ ಪರಿಣಾಮಕಾರಿಯಾಗುವ ರೀತಿಯಲ್ಲಿ ರೂಪುಗೊಳಿಸುವುದು ಆಗದ ಮಾತು....' ಎಂದು ಎಷ್ಟೋ ವಿಷಯಗಳನ್ನು ವ್ಯಂಗ್ಯವಾಗಿ ತಿಳಿಸಿದ್ದಾರೆ. ಸಾಮಾಜಿಕ ಜೀವನದಲ್ಲಿಯ ಬಳಕೆಯಿಂದಲೇ ಭಾಷೆಯು ಬದಲಾಯಿಸುತ್ತ ಬೆಳೆಯುತ್ತಿರುವುದರಿಂದ, ನಮ್ಮ ಮತ್ತು ಇಂಗ್ಲಂಡಿನ ಸಾಮಾಜಿಕ ಜೀವನದಲ್ಲಿಯ ಸ್ಪಷ್ಟವಾದ ವ್ಯತ್ಯಾಸದ ಮೂಲಕ, ನಮ್ಮಲ್ಲಿಯ ಯಾವುದಾದರೊಂದು ಸಾಮಾನ್ಯ ಮಾತಿಗಾಗಲಿ ಉದ್ಗಾರಕ್ಕಾಗಲಿ ಆಗುವ ಅರ್ಥ, ಅದು ವಾಚಕರ ಮನಸ್ಸಿನಮೇಲೆ ಮಾಡಬಹುದಾದ ಪರಿಣಾಮ, ಅದೇ ಮಾತನ್ನು ಅಥವಾ ಉದ್ಗಾರವನ್ನು ಶಬ್ದಕ್ಕೆ ಪ್ರತಿಯಾಗಿ ಶಬ್ದವನ್ನಿಟ್ಟು ಇನ್ನೊಂದು ತೀರ ಭಿನ್ನವಾದ ಭಾಷೆಗೆ ಭಾಷಾಂತರಿಸಿದಲ್ಲಿ ಅದರಿಂದ ಮೂಲದ ಅರ್ಥಬೋಧ ತಕ್ಕಮಟ್ಟಿಗೆ ಸಾಧ್ಯವಾದರೂ, ಮೊದಲಿನದರಲ್ಲಿಯ ಜೀವನಸತ್ತ್ವ ಇನ್ನೊಂದರಲ್ಲಿರುವುದು ಅಸಾಧ್ಯ.... ಈ ಎಲ್ಲ ಮಾತುಗಳನ್ನು ದ್ರಾವಿಡರಾದ ರಾಜಾಜಿಯವರು 'ದ್ರಾವಿಡಪ್ರಾಣಾಯಾಮ'ದ ರೀತಿಯಲ್ಲಿ ಹೇಳಿ, ಇಂತಹ ಕಷ್ಟಸಾಧ್ಯವಾದ ಕೆಲಸವನ್ನು ಮಾಸ್ತಿಯವರು ಉತ್ತಮರೀತಿಯಲ್ಲಿ ಸಾಧಿಸಿದ್ದಾರೆಂದು ಸ್ಪಷ್ಟವಾಗಿ ಹೇಳದಿದ್ದ ಮೂಲಕ, ಹೀಗೆಲ್ಲ ಅವರು ಉದ್ದುದ್ದವಾಗಿ ಅನುವಾದಕಲೆಯ ಅವಲಕ್ಷಣಗಳನ್ನು ಹೇಳುವುದರ ಅಭಿಪ್ರಾಯವೇನಿರಬಹುದೆಂಬುದನ್ನು ವಾಚಕರೇ ಊಹಿಸಿಕೊಳ್ಳಬೇಕು.

'ಇದ್ದುದಿದ್ದ*ಹಾಗೆ ಶಬ್ದಕ್ಕೆ*ಪ್ರತಿಯಾಗಿ ಶಬ್ದ*, ವಾಕ್ಯಕ್ಕೆ ಪ್ರತಿಯಾಗಿ ವಾಕ್ಯ ಇಟ್ಟು ಭಾಷಾಂತರ ಮಾಡಿದುದರ ಪರಿಣಾಮವೇನೆಂಬುದನ್ನು ಸಹಜವಾಗಿ ತಿಳಿಯಬಹುದು. ಯಾರನ್ನೂ ತಲೆದೂಗಿಸುವಂತಹ ಶ್ರೀನಿವಾಸರ ಕನ್ನಡ ಬರವಣಿಗೆಯ ಸರಲ ಮಾಧುರ್ಯ ಇಲ್ಲಿ ಎಲ್ಲಿಯೋ ಮಾಯವಾಗಿ ಹೋಗಿದೆ. ಇದಕ್ಕೆ ಹೆಚ್ಚಾಗಿ, ಅವರ ಮಾತಿನಲ್ಲಿಯ ಮೃದುಹಾಸ್ಯ ಬತ್ತಿ ಹೋಗಿದೆ. ಪರಭಾಷೆಯ ಇಕ್ಕಟ್ಟಿನಲ್ಲಿ ಸಿಕ್ಕು ಭಾವನೆಗಳು ಬಾಯಿಲ್ಲದೆ ನರಳುತ್ತಿವೆ. ಸಂಗ್ರಹವಾಗಿ ಕಥೆಯೇನೆಂಬುದನ್ನು ಓದುಗನು ತಿಳಿದುಕೊಳ್ಳಬಹುದಾದರೂ, ಅದರಲ್ಲಿಯ ರಸವಿಲಾಸ, ಕಲ್ಪಕತೆಯ ವೈಖರಿ, ಸಹಜವಾದ ಮಾತುಗಾರಿಕೆ, ಅದರಲ್ಲಿಯೇ ಬಣಮೂಡಿಗ ನಿತಾಂತ ಜೀವನದ ಸಹಜ ಸುಂದರ ಚಿತ್ರ—ಇವೆಲ್ಲವುಗಳೂ ಇಲ್ಲವಾಗಿ, ಕನ್ನಡದಲ್ಲಿ ಆ ಕತೆಗಳನ್ನು ಓದಿ ತಣಿದು, ಕೃತಜ್ಞತೆಯಿಂದ, ಇಂತಹ ನೂರಾರು ಕತೆಗಳನ್ನು ಮಾಸ್ತಿಯವರು ಬರೆಯಲೆಂದು ಬಯಸುವ ಕನ್ನಡಿಗರು, ತಮಗೆ ಯೋಗ್ಯವಾದ ಪಂಚೆ ನಿಲುವಂಗಿಗಳನ್ನು ಬಿಟ್ಟು ಸೂಟು-ಬೂಟುಗಳನ್ನು ಧರಿಸಿ ಪೇಚಾಡುತ್ತಿರುವ ಈ ಕತೆಗಳನ್ನು ನೋಡಿ ತಲ್ಲಣಿಸದಿರರು. ಮದರಾಸಿನ 'ಹಿಂದೂ' ಪತ್ರಿಕೆಯಲ್ಲಿ ಈ ಭಾಷಾಂತರಗಳನ್ನು ವಿಮರ್ಶಿಸುತ್ತ ಹೇಳಿದ ವಿಮರ್ಶಕರೊಬ್ಬರ ಮಾತುಗಳನ್ನು ಓದಿದರೆ, ಮಾಸ್ತಿಯವರ ಉತ್ತಮ ಕತೆಗಳಾದ 'ಇಂದಿರೆಯೋ ಅಲ್ಲವೋ?' ಮತ್ತು 'ಹೇಮಕೂಟದಿಂದ ಬಂದ ಮೇಲೆ' ಇವುಗಳನ್ನು ಕನ್ನಡದಲ್ಲಿ ಓದದೆ, ಮೊದಲುಬಾರಿ ಇಂಗ್ಲಿಷಿನಲ್ಲಿಯೇ ಓದಿದರೆ ಅವು ಯಾವ ರೀತಿಯಾಗಿ ಕಾಣುವುವೆಂಬುದನ್ನು ತಿಳಿಯಬಹುದು. ಅಲ್ಲಿ ವಿಮರ್ಶಕರು ಹೇಳಿದ್ದು ಕನ್ನಡ ಕತೆಯ ಸೌಂದರ್ಯವನ್ನು ಕುಗ್ಗಿಸಬೇಕಾಗಿಲ್ಲ; ಭಾಷಾಂತರಕ್ಕೆ ಪ್ರಾಯಶ್ಚಿತ್ತ, ಇಷ್ಟೇ! 'ಹಾಗಾದರೆ ಇಂಗ್ಲಿಷಿಗೆ ಭಾಷಾಂತರ ಮಾಡಬಾರದೆ? ಮಾಡದೆ ಹೋದರೆ ನಮ್ಮಲ್ಲಿಯ ಉತ್ತಮ ಕೃತಿಗಳ ಪರಿಚಯ ಪರಭಾಷೆಯವರಿಗೆ ಆಗುವುದು ಹೇಗೆ?' ಎಂದು ಕೇಳುವುದು ಸಹಜ. ಭಾಷಾಂತರದ ಮೂಲಕ ಮೂಲದಲ್ಲಿಯ ರಸಸತ್ತ್ವವನ್ನು ಎರಡನೆಯ ಭಾಷೆಯಲ್ಲಿ ತರುವುದು ಕಷ್ಟವಾಗಿದ್ದಲ್ಲಿ, ಅಂತಹದರ ಭಾಷಾಂತರವನ್ನು ಮಾಡದಿರುವುದೇ ಒಳ್ಳೆಯದೆಂಬುದು ಸ್ವಯಂಸಿದ್ಧವಾದ ವಿಷಯ. ಅತ್ಯುತ್ತಮ ಸಾಹಿತ್ಯದ ಸೊಬಗು ಅಪರಿವರ್ತನೀಯವೆಂದೂ ಹೇಳುವವರಿದ್ದಾರೆ. ಸಾಹಿತ್ಯಸತ್ತ್ವ[illegible] ಹೊರಮೈಯುಂಕಿರುವ ಭಾಷೆಗೆ ಸೌಂದರ್ಯವಿಲ್ಲವೆ? ರಸಾನುಭವದಲ್ಲಿ ಈ ಬಾಹ್ಯಸ್ವರೂಪದ ಸೌಂದರ್ಯಕ್ಕೆ ಸ್ಥಾನವೇ ಇಲ್ಲವೆ? ಈ ದೃಷ್ಟಿಯಿಂದ ನೋಡಿದರೆ ಮಾಸ್ತಿಯವರ ಕನ್ನಡ ಕತೆಗಳಲ್ಲಿಯ ಸೌಂದರ್ಯ ಅಪರಿವರ್ತನೀಯವೆಂದೇ ಹೇಳಬೇಕು. ಅವುಗಳನ್ನು ಓದಿ ಆನಂದಪಡದ ಕನ್ನಡಿಗನಿರುವನೇ? ಆದರೆ ಈ ಪಾಶ್ಚಿಮಾತ್ಯ ಉಡುಪಿನಿಂದ ಕತೆಗಳು ಗುರುತಿಸಲಾರದಂತಾಗಿವೆ. ಇದು ಅನ್ಯಾಯ! ಮಾಸ್ತಿಯವರ ಸುಂದರ ಕತೆಗಳಿಗೆ ಕನ್ನಡ ತಿಳಿಯದಿದ್ದವರು ಯೋಗ್ಯ ಸನ್ಮಾನ ಸಲ್ಲಿಸದಿದ್ದರೆ, ಕನ್ನಡಿಗರಿಗೆ ಅದು ಸಹಿಸಲಾಗದ ದುಃಖವಲ್ಲವೆ?

* * *

ಕನ್ನಡ ಪತ್ರಿಕೆಗಳ ಬಗೆಗೆ ಈ ವರ್ಷದಲ್ಲಿಯ ವಿಶೇಷವೆಂದರೆ ಯಾವ ಪತ್ರಿಕೆಯೂ ವಿಶೇಷಸಂಚಿಕೆಗಳನ್ನು ದೀಪಾವಳಿಯ ನಿಮಿತ್ತವಾಗಿ ಹೊರಡಿಸಲಿಲ್ಲ. ಒಳ್ಳೇ ದೇಶಾಭಿಮಾನವುಳ್ಳವುಗಳಲ್ಲವೇ ನಮ್ಮ ಪತ್ರಿಕೆಗಳು! 'ದೇಶಕ್ಕೆ ಇಂತಹ ಕಷ್ಟಕಾಲ ಒದಗಿದಾಗ, ಜನನಾಯಕರೆಲ್ಲರೂ ಜನರಿಂದ ದೂರವಾಗಿರುವಾಗ, ನಮಗೇಕೆ ದೀಪಾವಳಿ?' ಎನ್ನುತ್ತಿದ್ದುವಂತೆ ಕನ್ನಡ ಪತ್ರಿಕೆಗಳು. ಆ ಹಬ್ಬದ ಸಮಯದಲ್ಲಿ ನೆರೆಹೊರೆಯವರೆಲ್ಲರೂ ಹಬ್ಬವನ್ನು ಆಚರಿಸಿ ಮೃಷ್ಟಾನ್ನ ಸೇವಿಸುತ್ತಿದ್ದಾಗ, ಕನ್ನಡ ಪತ್ರಿಕೆಗಳಿಗೆಯೇ ಎಲ್ಲಿಂದ ಉಕ್ಕಿತೋ ದೇಶಾಭಿಮಾನ! ಕಾಗದದ

ಕೊರತೆಯೆನ್ನಬೇಕೆ? ಮರಾಟಿ, ಗುಜರಾಥಿ, ಹಿಂದೀ ಪತ್ರಿಕೆಗಳೆಲ್ಲವೂ, ಪುಷ್ಟವಾಗಿ ರಂಗುರಂಗಾಗಿ ಹಬ್ಬದೊಡವೆಗಳನ್ನು ಹೇರಿಕೊಂಡು ಮೆರೆದಾಡುತ್ತಿರುವಾಗ, ಎಲ್ಲಿಂದ ಬಂತು ಕಾಗದ ಕೊರತೆ? ಉಳಿದ ಭಾಷೆಗಳಲ್ಲಿ ವಿಶೇಷ ಸಂಚಿಕೆಗಳನ್ನು ಹೊರಡಿಸದ ಪತ್ರಿಕೆಗಳೇ ಇಲ್ಲವೆನ್ನಬಹುದು. ಕನ್ನಡಕ್ಕೆ ಅಷ್ಟು ಬಡತನವೆ? ಇದೇ ನಿಜವೆಂದು ತೋರುತ್ತದೆ. ಕಷ್ಟಪಟ್ಟು ವಿಶೇಷ ಸಂಚಿಕೆ ಹೊರಡಿಸಿದರೂ ಕೊಂಡುಕೊಳ್ಳುವ ಕನ್ನಡಿಗರೆಲ್ಲಿ? ಅಂತೆಯೇ ಕನ್ನಡ ಪತ್ರಿಕೆಯೊಂದು ತನ್ನ ಕಿರುದನಿಯಲ್ಲಿ ಹಾಡುತ್ತಿತ್ತು: "ಘರಘರಮೇ ದಿವಾಲೀ! ಹಮಾರೇ ಘರಮೇ ನಹೀ! ಹಮಾರೇ ಘರಮೇ ನಹೀ" ಎಂದು. ಇದ್ದುದರಲ್ಲಿ ಜಯಂತಿಯ ಸಂಪಾದಕರೇ ಮೇಲು! ಮನೆಯೊಳಕ್ಕೆ ದಿನದ ಊಟವನ್ನೇ ಬಡಿಸಿದರೂ, ಬಾಗಿಲಿಗೆ ಮಾತ್ರ ಬಣ್ಣದ ತೋರಣ ಕಟ್ಟಿಬಿಟ್ಟಿದ್ದಾರೆ! ಇದೇ ವಿಶೇಷ, ಅಂತೇ ವಿಶೇಷ ಸಂಚಿಕೆ!

* * *

ಬಂಗಾಲದ ಬರಗಾಲಕ್ಕಿಂತ ಭೀಕರವಾದ ಬರಗಾಲ ಮುತ್ತಿದೆ, ಕನ್ನಡ ಪುಸ್ತಕ ಪ್ರಕಟನೆಗೆ [illegible]! ಅಲ್ಲಿಂದಿಷ್ಟು ಇಲ್ಲಿಂದಷ್ಟು ಸಹಾಯ ಬಂದು, ತುಸು ಮಟ್ಟಿಗಾದರೂ ಕಷ್ಟನಿವಾರಣೆ ನಡೆದಿರುವಂತೆ ಅಲ್ಲಿಯೊಂದು, ಇಲ್ಲಿಯೊಂದು, ಆಗೊಂದು ಈಗೊಂದು ಪುಸ್ತಕ ಬೆಳಕಿಗೆ ಬರುತ್ತಿದ್ದುದು ಸುದೈವವೇ ಸರಿ. ಶ್ರೀ. ರಂ. ಶ್ರೀ. ಮುಗಳಿಯವರ "ಕನಸಿನ ಕೆಳದಿ" ಎಂಬ ಕಥಾಸಂಗ್ರಹ ಇದೀಗ ಬಂದಿದೆ. ಬೆಂಗಳೂರಿನ "ಧನ್ವಂತ" ಅವರು "ರಾಗವಿಲಾಸ" ಎಂಬ ತಮ್ಮ ಕವನ ಸಂಗ್ರಹವೊಂದನ್ನು ಮೊದಲು ಬಾರಿ ಬೆಳಕಿಗೆ ತಂದಿದ್ದಾರೆ. ಉತ್ತರ ಕನ್ನಡದ ವ್ಹಿ. ಜಿ. ಶಾನಭಾಗ ಅವರು "ಇಂದ್ರಧನುಷ್ಯ" ಎಂಬ ಕಿರುಗತೆಗಳನ್ನು ಪ್ರಕಟಿಸಿದ್ದಾರೆ. "ಕೆಲವು ಚಿತ್ರಗಳು" ಎಂಬ ವಿವಿಧ ಲೇಖಕರ ಕಥಾಸಂಗ್ರಹವಾದರೂ ಬಯಲಿಗೆ ಬಂದಿದೆ. ಜಯಲಕ್ಷ್ಮಿ ಆರ್. ಶ್ರೀನಿವಾಸನ್ ಅವರು, ತಮಿಳಿನಿಂದ ಕೆಲವು ಕತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಜಡೆ ರಂಗರಾವ್ ಅವರು ಚಾರ್ಲ್ಸ್ ಡಿಕೆನ್ಸ್‌ನ "ಟೇಲ ಆಫ್ ಟು ಸಿಟೀಜ್" ಎಂಬ ಕಾದಂಬರಿಯನ್ನು ಕನ್ನಡಕ್ಕೆ ಹೊಂದಿಸಿಕೊಂಡು ರೂಪಾಂತರಿಸಿದ್ದಾರೆ. 'ಹೊಯ್ಸಳ'ರು ಚಿಕ್ಕಮಕ್ಕಳಿಗಾಗಿ "ಹೂವಿನ ಹಾಸಿಗೆ"ಯನ್ನು ಹಾಸಿದ್ದಾರೆ. ಅ. ನ. ಕೃಷ್ಣರಾಯರ ಕಾದಂಬರಿಯೊಂದು ಬೇಗನೆ ಬರಲಿದೆ. ಶ್ರೀರಂಗರ "ಸಂಧ್ಯಾಕಾಲ" ಪ್ರಕಟವಾಗಿದೆ ಎಂದು ಕೇಳಿದೆ. ಪ್ರತಿಗಳು ಪೇಟೆಯಲ್ಲಿಲ್ಲ. ಕಾಂಪ್ಲಿಮೆಂಟರಿಯಂತೂ ಇಲ್ಲವೇ ಇಲ್ಲ! ಇರಲಿ, ಇವುಗಳ ವಿಷಯ ತುಸು ನಿಧಾನವಾಗಿ ಚರ್ಚಿಸೋಣ.

* * *

ಮರಾಟಿ ನಾಟಕದ ಶತಸಾಂವತ್ಸರಿಕೋತ್ಸವದ ನಿಮಿತ್ತವಾಗಿ ಪುಣೆಯ 'ಸಹ್ಯಾದ್ರಿ' ಮಾಸಿಕವು ಕೇವಲ ಮರಾಟಿ ನಾಟಕದ ವಿಷಯವಾಗಿಯೇ ಒಂದು ವಿಶೇಷಾಂಕವನ್ನು ಹೊರಡಿಸಿದೆ. ಮರಾಟಿ ನಾಟಕವು ಸಾಂಗಲಿಯಲ್ಲಿ ಜನ್ಮತಾಳಿತೆಂದು ಕಳೆದ ತಿಂಗಳು ಹೇಳಿದೆ. ಸಾಂಗಲಿಯಲ್ಲಿ ಜನ್ಮ ತಾಳಬೇಕಾದರೆ ಕನ್ನಡದ ಸಂಪರ್ಕವಿಲ್ಲದೆ ಸಾಧ್ಯವೆ? ಸಂಪರ್ಕವೇಕೆ? ಮರಾಟಿ ನಾಟಕವು ಹುಟ್ಟಿದ್ದು ಕನ್ನಡದಿಂದಲೇ ಎಂಬುದು ನಿರ್ವಿವಾದ ವಿಷಯವಾದರೂ, ಮೇಲೆ ಹೇಳಿದ ವಿಶೇಷ ಸಂಚಿಕೆಯಲ್ಲಿ ಆ ಮಾತನ್ನು ಎಷ್ಟರ ಮಟ್ಟಿಗೆ ಅಲ್ಲಗಳೆಯಲು ಸಾಧ್ಯವೋ ಅಷ್ಟರಮಟ್ಟಿಗೆ ಅಲ್ಲಗಳೆಯಲು ಪ್ರಯತ್ನಿಸಲಾಗಿದೆ. ಕನ್ನಡದಿಂದ ಹುಟ್ಟಿತೆಂದು ಹೇಳಿದರೆ ಯಾವ ಮಾನಭಂಗವೋ? ಕನ್ನಡದಿಂದ ಮರಾಟಿ ನಾಟಕ ಜನ್ಮತಾಳಿತೆಂದು ಸ್ಪಷ್ಟವಾಗಿ ಒಪ್ಪದಿದ್ದರೂ, ಅವರ ಮಾತಿನ ಮೇಲಿಂದಲೇ ಅದನ್ನು ಸಿದ್ಧಪಡಿಸಬಹುದಾಗಿದೆ. ೧೮೪೩ರ ಸುಮಾರಿಗೆ ಸಾಂಗಲಿ ಸಂಸ್ಥಾನದ ಒಡೆಯರು, ತಮ್ಮ ಕುಲದೈವತವಾದ ವಿನಾಯಕನ ಉತ್ಸವ ಸಮಯದಲ್ಲಿ, ಉತ್ತರ ಕನ್ನಡ ಜಿಲ್ಲೆಯ ಕನ್ನಡ ನಾಟಕದ ಕಂಪನಿಯೊಂದನ್ನು ಬರಮಾಡಿಕೊಂಡು, ಅವರು ಆಡಿತೋರಿಸಿದ ಕೆಲವು ಪುರಾಣಗಳಲ್ಲಿಯ ದೃಶ್ಯಗಳಿಗೆ ಮನಸೋತು, ಇಂತಹ ನಾಟಕಗಳು ಮರಾಟಿಯಲ್ಲಿ ಯಾಕೆ ಇರಬಾರದೆಂದು ಚಿಂತಿಸಿ, ಆ ರೀತಿ ಪುರಾಣದಲ್ಲಿಯ ಕಥೆಗಳನ್ನೇ ಸಾಮಗ್ರಿಯಾಗಿಟ್ಟುಕೊಂಡು ಒಂದೆರಡು ನಾಟಕಗಳನ್ನು ಕೈ. ವಿಷ್ಣು ಅಮೃತ ಭಾವೆ ಅವರಿಂದ ಬರೆಯಿಸಿ, ಅವರ ಸಂಗಡಿಗರಿಂದ ಆಡಿತೋರಿಸುವ ಏರ್ಪಾಡನ್ನು ಮಾಡಿದರಂತೆ. 'ಸಹ್ಯಾದ್ರಿ'ಯಲ್ಲಿ ಬರೆದ ಲೇಖಕರು ಈ ವಿಷಯ ಒಪ್ಪಿದ್ದಾರೆ. ಆದರೆ ಮೊದಲು ಸ್ಫೂರ್ತಿಯನ್ನು ಪೂರಯಿಸಿದ ನಾಟಕ ಕನ್ನಡ ನಾಟಕವೆಂಬುದನ್ನು ಯಾಕೆ ಹೇಳಬಾರದಾಗಿತ್ತೋ! ಉತ್ತರ ಕನ್ನಡದವರು ಆಡಿ ತೋರಿಸಿದ ನಾಟಕ ಕನ್ನಡ ನಾಟಕವಿರಲೇಬೇಕೆಂಬುದು ನಿರ್ವಿವಾದ ವಿಷಯ. ಸಾಂಗಲಿಯ ಒಡೆಯರು ಆ ಕನ್ನಡ ನಾಟಕಾಭಿನಯಕ್ಕೆ ಮನಸೋತು, ಅವುಗಳ ಅನುಕರಣವನ್ನು ಮರಾಟಿಯಲ್ಲಿ ಮಾಡಿಸಿಕೊಂಡಿದ್ದರ ಮೇಲಿಂದ, ಆಗಿನ ಕನ್ನಡ ನಾಟಕದ ಬರವಣಿಗೆ, ಅವುಗಳ ಅಭಿನಯ, ಇವೆಲ್ಲವು ಉತ್ತಮ ತರಗತಿಯವಾಗಿರಲು ಸಾಕು. ಹೀಗಿದ್ದರೂ, ಶತಸಾಂವತ್ಸರಿಕೋತ್ಸವದ ಪ್ರಧಾನಾಧ್ಯಕ್ಷರಾದ ವೀರ ಸಾವರಕರರಂತೂ ಮರಾಟಿ ನಾಟಕದ ಇತಿಹಾಸವನ್ನು ಇನ್ನಷ್ಟು ಹಿಂದಕ್ಕೆ ನೂಕಿ, ಕನ್ನಡದ ಋಣವನ್ನು ಅಲ್ಲಗಳೆಯುವ ಉದ್ದೇಶದಿಂದಲೋ, ತಮ್ಮ ನಾಟಕ ಬಹಳ ಹಿಂದಿನಿಂದ ನಡೆದುಬಂದದ್ದೆಂದು ತೋರಿಸುವ ಅತ್ಯಾಶೆಯಿಂದಲೋ 'ಮರಾಟಿ ನಾಟಕವು ಹುಟ್ಟಿದ್ದು ಶಿವಾಜಿಯ ಕಾಲಕ್ಕೆ' ಎಂದು ತಮ್ಮ ವೀರವಾಣಿಯಲ್ಲಿ ಸಾರಿದರಂತೆ. **ಶಿವಾಜಿಗೆ** ಸಂಬಂಧಪಡದ ಒಂದಾದರೂ ವಿಷಯ ಮಹಾರಾಷ್ಟ್ರದಲ್ಲಿದೆಯೆ? ಸಾವರಕರರು ಅಧ್ಯಕ್ಷರೆಂದ ಮೇಲೆ ಶಿವಾಜಿಯ ವಿಷಯ ಬರಲೇಬೇಕಲ್ಲವೆ? ಮರಾಟಿ ನಾಟಕ ಹುಟ್ಟಿದ್ದು ಶಿವಾಜಿ ಕಾಲದಲ್ಲಿಯಾದರೆ ಈಗ 'ಶತ'ಸಾಂವತ್ಸರಿ-

ಕೋತ್ಸವವನ್ನು ಜರುಗಿಸುವುದು ತೀರ ಅಪ್ರಸ್ತುತವಲ್ಲವೆ? ಯಾರದವರಿಗೆ ಒಪ್ಪಿಸುವ ಬುದ್ಧಿ ನಮ್ಮ ಸನ್ಮಿತ್ರರಿಗೆಂದು ಬರುವುದೊ ?

* * *

ಕಳೆದ (ನವಂಬರ್) ತಿಂಗಳ ದಿನಾಂಕ ೫ ರಿಂದ ೮ ರ ವರೆಗೆ ಸಾಂಗಲಿಯಲ್ಲಿ ಮರಾಟಿ ನಾಟಕದ ಶತಸಾಂವತ್ಸರಿಕೋತ್ಸವ, ವಾರ್ಷಿಕ ಸಾಹಿತ್ಯಸಮ್ಮೇಲನ, ನಾಟ್ಯಸಮ್ಮೇಲನ ಈ ಮೂರು ಅಧಿವೇಶನಗಳು ಅನುಕ್ರಮವಾಗಿ ಬ್ಯಾರಿಸ್ಟರ್ ಸಾವರಕರ, ಪ್ರೊ. ಎಸ್. ಎಂ. ಮಾಟೆ, ಮತ್ತು ಶ್ರೀ. ಎನ್. ವ್ಹಿ. ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ನಡೆದುವು. ಕನ್ನಡ ಕಡುಗಲಿಗಳು ಬಳ್ಳಾರಿಯ ಬೆನ್ನುಹತ್ತಿದಂತೆ, ಮಹಾರಾಷ್ಟ್ರದ ಮಹಾನು-ಭಾವರು ಹೈದರಾಬಾದಿನ ಕೂಡ ಹೋರಾಡುತ್ತಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಚರ್ಚಿತವಾದ ಮುಖ್ಯ ವಿಷಯ ಗಳೆಂದರೆ ಹೈದರಾಬಾದಿನಲ್ಲಿಯ ಮರಾಟಿ ಸಮಸ್ಯೆ, ಮತ್ತು ಮಹಾರಾಷ್ಟ್ರದ ವಿಶ್ವವಿದ್ಯಾಲಯ. ಪ್ರೊ. ಮಾಟೆಯವರು ವಿದ್ಯಾಭಿಮಾನಿಗಳು, ಬರೆಹಗಾರರು, ವಿಮರ್ಶಕರು. ವಿಮರ್ಶಕರೆಂದ ಮೇಲೆ ಇದ್ದುದನ್ನು ಇದ್ದಂತೆ ಹೇಳಬೇಡವೆ? ಪ್ರೊ. ಮಾಟೆಯವರು ಇಂದಿನ ಮರಾಟಿ ಸಾಹಿತ್ಯದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿ ಪ್ರಕಟಗೊಳಿಸಿದ್ದು ಅವರ ವಿಮರ್ಶಾಬುದ್ಧಿಗೆ ತಕ್ಕ ಭೂಷಣ. ಇಂದು ಮರಾಟಿ-ಯಲ್ಲಿ ಹೆಚ್ಚಾಗಿ ಹೊರಬೀಳುತ್ತಿರುವ ಕಥೆ-ಕಾದಂಬರಿಗಳು ಯಾವ ತೆರದ ಮನೋನ್ನತಿಯನ್ನೂ ಸಾಧಿಸದೆ, ತೀರ ಕೀಳಾದ ಲೈಂಗಿಕ ಮನೋವೃತ್ತಿಯನ್ನು ಚಿತ್ರಿಸುತ್ತಿರುವುದು ಅತ್ಯಂತ ಖೇದಕಾರಕ ವಿಷಯವೆಂದು ದುಃಖಪಟ್ಟರು. ಇಂತಹ ಸಾಹಿತ್ಯ ಎಷ್ಟು ಬೆಳೆದರೂ ರಾಷ್ಟ್ರವು ಸಾಧಿಸಬೇಕಾದ ಮಹಾಕಾರ್ಯ-ದಲ್ಲಿ ಅದರಿಂದ ಯಾವ ಪ್ರಯೋಜನವೂ ಆಗದೆಂದೂ, ಬರೆಹ-ಗಾರರ ಈ ಮನೋಭೂಮಿಕೆಯು ಬದಲಾಯಿಸದ ಹೊರತು ಸಾಹಿತ್ಯವು ಜನಜೀವನದಲ್ಲಿ ಬೆಳಕನ್ನೆರಚಲಾರದೆಂದೂ ಸ್ಪಷ್ಟ-ವಾಗಿ ತಿಳಿಸಿದರು. ಇಂದಿನ ಮರಾಟಿ ನಿಯತಕಾಲಿಕಗಳಲ್ಲಿ, ಕಥೆ-ಕಾದಂಬರಿಗಳಲ್ಲಿ ನಾಟಕಗಳಲ್ಲಿ ಬಗೆಬಗೆಯಾಗಿ ಹೊರ-ಬೀಳುತ್ತಿರುವ ಅಶ್ಲೀಲ ಮತ್ತು ಭೀಭತ್ಸ ಬರೆಹಗಾರಿಕೆ, ವೈಯ-ಕ್ತಿಕ ನಿಂದೆ, ಇವು ಯಾವ ಶಿಖರವನ್ನು ಮುಟ್ಟಿವೆ ಎಂಬುದನ್ನು ತಿಳಿಯಬೇಕಾದರೆ, ಸಮ್ಮೇಲನದ ವಿಷಯನಿಯಾಮಕ ಸಮಿತಿಯಿಂದ ನಿರಾಕರಿಸಲ್ಪಟ್ಟಿದ್ದರೂ ಬಹಿರಂಗ ಅಧಿವೇಶನದಲ್ಲಿ ಪ್ರಚಂಡ ಬಹುಮತದಿಂದ ಸ್ವೀಕೃತವಾದ ಒಂದು ಗೊತ್ತು-ವಳಿಯನ್ನು ನೋಡಬಹುದು. ಈ ಗೊತ್ತುವಳಿಯ ಪ್ರಕಾರ ಇಂತಹ ಅಸಭ್ಯ ಸಾಹಿತ್ಯ ಮತ್ತು ವೈಯಕ್ತಿಕ ನಿಂದೆ ಇವು-ಗಳನ್ನು ಪ್ರತಿಬಂಧಿಸುವ ಕೆಲಸಕ್ಕಾಗಿ, ಐದು ಜನರ ಸಮಿತಿ-ಯೊಂದನ್ನು ನಿಯಮಿಸಿದ್ದಾರೆ. ಈ ಐದು ಜನ ಸದಸ್ಯರು ಇಂಥ ಬರೆಹಗಾರಿಕೆಗೆಯೆ ಅಂಟಿಕೊಂಡ ರೋಗವನ್ನು ಹೇಗೆ ತಡೆಯ-ಬೇಕೋ! ಬರೆಹಗಾರರೇ ಭೀಭತ್ಸದಲ್ಲಿ ಹೊರಳಾಡಿ ಅದರಲ್ಲಿಯೇ ವಿಪರೀತವಾದ ಆನಂದೋದ್ರೇಕವನ್ನು ಅನುಭವಿ-ಸುತ್ತಿರುವಾಗ, ಈ ಶುದ್ಧೀಕರಣ ಸಮಿತಿಯವರು ಮಾಡಬಹುದು. ವಾದರೂ ಏನು ? ಮುಂದಿನ ಸಮ್ಮೇಲನದ ವರೆಗೆ ಸುಮ್ಮನಿದ್ದು ಆಗ ಇನ್ನೊಂದು ಗೊತ್ತುವಳಿಯನ್ನೂ ಬೇರೊಂದು ಸಮಿತಿ-ಯನ್ನೂ ಏರ್ಪಡಿಸಿ ತಾವು ವಿಶ್ರಾಂತಿ ಪಡೆಯಬೇಕು. ಇಂತಹದೊಂದು ಗೊತ್ತುವಳಿ ಸಮ್ಮೇಲನದಲ್ಲಿ ಪಾಸಾಗಬೇಕು; ಪಾಸಾಯಿತು, ಕೆಲಸ ಬಗೆಹರಿಯಿತು! ಇನ್ನೇಕೆ ಅದರ ವಿಚಾರ, ಮುಂದಿನ ಅಧಿವೇಶನದವರೆಗೆ? ಎಲ್ಲಿಯಾದರೂ ಇದು ನಡೆಯತಕ್ಕದ್ದೇ. ನಮ್ಮ ಸಮ್ಮೇಲನಗಳಲ್ಲಿಯ ಗೊತ್ತುವಳಿಗಳ ಹಣೆ-ಬರೆಹವೇನೂ ಬೇರೆಯಾಗಿಲ್ಲ. ಗೊತ್ತುವಳಿಗಳಿಲ್ಲದಿದ್ದರೆ ಸಮ್ಮೇಲನವಾಗುವಂತಿಲ್ಲವೆಂದೇ ಇವೆಲ್ಲ ನಡೆಯತಕ್ಕುವು. ಸಮ್ಮೇಲನ ಮಂಟಪದ ಹೊರಗೆ ಅವುಗಳಿಗೆ ಬದುಕಿಲ್ಲ !

* * *

ಸಾಹಿತ್ಯವು ಪ್ರಗತಿಪರವಾಗಿರಬೇಕು, ಜನಸಾಮಾನ್ಯಕ್ಕೆ ಬಾಳಪರಿಚಯ ಮಾಡಿಕೊಡುವಂತಹದಿರಬೇಕು. ನಮ್ಮ ಇಂದಿನ ಕಷ್ಟ-ನಷ್ಟಗಳ ಕಾರಣವೇನೆಂಬುದರ ಅರಿವನ್ನು ತರುವಂಥದಿರ-ಬೇಕು ಎಂಬುದನ್ನು ತೋರಿಸುವ ಉದ್ದೇಶದಿಂದ, ಮುಂಬಯಿಯ ಪದ್ಮಪ್ರಕಟನಾಲಯದವರು "ಟುಮಾರೋ" (Tomorrow) ಎಂಬ ಶಿರೋನಾಮವದಿಯಲ್ಲಿ ಬೇರೆ ಬೇರೆ ದೇಶಗಳ ಸಾಹಿತಿಗಳ ಬರೆಹಗಳನ್ನು ಸಂಗ್ರಹಿಸುತ್ತಿದ್ದಾರೆ. ಮೊದಲನೆಯ ಭಾಗವು ಇದೀಗ ಹೊರಬಿದ್ದಿದೆ. ಸಾಹಿತ್ಯಕ್ಕೂ ಜನಜೀವನಕ್ಕೂ ಇರ-ಬೇಕಾದ ನಿಕಟಸಂಬಂಧ ಇಂದಿನ ರಶಿಯನ್ ಸಾಹಿತಿಗಳ ಬರೆ-ವಣಿಗೆಯಲ್ಲಿ ಎಷ್ಟು ಸ್ಪಷ್ಟವಾಗಿ ಎದ್ದು ಕಾಣುವುದೆಂಬುದನ್ನು ತಿಳಿಯಬೇಕಿದ್ದರೆ ಈ ಭಾಗದಲ್ಲಿ ಪ್ರಕಟವಾದ ಶೋಲೋಕೋವ್ ಅವರ "ದ್ವೇಷ" ಎಂಬ ಅಮೋಘವಾದ ಕಥೆಯನ್ನೋದಿ, ಹಿಂದಿ-ಉರ್ದುಗಳಿಂದ ಕೆಲವು ಕತೆಗಳು ಅನುವಾದಿತವಾಗಿವೆ. ಮುಂಬರುವ ಭಾಗಗಳಲ್ಲಿ ಕನ್ನಡ ಬರೆಹಕ್ಕೂ ಸ್ಥಾನವಿದೆ ಎಂಬುದು ಸಮಾಧಾನದ ವಿಷಯ !

ನಮ್ಮ ಅಣ್ಣಿಗೇರಿ ಏಜಂಟರು	ನಮ್ಮ ಗಜೇಂದ್ರಗಡ ಏಜಂಟರು
ಶ್ರೀ. ಸಿ. ಎಸ್. ಯರಗಂಬಳಿಮಠ	ಶ್ರೀ. ಬಿ. ಎಮ್. ಕೊಡಗನೂರ್
ನ್ಯೂಜ್ ಪೇಪರ್ ಏಜೆಂಟ್.	ನ್ಯೂಜ್ ಪೇಪರ್ ಏಜೆಂಟ್.

ಕೊರತೆಯೆನ್ನಬೇಕೆ? ಮರಾಟಿ, ಗುಜರಾಥಿ, ಹಿಂದೀ ಪತ್ರಿಕೆಗಳೆಲ್ಲವೂ, ಪುಷ್ಟವಾಗಿ ರಂಗುರಂಗಾಗಿ ಹಬ್ಬದೊಡವೆಗಳನ್ನು ಹೇರಿಕೊಂಡು ಮೆರೆದಾಡುತ್ತಿರುವಾಗ, ಎಲ್ಲಿಂದ ಬಂತು ಕಾಗದ ಕೊರತೆ? ಉಳಿದ ಭಾಷೆಗಳಲ್ಲಿ ವಿಶೇಷ ಸಂಚಿಕೆಗಳನ್ನು ಹೊರಡಿಸದ ಪತ್ರಿಕೆಗಳೇ ಇಲ್ಲವೆನ್ನಬಹುದು. ಕನ್ನಡಕ್ಕೆ ಅಷ್ಟು ಬಡತನವೆ? ಇದೇ ನಿಜವೆಂದು ತೋರುತ್ತದೆ. ಕಷ್ಟಪಟ್ಟು ವಿಶೇಷ ಸಂಚಿಕೆ ಹೊರಡಿಸಿದರೂ ಕೊಂಡುಕೊಳ್ಳುವ ಕನ್ನಡಿಗರೆಲ್ಲಿ? ಅಂತೆಯೇ ಕನ್ನಡ ಪತ್ರಿಕೆಯೊಂದು ತನ್ನ ಕಿರುದನಿಯಲ್ಲಿ ಹಾಡುತ್ತಿತ್ತು: "ಘರಘರಮೇ ದಿವಾಲೀ! ಹಮಾರೇ ಘರಮೇ ನಹೀ! ಹಮಾರೇ ಘರಮೇ ನಹೀ" ಎಂದು. ಇದ್ದುದರಲ್ಲಿ ಜಯಂತಿಯ ಸಂಪಾದಕರೇ ಮೇಲು! ಮನೆಯೊಳಕ್ಕೆ ದಿನದ ಊಟವನ್ನೇ ಬಡಿಸಿದರೂ, ಬಾಗಿಲಿಗೆ ಮಾತ್ರ ಬಣ್ಣದ ತೋರಣ ಕಟ್ಟಿಬಿಟ್ಟಿದ್ದಾರೆ! ಇದೇ ವಿಶೇಷ, ಅಂತೇ ವಿಶೇಷ ಸಂಚಿಕೆ!

* * *

ಬಂಗಾಲದ ಬರಗಾಲಕ್ಕಿಂತ ಭೀಕರವಾದ ಬರಗಾಲ ಮುತ್ತಿದೆ, ಕನ್ನಡ ಪುಸ್ತಕ ಪ್ರಕಟನೆಗೆ ಗಾಳಕರಲ್ಲಿ! ಅಲ್ಲಿಂದಿಷ್ಟು ಇಲ್ಲಿಂದಷ್ಟು ಸಹಾಯ ಬಂದು, ತುಸು ಮಟ್ಟಿಗಾದರೂ ಕಷ್ಟನಿವಾರಣೆ ನಡೆದಿರುವಂತೆ ಅಲ್ಲಿಯೊಂದು, ಇಲ್ಲಿಯೊಂದು, ಆಗೊಂದು ಈಗೊಂದು ಪುಸ್ತಕ ಬೆಳಕಿಗೆ ಬರುತ್ತಿದ್ದುದು ಸುದೈವವೇ ಸರಿ. ಶ್ರೀ. ರಂ. ಶ್ರೀ. ಮುಗಳಿಯವರ "ಕನಸಿನ ಕೆಳದಿ" ಎಂಬ ಕಥಾಸಂಗ್ರಹ ಇದೀಗ ಬಂದಿದೆ. ಬೆಂಗಳೂರಿನ "ಧನ್ವಂತ" ಅವರು "ರಾಗಮಿಲನ" ಎಂಬ ತಮ್ಮ ಕವನ ಸಂಗ್ರಹವೊಂದನ್ನು ಮೊದಲು ಬಾರಿ ಬೆಳಕಿಗೆ ತಂದಿದ್ದಾರೆ. ಉತ್ತರ ಕನ್ನಡದ ವ್ಹಿ. ಬಿ. ಶಾನಭಾಗ ಅವರು "ಇಂದ್ರಧನುಷ್ಯ" ಎಂಬ ಕಿರುಗತೆಗಳನ್ನು ಪ್ರಕಟಿಸಿದ್ದಾರೆ. "ಕೆಲವು ಚಿತ್ರಗಳು" ಎಂಬ ವಿವಿಧ ಲೇಖಕರ ಕಥಾಸಂಗ್ರಹವಾದರೂ ಬಯಲಿಗೆ ಬಂದಿದೆ. ಜಯಲಕ್ಷ್ಮಿ ಆರ್. ಶ್ರೀನಿವಾಸನ್ ಅವರು, ತಮಿಳಿನಿಂದ ಕೆಲವು ಕತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಜಡೆ ರಂಗರಾವ್ ಅವರು ಚಾರ್ಲ್ಸ್ ಡಿಕೆನ್ಸ್‌ನ "ಟೇಲ ಆಫ್ ಟೂ ಸಿಟೀಜ್" ಎಂಬ ಕಾದಂಬರಿಯನ್ನು ಕನ್ನಡಕ್ಕೆ ಹೊಂದಿಸಿಕೊಂಡು ರೂಪಾಂತರಿಸಿದ್ದಾರೆ. 'ಹೊಯ್ಸಳ'ರು ಚಿಕ್ಕಮಕ್ಕಳಿಗಾಗಿ "ಹೂವಿನ ಹಾಸಿಗೆ" ಯನ್ನು ಹಾಸಿದ್ದಾರೆ. ಅ. ನ. ಕೃಷ್ಣರಾಯರ ಕಾದಂಬರಿಯೊಂದು ಬೇಗನೆ ಬರಲಿದೆ. ಶ್ರೀರಂಗರ "ಸಂಧ್ಯಾಕಾಲ" ಪ್ರಕಟವಾಗಿದೆ ಎಂದು ಕೇಳಿದೆ. ಪ್ರತಿಗಳು ಪೇಟೆಯಲ್ಲಿಲ್ಲ. ಕಾಂಪ್ಲಿಮೆಂಟರಿಯಂತೂ ಇಲ್ಲವೇ ಇಲ್ಲ! ಇರಲಿ, ಇವುಗಳ ವಿಷಯ ತುಸು ನಿಧಾನವಾಗಿ ಚರ್ಚಿಸೋಣ.

* * *

ಮರಾಟಿ ನಾಟಕದ ಶತಸಾಂವತ್ಸರಿಕೋತ್ಸವದ ನಿಮಿತ್ತವಾಗಿ ಪುಣೆಯ 'ಸಹ್ಯಾದ್ರಿ' ಮಾಸಿಕವು ಕೇವಲ ಮರಾಟಿ ನಾಟಕದ ವಿಷಯವಾಗಿಯೇ ಒಂದು ವಿಶೇಷಾಂಕವನ್ನು ಹೊರಡಿಸಿದೆ. ಮರಾಟಿ ನಾಟಕವು ಸಾಂಗಲಿಯಲ್ಲಿ ಜನ್ಮತಾಳಿತೆಂದು ಕಳೆದ ತಿಂಗಳು ಹೇಳಿದೆ. ಸಾಂಗಲಿಯಲ್ಲಿ ಜನ್ಮ ತಾಳಬೇಕಾದರೆ ಕನ್ನಡದ ಸಂಪರ್ಕವಿಲ್ಲದೆ ಸಾಧ್ಯವೆ? ಸಂಪರ್ಕವೇಕೆ? ಮರಾಟಿ ನಾಟಕವು ಹುಟ್ಟಿದ್ದು ಕನ್ನಡದಿಂದಲೇ ಎಂಬುದು ನಿರ್ವಿವಾದ ವಿಷಯವಾದರೂ, ಮೇಲೆ ಹೇಳಿದ ವಿಶೇಷ ಸಂಚಿಕೆಯಲ್ಲಿ ಆ ಮಾತನ್ನು ಎಷ್ಟರ ಮಟ್ಟಿಗೆ ಅಲ್ಲಗಳೆಯಲು ಸಾಧ್ಯವೋ ಅಷ್ಟರಮಟ್ಟಿಗೆ ಅಲ್ಲಗಳೆಯಲು ಪ್ರಯತ್ನಿಸಲಾಗಿದೆ. ಕನ್ನಡದಿಂದ ಹುಟ್ಟಿತೆಂದು ಹೇಳಿದರೆ ಯಾವ ಮಾನಭಂಗವೋ? ಕನ್ನಡದಿಂದ ಮರಾಟಿ ನಾಟಕ ಜನ್ಮತಾಳಿತೆಂದು ಸ್ಪಷ್ಟವಾಗಿ ಒಪ್ಪದಿದ್ದರೂ, ಅವರ ಮಾತಿನ ಮೇಲಿಂದಲೇ ಅದನ್ನು ಸಿದ್ಧಪಡಿಸಬಹುದಾಗಿದೆ. ಗಳಿತ ರ ಸುಮಾರಿಗೆ ಸಾಂಗಲಿ ಸಂಸ್ಥಾನದ ಒಡೆಯರು, ತಮ್ಮ ಕುಲದೈವತವಾದ ವಿನಾಯಕನ ಉತ್ಸವ ಸಮಯದಲ್ಲಿ, ಉತ್ತರ ಕನ್ನಡ ಜಿಲ್ಲೆಯ ಕನ್ನಡ ನಾಟಕದ ಕಂಪನಿಯೊಂದನ್ನು ಬರಮಾಡಿಕೊಂಡು, ಅವರು ಆಡಿತೋರಿಸಿದ ಕೆಲವು ಪುರಾಣಗಳಲ್ಲಿಯ ದೃಶ್ಯಗಳಿಗೆ ಮನಸೋತು, ಇಂತಹ ನಾಟಕಗಳು ಮರಾಟಿಯಲ್ಲಿ ಯಾಕೆ ಇರಬಾರದೆಂದು ಚಿಂತಿಸಿ, ಆ ರೀತಿ ಪುರಾಣದಲ್ಲಿಯ ಕಥೆಗಳನ್ನೇ ಸಾಮುಗ್ರಿಯಾಗಿಟ್ಟುಕೊಂಡು ಒಂದೆರಡು ನಾಟಕಗಳನ್ನು ಕೈ. ವಿಷ್ಣು ಅಮೃತ ಭಾವೆ ಅವರಿಂದ ಬರೆಯಿಸಿ, ಅವರ ಸಂಗಡಿಗರಿಂದ ಆಡಿತೋರಿಸುವ ಏರ್ಪಾಡನ್ನು ಮಾಡಿದರಂತೆ. 'ಸಹ್ಯಾದ್ರಿ'ಯಲ್ಲಿ ಬರೆದ ಲೇಖಕರು ಈ ವಿಷಯ ಒಪ್ಪಿದ್ದಾರೆ. ಆದರೆ ಮೊದಲು ಸ್ಫೂರ್ತಿಯನ್ನು ಪೂರಯಿಸಿದ ನಾಟಕ ಕನ್ನಡ ನಾಟಕವೆಂಬುದನ್ನು ಯಾಕೆ ಹೇಳಬಾರದಾಗಿತ್ತೋ! ಉತ್ತರ ಕನ್ನಡದವರು ಆಡಿ ತೋರಿಸಿದ ನಾಟಕ ಕನ್ನಡ ನಾಟಕವಿರಲೇಬೇಕೆಂಬುದು ನಿರ್ವಿವಾದ ವಿಷಯ. ಸಾಂಗಲಿಯ ಒಡೆಯರು ಆ ಕನ್ನಡ ನಾಟಕಾಭಿನಯಕ್ಕೆ ಮನಸೋತು, ಅವುಗಳ ಅನುಕರಣವನ್ನು ಮರಾಟಿಯಲ್ಲಿ ಮಾಡಿಸಿಕೊಂಡಿದ್ದರ ಮೇಲಿಂದ, ಆಗಿನ ಕನ್ನಡ ನಾಟಕದ ಬರವಣಿಗೆ, ಅವುಗಳ ಅಭಿನಯ, ಇವೆಲ್ಲವು ಉತ್ತಮ ತರಗತಿಯವಾಗಿರಲು ಸಾಕು. ಹೀಗಿದ್ದರೂ, ಶತಸಾಂವತ್ಸರಿಕೋತ್ಸವದ ಪ್ರಧಾನಾಧ್ಯಕ್ಷರಾದ ವೀರ ಸಾವರಕರರಂತೂ ಮರಾಟಿ ನಾಟಕದ ಇತಿಹಾಸವನ್ನು ಇನ್ನಷ್ಟು ಹಿಂದಕ್ಕೆ ನೂಕಿ, ಕನ್ನಡದ ಋಣವನ್ನು ಅಲ್ಲಗಳೆಯುವ ಉದ್ದೇಶದಿಂದಲೋ, ತಮ್ಮ ನಾಟಕ ಬಹಳ ಹಿಂದಿನಿಂದ ನಡೆದುಬಂದದ್ದೆಂದು ತೋರಿಸುವ ಆತ್ಯಾಶೆಯಿಂದಲೋ 'ಮರಾಟಿ ನಾಟಕವು ಹುಟ್ಟಿದ್ದು ಶಿವಾಜಿಯ ಕಾಲಕ್ಕೆ' ಎಂದು ತಮ್ಮ ವೀರವಾಣಿಯಲ್ಲಿ ಸಾರಿದರಂತೆ. ಶಿವಾಜಿಗೆ ಸಂಬಂಧಪಡದ ಒಂದಾದರೂ ವಿಷಯ ಮಹಾರಾಷ್ಟ್ರದಲ್ಲಿದೆಯೆ? ಸಾವರಕರರು ಅಧ್ಯಕ್ಷರೆಂದ ಮೇಲೆ ಶಿವಾಜಿಯ ವಿಷಯ ಬರಲೇಬೇಕಲ್ಲವೆ? ಮರಾಟಿ ನಾಟಕ ಹುಟ್ಟಿದ್ದು ಶಿವಾಜಿ ಕಾಲದಲ್ಲಿಯಾದರೆ ಈಗ 'ಶತ'ಸಾಂವತ್ಸರಿ-

ಕೋತ್ಸವವನ್ನು ಜರುಗಿಸುವುದು ತೀರ ಅಪ್ರಸ್ತುತವಲ್ಲವೆ? ಯಾರದವರಿಗೆ ಒಪ್ಪಿಸುವ ಬುದ್ಧಿ ನಮ್ಮ ಸನ್ಮಿತ್ರರಿಗೆಂದು ಬರುವುದೊ?

* * *

ಕಳೆದ (ನವಂಬರ್) ತಿಂಗಳ ದಿನಾಂಕ ೫ ರಿಂದ ೮ ರ ವರೆಗೆ ಸಾಂಗಲಿಯಲ್ಲಿ ಮರಾಟಿ ನಾಟಕದ ಶತಸಾಂವತ್ಸರಿಕೋತ್ಸವ, ವಾರ್ಷಿಕ ಸಾಹಿತ್ಯಸಮ್ಮೇಲನ, ನಾಟ್ಯಸಮ್ಮೇಲನ ಈ ಮೂರು ಅಧಿವೇಶನಗಳು ಅನುಕ್ರಮವಾಗಿ ಬ್ಯಾರಿಸ್ಟರ್ ಸಾವರಕರ, ಪ್ರೊ. ಎಸ್. ಎಂ. ಮಾಟೆ, ಮತ್ತು ಶ್ರೀ. ಎನ್. ವ್ಹಿ. ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ನಡೆದುವು. ಕನ್ನಡ ಕಡುಗಲಿಗಳು ಬಳ್ಳಾರಿಯ ಬೆನ್ನುಹತ್ತಿದಂತೆ, ಮಹಾರಾಷ್ಟ್ರದ ಮಹಾನು-ಭಾವರು ಹೈದರಾಬಾದಿನ ಕೂಡ ಹೋರಾಡುತ್ತಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಚರ್ಚಿತವಾದ ಮುಖ್ಯ ವಿಷಯ ಗಳೆಂದರೆ ಹೈದರಾಬಾದಿನಲ್ಲಿಯ ಮರಾಟಿ ಸಮಸ್ಯೆ, ಮತ್ತು ಮಹಾರಾಷ್ಟ್ರದ ವಿಶ್ವವಿದ್ಯಾಲಯ. ಪ್ರೊ. ಮಾಟೆಯವರು ವಿದ್ಯಾಭಿಮಾನಿಗಳು, ಬರೆಹಗಾರರು, ವಿಮರ್ಶಕರು. ವಿಮರ್ಶಕರೆಂದ ಮೇಲೆ ಇದ್ದುದನ್ನು ಇದ್ದಂತೆ ಹೇಳಬೇಡವೆ? ಪ್ರೊ. ಮಾಟೆಯವರು ಇಂದಿನ ಮರಾಟಿ ಸಾಹಿತ್ಯದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿ ಪ್ರಕಟಗೊಳಿಸಿದ್ದು ಅವರ ವಿಮರ್ಶಾಬುದ್ಧಿಗೆ ತಕ್ಕ ಭೂಷಣ. ಇಂದು ಮರಾಟಿ-ಯಲ್ಲಿ ಹೆಚ್ಚಾಗಿ ಹೊರಬೀಳುತ್ತಿರುವ ಕಥೆ-ಕಾದಂಬರಿಗಳು ಯಾವ ತೆರದ ಮನೋನ್ನತಿಯನ್ನೂ ಸಾಧಿಸದೆ, ತೀರ ಕೀಳಾದ ಲೈಂಗಿಕ ಮನೋವೃತ್ತಿಯನ್ನು ಚಿತ್ರಿಸುತ್ತಿರುವುದು ಅತ್ಯಂತ ಖೇದಕಾರಕ ವಿಷಯವೆಂದು ದುಃಖಪಟ್ಟರು. ಇಂತಹ ಸಾಹಿತ್ಯ ಎಷ್ಟು ಬೆಳೆದರೂ ರಾಷ್ಟ್ರವು ಸಾಧಿಸಬೇಕಾಗ ಮಹಾಕಾರ್ಯ-ದಲ್ಲಿ ಅದರಿಂದ ಯಾವ ಪ್ರಯೋಜನವೂ ಆಗದೆಂದೂ, ಬರೆಹ-ಗಾರರ ಈ ಮನೋಭೂಮಿಕೆಯು ಬದಲಾಯಿಸದ ಹೊರತು ಸಾಹಿತ್ಯವು ಜನಜೀವನದಲ್ಲಿ ಬೆಳಕನ್ನೆರಚಲಾರದೆಂದೂ ಸ್ಪಷ್ಟ-ವಾಗಿ ತಿಳಿಸಿದರು. ಇಂದಿನ ಮರಾಟಿ ನಿಯತಕಾಲಿಕಗಳಲ್ಲಿ, ಕಥೆ-ಕಾದಂಬರಿಗಳಲ್ಲಿ ನಾಟಕಗಳಲ್ಲಿ ಬಗೆಬಗೆಯಾಗಿ ಹೊರ-ಬೀಳುತ್ತಿರುವ ಅಶ್ಲೀಲ ಮತ್ತು ಭೀಭತ್ಸ ಬರೆಹಗಾರಿಕೆ, ವೈಯ-ಕ್ತಿಕ ನಿಂದೆ, ಇವು ಯಾವ ಶಿಖರವನ್ನು ಮುಟ್ಟಿವೆ ಎಂಬುದನ್ನು ತಿಳಿಯಬೇಕಾದರೆ, ಸಮ್ಮೇಲನದ ವಿಷಯನಿಯಾಮಕ ಸಮಿತಿ ಯಿಂದ ನಿರಾಕರಿಸಲ್ಪಟ್ಟಿದ್ದರೂ ಬಹಿರಂಗ ಅಧಿವೇಶನದಲ್ಲಿ ಪ್ರಚಂಡ ಬಹುಮತದಿಂದ ಸ್ವೀಕೃತವಾದ ಒಂದು ಗೊತ್ತು-ವಳಿಯನ್ನು ನೋಡಬಹುದು. ಈ ಗೊತ್ತುವಳಿಯ ಪ್ರಕಾರ ಇಂತಹ ಅಸಹ್ಯ ಸಾಹಿತ್ಯ ಮತ್ತು ವೈಯಕ್ತಿಕ ನಿಂದೆ ಇವು-ಗಳನ್ನು ಪ್ರತಿಬಂಧಿಸುವ ಕೆಲಸಕ್ಕಾಗಿ, ಐದು ಜನರ ಸಮಿತಿ-ಯೊಂದನ್ನು ನಿಯಮಿಸಿದ್ದಾರೆ. ಈ ಐದು ಜನ ಸದಸ್ಯರು ಇದ್ದಿ ಬರೆಹಗಾರಿಕೆಗೆಯೆ ಅಂಟಿಕೊಂಡ ರೋಗವನ್ನು ಹೇಗೆ ತಡೆಯ-ಬೇಕೋ! ಬರೆಹಗಾರರೇ ಭೀಭತ್ಸದಲ್ಲಿ ಹೊರಳಾಡಿ ಅದರಲ್ಲಿಯೇ ವಿಪರೀತವಾದ ಆನಂದೋದ್ರೇಕವನ್ನು ಅನುಭವಿ-ಸುತ್ತಿರುವಾಗ, ಈ ಶುದ್ಧೀಕರಣ ಸಮಿತಿಯವರು ಮಾಡಬಹು-ದಾದರೂ ಏನು? ಮುಂದಿನ ಸಮ್ಮೇಲನದ ವರೆಗೆ ಸುಮ್ಮನಿದ್ದು ಆಗ ಇನ್ನೊಂದು ಗೊತ್ತುವಳಿಯನ್ನೂ ಬೇರೊಂದು ಸಮಿತಿ-ಯನ್ನೂ ಏರ್ಪಡಿಸಿ ತಾವು ವಿಶ್ರಾಂತಿ ಪಡೆಯಬೇಕು. ಇಂತಹ ದೊಂದು ಗೊತ್ತುವಳಿ ಸಮ್ಮೇಲನದಲ್ಲಿ ಪಾಸಾಗಬೇಕು; ಪಾಸಾಯಿತು, ಕೆಲಸ ಬಗೆಹರಿಯಿತು! ಇನ್ನೇಕೆ ಅದರ ವಿಚಾರ, ಮುಂದಿನ ಅಧಿವೇಶನದವರೆಗೆ? ಎಲ್ಲಿಯಾದರೂ ಇದು ನಡೆಯ ತಕ್ಕದ್ದೇ. ನಮ್ಮ ಸಮ್ಮೇಲನಗಳಲ್ಲಿಯ ಗೊತ್ತುವಳಿಗಳ ಹಣೆ-ಬರೆಹವೇನೂ ಬೇರೆಯಾಗಿಲ್ಲ. ಗೊತ್ತುವಳಿಗಳಿಲ್ಲದಿದ್ದರೆ ಸಮ್ಮೇಲನವಾಗುವಂತಿಲ್ಲವೆಂಬೇ ಇವೆಲ್ಲ ನಡೆಯತಕ್ಕುವು. ಸಮ್ಮೇಲನ ಮಂಟಪದ ಹೊರಗೆ ಅವುಗಳಿಗೆ ಬದುಕಿಲ್ಲ!

* * *

ಸಾಹಿತ್ಯವು ಪ್ರಗತಿಪರವಾಗಿರಬೇಕು, ಜನಸಾಮಾನ್ಯಕ್ಕೆ ಬಾಳ ಪರಿಚಯ ಮಾಡಿಕೊಡುವಂತಹದಿರಬೇಕು. ನಮ್ಮ ಇಂದಿನ ಕಷ್ಟ-ನಷ್ಟಗಳ ಕಾರಣವೇನೆಂಬುದರ ಅರಿವನ್ನು ತರುವಂಥದಿರ-ಬೇಕು ಎಂಬುದನ್ನು ತೋರಿಸುವ ಉದ್ದೇಶದಿಂದ, ಮುಂಬಯಿಯ ಪದ್ಮಪ್ರಕಟನಾಲಯದವರು "ಟುಮಾರೋ" (Tomorrow) ಎಂಬ ಶಿರೋನಾಮದಡಿಯಲ್ಲಿ ಬೇರೆ ಬೇರೆ ದೇಶಗಳ ಸಾಹಿತಿಗಳ ಬರೆಹಗಳನ್ನು ಸಂಗ್ರಹಿಸುತ್ತಿದ್ದಾರೆ. ಮೊದಲನೆಯ ಭಾಗವು ಇದೀಗ ಹೊರಬಿದ್ದಿದೆ. ಸಾಹಿತ್ಯಕ್ಕೂ ಜನಜೀವನಕ್ಕೂ ಇರ-ಬೇಕಾದ ನಿಕಟಸಂಬಂಧ ಇಂದಿನ ರಶಿಯನ್ ಸಾಹಿತಿಗಳ ಬರೆ-ವಣಿಗೆಯಲ್ಲಿ ಎಷ್ಟು ಸ್ಪಷ್ಟವಾಗಿ ಎದ್ದುಕಾಣುವುದೆಂಬುದನ್ನು ತಿಳಿಯಬೇಕಿದ್ದರೆ ಈ ಭಾಗದಲ್ಲಿ ಪ್ರಕಟವಾದ ಶೋಲೋಕೋವ್ ಅವರ "ದ್ವೇಷ" ಎಂಬ ಅಮೋಘವಾದ ಕಥೆಯನ್ನೋದಿ, ಹಿಂದಿ-ಉರ್ದುಗಳಿಂದ ಕೆಲವು ಕತೆಗಳು ಅನುವಾದಿತವಾಗಿವೆ. ಮುಂಬರುವ ಭಾಗಗಳಲ್ಲಿ ಕನ್ನಡ ಬರೆಹಕ್ಕೂ ಸ್ಥಾನವಿದೆ ಎಂಬುದು ಸಮಾಧಾನದ ವಿಷಯ!

ನಮ್ಮ ಅಣ್ಣಿಗೇರಿ ಏಜಂಟರು

ಶ್ರೀ. ಸಿ. ಎಸ್. ಯರಗಂಬಳಿಮಠ
ನ್ಯೂಜ್ ಪೇಪರ್ ಏಜೆಂಟ್.

ನಮ್ಮ ಗಜೇಂದ್ರಗಡ ಏಜಂಟರು

ಶ್ರೀ. ಬಿ. ಎಮ್. ಕೊಡಗನೂರ್
ನ್ಯೂಜ್ ಪೇಪರ್ ಏಜೆಂಟ್.

ಸಾದರ ಸ್ವೀಕಾರ

೨೨. **ಮುಂಬಯಿ ಮೊಗವೀರ ಯುವಕ ಸಂಘದ ಅಷ್ಟಮ ವಾರ್ಷಿಕ** ವರದಿ, ಕಾರ್ಯದರ್ಶಿಗಳವರಿಂದ ಬಂದಿವೆ. ಈ ಸಂಸ್ಥೆಯ ಪರಿಚಯವನ್ನು ಜಯಂತಿಯ ವಾಚಕರಿಗೆ ಈ ಮೊದಲೆ ಒಂದೆರಡು ಸಲ ಮಾಡಿಕೊಡಲಾಗಿದೆ. ಮುಂಬಯಿಯಲ್ಲಿದ್ದು ಹೆಚ್ಚು ಸುಸಂಘಟಿತ ರೀತಿಯಲ್ಲಿ ಕಾರ್ಯಮಾಡುತ್ತಿರುವ ಕನ್ನಡಿಗರ ಸಂಸ್ಥೆಯಿದು. ಕನ್ನಡಿಗರೆಲ್ಲರೂ ಇದಕ್ಕೆ ಶುಭವನ್ನು ಹಾರಯಿಸಬೇಕಾದುದು ಅತ್ಯಗತ್ಯ.

೨೩. **ಉತ್ತರರಂಗ** (ಏಕಾಂಕ ನಾಟಕ) 'ಶ್ರೀರಂಗ' ಬರೆದುದು. ಧಾರವಾಡದ ಸರಸ್ವತೀ ಭಾಂಡಾಗಾರದ ೩ನೆಯ 'ಹಾದಿಯ ಹೊತ್ತಿಗೆ' ಯಾಗಿ ಪ್ರಕಟವಾಗಿದೆ. ಕ್ರಾ. ೮. ೨೨ ಪುಟಗಳು. ಬೆಲೆ ೦-೩-೦.

೨೪. **ಕೂರಯಾ** ('ಪ್ರೇಮಚಂದ'ರ ಹಿಂದೀ ಕತೆಯೊಂದರ ಅನುವಾದ.) ಅನುವಾದಕರು ಶ್ರೀ. ಗುರುನಾಥ ಜೋಶಿ, ಧಾರವಾಡ. ಪ್ರಕಾಶಕರು ಭಾರತೀಯ ಸಾಹಿತ್ಯಮಂದಿರ, ಲೈನ್ ಬಝಾರ್, ಧಾರವಾಡ. ಕ್ರಾ. ೮. ೩೦ ಪುಟಗಳು. ಬೆಲೆ ೦-೫-೦.

೨೫. **ರಶಿಯಾದ ರಾಜ್ಯಕ್ರಾಂತಿ** (ಪರಿಚಯಾತ್ಮಕ ಗ್ರಂಥ) ಬರೆದವರು ಶ್ರೀ. ಪಿ. ವೆಂಕಟರಮಣಾಚಾರ್ಯರು. ಧಾರವಾಡದ 'ಮಿಂಚಿನ ಬಳ್ಳಿ'ಯ ೬ನೆಯ ವರ್ಷದ ೨ನೆಯ ಕುಡಿ. ಕ್ರಾ. ೮. ೧೬೨ ಪುಟಗಳು. ಬೆಲೆ ೧-೮-೦.

೨೬. **ಉರ್ದು-ಕನ್ನಡ ಬಾಲಬೋಧಿನಿ.** ಬರೆದವರು ಶ್ರೀ. ಗುರುನಾಥ ಜೋಶಿ ಧಾರವಾಡ. ಪ್ರಕಾಶಕರು ಭಾರತೀಯ ಸಾಹಿತ್ಯಮಂದಿರ, ಲೈನ್-ಬಝಾರ್, ಧಾರವಾಡ. ಕ್ರಾ. ೮. ೧೬ ಪುಟಗಳು. ಬೆಲೆ ೦-೩-೦.

ಭಾರತದ ಏಕರಾಷ್ಟ್ರೀಯ ಜೀವನಕ್ಕೆ ಉರ್ದು ಲಿಪಿಯ ಆವಶ್ಯಕತೆಯೂ ಇದೆಯೆಂಬುದನ್ನು ಬಹುಜನರು ಒಪ್ಪಿದ್ದಾರೆ. ಅದರ ಪ್ರಾಥಮಿಕ ಪರಿಚಯವನ್ನು ಮಾಡಿಕೊಡಲಿಕ್ಕೆ ಈ ಪುಸ್ತಕವು ತುಂಬ ಸಹಕಾರಿಯಾಗುವಂತಿದೆ.

೨೭. **ಕೀಟಗಳು** (ಜೀವಶಾಸ್ತ್ರ ವಿಷಯಕ ಗ್ರಂಥ). ಬರೆದವರು ಶ್ರೀ. ಡಿ. ಎಚ್. ವೀರಯ್ಯ ಎಂ. ಎಸ್‌ಸಿ.; ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕ ಮಾಲೆಯ ೪೭ ನೆಯ ಗ್ರಂಥ. ಬೆಲೆ ೦-೩-೦.

೨೮. **ಶ್ರೀಕಾಂತ** (ಕಾದಂಬರಿಯ ೧ನೆಯ ಭಾಗ). ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಬಂಗಾಲಿ ಕಾದಂಬರಿಯನ್ನು ಶ್ರೀ. ಗುರುನಾಥ ಜೋಶಿಯವರು ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಮನೋರಂಜನ ಪ್ರಕಾಶನಸಮಿ(?)ತಿ, ಧಾರವಾಡ ಅವರ ಪ್ರಕಟನೆ. ಕ್ರಾ. ೮. ೧೧೬ ಪುಟಗಳು. ಬೆಲೆ ೧-೦-೦.

೨೯. **ಮುಂಬಯಿ ಕರ್ನಾಟಕ ಸಂಘದ ೧ಂನೆಯ ವಾರ್ಷಿಕ ವರದಿ.** ಗೌರವ ಕಾರ್ಯದರ್ಶಿಗಳು ಶ್ರೀ. ಲ. ಗೋ. ಚಾವೂರ ಮತ್ತು ಪ್ರ. ವೇ. ಉಪಾಧ್ಯ ಬಿ. ಎ. ಅವರು.

ಮುಂಬಯಿ ಕನ್ನಡಿಗರನ್ನು ಒಂದುಗೂಡಿಸಲು ಕಾರ್ಯಮಾಡುತ್ತಿರುವ ಈ ಸಂಸ್ಥೆಯು ಸಂಸ್ಕೃತಿ ಪ್ರಚಾರ, ಸಂರಕ್ಷಣೆಯ ವಿವಿಧ ಕಾರ್ಯಕಲಾಪಗಳನ್ನು ನಡೆಯಿಸುತ್ತಿದೆಯಲ್ಲದೆ, ತಾಯಿನಾಡಾದ ಕನ್ನಡನಾಡಿನ ಸುಖ-ದುಃಖದ ವಿಚಾರವನ್ನೂ ಮಾಡುತ್ತಲಿರುವುದು ಸಂತೋಷದ ಸಂಗತಿಯಾಗಿದೆ. ವಿಜಾಪುರ ಬರಗಾಲ ನಿವಾರಣೆಗಾಗಿ ಸಮಿತಿಯೊಂದನ್ನು ನಿರ್ಮಿಸಿ, ಹಣ-ಬಟ್ಟೆ ಮೊದಲಾದುವುಗಳನ್ನು ಕೂಡಿಸಿ ಕೊಟ್ಟುದು ಸ್ತುತ್ಯವಾದ ಕೆಲಸ. ಸಂಘದ ಕಟ್ಟಡದ ಸಲುವಾಗಿ ಮುಂಬಯಿಯ ಅನೇಕ ಕನ್ನಡ ಮಹನೀಯರು ತುಂಬು ನೆರವನ್ನು ಕೊಡಲು ಸಿದ್ಧರಾದುದು ಅಭಿಮಾನದ ವಿಷಯ. ಸಂಘದ ಕಾರ್ಯ ಯಶಸ್ವಿಯಾಗಿ ನಡೆದು, ಕನ್ನಡಿಗರಲ್ಲಿ ಸ್ವಾಭಿಮಾನ-ಸ್ವಜನಪ್ರೀತಿಗಳು ಜಾಗೃತವಾಗಲಿ!

೩೦. **ಮೈಸೂರು ಮೈತ್ರ ಪತ್ರಿಕೆ** (೩ನೆಯ ವರ್ಷದ ೧ನೆಯ ಸಂಚಿಕೆಯು ವಿಶೇಷ ಸಂಚಿಕೆಯಾಗಿ ಹೊರಟಿದೆ.) ಸಂಪಾದಕರು ಶ್ರೀ. ಪಿ. ಗೋಪಾಲಕೃಷ್ಣ ಸೆಟ್ಟಿ ಬಿ. ಎ. ಬಿ. ಎಲ್. ಕ್ರಾ. ೪ ದ ೧೬೦ ಪುಟಗಳು. ಬೆಲೆ ೦-೮-೦. ಪ್ರಕಾಶನ ಸ್ಥಳ ವಾಸವಾಂಬಾ ಬಿಲ್ಡಿಂಗ್ಸ್, ಅಶೋಕ ರೋಡ್, ಮೈಸೂರು.

೩೧. **ಇಂದ್ರಧನುಷ್ಯ** (ಕಥಾ ಸಂಗ್ರಹ). ಸಂಪಾದಕರು ಶ್ರೀ. ಗೋಪಾಲಕೃಷ್ಣ ಪೈ ಮತ್ತು ಮಹಾಬಲೇಶ್ವರ ಸೆಟ್ಟಿ ಕುಮಟಾ. 'ಪ್ರಗತಿ' ಪುಸ್ತಕ ೨. ಪ್ರಕಾಶನ ಸ್ಥಳ— ಶಾರದಾ ಸಾಹಿತ್ಯಮಂದಿರ, ಕುಮಟಾ. ಕ್ರಾ. ೮. ೮೦ ಪುಟ. ಬೆಲೆ ೦-೬-೦.

ಪುಸ್ತಕ ದೊರೆಯುವ ಸ್ಥಳ:
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ.

ಸೆಟ್ಟಿಯ ಮನೆ ಸುಲಿಗೆಯಾಯ್ತು!

'ಆನಂದಕಂದ'

೧

ಸೆಟ್ಟಿಯ ಮನೆ ಸುಲಿಗೆಯಾಯ್ತು,
ಮನೆಯಲಿದ್ದುದೆಲ್ಲ ಹೋಯ್ತು;
ಬಡಿದುಕೊಂಡು ಅತ್ತ ಸೆಟ್ಟಿ
ಬಾಯ್ಗೆ ಬೊಳ್ಳಿಗೆ;
ನಡೆದನಂದೆ ನಗರಬಿಟ್ಟು
ತನ್ನ ಹಳ್ಳಿಗೆ!

೨

ಬಸ್ಸುಗಳಲಿ ಅಂದು ಜದ್ದು;
ಸೆಟ್ಟಿ ಬರಲು ಕಟ್ಟನೆದ್ದು
ಓಡಿ ಬಳಿಗೆ ಬಂದನೊಬ್ಬ
ಬಸ್ಸ್-ಏಜಂಟನು;
ಕಾಡಿ ಕಾಡಿ ಕೊನೆಗೆ ಸೆಳೆದ
ಕೈಯ ಗಂಟನು!

೩

ಪಯಾಣಿಯ ದರವು ಗೊತ್ತು!
ಸೆಟ್ಟಿಯಂದು ಅರ್ಧ ತೆತ್ತು,
ಹತ್ತು ಬಿಲ್ಲಿ ಉಳಿದುವೆಂದು
ಹಿಗ್ಗಿ ತಳೆದನು!
ಕಳೆದ ಹಣದ ವ್ಯಥೆಯು ಗಳಿಗೆ
ಮರೆತು ಕುಳಿತನು!

ಚೆನ್ನೆ

ಸಾರು ಮಾಡಿ ನಿನ್ನೆ
ಉಣಲು ಕರೆಯೆ ಚೆನ್ನೆ,
ಹಾರಿ ಬಂದು
ಸೊರ್ ಸೊರೆಂದು
ಸುರಿದಳೆಂಟು ದೊನ್ನೆ!

ನಾಟಕದ ಉಪಯೋಗ

"ನಾನು ಬರೆದ ಈ ನಾಟಕ ತಮ್ಮ ಮನಸ್ಸಿಗೆ ಬರಲಿಲ್ಲವೇನೋ ಸರಿ; ಆದರೆ ಹೇಗಾದರೂ ಈ ನನ್ನ ನಾಟಕ ರಂಗಭೂಮಿಯ ಮೇಲೆ ಬರಬೇಕೆಂದು ನನ್ನ ಆಶೆ!"

"ಸರಿ, ಹಾಗಾದರೆ ನಾನು ಇದಕ್ಕೊಂದು ಉಪಾಯ ಹೇಳತೀನಿ ಕೇಳ್ರಿ! ಈಗೇನು ನಾವು ಹೊಸಾ ನಾಟಕ ಆಡಿಸತಾ ಇದ್ದೀವಲಾ; ಅದರೊಳಗ ನಾಲ್ಕನೆಯ ಅಂಕಿನೊಳಗ ನಾಯಕ ನಿರಾಶೆಯಿಂದ ತನ್ನ ಬರೆವಣಿಗೆಯನ್ನೆಲ್ಲಾ ರಂಗಭೂಮಿಯ ಮೇಲೆ ಹರಿದು ಹಾಕತಾನೆ! ಆ ಸಂದರ್ಭದಲ್ಲಿ ತಮ್ಮ ಈ ನಾಟಕದ ಉಪಯೋಗ ಮಾಡಿಕೊಳ್ತೀವೆ ಬೇಕಾದರೆ!"

* * *

ತಿಳಿಯಲೊಲ್ಲದಾಗೇದ!

"ಒಬ್ಬಾಕಿ ಇದ್ದಾಳ ಕುಂಬಾ ಎತ್ತರ; ಇನ್ನೊಬ್ಬಾಕಿ ಇದ್ದಾಳ ಖರಾ ಗಿಡ್ಡ. ಯಾರನ್ನ ಸ್ವೀಕರಿಸಬೇಕೊ ಅಂಬೂದೇ ತಿಳಿಯಲೊಲ್ಲದಾಗೇದ!"

"ಸಂಕಟವನ್ನ ಸ್ವೀಕರಿಸೋದೇ ಆದಲ್ಲಿ, ಸಣ್ಣದಿದ್ದದ್ದನ್ನ ಸ್ವೀಕರಿಸೋದು ಒಳ್ಳೇದು!"

* * *

ನಿಜವಾದ ಕರೆ

ನಾಟಕದಲ್ಲಿ ನಾಯಕನ ಪಾತ್ರವನ್ನು ಧರಿಸುವ ಚೆನ್ನಮಯ್ಯನು ಕಂಪನಿಯ ಮಾಲಕನಿಗೆ ಹೇಳುತ್ತಾನೆ:

"ಇಲ್ಲಿ ಕೇಳ್ರಿ, ಸಂಗೀತಕಚೇರೀ ಸೀನಿನೊಳಗೆ ನಿಜವಾದ ಕರೆಯೆ ನನಗೆ ಸಿಗಬೇಕು; ಇಲ್ಲದಿದ್ದರೆ ನಾನು ಪಾತ್ರ ಮಾಡೂದಿಲ್ಲ ಇಂದಿನ ಪ್ರಯೋಗದೊಳಗ!"

ಕಂಪನಿಯ ಮಾಲಕ ಸಹಜಭಾವದಲ್ಲಿಯೆ ಹೇಳಿದ:

"ಅದಕ್ಕೇನು? ಸಂತೋಷದಿಂದ ತರಿಸಿ ಕೊಡತೀನಿ; ಆದರೆ ಅದರಂತೇನೇ ಕೊನೆಯ ಪ್ರವೇಶದಲ್ಲಿ ಬರುವ ವಿಷಪಾನದ ಕಾಲಕ್ಕೆ ನಿಜವಾದ ವಿಷವನ್ನೇ ಕುಡಿಯಬೇಕಾಗುವುದು ನೀನು!"

* * *

ಮಾತಿಗೆ ಮಾತು

ಆಕೆ:— ಒಳ್ಳೆಯವರು ಯಾರು ಕೆಟ್ಟವರು ಯಾರು ಅಂಬೂದೂ ತಿಳಿಯಬಾರದೇ ನಿಮ್ಮ ಹಣೇಬರೆಹಕ್ಕ!

ಆತ:— ಯಾಕ? ಅನೇಕ ವಧುಗಳನ್ನೆಲ್ಲಾ ಬಿಟ್ಟು, ನಿನ್ನ ಆರಿಸಿ ವರಿಸಿದೇ ಅಂತ ಹೀಗಂತೀ ಕಾಣಸತದ.. ಅಲ್ಲಽ?"

* * *

ಟೊಪ್ಪಿಗೆಯ ವ್ಯಾಪಾರ

"ಏನು ಬೇಕು ರಾಯರಽ?"

"ಟೊಪ್ಪಿಗಿ ಬೇಕಾಗೇದ ಒಂದು!"

"ಎಂಥಾದು? ನನ್ನ ತಲೀಮ್ಯಾಲ ಅದಽ ಅಲಾ, ಇಂಥಾದು ಇದ್ದರೆ ಆಗಬಹುದೇನು?"

"ಛೀ ಛೀ! ಇದಕ್ಕಿಂತಾ ಸ್ವಚ್ಛ ಇರಬೇಕು; ಅಲ್ಲದೆ ಏನೂ ಹರಿದಿರಬಾರದು— ಅಂಥಾ ಟೊಪ್ಪಿಗಿ ಬೇಕು!"

* * *

ಎರಡನೆಯ ಅಡಿಗೆಯವಳು!

"ಮೊದಲು ನಮ್ಮ ಮನಿಯೊಳಗ ಒಬ್ಬಾಕಿ ಅಡಿಗಿಯಾಕಿ ಇದ್ದಳು: ಆಕಿ ಎರಡನೆಯವರ ಸಂಸಾರದ ಮ್ಯಾಲ ಒಲೀ ಹೂಡೂ ಹೊಯ್‌ಮಾಲಿ ಹೆಂಗಸು! ಅದಕ್ಕಽ ನಾನು ಆಕಿನ್ನ ತಗದು ನಿಮ್ಮನ್ನ ಇಟಗೊಂಡೀನಿ; ತಿಳೀತೇನು?"

"ತಿಳೀತು ಬಿಡ್ರಿ! ನನ್ನ ಸ್ವಭಾವ ಹಾಂಗ ಎಂದೂ ಇಲ್ರಿಮ್ಮಾ! ಎಲ್ಲಿ ಕೆಲಸಕ್ಕ ಇರತೀನೋ ಅದೇ ನನ್ನ ಸಂಸಾರಾ ಅಂತ ತಿಳಕೊಂಡು ನಡಿಯೂದೂ ನನ್ನ ಪದ್ಧತಿ!"



ಮುಕ್ತಿ ಸಮ್ಮೇಳನ

ಈ ತಿಂಗಳು ಸಮ್ಮೇಳನಗಳ ತಿಂಗಳು. ಸಾಮಾನ್ಯವಾಗಿ ಸ್ವಂತದ ಸಂಬಳದ ಬಡತಿ ಮೊದಲ್ಗೊಂಡು ಸ್ವರಾಜ್ಯದವರೆಗಿನ ಬೇಡಿಕೆಗಳ ಬಗ್ಗೆ ಸಮ್ಮೇಳನಗಳು ಸೇರಿ, ಗೊತ್ತುವಳಿಗಳು ಸ್ವೀಕೃತವಾಗುವುವು. ಸಮ್ಮೇಳನಗಳ ಸುಗ್ಗಿಗೆ ಕರ್ನಾಟಕವು ಅಪವಾದವಾಗಿಲ್ಲ. ಜಾತಿಯಿಂದ ಜನತೆಯ ಸೇವೆಯ ವರೆಗೆ ಎಲ್ಲ ವಿಷಯಗಳಿಗೆ ಸಂಬಂಧಿಸಿ ನಮ್ಮಲ್ಲೂ ಸಮ್ಮೇಳನಗಳಾಗುವುದುಂಟು. ಇದಲ್ಲದೆ ಒಂದು ತರದ ಸಮ್ಮೇಳನಗಳು ಕರ್ನಾಟಕದ ವೈಶಿಷ್ಟ್ಯವಾಗಿವೆ. ಅವಕ್ಕೆ 'ತಾತ್ಕಾಲಿಕ ಇಲ್ಲವೆ ಸಮಯಸಾಧಕ' (ಯಾವುದು ಅನುಕೂಲವೊ ಹಾಗೆ) ಎಂದು ಹೆಸರಿಡಬಹುದು. ಅಂತಹ ಜಾತೀಯ ಸಮ್ಮೇಳನವೊಂದು ಈ ಸಲ ಸೇರುವುದಿದೆ ಎಂದು ಕೇಳಿದ್ದೇವೆ. ಅದಾವುದಿರಬಹುದೆಂದು ಊಹಿಸುವುದೂ ಕಷ್ಟವಲ್ಲ; ಅರ್ಥಾತ್, ಏಕೀಕರಣ ಸಮ್ಮೇಳನ (ಇಲ್ಲವೆ ಪರಿಷತ್ತು). ಯಾಕೆಂದರೆ, ಬಳ್ಳಾರಿಯ ವಿಷಯವಾಗಿ ಮೊನ್ನೆ ಮೊನ್ನೆಯೆ ಆಂದೋಲನವೆದ್ದಿಲ್ಲವೆ? ಅದಕಾಗಿ ಸಮ್ಮೇಳನವೊಂದನ್ನು ಸೇರಿಸಿದರೆ ಆ ವಿಷಯ ಮುಗಿದಂತಾಯಿತಲ್ಲವೆ? ವರುಷ-ವರುಷಕ್ಕೆ ಸಮ್ಮೇಳನವನ್ನು ಕೂಡಿಸಿ ಬೇಸರುಗೊಳ್ಳುವುದಕ್ಕಿಂತ, ಹುರುಪು-ಎದ್ದಾಗಲೆ ಸಮ್ಮೇಳನವನ್ನು ಸೇರಿಸುವುದು ಹೆಚ್ಚು ಯೋಗ್ಯವಲ್ಲವೆ? ಅಂತೂ ಏಕೀಕರಣ ಸಮ್ಮೇಳನ ಸೇರುವುದು, ಅದೂ ಬಳ್ಳಾರಿಯಲ್ಲಿ ಸೇರುವುದು, ಬಿಡುವು ಇದ್ದವರು ಕೂಡಿ 'ಮನು' ಎಂದು ಬರುವುದು! ಅಥವಾ........

ಕಿರಿಯರ ಕರ್ತವ್ಯದಕ್ಷತೆ

ಮೇಲಿನ ಮಾತುಗಳನ್ನು ಉಪಹಾಸಕ್ಕೆಂದು ಹೇಳುವುದಿಲ್ಲ, ನಮ್ಮ ಅನುಭವದ ಇತಿಹಾಸವೆಂದೇ ಹೇಳುತ್ತಲಿದ್ದೇವೆ. ನಾವು ಹೇಳುವ ರೀತಿಯಲ್ಲಿ ನಿರಾಶೆ ಇಲ್ಲವೆ ನಿರ್ದಯೆ ಕಂಡುಬಂದರೆ ಅದಕ್ಕೆ ಸಾಕಷ್ಟು ಕಾರಣಗಳೂ ಇವೆ. ಇಂದು ಏಕೀಕರಣವು ಕನ್ನಡ ಜನಾಂಗಕ್ಕೆ ಅತ್ಯಂತ ಮಹತ್ತ್ವದ್ದಾದ—ಅಗತ್ಯವಾದ— ಪ್ರಶ್ನೆ ಎಂದು ನಾವೆಲ್ಲರೂ ಹೇಳುವುದಿಲ್ಲವೆ? ಹಬ್ಬ-ಹುಣ್ಣಿಮೆಗೊಮ್ಮೆ ಇಂತಹ ಸಮ್ಮೇಳನವನ್ನು ಸೇರಿಸುವಾಗ, ಹಾಗೆ ಹೇಳುವ ನಮ್ಮಲ್ಲಿ ಸಾಕಷ್ಟು ಪ್ರಾಮಾಣಿಕತೆಯಾದರೂ ಇದೆಯೇ?—ಎಂದು ಸಂದೇಹ ಬರುವುದು. ಹಿಂದಿನ ಸಮ್ಮೇಳನ ಎಂದಾಯಿತೆಂಬುದು ಇಂದಿನ ಪೀಳಿಗೆಯವರ ನೆನಪಿನಲ್ಲಿರದಷ್ಟು ಕಾಲಾವಧಿಗೊಮ್ಮೆ ಸಮ್ಮೇಳನ ಸೇರಿಸಿದರೆ, ಅದರಿಂದಾಗಬಹುದಾದ ಲಾಭವಂತಿರಲಿ, ಅದಕ್ಕೆ ಉಪಯುಕ್ತತೆಯಾದರೂ ಬರಬಹುದೆ? ಇಷ್ಟನ್ನು ಹೇಳಿದ ಮಾತ್ರಕ್ಕೆ ಬರಲಿರುವ ಬಳ್ಳಾರಿ ಸಮ್ಮೇಳನಕ್ಕೆ ನಮ್ಮ ವಿರೋಧವಿದೆ ಎಂದು ತಿಳಿಯಕೂಡದು. ಸಮ್ಮೇಳನವು ಬಳ್ಳಾರಿಯಲ್ಲಿ ಸೇರುವುದೆಂದೇ ನಾವು ಹೀಗೆ ಬರೆಯುತ್ತಲಿದ್ದೇವೆ. ಯಾಕೆಂದರೆ ಬಳ್ಳಾರಿಯಲ್ಲಿ ಈ ಸಲ ಒಂದು ಹೊಸ ಅನುಭವ ಕಂಡುಬಂದಿದೆ. ಆ ಅನುಭವಕ್ಕೆ ನಮ್ಮ ವಿಮರ್ಶೆಯು ಅಸಹ್ಯವೆನಿಸುವುದಿಲ್ಲ, ಅನುಕೂಲವೆನಿಸುವುದು. ಆ ಅನುಭವವೆಂದರೆ ಕನ್ನಡ **ತರುಣರಲ್ಲಿ** ಕಂಡುಬಂದ ಕಾರ್ಯತತ್ಪರತೆ, ಕನ್ನಡದ ಅಭಿಮಾನ. ಬಳ್ಳಾರಿಯಲ್ಲಿ ಆಂಧ್ರ ಮಹಾಸಭೆಯ ಅಧಿವೇಶನ ಸೇರುವಾಗ ಮುಂಚಿನಿಂದಲೂ ಪ್ರತಿಭಟಿಸಿದವರೆಂದರೆ ತರುಣರು, ಬಳ್ಳಾರಿಯ ತರುಣರು ಮಾತ್ರ. ಸ್ಥಳೀಯ ಪ್ರತಿಷ್ಠಿತರು ತಮ್ಮ ಪ್ರತಿಷ್ಠೆಯನ್ನು ಸ್ಥಳೀಯವಾಗಿ ಬೆಳೆಯಿಸಿಕೊಳ್ಳುವುದಕ್ಕಾಗಿ, ಆಂಧ್ರರೊಡನೆ ಸ್ನೇಹವನ್ನೂ ವಿಶ್ವಬಾಂಧವ್ಯವನ್ನೂ ನಟಿಸಿದರು. 'ಕಾವೇರಿಯಿಂದ-ಮಾಗೋದಾವರಿವರೆಗಿರ್ದ' ಕನ್ನಡದ ಹಿರಿಯರಿಗೆ ಆ ಕಾವೇರಿ-ಗೋದಾವರಿಗಳ ಅಬ್ಬರದಲ್ಲಿ ಈ ಕಿರಿಯರ 'ಕಿರಿಕಿರಿ'ಯೆ ಕೇಳರಲಿಲ್ಲವೇನೊ! ಅಂತೂ, ಕಿರಿಯರೆ ಚಳವಳವನ್ನು ಹೂಡಿದರು. ಇಂದು ಬಳ್ಳಾರಿಯಲ್ಲಿ ಏಕೀಕರಣ ಸಮ್ಮೇಳನವನ್ನು ಕೂಡಿಸಬೇಕೆನ್ನುವವರೂ ಇವರೆ. ಈ ಸಮಯದಲ್ಲಿ, ಇಂತಹರಿಗೆ ನಮ್ಮ ಟೀಕೆಯು ಉಪಯುಕ್ತವೆನಿಸಬಹುದೆಂಬ ಭರವಸೆ ನಮಗೆ.

ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ!

ಏಕೀಕರಣ ಸಮ್ಮೇಳನವು ಹಿಂದೆ ಮೂರು ನಾಲ್ಕು ಸಲ ಸೇರಿದೆ— ಸುಮಾರು ೧೫-೧೬ ವರುಷಗಳ ಕಾಲಾವಧಿಯಲ್ಲಿ! ಇಂತಹ ಸಮ್ಮೇಳನಗಳನ್ನು ಯಾರು ಕೂಡಿಸಿದ್ದರು, ಯಾಕೆ

ಕೂಡಿಸಿದ್ದರು, ಅವುಗಳ ಗತಿ ಮುಂದೇನಾಯಿತು— ಎಂದು ಕೇಳುವುದು ಅವಿನಯವೆನಿಸಬಹುದಾಗಿದೆ, ಕೇಳಿದರೆ ಸಮಾಧಾನವೂ ದೊರಕಲಿಕ್ಕಿಲ್ಲ. 'ಏಕೀಕರಣ ಪರಿಷತ್ತು' ಎಂಬ ಹೆಸರಿನಿಂದ ಒಂದು ಶಾಶ್ವತಕಚೇರಿಯೂ ಇದ್ದಿರಬೇಕು, ಒಂದಾನೊಂದು ಕಾಲದಲ್ಲಿ ಇದ್ದಿತೆಂಬುದು ನಿಶ್ಚಿತ. ಇಂತಹ ಅನವಸ್ಥೆಯ ಪರಿಸ್ಥಿತಿ ಯಾಕೆ ಬಂದಿತೆಂಬುದನ್ನು ತರುಣರು ತಿಳಿದುಕೊಳ್ಳುವುದಗತ್ಯವಿದ್ದಷ್ಟೇ ಅಂತಹ ಪರಿಸ್ಥಿತಿ ಮುಂದೆ ಬಾರದಂತೆಯೂ ನೋಡಿಕೊಳ್ಳುವುದಗತ್ಯವಾಗಿದೆ. ಏಕೀಕರಣವು ಕನ್ನಡ ಜನಾಂಗದ ಜೀವಾಳವಾಗಿದ್ದರೆ, ಆ ವಿಷಯದ ಚಳವಳದಲ್ಲಿ ಏನಿಲ್ಲೆಂದರೆ ಏಕಸೂತ್ರತೆಯಾದರೂ ಬೇಡವೆ? ನಿಜವಾಗಿ ನೋಡಿದರೆ— ಏಕೀಕರಣದ ವಿಷಯದಲ್ಲಿ ಪಕ್ಷಭಿನ್ನಾಭಿಪ್ರಾಯತೆಗೂ ಎಡೆಯಿಲ್ಲ. ಕಾಂಗ್ರೆಸು ಭಾಷಾನ್ವಯ ಪ್ರಾಂತರಚನೆಯ ತತ್ತ್ವವನ್ನು ಎಂದಿನಿಂದಲೂ ಒಪ್ಪಿಕೊಂಡುದರಿಂದ, ಕಾಂಗ್ರೆಸಿಗರಿಗೆ ಇದು ಬೇಕಾಗಿದೆ ಎನಬಹುದು; ಇಂದಿನ ಮುಂಬಯಿ ಪ್ರಾಂತದಲ್ಲಿ ತಾವು ವಿಶಿಷ್ಟ ಸಂರಕ್ಷಣೆಗಳನ್ನು ಬೇಡಿಕೊಳ್ಳುವಷ್ಟು ದುರ್ಬಲರು ಎಂದು ತಿಳಿದುಕೊಂಡ ಬ್ರಾಹ್ಮಣೇತರ ಪಂಗಡಗಳಿಗೂ ಏಕೀಕರಣದಿಂದ ಲಾಭವಿದೆ ಎಂಬುದು ಸ್ಪಷ್ಟ; ವ್ಯಾಪಾರಿಗಳಿಗೂ ವಿದ್ಯಾರ್ಥಿಗಳಿಗೂ ಏಕೀಕರಣವು ತೀರ ಅನುಕೂಲ ಎಂಬುದೂ ಸ್ಪಷ್ಟ. ಹೀಗಿರುವಾಗಲೂ ಈ ಚಳವಳಕ್ಕೆ ಏಕಸೂತ್ರತೆ ಇಲ್ಲ; ಯಾಕೆ? ಇದಕ್ಕೆ ಮುಖ್ಯವಾದ ಕಾರಣವೆಂದರೆ— ಏಕೀಕರಣಕ್ಕೆ ಯೋಗ್ಯವಾದ ನೇತೃತ್ವವೆ ಇಲ್ಲ. ಏಕೀಕರಣಕ್ಕಾಗಿ ಕಳಕಳಿ ಇದ್ದವರ ಮುಂದಾಳುತನ ಈ ಚಳವಳಕ್ಕೆ ದೊರೆಯದೆ, ಸ್ವಂತಕ್ಕಾಗಿ ಕಳಕಳಿ ಇದ್ದವರು ನೇತೃತ್ವ ಲಭಿಸಿತು. ಇದಕಾಗಿ ಸ್ವಂತಕ್ಕೆ ಸರಕಾರದಿಂದ ಬಿರುದು, ಜನತೆಯಿಂದ ಮಾನ್ಯತೆ, ಮತ್ತಾವ ಕಾರಣದಿಂದ ಘನಧನತೆಗಳು ದೊರೆತಾಕ್ಷಣ ಚಳವಳ ನಿಂತೇಬಿಟ್ಟಿತು!

ಮುಂದಿನ ಮುಂದಾಳುತನ

ಈ ನಮ್ಮ ಅಭಿಪ್ರಾಯ ಅನೇಕರಿಗೆ ರುಚಿಸಲಿಕ್ಕಿಲ್ಲ, ಕೆಲವರಿಗಾದರೂ ಕೇಳಿದೊಡನೆಯೆ ರುಚಿಸಲಿಕ್ಕಿಲ್ಲ. ಇಂತಹರೆಲ್ಲರೂ ನಿರ್ಮಲಾಂತಃಕರಣದಿಂದ ವಿಚಾರಮಾಡಿ, ನಿಷ್ಪಕ್ಷಪಾತದಿಂದ ತೂಗಿ ನೋಡಿ ನಮ್ಮ ಅಭಿಪ್ರಾಯವನ್ನು ಪರೀಕ್ಷಿಸಬೇಕು. ಏಕೀಕರಣ ಒಂದೇ ಅಲ್ಲ, ಮಿಕ್ಕ ಅನೇಕ ವಿಷಯಗಳ ಬಗ್ಗೆ ಮುಂದಾಳುತನ ಇದೇ ಮಾದರಿಯದಿದೆ. ಪರಮಾತ್ಮನಲ್ಲಿ ಎಲ್ಲ ಗುಣಗಳಿದ್ದಂತೆ ನಮ್ಮ ಮುಂದಾಳಿನಲ್ಲಿ ಎಲ್ಲ ಚಳವಳಗಳು ಕೇಂದ್ರೀಕರಿಸಬೇಕು! ವ್ಯಕ್ತಿಯೆ ಆಗಲಿ, ಸಂಘವೆ ಆಗಲಿ, ಎಲ್ಲ ಬೇಡಿಕೆಗಳನ್ನು ತಾನೇ ಮುಂದೆಮಾಡಿ ತನ್ನ ದೊಡ್ಡಿಸ್ತನವನ್ನು ಬೆಳೆಯಿಸಿಕೊಳ್ಳಬೇಕು. ದೊಡ್ಡಿಸ್ತನವು ಎಷ್ಟು ಬೆಳೆದರೂ ಬೇಡಿಕೆಗಳನ್ನು ಮುಂದೆಮಾಡುವುದಿಷ್ಟೇ ಕೆಲಸ; ಅದಕಾಗಿ ದುಡಿಯುವ ಹೊಣೆಗಾರಿಕೆ ಮಾತ್ರ ಬೇಡ! ಚಳವಳದ ಮುಂದಾಳುತನವೆಂದರೆ ಇಷ್ಟೆ! ಹೀಗಾಗಿ ಇಂದು ಯಾವ ಪ್ರಶ್ನೆಯೂ ನಮ್ಮಲ್ಲಿ ಬಿಟ್ಟಿಲ್ಲ, ಬಿಡುವ ಪರಿಸ್ಥಿತಿಯುಲ್ಲಿಲ್ಲ; ಯಾವ ಪ್ರಶ್ನೆಯ ಬಗ್ಗೆಯೂ ಅಧಿಕಾರಸಮರ್ಥವಾದ ಚಳವಳವಿಲ್ಲ, ಅದರಕ್ಕೆ ಪಾತ್ರವೆನಿಸುವಷ್ಟು ಅಭ್ಯಾಸವೂ ಇಲ್ಲ. ಇನ್ನು ಬರಲಿರುವ ಏಕೀಕರಣ ಸಮ್ಮೇಲನವಾದರೂ ಕಾರ್ಯರಂಗದ ತೆರೆಯನ್ನೆತ್ತಲಿ ಎಂಬ ಉದ್ದೇಶದಿಂದ ನಾವೀ ಮಾತುಗಳನ್ನು ಮತ್ತೆ ಹೇಳುತ್ತಲಿದ್ದೇವೆ. ಜಾತಿಯ ಜೋಡುಗಳು, ಸ್ವಾರ್ಥದ ಸಂದುಗಳು, ಹಿರಿತನದ ಹೆಗ್ಗಣಗಳು, ಡಾಂಭಿಕತನದ ಕಂಬತಗಣೆಗಳು— ಇವುಗಳ ಮುಂದಾಳುತನ ಸಾಕು. ಇವುಗಳನ್ನು ತೊಳೆದೋಡಿಸಿ ಕಾರ್ಯರಂಗವನ್ನು ಕೆಲಸಗಾರರಿಗಾಗಿ ಅನುಕೂಲಮಾಡಿಕೊಳ್ಳಬೇಕು. ಸಾರ್ವಜನಿಕರ ಸೇವಕ ಮತ್ತು ಸ್ವಾರ್ಥದ ಸಾಧು ಇವರ ವೇಷ-ಭಾಷೆಗಳನ್ನು ಬಿಂಗಡಿಸಿ ತಿಳಿದುಕೊಳ್ಳಬೇಕು. ಇಲ್ಲವಾದರೆ— ಸಮ್ಮೇಳನಗಳ ಸಮಾರಂಭದ ಬದಲು ಬರಗಾಲದ ಅನ್ನಾನ್ನಗತಿಕರಿಗೆ ಸಹಾಯವನ್ನು ನೀಡಬೇಕು.

ಮುಖ್ಯ ಮಾತು

ಇದೇ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಕಾಣಿಸಬಹುದಾಗಿದೆ. ಆಂಧ್ರರ ಉಪಕಾರದಿಂದ ಏಕೀಕರಣ ಚಳವಳವು ಬಲಗೊಂಡಂತೆ ಮರಾಟಿಗರ ಸ್ಫೂರ್ತಿಯಿಂದ ವಿಶ್ವವಿದ್ಯಾಲಯದ ಚಳವಳಕ್ಕೂ (ತಾತ್ಪೂರ್ತಿಕವಾಗಿಯೊ ಏನೊ) ಕಳೆ ಏರಿದೆ. ಏಕೀಕರಣಕ್ಕಾಗಿ ಶಾಶ್ವತ ಸಂಸ್ಥೆಯೆ ಇಲ್ಲದಂತಾಗಿದ್ದರೆ, ವಿಶ್ವವಿದ್ಯಾಲಯದ ಕೆಲಸದಲ್ಲಿ ಜನತೆಯನ್ನು ಭ್ರಮೆಗೊಳಿಸುವಂತೆ ಸಂಸ್ಥೆಗಳಿವೆ. ಸಂಸ್ಥಿತ ಚಳವಳದ ಅವ್ಯವಸ್ಥೆಯಂತೆ, ವಿದ್ಯಾಲಯಗಳ ಹುಟ್ಟೂ ಮಳೆಗಾಲದ ಕಾಡು ಬಳ್ಳಿಗಳಂತೆ ಅವ್ಯವಸ್ಥಿತವೆ ಆಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಒಪ್ಪಿಸಿದ ವಿಶ್ವವಿದ್ಯಾಲಯದ ಚಳವಳವೊಂದು, ಬೆಳಗಾಂವಿಯ ವಿಶ್ವವಿದ್ಯಾಲಯ ಪರಿಷತ್ತು ನಿಯಮಿಸಿದ ಕಮಿಟಿಯ ಚಳವಳವೊಂದು! ಒಂದು ವಿಶೇಷವಾಗಿ ಅಸ್ತಿತ್ವದಲ್ಲಿರಲಿಲ್ಲವೆಂದು ಮತ್ತೊಂದು ಅಸ್ತಿತ್ವದಲ್ಲಿ ಬಂದಿತಂತೆ; ಆಗ ಮೊದಲನೆಯದೂ ಮತ್ತೆ ಚೇತರಿಸಿಕೊಂಡಿತಂತೆ! ಹನ್ನೆರಡು ವರ್ಷ ಗಂಡನನ್ನು ಶೋಧಿಸಲಾರದ್ದಕ್ಕಾಗಿ ಮತ್ತೊಬ್ಬ ಗಂಡನನ್ನು ಮದುವೆಯಾದವಳ ಮುಂದೆ ಮೊದಲಿನ ಗಂಡನೂ ಬಂದು ನಿಂತ ಕತೆಯಂತಿದೆ ಇದು! ಅದರಂತೆಯೆ ಊರೂರಿಗೆ, ಜಾತಿ-ಜಾತಿಗೆ ಒಂದು ಆರ್ಟ್ಸ ಕಾಲೇಜು! ಈ ಲಕ್ಷಣಗಳನ್ನು ನೋಡಿದರೆ ಕರ್ನಾಟಕದಲ್ಲಿ ಅನೇಕ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಬಹುದೇನೊ ಎಂದು ಹೆದರಿಕೆ. ಆದರೆ ದುರ್ದೈವದಿಂದ ಆ ಹೆದರಿಕೆ ಸ್ಥಿರವಾಗಬೇಕಾಗಿಲ್ಲ. ಅವ್ಯವಸ್ಥೆಯ ಉದಾಹರಣೆ ಎಂದೇ ನಾವೀ ಮಾತನ್ನು ಹೇಳಿದ್ದೇವಲ್ಲದೆ ಈ ಪರಿಸ್ಥಿತಿ ಅನಿವಾರ್ಯವೆಂದು ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ, ಸದಿಚ್ಛೆಯ ನಿಜವಾದ ಪ್ರೇರಣೆ ಇದ್ದರೆ, ಎರಡೂ ವಿಶ್ವವಿದ್ಯಾಲಯ ಸ್ಥಾಪಕಸಮಿತಿಗಳು ಒಂದುಗೂಡುವುದು ಸುಲಭವಾದ ಮಾತು. ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ಕಳಕಳಿಯ ಮತ್ತು

ಕೇಂದ್ರೀಕೃತ ನೇತೃತ್ವವಿದ್ದರೆ ಬೇರೆ ಬೇರೆ ಶಿಕ್ಷಣವನ್ನು ಕೊಡುವ ವಿದ್ಯಾಲಯಗಳನ್ನು ಸ್ಥಾಪಿಸುವ ಕೆಲಸವೂ ಕಠಿನವಾದುದಲ್ಲ. ಆ ಸದಿಚ್ಛೆ ಅಂತಹ ನೇತೃತ್ವ ದೊರೆಯಲೆಂದೇ ಹಾರಯಿಸುತ್ತೇವೆ.

ಬಾಯಿ-ಬಸಿರುಗಳ ವಿರೋಧ!

ಬಂಗಾಲದ ಇಡಿಯ ಪ್ರಾಂತದಲ್ಲಿ, ಅದರಂತೆ ದೇಶದ ಅನೇಕ ಭಾಗಗಳಲ್ಲಿ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ ನಮ್ಮ ಶಾಸನ ಸಭಿಕರು ಬಾಯಿಯನ್ನು ಹರಿಬಿಟ್ಟುದು, ಮತ್ತಾವ ಸಮಯದಲ್ಲಾದರೂ ಮನರಂಜನೆಯ ವಿಷಯವೆನಿಸಬಹುದಾಗಿತ್ತು. ಆದರೆ ದಿನದಿನಕ್ಕೆ ಸಾವಿರಗಟ್ಟಲೆ ಜನರು ಸಾಯುತ್ತಿರುವಾಗ, ಅದರಲ್ಲೂ 'ಅನ್ನದ ಪೂರೆಯಿಕೆಗಾಗಿ ಚಿಂತಿಸುತ್ತಿರುವ ನನಗೆ ನಿಮಗಾಗಿ ಭಾಷಣವನ್ನು ಮಾಡಲು ಬಿಡುವಿಲ್ಲ' ಎಂದು ವಿದೇಶೀಯರಿಂದ ವೈಸ್‌ರಾಯರು ಹೇಳುವಾಗ, ನಮ್ಮವರು ಚಾತುರ್ಯದ ಚರ್ಚೆಯನ್ನು ನಡೆಯಿಸುವುದು ದುಃಖದ ಸಂಗತಿಯೆ ಸರಿ. 'ಕ್ರಿಯಾಶಕ್ತಿ ಇಲ್ಲದ್ದಕ್ಕಾಗಿ ಇವರ ಚರ್ಚೆ ಯಾವಾಗಲೂ ನಿಷ್ಫಲ' ಎಂಬ ಮಾತನ್ನು ನೆನಪಿನಲ್ಲಿಟ್ಟರೆ ದುಃಖದ ಜೊತೆಗೆ ಅವಮಾನವೂ ಎನಿಸುವುದರಲ್ಲಿ ಸಂದೇಹವಿಲ್ಲ. ಪಾರ್ಲಮೆಂಟಿನಲ್ಲೂ ಈ ವಿಷಯದ ಚರ್ಚೆಯಾಯಿತು; ಆಟಿಗೆಯ ಪಾರ್ಲಮೆಂಟಿನಂತಿದ್ದ ನಮ್ಮ ಕೇಂದ್ರ ಶಾಸನಸಭೆಯಲ್ಲೂ, ಚರ್ಚೆಯಾಯಿತು. ಇವೆರಡೂ ಚರ್ಚೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ ಭಾರತೀಯನಿಗೆ ಒಂದೇ ಒಂದು ಮಾತು ಸ್ಪಷ್ಟವಾಗಿ ಹೊಳೆಯುವುದು. ಅದೆಂದರೆ ಈ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಾದರೆ ಜನರ ಪ್ರೀತಿಯ ಮುಂದಾಳುಗಳು ಬೇಕು; ಈ ಪರಿಸ್ಥಿತಿ ಇನ್ನೊಮ್ಮೆ ಬಾರದಂತೆ ನೋಡುವುದಾದರೆ ರಾಜಕೀಯ ಸ್ವಾತಂತ್ರ್ಯ ಬೇಕು. ಕೇಂದ್ರಶಾಸನ ಸಭೆಯಲ್ಲಿ ಚರ್ಚೆ ನಡೆದಾಗ ಸರಕಾರದ ಪರಿಯಿಂದ ಮಾತನಾಡುವ ಪೂರೈಕೆ ಖಾತೆಯ ಅಧಿಕಾರ ಸದಸ್ಯರಾದ ಸರ್ ರಾಮಸ್ವಾಮಿ ಮುದಲಿಯಾರರು ಒಂದು ಮಾತನ್ನು ಹೇಳಿದರು; ೧೯೩೯ ರಲ್ಲಿ ಧಾರಣೆ ನಿಯಂತ್ರಣದ ಅಧಿಕಾರವನ್ನು ಪ್ರಾಂತಿಕ ಸರಕಾರಗಳಿಗೆ ಕೇಂದ್ರ ಸರಕಾರವು ಒಪ್ಪಿಸಿದಾಗ, ಮುಂಬಯಿ ಪ್ರಾಂತದ ಕಾಂಗ್ರೆಸ್ ಮಂತ್ರಿಮಂಡಲವು ಕೂಡಲೆ ಅದರ ಸದುಪಯೋಗವನ್ನು ಮಾಡಿಕೊಂಡು ಪರಿಸ್ಥಿತಿ ಕೆಡದಂತೆ ನೋಡಿತೆಂದು ಸರ್ ರಾಮಸ್ವಾಮಿಯವರು ಮರೆಮಾಜಿಲ್ಲದೆ ಶಿಫಾರಸನ್ನೇ ಕೊಟ್ಟರು. ಬೇರೆ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳಿದ್ದುವು; ನಿಜ. ಆದರೆ ಅದೇ ಕಾಲಕ್ಕೆ ಬ್ರಿಟಿಶರ ಯುದ್ಧ ಧ್ಯೇಯದ ಸ್ಪಷ್ಟೀಕರಣಕ್ಕಾಗಿ ಕಾಂಗ್ರೆಸ್ ಸರಕಾರಗಳ ನಡುವೆ ವಾದವೆದ್ದುದನ್ನೂ, ಸ್ವಲ್ಪಾವಧಿಯಲ್ಲಿ ಕಾಂಗ್ರೆಸು ಅಧಿಕಾರವನ್ನು ಬಿಟ್ಟುದನ್ನೂ ನೆನಪಿನಲ್ಲಿಟ್ಟುಕೊಂಡರೆ, ಕಾಂಗ್ರೆಸ್ ಸರಕಾರಗಳು ಪರಿಸ್ಥಿತಿಯನ್ನು ನಿಸ್ಸಂದೇಹವಾಗಿ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದುವು ಎಂದು ಮುಂಬಯಿ ಪ್ರಾಂತದ ಉದಾಹರಣೆಯಿಂದ ಹೇಳಬಹುದಾಗಿದೆ. ಕಾಂಗ್ರೆಸ್ಸಿನ ಬುದ್ಧಿಮತ್ತೆಗಾಗಿ ಜಿನಾಸಾಹೇಬರಿಗೆ ಖೇದವಾಗುವ ಕಾರಣವಿಲ್ಲ. ಯಾಕೆಂದರೆ ಜನತೆಯ ಮುಂದಾಳುಗಳೆನಿಸಿದ್ದರಿಂದಲೇ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಆ ಯೋಗ್ಯತೆ ಇದ್ದಿತು. ಇಂದಿನ ಪರಿಸ್ಥಿತಿಯಲ್ಲಿ ಕೂಡ ಮುಂದಾಳುಗಳ ಬಿಡುಗಡೆಯಾದರೆ ಜನತೆಯ ಕಷ್ಟ-ನಷ್ಟಗಳ ಪರಿಹಾರವಾಗುವುದರಲ್ಲಿ ಸಂದೇಹವೆ ಇಲ್ಲ ಎಂದು ಹಿಂದೆ ಅನೇಕ ಸಲ ತೋರಿಸಿ ಕೊಟ್ಟ ಮಾತನ್ನೆ ಇಲ್ಲಿ ಮತ್ತೊಮ್ಮೆ ಹೇಳಬಯಸುತ್ತೇವೆ.

ರಾಜಕೀಯ ಸ್ವಾತಂತ್ರ್ಯವೆ ಅನಿವಾರ್ಯ!

ಹೊಸ ವೈಸ್‌ರಾಯರು ದೇಶದ ಪರಿಸ್ಥಿತಿಯನ್ನು ಯಾವ ರೀತಿಯಿಂದ ಸುಧಾರಿಸಬಹುದೆಂಬುದಕ್ಕೆ ಅನೇಕ ತರ್ಕ-ವಿತರ್ಕಗಳು ನಡೆದಿವೆ. ಕೇವಲ ಬಂಗಾಲದ ಬಗ್ಗೆ ತೋರಿಸುವ ಕಳಕಳಿಯಿಂದ ಪರಿಸ್ಥಿತಿ ಸುಧಾರಿಸದು ಎಂಬ ಮಾತು ವೇವೆಲ್ ಸಾಹೇಬರಿಗೂ ಗೊತ್ತಿರಲು ಸಾಕು. ಬರಗಾಲಕ್ಕೂ ಅನ್ನಾಭಾವಕ್ಕೂ ಯುದ್ಧ ಪರಿಸ್ಥಿತಿಯು ಕಾರಣವಾಗಿದೆ; ಯುದ್ಧನೀತಿಯ ಬಗ್ಗೆಯೆ ಜನತೆಗೆ ಸರಕಾರದಲ್ಲಿ ವಿಶ್ವಾಸ ಕಡಮೆಯಾಗುತ್ತಲಿದೆ. ಹೊಟ್ಟೆಯಲ್ಲಿ ಅನ್ನ ಬಿದ್ದರೂ ವಿಶ್ವಾಸವಿಲ್ಲದೆ ಹೃದಯ ಬರಿಯದಾಗಿದ್ದರೆ ಪರಿಸ್ಥಿತಿ ಸುಧಾರಿಸದು. ಇಂದು ಜನತೆಯ ಹೃದಯವೂ ತುಂಬಬೇಕಾದರೆ, ಮುಂದಾಳುಗಳ ಬಿಡುಗಡೆಯಂತೆ ರಾಜಕೀಯ ಸ್ವಾತಂತ್ರ್ಯವು ಅಗತ್ಯವಾಗಿದೆ. ಅಮೆರಿ ಸಾಹೇಬರಿಗೆ ರುಚಿಸದ ಈ ಮಾತು ವೇವೆಲ್ ಸಾಹೇಬರಿಗೆ ರುಚಿಸುವುದೋ ಹೇಗೆ—ನೋಡಬೇಕಾಗಿದೆ.

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು: 'ಶ್ರೀರಂಗ'

—This is the first book of its kind in Kannada, containing as it does a detailed, *rational* analysis of the main problem of the Gita. The author deserves to be warmly congratulated on the freshness and the originality with which he has viewed the conflict of Arjuna and explained the solution offered by Krishna.—

—*P. E. N.* ದಲ್ಲಿ ಪ್ರೊ. ಗೋಕಾಕ ಮತ್ತು ದುಗಲ ಅವರ ವಿಮರ್ಶೆ.

ಬೆಲೆ ಸಾದಾಪ್ರತಿ ೩–೦–೦; ಉತ್ತಮಪ್ರತಿ ೩–೮–೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ ಉಷ್ಣತೆಯಿಂದ ಬಳಲಿರುವ ನಿಮ್ಮ ಹೃದಯ, ಮಿದುಳು, ರಕ್ತ, ವೀರ್ಯಗಳಿಗೆ, ಆಯಾಸವನ್ನು ಹೋಗಲಾಡಿಸಿ ತಂಪು ಕೊಟ್ಟು, ಶರೀರದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಶ್ರೇಷ್ಠವಾದ ಔಷಧವು.

★

ಶ್ರೀಧೂತಪಾಪೇಶ್ವರ

ಪನವೇಲ, ಲಿಮಿಟೆಡ್.

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd., PANVEL.

ಕೇಳಿದಿರಾ ?? ☆ ☆

☆ ☆ ಕ್ಷಮೆ ಇರಲಿ !!

ರಸಿಕ ನೋಟಕರೇ,

ಕೇವಲ 'ಶ್ರೀಕೃಷ್ಣ ಸುದಾಮ'ದ ಪ್ರಚಾರವೇ ನಡೆದಿದೆ— ತೋರಬರುವುದು ಎಂದೋ— ಎಂದು ಕೆಲರ ಪತ್ರ ಬರೆದಿದ್ದೀರಿ. ಹೊಸ ವರುಷವು ಕನ್ನಡ ನಾಡಿಗರನ್ನು ಸಂತಸದ ಕಡಲಲ್ಲಿ ತೇಲಿಸಲಿದೆ. ಆ ಆನಂದದಲ್ಲಿ ನವನವೋನ್ಮೇಷ ಶೀಲಶಾಲಿನಿಯರ ಪರಿಚಯ, ಒಲವ ದೇವನಾಗಿ ಶ್ರೀಕೃಷ್ಣ-ಸುದಾಮ ದರ್ಶನ ಲಭಿಸಲಾಗಿದೆ.

☆

ಚಂದ್ರಿಕಾ ಸ್ನಾತನ ಚಂದ್ರಮನ ನ್ಯಾಸಮುಗ್ಧರ ಸಂಗೀತ ! ಮಧುಗಿರಿ ಮೀನಾಕ್ಷಿಯರ ಪಾತ್ರದೆಯ ಹೃದಯಾಂತರಾಳದ ಇಂಗಿತವನ್ನು ಬೇಗನೇ ಬಲು ಬೇಗನೇ ನಿಮ್ಮೂರ ಚಿತ್ರಮಂದಿರಕ್ಕೆ ಕಳಿಸುವೆವು.

☆

ಕೊನೆಗೆ ಬರುವುದು ನಿಮ್ಮ ಊರಿಗೇ !



ಶೃಂಗಾರ— ಹಾಸ್ಯ— ಕರುಣಾ— ಭಕ್ತಿರಸ ಲಹರಿಯಲ್ಲಿ ತಲ್ಲೀನರಾಗುವಿರಿ ನೀವು.

ರಸಿಕರೇ—

ಶ್ರೀಕೃಷ್ಣ ಸುದಾಮ

ಮೊದಲು ಎಲ್ಲಿ ??

ಬೆಳಗಾಂವಿ, ಧಾರವಾಡ, ಹುಬ್ಬಳ್ಳಿ, ಗದಗ, ಸೊಲ್ಲಾಪುರ

ಈ ಊರುಗಳಲ್ಲಿ ಭಕ್ತಸುದಾಮನು ತನ್ನ ಭಕ್ತಿಧ್ವಜ ಬೀರಿ, ಜನತೆಯನ್ನು ಪಾವನಗೊಳಿಸಲು ಬರುವನು.

ಪಾತ್ರವರ್ಗ

☆ ○ ಬೆಳ್ಳಾವೆ ನರಹರಿ ಶಾಸ್ತ್ರಿ ○ ಎಸ್. ಡಿ. ಸುಬ್ಬಲಕ್ಷ್ಮಿ ☆

○ ಮೀನಾಕ್ಷಿ ○ ಕು. ಚಂದ್ರಮ್ಮ

Apply to -

THE KARNATAK FILM DISTRIBUTORS, BAGALKOT.
(For Bombay Presidency)

&

THE MYSORE FILM CORPORATION, BANGALORE.
(For Andhra & Tamilnad)

Printed by Mr. V. Y. Jathar at the Karnatak Printing Works, Dharwar and Published for the Proprietors, Jayanti Publications, by M. V. Mellegatti at the Jayanti Office, Dharwar.

ಜಯಂತಿ

ಆರು ಆಣೆ



ಜನವರಿ ೧೯೪೮

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ ...... ವ್ಹಿ. ಪಿ. ಯಿಂದ ೪-೫-೦ ...... ಬಿಡಿಸಂಚಿಕೆಗೆ ೬ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು

೭ನೆಯ ವರ್ಷ	ಜನವರಿ ೧೯೪೪	೮ ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನ	‘ ಸಾಮಾಜಿಕ ’	೨೮೯
ಸಂಪಾದಕೀಯ	ಸಂಪಾದಕರು	೨೯೦
ಮಂಗನ ಮಲ್ಲಿನಾಥತನ	‘ ಮಲ್ಲಿನಾಥ ’	೨೯೧
ಚೀತರಿಸುತ್ತಿರುವ ಚೀನ (ಚೀನ್-ಭಾರತಗಳ ಸಂಬಂಧ)	ಶ್ರೀ. ನೆಗಳೂರ ರಂಗನಾಥ, ಬಿ. ಎ., ಎಲ್‌ಎಲ್. ಬಿ.	೨೯೩
ಒಂದು ಪತ್ರವ್ಯವಹಾರ (ಸಣ್ಣ ಕತೆಗಳ ಮೇಲಾಟದ ಬಗ್ಗೆ)	ಶ್ರೀ. ಮ. ಗ. ಶೆಟ್ಟಿ, ಗೋಕರ್ಣ	೨೯೬
ದೋಣಿ (ಬಹುಮಾನ ಪಡೆದ ಸಣ್ಣಕತೆ)	ಶ್ರೀ. ವಿ. ಜಿ. ಭಟ್ಟ, (ಬಿ. ಎ.,) ಕೊಲ್ಹಾಪುರ	೨೯೭
ಶಿವಾನುಭವ ಮಂಟಪವು ಐತಿಹಾಸಿಕವೆ ? (ಚರ್ಚಾತ್ಮಕ)	ಶ್ರೀ. ಕಪಟ್ರಾಳ ಕೃಷ್ಣರಾಯ, ವಕೀಲರು ಗುಲಬುರ್ಗಾ	೩೦೪
ಮೊಗ್ಗೆ (ಅನುವಾದಿತ ಕವನ)	ಶ್ರೀ. ನಾರಾಯಣ ಸಂಗಮ, ಬಾಗಿಲುಕೋಟೆ	೩೦೮
ಪಿಯೆರ್‌ಡಿಯ ಡೈರಿ (ಒಂದು ಹುಚ್ಚುನೋಟ)	ಶ್ರೀ. ‘ ಅನಿರುದ್ಧ ’ ಬಿ.ಎ. (ಆನರ್ಸ್) ಬ್ಯಾಡಗಿ	೩೦೯
ದೇವರ್‍ಹಿಂತು ಹಳಿಬ್ಯಾಡಣ್ಣ (ಕವನ)	ರೆವರೆಂಡ್ ಮಾರಾ ರಾಮಣ್ಣ, ಹುಬ್ಬಳ್ಳಿ	೩೧೧
ಭಾರತದ ಬರಗಾಲ (ಪರಿಚಯಾತ್ಮಕ)	ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ	೩೧೩
ಕಲಾವಿದ ಕುಲಕರ್ಣಿ (ವ್ಯಕ್ತಿಪರಿಚಯ)	‘ ಚಾಡಿಯ ಚಾಣಕ್ಯ ’	೩೧೫
ಸುಖವಸ್ತು ೪ (ಕೊರತೆ)	ಶ್ರೀ. ಎಚ್. ಎನ್. ಪಾಟೀಲ, ಎಂ.ಎ., ಬಿ.ಕಾಂ. ಮುಂಬೈ	೩೧೬
ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣಿಗಳು)	‘ ವಿಹಾರಿ ’	೩೧೯
ಎರಡು ಕಿರುಗತೆಗಳು	ಶ್ರೀ. ಬಿ. ಜಿ. ಕುಲಕರ್ಣಿ, ಬಿ. ಎ., ಮುಂಬಯಿ	೩೨೦
ಪುಸ್ತಕ ವಿಮರ್ಶೆ	ಬೇರೆ ಬೇರೆ ವಿಮರ್ಶಕರು	೩೨೨
ಸಾದರಸ್ವೀಕಾರ	....	೩೨೪
ನಗೀಗೆ ನೇವಿದ್ಯ	‘ ನಕಲೀ ನಾರಾಯಣಾಚಾರ್ರು ’	೩೨೫
ನಾಲ್ಕು ದಿಟ್ಟಿನ ನೋಟ	‘ ನಿರೀಕ್ಷಕರು ’	೩೨೬

ಜಯಂತಿಯ ಮುಂಬೈ ಶಾಖಾ ಕಚೇರಿ	ಪುಣೆಯಲ್ಲಿ ನಮ್ಮ ಏಜಂಟರು
ಮೊಗವೀರ ಯುವಕ ಸಂಘದ ಕಾರ್ಯಾಲಯ, ೪೬ ಚರ್ಚಗೇಟ್ ಸ್ಟ್ರೀಟ್, ೨ನೆಯ ಮಾಳಿಗೆ ಫೋರ್ಟ—ಮುಂಬಯಿ.	ಆರ್. ರಾಮಮೂರ್ತಿ ಮತ್ತು ಕೃಷ್ಣಮೂರ್ತಿ ಅಧ್ವರ್ಯು ಕನ್ನಡ ಪೇಪರ್ ಏಜಂಟ್ಸ್ ‘ ವಿಶ್ರಾಮಧಾಮ ’ ಮನೆ ನಂಬರು ೧೬೪೨, ಪೂನಾ ೪